ಆದಿಲಶಾಹಿ ಸಾಹಿತ್ಯ ಸಂಪುಟ : ೩

ಮುಹಮ್ಮದ ಕಾಸೀಮ ಫರಿಶ್ತಾ ವಿರಚಿತ

ತಾರೀಖ-ಎ-ಫರಿಶ್ತಾ : ಭಾಗ-೩

BIJAPUR LIBERAL DISTRICT EDUCATIONAL ASSOCIATION
BIJAPUR

ವಚನಪಿತಾಮಹ ಡಾ॥ ಫ.ಗು. ಹಳಕಟ್ಟಿ ಸಂಶೋಧನ ಕೇಂದ್ರ

ಬಿ.ಎಲ್.ಡಿ.ಇ. ಸಂಸ್ಥೆ, ವಿಜಾಪುರ

ಆದಿಲಶಾಹಿ ಸಾಹಿತ್ಯ ಸಂಪುಟ : ೩

ಮುಹಮ್ಮದ ಕಾಸೀಮ ಫರಿಶ್ತಾ
ವಿರಚಿತ

ತಾರೀಖ-ಎ-ಫರಿಶ್ತಾ

(ಭಾಗ - ೩)

ಆದಿಲಶಾಹಿ ಸಾಹಿತ್ಯ ಸಂಪುಟ : ೩

ಮುಹಮ್ಮದ ಕಾಸೀಮ ಫರಿಶ್ತಾ
ವಿರಚಿತ

ತಾರೀಖ-ಎ-ಫರಿಶ್ತಾ

(ಭಾಗ - ೩)

ಅನುವಾದಕರು
ಪ್ರೊ. ವಸಂತ ಕುಷ್ಟಗಿ
ಶ್ರೀಮತಿ ರತ್ನಾ ಮಣ್ಣೂರ
ಡಾ. ಅಮೀರುದ್ದೀನ್ ಖಾಜಿ

ವಚನಪಿತಾಮಹ ಡಾ. ಫ.ಗು. ಹಳಕಟ್ಟಿ ಸಂಶೋಧನ ಕೇಂದ್ರ
ಬಿ.ಎಲ್.ಡಿ.ಇ. ಸಂಸ್ಥೆ, ಬಿಜಾಪುರ

Taarikh-e-Farishta (Part-3) : Persian work by Md. Kasim Farishta
Kannada translation by Prof. Vasant Kushtagi, Smt. Rathna Mannur, Dr. Amiruddin Khazi.

Published by : **Dr. P.G.Halakatti Research Centre,**
B.L.D.E. Association, Bijapur, Karnataka

Edition : **2014**

Pages : **xxiv + 588 = 612**

Copies : **1000**

Price : **Rs. 350.00**

Typeset : **Dr. P. G. Halakatti Research Centre,** Bijapur

Printed : **Print Point,** Bengaluru. Mob : 97390 67359

ಕರ್ನಾಟಕ ಸರಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಆರ್ಥಿಕ
ಅನುದಾನದ ನೆರವಿನಿಂದ ಈ ಪುಸ್ತಕ ಪ್ರಕಟವಾಗಿದೆ.

ತಾರೀಖ–ಎ–ಫರಿಶ್ತಾ (ಭಾಗ–೩) : ಮುಹಮ್ಮದ ಕಾಸೀಮ ಫರಿಶ್ತಾ ವಿರಚಿತ ಪರ್ಶಿಯನ್ ಕೃತಿ.
ಅನುವಾದಕರು : ಪ್ರೊ. ವಸಂತ ಕುಷ್ಟಗಿ, ಶ್ರೀಮತಿ ರತ್ನಾ ಮಣ್ಣೂರ, ಡಾ. ಅಮೀರುದ್ದೀನ್ ಖಾಜಿ

ಪ್ರಕಾಶಕರು : ವಚನಪಿತಾಮಹ ಡಾ.ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ,
ಬಿ.ಎಲ್.ಡಿ.ಇ. ಸಂಸ್ಥೆ, ಬಿಜಾಪುರ

ಆವೃತ್ತಿ : ಪ್ರಥಮ ೨೦೧೪

ಪುಟಗಳು : **xxiv + ೫೮೮ = ೬೧೨**

ಪ್ರತಿಗಳು : ೧೦೦೦

ಬೆಲೆ : ರೂ. ೩೫೦.೦೦

ಡಿ.ಟಿ.ಪಿ. : ವಚನಪಿತಾಮಹ ಡಾ. ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ, ಬಿಜಾಪುರ

ಮುದ್ರಣ : ಪ್ರಿಂಟ್ ಪಾಯಿಂಟ್, ಬೆಂಗಳೂರು. ಮೊ : ೯೭೩೯೦೬೭೩೫೯

*

ಆದಿಲ್‌ಶಾಹಿ ಸಾಹಿತ್ಯ ಅನುವಾದ ಸಮಿತಿ

ಅಧ್ಯಕ್ಷರು

ಡಾ. ಎಂ.ಎಂ. ಕಲಬುರ್ಗಿ

ನಿರ್ದೇಶಕರು

ಡಾ. ಕೃಷ್ಣ ಕೊಲ್ಹಾರಕುಲಕರ್ಣಿ

ಸದಸ್ಯರು

ಡಾ. ಬಿ.ಜಿ. ಮೂಲಿಮನಿ

ಡಾ. ರಹಮತ್ ತರೀಕೆರೆ

ಶ್ರೀ ರಂಜಾನ್ ದರ್ಗಾ

ಡಾ. ಎಚ್. ಜಿ. ದಡ್ಡಿ

ವಿಶೇಷ ಆಮಂತ್ರಿತ ಸದಸ್ಯರು

ಶ್ರೀ ಶಿವಯೋಗಿ ಎಸ್. ತಂಬಾಕೆ

ಡಾ. ಎಂ. ಎಸ್. ಮದಭಾವಿ

ಮೌಲಾನಾ ಮಹಬೂಬುರ್ ರಹಮಾನ ಮದನಿ

ಪದನಿಮಿತ್ತ ಸದಸ್ಯರು

ಜಿಲ್ಲಾಧಿಕಾರಿಗಳು, ಬಿಜಾಪುರ

ಸಹಾಯಕ ನಿರ್ದೇಶಕರು,
ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬಿಜಾಪುರ

ಅಧ್ಯಕ್ಷರ* ಮಾತು

ಎಂ. ಎಂ. ಕಲಬುರ್ಗಿ

ವಿಜಾಪುರದ ಬಿ.ಎಲ್.ಡಿ. ಶಿಕ್ಷಣಸಂಸ್ಥೆ ಇತ್ತೀಚಿನ ದಿನಗಳಲ್ಲಿ ಸಾಂಸ್ಕೃತಿಕ ಸಂಸ್ಥೆಯಾಗಿಯೂ ಬೆಳೆಯುತ್ತಲಿದೆ. ಈ ಸಂಸ್ಥೆಯ ಭಾಗವಾಗಿರುವ 'ವಚನಪಿತಾಮಹ ಡಾ॥ ಫ.ಗು. ಹಳಕಟ್ಟಿ ಸಂಶೋಧನ ಸಂಸ್ಥೆ'ಯ ಇಂದಿನ ಕಾರ್ಯ ಮತ್ತು ಕಾರ್ಯಕ್ರಮಗಳು ಇದಕ್ಕೆ ಉದಾಹರಣೆಯೆನಿಸಿವೆ.

ಡಾ॥ ಫ.ಗು. ಹಳಕಟ್ಟಿಯವರದು ಕೇವಲ ವ್ಯಕ್ತಿಕಲ್ಯಾಣಕೇಂದ್ರಿತ ವ್ಯಕ್ತಿತ್ವವಲ್ಲ, ಸಮಾಜಕಲ್ಯಾಣ ಕೇಂದ್ರಿತ ವ್ಯಕ್ತಿತ್ವ. ಇದಕ್ಕೆ ತಕ್ಕಂತೆ ಅವರ ಹೆಸರಿನ ಈ ಸಂಸ್ಥೆ ಎಲ್ಲ ಸಮಾಜಗಳನ್ನು–ಸಾಮಾಜಿಕರನ್ನು 'ಇವ ನಮ್ಮವ, ಇವ ನಮ್ಮವ, ಇವ ನಮ್ಮವ' ಎಂಬ ಆದರ್ಶದಲ್ಲಿ ಬೆಳೆಯುತ್ತಲಿದೆ. ಇದಕ್ಕೆ ಸಾಕ್ಷಿಯಾಗಿದೆ, ಈ ಸಂಸ್ಥೆ ಕೈಗೆತ್ತಿಕೊಂಡಿರುವ 'ಆದಿಲ್‌ಶಾಹಿ ಸಾಹಿತ್ಯ ಅನುವಾದ ಯೋಜನೆ'.

ಮಧ್ಯಕಾಲೀನ ಭಾರತೀಯ ಇತಿಹಾಸದಲ್ಲಿ ವಿಜಾಪುರದ ಆದಿಲ್‌ಶಾಹಿಗಳ ಹೆಸರು ಪ್ರಸಿದ್ಧವಾದುದು, ಸುಪ್ರಸಿದ್ಧವಾದುದು. ಏಕಕಾಲಕ್ಕೆ ಉತ್ತರದ ಮೊಗಲರೊಂದಿಗೆ, ದಕ್ಷಿಣದ ವಿಜಯನಗರದವರೊಂದಿಗೆ ಸಂಘರ್ಷ–ಸಮನ್ವಯದಿಂದ ೧೪೮೯–೧೬೮೬ರ ವರೆಗೆ ರಾಜ್ಯಭಾರಮಾಡಿದ ರಾಜಮನೆತನವಿದು. 'ದಿನೇ ಇಲಾಹಿ' ಖ್ಯಾತಿಯ ಮೊಗಲ್ ಮನೆತನದ ಅಕಬರನಂತೆ 'ದಾದೇ ಇಲಾಹಿ' ಖ್ಯಾತಿಯ ಆದಿಲ್‌ಶಾಹಿ ಮನೆತನದ ಜಗದ್ಗುರು ೨ನೆಯ ಇಬ್ರಾಹಿಮ್ ಬಾದಶಹನು ಸಮನ್ವಯಸಮಾಜ ಸ್ಥಾಪಿಸಲು ನಿರತನಾದುದು ಗಮನಾರ್ಹವೆನಿಸಿದೆ.

ಈ ಮನೆತನದ ಎಂಟು ಜನ ಅರಸರು ಸಾಹಿತಿಗಳು–ಸಾಹಿತ್ಯಪ್ರೇಮಿಗಳು. ಈ ಸಾಹಿತ್ಯ ಲೌಕಿಕ–ಧಾರ್ಮಿಕ ಎರಡೂ ಆಯಾಮಗಳಲ್ಲಿ ಬಿಚ್ಚಿ ಬೆಳೆದಿದೆ. ಹಿಂದೂಗಳದು ಪುರಾಣಪ್ರಜ್ಞೆಯಾದರೆ, ಮುಸಲ್ಮಾನರದು ಇತಿಹಾಸಪ್ರಜ್ಞೆ. ಈ ಪ್ರಜ್ಞೆಗೆ ಅನುಗುಣವಾಗಿ ಇವರ ಆಸ್ಥಾನದಲ್ಲಿ–ಇವರ ರಾಜ್ಯದಲ್ಲಿ ಸುಮಾರು ೨೦ ಕೃತಿಗಳು ಹುಟ್ಟಿಕೊಂಡಿವೆ.

ಸಮಕಾಲೀನ ರಾಜಕೀಯದೊಂದಿಗೆ ಜೀವನದ ಇತರ ಕ್ಷೇತ್ರಗಳನ್ನೂ ಚಿತ್ರಿಸಿದ ಈ ಸಾಹಿತ್ಯದ ಬಹುಭಾಗ ಪ್ರಕಟವಾಗದೆ, ಕನ್ನಡಕ್ಕೆ ಅನುವಾದವಾಗದೆ ಉಳಿದಿದ್ದಿತು. ಈ ದೊಡ್ಡ ಆಕರವನ್ನು ಕೈಬಿಟ್ಟು ಈವರೆಗೆ ಇತಿಹಾಸ ಬರೆದುದು ವಿಷಾದದ ಸಂಗತಿಯಾಗಿದೆ. ಇದಕ್ಕೆ ಕಾರಣ, ಈ ಸಾಹಿತ್ಯ ಪರ್ಶಿಯನ್, ದಖನಿ-ಉರ್ದು ಭಾಷೆಯಲ್ಲಿರುವುದು ಮತ್ತು ಈ ಅರಸರು ಅನ್ಯರೆಂದು ಭಾವಿಸಿರುವುದು. 'ವಚನಪಿತಾಮಹ ಡಾ॥ ಫ. ಗು. ಹಳಕಟ್ಟಿ ಸಂಶೋಧನ ಸಂಸ್ಥೆ' ಈ ಯಾವುದೇ ಭಿನ್ನತೆ ಪರಿಗಣಿಸದೆ ಪ್ರಸ್ತುತ ಯೋಜನೆಯನ್ನು ಕೈಗೆತ್ತಿಕೊಂಡಿದೆ.

ಕರ್ನಾಟಕ ಸರಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಆರ್ಥಿಕ ಅನುದಾನದ ನೆರವಿನಿಂದ ಈ ಯೋಜನೆ ಅಸ್ತಿತ್ವಕ್ಕೆ ಬಂದಿದೆ. ಇದನ್ನು ಒದಗಿಸುವಲ್ಲಿ ತೀವ್ರ ಆಸಕ್ತಿ ವಹಿಸಿದವರು ಈ ಹಿಂದೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರಾಗಿದ್ದ ಶ್ರೀ ಗೋವಿಂದ ಕಾರಜೋಳ ಅವರು. ಈ ಆಸಕ್ತಿಯನ್ನು ಮುಂದುವರಿಸುತ್ತಲಿರುವವರು ಇಂದು ಸಚಿವರಾಗಿರುವ ಶ್ರೀಮತಿ ಉಮಾಶ್ರೀ ಅವರು. ಸಹಕರಿಸಿದವರು ಈ ಇಲಾಖೆಯ ಅಧಿಕಾರಿಗಳು. ಇವರಿಗೆ ನಾವು ಕೃತಜ್ಞರಾಗಿದ್ದೇವೆ.

ಬಿ.ಎಲ್.ಡಿ ಶಿಕ್ಷಣ ಸಂಸ್ಥೆ ನಮಗೆಲ್ಲ ಹೆಮ್ಮೆಯ ಮಾದರಿ. ಈ ರೀತಿಯಲ್ಲಿ ಇದನ್ನು ಬೆಳೆಸುತ್ತಲಿರುವವರು ಅಧ್ಯಕ್ಷರಾದ ಶ್ರೀ ಎಂ.ಬಿ. ಪಾಟೀಲರು. ಈ ಸಂಸ್ಥೆಯ ಅಂಗವಾಗಿರುವ 'ವಚನಪಿತಾಮಹ ಡಾ॥ ಫ.ಗು. ಹಳಕಟ್ಟಿ ಸಂಶೋಧನ ಸಂಸ್ಥೆ'ಗಾಗಿ ತ್ರಿಕರಣಪೂರ್ವಕ ದುಡಿಯುತ್ತಲಿರುವವರು ಇದರ ಅಧ್ಯಕ್ಷರಾದ ಶ್ರೀ ಶಿವಯೋಗಿ ತಂಬಾಕೆಯವರು. ಇವರಿಬ್ಬರ ಪ್ರೋತ್ಸಾಹ-ನೆರವುಗಳಿಗೆ, ಈ ಯೋಜನೆಯ ಸಲಹಾಮಂಡಳಿಯ ಸದಸ್ಯರ ಮಾರ್ಗದರ್ಶನಕ್ಕೆ, ಅನುವಾದ ಕಾರ್ಯದಲ್ಲಿ ವಿದ್ವಾಂಸರು ನೀಡಿದ ಸಹಕಾರಕ್ಕೆ ಅಭಿನಂದನೆಗಳು.

ಸರಕಾರ ರೂಪಿಸಿದ ಸಲಹಾಮಂಡಳಿಯ ನಿರ್ದೇಶನದಂತೆ ಈ ಯೋಜನೆಗಾಗಿ ಡಾ॥ ಫ.ಗು. ಹಳಕಟ್ಟಿ ಭವನದಲ್ಲಿ ಒಂದು ಸ್ವತಂತ್ರ ಕಾರ್ಯಾಲಯವನ್ನು, ಅಗತ್ಯ ಸಿಬ್ಬಂದಿವರ್ಗವನ್ನು ಅಸ್ತಿತ್ವಕ್ಕೆ ತರಲಾಯಿತು. ಈ ಮಣಿಹಕ್ಕೆ ಡಾ॥ ಕೃಷ್ಣ ಕೊಲ್ಹಾರಕುಲಕರ್ಣಿ ಅವರು ನಿರ್ದೇಶಕರಾಗಿ ಲಭಿಸಿರುವುದು ಒಂದು ಸುಯೋಗವೆಂದೇ ಭಾವಿಸುತ್ತೇವೆ. ಮೊದಲಿನಿಂದಲೂ ಆದಿಲ್‌ಶಾಹಿ ಸಾಹಿತ್ಯ-ಸಂಸ್ಕೃತಿಗಳ ಅಧ್ಯಯನದಲ್ಲಿ ನಿಮಗ್ನರಾದ ಇವರು ಈ ಯೋಜನೆಗಾಗಿ ದುಡಿದ ರೀತಿ ಅನನ್ಯವಾದುದು. ಹಸ್ತಪ್ರತಿ-ಮುದ್ರಿತಪ್ರತಿಗಳ ಸಂಗ್ರಹ, ಸೂಕ್ತ ಅನುವಾದಕರ ಆಯ್ಕೆ, ಅವರಿಂದ ಕೆಲಸಮಾಡಿಸಿಕೊಳ್ಳುವ ರೀತಿ, ಅನುವಾದಗಳ ಪರಿಷ್ಕರಣ-ಪ್ರಕಟಣೆ ಇತ್ಯಾದಿಗಳಿಗಾಗಿ ಇವರು ತ್ರಿವಿಕ್ರಮಪ್ರಜ್ಞೆಯಿಂದ ಶ್ರಮಿಸಿದ್ದಾರೆ. ಇವರೊಂದಿಗೆ ಫ.ಗು. ಹಳಕಟ್ಟಿ ಸಂಶೋಧನ ಸಂಸ್ಥೆಯ ಕಾರ್ಯದರ್ಶಿಗಳಾದ ಡಾ॥ ಎಂ.ಎಸ್. ಮದಭಾವಿ ಅವರು ನಿರಪೇಕ್ಷ ಭಾವದಿಂದ ಹಗಲಿರುಳು ದುಡಿದಿದ್ದಾರೆ. ಇವರೊಂದಿಗೆ ಮಿಕ್ಕ ಸಿಬ್ಬಂದಿವರ್ಗದವರು ಸಹಕರಿಸಿದ ರೀತಿಯೂ ಸ್ಮರಣೀಯವಾಗಿದೆ. ಇವರೆಲ್ಲರಿಗೂ ಕೃತಜ್ಞತೆಗಳು.

■

*

ಪ್ರಸ್ತಾವನೆ

ಸಮಿತಿ ಸದಸ್ಯರು

ಮಧ್ಯಯುಗೀನ ಭಾರತದ ಚರಿತ್ರೆಯಲ್ಲಿ ಬಿಜಾಪುರದ ಆದಿಲಶಾಹಿಗಳ ಪಾತ್ರ ಬಹು ಮುಖ್ಯವಾಗಿದೆ. ದಕ್ಷಿಣ ಭಾರತದ ಬಹುಪಾಲು ಪ್ರದೇಶವನ್ನು ಅವರು ಬಿಜಾಪುರ ಕೇಂದ್ರದಿಂದ ಆಳಿದರು. ಇಂದಿನ ಅಖಂಡ ಕರ್ನಾಟಕವನ್ನು ಅವರು ಸುಮಾರು ಒಂದು ಶತಮಾನದಷ್ಟು ಕಾಲ ತಮ್ಮ ಅಂಕಿತದಲ್ಲಿ ಇಟ್ಟುಕೊಂಡಿದ್ದರು. ಹೀಗಾಗಿ ಆದಿಲಶಾಹಿಗಳ ಚರಿತ್ರೆಯನ್ನು ಅಭ್ಯಸಿಸದೆ ಕರ್ನಾಟಕದ ಚರಿತ್ರೆ ಪೂರ್ಣಗೊಳ್ಳುವುದಿಲ್ಲ.

ಈ ಆದಿಲಶಾಹಿಗಳ ರಾಜ್ಯವು ಕ್ರಿಶ. ೧೪೮೯ರಿಂದ ೧೬೮೬ರ ವರೆಗೆ ಅಸ್ತಿತ್ವದಲ್ಲಿದ್ದಿತು. ೮ ಜನ ಬಾದಶಹರು ಆಳಿದರು. ಈ ಬಾದಶಹರುಗಳ ವ್ಯಕ್ತಿತ್ವ ವರ್ಣಮಯವಾಗಿದ್ದಿತು. ಸಾಹಿತ್ಯ, ಸಂಗೀತ, ಕಲೆ, ವಾಸ್ತುಶಿಲ್ಪ, ಧರ್ಮ ಜೊತೆಗೆ ರಾಜಕಾರಣ ಇವುಗಳಲ್ಲೆಲ್ಲ ಇವರು ತಮ್ಮದೇ ಆದ ಮುದ್ರೆಯನ್ನು ಒತ್ತಿ ಹೋಗಿದ್ದಾರೆ.

ಇಂದು ಜಗತ್ತಿನಲ್ಲೆಲ್ಲ ಓದುತ್ತಿರುವ ಭಾರತೀಯ ಮುಸಲ್ಮಾನರ ಚರಿತ್ರೆಯಾಗಿರುವ 'ತಾರೀಖೆ ಫರಿಶ್ತಾ' [ಪರ್ಶಿಯನ್] ಕೃತಿಯ ಕರ್ತೃ ಮುಹಮ್ಮದ್ ಕಾಸಿಮ ಫರಿಶ್ತಾ, ಎರಡನೆಯ ಇಬ್ರಾಹಿಮ ಆದಿಲಶಾಹ (ಕ್ರಿ.ಶ.೧೫೮೦–೧೬೨೬)ನ ಅಸ್ಥಾನದಲ್ಲಿದ್ದುಕೊಂಡು ಈ ಗ್ರಂಥವನ್ನು ಬರೆದನು. ಅದರಂತೆ ಇನ್ನೂ ಹಲವಾರು ಜನ ಇತಿಹಾಸಕಾರರು, ಕವಿಗಳು ಆದಿಲಶಾಹಿ ಆಸ್ಥಾನದಲ್ಲಿ ಇದ್ದುಕೊಂಡು ಕೃತಿಗಳನ್ನು ರಚಿಸಿದ್ದಾರೆ. ಅವುಗಳೆಲ್ಲ ಅಂದು ಪ್ರಚಲಿತದಲ್ಲಿದ್ದ ಪರ್ಶಿಯನ್ ಇಲ್ಲವೆ ದಖನಿ–ಉರ್ದು ಭಾಷೆಗಳಲ್ಲಿ ರಚಿತವಾಗಿವೆ.

ನಾಡಿನ ವಿಶ್ವವಿದ್ಯಾಲಯಗಳು, ಭಾರತೀಯ ಇತಿಹಾಸ ಅನುಸಂಧಾನ ಇತ್ಯಾದಿ ಸಂಸ್ಥೆಗಳು ಇತಿಹಾಸದ ಕೆಲಸ ಮಾಡುತ್ತಿದ್ದರೂ ಆದಿಲಶಾಹಿಗಳ ವಿಷಯದಲ್ಲಿ ಆಗಬೇಕಾದಷ್ಟು ಆಗಲಿಲ್ಲ. ಅದಕ್ಕೆ ಕಾರಣ, ಬಹುಶಃ ಅಧ್ಯಯನಕ್ಕೆ ಬೇಕಾಗುವ ಮೂಲ ಆಕರಗಳು ವಿಶ್ವದಾದ್ಯಂತ ಚದರಿ ಹೋಗಿರುವುದು ಮತ್ತು ಅವು ಪರ್ಶಿಯನ್, ದಖನಿ–ಉರ್ದು

ಭಾಷೆಗಳಲ್ಲಿರುವುದು. ಈ ಕೊರತೆಯನ್ನು ಗಮನಿಸಿ ಬಿಜಾಪುರ ಆದಿಲಶಾಹಿ ಕಾಲದ ಸಾಹಿತ್ಯವನ್ನು ಕನ್ನಡದಲ್ಲಿ ಪ್ರಕಟಿಸುವ ಪ್ರಯತ್ನವಾಗಿದೆ 'ಆದಿಲಶಾಹಿ ಸಾಹಿತ್ಯ ಅನುವಾದ ಯೋಜನೆ'.

ಹಂಪಿಯ ಕನ್ನಡ ವಿಶ್ವವಿದ್ಯಾಲಯಕ್ಕೆ ಸಂಲಗ್ನವಾಗಿರುವ ಬಿಜಾಪುರ ಬಿ.ಎಲ್.ಡಿ.ಇ. ಸಂಸ್ಥೆಯ ವಚನಪಿತಾಮಹ ಡಾ.ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರವು ಕಳೆದ ದಶಕದಿಂದ ಸಂಶೋಧನಕ್ಷೇತ್ರದಲ್ಲಿ ಅಪರೂಪದ ಕೆಲಸವನ್ನು ಮಾಡುತ್ತಿದೆ. ಡಾ. ಫ.ಗು. ಹಳಕಟ್ಟಿ ಅವರ ಸಮಗ್ರಸಾಹಿತ್ಯವನ್ನು ೧೫ ಸಂಪುಟಗಳಲ್ಲಿ ಸಂಪಾದಿಸಿ ಪ್ರಕಟಿಸಿದೆ. ೮ ವಿದ್ಯಾರ್ಥಿಗಳು ವಿವಿಧ ವಿಷಯಗಳಲ್ಲಿ ಪಿಎಚ್.ಡಿ ಪದವಿಗಳನ್ನು ಪಡೆದಿದ್ದಾರೆ. ಇನ್ನೂ ಹಲವರು ಪದವಿ ಪಡೆಯುವ ದಾರಿಯಲ್ಲಿದ್ದಾರೆ. ಇದಕ್ಕೆಲ್ಲ ಬಿ.ಎಲ್.ಡಿ.ಇ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಎಂ.ಬಿ.ಪಾಟೀಲ ಅವರ ನಿರಂತರ ಬೆಂಬಲವೇ ಕಾರಣವಾಗಿದೆ. ಅವರ ಆಸಕ್ತಿಯಂತೆ ಸಂಶೋಧನ ಕೇಂದ್ರವು 'ಆದಿಲಶಾಹಿ ಸಾಹಿತ್ಯ ಅನುವಾದ ಯೋಜನೆ'ಯನ್ನು ಕರ್ನಾಟಕ ಸರಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಕಳಿಸಿತು. ಯೋಜನೆಯ ಮಹತ್ವವನ್ನು ಗುರುತಿಸಿ ಕರ್ನಾಟಕ ಸರಕಾರವು, ಡಾ. ಎಂ.ಎಂ. ಕಲಬುರ್ಗಿ ಅವರ ಅಧ್ಯಕ್ಷತೆಯಲ್ಲಿ ಡಾ. ಬಿ.ಜಿ.ಮೂಲಿಮನಿ, ಡಾ. ರಹಮತ್ ತರೀಕೆರೆ. ಶ್ರೀ ರಂಜಾನ್ ದರ್ಗಾ. ಡಾ. ಕೃಷ್ಣ ಕೊಲ್ಹಾರಕುಲಕರ್ಣಿ ಮತ್ತು ಡಾ. ಎಚ್.ಜಿ.ದಡ್ಡಿ- ಸದಸ್ಯರನ್ನೊಳಗೊಂಡ ಒಂದು ಸಮಿತಿಯನ್ನು ರಚಿಸಿ ಇದಕ್ಕೆ ಅನುಮತಿ ನೀಡಿತು.

ದಿನಾಂಕ ೧೨-೩-೨೦೧೩ರಂದು ನಡೆದ ಸಮಿತಿಯ ಪ್ರಥಮ ಸಭೆಯಲ್ಲಿ ಡಾ. ಕೃಷ್ಣ ಕೊಲ್ಹಾರಕುಲಕರ್ಣಿ ಅವರು ಈ ಯೋಜನೆಯ ನಿರ್ದೇಶಕರಾಗಿರಬೇಕೆಂದು, ಸಂಶೋಧನಕೇಂದ್ರದ ಅಧ್ಯಕ್ಷರಾದ ಶ್ರೀ ಶಿವಯೋಗಿ ತಂಬಾಕೆ ಮತ್ತು ಕಾಯದರ್ಶಿ ಡಾ. ಎಂ.ಎಸ್.ಮದಭಾವಿ ಅವರು ಸಮಿತಿಯ ಪದನಿಮಿತ್ತ ಸದಸ್ಯರಾಗಬೇಕೆಂದು ನಿರ್ಣಯಿಸಲಾಯಿತು.

ದಿನಾಂಕ ೧೫-೬-೨೦೧೩ರಂದು ನಡೆದ ಸಮಿತಿಯ ಎರಡನೆಯ ಸಭೆಯಲ್ಲಿ ಪರ್ಶಿಯನ್, ಅರೇಬಿಕ್, ದಖನಿ-ಉರ್ದು ಭಾಷೆಗಳಲ್ಲಿ ವಿದ್ವಾಂಸರಾದ ಮೌಲಾನಾ ಮಹಬೂಬುರ್ ರಹಮಾನ ಮದನಿ ಅವರನ್ನು ವಿಶೇಷ ಆಮಂತ್ರಿತ ಸದಸ್ಯರೆಂದು ತೀರ್ಮಾನಿಸಲಾಯಿತು.

ಇದು ಭಾರತದಲ್ಲಿಯೇ ಒಂದು ಅಪರೂಪದ ಯೋಜನೆ. ಮಧ್ಯಯುಗೀನ ಆದಿಲಶಾಹಿಗಳ ಕಾಲದಲ್ಲಿ ರಚಿತಗೊಂಡ ಎಲ್ಲ ಸಾಹಿತ್ಯವನ್ನು ಕನ್ನಡಕ್ಕೆ ತರುವುದು ಯೋಜನೆಯ ಮುಖ್ಯ ಉದ್ದೇಶ.

ಪ್ರಾರಂಭದಲ್ಲಿ ಆದಿಲಶಾಹಿ ಚರಿತ್ರೆಗೆ ಸಂಭಂಧಪಟ್ಟ ಈ ಕೆಳಗಿನ ಸಮಕಾಲೀನ ಕೆಲವು ಚರಿತ್ರ ಗ್ರಂಥಗಳ ಪಟ್ಟಿಯನ್ನು ಮಾಡಲಾಯಿತು. ಅವು ದೊರೆಯುವ ಸಂಭಾವ್ಯ ಸ್ಥಳಗಳನ್ನೂ ಹೀಗೆ ಗುರುತಿಸಲಾಯಿತು.

೧. **ಮುಹಮ್ಮದ ಕಾಸಿಮ ಫರಿಶ್ತಾ** : ತಾರೀಖೆ ಫರಿಶ್ತಾ [ಪರ್ಶಿಯನ್].
ಇಂಗ್ಲಿಷ್‌ಗೆ ಅನುವಾದ ಕ್ಯಾಪ್ಟನ್ ಬ್ರಿಗ್ಸ [ಕ್ರಿ.ಶ. ೧೮೮೯], ಮೂಲ ಪರ್ಶಿಯನ್ ಹಸ್ತಪ್ರತಿ ಮುಂಬಯಿ ಅರ್ಕೀವ್ಸ, ಸಾಲಾರ ಜಂಗ ವಸ್ತುಸಂಗ್ರಹಾಲಯ ಹೈದರಾಬಾದ ಇತ್ಯಾದಿಗಳಲ್ಲಿ ಲಭ್ಯ.

೨. **ಅಬ್ದುಲ್ಲಾ ದೆಹಲವಿ** : ಇಬ್ರಾಹಿಮನಾಮಾ [ದಖನಿ].
ಪ್ರಕಟವಾಗಿದೆ. ಮೂಲ ದಖನಿ ಹಸ್ತಪ್ರತಿ ಮುಂಬಯಿ ಅರ್ಕೀವ್ಸ ಮತ್ತು ಸಾತಾರಾದ ಔಂಧ ಅರ್ಕೀವ್ಸದಲ್ಲಿವೆ.

೩. **ಅಸದಬೇಗ** : ವಾಕಿಯಾತೆ ಅಸದಬೇಗ [ಪರ್ಶಿಯನ್].
ಚಾಪ್‌ಮನ್‌ನಿಂದ ಅನುವಾದವಾಗಿದೆ [೧೮ನೆ ಶತ]. ನಂತರ ಪಿ.ಎಂ.ಜೋಶಿ ಅವರಿಂದಲೂ, ಜೊತೆಗೆ ಇಲಿಯಟ್ ಮತ್ತು ಡೌಸನ್ ಸಂಪುಟ ೬ರಲ್ಲಿಯೂ ಭಾಗಶಃ ಅನುವಾದ. ಇದರ ಹಸ್ತಪ್ರತಿಯು ಆಂಧ್ರಪ್ರದೇಶ ಪ್ರಾಚೀನ ಹಸ್ತಪ್ರತಿಗಳ ಸಂಗ್ರಹ ಹೈದರಾಬಾದಿನಲ್ಲಿ ಲಭ್ಯ.

೪. **ಕಾಜಿ ನೂರುಲ್ಲಾ** : ತಾರೀಖೆ ಅಲಿ ಆದಿಲಶಹ [ದಖನಿ].
ಮೂಲ ಹಸ್ತಪ್ರತಿಗಳು ಮುಂಬಯಿ ಅರ್ಕೀವ್ಸ, ಇಂಡಿಯಾ ಆಫೀಸ ಲಾಯಬ್ರರಿ ಲಂಡನ್ ಮತ್ತು ಬ್ರಿಟಿಶ್ ಮ್ಯುಜಿಯಮ್ ಲಾಯಬ್ರರಿ ಲಂಡನ್, ಸಾಲಾರಜಂಗ ವಸ್ತುಸಂಗ್ರಹಾಲಯ(ಹೈದರಾಬಾದ್)ಗಳಲ್ಲಿ ಲಭ್ಯ.

೫. **ಜುಹೂರ್ ಬಿನ್ ಜುಹೂರಿ** : ಮುಹಮ್ಮದನಾಮಾ [ಪರ್ಶಿಯನ್].
ಹಸ್ತಪ್ರತಿಯು ಪ್ರಾಚ್ಯ ವಸ್ತುಸಂಗ್ರಹಾಲಯ ಬಿಜಾಪುರದಲ್ಲಿ ಲಭ್ಯ ಭಾಗಶಃ ಬಿ.ಡಿ. ವರ್ಮಾರಿಂದ ಇಂಗ್ಲಿಷನಲ್ಲಿ ಅನುವಾದ.

೬. **ನುಸ್ರತಿ** : ಅಲಿನಾಮಾ [ದಖನಿ].
ಪ್ರಕಟವಾಗಿದೆ. ಪ್ರತಿ ದುರ್ಲಭ.

೭. **ಮೌಲ್ವಿ ಬಶೀರುದ್ದೀನ ಅಹ್ಮದ** : ವಾಕಿಯಾತೆ ಮಮಲಿಕತ್ ಬಿಜಾಪುರ [ಉರ್ದು].
ಕರ್ನಾಟಕ ಉರ್ದು ಅಕಡೆಮಿಯಿಂದ ಪ್ರಕಟ. ಮೂಲಪ್ರತಿ ಸಾಲಾರಜಂಗ ಮ್ಯುಜಿಯಮ್ ಹೈದರಾಬಾದದಲ್ಲಿ ಲಭ್ಯ.

೮. **ಮುಹಮ್ಮದ ಹಾಶಿಮ ಘುಜೂನಿ**: ಘುತುಹತೆ ಆದಿಲಶಾಹಿ [ಪರ್ಶಿಯನ್].
ಮುಂಬಯಿ ಅರ್ಕೀವ್ಸ ಬ್ರಿಟಿಶ್ ಇಂಡಿಯಾ ಲಾಯಬ್ರರಿ ಲಂಡನ್‌ಗಳಲ್ಲಿ ಹಸ್ತಪ್ರತಿಗಳಿವೆ.

೯. **ಮೀರ್ ರಫೀಯುದ್ದೀನ ಶಿರಾಜಿ** : ತಜ್ಕಿರತುಲ್ ಮುಲೂಕ [ಪರ್ಶಿಯನ್].
ಸಾಲಾರಜಂಗ ವಸ್ತುಸಂಗ್ರಹಾಲಯ ಹೈದರಾಬಾದದಲ್ಲಿ ಹಸ್ತಪ್ರತಿ ಲಭ್ಯ.

೧೦. **ಶೇಖ್ ಜೈನುದ್ದೀನ ಅಲ್ ಮಾಬಾರಿ** : ತೊಹಫತುಲ್ ಮುಜಾಹಿದೀನ [ಅರೇಬಿಕ್].
ಇಂಗ್ಲಿಷ್ ಅನುವಾದ ಪ್ರಕಟವಾಗಿದೆ.

೧೧. **ಸೈಯದ ಅಲಿ ಬಿಲಗ್ರಾಮಿ** : ತಾರೀಖೆ ದಖನ್ ೪ ಸಂಪುಟಗಳು [ಉರ್ದು].

೧೨. **ಸಯ್ಯದ ಮೊಹಿಯುದ್ದೀನ ಪೀರಜಾದಾ**: ಅಹವಾಲೆ ಸಲಾತೀನ ಬಿಜಾಪುರ[ಪರ್ಶಿಯನ್].
ಬ್ರಿಟಿಶ್ ವಸ್ತುಸಂಗ್ರಹಾಲಯ ಲಂಡನ್, ಹಸ್ತಪ್ರತಿ ಸಂಖ್ಯೆ ೨೬೨೭೦.

೧೩. **ಫಿತೂರಖಾನ ವಲ್ಲದ ಅಸದಖಾನ ಲ್ಯಾರಿ** : ತಾರೀಖೆ ಹಪ್ತಕುರ್ಸಿ [ಪರ್ಶಿಯನ್].
ಸಾಲಾರಜಂಗ ವಸ್ತು ಸಂಗ್ರಹಾಲಯ, ಹೈದರಾಬಾದ. ಇಂಡಿಯಾ ಆಫೀಸ ಲಾಯಬ್ರರಿ ಲಂಡನ್‌ಗಳಲ್ಲಿ ಹಸ್ತಪ್ರತಿ ಲಭ್ಯ.

೧೪. **೨ನೆಯ ಇಬ್ರಾಹಿಮ ಆದಿಲಶಹ** : ಕಿತಾಬೆ ನವರಸ [ದಖನಿ].
ಪ್ರಕಟವಾಗಿದೆ.

೧೫. **ಮುಹಮ್ಮದ್ ಇಬ್ರಾಹಿಮ್ ಜುಬೇರಿ** : ರೌಜತುಲ್ ಔಲಿಯಾ ಎ ಬಿಜಾಪುರ [ಪರ್ಶಿಯನ್].
ಆಂಧ್ರಪ್ರದೇಶ ಪ್ರಾಚ್ಯ ಹಸ್ತಪ್ರತಿ ಸಂಗ್ರಹ ಹೈದರಾಬಾದದಲ್ಲಿ ಹಸ್ತಪ್ರತಿ ಲಭ್ಯ. ಸಂಖ್ಯೆ ೧೪೮೧೩.

೧೬. **ಮುಹಮ್ಮದ್ ಇಬ್ರಾಹಿಮ್ ಜುಬೇರಿ** : ಬಸಾತೀನೆ ಸಲಾತೀನ [ಪರ್ಶಿಯನ್].
ಮರಾಠೀ ಅನುವಾದದಿಂದ ಕನ್ನಡಕ್ಕೆ ಅನುವಾದ ಆಗಿದೆ. ಪರ್ಶಿಯನ್ ಹಸ್ತಪ್ರತಿ ಸಾಲಾರಜಂಗ ವಸ್ತುಸಂಗ್ರಹಾಲಯ ಹೈದರಾಬಾದದಲ್ಲಿ ಲಭ್ಯ.

೧೭. **ಮೀರ ಅಹಮದ ಅಲಿಖಾನ** : ಗುಲದಸ್ತಾ ಎ ಬಿಜಾಪುರ [ದಖನಿ].
ಆಂಧ್ರಪ್ರದೇಶ ಆರ್ಕೀವ್ಸದಲ್ಲಿ ಹಸ್ತಪ್ರತಿ ಲಭ್ಯ. ಸಂಖ್ಯೆ ೧೯೩.

೧೮. **ಅಬುಲ ಹಸನ ಕಾದಿರಿ** : ಶಾಹಿಪತ್ ಇ ಹುದಾ [ಪರ್ಶಿಯನ್].
ಸಾಲಾರಜಂಗ ವಸ್ತುಸಂಗ್ರಹಾಲಯ ಹೈದರಾಬಾದದಲ್ಲಿ ಹಸ್ತಪ್ರತಿ ಲಭ್ಯ.

೧೯. **ಆದಿಲಶಾಹಿಕಾಲದ ಫರ್ಮಾನುಗಳು ಮತ್ತು ಸನದುಗಳು** : ಭಾರತ ಇತಿಹಾಸ ಸಂಶೋಧಕ ಮಂಡಳ ಪುಣೆ, ಬಿಜಾಪುರ ವಸ್ತುಸಂಗ್ರಹಾಲಯ ಮತ್ತು ಇತರ ಸ್ಥಳಗಳಲ್ಲಿ ಲಭ್ಯ.

ಹೀಗೆ ಪಟ್ಟಿಮಾಡಿ, ಹಸ್ತಪ್ರತಿಗಳ ಶೋಧಕ್ಕೆ ತೊಡಗಲಾಯಿತು. ಸಾಲಾರಜಂಗ ವಸ್ತುಸಂಗ್ರಹಾಲಯ, ಆಂಧ್ರಪ್ರದೇಶ ಆರ್ಕೀವ್ಸ ಹೈದರಾಬಾದ, ಭಾರತೀಯ ಪುರಾತತ್ವ ಇಲಾಖೆ ವಸ್ತುಸಂಗ್ರಹಾಲಯ, ಗೋಳಗುಮ್ಮಟ ಬಿಜಾಪುರ– ಈ ಕೇಂದ್ರಗಳಿಂದ ಕೆಳಗಿನ ಹಸ್ತಪ್ರತಿಗಳು ದೊರೆತವು.

೧. ಕಾಜಿ ನೂರುಲ್ಲಾ : ತಾರೀಖೆ ಅಲಿ ಆದಿಲಶಹ [ದಖನಿ]

೨. ಮೀರ್ ರಫೀಯುದ್ದೀನ ಶಿರಾಜಿ : ತಜ್ಕಿರತುಲ್ ಮುಲೂಕ [ಪರ್ಶಿಯನ್]

೩. ಫಿತೂರಖಾನ ವಲ್ಲದ ಅಸದಖಾನ ಲ್ಯಾರಿ : ತಾರೀಖೆ ಹಪ್ತಕುರ್ಸೀ [ಪರ್ಶಿಯನ್]

೪. ಮೀರ ಅಹಮದ ಅಲಿಖಾನ : ಗುಲದಸ್ತಾ ಎ ಬಿಜಾಪುರ [ದಖನಿ]

೫. ಜುಹೂರ್ ಬಿನ್ ಜುಹೂರಿ : ಮುಹಮ್ಮದನಾಮಾ [ಪರ್ಶಿಯನ್]

ಹಸ್ತಪ್ರತಿಗಳನ್ನು ಒದಗಿಸಿದ ಮೇಲೆ ಕಾಣಿಸಿದ ಎಲ್ಲ ಸಂಸ್ಥೆಗಳ ಮುಖ್ಯಸ್ಥರಿಗೆ ನಮ್ಮ ಕೃತಜ್ಞತೆಗಳು. ಇದಲ್ಲದೆ, ಫರಿಶ್ತಾನ ತಾರೀಖೆ ಫರಿಶ್ತಾದ ಇಂಗ್ಲಿಷ್ ಮತ್ತು ಉರ್ದು ಅನುವಾದಗಳು, ಅಬ್ದುಲ್ಲಾ ದೇಹಲವಿಯ ಇಬ್ರಾಹೀಮನಾಮಾದ ಹಿಂದಿ ಮತ್ತು ಉರ್ದು ಅನುವಾದಗಳು, ಕವಿ ನುಸ್ರತಿಯ ಅಲಿನಾಮಾ, ಈಶ್ವರದಾಸ ನಗರ್‌ನ ಫುತೂಹತ್ ಅಲಂಗೀರ ಕೃತಿಯ ಇಂಗ್ಲಿಷ್ ಅನುವಾದ ಮತ್ತು ನೂರಾರು ಪರ್ಶಿಯನ್ ಮೂಲ ಮತ್ತು ಮರಾಠಿ ಅನುವಾದದ ಆದಿಲಶಾಹಿ ಫರ್ಮಾನುಗಳು ದೊರೆತವು. ಉಳಿದ ಹಸ್ತಪ್ರತಿಗಳನ್ನು ದೊರಕಿಸಬೇಕಾಗಿದೆ.

ಹೀಗೆ ಸಾಮಗ್ರಿಯನ್ನು ಸಂಗ್ರಹಿಸಿ ಅನುವಾದ ಕೆಲಸ ಪ್ರಾರಂಭ ಮಾಡಲಾಯಿತು. ಪರ್ಶಿಯನ್, ದಖನಿ ಮತ್ತು ಉರ್ದು ಭಾಷೆಗಳ ಈ ವಿದ್ವಾಂಸರನ್ನು ಕನ್ನಡ ಅನುವಾದ ಕಾರ್ಯದಲ್ಲಿ ತೊಡಗಿಸಿಕೊಳ್ಳಲಾಯಿತು.

೧. ಮೌಲಾನಾ ಮಹಬೂಬುರ್ ರಹಮಾನ ಮದನಿ, ಬಿಜಾಪುರ.

೨. ಶ್ರೀ ಬಿ. ಜಯಾಚಾರ್ಯ, ಯಾದಗಿರಿ.

೩. ಶ್ರೀಮತಿ ಬಾನು ಮುಷ್ತಾಕ್, ಹಾಸನ.

೪. ಡಾ. ಅಬ್ದುಲ್ ಹಮೀದ, ತಿಪಟೂರು.

೫. ಶ್ರೀ ಎಂ.ಎನ್ ನದಾಫ, ಬಿಜಾಪುರ

೬. ಪ್ರೊ. ವಸಂತ ಕುಷ್ಟಗಿ, ಗುಲಬರ್ಗಾ.

೭. ಶ್ರೀಮತಿ ರತ್ನಾ ಮಣ್ಣೂರ, ಗುಲಬರ್ಗಾ.

೮. ಡಾ. ಅಮೀರುದ್ದೀನ್ ಖಾಜಿ, ಬಿಜಾಪುರ.

೯. ಶ್ರೀ ಹಸನ ನಯೀಮ ಸುರಕೋಡ, ರಾಮದುರ್ಗ.

೧೦. ಡಾ. ಬಿ ರಘೋತ್ತಮರಾವ ದೇಸಾಯಿ, ಬೆಂಗಳೂರು.

೧೧. ಶ್ರೀಮತಿ ವಿದ್ಯಾ ಗುಮಾಸ್ತೆ, ಬಿಜಾಪುರ

೧೨. ಡಾ. ಆರ್.ಕೆ. ಕುಲಕರ್ಣಿ, ಬಿಜಾಪುರ

ಇವರ ಸಹಕಾರದಿಂದ ಮೊದಲ ಹಂತವಾಗಿ ೬ ಅನುವಾದ ಸಂಪುಟಗಳು ಈಗ ಪ್ರಕಟವಾಗುತ್ತಿವೆ.

೧. ತಾರೀಖೆ ಫರಿಶ್ತಾ: ೪ ಸಂಪುಟಗಳು.

೨. ಬಸಾತೀನೆ ಸಲಾತೀನ: ೫ನೆಯ ಸಂಪುಟ.

೩. ಇಬ್ರಾಹೀಮ ನಾಮಾ [ದಖನಿ], ಗುಲದಸ್ತಾಯೆ ಬಿಜಾಪುರ [ದಖನಿ], ತಾರೀಖೆ ಹಪ್ತಕುರ್ಸಿ [ಪರ್ಶಿಯನ್], ಫುತುಹತೆ ಅಲಂಗೀರ (ಭಾಗಶಃ) [ಪರ್ಶಿಯನ್]– ಇವೆಲ್ಲ ಸೇರಿ ೬ನೆಯ ಸಂಪುಟ.

ಹೀಗೆ ೬ ಸಂಪುಟಗಳಲ್ಲಿ ಸುಮಾರು ನಾಲ್ಕು ಸಾವಿರ ಪುಟಗಳ ಸಾಹಿತ್ಯ ಈಗ ಪ್ರಕಟವಾಗುತ್ತಿದ್ದು, ಉಳಿದವುಗಳ ಅನುವಾದಕಾರ್ಯ ಹಾಗೂ ಹಸ್ತಪ್ರತಿಗಳ ಶೋಧಕಾರ್ಯ ಮುನ್ನಡೆದಿದೆ. ಈ ೬ ಸಂಪುಟಗಳನ್ನು ಅನುವಾದಿಸಿದ ಎಲ್ಲ ಅನುವಾದಕರಿಗೆ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ.

‘ಆದಿಲಶಾಹಿ ಸಾಹಿತ್ಯ ಅನುವಾದ ಯೋಜನೆ’ಗೆ ಅನುದಾನ ನೀಡಿದ ಕರ್ನಾಟಕ ಸರಕಾರಕ್ಕೆ, ಯೋಜನೆಯನ್ನು ಯಶಸ್ವಿಯಾಗಿ ಕಾರ್ಯಗತಗೊಳಿಸುವಲ್ಲಿ ಸಹಕರಿಸುತ್ತಿರುವ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಎಲ್ಲ ಅಧಿಕಾರಿಗಳಿಗೆ ಮತ್ತು ಈ ದಿಶೆಯಲ್ಲಿ ನಿರಂತರ ಸಹಾಯಹಸ್ತ ನೀಡುತ್ತಿರುವ ಬಿ.ಎಲ್.ಡಿ.ಇ. ಸಂಸ್ಥೆಯ ಅಧ್ಯಕ್ಷರಾದ ಶ್ರೀ ಎಂ.ಬಿ. ಪಾಟೀಲ ಅವರಿಗೆ ಕೃತಜ್ಞತೆಗಳು.

ಸಂಪುಟಗಳು ಪ್ರಕಟವಾಗುವ ಪ್ರತಿ ಹಂತದಲ್ಲಿ ಸಹಕಾರ ನೀಡಿದ, ಬಿಜಾಪುರ ಜಿಲ್ಲೆಯ ಅಂದಿನ ಜಿಲ್ಲಾಧಿಕಾರಿಗಳಾಗಿದ್ದ ಶ್ರೀ ಶಿವಯೋಗಿ ಕಳಸದ, ಇಂದಿನ ಜಿಲ್ಲಾಧಿಕಾರಿಗಳಾದ ಶ್ರೀ ರಿತ್ವಿಕ್ ರಂಜನ್ ಪಾಂಡೆ ಅವರನ್ನು, ಈ ಯೋಜನೆಯ ಸಲಹಾ ಸಮಿತಿ ಸದಸ್ಯರ ಮಾರ್ಗದರ್ಶನವನ್ನು, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾದ ಡಾ. ಸೋಮಶೇಖರ ವಾಲಿ, ಬಿ.ಎಲ್.ಡಿ.ಇ. ಸಂಸ್ಥೆಯ ಡಾ.ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರದ ಸಂಯೋಜನಾಧಿಕಾರಿಗಳಾದ ಡಾ. ಎಂ.ಎಸ್.ಮದಭಾವಿ ಹಾಗೂ ಪ್ರಸ್ತುತ ಸಂಪುಟವನ್ನು ಪರಿಶೀಲಿಸಿದ ಶ್ರೀ ರಂಜಾನ್ ದರ್ಗಾ ಅವರ ಶ್ರಮವನ್ನು ಪ್ರೀತಿಯಿಂದ ಸ್ಮರಿಸುತ್ತೇವೆ.

ಮುಖಪುಟ ವಿನ್ಯಾಸಗೊಳಿಸಿದ ಶ್ರೀ ಕೆ.ಕೆ. ಮಕಾಳಿ ಹಾಗೂ ಅಂದವಾಗಿ ಮುದ್ರಿಸಿದ ಬೆಂಗಳೂರಿನ ಪ್ರಿಂಟ್ ಪಾಯಿಂಟ್‌ನ ಶ್ರೀ ಬಿ.ಸಿ. ಪಾಟೀಲ (ಹೆಬ್ಬಾಳ) ಮತ್ತು ಅವರ ಸಿಬ್ಬಂದಿಯನ್ನು ನೆನೆಯುತ್ತೇವೆ.

■

*

ನಿರ್ದೇಶಕರ ಮಾತು

ಡಾ. ಕೃಷ್ಣ ಕೊಲ್ಹಾರಕುಲಕರ್ಣಿ

'ತಾರೀಖ–ಎ–ಫರಿಶ್ತಾ', 'ಗುಲ್ಶನ್–ಎ–ಇಬ್ರಾಹಿಮಿ', 'ನವರಸನಾಮಾ' ಇತ್ಯಾದಿ ಹೆಸರುಗಳಿಂದ ಕರೆಯಿಸಿಕೊಳ್ಳುವ ಈ ಇತಿಹಾಸ ಗ್ರಂಥವನ್ನು ಬರೆದವನು, ಮುಲ್ಲಾ ಮುಹಮ್ಮದ ಕಾಸೀಮ ಹಿಂದುಶಾಹ ಫರಿಶ್ತಾ. ಫರಿಶ್ತಾ ಎಂಬುದು ಅವನ ಕಾವ್ಯನಾಮ, ಹಿಂದುಶಾಹ ಎಂದರೇನು? ಎಂಬುದು ಸ್ಪಷ್ಟವಾಗಿ ಗುರುತಿಸಲಾಗಿಲ್ಲ. ಅವನು ಕಾಸ್ಪಿಯನ್ ಸಮುದ್ರ ತೀರದ ಅಸ್ತರಾಬಾದನಲ್ಲಿ ಕ್ರಿ. ಶ. ಸು. ೧೫೭೦ರಲ್ಲಿ ಹುಟ್ಟಿದನೆಂದು ಹೇಳಲಾಗುತ್ತದೆ. ತಂದೆಯ ಹೆಸರು ಗುಲಾಮ್ ಅಲಿ ಹಿಂದುಶಾಹ. ಅವನ ಹಿನ್ನೆಲೆಯ ಬಗ್ಗೆ ಚೆನ್ನಾಗಿ ಗೊತ್ತಿಲ್ಲ. ತನ್ನ ತಂದೆ ಪ್ರಸಿದ್ಧ ಕವಿಯಾಗಿದ್ದನೆಂದು ಫರಿಶ್ತಾನೇ ಒಂದೆಡೆ ಹೇಳಿದ್ದಾನೆ. ಅವನು ತನ್ನ ದೇಶವನ್ನು ಬಿಟ್ಟು ಮಗನೊಂದಿಗೆ ಭಾರತಕ್ಕೆ ಬಂದು, ಅಹಮದನಗರದ ಮುರ್ತುಜಾ ನಿಜಾಮಶಾಹನ ಆಸ್ಥಾನದಲ್ಲಿದ್ದನು. ರಾಜಕುಮಾರ ಮೀರಾನ್ ಹುಸೇನನಿಗೆ ಪಾಠ ಹೇಳುತ್ತಿದ್ದನು. ಚಿಕ್ಕ ಫರಿಶ್ತಾ ಅಲ್ಲಿಯ ರಾಜಪುತ್ರರೊಂದಿಗೆ ಬೆಳೆದನು.

ಫರಿಶ್ತಾ ಚಿಕ್ಕವನಿದ್ದಾಗಲೇ ತಂದೆಯನ್ನು ಕಳೆದುಕೊಂಡನು. ಏಕಾಂಗಿಯಾದ ಅವನು ಎಳವೆಯಲ್ಲಿಯೇ ನಿಜಾಮನ ಆಸ್ಥಾನದಲ್ಲಿ ಅಧಿಕಾರ ಪಡೆದುಕೊಳ್ಳುವಲ್ಲಿ ಸಮರ್ಥನಾದನು. ಆತನು ಕೆಲವು ದಿನಗಳ ವರೆಗೆ ಮುರ್ತುಜಾ ನಿಜಾಮಶಾಹನ ರಹಸ್ಯ ಸಲಹೆಗಾರನಾದನಲ್ಲದೆ, ಗುಪ್ತಚಾರ ದಳದ ಹಾಗೂ ಅಂಗರಕ್ಷಕರ ಮುಖ್ಯಸ್ಥನೂ ಆಗಿದ್ದನು. ರಾಜಕುಮಾರ ಮೀರಾನ್ ಹುಸೇನನ ಕೊಲೆಯಾದ ನಂತರ ಫರಿಶ್ತಾ ಅಹಮದನಗರವನ್ನು ಬಿಟ್ಟು ಕ್ರಿ.ಶ. ಸು. ೧೫೮೯ರಲ್ಲಿ ಬಿಜಾಪುರಕ್ಕೆ ಬಂದನು. ಬಿಜಾಪುರದಲ್ಲಿ ಅದು ಎರಡನೆಯ ಇಬ್ರಾಹಿಮ ಆದಿಲಶಹನ ಕಾಲವಾಗಿತ್ತು. ಇಬ್ರಾಹಿಮನು ಚಿಕ್ಕವನಾಗಿದ್ದುದರಿಂದ ದಿಲಾವರಖಾನನು ಆಡಳಿತ ನಡೆಸುತ್ತಿದ್ದನು.

ಬಾದಶಹನ ಸಮವಯಸ್ಕನಾಗಿದ್ದ ಫರಿಶ್ತಾನನ್ನು ಆಸ್ಥಾನದಲಿಟ್ಟುಕೊಂಡು ದಿಲಾವರಖಾನನು ಇಬ್ರಾಹಿಮನಿಗೆ ಪರಿಚಯಿಸಿದನು. ಶಾಹದುರ್ಗ ಯುದ್ಧದಲ್ಲಿ ಬಿಜಾಪುರದ ಪರವಾಗಿ ಫರಿಶ್ತಾ ಹೋರಾಡಿದನು. ಅನಂತರದ ದಿನಗಳಲ್ಲಿ ಅಲ್ಲಿಯೇ ದಿಲಾವರಖಾನನನ್ನು ಆಡಳಿತದಿಂದ ಕಿತ್ತೊಗೆದಾಗ ಫರಿಶ್ತಾ ಸೇನಾಪತಿ ಜಮಾಲಖಾನನ ಕೈಯಲ್ಲಿ ಸೆರೆಸಿಕ್ಕು, ಅಹಮದನಗರದ ಜೈಲಿನಲ್ಲಿರಬೇಕಾಯಿತು. ತುಸು ದಿನಗಳಲ್ಲಿ ಅಲ್ಲಿಂದ ಹೇಗೋ ಪಾರಾಗಿ ಶಿರಾಜದ ಇನಾಯತಖಾನನ ಮುಖಾಂತರ ಕ್ರಿ.ಶ. ಸು. ೧೫೯೩ರಲ್ಲಿ ಮತ್ತೆ ಇಬ್ರಾಹಿಮನ ಆಸ್ಥಾನಕ್ಕೆ ಬಂದನು.

ಫರಿಶ್ತಾ ಬರೆದ ಮೊದಲ ಪುಸ್ತಕ 'ಇಖ್ತಿಯಾರಾತೆ ಕಾಸಿಮಿ' [ಕಾಸೀಮನ ಸಂಗ್ರಹ] ಎಂಬ ವೈದ್ಯಕೀಯ ಗ್ರಂಥವೆಂದು ಹೇಳಲಾಗುತ್ತದೆ. ಆದುದರಿಂದ ಅವನು ಮೂಲತಃ ವೈದ್ಯಕೀಯ ವಿಷಯದಲ್ಲಿ ಪರಿಣತನಾದ ಒಬ್ಬ ವೈದ್ಯನಾಗಿರಬೇಕು. ಅದರೊಂದಿಗೆ ಅವನು ರಾಜ್ಯದ ರಾಜಕೀಯದಲ್ಲೂ ತೊಡಗಿಸಿಕೊಂಡಿದ್ದನು. ಜೊತೆಗೆ ದೇಶದಲ್ಲಿಯ ರಾಜಕೀಯದ ಆಗುಹೋಗುಗಳಲ್ಲೂ ಆಸಕ್ತಿ ವಹಿಸುತ್ತಿದ್ದನು.

ಎರಡನೆಯ ಇಬ್ರಾಹಿಮ ಆದಿಲಶಹನು ಸ್ವತಃ ವಿದ್ವಾಂಸನಿದ್ದನು. ಮತ್ತು ವಿದ್ವಾಂಸರನ್ನು ಗುರುತಿಸುತ್ತಿದ್ದನು. ಫರಿಶ್ತಾನ ಯೋಗ್ಯತೆಯ ಬಗ್ಗೆ ಗೊತ್ತಾದಾಗ ಅವನನ್ನು ಕರೆದು, 'ರೈದತ್-ಅಲ್-ಸಫಾ' ಎಂಬ ಇತಿಹಾಸ ಗ್ರಂಥವನ್ನು ಕೊಟ್ಟು, "ಭಾರತದಲ್ಲಿಯ ಮುಸ್ಲಿಮರ ಇತಿಹಾಸವನ್ನು ಈ ವರೆಗೆ ಯಾರೂ ಚೆನ್ನಾಗಿ ಬರೆದಿಲ್ಲವೆಂದು" ಹೇಳಿದನು. ನಿಜಾಮುದ್ದೀನನು ಬರೆದಿರುವ ಇದು ತುಂಬ ಸಂಕ್ಷಿಪ್ತವಾಗಿದೆ. ಇದರಲ್ಲಿ ದಕ್ಷಿಣ ಭಾರತದ ಮುಸ್ಲಿಮರ ಇತಿಹಾಸವು ತಪ್ಪುಗಳಿಂದ ಕೂಡಿದೆ -ಎಂದು ಹೇಳಿದನು. ಆದ್ದರಿಂದ ಭಾರತದಲ್ಲಿ ಮುಸ್ಲಿಮರು ಬಂದು ರಾಜ್ಯ ಸ್ಥಾಪನೆಮಾಡಿದಂದಿನಿಂದ ಇಂದಿನ ವರೆಗಿನ ಅವರ ಚರಿತ್ರೆಯನ್ನು ಬರೆಯಲು ಆದೇಶಿಸಿದನು. ಭಾರತದಲ್ಲಿ ಮೊಟ್ಟ ಮೊದಲು ಕಾಲಿಟ್ಟ ಮುಸ್ಲಿಮನಿಂದ ಹಿಡಿದು ಇಂದಿನ ವರೆಗಿನ [ತನ್ನ ಕಾಲದ ವರೆಗಿನ] ಚರಿತ್ರೆಯನ್ನು ಅದರಲ್ಲಿ ದಾಖಲಿಸಲು ಹೇಳಿದನು. ಅದರಲ್ಲಿ ದಕ್ಷಿಣ ಭಾರತದ ಮುಸ್ಲಿಮರ ಸವಿವರ ಚರಿತ್ರೆ ಬರಬೇಕೆಂದೂ ಅಲ್ಲಿಯ ಚರಿತ್ರೆಗೆ ಆಧಾರಗಳಿರಬೇಕೆಂದೂ ನಡೆದ ಘಟನೆಗಳನ್ನು ಯಥಾವತ್ತಾಗಿ ಚಿತ್ರಸಬೇಕಲ್ಲದೆ ವರ್ಣನೆಗಳಿಂದ ಅದು ಮುಕ್ತವಾಗಿರಬೇಕೆಂದೂ ಆದೇಶಿಸಿದನು. ಅದರಂತೆ ಫರಿಶ್ತಾ ಚರಿತ್ರೆಯನ್ನು ಬರೆಯಲು ಪ್ರಾರಂಭಿಸಿದನು.

ಈ ಮಧ್ಯ ಆತನು ಕ್ರಿ.ಶ. ೧೫೯೪ರಲ್ಲಿ ರಾಜಕುಮಾರ ಡ್ಯಾನಿಯಲ್ ಮಿರ್ಜಾನ ಮದುವೆಯ ನಿಶ್ಚಯಕಾರ್ಯಕ್ಕೆ ವಧು ಬೇಗಂ ಸುಲ್ತಾನಾಳನ್ನು ಬಿಜಾಪುರದಿಂದ ಅಹ್ಮದನಗರದ ವರೆಗೆ ಕರೆದುಕೊಂಡು ಹೋದನು. ಮುಂಗಿ ಪೈಠಣದಲ್ಲಿ ಜರುಗಿದ ನಿಶ್ಚಯದಲ್ಲೂ ಅವನು ಭಾಗವಹಿಸಿದ್ದನು. ಬಳಿಕ ಬುರ್ಹಾಣಪುರದ ವರೆಗೂ ಅವಳೊಂದಿಗೆ ಹೋಗಿದ್ದನು. ಕ್ರಿ.ಶ. ೧೬೦೬ರಲ್ಲಿ ಮೊಗಲ ಬಾದಶಹ ಜಹಾಂಗೀರನ

ಆಸ್ಥಾನಕ್ಕೂ ಬಿಜಾಪುರದ ಪರವಾಗಿ ಹೋಗಿದ್ದನು, ಲಾಹೋರದ ಹತ್ತಿರ ಜಹಾಂಗೀರನನ್ನು ಕಂಡಿದ್ದನು.

ಫರಿಶ್ತಾ, ಕ್ರಿ.ಶ. ೧೬೧೨ರ ವರೆಗೆ ಇತಿಹಾಸ ಬರೆದಿದ್ದರೂ ಬಿಜಾಪುರ ಇತಿಹಾಸದ ಘಟನೆಗಳ ವಿವರ ಮಾತ್ರ ಕ್ರಿ.ಶ. ೧೫೯೬ರ ವರೆಗೆ ಬಂದಿದೆ. ಫರಿಶ್ತಾ ಕ್ರಿ.ಶ. ೧೬೧೨ರಲ್ಲಿ ಸತ್ತಿರಬಹುದೆಂದು, ಅವನ ಗ್ರಂಥವನ್ನು ಇಂಗ್ಲಿಷ್‌ಗೆ ಅನುವಾದಿಸಿದ ಕ್ಯಾಪ್ಟನ್ ಬ್ರಿಗ್ಸ ಊಹಿಸಿದ್ದಾನೆ. ಇನ್ನೊಬ್ಬ ವಿದ್ವಾಂಸ ಎಂ.ಜಿ.ಮೊಹಲ್ ಎಂಬವನು ಫರಿಶ್ತಾ ಕ್ರಿ.ಶ. ೧೬೨೩ರ ಮೊದಲು ಸತ್ತಿರಲಿಕ್ಕಿಲ್ಲ ಎನ್ನುತ್ತಾನೆ.

ಪ್ರಾರಂಭದಲ್ಲಿ ಫರಿಶ್ತಾ, ತನ್ನ ಗ್ರಂಥಕ್ಕೆ 'ಗುಲ್ಶನ್-ಎ-ಇಬ್ರಾಹಿಮಿ' ಎಂಬ ಹೆಸರನ್ನಿಟ್ಟಿದ್ದನು. ಅನಂತರ ಕೆಲವು ಬದಲಾವಣೆಗಳನ್ನು ಮಾಡಿ ಅದಕ್ಕೆ 'ನವರಸ ನಾಮಾ' ಎಂದು ಕರೆದನು. ಮೊದಲನೆಯದು ತನ್ನ ಆಶ್ರಯದಾತ ಎರಡನೆಯ ಇಬ್ರಾಹೀಮನ ಹೆಸರಿನಲ್ಲಿದ್ದರೆ, ಅನಂತರದ್ದು ಇಬ್ರಾಹೀಮನ ಪ್ರಿಯವಿಷಯವಾದ 'ನವರಸ'ಗಳಿಗೆ ಸಂಬಂಧಿಸಿದ್ದಾಗಿದೆ. ಆದರೆ ಫರಿಶ್ತಾನ ಈ ಕೃತಿಯನ್ನು 'ತಾರೀಖ-ಎ-ಫರಿಶ್ತಾ' ಎಂದೇ ವಿಶ್ವದಾದ್ಯಂತ ಗುರುತಿಸಲಾಗಿದೆ. ಈ ಗ್ರಂಥದ ಮೊದಲ ಪ್ರತಿಯನ್ನು ಕ್ರಿ.ಶ.೧೬೦೬ರಲ್ಲಿ ತನ್ನ ಆಶ್ರಯದಾತ ಎರಡನೆಯ ಇಬ್ರಾಹಿಮನಿಗೆ ಸಮರ್ಪಿಸಿದನಾದರೂ, ಸಾಯುವ ವರೆಗೆ ಆತನು ತನ್ನ ಗ್ರಂಥವನ್ನು ತಿದ್ದುತ್ತಲೇ ಇದ್ದನೆಂದು ಹೇಳಲಾಗುತ್ತದೆ.

'ತಾರೀಖ-ಎ-ಫರಿಶ್ತಾ' ಗ್ರಂಥವು ಪ್ರಸ್ತಾವನೆ ಹಾಗೂ ಸಮಾರೋಪಗಳನ್ನಲ್ಲದೆ ೧೨ ಅಧ್ಯಾಯಗಳನ್ನೊಳಗೊಂಡಿದೆ. ಭಾರತೀಯರ ಹಿಂದೂ ಭಾವನೆಗಳನ್ನು, ಚರಿತ್ರೆ ಪುರಾಣಗಳನ್ನು ಉಲ್ಲೇಖಿಸುತ್ತ, ಭಾರತದಲ್ಲಿ ಮುಸ್ಲಿಮರ ಆಗಮನದ ವಿವರಗಳೊಂದಿಗೆ ತನ್ನ ಇತಿಹಾಸವನ್ನು ಪ್ರಾರಂಭಿಸುತ್ತಾನೆ. ತಾನು ಬರೆಯುತ್ತಿರುವ ಈ ಚರಿತ್ರೆಗೆ ಉಪಲಬ್ಧವಿದ್ದ ಸುಮಾರು ೨೫ ವಿವಿಧ ಇತಿಹಾಸ ಗ್ರಂಥಗಳನ್ನು ಆಕರವಾಗಿ ಬಳಸಿಕೊಂಡಿದ್ದೇನೆಂದು ಆತನೇ ಪ್ರಾರಂಭದಲ್ಲಿ ಹೇಳಿಕೊಂಡಿದ್ದಾನೆ. ಭಾರತದಲ್ಲಿಯ ಮುಸ್ಲೀಮರ ಚರಿತ್ರೆಯಾದ ಇದರಲ್ಲಿ ಚಿಕ್ಕ ಪುಟ್ಟ ಸಂಸ್ಥಾನಗಳ ಯಾವ ವಿವರಗಳನ್ನೂ ಅವನು ಬಿಟ್ಟಿಲ್ಲ. ಅವುಗಳಲ್ಲಿ ಕೆಲವನ್ನು ವಿವರವಾಗಿ ವರ್ಣಿಸಿದ್ದಾನೆ.

ಮಧ್ಯಯುಗೀನ ದಕ್ಷಿಣ ಭಾರತ ಇತಿಹಾಸವನ್ನು, ಅದರಲ್ಲಿಯೂ ಬಿಜಾಪುರದಲ್ಲಿ ನಡೆದ ಪ್ರತಿಯೊಂದು ಘಟನೆಗಳನ್ನು ಅವನು ದಾಖಲಿಸಿದ್ದಾನೆ. ಯೂಸುಫ ಆದಿಲಶಾಹ, ಇಸ್ಮಾಯಿಲ್, ಮಲ್ಲೂ, ಮೊದಲ ಇಬ್ರಾಹೀಮ, ಮೊದಲ ಅಲಿ, ಹಾಗೂ ಎರಡನೆಯ ಇಬ್ರಾಹೀಮ ಆದಿಲಶಹನ ಕಾಲದಲ್ಲಿ ಜರುಗಿದ ತಪಶೀಲನ್ನು ವಿವರವಾಗಿ ಕೊಟ್ಟಿದ್ದಾನೆ. ವರುಷಗಳನ್ನು ನಮೂದಿಸುವಾಗ ಅಲ್ಲಲ್ಲಿ ತುಸು ಹಿಂದು ಮುಂದಾಗಿರಬಹುದಾದರೂ, ಬಿಜಾಪುರದ ಆದಿಲಶಾಹಿಗಳ ಪ್ರಾರಂಭದ ಇತಿಹಾಸವನ್ನು ಫರಿಶ್ತಾನಷ್ಟು ಖಚಿತವಾಗಿ ಯಾರೂ ಹೇಳಿಲ್ಲ. ಅವನು ಬಿಜಾಪುರ ಮತ್ತು ಅಹ್ಮದನಗರ ಆಸ್ಥಾನಗಳಲ್ಲಿ

ಇದ್ದವನಾದ್ದರಿಂದ ಮತ್ತು ಮೊಗಲ ಸಾಮ್ರಾಟ ಜಹಾಂಗೀರನನ್ನು ಮುಖತಃ ಕಂಡವನಾದ್ದರಿಂದ ಕ್ರಿ. ಶ. ೧೫೭೦ರಿಂದ ೧೬೧೨ರ ವರೆಗೆ ದಾಖಲಿಸಿದ ಘಟನೆಗಳನ್ನು ಆತ ಕಣ್ಣಾರೆ ಕಂಡವನಾಗಿದ್ದಾನೆ.

ಫರಿಶ್ತಾನೇ ಹೇಳಿಕೊಂಡಿರುವಂತೆ ಅವನ ಗ್ರಂಥದ ಭಾಷೆ ಸರಳ ಹಾಗೂ ವರ್ಣನಾರಹಿತ ಪರ್ಶಿಯನ್ ಭಾಷೆ ಆಗಿದೆ. ಅದು ಪೂರ್ವಗ್ರಹದೋಷ ಹಾಗೂ ಪಕ್ಷಪಾತದಿಂದ ಮುಕ್ತವಾಗಿದೆ ಎಂದಿದ್ದಾನೆ. ಆತ ತನ್ನ ಆಶ್ರಯದಾತನ್ನು ಕೂಡ ಅತಿರಂಜಿತವಾಗಿ ಬಣ್ಣಿಸುವುದಿಲ್ಲ. ಅಷ್ಟೇ ಅಲ್ಲ, ಆತನ ಕುರಿತಾಗಿ ಬರುವ ಕೆಲವು ಅಸಂತೋಷಕರ ಘಟನೆಗಳನ್ನು ಕೂಡ ಬರೆದಿದ್ದಾನೆ. ತಾನು ಮುಸ್ಲಿಮನಾಗಿದ್ದರೂ ಇತರ ಮತಗಳನ್ನು ಕುರಿತು ಹೇಳುವಾಗ ಉಳಿದ ಮುಸ್ಲಿಮ ಇತಿಹಾಸಕಾರರಿಗಿಂತ ಸಂಯಮದಿಂದ ವರ್ತಿಸಿದ್ದಾನೆ. ತನ್ನ ಹಿಂದಿನವರ ಇತಿಹಾಸ ಗ್ರಂಥಗಳಿಂದ ಘಟನೆಗಳನ್ನು ಹೆಕ್ಕಿ ತೆಗೆವಲ್ಲಿಯೂ ಅಪರೂಪದ ಜಾಣ್ಮೆಯನ್ನು ತೋರಿದ್ದಾನೆ, ಪ್ರಮುಖ ಘಟನೆಗಳನ್ನು ದಾಖಲಿಸಿದ್ದಾನೆ.

ಪ್ರಸ್ತುತ ಅನುವಾದ

'ತಾರೀಖಿ-ಎ-ಫರಿಶ್ತಾ' ಇತಿಹಾಸ ಗ್ರಂಥವನ್ನು ಅನುವಾದಿಸಲು ಕೈಗೆತ್ತಿಗೊಂಡಾಗ ನಮ್ಮ ಎದುರಿಗೆ ೩ ಪ್ರತಿಗಳು ಇದ್ದುವು. ೧. ಸಾಲಾರಜಂಗ ವಸ್ತುಸಂಗ್ರಹಾಲಯದ ಪರ್ಶಿಯನ್ ಹಸ್ತಪ್ರತಿ ೨. ಕ್ರಿ ಶ. ೧೮೨೯ರಲ್ಲಿ ಕ್ಯಾಪ್ಟನ್ ಬ್ರಿಗ್ಸ್‌ನಿಂದ ಇಂಗ್ಲಿಷ್‌ಗೆ ಅನುವಾದವಾಗಿ ಪುನರ್ಮುದ್ರಣಗೊಂಡ ಎರಡು ಸಂಪುಟಗಳು, ೩. ಅಬ್ದುಲ್ ಹೈ ಖ್ವಾಜಾ ಅವರಿಂದ ಉರ್ದು ಭಾಷೆಗೆ ಅನುವಾದಗೊಂಡು ಉತ್ತರಪ್ರದೇಶದ ಬಂಡಾದಿಂದ ಪ್ರಕಟವಾದ ಎರಡು ಬೃಹತ್ ಸಂಪುಟಗಳು. ಇವುಗಳಲ್ಲಿ ಸಹಜ ಮತ್ತು ಶೀಘ್ರವಾಗಿ ಕನ್ನಡಕ್ಕೆ ಅನುವಾದಗೊಳ್ಳಬಹುದಾದ ಪ್ರತಿಗಳೆಂದರೆ ಇಂಗ್ಲಿಷ್‌ನ ಎರಡು ಸಂಪುಟಗಳು. ಕ್ಯಾಪ್ಟನ್ ಬ್ರಿಗ್ಸ್‌ನ ಅನುವಾದವೇನೋ ಸರಿಯಾಗಿದೆ. ಆದರೆ ಅವನು ಅಲ್ಲಲ್ಲಿ ಬಿಟ್ಟಿದ್ದಾನೆಂಬ ದೂರು ಇದೆ. ಹೀಗಾಗಿ ಇದನ್ನು ಬಿಟ್ಟು ಸಾಲಾರಜಂಗ ವಸ್ತುಸಂಗ್ರಹಾಲಯದ ಹಸ್ತಪ್ರತಿಯಿಂದಲೇ ಅನುವಾದಿಸಬೇಕೆಂದು ಯೋಚಿಸಿದಾಗ, ಸುಮಾರು ೨೦೦೦ ಪುಟಗಳಷ್ಟು ಬೃಹತ್ತಾದ, ಅದರಲ್ಲಿಯೂ ಪರ್ಶಿಯನ್ ಭಾಷೆಯ ಈ ಹಸ್ತಪ್ರತಿಯನ್ನು ಸಕಾಲದಲ್ಲಿ ಕನ್ನಡಕ್ಕೆ ಅನುವಾದ ಮಾಡಿಕೊಡುವವರು ಸಿಗುವುದು ಕಷ್ಟವೆನಿಸಿತು. ಹೀಗಾಗಿ ಉರ್ದು ಭಾಷೆಯಿಂದ ಅನುವಾದಿಸಲು ವಿದ್ವಾಂಸರು ದೊರೆತ ಕಾರಣ ಅಬ್ದುಲ್ ಹೈ ಖ್ವಾಜಾ ಅವರ ಉರ್ದು ಅನುವಾದವನ್ನು ಆಯ್ಕೆ ಮಾಡಿಕೊಂಡೆವು. ನಾಡಿನ ಸುಮಾರು ಒಂಬತ್ತು ಜನ ವಿದ್ವಾಂಸರಿಗೆ ಈ ಕೆಲಸವನ್ನು ಹೀಗೆ ಹಂಚಿ ಕೊಡಲಾಯಿತು:

ಸಂಪುಟ ೧. ಶ್ರೀ ಬಿ ಜಯಾಚಾರ್ಯ. ನ್ಯಾಯವಾದಿಗಳು, ಯಾದಗಿರಿ ಮತ್ತು ಶ್ರೀಮತಿ ಬಾನು ಮುಷ್ತಾಕ್. ನ್ಯಾಯವಾದಿಗಳು, ಹಾಸನ.

ಸಂಪುಟ ೨. ಡಾ. ಅಬ್ದುಲ್ ಹಮೀದ, ತಿಪಟೂರು ಮತ್ತು ಶ್ರೀ ಎಂ.ಎನ್. ನದಾಫ, ಬಿಜಾಪುರ.

ಸಂಪುಟ ೩. ಪ್ರೊ. ವಸಂತ ಕುಷ್ಟಗಿ, ಶ್ರೀಮತಿ ರತ್ನಾ ಮಣ್ಣೂರ, ಗುಲಬರ್ಗಾ ಮತ್ತು ಡಾ. ಅಮೀರುದ್ದೀನ್ ಖಾಜಿ, ಬಿಜಾಪುರ.

ಸಂಪುಟ ೪. ಶ್ರೀ ಹಸನ ನಯೀಮ ಸುರಕೋಡ, ರಾಮದುರ್ಗ ಮತ್ತು ಡಾ. ರಘೋತ್ತಮರಾವ ದೇಸಾಯಿ, ಐಎಫ್ಎಸ್ [ನಿವೃತ್ತ], ಬೆಂಗಳೂರು.

ಇವರಿಂದ ಅನುವಾದವಾಗಿ ಬಂದ ಹಸ್ತಪ್ರತಿಗಳನ್ನು ಮೊದಲು ಇಂಗ್ಲಿಷ್ ಅನುವಾದದೊಂದಿಗೆ, ಅನಂತರ ಪರ್ಶಿಯನ್ ಹಸ್ತಪ್ರತಿಯೊಂದಿಗೆ ತುಲನೆ ಮಾಡಿ ಕೊನೆಗೆ ಮೇಲಿನಂತೆ ೪ ಸಂಪುಟಗಳಲ್ಲಿ ಪ್ರಕಟಿಸುವುದೆಂದು ನಿರ್ಧರಿಸಲಾಯಿತು.

ಹೀಗೆ ೯ ಜನರಿಂದ ಬಂದ ಹಸ್ತಪ್ರತಿಗಳಲ್ಲಿ ಭಾಷೆಯ ದೃಷ್ಟಿಯಿಂದ ಕೆಲವನ್ನು ಪರಿಷ್ಕರಿಸುವ ಅಗತ್ಯ ಕಂಡುಬಂದಿತು. ಈ ಕೆಲಸದಲ್ಲಿ, ಡಾ. ಎಂ.ಎಸ್.ಮದಭಾವಿ, ಬಿಜಾಪುರ, ಡಾ. ಎಸ್.ಕೆ. ಕೊಪ್ಪ, ಇಂಡಿ ಮತ್ತು ಶ್ರೀಮತಿ ರತ್ನಾ ಮಣ್ಣೂರ, ಗುಲ್ಬರ್ಗಾ ಅವರು ತುಂಬ ಸಹಾಯ ಮಾಡಿದರು. ಕನ್ನಡ ಅನುವಾದವನ್ನು ಪರ್ಶಿಯನ್ ಹಸ್ತಪ್ರತಿಯೊಂದಿಗೆ ಪರಿಶೀಲಿಸಿದವರು ಮೌಲಾನಾ ಮಹಿಬೂಬುರ್ ರಹಮಾನ ಮದನಿ. ಹೀಗೆ ಸಿದ್ಧವಾದ ನಾಲ್ಕೂ ಸಂಪುಟಗಳನ್ನು ಮುದ್ರಣಕ್ಕೆ ಯೋಗ್ಯವಾಗುವಂತೆ ಪರಿಷ್ಕರಿಸಿದವರು ಶ್ರೀ ರಂಜಾನ್ ದರ್ಗಾ. ಹೀಗೆ ನೆರವಾದ ಮೇಲಿನ ಎಲ್ಲ ವಿದ್ವಾಂಸರಿಗೆ ಕೃತಜ್ಞತೆಗಳು.

ಈ ಯೋಜನೆಯನ್ನು ರೂಪಿಸುವಲ್ಲಿ, ಮುನ್ನಡೆಸುವಲ್ಲಿ ಉದ್ದಕ್ಕೂ ಮಾರ್ಗದರ್ಶನ ಮಾಡಿದ ಸಮಿತಿಯ ಅಧ್ಯಕ್ಷರಾದ ಡಾ. ಎಂ.ಎಂ. ಕಲಬುರ್ಗಿ ಅವರಿಗೆ, ಸಹಕಾರ ನೀಡಿದ ಸಮಿತಿಯ ಸದಸ್ಯರಿಗೆ ಕೃತಜ್ಞತೆಗಳು.

■

*

ಪರಿವಿಡಿ

I. ಬಿಜಾಪುರ ಆದಿಲ್‌ಶಾಹ ಸುಲ್ತಾನರ ವೃತ್ತಾಂತ

*

೧. ಯೂಸುಫ ಆದಿಲಶಾಹ

ಮೊತ್ತ ಮೊದಲಿನ ಸ್ಥಿತಿ:

ಲೇಖಕನ ಅಭಿಪ್ರಾಯದಂತೆ ಆದಿಲಶಾಹಿ ಮನೆತನದ ಮೂಲಪುರುಷನು ಅಬುಲ್ ಫಜಲ ಯೂಸುಫ ಆದಿಲಶಾಹನು ರೋಮ ಪ್ರಭುತ್ವಕ್ಕೆ ಅಧಿನದಲ್ಲಿದ್ದ ಆಲ್ ಉಸ್ಮಾನನ ಪೀಳಿಗೆಗೆ ಸಂಬಂಧಪಟ್ಟವನು. ಈ ಮನೆತನದ ಮೊದಲಿನ ಸ್ಥಿತಿಗತಿಯ ಬಗ್ಗೆ ಆತನು ಹೀಗೆ ವಿವರಿಸುತ್ತಾನೆ: ಹಿಜರಿ ಶಕೆ ೫೪ (ಬ್ರಿಗ್ಸ್ ಪುಸ್ತಕದಲ್ಲಿ ಹಿಜರಿ ೮೫೬ ಇದೆ) ಈ ಮನೆತನದ ಮೂಲಪುರುಷನು ಇಹಲೋಕವನ್ನು ತ್ಯಜಿಸಿದನು. ಆಗ ಸುಲ್ತಾನನ ಹಿರಿಯ ಮಗ ಸುಲ್ತಾನ ಮಹಮದನು ತಂದೆಯ ಅನಂತರ ಅರಸೊತ್ತಿಗೆಗೆ ಉತ್ತರಾಧಿಕಾರಿಯಾದನು. ಸುಲ್ತಾನ ಮಹಮದನ ವಿದ್ಯಾವಂತಿಕೆ, ಬುದ್ಧಿವಂತಿಕೆ, ಸ್ನೇಹಪರತೆ, ಪಾಲನೆ ಪೋಷಣೆಗಳೆಲ್ಲ ಜಗತ್ತಿಗೇ ಅನುಕರಣೀಯ. ಸುಲ್ತಾನ ಮಹಮದನ ವ್ಯಕ್ತಿತ್ವವನ್ನು ಕುರಿತು ಫಾರ್ಸಿಯ ಪ್ರಸಿದ್ಧ ಕವಿ ಮೌಲಾನಾ ಅಬ್ದುಲ ರಹಮಾನ ಜಾಮೀಯಾ ಅವರು ಇಂತಹ ಮೇಧಾವಿ ಬಾದಶಹನ ಕುರಿತು ಪ್ರಶಂಸಾಪರ ಪದ್ಯಗಳನ್ನು ರಚನೆ ಮಾಡಿರುವುದು ವಿಶೇಷ.

ಸುಲ್ತಾನ ಮಹಮದ:

ಸುಲ್ತಾನ ಮಹಮದನ ಸಿಂಹಾಸನಾರೋಹಣದ ಅನಂತರ ಆಸ್ಥಾನದ ಸಭಾಸದರು ಬಾದಶಹನಿಗೆ ವಿನಂತಿಸಿಕೊಳ್ಳುತ್ತ ಮರಣ ಹೊಂದಿದ ಬಾದಶಹನ ಪ್ರಭುತ್ವದಲ್ಲಿಯ ಒಬ್ಬ ವ್ಯಕ್ತಿಯು ಸಿಂಹಾಸನದ ವಾರಸುದಾರನ ಮಗನೆಂದು ಪೋಷಿಸಿಕೊಂಡು ಮುಂದೆ ಬಂದು ತನ್ನ ಹಕ್ಕನ್ನು ಪ್ರತಿಪಾದಿಸತೊಡಗಿದ್ದಾನೆ, ಇದರಿಂದ ದೇಶದಲ್ಲಿ ಭಿನ್ನಾಭಿಪ್ರಾಯವನ್ನು ಬಿತ್ತತೊಡಗಿದ್ದಾನೆಂದು ವಿವರ ನೀಡಿದರು. ಈ ಸುಳ್ಳು ವಾರಸುದಾರನು ಹಕ್ಕು ಸಾಧಿಸಲು ಹೊರಟದ್ದರಿಂದ ಪ್ರಭುತ್ವದ ತಳಹದಿಯೇ ಶಿಥಿಲವಾಯಿತು. ಬಹಳ ಸಂಕಷ್ಟಗಳ ಮಧ್ಯದಲ್ಲಿ ಆ ಸಮಸ್ಯೆಯನ್ನು ಪರಿಹರಿಸಲಾಯಿತು. ಮುಂದಿನ ದಾರಿಯೇನೆಂದು ಯೋಚಿಸಿ, ಆ ಉದ್ಭವಿತ ವಾರಸುದಾರನನ್ನು ಮುಗಿಸಿ

ಬಿಡುವುದಲ್ಲದೆ, ರಾಜವಂಶದ ಉಳಿದ ವಾರಸುದಾರರನ್ನೆಲ್ಲ ಮುಗಿಸಿ ಬಿಡಲು ನಿರ್ಧರಿಸಿದರು. ಇದನ್ನು ಕಾರ್ಯರೂಪಕ್ಕೆ ತರುವುದರಿಂದ ಯಾವ ಅಡೆತಡೆಯೂ ಇರುವುದಿಲ್ಲ ಹಾಗೂ ಒಳಜಗಳಗಳಿಗೆ ಆಸ್ಪದವಿರುವುದಿಲ್ಲ. ಇದು ಆ ನಿರ್ಧಾರದ ತಿರುಳು.

ರಾಜಕುವರ ಯೂಸುಫ ಆದಿಲಶಾಹನನ್ನು ಕೊಲೆ ಮಾಡಬೇಕೆಂಬ ರಾಜಾಜ್ಞೆ:

ಸುಲ್ತಾನ ಮಹಮದನಿಗೆ ಆಸ್ಥಾನ ಸದಸ್ಯರ ಸಲಹೆಯು ಸರಿಯೆನ್ನಿಸಿತು. ಆದ್ದರಿಂದ ಆತನು ರಾಜಕುಮಾರ ಆದಿಲಶಾಹನ ಕೊಲೆಗೆ ಅನುಮತಿ ಕೊಟ್ಟನು. ಆಸ್ಥಾನದ ಅಮೀರರು ಅಂತಃಪುರದ ಬಾ಼ಗಿಲಿನ ಹತ್ತಿರ ಬಂದಾಗ, ನಿರ್ದೋಷಿಯಾದ ಯೂಸುಫನ ಕೊಲೆ ಮಾಡಿ ಆತನ ಹೆಣವನ್ನು ಆ ಬಾಗಿಲಿನಿಂದ ಹೊರಗೆ ತರುವುದರಿಂದ, ಪ್ರಜೆಗಳಿಗೆ, ಉಸ್ಮಾನೀ ರಕ್ತಸಂಬಂಧಿಗಳಲ್ಲಿ ವಲೀ ಅಹಮದ್‌ನನ್ನು ಬಿಟ್ಟು ಯಾರೂ ಉಳಿದಿಲ್ಲವೆಂದು ಖಚಿತವಾಗುತ್ತದೆ. ಮುಂದೆ ಉಸ್ಮಾನೀ ರಕ್ತ ಸಂಬಂಧಿಗಳಾರೂ ತಾವೇ ಅರಸೊತ್ತಿಗೆಯ ಹಕ್ಕುದಾರರೆಂದು ಎದುರು ಬರಲು ಧೈರ್ಯ ಮಾಡಲಾರರೆಂದು ಯೋಚಿಸಿಯೇ ನಿರ್ದೋಷಿ ಯೂಸುಫನ ಕೊಲೆಗೆ ಆದೇಶ ನೀಡಲು ಮುಂದಾದ ಗುಟ್ಟಿನ ಮಹತ್ವ.

ರಾಣಿಯ ವಿನಂತಿ :

ಸುಲ್ತಾನ ಮಹಮದನ ತಾಯಿಗೆ ತನ್ನ ಚಿಕ್ಕ ಮಗನ ಮೇಲೆ ಬಹಳ ಪ್ರೀತಿ ಇದ್ದಿತು. ರಾಣಿಗೆ ಯೂಸುಫನ ಕೊಲೆಯ ಸಂಚು ಗೊತ್ತಾದಾಗ ಆಕೆ ಅಂತಃಪುರದ ಬಾಗಿಲಿಗೆ ಬಂದಳು. ಆಕೆ ಬಹಳ ಅಂಗಲಾಚಿ ವಿನಂತಿಸಿದುದೇನೆಂದರೆ, ಇಂತಹ ಮುಗ್ಧ ಬಾಲಕನಾಗಿರುವ ಈ ರಾಜಕುಮಾನನ್ನು ಕೊಲೆ ಮಾಡುವುದರಿಂದ ಯಾವ ಲಾಭವೂ ಇಲ್ಲ, ಆದರೆ ಈ ಬಾಲಕನನ್ನು ವಧಿಸುವುದರಲ್ಲಿ ಸಮಸ್ಯೆಯ ಪರಿಹಾರವು ಇರುವುದಾದರೆ, ನನಗೆ ಒಂದು ದಿನದ ಅವಧಿಯನ್ನು ಕೊಡಬೇಕು, ಜೀವಿತದ ಪೂರ್ಣಾವಧಿಯವರೆಗೆ ಅಗಲಬೇಕಾಗಿರುವ ಪ್ರೀತಿಯ ಮಗನ ಜೊತೆಗೆ ಅವನನ್ನು ನೋಡುತ್ತ ರಾತ್ರಿಯೆಲ್ಲ ಕಳೆಯುತ್ತೇನೆ, ಎಂದು. ಅಮೀರನಿಗೆ ಈ ವಿನಂತಿಯಲ್ಲಿ ಯಾವ ದೋಷವೂ ಕಾಣಿಸಲಿಲ್ಲ. ಆದ್ದರಿಂದ ರಾಜಕುಮಾರ ಯೂಸುಫನ ಕೊಲೆಯನ್ನು ಒಂದು ದಿನಕ್ಕೆ ಮುಂದೂಡಲಾಯಿತು. ರಾಣಿಯು ಅಂತಃಪುರದ ಬಾಗಿಲಿನಿಂದ ಮರಳಿದಳು.

ರಾಣಿಯ ಉಪಾಯ :

ಅಮೀರರೆಲ್ಲ ಹೊರಟು ಹೋದ ಮೇಲೆ ರಾಣಿಯು ಸಾವಾ ನಿವಾಸಿಯಾದ ಖ್ವಾಜಾ ಇಮಾದುದ್ದೀನ ಮಹಮೂದ ಗರಜಿಸ್ಥಾನಿ ಎಂಬುವನನ್ನು ಕರೆಸಿದಳು. ಖ್ವಾಜಾ ಇಮಾದನು ಒಬ್ಬ ಪ್ರಸಿದ್ಧ ವ್ಯಾಪಾರಿಯಾಗಿದ್ದನು. ಇರಾನದಿಂದ ಬೆಲೆಬಾಳುವ

ವಸ್ತುಗಳನ್ನು ತಂದು ಉಸ್ಮಾನಿ ಅಂತಃಪುರದಲ್ಲಿ ಮಾರಾಟ ಮಾಡುತ್ತಿದ್ದನು. ಮಹಾರಾಣಿಯು ಖ್ವಾಜಾ ಇಮಾದನಿಗೆ, "ನಿನ್ನ ಹತ್ತಿರ ಮಾರಾಟಕ್ಕೆ ಇರುವ ಗುಲಾಮರನ್ನು ಕರೆದುಕೊಂಡು ಬಾ" ಎಂದು ಹೇಳಿದಳು. ಖ್ವಾಜಾ ಇಮಾದನು ಐವರು ಗರಜಿ ಮತ್ತು ಇಬ್ಬರು ಚರಖ್ಸಿ ಗುಲಾಮರನ್ನು ತಂದು ರಾಣಿಯ ಸಾನ್ನಿಧ್ಯದಲ್ಲಿ ನಿಲ್ಲಿಸಿದನು. ಚರಕ್ಸಿ ಗುಲಾಮರಲ್ಲಿ ಒಬ್ಬ ಗುಲಾಮನು ರಾಜಕುಮಾರ ಯೂಸುಫನನ್ನು ಹೋಲುತ್ತಿದ್ದನು. ಆತನನ್ನು ಮಹಾರಾಣಿಯು ರಹಸ್ಯವಾಗಿ ಖರೀದಿಸಿದಳು.

ರಾಜಕುಮಾರ ಯೂಸುಫನನ್ನು ಪರದೇಶಕ್ಕೆ ಕಳುಹಿಸಿದುದು :

ಇದಾದ ನಂತರ ರಾಣಿಯು ಇಮಾದನಿಗೆ ಎಲ್ಲ ವಿಷಯಗಳನ್ನು ತಿಳಿಸಿದಳು ಮತ್ತು ಉಪ್ಪಿನ ಋಣವಿದ್ದರೆ ನನಗೆ ಸಹಾಯ ಮಾಡು ಎಂದು ವಚನ ತೆಗೆದುಕೊಂಡು, ರಾಜಕುಮಾರ ಯೂಸುಫನನ್ನು ಗುಲಾಮರ ಗುಂಪಿನಲ್ಲಿ ಸೇರಿಸಿಬಿಡು ಎಂದು ಹೇಳಿದಳು. ರಾಜಕುಮಾರ ಯೂಸುಫನನ್ನು ಪರದೇಶಕ್ಕೆ ತಲುಪಿಸಿ ಬಿಡು. ನಿನ್ನ ಸೇವೆಯನ್ನು ಪರಿಗಣಿಸಿ ಸಂಪತ್ತನಿಂದ ಸಂತುಷ್ಟಗೊಳಿಸುತ್ತೇವೆ ಎಂದು ರಾಣಿಯು ಹೇಳಿದಳು. ಖ್ವಾಜಾ ಇಮಾದನು ಉಪ್ಪಿನ ಋಣಬಾರದಿಂದಲೂ, ಬರಲಿರುವ ಮೌಲಿಕವಾದ ಸಂಪತ್ತಿನ ಗೌರವಕ್ಕಾಗಿಯೂ ರಾಣಿಯು ಹೇಳಿದ ಸೇವೆಯನ್ನು ನೆರವೇರಿಸಿಕೊಡಲು ಒಪ್ಪಿಕೊಂಡನು. ಇಮಾದನು ರಾಜಕುಮಾರ ಯೂಸುಫನನ್ನು ತನ್ನ ವಶಕ್ಕೆ ತೆಗೆದುಕೊಂಡು, ರಾತೋರಾತ್ರಿ ಒಂದೇ ಉಸಿರಿನಲ್ಲಿ ಬಗದಾದಿನ ಕಡೆಗೆ ಹೊರಟುಬಿಟ್ಟನು.

ಖ್ವಾಜಾ ಇಮಾದನು ರಾಣಿಯ ಯಾಚನೆಯನ್ನು ಒಪ್ಪಿ ರಾಜಕುಮಾರ ಯೂಸುಫನನ್ನು ಕರೆದುಕೊಂಡು ನಿಗದಿತವಾದ ಸುರಕ್ಷಿತ ಸ್ಥಳ ಅರ್ದಬೇಲನ ಗಡಿಯ ತನಕ ಮುಟ್ಟಿಸಿದರೆ ತನ್ನ ಸಂಪತ್ತಿನ ಐದನೆಯ ಭಾಗವನ್ನು ಹಜರತ ಸಫಿಯ ಸಮಾಧಿ ಮತ್ತು ಸೂಫಿಗಳ ಖರ್ಚಿಗಾಗಿ ಕಾಣಿಕೆಯಾಗಿ ಸಲ್ಲಿಸಲಾಗುವುದೆಂದು ನಿಶ್ಚಯಿಸಿದ್ದನು. ಎರಡನೆಯ ದಿವಸ, ಉಸ್ಮಾನಿ ಆಸ್ಥಾನದ ಶ್ರೀಮಂತ ಅಮೀರರು ಮಾತುಕೊಟ್ಟಂತೆ ಅಂತಃಪುರದ ದ್ವಾರದ ಬಳಿ ಬಂದರು. ಅವರು ರಾಜಕುಮಾರ ಯೂಸುಫನನ್ನು ತಮ್ಮ ವಶಕ್ಕೆ ನೀಡಲು ಕೇಳಿದರು. ಆಗ ರಾಣಿಯು ಅವರಲ್ಲಿ ಒಬ್ಬ ಅಮೀರನಿಗೆ ಬಹುಮಾನ ನೀಡುವ ಸೂಚನೆ ನೀಡಿ, ಅವನನ್ನು ತನ್ನ ಪರ ಮಾಡಿಕೊಳ್ಳಲು ಯೋಚಿಸಿ ಅಂತಃಪುರದೊಳಗಡೆ ಕರೆದಳು. ಈ ಸರದಾರನಿಗೆ ಖ್ವಾಜಾ ಇಮಾದನಿಂದ ಖರೀದಿಸಲಾದ ಗುಲಾಮನನ್ನು ಒಪ್ಪಿಸಿದಳು. ಸರದಾರನು ಆ ಗುಲಾಮನನ್ನು ರಾಜಕುಮಾರ ಯೂಸುಫನ ಸ್ಥಳದಲ್ಲಿ ವಧಿಸಿದನು. ಹೆಣವನ್ನು ರಾಜಧರ್ಮದ ಅನುಸಾರ ಅಂತ್ಯವಿಧಿಗಾಗಿ ಅಂತಃಪುರದಿಂದ ಹೊರಗೆ ತರಲಾಯಿತು. ರಾಜಕುಮಾರ ಯೂಸುಫನನ್ನು ವಧಿಸಿದ ಸರದಾರನು ರಾಜನಿಷ್ಠನೂ, ಎಲ್ಲ ಪ್ರಶಂಸೆಗಳಿಗೆ ಅರ್ಹನೂ ಆಗಿದ್ದುದರಿಂದ, ಇತರ ಸರದಾರರಿಗೆ ವಸ್ತುಸ್ಥಿತಿಯನ್ನು ತಿಳಿಸುವುದು

ಅನವಶ್ಯಕ ಎಂಬ ಅಭಿಪ್ರಾಯ ಪಟ್ಟಳು. ಗುಲಾಮನ ಶವವನ್ನು ರಾಜಕುಮಾರನ ಶವವೆಂದು ಅಂತ್ಯಸಂಸ್ಕಾರ ಮಾಡಲಾಯಿತು.

ರಾಜಕುಮಾರ ಯೂಸುಫನ ಶಿಕ್ಷಣ ಮತ್ತು ತರಬೇತಿ :

ಖ್ವಾಜಾ ಇಮಾದನು ರಾಜಕುಮಾರ ಯೂಸುಫನನ್ನು ಜೊತೆಗೆ ಕರೆದುಕೊಂಡು ಅರ್ದಬೇಲ ತಲುಪಿದನು. ಇಮಾದನು ತನ್ನ ಅಭಿವಚನವನ್ನು ಪೂರ್ತಿ ಮಾಡಿದನು. ರಾಜಕುಮಾರ ಯೂಸುಫನು ಹಜರತ್ ಶೇಖಸಫಿಯ ಅನುಯಾಯಿಯಾಗಿ ಜಾಣನಾಗಿ ಪ್ರಬುದ್ಧನಾಗತೊಡಗಿದನು. ಅನಂತರ ಈ ಸ್ಥಳದಿಂದ ಸಾವಾಕ್ಕೆ ಬಂದನು. ಖ್ವಾಜಾನು ರಾಜಕುಮಾರ ಯೂಸುಫನನ್ನು ರಾಜ್ಯದ ವದಂತಿಗಳಿಂದ ಕಡ್ಡಾಯವಾಗಿ ದೂರವಿಟ್ಟನು. ತನ್ನ ಮಕ್ಕಳೊಂದಿಗೆ ಯೂಸುಫನನ್ನು ಪಾಠಶಾಲೆಗೆ ಪ್ರವೇಶವನ್ನು ಕೊಡಿಸಿದನು. ಮಾರನೆಯ ವರ್ಷ ರಾಣಿಗೆ ರಾಜಕುಮಾರನ ಅಗಲುವಿಕೆಯಿಂದ ಕಳವಳವುಂಟಾಗಿ, ಆತನ ಸ್ಥಿತಿಗತಿಗಳನ್ನು ತಿಳಿದುಕೊಂಡು ಬರಲು ಆಕೆ ತನ್ನ ಒಬ್ಬ ಪ್ರಾಮಾಣಿಕ ಅಧಿಕಾರಿಯನ್ನು ಸಾವಾಕ್ಕೆ ಕಳುಹಿಸಿದಳು.

ರಾಣಿಯ ಪ್ರಾಮಾಣಿಕ ಅಧಿಕಾರಿಯು ಸಾವಾ ಮುಟ್ಟಿದನು. ರಾಜಕುಮಾರನು ಸುಖ ಮತ್ತು ನೆಮ್ಮದಿಯಿಂದ ಜೀವನ ಸಾಗಿಸುತ್ತಿದ್ದುದನ್ನು ಕಂಡನು. ರಾಜಕುಮಾರನ ಶಿಕ್ಷಣ ಮತ್ತು ತರಬೇತಿಗಳಲ್ಲಿನ ಪ್ರಗತಿ ಹಾಗೂ ಆರೋಗ್ಯದ ಸುಸ್ಥಿತಿಯನ್ನು ರಾಣಿಗೆ ತಿಳಿಸಲು ಹಿಂದಿರುಗಿ ಪ್ರಯಾಣ ಬೆಳೆಸಿದನು. ದಾರಿ ನಡೆಯುತ್ತ ಅಸ್ಕಂದರಿಯಾ ತಲುಪಿದಾಗ ಆ ಪ್ರಾಮಾಣಿಕ ಅಧಿಕಾರಿಯು ರೋಗಪೀಡಿತನಾಗಿ ಅಲ್ಲಿಯೇ ಸುಮಾರು ಒಂದೂವರೆ ವರ್ಷಗಳವರೆಗೆ ಆರೈಕೆ ಪಡೆಯಬೇಕಾಯಿತು. ಮೂರನೆಯ ವರ್ಷ ಈ ದೂತನು ಖುಸ್ತುಂತುನಿಯಾ (ಕಾನಸ್ಟಂಟಿನೋಪಲ) ತಲುಪಿ, ರಾಜಕುಮಾರ ಯೂಸುಫನು ನೆಮ್ಮದಿಯಿಂದಿರುವ ಸ್ಥಿತಿಗತಿಯನ್ನು ರಾಣಿಗೆ ತಿಳಿಸಿದನು. ಆಕೆ ತನ್ನ ಪ್ರೀತಿಯ ಕಿರಿಯ ಮಗನ ಕ್ಷೇಮ ಸಮಾಚಾರ ಕೇಳಿ ಅಳೆಯಲಾರದಷ್ಟು ಸಂತೋಷಪಟ್ಟಳು. ರಾಣಿಯು ಅಲ್ಲಾಹನ ಸಾನ್ನಿಧ್ಯದಲ್ಲಿ ಪ್ರಾರ್ಥನೆ ಸಲ್ಲಿಸಿ ಶ್ರದ್ಧಾಪೂರ್ವಕವಾಗಿ ಗುರುಹಿರಿಯರಿಗೆ ಹಾಗೂ ದೀನರಿಗೆ ಕಾಣ್ಕೆಗಳನ್ನು ಕಳುಹಿಸಿದಳು.

ಗುಟ್ಟು ರಟ್ಟು :

ಇದಾದನಂತರ, ರಾಜಕುಮಾರ ಯೂಸುಫನ ದಾಯಿಯ ಮಗ ಗಜ್ನಫರ ಆಖಾ ಮತ್ತು ಮಗಳು ದಿಲ್‌ಶಾದ ಆಖಾ ಅವರನ್ನು ಸಕಲ ಸರಂಜಾಮು ಹಾಗೂ ಉಡುಗೊರೆಗಳ ಸಹಿತವಾಗಿ ಸಜ್ಜುಗೊಳಿಸಿ ರಹಸ್ಯವಾಗಿ ಸಾವಾಕ್ಕೆ ತನ್ನ ಮಗನ ಹತ್ತಿರ ಕಳುಹಿಸಿದಳು. ಈ ಸಂದರ್ಭದಲ್ಲಿ ಖ್ವಾಜಾನು ತನ್ನ ಸ್ವಂತ ಕಾರ್ಯಭಾರಕ್ಕಾಗಿ ಹಿಂದುಸ್ಥಾನಕ್ಕೆ ಹೋಗಿದ್ದನು. ಆದ್ಧರಿಂದ ರಾಜ್ಯದ ಪೂರ್ಣರೀತಿಯ ಸಂರಕ್ಷಣೆ ಆಗುತ್ತಿರಲಿಲ್ಲ. ಇಮಾದನ ಮನೆಯಲ್ಲಿ ಗಜ್ನಫರ್ ಆಖಾ ಮತ್ತು ಸೋದರಿಯ

ಮಾತುಗಳಿಂದ ನಡೆದ ನಿಜ ಘಟನೆಗಳನ್ನು ತಿಳಿದುಕೊಳ್ಳಲಾಯಿತು. ಬಹಳ ದಿವಸಗಳಿಂದ ಮುಚ್ಚಿಟ್ಟಿದ್ದ ಗುಟ್ಟು ರಟ್ಟಾಯಿತು. ಸಾವಕಾಶವಾಗಿ ಈ ಸುದ್ದಿಯು ಸಾವಾದ ರಾಜನ ವರೆಗೆ ತಲುಪಿತು. ರಾಜನ ಹೆಸರು ಆಖಾತುವೇಲ್ ತುರ್ಕಮಾನಿ ಎಂದಿತ್ತು. ಸಾವಾದ ರಾಜನು ಹಣಕಾಸು, ವಸ್ತು, ಒಡವೆ ಮತ್ತಿತರ ಸಂಪತ್ತಿನ ಬಗ್ಗೆ ಅತ್ಯಾಸೆ ಹೊದಿದ್ದನು. ಗಜ್ನಫರ್ ಆಖಾ ಮೊದಲಾದವರಿಂದ ನಾಲ್ಕು ನೂರು ಚದುರ ತೋಮಾನ ಪಡೆದುಕೊಂಡನು. ಈ ಘಟನೆಗಿಂತ ಕೆಲವು ದಿನ ಮೊದಲು ರಾಜಕುಮಾರ ಯೂಸುಫ ಮತ್ತು ಸಾವಾದ ಅರಸನ ರಕ್ತಸಂಬಂಧಿಕರಲ್ಲಿ ಒಬ್ಬ ಅಕ್ಕಸಾಲಿಗ ಬಾಲಕನ ದೆಸೆಯಿಂದ ಕಿಂಚಿತ್ ತಿಕ್ಕಾಟದ ಸಮಸ್ಯಯುಂಟಾಗಿತ್ತು. ಈ ಇಬ್ಬರ ಕಾರಣದಿಂದಾಗಿ ರಾಜಕುಮಾರ ಯೂಸುಫನು ಸಾವಾ ಪಟ್ಟಣದಲ್ಲಿ ಇರುವುದು ಯೋಗ್ಯವಲ್ಲವೆಂದು ತಿಳಿದುಕೊಂಡಿದ್ದನು. ಹೀಗಾಗಿ ಖಮ್ ಎಂಬ ಪಟ್ಟಣಕ್ಕೆ ಹೋದನು. ಸದ್ಯ ಆಡಳಿತದ ಚುಕ್ಕಾಣಿ ಹಿಡಿದವರು ಇರುವವರೆಗೆ ತಾನಲ್ಲಿಗೆ ಹೋಗುವುದಿಲ್ಲವೆಂದು ರಾಜಕುಮಾರನು ನಿಶ್ಚಯಿಸಿದನು. ರಾಜಕುಮಾರ ಯೂಸುಫನು ಉಲ್ಲಾಸದಿಂದ ಪ್ರವಾಸ ಮಾಡುತ್ತ ಶಿರಾಜ ತಲುಪಿದನು. ಕೆಲವು ದಿನಗಳವರೆಗೆ ಶಿರಾಜಿನ ನಿಸರ್ಗದ ಸುಂದರ ವಾತಾವರಣದಲ್ಲಿ ಮನಸ್ಸನ್ನು ಸಂತೋಷಗೊಳಿಸಿದನು. ಈ ಸಂದರ್ಭದಲ್ಲಿ ಸಾವಾದ ರಾಜನು ಆಡಳಿತವನ್ನು ತ್ಯಜಿಸಿದನೆಂದು ಗೊತ್ತಾಯಿತು. ಇದನ್ನು ಕೇಳಿ ರಾಜಕುಮಾರನು ಸಾವಾಕ್ಕೆ ಹೋಗಬೇಕೆಂದು ತೀರ್ಮಾನಿಸಿದನು. ಆಗ ಒಂದು ರಾತ್ರಿ ಕನಸಿನಲ್ಲಿ ವಂದನೀಯ ಹಜರತ್ ಖಜರ ಆಲಿಯಾರನ್ನು ಕಂಡನು.

ಹಜರತ್ ಖಜರ್ ಆಲಿಯಾ ಅಲ್ ಸಲಾಮರತ್ತ ಯಾತ್ರೆ :

ರಾಜಕುಮಾರ ಯೂಸುಫನು ತನ್ನ ಸ್ವಸ್ಥಳಕ್ಕೆ ಹೋಗುವ ವಿಚಾರವನ್ನು ಬಿಟ್ಟು ಬಿಡಬೇಕೆಂದು ವಂದನೀಯ ಹಜರತ್ ಖಜರ್ ಆಲಿಯಾ ಕನಸಿನಲ್ಲಿ ತಿಳಿಸಿದರು. ಇದಲ್ಲದೆ, ಇನ್ನೂ ಕೆಲವು ದಿನ ನಮ್ಮ ಹತ್ತಿರವೇ ಇದ್ದು ಜೀವನ ಸಾಗಿಸಬೇಕೆಂದೂ, ಬಂಧು ಬಳಗದವರನ್ನು ಮತ್ತು ಸ್ನೇಹಿತರನ್ನು ಬಿಟ್ಟು ದೂರ ಇರುವುದನ್ನು ಸಹಿಸಿಕೊಳ್ಳಬೇಕೆಂದೂ, ಅಲ್ಲಾಹನ ಕರುಣೆ ಮತ್ತು ಸಹಾಯದ ಬಗ್ಗೆ ಭರವಸೆ ಇಡಬೇಕೆಂದೂ ಹೇಳಿದರು. ಈ ಸಮಯ ಸಮಾಧಾನ ಮತ್ತು ತಾಳ್ಮೆಯಿಂದ ಇದ್ದು ಅನಂತರ ಹಿಂದುಸ್ಥಾನಕ್ಕೆ ತಿರುಗಿ ಹೋದಾಗ ನಿನಗೆ ಒಳ್ಳೆಯ ದಿನಗಳು ಬರುತ್ತವೆ ಮತ್ತು ಈಗಿರುವ ಪ್ರಭುತ್ವದ ನಂತರ ಆಡಳಿತ ನಡೆಸಲು ಮತ್ತು ಸಿಂಹಾಸನವನ್ನು ಆರೂಢ ಮಾಡಲು ಸಾಧ್ಯವಾಗುತ್ತದೆ ಎಂದು ಹೇಳಿದರು.

ಹಿಂದುಸ್ಥಾನಕ್ಕೆ ಹೋಗುವ ಸಂಕಲ್ಪ:

ರಾಜಕುವರಾರನು ಕಣ್ಣು ತೆರೆದಾಗ ಸ್ವದೇಶಕ್ಕೆ ಹೋಗುವ ಬಗ್ಗೆ ಯೋಚಿಸತೊಡಗಿದನು. ಹಿಜರಿ ಶಕೆ ೮೬೪ರಲ್ಲಿ ಜಲಮಾರ್ಗದಿಂದ ಹಿಂದುಸ್ಥಾನದ

ಕಡೆಗೆ ಹೊರಟನು. ಮುಸ್ತಫಾಬಾದ ಲೋಯಲ್‌ದಲ್ಲಿ ಹಡಗು ನಿಲುಗಡೆಯಾಯಿತು. ರಾಜಕುಮಾರನು ಹಡಗಿನಿಂದ ಇಳಿದು ಬಂದರಿನಲ್ಲಿ ಸ್ಥಳ ವೀಕ್ಷಿಸುತ್ತ ತಿರುಗಾಡಿದನು. ರಾಜಕುಮಾರನು ಪ್ರತಿದಿವಸ ಬಂದರದಲ್ಲಿ ತೋಟಗಾರಿಕೆಯಿಂದ ಬರುತ್ತಿದ್ದ ಕಾಯಿಪಲ್ಯೆ ವ್ಯಾಪಾರಸ್ಥರಲ್ಲಿ ಸೇರಿ ಕಾಲಹರಣ ಮಾಡತೊಡಗಿದನು. ಒಂದು ದಿವಸ ಆಕಸ್ಮಿಕವಾಗಿ ಒಬ್ಬ ಮುದುಕನನ್ನು ಭೆಟ್ಟಿಯಾಗುವ ಅವಕಾಶ ಬಂದಿತು. ಆ ಹಿರಿಯನು ರಾಜಕುಮಾರನ ಕುಶಲೋಪರಿ ವಿಚಾರಿಸಿದನು. ರಾಜಕುಮಾರನು ಇದುವರೆಗೆ ನಡೆದು ಹೋದ ಎಲ್ಲ ಘಟನೆಗಳನ್ನು ಆ ಹಿರಿಯನಿಗೆ ತಿಳಿಸಿದನು. ಆ ಹಿರಿಯನು ಒಂದು ಲೋಟ ಪಾನಕ ನೀಡಿ ಅತಿಥಿ ಸತ್ಕಾರ ಮಾಡಿದನು. ರಾಜಕುಮಾರನು ಪಾನಕದ ಬಟ್ಟಲನ್ನು ತೆಗೆದುಕೊಂಡು ಕುಡಿಯತೊಡಗಿದನು.

ಅಹಮದಾಬಾದ ಬೀದರಿನತ್ತ ಪಯಣ :

ರಾಜಕುಮಾರನು ಪಾನಕದ ಬಟ್ಟಲನ್ನು ತುಟಿಗೆ ಹಚ್ಚಿರಬೇಕು, ಆ ಕ್ಷಣ ಆ ಹಿರಿಯನು ಅದೃಶ್ಯನಾದನು. ಆಗ ರಾಜಕುಮಾರನು ಆ ಹಿರಿಯ ವ್ಯಕ್ತಿಯು ವಂದನೀಯ ಖಿಜರ್ ಅಲಿಯಾ ಇಸ್ಲಾಮೀ ಅವರೇ ಇರಬೇಕೆಂದು ಊಹಿಸಿ ಫೈಜಿಯಾಬ್ ತೀರ್ಥಯಾತ್ರೆಯ ಮೂಲಕ ಖಾಜಾ ಇಮಾದನ ಜೊತೆಗೆ ಅಹಮದಾಬಾದ ಬೀದರದ ಕಡೆಗೆ ತೆರಳಿದರು.

ಗರಜಿಸ್ಥಾನವು ಗಿಲಾನಿಯ ನೆರೆಯ ಪ್ರದೇಶವಾಗಿತ್ತು. ಆದ್ದರಿಂದ ಖ್ವಾಜಾ ಇಮಾದ ಮತ್ತು ಖ್ವಾಜಾ ಮುಹಮ್ದ ಗವಾನರ ನಡುವೆ ಒಳ್ಳೆಯ ಸಂಬಂಧಗಳಿದ್ದವು. ಇವರಿಬ್ಬರೂ ಒಬ್ಬರಿಗೊಬ್ಬರು ಬಹಳ ಸಖ್ಯದಿಂದ ಇದ್ದರು. ಅಹಮದಾಬಾದ ಬೀದರ ತಲುಪಿದಾಗ ರಾಜಕುಮಾರನು ಹನ್ನೆರಡು ವರ್ಷದವನಿದ್ದನು. ಮುಖದ ಮೇಲೆ ಗಡ್ಡ ಮೀಸೆಗಳು ಮೂಡಿರಲಿಲ್ಲ. ಬೀದರ ತಲುಪಿದ ನಂತರ, ಅಲ್ಲಿಯ ಅರಸನ ಮೇಲೆ ತುರ್ಕಿ ಗುಲಾಮರ ಪ್ರಭಾವವು ಘನಿಷ್ಠವಾಗಿತ್ತೆಂದು ರಾಜಕುಮಾರನಿಗೆ ಗೊತ್ತಾಯಿತು, ಮತ್ತು ಅರಸರ ಖಜಾನೆಯ ವ್ಯವಹಾರವೆಲ್ಲ ಅವರ ಮುಖಾಂತರವೇ ನಡೆಯುತ್ತದೆಂದು ಸಹ ಗೊತ್ತಾಯಿತು. ಯೂಸುಫನು ಖ್ವಾಜಾ ಇಮಾದನಿಗೆ ತನ್ನನ್ನು ಈ ಸುಲ್ತಾನನಲ್ಲಿರುವ ತುರ್ಕಿ ಗುಲಾಮರ ಗುಂಪಿಗೆ ಸೇರಿಸಿ ಬಿಡಬೇಕೆಂದು ವಿನಂತಿಸಿದನು. ಖ್ವಾಜಾ ಮೊದಲು ಈ ವಿನಂತಿಯನ್ನು ಮನ್ನಿಸಲಿಲ್ಲ, ಆದರೆ ಆತನ ವಿನಂತಿಯ ಒತ್ತಡವು ಮೇರೆ ಮೀರಿದಾಗ ಖ್ವಾಜಾ ಇಮಾದನು ಎಲ್ಲ ವಿಷಯಗಳನ್ನು ಮಹಮೂದ ಗವಾನನಿಗೆ ವರದಿ ಮಾಡಿದನು.

ಯೂಸುಫ ಶಾಹಿಯು ತುರ್ಕಿ ಗುಲಾಮರ ಗುಂಪಿನಲ್ಲಿ :

ಮಹಮೂದ ಗವಾನನು ರಾಜಕುಮಾರ ಯೂಸುಫನನ್ನು ತನ್ನ ಹತ್ತಿರ ಕರೆದು, ಆತನ ಚೆಲುವಾದ ಮುಖ, ಅಂಗಸೌಷ್ಟವ, ಪಾಂಡಿತ್ಯ, ಮಾತಿನಲ್ಲಿಯ ಚಮತ್ಕಾರ,

ಗಾಂಭೀರ್ಯ ಮತ್ತು ಪರಾಕ್ರಮದ ಲಕ್ಷಣಗಳನ್ನು ಕಂಡು ಅವನು ನಿಜಾಮಶಾಹಿ ಬಹಮನಿಯ ಮುಖಾಂತರ ಅವರ ತಾಯಿ ಮಗದುಮಾ ಜೊತೆ ಯೂಸುಫನ ಬಗ್ಗೆ ಪ್ರಸ್ತಾಪಿಸಿದನು. ಅದಾದ ನಂತರ ರಾಜಕುಮಾರ ಯೂಸುಫನನ್ನು ಖ್ವಾಜಾ ಇಮಾದನಿಂದ ಖರೀದಿಸಿಕೊಂಡನು. ಹೀಗೆ ಯೂಸುಫಶಾಹಿಯು ತುರ್ಕಿ ಗುಲಾಮರ ಗುಂಪಿನಲ್ಲಿ ಸೇರಿಕೊಂಡನು.

ಹಿಂದೆ ಪ್ರಸ್ತಾಪಿಸಲಾದ ವಿಷಯಗಳನ್ನು ಮಿರ್ಜಾ ಮಹಮದ ಸಾವಾನು ಈ ರೀತಿ ವಿವರಿಸಿದ್ದಾನೆ. ಈ ವಿಷಯವನ್ನೆಲ್ಲ ತನ್ನ ತಂದೆ ಮತ್ತು ಯೂಸುಫ ಆದಿಲಶಾಹನ ಮಂತ್ರಿ ಗಯಾಸುದ್ದೀನ ಮೊಹಮ್ಮದನಿಂದ ಕೇಳಿದ್ದನು. ಜಮಾಲುದ್ದೀನ ಹುಸೇನ ಬಿನ್ ಶಹಾ ಹುಸೇನ ಆಂಜುನು ಯೂಸುಫ ಆದಿಲಶಹನ ಸ್ಥಿತಿಗತಿಗಳ ಕುರಿತು ಬರೆದಿರುವುದು ಕೂಡ ಮಿರ್ಜಾ ಮಹಮದ ಸಾವಾ ಹೇಳಿದುದು ಹೋಲುತ್ತದೆ.

ಜವಾಹರ ಹೆಸರಿನ ವೃದ್ಧೆಯ ಸಂಪ್ರದಾಯ:

ಜವಾಹರ ಎಂಬ ವೃದ್ಧೆಯೊಬ್ಬಳನ್ನು ಕುರಿತು ಶಹಾ ಹುಸೇನನು ವಿವರಿಸಿರುವುದೇನೆಂದರೆ, ಆಕೆ ತಾಯಿಯ ಕಡೆಯಿಂದ ಬಹಮನಿ ಅರಸೊತ್ತಿಗೆ ಮತ್ತು ತಂದೆಯ ಕಡೆಯಿಂದ ಶಾಹ ನೀಯಾಮತ್ ಉಲ್ಲಾ ವಲಿಯ ಪೀಳಿಗೆಗೆ ಸಂಬಂಧಿತಳು. ಆಕೆ ಹೇಳಿಕೆ ನೀಡಿದುದೇನೆಂದರೆ, "ನನ್ನ ಯೌವನದಲ್ಲಿ ಒಂದು ಸಲ ಅಹಮದಾಬಾದ ಬೀದರದಲ್ಲಿ ಯೂಸುಫ ಆದಿಲಶಾಹನ ಮಗಳು ಬೀಬೀಸತಿಯು ಸಭೆಯಲ್ಲಿ ಉಪಸ್ಥಿತಳಿದ್ದಳು. ಬೀಬೀಸತಿಯು ಅಹಮದ್‌ಶಹಾ ಬಹಮನಿಯ ಪತ್ನಿ ಇದ್ದಳು. ಹಾಗಾಗಿ ಆಕೆಯನ್ನು ಮಹಾರಾಣಿಯೆಂದು ಸಂಬೋಧಿಸಲಾಗುತ್ತಿತ್ತು. ಆ ಸಭೆಯಲ್ಲಿ ದೊಡ್ಡ ಹಬ್ಬವನ್ನು ಅತ್ಯಂತ ವೈಭವದಿಂದ ಆಚರಿಸಲಾಗಿತ್ತು. ಅಲ್ಲಿ ಬಹಮನಿ ಮನೆತನದ ಎಲ್ಲ ರಾಜಕುಮಾರಿಯರು ಉಪಸ್ಥಿತರಿದ್ದರು. ಈ ಮನೆತನದಲ್ಲಿ, ಸುಲ್ತಾನನ ಪತ್ನಿಯನ್ನು ಮಹಾರಾಣಿಯೆಂದು ಸಂಬೋಧಿಸುವ ಸಂಪ್ರದಾಯವಿದ್ದಿತು. ಈ ಹಬ್ಬಗಳಲ್ಲಿ ಮತ್ತಿತರ ವಿಶೇಷ ಸಂದರ್ಭಗಳಲ್ಲಿ ಒಂದು ವಿಶಿಷ್ಟವಾದ ಆಭರಣವನ್ನು ಆಕೆ ಧರಿಸುತ್ತಿದ್ದಳು. ಈ ಆಭರಣದ ವಿನ್ಯಾಸವು ಹೇಗಿತ್ತೆಂದರೆ, ಮುತ್ತಿನ ಹಲವು ಲಡಿಗಳಿಂದ ರೂಪುಗೊಂಡುದಾಗಿರುತ್ತಿತ್ತು. ಈ ಎಲ್ಲ ಲಡಿಗಳನ್ನು ಒಂದು ಕಡೆ ಬಂಗಾರದ ಹಿಡಿಕೆಯಲ್ಲಿ ರತ್ನಖಚಿತಗೊಳಿಸಿ ಜೋಡಿಸಿ ಕಟ್ಟಲಾಗಿರುತ್ತಿತ್ತು. ಅಲ್ಲಿ ಅದನ್ನು ಧರಿಸಿದ ಆಕೆ ಮಹಾರಾಣಿ ಎಂದು ತತ್‌ಕ್ಷಣ ಗುರುತಿಸಿಕೊಳ್ಳುತ್ತಿದ್ದಳು. ಅಂತಃಪುರದ ಸ್ತ್ರೀಯರಲ್ಲಿ ಆಕೆ ಮಹಾರಾಣಿಯೆಂದು ಎದ್ದು ಕಾಣುತ್ತಿದ್ದಳು. ಈ ವಿಶಿಷ್ಟತೆಯ ಸಂಪನ್ನತೆಗಾಗಿ ಬಂಗಾರದ ಹಿಡಿಯಲ್ಲಿ ರತ್ನಖಚಿತವಾದ ಮುತ್ತಿನ ಲಡಿಗಳ ಹಾರವನ್ನು ಧರಿಸುತ್ತಿದ್ದಳು. ನಿಲುವಂಗಿಯ ಮೇಲೆ ಆ ಮುತ್ತಿನ ಲಡಿಗಳು ಹಾಗೂ ತಲೆಯ ಎರಡೂ ಕಡೆ ಸುತ್ತುವರೆಯುವಂತೆ ಆ ಹಾರವನ್ನು ಕಟ್ಟಿಕೊಳ್ಳುತ್ತಿದ್ದಳು. ಬೀಬೀಸತಿಯು ಕೂಡ ಆ ಸಂಪ್ರದಾಯದಂತೆ ಆ ಒಡವೆಯನ್ನು ಧರಿಸಿಕೊಂಡು,

ಸಭೆಯಲ್ಲಿ, ಬೇರೆ ಹೆಣ್ಣುಮಕ್ಕಳಿಗಿಂತ ಮಹಾರಾಣಿ ಕೂಡುವ ಸ್ಥಳದಲ್ಲಿ ಕುಳಿತಳು. ಸಜ್ಜಾಗಿರುವ ಸಭೆಯಲ್ಲಿ ಬಹಮನಿ ಮನೆತನದ ಒಬ್ಬ ರಾಜಕುಮಾರಿ ಹೀಗೆ ಕುಳಿತಿರುವುದನ್ನು ನೋಡಿ ಅಸೂಯೆಗೊಳಗಾದ ಒಬ್ಬ ಸ್ತ್ರೀ, 'ಯೂಸುಫ ಆದಿಲಶಾಹನ ಮಗಳಿಗೆ ಇಂತಹ ಉನ್ನತ ಸ್ಥಾನ ದೊರೆಯಿತಲ್ಲ! ಬಹಮನಿ ರಾಜಕುಮಾರಿಯರಲ್ಲಿ ಎಲ್ಲರಿಗಿಂತ ಶ್ರೇಷ್ಠ ಸ್ಥಾನವನ್ನು ಪಡೆದುಕೊಂಡಳು. ಇದು ಕೂಡ ಭಗವಂತನ ಲೀಲೆಯೇ ಆಗಿದೆ.' ಎಂದು ಉದ್ಗರಿಸಿದಳು.

ಬೀಬೀಸತಿಯು ರಾಜಕುಮಾರಿಯ ಈ ಮಾತುಗಳನ್ನು ಕೇಳಿ ತತ್‌ಕ್ಷಣವೇ ಹೀಗೆ ಉತ್ತರಿಸಿದಳು "ಈಗ ಆಡಿದ ಮಾತುಗಳು ಪ್ರಾಮಾಣಿಕವಾದವುಗಳಲ್ಲ. ಹಾಗಿದ್ದರೆ ನೀವೆಲ್ಲ ರಾಜಕುಮಾರಿಯರಾಗಿದ್ದರೆ, ನಾನು ನಿಮಗಿಂತ ಹೆಚ್ಚಿನ ಎತ್ತರದ ರಾಜಕುಮಾರಿಯಾಗಿದ್ದೇನೆ. ನೀವೆಲ್ಲ ದಖ್ಖನ್ನಿನ ಸುಲ್ತಾನನ ಮಕ್ಕಳೆಂದು ಭಾವಿಸಿದ್ದೇನೆ, ನಾನಾದರೋ ರೋಮಿನ ಅರಸೊತ್ತಿಗೆಯ ಮೊಮ್ಮಗಳು." ಇಷ್ಟೆಲ್ಲ ಹೇಳಿದ ಮೇಲೆ ಬೀಬೀಸತಿಯು ತನ್ನ ತಂದೆ ಯೂಸುಫ ಆದಿಲಶಾಹನ ಎಲ್ಲ ಕತೆಯನ್ನು ವಿವರಿಸಿದಳು. ಈ ಕತೆಯು ಮತ್ತೆ ಬೇರೆಯಾಗಿರದೆ ಹಿಂದೆ ದಾಖಲಿಸಿದುದೇ ಆಗಿತ್ತು. ಬೀಬೀಸತಿಯ ಈ ಸಂಭಾಷಣೆಯನ್ನು ಅಮೀರ ಖಾಸಿಮ ಬರೀದನು ಕೇಳಿದನು. ಈ ಅಮೀರನು ಆದಿಲಶಾಹಿ ವಂಶದ ಬಗ್ಗೆ ಸ್ವಭಾವತಃ ಬಹಳ ಅಸೂಯೆಯನ್ನು ತಾಳಿದ್ದನು ಮತ್ತು ಅದೇ ರೀತಿ ಈ ವಂಶವನ್ನು ವಿರೋಧಿಸುತ್ತಿದ್ದನು. ಮಹಾರಾಣಿಯು ತನ್ನ ವಂಶದ ಬಗ್ಗೆ ಏನೆಲ್ಲ ವಿವರಿಸಿದ್ದಾಳೆಯೋ ಅದನ್ನು ವಿಶ್ಲೇಷಿಸುವುದು ತುಂಬ ಸರಳ.

ಯೂಸುಫ ಆದಿಲಶಾಹನ ವಂಶಾವಳಿಯ ಶೋಧದ ವಿಚಾರ:

ಅಮೀರ ಖಾಸಿಮ ಬರೀದನು ತನ್ನ ಅರ್ಹನಾದ ಅಪರೂಪದ ವ್ಯಕ್ತಿಯನ್ನು ವ್ಯಾಪಾರದ ನೆಪದಿಂದ ರೋಮಿಗೆ ಕಳುಹಿಸಿದನು. ಏಕೆಂದರೆ, ಮಹಾರಾಣಿಯು ಹೇಳಿದ ವಿಷಯದ ಸತ್ಯಾಂಶವನ್ನು ಕಂಡುಹಿಡಿಯಬೇಕಾಗಿತ್ತು. ಈ ವ್ಯಕ್ತಿಯು ಖಿಸ್ತುಂತುನಿಯಾ(ಕಾನಸ್ಟಂಟಿನೋಪಲ) ತಲುಪಿ ಅಲ್ಲಿ ರಾಜನ ಅಂತಃಪುರದಲ್ಲಿಯ ವಯೋವೃದ್ಧರನ್ನು ಸುಲ್ತಾನ ಮಹಮದನ ಸೋದರರ ಬಗ್ಗೆ ವಿಚಾರಿಸಿದನು. ವಯೋವೃದ್ಧೆಯರು ಹೇಳಿದುದೆಲ್ಲವೂ ಶಬ್ದಶಃ ಬೀಬೀಸತಿಯು ಹೇಳಿದ ವಿಷಯಗಳನ್ನು ಪ್ರಮಾಣೀಕರಿಸುತ್ತಿತ್ತು. ಇದರಿಂದ ಯೂಸುಫ ಆದಿಲಶಾಹನು ಸುಲ್ತಾನ ಮುರಾದನ ಮಗನಾಗಿದ್ದುದು ಖಚಿತವಾಯಿತು. ಈ ಎಲ್ಲ ರೀತಿಗಳಿಂದ ಯೂಸುಫನು ರೋಮವಂಶಕ್ಕೆ ಸಂಬಂಧಪಟ್ಟವನೆಂಬ ಬಗ್ಗೆ ಸುಳಿವು ದೊರೆಯುತ್ತದೆ. ಯೂಸುಫ ಮತ್ತು ಯೂಸುಫನ ಮಗ ಇಸ್ಮಾಯಿಲ ಇಬ್ಬರೂ ರೋಮನರ ಬಗ್ಗೆ ಹಿತವಾದ ಸಂಬಂಧವನ್ನು ಇಟ್ಟುಕೊಂಡಿದ್ದರು. ತಮ್ಮ ತಮ್ಮ ಸೀಮಿತಕ್ಕೆ ಒಳಪಟ್ಟ ಆಡಳಿತದ ಪರಿಧಿಯಲ್ಲಿ ರೋಮನ್ನರಿಗೆ ಮಹತ್ವದ ಮತ್ತು ಉನ್ನತ ಅಧಿಕಾರದ ಸ್ಥಾನಗಳನ್ನು ನೀಡಿದ್ದರು.

ಸವಾಯಿ ಶಬ್ದದ ಶೋಧ :

ಯೂಸುಫ ಆದಿಲಶಾಹನ ಬಿರುದು ಸವಾಯಿ ಇತ್ತು. ಇದರ ಮೂಲವು ಸಾವಿ ಇದೆ. ಏಕೆಂದರೆ, ಯೂಸುಫನು ಸಾವಾ ಎಂಬ ಪಟ್ಟಣದಲ್ಲಿ ಶಿಕ್ಷಣ ಮತ್ತು ತರಬೇತಿಯನ್ನು ಪಡೆದವನು. ಈ ಕಾರಣದಿಂದ ಯೂಸುಫನನ್ನು 'ಸಾವೀ' ಎಂದು ಕರೆಯಲಾಗುತ್ತಿತ್ತು. ಅಶಿಕ್ಷಿತ ಜನರು ಕರೆಯುತ್ತಿದ್ದ 'ಸಾವಿ' ಶಬ್ದದಿಂದ 'ಸವಾಯಿ' ಎಂಬುದು ಪ್ರಚಾರಕ್ಕೆ ಬಂದಿತು. ಈ ಬಗ್ಗೆ ಕೆಲವು ಇತಿಹಾಸಕಾರರ ವಿಚಾರವೇನೆಂದರೆ, ಸವಾಯಿ(ಸವ್ವಾ) (೧ ೧/೪)ದಿಂದ ನಿಷ್ಪನ್ನಗೊಂಡಿದೆ. ಏಕೆಂದರೆ, ಯೂಸುಫ ಆದಿಲಶಾಹ ಮತ್ತು ಈತನ ಸಮಕಾಲೀನರು ಮತ್ತು ಕೆಲವು ಆಜ್ಞಾಧಾರಕರು ರಾಜ್ಯದಲ್ಲಿ ಮತ್ತೊಂದು ಸವಾಯಿ ಎಂಬ ಪ್ರಮಾಣವನ್ನು ಜಾರಿಗೊಳಿಸಿದರು. ಆದ್ದರಿಂದ ಯೂಸುಫ್ 'ಸವಾಯಿ' ಎಂಬ ಬಿರುದಿನಿಂದಲೇ ಪ್ರಖ್ಯಾತಿ ಪಡೆದನು.

'ಫೆರಿಸ್ತಾ' ಬರಹಗಾರನ ದೃಷ್ಟಿಯಲ್ಲಿ ಈ ಹೋಲಿಕೆಯು ಸರಿಯಾಗಿಲ್ಲ. ಮೊದಲನೆಯ ವಿಚಾರವು ಬಹಳ ಸುಯೋಜನಾಬದ್ಧವಾಗಿದೆಯೆಂದು ಅವರ ಅಭಿಪ್ರಾಯ. ಶಹಾ 'ಬಹರ'ನನ್ನು ಸಾಮಾನ್ಯ ಜನತೆ 'ಬಹರೀ' ಎಂದು ಕರೆದರೋ ಹಾಗೆಯೇ 'ಸಾವೀ'ಯಿಂದ 'ಸವಾಯಿ' ಎಂದು ಮಾಡಿಕೊಂಡರು.

ಅಮೀರ ಆಖೂರ ಎಂದು ಯೂಸುಫನ ನೇಮಕಾತಿ :

ಆ ಸಮಯದ ಅವಶ್ಯಕತೆಗಾಗಿ ಯೂಸುಫ ಶಾಹನು ತುರ್ಕಿ ಗುಲಾಮರ ಗುಂಪಿನಲ್ಲಿ ಕೂಡಿಕೊಂಡಾಗ ಮಹಮದ ಗವಾನನು ಎರಡು ಮೂರು ತಿಂಗಳ ಅನಂತರ ಮುಖದ್ದಮಾ ಜಹಾಳ ಸೂಚನೆಯಂತೆ ಆತನನ್ನು ಕರೆದು ಅಬ್ದುಲ್ ಅಜೀಜಖಾನ ಅಮೀರೇ ಆಖೂರನ ಹೊಣೆಗಾರಿಕೆಗೆ ಒಪ್ಪಿಸಿದನು. ಅಬ್ದುಲ್ ಅಜೀಜ ಬಹಮನಿಯು ಸುಪ್ರಸಿದ್ಧ ತುರ್ಕಿ ಮನೆತನಗಳಲ್ಲಿ ಬಹಳ ಗೌರವಸ್ಥನಾಗಿದ್ದನು. ಅಜೀಜನು ರಾಜಮನೆತನದ ರಾಜಕುದುರೆಗಳ ಲಾಯದ ಮುಖ್ಯಸ್ಥನಾಗಿದ್ದನು. ಮಹಮೂದ ಗವಾನನು ಅಬ್ದುಲ್ ಅಜೀಜನ ಮುಂದೆ ಯೂಸುಫನ ಗುಣಗಾನ ಮಾಡಿ ಶಿಫಾರಸ್ಸು ಮಾಡಿದನು. ಇದರ ಪರಿಣಾಮವು ಏನಾಯಿತೆಂದರೆ , ಅಬ್ದುಲ್ ಅಜೀಜನು ತನ್ನ ಮುಪ್ಪಿನ ವಯಸ್ಸಿನಿಂದಾಗಿ ಅಮೀರ ಆಖೂರಿಯ ಎಲ್ಲ ಜವಾಬ್ದಾರಿಯ ಕರ್ತವ್ಯಗಳನ್ನು ಯೂಸುಫನಿಗೆ ಒಪ್ಪಿಸಿದನು. ತಾನು ಸ್ವತಃ ಶಾಂತಿ ಮತ್ತು ನೆಮ್ಮದಿಯಿಂದ ಜೀವನವನ್ನು ಸಾಗಿಸತೊಡಗಿದನು. ಯೂಸುಫ ಆದಿಲನು ಈ ಸಂತುಷ್ಟ ಶಾಂತಿಯ ಜೀವನದಲ್ಲಿಯೇ ಅರಸೊತ್ತಿಗೆಯಲ್ಲಿಯ ಆಡಳಿತದ ಅವಕಾಶದಿಂದ ತನ್ನ ಅನುಭವವನ್ನು ವಿಸ್ತಾರಗೊಳಿಸಿಕೊಂಡನು. ಕುದುರೆಲಾಯದ ವಿಷಯದಲ್ಲಿ ಕ್ರಮಕ್ರಮವಾಗಿ ಅಬ್ದುಲ್ ಅಜೀಜನಿಲ್ಲದೆ ತಾನೇ ಸ್ವತಃ ನೇರವಾಗಿ ಮಹಮ್ಮದ ಶಾಹನನ್ನು ಭೆಟ್ಟಿಯಾಗತೊಡಗಿದನು. ಇದೇ ಕಾಲದಲ್ಲಿ ಅಬ್ದುಲ್

ಅಜೀಜನನ್ನು ಸಾವು ಮುತ್ತಿಟ್ಟು ಆಲಂಗಿಸಿತು. ಆತನು ಅಲ್ಲಾಹನ ಪಾದಾರವಿಂದವನ್ನು ಸೇರಿದನು. ಮಹಮೂದ ಗವಾನನ ಶಿಫಾರಿಸ್ಸಿನಿಂದ ಯೂಸುಫನಿಗೆ ಮುನ್ನೂರು (ಸೆಹಸದಿ) ಮುನ್ಸಬ್ದಾರನೆಂಬ ಉನ್ನತಸ್ಥಾನದ ಜೊತೆಗೆ ಅಬ್ದುಲ್ ಅಜೀಜನ ಉತ್ತರಾಧಿಕಾರಿಯನ್ನಾಗಿಸಿ ಆತನಿಗೆ ಅಮೀರ ಆಖಿರ ಎಂಬ ಹುದ್ದೆಯನ್ನು ನೀಡಿದನು.

ನಿಜಾಮುಲ್ ಮುಲ್ಕನ ಜೊತೆಗೆ ಸಂಬಂಧ :

ಯೂಸುಫನು ಈ ಹೊಣೆಗಾರಿಕೆಯನ್ನು ಹೊತ್ತು ಸೇವೆ ಮಾಡುತ್ತಿರುವ ಕೆಲವೇ ವರ್ಷಗಳಾಗಿರಬೇಕು, ಆಗ ಬಹಮನಿ ಎಂಬ ಒಬ್ಬ ವ್ಯಕ್ತಿಯು ಅಮೀರೇ ಆಖೂರಿಯ ಸ್ಥಾನವನ್ನು ಪಡೆದಿದ್ದನು. ಕೃತಜ್ಞತೆಯ ಮಧುರತೆಯಲ್ಲಿಯೇ ಯೂಸುಫನು ಈ ಸೇವೆಗೆ ರಾಜೀನಾಮೆ ಸಲ್ಲಿಸಿದನು. ನಂತರ ತುರ್ಕಿಯ ಬಹುದೊಡ್ಡ ಸರದಾರನಾಗಿದ್ದ ನಿಜಾಮುಲ್ ಮುಲ್ಕನ ಜೊತೆ ಸಂಬಂಧ ಬೆಳೆಯಿತು. ಯೂಸುಫ ಆದಿಲನು ತನ್ನ ಸುಸಂಸ್ಕೃತ ಸ್ವಭಾವದಿಂದ ನಿಜಾಮುಲ್ ಮುಲ್ಕನ ಮೇಲೆ ಹೇಗೆ ಜಾದೂ (ಮೋಡಿ) ಮಾಡಿದನೆಂದರೆ, ಯೂಸುಫನನ್ನು ತನ್ನ ಸೋದರನೆಂದು ಕರೆಯತೊಡಗಿದನು ಮತ್ತು ಯಾವಾಗಲೂ ತನ್ನ ಒಡನಾಟದಲ್ಲಿಯೇ ಇಟ್ಟುಕೊಂಡಿರುತ್ತಿದ್ದನು. ಇದೇ ಕಾಲದಲ್ಲಿ ನಿಜಾಮುಲ್ ಮುಲ್ಕನು ಬರಾರದ ತರ್ಫದಾರಿ ಹುದ್ದೆಗೆ ನೇಮಕನಾದನು. ಈತನು ಯೂಸುಫನ ಸ್ಥಾನಮಾನವನ್ನು ಉನ್ನತಗೊಳಿಸಿದನು. ನಿಜಾಮುಲ್ ಮುಲ್ಕನ ಶಿಫಾರಸ್ಸಿನಿಂದ ಯೂಸುಫನಿಗೆ ರಾಜನ ಆಸ್ಥಾನದಿಂದ ಆದಿಲಖಾನ ಎಂಬ ಗೌರವಾಂಕಿತದ ಕೃಪೆ ಆಯಿತು. ನಿಜಾಮುಲ್ ಮುಲ್ಕನು ಬೆರಾರಿಗೆ ಹೋದಾಗ ಆತನ ಜೊತೆಯಲ್ಲಿಯೇ ಯೂಸುಫನು ಪ್ರಯಾಣ ಬೆಳೆಸಿದನು.

ಸರದಾರನ ಸ್ಥಾನ– ಗೌರವ :

ನಿಜಾಮುಲ್ ಮುಲ್ಕನು ಬೆರಾರನ್ನು ತಲುಪಿದನು, ಖರ್ಕೆ ಕೋಟೆಯನ್ನು ಮುತ್ತಿಗೆ ಹಾಕಿದನು. ಒಂದು ವರ್ಷದ ಅವಧಿಯಲ್ಲಿ ಅಲ್ಲಿಯ ಸ್ಥಿತಿಗತಿಗಳನ್ನು ಅರ್ಥಮಾಡಿಕೊಳ್ಳುತ್ತ ವಿಶ್ವಪ್ರಯತ್ನದಿಂದ ಆ ಕೋಟೆಯನ್ನು ಹಿಂದೂ ರಾಜನ ಅಧಿಕಾರದಿಂದ ತನ್ನ ಅಂಕಿತಕ್ಕೆ ತೆಗೆದುಕೊಂಡನು. ಈ ಗೆಲುವು ದೊರೆತ ದಿನದಂದೇ ಒಬ್ಬ ರಾಜಪೂತ ಸೈನಿಕನಿಂದ ನಿಜಾಮುಲ್ ಮುಲ್ಕನು ಮೃತ್ಯುವನ್ನಪ್ಪಿದನು. ನಿಜಾಮುಲ್ ಮುಲ್ಕನ ಸಾವಿನಿಂದಾಗಿ ಬಹಮನಿ ಸೈನ್ಯದಲ್ಲಿ ದಟ್ಟವಾದ ಅಶಾಂತಿ ಹಬ್ಬಿತು. ಆದರೆ ಯೂಸುಫ ಆದಿಲನು ಧೈರ್ಯವನ್ನು ಕಳೆದುಕೊಳ್ಳಲಿಲ್ಲ. ಪರಿಸ್ಥಿತಿಯನ್ನು ಪೌರುಷದಿಂದ ಎದುರಿಸಿದನು. ಆತನು ಹಿಂದುಗಳ ಗುಂಪನ್ನು ನುಚ್ಚುನೂರುಗೊಳಿಸಿದನು. ಕೋಟೆಯನ್ನು ಸುಭದ್ರ ಮತ್ತು ಸುಸ್ಥಿತಿಗೆ ತಂದನು. ಶತ್ರುವಿನ ಸಂಪತ್ತನ್ನು ಮತ್ತು ಅಲ್ಲಿದ್ದ ಆನೆ, ಕುದುರೆಗಳ ಸಹಿತ ಅರಸನ ಸೇವೆಯಲ್ಲಿ ಉಪಸ್ಥಿತನಾದನು. ಮಹಮ್ಮದ ಶಾಹನು ಯೂಸುಫ ಆದಿಲನನ್ನು ವೈಭವದಿಂದ

ಗೌರವಿಸಿ, 'ಮನಸಬ್ ಏಕ ಹಜಾರಿ'ಸ್ಥಾನ ಕರುಣಿಸಿದನು. ಯೂಸುಫನನ್ನು ಬಹಮನಿ ಸರದಾರರ ಗುಂಪಿನಲ್ಲಿ ಸೇರ್ಪಡೆ ಮಾಡಿದನು.

ಬಿಜಾಪುರದ ತರ್ಫದಾರಿ :

ಇದಾದನಂತರ ಯೂಸುಫ ಆದಿಲಶಾಹನ ದೈವದ ನಕ್ಷತ್ರದ ಹೊಳಪು ದಿವಸದಿವಸಕ್ಕೆ ಬೆಳಗತೊಡಗಿತು. ಈತನ ಗಣನೆಯು ರಾಜ್ಯದಲ್ಲಿ ವಿಶಿಷ್ಟ ಸ್ಥಾನವನ್ನು ಗಳಿಸಿದ ಆಪ್ತವಲಯದಲ್ಲಿ ಆಗತೊಡಗಿತು. ಮುಂದೆ ಬಿಜಾಪುರದ ತರಫ್‌ದಾರನೆಂದು ನೇಮಕಗೊಂಡನು. ಈ ಹುದ್ದೆಯನ್ನು ಪಡೆದ ನಂತರ ಯೂಸುಫನು ದೇಶದ ವ್ಯವಸ್ಥೆಯನ್ನು ಬಹಳ ಉಲ್ಲಾಸದಿಂದ ಅಚ್ಚುಗೊಳಿಸಿದನು. ತನ್ನ ಸುತ್ತುಮುತ್ತು ಸೈನ್ಯದ ಒಂದು ಸುಭದ್ರವಾದ ತಂಡವನ್ನು ತನ್ನ ರಕ್ಷಣೆಗಾಗಿ ಕಟ್ಟಿಕೊಂಡನು. ಇದೇ ಕಾಲದಲ್ಲಿ ಮುಹಮ್ಮದ ಶಾಹ ಬಹಮನಿಯು ದೈವಾಧೀನನಾದನು. ಸಿಂಹಾಸನವು ಸಣ್ಣ ದೊಡ್ಡ ತಂಡಗಳಿಂದ ಅಭದ್ರವಾಗಿ ಚಲ್ಲಾಪಿಲ್ಲಿಯಾಗತೊಡಗಿ ಪರಿಸ್ಥಿತಿಯು ತಪ್ತವಾಯಿತು. ಯೂಸುಫ ಆದಿಲನು ಈ ಸಂದರ್ಭದ ಲಾಭವನ್ನು ಪಡೆದನು. ತನ್ನ ಸೈನ್ಯದ ಸಂಖ್ಯೆಯನ್ನು ಮೊದಲಿನಕ್ಕಿಂತ ವೃದ್ಧಿಗೊಳಿಸಿದನು. ಆ ಸೈನಿಕರಲ್ಲಿ ಕ್ರಮಬದ್ಧತೆಯನ್ನು ತಂದನು. ಸೈನಿಕರ ಪಡೆಯನ್ನು ಹೆಚ್ಚಿಸುವುದರ ಜೊತೆಗೆ ತುರ್ಕಿ ಮತ್ತು ಮೊಘಲರ ಸರದಾರರನ್ನು ಹೆಚ್ಚು ಸಂಖ್ಯೆಯಲ್ಲಿ ಸೇರಿಸಿಕೊಳ್ಳುವತ್ತ ಗಮನ ಕೊಟ್ಟನು; ಮತ್ತು ಮುಂದೆ ನೀಡಬಹುದಾದ ಹುದ್ದೆಗಳಲ್ಲಿಯ ಬಡ್ತಿಗಳ ಭರವಸೆಯ ಮೇಲೆ ಅಹಮದಾಬಾದ ಮತ್ತು ಬೀದರದಿಂದ ಅವರನ್ನು ತನ್ನ ಹತ್ತಿರ ಕರೆಸಿಕೊಂಡನು.

ಸ್ವತಂತ್ರ ಅಧಿಕಾರದ ಅವಶ್ಯಕತೆಯನುಸಾರ, ಯೂಸುಫ ಆದಿಲನು ತನ್ನ ಸೈನಿಕಶಕ್ತಿಯನ್ನು ಬಹಳ ಪ್ರಮಾಣದಲ್ಲಿ ಬೆಳೆಸಿದನು. "ಯಾರು ಗೆಲ್ಲುತ್ತಾರೋ ಅವರಿಗೇ ಆ ಖಡ್ಗ. ಯಾರು ಬಲಿಷ್ಠರೋ ಅವರದೇ ದೇಶ" ಎಂಬುದು ಒಂದು ಸುಪ್ರಸಿದ್ಧ ಲೋಕೋಕ್ತಿ. ಈ ಲೋಕೋಕ್ತಿಗೆ ಉದಾಹರಣೆ ಎಂಬಂತೆ ಹಿಜರಿ ಶಕೆ ೮೯೫ ಅಥವಾ ೮೯೬ರಲ್ಲಿ ಯೂಸುಫನು ಬಿಜಾಪುರದಲ್ಲಿ ತನ್ನ ಸ್ವತಂತ್ರ ಅಧಿಕಾರವನ್ನು ಸ್ಥಾಪಿಸಿದನು, ಆತನು ತನ್ನ ಹೆಸರಿನಲ್ಲಿ ಖುತ್ಬಾವನ್ನು, ರಾಜಕಿರೀಟವನ್ನು ಧರಿಸಿದನು. ಸುಮಾರು ಐದು ಸಾವಿರ ತುರ್ಕಿ ಮತ್ತು ಅಫಾಕಿ ಆಪ್ತವಲಯವು ಆತನನ್ನು ತಮ್ಮ ಬಾದಶಹ ಎಂದು ಸ್ವೀಕರಿಸಿತು. ಯೂಸುಫನು ಇದರಂತೆ ಮುಹಮ್ಮದನ ಅಧಿಕಾರದಲ್ಲಿದ್ದ ಅನೇಕ ಕೋಟೆಗಳನ್ನು ತನ್ನ ಅಧಿಕಾರಕ್ಕೆ ವಶಪಡಿಸಿಕೊಂಡನು. ಇದೇ ರೀತಿ ಭೌರಾಹ ನದಿಯಿಂದ ಬಿಜಾಪುರ, ಮತ್ತು ಕೃಷ್ಣಾ ನದಿಯಿಂದ ರಾಯಚೂರಿನವರೆಗಿನ ಪ್ರಾಂತವನ್ನು ತನ್ನ ಹಿಡಿತಕ್ಕೆ ತಂದುಕೊಂಡನು. ಯೂಸುಫ ಖಾನನು, ಯೂಸುಫ "ಶಾಹ" ಎಂಬ ಅಭಿದಾನದಿಂದ ಪ್ರಸಿದ್ಧಿಗೆ ಬಂದನು, ಮತ್ತು ತನ್ನಷ್ಟಕ್ಕೆ ತಾನೇ "ಯೂಸುಫ ಆದಿಲಶಾಹ" ಎಂಬ ಹೆಸರಿನಿಂದ ಕೀರ್ತಿಶಾಲಿಯಾದನು. ಈ ಕಾರಣದಿಂದಲೇ ಈ

ಮನೆತನದ ಪ್ರತಿಯೊಬ್ಬ ಅರಸರು 'ಆದಿಲ ಶಾಹ' ಎಂಬ ಹೆಸರಿನಿಂದ ಸಂಬೋಧಿತರಾಗಿದ್ದಾರೆ.

ಖಾಸಿಮ ಬರೀದನ ಅಸೂಯೆ :

ಯೂಸುಫ ಆದಿಲಶಾಹನು ಅರಸೊತ್ತಿಗೆಯನ್ನು ಸ್ಥಾಪಿಸಿ ಘೋಷಣೆ ಮಾಡಿದ ಅನಂತರ ಅಹಮದಾಬಾದ ಬೀದರಿನ ಬಹುತೇಕ ಪ್ರಸಿದ್ಧಿ ಪಡೆದ ಸರದಾರರು ಯೂಸುಫನ ಹತ್ತಿರ ಬಂದು ಸ್ಥಾನ ಪಡೆದರು. ಇದರಿಂದ ಆಸ್ಥಾನದ ಕೀರ್ತಿ ಪ್ರಜ್ವಲಿಸಿತು. ಯೂಸುಫನ ಈ ಏಳಿಗೆಯ ಎತ್ತರವನ್ನು ಕಂಡು ಅಮೀರ ಖಾಸಿಮನಲ್ಲಿ ಹೊಟ್ಟೆ ಕಿಚ್ಚಿನ ಜ್ವಾಲೆ ಹೊಯ್ದಾಡತೊಡಗಿತು. ಖಾಸಿಮ ಬರೀದನು ಬಿಜಾಪುರದಲ್ಲಿ ತಾನೇ ಸ್ವತಂತ್ರವಾದ ಅರಸೊತ್ತಿಗೆಯನ್ನು ಸ್ಥಾಪಿಸಲು ಕನಸು ಕಾಣತೊಡಗಿದನು. ಆದರೆ ಆತನ ಈ ಮಹದಾಸೆಯು ಈಡೇರಲಿಲ್ಲ, ಖಾಸಿಮನ ಶತ್ರು ವಿಜಯಿಯಾದನು. ಆತನು ಅಮೀರ ಖಾಸಿಮನಿಗೆ ಮಿತಿಮೀರಿ ತೊಂದರೆ ಕೊಡತೊಡಗಿದನು. ಆದ್ದರಿಂದ ಆತನು ಯೂಸುಫ ಆದಿಲಶಾಹ ಅಧೋಗತಿಯ ಕುರಿತು ಯೋಚಿಸತೊಡಗಿದನು.

ಖಾಸಿಮ ಬರೀದನ ಸಂಚು :

ಖಾಸಿಮ ಬರೀದನು ಒಂದು ನಾಟಕ ಹೂಡಿ, ಅದರಂತೆ ನಡೆಯಲು ಪ್ರಯತ್ನಿಸಿದನು. ರಾಮರಾಜನ ತಂದೆ ತಿಮರಾಜನು ಖಾಸಿಮ ಬರೀದನಂತೆ, ತನ್ನ ಒಡೆಯ ಶಿವರಾಯನ ಮಗನನ್ನು ಕೇವಲ ಹೆಸರಿಗೆ ಮಾತ್ರ ರಾಜನನ್ನಾಗಿ ಕೂಡಿಸಿದ್ದನು. ಸಂಪೂರ್ಣ ಅಧಿಕಾರವನ್ನು ತನ್ನ ಕೈಯಲ್ಲಿರಿಸಿಕೊಂಡಿದ್ದನು. ಖಾಸಿಮ ಬರೀದನು ತಿಮರಾಜನಿಗೆ ಒಂದು ಪತ್ರ ಬರೆದನು. ಅದರಲ್ಲಿರುವ ವಿಷಯವು ಈ ರೀತಿ ಇತ್ತು. "ಸುಲ್ತಾನ ಮಹಮದ ಶಾಹ ಬಹಮನನು ರಾಯಚೂರಿನ ಕಡೆ ಇರುವ ಮುದುಗಲ್ಲಿನ ಕೋಟೆ ಮತ್ತು ಅದರ ಸುತ್ತಲಿನ ಪ್ರದೇಶವನ್ನು ನಿನಗೆ ಒಪ್ಪಿಸಲಾಗಿತ್ತು. ಈಗ ಯೂಸುಫ ಆದಿಲನು ಇದನ್ನು ತನ್ನ ವಶದಲ್ಲಿಟ್ಟುಕೊಂಡಿದ್ದಾನೆ. ಆದುದರಿಂದ ಈಗ ನಿನ್ನ ಕರ್ತವ್ಯವೇನೆಂದರೆ, ನೀನು ಸೈನ್ಯದ ಕಾಯಾಚರಣೆ ಮಾಡಿ ಈ ಪ್ರದೇಶಗಳನ್ನು ಮತ್ತೆ ನಿನ್ನ ವಶಕ್ಕೆ ತೆಗೆದುಕೊಳ್ಳಬೇಕು." ಎಂಬುದಾಗಿತ್ತು.

ತಿಮರಾಜ ಮತ್ತು ಬಹಾದ್ದೂರ ಗಿಲಾನಿಯ ಗಲಭೆಗಳು:

ಖಾಸಿಮನು ತಿಮರಾಜನನ್ನಲ್ಲದೆ ಬಹಾದೂರ ಗಿಲಾನಿಯನ್ನೂ ಯೂಸುಫ ಆದಿಲನ ವಿರುದ್ಧ ಬಡಿದೆಬ್ಬಿಸಿದನು. ಬಹಾದೂರ ಗಿಲಾನಿಯು ಆ ದಿನಗಳಲ್ಲಿ ಬಂದರು ಮತ್ತು ನದಿದಂಡೆಯು ಪ್ರಾಂತಕ್ಕೆ ಮತ್ತು ದಖ್ಖನ್ನಿನ ಪ್ರದೇಶಕ್ಕೆ ಅಧಿಪತಿಯಾಗಿದ್ದನು. ಈ ಪ್ರದೇಶಕ್ಕೆ ಕೊಂಕಣಪಟ್ಟಿ ಎನ್ನುತ್ತಾರೆ. ತಿಮರಾಜನಿಗೆ ಖಾಸಿಮ ಬರೀದನ ಪತ್ರ ತಲುಪಿದಾಗ ತತ್‌ಕ್ಷಣ ತನ್ನ ಸೈನ್ಯವನ್ನು ಸೇರಿಸಿ ಶಿವರಾಯನ ಮಗನನ್ನು ಕರೆದುಕೊಂಡು ಮುಂದೆ ಸಾಗಿದನು. ತಿಮರಾಜನು ಪೂರ್ವಸಿದ್ಧತೆಯಲ್ಲಿದ್ದು

ತೆಹಮುಂದಾರ ನದಿ ದಾಟಿ ರಾಯಚೂರು ಮತ್ತು ಮುದಗಲ್ ಕೋಟೆಗಳನ್ನು ತನ್ನ ವಶಕ್ಕೆ ತೆಗೆದುಕೊಂಡು, ಈ ಪ್ರದೇಶಗಳನ್ನು ತನ್ನ ಕೈಚಳಕದಿಂದ ನಿಷ್ಕರುಣಿಯಾಗಿ ಹಾಳು ಮಾಡಿದನು. ಬಹಾದ್ದೂರ ಗಿಲಾನಿಯು ಕೂಡ ಈ ಅವಕಾಶದ ಲಾಭವನ್ನು ತೆಗೆದುಕೊಂಡು ಜಮಖಂಡಿ ಕೋಟೆಯನ್ನು ವಶಪಡಿಸಿಕೊಂಡನು.

ತಮರಾಜ ಮತ್ತು ಬಹಾದ್ದೂರ ಗಿಲಾನಿಯರ ಆಕ್ರಮಣಕಾರೀ ಗಲಭೆಗಳಲ್ಲಿದ್ದ ಹದ್ದುಮೀರಿದ ಕೈವಾಡದ ಕುರಿತು ಎಲ್ಲ ವಿಷಯಗಳು ಬಿಜಾಪುರ ತಲುಪಿದವು. ಆಸ್ಥಾನದ ಒಂದು ಗುಂಪು, ಅರಸನಿಗೆ ಶತ್ರುವಿನ ಕಲುಷಿತವಾದ ದುರುದ್ದೇಶಗಳನ್ನು ಸ್ಪಷ್ಟವಾಗಿ ಗಮನಕ್ಕೆ ತಂದಿತು. ಯೂಸುಫ ಆದಿಲಶಾಹನು ಈ ಆಸ್ಥಾನದ ಸಭಾಸದರನ್ನು ಕುರಿತು ಹೀಗೆ ಹೇಳಿದನು. "ನಾನು ಎಲ್ಲ ವಿಷಯಗಳಲ್ಲಿ ಪವಿತ್ರಾತ್ಮರಾದ ಹಿರಿಯ ಮುತ್ಸದ್ದಿಗಳಿಂದ ಸೂಕ್ತ ಸಲಹೆ ಪಡೆದು ಯೋಚಿಸಿ ನಿರ್ಣಯ ತೆಗೆದುಕೊಳ್ಳುತ್ತೇನೆ. ಧರ್ಮಾತ್ಮರು ಮತ್ತು ಶೇಖ ಸಫಿ ಅವರ ಪ್ರಸಾದದಿಂದ ಶತ್ರುಗಳ ಆಕ್ರಮಣಕ್ಕೆ ಅವಕಾಶ ಕೊಡದೆ ಸುಭದ್ರನಾಗಿರುತ್ತೇನೆಂದು ನನಗೆ ಸಂಪೂರ್ಣ ವಿಶ್ವಾಸವಿದೆ." ಇದೇ ಸಮಯದಲ್ಲಿ ಯೂಸುಫನು, 'ತಾನು ಬಲಿಷ್ಠನಾಗಿ ತನ್ನ ಶತ್ರುಗಳ ಮೇಲೆ ಗೆಲುವು ಸಾಧಿಸಿದರೆ ಹನ್ನೆರಡು ಇಮಾಮರ ಹೆಸರನ್ನು ಖುತ್ಬಾದಲ್ಲಿ ಸೇರಿಸಿ, ಈ ಪವಿತ್ರಾತ್ಮರ ವಾಕ್ಯಗಳನ್ನು ಪಠಣ ಮಾಡುತ್ತೇನೆ ಮತ್ತು ಶಹಾ ಮತವನ್ನು ನಮ್ಮ ದೇಶದಲ್ಲಿ ಆರಂಭಿಸುತ್ತೇನೆ' ಎಂದು ವಚನ ಕೊಟ್ಟನು.

ಖಾಸಿಮ ಬರೀದನ ಮೇಲೆ ಆಕ್ರಮಣ ಮಾಡುವ ವಿಚಾರ :

ಯೂಸುಫನು ಬೇರೊಂದು ವಿಚಿತ್ರ ಉಪಾಯದ ಪ್ರಯೋಗಕ್ಕಿಳಿದನು. ಕೆಲಸಮಯದವರೆಗೆ ಮುದ್ಗಲ ಮತ್ತು ರಾಯಚೂರು ಕೋಟೆಗಳ ಬಗ್ಗೆ ತನಗಿರುವ ಯೋಚನೆಯಿಂದ ದೂರ ಸರಿದನು. ತಮರಾಜ ಮತ್ತು ರಾಜಕುಮಾರರೊಡನೆ ಒಪ್ಪಂದ ಮಾಡಿಕೊಂಡನು. ತಮರಾಜನು ತಿರುಗಿ ಹೋದೊಡನೆ ಯೂಸುಫನು ಬಹಾದ್ದೂರ ಗಿಲಾನಿಯನ್ನು ತನ್ನ ಪ್ರಾಂತದಿಂದ ಹೊರ ಹಾಕಿದನು. ಸಾಧಿತ ಸಮಯ ಬಂದಾಗ ಜಮಖಂಡಿ ಕೋಟೆಯನ್ನು ಮರಳಿ ಪಡೆಯುವುದಕ್ಕಾಗಿ ಛಲವಾದಿಯಾಗಿ ಹೋರಾಟಕ್ಕಿಳಿಯಬೇಕೆಂಬ ಉದ್ದೇಶ ಆತನಿಗಿತ್ತು. ಮೊತ್ತಮೊದಲಿಗೆ ಅಮೀರ ಖಾಸಿಮ ಬರೀದನನ್ನು ಚೆಂಡು ಹಿಡಿದು ಎಸೆಯುವ ಪಣ ಮಾಡಿದ್ದನು. ಖಾಸಿಮ ಬರೀದನ ಸಮಸ್ಯೆಯನ್ನು ಎತ್ತಿಕೊಂಡನು, ಆತನಿಗೆ ಹೇಗಾದರೂ ಮಾಡಿ ಶತ್ರುವನ್ನು ದಾರಿಯಿಂದ ಸರಿಸಬೇಕಾಗಿತ್ತು. ಯೂಸುಫನು ಎಂಟು ಸಾವಿರ ತುರ್ಕಿ ಮತ್ತು ಮೊಘಲ ಸೈನಿಕರಿಂದ ಕೂಡಿದ ಒಂದು ಸೈನ್ಯವನ್ನು ತೆಗೆದುಕೊಂಡು ಅಹಮದಾಬಾದ ಬೀದರನತ್ತ ದಂಡೆತ್ತಿ ಹೋದನು. ಖಾಸಿಮ ಬರೀದನಿಗೆ ಈ ವಿಷಯ ಗೊತ್ತಾದಾಗ ಅಹಮದ್ ನಿಜಾಮುಲ್ ಮುಲ್ಕ ಬಹರಿಯಿಂದ ಸಹಾಯವನ್ನು ಬಹಳ ದೀನತೆಯಿಂದ ಕೇಳಿದನು.

ಅಹಮದ್ ನಿಜಾಮುಲ್ ಮುಲ್ಕನು ಖಾಸಿಮ ಬರೀದನ ವಿನಂತಿಯನ್ನು ಒಪ್ಪಿಕೊಂಡನು. ಪರಿಂದೆಯ ಹಾಕಿಮ ಖಾಜಾ ಜಹಾಂನನನ್ನು ಜೊತೆಗೂಡಿಕೊಂಡು ಅಹಮದಾಬಾದ ಬೀದರಿನತ್ತ ಸಾಗಿದನು. ಖಾಸಿಮ ಬರೀದನು ಮಹಮ್ಮೂದ ಶಾಹನ ಜೊತೆಯಲ್ಲಿ ಪಟ್ಟಣದಿಂದ ಹೊರಹೊರಟು, ತನ್ನ ಸಹಾಯಕರೊಂದಿಗೆ ಸೇರಿದನು. ಅಹಮದ್ ನಿಜಾಮ ಮತ್ತು ಖಾಜಾ ಜಹಾಂನರ ಜೊತೆ ಸೇರಿ ತನ್ನೊಡನೆ ಇದ್ದ ನಿಗದಿತ ಸೈನ್ಯವನ್ನು ಶಿಸ್ತಿನಿಂದ ಕ್ರಮಗೊಳಿಸಿ ಹುರಿದುಂಬಿಸಿ ಯೂಸುಫ ಆದಿಲಶಾಹನ ಕಡೆಗೆ ಮುನ್ನಡೆದನು. ಅಹಮದಾಬಾದ ಬೀದರದಿಂದ ಐದು ಹರದಾರಿ ಅಂತರದಲ್ಲಿ ತಂಗಿದ್ದನು. ಯೂಸುಫ ಆದಿಲಶಾಹನು ತನ್ನ ಸೈನ್ಯವನ್ನು ನಿಗದಿತ ಸ್ಥಳದಲ್ಲಿ ಸಜ್ಜುಗೊಳಿಸಿ ಮಧ್ಯದಲ್ಲಿ ಸೈನ್ಯವನ್ನು ನಿಲ್ಲಿಸಿದನು. ಈ ಸನ್ನಿವೇಶದಲ್ಲಿ ಆತನ ಸೋದರ ಸಂಬಂಧಿ ಗಜ್ನಫರ್ ಆಖಾನು ಸಾವಾ ಪಟ್ಟಣದಿಂದ ಬಂದಿದ್ದನು. ಒಂದು ಸಾವಿರ ಮೊಘಲ ನಿಪುಣ ಬಿಲ್ಲುಗಾರ ಸೈನಿಕರ ಮೇಲೆ ಸರದಾರನೆಂದು ಆತನನ್ನು ನೇಮಿಸಿದನು. ಆತನಿಗೆ ಸೈನ್ಯದಲ್ಲಿ ಭಾಗಿಯಾಗಲು ತಿಳಿಸಿದನು. ಶತ್ರುವನ್ನು ಎದುರಿಸುತ್ತಿರುವಾಗ ದುರ್ಬಲನಾಗುವ ಸೂಚನೆ ಕಂಡಕೂಡಲೇ ತತ್‌ಕ್ಷಣ ಯೂಸುಫನ ಸಹಾಯಕ್ಕೆ ಬರಬೇಕೆಂದು ನಿಶ್ಚಯಿಸಿದನು.

ಯುದ್ಧದ ಸಿದ್ಧತೆ :

ಉಭಯಸೈನ್ಯಗಳು ಎದುರುಬದುರಾದಾಗ ಯುದ್ಧವು ಆರಂಭವಾಯಿತು. ಯೂಸುಫ ಆದಿಲಶಾಹನು ಎದುರಿಗಿದ್ದು ಶತ್ರುವಿನ ಸೈನ್ಯವನ್ನು ಧ್ವಂಸ ಮಾಡಿದನು. ಅಹಮದ್ ನಿಜಾಮುಲ್ ಮುಲ್ಕನು ಆದಿಲನ ಎಡಭಾಗದಲ್ಲಿದ್ದು ಸೈನ್ಯವನ್ನು ದಿಗಿಲುಗೊಳಿಸಿದನು. ಫಕರುಲ್ ಮುಲ್ಕನು ಗಾಯಗೊಂಡು ರಣರಂಗದಿಂದ ಹೊರಬಿದ್ದನು. ಯೂಸುಫ ಆದಿಲಶಾಹನು ತನ್ನ ಸೈನ್ಯದ ಸ್ಥಿತಿಗತಿಯನ್ನು ನೋಡಿ ನಿಜಾಮುಲ್ ಮುಲ್ಕನ ಜೊತೆಗೆ ಯುದ್ಧ ಮಾಡಲು ನಿರ್ಧರಿಸಿದನು. ಆದರೆ ಗಜ್ನಫರನು, "ಯುದ್ಧ ಮಾಡಬೇಕಾದದ್ದು ಖಾಸಿಮ ಬರೀದನ ಜೊತೆ; ಅವನು ಸದ್ಯ ಇಲ್ಲಿಲ್ಲ. ಆದ್ದರಿಂದ ಅರ್ಥವಿಲ್ಲದೆ ಯುದ್ಧ ಮಾಡಿ ನಮ್ಮ ಶಕ್ತಿಯನ್ನು ಕಡಿಮೆ ಮಾಡಿಕೊಳ್ಳುವುದು ಯಾವ ಕಾರಣಕ್ಕೂ ಹಿತವಾದುದಲ್ಲ, ಆದ್ದರಿಂದ ಈಗ ಯುದ್ಧ ಮಾಡುವುದನ್ನು ಮುಂದೂಡಬೇಕು, ಯಾವ ರೀತಿಯಿಂದಲಾದರೂ ಒಪ್ಪಂದ ಮಾಡಿಕೊಳ್ಳಬೇಕು" ಎಂದು ಸಲಹೆ ನೀಡಿದನು. ಆಗ ಯೂಸುಫ ಆದಿಲಶಾಹ ಗಜ್ನಫರನ ಸಲಹೆ ಸ್ವೀಕರಿಸಿದನು. ಇಬ್ಬರಲ್ಲಿ ಒಪ್ಪಂದವಾಯಿತು.

ಮೌಲ್ವಿ ಆಲಿಯವರ ಹೇಳಿಕೆ :

ಮೌಲ್ವಿ ಆಲೀ ತಮ್ಮ ಪ್ರಸಿದ್ಧವಾದ ಮಸ್ನವಿ (ಕಾವ್ಯದ ಒಂದು ಪ್ರಕಾರ), "ಆದಿಲ್ ನಾಮಾ" ದಲ್ಲಿ, ಯೂಸುಫ ಆದಿಲಶಾಹನ ಸ್ಥಿತಿಯನ್ನು, "ನಳದುರ್ಗದ

ಹತ್ತಿರ ಯುದ್ಧವಾಯಿತು ಮತ್ತು ಮುಲ್ಕ ನಿಜಾಮನು ಈ ಯುದ್ಧದಲ್ಲಿ ಉಪಸ್ಥಿತನಾಗಿರಲಿಲ್ಲ. ಈ ಯುದ್ಧದಲ್ಲಿ ಖಾಸಿಮ ಬರೀದನಿಗೆ ಗೆಲುವು ದೊರೆಯಿತು. ಯೂಸುಫ ಆದಿಲಶಾಹನು ಬಿಜಾಪುರದ ಕಡೆಗೆ ತಿರುಗಿದನು. ಅಹಮದ್ ನಿಜಾಮ ಮತ್ತು ಬಹಾದ್ದೂರ ಗಿಲಾನಿ ಜೊತೆ ಒಪ್ಪಂದ ಮಾಡಿಕೊಂಡನು. ಈ ಒಪ್ಪಂದದ ಮುಖ್ಯ ಕಾರಣವು ವಿಜಯನಗರದ ಸಿಂಹಾಸನದ ಕುರಿತು ಇದ್ದ ಸಣ್ಣ ದೊಡ್ಡ ಗಲಭೆಗಳಾಗಿದ್ದವು. ಯೂಸುಫ ಆದಿಲಶಾಹ ಎಲ್ಲ ಕಡೆಯಿಂದಲೂ ನಿಶ್ಚಿಂತೆಯಿಂದ ಇದ್ದು ತಮರಾಜನ ಕಡೆಗೆ ಲಕ್ಷ್ಯ ಹರಿಸುವುದೇ ಆಗಿತ್ತು." ಎಂದು ಹೇಳಿದ್ದಾನೆ.

ಮೈಮರೆಸಿದ ಸಂತೋಷಕೂಟಗಳು :

ಯೂಸುಫ ಆದಿಲಶಾಹನು ತನ್ನ ಸೈನ್ಯವನ್ನು ಸಿದ್ಧಪಡಿಸಿಕೊಳ್ಳಲು ಆದಷ್ಟು ತೀವ್ರವಾಗಿ ಬಿಜಾಪುರದ ಕಡೆಗೆ ತೆರಳಿದನು. ರಸ್ತೆಯಲ್ಲಿ ಆತನು ಸುಮಾರು ಹತ್ತು ದಿವಸ ಬೇಟೆಯಾಡುತ್ತ ಪ್ರಯಾಣ ಮಾಡಿ, ಕೊನೆಗೆ ಕೃಷ್ಣಾನದಿಯ ದಂಡೆಯ ಮೇಲೆ ಬಿಡಾರ ಸ್ಥಾಪಿಸಿ, ಹಗಲು ರಾತ್ರಿ ಸುಖಲೋಲುಪತೆಯಲ್ಲಿ ತೊಡಗಿದನು, ಮದಿರಾಪಾನ ಮಾಡುತ್ತ ಮನಸ್ಸನ್ನು ಸಂತೋಷಗೊಳಿಸುವುದರಲ್ಲಿ ತೊಡಗಿದನು. ಈ ಸಂತೋಷಕೂಟಗಳಲ್ಲಿ ಹಾಡು ಹಾಡುವವರು ಮತ್ತು ವಾದ್ಯ ಬಾರಿಸುವವರ ಮಧ್ಯ ಪ್ರಾವೀಣ್ಯತೆ ಪಡೆದ ಇಬ್ಬರು ಪ್ರಸಿದ್ಧ ಉಸ್ತಾದರಾದ ಗಿಲಾನಿ ಮತ್ತು ಹುಸೇನ ಕಜವೀನೀ ಕೂಡ ಇದ್ದರು. ಈ ಉಸ್ತಾದರು ಫಾರ್ಸಿಯ ಗಜಲುಗಳನ್ನು ಬಹಳ ಸುಂದರವಾಗಿ ಹಾಡಿ ತೋರಿಸುತ್ತಿದ್ದರು.

ಯೂಸುಫ ಆದಿಲಶಾಹನ ಅಸ್ವಸ್ಥತೆ :

ಯೂಸುಫ ಆದಿಲಶಾಹನು ಈ ಗಜಲನ್ನು ಬಹಳ ಮೆಚ್ಚಿಕೊಂಡು ಇದನ್ನು ಹಾಡುವ ಉಸ್ತಾದರಿಗೆ ೩೦೭ ಇರಾಖಿನ ನಾಣ್ಯ ತೋಮಾನದ ಸಮಾನವಾದ ಆರು ಸಾವಿರ ಹೊನ್ನು ಬಹುಮಾನವಾಗಿ ತನ್ನ ರಾಜ್ಯದ ಖಜಾನೆಯಿಂದ ನೀಡಿದನು. ಅತಿಯಾದ ಸುಖಲೋಲುಪತೆಯಿಂದಾಗಿ ಯೂಸುಫ ಆದಿಲಶಾಹನ ಆರೋಗ್ಯವು ಹದಗೆಟ್ಟಿತು. ಕೆಮ್ಮು, ಜ್ವರ ನಿರಂತರವಾಗಿ ಅವನನ್ನು ಕಾಡತೊಡಗಿದವು. ಈ ಅನಾರೋಗ್ಯ ಸ್ಥಿತಿಯು ಬಹಳ ದೀರ್ಘ ಸಮಯದವರೆಗೆ ಎಳೆದುಕೊಂಡು ಹೋಯಿತು. ಪೂರ್ಣ ಎರಡು ತಿಂಗಳ ಕಾಲ ಯೂಸುಫನು ಕೃಷ್ಣಾ ತಟದ ಮೇಲೆ ಆರೈಕೆ ಪಡೆಯಬೇಕಾಯಿತು. ಅವನು ಸ್ವತಃ ರಾಜ ಆರೈಕೆಯಲ್ಲಿ ಪರದೆಯೊಳಗಡೆ ಇರುತ್ತಿದ್ದನು. ಹೊರಗಡೆ ದೀವಾನಖಾನೆಯಲ್ಲಿ ಗಜ್ನಫರ್ ಆಖಾನು ಕುಳಿತು ರಾಜ್ಯದ ಕಾರ್ಯಭಾರವನ್ನು ನಡೆಸುತ್ತಿದ್ದನು.

ರಾಯಚೂರಿನ ಮೇಲೆ ಯುದ್ಧ ಆರಂಭಿಸುವ ತಿಮರಾಜನ ಯತ್ನ :

ಬಾದಶಹನ ಅನಾರೋಗ್ಯದ ಸ್ಥಿತಿಯಿಂದಾಗಿ ದುಷ್ಟಹೇತುವಿನ ಸುದ್ದಿಗಳು ದಟ್ಟವಾಗಿ

ಹರಡಲು ಅವಕಾಶವು ದೊರೆಯಿತು. ಹೀಗಾಗಿ ಇಡೀ ಸೈನ್ಯದಲ್ಲಿ ಯೂಸುಫ ಆದಿಲಶಾಹ ತೀರಿಕೊಂಡನೆಂಬ ಸುದ್ದಿ ಹರಡಿಯೇ ಬಿಟ್ಟಿತು. ಈ ಸುದ್ದಿ ತಿಮರಾಜನ ತನಕ ಮುಟ್ಟಿತು. ಇದನ್ನು ಕೇಳಿ ತಿಮರಾಜನು ಸಂತೋಷದಿಂದ ಕುಣಿದು ಕುಪ್ಪಳಿಸಿ ಹಾಡತೊಡಗಿದನು. ಅವನು ತನ್ನ ಕೆಲವು ಪ್ರಮುಖ ಸರದಾರರ ಸಲಹೆ ಸೂಚನೆಗಳನ್ನು ಪಡೆದು, ವಸ್ತುಸ್ಥಿತಿಯನ್ನು ಅನುಸರಿಸಿ ಅರ್ಥಪೂರ್ಣ ಸಲಹೆ ನೀಡುವ ಪ್ರಮುಖರೊಡನೆ ರಾಜಕುಮಾರನ ಜೊತೆ ರಾಯಚೂರಿನತ್ತ ಹೊರಟನು. ಈತನ ಜೊತೆ ಸೈನ್ಯದ ೨೦,೦೦೦ ಅಶ್ವಸವಾರರು ಹಾಗೂ ಕಾಲಾಳುಗಳು ಮತ್ತು ೨೦,೦೦೦ ಆನೆಯ ಸೈನ್ಯ ಸಿದ್ಧವಾಗಿತ್ತು. ಈ ಘಟನೆಯು ೯೧೮ ಹಿಜರಿಯದಾಗಿದೆ.

ಯೂಸುಫ ಆದಿಲಶಾಹನ ಸದೃಢ ಆರೋಗ್ಯಸ್ಥಿತಿ :

ಅಲ್ಲಿ ಎಲ್ಲ ಮುಸಲ್ಮಾನ ಪ್ರಮುಖರು, ಶ್ರೀಮಂತರು ಮತ್ತು ಸೈನ್ಯದ ಸರದಾರರಲ್ಲಿ ಗಜ್ನಫರ್ ಬೇಗ್ ಆಖಾ ಕೂಡಾ ಇದ್ದರು. ಈ ಸುದ್ದಿ ಕೇಳಿ ಬಹಳ ಗಾಬರಿಗೊಂಡು, ಎಲ್ಲರೂ ಪ್ರಾಮಾಣಿಕ ಮನಸ್ಸಿನಿಂದ ಸುಲ್ತಾನನ ಆರೋಗ್ಯ ಸುಧಾರಣೆಗಾಗಿ ಪ್ರಾರ್ಥನೆ ಸಲ್ಲಿಸಿದರು. ತತ್‌ಪರಿಣಾಮವಾಗಿ ಅಲ್ಲಾಹನು ಯೂಸುಫನ ಆರೋಗ್ಯದಲ್ಲಿ ಸುಧಾರಣೆ ತಂದನು. ಅರಸನು ಪೂರ್ಣ ಆರೋಗ್ಯವಂತನಾದನು. ಆಗ ಅಲ್ಲಾಹನಿಗೆ ಕೃತಜ್ಞತಾಪೂರ್ವಕ ಪ್ರಣಾಮಗಳನ್ನು ಸಲ್ಲಿಸಿ, ತನ್ನ ರಾಜಭಂಡಾರದ ಬಾಗಿಲನ್ನು ತೆರೆದನು. ಮದೀನಾ ಮುನವ್ವರಾ, ಕರಬಲಾ ಮತ್ತು ನಜಬ್ ಅಷರಫ್ ಕ್ಷೇತ್ರಗಳ ಪಂಡಿತರು ಮತ್ತು ಪೈಗಂಬರರ ಕುಟುಂಬದವರು ಕೂಡ ಯೂಸುಫನ ಆರೋಗ್ಯಕ್ಕಾಗಿ ಪ್ರಾರ್ಥಿಸಿದರು. ಅವರಿಗೆಲ್ಲ ೨೦,೦೦೦ ಹುನ್ನಗಳ ಕಾಣ್ಕೆ ಕೊಟ್ಟನು. ಖ್ವಾಜಾ ಅಬ್ದುಲ್ ಅಜೀಜ ಹರ್‌ದೀಗೂ ೨೦,೦೦೦ ಹುನ್ನಗಳನ್ನು ನೀಡಿದನು. ಖ್ವಾಜಾ ಅಬ್ದುಲನು ಯೂಸುಫ ಆದಿಲ ಶಾಹನ ಜೊತೆ ಒಂದೇ ದೋಣಿಯಲ್ಲಿ ಜೊತೆಗೂಡಿ ಸಾವಾದಿಂದ ದಖ್ಖನಕ್ಕೆ ಬಂದಿದ್ದನು. ಯೂಸುಫ ಆದಿಲಶಾಹನು ಅಬ್ದುಲನಿಗೆ ತತ್‌ಕ್ಷಣ ಸಾವಾಗೆ ಹೋಗಲು ಆದೇಶ ನೀಡಿದನು. ಏಕೆಂದರೆ, ಆ ನಗರದಲ್ಲಿ ಒಂದು ಮಸೀದಿ ಮತ್ತು ಒಂದು ಮೀನಾರ ನಿರ್ಮಾಣವಾಗಬೇಕಾಗಿತ್ತು ಮತ್ತು ಅದೇ ನಗರದಲ್ಲಿ ಮಧ್ಯ ಭಾಗದಲ್ಲಿ ಒಂದು ಕಾಲುವೆ ತೋಡಿಸಬೇಕಾಗಿತ್ತು.

ತಿಮರಾಜನ ಜೊತೆ ಯುದ್ಧದ ಸಿದ್ಧತೆ :

ಯೂಸುಫ ಆದಿಲಶಾಹನು ಪ್ರಯಾಣ ಆರಂಭಿಸಬೇಕೆನ್ನುವಷ್ಟರಲ್ಲಿ, ಗುಪ್ತದಳದ ಪ್ರಮುಖರು ತಿಮರಾಜನು ನದಿಯನ್ನು ದಾಟಿ ಸುಲ್ತಾನ ಆದಿಲಶಾಹನ ಸೈನ್ಯದ ಪಡೆಯ ಹತ್ತಿರ ಯುದ್ಧ ಮಾಡುವ ಉದ್ದೇಶದಿಂದ ಬರುತ್ತಿರುವರೆಂದು ತಿಳಿಸಿದರು. ಈ ಸುದ್ದಿ ತಿಳಿಸದ ಕ್ಷಣ ಯೂಸುಫನು ತನ್ನ ಅಧಿಕಾರಿಗಳನ್ನೆಲ್ಲ ಒಂದೆಡೆ ಸೇರಲು ಆದೇಶಿಸಿದನು. ಆ ಪ್ರಕಾರ ಎಲ್ಲರೂ ಒಂದೆಡೆ ಸಂಘಟಿತರಾದರು. ರಣರಂಗದಲ್ಲಿ

ಅವರೆಲ್ಲ ಸೇರಿದಾಗ ಸೈನ್ಯದಲ್ಲಿ ಎಂಟು ಸಾವಿರ ಅಶ್ವಸವಾರರು ಮತ್ತು ಎರಡು ಸವಾರ ಆನೆಗಳು ಇವೆಯೆಂದು ಗೊತ್ತಾಯಿತು. ಯೂಸುಫ ಆದಿಲಶಾಹನು ಗಜ್ನಫರ ಬೇಗ ಆಖಾ, ಮಿರ್ಜಾ ಜಹಾಂಗೀರ, ಹೈದರ್ ಬೇಗ್, ದಾವೂದ ಖಾನ ಮತ್ತು ಇತರ ಬಹಾದ್ದೂರರನ್ನು ಕುರಿತು, " ಸದ್ಯಕ್ಕೆ ಸಿದ್ಧವಾಗಿರುವ ಪಡೆಯಿಂದ ವೈರಿಯನ್ನು ಎದುರಿಸಲು ಸಾಧ್ಯವಿದೆ", ಎಂದು ತನ್ನ ವಿಚಾರವನ್ನು ವ್ಯಕ್ತಪಡಿಸಿದನು. ಆ ಮಾತನ್ನು ಎಲ್ಲರೂ ಒಪ್ಪಿಕೊಂಡು ಅನುಮತಿಸಿದರು. ಎಲ್ಲರೂ ವೈರಿಯನ್ನು ಎದುರಿಸಲು ಹೊರಟರು.

ಯುದ್ಧದ ಆರಂಭ :

ಯೂಸುಫ ಆದಿಲಶಾಹನು ವೈರಿಯ ಸೈನ್ಯ ಪಡೆಯ ಕಿಂಚಿತ್ ದೂರದಲ್ಲಿ ತನ್ನ ಬಿಡಾರ ಸ್ಥಾಪಿಸಿದನು. ರಣರಂಗದಲ್ಲಿಯ ವ್ಯಾಪ್ತಿವಲಯಗಳನ್ನು ತನ್ನ ಸರದಾರರಲ್ಲಿ ಹಂಚಿಕೊಟ್ಟನು. ಏಕೆಂದರೆ ಕಂದಕಗಳನ್ನು ತೋಡಿಕೊಂಡು ರಕ್ಷಣೆ ಪಡೆಯಲು ಸುಲಭವಾಗುತ್ತದೆಂಬುದು ಯೂಸುಫನ ಅನುಭವವಾಗಿತ್ತು. ಎಲ್ಲ ಸೈನಿಕರು ಉತ್ಸಾಹ ಮತ್ತು ಉಲ್ಲಾಸಗಳಿಂದ ಬಹಳ ಎಚ್ಚರಿಕೆಯಿಂದ ಹನ್ನೆರಡು ದಿವಸಗಳವರೆಗೆ ಠಿಕಾಣಿ ಇದ್ದುಬಿಟ್ಟರು. ಯುದ್ಧ ಮಾಡುವ ಸಮಯ ಬಂದಾಗ ಸಹ ಆ ಎಲ್ಲ ಉತ್ಸಾಹ ಮತ್ತು ಉಲ್ಲಾಸಗಳಿಂದ ಶೌರ್ಯ ತೋರಿಸಲು ಸಾಧ್ಯ ಮಾಡಿಕೊಂಡಿದ್ದರು. ಆದರೆ, ಹಿಜರಿಶಕೆ ೮೯೮ರ ರಜ್ಜಬ ತಿಂಗಳ ಶನಿವಾರದಂದು ಉಭಯಪಕ್ಷಗಳಲ್ಲಿ ಯುದ್ಧ ಆರಂಭವಾದಾಗ, ಹಿಂದುಗಳನ್ನುಳಿದು ಮುಸಲ್ಮಾನ ಸೈನಿಕರೆಲ್ಲ ರಣರಂಗದಿಂದ ಮುಖ ತಿರುಗಿಸಿಕೊಳ್ಳತೊಡಗಿದರು.

ಮುಸಲ್ಮಾನ ಸೈನಿಕರಲ್ಲಿ ೫೦೦ ಸೈನಿಕರು ಹತ್ಯೆಗೆ ಈಡಾದರು. ಯೂಸಫ ಆದಿಲಶಾಹನು ತನ್ನ ಸೈನ್ಯದ ಹತಾಶೆಯ ಸ್ಥಿತಿಯನ್ನು ಗಮನಿಸಿ, ನಗಾರಿ ಬಾರಿಸಿ ಚೆದರಿಹೋದ ಎಲ್ಲ ಸೈನಿಕರನ್ನು ಒಂದೆಡೆ ಸೇರಿಸಲು ಆದೇಶ ನೀಡಿದನು. ಈ ಆದೇಶದಂತೆ ನಗಾರಿ ಬಾರಿಸಿದಾಗ, ಮೊತ್ತಮೊದಲಿಗೆ ಮಿರ್ಜಾ ಜಹಾಂಗೀರ ಖಮೀ, ೫೦೦ ಮೊಘಲ ಸವಾರರ ಜೊತೆ ಬಾದಶಹನ ಹತ್ತಿರ ಬಂದು ತಲುಪಿದನು. ಅನಂತರ ದಾವೂದಖಾನನು ೭೦೦೦ ಅಫಗಾನ ಮತ್ತು ರಾಜಪುತ್ರ ಸೈನ್ಯದೊಡನೆ ಬಂದು ತಲುಪಿದನು. ಈ ಸೈನ್ಯವು ಯೂಸುಫ ಆದಿಲಶಾಹನ ಸಮೀಪಕ್ಕೆ ಬಂದು ಸೇರುವುದರಿಂದ ಆತನಿಗೆ ತುಂಬ ನೆಮ್ಮದಿಯಾಗಿ ಮುಂದಿನ ಯೋಜನೆಗಳನ್ನು ಕಾರ್ಯರೂಪಕ್ಕೆ ತರುವಲ್ಲಿ ನಿರತನಾಗಲು ಸಾಧ್ಯವಾಯಿತು. ಯೂಸುಫನು ಇನ್ನೂ ಯೋಚಿಸುತ್ತಲೇ ಇದ್ದಾಗ, ಸಲಹೆಗಳನ್ನು ನೀಡುವ ಸರದಾರ ಸೋಯೆಚೆಕ್ ಹತ್ತಿರ ಬಂದು ಹೀಗೆ ಹೇಳಿದನು.

"ನಾನು ಯುದ್ಧದ ಸಮಯದಲ್ಲಿ ವೈರಿಗಳ ಕೈಗೆ ಸಿಕ್ಕಿಬಿದ್ದೆನು. ಅವರು ನನ್ನ

ಎಲ್ಲ ಸಾಮಾನು ಸರಂಜಾಮುಗಳನ್ನು, ಕುದುರೆ ಹಾಗೂ ಖಡ್ಗಗಳನ್ನು ಕಸಿದುಕೊಂಡರು. ನಾನು ಕಾಲ್ನಡಿಗೆಯಲ್ಲಿ ಅತ್ತ ಇತ್ತ ಅಲೆದಾಡುತ್ತಿದ್ದೆನು. ಒಂದು ಕ್ಷಣದಲ್ಲಿ ನನ್ನ ಬಳಿ ವೈರಿ ಸೈನಿಕನು ತನ್ನ ಕುದುರೆಯ ಮೇಲಿಂದ ಕೆಳಗೆ ಬಿದ್ದನು. ತಕ್ಷಣ ನಾನು ಆ ಕುದುರೆಯನ್ನು ನನ್ನ ವಶಕ್ಕೆ ತೆಗೆದುಕೊಂಡು ಅದನ್ನೇರಿ ತಮ್ಮ ಹತ್ತಿರ ಬಂದು ತಲುಪಿದ್ದೇನೆ. ನಾನೇನು ನನ್ನ ಕಣ್ಣುಗಳಿಂದ ನೋಡಿದ್ದೇನೆಯೋ ಅದನ್ನೆಲ್ಲ ಇಲ್ಲಿ ತಮ್ಮ ಗಮನಕ್ಕೆ ತರುತ್ತಿದ್ದೇನೆ: ವೈರಿಗಳು ತಮ್ಮಷ್ಟಕ್ಕೆ ತಾವು ಈ ಯುದ್ಧದಲ್ಲಿ ಜಯ ಸಂಪಾದಿಸಿರುವುದಾಗಿ ಭ್ರಮೆಯಲ್ಲಿ ತಲ್ಲೀನರಾಗಿದ್ದಾರೆ. ಈ ಸಮಯದ ಲಾಭವನ್ನು ತೆಗೆದುಕೊಂಡು ಪರಮಾತ್ಮನ ಮೇಲೆ ವಿಶ್ವಾಸವಿಟ್ಟು ಇನ್ನೊಂದು ಬಾರಿ ದಾಳಿ ಮಾಡಬೇಕು. ಇದರಲ್ಲಿ ನನಗೆ ಈ ಸಲ ನಾವು ಖಂಡಿತವಾಗಿ ಜಯವನ್ನು ಗಳಿಸುತ್ತೇವೆ ಎಂಬ ಪೂರ್ಣ ವಿಶ್ವಾಸವಿದೆ."

ತಿಮರಾಜನ ಸೋಲು :

ಯೂಸುಫ ಆದಿಲಶಾಹನು ಸೋಯೆಚೆಕ್‌ನ ಮಾತುಗಳ ಮೇಲೆ ಬಹಳ ಲಕ್ಷ್ಯ ಕೊಟ್ಟು ಆಲಿಸಿದನು. ಆ ಮಾತುಗಳನ್ನು ನಂಬಿ ೩೫೦೦ ಪರಿಣಿತ ಸರದಾರರ ಸಹಿತ ವೈರಿಯ ಮೇಲೆ ದಾಳಿ ಮಾಡಿದನು. ತಿಮರಾಜನ ಸೈನಿಕರು ಕೊಳ್ಳೆ ಹೊಡೆಯುವ ಗಡಿಬಿಡಿಯಲ್ಲಿದ್ದರು. ಅವರನ್ನೆಲ್ಲ ಒಂದೆಡೆ ಸೇರಿಸುವುದಕ್ಕೆ ಅವನಿಗೆ ಸಮಯವೇ ಸಿಗಲಿಲ್ಲ. ಆತನು ಏಳೆಂಟು ಸಾವಿರ ಸವಾರರು ಮತ್ತು ಕೆಲವು ಕಾಲಾಳು ಸೈನಿಕರು, ಬಂದೂಕುಧಾರಿಗಳು ಮತ್ತು ೩೦೦ ಆನೆಗಳ ಸೈನ್ಯದೊಡನೆ ಯೂಸುಫ ಆದಿಲಶಾಹನ ಎದುರು ಯುದ್ಧಕ್ಕೆ ಬಂದನು. ಎರಡೂ ನಿಟ್ಟಿನ ಸೈನ್ಯದಲ್ಲಿ ಹೋರಾಟವು ಆರಂಭವಾಯಿತು. ಯೂಸುಫ ಆದಿಲಶಾಹನು ಮನಃತೃಪ್ತಿಯಾಗಿ ಶೌರ್ಯವನ್ನು ತೋರಿಸಿದನು. ಮುಸಲ್ಮಾನ ಸೈನಿಕರೂ ವೀರತನದಿಂದ ಹೋರಾಡಿದರು. ಹಿಂದುಗಳೂ ಏಕಮನಸ್ಸಿನಿಂದ ರಣರಂಗದಲ್ಲಿ ಸೇರಿ ಹೋರಾಡಬೇಕೆನ್ನುವಷ್ಟರಲ್ಲಿಯೇ ಯೂಸುಫ ಆದಿಲಶಾಹನಿಗೆ ವಿಜಯಮಾಲೆಯು ಸಂದಿತು.

ಈ ಯುದ್ಧದಲ್ಲಿ ಮುಸಲ್ಮಾನರ ಕೈಗೆ ಬಹಳಷ್ಟು ಸಂಪತ್ತು ದೊರೆಯಿತು. ಎಂದರೆ ೨೦೦ ಆನೆಗಳು, ೧೦೦ ಕುದುರೆಗಳು, ೩೦೦೦ ಹೋನ ವಜ್ರ ವೈಡೂರ್ಯ ಮತ್ತು ಅನೇಕ ಬಗೆಯ ಬಹು ಬೆಲೆಬಾಳುವ ಸಾಮಾನುಗಳು ದೊರೆತವು. ರಾಜಕುಮಾರನು ಗಾಬರಿಗೊಂಡು ದಿಗಿಲಿನಿಂದ ವಿಜಯನಗರದತ್ತ ಸಾಗಿದನು. ರಣರಂಗದಲ್ಲಿ ಈತನಿಗೆ ತೀವ್ರ ಗಾಯವಾಗಿತ್ತು. ಈ ಗಾಯದಿಂದ ಎದ್ದೇಳಲಾಗಲಿಲ್ಲ. ದಾರಿಯಲ್ಲಿಯೇ ತೀರಿಕೊಂಡನು. ತಿಮರಾಜನು ವಿಜಯನಗರವನ್ನು ಸ್ವಾಧೀನಪಡಿಸಿಕೊಂಡನು. ಅಲ್ಲಿಯ ಪ್ರಮುಖ ಶ್ರೀಮಂತರು ಈತನ ಆಡಳಿತವನ್ನು ಒಪ್ಪಲಿಲ್ಲ, ಈತನ ವಿರುದ್ಧ ತೀಕ್ಷ್ಣವಾಗಿ ಬಂಡಾಯದ ಬಾವುಟವನ್ನು ಹಾರಿಸಿದರು.

ಯೂಸುಫ ಆದಿಲಶಾಹನು ವಿಜಯನಗರದ ಬಂಡಾಯದ ಸ್ಥಿತಿಯ ಪೂರ್ಣ ಪೂರ್ಣ ಲಾಭವನ್ನು ಪಡೆದನು. ಸ್ವಲ್ಪೇ ಸಮಯದಲ್ಲಿ ರಾಯಚೂರು ಮತ್ತು ಮುದಗಲ್ ಕೋಟೆಗಳನ್ನು ಹಿಂದುಗಳ ಸ್ವಾಧೀನದಿಂದ ವಶಪಡಿಸಿಕೊಂಡನು. ಈ ಕೋಟೆಗಳನ್ನು ಗೆದ್ದ ಮೇಲೆ ವಿಜಯೋಲ್ಲಾಸದ ವೈಭವದಿಂದ ತಿರುಗಿ ಬಂದನು. ಲಖನೌದ ಪ್ರಸಿದ್ಧ ಇತಿಹಾಸ ಲೇಖಕನಾದ ಫರಿಸ್ತಾನು ಇಸ್ಮಾಯಿಲ ಆದಿಲಶಾಹನ ಸಹಾಯಕನಾಗಿದ್ದ ಪೂಜ್ಯ ಅಮೀರ ಶಾಹ ಮೀರ ದಸ್ತೂರಖಾನನಿಂದ ತಿಳಿದು ಬರುವುದೇನೆಂದರೆ, ಯೂಸುಫ ಆದಿಲಶಾಹನು ವಿಜಯನಗರದ ರಾಯನಿಂದ ಸೋಲು ಅನುಭವಿಸಿದಾಗ ಇವನು ರಣರಂಗದ ಸಮೀಪದಲ್ಲಿ ಒಂದು ಎತ್ತರದ ಪ್ರದೇಶವನ್ನು ಏರಿ, ಯುದ್ಧದ ಘೋಷಣೆಯನ್ನು ಮಾಡಿದನು. ನಗಾರಿಯ ಧ್ವನಿಯನ್ನು ಕೇಳುತ್ತಿದ್ದಂತೆ ೩೦೦೦ ತುರ್ಕಿ ಮತ್ತು ಬೇರೆ ಬೇರೆ ಸವಾರರು ಬಾದಶಹನ ಹತ್ತಿರ ಬಂದು ಸೇರಿದರು. ಇದಾದನಂತರ ಯೂಸುಫ ಆದಿಲಶಾಹನು ಒಂದು ಉಪಾಯ ಮಾಡಿದನು. ತಿಮರಾಜನಿಗೆ ಒಂದು ಅನುಸೂಚನೆಯನ್ನು ಕಳುಹಿಸಿದನು. ಆ ಅನುಸೂಚನೆಯನ್ನು ಹೊತ್ತು ಹೋದವನು ಬಿಜಾಪುರದ ಗೌರವಾನ್ವಿತ ಪ್ರಮುಖನಾಗಿದ್ದನು. ಅದರಲ್ಲಿರುವ ವಿಷಯ ಹೀಗಿತ್ತು: ತಾನು ಮಿತಿಮೀರಿದ ಅಸ್ಥಿರತೆ ಹಾಗೂ ತನ್ನ ಅಸಹಾಯಕತೆಯಿಂದಾಗಿ ತುಂಬ ಹೌಹಾರಿದ್ದೇನೆ, ಆದ್ದರಿಂದ ತನ್ನ ತಪ್ಪನ್ನು ಕ್ಷಮಿಸುವುದಾದರೆ, ತನ್ನನ್ನು ತಮ್ಮ ಅಧೀನದಲ್ಲಿ ತೆಗೆದುಕೊಂಡು ಉಳಿದ ಸಾಮಂತರಲ್ಲಿ ತನ್ನನ್ನೂ ಒಬ್ಬನೆಂದು ಗಣಿಸಿ ಒಂದು ಪ್ರಾಂತವನ್ನು ತನ್ನ ಆಡಳಿತದ ಹಿಡಿತದಲ್ಲಿ ಕೊಟ್ಟರೆ, ತಾನು ಜನ್ಮಪರ್ಯಂತ ಆಜ್ಞಾಧಾರಕನಾಗಿ ಇರುತ್ತೇನೆ ಎಂಬುದಾಗಿ ಆ ವಿವರ ಇತ್ತು. ತಕ್ಷಣ ತಿಮರಾಜನು ಯೂಸುಫ ಆದಿಲಶಾಹನ ಈ ಕಣ್ಮಸಕಿನ ಮೋಸಕ್ಕೆ ತುತ್ತಾಗಿ ಆತನ ವಿನಂತಿಯನ್ನು ಒಪ್ಪಿಕೊಂಡನು. ಒಪ್ಪಂದದಂತೆ ಆಜ್ಞೆಯನ್ನು ಅನುಷ್ಠಾನಕ್ಕೆ ತರುತ್ತಾ, ರಾಜಕುಮಾರನನ್ನು ಜೊತೆಯಲ್ಲಿ ಕರೆದುಕೊಂಡು ೩೦೦೦ ಸೈನಿಕರೊಡನೆ ಬೀಳ್ಕೊಂಡನು. ಆಗ ಅವನು ನದಿಯ ದಂಡೆಯ ಒಂದು ಸ್ಥಳದಲ್ಲಿ ಠಿಕಾಣಿ ಹಾಕಿದನು.

ಯೂಸುಫ ಆದಿಲಶಾಹನು ೪೦೦ ನುರಿತ ಯುದ್ಧಾನುಭವಿ ಸವಾರರನ್ನು ಜೊತೆಗೂಡಿಸಿಕೊಂಡು ತಿಮರಾಜನನ್ನು ಭೆಟ್ಟಿಯಾಗಲು ಹೋದನು. ಅಲ್ಲಿ ಆತನೊಡನೆ ಒಪ್ಪಂದ ಮಾಡಿಕೊಂಡನು, ಸ್ನೇಹದಿಂದ ಮಾತನಾಡಿದನು. ಮತ್ತೆ ಸ್ವಲ್ಪೇ ಹೊತ್ತು ಆತನ ಹತ್ತಿ ಕುಳಿತುಕೊಂಡು ಎದ್ದವನೇ ಯುದ್ಧಾರಂಭದ ಘೋಷಣೆಯ ನಗಾರಿಯನ್ನು ಬಾರಿಸಿ ಯುದ್ಧವನ್ನು ಸಾರಿದನು. ಆ ಘೋಷಣೆಯನ್ನು ಕೇಳಿ ಸೈನಿಕರು ತಮ್ಮ ತಮ್ಮ ಖಡ್ಗಗಳನ್ನು ಒರೆಯಿಂದ ತೆಗೆದು ಸೈನ್ಯದ ಮೇಲೆ ಎರಗಿದರು. ತಿಮರಾಜನಂತೆ ವಿಜಯನಗರದ ಬೇರೆ ಪ್ರಮುಖ ಸರದಾರರು ಕೂಡಾ ಯೂಸುಫ ಆದಿಲಶಾಹನ ಉದ್ದೇಶದ ನಡೆ ಹೀಗಿರುತ್ತದೆಂದು ಭಾವಿಸಿರಲಿಲ್ಲ. ಈ ಸರದಾರರು ತಿಮರಾಜ

ಮತ್ತು ರಾಜಕುಮಾರನನ್ನು ಅಲ್ಲಿಂದ ಓಡಿಹೋಗಲು ಸಲಹೆ ನೀಡಿದರು. ಅವರೆಲ್ಲ ಸ್ವತಃ ಕಾಳಗದಲ್ಲಿ ತೊಡಗಿದರು. ಏಕೆಂದರೆ, ಪ್ರತಿಯೊಬ್ಬ ಸರದಾರನ ಜೊತೆಯಲ್ಲಿ ಎಣಿಕೆಯಲ್ಲಿ ಮಾತ್ರ ಸೈನಿಕರು ಇದ್ದರು. ಆದ್ದರಿಂದ ಯೂಸುಫ ಆದಿಲಶಾಹನ ಸೈನ್ಯದ ತೂಕ ಭಾರಿ ಇತ್ತು. ಅವನು ವೈರಿಯ ೭೦ ಸರದಾರರ ರುಂಡ ಹಾರಿಸಿದನು. ಹೀಗೆ ಯೂಸುಫ ಆದಿಲಶಾಹನ ಸೈನಿಕರು ಧೈರ್ಯ ಸ್ಥೈರ್ಯ ದಿಟ್ಟತನಗಳಿಂದ ಅಭಿಮಾನ ಮೂಡಿಸುವಂತೆ ಹೋರಾಡಿ ಗೆಲವು ತಂದು ಕೊಟ್ಟರು.

ಮುದಗಲ್ ಮತ್ತು ರಾಯಚೂರು ವಿಜಯ :

ಹಿಂದುಗಳ ಸೋಲಿನಿಂದ ಅವರ ಸಕಲ ಸಾಮಗ್ರಿಗಳು ಆನೆ, ಕುದುರೆಗಳ ದಂಡು ಮೊದಲಾದವೆಲ್ಲ ಯೂಸುಫ ಆದಿಲಶಾಹನ ವಶಕ್ಕೆ ಬಂದವು. ಅವನು ಅದೇ ದಿವಸ ಸೊಯೆಚೆಕ್‌ನನ್ನು ಉನ್ನತ ಸ್ಥಾನಮಾನಗಳಿಂದ ಸನ್ಮಾನಿಸುತ್ತ ಬಹಾದ್ದೂರ ಖಾನ್ ಎಂಬ ಬಿರುದನ್ನು ಕೊಟ್ಟನು ಮತ್ತು ೫೦ ಆನೆಗಳ ಸಹಿತ ಒಂದು ಲಕ್ಷ ಹೋನು ನೀಡಿದನು. ಆತನನ್ನು ರಾಯಚೂರು ಮತ್ತು ಮುದಗಲ್ ಕೋಟೆಗಳ ಕಡೆಗೆ ಕಳುಹಿಸಿದನು. ಆಶಾವಾದಿಯಾದ ಆತನ ಉತ್ಸಾಹದಿಂದ ೪೦ ದಿವಸಗಳಲ್ಲಿ ಆ ಕೋಟೆಗಳನ್ನು ವಶಪಡಿಸಿಕೊಂಡು ಗೆಲುವು ಸಾಧಿಸಿದನು. ಯೂಸುಫ ಆದಿಲಶಾಹನು ಆ ಎಲ್ಲ ಘಟನೆಗಳ ನಂತರ ರಾಜ್ಯಕ್ಕೆ ಮರಳಿದನು.

ಬಹಾದ್ದೂರ ಗಿಲಾನಿಯ ಹೋರಾಟ :

ಯೂಸುಫ ಆದಿಲಶಾಹನು ಕೊಳ್ಳೆ ಹೊಡೆದುಕೊಂಡು ವಶಪಡಿಸಿಕೊಂಡ ಸಾಮಗ್ರಿಗಳಲ್ಲಿ ಕೆಲವು ವಸ್ತುಗಳನ್ನು, ಬಂಗಾರದ ಆಭರಣಗಳ ಚೂರುಗಳನ್ನು, ೪ ಕುದುರೆಗಳನ್ನು, ಇನ್ನೂ ಅನೇಕ ವಸ್ತುಗಳನ್ನು ಸುಲ್ತಾನ ಮಹಮ್ಮೂದ ಶಾಹನ ಸೇವೆಯಲ್ಲಿ ಕಳುಹಿಸಿದನು. ವಿಜಯನಗರದ ವಿಜಯದ ನಂತರ, ಯೂಸುಫ ಆದಿಲಶಾಹನು ಬಹಾದ್ದೂರ ಗಿಲಾನಿಯನ್ನು ಭಯಭೀತಗೊಳಿಸಿ ಜಮಖಂಡಿ ಕೋಟೆಯನ್ನು ವಶಪಡಿಸಿಕೊಳ್ಳುವ ಇಚ್ಛೆ ಮಾಡಿದನು. ಯೂಸುಫ ಆದಿಲಶಾಹನು ತನ್ನ ಉದ್ದೇಶಿತ ಗುರಿಯನ್ನು ಸಾಧಿಸಲು ಹೊರಡುವ ಸಂದರ್ಭದಲ್ಲಿ ಮಹಮ್ಮೂದ ಶಾಹ ಗುಜರಾತಿಯ ಒಬ್ಬ ಹೆಸರುವಾಸಿಯಾದ ರಾಯಭಾರಿ, ಬಹಾದ್ದೂರ ಗಿಲಾನಿಯ ಕುರಿತು ದೂರು ನೀಡಲು ಮಹಮ್ಮೂದ ಶಾಹ ಬಹಮನಿಯ ಮಹಾದ್ವಾರದಲ್ಲಿ ಉಪಸ್ಥಿತನಾದನು. ಆಗ ದೂರು ಏನಿತ್ತೆಂದರೆ, ಗುಜರಾತಿನ ಒಂದು ಹಡಗು ಮಕ್ಕಾ ಮೌಜುಮಾದ ಕಡೆಗೆ ಹೊರಟದ್ದನ್ನು, ಬಹಾದ್ದೂರ ಗಿಲಾನಿಯ ಅಧಿಕಾರಿಗಳು ಲೂಟಿ ಮಾಡಿಬಿಟ್ಟರು ಎಂಬುದು.

ಮಹಮ್ಮೂದ ಶಾಹ ಬಹಮನಿಯ ನೆರವು :

ಮಹಮ್ಮೂದ ಶಾಹ ಗುಜರಾತಿಯು ತನ್ನ ಜೊತೆ ಹೆಸರಿನ ಬಹಮನಿ ಅರಸರಿಗೆ,

"ಒಂದು ವೇಳೆ ನೀವು ಆ ಕೊಳ್ಳೆ ಹೊಡೆದವರನ್ನು ಬಂಧಿಸಲಾಗದಿದ್ದರೆ, ನಾವು ಎಲ್ಲರಿಗೂ ವಿನಂತಿಸುವುದೇನೆಂದರೆ, ನಾವು ನಮ್ಮ ಒಬ್ಬ ನಿಪುಣ ಸರದಾರನನ್ನು ಕಳುಹಿಸಿ ಕೊಳ್ಳೆ ಹೊಡೆದವರ ಹೆಸರೂ ಉಳಿಯದಂತೆ ಅವರನ್ನು ಅಳಿಸಿ ಬಿಡುತ್ತೇವೆ" ಎಂಬ ಸಂದೇಶ ಕಳುಹಿಸಿದನು. ಮಹಮ್ಮೂದ ಬಹಮನಿಯು ಕಾಸೀಮ ಬರೀದ ತುರ್ಕನ ಸಲಹೆಯ ಪ್ರಕಾರ ಅಮೀರ ಅಬ್ದುಲ್ ಮುಲ್ಕ ಶಿಸ್ತ್ರೀಯನ್ನು ಯೂಸುಫ ಆದಿಲಶಾಹನ ಹತ್ತಿರ ಕಳುಹಿಸಲಾಯಿತು. ಮತ್ತು ಬಹಾದ್ದೂರ ಗಿಲಾನಿಯು ಗಾಬರಿಗೊಳಿಸುತ್ತಿರುವುದರಿಂದ ಸಹಕಾರಕ್ಕಾಗಿ ವಿನಂತಿಸಲಾಯಿತು. ಯೂಸುಫ ಆದಿಲಶಾಹನು ಅದನ್ನೇ ಅಪೇಕ್ಷಿಸುತ್ತಿದ್ದನು. ತಕ್ಷಣ ಆ ಮಾತಿಗೆ ಒಪ್ಪಿಗೆ ನೀಡಿದನು. ಈ ನಿರ್ಣಯದ ಹಿಂದೆ ಎರಡು ಬಗೆಯ ಲಾಭಗಳಿದ್ದವು: ಮೊದಲನೆಯದು ಬಹಾದ್ದೂರ ಗಿಲಾನಿಯನ್ನು ಅಂತ್ಯಗೊಳಿಸುವುದು, ಎರಡನೆಯದು ಮಹಮದ್ ಬಹಮನಿಯನ್ನು ತನ್ನ ಕೃಪಾಪಾತ್ರಕ್ಕೆ ಒಳಗಾಗಿಸಿಕೊಂಡು ತನ್ನ ಅಂಕಿತದಲ್ಲಿ ಇಟ್ಟುಕೊಳ್ಳಬೇಕಾದದ್ದು. ಯೂಸುಫ ಆದಿಲಶಾಹನು, ೫೦,೦೦೦ ನುರಿತ ಸವಾರರನ್ನು ಸರದಾರ ಕಮಾಲಖಾನ ದಖ್ಖನಿಯ ನೇತೃತ್ವದಲ್ಲಿ ಮಹಮ್ಮೂದ ಬಹಮನಿಯ ಸಹಾಯಕ್ಕೆ ಕಳುಹಿಸಿಬಿಟ್ಟನು.

ಬಹಾದ್ದೂರ ಗಿಲಾನಿಯ ಪಲಾಯನ :

ಬಹಾದ್ದೂರ ಗಿಲಾನಿಯು ಯೂಸುಫ ಆದಿಲಶಾಹನ ಇಚ್ಛೆಗಳನ್ನು ತಿಳಿದವನಾಗಿದ್ದನು. ಆದುದರಿಂದ ಗಿಲಾನಿಯು ಜಮಖಂಡಿಯ ಹತ್ತಿರದಲ್ಲಿ, ತನ್ನ ಸೈನ್ಯದೊಡನೆ ಒಂದು ಸ್ಥಳದಲ್ಲಿ ಕಾದು ಕುಳಿತನು. ಮಹಮೂದ ಬಹಮನಿಯು ನದಿಯನ್ನು ದಾಟಿ ಅವನ ಮೇಲೆ ದಾಳಿ ಮಾಡಿದನು. ಬಹಾದ್ದೂರ ಗಿಲಾನಿಗೆ ಆತನನ್ನು ಎದುರಿಸುವುದು ಕಷ್ಟವಾಗಿ, ನೀಲಗವಾನದತ್ತ ಓಡಿಹೋದನು. ಮಹಮ್ಮೂದನು ಜಮಖಂಡಿಯ ಕೋಟೆಯನ್ನು ಪರಿವೀಕ್ಷಿಸಿ ಮುತ್ತಿಗೆ ಹಾಕಿದನು. ಮೂರು ನಾಲ್ಕು ತಿಂಗಳು ಗತಿಸಿದವು, ಕೋಟೆಯೊಳಗಿನ ನಿವಾಸಿಗಳು ಬೇಸತ್ತು ಶರಣು ಬಂದರು. ಮತ್ತು ಈ ರೀತಿ ಕೋಟೆಯು ಬಹಮನಿ ಆಡಳಿತಕ್ಕೆ ವಶಪಟ್ಟಿತು.

ಜಮಖಂಡಿಯಲ್ಲಿ ಆದಿಲಶಾಹಿಯ ಆಡಳಿತ :

ಮಹಮೂದ ಬಹಮನಿಯು ಈ ಕೋಟೆಯ ಹೊಣೆಯನ್ನು ಖುತುಬುಲ್ ಮುಲ್ಕ ಖ್ವಾಜಾ ಜಹಾನ ಗೆ ಒಪ್ಪಿಸುವ ಯೋಚನೆಯನ್ನು ಮಾಡಿದನು. ಆದರೆ ಕಾಸೀಮ ಬರೀದನು ಬಾದಶಹನ ಈ ಯೋಚನೆಯನ್ನು ಒಪ್ಪದೆ, "ಈ ಕೋಟೆಯು ಯಾವಾಗಲೂ ಯೂಸುಫ ಆದಿಲಶಾಹನ ಅಧೀನದಲ್ಲಿಯೇ ಇರುತ್ತ ಬಂದಿದೆ, ಅರಸನನ್ನು ಸಂತುಷ್ಟನನ್ನಾಗಿಡಲು ಈ ಕೋಟೆಯನ್ನು ಯೂಸುಫ ಆದಿಲಶಾಹನ ಅಧಿಪತ್ಯಕ್ಕೆ ಕೊಡುವುದು ಉಚಿತ" ಎಂದು ವಿನಂತಿ ಮಾಡಿದನು. ಮಹಮೂದ

ಶಾಹನು ಖಾಸಿಮ ಬರೀದನ ಸಲಹೆಯನ್ನು ಒಪ್ಪಿ ಜಮಖಂಡಿಯ ಕೋಟೆಯ ಉಸ್ತುವಾರಿಯನ್ನು ಕಮಾಲ್‌ಖಾನ್ ದಖ್ಖನಿಗೆ ವಹಿಸಿಕೊಟ್ಟನು.

ಬಹಾದ್ದೂರ ಗಿಲಾನಿಯ ಸಾವು :

ಬಹಾದ್ದೂರ ಗಿಲಾನಿಯು ತನಗೆ ಘೋರ ಸಂಕಷ್ಟ ಬರುವುದನ್ನು ಊಹಿಸಿಕೊಂಡಿದ್ದನು. ಯೂಸುಫ ಆದಿಲಶಾಹನು ಬೇರೆಡೆಯಿಂದ ತನ್ನ ಇಲಾಖೆಯ ಮೇಲೆ ಯಾವ ಸಮಯದಲ್ಲಾದರೂ ಆಕ್ರಮಣ ಮಾಡಬಹುದೆಂಬುದೇ ಆ ಊಹೆ. ಇದಾಗಬಾರದೆಂದು ಕಲಂಕರ ಗ್ರಾಮದಲ್ಲಿ ಬೀಡುಬಿಟ್ಟನು. ಮಹಮೂದ ಬಹಮನಿಯು ತನ್ನ ಮೇಲೆ ಸೇಡು ತೀರಿಸಿಕೊಳ್ಳಲು ಬರಲಿದ್ದಾನೆಂಬುದು ಗೊತ್ತಾದಾಗ, ಕಲಹರ ಮತ್ತು ಪುನಕಾದ ಕಡೆಗೆ ಹೊರಟುಹೋದನು. ಮತ್ತು ಕಾಳಗದ ಸಿದ್ಧತೆಗೆ ತೊಡಗಿದನು. ಮಹಮೂದ ಶಾಹ, ಬಹಾದ್ದೂರ ಗಿಲಾನಿಯ ರಾಜಧಾನಿಗೆ ತಲುಪಿ ಅಲ್ಲಿ ಕಾಳಗವನ್ನು ಆರಂಭಿಸಿದನು. ಗಿಲಾನಿಯ ಬಹಳಷ್ಟು ಸರದಾರರು ಮಹಮೂದ ಶಾಹನಿಗೆ ಅಧೀನರಾಗಿ ಆತನ ಅರಸೊತ್ತಿಗೆಯನ್ನು ಒಪ್ಪಿಕೊಂಡರು. ಅವರು ತಮ್ಮ ರಾಜನಿಂದ ದೂರಸರಿದು ಮಹಮೂದನ ಜೊತೆಯಾದರು. ಇದೇ ಸಂದರ್ಭದಲ್ಲಿ ಹನ್ನೆರಡು ವರ್ಷಗಳಿಂದ ತನ್ನ ಶೌರ್ಯದ ಬಹಾದ್ದೂರಿಯ ಹಲಗೆಯನ್ನು ಬಾರಿಸುತ್ತಿದ್ದುದು ನಿಂತಿತು. ಅರ್ಥಾತ್ ಆತನು ಮೃತಪಟ್ಟನು.

ಬಿಜಾಪುರನಲ್ಲಿ ಮಹಮೂದ ಬಹಮನಿಯ ಆಗಮನ :

ಮಹಮೂದ ಬಹಮನಿಯು ನದಿಯ ದಂಡೆಗುಂಟ ಪ್ರವಾಸಮಾಡುತ್ತ ಬಿಜಾಪುರದ ಸೀಮೆಯೊಳಗೆ ಬಂದನು. ಯೂಸುಫ ಆದಿಲಶಾಹನು ಗಜ್ನಫರ್ ಬೇಗ್ ಮತ್ತು ಇನ್ನಿತರ ಸರದಾರರ ಗುಂಪನ್ನು ಮಹಮೂದ ಕಡೆ ಕಳುಹಿಸಿ, ಆತನನ್ನು ಬಿಜಾಪುರಕ್ಕೆ ಬರಲು ವಿನಂತಿಸಿದನು. ಮಹಮೂದನು ಆ ವಿನಂತಿಯನ್ನು ಮನ್ನಿಸಿದನು. ಅವನು ಖಾಸಿಮ ಬರೀದನ ಸಲಹೆಯಂತೆ ತನ್ನ ಸೈನ್ಯವನ್ನು ಅಹಮ್ಮದಾಬಾದ ಬೀದರ ಕಡೆಗೆ ಕಳುಹಿಸಿದನು. ಯೂಸುಫ ಆದಿಲಶಾಹನು ಮಹಮೂದನ ಸ್ವಾಗತ ಮಾಡಿ ಅತ್ಯಂತ ಗೌರವ ಮರ್ಯಾದೆಗಳಿಂದ ನಗರಕ್ಕೆ ಕರೆತಂದನು.

ಖಾಸಿಮ ಬರೀದನ ದೂರು :

ಮಹಮೂದ ಶಾಹನು ಅದೇ ಕಾಲದಲ್ಲಿ ಸಿದ್ಧವಾದ ಅರಕ್ ಕೋಟೆಯಲ್ಲಿ ಬೀಡಾರ ಬಿಟ್ಟನು. ಯೂಸುಫ ಆದಿಲಶಾಹನು ಹತ್ತು ದಿನಗಳವರೆಗೆ ಮಹಮೂದನ ಅತಿಥಿಸತ್ಕಾರವನ್ನು ರಾಜಗೌರವದೊಡನೆ ಮಾಡಿದನು ಮತ್ತು ಆತನಿಗೆ ಕಾಣಿಕೆಯಾಗಿ ಇಪ್ಪತ್ತು ಆನೆ, ಐವತ್ತು ಕುದುರೆ ಅಲ್ಲದೆ ಬಹಳಷ್ಟು ಬೆಲೆಬಾಳುವ ಅನೇಕ ವಸ್ತುಗಳನ್ನು ನೀಡಿದನು. ಮಹಮೂದನು ಕೇವಲ ಒಂದು ಆನೆಯನ್ನು ಸ್ವೀಕರಿಸಿದನು ಮತ್ತು

ಉಳಿದೆಲ್ಲ ವಸ್ತುಗಳನ್ನು ಮರಳಿಸಿದನು. ಮಹಮೂದನು ಯೂಸುಫ ಆದಿಲಶಾಹನಿಗೆ ಗೌಪ್ಯ ರೀತಿಯಲ್ಲಿ ಸಂದೇಶ ಕಳಿಸಿದನು. ಅದು ಹೀಗಿದ್ದಿತು : "ನಾನು ನಿಮ್ಮ ಕಾಣ್ಕೆಗಳನ್ನು ಒಪ್ಪಿಸಿಕೊಳ್ಳುತ್ತೇನೆ. ಆದರೆ ಇವುಗಳನ್ನು ನನ್ನ ಜೊತೆಯಲ್ಲಿ ತೆಗೆದುಕೊಂಡು ಹೋಗುವುದಾಗುವುದಿಲ್ಲ. ನನಗೆ ಗೊತ್ತಿದೆ, ನಾನು ಬೀದರ ತಲುಪಿದ ಕೂಡಲೇ ಈ ಎಲ್ಲ ಕಾಣ್ಕೆಗಳ ಮೇಲೆ ಖಾಸಿಮ ಬರೀದನು ತನ್ನ ಒಡೆತನವನ್ನು ಸಾಧಿಸುತ್ತಾನೆ. ಆದ್ದರಿಂದ ಈ ಎಲ್ಲ ಕಾಣ್ಕೆಗಳು ನಿಮ್ಮ ಹತ್ತಿರವೇ ಇರುವುದು ಸುರಕ್ಷಿತ. ಮತ್ತು ಖಾಸಿಮ ಬರೀದನಿಂದ ನನ್ನನ್ನು ಬಿಡುಗಡೆ ಮಾಡಿಸಲು ಪ್ರಯತ್ನಿಸಬೇಕು. ಅನಂತರ ನಾನು ಈ ಕಾಣ್ಕೆಗಳನ್ನು ತೆಗೆದುಕೊಂಡು ಹೋಗುತ್ತೇನೆ" ಎಂದು ತಿಳಿಸಿದ್ದನು.

ಮಹಮೂದ ಶಾಹನ ಪ್ರಯಾಣ :

ಯೂಸುಫ ಆದಿಲಶಾಹನಿಗೆ ಈ ಎಲ್ಲ ವಿಷಯಗಳು ವಿದಿತವಾದ ಕೂಡಲೇ, ಖಾಸಿಮ ಬರೀದನು ಅದೇ ಇಲಾಖೆಯಲ್ಲಿದ್ದುದರಿಂದ ಆತನನ್ನು ಪೂರ್ಣ ಮುಗಿಸಬಹುದಾಗಿತ್ತು. ಆದರೆ ರಾಜನೀತಿಯಲ್ಲಿ ಆ ರೀತಿ ಮಾಡಲು ಸರಿಯೆನ್ನಿಸಲಿಲ್ಲ. ಆಗ ಮಹಮೂದ ಶಾಹನಿಗೆ, "ಖಾಸಿಮ ಬರೀದನನ್ನು ಪೂರ್ಣ ಮುಗಿಸಿ ಬಿಡಲು ಫತೇವುಲ್ಲಾ ಇಮಾದುಲ್ ಮುಲ್ಕ ಮತ್ತು ಅಹಮದ್ ನಿಜಾಮುಲ್ ಮುಲ್ಕ ಬಹರೀ ಅವರ ಸಹಾಯವಿಲ್ಲದೆ ಕಷ್ಟವಾಗುತ್ತದೆ. ನಾನೊಬ್ಬನೇ ಈ ಕೆಲಸವನ್ನು ಮಾಡುವುದು ಅಸಾಧ್ಯ. ಅದಕ್ಕಾಗಿ ನೀವು ನಿಮ್ಮ ರಾಜಧಾನಿಗೆ ಹೋಗಿ ಸಂಹಾಸನದ ಮೇಲೆ ವಿರಾಜಮಾನರಾಗಿರಿ. ನಾನು ಈ ಇಬ್ಬರು ಸರದಾರರನ್ನು ನನ್ನ ಕಡೆಗೆ ಒಪ್ಪಿಸಿಕೊಂಡು ಬೀದರದಲ್ಲಿ ಆದಷ್ಟು ಬೇಗ ಉಪಸ್ಥಿತನಾಗುತ್ತೇನೆ. " ಎಂದು ಸಂದೇಶ ಕಳುಹಿಸಿದನು. ಮತ್ತು ಗುಪ್ತವಾಗಿ ಐವತ್ತು ಸಾವಿರ ಹುನ್ನ ಮೊತ್ತವನ್ನು ಮಹಮೂದನಿಗೆ ಕಳಿಸಿಕೊಟ್ಟನು. ಖಾಸಿಮ ಬರೀದ ಮತ್ತು ಖುತ್ಬುಲ್ ಮುಲ್ಕ ಹಮ್ದಾನಿಯವರಿಗೂ ಬಹಳಷ್ಟು ಉಡುಗೊರೆ ನೀಡಿದನು. ಇದಾದನಂತರ ಮಹಮೂದನು ತನ್ನ ರಾಜಧಾನಿಯತ್ತ ಪ್ರಯಾಣ ಬೆಳೆಸಿದನು.

ದಸ್ತೂರೇ ದಿನಾರ ಹಬಶಿ ಖ್ವಾಜಾಸರಾನ ಅಪೇಕ್ಷೆ :

ಹಿಜರಿಶಕೆ ೯೦೧ರಲ್ಲಿ, ದಸ್ತೂರೇ ದೀನಾರ ಹಬಶಿ ಖ್ವಾಜಾಸರಾ ಕೂಡಾ ಅಧಿಕಾರದ ಕನಸನ್ನು ಕಟ್ಟತೊಡಗಿದನು. ಹುಸ್ನಾಬಾದ ಗುಲಬರ್ಗಾ, ಸಗರ, ಅಳಂದ ಮತ್ತು ಗುಂಜೋಟಿ ಮೊದಲಾದ ಪ್ರಾಂತಗಳ ಮೇಲೆ ದಸ್ತೂರ ದೀನಾರನ ಗಹನ ಪ್ರಭಾವವಿದ್ದು, ಅವೆಲ್ಲ ಪ್ರದೇಶಗಳನ್ನು ಪೂರ್ಣ ಸ್ವಾಧೀನಕ್ಕೆ ತೆಗೆದುಕೊಂಡನು. ದಸ್ತೂರೇ ದಿನಾರನ ನಿಜವಾದ ಅಪೇಕ್ಷೆಯು ದಖ್ಖನ್ನಿನ ನಾಣ್ಯ ಅಶರಫಿಯನ್ನು ಹಬಶಿಯ ರಾಜಮುದ್ರೆಯಾಗಿ ಪರಿವರ್ತಿಸಬೇಕೆಂಬುದಾಗಿತ್ತು. ಇದನ್ನು ಸಾಧಿಸಲು ನಿಜಾಮುಲ್ಲ ಮುಲ್ಕ ಬಹರಿಯ ಗೆಳೆತನ ಬೆಳೆಸಲು ಅವಕಾಶ ಮಾಡಿಕೊಳ್ಳಲಾಯಿತು. ಅದಕ್ಕಾಗಿ ಸಂದೇಶವನ್ನು ಕಳುಹಿಸಿದನು.

ದಸ್ತೂರನ ಸ್ವಾಧಿಕಾರ :

ಫತೇವುಲ್ಲಾ ಇಮಾದುಲ್ ಮುಲ್ಕನು ಯೂಸುಫ ಆದಿಲಶಾಹನ ಸಹಾಯದಿಂದ ಬೆರಾರದ ಮೇಲೆ ತನ್ನ ಅಧಿಕಾರವನ್ನು ಸಂಪಾದಿಸಿಕೊಂಡು ವಶಪಡಿಸಿಕೊಂಡನು. ಅಲ್ಲಿ ತನ್ನ ಸರ್ವಾಧಿಕಾರದ ಆಡಳಿತವನ್ನು ಸ್ಥಾಪಿಸಿದನು. ಇದೇ ತರಹ, ನಿಮ್ಮ ಸಹಾಯದಿಂದ ರಾಜಮನೆತನದ ಪ್ರಭುತ್ವವನ್ನು ಸ್ಥಾಯಿಗೊಳಿಸಿಕೊಂಡರೂ ಆಶ್ಚರ್ಯವೇನಿಲ್ಲ. ನಿಜಾಮುಲ್ ಮುಲ್ಕನು ದಸ್ತೂರ-ಎ-ದೀನಾರ ಹಬಶಿಯನ್ನು ತನ್ನ ಮಗನೆಂದು ಬಾಯಿತುಂಬ ಹೇಳುತ್ತ ಆತನನ್ನು ಮಗನೆಂದೇ ಪ್ರೀತಿಸುತ್ತಿದ್ದನು. ಆದ್ಧರಿಂದ ನಿರ್ವಾಹವಿಲ್ಲದೆ ದಸ್ತೂರನತ್ತ ಗಮನ ಹರಿಸಿದನು. ಆತನು ದೇಶದಲ್ಲಿ ತನ್ನ ನಾಣ್ಯ ಮತ್ತು ಸನ್ಮಾನಪತ್ರವನ್ನು ಬಿಡುಗಡೆ ಮಾಡಲು ಅನುಮತಿಸಿದನು. ದಸ್ತೂರನು ತನ್ನ ಹೆಸರಿನ ಖುತ್ಬಾ ಮತ್ತು ಮೊಹರಗಳನ್ನು ಬಳಕೆಗೆ ತಂದ ಮೇಲೆ ಖಾಸಿಮ ಬರೀದನ ಮೌಲ್ವಿಗಳನ್ನು ದೇಶದಿಂದ ಹೊರಗೆ ಹಾಕಿದನು. ಅಲ್ಲದೆ ಬೇರೆ ಅನೇಕ ಭಾಗಗಳನ್ನು ತನ್ನ ವಶಕ್ಕೆ ತೆಗೆದುಕೊಂಡನು. ಆ ಭಾಗಗಳೆಲ್ಲ ಬೀದರಿನ ರಾಜ್ಯಾಡಳಿತಕ್ಕೆ ಸೇರಿದ್ದವೇ ಆಗಿದ್ದವು.

ಈ ಸ್ಥಿತಿಯನ್ನು ನೋಡಿ ಖಾಸಿಮ ಬರೀದನು ಹೌಹಾರಿದನು. ಅವನು ಮಹಮೂದ ಶಾಹನನ್ನು ಯೂಸುಫ ಆದಿಲಶಾಹನಿಂದ ಸಹಾಯಪಡೆಯಲು ಒತ್ತಾಯಿಸಿದನು. ಮಹಮೂದ ಶಾಹನು ಈ ಸಲಹೆಯಂತೆ ನಡೆದುಕೊಂಡು, ಯೂಸುಫ ಆದಿಲಶಾಹನ ಸಹಾಯ ಕೋರಿ ಸಂದೇಶ ಕಳುಹಿಸಿದನು. ಯೂಸುಫ ಆದಿಲಶಾಹನು ಮಹಮೂದನ ಸಂದೇಶವನ್ನು ಸ್ವೀಕರಿಸಿ, ಸಹಕಾರದ ಹಸ್ತವನ್ನು ಚಾಚಲು ಒಪ್ಪಿಗೆ ನೀಡಿದನು ಮತ್ತು ಗಜ್ನಫರ್ ಬೇಗನನ್ನು ತನ್ನ ಕೆಲವು ಪ್ರತಿಷ್ಠಿತ ಸರದಾರರ ಸಂಗಡ ಕಳುಹಿಸಿದನು. ಆ ಸಂದರ್ಭದಲ್ಲಿ, "ಒಂದು ವೇಳೆ ನಾನೇ ಸ್ವತಃ ಬಂದಿದ್ದರೆ, ನಾನು ಬಂದ ಸಮಾಚಾರದಿಂದ ನಿಜಾಮುಲ್ ಮುಲ್ಕನು ಕೂಡಾ ದಸ್ತೂರನ ಸಹಾಯಕ್ಕಾಗಿ ರಂಗದ ಮೇಲೆ ಬರುತ್ತಿದ್ದನು. ಹೀಗಾಗಿ ಪೂರ್ಣ ಪ್ರಕರಣವು ತಲೆ ಕೆಳಗಾಗುತ್ತಿತ್ತು. ಆದ್ಧರಿಂದ ನನ್ನ ಈ ಅನುಪಸ್ಥಿತಿಯನ್ನು ಅನ್ಯಥಾ ಭಾವಿಸಬಾರದು" ಎಂಬುದಾಗಿ ತಿಳಿಸಲು ಹೇಳಿ ಕಳುಹಿಸಿದ್ದನು.

ದಸ್ತೂರನಿಗೆ ಪಾಠ ಕಲಿಸಲು ಯೂಸುಫ ಆದಿಲಶಾಹನ ಪ್ರಯಾಣ:

ಇದಾದ ತತ್‌ಕ್ಷಣ ಗೊತ್ತಾದ ಸುದ್ದಿಯ ಪ್ರಕಾರ, ಇಡೀ ದೇಶದಲ್ಲಿ ತನ್ನ ಶೌರ್ಯದಿಂದ ಪ್ರಖ್ಯಾತಿ ಪಡೆದ ಖ್ವಾಜಾ ಜಹಾನ ದಖನಿಯನ್ನು ನಿಜಾಮುಲ್ ಮುಲ್ಕನು ದಸ್ತೂರನ ಸಹಾಯಕ್ಕಾಗಿ ಕಳುಹಿಸಿದನು. ಆಗ ಅವನು ಬಹಳ ತೀವ್ರಗತಿಯಲ್ಲಿ ಆ ಕಡೆಗೆ ಸಾಗಿದನೆಂದೂ, ಆತನ ಜೊತೆಯಲ್ಲಿ ಅಹಮದ್‌ನಗರದ ಸೈನ್ಯದ ಸಜ್ಜಾದ ಭಾಗವೂ ಇದೆಯೆಂದು ಗೊತ್ತಾಯಿತು. ಅಲ್ಲದೆ ನಿಜಾಮುಲ್ ಮುಲ್ಕನೂ ಕುದುರೆಗೆ

ಥಡಿ ಹಾಕಿ ಯುದ್ಧದ ಅವಕಾಶದ ನಿರೀಕ್ಷೆಯಲ್ಲಿದ್ದನು. ಈ ಸ್ಥಿತಿಗತಿಯ ದೃಷ್ಟಿಯ ಹಿನ್ನೆಲೆಯಲ್ಲಿ ಯೂಸುಫ ಆದಿಲಶಾಹನು ತಾನು ಅಲ್ಲಿಗೆ ಹೋಗುವುದು ಅವಶ್ಯವೆಂದು ನಿಶ್ಚಯಿಸಿ ತತ್‌ಕ್ಷಣ ಪ್ರವಾಸ ಕೈಗೊಂಡು ತನ್ನ ಸೈನ್ಯಪಡೆಯೊಡನೆ ಸೇರಿಕೊಂಡನು. ಯೂಸುಫ ಆದಿಲಶಾಹನು ಬರೀದನನ್ನು ಆಮಂತ್ರಿಸಿ ಇಬ್ಬರೂ ಸೇರಿ ದಸ್ತೂರ ದೀನಾರನಿಗೆ ಪಾಠ ಕಲಿಸುವ ನಿಟ್ಟಿನಲ್ಲಿ ಸಾಗಿದರು.

ಯುದ್ಧದ ಆರಂಭ :

ದಸ್ತೂರ ದೀನಾರನು ತನ್ನ ನೆಚ್ಚಿನ ಆಯ್ದ ಎಂಟು ಸಾವಿರ ಅಶ್ವ ಸವಾರರು ಮತ್ತು ಮುಲಕ್ ಅಹಮದ್ ನಿಜಾಮುಲ್ ಮುಲ್ಕ ಬಹರಿ ಕಡೆಯ ಹನ್ನೆರಡು ಸಾವಿರ ಸಿದ್ಧವಾಗಿ ನಿಂತ ಅಶ್ವ ಸವಾರರನ್ನು ಕೂಡಿಕೊಂಡು ಖ್ವಾಜಾ ಜಹಾನ ಸೇರಿ ವೈರಿಯನ್ನು ಸದೆ ಬಡೆಯಲು ಮುಂದಾದರು. ಆಗ ಮುಖಾಮುಖಿಯಾಗಿ ಪ್ರಬಲ ಕಾಳಗವಾಯಿತು. ಆದರೆ ದಸ್ತೂರ ದೀನಾರನು ಬಹಳ ಕೌಶಲ ಮತ್ತು ಶೌರ್ಯದಿಂದ ಕಾಳಗವನ್ನು ಎದುರಿಸಿದರೂ ದೈವವು ಸಹಕಾರ ನೀಡಲಿಲ್ಲ. ವೈರಿಯ ಕೈಯಲ್ಲಿ ಬಂಧಿತನಾದನು. ಖಾಸಿಮ ಬರೀದನು. ಮಹಮೂದ ಶಾಹನಿಂದ, ದಸ್ತೂರ ದೀನಾರನನ್ನು ಕೊಲೆ ಮಾಡುವ ರಾಜಾಜ್ಞೆ ಪಡೆದು, ಆ ದುರ್ದೈವಿ ಶತ್ರುವನ್ನು ಕೊಲೆ ಮಾಡಲು ಇಚ್ಛಿಸಿದನು. ಆದರೆ ಯೂಸುಫ ಆದಿಲಶಾಹನು ಮಹಮೂದ ಶಾಹನಿಗೆ ಶಿಫಾರಸ್ಸು ಮಾಡಿ ಆತನ ಪ್ರಾಣವನ್ನು ಉಳಿಸಿದನು. ದಸ್ತೂರನ ಜಹಗೀರು ಮತ್ತು ಹುಸ್ನಾಬಾದ ಗುಲಬರ್ಗಾ ಆತನಿಗೆ ಕೊಟ್ಟನು. ಯೂಸುಫ ಆದಿಲಶಾಹನು ಮಹಮೂದನನ್ನು ಭೆಟ್ಟಿಯಾಗಿ ಬಿಜಾಪುರದತ್ತ ಸಾಗಿದನು. ದಸ್ತೂರ ದೀನಾರನು ತನ್ನ ಜಹಗೀರನ್ನು ಪಡೆದುಕೊಳ್ಳಲು ಸಾಗಿದನು.

ರಾಜಕುಮಾರ ಅಹಮ್ಮದನ ಮದುವೆಯ ಅಪೇಕ್ಷೆ :

ಹಿಜರಿ ಶಕೆ ೯೦೩ರಲ್ಲಿ ಮಹಮೂದ ಶಾಹನು ತನ್ನ ಪುತ್ರ ರಾಜಕುಮಾರ ಅಹಮದನ ಮದುವೆಯನ್ನು ಇನ್ನೂ ಹಾಲು ಕುಡಿಯಲು ತಿಳಿಯದ ಯೂಸುಫ ಆದಿಲಶಾಹನ ಪುತ್ರಿ ಬೀಬೀಸತಿಯೊಡನೆ ಮಾಡಲು ಯೋಚಿಸಿದನು. ಈ ವಿಷಯದ ಬಗ್ಗೆ ಪ್ರಸ್ತಾವವನ್ನು ಸಲ್ಲಿಸಲು ನಿಶ್ಚಯಿಸಲಾಯಿತು. ಮಹಮೂದ ಶಾಹ ಮತ್ತು ಯೂಸುಫ ಆದಿಲಶಾಹ ಇಬ್ಬರೂ ತಮ್ಮ ತಮ್ಮ ಪ್ರಾಂತಗಳಿಂದ ಗುಲ್ಬರ್ಗಾದತ್ತ ಬರತೊಡಗಿದರು. ಈ ಅರಸರ ಆಗಮನದಿಂದ ದಸ್ತೂರ ದೀನಾರನು ಗಾಬರಿಯಾದನು. ದಸ್ತೂರನ ಜಹಾಗೀರಿನ ಮೇಲೆ ಯೂಸುಫನ ಅಧಿಕಾರದ ಹಿಡಿತವಿತ್ತು. ಈ ದಿನಗಳಲ್ಲಿ ಯೂಸುಫ ಆದಿಲಶಾಹನು ಮಹಮೂದ ಶಾಹನನ್ನು ಕುರಿತು, "ನನ್ನ ಮತ್ತು ನಿಮ್ಮ ಮಧ್ಯೆ ದಸ್ತೂರ ದೀನಾರನ ಪ್ರಾಂತವು ಹೊಂದಿಕೊಂಡಿದೆ. ಆದುದರಿಂದ ಖಾಸಿಮ ಬರೀದನನ್ನು ಅಂತ್ಯಗೊಳಿಸಲು ಶಕ್ತಿಯಿಲ್ಲ. ನೀವು ಖಾಸಿಮನ ಚಕ್ರವ್ಯೂಹದಿಂದ

ಹೊರಗೆ ಬಾರದಿದ್ದರೆ, ಈ ಒಪ್ಪಿಗೆಯನ್ನು ಕೈಗೂಡಿಸಲು ಒಂದೇ ಮಾರ್ಗವಿದೆ, ಅದು ದಸ್ತೂರ ದೀನಾರನ ಜಹಗೀರನ್ನು ನನ್ನ ವಶಕ್ಕೆ ಕೊಡುವುದು. ಹಾಗಾಗುವುದರಿಂದ ಅಲ್ಲಿ ನನ್ನ ಪರಿಧಿಯಲ್ಲಿಯ ಅನುಭವಿ ದಕ್ಷ ಸರದಾರರನ್ನು ನಿಯಮಿಸಿ, ಆ ಬಲದಿಂದ ಖಾಸಿಮ ಬರೀದನು ಮೈಮರೆತ ಸಂದರ್ಭವನ್ನು ಕಾಯ್ದು ಬಂಧನಕ್ಕೆ ಒಳಪಡಿಸುವುದು ಸಾಧ್ಯ. ಈ ಎಲ್ಲ ಯೋಜನೆಗಳು ಫಲಪ್ರದವಾದ ನಂತರ, ನಿಜಾಮುಲ್ ಮುಲ್ಕ ಬಹರಿಗೆ ಈ ವಿಷಯದ ತಿಳುವಳಿಕೆ ಬರಬೇಕಿದೆ. ಈ ಸೂಕ್ಷ್ಮತೆಯಲ್ಲಿ ಖಾಸಿಮ ಬರೀದನಿಗೆ ಸಹಾಯ ಮಾಡುವುದರಿಂದ ಅವನು ದುರ್ಬಲನಾಗುತ್ತಾನೆ." ಎಂಬ ವಿನಂತಿಯ ಪ್ರಸ್ತಾವವನ್ನು ಮುಂದಿಟ್ಟಾಗ ಮಹಮೂದ ಶಾಹನು ಆ ವಿನಂತಿಯನ್ನು ಒಪ್ಪಿದನು. ಆ ಕ್ಷಣ ದಸ್ತೂರ ದೀನಾರನ ಜಹಗೀರು ಮತ್ತು ಖಜಾನೆಯ ಮೇಲೆ ಯೂಸುಫ ಆದಿಲಶಾಹನು ಅಧಿಕಾರದ ಹಿಡಿತ ಬಂದಿತು.

ಖಾಸಿಮ ಬರೀದನ ಪಲಾಯನ :

ದಸ್ತೂರನು ಖಾಸಿಮ ಬರೀದನಿಗೆ ಶರಣಾದನು. ಈ ಸಮಯದಲ್ಲಿ ಖಿತುಬುಲ್ ಮುಲ್ಕ ಹಮ್ದಾನಿಯು ಕೂಡ ಯೂಸುಫ ಆದಿಲಶಾಹನಿಗೆ ಜೊತೆ ನೀಡಿದನು. ಖಿತುಬುಲ್ ಮುಲ್ಕನು ಎದುರಾದುದರಿಂದ ಖಾಸಿಮ ಬರೀದನು ಬಹಳ ಹೆದರಿದನು. ದಸ್ತೂರ ದೀನಾರ, ಖ್ವಾಜಾ ಜಹಾನ ದಖ್ಖನಿ ಮತ್ತು ಉಳಿದ ಕೆಲವು ದಖ್ಖನಿ ಸರದಾರರನ್ನು ಜೊತೆಗೂಡಿಸಿಕೊಂಡು ಮಹಮೂದ ಶಾಹನೊಡನೆ ದೂರಾಗಿ, ಬೀದರಿನಿಂದ ಪಲಾಯನ ಮಾಡಿ ಅಳಂದದಲ್ಲಿ ಆಶ್ರಯ ಪಡೆದನು. ಯೂಸುಫ ಆದಿಲಶಾಹನು ಖಿತ್ಬುಲ್ ಮುಲ್ಕನನ್ನು ಜೊತೆಗೂಡಿಸಿ ಕೊಂಡು ಶತ್ರುಗಳನ್ನು ಬೇಟೆಯಾಡಲು ತೆರಳಿದನು.

ಖಾಸಿಮ ಬರೀದನ ಸೋಲು :

ಉಭಯಪಕ್ಷಗಳಲ್ಲಿ ಘನಘೋರ ಕಾಳಗವು ನಡೆಯಿತು. ತತ್‌ಫಲವಾಗಿ ಆದಿಲಶಾಹೀ ಸೈನ್ಯಕ್ಕೆ ವಿಜಯವು ಭಾಗ್ಯವಾಯಿತು. ಶತ್ರು ಸೈನ್ಯದ ಪ್ರತಿಯೊಬ್ಬ ಸರದಾರನು ಸೋಲನ್ನುಂಡು ಎತ್ತೆತ್ತಲೋ ಚೆದರಿಹೋದರು. ಅನಂತರ ರಣರಂಗದ ನೆಲದ ಮೇಲೆ ಜಮಖಾನೆಯನ್ನು ಹಾಸಿ, ಅದರ ಮೇಲೆ ಮಹಮೂದ ಬಹಮನಿ ಮತ್ತು ಯೂಸುಫ ಆದಿಲಶಾಹ ಕುಳಿತು ಅನೇಕ ವಿಷಯಗಳನ್ನು ಕುರಿತು ಮಾತಾಡಿಕೊಂಡರು. ಇಬ್ಬರೂ ತಮ್ಮ ಮುಂದಿನ ಕಾರ್ಯಚಟುವಟಿಕೆಗಳಲ್ಲಿ ನಿರ್ಣಯಾತ್ಮಕ ವಿಚಾರ ಮಾಡಿ ಮರುವರ್ಷ ಅಹಮದ ನಿಜಾಮುಲ್ ಮುಲ್ಕ ಬಹಿರಿ ಮತ್ತು ಫತೇವುಲ್ಲಾ ಇಮಾದಿ ಅವರ ಮೇಲೆ ದಾಳಿ ಮಾಡಿ ಖಾಸಿಮ ಬರೀದನನ್ನು ಪೂರ್ಣ ರೀತಿಯಲ್ಲಿ ಮುಗಿಸಿಬಿಡಬೇಕೆಂದು ನಿರ್ಧರಿಸಿದರು.

ಏಕೆಂದರೆ ಕಾಳಗದಲ್ಲಿ ಮುಲ್ಕ ಅಲಿಯಾನನನ್ನು ಕೊಲೆ ಮಾಡಲಾಗಿತ್ತು. ಆದ್ಧರಿಂದ

ಯೂಸುಫ ಆದಿಲಶಾಹನು ಆತನ ಜಹಗೀರು ಮತ್ತು ಹುದ್ದೆಯನ್ನು ಆತನ ಮಗ ಮಿಯಾ ಮಹಮದ್‌ನಿಗೆ ಬಹುಮಾನವಾಗಿ ನೀಡಿದನು. ಆತನ ಮಗನಿಗೆ 'ಐನುಲ್ ಮುಲ್ಕ' ಎಂಬ ಬಿರುದನ್ನು ದಯಪಾಲಿಸಿದನು. ಇಷ್ಟೆಲ್ಲ ನಡೆದ ಮೇಲೆ ಯೂಸುಫ ಆದಿಲಶಾಹನು ಮಹಮೂದ ಶಾಹನಿಂದ ಅನುಮತಿ ಪಡೆದು ಬಿಜಾಪುರಕ್ಕೆ ಮರಳಿದನು.

ದಸ್ತೂರ ದೀನಾರನ ಮೇಲೆ ಆಕ್ರಮಣ:

ಮಾರನೆಯ ವರ್ಷ ಯೂಸುಫ ಆದಿಲಶಾಹನು ನಿರ್ನಾಮ ಮಾಡಲು ಸಂಕಲ್ಪ ಮಾಡಿ, ಅವನ ಮೇಲೆ ದಾಳಿ ಮಾಡಿದನು. ಅಹಮದ್ ನಿಜಾಮುಲ್ ಮುಲ್ಕನು ಅತಿ ಕ್ಷಿಪ್ರದಲ್ಲಿ ದಸ್ತೂರನ ಸಹಾಯಕ್ಕೆ ಒದಗಿ ಬಂದನು. ಯೂಸುಫನು ಬೀದರದ ಸುತ್ತಮುತ್ತನ ಪ್ರದೇಶದಲ್ಲಿ ಒಳಹೊಕ್ಕು ಖುತ್ಬುಲ್ ಮುಲ್ಕ ಹಮ್ದಾನಿ ಮತ್ತು ಫತೇವುಲ್ಲಾ ಉಮಾದಿಯವರ ಸಹಾಯವನ್ನು ಪಡೆದನು. ಅಹಮದ್ ನಿಜಾಮುಲ್ ಮುಲ್ಕನು ಇದನ್ನೆಲ್ಲ ಕಂಡು ಸನ್ನಿವೇಶದ ಬಿರುಸನ್ನು ಗಮನಿಸಿ ಭಯಗೊಂಡು ಅಹಮದ್ ನರಗಕ್ಕೆ ಮರಳಿದನು.

ಯೂಸಫ ಆದಿಲ್ ಮತ್ತು ನಿಜಾಮುಲ್ ಮುಲ್ಕರಲ್ಲಿ ಸ್ನೇಹ :

ಈ ಘಟನೆಯು ನಡೆದ ಮರುವರುಷ ಯೂಸುಫನು ಬುದ್ಧಿವಂತಿಕೆಯ ದೂರದೃಷ್ಟಿಯಿಂದ ಕಾರ್ಯನಿರ್ವಹಿಸತೊಡಗಿದನು. ಅಹಮದ್ ನಿಜಾಮುಲ್ ಮುಲ್ಕನ ಜೊತೆ ಸ್ನೇಹವನ್ನು ಅರಳಿಸಿಕೊಂಡನು. ತನ್ನ ಸಂಕಲ್ಪಗಳನ್ನು ಈಡೇರಿಸಿಕೊಳ್ಳುವಲ್ಲಿ ಚತುರನಾದನು. ಯೂಸುಫನು ನಿಜಾಮುಲ್ ಮುಲ್ಕನಿಗೆ, "ಈಗ ಸದವಕಾಶವಿದೆ, ತಮ್ಮ ಸರ್ವಾಧಿಕಾರವನ್ನು ಸ್ಥಾಪಿಸಬೇಕಾಗಿದೆ. ಆದುದರಿಂದ ತಾವು ಈ ಕ್ಷಣದಲ್ಲಿ ದೌಲತಾಬಾದ, ರಹೂರ, ಕಾಲನಾ, ಪೂನಾ, ವಾಕಿಯಾಗಳನ್ನು ನಿಮ್ಮ ವಶಪಡಿಸಿಕೊಳ್ಳಬೇಕು. ನಾನು ದಸ್ತೂರ ದೀನಾರ ಮತ್ತು ಐನುಲ್ ಮುಲ್ಕನ ಮೇಲೆ ದಾಳಿ ಮಾಡಿ ಅವರನ್ನು ನನ್ನ ಅಂಕಿತಕ್ಕೆ ತಂದುಕೊಳ್ಳುವೆನು. ಖುದಾವಂದ ಜಹಾನ ಹಬಶಿಯ ಜಹಗೀರನ್ನು ಇಮಾದುಲ್ ಮುಲ್ಕನ ಅಧೀನಕ್ಕೆ ಒಳಪಡಿಸಲಾಗುವುದು. ಖುತ್ಬುಲ್ ಮುಲ್ಕನು ತೆಲಂಗಾಣವನ್ನು ಗೆಲ್ಲಲಿ. ಬೀದರಿನ ಇಲಾಖೆ ಮತ್ತು ಅದರ ಸುತ್ತಮುತ್ತಲ ಪ್ರದೇಶಗಳು ಕಾಸೀಮ ಬರೀದನ ಅಧೀನದಲ್ಲಿಯೇ ಇರಲಿ. ಇದಾದನಂತರ ನಾವು ಒಗ್ಗಟ್ಟಿನಿಂದ, ನೆಮ್ಮದಿಯಿಂದ ಇರೋಣ. ನಮ್ಮಲ್ಲಿ ಯಾವದೇ ತರಹದ ವಿರೋಧಗಳು ಬರಬಾರದು." ಎಂದು ಹೇಳಿದನು,

ದಖ್ಖನ್ನಿನಲ್ಲಿ ಅಶಾಂತಿ :

ಇತಿಹಾಸ ಲೇಖಕನಾದ ಫರಿಶ್ತಾ ವಿವರಣೆಯಂತೆ ದಖ್ಖನ್ನಿನ ಇತಿಹಾಸದ ಘಟನೆಗಳನ್ನು ವಿಶ್ಲೇಷಿಸುವವರಿಗೆ ಸ್ಪಷ್ಟವಾಗಿ ತಿಳಿದುಬರುವುದೇನೆಂದರೆ, ಬಹಮನಿ ರಾಜಮನೆತನದ ತಳಹದಿಯು ದುರ್ಬಲವಾಗುತ್ತ ಸಾಗಿದಾಗ, ರಾಜ್ಯದ ಸುಬೇದಾರರು

ತಮ್ಮ ತಮ್ಮ ಆಡಳಿತವನ್ನು ತಮ್ಮ ಪ್ರಭುತ್ವಕ್ಕೆ ತೆಗೆದುಕೊಳ್ಳಲು ಮುಂದಾಗತೊಡಗಿ, ಅದೇ ಸ್ಥಳಗಳಲ್ಲಿ ಸ್ವತಂತ್ರ ರಾಜರಾಗತೊಡಗಿದರು. ಈ ಸ್ಥಿತಿಯಿಂದಾಗಿ ದಖ್ಖನದಲ್ಲಿ ಹನ್ನೊಂದು ಸ್ವತಂತ್ರ ರಾಜರು ಹುಟ್ಟಿಕೊಂಡರು. ಈ ಬೆಳವಣಿಗೆಯ ವಿವರಗಳನ್ನು ಈ ಕೆಳಗೆ ತಿಳಿಸಲಾಗಿದೆ.

ಹನ್ನೊಂದು ಸ್ವತಂತ್ರ ರಾಜರು :

೧. ಯೂಸುಫ ಆದಿಲಶಾಹನು ಬಿಜಾಪುರದಲ್ಲಿ

೨. ಅಹಮದ್ ನಿಜಾಮುಲ್ ಮುಲ್ಕ ಖೇರದಲ್ಲಿ

೩. ಫತೇವುಲ್ಲಾ ಇಮಾದುಲ್ ಮುಲ್ಕ ಬೆರಾರದಲ್ಲಿ

೪. ಖುತ್ಬುಲ್ ಮುಲ್ಕ ಹಮ್ದಾನಿ ತೆಲಂಗಾಣದಲ್ಲಿ

೫. ಬಹಾದ್ದೂರ ಗಿಲಾನಿಯು ಬಿಜಾಪುರದ ಘೋರನದಿಯ ತಟದ ಅಂಚಿನವರೆಗೆ ಪ್ರಸಿದ್ಧಿ ಪಡೆದ ಪ್ರದೇಶಗಳಾದ ಮಿರಜ್–ಕಲ್ಹಾರಗಳನ್ನು ವಶಪಡಿಸಿಕೊಂಡಿದ್ದನು. ಪನಾಲಾ ಮತ್ತು ಗೋವಾ ಮುಂತಾದ ಬಲಿಷ್ಠ ಕೋಟೆಗಳ ಒಡೆತನ ಪಡೆದಿದ್ದನು. ಗಿಲಾನಿಯ ಮರಣದ ನಂತರ ಅವನ ಮಗನಾದ ಮಲಿಕ್ ಇಲಿಯಾಸ್‌ನ ಆತನ ಮರಣದ ನಂತರ ಮಹಮದ್ ಬಿನ್ ಇಲಿಯಾಸ ಈ ಪ್ರದೇಶಗಳ ರಾಜರಾದರು.

೬. ದಸ್ತೂರ ದೀನಾರನು ದಕ್ಷಿಣ ದಿಕ್ಕಿಗೆ ಭನಿವಾರ ಎಂಬ ಹಳ್ಳದ ಬಳಿ ವಾಸಸ್ಥಾನ ಮಾಡಿಕೊಂಡು ಬೀದರದ ನಡುವಿನ ಪ್ರದೇಶಗಳಾದ ಗುಂಜೋಟಿ, ಅಳಂದ ಮತ್ತು ಹುಸ್ನಾಬಾದ ಗುಲಬರ್ಗಾಗಳ ಮೇಲೆ ಒಡೆತನದ ಹಿಡಿತವನ್ನಿಟ್ಟು ಕೊಂಡಿದ್ದನು.

೭. ಖ್ವಾಜಾ ಜಹಾನ ದಖ್ಖನಿಯು ಪರಿಂಡಾ ಮತ್ತು ಸೋಲಾಪುರದ ಕೋಟೆಗಳಿರುವ ಪ್ರದೇಶ ಮತ್ತು ಗ್ರಾಮಗಳ ಮೇಲೆ ಒಡೆತನ ಸಾಧಿಸಿದ್ದನು.

೮. ಜೈನುದ್ದೀನ ಅಲಿನಾಸನು ಪೂನಾ, ವಾಕಿಯಾ, ಮಚಾವಕೊಂಡ ಮತ್ತು ಖಿಲಾವಂದ್ರ ರಾಜಪುರಿಗಳ ರಾಜನಾಗಿದ್ದನು.

೯. ಮಲಿಕ್ ವಜೀಹ, ಮಲಿಕ್ ಅಶರಫರು ಒಡಹುಟ್ಟಿದ ಸೋದರರು, ಇವರು ದೌಲತಾಬಾದಿನ ಕೋಟೆಯುನ್ನು ತಮ್ಮ ಹಿಡಿತದಲ್ಲಿಟ್ಟುಕೊಂಡು ಸಂಭಾಳಿಸುತ್ತಿದ್ದರು.

೧೦. ಖುದಾವಂದ ಖಾನ ಹಬಶಿಯು ಬೆರಾರನಲ್ಲಿಯ ಫತೇವುಲ್ಲಾ ಇಮಾದಿಯ ವೈರಿಯಾಗಿದ್ದನು, ರೆಲ್ಹೆರ್ ಮತ್ತು ಮಾಲೇವರ್ ಕೋಟೆಗಳ ರಾಜನಾಗಿದ್ದನು.

೧೧. ಕಾಸೀಮ ಬರೀದ ತುರ್ಕನು ಬೀದರನ್ನು ವಶವಾಗಿಟ್ಟುಕೊಂಡು ಬೀದರ ರಾಜಧಾನಿಯಲ್ಲಿ ರಾಜನಾದನು.

ಐನುಲ್ ಮಲಿಕ್‌ನಿಗೆ ಆಹ್ವಾನ :

ಯೂಸುಫ ಆದಿಲಶಾಹನು ನಿಜಾಮುಲ್ ಮಲಿಕ್‌ನ ಜೊತೆ ಸ್ನೇಹ ಬೆಳೆಸಿದ ಕೂಡಲೇ, ಮೊತ್ತಮೊದಲು ಮಿಯಾ ಮಹಮ್ಮದ್ ಐನುಲ್ ಮಲಿಕ್‌ನನ್ನು ಕರೆಸಲು ಸಂದೇಶ ಕಳುಹಿಸಿದನು. ಈ ಸಂದೇಶವನ್ನು ಓದುತ್ತಲೇ ಐನುಲ್ ಮಲಿಕ್‌ನ ಸಂತೋಷವು ಸೀಮಾತೀತವಾಗಿ ಉಕ್ಕೇರಿತು. ಆತನ ಮನೆಯಲ್ಲಿಯೂ ತುಪ್ಪದ ದೀಪಗಳು ಬೆಳಗತೊಡಗಿದವು. ಆಗ ಐನುಲ್ ಮಲಿಕ್‌ನು ಯೂಸುಫ ಆದಿಲಶಾಹನಿಗೆ, "ನನಗೆ ಇದಕ್ಕಿಂತ ಘನವಾದ ಸಂತೋಷವೇನೂ ಇಲ್ಲ. ಈ ಸಂದೇಶದಿಂದ ಬಿಜಾಪುರವು ತನ್ನನ್ನು ಆ ರಾಜ್ಯದ ಇತರ ಸ್ನೇಹಿತರಲ್ಲಿ ಪರಿಗಣಿಸಿದಂತಾಯಿತು" ಎಂಬ ಸಂದೇಶ ಕಳುಹಿಸಿ ತನ್ನ ಅಭಿಮಾನವನ್ನು ವ್ಯಕ್ತಗೊಳಿಸಿದನು. ಐನುಲ್‌ಮಲಿಕ್‌ನು ಒಂದು ವಾರದವರೆಗೆ ಹಿಗ್ಗಿನ ಸಂಭ್ರಮವನ್ನು ತನ್ನ ಕೋದಾ ಕೋಟೆಯಲ್ಲಿ ಆಚರಿಸಿಕೊಂಡನು. ಅನಂತರ ಉಲ್ಲಾಸದಿಂದ ಆರು ಸಾವಿರ ಅಶ್ವಸವಾರರ ಜೊತೆಯಲ್ಲಿ ಬಿಜಾಪುರದತ್ತ ಪಯಣ ಬೆಳೆಸಿದನು.

ದಸ್ತೂರ ದೀನಾರನ ಚಿಂತೆ :

ಐನುಲಮಲಿಕ್‌ನು ಯೂಸುಫ ಆದಿಲಶಾಹನ ರಾಜಧಾನಿಗೆ ಹೋಗಿ ತಲುಪಿದನು. ಆತನಿಗೆ ತಾಜೀ ಕುದುರೆಯನ್ನು ಪಾರಿತೋಷಕವಾಗಿ ನೀಡುವುದಲ್ಲದೆ ವಿಶೇಷ ಸ್ವಾಗತವನ್ನು ನೀಡಲಾಯಿತು. ಅಲ್ಲದೆ ಬಹು ಬೆಲೆ ಬಾಳುವ ವಸ್ತು ವಸ್ತ್ರಾದಿಗಳಿಂದ ಗೌರವಿಸಲಾಯಿತು. ಐನುಲ್‌ಮಲಿಕ್‌ನನ್ನು ಈ ರೀತಿ ಸನ್ಮಾನಿಸುವುದನ್ನು ಕಂಡು, ದಸ್ತೂರ ದೀನಾರ ಹಬಶಿಯು, ಮುಂದೆ ದಖ್ಖನ್ನಿನ ಮೇಲೆ ರಾಜಕೀಯ ಕ್ರಾಂತಿ ಬರುವುದಿದೆಯೆಂಬುದನ್ನು ಊಹಿಸಿದನು. ಕೆಲವೇ ದಿವಸಗಳ ಪೂರ್ವದಲ್ಲಿ ಅಮೀರ ಬರೀದನ ತಂದೆಯ ಮರಣವಾಗಿತ್ತು. ಆ ಸಂದರ್ಭದಲ್ಲಿ ದಸ್ತೂರನು ಅಮೀರ ಬರೀದನಿಗೆ "ನೀನು ನಿನ್ನ ತಂದೆಯ ಹೆಜ್ಜೆಗಳನ್ನು ಅನುಸರಿಸಿ ನಡೆಯುತ್ತ ನನಗೆ ಸಹಾಯ ಮಾಡುವುದು ನಿನ್ನ ಕರ್ತವ್ಯವೆಂದು ಪಾಲಿಸು" ಎಂದು ಬರೆದನು.

ದಸ್ತೂರ ದೀನಾರನ ಪತ್ರವು ಅಮೀರ ಬರೀದನಿಗೆ ಮುಟ್ಟಿದ ತಕ್ಷಣ ಅವನ ಸಹಾಯಕ್ಕೆ ೩೦೦೦ ಸವಾರರನ್ನು ಕಳುಹಿಸಿಯೇ ಬಿಟ್ಟನು. ದಸ್ತೂರನು ವೈರಿಯನ್ನು ಪೂರ್ಣ ನಾಶಗೊಳಿಸುವ ಸಂಕಲ್ಪ ಮಾಡಿದನು. ಭ್ಯೂರಾ ಹಳ್ಳದ ದಂಡೆಯ ಮೇಲೆ ತನ್ನ ಸೈನ್ಯದೊಡನೆ ಬಿಡಾರ ಬಿಟ್ಟನು. ಖ್ವಾಜಾ ಜಹಾನ ದಖ್ಖನಿಯು ಕೂಡ ದಸ್ತೂರ ದೀನಾರನಂತೆ ರಾಜನಾಗುವ ಕನಸನ್ನು ಕಾಣುತ್ತಿದ್ದನು. ಆತನಿಗೆ ಯೂಸುಫ ಆದಿಲಶಾಹ ಮತ್ತು ಅಹಮದ್ ನಿಜಾಮುಲ್ ಮುಲ್ಕರ ಸ್ನೇಹವು ಕುದುರಿದ ವಿಷಯದ

ಬಗ್ಗೆ ಗುಟ್ಟು ಗೊತ್ತಾಯಿತು. ಈ ಇಬ್ಬರೂ ಸೇರಿ ತನ್ನ ವಿರುದ್ಧ ಯೋಚನೆ ಮಾಡಿ ಬಗ್ಗು ಬಡೆಯುವ ಯೋಜನೆಯಲ್ಲಿ ಇದ್ದಾರೆಂಬುದೂ ಅವನಿಗೆ ಸ್ಪಷ್ಟವಾಗಿತ್ತು. ಈ ಇಬ್ಬರ ಒಪ್ಪಂದದಿಂದ ದಸ್ತೂರ ದೀನಾರನು ಬೇಸರಿಸಿಗೊಂಡನಲ್ಲದೆ, ಈತನಿಗೆ ಖಾಜಾ ಬಹಾದ್ದೂರನು ಸಹಾಯ ಮಾಡಲು ಹಿಂದೆಗೆದನು.

ದಸ್ತೂರನ ಕಾಳಗದ ಸಿದ್ಧತೆ :

ಈ ದಿನಗಳಲ್ಲಿ ಅಹಮದ್ ನಿಜಾಮುಲ್ ಮಲಿಕ್‌ನು ದೌಲತಾಬಾದವನ್ನು ಗೆಲ್ಲುವುದರಲ್ಲಿ ಮಗ್ನನಾಗಿದ್ದನು. ಸುಲ್ತಾನ ಮಹಮೂದ ಗುಜರಾತಿಯಿಂದ ಗಲಾಟೆ ಎದುರಿಸಬೇಕಾದ ಭಯದ ಪ್ರಸಂಗವಿತ್ತು. ಖ್ವಾಜಾ ಜಹಾನ ಈ ಪ್ರಸಂಗದ ಪೂರ್ಣ ಲಾಭವನ್ನು ಪಡೆದು ತನ್ನ ಐದು ಸಾವಿರ ಸೈನಿಕರೊಡನೆ ದಸ್ತೂರ ದೀನಾರನ ಜೊತೆ ಸೇರಿದನು. ದಸ್ತೂರನ ಸೈನಿಕ ಶಕ್ತಿಯು ಮೊದಲೇ ಸಾಕಷ್ಟು ಇದ್ದಿತು. ಈ ನೆರವು ಬಂದ ಮೇಲೆ ಅವನು ಅತ್ಯುತ್ಸಾಹದ ಆವೇಶದಿಂದ ಬೀಗಿ ಮಾತನಾಡತೊಡಗಿದನು. ಯೂಸುಫ ಆದಿಲಶಾಹನಿಗೆ ಈ ಪರಿಸ್ಥಿತಿಯ ನಡವಳಿ ತಿಳಿದಾಗ, ಅವನು ಮುಂದಿನ ಯೋಜನೆಗಳ ಸ್ವರೂಪವನ್ನು ನಿರ್ಧರಿಸತೊಡಗಿದನು. ವೈರಿಯ ಸೈನ್ಯಬಲ ತನ್ನ ಸೈನ್ಯಬಲಕ್ಕಿಂತಲೂ ಎಷ್ಟೋ ಪಟ್ಟು ಅಧಿಕವಾಗಿದ್ದರೂ ಯುದ್ಧದ ಸಿದ್ಧತೆಯಲ್ಲಿ ತೊಡಗಿದನು. ಈ ಯುದ್ಧವು ತನ್ನ ಮುಂದಿನ ಗೆಲುವನ್ನು ನಿಶ್ಚಯಿಸುವ ಪ್ರಸಂಗವೆಂದು ವಿಶೇಷ ಕಾಳಜಿ ತೆಗೆದುಕೊಳ್ಳ ತೊಡಗಿದನು.

ಯೂಸುಫ ಆದಿಲಶಾಹನು ಯುದ್ಧವನ್ನು ಎದುರಿಸಲು ಸನ್ನದ್ಧವಾಗುವುದು :

ಯೂಸುಫ ಆದಿಲಶಾಹ ತನ್ನ ಖಜಾನೆ ಬಾಗಿಲುಗಳನ್ನು ಮುಕ್ತಗೊಳಿಸಿದನು. ದೊಡ್ಡ ಮನಸ್ಸಿನಿಂದ ಸೈನಿಕರಿಗೆಲ್ಲ ಬಿಜಾಪುರದ ಸಂಪತ್ತನ್ನು ಹಂಚಲು ಆರಂಭಿಸಿದನು. ರಾಜಗಾಂಭೀರ್ಯ ಮತ್ತು ಆತ್ಮಸ್ಥೈರ್ಯದಿಂದ ತನ್ನ ಸೈನ್ಯ ಸಮೇತ ದಸ್ತೂರ ದೀನಾರನನ್ನು ಎದುರಿಸಲು ಹೊರಟನು. ವೈರಿಯು ಐದು ಕೋಸು ಅಂತರದಲ್ಲಿರುವಾಗ ತನ್ನ ಬಿಡಾರವನ್ನು ಸ್ಥಾಪಿಸಿದನು. ಮಾರನೆಯ ದಿನ ಪೂರ್ವಸಿದ್ಧತೆಗಾಗಿ ಹುರಿದುಂಬಿಸಿ ಅವರೊಡನೆ ತಾನೂ ರಾಜಗುದುರೆಯನ್ನು ಉತ್ಸಾಹದಿಂದ ಏರಿ ರಣರಂಗವನ್ನು ಪ್ರವೇಶಿಸಿದನು. ಯೂಸುಫನು ೨೦೦೦ ಬಿಲ್ಲು ಬಾಣಧಾರಿಗಳನ್ನು ಬರ್ಚಿಧಾರಿಗಳನ್ನು ಆಯ್ದು ಅವರಲ್ಲಿ ಒಬ್ಬೊಬ್ಬರಿಗೂ ರಾಜಮರ್ಯಾದೆಯನ್ನು ನೀಡಿ ಗೌರವಿಸಿದನು. ಗಜ್ನಫರನನ್ನು ಗುಂಪಿನ ಸರದಾರನೆಂದು ಘೋಷಿಸಿದನು. ಗಜ್ನಫರನ ಮುಂದಾಳತ್ವದಲ್ಲಿ ಸೈನ್ಯವು ರಣರಂಗದಲ್ಲಿ ಮುಂದೆ ಮುಂದೆ ಸಾಗತೊಡಗಿತು.

ಯೂಸುಫನ ಉಪಾಯಗಳ ಅನುಷ್ಠಾನ :

ಯೂಸುಫ ಆದಿಲಶಾಹನು ತನ್ನ ಈ ಯುದ್ಧದ ಪ್ರಕರಣದಲ್ಲಿ ಯುದ್ಧ ಮಾಡುವ

ಕ್ರಿಯೆಗೆ ತೊಡಗಬಾರದೆಂದೂ, ಅವರು ವೈರಿಯ ಸಮೀಪ ತಲುಪಿ ಆತನಿಗೆ ಒಪ್ಪಂದ ಮಾಡಿಕೊಳ್ಳುವ ಸಂದೇಶವನ್ನು ಕಳುಹಿಸಬೇಕೆಂದೂ ಸಲಹೆ ನೀಡಿದನು. ಆಗ ಯೂಸುಫ ಆದಿಲಶಾಹನು ಗಜ್ನಫರ ಆಖಾನನ್ನು ಕುರಿತು, "ಮೊತ್ತಮೊದಲು ನೀನು ನಿನ್ನ ತಂಡದಲ್ಲಿಯ ಪ್ರತಿಷ್ಠಿತ ಅಮೀರನನ್ನು ದಸ್ತೂರ ದೀನಾರನ ಹತ್ತಿರ ಕಳುಹಿಸಿ, ಆತನು ಆದಿಲಶಾಹಿ ರಾಜ್ಯಾಡಳಿತವನ್ನು ಸ್ವೀಕರಿಸಬೇಕೆಂಬ ಸಂದೇಶ ತಿಳಿಸು, ಹೀಗೆ ಮಾಡುವುದರಿಂದ, ಆತನೂ ಐನುಲ್ ಮಲಿಕ್‌ನಂತೆ ಆದಿಲಶಾಹಿ ರಾಜ್ಯಾಡಳಿತದಲ್ಲಿ ಶಾಂತಿ ಹಾಗೂ ನೆಮ್ಮದಿಯಿಂದ ಜೀವನವನ್ನು ಸಾಗಿಸಲು ಭರವಸೆ ನೀಡಬೇಕು" ಎಂದು ಕಿವಿ ಮಾತು ಹೇಳಿದನು.

ಗಜ್ನಫರ ಆಖಾನ ನಿರ್ಗಮನ :

ನಮ್ಮ ಸಂದೇಶದಿಂದ ದಸ್ತೂರ ದೀನಾರನು ಒಪ್ಪಿ ನಡೆದರೆ ಒಳ್ಳೆಯದು; ಇಲ್ಲದಿದ್ದರೆ ಆತನನ್ನು ಪೂರ್ಣ ನಿರ್ನಾಮ ಮಾಡಲು ಎಲ್ಲ ರೀತಿಯ ಉಪಾಯಗಳನ್ನು ಮಾಡಬೇಕು ಎಂಬುದಾಗಿ ಯೂಸುಫನು ಗಜ್ನಫರನಿಗೆ ಕಟ್ಟೆಚ್ಚರಿಕೆ ನೀಡಿದ್ದನು. ಆಗ ಗಜ್ನಫರನು ಯೂಸುಫ ಆದಿಲಶಾಹನ ರಾಜಾಜ್ಞೆಯಂತೆ ನಡೆದುಕೊಂಡನು. ವೈರಿಯ ಬಿಡಾರದಿಂದ ಒಂದು ಕೋಸು ಅಂತರದಲ್ಲಿ ಠಾಣೆ ಊರಿ, ಯೂಸುಫ ಆದಿಲಶಾಹನ ಸಂದೇಶವು ಮುಟ್ಟುವಂತೆ ಮಾಡಿದನು. ಆದರೆ, ದಸ್ತೂರನ ಹಣೆಯ ಬರಹದಲ್ಲಿ ವಿಧಿ ಅನಿಷ್ಟವನ್ನೇ ಬರೆದಿತ್ತು. ಆದ್ದರಿಂದ ಗಜ್ನಫರ ಆಖಾನ ಉಪದೇಶವನ್ನು ಅಲಕ್ಷಿಸಿದನು ಮತ್ತು ತನ್ನ ೬೦೦೦ ಸವಾರರೊಡನೆ ರಣರಂಗದಲ್ಲಿ ಗಜ್ನಫರನನ್ನು ಎದುರಿಸಲು ಮುಂದೆ ಸಾಗಿದನು. ಈ ಹಬಶಿಯು ಒಳ್ಳೆಯ ಮಾತಿನಲ್ಲಿ ಸಲಹೆ ಸೂಚನೆಗಳನ್ನು ಕೇಳುವುದಿಲ್ಲ, ನೇರ ಮಾರ್ಗಕ್ಕೆ ಬರುವುದಿಲ್ಲ ಎಂಬುದನ್ನು ಗಜ್ನಫರನು ಖಚಿತಪಡಿಸಿಕೊಂಡನು, ಆತನ ಸಂಕಲ್ಪವೇ ಬೇರೆ ದುಷ್ಟ ಹೇತುವಿನಿಂದ ಕೂಡಿದೆ ಎಂಬುದನ್ನು ಮನಗಂಡು ತಾನು ಕೂಡಾ ದಸ್ತೂರನನ್ನು ಎದುರಿಸಲು ಮುಂದಾದನು.

ದಸ್ತೂರ ದೀನಾರನ ಸೋಲು :

ಎರಡೂ ಸೈನ್ಯಪಡೆಗಳು ಎದುರಾಗಿ ನಿಂತು ಬಹು ಕಾವಿನಿಂದ ಹೋರಾಡತೊಡಗಿದವು. ಈ ಘನಘೋರ ಹೋರಾಟದಲ್ಲಿ ದಸ್ತೂರ ದೀನಾರನು ಸೋಲನ್ನು ಅನುಭವಿಸಿದನು. ಗಜ್ನಫರ ಆಖಾ ಈ ಗೆಲುವಿನಿಂದ ಸಂಭ್ರಮಿಸಿದನು. ಸುದ್ದಿವಾಹಕರು ಈ ವಿಜಯದ ಸಮಾಚಾರವನ್ನು ಅತಿ ಶೀಘ್ರವಾಗಿ ಯೂಸುಫ ಆದಿಲಶಾಹನ ಕಿವಿಗೆ ತಲುಪಿಸಿದರು. ಅದನ್ನು ಕೇಳಿದ ಯೂಸುಫನು ಅಲ್ಲಾಹನ ಕರುಣೆಗಾಗಿ ಧನ್ಯತೆಯಿಂದ ಪ್ರಾರ್ಥನೆಯನ್ನು ಸಲ್ಲಿಸಿದನು. ಈ ಗೆಲುವು ಮುಂದಿನ ಗೆಲುವುಗಳಿಗೆ ನಾಂದಿ ಎಂದು ಸ್ವೀಕರಿಸಿದನು. ದಸ್ತೂರ ದೀನಾರನನ್ನು ಸದಾ ಕಾಲಕ್ಕೂ ನಿರ್ನಾಮಗೊಳಿಸುವುದೇ ತನ್ನ ಮುಂದಿನ ಹೆಜ್ಜೆಯೆಂದು ಸಂಕಲ್ಪ ಮಾಡಿ, ಬಹಳ

ತೀವ್ರಗತಿಯಲ್ಲಿ ತನಗೆ ಗೆಲುವು ತಂದುಕೊಡುವ ಸೈನ್ಯ ಪಡೆಯತ್ತ ಸಾಗಿ ಅವರನ್ನು ಕೂಡಿಕೊಂಡನು.

ದಸ್ತೂರ ಮತ್ತು ಯೂಸುಫರ ಕಾಳಗದ ಸಿದ್ಧತೆ :

ಯೂಸುಫ ಆದಿಲಶಾಹನು ತನಗೆ ಗೆಲುವು ಸಾಧಿಸಿಕೊಟ್ಟ ಯುದ್ಧಭೂಮಿಯಲ್ಲಿಯ ತನ್ನ ಸೈನ್ಯಪಡೆಯ ಹತ್ತಿರ ಬಂದಕೂಡಲೇ ಸೈನ್ಯವನ್ನು ಪುನರ್ ಸಂಯೋಜಿಸಿದನು. ಎಡಭಾಗದಲ್ಲಿ ಗಜ್ನಫರ್ ಆಖಾ, ಬಲಭಾಗದಲ್ಲಿ ಹೈದರ್ ಬೇಗ ತಿರಮಿಜಿ, ಹಾಗೂ ಕೇಂದ್ರ ಸ್ಥಳದಲ್ಲಿ ಮಿರ್ಜಾ ಜಹಾಂಗೀರ ಬೇಗ್ ಖಮೀಯನ್ನು ನೇಮಿಸಿದನು. ಯೂಸುಫ ಆದಿಲಶಾಹನು ಸೈನ್ಯದ ಮಧ್ಯದಲ್ಲಿ ನಿಂತನು. ಅವರ ಶಕ್ತಿಯ ಹೆಮ್ಮೆಯನ್ನು ಗೌರವಿಸುತ್ತ ಮುಂದಿನ ಯುದ್ಧದ ಹಿನ್ನೆಲೆಯಲ್ಲಿ ತನ್ನ ಸೈನ್ಯವನ್ನು ಈ ರೀತಿ ಆಯಾ ಭಾಗಗಳಲ್ಲಿ ಹಂಚಿಕೊಟ್ಟನು. ಹಿಂದುಸ್ಥಾನಿ ರೂಢಿಯಂತೆ, ದಸ್ತೂರನು ಆ ಯುದ್ಧ ಭೂಮಿಯ ಅಲ್ಲಲ್ಲಿ ಬಲಿಷ್ಠವಾದ ಆನೆಗಳನ್ನು, ತೋಪುಗಳನ್ನು ಚಲಾಯಿಸುವ ಯಾಂತ್ರಿಕ ವಿಧಾನದ ತರಬೇತಿಯನ್ನು ಪಡೆದ ಸೈನಿಕರನ್ನು ನಿಲ್ಲಿಸಿದನು.

ದಸ್ತೂರ ದೀನಾರನ ಕೊಲೆ ಮತ್ತು ಯೂಸುಫ ಆದಿಲಶಾಹನ ವಿಜಯ :

ಉಭಯಪಕ್ಷದ ಸೈನ್ಯಪಡೆಗಳು ತರಬೇತಿಯನ್ನು ಪಡೆದು ಆತ್ಮಸ್ಥೈರ್ಯದಿಂದ ಸಿದ್ಧಗೊಂಡ ಮೇಲೆ ಕಾಳಗವು ಆರಂಭವಾಯಿತು. ಎರಡೂ ಕಡೆಯ ಶೂರರು ತಮ್ಮ ಧೈರ್ಯ ಸ್ಥೈರ್ಯಗಳಿಂದ, ದಕ್ಷತೆಯಿಂದ ಕಾಳಜಿಪೂರ್ವಕ ಯುದ್ಧ ಮಾಡಿದರು. ರಣರಂಗವೆಲ್ಲ ಸರ್ವನಾಶವಾಯಿತು. ಮೊತ್ತಮೊದಲಿಗೆ, ಮಿರ್ಜಾ ಜಹಾಂಗೀರ ಬೇಗ್ ಕುಮ್ಮಿಯ ಸೈನ್ಯದಿಂದ ಹೊರಹೊರಟು ವೈರಿಯ ಮೇಲೆ ಆಕ್ರಮಣ ಮಾಡಿದನು. ಲೆಕ್ಕವಿಲ್ಲದಷ್ಟು ವೈರಿಯ ಸೈನಿಕರನ್ನು ತನ್ನ ಶಸ್ತ್ರಾಸ್ತ್ರಗಳಿಂದ ಸದೆಬಡೆದನು. ಅನಂತರ, ಗಜ್ನಫರ ಮತ್ತು ಹೈದರ್ ಬೇಗ್, ಎಡ–ಬಲ ಭಾಗಗಳಿಂದ ವೈರಿಯತ್ತ ಸಾಗಿದರು. ಇಬ್ಬರೂ ಕೂಡಿಕೊಂಡು ವೈರಿಗೆ ಯುದ್ಧದ ರುಚಿಯನ್ನು ತೋರಿಸತೊಡಗಿದರು. ಕೊನೆಗೆ ಯೂಸುಫ ಆದಿಲಶಾಹನ ದೈವದ ನಕ್ಷತ್ರ ಹೊಳೆಯತೊಡಗಿತು. ದಸ್ತೂರನು ಯುದ್ಧದಲ್ಲಿ ಮೃತನಾದನು. ಆತನ ಸೈನ್ಯವು ಎದೆಯೊಡೆದುಕೊಂಡು ರಣರಂಗದಿಂದ ದಿಕ್ಕಾಪಾಲಾಯಿತು. ಯೂಸುಫ ಆದಿಲಶಾಹನಿಗೆ ವೈಭವೋಪೇತ ವಿಜಯವು ಒಲಿದುಬಿಟ್ಟಿತು.

ವಿಜಯದ ಹಿಗ್ಗು :

ವಿಜಯದ ಹಿಗ್ಗಿನ ಸಂಭ್ರಮದಲ್ಲಿ ಮೈಮರೆತಿರುವಾಗ ಗಜ್ನಫರ್ ಬೇಗನ ಹಣೆಗೆ ಒಂದು ಕಲ್ಲು ಬಡೆದು ಗಾಯವಾಯಿತು. ಅದನ್ನು ಲಕ್ಷ್ಯಕ್ಕೆ ತೆಗೆದುಕೊಳ್ಳದೆ ಎಲ್ಲ ಸರದಾರರನ್ನು ಒಳಗೊಂಡು ಆತನು ಯೂಸುಫ ಆದಿಲಶಾಹನಿಗೆ ಅಭಿನಂದನೆ ಸಲ್ಲಿಸಲು ಆತನ ಸನ್ನಿಧಿಗೆ ಉಪಸ್ಥಿತನಾದನು. ಈ ಎಲ್ಲರಿಗೆ ಯೂಸುಫ ಆದಿಲಶಾಹನು

ಸಂತೋಷದಿಂದ ಸಂಪತ್ತಿನ ರಾಶಿಯನ್ನು ನೀಡಿ ಗೌರವಿಸಿ ತನ್ನ ಸಂತೋಷವನ್ನು ಹಂಚಿಕೊಂಡನು. ಆಗ ಎಲ್ಲ ಅಮೀರರು ಒಕ್ಕೊರಳಿನಿಂದ ಎತ್ತರದ ಧ್ವನಿಯಲ್ಲಿ ಯೂಸುಫ ಆದಿಲಶಾಹನಿಗೆ ಇನ್ನೂ ಹೆಚ್ಚಿನ ಉತ್ಕರ್ಷ, ಕೀರ್ತಿ, ಸೌಖ್ಯ ನೀಡಲು ಭಗವಮತನನ್ನು ಪ್ರಾರ್ಥಿಸಿದನು. ಯೂಸುಫ ಆದಿಲಶಾಹನು ತನ್ನ ತಮ್ಮ ಗಜ್ನಫರ್ ಆಖಾನನ್ನು ಪ್ರೀತಿಯಿಂದ ಆಲಂಗಿಸಿಕೊಂಡು ಸ್ವತಃ ತಾನೇ ಗಾಯಕ್ಕೆ ಔಷದೋಪಚಾರ ಮಾಡಿದನು. ಗಜ್ನಫರನಿಗೆ ಬಹಳ ಆಳವಾದ ಗಾಯವಾಗಿತ್ತು. ಆ ಗಾಯವನ್ನು ಗುಣಪಡಿಸಲು ಎಲ್ಲ ತರಹದ ಚಿಕಿತ್ಸೆಗಳನ್ನು ಮಾಡಿದನು, ಆದರೆ ಪ್ರಯತ್ನಕ್ಕೆ ಫಲ ದೊರೆಯಲಿಲ್ಲ. ಮೂರನೆಯ ದಿವಸ ಆತನನ್ನು ಮೃತ್ಯು ಕೊಂಡೊಯ್ದಿತು.

ಗಜ್ನಫರ್ ಬೇಗನ ಸಾವು :

ಗಜ್ನಫರ ಬೇಗನ ಸಾವು ಯೂಸುಫ ಆದಿಲಶಾಹನಿಗೆ ತುಂಬಲಾರದ ಗಾಢವಾದ ದುಃಖವನ್ನು ನೀಡಿತು. ಈತನನ್ನು ಕಳೆದುಕೊಂಡಿದ್ದು ತನ್ನ ಪ್ರೀತಿಯ ಒಡಹುಟ್ಟಿದ ತಮ್ಮನನ್ನೇ ಕಳೆದುಕೊಂಡಷ್ಟು ಸಹಿಸದ ದುಃಖವಾಗಿತ್ತು. ಒಂದು ಅರ್ಥದಲ್ಲಿ ಗಜ್ನಫರನು ಒಡಹುಟ್ಟಿದವರಿಗಿಂತ ಮೇಲಾಗಿದ್ದನು. ಕೆಲವರು ಈತನನ್ನು ಸಾಕು ತಮ್ಮನೆಂದು ತಿಳಿಸುತ್ತಾರೆ. ಏಕೆಂದರೆ, ಯೂಸುಫ ಆದಿಲಶಾಹನು ದೇಶದಿಂದ ದೂರ ಹೋದಾಗ ರೋಮದಿಂದ ಸಾವಾಕ್ಕೆ ಬಂದಿದ್ದನು. ಆಗ, ಸಾವಾದಿಂದ ಗಜ್ನಫರ ಹಿಂದುಸ್ಥಾನಕ್ಕೆ ಬಂದನು, ಎಂದು ಹೇಳುತ್ತಾರೆ. ಇದು ಸರಾಸರಿ ಕತೆಯಾದರೂ, ಯೂಸುಫನಿಗೆ ಗಜ್ನಫರನ ಸಾವು ಬಹಳ ಆಘಾತವನ್ನುಂಟು ಮಾಡಿತ್ತು. ಬಹಳ ದಿವಸದವರೆಗೆ ಆ ಆಘಾತದ ಗಾಯವು ಉರಿದೇಳುತ್ತಲೇ ಇತ್ತು. ಸ್ವಲ್ಪ ನೆನಪು ಮಾಸುತ್ತ ನಡೆದಾಗ, ರಾಜ್ಯದ ಸಮಸ್ಯೆಗಳತ್ತ ಗಮನ ಹರಿಸತೊಡಗಿದನು. ಯೂಸುಫನು ದಸ್ತೂರನ ಪ್ರದೇಶಗಳಾದ ಹುಸ್ನಾಬಾದ ಗುಲಬರ್ಗಾ, ಸಗರ, ಆಮ್ಡುಂಕರ್ ಮೊದಲಾದವುಗಳನ್ನು ವಶಪಡಿಸಿಕೊಂಡನು. ಈ ಪ್ರದೇಶಗಳನ್ನು ತನ್ನ ಗೌರವಾನ್ವಿತ ನಂಬಿಗಸ್ತ ಅಮೀರರಿಗೆ ವಹಿಸಿಕೊಟ್ಟನು. ತಾನು ಬಿಜಾಪುರದತ್ತ ನಡೆದನು. ಅಲ್ಲಿ ತನ್ನ ಅಭಿಮಾನಿಗಳಿಗೆ ಮತ್ತು ಸರದಾರರಿಗೆ ರಾಜಮರ್ಯಾದೆ ನೀಡಿ ಸನ್ಮಾನಿಸಿ ಸಂತೋಷಪಟ್ಟನು.

ದಸ್ತೂರನೊಡನೆ ನಡೆದ ಯುದ್ಧದಲ್ಲಿ ಮಿರ್ಜಾಜಹಾಂಗೀರ ಖಮಿ ಮತ್ತು ಹೈದರ್ ಬೇಗರು ತೋರಿಸಿದ ಕೌಶಲವನ್ನು ಅವರ ಪ್ರಾಮಾಣಿಕ ಶ್ರಮವನ್ನು ಗಮನಿಸಿ ಅವರಿಗೆ ವಿಶೇಷವಾದ ಸನ್ಮಾನ ಮಾಡಿ ಸಂತೋಷಪಟ್ಟನು.

ಸಮಾರಂಭ ಕೂಟ :

ಹಿಜರಿಶಕೆ ೯೦೮ರಲ್ಲಿ ಆದಿಲಶಾಹ ಸಂತೋಷವನ್ನು ಹಂಚಿಕೊಳ್ಳುವದಕ್ಕಾಗಿ ಸಂತೋಷಕೂಟ ಏರ್ಪಡಿಸಿದನು. ಈ ಸಮಾರಂಭಕ್ಕೆ ಸಯ್ಯದ ಅಹಮದ್ ಸದರಿ, ಶಿಯಾ ಉಲ್ಮಾ (ಪಂಡಿತರು) ರನ್ನು ಮತ್ತು ಇನ್ನಿತರರನ್ನು ಆಹ್ವಾನಿಸಿದನು ಇವರೆಲ್ಲರ

ಸಮಕ್ಷಮದಲ್ಲಿ ಯೂಸುಫ ಆದಿಲಶಾಹ, "ನನ್ನ ಜೀವನದ ಆರಂಭದಲ್ಲಿ ನಾನು ದೇಶ ಬಿಟ್ಟು ಕಂಗಾಲನಾಗಿ ಬಾಜಾರದ ರಸ್ತೆಗಳಲ್ಲಿ ಮಾರಾಟವಾಗುತ್ತಲಿದ್ದೆ. ಆ ಕಾಲದಲ್ಲಿ ಹಜರತ್ ಖಿಜರ್ ಅಲ್ಹೈ ಓ ಸಲಾಮರು ಕನಸಿನಲ್ಲಿ ಬಂದು ನನಗೆ ಭವಿಷ್ಯದ ಬೆಳಕು ತೋರಿಸಿ ಅಲ್ಲಾಹನು ನನಗೆ ಈ ದಾರುಣ ಸ್ಥಿತಿಯಿಂದ ಬಿಡುಗಡೆ ಮಾಡಿ ರಾಜ್ಯದ ಸಿಂಹಾಸನಾಧೀಶನನ್ನಾಗಿ ಮಾಡುತ್ತಾನೆಂದು ಪ್ರಸಾದವಾಣಿಯನ್ನು ಬಿತ್ತರಿಸಿದ್ದರು. ಅವರು ನನಗೆ ಉಪದೇಶಿಸಿದ್ದೇನೆಂದರೆ, ನೀನು ರಾಜ್ಯಾಧಿಕಾರವನ್ನು ಸ್ವೀಕರಿಸಿದಾಗ, ಕರುಣಾಮಯಿ ಅಲ್ಲಾಹನನ್ನು ನೆನೆಸಿಕೊಳ್ಳಬೇಕೆಂದು ಆತನನ್ನು ಮರೆಯಬಾರದೆಂದೂ ಪೈಗಂಬರರ ವಂಶಾವಳಿಯನ್ನು ಗೌರವಿಸಬೇಕೆಂದೂ ಮತ್ತು ಶಿಯಾ ಮತವನ್ನು ಜಗತ್ತಿನಲ್ಲಿ ಪಸರಿಸಲು ಜೀವನಪರ್ಯಂತ ಪ್ರಯತ್ನ ಮಾಡುತ್ತಿರು" ಎಂದು ತಿಳಿಸಿದನು.

ಶಿಯಾ ಮತವನ್ನು ಹಬ್ಬಿಸುವಲ್ಲಿ ಬದ್ಧತೆ :

ನಾನು ಈ ಕನಸಿನ ಹಿನ್ನೆಲೆಯಲ್ಲಿ ಅಲ್ಲಾಹನಿಗೆ ವಚನ ಕೊಟ್ಟಿದ್ದೆನು. ಅರಸೊತ್ತಿಗೆ ಸಾಧಿಸಿಕೊಂಡಾಗ ಹನ್ನೆರಡು ಇಮಾಮರ ಹೆಸರುಗಳನ್ನು ಸೇರ್ಪಡೆ ಮಾಡಿ ಶಿಯಾ ಮತವನ್ನು ಪ್ರವರ್ಧನಗೊಳಿಸುವೆ; ಇದಲ್ಲದೆ ತಮರಾಜನ ಉಪಟಳ ಮತ್ತು ಕಿಡಿಗೇಡಿತನಗಳ ಕಾಲದಲ್ಲಿ ದೇಶ ಮತ್ತು ರಾಜ್ಯಗಳು ನನ್ನ ಕೈಯಿಂದ ಜಾರಿ ಹೋಗುತ್ತಿದ್ದಾಗ, ಆ ಸಮಯದಲ್ಲಿ ಎರಡು ಸಲ ಅಲ್ಲಾಹನನ್ನು ಕುರಿತು ಪ್ರಾರ್ಥನೆ ಮಾಡಿ ಕೇಳಿ ಕೊಂಡಿದ್ದೆನು. ಅದೇನೆಂದರೆ, "ನಾನು ವೈರಿಯನ್ನು ಗೆದ್ದಾಗ ದೇಶದಲ್ಲಿ ಶಿಯಾ ಮತವನ್ನು ಪ್ರಚಾರ ಮಾಡಲು ಸಂಪೂರ್ಣ ಪ್ರಯತ್ನಿಸುತ್ತೇನೆ." ಎಂದು.

ತಟಸ್ಥ ಗುಂಪಿನ ಸಲಹೆಗಳು :

ಸಮಾರಂಭದಲ್ಲಿ ತನ್ನ ವಿಚಾರಗಳನ್ನು ವ್ಯಕ್ತ ಪಡಿಸಿದ ಮೇಲೆ ಯೂಸುಫ ಆದಿಲಶಾಹನು ತನ್ನ ದರ್ಬಾರದ ಸದಸ್ಯರ ಸಲಹೆಗಳನ್ನು ಕೇಳಿದನು. ಬಾದಶಹನ ವಿಚಾರಗಳು ಸರಿಯಾಗಿವೆಯೆಂದು ಕೆಲವು ಸದಸ್ಯರು ಅಭಿನಂದಿಸಿ ತಮ್ಮ ಪೂರ್ಣ ಬೆಂಬಲ ವ್ಯಕ್ತಪಡಿಸಿದರು. ಆದರೆ, ಒಂದು ಗುಂಪು, ದೂರದೃಷ್ಟಿಯಿಂದ ವಿಚಾರಮಾಡಿ, "ಈಗ, ಅಧಿಕಾರ ಸ್ಥಾಪಿಸಿ ಕೇವಲ ಕೆಲವು ದಿನಗಳಾಗಿವೆ. ರಾಜ್ಯದ ಪರಂಪರೆಯಲ್ಲಿಯ ನಿಜವಾದ ವಂಶಜನಾದ ಮಹಮೂದ ಶಾಹ ಬಹಮನಿಯನ್ನು ಹೆಸರಿಗೆ ಮಾತ್ರ ಬಾದಶಹನೆಂದು ಕಾಣಲಾಗುತ್ತದೆ. ಇದಲ್ಲದೆ, ಅಹಮದ್ ನಿಜಾಮುಲ್ ಮಲಿಕ್ ಬಹರೀ ಮತ್ತು ಫತೇವುಲ್ಲಾ ಇಮಾದಿಯಂತಹ ಪ್ರತಿಷ್ಠಿತ ಅಮೀರರು ಸುನ್ನಿ ಪಂಥದವರು; ಸನ್ನಿಧಿಯ ಸೈನ್ಯದ ಸರದಾರರಲ್ಲಿ ಬಹಳಷ್ಟು ಜನರು ಸುನ್ನಿ ಪಂಥವನ್ನು ಒಪ್ಪಿಕೊಂಡಿದ್ದಾರೆ. ಮತಾಂತರ ಪ್ರಕಟಣೆಯಿಂದ ರಾಜ್ಯದಲ್ಲಿ ಯಾರಾದರೂ

ಗಲಾಟೆಯಿಬ್ಬಿಸಿ ಹೊಸ ಗಂಡಾಂತರ ಸೃಷ್ಟಿ ಮಾಡಬಹುದು." ಎಂದು ಸೂಕ್ಷ್ಮವಾಗಿ ನಿವೇದಿಸಿಕೊಂಡರು.

ಇರಾನ ರಾಜ್ಯದ ದೃಷ್ಟಾಂತ :

ಯೂಸುಫ ಆದಿಲಶಾಹನು ದೂರದೃಷ್ಟಿಯಿಂದ ವಿವೇಚಿಸಿದ ಗುಂಪಿನ ಸಲಹೆ ಸೂಚನೆಗಳನ್ನು ಬಹಳ ತಾದಾತ್ಮತೆಯಿಂದ ಕೇಳಿದನು. ಸ್ವಲ್ಪ ಸಮಯ ಅಂತರ್ಮುಖಿಯಾಗಿ ಚಿಂತನೆ ಮಾಡಿ, " ನಾನು ಅಲ್ಲಾಹನಿಗೆ ಪ್ರಾರ್ಥನೆ ಸಲ್ಲಿಸಿ ಪ್ರತಿಜ್ಞೆ ಮಾಡಿಬಿಟ್ಟುದದರಿಂದ, ಆ ಪ್ರತಿಜ್ಞೆಯನ್ನು ಮುರಿದು ನನ್ನ ನಡೆಯನ್ನು ಆ ಅಪವಾದಕ್ಕೆ ಗುರಿ ಮಾಡಲಾರೆ. ಈ ನಿಟ್ಟಿನಲ್ಲಿ ಬರುವ ಸಮಸ್ಯೆಗಳನ್ನು ಆ ದಯಾಳು ಅಲ್ಲಾಹನೇ ಪರಿಹರಿಸಿ ಸಹಕರಿಸುತ್ತಾನೆ." ಎಂದು ತನ್ನ ನಿರ್ಧಾರವನ್ನು ಪ್ರಕಟಿಸಿದನು. ಅದೇ ಸಮಯಕ್ಕೆ ಇರಾನದಲ್ಲಿ ಶಾಹ ಇಸ್ಮಾಯಿಲ್ ಸಫವಿಯು ಶಿಯಾ ಪಂಥವನ್ನು ಅನುಸರಣೆಗೆ ತಂದು ತನ್ನ ದೇಶದಲ್ಲಿ ಪ್ರಚಾರ ಮಾಡುತ್ತಿರುವುದನ್ನು ಕೇಳಿ ಯೂಸುಫ ಆದಿಲಶಾಹನು ಬಹಳ ಸಂತುಷ್ಟನಾಗಿ ತನ್ನ ಸಂಕಲ್ಪವನ್ನು ಸಾಧಿಸುವತ್ತ ಇನ್ನಷ್ಟು ಅಚಲನಾದನು.

ಶಿಯಾ ಮತದ ಖುತ್ಬಾ :

ಅದೇ ವರ್ಷ ಜಿಲ್ಹಜ್ ತಿಂಗಳು ಶುಕ್ರವಾರದಂದು ಯೂಸುಫ ಆದಿಲಶಾಹನು ಅರಕ್ ಕೋಟೆಯ ಜಾಮಾ ಮಸೀದೆಗೆ ಬಂದನು. ಮದೀನಾ ಮುನವ್ವರಾದ ಶುದ್ಧ ವಂಶದ ಸಯ್ಯದನು ಖುತ್ಬಾ ಓದಲಿಕೆ ಮಿಂಬರ್ ಮೇಲೆ ಸಾಗಿ ಎಲ್ಲರಿಗಿಂತ ಮೊದಲು ಪ್ರಾರ್ಥನಾ ಕರೆಯಲ್ಲಿ 'ಅಲಿಯನ್ ವಲಿಯುಲ್ಲಾ' ಎಂಬುದನ್ನು ಹೆಚ್ಚಿಸಿದನು. ಅನಂತರ ಹನ್ನೆರಡು ಇಮಾಮರ ಹೆಸರುಗಗಳನ್ನು ಸೇರಿಸಿಕೊಂಡು ಉಳಿದವರನ್ನೆಲ್ಲ ಹೊರಗಿಡಲಾಯಿತು.

ಆದಿಲಶಾಹನ ಜಾಗರೂಕತೆ :

ಚರಿತ್ರೆಕಾರರ ಟಿಪ್ಪಣಿಯ ಪ್ರಕಾರ ಯೂಸುಫ ಆದಿಲಶಾಹನು ಹಿಂದುಸ್ಥಾನದಲ್ಲಿ ಪ್ರಪ್ರಥಮವಾಗಿ ಶಿಯಾ ಮತವನ್ನು ಸ್ಥಾಪಿಸುವಲ್ಲಿ ಹನ್ನೆರಡು ಇಮಾಮರ ಹೆಸರಿನಲ್ಲಿ ಖುತ್ಬಾ ಓದಿದ ಪ್ರಪ್ರಥಮ ಬಾದಶಹನೆಂಬ ಖ್ಯಾತಿಗೆ ಒಳಗಾದವನು. ಆದರೆ ಈ ಸಂದರ್ಭದಲ್ಲಿ, ಬಾದಶಹನ ಈ ಕ್ರಮದ ಬಗ್ಗೆ ಯಾವ ತರಹದ ಮಧ್ಯಂತರ ಪ್ರವೇಶಿಸುವ ಧೈರ್ಯ ಶಿಯಾಗಳಿಗೆ ಇರಲಿಲ್ಲ. ಯೂಸುಫ ಆದಿಲಶಾಹ ಬಹಳ ಸೂಕ್ಷ್ಮಾತಿಸೂಕ್ಷ್ಮ ಎಚ್ಚರಿಕೆಯಿಂದ ನಡೆದು ಕಾರ್ಯವನ್ನು ಸಾಧಿಸಿದನು. ಆದ್ದರಿಂದ ಅಸೂಯೆಯನ್ನು ಬೆಳೆಸಲಾಗಲಿಲ್ಲ. ಹೀಗಾಗಿ ಶಿಯಾ ಸುನ್ನಿಗಳು ಒಬ್ಬರಿಗೊಬ್ಬರು ಒಂದಾಗಿ ನಡೆದುಕೊಳ್ಳುವಂತೆ ಆಯಿತು.

ಧಾರ್ಮಿಕ ಒಕ್ಕಟ್ಟು :

ಯೂಸುಫ ಆದಿಲಶಾಹನು ಶಿಯಾ ಧರ್ಮವನ್ನು ಸ್ವೀಕರಿಸಿದ ಅನಂತರ ಶಿಯಾ ಮತ್ತು ಸುನ್ನೀ ಪಂಡಿತರು ಒಬ್ಬರಿಗೊಬ್ಬರು ಗಹನವಾದ ಪ್ರೀತಿ, ವಿಶ್ವಾಸಗಳಿಂದ ಬಿಚ್ಚು ಮನಸ್ಸಿನೊಡನೆ ನಡೆದುಕೊಳ್ಳತೊಡಗಿದರು. ಮನಸ್ಸಿನಲ್ಲಿ ಯಾವ ಕಿಲುಬನ್ನು ಇಟ್ಟುಕೊಳ್ಳದೆ ನಿರ್ಮಲ ಚಿತ್ತರಾಗಿದ್ದರು. ಪ್ರತಿಯೊಂದು ಮತದವರು ತಮ್ಮ ತಮ್ಮ ನಂಬಿಕೆ ಮತ್ತು ಸಂಪ್ರದಾಯಗಳಂತೆ ದೇವರಿಗೆ ಪ್ರಾರ್ಥನೆ ಸಲ್ಲಿಸಿ ಆಶೀರ್ವಾದ ಪಡೆಯುತ್ತಿದ್ದರು. ಎಲ್ಲರೂ ಸೌಹಾರ್ದಯುತರಾಗಿದ್ದುದರಿಂದ ಎಲ್ಲರೂ ತಮ್ಮ ತಮ್ಮ ಮತ ಸಂಪ್ರದಾಯಗಳನ್ನು ಗೌರವಿಸುತ್ತ ಉಳಿದವರ ಮತ ಸಂಪ್ರದಾಯಗಳನ್ನು ಗೌರವಿಸುತ್ತಿದ್ದರು. ಯಾರು ಯಾರನ್ನೂ ಅಪಮಾನಗೊಳಿಸಲು, ಕೊಂಕಾಡಲು ಧೈರ್ಯ ಸಾಲುತ್ತಿರಲಿಲ್ಲ. ಪಂಡಿತರು, ಪೀಠಾಧಿಪತಿಗಳು ಈ ಮತಸಹಿಷ್ಣುತೆಯನ್ನು ಕಂಡು ಮೂಕ ವಿಸ್ಮಯರಾಗುತ್ತಿದ್ದರು. ಈ ತರಹದ ಪರಮತಸಹಿಷ್ಣುತೆಯ ಸಮನ್ವಯ ಸೌಹಾರ್ದಯುತ ವಾತಾವರಣವನ್ನು ನಿರ್ಮಿಸುವಲ್ಲಿ ಯೂಸುಫ ಆದಿಲಶಾಹನ ದೂರದರ್ಶಿತ್ವ, ಚಾಣಾಕ್ಷತೆ ಅನುಕರಣೀಯ. ಇದರ ಫಲಶ್ರುತಿ ಒಕ್ಕಟ್ಟು.

ಒಂದು ವಿಚಿತ್ರ ಕಥೆ :

ಲೇಖಕ ಫರಿಸ್ತಾನನಿಗೆ ಈ ಸಂದರ್ಭದಲ್ಲಿ ಒಂದು ವಿಚಿತ್ರವಾದ ಕತೆ ನೆನಪಾಗುತ್ತದೆ. ಅದನ್ನು ಓದಿ ಗ್ರಹಿಸುವವರಿಗಾಗಿ ಈ ಕೆಳಗೆ ವಿವರಿಸಲಾಗಿದೆ:

ಮೌಲಾನಾ ಗಯಾಸುದ್ದೀನನಂತಹ ಹಿರಿಯರು ಇರಾನನ ರಹವಾಸಿಗಳಾಗಿದ್ದರು ಎಂದು ಕೆಲವು ಬರಹಗಾರರು ಹೇಳುತ್ತಾರೆ. ಅವರು ಬಹಳ ಬುದ್ಧಿವಂತರು ಮತ್ತು ಪಂಡಿತರಾಗಿದ್ದರು. ಇತಿಹಾಸ ಮತ್ತು ಕಾವ್ಯರಚನೆಯಲ್ಲಿ ಅವರಿಗೆ ಬಹಳ ಆಸಕ್ತಿ ಇತ್ತು. ಕವಿತ್ವ (ಶಾಯರಿ)ಯಲ್ಲಿ ಅವರ ಪ್ರತಿಭಾಶಕ್ತಿ ಮೇರು ಮಂದಾರವಾಗಿತ್ತು. ಇರಾನಿನಲ್ಲಿ ದೇವದೂತರನ್ನು ವರ್ಣಿಸುವ ಖಸೀದೆಗಳು ಜನಪ್ರಿಯತೆ ಪಡೆದಿವೆ. ಮೌಲಾನಾ ಗಯಾಸುದ್ದೀನರು ಶಿಯಾ ಮತಸ್ಥರಾಗಿದ್ದರು, ಸತ್ಯನಿಷ್ಠುರವಾದ ಕರ್ತವ್ಯನಿಷ್ಠರಾಗಿದ್ದರು. ಇವರ ರೀತಿ ಏನಿತ್ತೆಂದರೆ, ನಮಾಜಿನ ಸಮಯದಲ್ಲಿ ಶಿರಾಜ ಪಟ್ಟಣದ ಬಾಜಾರದಲ್ಲಿ ಕುಳಿತು ಔಷಧಿಗಳನ್ನು ವ್ಯಾಪಾರ ಮಾಡುತ್ತಿದ್ದರು. ಅವರು ಶ್ರೇಷ್ಠ ಕವಿಗಳಾಗಿದ್ದುದರಿಂದ ಸುಂದರ ಕವಿತೆಗಳ ಸಾಲುಗಳನ್ನು ಆಕರ್ಷಕವಾಗಿ ಹೇಳಿ ಜೊತೆಗೆ ದೃಷ್ಟಾಂತಗಳನ್ನು ಸಂಪನ್ನ ಪಡಿಸಿ ಗಿರಾಕಿಗಳನ್ನು ಸಂತುಷ್ಟಗೊಳಿಸಿ ತಮ್ಮ ವ್ಯಾಪಾರವನ್ನು ಲಾಭದಾಯಕ ಮಾಡಿಕೊಳ್ಳುತ್ತಿದ್ದನು. ಇರಾನ ದೇಶದಲ್ಲಿಯ ನಿವಾಸಿಗಳಿಗೆ ಅವರ ಮೇಲೆ ಹಿರಿಯರೆಂಬ ಗೌರವವು ಬೆಳೆದಿತ್ತು. ಅವರ ಕೆಲಸದ ಮೇಲೆ ತುಂಬ ಭರವಸೆ ಇತ್ತು. ಅವರು ಕೊಡುವ ವಸ್ತುಗಳು ಮತ್ತು ಆ ವಸ್ತುಗಳ ಬೆಲೆಗಳು ಪೂರ್ಣ ಪ್ರಾಮಾಣಿಕ ಹಾಗೂ ಪರಿಶುದ್ಧವಾದುವೆಂಬ ಪೂರ್ತಿ ವಿಶ್ವಾಸ

ಆ ಜನರಿಗೆ ಇದ್ದಿತು. ಒಂದು ದಿನ ಇಬ್ರಾಹಿಮನು ಅವರನ್ನು ಕರೆಸಿಕೊಂಡು, ಈಗಿರುವ ಮತಗಳಲ್ಲಿ ಶ್ರೇಷ್ಠವಾದ ಮತ ಯಾವುದಿದೆಯೆಂದು ಪ್ರಶ್ನೆ ಮಾಡಿದನು. ಅದಕ್ಕೆ ಮೌಲಾನಾರು, "ಬಾದಶಹ ಒಂದು ಅರಮನೆಯಲ್ಲಿ ಇರುತ್ತಾನೆ. ಅವರ ಮನೆಗೆ ಬಾಗಿಲುಗಳು ಹಲವಾರು. ಯಾವ ವ್ಯಕ್ತಿ ಯಾವ ಬಾಗಿಲಿನಿಂದ ಪ್ರವೇಶಿಸುತ್ತಾನೆಯೋ, ಆ ಅರಮನೆಯಲ್ಲಿ ಆ ವ್ಯಕ್ತಿಗೆ, ಬಾದಶಹನ ದರುಶನದಿಂದ ಸಂತುಷ್ಟತೆ ದೊರೆಯುತ್ತದೆ. ಆದರೆ, ಯಾರಿಗೆ ಬಾದಶಹನ ದರ್ಶನಭಾಗ್ಯ ಬೇಕೆನ್ನಿಸುತ್ತದೆಯೋ ಅಂತಹನು ಬಾದಶಹನ ಸೇವೆ ಕಡೆಗೆ ಮನಸ್ಸು ತುಂಬಿಕೊಂಡು ಆಶಾವಾದಿಯಾಗಿರಬೇಕು. ಇದು ಅನಂತರದ ಮಾತು. ಈಗ ಆತನು ಯಾವ ಬಾಗಿಲಿನಿಂದ ಪ್ರವೇಶ ಪಡೆಯಬೇಕೆಂಬುದು ಸದ್ಯದ ವಿಚಾರ" ಎಂದು ಉತ್ತರಿಸಿದನು.

ಅನಂತರ ಸುಲ್ತಾನ ಇಬ್ರಾಹಿಮನು ಮತ್ತೊಂದು ಪ್ರಶ್ನೆ ಮಾಡಿದನು. "ಪ್ರತಿಯೊಂದು ಮತ ಹಾಗೂ ಗುಂಪುಗಳಲ್ಲಿ ಯಾವುದು ಶ್ರೇಷ್ಠ?" ಇದಕ್ಕೆ ಮೌಲಾನಾ ಉತ್ತರಿಸಿದುದು ಹೀಗೆ: "ಒಳ್ಳೆಯ ಚಾರಿತ್ರ್ಯದ ಮನುಷ್ಯನು ಯಾವ ಮತದ ಸಂಬಂಧವನ್ನಿಟ್ಟುಕೊಂಡರೂ ಆತನು ಅಲ್ಲಾಹನ ಅತ್ಯಂತ ಪ್ರೀತಿಯ ಭಕ್ತನಾಗಿರುತ್ತಾನೆ." ಎಂದು. ಬಾದಶಹನಿಗೆ ಮೌಲಾನಾರ ಈ ಸಂಭಾಷಣೆಯು ಮೆಚ್ಚಿಗೆಯಾಯಿತು. ಅವರನ್ನು ಗೌರವಿಸಿ ಕಾಣಿಕೆಗಳನ್ನು ನೀಡಿ ಘನತೆ ಪಡೆದನು. ಶೇಖ ಫರೀದುದ್ದೀನ ಅತ್ತಾರ ಕೂಡ ತನ್ನ 'ಮಸ್ನವಿ'(ಕವಿತೆ)ಯಲ್ಲಿ ಈ ನಿಟ್ಟಿನತ್ತ ದೃಷ್ಟಿ ಹಾಯಿಸಿದ್ದಾನೆ.

ಅಮೀರರ ಅತೃಪ್ತಿ:

ಯೂಸುಫ ಆದಿಲಶಾಹನು ಭಾಷೆಯನ್ನೋದುವಾಗ ಪ್ರಸಿದ್ಧಿ ಪಡೆದ ಲೋಕೋಕ್ತಿ, "ಅನ್ನಾಸು ಅಲಾದೀನ ಮಲುಖಹೂಮ"ದ ಪ್ರಕಾರ ಬಹಳ ಸಂಖ್ಯೆಯಲ್ಲಿ ಅಮೀರರು ಈ ಮತವನ್ನು ಸ್ವೀಕರಿಸಿದರು. ಆದರೆ ಅಮೀರರ ಒಂದು ಗುಂಪು, ನಿಷ್ಠಾವಂತ ಸುನ್ನಿ ಮತಸ್ಥರಿಂದ ಕೂಡಿತ್ತು. ಅವರಿಗೆ ಅದು ಶ್ರೇಷ್ಠ ಮತವಾಗಿತ್ತು. ಅವರು ತಮ್ಮ ಪರಂಪರೆಯ ಮತವನ್ನೇ ಅವಲಂಬಿಸಿದರು. ಮಿಯಾ ಮೊಹಮ್ಮದ್ ಐನುಲ್ ಮುಲ್ಕ, ದಿಲಾವರ ಖಾನ ಹಬಶಿ, ಮಹಮ್ಮದ್ ಖಾನ್ ಸಿಸ್ತಾನಿ ಮೊದಲಾದವರು ಬಾದಶಹನ ಈ ಮತಾಂತರ ನೀತಿಯಿಂದ ಅತೃಪ್ತಿಗೊಂಡರು. ಹೀಗಾಗಿ ಅವರು ಯೂಸುಫ ಆದಿಲಶಾಹನ ವಿರುದ್ಧ ದೇಶದಲ್ಲಿ ಗಲಭೆ ಮಾಡಿ ಬಂಡಾಯವೇಳ ಬಹುದಾದ ಸ್ಥಿತಿಯು ಇದ್ದಿತು. ಆ ಬೇಗುದಿಯನ್ನು ತಣ್ಣಗೆ ಮಾಡಲು ಅವರನ್ನೆಲ್ಲ ಯೂಸುಫ ಆದಿಲಶಾಹನು ಕರೆದು ಅವರಿಗೆ ಒಳ್ಳೆಯ ರೀತಿಯಿಂದ ತಿಳಿವಳಿಕೆ ನೀಡುತ್ತ ಹೀಗೆ ಹೇಳಿದನು.

ಯೂಸುಫ ಆದಿಲಶಾಹನ ವಿಚಾರದೃಷ್ಟಿ:

"ಮತದ ವಿಚಾರವು ಪ್ರತಿಯೊಬ್ಬ ವ್ಯಕ್ತಿಯ ವೈಯುಕ್ತಿಕ ವಿಚಾರದ ನಿರ್ಣಯದ ವಿಷಯ. ಯಾವ ವ್ಯಕ್ತಿಗೆ ಯಾವ ಮತವು ಇಷ್ಟವಾಗಿರುತ್ತದೆಯೋ, ಆ ವ್ಯಕ್ತಿಯು ಅದೇ ಮತವನ್ನು ಒಪ್ಪಿ ನಡೆಯುತ್ತಿರುತ್ತಾನೆ. ಆದುದರಿಂದ ನೀವೆಲ್ಲ, ನಮ್ಮನ್ನು ನಮ್ಮ ಮತದಂತೆ ಅನುಸರಿಸಲು ಬಿಡಿರಿ, ನೀವೆಲ್ಲ ನಿಮ್ಮ ಮತಾವಲಂಬಿಗಳಾಗಿರಿ. ಆದರೆ, ರಾಜಕೀಯ ವಿಷಯಗಳಲ್ಲಿ ಈ ಮತ ಸಮಸ್ಯೆ ತಳಹದಿಯಾಗಬಾರದು" ಎಂದು ಮನದಟ್ಟು ಮಾಡಿ ಅವರನ್ನು ಬೀಳ್ಕೊಟ್ಟನು.

ಐನುಲ್‌ಮುಲ್ಕನ ಪದಚ್ಯುತಿ :

ಯೂಸಫ ಆದಿಲಶಾಹನಿಂದ ಅತೃಪ್ತಗೊಂಡಿದ್ದ ಅಮೀರರಲ್ಲಿ ಐನುಲ್‌ಮುಲ್ಕನು ಗಾಢ ಸಂಪ್ರದಾಯವಾದಿ ಮತನಿಷ್ಠನಾಗಿದ್ದನು. ಹೀಗಾಗಿ ಆತನಿಂದ ಯೂಸುಫ ಆದಿಲಶಾಹನಿಗೆ ಹೆದರಿಕೆ ಇತ್ತು. ತನ್ನ ಹಿತಸಂರಕ್ಷಣೆಗಾಗಿ ಆತನನ್ನು ಸೇನಾಧಿಪತಿ ಹುದ್ದೆಯಿಂದ ಬಿಡುಗಡೆ ಮಾಡಿ, ಬಹಾದ್ದೂರ ಗಿಲಾನಿಯ ನಂತರ ಸಂದಾಯವಾದ ಆತನ ಜಹಗೀರನ್ನು ಮುಟ್ಟುಗೋಲು ಹಾಕಿ, ಅಹೆತಕರೀ ಮತ್ತು ಬಲ್‌ಗವಾನನ ಪ್ರದೇಶಗಳನ್ನು ಐನುಲ್‌ಮುಲ್ಕನಿಗೆ ನೀಡಲಾಯಿತು.

ಮತದ ಸ್ವಾತಂತ್ರ್ಯ :

ಯೂಸುಫ ಆದಿಲಶಾಹನು ಸುನ್ನಿಪಂಥದ ತನ್ನೆಲ್ಲ ಅಮೀರರನ್ನು ಕರೆದು, 'ತಮ್ಮ ತಮ್ಮ ಜಹಗೀರುಗಳಲ್ಲಿ ತಮ್ಮ ತಮ್ಮ ಸಂಪ್ರದಾಯದಂತೆ ಪ್ರಾರ್ಥನೆ ನಡೆಸಬೇಕು' ಎಂದು ಸೂಚನೆ ನೀಡಿದನು. ಇದಲ್ಲದೆ, ಯೂಸುಫನು ತನ್ನ ಅಧೀನದಲ್ಲಿರುವ ಪ್ರದೇಶದ ಅಧಿಕಾರಿಗಳಿಗೆ, ತಮ್ಮ ಆಚರಣೆಯಲ್ಲಿ ಯಾವ ತರಹದ ಅಡೆತಡೆಗಳನ್ನು ನಿರ್ಮಿಸಿಕೊಳ್ಳಬಾರದೆಂಬ ಉದ್ದೇಶದಿಂದ ರಾಜಾಜ್ಞೆ ಕಳುಹಿಸಿದನು. ಈ ವಿಷಯದಲ್ಲಿ ಬಾದಶಹನು ಬಹಳ ಎಚ್ಚರಿಕೆಯಿಂದ ನಡೆದುಕೊಂಡನು. ಮತದ ವಿಚಾರವಾಗಿ ಜನಸಾಮಾನ್ಯರು ಆಡಿಕೊಳ್ಳುವ ತೀರ ಚಿಕ್ಕ ಚಿಕ್ಕ ವಿಷಯಗಳನ್ನು ಬಾದಶಹನಿಗೆ ತಿಳಿಸಲು, ಸ್ಥಳಸ್ಥಳಗಳಲ್ಲಿ ವಿಶೇಷ ಗುಪ್ತಚರನ್ನು ನಿಯಮಿಸಿದನು. ಅವರು ಈ ಬಗ್ಗೆ ಬಾದಶಹನಿಗೆ ಕಾಲಕಾಲಕ್ಕೆ ವರದಿ ಒಪ್ಪಿಸಬೇಕಾಗಿತ್ತು.

ನಿಜಾಮುಲ್ ಮುಲ್ಕ ಮತ್ತು ಖಾಸಿಮ ಬರೀದರ ಆಕ್ರಮಣ :

ಇದೇ ಕಾಲದಲ್ಲಿ, ಸುನ್ನಿ ಮತನಿಷ್ಠರಾಗಿದ್ದ ನಿಜಾಮುಲ್ ಮುಲ್ಕ ಬಹರಿ ಮತ್ತು ಖಾಸಿಮ ಬರೀದರು ಯೂಸುಫ ಆದಿಲಶಾಹನಿಂದ ಬೇಸರಗೊಂಡು ಅವರಿಬ್ಬರೂ ಸೇರಿ ಬಿಜಾಪುರದ ಮೇಲೆ ದಾಳಿ ಮಾಡಿದರು. ಮೊದಲು ದಸ್ತೂರ ದೀನಾರನ ವಶದಲ್ಲಿದ್ದ ಗುಂಜೋಟಿ ಪ್ರಾಂತ ಮತ್ತು ಬೇರೆ ಬೇರೆ ಗ್ರಾಮಗಳನ್ನು ಖಾಸಿಮ

ಬರೀದನು ತನ್ನ ಅನುಶಾಸನಕ್ಕೆ ಒಳಪಡಿಸಿಕೊಂಡನು. ಅನಂತರ ಅಹಮ್ಮದ ನಿಜಾಮುಲ್ ಮುಲ್ಕನು ಒಬ್ಬ ದೂತನನ್ನು ಬಿಜಾಪುರಕ್ಕೆ ಕಳುಹಿಸಿ ಯೂಸುಫ ಆದಿಲಶಾಹನು ನಳದುರ್ಗದ ಕೋಟೆಯನ್ನು ಬಿಟ್ಟುಕೊಡಲು ಒತ್ತಾಯಿಸಿದನು. ಆ ಕೋಟೆ ಈ ಮೊದಲು ದಸ್ತೂರ ದೀನಾರನ ವಶದಲ್ಲಿತ್ತು. ಯೂಸುಫ ಆದಿಲಶಾಹನಿಗೆ ತನ್ನ ಅಮೀರರ ಅಂದಿನ ಸ್ಥಿತಿಗತಿಗಳ ಚಿತ್ರಣದ ಬಗ್ಗೆ ವಿಷಯ ಪ್ರಾಪ್ತಿ ಇರಲಿಲ್ಲ. ಆದರೆ ಆತನು ನಿಜಾಮುಲ್ ಮುಲ್ಕನ ದೂತನಿಗೆ ತೀಕ್ಷ್ಣವಾದ ಉತ್ತರವನ್ನು ನೀಡಿದನು. ಆ ಉತ್ತರದಲ್ಲಿ ನಿಜಾಮುಲ್ ಮುಲ್ಕನ ಕುರಿತು ಅಗೌರವದ ಮಾತುಗಳನ್ನಾಡಿದ್ದನು. ಗೂಂಜೋಟಿ ಮತ್ತು ಸುತ್ತಮುತ್ತಲಿನ ಪ್ರದೇಶದ ಮೇಲೆ ದಾಳಿ ಮಾಡಿ ಆ ಪ್ರದೇಶಗಳನ್ನು ತನ್ನ ವಶಕ್ಕೆ ತೆಗೆದುಕೊಂಡನು.

ಮಹಮೂದ್ ಶಾಹನ ಯುದ್ಧದ ಸಂಕಲ್ಪ :

ಮಹಮೂದಶಾಹ ಬಹಮನಿಯು, ಅಮೀರ ಬರೀದನ ಸಲಹೆಯ ಮೇರೆಗೆ ಸುತ್ತಮುತ್ತಲಿನ ಸಣ್ಣಪುಟ್ಟ ಅಮೀರರ ಹತ್ತಿರ ರಾಯಭಾರಿಗಳನ್ನು ಕಳುಹಿಸಿದನು. ಆ ಅಮೀರರು ಖುತ್ಬುಲ್ ಮುಲ್ಕ, ಫತೇವುಲ್ಲಾ ಇಮಾದುಲ್ ಮುಲ್ಕ, ಖುದಾವಂದ ಖಾನ ಹಬಶಿ ಮತ್ತು ಮುಲ್ಕ ಅಹಮದ ನಿಜಾಮುಲ್ ಮುಲ್ಕ ಬಹರಿ ಮೊದಲಾದವರಿಗೆ ಯೂಸುಫ ಆದಿಲಶಾಹನನ್ನು ಎದುರಿಸುವ ಸಂಕಲ್ಪ ಈಡೇರಿಸಲು ಸಹಕಾರ ನೀಡಬೇಕೆಂಬ ಸಂದೇಶವನ್ನು ತಲುಪಿಸಿದರು. ಅವರಲ್ಲಿ ಫತೇವುಲ್ಲಾ ಇಮಾದುಲ್ ಮುಲ್ಕ ಮತ್ತು ಖುದಾವಂದಖಾನ ಹಬಶಿ ಇಬ್ಬರೂ ಅಸಂತುಷ್ಟ ಹಾಗೂ ಭಯಭೀತರಾಗಿದ್ದರು. ಆದ್ದರಿಂದ ಅವರು ಮಹಮೂದ ಶಾಹನ ಕ್ಷಮೆ ಯಾಚಿಸಿದರು ಮತ್ತು ಅವರಿಬ್ಬರು ತಮ್ಮ ತಮ್ಮ ಪ್ರಾಂತಗಳಲ್ಲಿಯೇ ಉಳಿದುಕೊಳ್ಳಲು ಅನುಮತಿ ಕೋರಿದರು.

ಖುತ್ಬುಲ್ ಮುಲ್ಕ ಹಮ್ದಾನಿಯು ಶಿಯಾ ಮತದ ನಿಷ್ಠಾವಂತ, ಆಚರಣಶೀಲ ಅನುಯಾಯಿಯಾಗಿದ್ದುದಲ್ಲದೆ ಶಿಯಾ ಮತದ ಆಚಾರವಿಚಾರ, ನೀತಿ ನಿಯಮಗಳಲ್ಲಿ ಅಚಲ ವಿಶ್ವಾಸವುಳ್ಳವನಾಗಿದ್ದನು. ಆದರೆ ಪರಸ್ಥಿತಿಯ ಹಿನ್ನೆಲೆಯಲ್ಲಿ, ನಿರ್ವಾಹವಿಲ್ಲದೆ, ಆತನು ತೆಲಂಗಾಣದ ಅಮೀರರನ್ನು ಜೊತೆಗೂಡಿಸಿಕೊಂಡು ಮಹಮೂದ ಶಾಹನ ಸೇವೆಯಲ್ಲಿ ಉಪಸ್ಥಿತನಾದನು. ಮುಲ್ಕ ಅಹಮದ ನಿಜಾಮುಲ್ ಮುಲ್ಕ ಬಹರಿಯು ಕೂಡ ಖ್ವಾಜಾ ಜಹಾನ ದಖನಿ, ಪರಿಂದಾದ ರಾಜ ಮತ್ತು ಸೋಲಾಪುರದ ರಾಜ ಜಯಿನಖಾನರನ್ನು ಜೊತೆಗೂಡಿಸಿಕೊಂಡು ಹನ್ನೆರಡು ಸಾವಿರ ಅಶ್ವಸವಾರರು ಮತ್ತು ಲೆಕ್ಕವಿಲ್ಲದಷ್ಟು ತೋಪುಗಳ ಸಹಿತ ಅಹಮದಾಬಾದ ಬೀದರಗೆ ಬಂದಿಳಿದನು.

ಯೂಸುಫನ ಚಿಂತೆ :

ಮಹಮೂದಶಾಹ ಬಹಮನಿಯು ತೆಲಂಗಾಣದ ಸೈನ್ಯವನ್ನು ಸಿದ್ಧಪಡಿಸಿಕೊಂಡು

ಅಮೀರ ಬರೀದನ ಜೊತೆ, ರಾಜಧಾನಿಯಿಂದ ಹೊರಟು, ಅಹಮದನಗರದ ಸೈನ್ಯದ ಬಿಡಾರದಿಂದ ಎರಡು ಕೋಸು ಅಂತರದಲ್ಲಿ ತನ್ನ ಬಿಡಾರವನ್ನು ಸ್ಥಾಪಿಸಿದನು. ಆತನಲ್ಲಿದ್ದ ದೊಡ್ಡ ಪ್ರಮಾಣದ ಸೈನ್ಯ ಸಮೂಹವನ್ನು ಗಮನಿಸಿದ ಯೂಸುಫ ಆದಿಲಶಾಹನು ಗಾಬರಿಯಾದನು. ಯೂಸುಫನಿಗೆ ದಿಕ್ಕು ತೋಚದಂತಾಯಿತು. ಆಗ ತನ್ನ ಐದು ವರ್ಷದ ಸುಪುತ್ರನಾದ ರಾಜಕುಮಾರ ಇಸ್ಮಾಯಿಲನನ್ನು, ಕಮಾಲಖಾನ ದಖನಿ ಮತ್ತು ಇನ್ನಿತರ ವಿಶ್ವಾಸಾರ್ಹರಾದ ಕೆಲವು ಅಮೀರರ ಜೊತೆ ಮಾಡಿ ಬಿಜಾಪುರಕ್ಕೆ ಕಳುಹಿಸಿದನು. ಅವರ ಜೊತೆಯಲ್ಲಿ ತನ್ನ ಖಜಾನೆ ಸಹಿತ ಸರ್ವ ಸಾಮಗ್ರಿಗಳನ್ನು ಅಲ್ಲಿಗೆ ಕಳುಹಿಸಿಬಿಟ್ಟನು.

ಬೀಡಿನತ್ತ ಯೂಸುಫ ಆದಿಲಶಾಹನ ನಿರ್ಗಮನ:

ಯೂಸುಫ ಆದಿಲಶಾಹನು ಹುಸ್ನಾಬಾದ ಗುಲಬರ್ಗಾವನ್ನು ತನ್ನ ಆಡಳಿತಕ್ಕೆ ವಶಪಡಿಸಿಕೊಳ್ಳಲು, ದರಿಯಾಖಾನ ಮತ್ತು ಫಕ್ರುಲ್ ಮುಲ್ಕರನ್ನು ನಿಯಮಿಸಿದನು. ತಾನು ಸ್ವತಃ ಐನುಲ್‌ಮುಲ್ಕನ ಜೊತೆ ಆರು ಸಾವಿರ ಅನುಭವಿ ಅಶ್ವಸವಾರರೊಡನೆ ಬೀಡದತ್ತ ಸಾಗಿದನು. ಆ ಪ್ರದೇಶಕ್ಕೆ ತಲುಪಿ, ಆ ವ್ಯಾಪ್ತಿಯಲ್ಲಿರುವ ಹಳ್ಳಿಗಳನ್ನು ಬೆಂಕಿ ಹಚ್ಚಿ ಸುಡಲು ಆರಂಭಿಸಿದನು. ಅಹಮದ ನಿಜಾಮುಲ್ ಮುಲ್ಕ ಬಹರಿಯ ಜಹಗೀರು ಈ ತರಹ ಬೆಂಕಿಗೆ ಆಹುತಿಯಾಗುತ್ತಿರುವುದನ್ನು ಗಮನಿಸಿ, ಮಹಮೂದ ಶಾಹನು ತನ್ನ ಜೊತೆಗೆ ಕರೆದುಕೊಂಡು ಅತಿವೇಗದಿಂದ ಕ್ಷಿಪ್ರವಾಗಿ ಯೂಸುಫ ಆದಿಲಶಾಹನು ಬೀಡು ಬಿಟ್ಟಿದ್ದ ಸ್ಥಳದತ್ತ ಪ್ರಯಾಣ ಬೆಳೆಸಿದನು.

ಶಿಯಾಮತದಿಂದ ಯೂಸುಫ ಆದಿಲಶಾಹನ ಪಶ್ಚಾತ್ತಾಪ :

ಯೂಸುಫ ಆದಿಲಶಾಹನಿಗೆ ಶತ್ರುಗಳ ಕಾಟದಿಂದ ತಡೆಯುಂಟಾಯಿತು. ಆ ಒತ್ತಡದಿಂದ ದಿಕ್ಕೆಟ್ಟು ಬೀಡದಿಂದ ದೌಲತಾಬಾದಗೆ ಪ್ರಯಾಣ ಬೆಳೆಸಿ ಅಲ್ಲಿಗೆ ತಲುಪಿದನು. ಈ ವಿಭಾಗವನ್ನು ಲೂಟಿ ಮಾಡಿ ತಲ್ಲಣಗೊಳಿಸಿ ಹಾಳು ಮಾಡಿ ಬೆರಾರದತ್ತ ಸಾಗಿದನು. ಫತೇವುಲ್ಲಾ ಇಮಾದಿ, ಮಹಮೂದ ಶಾಹ ಮತ್ತು ನಿಜಾಮುಲ್ ಮುಲ್ಕ ಬಹರಿ ಮೊದಲಾದವರನ್ನು ಹಿಮ್ಮೆಟ್ಟಿಸಲಾಗದೆ ಹದ್ದು ಮೀರಿ ಗಾಬರಿಗೊಂಡನು. ಇಮಾದಿಯು ಯೂಸುಫ ಆದಿಲಶಾಹನಿಗೆ, "ಅಹಮದ್ ನಿಜಾಮುಲ್ ಮುಲ್ಕ ಮತ್ತು ಮಹಮೂದ್ ಶಹಾ ಇವರಿಬ್ಬರೂ ಸುನ್ನಿಮತದ ನಿಷ್ಠಾವಂತರು. ಅವರು ಮತದ ನೆಪದಲ್ಲಿ ನಿಮ್ಮನ್ನು ಕಷ್ಟಕ್ಕೆ ಸಿಲುಕಿಸಿ, ಸಂಪೂರ್ಣ ನಾಶ ಮಾಡಲು ಸಂಕಲ್ಪಿಸಿದಂತಿದೆ. ಈಗ ನನಗೆ ಅವರನ್ನು ಎದುರಿಸುವ ಶಕ್ತಿ ಇಲ್ಲ. ಈ ಸ್ಥಿತಿಯಲ್ಲಿ ಒಂದೇ ಉಸಿರಿನಲ್ಲಿ ವೈರಿಯನ್ನು ಎದುರಿಸುವುದು ಮತ್ತು ನಿಮ್ಮ ಸ್ನೇಹದ ಉಸಿರನ್ನು ಕಾಪಾಡಿಕೊಳ್ಳುವುದು ಸಾಧ್ಯವಾಗುತ್ತಿಲ್ಲ; ಆದ್ದರಿಂದ ನನ್ನ ಸಲಹೆ ಏನೆಂದರೆ, ನೀವು ಶಿಯಾ ಮತವನ್ನು ನಿರಾಕರಿಸಿದಂತೆ ಮಾಡಿ, ನನಗೆ ಕ್ಷಮೆ ಕೇಳಿ ಬಿಡುಗಡೆ ಪಡೆದು, ನನ್ನ ಮೇಲೆ ಸಿಡುಕುಗೊಂಡು ಮತಭೇದದಿಂದ ಬುರ್ಹಾನಪುರದತ್ತ ಸಾಗಬೇಕು.

ನಾನು ಖುತ್ಬಲ್ ಮುಲ್ಕನ ಸಲಹೆ ಪಡೆದು ಈ ಸಮಸ್ಯೆಯನ್ನು ಪರಿಹರಿಸುತ್ತೇನೆ."ಎಂದು ಸಲಹೆ ನೀಡಿದನು.

ಯೂಸುಫನು ಬುರ್ಹಾನಪುರದತ್ತ ಸಾಗಿದ್ದು :

ಯೂಸುಫ ಆದಿಲಶಾಹನು ಇಮಾದುಲ್ ಮುಲ್ಕನ ಸಲಹೆಯನ್ನು ಪಾಲಿಸಿ, ಈ ಕುರಿತು ಅದೇ ಕ್ಷಣ ಒಂದು ಸಂದೇಶವನ್ನು ಬಿಜಾಪುರಕ್ಕೂ ಕಳುಹಿಸಿದನು. ದೇಶದಲ್ಲಿ ಹನ್ನೆರಡು ಇಮಾಮರ ಬದಲಾಗಿ ಸುನ್ನಿಮತದ ರೂಢಿಯಂತೆ ನಾಲ್ಕು ಇಮಾಮರ ಹೆಸರನ್ನು ಸೇರಿಸಿ ಖುತ್ಬಾ ಸಲ್ಲಿಸಬೇಕೆಂದು ತಿಳಿಸಿ, ತತ್‌ಕ್ಷಣ ಯೂಸುಫ ಆದಿಲಶಾಹನು ಇಮಾದುಲ್ ಮುಲ್ಕನೊಡನೆ ಕಾಳಗ ಮಾಡಿ ಬುರ್ಹಾನಪುರಕ್ಕೆ ಹೊರಟನು.

ನಿಜಾಮುಲ್ ಮುಲ್ಕನಿಗೆ ಇಮಾದುಲ್ ಮುಲ್ಕನಿಂದ ಸಂದೇಶ :

ಯೂಸುಫ ಆದಿಲಶಾಹನು ಪ್ರಯಾಣವನ್ನು ಬೆಳೆಸಿದ ಮೇಲೆ ಇಮಾದುಲ್ ಮುಲ್ಕನು ತನ್ನ ಆಪ್ತನ ಮೂಲಕ ಮುಲ್ಕ ಅಹಮ್ಮದ ನಿಜಾಮುಲ್ ಮುಲ್ಕನಿಗೆ, "ಯೂಸುಫ ಆದಿಲಶಾಹನನ್ನು ಅಂತ್ಯಗೊಳಿಸಿ ಬಿಜಾಪುರದಲ್ಲಿ ತನ್ನ ಅಧಿಪತ್ಯವನ್ನು ಸ್ಥಾಪಿಸುವುದು ಅಮೀರ ಬರೀದನ ನಿಜವಾದ ಅಪೇಕ್ಷಿತ ಗುರಿಯಾಗಿದೆ. ಆದರೆ ನಮ್ಮೆದುರು ಆದಿಲ ಮತ್ತು ಬರೀದರು ಒಂದೇ ಇದ್ದಂತೆ ಕಾಣಿಸುತ್ತಾರೆ. ಆದರೆ ಬರೀದನ ಚರಿತ್ರೆಯು ನಮಗೆಲ್ಲ ಖಚಿತವಾಗಿ ಗೊತ್ತಾಗಿರುವಂತೆ ಆತನು ಐದು ಕೋಸು ಪ್ರದೇಶದ ಒಡೆಯನಾಗಿದ್ದಾನೆ. ಆದರೆ ಅವನು ಮಹಮೂದ ಶಾಹನನ್ನು ಕೈಗೊಂಬೆ ಮಾಡಿಕೊಂಡು ಬಹಮನಿ ಖಜಾನೆಯ ಮೇಲೆ ಹಿಡಿತವಿರಿಸಿಕೊಂಡಿದ್ದಾನೆ. ಬರೀದನು ನಮ್ಮ ವಿರೋಧವಾಗಿ ಯೋಚಿಸಿದುದನ್ನೆಲ್ಲ ಸಾಧಿಸುತ್ತಾನೆ. ಹೀಗಾಗಿ ನಾವು ಬರೀದನ ವಿರುದ್ಧ ಯಾವ ಕ್ರಮ ತೆಗೆದುಕೊಳ್ಳಲು ಸಾಧ್ಯವಿಲ್ಲ. ಒಂದು ವೇಳೆ ಬಿಜಾಪುರದಂತಹ ದೊಡ್ಡ ರಾಜ್ಯದ ಮೇಲೆ ಬರೀದನು ತನ್ನ ಆಧಿಪತ್ಯವನ್ನು ಸ್ಥಾಪಿಸಿದನೆಂದರೆ ನಮಗಾಗಲೀ ಮತ್ತು ನಮ್ಮ ಮಕ್ಕಳು ಮತ್ತು ಮೊಮ್ಮಕ್ಕಳಿಗಾಗಲೀ ದಖ್ಖನದಲ್ಲಿ ಉಳಿಯುವುದು ಕಷ್ಟ ಸಾಧ್ಯ. ಎರಡನೆಯ ವಿಚಾರವೆಂದರೆ, ನಮ್ಮ ಪ್ರಜೆಗಳ ಬದುಕು ಸೈನಿಕರ ಹಿಡಿತದಲ್ಲಿ ಸಾಗಬೇಕಾಗುತ್ತದೆ. ಬೇರೆಯವರ ಮತ ಆಚರಣೆಗಳ ಬಗ್ಗೆ ನಮ್ಮ ಸಂಬಂಧವಿರುವುದಿಲ್ಲ. ಮೃತ್ಯುವಿನ ನಂತರ ಪರಲೋಕದಲ್ಲಿ ಪ್ರತಿಯೊಬ್ಬರೂ ತಮ್ಮ ತಮ್ಮ ಆಚರಣೆಗಳ ಬಗ್ಗೆ ತಾವೇ ಜವಾಬ್ದಾರರಾಗಿ ಹೇಳಿಕೆಗಳನ್ನು ನೀಡಲು ಬದ್ಧರಾಗಿರುತ್ತಾರೆ. ಯೂಸುಫ ಆದಿಲಶಾಹನು ನನೆದುರು ಶಿಯಾ ಮತದಿಂದ ಬಿಡುಗಡೆಯಾಗಿ ಸುನ್ನಿ ಮತ ಸ್ವೀಕರಿಸಿ ರಾಜಾಜ್ಞೆ ಹೊರಡಿಸಿ ಬಿಜಾಪುರದ ಪ್ರಜೆಗಳಿಗೆ ಕೂಡ ಶಿಯಾ ಮತವನ್ನು ಸ್ವೀಕರಿಸಲು ನಿರ್ಬಂಧ ಮಾಡಿದ್ದಾನೆ. ಇಂತಹ ಸ್ಥಿತಿಯಲ್ಲಿ ನಾವೆಲ್ಲ ಸೇರಿ ಯೂಸುಫ ಆದಿಲಶಾಹನ ಮೇಲೆ ದಾಳಿ ಮಾಡಿ, ಮಹಮೂದ

ಶಾಹನ ಮುಖವಾಡದ ನಾಯಕತ್ವದಲ್ಲಿ ಅಮೀರ ಬರೀದನ ಸಂಕಲ್ಪಿತ ಅಪೇಕ್ಷೆಯನ್ನು ಪೂರ್ಣ ಮಾಡಲು ಸಾಧ್ಯವಿದೆ. ಅದಕ್ಕಾಗಿ, ನಾವೆಲ್ಲ ಈ ಪ್ರಕರಣದಿಂದ ದೂರ ಸರಿದು ನಮ್ಮ ನಮ್ಮ ಪ್ರದೇಶಕ್ಕೆ ತಿರುಗಿ ಹೋಗುವುದರಲ್ಲಿ ಲೇಸಿದೆ." ಎಂಬ ಸಂದೇಶ ಕಳುಹಿಸಿದನು.

ಅಹಮದ್ ನಿಜಾಮ ಮತ್ತು ಖುತ್ಬುಲ್ ಮುಲ್ಕ ಬರೀದನಿಂದ ಬೇರ್ಪಡುವಿಕೆ:

ಮುಲ್ಕ ಅಹಮದ್ ನಿಜಾಮುಲ್ ಮುಲ್ಕ ಮತ್ತು ಖುತ್ಬುಲ್ ಮುಲ್ಕ ಹಮ್ದಾನಿಯವರ ರಾಜಕೀಯ ವಿಷಯಗಳಲ್ಲಿ ಫತೇವುಲ್ಲಾ ಇಮಾದಿಯ ಸಲಹೆ ಸೂಚನೆಗಳಿಗೆ ಬಹಳ ಪ್ರಾಮುಖ್ಯತೆ ನೀಡಲಾಗುತ್ತಿದೆ. ಇವರಿಬ್ಬರೂ ಇಮಾದಿಯ ಸಲಹೆ ಸೂಚನೆಗಳಂತೆ ನಡೆದುಕೊಂಡು, ರಾತೋರಾತ್ರಿ ತಮ್ಮ ದೇಶಗಳಿಗೆ ಹೊರಟುಬಿಟ್ಟರು. ಮಾರನೆಯ ದಿವಸ ರಣರಂಗವು ಖಾಲಿ ಖಾಲಿ ಬರಿದದಾಗಿ ಕಾಣತೊಡಗಿತು. ಮಹಮೂದ ಶಾಹ ಮತ್ತು ಅಮೀರ ಬರೀದ ಅವರು ಈ ಸಮಯದ ಕ್ರಾಂತಿಯಿಂದ ಆಶ್ಚರ್ಯಪಟ್ಟರು. ಇವರಿಬ್ಬರೂ ಬಿಜಾಪುರದೊಡನೆ ನಡೆಸಬೇಕಾದ ಕಾಳಗದ ಸಲುವಾಗಿ ಫತೇವುಲ್ಲಾ ಇಮಾದಿಯಿಂದ ಸಹಾಯ ಕೇಳಿ ಆತನತ್ತ ಒಬ್ಬ ರಾಜದೂತನನ್ನು ಕಳಿಸಿದರು. ಇಮಾದಿಯು ಅತ್ತಲಿತ್ತಲಿನ ಮಾತುಗಳನ್ನು ಕೇಳಿ ಬರೀದನ ರಾಜದೂತನನ್ನು ಅಲಕ್ಷ್ಯ ಮಾಡಿದನು. ಸ್ವತಃ ತಾನು ಯೂಸುಫ ಆದಿಲಶಾಹನೆಡೆಗೆ ಒಬ್ಬ ದೂತನನ್ನು ಕಳುಹಿಸಿ ಆತನನ್ನು ಕರೆಸಿಕೊಂಡನು. ಯೂಸುಫ ಬಂದ ಕೂಡಲೇ ಇಬ್ಬರೂ ಸರದಾರರು ಸೈನ್ಯವನ್ನು ಒಂದು ಕಡೆ ಸೇರಿಸಿದರು. ಬರೀದ ಮತ್ತು ಮಹಮೂದರ ಮೇಲೆ ದಂಡೆತ್ತಿ ಹೊರಟರು. ಯೂಸುಫನು ಮತ್ತೊಮ್ಮೆ ಶಿಯಾ ಮತವನ್ನು ಸ್ವೀಕರಿಸುವಂತೆ ಪ್ರಸಾರ ಮಾಡಿದನು. ಮಹಮೂದ ಶಾಹ ಮತ್ತು ಅಮೀರ ಬರೀದರು ಯುವಕರು ಬರುತ್ತಿರುವ ಈ ಸುದ್ದಿಯನ್ನು ಕೇಳಿದಾಕ್ಷಣ ಅವರಿಬ್ಬರೂ ತೀವ್ರವಾಗಿ ಚಿಂತಾಕ್ರಾಂತರಾದರು. ಅವರು ತಮ್ಮ ಎಲ್ಲ ಸಾಮಾನು ಸರಂಜಾಮುಗಳನ್ನೆಲ್ಲ ರಣರಂಗದಲ್ಲಿಯೇ ಬಿಟ್ಟು ಅಹಮದಾಬಾದ ಬೀದರನತ್ತ ಸಾಗಿದರು. ಯೂಸುಫ ಆದಿಲಶಾಹನು ವೈರಿಗಳ ಸೈನ್ಯವನ್ನು ಉಸಿರುಗಟ್ಟಿಸಿ ನಾಶ ಮಾಡಿದನು. ಫತೇ ಇಮಾದಿಯಿಂದ ಅಪ್ಪಣೆ ಪಡೆದು ಬಿಜಾಪುರಕ್ಕೆ ಮರಳಿದನು. ಅಲ್ಲಿ ಅವನು ಮತ್ತೆ ಎರಡನೆಯ ಬಾರಿ ಶಿಯಾ ಮತವನ್ನು ಸ್ವೀಕರಿಸಿ ಹನ್ನೆರಡು ಇಮಾಮರ ಹೆಸರಿನಲ್ಲಿ ಪ್ರಾರ್ಥನೆ ಸಲ್ಲಿಸಿದನು.

ಇರಾನಿನ ಶಾಹನಿಗೆ ಅಭಿನಂದನೆ:

ಯೂಸುಫ ಆದಿಲಶಾಹನು ಪ್ರಖ್ಯಾತ ಅಮೀರರಾದ ಐನುಲ್ ಮುಲ್ಕ ಕುನಾನಿ, ಕಮಾಲಖಾನ ದಖನಿ ಮತ್ತು ಫಕ್ರುಲ್ ಮುಲ್ ತುರ್ಕ ಇವರನ್ನು ಬಾದಶಹನು ಗೌರವದ ಭಕ್ಷೀಸುಗಳಿಂದ ಗೌರವಿಸಿದನು. ಸಯ್ಯದ ಅಹಮದ ಹರದಿಯನ್ನು ಶಾಹ

ಇಸ್ಮಾಯಿಲ್ ಸಫವಿಯ ದರ್ಬಾರಿಗೆ ಸೇವೆಗಾಗಿ ಕಳುಹಿಸಿಕೊಟ್ಟನು. ಯೂಸುಫನು ಇರಾನಿನ ಶಹಾನಿಗೆ ಅನರ್ಘ್ಯ ಅಮತ್ತು ಅಮೋಘ ಬಹುಮಾನಗಳನ್ನು ಕಳುಹಿಸಿಕೊಟ್ಟನು. ಇರಾನಿನಲ್ಲಿ ಶಿಯಾ ಮತ ಪ್ರಸಾರ ಮಾಡಿದುದಕ್ಕಾಗಿ ಬಿಚ್ಚು ಮನಸ್ಸಿನಿಂದ ಅಭಿನಂದಿಸಿದನು. ಯೂಸುಫನು ಪುನಃ ಶಿಯಾ ಆಗಿ ಬಿಜಾಪುರದಲ್ಲಿ ಹನ್ನೆರಡು ಇಮಾಮರ ಹೆಸರಿನಲ್ಲಿ ಪ್ರಾರ್ಥನೆ ಸಲ್ಲಿಸಿದ ಬಗ್ಗೆ ಸಂತೋಷದ ಸುದ್ದಿಯನ್ನು ಪ್ರಕಟಿಸಿದನು.

ಇಂದರಾಪುರದತ್ತ ಪ್ರಯಾಣ:

ಇದಾದ ನಂತರ ಯೂಸುಫ ಆದಿಲಶಾಹನು ತನ್ನ ಉಳಿದ ಸಂಪೂರ್ಣ ಜೀವನವನ್ನು ರಾಜ್ಯದ ಸರ್ವತೋಮುಖ ಅಭಿವೃದ್ಧಿ ಮತ್ತು ಪ್ರಜೆಗಳ ಹಿತಸಾಧನೆ ಹಾಗು ನ್ಯಾಯಪರ ಆಡಳಿತ ನೀಡುವ ಕಡೆಗೆ ಸಮರ್ಪಿಸಿದನು. ಈ ಸಂದರ್ಭದಲ್ಲಿ ಯೂಸುಫನು ಎರಡು ಸಲ ಮಾತ್ರ ತನ್ನ ರಾಜಧಾನಿಯಾದ ಬಿಜಾಪುರದಿಂದ ಹೊರಗೆ ಪ್ರವಾಸ ಮಾಡಿದನು. ಮೊದಲ ಪ್ರವಾಸವು ಕೇವಲ ಬೇಟೆ ಮತ್ತು ವಿನೋದಕ್ಕಾಗಿ ಮೀಸಲಾಗಿತ್ತು. ಆಗ ಇಂದಿರಾಪುರದಲ್ಲಿ ಎರಡು ಮೂರು ತಿಂಗಳವರೆಗೆ ವಾಸವಾಗಿದ್ದು ಉಲ್ಲಾಸಗೊಂಡು ಮತ್ತೆ ಬಿಜಾಪುರಕ್ಕೆ ಮರಳಿದನು.

ಈಸಾಯಿಗಳಿಗೆ ಚುರುಕು ತಟ್ಟಿಸುವುದು:

ಎರಡನೆಯ ಪ್ರವಾಸವನ್ನು ಯೂಸುಫ ಆದಿಲಶಾಹನು ಕೋಥಾ ಬಂದರಿನತ್ತ ಕೈಗೊಂಡನು. ಇದರ ಉದ್ದೇಶವೆಂದರೆ ಮುಸಲ್ಮಾನೇತರರಿಗೆ ಚುರುಕು ಮುಟ್ಟಿಸುವುದಾಗಿತ್ತು. ಹಿಜರಿ ಶಕೆ ೯೧೫ರ ಕೊನೆಯಲ್ಲಿ ಕೆಲವು ಈಸಾಯಿಗಳು ಬಂದರದ ಸರದಾರನನ್ನು ಮುಚ್ಚಿಟ್ಟು, ಅಲ್ಲಿಯ ಲೆಕ್ಕವಿಲ್ಲದಷ್ಟು ಮುಸಲ್ಮಾನರನ್ನು ಸಾವಿಗೀಡು ಮಾಡಿದರು, ಮತ್ತು ಆ ಬಂದರನ್ನು ತಮ್ಮ ವಶಕ್ಕೆ ತೆಗೆದುಕೊಂಡರು. ಯೂಸುಫ ಆದಿಲಶಾಹನಿಗೆ ಈ ವಿಷಯ ತಿಳಿದ ತಕ್ಷಣ ಆತನು ತನ್ನ ಎರಡು ಸಾವಿರ ಆಪ್ತ ಸೈನಿಕರೊಡನೆ ಕೋಥಾ ಬಂದರದ ಮೇಲೆ ಕಾಳಗವನ್ನು ಆರಂಭಿಸಲು ಹೊರಟನು. ಆ ಆಪ್ತ ಸೈನಿಕರ ದಂಡಿನಲ್ಲಿ ದಖ್ಖನಿ ಸೈನಿಕರು, ದಖ್ಖನಿಯಲ್ಲದ ಬೇರೆಯವರೂ ಇದ್ದರು. ಐದು ದಿವಸಗಳ ಅನಂತರ ಕೋಥಾ ಬಂದರದ ಮೇಲೆ ಆಕ್ರಮಣ ಮಾಡಿ ಮೈಮರೆತ ಈಸಾಯಿಗಳಿಂದ ಅದನ್ನು ಪಡೆದುಕೊಂಡು ಕಾವಲಿನವರನ್ನು ಕೊಂದು ಬಂದರದಲ್ಲಿ ಪ್ರವೇಶ ಮಾಡಿದರು.

ಕೋಟೆಯೊಳಗೆ ಇರುವ ಜನರು ಈ ದಾಳಿಯು ಆಗುವುದೆಂಬ ವಿಷಯದಲ್ಲಿ ಯಾವ ಮುನ್ಸೂಚನೆ ಇಲ್ಲದೆ ಇದು ಆಕಸ್ಮಿಕವಾಗಿ ಅವರ ಮೇಲೆ ಆಪತ್ತು ಎರಗಿ ಬಂದಂತಾಯಿತು. ಯೂಸುಫ ಆದಿಲಶಾಹನ ಸೈನಿಕರ ಆಕ್ರಮಣದಿಂದ ಅವರೆಲ್ಲ ಹೌಹಾರಿದರು. ಈಸಾಯಿಗಳು ಅವರ ಜೀವವನ್ನುಳಿಸಲು ಬಹಳ ಪ್ರಯತ್ನಿಸಿದರು.

ಆದರೆ ಅವರಲ್ಲಿ ಅನೇಕರು ಮುಸಲ್ಮಾನರಿಂದಲೇ ಮರಣ ಹೊಂದಿದರು. ಅವಕಾಶ ಸಾಧಿಸಿಕೊಂಡು ಉಳಿದವರು ಹರಿಗೋಲುಗಳ ಮೂಲಕ ಮುಸಲ್ಮಾನರ ಕೈ ತಪ್ಪಿಸಿಕೊಂಡು ಓಡಿ ಹೋದರು. ಯೂಸುಫ ಆದಿಲಶಾಹನು ಕೋಟೆಯನ್ನು ತನ್ನ ವಶಕ್ಕೆ ತೆಗೆದುಕೊಂಡನು. ಈ ಕೋಟೆಯು ಇಂದಿನವರೆಗೂ ಮುಸಲ್ಮಾನರ ವಶದಲ್ಲಿದೆ. ಯೂಸುಫ ಆದಿಲಶಾಹನು ಈ ಕೋಟೆಯ ಉಸ್ತುವಾರಿಯನ್ನು ತನ್ನ ನಂಬಿಕೆಯ ಪ್ರತಿಷ್ಠಿತ ಅಮೀರನಿಗೆ ವಹಿಸಿಕೊಟ್ಟು ತಾನು ಸ್ವತಃ ಬಿಜಾಪುರಕ್ಕೆ ಮರಳಿದನು.

ಯೂಸುಫ ಆದಿಲಶಾಹನ ಮರಣ:

ಇದು ಯೂಸುಫ ಆದಿಲಶಾಹನ ಅಂತಿಮ ಘಟ್ಟದ ಯುದ್ಧದಲ್ಲಿ ಪಡೆದ ಗೆಲುವು ಆಗಿತ್ತು. ಇದಾದನಂತರ ಮತ್ತೆಂದೂ ಇಂತಹ ಪರಿಸ್ಥಿತಿ ಬರಲಿಲ್ಲ. ಯೂಸುಫನು ಇಪ್ಪತ್ತು ವರ್ಷ ಮತ್ತು ಮೇಲೆರಡು ತಿಂಗಳ ಕಾಲ, ಬಹಳ ಸಂತೋಷದಿಂದ, ಉಲ್ಹಾಸದಿಂದ ಮತ್ತು ನಿಷ್ಠೆಯಿಂದ ಆಡಳಿತವನ್ನು ನಡೆಸಿದನು. ಹಿಜರಿಶಕೆ ೯೧೬ರಲ್ಲಿ ಯೂಸುಫ ಆದಿಲಶಾಹನು ರೋಗಕ್ಕೆ ತುತ್ತಾಗಿ ಮೃತ್ಯುವನ್ನು ಆಲಂಗಿಸಿಕೊಂಡನು. ಮೃತ್ಯುಪತ್ರದಲ್ಲಿದ್ದಂತೆ ಆತನ ಕಳೇಬರವನ್ನು ಗೋಗಿ ಎಂಬ ಗ್ರಾಮದಲ್ಲಿ ಶೇಖ ಜೂಲ್ ಅಲಿಯಾಸ್ ಶೇಖ ಚಾಂದ ಹುಸೇನಿಯವರ ಪಕ್ಕದಲ್ಲಿ ಸಮಾಧಿ ಮಾಡಲಾಯಿತು. ಯೂಸುಫನಿಗೆ ಈ ಪೂಜ್ಯರ ಕುರಿತು ಶ್ರದ್ಧಾ ಭಕ್ತಿ ವಿಶ್ವಾಸಗಳಿದ್ದವು. ಯೂಸುಫನು ಎಪ್ಪತ್ತೈದು ವರ್ಷ ಜೀವಿಸಿ ಅಮರನಾದನು.

ನಿಜಾಮುದ್ದೀನ ಅಹಮದ್ ಉಲ್ ಹುಸೇನಿಯು ತನ್ನ ಇತಿಹಾಸದಲ್ಲಿ ಆದಿಲಶಾಹನು ಹಿಜರಿ ಶಕೆ ೯೦೬ರಲ್ಲಿ ಮೃತ್ಯುವನ್ನು ಆಲಂಗಿಸಿಕೊಂಡದ್ದನ್ನು ಹೇಳಿದ್ದನು. ಆದರೆ ಹೀಗೆ ಹೇಳುತ್ತಿರುವ ಸಂಪ್ರದಾಯವು ತಪ್ಪೆಂದು ತಿಳಿಯಲಾಗುತ್ತದೆ. ಈ ಘಟನೆಯು ನಮ್ಮೆದುರು ನಡೆದದ್ದು ಹಿಜರಿ ಶಕೆ ೯೧೬ರಲ್ಲಿ, ಮತ್ತು ಅದೇ ವರ್ಷವನ್ನು ಮೇಲೆ ದಾಖಲಿಸಲಾಗಿದೆ. ಅಲ್ಲಾಹನು ಉಳಿದದ್ದನ್ನೆಲ್ಲ ಚೆನ್ನಾಗಿ ತಿಳಿದುಕೊಂಡಿದ್ದಾನೆ.

ಶೇಖ ಚಾಂದನ ಈ ಪೀಳಿಗೆಯ ಕ್ರಮವು ಇಮಾಮ್ ಜೈನುಲ್ ಆಬಿದೀನವರೆಗೆ ಸಾಗುತ್ತದೆ. ಅದು ಹೇಗೆಂದರೆ, 'ಜಲಾಲುದ್ದೀನ ಚಂದಾ ಬಿನ್ ಜಹಾನ್ ಬಿನ್ ಖಜರ ಬಿನ್ ಮಹಮದ್ ಬಿನ್ ಅಹಮದ್ ಬಿನ್ ಯಹ್ಯಾ ಬಿನ್ ಜೈದ ಬಿನ್ ಹುಸೇನ ಬಿನ್ ಸಿರಾಜುದ್ದೀನ ಬಿನ್ ಶರಫುದ್ದೀನ ಬಿನ್ ಜೈಬ್ ಅಬುಲ್ ಹಸನ್ ಬಿನ್ ಅಬ್ದುಲ್ಲಾ ಬಿನ್ ಮೊಹಮ್ಮದ್ ಬಿನ್ ಹುಸೇನ ಅಜಗರ್ ಬಿನ್ ಇಮಾಮ್ ಜೈನುಲ್ ಆಬಿದೀನ – ' ಏಕೆಂದರೆ ಶೇಖ ಚಾಂದನು ಶಿಯಾ ಮತದವನಾಗಿದ್ದನು. ಆದ್ದರಿಂದ ಯೂಸುಫ ಆದಿಲ ಶಾಹನು ಶೇಖ ಚಾಂದನೊಡನೆ ಹೆಚ್ಚು ಪ್ರೀತಿಯಿಂದ ಇದ್ದನು. ಈ ಪ್ರೀತಿಯು ಗುರುಶಿಷ್ಯ ಸಂಬಂಧದ ರೂಪ ತಳೆದಾಗ ಬಹಳ ಘನಿಷ್ಠ ಸಂಬಂಧವಾಗಿ ಮಾರ್ಪಟ್ಟಿತು. ಶೇಖ ಸಾಹೇಬರ ಮಕ್ಕಳು ದಖ್ಖನ್ನದಲ್ಲಿ ಇನ್ನೂ

ಬದುಕಿದ್ದಾರೆ. ಇವರ ಬಂಧು ಸಂಬಂಧಿಕ ಕೆಲವು ಜನರು ಶಿಯಾ ಮತಸ್ಥರೇ ಇದ್ದಾರೆ. ಮತ್ತೆ ಕೆಲವರು ಸುನ್ನಿ ಮತಸ್ಥರಿದ್ದಾರೆ.

ಶಾಹ ತಾಹೀರನ ಅಭಿಪ್ರಾಯ:

ಲೇಖಕ 'ಪರಿಶ್ತಾ, ನಿಜಾಮಶಾಹಿಯ ರಾಜಧಾನಿಯನ್ನು ಅಹಮದ್ ನಗರದಲ್ಲಿ ಸ್ಥಾಪಿಸುವ ಕುರಿತು ಶಾಹ ತಾಹೀರನು ಬರೆದ ಪುಸ್ತಕವನ್ನು ನೋಡಿದ್ದನು. ಅದರಲ್ಲಿ ಶಾಹ ಸಾಹೇಬರು ಹೇಳುವುದೇನೆಂದರೆ, 'ಶಾಹನ ಹೆದರಿಕೆಯಿಂದ ಗಡಿ ಪಾರಾದೆನು ಮತ್ತು ನದಿಯ ಮಾರ್ಗವಾಗಿ ಹಿಂದುಸ್ಥಾನದ ಕಡೆಗೆ ಬಂದೆನು. ಕೋದಾ ಬಂದರದಲ್ಲಿ ಆ ಹಡಗು ನಿಂತಿತು. ಹಾಗಾಗಿ ಕೆಲವು ದಿವಸಗಳವರೆಗೆ ಈ ಬಂದರಿನಲ್ಲಿ ಉಳಿದೆನು. ಸಯ್ಯದ ಅಹಮದ ಹರದಿಯನ್ನು ಭೆಟ್ಟಿಯಾದೆನು. ಅವರು ಹಿರಿಯ ವಯಸ್ಸಿನ ಅನುಭವಿ ಪೂಜ್ಯರಾಗಿದ್ದರು. ಇವರ ಜೀವನದ ಬಹುಪಾಲು ಯೂಸುಫ ಆದಿಲಶಾಹ ಮತ್ತು ಇಸ್ಮಾಯಿಲ ಆದಿಲಶಾಹರ ಆಸ್ಥಾನದ ಸೇವೆಯಲ್ಲಿ ಸಮರ್ಪಣವಾದವು.

ಸಯ್ಯದ ಅಹಮದ ಸಾಹೇಬರ ಮಾತುಕತೆಯಲ್ಲಿ ಸಜ್ಜನಿಕೆಯ ಸವಿ ಇದ್ದಿತು ಹಾಗೂ ಅವರ ಮುಖ ಸದಾ ಪ್ರಸನ್ನವಾಗಿರುತ್ತಿತ್ತು. ಅವರು ಶಿಕ್ಷಣ ಮತ್ತು ಕಲೆಗಳಲ್ಲಿ ಬಹಳಷ್ಟು ಪ್ರಾವೀಣ್ಯತೆ ಸಂಪಾದಿಸಿಕೊಂಡಿದ್ದರು. ಅವರು ಯೂಸುಫ ಮತ್ತು ಇಸ್ಮಾಯಿಲ ಇವರಿಬ್ಬರ ಕಾಲದಲ್ಲಿ ಸಲಹಾ ಮಂಡಳಿಯ ಅಧ್ಯಕ್ಷತೆಯ ಸ್ಥಾನದಲ್ಲಿದ್ದರು. ನಾನು ಇಷ್ಟು ದಿವಸ ಆ ಬಂದರದಲ್ಲಿದ್ದೆ. ಈ ಪ್ರಾಜ್ಞರನ್ನು ತಪ್ಪದೆ ಕಾಣುತ್ತಿದ್ದೆ. ಅವರು ತಮ್ಮ ಅನುಭವಗಳ ಹಿನ್ನೆಲೆಯಲ್ಲಿ ಅನೇಕ ಹೃದಯಸ್ಪರ್ಶಿ ಕತೆಗಳನ್ನು ರಸಾತ್ಮಕ ಪ್ರಸಂಗಗಳನ್ನು ಬಿತ್ತರಿಸಿ ಮನಸನ್ನು ಆಹ್ಲಾದಗೊಳಿಸುತ್ತಿದ್ದರು. ನನ್ನ ಹತ್ತಿರ ದುಃಖ ದುಮ್ಮಾನಗಳು ಸುಳಿಯದಂತೆ ಮಾಡುತ್ತಿದ್ದರು.

ಯೂಸುಫನ ಚಾರಿತ್ರ್ಯ:

ಪ್ರಾಜ್ಞರಾದ ಸಯ್ಯದ ಅಹಮದ ಸಾಹೇಬರು ಮಾತುಕತೆ ನಡೆದಾಗ ಅನೇಕ ಸಲ ಹೇಳುತ್ತಿದ್ದುದೇನೆಂದರೆ, ಯೂಸುಫ ಆದಿಲಶಾಹನು ಅನುಭವಿ ಮತ್ತು ಮುಂದಾಲೋಚನೆಯುಳ್ಳ ಬಾದಶಹನೆಂದು ಪ್ರಶಂಸಿಸುತ್ತಿದ್ದರು. ಆತನ ಧೈರ್ಯ ಸ್ಥೈರ್ಯ ದಾನಗೂಣಗಳಿಂದ ಕೂಡಿದ ಔದಾರ್ಯ, ನ್ಯಾಯಪರದೃಷ್ಟಿ, ಜ್ಞಾನಸಂಪತ್ತು ಇವುಗಳಲೆಲ್ಲದರಲ್ಲಿ ಆತನಿಗೆ ಆತನೇ ದೃಷ್ಟಾಂತನಾಗಿದ್ದನು. ಈ ತರಹದ ಸ್ವಭಾವದ ಜೊತೆಗೆ ಸಕಲ ವಿದ್ಯಗಳಲ್ಲಿಯೂ ಕುಶಲತೆಗಳನ್ನು ಪಡೆದಿದ್ದನು. ಶುದ್ಧ ಬರಹ, ಜ್ಞಾನ ಸಂಪಾದನೆ ಹಾಗೂ ಕಾವ್ಯ ರಚನೆಯಲ್ಲಿ ಪಟುತ್ವವನ್ನು ಪಡೆದಿದ್ದನು. ತಂಬೂರಿ ಮತ್ತು ಶಹನಾಯಿಗಳನ್ನು ಸೊಗಸಾಗಿ ನುಡಿಸುತ್ತಿದ್ದನು. ಈ ವಿದ್ಯೆಗಳನ್ನು ನೀಡಿದ ಗುರುಗಳನ್ನು ಬಹಳ ಗೌರವಿಸುತ್ತಿದ್ದನು.

ವಿದ್ಯಾ ಸ್ನೇಹ :

ಯೂಸುಫನ ಸಭೆಯಲ್ಲಿ ಆಗಾಗ ಶ್ರೇಷ್ಠ ಕವಿಗಳಿಂದ ಕವಿತೆಗಳನ್ನು ಹೇಳಿಸಲಾಗುತ್ತಿತ್ತು. ಆತನು ಕೂಡ ಆಗಾಗ ಹುರುಪಿನಿಂದ ಕವಿತೆಗಳನ್ನು ಕಟ್ಟಿ ಹೇಳುತ್ತಿದ್ದನು. ಆತನು ಈ ತರಹ ಸದಾ ರಂಜನೀಯವಾಗಿ ಇರುತ್ತಿದ್ದರೂ, ಯಾವಾಗಲೂ ಇದೇ ಪರಿಸರದಲ್ಲಿ ತಾನು ಮೈಮರೆತು ಇರುತ್ತಿರಲಿಲ್ಲ. ರಾಜ್ಯದ ಆಡಳಿತದಲ್ಲಿ ತನ್ಮಯನಾಗಿಯೂ ಕಾರ್ಯ ನಿರ್ವಹಿಸುತ್ತಿದ್ದನು. ಪ್ರಯತ್ನವಾದಿಯಾಗಿದ್ದು, ಸೂಕ್ಷ್ಮ ದೃಷ್ಟಿಯಿಂದ ಎಲ್ಲವನ್ನು ಗಮನಿಸುತ್ತ ಒಳ್ಳೆಯ ಆಡಳಿತವನ್ನು ನೀಡುತ್ತಿದ್ದನು. ದಾನಿಯೂ, ಕರುಣಾಮಯಿಯೂ ಆಗಿದ್ದು ಪ್ರಜೆಗಳನ್ನು ನೆಮ್ಮದಿಯಿಂದ ಇರಿಸುವಲ್ಲಿ ಒಂದೊಂದು ಕ್ಷಣವನ್ನೂ ಮಹತ್ವದ ಕ್ಷಣವೆಂದು ತಿಳಿಯುತ್ತಿದ್ದನು. ಎಂದೆಂದಿಗೂ ಪ್ರಜೆಗಳ ಹಿತಕ್ಕೆ ಧಕ್ಕೆ ತರುತ್ತಿರಲಿಲ್ಲ. ಯೂಸುಫನು ಸದಾ ತನ್ನ ದರ್ಬಾರದಲ್ಲಿ ಮತ್ತು ತನ್ನ ಅಧೀನದಲ್ಲಿರುವ ರಾಜಸಂಸ್ಥಾನಗಳ ರಾಜಸಭೆಯಲ್ಲಿಯೂ ಕರುಣೆ, ಸ್ನೇಹಗಳ ಜೊತೆಗೆ ಪ್ರಾಮಾಣಿಕ ನ್ಯಾಯಗಳನ್ನು ಕುರಿತು ಕವ್ವಾಲಿಗಳನ್ನು ಹೇಳಿಸಿ ಸಂಸ್ಕಾರ ನೀಡುತ್ತಿದ್ದನು. ಈ ತರಹದ ಸಭೆಗಳನ್ನು ನಡೆಸಲು ವ್ಯವಸ್ಥೆಯನ್ನು ಮಾಡಿದ್ದನು.

ಪ್ರಸನ್ನತೆಯಿಂದ ಕೂಡಿದ ಅರಸನ ಚೆಲುವಿಕೆಯ ಜಲಪಾತ:

ಯೂಸುಫ ಆದಿಲಶಾಹನ ರಾಜಗಾಂಭೀರ್ಯದ ಚೆಲುವಿಕೆಯ ಜಲಪಾತದ ಮುಂದೆ ಯಾರಿಗೂ ನಿಂತು ಮಾತನಾಡುವ ಧೈರ್ಯ ಸಾಲುತ್ತಿರಲಿಲ್ಲ, ಏಕೆಂದರೆ ಆತನ ಚೆಲುವಿಕೆಯಲ್ಲಿರುವ ಧೀರ ಗಂಭೀರ ಪ್ರಸನ್ನತೆಯು ಎಲ್ಲರನ್ನೂ ಆಕರ್ಷಿಸಿ ಮುಗ್ಧಗೊಳಿಸುತ್ತಿತ್ತು. ಮುಪ್ಪಿನ ಜನರು ಕೂಡ ಆತನ ಚೆಲುವಿಕೆಯಲ್ಲಿಯ ಧೀರ ಗಂಭೀರ ಪ್ರಸನ್ನತೆಯನ್ನು ನೋಡಿ ಸಂಭ್ರಮಿಸಲು ದೂರ ದೂರದಿಂದ ಬರುತ್ತಿದ್ದರು. ಯೂಸುಫನು ಹೊರಹೊರಡುತ್ತಿದ್ದ ದಿನದಂದು ದಾರಿಯುದ್ದಕ್ಕೂ ಜನ ನಿಂತು ಆತನ ಬೆಡಗನ್ನು ವೀಕ್ಷಿಸುತ್ತ ಧನ್ಯರಾಗುತ್ತಿದ್ದರು.

ಜ್ಞಾನ ಗೌರವದ ಪ್ರತಿಪಾದಕ:

ಯೂಸುಫ ಆದಿಲಶಾಹನು ತನ್ನ ಕಾಲದ ವ್ಯಾಪ್ತಿಯಲ್ಲಿ ಇರಾನ, ತೂರಾನ, ಅರಬ್ ಮತ್ತು ರೋಮು ದೇಶಗಳಿಗೆ ಪತ್ರಮುಖೇನ ಕರೆ ನೀಡಿ ಮಹಾ ಮಹೋಪಾಧ್ಯಾಯರನ್ನು, ಪಂಡಿತರನ್ನು, ಬೇರೆ ಬೇರೆ ಕಲಾಕ್ಷೇತ್ರಗಳಲ್ಲಿಯ ಪ್ರವೀಣರನ್ನು, ಖಡ್ಗವೀರರನ್ನು ಮತ್ತು ಜ್ಞಾನಿಗಳನ್ನು ಬಿಜಾಪುರಕ್ಕೆ ಕರೆಸಿ ವಜ್ರ ವೈಡೂರ್ಯಗಳ ಬಕ್ಷೀಸಿನಿಂದ ಗೌರವಿಸಿ ಸಂತೃಪ್ತಿ ಪಟ್ಟನು. ಅವರು ತಮ್ಮ ಜೀವನಪರ್ಯಂತ ತಮ್ಮ ವತನಗಳನ್ನು ಬಿಟ್ಟು ಇಲ್ಲಿಯೇ ಇದ್ದು ಸುಖಿಗಳಾದರು.

ಮುಕುಂದರಾವ್ ಮರಾಠನ ಮೇಲೆ ಯುದ್ಧದ ಆಕ್ರಮಣ:

ಯೂಸುಫ ಆದಿಲಶಾಹನು ಅರಕಿಲ್ಲಾವನ್ನು ಆರಂಭದಿಂದಲೇ ಸುಣ್ಣ ಮತ್ತು

ಇಟ್ಟಿಗೆಗಳಿಂದ ಕಟ್ಟಿಸಿದನು. ಶಾಹ ತಾಹೀರನು ಬರೆದಿರುವುದೇನೆಂದರೆ, ಯೂಸುಫನು ತನ್ನ ಆಡಳಿತದ ಅವಧಿಯಲ್ಲಿ ಒಂದು ಸಲ ಇಂದ್ರಾಪುರ ಪ್ರದೇಶದ ಮೇಲೆ ಪ್ರವಾಸ ಕೈಗೊಂಡನು. ಅಲ್ಲಿ ತಲುಪಿದ ಮೇಲೆ ಮುಕುಂದರಾವ್ ಮರಾಠಾ ಮತ್ತು ಆತನ ತಮ್ಮ, ಮಹಮೂದ ಶಾಹಿಯ ಅಮೀರರ ಗುಂಪಿನಲ್ಲಿ ಸೇರಿದರು. ಈ ವಿಷಯವು ಯೂಸುಫ ಆದಿಲಶಾಹನಿಗೆ ಗೊತ್ತಾಯಿತು. ಆಗ ಅವರು ಭಯದಿಂದ ಒಂದು ಗುಂಪನ್ನು ಮಾಡಿಕೊಂಡು ಗುಡ್ಡಗಾಡು ಪ್ರದೇಶದಲ್ಲಿ ತಲೆಮರೆಸಿಕೊಂಡು ಅಲೆಯತೊಡಗಿದರು. ಯೂಸುಫ ಆದಿಲಶಾಹನಿಗೆ ಈ ವಿಷಯ ಗೊತ್ತಾದಾಗ ಎರಡು ಸಾವಿರ ಸಿಪಾಯಿಗಳ ಒಂದು ತುಕಡಿಯನ್ನು, ಮುಕುಂದರಾವ್ ಮತ್ತು ಆತನ ಸಂಗಡಿಗರನ್ನು ತುಳಿಯುವುದಕ್ಕೆ ಕಳುಹಿಸಿದನು. ಮರಾಠರು ಯೂಸುಫನನ್ನು ಬಾದಶಹನೆಂದು ಒಪ್ಪಲಿಲ್ಲ. ಆದಿಲಶಾಹಿ ಸಿಪಾಯಿಗಳು ವೈರಿಯ ಎಲ್ಲ ಸಾಮಾನು ಸರಂಜಾಮುಗಳನ್ನು ಕೊಳ್ಳೆ ಹೊಡೆದು ಆ ವೈರಿಯ ಮಡದಿ ಮಕ್ಕಳನ್ನು ಬಂಧಿಸಿದರು.

ಸಂತಾನ :

ಈ ಬಂದಿಗಳಲ್ಲಿ ಮುಕುಂದರಾವನ ಹದಿನಾರರ ಪ್ರಾಯದ ತಂಗಿಯೂ ಇದ್ದಳು. ಆಕೆ ಚತುರೆ ಹಾಗೂ ಸ್ಫುರದ್ರೂಪಿಯಾಗಿದ್ದಳು. ತನ್ನ ಚೆಲುವಿಕೆಗೆ ತಾನೇ ಉಪಮೆಯಾಗಿದ್ದಳು. ಯೂಸುಫನು ಆ ಯುವತಿಯನ್ನು ತನ್ನ ಅಂತಃಪುರಕ್ಕೆ ಸೇರಿಸಿಕೊಂಡನು. ಆಕೆಯನ್ನು ಮುಸಲ್ಮಾನಳನ್ನಾಗಿ ಮತಾಂತರಿಸಿ ಆಕೆಯೊಡನೆ ಮದುವೆಯಾದನು. ಆಗ ಆಕೆಗೆ ಪೂಂಜೀ ಖಾತೂನ ಎಂಬ ಹೆಸರನ್ನಿಟ್ಟನು. ಆಕೆಯಿಂದ ಆತನು ನಾಲ್ಕು ಮಕ್ಕಳನ್ನು ಪಡೆದನು. ಅವರಲ್ಲೊಬ್ಬ ಇಸ್ಮಾಯಿಲನೆಂಬ ಪುತ್ರನು. ಉಳಿದಂತೆ ಮೂವರು ಪುತ್ರಿಯರು. ಅವರ ಹೆಸರು ಹೀಗಿವೆ. :

೧. ಮರಿಯಮ್ ಸುಲ್ತಾನಾ: ಆಕೆಯ ಮದುವೆಯು ಬುರ್ಹಾನ ನಿಜಾಮಶಾಹನೊಡನೆ ನೆರವೇರಿತ್ತು.

೨. ಖತೀಜಾ ಸುಲ್ತಾನಾ : ಆಕೆಯ ಮದುವೆಯು ಶೇಕ್ ಅಲ್ಲಾವುದ್ದೀನ ಇಮಾದುಲ್ ಮುಲ್ಕನೊಡನೆ ನೆರವೇರಿತ್ತು.

೩. ಬೀಬೀಸತಿ : ಅಹಮದ್ ಶಾಹ ಬಹಮನಿಯ ಪತ್ನಿ

■

*

೨. ಯೂಸುಫ್ ಆದಿಲ್‌ಶಾಹನ ಪುತ್ರನಾದ ಇಸ್ಮಾಯಿಲ್ ಆದಿಲ್‌ಶಾಹ್

ಯಾವಾಗ ಯುಸೂಫ್ ಆದಿಲ್‌ಶಾಹನ ಮೃತ್ಯುವಾಯಿತೋ ಆಗ ಆಡಳಿತ ಸೂತ್ರವು ಆತನ ಪುತ್ರನಾದ ಇಸ್ಮಾಯಿಲ್ ಆದಿಲ್‌ಶಾಹನಿಗೆ ದೊರೆಯದೇ ಕಮಾಲ್‌ಖಾನ್ ಯಾವನು 'ಸರೇ ನೌಬತ್' ಪದವಿ ಹೊಂದಿದ್ದನೊ ಆತನು ನಡೆಸತೊಡಗಿದನು. ಏಕೆಂದರೆ ಇಸ್ಮಾಯಿಲ್ ಆದಿಲ್‌ಶಾಹನು ಇನ್ನೂ ಅಪ್ರಾಪ್ತ ವಯಸ್ಕನಾಗಿದ್ದನು. ಆಡಳಿತ ನಡೆಸುವುದು ಅವನಿಗೆ ಸಾಧ್ಯವಿರಲಿಲ್ಲ. ಕಮಾಲ್‌ಖಾನ್‌ನು ಸುಲ್ತಾನ್ ಮೊಹ್ಮದ್ ಬಹಮನಿಯ ಅಮೀರ್‌ರಲ್ಲಿ ಅತ್ಯಂತ ಪ್ರತಿಷ್ಠಿತ ವ್ಯಕ್ತಿಯಾಗಿದ್ದನು. ಯೂಸುಫ್ ಆದಿಲ್‌ಶಾಹನು ಕಮಾಲ್‌ಖಾನನನ್ನು ಕರೆಯಿಸಿ ಆತನಿಗೆ ಗೌರವ ನೀಡಿದನು ಹಾಗೂ 'ಸರೇ ನೌಬತ್' ಪದವಿಯಿಂದ ಪುರಸ್ಕರಿಸಿದನು. ತಿಮ್ಮರಾಜನ ಯುದ್ಧದಲ್ಲಿ ಕಮಾಲ್‌ಖಾನನು ಯಾವ ವಿಧದ ಶೌರ್ಯವನ್ನು ತೋರಿದ್ದನೋ ಅದರಿಂದ ಆದಿಲ್‌ಷಾಹಿ ದರ್ಬಾರ್‌ದಲ್ಲಿ ಕಮಾಲ್‌ಖಾನ್‌ನ ಗೌರವ ಇನ್ನೂ ಹೆಚ್ಚಿತು. ಯೂಸುಫ್ ಆದಿಲ್‌ಶಾಹನು ತನ್ನ ಬದುಕಿನ ಕೊನೆಯ ದಿನಗಳಲ್ಲಿ ಕಮಾಲ್‌ಖಾನನಿಗೆ 'ಸರೇ ನೌಬತ್'ದ ಹುದ್ದೆಯನ್ನು ಹೊರತುಪಡಿಸಿ, 'ವಕೀಲೇ ಸಲ್ತನತ್' (ರಾಜ ಪ್ರತಿನಿಧಿತ್ವ) ಆಗಿಯೂ ನೇಮಿಸಿದ್ದನು. ಜೊತೆಗೆಯೇ ಹೈದರ್‌ಬೇಗ್, ಫಖರುಲ್‌ಮುಲ್ಕ, ಮಿರ್ಜಾ ಜಹಾಂಗೀರ್, ದರಿಯಾಖಾನ್ ಹಾಗೂ ಇತರ ಅಮೀರರಿಗೆ ಹೀಗೆ ನಿರ್ದೇಶನ ನೀಡಲಾಗಿತ್ತು. ಏನೆಂದರೆ ಎಲ್ಲರೂ ಕಮಾಲ್‌ಖಾನ್‌ನೊಂದಿಗೆ ಕೈ ಜೋಡಿಸಿ ಕಾರ್ಯವೆಸಗಬೇಕು. ಆತನೊಂದಿಗೆ ಸೌಹಾರ್ದಯುತವಾಗಿ ನಡೆದುಕೊಳ್ಳಬೇಕು. ಯೂಸುಫ್ ಆದಿಲ್‌ಶಾಹನ ಮರಣೋತ್ತರ ಈ ಎಲ್ಲ ಅಮೀರರು ತಮ್ಮ ದಿವಂಗತ ದೊರೆಯ ಉಯಿಲು ಹಾಗೂ ಉಪದೇಶವನ್ನು ಗಮನದಲ್ಲಿಟ್ಟುಕೊಂಡು ಕಮಾಲ್‌ಖಾನ್‌ನೊಂದಿಗೆ ಸಹಕಾರ ಹಾಗೂ ಐಕ್ಯತೆಯನ್ನು ಮುಂದುವರಿಸಿದರು. ಎಲ್ಲಿಯವರೆಗೆಂದರೆ ಪ್ರಾಂತ್ಯದ ಎಲ್ಲ ಆರ್ಥಿಕ ಹಾಗೂ

ರಾಜಕೀಯ ಅಧಿಕಾರಗಳು ಆತನ ಕೈಗೆ ಬಂದವು ಹಾಗೂ ಆತನು ಈ ತೆರನಾಗಿ ಓರ್ವ ಸರ್ವಸ್ವತಂತ್ರ ಅಧಿಕಾರಿಯಾದನು.

ಆಡಳಿತ ವಿಧಾನ :

ಕಮಾಲ್‌ಖಾನನು ತನ್ನ ಅಧಿಕಾರದ ಆರಂಭವನ್ನು ಬಹಳೇ ಉತ್ತಮ ರೀತಿಯಲ್ಲಿ ಮಾಡಿದನು. ಆಡಳಿತವನ್ನು ನಡೆಸಲು ತನ್ನ ಸಂಪೂರ್ಣ ಶಕ್ತಿಯನ್ನು, ಪ್ರತಿಭೆಯನ್ನು ಹಾಗೂ ಚತುರತೆಯನ್ನು ಪ್ರದರ್ಶಿಸಿದನು. ಇಡೀ ಪ್ರಾಂತ್ಯದಲ್ಲಿ ಖಿಲ್ಫಾ ಏ ರಾಶಿದೀನ್ ಅಂದರೆ ನಾಲ್ಕು ಖಲೀಫಾರ ಹೆಸರಿನ ಖುತ್ಬಾ ಓದಿಸಿದನು ಹಾಗೂ ಶಿಯಾ ಪಂಥದ ಎಲ್ಲ ರೂಢಿ ಹಾಗೂ ಸಂಪ್ರದಾಯಗಳನ್ನು ಪ್ರಾಂತ್ಯದಲ್ಲಿ ಜಾರಿಯಾಗದಂತೆ ನೋಡಿಕೊಂಡನು. ಕಮಾಲ್‌ಖಾನನು ಆದಿಲ್‌ಶಾಹಿ ದರ್ಬಾರಕ್ಕೆ ಸಂಬಂಧಿಸಿದ ಎಲ್ಲ ಅಮೀರರ ಗೌರವ ಹಾಗೂ ಸನ್ಮಾನ ಮಾಡುವಲ್ಲಿ ಎಳ್ಳಷ್ಟೂ ಹಿಂಜರಿಯಲಿಲ್ಲ. ಹೀಗೆ ಸಮಸ್ತ ಹಿರಿಕಿರಿಯ ಎಲ್ಲ ಜನರ ಹೃನ್ಮನಗಳನ್ನು ಏಕಕಾಲಕ್ಕೆ ಗೆದ್ದನು. ಆಡಳಿತವನ್ನು ಉತ್ಕೃಷ್ಟ ರೀತಿಯಲ್ಲಿ ನಡೆಸಲು ಹಾಗೂ ಉನ್ನತಗೊಳಿಸಲು ಆತನು ಇಮಾದ್‌ಶಾಹಿ, ಕುತುಬ್‌ಶಾಹಿ, ನಿಜಾಮ್‌ಶಾಹಿ ಹಾಗೂ ಬರೀದ್‌ಶಾಹಿಯಂಥ ಬಲಾಢ್ಯ ಪ್ರಾಂತ್ಯಗಳ ಅಮೀರರ ಜೊತೆ ಸ್ನೇಹ ಸಂಬಂಧವನ್ನು ಬೆಳೆಸಿದನಲ್ಲದೇ ಅವರಿಂದ ಸಹಕಾರವನ್ನು ಕೋರಿ, ಅತ್ಯುತ್ತಮ ಸಲಹೆಗಳನ್ನು ಪಡೆದನು. ಫಿರಂಗಿಗಳು ಗೋವಾ ಕೋಟೆಯ ದಳಪತಿಗೆ ಲಂಚವನ್ನು ನೀಡಿದರು. ಹಾಗೂ ಯೂಸುಫ್ ಆದಿಲ್‌ಶಾಹ್‌ನು ಯಾವಾಗ ಮರಳಿ ಬಂದನೊ ಆಗ ಅವರು ಈ ಕೋಟೆಯನ್ನು ತಮ್ಮ ವಶಕ್ಕೆ ತೆಗೆದುಕೊಂಡರು. ಎಲ್ಲಿಯವರೆಗೆಂದರೆ, ಇಸ್ಮಾಯಿಲ್ ಆದಿಲ್‌ಶಾಹ್‌ನ ಆಡಳಿತದ ಪ್ರಾರಂಭದ ಅವಸ್ಥೆಯಲ್ಲಿಯೂ ಈ ಕೋಟೆಯ ಮೇಲೆ ಫಿರಂಗಿಗಳ ಹಿಡಿತವಿತ್ತು. ಕಮಾಲ್‌ಖಾನ್ ಹಾಗೂ ಫಿರಂಗಿಗಳ ನಡುವೆ ಒಂದು ಒಪ್ಪಂದವಾಯಿತು. ಅದು ಹೀಗಿತ್ತು: ಫಿರಂಗಿಗಳು ಯಾವುದೇ ರೀತಿಯಲ್ಲಿ ಪ್ರಾಂತ್ಯವನ್ನು ವಿಸ್ತರಿಸುವ ಪ್ರಯತ್ನ ಮಾಡಬಾರದು ಹಾಗೂ ಆದಿಲ್‌ಶಾಹಿ ಪ್ರಾಂತ್ಯದ ಸುತ್ತಲೂ ಯಾವುದೇ ತೆರನಾಗಿ ಭಯ ಹುಟ್ಟಿಸುವ ಹಾಗೂ ತಮ್ಮ ಪ್ರಭಾವ ಬೀರುವ ಅನುಮತಿ ಇರುವುದಿಲ್ಲ ಮತ್ತು ಅವರು ಕೇವಲ ಕೋಟೆಯ ಮೇಲೆ ಅಧಿಕಾರ ಹೊಂದಿರುವರು. ಇದೇ ಕಾರಣದಿಂದಾಗಿ ಇಂದಿನವರೆಗೂ ಈ ಕೋಟೆಯ ಮೇಲೆ ಈಸಾಯಿಗಳ ಹಿಡಿತವಿರುವುದು. ಇಸಾಯಿಗಳ ಈ ಸಂಧಾನ ಹಾಗೂ ಸುತ್ತಮುತ್ತಲಿನ ಅಮೀರರ ಸಹಕಾರದಿಂದಾಗಿ ಕಮಾಲ್‌ಖಾನನಿಗೆ ಸರಿಯಾದ ಆಡಳಿತ ನಡೆಸಲು ಸಾಧ್ಯವಾಯಿತು ಹಾಗೂ ಆತನು ನೆಮ್ಮದಿ ಪೂರ್ವಕವಾಗಿ ತನ್ನ ಕರ್ತವ್ಯವನ್ನು ನಿರ್ವಹಿಸತೊಡಗಿದನು. ಒಂದೇ ವರ್ಷದ ಅವಧಿ ಪೂರ್ತಿಯಾಗಿತ್ತು ಏನಾಯಿತೆಂದರೆ ಫಖರುಲ್‌ಮುಲ್ಕ ಹಾಗೂ ದರಿಯಾಖಾನ್‌ರು ಇಹಲೋಕವನ್ನು ತ್ಯಜಿಸಿದರು. ಕಮಾಲ್‌ಖಾನನು ಈ ಅಮೀರರ ಆಸ್ತಿಯನ್ನು ತನ್ನ ಸಂಬಂಧಿಗಳಲ್ಲಿ ಹಾಗೂ ಪುತ್ರರಲ್ಲಿ ವಿತರಿಸಿದನು. ಹೀಗೆ ಈ ತೆರನಾಗಿ ಪ್ರತಿಯೊಬ್ಬರ ಒಂದು

ಬೇರೆಯೇ ಆದ ದರ್ಬಾರ್ ನಿರ್ಮಾಣವಾಯಿತು. ಇದರ ಹೊರತಾಗಿ ಈ ಜನರಿಗೆ ಮಿರ್ಜಾ ಜಹಾಂಗೀರ್ ಹಾಗೂ ಹೈದರ್‌ಬೇಗ್‌ನ ಆಸ್ತಿಯ ಕೆಲ ಪರಗಣಗಳನ್ನು ಇವರಿಗೆ ಹಸ್ತಾಂತರಿಸಲಾಯಿತು. ಎಲ್ಲಿಯವರೆಗೆಂದರೆ ಆ ಎಲ್ಲ ಆಸ್ತಿಯು ಹಾಗೂ ಜಹಾಗೀರು ನೇರವಾಗಿ ಆದಿಲ್‌ಶಾಹಿ ಅಮೀರರಿಗೆ ಸಂಬಂಧಿಸಿತ್ತು. ಅವರ ಮೃತ್ಯುವಿನ ನಂತರ ಅಥವಾ ಅವರಲ್ಲಿ ಯಾವುದೇ ಅಮೀರರು ಅಪರಾಧವೆಸಗಿದರೆ ಅವರಿಂದ ಪಡೆದ ಆಸ್ತಿಯನ್ನು ಕಮಾಲ್‌ಖಾನನು ತನ್ನ ಹಿತೈಷಿಗಳಲ್ಲಿ ಹಂಚುತ್ತಿದ್ದನು. ಹೀಗೆ ಕಮಾಲ್‌ಖಾನನು ಅಲ್ಪಾವಧಿಯಲ್ಲಿಯೇ ತನ್ನ ಆಡಳಿತದ ಪ್ರಾಂತ್ಯದಲ್ಲಿ ಪ್ರತಿಷ್ಠೆಯನ್ನು ಹೆಚ್ಚಿಸಿಕೊಂಡನು. ಆತನು ಪ್ರಭಾವಿ ಮತ್ತು ಪ್ರಬಲ ಆಡಳಿತಗಾರನಾಗಿ ಹೊರಹೊಮ್ಮಿದನು. ಪ್ರಾಂತ್ಯದ ವಿಸ್ತರಣೆಗಾಗಿ ಬೇರೆ ಬೇರೆಯ ಯೋಜನೆಗಳತ್ತ ಗಮನಕೊಡತೊಡಗಿದನು.

ಕಮಾಲ್‌ಖಾನ್‌ನಿಗೆ ಸರ್ವ ಸ್ವತಂತ್ರನಾಗುವ ಎಂಥ ಅಮಲೇರಿತೆಂದರೆ ಆತನು ಈಗ ಸದಾ ಇದೇ ಯೋಚನೆಯಲ್ಲಿಯೇ ತೊಡಗಿರುತ್ತಿದ್ದನು. ಹೇಗಾದರೂ ಮಾಡಿ ಪ್ರಾಂತ್ಯದ ಎಲ್ಲ ಸಂಪತ್ತಿನ ಮೇಲೆ ಒಡೆತನ ಸಾಧಿಸಬೇಕು. ಇದು ಆ ಕಾಲದ ಮಾತಾಗಿದೆ. ಯಾವಾಗ ದಖ್ಖನ್ನಿನ ಅಮೀರರಲ್ಲಿ ಇದು ಒಂದು ಪ್ರತಿಷ್ಠೆ ಹಾಗೂ ಪ್ರಶಂಸೆಯ ವಿಷಯವಾಗಿತ್ತು. ಏನೆಂದರೆ ಈ ಕಾರ್ಯವು ದಖ್ಖನ್ನಿನ ಆಡಳಿತಗಾರರು ಒಂದು ಶುಭಕಾರಕ ಶಕುನವೆಂದು ಬಗೆಯುತ್ತಿದ್ದರು. ಇಂಥ ಉದಾಹರಣೆಗಳು ಸಾಕಷ್ಟಿವೆ. ಎಲ್ಲಿ ಆಡಳಿತಕ್ಕೊಳಪಟ್ಟವರೇ ಆಡಳಿತಗಾರನ ಮೇಲೆ ಅಧಿಕಾರ ಸ್ಥಾಪಿಸುವದು. ಅದರ ಪ್ರಾರಂಭವು ತಿಮ್ಮರಾಜನಿಂದ ಆಯಿತು. ಬೇಜಾನಗರದ ಯುವರಾಜನಾದ ಶಿವರಾಯನು ಯಾವಾಗ ಪ್ರೌಢಾವಸ್ಥೆಯನ್ನು ತಲುಪಿದನೋ ಆಗ ತಿಮ್ಮರಾಜನು ಆತನಿಗೆ ವಿಷಪ್ರಾಶನ ಮಾಡಿಸಿ ಕೊಲೆಗೈದನು. ಈತನ ಬದಲಾಗಿ ಆತನ ತಮ್ಮನು ಆಡಳಿತ ಸೂತ್ರವನ್ನು ಹಿಡಿದನು. ಹಾಗೂ ಯೂಸುಫ್ ಆದಿಲ್‌ಶಾಹ್‌ನ ಸೋಲಿನ ಸಮಯದಲ್ಲಿ ಈತನೂ ಮೃತ್ಯುವನ್ನಪ್ಪಿದನು. ಈ ತೆರನಾಗಿ ತಿಮ್ಮರಾಜನು ಬಹಳಷ್ಟು ಅಮೀರರನ್ನು ತನ್ನ ಹಿತೈಷಿ ಹಾಗೂ ಸಹಾಯಕರನ್ನಾಗಿಸಿದನು ಹಾಗೂ ಸ್ವತಃ ದೊರೆಯಾಗಿ ಸಿಂಹಾಸನಾಧೀಶನಾದನು. ಹೇಗೆಂದರೆ ಮೇಲೆ ಉಲ್ಲೇಖಿಸಲಾಗಿದೆಯೋ ಅದೇ ತೆರನಾಗಿ ಮಹಮೂದ್‌ಶಾಹ ಬಹಮನಿಯನ್ನು ಕೊಲೆಗೈದು ಕಾಸೀಮ ಬರೀದ್ ತುರ್ಕ್ ಹಾಗೂ ಇತರ ಅಮೀರರು ಪ್ರಾಂತ್ಯದ ಮೇಲೆ ಹಿಡಿತ ಸಾಧಿಸಿದರು ಹಾಗೂ ತಮ್ಮ ಅಧಿಕಾರದ ಘೋಷಣೆ ಮಾಡಿದರು.

ಕಮಾಲ್‌ಖಾನ್‌ನು ಇವರ ಶಿಷ್ಯ ಮಂಡಳಿಯವನೇ ಆಗಿದ್ದನು. ಈ ಎಲ್ಲ ಪರಿಸ್ಥಿತಿ ಹಾಗೂ ನಡೆಯುತ್ತಿರುವ ಘಟನೆಗಳ ಕುರಿತು ಚೆನ್ನಾಗಿ ಮನಗಂಡಿದ್ದನು. ಅದಕ್ಕಾಗಿ ಆತನೂ ಸಂಪತ್ತು ಹಾಗೂ ಗೌರವದ ಕಾರಣದಿಂದಾಗಿ ಖಾಸಿಂ ಬರೀದ್‌ನ ಹಾದಿ ತುಳಿದನು. ಆತನು ಖಾಸಿಂ ಬರೀದನಿಗೆ ತಿಳಿಸಿದನು. ಏನೆಂದರೆ ಆತನ ಬಳಿ

ಎಲ್ಲ ತೆರನಾದ ಯುದ್ಧ ಸಾಮಗ್ರಿ ಉಪಲಬ್ಧವಿದೆ. ಈ ಸಮಯದಲ್ಲಿ ಅಹ್ಮದ್‌ನಗರದ ಯುವರಾಜನೂ ಅಪ್ರಾಪ್ತ ವಯಸ್ಕನಿರುವನು. ಹಾಗೂ ಬರಾರ್‌ದ ಯುವರಾಜನಾದ ಫತಾಅಲ್ಲಾಹ್ ಇಮಾದ್‌ನೂ ತನ್ನ ಯೌವ್ವನದಿಂದಾಗಿ ವರ್ಣರಂಜಿತ ವ್ಯಕ್ತಿತ್ವವುಳ್ಳವನಾಗಿ ಸ್ತ್ರೀಲೋಲುಪನಾಗಿರುವನು. ಈ ಅವಕಾಶವು ಸುವರ್ಣಾವಕಾಶವಾಗಿದೆ. ಇದನ್ನು ಕಳೆದುಕೊಳ್ಳುವುದು ಬೇಡ. ತಾವು ನನಗೆ ತಮ್ಮ ಹಿತೈಷಿ ಹಾಗೂ ನಂಬಿಗಸ್ತನೆಂದು ಬಗೆದು ದಖ್ಖನ್ನಿನ ಆಡಳಿತಗಾರರಲ್ಲಿ ನನ್ನನ್ನು ಸೇರ್ಪಡೆಗೊಳಿಸಬೇಕು ಹಾಗೂ ಈ ತೆರನಾಗಿ ಸಾಮ್ರಾಜ್ಯವನ್ನು ವಿಸ್ತರಿಸುವಲ್ಲಿ ನನಗೆ ಸಹಾಯವೆಸಗಬೇಕು. ಅಮೀರ್‌ಖಾಸಿಂ ಬರೀದ್ ಇವನು ಒಂದು ಅವಧಿಯಿಂದ ಇಂಥ ಅವಕಾಶವನ್ನು ಹುಡುಕುತ್ತಿದ್ದನು. ತಕ್ಷಣ ಒಪ್ಪಿಗೆ ಸೂಚಿಸಿದನು. ಹೀಗೆ ಎರಡೂ ಕಡೆಯಿಂದ ಒಂದು ಒಪ್ಪಂದ ಸೂತ್ರ ನಿರ್ಮಾಣವಾಯಿತು. ಹಾಗೂ ಅದು ಹೀಗಿದೆ. ಖಾಸಿಂ ಬರೀದ್ ತುರ್ಕ್ ದಸ್ತೂರ್ ದಿನಾರ್ ಜಾಗೀರನ್ನು ತನ್ನ ವಶದಲ್ಲಿರಿಸಿಕೊಳ್ಳಬೇಕು ಹಾಗೂ ಈ ವಿಧವಾಗಿ ಬಿಜಾಪುರದ ಯಾವ ಭಾಗವು ಉಳಿಯುವುದೋ ಅದನ್ನು ಕಮಾಲ್‌ಖಾನ್‌ನು ತನ್ನ ಹತೋಟಿಯಲ್ಲಿಟ್ಟುಕೊಳ್ಳಬೇಕು. ಬಿಸಿ ಸಲಾಖೆಯಿಂದ ಇಸ್ಮಾಯಿಲ್ ಆದಿಲ್‌ಶಾಹನ ಕಣ್ಣುಗಳನ್ನು ವಿನಾಶಗೊಳಿಸಬೇಕು. ಸಾಧ್ಯವಾದರೆ ಆತನನ್ನು ಗೋರಿಯಲ್ಲಿಳಿಸಬೇಕು ಮತ್ತು ಖ್ವಾಜಾ ಜಹಾನನ ಸಹೋದರನು ಸೋಲಾಪುರದ ಕೋಟೆಯನ್ನು ಆಳುತ್ತಿರುವನು ಆತನನ್ನು ಕಮಾಲ್‌ಖಾನ ಬಂಧಿಯನ್ನಾಗಿಸಬೇಕು. ಈ ಎಲ್ಲ ಚಟುವಟಿಕೆ ಷರತ್ತು ಹಾಗೂ ಸಂವಹನಗಳ ನಂತರ ಅವರ ಯೋಜನೆ ಪ್ರಾರಂಭವಾಯಿತು. ಮೊಹಮೂದ್‌ಶಾಹ ಬಹಮನಿಯನ್ನು ಆತನ ಅರಮನೆಯಲ್ಲಿ ಗೃಹಬಂಧನದಲ್ಲಿಡಲಾಯಿತು ಹಾಗೂ ಖಾಸಿಂ ಬರೀದ್‌ನು ಸೈನ್ಯವನ್ನು ಸಿದ್ಧಗೊಳಿಸಿ ಹಸನಾಬಾದ್ ಗುಲ್ಬರ್ಗಾದತ್ತ ಹೊರಟನು. ಈ ಕಡೆ ಬಿಜಾಪುರದ ಅರಕಿಲ್ಲಾ ಕೋಟೆಯಲ್ಲಿ ಕಮಾಲ್‌ಖಾನನು ಇಸ್ಮಾಯಿಲ್ ಆದಿಲ್‌ಶಾಹನೊಂದಿಗೆ ಆತನ ತಾಯಿಯಾದ ಪೂಂಜಿಖಾತೂನ್‌ಳನ್ನು ಬಂಧಿಸಿಟ್ಟನು ಹಾಗೂ ತನ್ನ ಪುತ್ರರನ್ನು ಅವರ ಮೇಲ್ವಿಚಾರಣೆಗಾಗಿ ನೇಮಿಸಿ ಬಹಳೇ ಆಡಂಬರದೊಂದಿಗೆ ಸೋಲಾಪುರದತ್ತ ಹೊರಟನು. ಮೂರು ತಿಂಗಳವರೆಗೆ ಕಮಾಲ್‌ಖಾನ್‌ನು ಸೋಲಾಪುರವನ್ನು ತನ್ನ ಹಿಡಿತದಲ್ಲಿಟ್ಟುಕೊಂಡಿದ್ದನು. ಆಗ ಜೈದ್‌ಖಾನ್‌ನಿಗೆ ಮಲಿಕ್ ಅಹ್ಮದ್ ನಿಜಾಮುಲ್ ಮುಲ್ಕ ಬಹ್ರಿ ಹಾಗೂ ಖ್ವಾಜಾಜಹಾನ ಕಡೆಯಿಂದ ನಿರಾಶೆಯನ್ನೆದುರಿಸಬೇಕಾಯಿತು. ಆಗ ಆತನು ತನ್ನ ಪ್ರಾಣ, ವಿತ್ತದ ಸಂರಕ್ಷಣೆಗಾಗಿ ಕಮಾಲ್‌ಖಾನ್‌ನನ್ನು ವಿನಂತಿಸಿದನು ಹಾಗೂ ಕೋಟೆಯನ್ನು ಐದುವರೆ ಪರಗಣಗಳೊಂದಿಗೆ ಆತನ ವಶಕ್ಕೊಪ್ಪಿಸಿದನು.

[1] ಈ ಐದೂವರೆ ಪರಗಣಗಳ ವಿವರವಾದ ವಿವರಣೆಯು ಹೀಗಿದೆ. ಯಾವಾಗ ದಖ್ಖನ್ನಿನ ಅಮೀರರು ಅಹ್ಮದಾಬಾದ್ ಬೀದರ್‌ದ ವ್ಯವಹಾರವನ್ನು ಬಗೆಹರಿಸಿದರು. ಆಗ ಅವರಲ್ಲಿಯ ಪ್ರತಿಯೊಬ್ಬ ಅಮೀರನು ಒಂದೊಂದು ಪ್ರಾಂತ್ಯವನ್ನು ತನ್ನ ಸುಪರ್ದಿಗೆ ತೆಗೆದುಕೊಂಡನು. ಈ ತೆರನಾಗಿ ಪರಿಂದಾದ ಆಡಳಿತಗಾರನಾದ

ಖ್ವಾಜಾಜಹಾನ ದಖನಿಗೆ ಹನ್ನೊಂದು ಪರಗಣಗಳು ಲಭಿಸಿದವು. ಆತನ ಸಹೋದರ ಈ ಸಮಯದಲ್ಲಿ ಸೋಲಾಪುರ ಕೋಟೆಯ ವಾರಸುದಾರನಾಗಿದ್ದನು. ಯಾರನ್ನು ಜೈನ್‌ಖಾನ್ ಎಂಬ ಹೆಸರಿನಿಂದ ಗುರುತಿಸಲಾಗುತ್ತಿತ್ತೊ ಆತನು ಅಹ್ಮದಾಬಾದ್ ಬೀದರ್‌ದತ್ತ ಹೊರಟನು ಹಾಗೂ ಸುಲ್ತಾನ್ ಮೊಹಮೂದ್ ಬಹಮನಿಯಿಂದ ಒಂದು ಈ ವಿಧವಾದ ಆದೇಶವನ್ನು ಹೊರಡಿಸಲು ಪ್ರಯತ್ನಿಸಿದನು. ಏನೆಂದರೆ ಸೋಲಾಪುರದ ಕೋಟೆ ಹಾಗೂ ಖ್ವಾಜಾಜಹಾನ ಆಸ್ತಿಯ ಅರ್ಧದಷ್ಟು ಸಂಪತ್ತಿನ ಒಡೆಯನನ್ನಾಗಿಸಬೇಕು. ಆದರೆ ಅಹ್ಮದ್‌ನಿಜಾಮಶಾಹ್ ಬೆಹ್ರಿಯ ಸಹಾಯದಿಂದ ಹಾಗೂ ಆತನ ಪ್ರಯತ್ನದಿಂದ ಖ್ವಾಜಾಜಹಾನ ದಖನಿಯು ಜೈನ್‌ಖಾನ್‌ನಿಗೆ ಕೇವಲ ಸೋಲಾಪುರ ಕೋಟೆಯ ಆಡಳಿತಗಾರನನ್ನಾಗಿಸಿದನು. ಸುಲ್ತಾನ್‌ನ ಆದೇಶ ಹಾಗೂ ಆಜ್ಞೆಯ ಪಾಲನೆಯಾಗದಂತೆ ನೋಡಿಕೊಂಡನು. ಈ ವಿಧವಾಗಿ ಈತನ ಅರ್ಧ ಆಸ್ತಿಯ ಮೇಲೆ ಜೈನ್‌ಖಾನ್‌ನು ವಶಪಡಿಸಿಕೊಳ್ಳಲಾರದಾದನು.

ಯಾವಾಗ ಅಹ್ಮದ್‌ಶಾಹ ನಿಜಾಮನ ಮೃತ್ಯುವಾಯಿತೋ ಆಗ ಯುಸುಫ ಆದಿಲ್‌ಶಾಹನು ಆಡಳಿತಗಾರನಾದನು. ಆತನು ದಿವಂಗತ ದೊರೆಯ ಫರ್ಮಾನಿನಂತೆ ಜೈನ್‌ಖಾನನಿಗೆ ಉತ್ತೇಜಿಸಲೆಂದು ಖ್ವಾಜಾಜಹಾನ ದಖನಿಯ ಐದೂವರೆ ಪರಗಣಗಳನ್ನು ಒಪ್ಪಿಸಿದನು. ದಿಟದಲ್ಲಿ ಈ ಪರಗಣಗಳೇ ನಿಜಾಮಶಾಹಿ ಹಾಗೂ ಆದಿಲ್‌ಶಾಹಿ ಆಡಳಿತದ ನಡುವೆ ಗಂಭೀರ ಸಮಸ್ಯೆಗಳಾಗಿ ಪರಿವರ್ತಿತವಾದವು. ಏಕೆಂದರೆ ಇವುಗಳ ತೆರಿಗೆಯ ಹಣವು ಮೂರು ಲಕ್ಷ ಹುನ್ನಗಳಷ್ಟಿತ್ತು. ಅದರ ವಿವರವು ಮುಂದೆ ಬರುವದು. ಈ ವಿಧವಾಗಿ ನುಸ್ರತಾಬಾದ ಕೋಟೆ, ಸಾಗರ್ ಹಾಗೂ ಅಲ್ಗೇರ್‌ಗಳ ಮೇಲೆ ಅಮೀರ್ ಕಾಸೀಮ ಬರಿದ್ ತುರ್ಕ್‌ನ ಅಧಿಕಾರ ಸ್ಥಾಪಿತವಾಯಿತು. ಈ ತೆರನಾಗಿ ಭೀಮಾ ನದಿಯ ಆ ಕಡೆಯ ಎಲ್ಲ ಗ್ರಾಮ ಹಾಗೂ ಪಟ್ಟಣಗಳ ಮೇಲೆ ಆದಿಲ್‌ಷಾಹಿ ಆಡಳಿತದ ಅಧಿಕಾರವು ಕೊನೆಗೊಂಡಿತು. ಈ ಎಲ್ಲ ಪ್ರದೇಶಗಳು ಅಮೀರ್ ಕಾಸೀಮ ಬರೀದ್ ತುರ್ಕನ ಅಡಿಗೆ ಬಂದವು. ಜೊತೆಗೆಯೇ ಆತನು ಗುಲ್ಬರ್ಗಾವನ್ನು ಸಹ ತನ್ನ ವಶದಲ್ಲಿ ತೆಗೆದುಕೊಂಡನು. ಈ ಕಾಲದಲ್ಲಿ ಆತನಿಗೆ ಈ ಸುದ್ಧಿಯು ತಲುಪಿತು. ಏನೆಂದರೆ ಸೋಲಾಪುರ ಕೋಟೆಯ ಮೇಲೆ ವಿಜಯ ಸಾಧಿಸಲಾಯಿತು. ಅದಕ್ಕಾಗಿ ಆತನು ಕಮಾಲ್‌ಖಾನ್‌ನಿಗೆ ಶುಭಾಶಯಗಳ ಸಂದೇಶವನ್ನು ಕಳುಹಿಸಿದನು. ಅದರಿಂದಾಗಿ ಕಮಾಲ್‌ಖಾನ್‌ನ ಧೈರ್ಯ ಸ್ಥೈರ್ಯಗಳು ಇನ್ನಷ್ಟೂ ಹೆಚ್ಚಾದವು ಹಾಗೂ ಆತನ ಸಂಕಲ್ಪಗಳಿಗೆ ಮತ್ತಷ್ಟು ಬಲ ಸಿಕ್ಕಿತು. ಆತನು ಬಹಳೇ ದರ್ಪದೊಂದಿಗೆ ಬಿಜಾಪುರಕ್ಕೆ ತಲುಪಿದನು. ಇಸ್ಮಾಯಿಲ್ ಆದಿಲ್‌ಶಾಹನಿಗೆ ಮತ್ತೊಮ್ಮೆ ಅವಕಾಶ ನೀಡಿದನು. ಏನೆಂದರೆ ಆತನು ಪ್ರಜೆಗಳ ಸಲಾಂಗಳನ್ನು ಸ್ವೀಕರಿಸಬೇಕು. ಈ ವಿಧವಾಗಿ ಕಮಾಲ್‌ಖಾನನು ಹೊಸದಾಗಿ ತನ್ನ ಆಡಳಿತವನ್ನು ಭದ್ರ ಬುನಾದಿಯ ಮೇಲೆ ಬಲಗೊಳಿಸಲು ಯತ್ನಿಸಿದನು.

ಅಮೀರರ ಹುದ್ದೆಗಳಲ್ಲಿ ಬದಲಾವಣೆ :

ಕಮಾಲ್‌ಖಾನ್‌ನು ಮೊಘಲ್ ಅಮೀರರಿಗೆ ವಜಾಗೊಳಿಸುವ ಆದೇಶ ನೀಡಿದನು. ಆರಂಭದಲ್ಲಿ ಮೊಘಲರ ಸಂಖ್ಯೆಯು ಮೂರು ಸಾವಿರದಷ್ಟು ಇತ್ತು. ಈಗ ಕೇವಲ ಮೂರುನೂರು ಉಳಿಯಿತು. ಯಾವ ಮೊಘಲರನ್ನು ವಜಾಗೊಳಿಸಲಾಗಿತ್ತೊ ಅವರನ್ನು ಕುರಿತು ಕಮಾಲ್‌ಖಾನನು ಮತ್ತೊಂದು ಆದೇಶವನ್ನು ಹೊರಡಿಸಿದನು. ಅದು ಹೀಗಿತ್ತು: ಅಮಾನತ್ತುಗೊಂಡ ಯಾವುದೇ ಮೊಘಲರು ಆತನ ಪ್ರಾಂತ್ಯದಲ್ಲಿ ಇರಕೂಡದು. ಒಂದು ವೇಳೆ ಅವರು ಕಂಡುಬಂದರೆ, ಅವರ ಪ್ರಾಣ ಹಾಗೂ ವಿತ್ತ ಅಪಾಯದಲ್ಲಿರುವುದು. ಈ ಆಜ್ಞೆಯು ಜಾರಿಗೊಂಡ ಬಳಿಕ ಮೊಘಲರಲ್ಲಿ ಭಯಭೀತಿಯುಂಟಾಯಿತು. ಅವರು ಈ ಘಳಿಗೆಯಿಂದಲೇ ಅಸುರಕ್ಷಿತ ಹಾಗೂ ನೆಮ್ಮದಿರಹಿತರಾದರು. ಆ ಕಾರಣದಿಂದ ಸ್ಥಳದಿಂದ ಸ್ಥಳಕ್ಕೆ ಅಲೆಯತೊಡಗಿದರು. ಕಮಾಲ್‌ಖಾನ್‌ನ ಈ ಹೆಜ್ಜೆಯು ಆತನಿಗೆ ನೆಮ್ಮದಿ ನೀಡಿತು. ಆತನಿಗೆ ಯಾವುದೇ ವ್ಯಕ್ತಿಯಿಂದ ಅಪಾಯುವಿರಲಿಲ್ಲ. ಆಗ ಆತನು ನಿಜಾಮುಷಾಹಿ ವಂಶದ ಸಂಪ್ರದಾಯಗಳನ್ನು ಪಾಲಿಸತೊಡಗಿದನು ಹಾಗೂ ಸಾಮ್ರಾಜ್ಯದ ವಿಸ್ತರಣೆಯ ಯೋಜನೆಯನ್ನು ಮುಂದಿಟ್ಟುಕೊಂಡು ಪ್ರತಿಯೊಬ್ಬ ವ್ಯಕ್ತಿಗೆ ಹುದ್ದೆಗಳಲ್ಲಿ ಉನ್ನತಿಯನ್ನು ನೀಡತೊಡಗಿದನು. ಈ ವಿಧವಾಗಿ ಯಾವ ಅಮೀರರ ಬಳಿ ಕಡಿಮೆ ಜಾಗೀರುಗಳಿದ್ದವೊ ಅವರಿಗೆ ಹೆಚ್ಚು ಜಾಗೀರು ಹಾಗೂ ಯಾರ ಹುದ್ದೆ ಕೆಳಹಂತದವಾಗಿದ್ದವೊ ಅವರಿಗೆ ಉನ್ನತ ಹುದ್ದೆಗಳನ್ನು ನೀಡಲಾಯಿತು. ಕೋರಾರಾವತ್‌ದಲ್ಲಿ ಯಾವಾಗ ಹಿಜರಿಶಕೆ ೯೧೭ರಲ್ಲಿ ಜನಗಣತಿ ಮಾಡಲಾಯಿತೋ ಆಗ ಅದರಿಂದ ಈ ವಿಷಯ ತಿಳಿದುಬಂದಿತು. ಏನೆಂದರೆ ಸೈನ್ಯದಲ್ಲಿ ದಖ್ಖನಿ ಹಾಗೂ ಹಬಶಿಗಳ ಒಟ್ಟು ಸಂಖ್ಯೆಯು ಇಪ್ಪತ್ತು ಸಾವಿರವಿರುವುದು.

ಸಿಂಹಾಸನಾರೂಢನಾಗಲು ಕಮಾಲ್‌ಖಾನ್‌ನ ಸಿದ್ಧತೆ :

ಜನಗಣತಿಯ ನಂತರ ಕಮಾಲ್‌ಖಾನ್‌ನು ತನ್ನ ಹಿತೈಷಿ, ಆಪ್ತ ಸಂಗಾತಿ ಹಾಗೂ ಸ್ನೇಹಿತರೊಂದಿಗೆ ಪಟ್ಟಾಭಿಷೇಕದ ಕುರಿತು ಸಮಾಲೋಚನೆ ನಡೆಸಿದನು. ಎಲ್ಲರೂ ಇದೇ ಸಲಹೆಯನ್ನು ನೀಡಿದರು. ಏನೆಂದರೆ ಕಮಾಲ್‌ಖಾನ್‌ನ ಹಾದಿಯಲ್ಲಿ ಯಾವ ಅಡೆತಡೆಗಳೂ ಇಲ್ಲ ಅದಕ್ಕಾಗಿ ಆತನು ಎಷ್ಟು ಶೀಘ್ರವೋ ಅಷ್ಟು ಬೇಗನೆ ಸಿಂಹಾಸನಾರೂಢನಾಗಬೇಕು. ಈ ಕಾರಣಕ್ಕಾಗಿ ಜ್ಯೋತಿಷಿಗಳನ್ನು ಕರೆಯಿಸಲಾಯಿತು. ಸಿಂಹಾಸನಾರೋಹಣದ ಸೂಕ್ತ ಸಮಯವನ್ನು ತಿಳಿಯಲಾಯಿತು. ಜ್ಯೋತಿಷಿಗಳು ಕಮಾಲ್‌ಖಾನ್ ದಖನಿಗೆ ಇದನ್ನು ತಿಳಿಸಿದರು. ಏನೆಂದರೆ ಆತನಿಗೆ ಈ ತಿಂಗಳ ಹದಿನೈದು ದಿನಗಳವರೆಗೆ ತನ್ನನ್ನು ತಾನು ರಕ್ಷಿಸಿಕೊಳ್ಳಬೇಕು. ಏಕೆಂದರೆ ಗ್ರಹಗತಿಗಳು ಕಮಾಲ್‌ಖಾನ್‌ನ ಪರ ಇರುವದಿಲ್ಲ. ಈ ವಿಧವಾಗಿ ಕಮಾಲ್‌ಖಾನ್‌ನಿಗೆ ಸಲಹೆ

ನೀಡಲಾಯಿತು. ಏನೆಂದರೆ ಆತನು ಹದಿನಾರನೇ ದಿನ ಸಿಂಹಾಸನದ ಮೇಲೆ ಕುಳಿತುಕೊಳ್ಳಬೇಕು ಹಾಗೂ ಮೆರವಣಿಗೆ ಹೊರಡಿಸಬೇಕು.

ಅರಕಿಲ್ಲಾ ಕೋಟೆಯಲ್ಲಿ ಕಮಾಲ್‌ಖಾನ್‌ನ ವಾಸ :

ಜ್ಯೋತಿಷಿಗಳ ಭವಿಷ್ಯ ನುಡಿಯು ಕಮಾಲ್‌ಖಾನ್‌ನಲ್ಲಿ ಭಯ ಹುಟ್ಟಿಸಿತು. ಅದಕ್ಕಾಗಿ ಆತನು ಅರಕಿಲ್ಲಾ ಕೋಟೆಯನ್ನು ತನ್ನ ಸುರಕ್ಷತೆಗಾಗಿ ಆಯ್ಕೆ ಮಾಡಿಕೊಂಡನು. ಬೇರೆ ಎಲ್ಲಾ ಸ್ಥಳಗಳಿಗಿಂತಲೂ ಅದನ್ನು ಸುರಕ್ಷಿತವೆಂದು ಭಾವಿಸಿದ್ದನು. ಆತನು ತನ್ನ ಕೆಟ್ಟ ದಿನಗಳನ್ನು ಇದೇ ಕೋಟೆಯಲ್ಲಿ ಕಳೆಯುವುದು ಎಂದು ನಿರ್ಧರಿಸಿದನು. ಈ ಕಾರಣಕ್ಕಾಗಿ ಆತನು ಬಿಜಾಪುರದ ಎಲ್ಲ ವ್ಯವಹಾರಗಳನ್ನು ಆ ಜನರಿಗೆ ಒಪ್ಪಿಸಿದನು. ಯಾರ ಮೇಲೆ ಆತನಿಗೆ ಸಂಪೂರ್ಣ ನಂಬಿಕೆಯಿತ್ತು. ಆತನು ಹೀಗೆ ಯೋಚಿಸಿದನು. ಮನುಷ್ಯನ ಯೋಜನೆಗಳು ದೇವನ ವಿಧಿಲಿಖಿತವನ್ನು ಅಳಿಸುವುದು ಅದಕ್ಕಾಗಿ ಅರಕಿಲ್ಲಾ ಕೋಟೆಯು ಒಂದು ನೆಮ್ಮದಿದಾಣವನ್ನು ತನ್ನ ವಾಸಸ್ಥಳವನ್ನಾಗಿಸಿಕೊಂಡನು. ಆತನು ಎಲ್ಲ ಜನರಿಗೆ ಆಜ್ಞೆ ನೀಡಿದನು. ಅವರು ಆತನ ಅನುಪಸ್ಥಿತಿಯಲ್ಲಿ ಆತನ ಪುತ್ರನಾದ ಸಫ್ದರ್‌ಖಾನ್‌ನೊಂದಿಗೆ ಸಮಾಲೋಚಿಸಬೇಕು. ತಲೆನೋವು ಹಾಗೂ ಜ್ವರದ ನೆಪದಿಂದ ಜನರನ್ನು ಭೇಟಿಯಾಗುವುದರಿಂದ ತಡೆದನು. ಈ ಅವಧಿಯಲ್ಲಿ ಆತನು ಯಾವುದೇ ವ್ಯಕ್ತಿಯನ್ನು ಸಂಪರ್ಕಿಸಲಿಲ್ಲ.

ಕಮಾಲ್‌ಖಾನ್‌ನ ಕೊಲೆಗೈಯ್ಯಲು ಸಿದ್ಧತೆ :

ಆದಿಲ್‌ಶಾಹಿ ಮಹಲಿನಲ್ಲಿ ಹದಿನಾರನೇ ದಿನ ಕಮಾಲ್‌ಖಾನ್‌ನ ಪಟ್ಟಾಭಿಷೇಕದ ಮೆರವಣಿಗೆ ನಡೆಯುವ ಸುದ್ದಿ ತಲುಪುತ್ತಲೇ ಮಹಾರಾಣಿಯರಿಗೆ ಬಹಳೇ ಆಘಾತವುಂಟಾಯಿತು. ಈ ಪ್ರತಿಷ್ಠಿತ ವಂಶದ ಕುಡಿಯನ್ನು ಜೀವಂತವಿಡುವುದು ಅಲ್ಲಾಹುವಿನ ಉದ್ದೇಶವಾಗಿತ್ತು. ಇಸ್ಮಾಯಿಲ್ ಆದಿಲ್‌ಶಾಹನ ಮಾತೆಯಾದ ಪೂಂಜಿಖಾತುನ್‌ಳಿಗೆ ಒಂದು ಯೋಜನೆ ಹೊಳೆಯಿತು. ಆಗ ಅವಳು ತಮ್ಮ ಕುಟುಂಬದ ನಿಷ್ಠೆ ಹಾಗೂ ತನ್ನ ಪತಿಯ ನಿಕಟವರ್ತಿಯಾಗಿದ್ದ 'ಯೂಸುಫ್ ತುರ್ಕ'ನನ್ನು ಕರೆಯಿಸಿ, ಸಾಮ್ರಾಜ್ಯದ ಅಸ್ಥಿರತೆಯ ಪರಿಸ್ಥಿತಿಯನ್ನು ಮನಗಾಣಿಸಿದಳು. ಅವಳು ಯೂಸುಫ್ ತುರ್ಕನಿಗೆ ಹೀಗೆ ತಿಳಿಸಿದಳು. ಏನೆಂದರೆ ಮನುಷ್ಯನು ದೇವನ ವಿಧೇಯ ಸೇವಕನಿರುವನು ಆತನು ಯಾವುದೇ ರೀತಿಯಿಂದ ತನಗೆ ತಾನು ದೇವನಿಗೆ ಅರ್ಪಿಸಿಕೊಳ್ಳುತ್ತಾನೆ. ನೀನು ಸಹ ನಿನ್ನ ಪ್ರಾಣವನ್ನು ಪಣಕ್ಕಿಟ್ಟು ಈ ಅಪಾಯಕಾರಿ ಕಮಾಲ್‌ಖಾನ್‌ನನ್ನು ಮೃತ್ಯುವಿನ ಕೈಗೊಪ್ಪಿಸು. ಯೂಸುಫ್ ತುರ್ಕನು ಪ್ರಮಾಣ ಮಾಡಿದನು ಹಾಗೂ ಈ ಕಾರ್ಯವನ್ನು ತನ್ನ ಕೈಯಿಂದ ನಿರ್ವಹಿಸಲು ಹೆಮ್ಮೆ ಪಟ್ಟನು. ಆತನು ಹೀಗೆಂದನು. ಒಂದು ವೇಳೆ ತಾನು ಏಕಾಂಗಿಯಾಗಿ ಯಾರದೇ

ಕೆಲಸಕ್ಕೆ ಬರುವೆನಾದರೆ ಹಾಗೂ ಅದರಿಂದ ಸಾವಿರಾರು ಜನರಿಗೆ ಸಹಾಯವಾಗುವುದಾದರೆ ಅದಕ್ಕಿಂತ ಹಿರಿದಾದ ಮಾತು ಮತ್ತೊಂದೇನಾಗುವುದು? ಆತನು ಪೂಂಜಿಖಾತೂನ್‌ಳನ್ನು ಹೀಗೆ ಪ್ರಶ್ನಿಸಿದನು. ಅವನು ಏಕಾಂಗಿಯಾಗಿ ಇಪ್ಪತ್ತು ಸಾವಿರ ದಖನಿ ಹಾಗೂ ಹಬಷಿ ಸೈನಿಕರನ್ನು ಹೇಗೆ ಕೆಡಕನ್ನುಂಟು ಮಾಡಬಲ್ಲನು? ಹಾಗೂ ಯಾವ ವಿಧವಾಗಿ ಅವರ ಮೇಲೆ ಹಿಡಿತ ಸಾಧಿಸುವನು. ಆದರೆ ಪೂಂಜಿಖಾತೂನ್ ಅವನಿಗೆ ಈ ಸಲಹೆ ನೀಡಿದಳು. ಒಂದು ವೇಳೆ ಆತನು ಮನಃಪೂರ್ವಕವಾಗಿ ಹಾಗೂ ದಿಟ್ಟನಾಗಿ ವಿರೋಧಿಸಿದ್ದಾದರೆ, ಹಾಗೂ ತನ್ನ ಪ್ರಾಣವನ್ನು ಅಲ್ಲಾಹುವಿಗೆ ಅರ್ಪಿಸುವುದಾದರೆ ಆಗ ದಿಟದಲ್ಲಿ ಬಹುಸುಲಭವಾಗಿ, ಹಾಗೂ ಉತ್ತಮ ರೀತಿಯಲ್ಲಿ ಕಮಾಲ್‌ಖಾನ್‌ನ ಪ್ರಾಣವನ್ನು ತೆಗೆಯಬಹುದು.

ಯೂಸುಫ್ ತುರ್ಕನ ಪಣ :

ಪೂಂಜಿ ಖಾತೂನ್‌ಳ ಮಾತುಗಳನ್ನು ಕೇಳಿ ಯೂಸುಫ್ ತುರ್ಕನು ಹೀಗೆ ಹೇಳಿದನು. ನಾನು ಇದರ ಮೇಲೆ ಪೂರ್ಣ ಭರವಸೆ ಇಡುವೆನು. ಏನೆಂದರೆ ಕಮಾಲ್‌ಖಾನ್‌ನು ದೊರೆಯಲಾಗುತ್ತಲೇ ನನ್ನನ್ನು ಕೊನೆಗೊಳಿಸುವನು ಅದಕ್ಕಾಗಿ ನಾನು ಅಲ್ಲಾಹುವಿಗೆ ನನ್ನ ಪ್ರಾಣವನ್ನರ್ಪಿಸಿ ನಂಬಿಗಸ್ಥರಲ್ಲಿ ನನ್ನ ಹೆಸರನ್ನು ಬರೆಸುವೆನು ಹಾಗೂ ಅಮರನಾಗುವೆನು. ನೀವು ವೈರಿಯನ್ನು ಹಿಮ್ಮೆಟ್ಟುವ ಯೋಜನೆ ತಿಳಿಸಿರಿ. ನಾನು ನನ್ನ ಪ್ರಾಣವನ್ನು ಪಣಕ್ಕಿಡುವೆನು ಹಾಗೂ ಇಸ್ಮಾಯಿಲ್‌ನ ಬದಲಾಗಿ ನನ್ನ ತಲೆಯನ್ನು ನೀಡುವೆನು.

ಪೂಂಜಿ ಖಾತೂನ್‌ಳ ಯೋಜನೆ :

ಪೂಂಜಿ ಖಾತೂನ್‌ಳು ಯೂಸುಫ್ ತುರ್ಕನಿಗೆ ತಿಳಿಸಿದಳು. ಏನೆಂದರೆ ಅವಳು ಓರ್ವ ಶಾಹೀ ಮಹಲಿನ ಮಹಿಳೆ ಯಾರು ಕಮಾಲ್‌ಖಾನ್‌ನ ಹಿತೈಷಿಯಾಗಿದ್ದಾಳೆ. ಅವಳನ್ನು ಕಮಾಲ್‌ಖಾನನ ಆರೋಗ್ಯ ವಿಚಾರಣೆಗೆಂದು ಕಳುಹಿಸುವೆನು ಹಾಗೂ ಅವಳೊಂದಿಗೆ ಯೂಸುಫ್ ತುರ್ಕನಿಗೂ ಕಳುಹಿಸುವದು ಈ ಮಹಿಳೆಯು ಕಮಾಲ್‌ಖಾನ್‌ನ ಕಡೆಯಿಂದ ಶಾಹಿ ಮಹಲಿನ ಎಲ್ಲ ಗುಪ್ತ ವಿಷಯಗಳನ್ನು ತಿಳಿದುಕೊಳ್ಳಲು ನೇಮಿಸಲ್ಪಟ್ಟಿದ್ದಾಳೆ. ಅದಕ್ಕಾಗಿ ಅವಳನ್ನು ಕಮಾಲ್‌ಖಾನ್‌ನ ಬಳಿಗೆ ಬಹಳೇ ಸುಲಭವಾಗಿ ಕಳುಹಿಸಬಹುದಾಗಿದೆ ಹಾಗೂ ಒಂದು ಇಂಥ ಯುಕ್ತಿಯಿಂದ ಕೆಲಸ ತೆಗೆದುಕೊಳ್ಳಬಹುದು ಏನೆಂದರೆ ವೈರಿಯು ಯೂಸುಫ್ ತುರ್ಕ್‌ನನ್ನು ಸ್ವಾಗತಿಸಲು ಬೇಕು ಹಾಗೂ ಸ್ವತಃ ತಾಂಬೂಲವನ್ನು ನೀಡಬೇಕು. ಆದರೆ ಯೂಸುಫ್ ತುರ್ಕ್‌ನಿಗೆ ಬಹಳೇ ಧೈರ್ಯ ಹಾಗೂ ಸ್ಥೈರ್ಯದಿಂದ ತನ್ನ ಕತ್ತಿಯಿಂದ ವೈರಿಯನ್ನು ಕೊನೆಗಾಣಿಸಬೇಕು. ಯೂಸುಫ್ ತುರ್ಕನು ಈ ಅಭಿಪ್ರಾಯವನ್ನು ಒಪ್ಪಿಕೊಂಡನು. ವೃದ್ಧ ಸ್ತ್ರೀಯನ್ನು ಕರೆಯಿಸಿ ಪೂಂಜಿ ಖಾತೂನ್‌ಳು ಕಮಾಲ್‌ಖಾನ್‌ನನ್ನು ಮನಸಾರೆ ಪ್ರಶಂಸಿಸಿದಳು.

ಕಮಾಲ್‌ಖಾನ್‌ನನ್ನು ಕೊಲೆಗೈಯ್ಯುವ ಯೋಜನೆ :

ಪೂಂಜಿ ಖಾತೂನ್‌ಳು ಮಾತುಕತೆಯನ್ನು ಮುಂದುವರೆಸುತ್ತಾ ವೃದ್ಧ ಸ್ತ್ರೀಗೆ ಹೀಗೆ ಹೇಳಿದಳು. ಯಾವಾಗಿನಿಂದ ಯೂಸುಫ್ ಆದಿಲ್‌ಶಾಹನ ಮೃತ್ಯುವಾಗಿದೆ. ಅವಳಿಗೆ ಯಾವಾಗಲೂ ಇದೇ ಚಿಂತೆ ಕಾಡಿದೆ. ಏನೆಂದರೆ ತನ್ನ ಪುತ್ರ ಇಸ್ಮಾಯಿಲ್ ಇನ್ನೂ ಅಪ್ರಾಪ್ತ ವಯಸ್ಕನಾಗಿರುವನು. ಜಗತ್ತಿನ ಆಗುಹೋಗುಗಳಿಗೆ ಅಜ್ಞಾನಿಯಾಗಿದ್ದಾನೆ. ಎಲ್ಲಿಯಾದರೂ ಪ್ರಾಂತ್ಯವು ಅಹ್ಮದ್‌ಶಾಹ ಬೆಹ್ರಿಯ ವಶವಾಗದಿರಲಿ ಆದರೆ ಅಲ್ಲಾಹುವಿಗೆ ಕೃತಜ್ಞತೆಗಳು ಆಡಳಿತದ ಸೂತ್ರವನ್ನು ಕಮಾಲ್‌ಖಾನ್‌ರು ಸಂಭಾಳಿಸಿದ್ದಾರೆ. ಈಗ ಯಾವುದೇ ತೆರನಾದ ಅಪಾಯದ ಭಯವಿಲ್ಲ. ಇಲ್ಲದಿದ್ದರೆ ಆದಿಲ್‌ಷಾಹಿ ಅಮೀರರಲ್ಲಿ ಯಾವುದೇ ಅಮೀರರಿಗೂ ಇಂಥ ದಕ್ಷತೆ ಇರಲಿಲ್ಲ. ಆಡಳಿತ ಸೂತ್ರವನ್ನು ತಮ್ಮ ಕೈಯಲ್ಲಿ ತೆಗೆದುಕೊಂಡು ಶಾಹಿ ಭಂಡಾರವನ್ನು ರಕ್ಷಿಸಬಹುದಾಗಿದ್ದರು. ಇತ್ತೀಚೆಗೆ ಎರಡು ಮೂರು ದಿನಗಳಿಂದ ಕಮಾಲ್‌ಖಾನ್‌ರ ಅನಾರೋಗ್ಯದ ಸುದ್ಧಿ ತಿಳಿದು ಮನಸ್ಸಿಗೆ ಬಹಳೇ ಚಿಂತೆಯಾಗಿದೆ. ಯಾಕೆಂದರೆ ಕಮಾಲ್‌ಖಾನ್‌ರು ಪೂಂಜಿಖಾತೂನಳಿಗೆ ತನ್ನ ಪುತ್ರನಿಗಿಂತಲೂ ಹೆಚ್ಚು ಪ್ರೀತಿಯುಳ್ಳವರಾಗಿದ್ದಾರೆ. ಪೂಂಜಿಖಾತೂನಳು ವೃದ್ಧ ಹೆಂಗಸಿಗೆ ಹನ್ನೆರಡು ಸಾವಿರ ಹನ್‌ಗಳನ್ನು ನೀಡಿ ಹೀಗೆಂದಳು. ಏನೆಂದರೆ ಅವುಗಳನ್ನು ಕಮಾಲ್‌ಖಾನ್‌ನ ಮೇಲಿನಿಂದ ನಿವಾಳಿಸಿ ಫಕೀರರಲ್ಲಿ ಹಂಚಬೇಕು.

ವೃದ್ಧ ಸ್ತ್ರೀಯೊಂದಿಗೆ ಯೂಸುಫ್ ತುರ್ಕನ ನಿರ್ಗಮನ :

ವೃದ್ಧ ಸ್ತ್ರೀಯು ಸ್ವಲ್ಪ ದೂರವೇ ಹೋಗಿರಲಿಲ್ಲ. ಪೂಂಜಿಖಾತೂನ್‌ಳು ಅವಳನ್ನು ಕರೆಯಿಸಿ ಹೀಗೆಂದಳು. ಯೂಸುಫ್ ತುರ್ಕನಿಗೂ ತನ್ನ ಜೊತೆ ಕರೆದುಕೊಂಡು ಹೋಗಬೇಕು. ಏಕೆಂದರೆ ಈತನು 'ಹಜ್' ಯಾತ್ರೆಗೆ ಹೋಗಲು ನಿರ್ಧರಿಸಿರುವನು. ಆದರೆ ಈತನಿಗೆ ಹೆದರಿಕೆಯಿದೆ. ಏನೆಂದರೆ ಆತನ ಹಜ್ ಆ ಸಮಯದವರೆಗೂ ಸ್ವೀಕರಿಸಲ್ಪಡುವದಿಲ್ಲ. ಯಾವಾಗಿನವರೆಗೆ ಕಮಾಲ್‌ಖಾನ್‌ರು ಆತನನ್ನು ಸಂತೋಷದೊಂದಿಗೆ ಅನುಮತಿ ನೀಡಲಾರರು. ನೀನು ಇಷ್ಟು ಮಾತ್ರ ಪ್ರಯತ್ನ ಮಾಡು ಕಮಾಲ್‌ಖಾನ್‌ರು ಆತನಿಗೆ ತನ್ನ ಕೈಯಿಂದ ತಾಂಬೂಲ ನೀಡಿ ಆತನಿಗೆ ವಿದಾಯದ ಅನುಮತಿ ನೀಡಬೇಕು ಹಾಗೂ ತಮ್ಮ ಅಮೃತ ಹಸ್ತದಿಂದ ಒಂದು ಪತ್ರ ಬರೆದು ಆತನಿಗೆ ಒಪ್ಪಿಸಬೇಕು. ಈ ಪತ್ರದಿಂದ ಬಂದರ್ ಮುಸ್ತಫಾಆಬಾದ್‌ದ ವಾಬಲ್‌ದ ಮೇಲ್ವಿಚಾರಕನು ಆತನನ್ನು ತಡೆಹಿಡಿಯದಿರಲಿ ಹಾಗೂ ಈ ತೆರನಾಗಿ ಆತನ ಉದ್ದೇಶ ಪೂರ್ತಿಯಾಗುವಲ್ಲಿ ಸುಲಭವಾಗುವುದು. ಕಾಣಿಕೆಯ ಸ್ವರೂಪದಲ್ಲಿ ಅಪಾರ ದ್ರವ್ಯರಾಶಿಯನ್ನು ವೃದ್ಧಸ್ತ್ರೀಯ ಕೈಗೊಪ್ಪಿಸಲಾಯಿತು ಹಾಗೂ ಈ ವಿಧವಾಗಿ ಯೂಸುಫ್ ತುರ್ಕನು ಅವಳ ಜೊತೆಯಾದನು.

ಕಮಾಲ್‌ಖಾನ್‌ನಿಗೆ ಭೇಟಿಯಾಗುವ ಸುದೈವ :

ವೃದ್ಧ ಸ್ತ್ರೀಯು ಕಮಾಲ್‌ಖಾನ್‌ನ ಸೇವೆಯಲ್ಲಿ ಹಾಜರಾದಳು. ಹಾಗೂ ಬಿಚ್ಚು ಮನಸ್ಸಿನಿಂದ ಪೂಂಜಿ ಖಾತೂನ್‌ಳೊಂದಿಗೆ ನಡೆದ ಸಂಭಾಷಣೆಯನ್ನು ವಿವರವಾಗಿ ವಿವರಿಸಿದಳು. ಯೂಸುಫ್ ತುರ್ಕನ ಹಜ್ ಯಾತ್ರೆಯ ಕುರಿತು ತಿಳಿಸಿದಳು ಹಾಗೂ ಯಾವ ಧನರಾಶಿಯನ್ನು ತಂದಿದ್ದಳು ಅದನ್ನು ಕಮಾಲ್‌ಖಾನ್‌ನ ಮೇಲಿನಿಂದ ನಿವಾಳಿಸಿದಳು. ಕಮಾಲ್‌ಖಾನ್‌ನಿಗೆ ಪೂಂಜಿಖಾತೂನ್‌ಳ ಈ ಘನತೆವೆತ್ತ ನಡತೆ ತುಂಬ ಹಿಡಿಸಿತು. ಆತನಿಗೆ ಈಗ ಅವಳ ಕಡೆಯಿಂದ ವಿದ್ರೋಹದ ಯಾವುದೇ ಸಂಶಯ ಮೂಡಲಿಲ್ಲ. ಅದಕ್ಕಾಗಿ ಕಮಾಲ್‌ಖಾನ್‌ನು ಯೂಸುಫ್ ತುರ್ಕನಿಗೆ ಪೂಂಜಿಖಾತೂನ್‌ಳನ್ನು ಸಂತಸಪಡಿಸಲು ಏಕಾಂತದಲ್ಲಿ ಕರೆಯಿಸಿಕೊಂಡನು ಹಾಗೂ ಆತನ ಹಜ್‌ಯಾತ್ರೆಯ ಸದಿಚ್ಛೆಯನ್ನು ಪ್ರಶಂಸಿಸಿದನು. ಆದರೆ ಯೂಸುಫ್ ತುರ್ಕನಿಗೆ ಬಹುಬೇಗನೆ ಮರಳಿ ಬರಲು ಉಪದೇಶವನ್ನು ನೀಡಿದನು. ಏಕೆಂದರೆ ಆತನಿಗೆ ಪ್ರತಿಷ್ಠಿತ ಅಮೀರರಲ್ಲಿ ಉನ್ನತ ಹುದ್ದೆಯನ್ನು ನೀಡಬಹುದು.

ಯೂಸುಫ್ ತುರ್ಕ್‌ನ ಯಶಸ್ವೀ ದಾಳಿ :

ಯೂಸುಫ್ ತುರ್ಕ್ ಬಹಳೇ ಏಕಾಗ್ರಚಿತ್ತದೊಂದಿಗೆ ಕಮಾಲ್‌ಖಾನ್‌ನ ಮಾತುಗಳನ್ನು ಆಲಿಸಿದನು. ಹಾಗೂ ಬಹಳೇ ಆಸಕ್ತಿ ತೋರಿದನು. ಕಮಾಲ್‌ಖಾನ್‌ನು ಆತನ ಈ ನಡವಳಿಕೆಯಿಂದ ಬಹಳೇ ಪ್ರಭಾವಿತಗೊಂಡನು. ಆತನು ಯೂಸುಫ್ ತುರ್ಕ್‌ನಿಗೆ ಬಹಳೇ ಆತ್ಮೀಯವಾಗಿ ತನ್ನೆಡೆಗೆ ಕರೆದುಕೊಂಡನು ಹಾಗೂ ತಾಂಬೂಲವನ್ನು ನೀಡಲು ಬಯಸಿದನು. ದಖ್ಖನ್ನಿನಲ್ಲಿ ತಾಂಬೂಲ ಚಾದರವನ್ನು ಹರಡಿ ತೆಗೆದುಕೊಳ್ಳಲಾಗುತ್ತದೆ. ಹಾಗೂ ಈ ಸಂಪ್ರದಾಯವು ಈ ಪ್ರಾಂತ್ಯದಲ್ಲಿ ವಿಶೇಷ ರೀತಿಯಲ್ಲಿ ಸ್ವೀಕರಿಸಲ್ಪಟ್ಟಿದೆ. ಯೂಸುಫ್ ತುರ್ಕ್‌ನು ಸಹ ಇದೇ ಸಂಪ್ರದಾಯವನ್ನು ಅನುಸರಿಸಿದನು. ತನ್ನ ಎರಡು ಬಾಹುಗಳನ್ನು ಚಾದರ್‌ದ ಕೆಳಭಾಗದಲ್ಲಿ ಅಡಗಿಸಿಟ್ಟು ಕಮಾಲ್‌ಖಾನ್‌ನಿಂದ ತಾಂಬೂಲವನ್ನು ತೆಗೆದುಕೊಳ್ಳಲು ಮುಂದೆ ಬಂದನು. ಅದೇ ಸಮಯದಲ್ಲಿ ಯಾವಾಗ ಕಮಾಲ್‌ಖಾನನು ತಾಂಬೂಲವನ್ನು ಚಾದರ್‌ದಲ್ಲಿ ಇಡುತ್ತಿದ್ದನು. ಯೂಸುಫ್‌ತುರ್ಕ್‌ನು ತಕ್ಷಣ ಸಾಹಸಪೂರ್ವಕವಾಗಿ ಒಂದು ಕತ್ತಿಯನ್ನು ಆತನ ಎದೆಯಲ್ಲಿ ಇರಿದನು. ಅದು ಬೆನ್ನ ಮುಖಾಂತರ ಹೊರಗೆ ಬಂದಿತು. ಈ ತೆರನಾಗಿ ಕಮಾಲ್‌ಖಾನ್‌ನ ಕಗ್ಗೊಲೆ ನಡೆಯಿತು.

ಕಮಾಲ್‌ಖಾನ್‌ನ ಮೃತ್ಯುವಿನ ಪ್ರತೀಕಾರ :

ಈ ಆಕಸ್ಮಿಕ ಘಟನೆಯ ವಿವರವು ಯಾವಾಗ ಕಮಾಲ್‌ಖಾನ್‌ನ ತಾಯಿಗೆ ತಿಳಿಯಿತೋ ಆಗ ಅವಳು ಈ ಕೊಲೆಯ ಹಿಂದೆ ಇವರ ಕೈವಾಡವಿದೆಯೆಂದು

ವೃದ್ಧ ಸ್ತ್ರೀ ಹಾಗೂ ಯೂಸುಫ್‌ತುರ್ಕ್‌ನಿಗೆ ಕೊಲೆಯ ಬದಲಾಗಿ ಕೊಲೆ ಮಾಡಿಸಿದಳು. ಹಾಗೂ ತನ್ನ ಸಂಬಂಧಿಗಳಿಗೆ ಎಲ್ಲ ವಿಧವಾಗಿ ಅಳುವದು, ಚೀರುವದು, ಚೀತ್ಕರಿಸುವುದರಿಂದ ತಡೆದಳು. ಮಹಲಿನ ಕಿಡಕಿಯ ಬಳಿ ಇರುವ ಸಿಂಹಾಸನದ ಮೇಲೆ ಜೀವಂತ ವ್ಯಕ್ತಿಯ ತೆರನಾಗಿ ಕಮಾಲ್‌ಖಾನ್‌ನನ್ನು ಕೂಡ್ರಿಸಿದಳು. ಹಾಗೂ ಸ್ಥಳೀಯ ಸಂಪ್ರದಾಯವನ್ನು ಮುಂದುವರೆಸುತ್ತಾ ಎಲ್ಲ ಸೈನ್ಯ ಹಾಗೂ ಇತರ ಸೇವಕರನ್ನು ಮಹಲಿನ ಕೆಳಭಾಗದಲ್ಲಿ ಕರೆಯಿಸಿಕೊಂಡಳು. ಒಬ್ಬ ಗುಪ್ತಚರನ ಮುಖಾಂತರ ಸಫ್ದರ್‌ಖಾನ್‌ನನ್ನು ಕರೆಯಿಸಿಕೊಂಡಳು. ಯುವಕನು ಅಲ್ಲಿ ತಲುಪಿದ ಕೂಡಲೇ ತಂದೆಯ ಶವವನ್ನು ನೋಡಿ ಚೀರುವವನಿದ್ದನು. ಆದರೆ ಕಮಾಲ್‌ಖಾನ್‌ನ ತಾಯಿಯು ಆತನನ್ನು ತಡೆದಳು ಹಾಗೂ ಹೀಗೆ ತಿಳಿಸಿ ಹೇಳಿದಳು. ಈ ಸಮಯದಲ್ಲಿ ಚೀರಿ, ಚೀತ್ಕರಿಸಿ, ಅಳುವ ಬದಲು ಬಾಹುಗಳಲ್ಲಿ ಶಕ್ತಿ ತುಂಬಿಕೊ, ಹೃದಯದಲ್ಲಿ ಪಣ ತೊಡು, ಕೈಯಲ್ಲಿ ಖಡ್ಗವನ್ನು ತೆಗೆದುಕೊಂಡು ಆದಿಲ್‌ಶಾಹ ಹಾಗೂ ಆತನ ತಾಯಿಯೊಂದಿಗೆ ತಂದೆಯ ಪ್ರತೀಕಾರ ತೆಗೆದುಕೋ, ಏಕೆಂದರೆ ಇದರ ನಂತರ ಶಾಹಿ ಸಿಂಹಾಸನವನ್ನಲಂಕರಿಸು ಹಾಗೂ ಆದಿಲ್‌ಶಾಹಿ ವಂಶವನ್ನು ನಿರ್ನಾಮಗೊಳಿಸು.

ಪ್ರತೀಕಾರ ತೆಗೆದುಕೊಳ್ಳಲು ಸಫ್ದರ್‌ಖಾನ್‌ನ ಸಿದ್ಧತೆ:

ಸಫ್ದರ್‌ಖಾನ್‌ನ ವಯಸ್ಸು ಈ ಸಮಯದಲ್ಲಿ ಇಪ್ಪತ್ತೈದು ವರ್ಷವಿದ್ದಿತ್ತು. ಆದರೂ ಆತನು ಬಹಳ ಭಯಭೀತನಾಗಿದ್ದನು. ಆತನ ಯೋಚನೆಯಿತ್ತು ಕೊಲೆಯ ಘಟನೆಯು ಜನರಿಗೆ ತಿಳಿಯುತ್ತಲೇ ಸಾರ್ವಜನಿಕರು ದೂರವಾಗತೊಡಗುವರು ಹಾಗೂ ವೈರಿಯೊಂದಿಗೆ ಪ್ರತೀಕಾರ ತೆಗೆದುಕೊಳ್ಳುವುದು ಕಠಿಣವಾಗುವುದು. ಅದಕ್ಕಾಗಿ ಆತನು ಈ ನಿರ್ಣಯವನ್ನು ತೆಗೆದುಕೊಂಡನು. ಏನೆಂದರೆ ಆತನಿಗೆ ಈ ಘಟನೆಯು ಜನರಿಗೆ ತಿಳಿಯುವ ಮೊದಲೇ ಕೋಟೆಯನ್ನು ಬಿಟ್ಟು ಬೇರೆ ಸ್ಥಳಕ್ಕೆ ಹೋಗುವದು ಉಚಿತ. ಅವನ ತಾಯಿಯು ಈ ಸಲಹೆಯನ್ನು ಒಪ್ಪಲಿಲ್ಲ. ತಾಯಿಯ ಬಳಿ ಕೋಟೆಯಲ್ಲಿ ಸೇಡು ತೀರಿಸಿಕೊಳ್ಳಲು ವಾಸಿಸುತ್ತಿರುವವರು ಸಾಕಷ್ಟು ಇರುವರು. ಅದಕ್ಕಾಗಿ ಅವಳು ಸಫ್ದರ್‌ಖಾನ್‌ನಿಗೆ ಕೋಟೆಯ ಬಾಗಿಲನ್ನು ಭದ್ರಗೊಳಿಸಲು ಸೂಚಿಸಿದಳು. ಹಾಗೂ ಅವನಿಗೆ ಹೀಗೆ ಹೇಳಿದಳು. ತನ್ನ ಹಿತೈಷಿ, ಆಪ್ತರು ಹಾಗೂ ಸೇವಕರಿಗೆ ಇದನ್ನು ತಿಳಿಸಬೇಕು. ಅವರೆಲ್ಲರೂ ಸೇರಿ ಕಮಾಲ್‌ಖಾನ್‌ನ ಧ್ವಜದ ಆಜ್ಞೆಯಡಿಗೆ ಇಸ್ಮಾಯಿಲ್ ಆದಿಲ್‌ಶಾಹನ ತಲೆ ಕತ್ತರಿಸಿ ಹಾಜರು ಪಡಿಸಬೇಕು. ಹಾಗೂ ಸ್ವತಃ ಸಫ್ದರನು ಅದರ ಜೊತೆಗೆ ಹೋಗಬೇಕು. ಹಾಗೂ ತನ್ನ ತಂದೆಯ ಪತೀಕಾರವನ್ನು ತೆಗೆದುಕೊಳ್ಳಬೇಕು. ಈ ಯೋಜನೆಯನ್ನು ಮುಂದಿಟ್ಟುಕೊಂಡು ಕೋಟೆಯ ಬಾಗಿಲು ಮುಚ್ಚಲ್ಪಟ್ಟಿತು. ಹಾಗೂ ಎಲ್ಲರಿಗೆ ಈ ಆಜ್ಞೆಯನ್ನು ನೀಡಲಾಯಿತು. ಏನೆಂದರೆ ಇಸ್ಮಾಯಿಲ್ ಆದಿಲ್‌ಶಾಹನನ್ನು ಕೊನೆಗೊಳಿಸಬೇಕು.

ಪೂಂಜಿ ಖಾತೂನ್‌ಳ ಯುಕ್ತಿ :

ಪೂಂಜಿ ಖಾತೂನ್‌ಳು ಈ ವಿಷಯದ ಕುರಿತು ಹೀಗೆ ತಿಳಿದಳು. ಏನೆಂದರೆ– ಯೂಸುಫ್ ತುರ್ಕ್‌ನು ತನ್ನ ಕಾರ್ಯವನ್ನು ಪೂರ್ಣಪ್ರಮಾಣದಲ್ಲಿ ಮಾಡದಾದನು ಹಾಗೂ ಕಮಾಲ್‌ಖಾನ್‌ನಿಗೂ ಎಲ್ಲ ಗೌಪ್ಯ ವಿಷಯ ಜಾಹೀರುಗೊಂಡಿದೆ. ಈಗ ಆತನ ಸಂಬಂಧಿಗಳು ಶಾಹಿ ವಂಶದ ವಿರುದ್ಧ ಸೇಡು ತೀರಿಸಿಕೊಳ್ಳಲು ಅನುವಾಗಿದ್ದಾರೆ. ಅವಳು ಸ್ವತಃ ಎದುರಿಸಲು ಸಿದ್ಧಳಾದಳು. ಅವಳು ಚಂದನವನ್ನು ಶಿಖಂಡಿಯ ಕೈಯಿಂದ ದರ್ಬಾರ್ ಕೋಣೆ ಹಾಗೂ ಠಾಣೆಯಲ್ಲಿ ಉಪಸ್ಥಿತರಿದ್ದ ಜನರೆಲ್ಲರಿಗೂ ತಲುಪಿಸಿದಳು. ಅಲ್ಲಾಹುವಿನ ದಯೆ ಹೀಗಾಯಿತು. ಯಾರು ಮೇಲ್ವಿಚಾರಕರಾಗಿ ನೇಮಿಸಲ್ಪಟ್ಟಿದ್ದರು ಅವರು ಅದೇ ಮೂರುನೂರು ಸಂಖ್ಯೆಯ ಮೊಘಲರು ಇಲ್ಲಿ ಸಂರಕ್ಷಣೆ ಮಾಡುತ್ತಲಿದ್ದರು. ಅವರ ಹೊರತಾಗಿ ಮೂನ್ನೂರಾ ಇಪ್ಪತ್ತು ಹಬಶಿ ಹಾಗೂ ದಖನಿಗಳೂ ಇದ್ದರು. ಅಮೀರ್‌ರು ಹಾಗೂ ಅಧಿಕಾರಿಗಳಲ್ಲಿ ಪ್ರತಿಯೊಬ್ಬರಿಗೂ ಕಮಾಲ್‌ಖಾನ್‌ನ ಮೇಲೆ ಭರವಸೆಯಿತ್ತು ಹಾಗೂ ಇವರೆಲ್ಲರೂ ಆತನನ್ನು ಬಹಳೇ ಗೌರವಿಸುತ್ತಿದ್ದರು. ಅವರು ದಿಟದಲ್ಲಿ ಆತನ ಸೇವಕ ಹಾಗೂ ಸಹಾಯಕರಾಗಿದ್ದರು. ಸಫ್ದರ್‌ಖಾನ್‌ನು ಈ ಜನರನ್ನು ಪೂರ್ಣವಾಗಿ ನಂಬಿದ್ದನು. ಆತನು ಅವರ ವಿಶ್ವಾಸ, ಹಾಗೂ ಆತ್ಮೀಯತೆಯ ಮೇಲೆ ಸ್ವಲ್ಪವೂ ಸಂಶಯಪಡಲಿಲ್ಲ. ಅವರನ್ನು ತನ್ನ ಹಿತೈಷಿ ಹಾಗೂ ಸಂಗಾತಿಗಳೆಂದು ಬಗೆದನು.

ಪೂಂಜಿ ಖಾತುನ್‌ಳ ದರ್ಬಾರ್‌ದ ಅಮೀರರಿಂದ ಸಹಾಯ ಪಡೆಯುವಿಕೆ :

ಈ ಉದ್ದೇಶದಿಂದ ಪೂಂಜಿ ಖಾತೂನ್‌ಳು ಮುಖಕವಚ ಧರಿಸಿ ಪ್ರತಿಯೊಬ್ಬ ವ್ಯಕ್ತಿಗೂ ಕಮಾಲ್‌ಖಾನ್ ದಖನಿಯು ಇಸ್ಮಾಯಿಲ್ ಆದಿಲ್‌ಶಾಹನನ್ನು ಹತ್ಯೆಗೈಯ್ಯಲು ಸಿದ್ಧನಾಗಿದ್ದಾನೆ ಎಂದು ನಂಬಿಸುವಲ್ಲಿ ಯಶಸ್ವಿಯಾದಳು. ಹಾಗೂ ಆತನು ಇಸ್ಮಾಯಿಲ್‌ನ ಹತ್ಯೆಗೈದು ಸಿಂಹಾಸನಾರೂಢನಾಗುವ ಕನಸು ಕಾಣುತ್ತಿದ್ದಾನೆ. ಅದಕ್ಕಾಗಿ ಯಾರು ಆದಿಲ್‌ಶಾಹಿಗಳ ಉಪ್ಪುಂಡು ವಿಧೇಯರಾಗಿದ್ದೀರಿ. ಅವರೆಲ್ಲರೂ ವೈರಿಯೊಂದಿಗೆ ಸೆಣಸಲು ಎಳ್ಳಷ್ಟು ಹಿಂಜರಿಯಬಾರದು. ಆದರೆ ಯಾರು ಉಪ್ಪಿನ ಋಣವನ್ನು ತೀರಿಸಲು ಅಯೋಗ್ಯನಾಗಿರುವನು ಅವನು ತನ್ನ ಹಾದಿ ಹಿಡಿಯಬೇಕು. ಪೂಂಜಿಖಾತೂನ್‌ಳ ಈ ನುಡಿಯು ಎಷ್ಟು ಪ್ರಭಾವ ಬೀರಿತೆಂದರೆ ಎರಡುನೂರು ಮೊಘಲರು ಹಾಗೂ ಹದಿನೇಳು ದಖನಿ ಹಾಗೂ ಹಬಶಿಗಳು ತಮ್ಮ ಸೇವೆ ಪ್ರಸ್ತುತಪಡಿಸಲು ಬಹಳೇ ಸ್ಥೈರ್ಯದೊಂದಿಗೆ ಮುಂದೆ ಬಂದರು. ಹಾಗೂ ಆತ್ಮೀಯತೆಯೊಂದಿಗೆ ಶಾಹಿ ಮಹಲಿನಲ್ಲಿ ಪ್ರವೇಶಿಸಿದರು. ಯಾವ ಜನರು ಉಳಿದರು ಅವರು ಅಪನಂಬಿಕೆಯನ್ನು ಪ್ರದರ್ಶಿಸಿದರು. ಈ ತೆರನಾಗಿ ಪೂಂಜಿಖಾತೂನ್ ಹಾಗೂ ಇಸ್ಮಾಯಿಲ್ ಆದಿಲ್‌ನ ಅತ್ತೆಯಾದ ದಿಲ್‌ಷಾದ್‌ಆಗಾ ಈರ್ವರು ಪುರುಷ ವೇಷ ಧರಿಸಿ, ಬಿಲ್ಲು ಬಾಣಗಳೊಂದಿಗೆ ಗಗನ್ ಮಹಲದ ದ್ವಾರ ಮಂಟಪದಲ್ಲಿ

ಬಂದರು. ದಿಲ್‌ಷಾದ್ ಆಗಾ ಯೂಸುಫ್ ಆದಿಲ್‌ಷಾಹ್‌ನ ಅಂತ್ಯದ ಅವಧಿಯಲ್ಲಿ ಇಲ್ಲಿ ಬಂದು ನೆಲೆಸಿದ್ದಳು. ಈಗ ಯುವರಾಜನನ್ನು ಜೊತೆಗೆ ತೆಗೆದುಕೊಂಡು ಮೇಲ್ಛಾವಣಿಗೆ ಬಂದಳು. ಇದು ಮಹಲಿನ ಎತ್ತರದ ಸ್ಥಳವಾಗಿತ್ತು. ಈ ಮಹಿಳೆಯರು ಮೊಘಲರನ್ನು ಶಾಹೀ ಸವಲತ್ತು ಹಾಗೂ ವಿಶೇಷ ಮನ್ನಣೆ ನೀಡುವ ಭರವಸೆ ನೀಡಿ ತನ್ನ ಹತ್ತಿರ ಕರೆದುಕೊಂಡರು. ಸಫ್ದರ್‌ನು ಸಹ ಅಲ್ಲಿಗೆ ಬಂದನು. ಹಾಗೂ ಆತನು ಬಾಗಿಲನ್ನು ಒಡೆಯುವ ಆದೇಶ ನೀಡಿದನು. ಮೊಘಲರು ತಮ್ಮ ಬಾಣಗಳನ್ನು ಹಾಗೂ ಸ್ತ್ರೀಯರು ಮೇಲಿನಿಂದ ಕಲ್ಲೆಸೆದು ಸಂಪೂರ್ಣ ಕೋಟೆಯಲ್ಲಿ ಕೋಲಾಹಲವನ್ನುಂಟು ಮಾಡಿದರು. ಕೋಟೆಯ ಗೋಪುರದ ರಕ್ಷಕನಾದ ಮುಸ್ತಫಾಖಾನ್‌ನೂ ಈ ಸಮಯದಲ್ಲಿ ಅಲ್ಲಿಗೆ ಬಂದನು. ಕಮಾಲ್‌ಖಾನ್ ದಖನಿಯು ಯಾವಾಗಲೂ ಈತನನ್ನು ನಿರ್ಲಕ್ಷಿಸುತ್ತಿದ್ದನು. ಹೀಗಾಗಿ ಈ ಸಮಯದಲ್ಲಿ ಮಹಲಿನ ಹಿಂಭಾಗದ ಕಡೆಗೆ ಐವತ್ತು ತುಪಾಕಿಗಳ ಜೊತೆ ನಿಂತುಕೊಂಡಿದ್ದನು. ಸ್ತ್ರೀಯರು ಇವರನ್ನು ಕಂಡು ಬಹಳ ಸಂತಸಗೊಂಡರು. ಮತ್ತು ದೂತನನ್ನು ಕಳುಹಿಸಿ ಅವರನ್ನು ಮೇಲ್ಗಡೆಗೆ ಕರೆದುಕೊಂಡರು.

ಮಹಲಿನಲ್ಲಿ ಪ್ರಳಯದ ದೃಶ್ಯ :

ಬಂದೂಕಿನಿಂದ ಹೊರಟ ಗುಂಡುಗಳ ಶಬ್ದ, ಚೀರುವಿಕೆ ಚೀತ್ಕರಿಸುವಿಕೆಯು ಮಹಲಿನಲ್ಲಿ ಪ್ರಳಯದ ದೃಶ್ಯವನ್ನು ನಿರ್ಮಿಸಿತು. ಬಹಳ ವೇಳೆಯವರೆಗೆ ಯುದ್ಧವು ಮುಂದುವರಿಯಿತು. ಸಫ್ದರ್‌ಖಾನ್‌ನ ಮಾತೆಯು ತುಪಾಕಿಗಳ ಶಬ್ದದಿಂದ ಗಾಬರಿಗೊಂಡಳು. ಅವಳಿಗೆ ತಕ್ಷಣವೇ ಸಫ್ದರ್‌ಖಾನ್‌ನು ಹೆದರಿದನೆಂದು ಯೋಚನೆ ಕಾಡತೊಡಗಿತು. ಅದಕ್ಕಾಗಿ ಅವಳು ಸೈನ್ಯಕ್ಕೆ ದೊಡ್ಡ ತೋಪುಗಳನ್ನು ತರಲು ಹಾಗೂ ಮಹಲನ್ನು ಒಡೆದು ಹಾಕಲು ಆಜ್ಞೆ ನೀಡಿದಳು. ಅದಕ್ಕಾಗಿ ಸೈನ್ಯದ ಬಹಳಷ್ಟು ಸೈನಿಕರು ಮೃತ್ಯುವಿಗೆ ಶರಣಾಗದಿರಲಿ. ಸಫ್ದರ್‌ಖಾನನು ತನ್ನ ತಾಯಿಯ ಸಲಹೆಯನ್ನು ಒಪ್ಪಿಕೊಂಡನು. ಆತನು ಕೋಟೆಯನ್ನು ವಿನಾಶಗೈಯ್ಯಲು ಹಾಗೂ ಶತ್ರುಗಳನ್ನು ಕೊಲ್ಲುವ ಇಚ್ಛೆಯಿಂದ ಯುದ್ಧ ನಿಲ್ಲಿಸಲು ಆದೇಶಿಸಿದನು. ಹಾಗೂ ಸೈನ್ಯದ ಶೂರ ಸೈನಿಕರಿಗೆ ದೊಡ್ಡ ತೋಪುಗಳನ್ನು ತರಲು ಆಜ್ಞೆ ನೀಡಿದನು. ಪಟ್ಟಣದ ಸೈನಿಕರನ್ನು ಕೋಟೆಯನ್ನು ಮುತ್ತಿಗೆ ಹಾಕಲು ಆದೇಶಿಸಿದನು. ಏಕೆಂದರೆ ಹೊರಗಿನಿಂದ ಯಾವುದೇ ಬಗೆಯ ಸಹಾಯ ಒದಗದಿರಲಿ. ಆದಿಲ್‌ಶಾಹಿ ಸ್ತ್ರೀಯರಿಗೆ ಈ ಗುಪ್ತ ವಿಷಯ ತಿಳಿಯಿತು. ಅವರು ಒಂದು ಯೋಜನೆಯನ್ನು ಹಾಕಿದರು. ಮತ್ತು ಅದು ಹೀಗಿತ್ತು. ದೊಡ್ಡ ತೋಪುಗಳು ಬಂದು ತಲುಪುವ ಮೊದಲು ಮೊಘಲ ಸೈನಿಕರಿಗೆ ಕೋಟೆಯ ಹಿಂಭಾಗದಲ್ಲಿ ಅಡಗಿಸಬೇಕು. ಅದರಿಂದ ಸಫ್ದರ್‌ಖಾನ್‌ನಿಗೆ ಮೊಘಲರ ಓಡಿಹೋಗುವಿಕೆಯಂತೆ ಭಾಸವಾಗಬೇಕು. ಹಾಗೂ ಅವರು ಮತ್ತೆ ಪ್ರತ್ಯಕ್ಷರಾಗಬೇಕು. ದೊಡ್ಡ ತೋಪುಗಳು ತಲುಪುವವರೆಗೆ ಕಾಯಬಾರದು. ಹೀಗೆ ಈ ಕಪಟಿಗೆ

ತೊಂದರೆಯಾಗಬೇಕು. ಶಾಹೀ ಸ್ತ್ರೀಯರ ಈ ಯೋಜನೆಯು ಫಲ ನೀಡಿತು ಸಫ್ದರ್‌ಖಾನ್‌ನು ಸುಲಭವಾಗಿ ಮೃತ್ಯುವಿಗೆ ನೂಕಲ್ಪಟ್ಟನು.

ಸಫ್ಧರ್‌ಖಾನ್‌ನ ಕೊಲೆಯ ವಿವರಣೆ :

ಮೊಘಲರು ಕೋಟೆಯ ಹಿಂದುಗಡೆ ಅಡಗಿಕೊಂಡದ್ದು, ಸಫ್ದರ್‌ಖಾನ್ ಹಾಗೂ ಆತನ ಸಂಗಾತಿಗಳಿಗೆ ಅರಿವಿರಲಿಲ್ಲ. ಅವರು ಹೀಗೆ ತಿಳಿದರು. ಮೊಘಲ ಸಿಪಾಯಿಗಳು ಓಡಿಹೋದರು. ಆದುದರಿಂದ ಅವರು ಗಗನ ಮಹಲದತ್ತ ಮುಂದುವರಿದರು. ಯಾವ ವ್ಯಕ್ತಿಯೂ ಅವರನ್ನು ತಡೆಯಲಿಲ್ಲ. ಇಲ್ಲಿಯವರೆಗೆ ಶಾಹಿ ಮಹಲಿನ ಸ್ತ್ರೀಯರು ಸುಮ್ಮನೆ ಅವರ ತಮಾಷೆಯನ್ನು ಗಮನಿಸುತ್ತಿದ್ದರು. ವೈರಿಗಳು ನೆಮ್ಮದಿಯೊಂದಿಗೆ ಕೋಟೆಯ ಬಾಗಿಲನ್ನು ಮುರಿದರು. ಹಾಗೂ ಒಳಗಡೆ ಪ್ರವೇಶಿಸಿದರು. ಅದರ ನಂತರ ಆ ಜನರು ಒಳ ಬಾಗಿಲನ್ನು ಮುರಿಯತೊಡಗಿದರು. ಇಷ್ಟರಲ್ಲಿ ಮೊಘಲ ಸೈನಿಕರು ಸ್ತ್ರೀಯರ ಸಂಜ್ಞೆಯನ್ನನುಸರಿಸಿ ಅವರ ಮೇಲೆ ದಾಳಿ ಮಾಡಿದರು. ಎಲ್ಲ ಕಡೆಯಿಂದಲೂ ಕಲ್ಲು ಹಾಗೂ ಬಾಣಗಳ ಸುರಿಮಳೆಯಾಗತೊಡಗಿತು. ಸ್ಥಳವು ತುಂಬಾ ಕಿರಿದಾಗಿತ್ತು. ವೈರಿಗಳ ಶೂರ ಸೈನಿಕರು ಮರಣವನ್ನಪ್ಪಿದರು. ಹಾಗೂ ಇದೇ ಸಮಯದಲ್ಲಿ ಸಫ್ದರ್‌ಖಾನ್‌ನ ಕಣ್ಣಿಗೆ ಬಾಣವನ್ನು ಗುರಿಯಿಡಲಾಯಿತು. ಆತನು ಓಡಿ ಹೊರಟನು ಹಾಗೂ ಸಂದಿಗ್ಧ ಸ್ಥಿತಿಯಲ್ಲಿ ಮರಳಿ ಗೋಡೆಯತ್ತ ಬಂದನು. ಎಲ್ಲಿ ಇಸ್ಮಾಯಿಲ್ ಆದಿಲ್‌ಶಾಹನು ಉಪಸ್ಥಿತನಿದ್ದನು. ಆತನು ಬಹಳೇ ನೆಮ್ಮದಿಪೂರ್ವಕವಾಗಿ ಈ ದೃಶ್ಯವನ್ನು ನೋಡುತ್ತಿದ್ದನು. ಆದಿಲ್‌ಶಾಹನ ಜೊತೆ ಪೂಂಜಿಖಾತೂನಳು ಎರಡನೆಯ ಬದಿಯಲ್ಲಿ ನಿಂತು ಸಫ್ಧರಖಾನ್‌ನನ್ನು ಗುರುತಿಸಿದಳು ಹಾಗೂ ಪುತ್ರನಿಗೆ ಎದುರು ಬಿದ್ದಿರುವ ಕಲ್ಲನ್ನು ಎಸೆಯಲು ಸಂಜ್ಞೆ ಮಾಡಿದಳು. ಆದಿಲ್‌ಶಾಹನು ತಾಯಿಯ ಸಂಜ್ಞೆಗೆ ಸ್ಪಂದಿಸಿ ಕಲ್ಲನ್ನೆಸೆದನು. ಹಾಗೂ ಈ ತೆರನಾಗಿ ಸಫ್ದರ್‌ಖಾನ್‌ನ ತಲೆಯು ನುಜ್ಜುಗುಜ್ಜಾಯಿತು. ವೈರಿಗಳು ಮುಖಂಡನ ಶವವನ್ನು ನೋಡಿದರು ಹಾಗೂ ಕಮಾಲ್‌ಖಾನ್‌ನ ಮಹಲಿನತ್ತ ಹೋದರು. ಇಲ್ಲಿ ತಲುಪಿ ಅವರು ಆತನನ್ನೂ ಸಹ ಶವ ರೂಪದಲ್ಲಿ ಕಂಡರು. ಹಾಗೂ ತಕ್ಷಣವೇ ಆ ಜನರು ಕೋಟೆಯಿಂದ ಓಡಿ ಹೊರಟರು. ಮೊಘಲ ಸೈನಿಕರೂ ಸಹ ಕೋಟೆಯ ಹೊರಗೆ ಬಂದು ಈರ್ವರೂ ವ್ಯಕ್ತಿಗಳ ಅಂದರೆ ಸಫ್ದರ್ ಹಾಗೂ ಕಮಾಲ್‌ಖಾನ್‌ನ ರುಂಡಗಳನ್ನು ಮುಂಡದಿಂದ ಬೇರ್ಪಡಿಸಿದರು. ಹಾಗೂ ಭರ್ಚಿಗಳ ಮೊನೆಯ ಮೇಲಿಟ್ಟು ಇಡೀ ನಗರದಲ್ಲಿ ಮೆರವಣಿಗೆ ತೆಗೆದರು.

ನಗರದ ಪ್ರಸಿದ್ಧ ಅಮೀರರ ಪರಾರಿ :

ಖಾನ್‌ಜಹಾನ ಹಾಗೂ ಉಮದತಲ್‌ಮುಲ್ಕ ಇತರರು ನಗರದ ಪ್ರಸಿದ್ಧ ಅಮೀರರಲ್ಲಿ ಪರಿಗಣಿಸಲ್ಪಡುತ್ತಿದ್ದರು. ಅವರು ಕಮಾಲ್‌ಖಾನ್‌ನನ್ನು ಬಹಳೇ

ನೆಚ್ಚಿಕೊಂಡಿದ್ದರು. ಅವರಿಗೆ ಈ ತೆರನಾದ ಆಕಸ್ಮಿಕ ಘಟನೆಯ ಕುರಿತು ಎಂದಿಗೂ ಯೋಚನೆ ಬಂದಿರಲಿಲ್ಲ. ಆದರೆ ಈಗ ಈ ಘಟನೆಯ ಸುದ್ದಿಯನ್ನು ಕೇಳಿ ದಿಕ್ಕು ತೋಚದಾದರು. ಹಾಗೂ ಇದೇ ದಿಗ್ಭ್ರಮೆಯ ಸ್ಥಿತಿಯಲ್ಲಿ ತಮ್ಮೆಲ್ಲ ಸಂಪತ್ತನ್ನು ತೊರೆದು ಪ್ರಾಂತ್ಯದಿಂದ ಹೊರಹೊರಟು ಹೋದರು.

ಯೂಸುಫ್ ತುರ್ಕನ ಶವಯಾತ್ರೆ :

ಅದೇ ದಿನ ಇಸ್ಮಾಯಿಲ್ ಆದಿಲ್‌ಶಾಹನು ತನ್ನ ವೀರಹುತಾತ್ಮ ಸೈನಿಕನ ಶವವನ್ನು ತುಂಬಾ ಗೌರವದೊಂದಿಗೆ ಎತ್ತಲಾಯಿತು. ಹಾಗೂ ಸ್ವತಃ ಶವಯಾತ್ರೆಯೊಂದಿಗೆ ಹಾಜರಿದ್ದನು. ಹಾಗೂ ಪೂಂಜಿ ಖಾತೂನಳು ನೀಡಿದ ಹತ್ತು ಸಾವಿರ ಹನ್ ಇತರ ಸ್ತ್ರೀಯರ ಹನ್ನೆರಡು ಸಾವಿರ ಹನ್ ಆದಿಲ್‌ಶಾಹನು ಯೂಸುಫ್ ತುರ್ಕನ ಹೆಸರಿನಲ್ಲಿ ದಾನದ ರೂಪದಲ್ಲಿ ವಿತರಿಸಿದನು. ಆತನು ಯೂಸುಫನ ಗೋರಿಯನ್ನು ಗುಮ್ಮಟದೊಂದಿಗೆ ಕಟ್ಟಿಸಿದನು. ಹಾಗೂ ಸೇವಕರನ್ನು ನೇಮಿಸಿ ಸಂಜೆಯ ಹೊತ್ತಿಗೆ ಕೋಟೆಯಲ್ಲಿ ತಲುಪಿದನು. ಆತನು ಜೀವನ ಪೂರ್ತಿ ಆತನ ಹೆಸರಿನಲ್ಲಿ ದಾನ ಮಾಡುತ್ತಿದ್ದನು. ಹಾಗೂ ಆತನ ವಾರ್ಷಿಕ ದಿನದಂದು ಆತನು ಸ್ವತಃ ಯೂಸುಫ್ ತುರ್ಕನ ಗೋರಿಯ ಸ್ಥಳಕ್ಕೆ ಭೇಟಿ ನೀಡುತ್ತಿದ್ದನು.

ಇಸ್ಮಾಯಿಲ್ ಆದಿಲ್‌ಶಾಹನ ಆಡಳಿತ ಕ್ರಮ :

ಇತಿಹಾಸಕಾರನ ಹೇಳಿಕೆಯಂತೆ ಉಪರೋಕ್ತ ಘಟನೆಯು ಜರುಗಿದ ಮರುದಿನ ಇಸ್ಮಾಯಿಲ್ ಆದಿಲ್‌ಶಾಹನು ಆಡಳಿತ ಸೂತ್ರವನ್ನು ಹಿಡಿದನು. ಹಾಗೂ ದರ್ಬಾರಿನಲ್ಲಿ ಪ್ರಜೆಗಳನ್ನು ಕರೆದನು. ಪ್ರಜೆಗಳು ತಮ್ಮ ಬಾದಶಹನ ಮೇಲೆ ಧನವನ್ನು ನಿವಾಳಿಸಿ ದಾನ ರೂಪದಲ್ಲಿ ನೀಡಿದರು. ವಿದ್ವಾಂಸರ ಹಾಗೂ ಪ್ರಾಜ್ಞರ ಮುಖಂಡರಾದ ಗಯಾಸುದ್ದೀನ್ ಸಿರಾಜಿಯು ತಮ್ಮ ಪ್ರಭಾವಿ ಲೇಖನಿಯಿಂದ ವೈರಿಗಳ ಹಾಗೂ ಅವರ ಹಿತೈಷಿಗಳ ಸೋಲು, ವಿನಾಶ ಹಾಗೂ ತೊಂದರೆಗೀಡಾದ ಇಡೀ ಘಟನೆಗಳ ವಿವರಣೆಯನ್ನು ಬಹಳೇ ಉತ್ಕೃಷ್ಟ ರೀತಿಯಲ್ಲಿ ವಿವರಿಸಿದ್ದಾರೆ. ಹಾಗೂ ಮಿಂಚಿನ ವೇಗದಲ್ಲಿ ದೂತನನ್ನು ಕಳುಹಿಸಿ ದಖ್ಖನ್ನಿನ ಶಾಹಿ ದರ್ಬಾರದಲ್ಲಿ ತಲುಪಿಸಿದರು. ಹೀಗೆ ವೈರಿಯ ಹಾಗೂ ಆತನ ಹಿತೈಷಿಗಳ ವಿನಾಶದ ಕಥೆಯು ಪ್ರಾಂತ್ಯದ ಮೂಲೆ ಮೂಲೆಗೆ ತಲುಪಿತು.

ಪೂಂಜಿ ಖಾತೂನ್‌ಳ ತೀರ್ಮಾನಗಳು :

ಕಮಾಲ್‌ಖಾನ್ ಹಾಗೂ ಆತನ ಪುತ್ರನ ಹಿತೈಷಿಗಳು ಹಾಗೂ ಇತರ ಬಂಡೆದ್ದ ಖೈದಿಗಳನ್ನು ಪೂಂಜಿ ಖಾತೂನಳ ಎದುರಲ್ಲಿ ಪ್ರಸ್ತುತಪಡಿಸಲಾಯಿತು. ಏಕೆಂದರೆ ಅವರು ತಾವು ಮಾಡಿದ ತಪ್ಪುಗಳಿಗೆ ಶಿಕ್ಷೆ ಅನುಭವಿಸಬೇಕು. ಈ ಸ್ತ್ರೀಗೆ ಪೂಂಜಿ ಖಾತೂನ್‌ಳು ಕೇವಲ ಪ್ರಾಂತ್ಯದಿಂದ ಹೊರಹೋಗುವ ಶಿಕ್ಷೆ ನೀಡಿದಳು. ಉಳಿದ

ಜನರನ್ನು ಕ್ಷಮಿಸಿದಳು. ಹಾಗೂ ಹಾದಿಯಲ್ಲಿ ರಕ್ಷಣೆಗಾಗಿ ಕೆಲವು ಜನರನ್ನು ಅವಳ ಜೊತೆಗೆ ಕಳುಹಿಸಿದಳು. ಆ ಜ್ಯೋತಿಷಿಗಳನ್ನು ಸಹ ಧನಕನಕ ನೀಡಿ ಪುರಸ್ಕಾರ ಮಾಡಲಾಯಿತು. ಯಾರು ಕಮಾಲ್‌ಖಾನ್‌ನ ಕುರಿತು ಭವಿಷ್ಯ ನುಡಿದಿದ್ದರೊ ಆ ವ್ಯಕ್ತಿಗಳಿಗೂ ಸಹ ಜಾಗೀರು ಹಾಗೂ ಹುದ್ದೆಗಳನ್ನು ನೀಡಲಾಯಿತು. ಯಾರು ಈ ಘಟನೆಯಲ್ಲಿ ಆದಿಲ್‌ಶಾಹಿಗಳ ಜೊತೆ ನೀಡಿದ್ದರು. ಖುಷ್‌ಕಲಾಯಿ, ಆಖಾ ಸಿಕಂದರ್, ಆಖಾ ರೂಮಿ, ಮುಸ್ತಫಾ ಆಖಾ, ಮುಖರ್ರಬ್ ಖಾನ್ ಕುರ್ದ್, ಮುಜಫ್ಫರ್‌ಖಾನ್ ರವದ್‌ಬಾರಿ, ಖ್ವಾಜಾ ಇನಾಯತ್ ಕಾಶಿ ಹಾಗೂ ಮೊಹಮ್ಮದ್ ಹುಸೈನ್ ತೆಹ್ರಾನಿ ಯಾರು ಮೊದಲು ಹವಾಲ್ದಾರ್‌ರಾಗಿದ್ದರೊ ಅವರಿಗೆ ಈಗ ಉನ್ನತ ಹುದ್ದೆಯನ್ನು ನೀಡಲಾಯಿತು. ಹೀಗೆ ಅವರನ್ನು ಸಾಕಷ್ಟು ಅಧಿಕಾರದ ಒಡೆಯರನ್ನಾಗಿಸಲಾಯಿತು. ಮಹಾರಾಣಿಯು ಆ ಹವಾಲ್ದಾರರನ್ನು ಸಹ ಮರಳಿ ಕರೆಸಲು ಪ್ರಯತ್ನಿಸಿದಳು. ಯಾರು ಕಮಾಲ್‌ಖಾನ್‌ನ ಶೋಷಣೆಯಿಂದಾಗಿ ಗಾಬರಿಗೊಂಡು ತೆಲಂಗಾಣ, ಬರಾರ್, ಗುಜರಾತ, ಖಾನದೇಶ ಹಾಗೂ ಅಹ್ಮದ್‌ನಗರಕ್ಕೆ ಹೊರಟು ಹೋಗಿದ್ದರು. ಇವರಲ್ಲಿ ಮಿರ್ಜಾ ಜಹಾಂಗೀರ್ ಖೂಮಿ, ಹೈದರ್ ಬೇಗ್, ಸೌಬಜಂಗ್ ಬಹಾದ್ದೂರ್ ಇತರರು ಸೇರಿಕೊಂಡಿದ್ದರು. ಪೂಂಜಿ ಖಾತೂನಳು ಅವರಿಗೆ ಧೈರ್ಯ ನೀಡಿದಳು ಹಾಗೂ ಅವರನ್ನು ಬಹಳಷ್ಟು ನೆಮ್ಮದಿ ಪೂರ್ವಕವಾಗಿ ಕರೆಸಲು ಬಯಸಿದಳು.

ಹಬಶಿ ಹಾಗೂ ಮೊಘಲರ ನೇಮಕಾತಿ :

ಯಾರು ಲಾರಿ ವಂಶಸ್ಥನಾಗಿದ್ದನು ಆ ಖುಸ್ರೋ ತುರ್ಕ್‌ನು ಸಮಯದ ಬೇಡಿಕೆಯನ್ನು ಪರಿಗಣಿಸಿ ತನ್ನನ್ನು ತಾನು ಗುಲಾಮನೆಂದು ಪ್ರಸಿದ್ಧಗೊಳಿಸಿಕೊಂಡಿದ್ದನು. ಪೂಂಜಿ ಖಾತೂನಳು ಬಲ್ಗವಾನ್ ಹಾಗೂ ಸುತ್ತಮುತ್ತಲಿನ ಪ್ರದೇಶಗಳನ್ನು ಆತನಿಗೆ ಒಪ್ಪಿಸಿದಳು. ಹಾಗೂ ಆತನನ್ನು 'ಅಸದ್‌ಖಾನ್' ಎಂಬ ಬಿರುದಿನಿಂದ ಪುರಸ್ಕರಿಸಿದಳು. ಕರ್ಖಿ ಗುಲಾಮು ಸಂತತಿಯೊಂದಿಗೆ ಸಂಬಂಧವಿದ್ದ ಯೂಸುಫ್‌ನನ್ನು ರಕ್ಷಣಾಧಿಕಾರಿಯನ್ನಾಗಿ ನೇಮಿಸಿದಳು. ಪೂಂಜಿ ಖಾತೂನಳು ತನ್ನ ಈ ಯೋಜನೆಗೆ ಹೀಗೆ ಸ್ವರೂಪ ನೀಡಿದಳು. ಯಾವುದನ್ನು ಅವಳು ಆಕಸ್ಮಿಕ ಘಟನೆಯ ವೇಳೆ ರೂಪಿಸಿದ್ದಳು. ಏನೆಂದರೆ ಅವಳು ಮೊಘಲ ಹಾಗೂ ಹಬಶಿಗಳನ್ನು ಹುದ್ದೆ ನೀಡುವ ಎಲ್ಲ ಅಮೀರರಿಗೆ ಆದೇಶ ನೀಡಿದಳು. ಮೊಘಲ ಹಾಗೂ ಹಬಶಿಗಳಿಗೆ ಸೈನ್ಯದಲ್ಲಿ ಯಾವುದೇ ಹುದ್ದೆಗಳನ್ನು ನೀಡಬಾರದು. ಏಕೆಂದರೆ ಆದಿಲ್‌ಶಾಹಿ ವಂಶ ಹಾಗೂ ಸಾಮ್ರಾಜ್ಯದ ಅಸ್ತಿತ್ವಕ್ಕಾಗಿ ಈ ಕಾರ್ಯವು ಉಚಿತವಾಗಿದೆ. ಸುಮಾರು ಹನ್ನೆರಡು ವರ್ಷಗಳವರೆಗೆ ಯಾವುದೇ ಬದಲಾವಣೆ ಇಲ್ಲದೆ ಈ ಕಾಯಿದೆಯೂ ಪ್ರಾಂತ್ಯದಲ್ಲಿ ಜಾರಿಯಲ್ಲಿತ್ತು. ಇದರ ಹೊರತಾಗಿಯೂ ಮೊಘಲ ಹಾಗೂ ಹಬಶಿಗಳು ವಿನಂತಿಸಿದರು. ತಮ್ಮ ಮಕ್ಕಳಿಗಾದರೂ ಸೇವೆಯಲ್ಲಿ ತೊಡಗಿಸಿಕೊಳ್ಳಬೇಕು. ಆದರೆ ಪೂಂಜಿ ಖಾತೂನ್‌ಳು ಅವರ ಈ ಮನವಿಯನ್ನು ತಿರಸ್ಕರಿಸಿದಳು. ಅದರ ಬದಲಾಗಿ ಅಫಘಾನ

ಹಾಗೂ ರಾಜಪೂತರಿಗೆ ಸೇವೆಗೆ ಅವಕಾಶ ಮಾಡಿ ಕೊಟ್ಟಳು. ಈ ಪರಂಪರೆಯು ಇಬ್ರಾಹಿಂ ಆದಿಲ್‌ಶಾಹನ ಅವಧಿಯವರೆಗೆ ಜಾರಿಯಲ್ಲಿತ್ತು. ಇದರಲ್ಲಿ ಯಾವುದೇ ಬದಲಾವಣೆ ಮಾಡಲಿಲ್ಲ. ಯಾವುದೇ ಮೊಘಲ ಅಥವಾ ಹಬಶಿ ಸೈನ್ಯದಲ್ಲಿ ನೌಕರರಾಗಿ ಇಡಲಿಲ್ಲ. ಮತ್ತೆ ಯಾರು ಕೂಡ ಹೀಗೆ ಮಾಡುವ ಧೈರ್ಯ ಎಂದಿಗೂ ಮಾಡಲಿಲ್ಲ.

ಈ ಸೈನಿಕರ ಸಹಾಯದಿಂದ ಬಾದಶಾಹನು ಬಹಳ ಸಲ ರಾಜರ ಮೇಲೆ ದಾಳಿ ಮಾಡಿದನು. ಹಾಗೂ ಸುತ್ತಮುತ್ತಲಿನ ಜಾಗೀರದಾರರನ್ನು ಹಿಮ್ಮೆಟ್ಟಿಸಿದನು. ಎಲ್ಲಿಯವರೆಗೆಂದರೆ ಅಮೀರ್ ಬರೀದ್ ಹಾಗೂ ಸುಲ್ತಾನ್ ಬಹಮನಿಯರ ಇಪ್ಪತ್ತೈದು ಸಾವಿರ ಸಂಖ್ಯೆಯ ಸೈನ್ಯವು ಬಿಜಾಪುರದ ಮೇಲೆ ದಾಳಿ ಮೂಡಿತ್ತು. ಬಾದಶಾಹನಿಂದ ಸೋಲುಂಡಿದ್ದವು. ಅದರ ವಿವರಣೆಯನ್ನು ಈ ತೆರನಾಗಿ ಮಾಡಬಹುದಾಗಿದೆ. ಕಮಾಲ್‌ಖಾನ್‌ನ ಅವಧಿಯಲ್ಲಿ ಅಮೀರ್ ಬರೀದ್‌ನು ಬಿಜಾಪುರದ ಹಲವಾರು ಪಟ್ಟಣಗಳನ್ನು ತನ್ನ ವಶಕ್ಕೆ ತೆಗೆದುಕೊಂಡಿದ್ದನು. ಇದನ್ನು ಈ ಮೊದಲೇ ಬರೆಯಲಾಗಿದೆ. ಕಮಾಲ್‌ಖಾನ್‌ನ ಸಾವಿನ ನಂತರ ಮಿರ್ಜಾ ಜಹಾಂಗೀರನು ಹಸನಾಬಾದ್ ಹಾಗೂ ಅದರ ಪರಗಣಗಳ ಒಡೆಯನಾಗಿದ್ದನು. ಏಕೆಂದರೆ ಆತನು ಅಹ್ಮದ್‌ನಗರದ ಸೇವೆಯಿಂದ ಬಿಡುಗಡೆ ಹೊಂದಿದ್ದನು. ಹಾಗೂ ಬಿಜಾಪುರದ ಸೈನ್ಯದಲ್ಲಿ ಸೇರಿಕೊಂಡಿದ್ದನು. ಆತನು ನುಸ್ರತಾಬಾದ್ ಸಾಗರ್ ಹಾಗೂ ಅಕ್ಬರ್‌ನ ಕೋಟೆಗಳನ್ನು ವೈರಿಗಳಿಂದ ಕಸಿದುಕೊಂಡನು. ಅಮೀರ್ ಬರೀದ್‌ನ ನಾಲ್ಕನೂರಕ್ಕಿಂತ ಹೆಚ್ಚು ಹಿತೈಷಿಗಳನ್ನು ಮೃತ್ಯುವಿಗೊಪ್ಪಿಸಿ ಎಲ್ಲ ಸುತ್ತಲಿನ ಗ್ರಾಮಗಳನ್ನು ಮತ್ತೊಮ್ಮೆ ಪ್ರಾಂತ್ಯದಲ್ಲಿ ಸೇರಿಸಿದನು. ಇದೆಲ್ಲವನ್ನು ಆತನು ಅಮೀರ್ ಬರೀದ್‌ನ ಧೀರ ಸಹೋದರರನ್ನು ಕೊಂದು ಮಾಡಿದ್ದನು. ಈ ದೊಡ್ಡ ಘಟನೆಯು ಅಮೀರ್‌ಖಾಸಿಂ ಬರೀದ್‌ನಿಗೆ ನೀರಿಲ್ಲದೇ ನಲಗುವ ಮೀನಿನಂತೆ ಚಂಚಲಚಿತ್ತಗೊಳಿಸಿತು. ಮಹಮೂದ್ ಬಹಮನಿಯು ವಯಕ್ತಿಕ ಶಿಫಾರಸ್ಸಿನಂತೆ ಹಾಗೂ ತನ್ನ ಬರವಣಿಗೆಯಿಂದ ದಖ್ಖನ್ನಿನ ಆಡಳಿತಗಾರರನ್ನು ಎಷ್ಟು ಪ್ರಭಾವ ಬೀರಿದನೆಂದರೆ ಸುಲ್ತಾನ್ ಕುಲಿ ಅಲಿಶಾಹ ಹಾಗೂ ಅಲ್ಲಾವುದ್ದೀನ್ ಕಮಾದ್‌ಷಾಹ್, ಹಾಗೂ ಬುರ್ಹಾನ್ ನಿಜಾಮ್‌ಶಾಹ್‌ನು ಆತನ ಸಹಾಯಕ್ಕಾಗಿ ತಕ್ಷಣವೇ ಸೈನ್ಯವನ್ನು ಕಳುಹಿಸಿಕೊಟ್ಟರು.

ಅಮೀರ್‌ಖಾಸಿಂ ಬರೀದ್ ಹಾಗೂ ಇಸ್ಮಾಯಿಲ್ ಆದಿಲ್‌ಶಾಹನ ಮುಖಾಮುಖಿ:

ಈ ಸೈನ್ಯದ ತುಕುಡಿಯನ್ನು ತೆಗೆದುಕೊಂಡು ಅಮೀರ್ ಖಾಸಿಂ ಬರೀದ್ ಹಿಜರಿ ೮೫೭೭ರಲ್ಲಿ ಬಿಜಾಪುರದ ಮೇಲೆ ದಾಳಿ ಮಾಡಿದನು. ಆತನು ಈ ಪಟ್ಟಣವನ್ನು ವಿನಾಶಗೈಯುವಲ್ಲಿ ಹಿಂಜರಿಯಲಿಲ್ಲ. ಈ ಸೈನ್ಯದಲ್ಲಿ ಮಹಮೂದ್‌ಶಾಹ ಬಹಮನಿಯೂ ಇದ್ದನು. ಸಮಯದ ಬೇಡಿಕೆಯನ್ನು ಮುಂದಿಟ್ಟುಕೊಂಡು ಇಸ್ಮಾಯಿಲ್ ಆದಿಲ್‌ಶಾಹನು ಮುಂದುವರಿಯಲಿಲ್ಲ. ಆತನು ವೀಕ್ಷಕನಾಗಿ ಈ ಎಲ್ಲ ಘಟನೆಯನ್ನು ನೋಡತೊಡಗಿದ್ದನು. ಆದರೆ ಅಮೀರ ಬರೀದ್‌ನ ಸೈನಿಕರು ಬಿಜಾಪುರದ ಸಮೀಪ

ಉಮಿಯಾಪುರವನ್ನು ತಲುಪಿದರು. ಈ ಉಮಿಯಾಪುರದ ಬುನಾದಿಯನ್ನು ಯೂಸುಫ್ ಆದಿಲ್‌ಶಾಹಿಯು ಹಾಕಿದ್ದನು. ವೈರಿಗಳು ಇದನ್ನು ವಶಪಡಿಸಿಕೊಳ್ಳ ಬಯಸುತ್ತಿದ್ದರು. ಆದರೆ ಇಸ್ಮಾಯಿಲ್ ಆದಿಲ್‌ಶಾಹನು ಹನ್ನೆರಡು ಸಾವಿರ ಜನರ ಒಂದು ಸೈನ್ಯದೊಂದಿಗೆ ಪಟ್ಟಣದಿಂದ ಹೊರಟು ವೈರಿಗಳ ಮೇಲೆ ದಾಳಿ ಮಾಡಿದನು. ಈ ಸೈನ್ಯದಲ್ಲಿ ಹೆಚ್ಚಾಗಿ ಮೊಘಲರಿದ್ದರು. ಅದಕ್ಕಾಗಿ ಬಹಳೇ ತೀವ್ರ ಹಾಗೂ ಘೋರ ಯುದ್ಧ ಜರುಗಿತು. ತುಂಬಾ ಶೌರ್ಯದೊಂದಿಗೆ ಎದುರಿಸಿದರು. ರಕ್ತಪಾತದ ನಂತರ ಅಮೀರ್‌ಬರೀದ್‌ನು ತನ್ನ ಸೈನ್ಯದೊಂದಿಗೆ ಯುದ್ಧಭೂಮಿಯಿಂದ ಓಡಿಹೋದನು. ಆದರೆ ಮಹಮೂದ್‌ಶಾಹ ಬಹಮನಿ ಹಾಗೂ ಆತನ ಮಗ ಅಹ್ಮದಶಾಹನು ಯುದ್ಧದಲ್ಲಿ ಕುದುರೆಯಿಂದ ಕೆಳಗೆ ಬಿದ್ದಿದ್ದರು. ಆದುದರಿಂದ ಅವರನ್ನು ಬಂಧಿಸಲಾಯಿತು.

ಇಸ್ಮಾಯಿಲ್ ಆದಿಲ್‌ಶಾಹ ಹಾಗೂ ಸುಲ್ತಾನ್ ಮಹಮೂದ್‌ರು ಗುಲ್ಬರ್ಗಾಕ್ಕೆ ಹೊರಟದ್ದು:

ಇಸ್ಮಾಯಿಲ್ ಆದಿಲ್‌ಶಾಹನು ಇದನ್ನು ಬಯಸುತ್ತಿದ್ದನು. ಏನೆಂದರೆ ಸುಲ್ತಾನ ಮಹಮೂದ ಹಾಗೂ ಯುವರಾಜ ಇಬ್ಬರನ್ನು ಬಿಜಾಪುರಕ್ಕೆ ಕರೆತರಬೇಕು. ಅದಕ್ಕಾಗಿ ಆತನು ಕುದುರೆಗಳಿಗೆ ಜೀನು ಹಾಕಿಸಿ ಸಜ್ಜುಗೊಳಿಸಿ ನೀಡಿದನು. ಹಾಗೂ ಆತನು ಇದನ್ನು ಬಯಸಿದನು. ಏನೆಂದರೆ ಸುಲ್ತಾನ ಮಹಮೂದ್‌ನನ್ನು ಅಮೀರ್‌ಬರೀದ್‌ನಿಂದ ಬಿಡುಗಡೆಗೊಳಿಸಬೇಕು. ಆದರೆ ಸುಲ್ತಾನ ಮಹಮೂದ್‌ನು ಇಸ್ಮಾಯಿಲ್ ಆದಿಲ್‌ಷಾಹನ ಅಭಿಪ್ರಾಯವನ್ನು ಒಪ್ಪಲಿಲ್ಲ. ಆದರೆ ಆತನು ಬಿಜಾಪುರಕ್ಕೆ ಬರುವ ಬದಲಾಗಿ ಅದೇ ಸ್ಥಳದಲ್ಲಿ ತನ್ನ ದೇಹದ ಗಾಯಗಳಿಗೆ ಉಪಚಾರ ಮಾಡಿಕೊಂಡನು. ಈ ಗಾಯಗಳು ರಣಭೂಮಿಯಲ್ಲಿ ಕುದುರೆಯಿಂದ ಕೆಳಗೆ ಬೀಳುವದರಿಂದಾಗಿ ಉಂಟಾಗಿದ್ದವು. ಗಾಯುಗಳು ಮಾಯ್ದು ನಂತರ ಸುಲ್ತಾನ ಮಹಮೂದ್‌ನು ಇಸ್ಮಾಯಿಲ್ ಆದಿಲ್‌ಶಾಹನೊಂದಿಗೆ ವಿನಂತಿಸಿದನು. ಯುವರಾಜನಾದ ಅಹ್ಮದ್‌ನೊಂದಿಗೆ ಬೀಬಿ ಸತಿಯ ವಿವಾಹ ಮಾಡಿಕೊಡಬೇಕು. ಹಾಗೂ ಸಂಭ್ರಮದ ಸಂತೋಷಾಚರಣೆಯನ್ನು ಆಚರಿಸಬೇಕು. ಇಸ್ಮಾಯಿಲ್ ಆದಿಲ್‌ಶಾಹನು ಈ ಮಾತನ್ನು ಒಪ್ಪಿಕೊಂಡನು. ಆದುದರಿಂದ ಈರ್ವರೂ ಸೇರಿ ಈ ತೀರ್ಮಾನಕ್ಕೆ ಬಂದರು. ಏನೆಂದರೆ–ವಿವಾಹವನ್ನು ಹಜ್ರತ್ ಖ್ವಾಜಾ ಮಹಮೂದ್ ಗೇಸುದರಾಜ್ ಗುಲ್ಬರ್ಗಾದಲ್ಲಿ ಜರುಗಿಸುವುದು ಆ ಕಾರಣಕ್ಕಾಗಿ ಅವರಿಬ್ಬರೂ ಗುಲ್ಬರ್ಗಾಕ್ಕೆ ತಲುಪಿದರು. ಅಲ್ಲಿ ಬಹಳೇ ವಿಜೃಂಭಣೆಯೊಂದಿಗೆ ವಿವಾಹ ಸಮಾರಂಭವನ್ನು ಜರುಗಿಸಲಾಯಿತು ಹಾಗೂ ಬೀಬಿ ಸತಿಯನ್ನು ಯುವರಾಜನಾದ ಅಹ್ಮದ್‌ನಿಗೆ ಒಪ್ಪಿಸಲಾಯಿತು.

ಬಾದಶಾಹ ಸುಲ್ತಾನ್ ಮಹಮೂದನು ಅಹ್ಮದಾಬಾದಕ್ಕೆ ಹೊರಟಿದ್ದು :

ಸುಲ್ತಾನ್ ಮಹಮೂದನಿಗೆ ಇಸ್ಮಾಯಿಲ್ ಆದಿಲ್‌ಶಾಹನು ಅಹ್ಮದಾಬಾದ ಬೀದರ್‌ಕ್ಕೆ ಕಳುಹಿಸುತ್ತಿರುವಾಗ ಐದು ಸಾವಿರ ಮೊಘಲರನ್ನು ಜೊತೆಗೂಡಿಸಿದನು.

ಅಮೀರ್ ಖಾಸಿಂ ಬರೀದ್‌ನಿಗೆ ಯಾವಾಗ ಈ ಸುದ್ದಿಯು ತಲುಪಿತೋ ಇಸ್ಮಾಯಿಲ್ ಆದಿಲ್‌ಶಾಹ ಹಾಗೂ ಸುಲ್ತಾನ್ ಮಹಮೂದ್ ಈರ್ವರೂ ಆತನ ಜೀವವನ್ನು ತೆಗೆದುಕೊಳ್ಳಲು ಅಲ್ಲಿ ತಲುಪುತ್ತಿರುವರು ಆಗ ಆತನು ಬಹಳೇ ವಿವ್ಹಲಿತಗೊಂಡನು. ಆತನು ಧನಕನಕ ಎಲ್ಲವನ್ನು ಬಿಟ್ಟು ಸ್ವತಃ ಕೋಟೆಯಲ್ಲಿ ನಿರ್ಬಂಧಗೊಳಿಸಿಕೊಂಡನು. ಸುಲ್ತಾನ್ ಮಹಮೂದನು ಯಾವುದೇ ಅಡೆತಡೆ ಹಾಗೂ ಭಯವಿಲ್ಲದೆ ಅಲ್ಪಾವಧಿಗಾಗಿ ಮದ್ಯಪಾನ ಹಾಗೂ ವಿಲಾಸೀಕೃತ್ಯದಲ್ಲಿ ತೊಡಗಿಕೊಂಡನು. ಆತನು ರಕ್ಷಕರನ್ನು ಪರಿಗಣಿಸಲಿಲ್ಲ. ಮಧ್ಯ ಸೇವಿಸಲು, ಗಾಯನ ಆಲಿಸಲು ಹಾಗೂ ನೃತ್ಯ ನೋಡುವಲ್ಲಿ ಎಷ್ಟೋ ದಿನಗಳವರೆಗೆ ಮಗ್ನನಾದನು.

ಅಮೀರ್ ಖಾಸಿಂ ಬರೀದ್‌ನ ದಾಳಿ :

ಇಸ್ಮಾಯಿಲ್ ಆದಿಲ್‌ಶಾಹನು ಅಹ್ಮದಾಬಾದ್ ಬೀದರ್‌ದ ಸುತ್ತಮುತ್ತಲ ಪ್ರದೇಶದಿಂದ ಹೊರಟಮೇಲೆ ಅಮೀರ್‌ಖಾಸಿಂ ಬರೀದ್‌ನು ಸುಮಾರು ಮೂರು-ನಾಲ್ಕು ಸಾವಿರ ಹಿತೈಷಿಗಳೊಂದಿಗೆ ಪಟ್ಟಣದ ಮೇಲೆ ದಾಳಿ ಮಾಡಿದನು. ಬಹಳೇ ಸುಲಭವಾಗಿ ಮುಂಜಾನೆಯ ಹೊತ್ತಿನಲ್ಲಿ ಕೋಟೆಯ ಬಾಗಿಲ ಹತ್ತಿರ ತಲುಪಿದನು. ರಕ್ಷಕರು ಹಾಗೂ ಮೇಲ್ವಿಚಾರಕರು ಅವರಿಗೆ ಸಂತೋಷದೊಂದಿಗೆ ಪಟ್ಟಣದಲ್ಲಿ ಪ್ರವೇಶಿಸಲು ಅನುಮತಿ ನೀಡಿದರು. ಹಾಗೂ ಅವರ ಹಾದಿಯಲ್ಲಿ ಯಾವುದೇ ರೀತಿಯ ಅಡೆತಡೆ ಉಂಟು ಮಾಡಲಿಲ್ಲ. ಏಕೆಂದರೆ ಈ ರಕ್ಷಕರ ಹಾಗೂ ಕೋಟೆಯ ಮೇಲ್ವಿಚಾರಕರಿಗೆ ಈ ನಂಬುಗೆಯುಂಟಾಗಿತ್ತು. ಏನೆಂದರೆ ಸುಲ್ತಾನ ಮೊಹಮೂದ್ ಹಾಗೂ ಯುವರಾಜ ಅಹ್ಮದ್‌ರು ಇಷ್ಟು ಯೋಗ್ಯತೆಯನ್ನು ಹೊಂದಿಲ್ಲ. ಅವರಿಗೆ ಗೌರವ ನೀಡಬಹುದು. ಹಾಗೂ ಅವರ ಆಜ್ಞೆಯನ್ನು ಪಾಲಿಸುವುದು ಮತ್ತು ಇಂಥ ದೊಡ್ಡ ಜವಾಬ್ದಾರಿಯನ್ನು ನಿಭಾಯಿಸುವ ಅರ್ಹತೆಯೂ ಇಲ್ಲ. ಪ್ರತಿಸಲದಂತೆ ಈ ಸಲವೂ ಅಮೀರ್‌ಖಾಸಿಂ ಬರೀದ್‌ನು ನಾಲ್ಕು ಕಡೆ ತನ್ನ ರಕ್ಷಕರನ್ನು ನೇಮಿಸಿದನು. ಹಾಗೂ ಸಹಾಯಕರಿಂದ ಕೆಲಸ ತೆಗೆದುಕೊಂಡು ಮತ್ತೆ ಅದೇ ಹುದ್ದೆಯನ್ನು ಅಂಗೀಕರಿಸಿದನು. ಬೆಳಿಗ್ಗೆ ಯಾವಾಗ ಬಾದಶಾಹನು ಎಚ್ಚೆತ್ತನೋ ಆತನು ವಿರುದ್ಧ ದೃಶ್ಯವನ್ನೇ ನೋಡಿದನು. ಆದರೆ ಆತನಿಗೆ ಅದರ ದುಃಖವೂ ಆಗಲಿಲ್ಲ. ಆಶ್ಚರ್ಯವೂ ಆಗಲಿಲ್ಲ. ಏಕೆಂದರೆ ಆತನು ಅಮೀರರಿಂದ ಭಯಭೀತನಾಗಿದ್ದನು. ಹಾಗೂ ಆತನು ಅವರ ಪ್ರತಿಯೊಂದು ಮಾತನ್ನು ಸ್ವೀಕರಿಸುವುದನ್ನು ರೂಢಿಗೊಳಿಸಿಕೊಂಡಿದ್ದನು. ಆತನಿಗೆ ಅಮೀರ್‌ಖಾಸಿಂ ಬರೀದ್‌ನಿಂದ ಮದ್ಯ ಹಾಗೂ ವಿಲಾಸಿ ಜೀವನಕ್ಕೆ ಲಭ್ಯವಾದದ್ದೇ ತನ್ನ ಅದೃಷ್ಟವೆಂದು ಬಗೆದನು.

ಇರಾನಿನ ದೂತರ ಆತಿಥ್ಯ ಹಾಗೂ ಹೊರಡುವಿಕೆ :

ಹಿಂದೂಸ್ಥಾನದಲ್ಲಿ ಕೆಲವರ್ಷಕ್ಕಿಂತ ಮುಂಚೆ ಇರಾನಿನ ಬೋಧಕ ಇಸ್ಮಾಯಿಲ್

ಸಫವಿಯ ದೂತರು ಬಂದಿದ್ದರು. ಈ ದೂತರ ಆದರಾತಿಥ್ಯವನ್ನು ಮಾಡುವಲ್ಲಿ ತಿಮ್ಮರಾಜರಾಯ ಬೇಜಾನಗರ ಹಾಗೂ ಗುಜರಾತಿನ ದೊರೆಗಳು ಈ ಮೊದಲೇ ಒಂದು ಒಳ್ಳೆಯ ಉದಾಹರಣೆ ನೀಡಿದ್ದರು. ಅವರಿಗೆ ಶಾಹಿ ಕೊಡುಗೆ ಹಾಗೂ ಕಾಣಿಕೆಗಳಿಂದ ಸನ್ಮಾನಿಸಿದ್ದರು. ಆದುದರಿಂದ ಮಹಮೂದ್ ಬಹಮನಿಯು ತನ್ನ ಪ್ರಾಂತ್ಯದಲ್ಲಿ ಇವರನ್ನು ಬಹಳೇ ಗೌರವದೊಂದಿಗೆ ಕರೆದುಕೊಂಡನು. ಅವರ ಘನತೆಗೆ ತಕ್ಕಂತೆ ಅವರನ್ನು ಮರಳಿಸಲು ಬಯಸಿದನು. ಆದರೆ ಅಮೀರ ಬರೀದನು ಧಾರ್ಮಿಕ ಮತಭೇದದ ಕಾರಣದಿಂದಾಗಿ ದೊರೆಯೊಂದಿಗೆ ಭಿನ್ನಾಭಿಪ್ರಾಯ ಹೊಂದಿದ್ದನು. ಆದುದರಿಂದ ದೊರೆಯು ಆಡಂಬರದೊಂದಿಗೆ ಮರಳಿಸುವಲ್ಲಿ ಅಡತಡೆಯುಂಟು ಮಾಡಿದನು. ಇದರ ಪರಿಣಾಮವಿದಾಯಿತು. ಎರಡು ವರ್ಷದವರೆಗೆ ದೂತರು ತಮ್ಮ ದೇಶವಾದ ಇರಾನಕ್ಕೆ ಮರಳಿ ಹೋಗದಾದರು. ಅನಿವಾರ್ಯವಾಗಿ ಅವರು ಒಂದು ಪತ್ರವನ್ನು ಇಸ್ಮಾಯಿಲ್ ಆದಿಲ್‌ಶಾಹನಿಗೆ ಕಳುಹಿಸಿದರು. ಅದಕ್ಕೆ ಉತ್ತರವಾಗಿ ಅಮೀರ್‌ಖಾಸಿಂ ಬರೀದ್ ಹಾಗೂ ಮೊಹ್ಮದ್ ಬಹಮನಿ ಈರ್ವರಿಗೂ ಈ ಆದೇಶ ತಲುಪಿತು. ಏನೆಂದರೆ ಇರಾನಿನ ದೂತರ ಮರಳಿಸುವಿಕೆಯಲ್ಲಿ ಇನ್ನೂ ತಡಮಾಡುವದು ಉಚಿತವಲ್ಲ. ಅವರನ್ನು ಸನ್ಮಾನದೊಂದಿಗೆ ತಕ್ಷಣ ಮರಳಿಸುವುದು ಸರಿಯಾದುದು. ಅಮೀರ್‌ಬರೀದ್‌ನು ಇಸ್ಮಾಯಿಲ್ ಆದಿಲ್‌ಶಾಹನ ಉತ್ತರಕ್ಕೆ ಸ್ಪಂದಿಸಿ ದೂತರನ್ನು ಕೂಡಲೇ ಮರಳಿ ಕಳುಹಿಸಿದನು.

ಇಸ್ಮಾಯಿಲ್ ಆದಿಲ್‌ಶಾಹನು ಇರಾನಿನ ದೂತರನ್ನು ಹಾರ್ದಿಕವಾಗಿ ಸ್ವಾಗತಿಸಿದುದು:

ಇಸ್ಮಾಯಿಲ್ ಆದಿಲ್‌ಶಾಹನು ಈ ಇರಾನಿನ ದೂತರನ್ನು ತುಂಬಾ ಹಾರ್ದಿಕವಾಗಿ ಸ್ವಾಗತಿಸಿದನು ಹಾಗೂ ಇಲಿಯಾಪುರದಲ್ಲಿ ಅವರನ್ನು ಭೇಟಿಯಾದನು. ಏಕೆಂದರೆ ದೂತರು ಹಾಗೂ ಇಸ್ಮಾಯಿಲ್ ಆದಿಲ್‌ಶಾಹನು ಒಂದೇ ಪಂಥದವರಾಗಿದ್ದರು. ಅದಕ್ಕಾಗಿ ಅವರನ್ನು ಆತನು ಬಹಳೇ ಆಡಂಬರದೊಂದಿಗೆ ಶಾಹಿ ಸತ್ಕಾರ ನೀಡಿ ಇರಾನಕ್ಕೆ ಮರಳಿ ಕಳುಹಿಸಿದನು. ಮರಳುವಿಕೆಯ ಸಮಯದಲ್ಲಿ ಮುಸ್ತಫಾಬಾದ್ ಬಂದರಿನ ಸ್ಥಳದಲ್ಲಿ ಅವರನ್ನು ಸನ್ಮಾನಿಸಲಾಯಿತು. ಯಾವಾಗ ಇರಾನಿನ ಪೋಷಕರಿಗೆ ಎಲ್ಲ ವಿಷಯ ತಿಳಿಯಿತೋ ಆತನು ಆದಿಲ್‌ಶಾಹನ ಸೇವೆಯಲ್ಲಿ ಓರ್ವ ಸಹಾಯಕನನ್ನು ಕಳುಹಿಸಿದನು. ಆತನ ಮುಖಾಂತರ ದೊರೆಗಾಗಿ ಅತ್ಯಮೂಲ್ಯವಾದ ಶಾಹಿ ಕೊಡುಗೆಗಳನ್ನು ನೀಡಿದನು. ಅವುಗಳಲ್ಲಿ ಒಂದು ಖಡ್ಗ ಹಾಗೂ ಅಲಂಕೃತ ಟೊಂಕಪಟ್ಟಿಗಳು ಇದ್ದವು. ಆ ಸಹಾಯಕನ ಹೆಸರು ಅಮೀರ್ ಇಬ್ರಾಹಿಂ ಬೇಗ್ ತುರ್‌ಕಮಾನ್ ಎಂದಿತ್ತು. ತನ್ನ ಪತ್ರದಲ್ಲಿ ಇರಾನಿನ ಪೋಷಕನು ಆದಿಲ್‌ಶಾಹನಿಗಾಗಿ ಮುಜದ್ದುಲ್ ಸಲ್ತನತ್ ವಲ್ ಹಷ್ಮತ ವಲ್ ಶೌಕಾ ವಲ್ ಇಕ್ಬಾಲ್ ನಂಥ ಬಿರುದು ಬಾವಳಿಗಳನ್ನು ಬರೆದನು. ಫಾರ್ಸಿ ಭಾಷೆಯಲ್ಲಿ ಬರೆಯಲ್ಪಟ್ಟ ಈ ಬಿರುದುಗಳು

ಇಸ್ಮಾಯಿಲ್ ಆದಿಲ್‌ಶಾಹನ ಸಂತಸಕ್ಕೆ ಕಾರಣವಾದವು. ಹಾಗೂ ಈಗ ಆತನು ಈ ಎಲ್ಲ ಬಿರುದುಗಳಿಗೆ ತಾನು ಯೋಗ್ಯನೆಂದು ತಿಳಿದನು.

ಇರಾನಿನ ದೂತರ ಸ್ವಾಗತದ ವಿವರ :

ಬಿಜಾಪುರದಲ್ಲಿ ಇರಾನಿನ ದೂತರ ಸ್ವಾಗತವನ್ನು ತುಂಬಾ ಹಾರ್ದಿಕವಾಗಿ ಜರುಗಿಸಲಾಯಿತು. ಅದನ್ನು ವಿವರಿಸುವದೆಂದರೆ ತುಂಬಾ ಕಠಿಣವಾದ ಕೆಲಸವಾಗಿದೆ. ನಾಲ್ಕೂ ಕಡೆಗೆ ನಗಾರಿಗಳನ್ನು ಬಾರಿಸಲಾಯಿತು. ಇರಾನಿನ ದೂತರ ಪೋಷಾಕುಗಳನ್ನು ಗಮನದಲ್ಲಿರಿಸಿಕೊಂಡು ಈ ಆದೇಶ ಹೊರಡಿಸಲಾಯಿತು. ಏನೆಂದರೆ ಎಲ್ಲ ಮೊಘಲ ಸೈನಿಕರು ಶಿರದ ಮೇಲೆ ಹನ್ನೆರಡು ಭಾಗವುಳ್ಳ ಕೆಂಪು ಪೇಟವನ್ನು ತೊಡಬೇಕು. ಇಲ್ಲದಿದ್ದರೆ ಯಾವುದೇ ಮೊಘಲ ಸೈನಿಕನಿಗೆ ಭೇಟಿಯ ಅವಕಾಶ ನೀಡಲಾಗುವುದಿಲ್ಲ. ಇದರ ಹೊರತಾಗಿ ಇದನ್ನು ಪಾಲಿಸದವರಿಂದ ಹನ್ನೆರಡು ಆಡುಗಳನ್ನು ಪಡೆಯಬೇಕು. ಹಾಗೂ ಆತನ ತಲೆಯ ಮೇಲಿನಿಂದ ಪೇಟವನ್ನು ಕೆಳಗಿಳಿಸಿ ನಗ್ನ ಶಿರದೊಂದಿಗೆ ಇಡೀ ಬಾಝಾರಿನಲ್ಲಿ ತಿರುಗಿಸಲಾಗುವುದು. ಇದರಿಂದಾಗಿ ಜನರು ಆತನನ್ನು ತೆಗಳಬೇಕು. ಹಾಗೂ ಮುಂದೆ ಆತನು ಇಂಥ ಕೃತ್ಯವನ್ನು ಮಾಡಲು ಮುಂದಾಗದಿರಲಿ, ಇದರ ಪರಿಣಾಮವಿದಾಯಿತು. ಏನೆಂದರೆ ಈ ಆದೇಶದ ಪೂರ್ತಿಗಾಗಿ ಪಟ್ಟಣದಲ್ಲಿ ಯಾವ ವ್ಯಕ್ತಿಯೂ ಹನ್ನೆರಡು ಭಾಗವುಳ್ಳ ಕೆಂಪುವರ್ಣದ ಪೇಟವನ್ನು ಉಡದೇ ಇರುವವರು ಕಂಡುಬರಲಿಲ್ಲ. ಇದರ ಹೊರತಾಗಿ ಈ ಆದೇಶವೂ ಜಾರಿಯಾಯಿತು. ಏನೆಂದರೆ ಹಬ್ಬ ಹಾಗೂ ಇತರ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಆರಾಧನೆ ಮಾಡುವಾಗ, ಖುತ್ಬಾ ನೀಡುವಾಗ ಇರಾನಿನ ಪೋಷಕನ ಒಳಿತಿಗಾಗಿ ಹಾಗೂ ದೀರ್ಘಾಯುಷ್ಯಕ್ಕಾಗಿ ಪ್ರಾರ್ಥಿಸಬೇಕು. ಈ ಪರಂಪರೆಯು ಬಿಜಾಪುರದ ಸಾಮ್ರಾಜ್ಯದಲ್ಲಿ ಅಲಿಆದಿಲ್‌ಶಾಹನ ಅವಧಿಯವರೆಗೆ ಅಂದರೆ ಸುಮಾರು ಎಪ್ಪತ್ತು ವರ್ಷಗಳವರೆಗೆ ಜಾರಿಯಲ್ಲಿತ್ತು.

ಇತಿಹಾಸಕಾರರ ವಿಚಾರ :

ಎಲ್ಲ ಇತಿಹಾಸಕಾರರು ಈ ಮಾತನ್ನು ಪುಷ್ಟೀಕರಿಸುತ್ತಾರೆ. ಏನೆಂದರೆ, ಇಸ್ಮಾಯಿಲ್ ಆದಿಲ್‌ಷಾಹ್‌ನು ಬಹಳೇ ಬುದ್ಧಿವಂತ, ದೂರದರ್ಶಿ ಹಾಗೂ ವ್ಯಕ್ತಿಗಳನ್ನು ನೋಡಿ ಗುಣ ಗ್ರಹಿಸುವ ವ್ಯಕ್ತಿತ್ವದವನಾಗಿದ್ದನು ಹಾಗೂ ಸಮಯಪ್ರಜ್ಞೆಯುಳ್ಳ ಗೌರವಯುತ ದೊರೆಯಾಗಿದ್ದನು. ಆತನು ಪ್ರತಿಯೊಂದು ಕಾರ್ಯವನ್ನು ಪೂರ್ತಿಗೊಳಿಸುವಲ್ಲಿ ತನ್ನ ಪ್ರತಿಭೆಯನ್ನು ಪ್ರಕಟಪಡಿಸುತ್ತಿದ್ದನು. ಅದೇ ಕಾರಣಕ್ಕಾಗಿ ವೈರಿಗಳ ಮೇಲೆ ಬಹುಬೇಗನೆ ಹಿಡಿತ ಸಾಧಿಸುತ್ತಿದ್ದನು. ಅವನು ಸಮಸ್ತ ಯುದ್ಧಗಳಲ್ಲಿ ವೈರಿಗಳನ್ನು ಸೋಲಿಸಿದನು. ಕೇವಲ ಒಂದು ಸಲ ಮುಸ್ಲಿಮೇತರರೊಂದಿಗೆ ಜರುಗಿದ (ಕನ್‌ಹಟರ್) ಯುದ್ಧದಲ್ಲಿ ಮದ್ಯ ಸೇವಿಸಿದ ಅಮಲಿನಿಂದಾಗಿ ಅವರ ಮೇಲೆ ಹಿಡಿತ ಸಾಧಿಸದಾದನು.

ಕನ್‌ಹಟರ್ ಯುದ್ಧದ ವಿವರಣೆ:

ದಖನಿ ಇತಿಹಾಸಕಾರರ ಅಭಿಪ್ರಾಯವು ಈ ಯುದ್ಧದ ಕುರಿತು ಹೀಗೆ ಇದೆ. ಕನ್‌ಹಟರ್‌ದಲ್ಲಿ ಎಷ್ಟು ಮುಸ್ಲಿಮೇತರ ಆಡಳಿತಗಾರರಿದ್ದರು ಅವರ ಹಿಂಸೆ ಮತ್ತು ಕಾರ್ಯವನ್ನು ಯೂಸುಫ್ ಆದಿಲ್‌ಷಾಹ್‌ನು ಬಹಳೇ ಶೌರ್ಯದೊಂದಿಗೆ, ಧೈರ್ಯದಿಂದ ಅದನ್ನು ಕೊನೆಗಾಣಿಸಿದನು. ಮತ್ತು ಮುಸ್ಲಿಮೇತರರಿಂದ ಪ್ರಾಂತ್ಯವನ್ನು ಮುಕ್ತಗೊಳಿಸಿದನು. ಹಾಗೂ ಈ ತೆರನಾಗಿ ಕನ್‌ಹಟರ್, ಮುದ್ಗಲ್, ರಾಯಚೂರಿನ ಕೋಟೆಗಳನ್ನು ತನ್ನ ಸಾಮ್ರಾಜ್ಯದಲ್ಲಿ ಸೇರಿಸಿಕೊಂಡನು. ಈ ಆಡಳಿತಗಾರರ ಶೋಷಣೆಯಿಂದ ಪ್ರಜೆಗಳು ಬಹಳ ತೊಂದರೆಗೊಳಗಾಗಿದ್ದರು. ಈಗ ಅವರಿಗೆ ಅದರಿಂದ ಬಿಡುಗಡೆ ಸಿಕ್ಕಿತು. ಯಾವಾಗ ಯೂಸುಫ್ ಆದಿಲ್‌ಷಾಹ್‌ನು ಮೃತ್ಯು ಹೊಂದಿದನೊ ಆಗ ಇಡೀ ಪ್ರಾಂತ್ಯದಲ್ಲಿ ಖಾಸಿಂ ಬರೀದ್ ಹಾಗೂ ಕಮಾಲ್‌ಖಾನ್‌ರ ವಿಧ್ವಂಸಕ ಕೃತ್ಯಗಳು ಸರ್ವೇಸಾಮಾನ್ಯವಾದವು. ಹೀಗೆ ತಿಮ್ಮರಾಜನು ಮುದ್ಗಲ್, ರಾಯಚೂರಿನ ಕೋಟೆಗಳನ್ನು ವಶಪಡಿಸಿಕೊಂಡನು. ಹೇಗೆಂದರೆ ಈ ಮೊದಲು ವಿವರಿಸಿರುವಂತೆ ಈ ಕೋಟೆಗಳ ಮೇಲೆ ತಿಮ್ಮರಾಜನ ಆಡಳಿತವು ಹಿಜರಿ ಶಕೆ ೯೨೭ರ ವರೆಗೆ ಇತ್ತು. ಏಕೆಂದರೆ ಈ ಅವಧಿಯಲ್ಲಿ ಇಸ್ಮಾಯಿಲ್ ಆದಿಲ್‌ಷಾಹ್‌ನಿಗೆ ದಖ್ಖನ್ನಿನಲ್ಲಿ ಕಮಾಲ್‌ಖಾನ್‌ನ ಬಂಡಾಯದ ಕಾರಣದಿಂದ ಇಷ್ಟು ಅವಕಾಶವೂ ದೊರೆಯಲಿಲ್ಲ. ಏನೆಂದರೆ ಆತನು ಈ ಕಡೆಗೆ ಗಮನವೀಯುತ್ತಿದ್ದನು ಹಾಗೂ ತಿಮ್ಮರಾಜನೊಂದಿಗೆ ಕೋಟೆಯ ಕುರಿತು ವಿಚಾರಿಸುತ್ತಿದ್ದನು. ಇನ್ನೋರ್ವ ಯೋಗ್ಯನಾದ ಅಮೀರನು ಸಹ ಆದಿಲ್‌ಶಾಹನ ಬಳಿ ಇರಲಿಲ್ಲ. ಯಾರ ಸಹಾಯದಿಂದ ಆತನು ಈ ಕಾರ್ಯವನ್ನು ಪೂರ್ಣಗೊಳಿಸಬಹುದಾಗಿತ್ತು. ಯಾವಾಗ ಶಾಹೀ ವಂಶದ ಹಿತೈಷಿಗಳು ಅಮೀರ ಖಾಸಿಂ ಬರೀದನನ್ನು ಗಡಿ ಪಾರು ಮಾಡಿದರು. ಹಾಗೂ ಸುತ್ತ ಮುತ್ತಲಿನ ಅಮೀರರು ಇಸ್ಮಾಯಿಲ್ ಆದಿಲ್‌ಷಾಹ್‌ನ ಸೇವೆಯಲ್ಲಿ ಹಾಜರಾದರು. ಆಗ ಸಮಯದ ಬೇಡಿಕೆಯನ್ನು ಪೂರೈಸುತ್ತ ಮುದ್ಗಲ್ ಹಾಗೂ ರಾಯಚೂರಿನ ಕೋಟೆಯನ್ನು ತಿಮ್ಮರಾಜನಿಂದ ಮರಳಿ ಬೇಡಿದನು. ಅದಕ್ಕಾಗಿ ತಿಮ್ಮರಾಜನು ಸ್ವತಃ ವಿಜಾಪುರದತ್ತ ಹೊರಟನು.

ತಿಮ್ಮರಾಜನಿಂದ ಯುದ್ಧದ ಸಿದ್ಧತೆ :

ಯಾವಾಗ ತಿಮ್ಮರಾಜನಿಗೆ ಇಸ್ಮಾಯಿಲ್ ಆದಿಲ್‌ಶಾಹನ ಮನೀಷೆ ತಿಳಿಯಿತೋ ಆಗ ಆತನು ಒಂದು ಸಣ್ಣ ಸೈನ್ಯದೊಂದಿಗೆ ವಿಜಾಪುರಕ್ಕೆ ಹೊರಟನು ಹಾಗೂ ಬೇಗನೆ ತಲುಪಿ ಕೃಷ್ಣಾ ನದಿಯ ದಡದಲ್ಲಿ ಬಿಡಾರ ಹೂಡಿದನು. ಅಲ್ಪ ಸಮಯದಲ್ಲಿಯೇ ಕನ್‌ಹಟರ್ ಹಾಗೂ ಸುತ್ತಮುತ್ತಲಿನದಲ್ಲದೇ ದೂರ ದೂರ ಪ್ರಾಂತ್ಯದ ಅಮೀರರು ಹಾಗೂ ಆಡಳಿತಗಾರರು ಗೌಪ್ಯ ರೀತಿಯಲ್ಲಿ ತಿಮ್ಮರಾಜನಿಗೆ ತಮ್ಮ ನಾಯಕನೆಂದು ನಿಶ್ಚಯಿಸಿಕೊಂಡಿದ್ದರು. ಈ ಸಮಯದಲ್ಲಿ ಎಲ್ಲ ಭಿನ್ನಾಭಿಪ್ರಾಯಗಳನ್ನು ಬದಿಗಿರಿಸಿ

ಒಗ್ಗಟ್ಟಾದರು. ಅವರೆಲ್ಲರೂ ತಿಮ್ಮರಾಜನಿಗೆ ತಮ್ಮ ನಿಷ್ಠೆ, ವಿಧೇಯತೆ ಹಾಗೂ ಸಹಾಯದ ಭರವಸೆ ನೀಡಿದರು. ಪರಿಣಾಮವೇನಾಯಿತೆಂದರೆ, ತಿಮ್ಮರಾಜನು ಓರ್ವ ಬಲಶಾಲಿ ವಿರೋಧಿಯಾದನು ಹಾಗೂ ಆತನ ಇಡೀ ಸೈನ್ಯದ ಸಂಖ್ಯೆಯು ಐವತ್ತು ಸಾವಿರ ಸವಾರರು ಹಾಗೂ ಆರು ಲಕ್ಷ ಸೈನಿಕರಿಂದ (ಪಾದಾತಿ) ಒಳಗೊಂಡಿತ್ತು.

ಇಸ್ಮಾಯಿಲ್ ಆದಿಲ್‌ಶಾಹನ ಯುದ್ಧವನ್ನು ಮುಂದೂಡುವ ಇಚ್ಛೆ :

ಈಗ ಹೀಗೆ ಹೇಳಬಹುದಾಗಿದೆ. ಇಸ್ಮಾಯಿಲ್ ಆದಿಲ್‌ಶಾಹನು ಯಾವಾಗ ಇದನ್ನು ಗ್ರಹಿಸಿದನೋ ಆವಾಗ ತಿಮ್ಮರಾಜನು ಬಹುಬೇಗನೆ ವಿಜಾಪುರಕ್ಕೆ ತಲುಪಿದನು ಹಾಗೂ ಆತನು ಎಲ್ಲ ನೀರಿನ ಮೂಲಗಳನ್ನು ತನ್ನ ವಶಕ್ಕೆ ತೆಗೆದುಕೊಂಡನು ಹಾಗೂ ಎಲ್ಲ ಅಮೀರರು ಹಾಗೂ ಆಡಳಿತಗಾರರು ಯಾರು ತಮ್ಮ ದೂರದ ಪ್ರಾಂತ್ಯಗಳನ್ನು ಬಿಟ್ಟು ತನ್ನೆಡೆಗೆ ಬಂದಿರಲಿಲ್ಲ. ಅವರೆಲ್ಲರೂ ಒಗ್ಗಟ್ಟಾಗಿ ಅವನಿಗೆ ಜೊತೆ ನೀಡಿದರು. ಈ ಕಾರಣದಿಂದಾಗಿ ಇಸ್ಮಾಯಿಲ್ ಆದಿಲ್‌ಶಾಹನು ತಿಮ್ಮರಾಜನೊಂದಿಗೆ ಯುದ್ಧವನ್ನು ಮಾಡಬಾರದೆಂದು ನಿರ್ಧರಿಸಿದನು ಹಾಗೂ ತನ್ನ ಸಂಕಲ್ಪವನ್ನು ಪೂರ್ತಿಗೊಳಿಸಿಕೊಳ್ಳಲು ಮುಂಬರುವ ಸದವಕಾಶಕ್ಕಾಗಿ ಕಾಯಲು ಬಯಸಿದನು. ಆದರೆ ಅವನು ಈಗ ಮಾಡಬಹುದಾದರೂ ಏನಾಗಿತ್ತು? ಯುದ್ಧದ ಸಿದ್ಧತೆಗಳು ಆಗಲೇ ಪ್ರಾರಂಭವಾಗಿದ್ದವು. ಶಾಹೀ ಶಸ್ತ್ರಗಳು ಹೊರಬಂದಿದ್ದವು. ಅದರ ಹೊರತಾಗಿ ಕೆಲ ಅಮೀರರೂ ಬಾದಶಾಹನಿಗೆ ಯುದ್ಧಗೈಯಲು ಪ್ರಚೋದಿಸಿದರು. ಅದಕ್ಕಾಗಿ ಆತನು ವೈರಿಯನ್ನು ಎದುರಿಸಲು ಅನಿವಾರ್ಯವಾಗಿ ಸಿದ್ಧನಾದನು. ಇಸ್ಮಾಯಿಲ್ ಆದಿಲ್‌ಶಾಹನ ಸೈನ್ಯದಲ್ಲಿ ಈ ಸಲ ಏಳು ಸಾವಿರ ಶಸ್ತ್ರಾಸ್ತ್ರ ಸವಾರರಿದ್ದರು. ಅವರಲ್ಲಿ ಹಲವಾರು ಸೈನಿಕರು ವಿದೇಶಿಗಳಾಗಿದ್ದರು. ನದಿಯ ದಡದಲ್ಲಿ ಎಲ್ಲ ಸೈನಿಕರು ತಮ್ಮ ಬಿಡಾರ ಹೂಡಿದರು.

ಬಾದಷಾಹನ ಮದ್ಯದ ಅಮಲು ಹಾಗೂ ಮೋಜಿನ ಸಭೆ :

ನದಿಯ ದಡದಲ್ಲಿ ಬಿಡಾರ ಹೂಡಿದ ನಂತರ ಇಸ್ಮಾಯಿಲ್ ಆದಿಲ್‌ಶಾಹನು ಶಾಹೀ ಬಿಡಾರದಲ್ಲಿ ವಾಸಿಸಿದನು ಹಾಗೂ ಯಾವುದೇ ಭಯಭೀತಿಯಿಲ್ಲದೇ ಯುದ್ಧವನ್ನು ಮುಂದೂಡತೊಡಗಿದನು. ಎಲ್ಲಿಯವರೆಗೆಂದರೆ ಮಳೆಗಾಲ ಆಗಮಿಸುತ್ತಿದ್ದಂತೆಯೇ ಮದ್ಯಪಾನದಲ್ಲಿ ತೊಡಗಿದನು. ಈ ಅವಧಿಯಲ್ಲಿ ಆತನ ಓರ್ವ ಸಹವರ್ತಿಯು, ಮದ್ಯ ಸೇವನೆಯನ್ನು ಇನ್ನಷ್ಟು ರಂಜಿಸಲು, ಶಾಹೀ ಪರದೆಯ ಹಿಂದಿನಿಂದ ಸುಮಧುರ ಕಂಠದಲ್ಲಿ ಉತ್ಕೃಷ್ಟವಾದ ದ್ವಿಪದಿಯನ್ನು ಪ್ರಸ್ತುತಪಡಿಸಿದಳು. ಈ ದ್ವಿಪದಿಯನ್ನು ಆಲಿಸುತ್ತಿದಂತೆಯೇ ಬಾದಶಾಹನು ಪರದೆಯಿಂದ ಹೊರಬಂದನು. ಆತನು ತಕ್ಷಣ ಒಂದು ಮೋಜಿನ ಸಭೆಯನ್ನು ಏರ್ಪಡಿಸಲು ನಿರ್ಧರಿಸಿದನು ಹಾಗೂ ಸಭೆ ಏರ್ಪಟ್ಟಿತು. ಬಾದಶಾಹ್‌ನ ಆದೇಶ ಪಾಲಿಸುತ್ತ ಮನಮೋಹಕ ಸ್ತ್ರೀಯರನ್ನು ಪ್ರಸ್ತುತ ಪಡಿಸಲಾಯಿತು. ಯಾರ ಸೌಂದರ್ಯವು ಮನುಷ್ಯರನ್ನು

ಹೌಹಾರಿಸುವಂತಿತ್ತು. ಇದರ ಹೊರತಾಗಿ ಮೋಜು ಪ್ರಿಯರು ಹಾಗೂ ಚಂಚಲ ಚಿತ್ತರು ಅತ್ತ ಇತ್ತ ಆಸೀನರಾದರು.

ನದಿಯ ದಡದಲ್ಲಿ ಬಾದಷಾಹ್‌ನ ಗಸ್ತು :

ಯಾವಾಗ ಮದ್ಯವು ಸಂಪೂರ್ಣವಾಗಿ ಅಮಲೇರಿಸಿತೋ ಹಾಗೂ ಸಭೆಯು ಉತ್ತುಂಗಕ್ಕೆ ತಲುಪಿತೋ ಆಗ ಇಸ್ಮಾಯಿಲ್ ಆದಿಲ್‌ಶಾಹನು ನದಿಯನ್ನು ದಾಟುವೆಡೆಗೆ ಗಮನವಿತ್ತನು. ಆಡಳಿತಗಾರರನ್ನು ಕರೆಯಿಸಿ ಕುದುರೆಗಳ ತಡಿಯ ಕುರಿತು ವಿಚಾರಿಸಿದನು. ಕುದುರೆ ತಡಿಗಳು ಸಂಖ್ಯೆಯಲ್ಲಿ ನೂರು ಇರುವವು. ಉಳಿದವು ಕೆಲದಿನಗಳಲ್ಲಿ ಸಿದ್ಧವಾಗುವವು. ಬಾದಶಾಹನು ಅಮಲಿನಲ್ಲಿ ತೂರಾಡುತ್ತಿದ್ದನು. ಒಂದು ಆನೆಯ ಮೇಲೆ ಕುಳಿತು, ತಿರುಗಾಡಿ ಬರುವ ನೆಪಮಾಡಿ ನದಿಯ ದಡದಲ್ಲಿ ಸುತ್ತಾಡತೊಡಗಿದನು. ಆದರೆ ತನ್ನ ಮನಸ್ಸಿನ ಮಾತನ್ನು ಯಾರಿಗೂ ಹೇಳಲಿಲ್ಲ. ಇದನ್ನು ನೋಡಿ ಇಡೀ ಸೈನ್ಯವು ಬಹಳ ವಿಹ್ವಲಗೊಂಡಿತು. ಏಕೆಂದರೆ ಬಾದಷಾಹ್‌ನು ಯುದ್ಧದ ಸಂದರ್ಭದಲ್ಲಿ ಯಾವಾಗಲೂ ಇದೇ ಆನೆಯ ಮೇಲೆ ಸವಾರಿ ಮಾಡುತ್ತಿದ್ದನು. ಬಾದಷಾಹ್‌ನು ಇನ್ನೂ ಒಂದು ಕೋಸ್‌ದಷ್ಟು ಹೋಗಿದ್ದನು ಆತನು ಎಲ್ಲ ಸೈನಿಕರಿಗೆ ತಾನು ಸವಾರಿ ಮಾಡುತ್ತಿರುವ ಉದ್ದೇಶವನ್ನು ಜಾಹೀರುಗೊಳಿಸಿದನು ಹಾಗೂ ಎಲ್ಲ ಸೈನಿಕರಿಗೆ ಆದೇಶ ನೀಡಿದನು. ಏನೆಂದರೆ ಅವರು ಆನೆಗಳ ಮೇಲೆ ಕುಳಿತು ನದಿಯನ್ನು ದಾಟಿ ಬರಬೇಕು ಹಾಗೂ ಕುದುರೆ ತಡಿಗಳನ್ನು ಹಾಕಿ ನದಿಯನ್ನು ದಾಟಿ ಬರಬೇಕು. ಈ ಸೈನಿಕರು ಆ ಆದೇಶವನ್ನು ಆಲಿಸಿ ದಿಗ್ಭ್ರಮೆಗೊಂಡರು. ಏಕೆಂದರೆ ಈ ತುಂಬಿ ಹರಿಯುವ ನದಿಯನ್ನು ದಾಟುವದು ಆನೆಗಳಿಗೆ ಅಸಾಧ್ಯದ ಮಾತಾಗಿತ್ತು. ಪ್ರತಿಯೊಬ್ಬನೂ ದಡದಲ್ಲಿ ನಿಂತು ನದಿಯ ಪ್ರವಾಹವನ್ನು ನೋಡುತ್ತಿದ್ದರು. ಬಾದಶಾಹನಂತೂ ಮದ್ಯದ ಅಮಲಿನಲ್ಲಿ ಮುಳುಗಿದ್ದನು. ಆತನ ಬುದ್ಧಿಯು ಆಗ ಎಳ್ಳಷ್ಟೂ ಕ್ರಿಯಾತ್ಮಕವಾಗಿರಲಿಲ್ಲ. ಅದಕ್ಕಾಗಿ ಆತನು ಈ ಕಾರ್ಯವನ್ನು ಕೈಗೊಂಡನು ಹಾಗೂ ನದಿಯಲ್ಲಿ ಆನೆಯೊಂದಿಗೆ ಮುನ್ನಡೆದನು. ಆದರೆ ತನ್ನ ಘನತೆಗೆ ತಕ್ಕಂತೆ ಯಾವುದೇ ತೊಂದರೆ, ಹಾನಿ ಇಲ್ಲದೇ ನದಿಯನ್ನು ದಾಟಿ ಮತ್ತೊಂದು ದಡಕ್ಕೆ ತಲುಪಿದನು.

ನದಿಯ ಆ ದಡದಲ್ಲಿ ಯುದ್ಧ :

ಬಾದಷಾಹ್‌ನ ಹಿಂದೆ ಇನ್ನೂರು ಆನೆಗಳ ಸವಾರರೂ ಸಹ ನದಿಯನ್ನು ದಾಟಿದರು ಹಾಗೂ ಎರಡು ಸಲ ಕುದುರೆಗಳನ್ನು ಜೀನುಗಳಿಂದ ಸಜ್ಜುಗೊಳಿಸಿ ನದಿಯನ್ನು ದಾಟಿಸಿದರು. ಉಳಿದ ಸೈನಿಕರು ನದಿಯಲ್ಲಿ ಇನ್ನೇನು ಇಳಿಯುವವರಿದ್ದರು, ವೈರಿಗಳ ಸೈನ್ಯವು ಎದುರಿಸಲು ಬಂದು ತಲುಪಿತು. ಯಾವ ಮೊಘಲ್ ಸೈನಿಕರು ಹಾಗೂ ಇನ್ನಿತರರು ನದಿಯನ್ನು ದಾಟಿದ್ದರು, ಅವರು ಕುದುರೆಗಳನ್ನು ಹತೋಟಿಯಲ್ಲಿ ತೆಗೆದುಕೊಂಡರು. ಹಾಗೂ ವೈರಿಯನ್ನು ಎದುರಿಸಲು ಮುನ್ನುಗ್ಗಿದರು. ಈ ಯುದ್ಧದಲ್ಲಿ

ಮುಸ್ಲಿಮರ ಸಂಖ್ಯೆಯು ಮುಸ್ಲಿಮೇತರರ ಸಂಖ್ಯೆಗಿಂತ ಬಹಳ ಕಡಿಮೆ ಇತ್ತು. ಮೊದಲು ಹೇಳಿದಂತೆ ಎರಡು ಸಾವಿರ ಹಾಗೂ ಕೊನೆಯಲ್ಲಿ ಉಲ್ಲೇಖಿಸಿದಂತೆ ೨ ಲಕ್ಷ ಪದಾತಿಗಳು ಹಾಗೂ ಎಂಬತ್ತು ಸಾವಿರ ಸವಾರರಿದ್ದರು. ಆದರೂ ಇಸ್ಮಾಯಿಲ್ ಆದಿಲ್‌ಶಾಹ್‌ನು ಬಹಳ ಚಾತುರ್ಯದೊಂದಿಗೆ ಚಾಣಾಕ್ಷತನದಿಂದ ಸೈನಿಕರನ್ನು ಸಜ್ಜುಗೊಳಿಸುತ್ತಿದ್ದನು. ಮುಸ್ಲಿಮರು ಒಗ್ಗಟ್ಟಾಗಿ ದಾಳಿ ಮಾಡಿದರು ಹಾಗೂ ಸುಮಾರು ಒಂದು ಸಾವಿರದಷ್ಟು ವೈರಿ ಸೈನಿಕರನ್ನು ಹತಗೊಳಿಸಿದರು. ಬೇಜಾನಗರದ ದೊರೆಯ ಸೇನಾಧಿಪತಿಯು ಮೊಘಲ ಸೈನಿಕರ ಖಡ್ಗದ ರುಚಿ ಕಂಡನು. ಇದರಲ್ಲಿ ಯಾವುದೇ ಸಂಶಯವಿಲ್ಲ. ಮೊಘಲ ಸೈನಿಕರು ಈ ಯುದ್ಧದಲ್ಲಿ ಬಹಳ ಶೌರ್ಯದೊಂದಿಗೆ ಹೋರಾಡಿದರು. ಆದರೆ ಕೊನೆಯ ಘಳಿಗೆಯಲ್ಲಿ ಅವರ ಬಳಿ ಶಸ್ತ್ರಾಸ್ತ್ರಗಳು ಇರದೇ ಇರುವುದರಿಂದ ಒಂದೂವರೆ ಸಾವಿರ ಮುಸ್ಲಿಮ್ ಸೈನಿಕರು ಹತರಾದರು. ಯಾವ ಸೈನ್ಯವು ಬದುಕಿ ಉಳಿಯಿತೋ ಅವರು ಪ್ರಾಣ ಉಳಿಸಿಕೊಂಡು ಓಡಿ ಹೋದರು. ಯಾವುದೇ ಸೇತುವೆ ಇರದೇ ಇರುವುದರಿಂದ ನದಿಯ ಮತ್ತೊಂದು ದಡಕ್ಕೆ ತಲುಪುವುದು ಕಠಿಣ ಕೆಲಸವಾಗಿತ್ತು. ಇದರ ಪರಿಣಾಮವಿದಾಯಿತು. ಯಾವ ಸೈನಿಕರು ಪ್ರಾಣ ಉಳಿಸಿಕೊಂಡು ಓಡಿದ್ದರೋ ಅವರು ನದಿಯಲ್ಲಿ ಕುದುರೆಗಳನ್ನಿಳಿಸಿದರು ಹಾಗೂ ಈ ತೆರನಾಗಿ ಸ್ವತಃ ಬಾದಷಾಹನ ಆನೆಯನ್ನು ತರಸೊಂ ಬಹಾದೂರ್ ಹಾಗೂ ಇಬ್ರಾಹಿಂ ಬೇಗ್‌ರು ರಣಭೂಮಿಯಿಂದ ಹೊರತೆಗೆದು ತಮ್ಮ ಮುಂದೆ ಮುಂದೆ ತೆಗೆದುಕೊಂಡು ಬಂದರು ಮತ್ತು ನದಿಯೆಡೆಗೆ ನಡೆದರು. ಇದರ ಪರಿಣಾಮ ಏನೆಂದರೆ ಬಾದಷಾಹ್ ಹಾಗೂ ಆತನ ಆನೆಯು ಹಾಗೂ ಏಳು ಶಸ್ತ್ರ ಸಜ್ಜಿತ ಸವಾರರು ಎರಡನೆಯ ದಂಡೆಗೆ ತಲುಪಿದರು. ಉಳಿದ ಎಲ್ಲ ಆನೆ ಹಾಗೂ ಕುದುರೆ ಸವಾರರು ನದಿಯಲ್ಲಿ ಮುಳುಗಿದರು.

ಇಸ್ಮಾಯಿಲ್ ಆದಿಲ್‌ಷಾಹ್ ಹಾಗೂ ಅಸದ್‌ಖಾನ್ ಲಾರಿಯ ನಡುವೆ ವಿಚಾರ ವಿನಿಮಯ:

ಇತಿಹಾಸದಲ್ಲಿ ಈ ತೆರನಾದ ಮೊದಲ ವಿಶೇಷ ಘಟನೆ ಲಭಿಸುತ್ತದೆ. ಯಾವಾಗ ಓರ್ವ ಆಡಳಿತಗಾರನು ಸೈನ್ಯದಿಂದ ನಿರ್ಲಕ್ಷಿತನಾಗಿ ವೈರಿಗಳೊಂದಿಗೆ ಯುದ್ಧ ಮಾಡಿರುವನು ಹಾಗೂ ತನ್ನ ಹಿತೈಷಿ, ಸಹವರ್ತಿಗಳನ್ನು ಮೃತ್ಯುವಿಗೊಪ್ಪಿಸಿ, ತಾನೊಬ್ಬನೆ ಬಹಳ ಕಷ್ಟ ಅನುಭವಿಸಿ, ನದಿಯನ್ನು ದಾಟಿರುವನು, ಆತನೊಂದಿಗೆ ಇಸ್ಮಾಯಿಲ್ ಆದಿಲ್‌ಶಾಹನು ವಿಚಾರ ವಿನಿಮಯ ಮಾಡಿದನು. ಹಾಗೂ ಸಮಯದ ಬೇಡಿಕೆಯನ್ನು ಗಮನದಲ್ಲಿಟ್ಟುಕೊಂಡು, ಆತನೊಂದಿಗೆ ಪ್ರಶ್ನಿಸಿದನು. ಅಸದ್‌ಖಾನ್ ಲಾರಿಯು ಅತ್ಯಂತ ಗೌರವಪೂರ್ವಕವಾಗಿ ಈ ವಿಶೇಷ ಘಟನೆಯ ಮಹತ್ವವನ್ನು ಮನಗಾಣಿಸಿದನು ಹಾಗೂ ಬಾದಶಾಹನಿಗೆ ಸಲಹೆ ನೀಡಿದನು. ಏನೆಂದರೆ, ಈಗ ರಾಜಧಾನಿಯಾದ ವಿಜಾಪುರಕ್ಕೆ ಹೊರಡಬೇಕು ಹಾಗೂ ಈ ವಿಷಯ ಜಗಜ್ಜಾಹೀರವಾಗಬೇಕು. ಹಿಂದೂಸ್ಥಾನದ ಸಮಸ್ತ ದೊರೆಗಳಲ್ಲಿ ಬೇಜಾನಗರದ

ರಾಜನು ಸೈನ್ಯ ಹಾಗೂ ರಾಜಕೀಯ ವಿಷಯವಾಗಿ ಮಹತ್ವವನ್ನು ಹೊಂದಿರುವನು ಹಾಗೂ ಯಾವಾಗಲೂ ಯಾವುದೇ ಬಹಮನಿ ಬಾದಶಾಹನು ಈ ಸತ್ಯವನ್ನು ನಿರಾಕರಿಸಿಲ್ಲ ಹಾಗೂ ಬೃಹತ್ ಸಾಮ್ರಾಜ್ಯವನ್ನು ಗಮನದಲ್ಲಿಟ್ಟುಕೊಂಡು ಈ ರಾಜನೊಂದಿಗೆ ಹೋರಾಡಲು ಮನಸ್ಸು ಮಾಡಿಲ್ಲ.

ಅಸದ್‌ಖಾನ್ ಲಾರಿಯ ಇನ್ನೊಂದು ಮಹತ್ವದ ಸಲಹೆ :

ಉಪರೋಕ್ತ ವಿವರಿಸಿದ ಸಲಹೆಗಳನ್ನು ಹೊರತುಪಡಿಸಿ, ಇನ್ನೊಂದು ಸಲಹೆಯನ್ನು ಅಸದ್‌ಖಾನ್ ಲಾರಿಯು ನೀಡಿದನು. ಏನೆಂದರೆ, ಈಗ ಎಲ್ಲ ಹಿತೈಷಿಗಳ ಇಚ್ಛೆ ಇದಾಗಿದೆ. ಬುರ್ಹಾನ್ ನಿಜಾಮಶಾಹ್ ಬಹರಿಯತ್ತ ಸ್ನೇಹಹಸ್ತ ಚಾಚಬೇಕು ಹಾಗೂ ಸಂಬಂಧಗಳನ್ನು ಸುಭದ್ರಗೊಳಿಸಬೇಕು. ಅದಕ್ಕಾಗಿ ವಿವಾಹ ಇತ್ಯಾದಿ ಪರಂಪರೆ ಮುಂದುವರಿಯಬೇಕು. ಅದರಿಂದ ಮನಸ್ಸಿನಲ್ಲಿ ಸೌಹಾರ್ದ ಉಂಟಾಗುವುದು. ಇದರ ನಂತರ ಸಂಯುಕ್ತವಾಗಿ ಒಗ್ಗೂಡಿ, ಕ್ಷೋಭೆಯ ಮೂಲವಾದ ಅಮೀರ್ ಖಾಸಿಂ ಬರೀದ್‌ನನ್ನು ಎದುರಿಸಬೇಕು ಹಾಗೂ ಆತನನ್ನು ಮಣ್ಣುಗೂಡಿಸಬೇಕು. ಏಕೆಂದರೆ ಮುದ್ಗಲ್ ಹಾಗೂ ರಾಯಚೂರ್ ಕೋಟೆಗಳನ್ನು ವಶಪಡಿಸಿಕೊಳ್ಳಲು ಸುಲಭವಾಗುವುದು. ಹೀಗೆ ಯಾವುದೇ ತೊಂದರೆ ಹಾಗೂ ಅಡತಡೆಯಿಲ್ಲದೇ ವೈರಿಗಳನ್ನು, ಮೋಸಗಾರರನ್ನು ಕೊನೆಗಾಣಿಸಬೇಕು. ಸಾರಾಂಶ ರೂಪದಲ್ಲಿ ಬಾದಶಾಹನು ಸಂಕಲ್ಪ ಮಾಡಿದನು. ಮುದ್ಗಲ್ ಹಾಗೂ ರಾಯಚೂರಿ ಕೋಟೆಗಳನ್ನು ಎಲ್ಲಿಯವರೆಗೆ ವಶಪಡಿಸಿಕೊಳ್ಳುವುದು ಸಾಧ್ಯವಿಲ್ಲವೋ ಅಲ್ಲಿಯವರೆಗೆ ಆತನು ಎಲ್ಲ ವಿಲಾಸೀ ಕೃತ್ಯ, ಮದ್ಯಪಾನ, ಇತ್ಯಾದಿಗಳಿಂದ ದೂರವಿರುವನು.

ಅಸದ್‌ಖಾನ್ ಲಾರಿಯ ಸಲಹೆಯನ್ನು ಪಾಲಿಸುವುದು :

ಈ ಆಕಸ್ಮಿಕ ಘಟನೆಯ ನಂತರ ಇಸ್ಮಾಯಿಲ್ ಆದಿಲ್‌ಷಾಹ್‌ನು ಅಸದ್‌ಖಾನ್ ಲಾರಿಯೊಂದಿಗೆ ಏನು ವಾಗ್ದಾನ ಮಾಡಿದ್ದನೋ ಅದನ್ನು ಚಾಚೂ ತಪ್ಪದೇ ಪಾಲಿಸಿದನು. ಹಾಗೂ ಮುದ್ಗಲ್ ಮತ್ತು ರಾಯಚೂರನ್ನು ವಶಕ್ಕೆ ತೆಗೆದುಕೊಳ್ಳುವವರೆಗೆ ಮದ್ಯವನ್ನು ಸ್ವೀಕರಿಸಲಿಲ್ಲ. ಆದರೆ ಸಾಯುವವರೆಗೆ ಅಷ್ಟೊಂದು ಮದ್ಯ ಎಂದಿಗೂ ಸ್ವೀಕರಿಸಿರಲಿಲ್ಲ. ಯಾವುದರಿಂದ ಆತನು ಅಮಲೇರಿ ಪ್ರಜ್ಞಾಹೀನನಾಗಬಹುದಾದಷ್ಟು.

ಆದಿಲ್ ಹಾಗೂ ನಿಜಾಮಶಾಹಿ ವಂಶಗಳಲ್ಲಿ ಸ್ನೇಹದ ಪ್ರಾರಂಭ :

ಇಸ್ಮಾಯಿಲ್ ಆದಿಲ್‌ಷಾಹ್‌ನು ಅಸದ್‌ಖಾನ್‌ನ ಅಭಿಪ್ರಾಯ ಹಾಗೂ ಸಲಹೆಯನ್ನು ಪಾಲಿಸುತ್ತ ನಿಜಾಮಷಾಹಿ ವಂಶದತ್ತ ಸ್ನೇಹಹಸ್ತ ಚಾಚಿದನು. ಈ ಪರಂಪರೆಯನ್ನು ಮುಂದುವರಿಸಲು ಸೈಯ್ಯದ್ ಅಹ್ಮದ್ ಹರ್ವಿಯವರನ್ನು ನೇಮಿಸಲಾಯಿತು. ಇವರು ಇರಾನಿನಲ್ಲಿ ಇದಕ್ಕಿಂತ ಮೊದಲು ರಾಯಭಾರಿಯಾಗಿ ಸೇವೆ ಸಲ್ಲಿಸಿದ್ದರು. ಸೈಯ್ಯದ್ ಅಹ್ಮದ್‌ಹರ್‌ವಿ ಹಾಗೂ ಶಾಹ ತಾಹೀರ್

ಮೊದಲಿನಿಂದಲೂ ಒಬ್ಬರಿಗೊಬ್ಬರು ಪರಿಚಿತರಿದ್ದರು. ಈ ಈರ್ವರಲ್ಲಿಯೂ ಬಹಳಷ್ಟು ಐಕ್ಯತೆ, ಸ್ನೇಹ ಸಂಬಂಧಗಳಿದ್ದವು. ಅದಕ್ಕಾಗಿ ಹರ್‌ವಿಯವರನ್ನು ಗೌರವದೊಂದಿಗೆ ಸ್ವಾಗತಿಸಲಾಯಿತು. ನಿಜಾಮಷಾಹಿಯ ಸಂಪ್ರದಾಯ ಹಾಗೂ ರೂಢಿಯಂತೆ ಸಮಸ್ತ ಆಡಳಿತಗಾರರೊಂದಿಗೆ ಸೈಯದ್ ಅಹ್ಮದ್ ಹರ್‌ವಿಯವರನ್ನು ಸ್ವಾಗತಿಸಲಾಯಿತು. ಹಾಗೂ ಈ ತೆರನಾಗಿ ಬುರ್ಹಾನುಲ್ ಮುಲ್ಕ ಹಾಗೂ ಸೈಯ್ಯದ್ ಅಹ್ಮದ್ ಹರ್‌ವಿಯವರ ಪರಿಚಯವನ್ನು ಉಳಿದ ಅಮೀರರಂತೆ ಮಾಡಲಾಯಿತು ಹಾಗೂ ಒಂದು ವಿಶೇಷ ಭೇಟಿಯಲ್ಲಿ ಈರ್ವರ ಮಾತುಕತೆ ನಡೆಯಿತು. ದೀರ್ಘಾವಧಿಯವರೆಗೆ ಈ ಮಾತುಕತೆ ಮುಂದುವರಿಯಿತು. ಕೊನೆಯಲ್ಲಿ ಷಾಹ್–ತಾಹೀರ್ ಹಾಗೂ ಸೈಯ್ಯದ್ ಅಹ್ಮದ್ ಹರ್‌ವಿ ಈರ್ವರ ಸೌಹಾರ್ದದ ಪ್ರಯತ್ನದಿಂದಾಗಿ ಸದಲಾಪುರವೆಂಬ ಸ್ಥಳದಲ್ಲಿ ಈರ್ವರೂ ಆಡಳಿತಗಾರರು ಒಬ್ಬರೊಬ್ಬರನ್ನು ಭೇಟಿ ಮಾಡಿದರು. ಈಗ ಸದಲಾಪುರ ನಗರವನ್ನು ಸೋಲಾಪುರ ಎಂಬ ಹೆಸರಿನಿಂದ ಕರೆಯಲಾಗುತ್ತದೆ. ಈ ಭೇಟಿಯಲ್ಲಿ ಈರ್ವರೂ ಪರಸ್ಪರ ಒಬ್ಬರಿಗೊಬ್ಬರು ಸ್ನೇಹಸಂಬಂಧವನ್ನು ಗಟ್ಟಿಗೊಳಿಸಿಕೊಂಡರು.

ಶಾಹ ತಾಹೀರ್‌ರ ಸ್ವಾಗತ :

ಹಿಜರಿ ಶಕೆ ೯೩೦ರಲ್ಲಿ ರಜಬ್‌ದ ನಾಲ್ಕನೆಯ ರಾತ್ರಿಯಲ್ಲಿ ಇಸ್ಮಾಯಿಲ್ ಆದಿಲ್‌ಶಾಹನ ಅರಮನೆಯಲ್ಲಿ ಶಾಹ ತಾಹೀರ್‌ರು ಆಗಮಿಸಿದರು. ಶಾಹ ತಾಹೀರ್‌ರ ಆಗಮನದಿಂದಾಗಿ ಅರಮನೆಯಲ್ಲಿ ಅಮೀರರ ಬಂದು ಹೋಗುವಿಕೆ ಹಾಗೂ ಅರಮನೆಯ ಅಲಂಕಾರ ಹಾಗೂ ಸಭೆಗೆ ಕಳೆ ಬಂದಿತು. ಇಸ್ಮಾಯಿಲ್ ಆದಿಲ್‌ಶಾಹನು ತನ್ನ ಹಿರಿಯ ಪುತ್ರನನ್ನು ಜೊತೆಗೆ ಕರೆದುಕೊಂಡು ಅರಮನೆಯಿಂದ ಹೊರಬಂದನು. ಹಾಗೂ ಸ್ವಲ್ಪ ದೂರದಲ್ಲಿಯೇ ಶಾಹತಾಹೀರ್‌ರನ್ನು ಹೃತ್ಪೂರ್ವಕವಾಗಿ ಈರ್ವರೂ ಸ್ವಾಗತಿಸಿದರು. ಇದರ ಹೊರತಾಗಿ ಅವರನ್ನು ಸ್ವಾಗತಿಸುವಲ್ಲಿ ಹಾಗೂ ಗೌರವ ನೀಡುವಲ್ಲಿ ಯಾವುದೇ ತೆರನಾದ ಕೊರತೆಯುಂಟು ಮಾಡಲಿಲ್ಲ. ಎಲ್ಲ ವಿಧವಾಗಿ ಅವರನ್ನು ಆದರಪೂರ್ವಕವಾಗಿ ಗೌರವಿಸಲಾಯಿತು. ಇಸ್ಮಾಯಿಲ್ ಆದಿಲ್‌ಶಾಹನು ಇಲ್ಲಿಯವರೆಗೆ ಹೇಳಿದನು. ಅವರು ಓರ್ವ ಫಕೀರನ ಮನೆಯಲ್ಲಿ ಖಲೀಫಾರನ್ನು ಅದು ಹೇಗೆ ಆತಿಥ್ಯ ಮಾಡಬಹುದು? ಆತನು ಬಹಳ ವಿನಮ್ರನಾಗಿ ಶಾಹ ತಾಹೀರ್‌ರಿಗೆ ಹೇಳಿದನು. ಆತನು ಈ ರೀತಿಯಲ್ಲಿ ಯೋಗ್ಯನಿಲ್ಲ ಇಂಥ ಅತಿಥಿಯನ್ನು ಒಳ್ಳೆಯ ರೀತಿಯಲ್ಲಿ ಆತಿಥ್ಯ ಮಾಡಬಹುದು. ಇದರಿಂದ ಪ್ರೇಮ, ಸ್ನೇಹದಲ್ಲಿ ವೃದ್ಧಿಯಾಗಬೇಕು. ಶಾ ತಾಹೀರ್‌ರು ಬಹಳೇ ಸಂತೋಷದಿಂದ ಬಾದಶಾಹನು ಮಾಡಿದ ಎಲ್ಲ ಉಪಚಾರಕ್ಕೆ ಬದಲಾಗಿ ಕೃತಜ್ಞತೆ ಸಲ್ಲಿಸಿದರು. ಇದರಿಂದ ಆತನಿಗೆ ಧೈರ್ಯ ಒದಗಿತು.

ವಿವಾಹ ಸಮಾರಂಭ :

ಈ ಭೇಟಿಯಲ್ಲಿ ವಿವಾಹದ ಕುರಿತು ಚರ್ಚೆ ನಡೆಯಿತು. ಇಸ್ಮಾಯಿಲ್

ಆದಿಲ್‌ಶಾಹನು ಮೊದಲಿನಿಂದಲೇ ಇದನ್ನು ಬಯಸುತ್ತಿದ್ದನು. ಅದಕ್ಕಾಗಿ ಆತನು ಶಾ ತಾಹೀರ್‌ರ ಮಾತನ್ನು ಒಪ್ಪಿಕೊಂಡನು. ಈ ತೆರನಾಗಿ ವಿವಾಹದ ಸಮಾರಂಭವು ಜರುಗಿತು. ಸಂತೋಷದ ಸಭೆ ಏರ್ಪಟ್ಟಿತು. ಯೂಸುಫ್ ಆದಿಲ್‌ಶಾಹನ ಪುತ್ರಿಯಾದ ಮರಿಯಮ್ ಸುಲ್ತಾನಳ ಮದುವೆಯನ್ನು ಬುರ್ಹಾನ್ ನಿಜಾಮಷಾಹ್ ಬೆಹ್ರಿಯೊಂದಿಗೆ ಮಾಡಲಾಯಿತು. ಎರಡೂ ಕಡೆಯಿಂದ ಪರಸ್ಪರರು ಶುಭಾಶಯಗಳನ್ನು, ಕೊಡುಗೆ ಕಾಣಿಕೆಗಳನ್ನು ವಿನಿಮಯ ಮಾಡಿಕೊಂಡರು. ಸ್ನೇಹ, ಪ್ರೇಮ ಹಾಗೂ ಸೌಹಾರ್ದದ ಸಂಬಂಧವನ್ನು ಇನ್ನೂ ಗಟ್ಟಿಗೊಳಿಸಿಕೊಳ್ಳಲಾಯಿತು. ಅದರ ನಂತರ ಈರ್ವರೂ ತಮ್ಮ ತಮ್ಮ ಪ್ರಾಂತ್ಯದೆಡೆಗೆ ಹೊರಟರು.

ವೈರತ್ವ ಪ್ರಾರಂಭ :

ಮದುವೆಯ ಷರತ್ತಿನಲ್ಲಿ ಇದೂ ಒಂದಾಗಿತ್ತು. ಏನೆಂದರೆ ಖ್ವಾಜಾ ಜಹಾನ ದಖನಿಯ ಸಹೋದರನಾದ, ರತನ್‌ಖಾನ್‌ನಿಂದ ಪಡೆದುಕೊಂಡ ಕಮಾಲ್‌ಖಾನ್ 'ಸಿರೆ ನೌಬತ್' (ಸೇನಾಧಿಪತಿ)ಯ ಐದೂವರೆ ಭಾಗ ಪ್ರಾಂತ್ಯ ಹಾಗೂ ಸೋಲಾಪುರದ ಪ್ರದೇಶವನ್ನು ಮರಿಯಮ್ ಸುಲ್ತಾನ್‌ಳ ವಿವಾಹದಲ್ಲಿ ಕೊಡುಗೆಯ ರೂಪದಲ್ಲಿ ನೀಡಲಾಯಿತು. ಆದರೆ ಇಸ್ಮಾಯಿಲ್ ಆದಿಲ್‌ಶಾಹನು ಈ ವಿಷಯದಲ್ಲಿ ನಿರ್ಲಕ್ಷ್ಯ ತೋರಿದನು. ಅದರ ಪರಿಣಾಮವಿದಾಯಿತು. ಯಾವುದರಿಂದ ಸ್ನೇಹ, ಸೌಹಾರ್ದ, ಒಗ್ಗಟ್ಟನ್ನು ವಿವಾಹದ ವೇಳೆಯಲ್ಲಿ ಪ್ರದರ್ಶಿಸಿದ್ದರೋ ಅದು ನಿಷ್ಪ್ರಯೋಜಕವಾಯಿತು ಹಾಗೂ ಈ ಸಂಬಂಧದಲ್ಲಿ ಎರಡೂ ವಂಶಗಳ ನಡುವೆ ವೈರತ್ವವುಂಟಾಯಿತು. ಅದು ಮೊದಲಿಗಿಂತಲೂ ಇನ್ನೂ ಅಧಿಕವಾಯಿತು.

ಇಸ್ಮಾಯಿಲ್ ಆದಿಲ್‌ಷಾಹ್‌ನ ಮೇಲೆ ದಾಳಿ :

ಒಂದೇ ವರ್ಷದ ನಂತರ ಬುರ್ಹಾನ್ ನಿಜಾಮಶಾಹನು, ಬರಾರ್‌ದ ದೊರೆಯಾದ ಅಲ್ಲಾವುದ್ದೀನ್ ಇಮಾದ್‌ಶಾಹ್‌ನ ಸಹಾಯವನ್ನು ಪಡೆದು, ಇಸ್ಮಾಯಿಲ್ ಆದಿಲ್‌ಶಾಹನ ಮೇಲೆ ದಾಳಿ ಮಾಡಿದನು. ಬರಾರ್‌ದ ದೊರೆಯ ಸಹಾಯವು ವೈರಿಯನ್ನು ಸೋಲಾಪುರ ಹಾಗೂ ಕೋಟೆಯನ್ನು ವಶಪಡಿಸಿಕೊಳ್ಳುವಲ್ಲಿ ಸಫಲವಾಯಿತು. ಅದರ ಜೊತೆಗೆಯೇ ಓರ್ವ ದೂತನ ಮುಖಾಂತರ ಅಮೀರ್ ಖಾಸಿಂ ಬರೀದ್‌ನ ಸಹಾಯವನ್ನು ಪಡೆಯಲಾಯಿತು. ಇಸ್ಮಾಯಿಲ್ ಆದಿಲ್‌ಷಾಹ್‌ನಿಗೆ ಇದರ ಅರಿವಿತ್ತು. ಈಗ ಎಲ್ಲ ವೈರಿಗಳ ಸಂಖ್ಯೆಯು ನಾಲ್ವತ್ತು ಸಾವಿರ ಸವಾರರನ್ನು ಹೊಂದಿದೆ. ಆದರೆ ಆತನು ಸ್ವತಃ ಅಲ್ಲಾಹುವಿಗೆ ಅರ್ಪಿಸಿಕೊಂಡು ಹನ್ನೆರಡು ಸಾವಿರ ಸಮರ್ಥ ಹಾಗೂ ಶೂರ ಸೈನಿಕರನ್ನು ತೆಗೆದುಕೊಂಡು ವೈರಿಗಳ ಮೇಲೆ ದಾಳಿಗಿಳಿದನು. ಆದರೂ ಯುದ್ಧ ಪ್ರಾರಂಭಗೊಳ್ಳಲಿಲ್ಲ. ಏಕೆಂದರೆ ಇಸ್ಮಾಯಿಲ್ ಆದಿಲ್‌ಶಾಹನು ವೈರಿಯಿಂದ ಎರಡು ಕೋಸ್ ದೂರದಲ್ಲಿ ಬಿಡಾರ ಹೂಡಿದ್ದನು. ಯುದ್ಧವು ನಲ್ವತ್ತು ದಿನಗಳವರೆಗೆ ಮುಂದೂಡಲ್ಪಟ್ಟಿತು. ಆದರೆ ನಲ್ವತ್ತೊಂದನೇ ದಿನ ವೈರಿಗಳ ಸಹಾಯಕ್ಕಾಗಿ

ಅಮೀರ್‌ಖಾಸಿಂ ಬರೀದ್‌ನೂ ಸಹ ಜೊತೆಗೂಡಿದನು. ಈಗ ಮುಖಾಮುಖಿಯಾಗಲು ಬುರ್ಹಾನ್ ನಿಜಾಮಶಾಹನು ಸಮಸ್ತ ಸೈನ್ಯವನ್ನು ಸಜ್ಜುಗೊಳಿಸಿದನು. ಸೈನ್ಯದ ನಡುವೆ ತನ್ನನ್ನು ತಾನು ಸ್ಥಾಪಿತಗೊಳಿಸಿಕೊಂಡನು. ಅಮೀರ್‌ಕಾಸೀಮ ಬರೀದ್‌ನಿಗೆ ಎಡಭಾಗದ ಸೈನ್ಯವನ್ನು ಹಾಗೂ ಅಲ್ಲಾವುದ್ದೀನ್ ಇಮಾದ್‌ಶಾಹನಿಗೆ ಬಲಭಾಗದ ಸೈನ್ಯವನ್ನು ಅವರ ವಶಕ್ಕೆ ನೀಡಿದನು.

ಇಸ್ಮಾಯಿಲ್ ಆದಿಲ್‌ಶಾಹನ ಯುದ್ಧದ ಸಿದ್ಧತೆ ಹಾಗೂ ಸಜ್ಜುಗೊಳ್ಳುವಿಕೆ :

ಇಸ್ಮಾಯಿಲ್ ಆದಿಲ್‌ಶಾಹನೂ ಯುದ್ಧಭೂಮಿಯತ್ತ ಹೊರಟನು. ಆತನೂ ಸಹ ತನ್ನನ್ನು ತಾನು ಸೈನ್ಯದ ಮಧ್ಯೆ ಸ್ಥಿತಗೊಳಿಸಿಕೊಂಡನು. ಅಲ್ಲಾವುದ್ದೀನ್ ಇಮಾದ್‌ಶಾಹನನ್ನು ಎದುರಿಸಲು ಅಸದ್‌ಖಾನ್ ಲಾರಿಯನ್ನು ನೇಮಿಸಿದನು ಹಾಗೂ ಅಮೀರ್‌ಖಾಸಿಂ ಬರೀದ್‌ನ ಎದುರಾಗಿ ತರಸೋ ಬಹಾದ್ದೂರ್‌ನನ್ನು ಇದರ ಹೊರತಾಗಿ ಎಡ ಭಾಗದ ಸೈನ್ಯದ ಮೇಲೆ ದಾಳಿಗೈಯ್ಯಲು ಮುಸ್ತಫಾಖಾನ ಜೊತೆಗೆ ಒಂದು ಸಾವಿರ ಸೈನಿಕರು ಹಾಗೂ ಬಲಭಾಗದ ಸೈನ್ಯದ ಮೇಲೆ ದಾಳಿ ಮಾಡಲು ಖುಷ್‌ಕಲಾಯಿ ಆಖಾನ ಜೊತೆಗೆ ಒಂದು ಸಾವಿರ ಈಟಿ ಪ್ರವೀಣರನ್ನು ನೇಮಿಸಿದನು. ಇದನ್ನು ಈ ಕಾರಣದಿಂದಾಗಿ ಸಜ್ಜುಗೊಳಿಸಿದನು. ವೈರಿಗಳ ಮುತ್ತಿಗೆಯಾಗುವ ಮುಂಚೆ ಈ ಸ್ಥಳಗಳನ್ನು ರಕ್ಷಿಸಿಕೊಳ್ಳಬೇಕು.

ಯುದ್ಧ :

ಇದರ ನಂತರ ಎರಡೂ ಸೈನ್ಯಗಳು ಯುದ್ಧವನ್ನು ಪ್ರಾರಂಭಿಸಿದವು. ಈಟಿ ಪ್ರವೀಣರು ಯುದ್ಧಭೂಮಿಯನ್ನು ಪ್ರಳಯ ಭೂಮಿಯನ್ನಾಗಿಸಿದರು. ನೋಡ ನೋಡುತ್ತಲೆ ರಕ್ತದ ನದಿ ಹರಿಯ ತೊಡಗಿದವು. ಅಮೀರ್‌ಖಾಸಿಂ ಬರೀದ್‌ನು ತರಸೋ ಬಹಾದ್ದೂರ್‌ನನ್ನು ಹಾಗೂ ಅಲ್ಲಾವುದ್ದೀನ್ ಇಮಾದ್‌ಷಾಹ್‌ನು ಅಸದ್‌ಖಾನ್ ಲಾರಿಯನ್ನು ಎದುರಿಸದಾದರು. ಈರ್ವರಲ್ಲಿ ಅಮೀರ್ ಖಾಸಿಂ ಬರೀದನು ಹಿಂದದ ಕಡೆಗೆ ಹಾಗೂ ಅಲ್ಲಾವುದ್ದೀನ್ ಇಮಾದ್‌ಷಾಹ್‌ನು ಬರಾರ್‌ದ ಕಡೆಗೆ ಹೊರಟು ಹೋದರು. ಈ ಕಡೆ ಬುರ್ಹಾನ್ ನಿಜಾಮಷಾಹ್ ಹಾಗೂ ಇಸ್ಮಾಯಿಲ್ ಆದಿಲ್‌ಷಾಹ್‌ರ ನಡುವೆ ಯುದ್ಧವು ಜಾರಿಯಲ್ಲಿತ್ತು. ಆಗ ಬುಷ್‌ಕಲಾಯಿಆಖಾ ಹಾಗೂ ಮುಸ್ತಫಾ ಆಖಾರು ಮುನ್ನುಗ್ಗಲು ಪ್ರಾರಂಭಿಸಿದರು. ಇತರ ಈಟಿ ಪ್ರವೀಣರ ಜೊತೆ ನಿಜಾಮ್‌ಷಾಹ್ ಬೆಹರಿ ಹಾಗೂ ಆತನ ಜೊತೆಗಾರರ ಮೇಲೆ ಆಕ್ರಮಣ ಮಾಡಿದರು. ನಿಜಾಮಷಾಹ್ ಬೆಹರಿಯು ದಿಕ್ಕೆಟ್ಟನು ಹಾಗೂ ಆತನು ಸೈನಿಕರನ್ನು ಬಿಟ್ಟು ರಣಭೂಮಿಯಿಂದ ಪರಾರಿಯಾದನು. ಅಸದ್‌ಖಾನ್ ಲಾರಿಯು ಆತನನ್ನು ಹಿಂಬಾಲಿಸುತ್ತಿದ್ದನು. ಆಗ ನಿಜಾಮುಷಾಹಿಯ ಧ್ವಜದ ಮೇಲೆ ಇಸ್ಮಾಯಿಲ್ ಆದಿಲ್‌ಷಾಹ್‌ನ ವಶ ಸ್ಥಾಪಿಸಲಾಯಿತು. ಅದರ ಹೊರತಾಗಿ ನಿಜಾಮುಷಾಹಿ ಸೈನ್ಯದ

ಬಹಳಷ್ಟು ಯುದ್ಧ ಸಾಮಗ್ರಿ ಹಾಗೂ ಶಸ್ತ್ರಾಸ್ತ್ರಗಳು ಜೊತೆಗೆ ಧನಕನಕವು ಆದಿಲ್‌ಷಾಹಿ ಸೈನಿಕರ ಕೈ ಸೇರಿತು.

ಇಸ್ಮಾಯಿಲ್ ಆದಿಲ್‌ಷಾಹ್‌ನ ವಿಜಯದ ಸಂಭ್ರಮದ ಸಮಾರಂಭ :

ಇತಿಹಾಸದಲ್ಲಿ ಆದಿಲ್‌ಷಾಹಿ ಹಾಗೂ ನಿಜಾಮಷಾಹಿ ವಂಶಗಳ ನಡುವೆ ಜರುಗಿದ ಯುದ್ಧವು ಇದುವೇ ಮೊದಲಿನದಾಗಿತ್ತು. ಈ ಯುದ್ಧದ ಮೂಲವು ಸೋಲಾಪೂರ ಹಾಗೂ ಐದೂವರೆ ಪ್ರಾಂತ್ಯಗಳು ಆಗಿದ್ದವು. ವೈರಿಯನ್ನು ವಿನಾಶಗೊಳಿಸಿದ ಬಳಿಕ ಆದಿಲ್‌ಶಾಹನು ವಿಜಾಪುರದತ್ತ ಹೊರಟನು. ಇಲ್ಲಿ ತಲುಪಿ ಆತನು ಒಂದು ಸಂಭ್ರಮದ ಸಮಾರಂಭವನ್ನು ಏರ್ಪಡಿಸಿದನು. ಈ ಸಮಾರಂಭವು ಸುಮಾರು ಮೂವತ್ತು ದಿವಸಗಳವರೆಗೆ ವಿಜಯದ ಸಂಭ್ರಮವಾಗಿ ಆಚರಿಸಲ್ಪಟ್ಟಿತ್ತು. ಅದರ ನಂತರ ಬೇರೆ ಬೇರೆಯ ಅಮೀರರು ಹಾಗೂ ಗೌರವಾನ್ವಿತ ಆಡಳಿತಗಾರರನ್ನು ಉತ್ಕೃಷ್ಟವಾದ ಉಡುಗೆ ತೊಡುಗೆಗಳನ್ನು, ಬಹುಮಾನ, ಪುರಸ್ಕಾರ ಅತ್ಯುತ್ತಮ ಸೊಂಟಪಟ್ಟಿ ಹಾಗೂ ಸದೃಢ ಕುದುರೆಗಳನ್ನು ಶೌರ್ಯದ ಸಂಕೇತವಾಗಿ ನೀಡಲಾಯಿತು. ಅದರ ಹೊರತಾಗಿ ಅಸದ್‌ಖಾನ್ ಲಾರಿಯನ್ನು ಐದು ಬಲಾಢ್ಯ ಹಾಗೂ ಆರು ಚಿಕ್ಕ ನಿಜಾಮಷಾಹೀ ಆನೆಗಳನ್ನು ಕೊಟ್ಟರು. ಉಳಿದ ಎಲ್ಲ ಸೈನಿಕರನ್ನು ಅವರ ಹುದ್ದೆಗನುಸರಿಸಿ ಸಂಬಳವನ್ನು ವೃದ್ಧಿಗೊಳಿಸಿ ಅವರನ್ನು ಉತ್ತೇಜಿಸಲಾಯಿತು. ಹಾಗೂ ಸೈನ್ಯದಲ್ಲಿ ಜಪ್ತಿಗೊಳಿಸಿಕೊಂಡ ಸಂಪತ್ತನ್ನು ಹಾಗೂ ಸಂಬಳವನ್ನು ವಿತರಿಸಲು ಆಜ್ಞೆ ನೀಡಿದನು.

ನಿಜಾಮಶಾಹಿ ಹಾಗೂ ಆದಿಲ್‌ಶಾಹಿಗಳ ನಡುವೆ ಎರಡನೆಯ ಯುದ್ಧ :

ಬುರ್ಹಾನ್ ನಿಜಾಮಶಾಹನು ಸ್ವಾಭಿಮಾನಿ ದೊರೆಯಾಗಿದ್ದನು. ಹಿಜರಿ ಶಕೆ ೯೨೫ರಲ್ಲಿ ಅಲ್ಲಾವುದ್ದೀನ್ ಇಮಾದ್‌ಶಾಹನೊಂದಿಗೆ ಯುದ್ಧಗೆದ್ದು ಒಂದು ವರ್ಷದ ನಂತರವೇ ಇಸ್ಮಾಯಿಲ್ ಆದಿಲ್‌ಶಾಹನೊಂದಿಗೆ ಪ್ರತಿಕಾರ ತೆಗೆದುಕೊಳ್ಳಲು ವಿಜಾಪುರದತ್ತ ಹೊರಟನು ಹಾಗೂ ಅಮೀರ್ ಖಾಸಿಂ ಬರೀದ್‌ನನ್ನು ಉತ್ತೇಜಿಸಿದನು. ಮತ್ತು ಆತನನ್ನು ತನ್ನ ಸೈನ್ಯದೊಂದಿಗೆ ಸೇರ್ಪಡೆಗೊಳಿಸಿಕೊಂಡನು. ಇಸ್ಮಾಯಿಲ್ ಆದಿಲ್‌ಷಾಹ್‌ನೂ ಸಹ ಸುಮ್ಮನೆ ಕೂಡ್ರಲಿಲ್ಲ. ಆತನೂ ಸಹ ವೈರಿಯ ಆಕ್ರಮಣಕ್ಕೆ ತಕ್ಕ ಉತ್ತರ ನೀಡಿದನು. ಸುಮಾರು ಮೂರು ಕೋಸು ನಡೆದು ಎರಡೂ ಸೈನ್ಯಗಳು ಮುಖಾಮುಖಿಯಾದವು. ಈ ತೆರನಾಗಿ ಘೋರ ರೂಪದ ಯುದ್ಧ ನಡೆಯಿತು. ದುರಾದೃಷ್ಟದಿಂದ ಬುರ್ಹಾನ್ ನಿಜಾಮಶಾಹನು ವಿಫಲನಾದನು. ಹಾಗೂ ಮತ್ತೆ ಸೋಲಿನ ಮುಖ ಕಂಡು ಪರಾರಿಯಾದನು. ಖ್ವಾಜಾ ಜಹಾನ ದಖನಿಯನ್ನು, ಹಲವಾರು ನಿಜಾಮಷಾಹೀ ಅಮೀರರ ಜೊತೆಗೆ ಬಂಧಿಸಲಾಯಿತು. ವೈರಿಯನ್ನು ಹಿಂಬಾಲಿಸಲು ಅಸದ್‌ಖಾನ್ ಲಾರಿಯು ಪರಿಂದಾ ಕೋಟೆಯವರೆಗೆ ಹೋದನು ಹಾಗೂ ವೈರಿಯ ಇಪ್ಪತ್ತು ಆನೆಗಳನ್ನು ವಶಕ್ಕೆ ತೆಗೆದುಕೊಂಡನು. ಈ ಆನೆಗಳಲ್ಲಿ

ಒಂದು ಅಂಬಾರಿ ಹೊತ್ತ ಆನೆಯಿತ್ತು. ಅದರ ಮೇಲೆ ನಿಜಾಮಶಾಹನು ಸವಾರಿ ಮಾಡುತ್ತಿದ್ದನು.

ಇಸ್ಮಾಯಿಲ್ ಆದಿಲ್‌ಶಾಹ ಹಾಗೂ ಬರಾರ್‌ದ ದೊರೆಯ ಒಗ್ಗಟ್ಟು :

ಎಷ್ಟು ಆನೆಗಳು ವೈರಿಯಿಂದ ದೊರಕಿದ್ದವೋ ಅವೆಲ್ಲವುಗಳನ್ನು ಇಸ್ಮಾಯಿಲ್ ಆದಿಲ್‌ಶಾಹನು ಅಸದ್‌ಖಾನ್ ಲಾರಿಗೆ ನೀಡಿದನು. ಕೇವಲ ಒಂದು ಆನೆ ಯಾವುದರ ಮೇಲೆ ಅಂಬಾರಿ ಇತ್ತೋ ಅದನ್ನು ಮಾತ್ರ ತನ್ನ ಬಳಿಗೆ ಇರಿಸಿಕೊಂಡನು. ಅದರ ಹೆಸರು ಅಲ್ಲಾಬಕ್ಷ ಎಂದಿತ್ತು. ಇಸ್ಮಾಯಿಲ್ ಆದಿಲ್‌ಶಾಹನು ಅಸದ್‌ಖಾನ್ ಲಾರಿಗೆ 'ಫರ್‌ಜಂದ್' ಎಂಬ ಬಿರುದನ್ನು ನೀಡಿದನು. ಒಂದು ವರ್ಷವೂ ಗತಿಸಿರಲಿಲ್ಲ. ಇಸ್ಮಾಯಿಲ್ ಆದಿಲ್‌ಷಾಹ್‌ನು ಬರಾರ್‌ದ ದೊರೆಯೊಂದಿಗೆ 'ಅದರ್‌ಜಾನ್' ನಗರದಲ್ಲಿ ಅಸದ್‌ಖಾನ್ ಲಾರಿಯ ಹೇಳಿಕೆಯನ್ನನುಸರಿಸಿ ಭೇಟಿಯಾದನು. ಹಾಗೂ ತನ್ನ ಚಿಕ್ಕ ಸಹೋದರಿಯಾದ ಖುತೇಜಾಳ ವಿವಾಹವನ್ನು ಬಿರಾರ್‌ದ ದೊರೆಯಾದ ಅಲ್ಲಾವುದ್ದೀನ್ ಇಮಾದ್‌ಷಾಹ್‌ನೊಂದಿಗೆ ಜರುಗಿಸಿದನು. ಅದರ ನಂತರ ಇಸ್ಮಾಯಿಲ್ ಆದಿಲ್‌ಶಾಹ ಹಾಗೂ ಅಲ್ಲಾವುದ್ದೀನ್ ಇಮಾದ್‌ಶಾಹರು ಸ್ನೇಹ ಸಂಬಂಧ, ಒಗ್ಗಟ್ಟು, ಸೌಹಾರ್ದದ ಒಪ್ಪಂದವನ್ನು ಮಾಡಿಕೊಂಡರು ಹಾಗೂ ಈರ್ವರೂ ತಮ್ಮ ತಮ್ಮ ಪ್ರಾಂತ್ಯದೆಡೆಗೆ ನಡೆದರು.

ಬುರ್ಹಾನ್ ನಿಜಾಮಶಾಹನ ಮೇಲೆ ದಾಳಿ ಹಾಗೂ ಆದಿಲ್‌ಶಾಹಿಯಿಂದ ಸಹಾಯ:

ಮರುವರ್ಷ ಅಂದರೆ ಹಿಜರಿ ಶಕೆ ೯೩೫ರಲ್ಲಿ ಬುರ್ಹಾನ್ ನಿಜಾಮ್‌ಶಾಹನ ಮೇಲೆ ಬಹಾದ್ದೂರ್‌ಶಾಹ ಗುಜರಾತಿಯು ದಾಳಿ ಮಾಡಿದನು. ಬುರ್ಹಾನ್ ನಿಜಾಮಶಾಹನು ಇಸ್ಮಾಯಿಲ್ ಆದಿಲ್‌ಷಾಹ್‌ನಿಂದ ಸಹಾಯ ಯಾಚಿಸಿದನು ಹಾಗೂ ಅದು ಮಂಜೂರಾಯಿತು. ಇಸ್ಮಾಯಿಲ್ ಆದಿಲ್‌ಷಾಹ್‌ನ ಆರು ಸಾವಿರ ಸೈನಿಕರು ಹಾಗೂ ಹತ್ತು ಲಕ್ಷ ಹುನ್ನ ಅಮೀರ್‌ಖಾಸಿಂ ಬರೀದ್‌ನ ಮೇಲ್ವಿಚಾರಣೆಯಲ್ಲಿ ನಿಜಾಮನ ಸಹಾಯಕ್ಕಾಗಿ ತಲುಪಿದವು. ಬಹಾದೂರ್‌ಶಾಹ ಗುಜರಾತಿಯು ಹೆದರಿಕೊಂಡು ಓಡಿ ಹೋದನು.

ಅಮೀರ್‌ಖಾಸಿಂ ಬರೀದ್‌ನ ಸಂಚು :

ಅಮೀರ್‌ಖಾಸಿಂ ಬರೀದ್‌ನು ಆದಿಲ್‌ಶಾಹೀ ಸೈನ್ಯದ ಸಹಾಯದೊಂದಿಗೆ ಬಹಾದೂರ್‌ಶಾಹನನ್ನು ಎದುರಿಸುವಾಗ ಈ ಸಂಚನ್ನು ಹೂಡಿದನು. ಏನೆಂದರೆ, ಒಂದು ವೇಳೆ ವಿಜಾಪುರವನ್ನು ತಲುಪಿ ಆದಿಲ್‌ಶಾಹೀ ಸೈನ್ಯವು ತನ್ನ ದೊರೆಯಾದ ಇಸ್ಮಾಯಿಲ್ ಆದಿಲ್‌ಶಾಹನನ್ನು ಬಂಧಿಸಿದರೆ ಆತನ ಪ್ರಾಂತ್ಯವನ್ನು ಎಲ್ಲರೂ ಸಮನಾಗಿ ಹಂಚಿಕೊಳ್ಳುವುದು. ಆದಿಲ್‌ಶಾಹೀ ಸೈನ್ಯವು ವಿಜಾಪುರಕ್ಕೆ ತಲುಪಿ ಈ ಸಂಚಿನ ಸುದ್ದಿಯನ್ನು ಇಸ್ಮಾಯಿಲ್ ಆದಿಲ್‌ಶಾಹನಿಗೆ ತಲುಪಿಸಿತು ಹಾಗೂ ಅಮೀರ್‌ಖಾಸಿಂ

ಬರೀದ್‌ನ ಒಳಸಂಚನ್ನು ಹೊರಗೆಡುವಿತು. ಇಸ್ಮಾಯಿಲ್ ಆದಿಲ್‌ಶಾಹನು ಬಹಳೇ ಕೋಪೋದ್ರಿಕ್ತನಾದನು ಹಾಗೂ ಆತನು ದೃಢಸಂಕಲ್ಪಗೈದನು. ಏನೆಂದರೆ, ಆತನು ಅಮೀರ್ ಖಾಸಿಂ ಬರೀದ್‌ನೊಂದಿಗೆ ಕಠಿಣ ಕ್ರಮ ತೆಗೆದುಕೊಂಡು ಆತನಿಗೆ ಕಠಿಣ ಶಿಕ್ಷೆ ನೀಡುವುದು.

ಇಸ್ಮಾಯಿಲ್ ಆದಿಲ್‌ಶಾಹ ಪ್ರತಿಕಾರದ ಕ್ರಮ :

ಇಸ್ಮಾಯಿಲ್ ಆದಿಲ್‌ಶಾಹನು ಹಿಜರಿ ಶಕೆ ೯೩೭ರಲ್ಲಿ ಓರ್ವ ಅನುಭವಿ ದೂತನೊಂದಿಗೆ ಬುರ್ಹಾನ್ ನಿಜಾಮ್‌ಶಾಹನಿಗೆ ಸಮಸ್ತ ಸಂಗತಿಗಳ ವಿವರವನ್ನು ತಿಳಿಸಿದನು ಹಾಗೂ ಅಮೀರ್ ಬರೀದ್‌ನ ಒಳಸಂಚನ್ನು ಹಾಗೂ ಆತನ ಅಕ್ರಮ ನಡುವಳಿಕೆಯ ಕುರಿತು ಕೋಪ ಪ್ರದರ್ಶಿಸಿದನು. ಆತನು ನೇರವಾಗಿ ಬುರ್ಹಾನ್ ನಿಜಾಮಶಾಹನಿಗೆ ತಿಳಿಸಿದನು. ಏನೆಂದರೆ, ಅಮೀರ್ ಖಾಸಿಂ ಬರೀದ್‌ನ ಅವಿಧೇಯತೆಯು ಮಿತಿಮೀರಿದೆ ಹಾಗೂ ಹಲವಾರು ದೊರೆಗಳ ಮತ್ತು ಸುಲ್ತಾನ್ ಕುಲಿ ಕುತುಬ್‌ಶಾಹನಿಂದ ಸಹಾಯ ಪಡೆದು ಆದಿಲ್‌ಶಾಹೀ ಸಾಮ್ರಾಜ್ಯಕ್ಕೆ ಹಾನಿಯನ್ನುಂಟು ಮಾಡುತ್ತಿರುವನು. ಆದರೆ ಇದೆಲ್ಲ ಹೊರತುಪಡಿಸಿ ಆದಿಲ್‌ಷಾಹೀ ವಂಶವು ಯಾವಾಗಲೂ ಆತನನ್ನು ಕ್ಷಮಿಸುತ್ತಿದೆ ಹಾಗೂ ಆತನ ತಪ್ಪುಗಳನ್ನು ನಿರ್ಲಕ್ಷಿಸುತ್ತಾ ಬಂದಿದೆ. ಇಸ್ಮಾಯಿಲ್ ಆದಿಲ್‌ಶಾಹನು ಇದನ್ನು ಸಹ ನಿಜಾಮಶಾಹನಿಗೆ ತಿಳಿಸಿದನು. ಏನೆಂದರೆ, ಆತನು ಈ ಸಲ ದೃಢಸಂಕಲ್ಪ ಗೈದಿರುವನು. ಅಮೀರ್ ಖಾಸಿಂ ಬರೀದ್‌ನ ದುರ್ವರ್ತನೆಗಳನ್ನು ಸಂಪೂರ್ಣವಾಗಿ ಕೊನೆಗಾಣಿಸುವದು ಹಾಗೂ ಆತನಿಗೆ ಇಂಥ ಕಠಿಣ ಶಿಕ್ಷೆಯನ್ನು ನೀಡುವದು. ಅದರಿಂದ ಮುಂದೆ ಆತನು ಯಾವುದೇ ತಪ್ಪನ್ನು ಮಾಡದಂತಿರಬೇಕು. ನೀಚ, ಮೋಸಗಾರ ಹಾಗೂ ವಂಚಕರೊಂದಿಗೆ ಸ್ನೇಹ ತೋರಿಸುವದು ಬುದ್ಧಿವಂತಿಕೆಯ ಲಕ್ಷಣವಲ್ಲ. ಒಂದು ವೇಳೆ ಬುರ್ಹಾನ್ ನಿಜಾಮಶಾಹನು ಈ ಅಭಿಪ್ರಾಯವನ್ನು ಒಪ್ಪಿದರೆ ಅಮೀರ್ ಖಾಸಿಂ ಬರೀದ್‌ನ ದುರ್ವತನೆಯ ಪರಿಣಾಮ ಅವನು ಅನುಭವಿಸುವಂತಾಗಲಿ.

ಬುರ್ಹಾನ್ ನಿಜಾಮ್‌ಶಾಹನ ಒಪ್ಪಿಗೆ :

ಇಸ್ಮಾಯಿಲ್ ಆದಿಲ್‌ಶಾಹನು ಬಹಾದ್ದೂರ್‌ಶಾಹ ಗುಜರಾತಿಯ ದಾಳಿಯ ವೇಳೆಗೆ ನಿಜಾಮಶಾಹನ ಕೋರಿಕೆಯ ಮೇರೆಗೆ ಯಾವ ಸಹಾಯವನ್ನು ಮಾಡಿದ್ದನೋ ಅದು ಬುರ್ಹಾನ್ ನಿಜಾಮಶಾಹನಿಗೆ ಆದಿಲ್‌ಶಾಹನ ಕೃತಜ್ಞನನ್ನಾಗಿಸಲು ಕಾರಣವಾಗಿತ್ತು. ಎರಡನೆಯದೆಂದರೆ ಬಹಾದ್ದೂರ್ ಶಾಹ ಗುಜರಾತಿಯ ದಾಳಿಯ ಭಯವು ಇನ್ನೂ ಮುಗಿದಿರಲಿಲ್ಲ. ಆತನ ಕಡೆಯಿಂದ ನಿಜಾಮ್‌ಶಾಹನಿಗೆ ನೆಮ್ಮದಿಯಿರಲಿಲ್ಲ. ಅದಕ್ಕಾಗಿ ಬುರ್ಹಾನ್ ನಿಜಾಮಶಾಹನು ಇಸ್ಮಾಯಿಲ್ ಆದಿಲ್‌ಶಾಹನ ಅಭಿಪ್ರಾಯವನ್ನು ಪೂರ್ಣರೂಪದಲ್ಲಿ ಒಪ್ಪಿಕೊಂಡನು. ಹಾಗೂ

ಸಹಮತ ತೋರಿದನು ಮತ್ತು ಆತನು ದೂತನೊಂದಿಗೆ ಹೀಗೆ ಹೇಳಿದನು. ಏನೆಂದರೆ, ಇಸ್ಮಾಯಿಲ್ ಆದಿಲ್‌ಶಾಹನನ್ನು ಮೆಚ್ಚಿಸಲು ಏನು ಮಾಡಲು ಸಾಧ್ಯವೋ ಅದೆಲ್ಲವನ್ನೂ ಮಾಡಲು ಸಿದ್ಧನಿರುವನು. ದೂತನಿಗೆ ಈ ಮಾತು ಕೇಳಿ ಮಹದಾನಂದವಾಯಿತು. ಅದರ ನಂತರ ದೂತನನ್ನು ಬಹಳೇ ಗೌರವದೊಂದಿಗೆ ಮರಳಿ ಕಳುಹಿಸಲಾಯಿತು.

ಅಮೀರ್ ಖಾಸಿಂ ಬರೀದ್‌ನ ಮೇಲೆ ದಾಳಿ :

ಸಮಯದ ಬೇಡಿಕೆಯನ್ನು ಅನುಸರಿಸಿ ಇಸ್ಮಾಯಿಲ್ ಆದಿಲ್‌ಶಾಹನು ಹನ್ನೆರಡು ಸಾವಿರ ಶೂರ ಹಾಗೂ ನಿರ್ಭಯಿ ಸೈನಿಕರನ್ನು ಜೊತೆಗೆ ತೆಗೆದುಕೊಂಡು ಅಹ್ಮದಾಬಾದ್ ಬೀದರ್‌ನತ್ತ ಹೊರಟನು. ಅಮೀರ್ ಖಾಸಿಂ ಬರೀದ್‌ನು ಸ್ವತಃ ತನ್ನ ವೃದ್ಧಾಪ್ಯ ಹಾಗೂ ದೃಷ್ಟಿದೋಷದಿಂದಾಗಿ ಬೇರೆಡೆಗೆ ಹೊರಟು ಹೋದನು. ಆದರೆ ಮಂತ್ರಿಯಾದ ತಿಮ್ಮರಾಜ ಬಹಮನಿಯ ಒಪ್ಪಿಗೆಯಂತೆ ತನ್ನ ಹಿರಿಯ ಪುತ್ರನಾದ ಅಲೀ ಬರೀದ್ ಹಾಗೂ ಇನ್ನೋರ್ವ ಪುತ್ರರನ್ನು ಕೋಟೆಯ ರಕ್ಷಕರಾಗಿಸಿದನು. ಅಹ್ಮದಾಬಾದ್ ಬೀದರ್‌ನ್ನು ತಲುಪಿದ. ತಕ್ಷಣ ಇಸ್ಮಾಯಿಲ್ ಆದಿಲ್‌ಷಾಹ್‌ನು ಕೋಟೆಯನ್ನು ಮುತ್ತಿಗೆ ಹಾಕಿ ವಶಪಡಿಸಿಕೊಳ್ಳಲು ಯತ್ನಿಸಿದನು. ಈಗ ಇಸ್ಮಾಯಿಲ್ ಆದಿಲ್‌ಷಾಹ್‌ನು ಕೋಟೆಯನ್ನು ಪ್ರವೇಶಿಸಲು, ಯಾವ ತೆರನಾಗಿ ಹೋಗಬೇಕೆಂದು ಯುಕ್ತಿಯನ್ನು ಮಾಡಿದನು ಹಾಗೂ ಈ ವಿಧವಾಗಿ ಒಳಹೋಗಲು ಯೋಜಿಸಲಾಯಿತು.

ಅಮೀರ್ ಖಾಸಿಂ ಬರೀದ್‌ನ ಯುದ್ಧ ಯೋಜನೆ :

ಇದು ಆ ಸಮಯವಾಗಿತ್ತು. ಯಾವಾಗ ಇಡೀ ಪ್ರಾಂತ್ಯದಲ್ಲಿ ಅಮೀರ್ ಖಾಸಿಂ ಬರೀದ್‌ನ ಸಹವರ್ತಿಗಳು ಹಾಗೂ ಆತನ ಹಿತೈಷಿ ಸೈನಿಕರ ಶೌರ್ಯ ಹಾಗೂ ಪ್ರಾಣ ಪಣಕ್ಕಿಟ್ಟು ಹೋರಾಡುವ ಗುಣಗಳು ನಾಲ್ಕು ಕಡೆಗೆ ಪ್ರಸಿದ್ಧಿ ಹೊಂದಿದ್ದವು. ಈ ಜನರು ಪಟ್ಟಣದಿಂದ ಹೊರವಲಯದಲ್ಲಿ ಯುದ್ಧಗೈಯಲು ನಿರತರಾದರು. ಎಷ್ಟೋ ಸಲ ಹೀಗಾಯಿತು. ಯುದ್ಧದ ಪರಿಣಾಮ, ಹೋರಾಡದೇ ಮರಳಿ ಬಂದರು. ಏಕೆಂದರೆ ಕೋಟೆಯನ್ನು ಅವರು ತಮ್ಮ ವಾಸಸ್ಥಾನವನ್ನಾಗಿಸಿದ್ದರು. ಕೆಲವು ಕ್ಷಣಗಳ ನಂತರ ತಿಳಿದು ಬಂದಿತು. ಸುಲ್ತಾನ್ ಕುಲಿ ಕುತುಬ್‌ಶಾಹನ ಸೈನ್ಯವು ಬರೀದಿಗಳ ಸಹಾಯಕ್ಕೆ ತಲುಪುತ್ತಿದೆ. ಅಲಿ ಬರೀದನು ತಕ್ಷಣವೇ ಐದು ಸಾವಿರ ದಖ್ಖನಿ ಸೈನ್ಯವನ್ನು ಸಜ್ಜುಗೊಳಿಸಿದನು. ಹಾಗೂ ಅವರನ್ನು ಶಸ್ತ್ರ ಸಜ್ಜಿತಗೊಳಿಸಿದನು ಮತ್ತು ವೈರಿಗಳನ್ನು ಎದುರಿಸಲು ರಣಭೂಮಿಯಲ್ಲಿ ಕದನಕ್ಕಿಳಿದನು.

ಬರೀದಿಗಳ ಗರ್ವ :

ಅಲೀ ಬರೀದ್‌ನ ತಾಯಿ ಹಾಗೂ ಅಮೀರ್ ಖಾಸಿಂ ಬರೀದ್‌ನ ಪತ್ನಿಯ ಮೂವರು ಶೂರ ಸಹೋದರರಿದ್ದರು. ಪ್ರತಿಯೊಬ್ಬ ಸಹೋದರನು ತನ್ನನ್ನು ತಾನು ಒಂದು ಸೈನ್ಯಕ್ಕೆ ಸಮವೆಂದು ಬಗೆಯುತ್ತಿದ್ದನು. ಆಕಸ್ಮಿಕವಾಗಿ ಓರ್ವ ಸಹೋದರನ

ಮುಖಾಮುಖಿಯು ಮಿರ್ಜಾ ಜಹಾಂಗೀರ್ ಖೂಮಿಯೊಂದಿಗೆ ನಡೆಯುತ್ತಿತ್ತು. ಆತನು ಹಸನಾಬಾದ್ ಗುಲ್ಬರ್ಗಾದ ಸ್ಥಳದಲ್ಲಿ ಮೃತ್ಯು ಹೊಂದಿದ್ದನು. ಈಗ ಈರ್ವರು ಸಹೋದರರು ಉಳಿದಿದ್ದರು. ಇವತ್ತು ಈ ಈರ್ವರೂ ಸಹೋದರರು ಇಸ್ಮಾಯಿಲ್ ಆದಿಲ್‌ಶಾಹನನ್ನು ಎದುರಿಸ ಬಯಸಿದ್ದರು. ಈರ್ವರೂ ಒಗ್ಗಟ್ಟಾಗಿ ವೈರಿಯನ್ನು ಯುದ್ಧಕ್ಕೆ ಆಹ್ವಾನಿಸಿದರು. ಅವರದು ಈ ಘೋಷಣೆಯಿತ್ತು. ಏನೆಂದರೆ, ಇಂದು ಯಾರ ಬಳಿಗಾದರೂ ಶಕ್ತಿಯಿದ್ದರೆ ಇಂಥ ನಿರ್ಭಯೀಯವರ ಎದುರು ಬರಬೇಕು ಮತ್ತು ಏಕಾಂಗಿಯಾಗಿ ಹೋರಾಡಬೇಕು. ಇಸ್ಮಾಯಿಲ್ ಆದಿಲ್‌ಶಾಹನಿಗೆ ಸುಮ್ಮನಿರಲಾಗಲಿಲ್ಲ ಹಾಗೂ ಆತನು ಈ ಜನರನ್ನು ಎದುರಿಸಲು ನಿಶ್ಚಯಿಸಿದನು.

ಇಸ್ಮಾಯಿಲ್ ಆದಿಲ್‌ಶಾಹನ ಗೆಲವು :

ಇಸ್ಮಾಯಿಲ್ ಆದಿಲ್‌ಶಾಹನು ಈರ್ವರು ಸಹೋದರರ ಘೋಷಣೆ ಕೇಳುತ್ತಿದ್ದಂತೆಯೇ ಹೋರಾಡಲು ಸಂಕಲ್ಪ ಮಾಡಿಕೊಂಡಿದ್ದನು. ಈಗ ಆತನು ಅವರನ್ನೆದುರಿಸಲು ಮುಂದೆ ಬಂದನು. ಅಸದ್‌ಖಾನ್ ಲಾರಿ ಹಾಗೂ ಇನ್ನಿತರ ಅಮೀರರು ಬಾದಶಾಹನನ್ನು ಬಹಳ ವಿಧವಾಗಿ ತಡೆಯಲು ಯತ್ನಿಸಿದರು. ಆದರೆ ಇಸ್ಮಾಯಿಲ್ ಆದಿಲ್‌ಶಾಹನು ಯಾರ ಪರಿವೆಯನ್ನು ಮಾಡಲಿಲ್ಲ. ಹಾಗೂ ರಣಭೂಮಿಯಲ್ಲಿ ಕದನಕ್ಕಿಳಿದನು. ಪರಸ್ಪರರಲ್ಲಿ ರಕ್ತರಂಜಿತ ಯುದ್ಧ ನಡೆಯಿತು. ಪರಿಣಾಮ ಈರ್ವರೂ ಸಹೋದರರು ಮರಣವನ್ನಪ್ಪಿದರು. ಪ್ರತಿಯೊಬ್ಬ ವ್ಯಕ್ತಿಯು ಸಂತೋಷ ಸಂಭ್ರಮದೊಂದಿಗೆ ಘೋಷಣೆ ಕೂಗಿದರು. ಇಸ್ಮಾಯಿಲ್ ಆದಿಲ್‌ಶಾಹನು ವಿಜಯದ ಹೆಮ್ಮೆಯೊಂದಿಗೆ ಮರಳಿದನು.

ಕುತುಬ್‌ಶಾಹೀ ಸೈನ್ಯದೊಂದಿಗೆ ಮುಖಾಬಿಲೆ :

ಇಸ್ಮಾಯಿಲ್ ಆದಿಲ್‌ಶಾಹನು ಯಾವಾಗ ವೈರಿಯೊಂದಿಗೆ ಗೆಲುವು ಸಾಧಿಸಿ ಮರಳಿ ಬಂದನೋ ಆಗ ಇತರ ಅಮೀರರು ಮತ್ತು ಅಸದ್‌ಖಾನ್ ಲಾರಿಯು ಆತನ ಕುದುರೆಯ ಲಗಾಮನ್ನು ಚುಂಬಿಸಿದರು. ಹಾಗೂ ಬಾದಷಾಹ್‌ನ ಮೇಲಿನಿಂದ ದುಡ್ಡನ್ನು ನಿವಾಳಿಸಿ ನಿರ್ಧನರಲ್ಲಿ ಹಂಚಿದರು. ಇದೇ ಸಮಯದಲ್ಲಿ ಕುಲಿ ಕುತುಬ್‌ಶಾಹನ ಸೈನ್ಯವು ಬಂದು ತಲುಪಿತು. ಅದನ್ನೆದುರಿಸಲು ಇಸ್ಮಾಯಿಲ್ ಆದಿಲ್‌ಶಾಹನು ಅಸದಖಾನ್ ಲಾರಿಯನ್ನು ನೇಮಿಸಿದ್ದನು ಹಾಗೂ ಬರೀದಿಗಳ ಸೈನ್ಯವನ್ನು ಮಣ್ಣುಗೂಡಿಸಲು ಸೈಯ್ಯದ್ ಹಸನ್ ಅರಬ್‌ನಿಗೆ ಆಜ್ಞೆ ನೀಡಿದನು. ಅಸದ್‌ಖಾನ್ ಲಾರಿ ಒಂದೂವರೆ ಸಾವಿರ ಮೊಘಲ್ ಈಟಿ ಪ್ರವೀಣರೊಂದಿಗೆ ಕುತುಬ್‌ಷಾಹೀ ಸೈನ್ಯದ ಮೇಲೆ ಆಕ್ರಮಣ ಮಾಡಿದನು ಹಾಗೂ ಅವರನ್ನು ರಣಭೂಮಿಯಿಂದ ಓಡಿಸಿದನು. ಅದರ ನಂತರ ಆತನು ಸೈಯ್ಯದ್ ಹಸನ್ ಅರಬ್‌ನೆಡೆಗೆ ಹೋದನು. ಮತ್ತು ಬರೀದಿಗಳನ್ನು ಎದುರಿಸುತ್ತಿದ್ದನು ಹಾಗೂ ವೈರಿಗಳನ್ನು ಮೃತ್ಯುವಿಗೊಪ್ಪಿಸುತ್ತಿದ್ದನು. ಉಳಿದ ಕೆಲವರನ್ನು ಕೋಟೆಯ ಬಾಗಿಲಿನವರೆಗೆ ಹಿಂಬಾಲಿಸಿದನು.

ಬರಾರ್‌ದ ದೊರೆಯೊಂದಿಗೆ ಅಮೀರ್ ಖಾಸಿಂ ಬರೀದನ ಸಹಾಯ ಯಾಚನೆ :

ಈಗ ಇಸ್ಮಾಯಿಲ್ ಆದಿಲ್‌ಶಾಹ, ಅಸದ್‌ಖಾನ್ ಲಾರಿಯ ಮೇಲೆ ಎಷ್ಟು ಪ್ರಸನ್ನನಾಗಿದ್ದನೆಂದರೆ ಇನ್ನೂ ಹೆಚ್ಚಿನ ಸಾಂಗತ್ಯ ಆತನಿಗೆ ದೊರೆಯಿತು. ಬಾದಷಾಹ್‌ನು ಕೋಟೆಯನ್ನು ವಶಪಡಿಸಿಕೊಳ್ಳುವ ಸಂಕಲ್ಪ ದೃಢಗೊಳಿಸಿಕೊಂಡನು. ಹಾಗೂ ಆತನು ಸಮಸ್ತ ದಾರಿಗಳನ್ನು ತಡೆಗಟ್ಟಿದನು. ಅಮೀರ್ ಬರೀದ್‌ನು ತುಂಬಾ ವಿವ್ಹಲಿತಗೊಂಡನು ಹಾಗೂ ತನ್ನ ಈ ಗಾಬರಿಗೊಂಡ ಸ್ಥಿತಿಯಲ್ಲಿ ಆತನು ಬರಾರ್‌ದ ದೊರೆಯಾದ ಅಲ್ಲಾವುದ್ದೀನ್ ಶಾಹನೊಂದಿಗೆ ಸೈನ್ಯದ ಸಹಾಯವನ್ನು ಯಾಚಿಸಿದನು. ಆದಿಲ್‌ಶಾಹನಿಗೆ ಯಾವಾಗ ಇದರ ಮಾಹಿತಿ ಲಭ್ಯವಾಯಿತೋ ಆಗ ಆತನು ಮಹಮೂದ್‌ಖಾನನನ್ನು ಯಾರು ಈತನ ಸಹೋದರರನ ಪುತ್ರನಾಗಿದ್ದನೋ ಆತನನ್ನು ದೂತನನ್ನಾಗಿಸಿ, ಕಳುಹಿಸಿದನು. ಇಮಾದ್‌ಶಾಹ ಸ್ವತಃ ಅಮೀರ್‌ಖಾಸಿಂ ಬರೀದ್‌ನ ಹಿಂದು ಮುಂದಿನ ಎಲ್ಲ ತಪ್ಪುಗಳಿಗೆ ಕ್ಷಮೆ ಯಾಚಿಸಲು ಇಸ್ಮಾಯಿಲ್ ಆದಿಲಶಾಹನ ಭೇಟಿಗೆಂದು ತಕ್ಷಣ ಅಹ್ಮದಾಬಾದ್ ಬೀದರ್‌ನತ್ತ ಹೊರಟನು.

ಇಸ್ಮಾಯಿಲ್ ಆದಿಲ್‌ಶಾಹನೊಂದಿಗೆ ಇಮಾದ್‌ಶಾಹನ ಭೇಟಿ :

ಇಮಾದ್‌ಶಾಹನು ಉದ್ಗೀರ್ ಕೋಟೆಯತ್ತ ಹೋಗುವ ಬದಲಾಗಿ ಆದಿಲ್‌ಶಾಹನ ವಾಸಸ್ಥಾನದತ್ತ ಹೊರಟನು ಹಾಗೂ ಸುಮಾರು ಒಂದು ಕೋಸ್ ದೂರದಲ್ಲಿ ಬಿಡಾರ ಹೂಡಿದನು. ಏಕೆಂದರೆ ಆತನಿಗೆ ಯಾವುದೇ ಸ್ಥಿತಿಯಲ್ಲಿ ಇಸ್ಮಾಯಿಲ್ ಆದಿಲ್‌ಶಾಹನ ಅನುಮತಿ ಹಾಗೂ ಕೃಪೆ ಪಡೆಯುವದಾಗಿತ್ತು. ಯಾವಾಗ ಇಸ್ಮಾಯಿಲ್ ಆದಿಲ್‌ಶಾಹನಿಗೆ ಇಮಾದ್‌ಶಾಹನ ಆಗಮನದ ಸುದ್ದಿ ತಲುಪಿತೋ ಆಗ ಆತನು ಬಹಳೇ ಪ್ರಸನ್ನನಾದನು ಹಾಗೂ ತನ್ನ ಕೆಲ ಆಪ್ತ ಹಾಗೂ ಸ್ನೇಹಿತರನ್ನು ಜೊತೆಗೆ ತೆಗೆದುಕೊಂಡು ಆತನ ಬಿಡಾರದಲ್ಲಿ ಅತಿಥಿಯಾಗಿ ಹೋದನು ಹಾಗೂ ಆತನನ್ನು ತುಂಬಾ ಗೌರವದೊಂದಿಗೆ ಸ್ವಾಗತಿಸಿದನು. ಅಲ್ಲಾವುದ್ದೀನ್ ಇಮಾದ್‌ಶಾಹನು ಸಹ ಬಾದಶಾಹನೊಂದಿಗೆ ಹೀಗೆಂದನು, ನನ್ನ ಬರುವಿಕೆಯ ಕಾರಣವು ಇದಾಗಿದೆ. ಏನೆಂದರೆ, ದಿಟದಲ್ಲಿ ನಿಮ್ಮ ವಿಜಯಕ್ಕೆ ಅಭಿನಂದನೆಗಳನ್ನು ಸಲ್ಲಿಸುವದಾಗಿದೆ. ಆದರೆ ಅಮೀರ್ ಖಾಸಿಂ ಬರೀದ್‌ನು ಯಾವ ತಪ್ಪುಗಳನ್ನು ಮಾಡಿರುವನೋ ಅವು ಅಸಂಖ್ಯವಿರುವವು. ಇಸ್ಮಾಯಿಲ್ ಆದಿಲ್‌ಶಾಹನು ಇಮಾದ್‌ಶಾಹನೊಂದಿಗೆ ಹೀಗೆಂದನು. ಏನೆಂದರೆ, ಒಳಿತು ಇದರಲ್ಲಿದೆ. ರಣಭೂಮಿಯಲ್ಲಿ ಅಮೀರ್ ಖಾಸಿಂ ಬರೀದ್‌ನೊಂದಿಗೆ ಪ್ರತಿಕಾರ ತೆಗೆದುಕೊಳ್ಳುವುದಿಲ್ಲವೋ ಅಲ್ಲಿಯವರೆಗೆ ಆತನು ಕ್ಷಮಾರ್ಹನಾಗಲಾರನು. ಇಮಾದ್‌ಶಾಹನು, ಇಸ್ಮಾಯಿಲ್ ಆದಿಲ್‌ಶಾಹನನ್ನು ಅಮೀರ್ ಖಾಸಿಂ ಬರೀದ್‌ನ ಕುರಿತು ಇಷ್ಟು ಕೋಪೋದ್ರಿಕ್ತ ಅವಸ್ಥೆಯಲ್ಲಿ ಇರುವುದನ್ನು ಕಂಡನೋ ಆಗ ಆತನು ಯುಕ್ತಿ ಪೂರ್ವಕವಾಗಿ ಮತ್ತೊಮ್ಮೆ ಈ ಕುರಿತು ಮಾತನಾಡಲಿಲ್ಲ.

ಇಮಾದ್‌ಶಾಹನೊಂದಿಗೆ ಅಮೀರಖಾಸಿಂ ಬರೀದ್‌ನ ಭೇಟಿ :

ಏಳು ದಿನಗಳವರೆಗೆ ಅಲ್ಲಾವುದ್ದೀನ್ ಇಮಾದ್‌ಶಾಹನು ತನ್ನ ಬಿಡಾರದಲ್ಲಿ ಇಸ್ಮಾಯಿಲ್ ಆದಿಲ್‌ಶಾಹನನ್ನು ಉಳಿಸಿಕೊಂಡನು ಹಾಗೂ ಆತಿಥೇಯನ ಕರ್ತವ್ಯವನ್ನು ನಿರ್ವಹಿಸಿದನು. ಅದರ ಹೊರತಾಗಿ ಆತನು ಇಸ್ಮಾಯಿಲ್ ಆದಿಲ್‌ಶಾಹನ ಗೌರವಾರ್ಪಣೆಗಾಗಿ ಒಂದು ಸಮಾರಂಭವನ್ನು ಏರ್ಪಡಿಸಿದನು. ಅದರಲ್ಲಿ ಆತನಿಗೆ ಕಾಣಿಕೆ ಕೊಡುಗೆಗಳನ್ನರ್ಪಿಸಿದನು. ಈ ವಿಷಯದ ಮಾಹಿತಿಯು ಅಮೀರ್‌ಖಾಸಿಂ ಬರೀದ್‌ನಿಗೆ ತಲುಪಿತೋ, ಇಸ್ಮಾಯಿಲ್ ಆದಿಲ್‌ಶಾಹನು ಇಮಾದ್‌ಶಾಹನ ಮೇಲೆ ಬಹಳೇ ಕೃಪೆದೋರಿದ್ದಾನೆ ಎಂದು ತಿಳಿದಾಗ, ಆತನು ಇಮಾದ್‌ಶಾಹನ ಸನ್ನಿಧಿಯಲ್ಲಿ ಹಾಜರಾಗಲು ತೀರ್ಮಾನಿಸಿದನು ಹಾಗೂ ಹಾಜರಾಗಿ ತನ್ನನ್ನು ತಾನು ಆತನಿಗೆ ಒಪ್ಪಿಸಿಕೊಂಡನು. ಸಹಾಯದ ಯಾಚನೆ ಮಾಡಿದನು ಹಾಗೂ ಯಾಚನೆಯ ರೀತಿಯಲ್ಲಿ ಇಮಾದ್‌ಶಾಹನೊಂದಿಗೆ ಹೀಗೆಂದನು. ಏನೆಂದರೆ, ಆತನಿಗೆ ಹಾಗೂ ಆತ ಎಷ್ಟು ಸಾಧ್ಯವೋ ಅಷ್ಟು ಬೇಗನೆ ಕೋಟೆಯಲ್ಲಿರುವವರನ್ನು ಹಿಂಸೆಯಿಂದ ಪಾರುಗೊಳಿಸಬೇಕು. ಅಲ್ಲಾವುದ್ದೀನ್ ಇಮಾದ್‌ಶಾಹನು ಅಮೀರ್ ಖಾಸಿಂನಿಗೆ ಬಿಡುಗಡೆಯ ಒಂದು ಹಾದಿಯನ್ನು ತೋರಿದನು. ಅದೇನೆಂದರೆ, ಇಸ್ಮಾಯಿಲ್ ಆದಿಲಶಾಹನಿಗೆ ಬೀದರ್‌ದ ಕೋಟೆಯನ್ನು ಒಪ್ಪಿಸಬೇಕು. ಇಮಾದ್‌ಶಾಹನ ಈ ಅಭಿಪ್ರಾಯವನ್ನು ಅಮೀರ್ ಖಾಸಿಂ ಬರೀದ್‌ನು ಒಪ್ಪಲಿಲ್ಲ ಹಾಗೂ ಕೋಪಗೊಂಡು ತನ್ನ ಬಿಡಾರದತ್ತ ಹೋದನು. ಇದು ಇಮಾದ್‌ಶಾಹನ ಬಿಡಾರದಿಂದ ಸುಮಾರು ಒಂದು ಕೋಸ್ ದೂರದಲ್ಲಿತ್ತು.

ಅಮೀರ್ ಖಾಸಿಂ ಬರೀದನ ಮದ್ಯಸೇವನೆ ಹಾಗೂ ಮೋಜು :

ಅಮೀರ್‌ಖಾಸಿಂ ಬರೀದನು ಇದನ್ನು ಅರಿತಿದ್ದನು. ತನ್ನ ವೈರಿಯೂ ತುಂಬಾ ಬಲಶಾಲಿ, ಬುದ್ಧಿವಂತ ಹಾಗೂ ಶೂರನಾಗಿರುವನು. ಆದರೆ ಯಾವುದೇ ತೊಂದರೆ ಹಾಗೂ ಚಿಂತೆಯಿಲ್ಲದೇ ಆತನು ವಿಲಾಸಿ ಕೃತ್ಯಕ್ಕೆ ಮುಂದಾದನು. ಅವನನ್ನು ಹೊರತುಪಡಿಸಿ ಸೈನ್ಯದ ಇನ್ನಿತರ ಅಮೀರರು ಹಾಗೂ ಸೈನಿಕರೂ ನಿರಂತರವಾಗಿ ಪ್ರಯಾಣ ಮಾಡಿದ್ದುದರಿಂದ ಹಾಗೂ ಜಾಗೃತರಾಗಿರುವುದರಿಂದ ದಣಿದಿದ್ದರು. ಅದಕ್ಕಾಗಿ ಅವರೆಲ್ಲರು ಈ ಅವಕಾಶವನ್ನು ಸದವಕಾಶವೆಂದು ಬಗೆದು ವಿಶ್ರಾಂತಿ ಮಾಡತೊಡಗಿದರು. ಕೆಲಮಾತ್ರ ಸೈನಿಕರನ್ನು ರಕ್ಷಣೆಯ ಕರ್ತವ್ಯ ನಿಭಾಯಿಸಲು ನೇಮಿಸಲ್ಪಟ್ಟರು. ಆದರೆ ಆ ಸೈನಿಕರೂ ಮೋಜು ಮಾಡತೊಡಗಿದರು.

ಇಸ್ಮಾಯಿಲ್ ಆದಿಲ್‌ಶಾಹನ ಇರುಳ ದಾಳಿಯ ಆಜ್ಞೆ:

ಇಸ್ಮಾಯಿಲ್ ಆದಿಲ್‌ಶಾಹನಿಗೆ ಯಾವಾಗ ಅಮೀರ್ ಖಾಸಿಂ ಬರೀದ್‌ನ ವಾಸಸ್ಥಾನದ ಮಾಹಿತಿ ಲಭಿಸಿತೋ ಆಗ ಅದೇ ದಿನ ಕಾಳ ರಾತ್ರಿಯಲ್ಲಿ ಅಸದ್‌ಖಾನ್

ಲಾರಿಯ ಮಾರ್ಗದರ್ಶನದಲ್ಲಿ ಕೆಲವು ವಿಶೇಷ ಸೈನಿಕರನ್ನು ವೈರಿಯ ಸೈನಿಕರ ಮೇಲೆ ಇರುಳ ದಾಳಿ ಮಾಡಲು ಆಜ್ಞೆ ನೀಡಿದನು. ಬಾದಷಾಹ್‌ನ ಆಜ್ಞೆಯನ್ನು ಪಾಲಿಸುತ್ತಾ ಅಸದ್‌ಖಾನ್ ಲಾರಿಯು ಅಮೀರ್‌ಖಾಸಿಂ ಬರೀದ್‌ನ ಬಿಡಾರದತ್ತ ಹೊರಟನು. ಆ ಸ್ಥಳವು ನಿರ್ಜನ ಹಾಗೂ ಶಾಂತವಿದ್ದದ್ದು ಕಂಡು, ತನ್ನ ಸೈನಿಕರನ್ನು ಮುಂದುವರಿಯದಂತೆ ಹಾಗೂ ಇರುಳು ದಾಳಿ ಮಾಡದಂತೆ ತಡೆದನು. ಕೆಲವು ನಿರ್ಭಯಿ ಹಾಗೂ ಶೂರ ಸೈನಿಕರನ್ನು ಅಮೀರ್‌ಬರೀದ್‌ನ ಸೈನ್ಯವನ್ನು ವೀಕ್ಷಿಸಲು ನೇಮಿಸಿದನು.

ಅಸದ್‌ಖಾನ್ ಲಾರಿಯ ಇನ್ನಷ್ಟು ನಿರ್ದೇಶನ :

ಗುಪ್ತಚರರು ಈ ಮಾಹಿತಿ ನೀಡಿದರು. ಏನೆಂದರೆ, ಅಮೀರ್‌ಖಾಸಿಂ ಬರೀದ್ ಹಾಗೂ ಆತನ ಎಲ್ಲ ಸಹಚರರು ಮದ್ಯದ ಅಮಲಿನಲ್ಲಿ ಮುಳಿಗೇಳುತ್ತಾ ಮದೋನ್ಮತ್ತರಾಗಿರುವರು. ಕೆಲವು ಈಟಿಗಳು, ಖಡ್ಗಗಳು ಹಾಗೂ ಕೆಲವು ಪಗಡಿಗಳು ಯಾವುದೇ ಅಡತಡೆಯಿಲ್ಲದೇ ವಶಕ್ಕೆ ತೆಗೆದುಕೊಳ್ಳಲಾಯಿತು. ಅದರ ನಂತರ ಅಸದ್‌ಖಾನ್ ಲಾರಿಯ ಸೈನ್ಯದ ರಕ್ಷಣೆಗಾಗಿ ಅಲ್ಲಲ್ಲಿ ದೊಡ್ಡದಾದ ತಗ್ಗುಗಳನ್ನು ನಿರ್ಮಿಸಿದನು. ಸೈನಿಕರನ್ನು ವೈರಿಯ ಸುತ್ತ ಮುತ್ತಲು ನೇಮಿಸಲಾಯಿತು ಹಾಗೂ ನಿಶ್ಯಬ್ಧದೊಂದಿಗೆ ಶಾಂತರೀತಿಯಲ್ಲಿ ಇರಲು ನಿರ್ದೇಶಿಸಲಾಯಿತು. ಏಕೆಂದರೆ, ವೈರಿಗೆ ಇದರ ಸುಳಿವು ಸಿಗಬಾರದು. ಇದರ ನಂತರ ಅಸದ್‌ಖಾನ್ ಲಾರಿಯು ಅಮೀರ್‌ಖಾಸಿಂ ಬರೀದ್‌ನ ಬಿಡಾರದತ್ತ ಹೋದನು ಹಾಗೂ ಅಲ್ಲಿ ತಲುಪಿ ನೋಡುತ್ತಾನೆ ನಾಲ್ಕು ಕಡೆ ವಿಚಿತ್ರ ದೃಶ್ಯ ಕಂಡುಬರುತ್ತದೆ. ಅಲ್ಲಿ ಇಲ್ಲಿ ಮಧ್ಯದಲ್ಲಿ ಶೀಶೆಗಳು ಚಲ್ಲಾಪಿಲ್ಲಿಯಾಗಿ ಬಿದ್ದಿವೆ ಹಾಗೂ ವೈರಿಯ ಪ್ರತಿಯೊಬ್ಬ ರಕ್ಷಕನು ಮದ್ಯದ ಅಮಲಿನಲ್ಲಿ ಮದೋನ್ಮತ್ತನಾಗಿದ್ದಾನೆ. ಯಾವುದೇ ಪರಿವೆಯೇ ಇಲ್ಲದಂತೆ. ನೆಮ್ಮದಿಯೊಂದಿಗೆ ನಿದ್ರಾವಶವಾಗಿದ್ದಾರೆ. ಅಸದ್‌ಖಾನ್ ಲಾರಿಯು ಈ ಜನರನ್ನು ಕೆಲ ರಕ್ಷಕರ ವಶಕ್ಕೆ ಒಪ್ಪಿಸಿದನು ಹಾಗೂ ಅವರನ್ನು ಹತ್ಯಗೈಯ್ಯುಲು ಆಜ್ಞೆ ನೀಡಿದನು. ಯಾವ ವ್ಯಕ್ತಿಯೂ ಇವರಲ್ಲಿ ಎಚ್ಚರಗೊಂಡು ಚೀರಿ ಚೀತ್ಕರಿಸಿ, ಗದ್ದಲ ಗೊಂದಲವನ್ನುಂಟು ಮಾಡಲು ಯತ್ನಿಸಿದರೆ ಆತನಿಗೆ ಖಡ್ಗದ ರುಚಿ ತೋರಿಸಬೇಕು. ಅದರ ನಂತರ ಕೆಲವು ಸೈನಿಕರ ಜೊತೆಗೂಡಿ ಅಮೀರ್‌ಖಾಸಿಂ ಬರೀದ್‌ನನ್ನು ಜೀವಂತವಾಗಿ ಬಂಧಿಸಲು ಅಥವಾ ಕೊಲ್ಲುವ ನಿರ್ಧಾರದೊಂದಿಗೆ ಮುಂದುವರಿದನು.

ಅಮೀರ್ ಖಾಸಿಂ ಬರೀದ್‌ನ ವಾಸಸ್ಥಾನ :

ಅಸದ್‌ಖಾನ್ ಲಾರಿಯು ಅಮೀರ್‌ಖಾಸಿಂ ಬರೀದ್‌ನ ವಾಸಸ್ಥಾನದಲ್ಲಿ ಹೊರಗೆ ಕಂಡ ದೃಶ್ಯಕ್ಕಿಂತಲೂ ಆಶ್ಚರ್ಯಜನಕವಾದ ದೃಶ್ಯವನ್ನು ಕಂಡನು. ಒಳಗಿನ ಸೈನಿಕರು ಹೊರಗಿನ ಸೈನಿಕರಿಗಿಂತಲೂ ಕೆಟ್ಟ ಸ್ಥಿತಿಯಲ್ಲಿದ್ದಾರೆ. ಅಮೀರ್‌ಖಾಸಿಂ ಬರೀದ್‌ನು

ಬಿಡಾರದ ಒಂದು ಮೂಲೆಯಲ್ಲಿ ಮಂಚದ ಮೇಲೆ ಮದವೇರಿದ ಆನೆಯಂತೆ ಬಿದ್ದಿರುವನು. ಆತನಿಗೆ ಯಾವುದೇ ತೆರನಾದ ಎಚ್ಚರಿಕೆ ಇರಲಿಲ್ಲ. ಗಾಯನ, ನೃತ್ಯಗೈಯ್ಯುವ ಸ್ತ್ರೀಯರು ಬಿಟ್ಟು ಬಿಡದೆ ವಾಂತಿ ಮಾಡಿಕೊಳ್ಳುತ್ತಿರುವರು. ಇಲ್ಲವೆ ಯಾವ ಪರಿವೇ ಇಲ್ಲದೇ ಎಚ್ಚರ ತಪ್ಪಿ ಬಿದ್ದಿರುವರು.

ಅಮೀರ್ ಖಾಸಿಂ ಬರೀದ್‌ನ ಬಂಧನ :

ಈ ಸ್ಥಿತಿಯಲ್ಲಿ ಎಲ್ಲರ ರಕ್ತವನ್ನು ಹರಿಸುವದು ಸುಲಭದ ಕಾರ್ಯವಾಗಿತ್ತು. ಆದರೆ ಅಸದ್‌ಖಾನ್‌ನು ತನ್ನ ಹಿತೈಷಿಗಳೊಂದಿಗೆ ಚರ್ಚಿಸಿ ಯಾರನ್ನೂ ಕೊಲೆಗೈಯ್ಯಲಿಲ್ಲ. ಆದರೆ ಹೀಗೆ ನಿರ್ಧಾರ ತೆಗೆದುಕೊಳ್ಳಲಾಯಿತು. ಏನೆಂದರೆ, ವೈರಿಯನ್ನು ಜೀವಂತವಾಗಿ ಮಂಚದೊಂದಿಗೆಯೇ ತೆಗೆದುಕೊಂಡು ಹೋಗುವುದು. ಈ ಕಾರ್ಯಪೂರ್ತಿಗಾಗಿ ಚಾಣಾಕ್ಷ ಹಾಗೂ ಚತುರನಾದ ವೃದ್ಧ ವೈರಿಯಾದ ಅಮೀರ್ ಖಾಸಿಂ ಬರೀದ್‌ನ ಮಂಚವನ್ನು ಆತನ ಬಿಡಾರದಿಂದ ಹೊರತರಲಾಯಿತು. ಇದೇ ಸಮಯದಲ್ಲಿ ಓರ್ವ ರಕ್ಷಕನು ಎಚ್ಚರಗೊಂಡನು. ಹಾಗೂ ಆತನು ಚಿತ್ಕರಿಸಿದನು. ಆದರೆ ಅಸದ್‌ಖಾನ್ ಲಾರಿಯ ಖಡ್ಗದ ಒಂದೇ ಹೊಡೆತವು ಆತನ ಕತೆ ಮುಗಿಸಿತು. ದಖ್ಖನಿಗಳು ಈ ವ್ಯಕ್ತಿಯನ್ನು 'ಪೋಟಲಿವಾಲಾ' ಎಂಬ ಹೆಸರಿನಿಂದ ಗುರುತಿಸುತ್ತಿದ್ದರು. ಹಾಗೂ ಆತನಿಗೆ ಜವಾಬ್ದಾರಿಯಾಗಿ ರಕ್ಷಣೆ ಹಾಗೂ ಎಚ್ಚರವಿರುವ ಕೆಲಸವನ್ನು ನೀಡಲಾಗಿತ್ತು.

ಅಸದ್‌ಖಾನ್ ಲಾರಿಯ ಸಲಹೆ :

ತನ್ನ ಸೈನ್ಯದಲ್ಲಿ ತಲುಪಿದ ಅಸದ್‌ಖಾನ್ ಲಾರಿಯು ಈ ಪೂರ್ತಿ ಘಟನೆಯನ್ನು ವಿವರಿಸಿದನು ಹಾಗೂ ಈ ವಿಚಾರವನ್ನು ಪ್ರಸ್ತುತ ಪಡಿಸಿದನು. ಏನೆಂದರೆ, ಇನ್ನೂ ಅರ್ಧ ರಾತ್ರಿ ಉಳಿದಿರುವದು. ಒಂದು ವೇಳೆ ಇರುಳ ದಾಳಿ ಮಾಡಿದರೆ ಮುಸ್ಲಿಮೇತರರೊಂದಿಗೆ ಮುಸ್ಲಿಮರೂ ಕೊಲ್ಲಲ್ಪಡುವರು ಹಾಗೂ ಮುಂಜಾನೆಯತನಕ ಅಸಂಖ್ಯೆ ವ್ಯಕ್ತಿಗಳ ರಕ್ತವು ಹರಿಯುವುದು. ಎಲ್ಲಿಯವರೆಗೆ ಉದ್ದೇಶ ಪೂರ್ತಿಯಾಗಬೇಕಿತ್ತೋ ಅದಾಗಿ ಬಿಟ್ಟಿದೆ. ಬೇರೆಯವರನ್ನು ಕೊಲ್ಲುವ ಬದಲಾಗಿ ಇದೇ ವ್ಯಕ್ತಿಯನ್ನು ಇಸ್ಮಾಯಿಲ್ ಆದಿಲ್‌ಷಾಹ್‌ನ ಎದುರು ಹಾಜರಪಡಿಸಿದರೆ ಎಲ್ಲಕ್ಕಿಂತ ಒಳಿತಾಗುವುದು. ಅಸದ್‌ಖಾನ್ ಲಾರಿಯ ಮಾತು ಎಲ್ಲ ಹಿತೈಷಿ ಹಾಗೂ ಸಹಚರರಿಗೆ ಹಿಡಿಸಿತು. ಹಾಗೂ ಅವರು ಅಮೀರ್ ಖಾಸಿಂ ಬರೀದ್‌ನ ಮಂಚವನ್ನು ತೆಗೆದುಕೊಂಡು ಹೋಗಲು ಹೆಗಲ ಮೇಲೆ ಹೊತ್ತುಕೊಂಡರು.

ಅಮೀರ ಖಾಸಿಂ ಬರೀದ್‌ನು ಎಚ್ಚರಗೊಳ್ಳುವಿಕೆ :

ಅರ್ಧದಾರಿ ನಡೆದಿದ್ದರು ಅಮೀರ್ ಖಾಸಿಂ ಬರೀದನು ಎಚ್ಚರಗೊಂಡನು.

ಹಾಗೂ ಆತನು ಸ್ವತಃ ವಿಸ್ಮಯ ಸ್ಥಿತಿಯಲ್ಲಿ ಕಂಡುಕೊಂಡನು. ಆತನಿಗೆ ಆಕಸ್ಮಿಕವಾಗಿ ಈ ಯೋಚನೆ ಬಂದಿತು. ಈತನ ಮಂಚವು ಭೂತ-ಪ್ರೇತಗಳು ಎತ್ತಿಕೊಂಡು ಎಲ್ಲಿಯೋ ದೂರಕ್ಕೆ ಒಯ್ಯುತ್ತಿರುವವು. ಅದಕ್ಕಾಗಿ ಆತನು ಅಳತೊಡಗಿದನು. ಆದರೆ ತಕ್ಷಣವೇ ಅಸದ್‌ಖಾನ್ ಲಾರಿಯು ತನ್ನ ಮುಖವನ್ನು ತೋರಿಸಿ ಆತನಿಗೆ ಇದನ್ನು ಮನಗಣಿಸಿದನು. ಏನೆಂದರೆ ಆತನ ಮಂಚವು ಭೂತಪ್ರೇತಗಳ ವಶದಲ್ಲಿರದೇ ಆತನ ವೈರಿಯ ವಶದಲ್ಲಿರುವದು. ಅಸದ್‌ಖಾನ್ ಲಾರಿಯು ಆತನ ಬಂಧನದ ಕುರಿತು ಎಲ್ಲ ವಿಷಯವನ್ನು ತಿಳಿಸಿದನು ಹಾಗೂ ಆತನನ್ನು ಬಹಳೇ ಲಜ್ಜಿತಗೊಳಿಸಿದನು. ಆತನು ಅಮೀರ್ ಬರೀದ್‌ನೊಂದಿಗೆ ಹೀಗೆಂದನು. ಈ ವೃದ್ಧಾವಸ್ಥೆಯಲ್ಲಿ ವೈರಿಯ ಸಮೀಪ ಬಿಡಾರ ಹೂಡಿ, ಮದ್ಯಪಾನ ಮಾಡುವದು ಮೂರ್ಖತನವಲ್ಲದೆ ಮತ್ತೇನು? ಅಮೀರ್‌ಖಾಸಿಂ ಬರೀದ್‌ನು ಎಷ್ಟು ಲಜ್ಜಿತಗೊಂಡನೆಂದರೆ, ಆತನು ನಾಲಿಗೆಯಿಂದ ಒಂದು ಶಬ್ದವನ್ನು ಹೊರಡಿಸುವದು ಉಚಿತವೆಂದು ಬಗೆಯಲಿಲ್ಲ. ಆತನು ತನ್ನ ಈ ಮೂರ್ಖತನದ ಕಾರ್ಯದ ಮೇಲೆ ಬಹಳೇ ಲಜ್ಜಿತನಾಗಿದ್ದನು.

ಇಸ್ಮಾಯಿಲ್ ಆದಿಲ್‌ಶಾಹನ ದರ್ಬಾರದಲ್ಲಿ ಅಮೀರ್ ಖಾಸಿಂ ಬರೀದ್‌ನ ಹಾಜರಿ:

ಬೆಳ್ಳಂಬೆಳಿಗ್ಗೆಯೇ ಅಸದ್‌ಖಾನ್ ಲಾರಿಯು ಇಸ್ಮಾಯಿಲ್ ಆದಿಲ್‌ಶಾಹನ ಬಳಿಗೆ ತಲುಪಿದನು. ಬಾದಶಾಹನು ಅಸದ್‌ಖಾನ್ ಲಾರಿಯ ಈ ಬೃಹತ್ ರೂಪದ ಯಶಸ್ಸಿನ ಸಾಹಸಕಾರ್ಯದಿಂದ ಬಹಳೇ ಪ್ರಭಾವಿತಗೊಂಡನು ಹಾಗೂ ಆತನು ಅಸದ್‌ಖಾನ್‌ನ ಶ್ಲಾಘನೆಯಲ್ಲಿ ಉತ್ಕೃಷ್ಟ ಹಾಗೂ ಮಧುರ ನುಡಿಗಳನ್ನು ನುಡಿದನು. ಇದರಿಂದ ಅಸದ್‌ಖಾನ್‌ನ ಹೆಮ್ಮೆಯು ಇಮ್ಮಡಿಯಾಯಿತು. ಹಾಗೂ ಆತನು ತನ್ನನ್ನು ತಾನು ಓರ್ವ ಅರ್ಹವ್ಯಕ್ತಿಯೆಂದು ಪರಿಗಣಿಸಿಕೊಂಡನು. ಅಮೀರ್ ಖಾಸಿಂ ಬರೀದ್‌ನೊಂದಿಗೆ ಇಸ್ಮಾಯಿಲ್ ಆದಿಲ್‌ಶಾಹನು ವಿಚಾರಣೆ ನಡೆಸಿದನು. ಆತನಿಂದ ಆತನ ಈ ಮೋಸಗಾರಿಕೆ, ಕುಟಿಲತನ, ಕುತ್ಸಿತ ನಡುವಳಿಕೆ ಹಾಗೂ ಢೋಂಗಿತನದ ಕಾರಣ ಕೇಳಿದನು. ಅದಕ್ಕುತ್ತರವಾಗಿ ಅಮೀರ್‌ಖಾಸಿಂ ಬರೀದ್‌ನು ತಲೆ ತಗ್ಗಿಸಿದನು ಹಾಗೂ ನಾಲಿಗೆಯಿಂದ ಒಂದು ಶಬ್ದವನ್ನೂ ಹೊರಡಿಸಲಿಲ್ಲ. ಇದರ ನಂತರ ಅಮೀರ ಖಾಸಿಂ ಬರೀದ್‌ನನ್ನು ಅಸದ್‌ಖಾನ್ ಲಾರಿಯ ವಶಕ್ಕೆ ಬಂಧಿಸಿ ನೀಡಿದನು. ಏಕೆಂದರೆ, ಬಾದಷಾಹನು ಯಾವಾಗ ಕರೆದರೂ ಆ ವೇಳೆಯಲ್ಲಿ ಅಮೀರ್ ಖಾಸಿಂ ಬರೀದ್‌ನನ್ನು ಹಾಜರುಪಡಿಸಲು ಯಾವುದೇ ತೆರನಾದ ತೊಂದರೆಯಾಗಬಾರದು. ಇಸ್ಮಾಯಿಲ್ ಆದಿಲ್‌ಶಾಹನ ಆಜ್ಞೆಯಂತೆ ಮರುದಿನ ದರ್ಬಾರಿನಲ್ಲಿ ಅಮೀರ್ ಖಾಸಿಂ ಬರೀದ್‌ನನ್ನು ಕೈಕಾಲು ಕಟ್ಟಿ ಪ್ರಸ್ತುತ ಪಡಿಸಲಾಯಿತು ಹಾಗೂ ಸುದೀರ್ಘ ಸಮಯದವರೆಗೆ ಅಮೀರ್ ಖಾಸಿಂ ಬರೀದ್‌ನನ್ನು ಅಸದ್‌ಖಾನ್‌ನು ಬಾದಶಾಹನ ಎದುರಿನಲ್ಲಿ ನಿಲ್ಲಿಸಿದನು.

ಅಮೀರ್ ಖಾಸಿಂ ಬರೀದ್‌ನಿಗೆ ಮೃತ್ಯು ದಂಡನೆ :

ಬಹುಶಃ ಪ್ರಾಚೀನ ಹಾಗೂ ಅರ್ವಾಚಿನ ಇತಿಹಾಸದಲ್ಲಿ ಈ ತೆರನಾದ ವಿಚಿತ್ರ ಘಟನೆಯು ಜರುಗಿರಲಾರದು. ಏನೆಂದರೆ, ಓರ್ವ ಶೂರ, ಪ್ರತಿಷ್ಠಿತ, ಸಿಂಹಾಸನಾಧೀಶ ತನ್ನ ಬಿಡಾರಿನಿಂದ ಇಷ್ಟು ಕೆಟ್ಟ ರೀತಿಯಲ್ಲಿ ಬಂಧಿಸಿ ತರುವದು ಹಾಗೂ ಆತನಿಗೆ ಸಂಬಂಧಿಸಿದ ಹಿತೈಷಿ, ಸಹಚರರು ಅಡತಡೆಯಿಲ್ಲದೆ ಸೈನ್ಯಕ್ಕೆ ಒಳಬರಲು ಬಿಟ್ಟಿರುವುದು ಹಾಗೂ ತಮ್ಮ ಮದ್ಯಸೇವನೆಯಲ್ಲಿ ಅಮಲೇರಿದವರಾಗಿ ಮದೋನ್ಮತ್ತ ಎಚ್ಚರ ತಪ್ಪಿದ ಸ್ಥಿತಿಯಲ್ಲಿ ತಮ್ಮ ದೊರೆಯನ್ನು ಹೊರಹೋಗಲು ಬಿಟ್ಟಿರುವುದು. ಏಕೆಂದರೆ ಇಸ್ಮಾಯಿಲ್ ಆದಿಲ್‌ಷಾಹ್‌ನು ಅಮೀರ್ ಬರೀದ್‌ನಿಂದ ಬಹಳ ವಿರಸಗೊಂಡಿದ್ದನು. ಅದಕ್ಕಾಗಿ ಆತನು ಅಮೀರ್ ಖಾಸಿಂ ಬರೀದ್‌ನಿಗೆ ಮೃತ್ಯುದಂಡನೆ ನೀಡದನು.

ಅಹ್ಮದಾಬಾದ್ ಕೋಟೆಯ ಅರ್ಪಣೆ :

ವಧೆಕಾರನು ಇನ್ನೂ ತನ್ನ ಖಡ್ಗವನ್ನು ಒರೆಯಿಂದ ಹೊರತೆಗೆದು ವೈರಿಯನ್ನು ಇನ್ನೇನು ವಧಗೊಳಿಸುವವನಿದ್ದನು. ಆಗ ಆರೋಪಿಯು ವಿನಮ್ರವಾಗಿ ಅಳುತ್ತಾ ಯೋಚಿಸ ತೊಡಗಿದನು ಹಾಗೂ ಯೂಸೂಫ್ ಆದಿಲ್‌ಶಾಹನಿಂದ ಹಿಡಿದು ಇಲ್ಲಿಯವರೆಗೆ ಆದ ಎಲ್ಲ ತಪ್ಪುಗಳಿಗೆ ಹಾಗೂ ಆ ಎಲ್ಲ ದೊರೆಗಳ ಕ್ಷಮಿಸುವ ಗುಣವನ್ನು ಹೊಗಳ ತೊಡಗಿದನು. ಇಸ್ಮಾಯಿಲ್ ಆದಿಲ್‌ಶಾಹನಿಂದಲೂ ಈ ಸಲ ತನ್ನ ತಪ್ಪುಗಳಿಗೆ ಕ್ಷಮಾಪಣೆ ಕೇಳಿದನು. ಹಾಗೂ ಈ ವಾಗ್ದಾನ ಮಾಡಿದನು. ಏನೆಂದರೆ, ಅಹ್ಮದಾಬಾದ್, ಬೀದರ್ ಕೋಟೆಯನ್ನು ಯಾವುದನ್ನು ಇಂದಿನವರೆಗೂ ಯಾವ ಬಾದಶಾಹನು ಗೆಲ್ಲಲಾಗಲಿಲ್ಲ. ಅದು ಆದಿಲ್‌ಶಾಹನ ವಶಕ್ಕೆ ಬರುವದು ಜೊತೆಗೆಯೇ ಸಮಸ್ತ ಧನಕನಕ ಹಾಗೂ ಭಂಡಾರ, ವಜ್ರವೈಡೂರ್ಯವೂ ಸಹ ಇಸ್ಮಾಯಿಲ್ ಆದಿಲ್‌ಶಾಹನಿಗೆ ಅರ್ಪಿಸಲಾಗುವುದು. ಇಸ್ಮಾಯಿಲ್ ಆದಿಲ್‌ಶಾಹನು ಈ ವಾಗ್ದಾನವನ್ನು ಸ್ವೀಕರಿಸಿದನು ಹಾಗೂ ಅದೆಲ್ಲವನ್ನು ತನ್ನ ವಿಜಯದ ಕಾಣಿಕೆಯೆಂದು ಬಗೆದನು.

ಅಮೀರ್ ಖಾಸಿಂ ಬರೀದ್‌ನ ಪುತ್ರರಿಂದ ಕೋಟೆ ಕೊಡಲು ನಿರಾಕರಣೆ :

ಒಬ್ಬ ದೂತನ ಮುಖಾಂತರ ಅಮೀರ್ ಖಾಸಿಂ ಬರೀದ್‌ನು ತನ್ನ ಪುತ್ರರೊಂದಿಗೆ ಕೋರಿದನು. ಏನೆಂದರೆ, ಅವರು ಕೋಟೆಯನ್ನು ಆದಿಲ್‌ಶಾಹೀ ವಂಶಕ್ಕೆ ಒಪ್ಪಿಸಲು ಸಿದ್ಧರಿರಬೇಕು. ಆದರೆ ಆತನ ಪುತ್ರರು ಅಮೀರ್ ಖಾಸಿಂ ಬರೀದ್‌ನನ್ನು ವೃದ್ಧ, ಪುಕ್ಕಲು ಸೇನಾಧಿಪತಿ, ಮೂರ್ಖ ಹಾಗೂ ಸಾವಿಗೆ ಸಮೀಪಿವಿರುವ ವ್ಯಕ್ತಿ ಎಂಬ ದುರ್ನುಡಿಗಳನ್ನು ನುಡಿದರು ಹಾಗೂ ಹೀಗೆ ಉತ್ತರಿಸಿದರು. ಏನೆಂದರೆ, ಈ ಬೃಹತ್ ಕೋಟೆಯನ್ನು ವಶಕ್ಕೊಪ್ಪಿಸುವುದು ಮೂರ್ಖತನವಾಗಿದೆ.

ದೂತನ ಮರಳುವಿಕೆ :

ತಮ್ಮ ತಂದೆಗೆ ಈ ತೆರನಾದ ಉತ್ತರವನ್ನೀಯುವ ದಿಟ ಉದ್ದೇಶವಿದಾಗಿತ್ತು. ಏನೆಂದರೆ, ಹೇಗಾದರೂ ಆಗಲಿ ಆತನು ಬಂಧಿಯಾಗಿ ಜೀವನ ವ್ಯಯಿಸಬೇಕು. ಅದರ ನಂತರ ಪುತ್ರರು, ಓರ್ವ ಆಪ್ತ ವ್ಯಕ್ತಿಯನ್ನು ತನ್ನ ತಂದೆಯ ಹತ್ತಿರ ಕಳುಹಿಸಿದರು ಹಾಗೂ ಆ ಆಪ್ತ ವ್ಯಕ್ತಿಗೆ ಈ ಅಧಿಕಾರ ನೀಡಿದರು. ಏನೆಂದರೆ, ಆತನು ತಮ್ಮ ತಂದೆಯೊಂದಿಗೆ ಕೇಳಬೇಕು. ಏನೆಂದರೆ, "ಒಂದು ವೇಳೆ ಕೋಟೆಯನ್ನೊಪ್ಪಿಸದೇ ವೈರಿಯಿಂದ ಬಿಡುಗಡೆ ಸಾಧ್ಯವಾದರೆ ಒಳಿತು".

ದೂತನು, ಪುತ್ರರ ಈ ಸಂದೇಶವನ್ನು ತೆಗೆದುಕೊಂಡು ತಕ್ಷಣ ಅಮೀರ್‌ಖಾಸಿಂ ಬರೀದ್‌ನ ಬಳಿ ತಲುಪಿದನು. ಹಾಗೂ ಆತನ ಪುತ್ರರ ಹಾಗೂ ಅಲೀ ಬರೀದ್‌ನ ತೊಂದರೆ, ಅತೃಪ್ತಿ ಹಾಗೂ ಕೋಟೆಯನ್ನು ಒಪ್ಪಿಸುವ ಕುರಿತಾದ ಎಲ್ಲ ವಿಷಯಗಳನ್ನು ಆತನಿಗೆ ಅರುಹಿದನು.

ಮತ್ತೊಮ್ಮೆ ಅಮೀರ್ ಖಾಸಿಂ ಬರೀದ್‌ನ ಮರಣ ದಂಡನೆಯ ಆಜ್ಞೆ:

ಈ ಎಲ್ಲ ಮಾತುಗಳು ಅಮೀರಖಾಸಿಂ ಬರೀದ್‌ನಿಗೆ ನೆಮ್ಮದಿ ನೀಡಿದವು ಹಾಗೂ ಆತನು ಬಾದಶಾಹನಿಂದ ತನ್ನ ಪುತ್ರರ ನಿರಾಕರಣೆಯನ್ನು ತಿಳಿಸಿದನು. ಆದರೆ ಇಸ್ಮಾಯಿಲ್ ಆದಿಲ್‌ಶಾಹನು ಮತ್ತೊಮ್ಮೆ ಮರಣದಂಡನೆಯ ಆಜ್ಞೆನೀಡಿದನು. ಒಂದು ಸ್ವತಂತ್ರ ಆನೆಯನ್ನು ಆತನನ್ನು ತುಳಿದು ಕೊಲ್ಲುವಂತೆ ಸಿದ್ಧಗೊಳಿಸಲಾಯಿತು. ಅದನ್ನು ನೋಡಿ ಅಮೀರ್ ಖಾಸಿಂ ಬರೀದ್‌ನು ಮಿತಿಮೀರಿ ಅಳತೊಡಗಿದನು ಹಾಗೂ ಚಿತ್ಕರಿಸಿದನು ಮತ್ತು ಬಾದಶಾಹನೊಂದಿಗೆ ವಿನಂತಿಸಿದನು. ಆತನನ್ನು ತನ್ನ ಪುತ್ರರ ಗೋಪುರದ ಬಳಿ ಕೊಲ್ಲಬೇಕು. ಅಲ್ಲಿ ಅವರು ಇರುವರು. ಏಕೆಂದರೆ, ಅವರು ಸ್ವತಃ ಕೋಟೆಯನ್ನು ಅರ್ಪಿಸಲು ಹಾಗೂ ತನ್ನ ಸ್ವಾತಂತ್ರ್ಯದ ಕುರಿತು ತನ್ನ ಪುತ್ರರೊಂದಿಗೆ ಮಾತುಕತೆ ನಡೆಸಿ ಕೊನೆಯ ತೀರ್ಮಾನ ತೆಗೆದುಕೊಳ್ಳಬಹುದು. ಬಾದಷಾಹ್‌ನು ಅವನ ಅಭಿಪ್ರಾಯವನ್ನು ಒಪ್ಪಿಕೊಂಡನು ಹಾಗೂ ಆತನನ್ನು ಕೋಟೆಯ ಗೋಪುರದ ಬಳಿ ಕಳುಹಿಸಲಾಯಿತು.

ಅಮೀರ್ ಖಾಸಿಂ ಬರೀದ್‌ನ ಪುತ್ರರ ಷರತ್ತುಗಳು :

ಅಮೀರ್ ಖಾಸಿಂ ಬರೀದ್‌ನ ಪುತ್ರರು ಯಾವಾಗ ತಂದೆಯನ್ನು ನಗ್ನಾವಸ್ಥೆಯಲ್ಲಿ ಆನೆಯ ಬೆನ್ನಿಗೆ ಕಟ್ಟಿದ್ದನ್ನು ಕಂಡರೋ, ಆಗ ಈ ಪುತ್ರರು ಕೋಟೆಯನ್ನು ಇಸ್ಮಾಯಿಲ್ ಆದಿಲ್‌ಶಾಹನಿಗೆ ಒಪ್ಪಿಸಲು ಕೆಲವು ಷರತ್ತುಗಳನ್ನು ಮುಂದಿಟ್ಟರು. ಮೊದಲನೆಯದಾಗಿ ಅಸದ್‌ಖಾನ್ ಲಾರಿಯನ್ನು ಯಾವ ಸ್ಥಳದಲ್ಲಿ ಹೇಳಲಾಗುವುದೋ ಆ ಸ್ಥಳದಲ್ಲಿ ಸುಮ್ಮನೆ ನಿಲ್ಲಬೇಕು. ಹಾಗೂ ಬರೀದ್ ವಂಶದ ಸ್ತ್ರೀಯರು ಹಾಗೂ ಮಕ್ಕಳೊಡನೆ ಯಾವುದೇ ತೆರನಾಗಿ ಮಾತನಾಡುವ ಅವಕಾಶವಿರುವುದಿಲ್ಲ.

ಎರಡನೆಯದಾಗಿ, ಶಿಖಂಡಿಗಳು ಹಾಗೂ ಸ್ತ್ರೀಯರಿಂದ ವಸ್ತುಗಳು ಹಾಗೂ ಭಂಡಾರದ ಕುರಿತು ಏನನ್ನೂ ಪ್ರಶ್ನಿಸಬಾರದು. ಯಾವ ತೆರನಾದ ಪೋಷಾಕು ಅವರು ಉಟ್ಟಿರುವರು. ಆಭರಣಗಳ ಸಹಿತ ಕೋಟೆಯಿಂದ ಹೊರಹೋಗುವ ಅನುಮತಿ ಇರಬೇಕು. ಇಸ್ಮಾಯಿಲ್ ಆದಿಲ್‌ಶಾಹನು ಅಮೀರ್‌ಖಾಸಿಂ ಬರೀದ್‌ನ ಪುತ್ರರ ಹಾಗೂ ಅಲೀ ಬರೀದ್‌ನ ಈ ಷರತ್ತುಗಳನ್ನು ಕೇಳಿ ಒಪ್ಪಿಕೊಂಡನು.

ಷರತ್ತುಗಳನ್ನು ಪಾಲಿಸುವುದು :

ಇಸ್ಮಾಯಿಲ್ ಆದಿಲ್‌ಶಾಹನ ಆಜ್ಞೆಯನ್ನು ಪಾಲಿಸುತ್ತಾ ಅಸದ್‌ಖಾನ್ ಲಾರಿಯು ಕೋಟೆಯ ಮುಖ್ಯದ್ವಾರದ ಹತ್ತಿರ ನೇಮಕಗೊಂಡನು ಹಾಗೂ ಆತನಿಗೆ ರಕ್ಷಕನನ್ನಾಗಿಸಲಾಯಿತು. ಬರೀದಿ ಸ್ತ್ರೀಯರು, ಶಿಖಂಡಿಗಳು ಹಾಗೂ ಮಕ್ಕಳು ಯಾವಾಗ ಕೋಟೆಯಿಂದ ಹೊರಬಿದ್ದರೋ ಆಗ ಅವರನ್ನು ಯಾರೂ ಯಾವುದೇ ತೆರನಾಗಿ ಹಾನಿಯುಂಟು ಮಾಡಬಾರದು. ಈ ತೆರನಾಗಿ ಅಲೀ ಬರೀದು ತಮ್ಮ ಸ್ತ್ರೀಯರನ್ನು ಹಾಗೂ ಶಿಖಂಡಿಗಳನ್ನು ಅಮೂಲ್ಯವಾದ ಆಭರಣಗಳ ಸಹಿತ ಹಾಗೂ ಬಹುಮನಿ ಬಾದಶಾಹರ ಕಾಲದಲ್ಲಿ ಕೆತ್ತಲ್ಪಟ್ಟ ಕಲಾಕೃತಿಗಳನ್ನು ಹಾಗೂ ಬಹುಕಾಲ ಬಾಳುವ ಯುದ್ಧ ಸಾಮಗ್ರಿ, ಧನಕನಕ ಭಂಡಾರ, ಬಂಗಾರದ ನಾಣ್ಯಗಳನ್ನು ನೀಡಿದನು. ಹಾಗೂ ಹೀಗೆ ನಿರ್ದೇಶಿಸಿದನು. ಅವರು ಈ ಎಲ್ಲ ವಸ್ತುಗಳನ್ನು ಪೋಷಾಕಿನ ಒಳಗೆ ಅಡಗಿಸಿಕೊಂಡು ಕೋಟೆಯಿಂದ ಹೊರಹೋಗಬೇಕು.

ಇಸ್ಮಾಯಿಲ್ ಆದಿಲ್‌ಶಾಹನ ದರ್ಬಾರ್ :

ಇಸ್ಮಾಯಿಲ್ ಆದಿಲ್‌ಶಾಹನ ವಶಕ್ಕೆ ಯಾವಾಗ ಕೋಟೆಯನ್ನು ಒಪ್ಪಿಸಲಾಯಿತೋ, ಅದೇ ದಿನ ಆತನು ಕೋಟೆಯೊಳಗೆ ಬಹಳೇ ಆಡಂಬರದೊಂದಿಗೆ ಪ್ರವೇಶಿಸಿದನು. ಅಲ್ಲಾಹುವಿಗೆ ಕೃತಜ್ಞತೆಯನ್ನರ್ಪಿಸಿದನು. ಏಕೆಂದರೆ ಆತನು ಬಹಮನಿ ವಂಶದ ಸಿಂಹಾಸನದ ಮೇಲೆ ಆಸೀನನಾದನು. ಅದರ ನಂತರ ಅಲ್ಲಾವುದ್ದೀನ್ ಇಮಾದ್‌ಶಾಹನನ್ನು ಅಸದ್‌ಖಾನ್ ಲಾರಿ ಹಾಗೂ ಯುವರಾಜನಾದ ಮಲ್ಲುಖಾನರ ಮುಖಾಂತರ ಆಮಂತ್ರಿಸಿದನು. ಕೆಲ ಸಮಯದ ನಂತರ ಮತ್ತೆ ಆತನನ್ನು ಕರೆತರಲು ಯುವರಾಜನಾದ ಅಲಿ ಹಾಗೂ ಅಬ್ದುಲ್ಲಾನನ್ನು ಹೋಗಲು ಆದೇಶಿಸಿದನು. ಯುವರಾಜರು ತಲುಪುತ್ತಿದ್ದಂತೆಯೇ ಇಮಾದ್‌ಶಾಹನು ಇಸ್ಮಾಯಿಲ್ ಆದಿಲ್‌ಶಾಹ್‌ನ ಆಮಂತ್ರಣವನ್ನು ಸ್ವೀಕರಿಸಿದನು ಹಾಗೂ ಆತನು ಅವರ ಜೊತೆಯಲ್ಲಿ ಹೊರಟನು. ಆತನು ಆದಿಲ್‌ಶಾಹಿ ಬಿಡಾರದ ಬಳಿ ತಲುಪುತ್ತಿದ್ದಂತೆಯೇ ಸ್ವತಃ ಬಾದಶಾಹನು ಆತನನ್ನು ಕೋಟೆಯ ದ್ವಾರದವರೆಗೆ ಬರಮಾಡಿಕೊಂಡನು. ಆತನ ಆಗಮನದಿಂದ ಸಭೆಗೆ ಶೋಭೆ ಬಂದಿತು.

ಆಭರಣಗಳ ವಿತರಣೆ :

ಇದರ ನಂತರ ಇಸ್ಮಾಯಿಲ್ ಆದಿಲ್‌ಶಾಹನು ಕೋಟೆಯಲ್ಲಿದ್ದ ಅಮೂಲ್ಯವಾದ ಬೆಳ್ಳಿ, ಬಂಗಾರಗಳ ಭಂಡಾರ ಹಾಗೂ ಬೆಳ್ಳಿಯ ಪಾತ್ರೆಗಳು, ಉತ್ಕೃಷ್ಟವಾದ ವಜ್ರ ವೈಡೂರ್ಯ ಹಾಗೂ ಮುತ್ತು ರತ್ನಗಳು, ಅತ್ಯುತ್ತಮ ಪೋಷಾಕುಗಳು ಹಾಗೂ ನಗದು ಹನ್ನೆರಡು ಲಕ್ಷ ಹನ್, (ಚಿನ್ನದ ನಾಣ್ಯಗಳು) ಅಲ್ಲಾವುದ್ದೀನ್ ಇಮಾದ್‌ಶಾಹನ ಸೇವೆಯಲ್ಲಿ ಅರ್ಪಿಸಲಾಯಿತು. ಏಕೆಂದರೆ ಆತನು ತನಗೆ ಮನಮೆಚ್ಚುವ ವಸ್ತುಗಳನ್ನು ಅವುಗಳಲ್ಲಿಂದ ಆರಿಸಿಕೊಳ್ಳಬೇಕು. ಆದರೆ ಅಲ್ಲಾವುದ್ದೀನ್ ಇಮಾದ್‌ಶಾಹನು ಒಂದು ಕಲಾಕೃತಿ ಕೆತ್ತಲ್ಪಟ್ಟ ಅಂಬರ್ (ಹಳದಿ ಕಿತ್ತಳೆ ಮಿಶ್ರಿತ ಬಣ್ಣದ ವಜ್ರ)ವನ್ನು ತೆಗೆದುಕೊಂಡನು. ಅದರ ನಂತರ ಇಸ್ಮಾಯಿಲ್ ಆದಿಲ್‌ಶಾಹನ ಆಜ್ಞೆಯಂತೆ ಅಸದ್‌ಖಾನ್ ಲಾರಿಯು ಮೂರು ಲಕ್ಷ ಹನ್‌ಗಳನ್ನು ಅಲ್ಲಾವುದ್ದೀನ ಇಮಾದ್‌ಶಾಹ್‌ನ ಸೇವಕರಲ್ಲಿ ಹಂಚಿದನು. ಅದರ ಹೊರತಾಗಿ ಮಲ್ಲುಖಾನ್, ಅನ್ನುಖಾನ್ ಅಬ್ದುಲ್ಲಾ ಹಾಗೂ ಇಬ್ರಾಹಿಂ ಯುವರಾಜನಿಗೂ ಒಂದು ಲಕ್ಷ ಹನ್‌ಗಳನ್ನು ವಿತರಿಸಲಾಯಿತು. ಅದರಲ್ಲಿ ಪ್ರತಿಯೊಬ್ಬರಿಗೂ ಎಷ್ಟೆಷ್ಟು ಬಂದಿತೋ, ಸುಮಾರು ಅಷ್ಟೇ ಹನ್‌ಗಳನ್ನು ಬಾದಶಾಹನ ಆಜ್ಞೆಯಂತೆ ಅಸದ್‌ಖಾನ್ ಲಾರಿಯೂ ಸಹ ತೆಗೆದುಕೊಂಡನು.

ಯಾತ್ರಿಗಳಿಗೆ ಹಾಗೂ ಅಮೀರರಿಗೆ ಪುರಸ್ಕಾರ :

ಸೈಯ್ಯದ್ ಅಲಿ ಅಖಿಲನಿಗೆ ಐವತ್ತು ಸಾವಿರ ಹುನ್ ಕರ್ಬಲಾ ಏ ಮುಅಲ್ಲಾ ಹಾಗೂ ಇನ್ನಿತರ ಪವಿತ್ರ ಸಮಾಧಿಗಳಿಗೆ ಯಾತ್ರೆ ಹೊರಡುವವರೆಗೆ ವಿತರಿಸಲು ಕೊಡಲಾಯಿತು. ವಿಜಾಪುರ ಹಾಗೂ ಸೈನ್ಯದ ಇತರ ವಿದ್ವಾಂಸ ಹಾಗೂ ಪ್ರಾಜ್ಞರಿಗಾಗಿ ಸೈಯ್ಯದ್ ಅಹ್ಮದ್‌ಹರ್‌ವಿಯನ್ನು ಹಾಗೂ ಐವತ್ತು ಸಾವಿರ ಹನ್‌ಗಳನ್ನು ಕೊಡುಗೆಯಾಗಿ ಅರ್ಪಿಸಲಾಯಿತು. ಅದರ ನಂತರ ಬಡವರಿಗಾಗಿ, ಅಸಹಾಯಕರಿಗಾಗಿ, ಅನಾಥರಿಗಾಗಿ ಹನ್ನೆರಡು ಸಾವಿರ ಹನ್‌ಗಳನ್ನು ವಿತರಿಸಲಾಯಿತು. ಉಳಿದ ಸಂಪತ್ತನ್ನು ಈ ಸೈನಿಕರಲ್ಲಿ ವಿತರಿಸಲಾಯಿತು. ಹೀಗೆ ಇಸ್ಮಾಯಿಲ್ ಆದಿಲ್‌ಶಾಹನು ತನ್ನ ವೆಚ್ಚಕ್ಕಾಗಿ ಏನನ್ನೂ ಉಳಿಸಿಕೊಳ್ಳಲಿಲ್ಲ. ಸಮಸ್ತ ಸಂಪತ್ತನ್ನು ವಿತರಿಸಿದನು. ಹಾಗೂ ಸ್ವತಃ ಏನನ್ನು ತೆಗೆದುಕೊಳ್ಳದೇ ಸಭೆಯಿಂದ ನಿರ್ಗಮಿಸಿದನು.

ಮೌಲಾನಾ ಶಹೀದ್ ಖೂಮಿ ಕವಿಗಾಗಿ ಧನ :

ಈ ಸಮಯದಲ್ಲಿ ಗುಜರಾತಿನಲ್ಲಿ ಆ ಕಾಲದ ಪ್ರಸಿದ್ಧ, ಜನಪ್ರಿಯ ವಿದ್ವಾಂಸ ಹಾಗೂ ಪ್ರಾಜ್ಞಕವಿಯಾದ ಮೌಲಾನಾ ಶಹೀದ್ ಖೂಮಿಯವರು ವಾಸಿಸುತ್ತಿದ್ದರು. ತನ್ನ ಕಾವ್ಯದ ಕಾರಣದಿಂದ ದರ್ಬಾರದಲ್ಲಿ ಅವರ ಗೌರವವು ಹಾಗೂ ಖ್ಯಾತಿಯೂ ಇತ್ತು. ಅದಕ್ಕಾಗಿ ಈ ಸಲವೂ ಇಸ್ಮಾಯಿಲ್ ಆದಿಲ್‌ಷಾಹನು ಭಂಡಾರದಿಂದ ಎಷ್ಟು ಸಾಧ್ಯವೋ ಅಷ್ಟು ಹನ್‌ಗಳನ್ನು ತೆಗೆದುಕೊಳ್ಳಲು ಹೇಳಿದನು. ಆದರೆ ಮೌಲಾನಾ

ಪ್ರಯಾಣ ಮಾಡಿ ಬಳಲಿ ಬಂದಿದ್ದರು. ಅದಕ್ಕಾಗಿ ದಣಿವಿನಿಂದಾಗಿ ಅವರಲ್ಲಿ ಮೊದಲಿನಂತೆ ಶಕ್ತಿ ಇರಲಿಲ್ಲ. ಬಾದಷಾಹ್‌ನೊಂದಿಗೆ ಮೌಲಾನಾ ಹೀಗೆ ಹೇಳಿದರು. ಅವರು ಇಲ್ಲಿಗೆ ಬಂದು ಶಕ್ತಿಹೀನರಾದರು. ಯಾವಾಗ ಮನೆಯಿಂದ ಗುಜರಾತಿಗೆ ಹೊರಟಿದ್ದರು ಆಗ ಈಗಿರುವದಕ್ಕಿಂತ ಎರಡು ಪಟ್ಟು ಬಲ ಅವರಲ್ಲಿತ್ತು. ಒಂದು ವೇಳೆ ದೊರೆಯೂ ಆಗ ಭಂಡಾರದಿಂದ ಧನವನ್ನು ತೆಗೆದುಕೊಳ್ಳಲು ಹೇಳಿದ್ದರೆ ಚೆನ್ನಾಗಿರುತ್ತಿತ್ತು. ಇಸ್ಮಾಯಿಲ್ ಆದಿಲ್‌ಶಾಹನು ಮೌಲಾನಾರ ಈ ಮಾತುಗಳನ್ನು ಕೇಳಿ ನಸುನಕ್ಕನು ಹಾಗೂ ಆತನು ಮೌಲಾನಾರಿಗೆ ಹೀಗೆಂದನು. ಎಷ್ಟು ಧನವನ್ನು ತಾವು ಎತ್ತಿಕೊಳ್ಳಬಹುದು ಅಷ್ಟನ್ನು ತೆಗೆದುಕೊಂಡು ಹೋಗಲು ಅನುಮತಿ ಇದೆ. ಖೂಮಿ ಕವಿಯ ಮನಸ್ಸಿ ಇಚ್ಛೆ ಇದೇ ಆಗಿತ್ತು. ಅದಕ್ಕಾಗಿ ಆತನು ಭೂಮಿಯನ್ನು ಚುಂಬಿಸಿ ಬಹಳೇ ಸಂತಷದೊಂದಿಗೆ ಎರಡು ಸಲ ಇಪ್ಪತ್ತೈದು ಸಾವಿರ ಚಿನ್ನದ ಹನ್‌ಗಳನ್ನು ಪಡೆದುಕೊಂಡನು.

ಅಮೀರ್ ಖಾಸಿಂ ಬರೀದ್‌ನ ತಪ್ಪುಗಳಿಗೆ ಕ್ಷಮೆ :

ಉಪರೋಕ್ತ ಘಟನೆಯು ದಿಟದಲ್ಲಿ ಆಧಾರಸಹಿತವಾಗಿದೆ. ಆಧಾರವು ಇದಾಗಿದೆ. ಏನೆಂದರೆ, ಇಸ್ಮಾಯಿಲ್ ಆದಿಲ್‌ಶಾಹ್‌ನು ಉದಾರಿ, ಸೂಕ್ಷ್ಮ ಮನಸ್ಸಿನ, ಸದ್ಗುಣಿ ಹಾಗೂ ನಸುನಗುತ್ತ ಮಾತನಾಡುವವನು ಆಗಿದ್ದನು. ಈ ಸಭೆಯಲ್ಲಿ ಇಸ್ಮಾಯಿಲ್ ಆದಿಲ್‌ಶಾಹನ ಬಹುಮಾನ ಹಾಗೂ ಪುರಸ್ಕಾರಗಳು ಉತ್ತುಂಗದಲ್ಲಿದ್ದವು. ಅದಕ್ಕಾಗಿ ಇಸ್ಮಾಯಿಲ್ ಆದಿಲ್‌ಷಾಹ್‌ನು ಅಲ್ಲಾವುದ್ದೀನ್ ಇಮಾದ್‌ಶಾಹನ ಶಿಫಾರಸ್ಸಿನ ಮೇಲೆ ಅಮೀರ್ ಖಾಸಿಂ ಬರೀದ್‌ನ ಎಲ್ಲ ತಪ್ಪುಗಳನ್ನು ಕ್ಷಮಿಸಿದನು ಹಾಗೂ ದರ್ಬಾರಿನಲ್ಲಿ ಅಮೀರರ ಸಾಲಿನಲ್ಲಿ ಆತನಿಗೆ ಉನ್ನತ ಸ್ಥಾನದಲ್ಲಿ ಕೂಡ್ರಿಸಿದನು. ಅಹ್ಮದಾಬಾದ್ ಬೀದರಿನ ಹೊರತಾಗಿ ಉದ್ಗೀರ್, ಮಕ್ಕಿಯಾ ಹಾಗೂ ಅನೇಕ ಪರಗಣಗಳೂ ಸಹ ಇದ್ದವು. ಅಮೀರ್‌ಖಾಸಿಂ ಬರೀದ್‌ನಿಗೆ ಇವುಗಳನ್ನು ಮತ್ತೊಮ್ಮೆ ನೀಡಿದನು. ಜೊತೆಗೆಯೇ ಈ ಷರತ್ತನ್ನಿಟ್ಟನು. ಆತನು ಬಾದಷಾಹನ ಮೂರು ಸಾವಿರ ಸೈನಿಕರ ಜೊತೆಗೆ ಇರಬೇಕು ಹಾಗೂ ಬೇಜಾನಗರದ ಮುಸ್ಲಿಮೇತರ ಆಡಳಿತಗಾರನ ವಶದಲ್ಲಿ ಇರುವ ಮುದ್ಗಲ್ ಹಾಗೂ ರಾಯಚೂರಿನ ಕೋಟೆಗಳನ್ನು ಆದಿಲ್‌ಶಾಹೀ ಸೈನ್ಯದ ಸಹಕಾರದೊಂದಿಗೆ ಗೆಲ್ಲಿಸಬೇಕು. ಇದೆ ತೆರನಾಗಿ ಮುಹಾವರ್ ಕೋಟೆಯನ್ನು ವಶದಲ್ಲಿ ತೆಗೆದುಕೊಂಡು ಅಲ್ಲಾವುದ್ದೀನ್ ಇಮಾದ್‌ಶಾಹನಿಗೆ ಒಪ್ಪಿಸಬೇಕು.

ರಾಯಚೂರ ಕೋಟೆಯ ಮೇಲೆ ವಿಜಯ :

ಅದರ ನಂತರ ಇರ್ವರೂ ಆಡಳಿತಗಾರರು ಬೇರ್ಪಟ್ಟರು. ಅಸದ್‌ಖಾನ್ ಲಾರಿಯ ಸಲಹೆಯಂತೆ ಅಹ್ಮದಾಬಾದ್ ಬೀದರನ್ನು ಮುಸ್ತಫಾಖಾನ್ ಶಿರಾಜಿಯ ವಶದಲ್ಲಿ ನೀಡಲಾಯಿತು. ಅದನ್ನು ಇಸ್ಮಾಯಿಲ್ ಆದಿಲ್‌ಶಾಹನು ಒಪ್ಪಿಕೊಂಡನು.

ಏಕೆಂದರೆ ತಿಮ್ಮರಾಜನ ನಿಧನವಾಗಿತ್ತು. ಹಾಗೂ ಆತನ ಪುತ್ರನಾದ ರಾಮರಾಜನಿಂದ ಬೇಜಾ ನಗರದ ದೊರೆ ಹಾಗೂ ಆತನ ಸುತ್ತಮುತ್ತಲಿನ ಅಮೀರರು ಅತೃಪ್ತರಿದ್ದರು. ಹಾಗೂ ರಾಮರಾಜನ ಆಡಳಿತವನ್ನು ಒಪ್ಪುತ್ತಿರಲಿಲ್ಲ. ಅದಕ್ಕಾಗಿ ಬೇಜಾನಗರ ಅದರ ಸುತ್ತಮುತ್ತಲಿನ ಪ್ರದೇಶವು ನಿರಂತರ ಯುದ್ಧಭೂಮಿಯಾಗಿ ಪರಿವರ್ತಿತವಾಗಿತ್ತು. ಮುಸ್ಲಿಮ ದೊರೆಗಳಿಗೆ ಈ ಸಂದರ್ಭವು ಸದವಕಾಶವಾಗಿ ಕಂಡಿತು. ಅದಕ್ಕಾಗಿ ಅವರು ಒಗ್ಗಟ್ಟಾಗಿ ರಾಯಚೂರಿನ ಕೋಟೆಯ ಮೇಲೆ ಆಕ್ರಮಣ ಮಾಡಿದರು. ಕೃಷ್ಣಾನದಿಯನ್ನು ಸುಲಭವಾಗಿ ದಾಟಿದರು. ಹಾಗೂ ಕೋಟೆಯನ್ನು ಗೆದ್ದುಕೊಂಡರು. ಈ ಕೋಟೆಯುನ್ನು ಹದಿನೇಳು ವರ್ಷಗಳಿಂದ ಮುಸ್ಲಿಮೇತರರು ತಮ್ಮ ವಶದಲ್ಲಿರಿಸಿಕೊಂಡಿದ್ದರು.

ವಿಜಯೋತ್ಸವದ ಆಚರಣೆ :

ಈ ಉತ್ಸವವನ್ನು ಆಚರಿಸುವ ವಾಗ್ದಾನವನ್ನು ಮೊದಲಿನಿಂದಲೇ ಇಸ್ಮಾಯಿಲ್ ಆದಿಲ್‌ಶಾಹನು ಮಾಡಿದ್ದನು. ಈಗ ಕೋಟೆಯು ವಶವಾದ ನಂತರ ಒಂದು ವಿಶೇಷ ಸಮಾರಂಭವನ್ನು ಏರ್ಪಡಿಸಲಾಯಿತು ಹಾಗೂ ಮದ್ಯಪಾನ ಪ್ರಾರಂಭವಾಯಿತು. ಈ ಸಭೆಯಲ್ಲಿ ಅಸದ್‌ಖಾನ್ ಲಾರಿಗೂ ಸಹ ಇಸ್ಮಾಯಿಲ್ ಆದಿಲ್‌ಶಾಹನು ಸ್ವತಃ ತನ್ನ ಕೈಯಿಂದಲೇ ಮೂರು ಸಲ ಮದ್ಯವನ್ನು ನೀಡಿದನು ಹಾಗೂ ತನ್ನ ಬಳಿ ಕೂಡ್ರಿಸಿಕೊಂಡನು. ಇಸ್ಮಾಯಿಲ್ ಆದಿಲ್‌ಶಾಹನಿಂದ ಅಲ್ಲಾವುದ್ದೀನ್ ಇಮಾದ್‌ಶಾಹ ಹಾಗೂ ಅಸದ್‌ಖಾನ್ ಲಾರಿಯೂ ಅಮೀರ್ ಖಾಸಿಂ ಬರೀದ್‌ನ ಕುರಿತು ಶಿಫಾರಸ್ಸು ಮಾಡಿದರು ಮತ್ತು ಹೀಗೆ ವಿನಂತಿಸಿದರು. ಖಾವಂದರು ಆತನನ್ನೂ ಸಹ ಸಭೆಯಲ್ಲಿ ಭಾಗವಹಿಸಲು ಅನುಮತಿಸಿದ್ದರೆ ಒಳಿತಾಗುತ್ತಿತ್ತು. ಬಾದಶಾಹನು ಅವರ ವಿನಂತಿಯನ್ನು ಸ್ವೀಕರಿಸಿದನು ಹಾಗೂ ಅಮೀರ್ ಖಾಸಿಂ ಬರೀದ್‌ನನ್ನು ಕರೆಸಿಕೊಳ್ಳಲಾಯಿತು. ಹಾಗೂ ಆತನಿಗೆ ಈ ಸಭೆಯಲ್ಲಿ ವಿಶೇಷ ಸ್ಥಾನವನ್ನು ಕಲ್ಪಿಸಲಾಯಿತು ಹಾಗೂ ಮದ್ಯವನ್ನು ನೀಡಲಾಯಿತು. ಬಾದಶಾಹನು ಈ ಸಂದರ್ಭದಲ್ಲಿ ಹೀಗೆಂದನು "ರಾಬಹುಂ ಕಲ್ಬಹುಂ" ಇದರರ್ಥವು ಇವರಲ್ಲಿ ನಾಲ್ಕನೆಯವನು ನಾಯಿಯಾಗಿರುವನು. ಬಾದಶಾಹನ ಈ ವಾಕ್ಯವನ್ನು ಕೇಳಿ ಇಮಾದ್‌ಶಾಹನು ಮೋಜನ್ನನುಬವಿಸಿದನು. ಏಕೆಂದರೆ ಆತನು ಬುದ್ಧಿವಂತ ವ್ಯಕ್ತಿಯಾಗಿದ್ದನು. ಆದರೆ ಅಮೀರ್ ಖಾಸಿಂ ಬರೀದ್‌ನಿಗೆ ಬಾದಷಾಹ್‌ನ ಈ ಹಾಸ್ಯವು ತಿಳಿಯಲಿಲ್ಲ ಹಾಗೂ ಆತನು ಇಮಾದ್‌ಶಾಹನ ನಸುನಗುವನ್ನು ಕಂಡು ರೇಗಿದನು. ಅಷ್ಟೇ ಅಲ್ಲದೆ ಅಳತೊಡಗಿದನು. ಅಮೀರ್ ಖಾಸಿಂ ಬರೀದ್‌ನ ಅಳುವಿಕೆಯು ಇಸ್ಮಾಯಿಲ್ ಆದಿಲ್‌ಶಾಹನ ಮೇಲೆ ಬಹಳೇ ಪ್ರಭಾವ ಬೀರಿತು. ಆತನು ಅಮೀರ್ ಖಾಸಿಂ ಬರೀದ್‌ನಿಗೆ ಅನುಕಂಪದ ದೃಷ್ಟಿ ಬೀರಿ ಹೀಗೆಂದನು. ಯಾವಾಗ ಆತನು ವಿಜಾಪುರಕ್ಕೆ ಹೋಗುವನೋ ಆಗ ಅಹ್ಮದಾಬಾದ್ ಬೀದರ್ ಆತನ ವಶಕ್ಕೆ ನೀಡಬೇಕು.

ಇಸ್ಮಾಯಿಲ್ ಆದಿಲ್‌ಶಾಹನ ಅತಿಥಿ ಸತ್ಕಾರ :

ಈ ಪ್ರದೇಶದಲ್ಲಿ ಇಸ್ಮಾಯಿಲ್ ಆದಿಲ್‌ಷಾಹ್‌ನು ಸುಮಾರು ಮೂವತ್ತು ದಿನಗಳವರೆಗೆ ಇದ್ದನು ಹಾಗೂ ಎಲ್ಲ ಕಾರ್ಯಗಳಿಂದ ಮುಕ್ತನಾಗಿ ಬೇರೆ ಪ್ರದೇಶಕ್ಕೆ ಹೊರಡಲು ಇಚ್ಛಿಸಿದನು. ತನ್ನ ವಾಸದ ಸಮಯದಲ್ಲಿ ಆತನಿಗೆ ಎಷ್ಟೋ ಸಲ ಈ ಸುದ್ದಿಯು ತಲುಪಿತು. ಏನೆಂದರೆ, ಬಹಾದೂರ್‌ಶಾಹ ಗುಜರಾತಿಯು ದಖ್ಖನ್ನಿನ ಪ್ರದೇಶಗಳ ಮೇಲೆ ದಾಳಿ ಮಾಡುವವನಿದ್ದಾನೆ. ಅದಕ್ಕಾಗಿ ಇಸ್ಮಾಯಿಲ್ ಆದಿಲ್‌ಶಾಹನು ಮಹಾವರ್ ಕೋಟೆಯ ಮೇಲೆ ಆಕ್ರಮಣಗೈಯ್ಯುವ ಇಚ್ಛೆಯನ್ನು ಮನದಿಂದ ತೆಗೆದು ಹಾಕಿದನು ಹಾಗೂ ಈ ತೆರನಾಗಿ ಆತನು ವಿಜಾಪುರದತ್ತ ಹೊರಟನು ಹಾಗೂ ಇಮಾದ್‌ಶಾಹನು ಬರಾರ್‌ದತ್ತ ನಡೆದನು. ದಾರಿಯಲ್ಲಿ ಇಸ್ಮಾಯಿಲ್ ಆದಿಲ್‌ಶಾಹನು ಅಲ್ಲಾವುದ್ದೀನ್ ಇಮಾದ್‌ಶಾಹನ ಅರಮನೆಗೆ ಹೋದನು. ಅತಿಥೇಯನು ಬಹಳೇ ಉತ್ಸುಕತೆಯೊಂದಿಗೆ ಅತಿಥಿಗಳನ್ನು ಸ್ವಾಗತಿಸಿದನು. ಹಾಗೂ ವಜ್ರ ವೈಡೂರ್ಯಗಳನ್ನು ಆತನ ಸೇವೆಗೆ ಅರ್ಪಿಸಿದನು.

ಇಮಾದ್‌ಶಾಹನು ಅತಿಥಿಯಾಗಿ ಆಗಮಿಸಿದ್ದು :

ಕೆಲವೇ ಸಮಯ ಕಳೆದಿತ್ತು. ಇಸ್ಮಾಯಿಲ್ ಆದಿಲಶಾಹನ ಬಳಿಗೆ ಇಮಾದ್‌ಶಾಹನೂ ಆಗಮಿಸಿದನು. ಅತಿಥಿಯ ಆತಿಥ್ಯಕ್ಕಾಗಿ ಬಾದಶಾಹನು ಒಂದು ಸಭೆಯನ್ನು ಆಯೋಜಿಸಿದನು. ಎರಡು ಸಾವಿರ ಮೊಘಲರ ಸೈನ್ಯವು ಸಮಸ್ತ ಯುದ್ಧ ಸಾಮಗ್ರಿಯೊಂದಿಗೆ ಇಮಾದ್‌ಶಾಹನಿಗೆ ಗೌರವ ಅರ್ಪಿಸಿತು ಹಾಗೂ ಇಸ್ಮಾಯಿಲ್ ಆದಿಲ್‌ಶಾಹನು ಇಮಾದ್‌ಶಾಹನಿಗೆ ತಿಳಿಸಿದನು. ತನ್ನ ಪಾಲಿಗೆ ತನ್ನ ತಂದೆತಾಯಿಯಿಂದ ಯಾವ ಭಾಗವು ದಕ್ಕಿದೆಯೋ ಅಥವಾ ಆಡಳಿತ ಸಮಯದಲ್ಲಿ ಅಭಿಸಿದೆಯೋ ಅದೆಲ್ಲವೂ ಈ ಸೈನಿಕರು ಇವರಲ್ಲಿ ಪ್ರತಿಯೊಬ್ಬ ಸೈನಿಕನು ತನ್ನ ಸಮಯದ ರುಸ್ತುಂ ಹಾಗೂ ಅಸ್ಫಂದ್‌ಯಾರ್‌ರಿಗಿಂತ ಹೆಚ್ಚು ಕೆಚ್ಚುಳ್ಳ ಶೂರರಾಗಿದ್ದಾರೆ. ಅಲ್ಲಾವುದ್ದೀನ್ ಇಮಾದ್‌ಶಾಹನು ಈ ಸೈನ್ಯವನ್ನು ನೋಡಿ ಬಹಳ ಸಂತಸ ಪಟ್ಟನು ಹಾಗೂ ಇಸ್ಮಾಯಿಲ್ ಆದಿಲ್‌ಶಾಹನೊಂದಿಗೆ ಈ ತರುಣರ, ಯುವಕರ ಹಾಗೂ ಶೂರ, ಧೀರರಿಂದಾದ ಸೈನ್ಯವನ್ನು ಬಾಯಿತುಂಬಾ ಹೊಗಳಿದನು. ಹಾಗೂ ಹೀಗೆಂದನು, ಒಂದು ವೇಳೆ ನನ್ನ ಹತ್ತಿರವೂ ಈ ಬಗೆಯ ಸೈನಿಕರಿದ್ದರೆ ನಾನೇಕೆ ಮಹಾವರ್ ಕೋಟೆಯನ್ನು ನನ್ನ ಕೈಯಿಂದ ಹೋಗಲು ಬಿಡುತ್ತಿದ್ದೆ?

ಅಮೀರ್ ಖಾಸಿಂ ಬರೀದ್‌ನ ಬಂಡಾಯ :

ಯಾವಾಗ ಅಮೀರ್ ಬರೀದ್‌ನು ಹಿಜರಿ ಶಕೆ ೯೮೩ರಲ್ಲಿ ಅರಮನೆ ಹಾಗೂ ಕೋಟೆಯ ಬೀಗದ ಕೈಗಳನ್ನು ಇಸ್ಮಾಯಿಲ್ ಆದಿಲ್‌ಶಾಹ್‌ನಿಗೆ ಒಪ್ಪಿಸಲಿಲ್ಲವೊ ಆಗ ಆತನು ಕಂಧಾರ ಹಾಗೂ ಕಲ್ಯಾಣ ಕೋಟೆಗಳ ಮೇಲೆ ಆಕ್ರಮಣ ಮಾಡಲು

ಬಯಸಿದನು. ಈ ತೆರನಾಗಿ ಶಾಹೀ ಬಿಡಾರವನ್ನು ವಿಜಾಪುರದ ಹೊರಗೆ ಕಳುಹಿಸಲಾಯಿತು. ಈ ಕಡೆ ಬುರ್ಹಾನ್ ನಿಜಾಮಶಾಹನ ಬಳಿಗೆ ಅಮೀರ್ ಖಾಸೀಮ ಬರೀದ್‌ನ ದೂತನು ತಲುಪಿದನು. ಏಕೆಂದರೆ ಆತನು ಆತನ ಸಹಾಯಕ್ಕಾಗಿ ಉತ್ತೇಜಿಸಲು. ಬುರ್ಹಾನ್ ನಿಜಾಮಶಾಹನು ಓರ್ವ ದೂತನ ಮುಖಾಂತರ ಇಸ್ಮಾಯಿಲ್ ಆದಿಲ್‌ಶಾಹನೊಂದಿಗೆ ಶಿಫಾರಸ್ಸು ಮಾಡಿದನು. ಏನೆಂದರೆ ಆತನು ವಿಜಾಪುರದಲ್ಲಿಯೇ ಉಳಿಯಬೇಕು ಹಾಗೂ ಅಮೀರಖಾಸಿಂ ಬರೀದ್‌ನು ಪ್ರಯಾಣದ ಸಮಯದಲ್ಲಿ ನನಗೆ ಬಹಳ ನೆಮ್ಮದಿ ನೀಡಿದ್ದನು. ಅದಕ್ಕಾಗಿ ಆತನ ಮೇಲೆ ದಾಳಿ ಮಾಡುವ ಇಚ್ಛೆಯನ್ನು ಬಿಟ್ಟುಬಿಡಬೇಕು. ಆ ಕಾರಣದಿಂದ ಬಹುಶಃ ಆತನ ಮನಸ್ಸಿನಲ್ಲಿ ನಿಮ್ಮ ಕುರಿತು ಕೃತಜ್ಞತಾಭಾವವೂ ಒಡಮೂಡಬಹುದು.

ಇಸ್ಮಾಯಿಲ್ ಆದಿಲ್‌ಶಾಹನು ಅದಕ್ಕುತ್ತರವಾಗಿ ಬುರ್ಹಾನ್ ನಿಜಾಮಷಾಹ್‌ನಿಗೆ ಸ್ಪಷ್ಟರೂಪದಲ್ಲಿ ಹೀಗೆ ಬರೆದನು. ಏನೆಂದರೆ, ಆತನು ಮಹಾವರ್ ಕೋಟೆಯ ವಿಜಯದ ವೇಳೆ ಎಂದಿಗೂ ನಿಜಾಮಶಾಹನೊಂದಿಗೆ ಈ ತೆರನಾದ ವಿನಂತಿ ಮಾಡಿರಲಿಲ್ಲ. ಆದರೆ ಈಗ ನಿಮ್ಮ ಮಾತಿಗೆ ಮನ್ನಣೆ ನೀಡುವೆನು. ಹೀಗೆ ಇಸ್ಮಾಯಿಲ್ ಆದಿಲ್‌ಶಾಹನು ತನ್ನ ಇಚ್ಛೆಯನ್ನು ಮುಂದೂಡಿದನು. ಆದರೂ ಸಹ ಇಷ್ಟಂತೂ ಬರೆದೇ ಬರೆದನು. ಈ ದಿನಗಳಲ್ಲಿ ವಸಂತ ಋತುವು ಪ್ರಾರಂಭಗೊಂಡಿದೆ. ಅರಮನೆಯಲ್ಲಿ ಮನಸ್ಸು ನಿಲ್ಲುವುದಿಲ್ಲ. ಸಾಮ್ರಾಜ್ಯದ ಸೀಮೆಗಳನ್ನು ವೀಕ್ಷಿಸುವ ಬಯಕೆ ದೃಢವಾಗಿರುವದು. ವಿಶೇಷವಾಗಿ ಸೋಲಾಪುರ ಹಾಗೂ ತಲಾರನ. ಅದಕ್ಕಾಗಿ ಈ ಸಮಯದಲ್ಲಿ ಯಾರು ನಿಮ್ಮ ಸೀಮೆಗೆ ನೇಮಕಗೊಂಡ ಅಮೀರ ಅಥವಾ ಸೇವಕನು ತಮ್ಮ ಮನಸ್ಸಿನಲ್ಲಿ ಯಾವುದೇ ತೆರನಾದ ಸಂಶಯ, ಅಥವಾ ನಿರಾಕರಣೆ ಅಥವಾ ಭಯ ಹೊಂದದಿರಲಿ.

ಬುರ್ಹಾನ ನಿಜಾಮಶಾಹನ ಸಲಹೆ :

ಬಹಾದೂರ್‌ಶಾಹ ಗುಜರಾತಿಯ ಕಡೆಯಿಂದ ಬುರ್ಹಾನ್‌ನಿಜಾಮ್‌ಶಾಹನಿಗೆ ಯಾವುದೇ ತೆರನಾದ ಭಯವಿರಲಿಲ್ಲ. ಆತನು ಬಹಳ ನೆಮ್ಮದಿಯಿಂದ ಇದ್ದನು. ಆದುದರಿಂದ ಆತನು ತನಗೆ ತಾನು 'ಸಾಹೇಬ್ ಚತರ್' (ಚತರ್ ಹೊಂದಿರುವ ದೊರೆ) ಎಂದು ಕರೆಯಿಸಿಕೊಳ್ಳುತ್ತಿದ್ದನು. ಬುರ್ಹಾನ್ ನಿಜಾಮಶಾಹನು ಇಸ್ಮಾಯಿಲ್ ಆದಿಲ್‌ಶಾಹನಿಗೆ ಹೇಳಿದನು. ಆತನು ತನ್ನ ಆಜ್ಞೆಯನ್ನು ಮೀರಬಾರದು. ಹಾಗೂ ವಿಜಾಪುರದಲ್ಲಿಯೇ ಉಳಿಯುವದು ವಿಹಿತ. ಏಕೆಂದರೆ ಬರಾರ್ ಹಾಗೂ ಅಹ್ಮದಾಬಾದ್ ಬೀದರದ ಪ್ರದೇಶಗಳು ಬಹಾದೂರ್‌ಶಾಹ ಗುಜರಾತಿಯು ಬುರ್ಹಾನ್ ನಿಜಾಮಶಾಹನಿಗೆ ಒಪ್ಪಿಸಿರುವನು. ಅದಕ್ಕಾಗಿ ಇಸ್ಮಾಯಿಲ್ ಆದಿಲ್‌ಶಾಹನು ವರ್ತಮಾನ ಹಾಗೂ ಭವಿಷ್ಯವನ್ನು ಭೂತದಂತೆ ತಿಳಿಯುವದು ಸರಿಯಲ್ಲ. ಅದಕ್ಕಾಗಿ ಎಲ್ಲ ಮಾತುಗಳ ಮೇಲೆ ಗಮನವೀಯಯುವದು ಹಾಗೂ ಆರಾಮ ಮಾಡುವದು ಒಳಿತು.

ಇಸ್ಮಾಯಿಲ್ ಆದಿಲ್‌ಶಾಹನ ಹೊರಡುವಿಕೆ :

ಇಸ್ಮಾಯಿಲ್ ಆದಿಲ್‌ಶಾಹನಿಗೆ ಬುರ್ಹಾನ್ ನಿಜಾಮ್‌ಶಾಹನ ಹೇಳಿಕೆಯು ಬೆಹಮನ್ ಅಲಿಗೆ ಸಿಕ್ಕಿತು. ಏಕೆಂದರೆ ಆತನು ವಿಜಾಪುರವನ್ನು ಬಿಟ್ಟು ಹೊರಟಿದ್ದನು. ಈ ಉತ್ತರವನ್ನು ಓದಿದ ಕೂಡಲೇ ಆತನು ನಮಾಜಿನ ನಂತರ ಹೊರಟು ನಿಂತನು. ಮರುದಿನ ಮದ್ಯಾಹ್ನ ಇಸ್ಮಾಯಿಲ್ ಆದಿಲಶಾಹನು ತನ್ನ ಜೊತೆ ನಲ್ವತ್ತು ಕಾಲಾಳು ಹಾಗೂ ನಾಲ್ಕುನೂರು ಮೋಗಲ ಸೈನಿಕರನ್ನು ತೆಗೆದುಕೊಂಡು ನಲದುರ್ಗ ನದಿಯ ದಡದಲ್ಲಿ ಬಿಡಾರ ಹೂಡಿದನು. ಈ ನದಿಯು ಸಮೀಪವೇ ಹರಿಯುತ್ತಿತ್ತು. ಇದರ ನಂತರ ಬುರ್ಹಾನ್ ನಿಜಾಮಶಾಹನ ದೂತನಿಗೆ ಮರಳಿ ಹೋಗಲು ಅನುಮತಿ ನೀಡಿದನು. ಹಾಗೂ ಆತನಿಗೆ ಆಗ್ರಹ ಪೂರ್ವಕವಾಗಿ ಹೀಗೆ ಹೇಳಿದನು. ಏನೆಂದರೆ, ಘಟಿಸಿದ ಎಲ್ಲ ಮಾತುಗಳನ್ನು ಬುರ್ಹಾನ್ ನಿಜಾಮಶಾಹನೆದುರು ಹೇಳಬೇಕು. ಏಕೆಂದರೆ ಇಸ್ಮಾಯಿಲ್ ಆದಿಲ್‌ಶಾಹನು ಈಗ ಮತ್ತೆ ದಿಲ್ ದಾರಿಯಲ್ಲಿ ನಡೆದ ಯುದ್ಧದಂತೆ ಈ ಯುದ್ಧದಲ್ಲಿಯೂ ಸಹ ಈಟಿ, ಖಡ್ಗ ಹಾಗೂ ಬಾಣಗಳ ಪ್ರಾವಿಣ್ಯತೆಯನ್ನು ಪ್ರದರ್ಶಿಸಲು ಅನುವಾಗಬೇಕು.

ಬುರ್ಹಾನ್ ನಿಜಾಮಶಾಹನ ಯುದ್ಧದ ಸಿದ್ಧತೆ :

ಹಿಂದಿನ ಸೋಲಿನ ಸೇಡನ್ನು ತೀರಿಸಿಕೊಳ್ಳುವ ಇಚ್ಛೆಯಿಂದ ಬುರ್ಹಾನ್ ನಿಜಾಮ್‌ಶಾಹ್‌ನು ತನ್ನ ಸಂಪತ್ತಿನ ಅಧಿಕ ಭಾಗವನ್ನು ಯುದ್ಧ ಸಾಮಗ್ರಿಗಳನ್ನು ಖರೀದಿಸುವಲ್ಲಿ ವ್ಯಯಿಸಿದನು ಹಾಗೂ ಅಮೀರ್ ಖಾಸಿಂ ಬರೀದನ ಸಹಾಯವನ್ನು ಪಡೆದನು. ಎಲ್ಲಿಯವರೆಗೆಂದರೆ, ಆತನಿಗೆ ತನ್ನ ಜೊತೆಗಾರನನ್ನಾಗಿಸಿ, ಇಸ್ಮಾಯಿಲ್ ಆದಿಲ್‌ಶಾಹನ ಪ್ರಾಂತ್ಯದತ್ತ ಹೊರಟನು.

ನಿಜಾಮ್‌ಶಾಹಿ ಹಾಗೂ ಆದಿಲ್‌ಶಾಹೀಗಳ ನಡುವೆ ಯುದ್ಧ :

ಈ ಕಡೆ ಇಸ್ಮಾಯಿಲ್ ಆದಿಲ್‌ಷಾಹ್‌ನು ಹನ್ನೆರಡು ಸಾವಿರ ಸೈನಿಕರ ಜೊತೆ ನಿಜಾಮಷಾಹನ ಸೈನ್ಯವನ್ನು ಎದುರಿಸಲು ಸಿದ್ಧತೆ ನಡೆಸಿದ್ದನು. ಅಸದ್‌ಖಾನ್ ಲಾರಿಯ ಮೇಲ್ವಿಚಾರಣೆ ಹಾಗೂ ಮಾರ್ಗದರ್ಶನದಲ್ಲಿ ಇಸ್ಮಾಯಿಲ್ ಆದಿಲ್‌ಶಾಹನು ತನ್ನ ಎಲ್ಲ ಸೈನಿಕರನ್ನು ನೇಮಿಸಿದನು. ಅದರ ನಂತರ ರಣಭೂಮಿಯು ಪರಸ್ಪರರ ಸ್ಥೈರ್ಯ ಪರೀಕ್ಷೆಯ ಕಣವಾಯಿತು. ಇತಿಹಾಸದಲ್ಲಿಯೇ ಇಂಥ ಘೋರ ರೂಪದ ಯುದ್ಧವು ನಡೆದಿರಲಿಲ್ಲ. ಯಾವಾಗಿನವರೆಗೆ ಸೈನಿಕರ ಬಳಿಗೆ ಯುದ್ಧ ಸಾಮಗ್ರಿ ಹಾಗೂ ಮನದಲ್ಲಿ ಸ್ಥೈರ್ಯಬಾಹುಲ್ಯವಿತ್ತು, ಅಲ್ಲಿಯವರೆಗೆ ಯುದ್ಧವು ನಿರಂತರವಾಗಿ ನಡೆಯುತ್ತಿತ್ತು. ಮತ್ತು ರಕ್ತಪಾತವು ಉತ್ತುಂಗಕ್ಕೇರಿತು. ಕೊನೆಗೆ ಓರ್ವ ಆಡಳಿತಗಾರನು ಗೆದ್ದನು ಹಾಗೂ ಇನ್ನೋರ್ವನು ಸೋತನು. ಇದೇ ನಿಸರ್ಗ ನಿಯಮವಾಗಿದೆ. ನಿಜಾಮಶಾಹೀ ವಂಶದ ಪ್ರಸಿದ್ಧ ಅಮೀರನು ರಣಭೂಮಿಯಲ್ಲಿ ಮೃತ್ಯುವಿನ

ಪಾಲಾದನು. ಆತನ ಹೆಸರು ಖಿರ್ಷಿದಖಾನ ಎಂದಿತ್ತು ಹಾಗೂ ಆದಿಲ್‌ಶಾಹೀ ವಂಶಕ್ಕೆ ವಿಜಯ ಲಭಿಸಿತು. ಬುರ್ಹಾನ್ ನಿಜಾಮಶಾಹ್‌ನ ಸಮಸ್ತ ಯುದ್ಧ ಸಾಮಗ್ರಿಯು ಯಾವುದೇ ಕೆಲಸಕ್ಕೆ ಬಾರದೇ ಉಳಿದಿತ್ತು. ಅಲ್ಲಿಯೇ ಬಿಟ್ಟು ಓಡಿ ಹೋದನು ಹಾಗೂ ಆತನು ಇಂಥ ಸೂಕ್ಷ್ಮ ಸಮಯದಲ್ಲಿ ಅಹ್ಮದನಗರದತ್ತ ಹೊರಟನು. ಆತನ ಸೈನ್ಯದ ಆನೆಗಳು ಹಾಗೂ ತೋಪುಖಾನೆ ಇತ್ಯಾದಿ ಇಸ್ಮಾಯಿಲ್ ಆದಿಲ್‌ಶಾಹನ ಹಿತೈಷಿಗಳ ಕೈಸೇರಿದವು.

ಆದಿಲ್‌ಶಾಹಿ ಹಾಗೂ ನಿಜಾಮಶಾಹಿ ವಂಶಗಳಲ್ಲಿ ಸ್ನೇಹ :

ಈ ಯುದ್ಧವು ಎರಡೂ ವಂಶಗಳ ನಡುವೆ ಕೊನೆಯ ಪರೀಕ್ಷೆಯ ಘಟ್ಟವಾಗಿತ್ತು. ಇದರ ನಂತರ ಪರಸ್ಪರರಲ್ಲಿ ಯಾವುದೇ ತೆರನಾದ ಯುದ್ಧ ಅಥವಾ ಮುಖಾಬಿಲೆಯಾಗಲಿಲ್ಲ. ಎಲ್ಲಿಯವರೆಗೆಂದರೆ. ಪ್ರಭಾವಿ ವ್ಯಕ್ತಿಗಳು ಈ ಎರಡೂ ವಂಶಗಳ ನಡುವೆ ಸ್ನೇಹ ಹಸ್ತದ ಲಾಘವ ಮಾಡಿಸಿದರು. ಈ ತೆರನಾಗಿ ಈರ್ವರೂ ಆಡಳಿತಗಾರರು ಗಡಿಯಲ್ಲಿ ಒಬ್ಬರಿಗೊಬ್ಬರು ಸ್ನೇಹಪೂರ್ವಕವಾಗಿ ಅಪ್ಪಿಕೊಂಡರು ಹಾಗೂ ಪ್ರಮಾಣ ಮಾಡಿದರು. ಏನೆಂದರೆ, ಅಲ್ಲಾವುದ್ದೀನ್ ಇಮಾದ್‌ಷಾಹ್, ಕುಲಿ-ಕುತುಬ್‌ಷಾಹ್‌ನ ಪ್ರದೇಶಗಳನ್ನು ಗೆದ್ದು ಸದಾಕಾಲಕ್ಕೆ ಆದಿಲ್‌ಶಾಹೀ ಹಾಗೂ ನಿಜಾಮಶಾಹೀ ವಂಶಗಳು ಪರಸ್ಪರ ಸಹಾಯಕ ಹಿತೈಷಿಗಳಾಗಿ ಪರಿವರ್ತಿತವಾಗಬೇಕು.

ನಲಗುಂಡಾದ ಮೇಲೆ ಆದಿಲ್‌ಶಾಹಿಗಳ ದಾಳಿ :

ಹಿಜರಿ ಶಕೆ ೯೪೦ರಲ್ಲಿ ಇಸ್ಮಾಯಿಲ್ ಆದಿಲ್‌ಶಾಹ ಹಾಗೂ ಅಮೀರ್‌ಖಾಸಿಂ ಬರೀದನು ಜೊತೆಯಾಗಿ ತೆಲಂಗಾಣದತ್ತ ಹೊರಟರು. ತೆಲಂಗಾಣದ ಪ್ರಸಿದ್ಧ ಕೋಟೆಯು ನೆಲಗುಂಡಾ ಇರುವದು. ಎಲ್ಲಕ್ಕಿಂತ ಮೊದಲು ಇಸ್ಮಾಯಿಲ್ ಆದಿಲ್‌ಶಾಹನ ವಶಕ್ಕೆ ಬಂದಿತು. ಈ ಕಡೆ ಸುಲ್ತಾನ್ ಕುಲಿ-ಕುತುಬ್‌ಶಾಹನು ಸಮಯದ ಬೇಡಿಕೆಯನ್ನನುಸರಿಸಿ ಗೊಲ್ಕೊಂಡಾದಲ್ಲಿಯೇ ಉಳಿದುಕೊಂಡನು. ಆತನು ಯುದ್ಧಭೂಮಿಯಲ್ಲಿ ಪ್ರವೇಶಿಸಲಿಲ್ಲ. ಆದರೆ ಕೋಟೆಯೊಳಗಿನ ಜನರ ರಕ್ಷಣೆ ಹಾಗೂ ಅವರ ಸಹಾಯಕ್ಕಾಗಿ ಆತನು ಸವಾರರ ಹಾಗೂ ಕಾಲಾಳುಗಳ ಒಂದು ಬೃಹತ್ ಸೈನ್ಯವನ್ನು ಕಳುಹಿಸಿದನು. ಅದರ ಹೊರತಾಗಿ ಅಸದ್‌ಖಾನ್ ಲಾರಿ ಕೋಟೆಯ ರಕ್ಷಕರ ಹಾಗೂ ವಾಸಿಸುವವರ ಜೊತೆ ಯುದ್ಧ ಮಾಡುತ್ತಿದ್ದನು ಹಾಗೂ ಪ್ರತಿಸಲ ಗೆಲ್ಲುತ್ತಿದ್ದನು.

ಇಸ್ಮಾಯಿಲ್ ಆದಿಲ್‌ಶಾಹನ ಬೇರೆಯ ಸ್ಥಳಕ್ಕೆ ಹೊರಡುವಿಕೆ :

ಯುದ್ಧ ಮಾಡುತ್ತಾ ಮಾಡುತ್ತಾ ನಲಗುಂಡಾ ಕೋಟೆಯ ರಕ್ಷಕರು ಮಿತಿಮೀರಿ ತೊಂದರೆಗೊಳಗಾದರು. ಕೆಲವೇ ದಿನಗಳಲ್ಲಿ ಕೋಟೆಯು ಆದಿಲ್‌ಶಾಹನ ವಶಕ್ಕೆ ಹೋಗುವದಿತ್ತು. ಆದರೆ ದುರಾದೃಷ್ಟದಿಂದ ಅಥವಾ ದೇವನ ಇಚ್ಛೆಯಂತೆ ಇಸ್ಮಾಯಿಲ್ ಆದಿಲ್‌ಶಾಹನ ಆರೋಗ್ಯ ಹದಗೆಟ್ಟಿತು. ಈ ಅಸ್ವಸ್ಥತೆಯು ಬಹಳ ದಿನಗಳವರೆಗೆ

ಮುಂದುವರಿಯಿತು. ಎಲ್ಲಿಯವರೆಗೆಂದರೆ, ಇಸ್ಮಾಯಿಲ್ ಆದಿಲ್‌ಷಾಹ್‌ನು ನಡೆದಾಡಲು ಕೂಡಾ ಆಗದಂತೆ ನಿಶ್ಯಕ್ತನಾದನು. ಅನಿವಾರ್ಯವಾಗಿ ಆತನು ಅಮೀರ್ ಬರೀದ್ ಹಾಗೂ ಅಸದ್‌ಖಾನ್ ಲಾರಿಯನ್ನು ಕರೆಯಿಸಿಕೊಂಡನು. ಏಕೆಂದರೆ ಈರ್ವರೂ ಆತನ ಜೊತೆ ಕೋಟೆಯನ್ನು ಗೆಲ್ಲುವದಕ್ಕಾಗಿ ಶ್ರಮಿಸುತ್ತಿದ್ದರು. ಈ ಈರ್ವರೊಂದಿಗೆ ಬಾದಷಾಹ್‌ನು ತನ್ನ ಸುದೀರ್ಘಕಾಲದ ಅನಾರೋಗ್ಯದಿಂದ ನಿಃಶಕ್ತಿ ಹಾಗೂ ಅನಾನುಕೂಲ ವಾತಾವರಣದ ಕುರಿತು ಮಾತನಾಡಿದನು ಹಾಗೂ ಹೀಗೆ ನಿರ್ಧರಿಸಿದನು. ಉಪರೋಕ್ತ ಈರ್ವರೂ ಅಮೀರರು ತೆಲಂಗಾಣದ ಯುದ್ಧದಲ್ಲಿ ನಿರತರಾಗಿರಬೇಕು ಹಾಗೂ ಬಾದಶಾಹನು ಸ್ವತಃ ಹಸನಾಬಾದ್ ಗುಲ್ಬರ್ಗಾದತ್ತ ಹೊರಡಬೇಕು. ಏಕೆಂದರೆ ಅಲ್ಲಿ ಆರೋಗ್ಯ ಸುಧಾರಿಸಿದರೆ ಮತ್ತೊಮ್ಮೆ ತೆಲಂಗಾಣದ ಬಯಕೆ ಮಾಡಬೇಕು.

ಇಸ್ಮಾಯಿಲ್ ಆದಿಲ್‌ಶಾಹನ ಅಂತ್ಯ :

ಮತ್ತೇನೆಂದರೆ ಅಮೀರರು ಬಾದಶಾಹನನ್ನು ಪಲ್ಲಕ್ಕಿಯಲ್ಲಿ ಕೂಡ್ರಿಸಿ ಹಸನಾಬಾದ್ ಗುಲ್ಬರ್ಗಾಕ್ಕೆ ಕಳುಹಿಸಲು ತೀರ್ಮಾನಿಸಿದರು. ಆದರೆ ಸಫರ್ ತಿಂಗಳಿನ ಹದಿನಾರನೆಯ ದಿನಾಂಕ ಹಿಜರಿ ಶಕೆ ೯೪೧ ಬುಧವಾರದಂದು ಇಸ್ಮಾಯಿಲ್ ಆದಿಲ್‌ಶಾಹನು ಮರಣ ಹೊಂದಿದನು ಹಾಗೂ ಆತನ ಜೊತೆಗೆಯೇ ಯುದ್ಧಗಳ ಪರಂಪರೆಯು ಸ್ತಬ್ಧಗೊಂಡಿತು. ಇಸ್ಮಾಯಿಲ್ ಆದಿಲ್‌ಶಾಹನ ಮೃತ್ಯುವಿನ ಸುದ್ದಿಯನ್ನು ಅಸದ್‌ಖಾನ್ ಲಾರಿಯು ಯಾರಿಗೂ ಹೇಳಲಿಲ್ಲ ಹಾಗೂ ಆತನ ಮೃತ್ಯುವನ್ನು ಗೌಪ್ಯವಾಗಿಟ್ಟನು. ಬಾದಶಾಹನ ಶವವನ್ನು ಪಲ್ಲಕ್ಕಿಯಲ್ಲಿಟ್ಟು ಅದರ ಮೇಲೆ ಪರದೆ ಹಾಕಿದನು. ಯಾವಾಗ ದಿನದ ಬೆಳಕು ಅಂತ್ಯಗೊಂಡಿತೋ ಹಾಗೂ ನಾಲ್ಕೂ ಕಡೆಗೆ ಇರುಳಾಯಿತೋ ಆಗ ಅಸದ್‌ಖಾನ್ ಲಾರಿಯು ಆತನ ಶವವನ್ನು ಗೋಗಿ ಪಟ್ಟಣಕ್ಕೆ ಕಳುಹಿಸಿಕೊಟ್ಟನು. ಅಲ್ಲಿ ಆತನು ತನ್ನ ದಿವಂಗತ ತಂದೆಯ ಗೋರಿಯ ಪಕ್ಕದಲ್ಲಿ ದಫನ್‌ಗೊಳ್ಳಬೇಕು. ಅದರ ನಂತರ ಅಸದ್‌ಖಾನ್ ಲಾರಿಯು ಹಿರಿಯ ಅನುಭವಿ, ಅಮೀರರು ವಿಶೇಷವಾಗಿ ಅಮೀರ್ ಖಾಸಿಂ ಬರೀದ್‌ನಿಗೆ ಕರೆಯಿಸಿಕೊಂಡನು ಹಾಗೂ ಎರಡು ದಿನಗಳ ನಂತರ ಅವರಿಗೆ ಎಲ್ಲ ವಿಷಯವನ್ನು ಅರುಹಿದನು.

ಉತ್ತರಾಧಿಕಾರಿಯ ಆಯ್ಕೆ :

ಇಸ್ಮಾಯಿಲ್ ಆದಿಲ್‌ಶಾಹನ ಮೃತ್ಯುವಿನ ನಂತರ ಯುವರಾಜನಾದ ಮಲ್ಲುಖಾನ್‌ನಿಂದ ಆತನ ಸಹೋದರನಾದ ಇಬ್ರಾಹಿಂನು ಬಹಳೇ ಕೋಪಿಷ್ಠನಾಗಿದ್ದನು. ಅವನ ಹೊರತಾಗಿ ಅನೇಕ ಅಮೀರರ ಬಯಕೆ ಅವನೆಡೆಗೆ ಇತ್ತು. ಅಸದ್‌ಖಾನ್ ಲಾರಿಯು ಬೇರೆ ಪ್ರದೇಶದಲ್ಲಿ ಯಾವುದೇ ಉತ್ತರಾಧಿಕಾರಿಯನ್ನು ಆರಿಸುವದು ಉಚಿತವೆಂದು ಬಗೆಯಲಿಲ್ಲ. ಅದಕ್ಕಾಗಿ ಆತನು ಸಮಯದ ಬೇಡಿಕೆಯನ್ನು ಮುಂದಿಟ್ಟುಕೊಂಡು ವ್ಯಯಕ್ತಿಕವಾಗಿ ಪ್ರತಿಯೋರ್ವ ವ್ಯಕ್ತಿಗೆ ಬೇರೆ ಬೇರೆಯಾಗಿ

ತಿಳಿಸಿದನು. ಈ ಸಮಯವು ಬಹಳೇ ಸೂಕ್ಷ್ಮವಾಗಿದೆ ಹಾಗೂ ಇಲ್ಲಿ ಯಾವುದೇ ತೀರ್ಮಾನ ತೆಗೆದುಕೊಳ್ಳುವುದು ಬುದ್ಧಿವಂತಿಕೆಯ ಲಕ್ಷಣವಲ್ಲ. ಹಸನಾಬಾದ್ ಗುಲ್ಬರ್ಗಾದಲ್ಲಿ ಹಜ್ರತ್ ಖ್ವಾಜಾ ಸೈಯ್ಯದ್ ಗೇಸುದರಾಜ್, ಬಂದಾನವಾಜ್‌ರ ಸಮಾಧಿ ಇದೆ. ಅಲ್ಲಿ ತಲುಪಿ ಪ್ರಾರ್ಥನೆ ಸಲ್ಲಿಸುವದು ಹಾಗೂ ಉತ್ತರಾಧಿಕಾರಿಯ ಸಮಸ್ಯೆಯನ್ನು ಬಗೆಹರಿಸುವದು ಉಚಿತವಾಗಿದೆ. ಎಲ್ಲ ಯುವರಾಜರು ಈ ಮಾತನ್ನು ಒಪ್ಪಿಕೊಂಡರು ಹಾಗೂ ಗೊಲ್ಕೊಂಡಾದ ಕೋಟೆಯನ್ನು ಬಿಟ್ಟು ಹೊರಟರು. ಪ್ರತಿಯೊಬ್ಬ ಯುವರಾಜನಿಗೆ ಅಸದ್‌ಖಾನ್ ಲಾರಿಯು ತನ್ನ ಬುದ್ಧಿವಂತಿಕೆಯಿಂದ ಹಸನಾಬಾದ್ ಗುಲ್ಬರ್ಗಾಕ್ಕೆ ಯುಕ್ತಿಪೂರ್ವಕವಾಗಿ ಕಳುಹಿಸಿದನು. ಅಲ್ಲಿ ಎಲ್ಲ ಯುವರಾಜರು ತಲುಪಿದರು. ಏಕೆಂದರೆ ಅಸದ್‌ಖಾನ್ ಲಾರಿಯು ಯುವರಾಜನಾದ ಇಬ್ರಾಹಿಂನನ್ನು ಬಾದಶಾಹನನ್ನಾಗಿಸಲು ಬಯಸುತ್ತಿದ್ದನು. ಆದರೆ ಅಡತಡೆ ಏನಿತ್ತೆಂದರೆ ಯುವರಾಜ–ಮಲ್ಲುಖಾನ್‌ನು ಇಸ್ಮಾಯಿಲ್ ಆದಿಲ್‌ಷಾಹ್‌ನ ಹಿರಿಯ ಪುತ್ರನಾಗಿದ್ದನು ಹಾಗೂ ಸ್ವತಃ ತಾನು ಜೀವಂತವಿರುವಾಗ ಇಸ್ಮಾಯಿಲ್ ಆದಿಲ್‌ಷಾಹ್‌ನು ಆತನನ್ನು ಉತ್ತರಾಧಿಕಾರಿಯಾಗಿ ನೇಮಿಸಿದ್ದನು. ಮಾತಿನಿಂದ ಅನಿವಾರ್ಯವಾಗಿ ಅಸದ್‌ಖಾನ್ ಲಾರಿಯು ಮಲ್ಲುಖಾನ್‌ನಿಗೆ ಇಸ್ಮಾಯಿಲ್ ಆದಿಲ್‌ಶಾಹನ ಉತ್ತರಾಧಿಕಾರಿಯಾಗಿ ಆಯ್ಕೆ ಮಾಡಿದನು ಹಾಗೂ ಮಿರ್ಚ ಕೋಟೆಯಲ್ಲಿ ಯುವರಾಜನಾದ ಇಬ್ರಾಹಿಂನನ್ನು ಬಂಧಿಸಿಟ್ಟನು. ಏಕೆಂದರೆ ಯಾವುದೇ ತೆರನಾದ ತೊಂದರೆ, ಗೊಂದಲ, ಜಗಳವುಂಟಾಗದಿರಲಿ ಎಂದು.

ಅಮೀರ್ ಸೈಯ್ಯದ್ ಹಿರವಿಯ ಹೇಳಿಕೆ :

ಇಸ್ಮಾಯಿಲ್ ಆದಿಲ್‌ಶಾಹನ ಉದಾರಿತನ, ವಾತ್ಸಲ್ಯಮಯಿ. ಲಾಭವನ್ನುಂಟು ಮಾಡಿಕೊಡುವದು ಹಾಗೂ ಶೌರ್ಯದ ಕುರಿತು ಅಮೀರ್ ಸೈಯ್ಯದ್ ಹರವಿಯು ಹೀಗೆ ಬರೆದಿದ್ದಾರೆ. ಏನೆಂದರೆ, ಇಸ್ಮಾಯಿಲ್ ಆದಿಲ್‌ಶಾಹನು ಉಪರೋಕ್ತ ಗುಣಗಳಿಂದಾಗಿ ಈ ಅರ್ಹತೆ ಪಡೆದಿರಲಿಲ್ಲ. ಆತನು ಜಮಾ ಖರ್ಚದಲ್ಲಿ ಸಮತೆ ಕಾಪಾಡುತ್ತಿದ್ದನು. ಇಸ್ಮಾಯಿಲ್ ಆದಿಲ್‌ಶಾಹನು ತನ್ನ ವೈರಿಗಳು, ಬಂಡಾಯಗಾರರು, ತಪ್ಪುಗೈಯ್ಯುವವರೊಂದಿಗೆ ಸದಾಕಾಲ ಸೌಜನ್ಯದಿಂದ ವರ್ತಿಸುತ್ತಿದ್ದನು ಹಾಗೂ ಆ ಜನರ ಮೋಸ, ವಂಚನೆ, ದಗಲ್ಬಾಜಿತನ, ದ್ವಂದ್ವ ಹೇಳಿಕೆ, ದುರ್ವರ್ತನೆಗಳನ್ನು ನಿರ್ಲಕ್ಷ್ಯ ಮಾಡುವ ಗುಣವುಳ್ಳವನಾಗಿದ್ದನು. ಅತ್ಯುತ್ತಮವಾದ ಪೋಷಾಕುಗಳನ್ನು ಉಡುವ ಹಾಗೂ ಉತ್ಕೃಷ್ಟವಾದ ಭೋಜನವನ್ನು ಸ್ವೀಕರಿಸುವ ಹವ್ಯಾಸವಿತ್ತು. ನೀಚ, ಅಶ್ಲೀಲ, ಮಾತುಗಳನ್ನು ದ್ವೇಷಿಸುತ್ತಿದ್ದನು ಹಾಗೂ ಈ ಪ್ರಯತ್ನದಲ್ಲಿರುತ್ತಿದ್ದನು. ಆತನ ಸಮೀಪ ವಿದ್ವಾಂಸರು, ಪ್ರಾಜ್ಞರು ಇರಬೇಕು ಎಂದು ಬಯಸುತ್ತಿದ್ದನು. ಆತನು ಕಲಾವಿದರು ಹಾಗೂ ಜ್ಞಾನಿಗಳನ್ನು ಗೌರವಿಸುತ್ತಿದ್ದನು. ಸಂಗೀತ ಹಾಗೂ ಶಾಯರಿಯನ್ನು ಬಹಳೇ ಇಷ್ಟಪಡುತ್ತಿದ್ದನು. ಸ್ವತಃ ಕವಿಯೂ ಆಗಿದ್ದನು ಮತ್ತು

ಶಾಯರಿ ಹೇಳುತ್ತಿದ್ದನು. ಆತನ ಕಾವ್ಯನಾಮವು 'ವಫಾಯಿ' ಎಂದಿತ್ತು. ಏನೆಂದರೆ ದಖ್ಖನಿ ಬಾದಶಾಹರಲ್ಲಿ ಯಾವ ಬಾದಶಾಹನೂ ಶಾಯರಿಯ ಮಾತು ಬಂದರೆ ಆತನ ಎತ್ತರಕ್ಕೆ ತಲುಪಲಾರನು. ಇಸ್ಮಾಯಿಲ್ ಆದಿಲ್‌ಶಾಹನ ಕಾವ್ಯರಚನೆಯು ಎಷ್ಟು ನಿರ್ಮಲ ಹಾಗೂ ಆಸಕ್ತಿದಾಯಕವಾಗಿದೆ ಎಂದರೆ ಅದರ ಉಪಮೆಯು ಬೇರೆ ದಖನಿ ಬಾದಶಾಹರ ಕಾವ್ಯದಲ್ಲಿ ಸಿಗುವುದಿಲ್ಲ.

■

*

೩. ಇಸ್ಮಾಯಿಲ ಆದಿಲಶಾಹನ ಪುತ್ರ ಮಲ್ಲೂ ಆದಿಲಶಾಹ

ಮಲ್ಲೂಖಾನನ ಪಟ್ಟಾಭಿಷೇಕ:

ಸಾಯುವುದಕ್ಕೆ ಮೊದಲು ಇಸ್ಮಾಯಿಲ ಆದಿಲಶಾಹನು ತನ್ನ ಮೃತ್ಯುವಿನ ನಂತರ ಮಲ್ಲೂಖಾನನನ್ನು ಬಾದಶಹನನ್ನಾಗಿ ಮಾಡಬೇಕೆಂದು ಹೇಳಿದ್ದನು. ಇಸ್ಮಾಯಿಲ್ ಆದಿಲಶಾಹನು ನಿಧನನಾದ ನಂತರ ಆತನ ಇಚ್ಛೆಯನ್ನು ಅಸದ್‌ಖಾನ ಲಾರಿಯು ಪೂರ್ಣಗೊಳಿಸಿದನು, ಮಲ್ಲೂ ಆದಿಲಶಾಹನನ್ನು ಬಾದಶಹನಾಗಿ ಮಾಡಿದನು. ಬಾದಶಹನ ರಕ್ಷಣೆಯ ಕರ್ತವ್ಯವನ್ನು ಮಹಾರಾಣಿ ಪೂಂಜೀ ಖಾತೂನ ಅಂದರೆ ಇಸ್ಮಾಯಿಲ ಆದಿಲಶಾಹನ ತಾಯಿಗೆ ಒಪ್ಪಿಸಿದನು. ತರುವಾಯ ಅಸದ್‌ಖಾನನು ತನ್ನ ಪ್ರದೇಶಕ್ಕೆ ಹೊರಟು ಹೋದನು.

ಮಲ್ಲೂಖಾನನ ಭೋಗವಿಲಾಸ:

ಅಸದ್‌ಖಾನ ಲಾರಿಯು ಹೊರಟು ಹೋದ ನಂತರ ಮಲ್ಲೂಖಾನನು ಸಂಪೂರ್ಣ ಸ್ವತಂತ್ರನಾದನು. ಆತನು ತನ್ನ ಮನಬಂದಂತೆ ಪಾನಕೂಟ ಮತ್ತು ಮಾನಿನಿಯರ ನೃತ್ಯಗಳನ್ನು ಏರ್ಪಡಿಸುವುದನ್ನು ಆರಂಭಿಸಿದನು. ಮಲ್ಲೂಖಾನನು ಇನ್ನೂ ನವಯುವಕನಾಗಿದ್ದನು, ಜಗತ್ತಿನ ಉಚ್ಚ-ನೀಚ, ಉನ್ನತಿ-ಅವನತಿಗಳ ಬಗ್ಗೆ ಅನುಭವವಿಲ್ಲದವನಾಗಿದ್ದನು, ಹೀಗಾಗಿ ಬಹುಬೇಗನೆ ಅನುಚಿತ ಕೆಲಸ ಮತ್ತು ದುಶ್ಚಟಗಳ ದಾಸನಾದನು. ಆತನು ಹಗಲಿರುಳೂ ಸ್ವೇಚ್ಛಾಚಾರದ ಕೆಲಸಗಳನ್ನು ಆರಂಭಿಸಿದನು. ಅರಸರಿಗೆ ಶೋಭೆ ತರದಂತಹ ಕೆಲಸಗಳಲ್ಲಿ ತೊಡಗಿದನು, ಜನರ ದೃಷ್ಟಿಯಲ್ಲಿ ಅರಸರಿಗೆ ಭೂಷಣವಾಗುವ ಒಂದು ಕೆಲಸವನ್ನೂ ಮಾಡಲಿಲ್ಲ. ಪರಿಣಾಮವೇನಾಯಿತೆಂದರೆ, ಪ್ರಜೆಗಳು ಆತನ ಬಗ್ಗೆ ಪೂರ್ವಗ್ರಹ ಪೀಡಿತರಾದರು, ಆತನ ಬಗ್ಗೆ ಕುಪಿತರಾದರು.

ಒಂದು ಹೊಸ ಹವ್ಯಾಸ:

ಇವೆಲ್ಲ ದುಷ್ಟ ಕೆಲಸಗಳಲ್ಲದೆ ಇನ್ನೊಂದು ಹೊಸ ದುಷ್ಟ ಚಟುವಟಿಕೆಯನ್ನು ಆರಂಭಿಸಿದನು. ಎಳೆಯ ಪ್ರಾಯದಲ್ಲಿಯೇ ಸಿಂಹಾಸನಾರೂಢನಾದುದರಿಂದ ತನ್ನನ್ನು ತಾನೇ ಸರ್ವಾಧಿಕಾರಿಯೆಂದು ತಿಳಿದುಕೊಂಡನು. ಆತನು ಸುಂದರವಾದ ತರುಣರನ್ನು ತನ್ನತ್ತ ಆಕರ್ಷಿತರಾಗುವಂತೆ ಮಾಡುತ್ತಿದ್ದನು. ಖ್ಯಾತ ಮನೆತನದ, ಗೌರವಸ್ಥ, ಸಜ್ಜನರ ಮಕ್ಕಳು ಆತನ ಅಧಿಕಾರದ ಬಲದಿಂದ ಆತನ ಸಂಗ ಮಾಡತೊಡಗಿದರು, ಮಾತಾಪಿತರು ರಾಜನ ಸಹವಾಸದಿಂದ ಬಲವಂತವಾಗಿ ಆ ಮಕ್ಕಳನ್ನು ಬಿಡಿಸಬೇಕಾಗುತ್ತಿತ್ತು.

ಮಲ್ಲೂಖಾನನ ಹಿಂಸೆ ಮತ್ತು ದಬ್ಬಾಳಿಕೆ:

ಈ ಪರಿಸ್ಥಿತಿಯು ಹೀಗೆಯೇ ಜಾರಿಯಲ್ಲಿರುವಾಗ, ಆದಿಲಶಾಹಿ ಮನೆತನದ ದಿವಾನನಾಗಿದ್ದ ಯೂಸುಫ್ ತುರ್ಕನ ಮಗನು ಆತನಿಗೆ ಪ್ರಿಯನಾದನು, ಆ ಯುವಕನನ್ನು ಕರೆಕಳುಹಿಸಿದನು. ಆದರೆ ದಿವಾನನು ತನ್ನ ಮಗನನ್ನು ಕಳುಹಿಸಲು ಒಪ್ಪಲಿಲ್ಲ, ಆದರೆ ಮಲ್ಲೂಖಾನನು ಬಲವಂತದಿಂದ ಆತನನ್ನು ಎಳೆದು ತರಲು ರಾಜಸೇವಕರಿಗೆ ಆದೇಶ ನೀಡಿದನು. ರಾಜಾಜ್ಞೆಯನ್ನು ವಿರೋಧಿಸಿದವರನ್ನು ಇಲ್ಲವೆ ರಾಜಾಜ್ಞೆ ಪಾಲಿಸುವುದಕ್ಕೆ ಅಡ್ಡಿ ಉಂಟು ಮಾಡುವವರನ್ನು ವಧಿಸಲಾಗುವುದು ಎಂಬ ಆದೇಶವನ್ನು ಹೊರಡಿಸಿದನು. ಆದಿಲಶಾಹಿ ಮನೆತನದವರಿಗೆ ಪಟ್ಟಾಭಿಷೇಕ ಮಾಡಿದ ಸರದಾರರಲ್ಲಿ ಆತನೂ ಒಬ್ಬನಾಗಿದ್ದನು. ಆತನು ಬಾದಶಹನ ವಿರುದ್ಧ ಸೇವಕರನ್ನು ಮತ್ತು ಸೈನಿಕರನ್ನು ಬಂಡೇಳುವಂತೆ ಹುರಿದುಂಬಿಸಿದನು. ತನ್ನ ಪರಿವಾರದವರು ಮತ್ತು ಸಂಗಡಿಗರೊಡನೆ ಯಾವುದೇ ಭಯ ಮತ್ತು ಅಪಾಯಕ್ಕೆ ಹೆದರದೆ ನಗರದಿಂದ ಹೊರಟು ತನ್ನ ಪ್ರದೇಶವಾದ ಘೋರಾ ಖಸಬಾದೆಡೆಗೆ ಹೊರಟನು. ಈ ಪ್ರಕರಣವು ದೀರ್ಘವಾಗಿ, ಸಜ್ಜನರು ಮತ್ತು ಗೌರವಸ್ಥರು ಆತನಿಗೆ ರಕ್ಷಣೆ ನೀಡಿದರು.

ಮಲ್ಲೂಖಾನನ ವಿರುದ್ಧ ಪಿತೂರಿ:

ಮೊಮ್ಮಗನ ದುಷ್ಟಚಟಗಳಿಂದ ಮಲ್ಲೂಖಾನನ ಅಜ್ಜಿಯು ಬಹಳ ನೊಂದಳು, ಅವಳಿಗೆ ಅತ್ಯಂತ ಬೇಸರವಾಯಿತು. ಹೇಗಾದರೂ ಮಾಡಿ ಮಲ್ಲೂಖಾನನನ್ನು ಸಿಂಹಾಸನದಿಂದ ಕೆಳಗಿಳಿಸಿ, ಆತನ ಅರಸುತನವನ್ನು ಕೊನೆಗಾಣಿಸಬೇಕು, ಆತನ ಸ್ಥಳದಲ್ಲಿ ರಾಜಕುಮಾರ ಇಬ್ರಾಹಿಮನನ್ನು ಬಾದಶಹನಾಗಿ ಮಾಡಬೇಕೆಂಬ ಅಚಲ ನಿರ್ಧಾರವನ್ನು ಮಾಡಿದಳು. ಅಸದ್‌ಖಾನ ಲಾರಿಗೆ ಮಲ್ಲೂಖಾನನ ಕೆಟ್ಟ ಚಟುವಟಿಕೆಗಳ ಬಗ್ಗೆ ಮತ್ತು ಅದನ್ನು ತಡೆಗಟ್ಟುವ ಬಗ್ಗೆ ತನ್ನ ವಿಚಾರಗಳನ್ನು ತಿಳಿಸಬೇಕೆಂದುಕೊಂಡಳು. ಯೂಸುಫ ಶಹನಾನನ ಒಬ್ಬ ವಿಶ್ವಾಸಿಕ ಸ್ನೇಹಿತನೊಡನೆ

ಈ ಸಮಾಚಾರವನ್ನು ಅಸದ್‌ಖಾನ ಲಾರಿಯ ಜಹಗೀರಾದ ಬೆಳಗಾವಿಗೆ ತಲುಪಿಸಿದಳು. ಅಸದ್‌ಖಾನ ಲಾರಿಗೆ ಅಲ್ಲಿಯ ಎಲ್ಲ ಸಮಾಚಾರಗಳು ತಿಳಿದಿದ್ದವು. ಬಾದಶಹನ ಇಂತಹ ಕೃತ್ಯಗಳನ್ನು ಆತನು ಖಂಡಿಸುತ್ತಿದ್ದುದರಿಂದ, ಬಿಜಾಪುರದಲ್ಲಿ ವಾಸವಾಗುವ ಇಚ್ಛೆ ಇರಲಿಲ್ಲವೆಂದು, ಈ ಕಾರಣದಿಂದಲೇ ಬೆಳಗಾವಿಯಲ್ಲಿ ವಾಸ ಮಾಡುತ್ತಿರುವುದಾಗಿ ಮಾರುತ್ತರ ನೀಡಿದನು. ಪೂಂಜೀ ಖಾತೂನಳ ಸಲಹೆಯನ್ನು ಮನ್ನಿಸಿ, ಆದಿಲಶಾಹಿ ಮನೆತನದ ಗೌರವ, ಗಾಂಭೀರ್ಯ ಮತ್ತು ಘನತೆಗೆ ಧಕ್ಕೆ ಬರದಂತೆ ನೋಡಿಕೊಳ್ಳಬೇಕೆಂದು ಹೇಳಿ ಕಳುಹಿಸಿದನು. ಆಸದ್‌ಖಾನನ ಅಭಿಪ್ರಾಯವನ್ನು ಪಡೆದ ನಂತರ ಯೂಸುಫ ಶಹನಾ ನಗರದತ್ತ ಹೊರಟನು.

ಮಲ್ಲೂಖಾನನ ಪದಚ್ಯುತಿ:

ಪೂಂಜೀ ಖಾತೂನಳ ಆದೇಶದಂತೆ ಯೂಸುಫ ಶಹಾನಾ ಎರಡು ನೂರು ಸೈನಿಕರೊಡನೆ ಬಿಜಾಪುರದತ್ತ ಹೊರಟನು. ಅಲ್ಲಿ ತಲುಪಿದೊಡನೆ ನಿರ್ಭೀತಿಯಿಂದ ಅರಕ್ ಕಿಲ್ಲೆಯೊಳಗೆ ಕಾಲಿಟ್ಟನು. ಕಾವಲುಗಾರನು ಅಡ್ಡಿಪಡಿಸಿದಾಗ, ಆತನ ತಲವಾರದ ಒಂದೇ ಪೆಟ್ಟಿಗೆ ಕಾವಲುಗಾರನು ಹತನಾದನು. ಈ ರೀತಿಯಾಗಿ ಯೂಸುಫ ಶಹಾನಾ, ಮಲ್ಲೂಖಾನನನ್ನು ಬಂಧಿಸಿಬಿಟ್ಟನು. ಪೂಂಜೀ ಖಾನಳ ಅನುಮತಿಯ ಮೇರೆಗೆ ಬಾದಶಹ ಮತ್ತು ಆತನ ಸೋದರಸಂಬಂಧಿ ಅನೂಖಾನರ ಕಣ್ಣುಗಳಲ್ಲಿ ಬಿಸಿಬಿಸಿಯಾದ ಸಲಾಕೆಗಳನ್ನು ಚುಚ್ಚಿದರು. ತರುವಾಯ ರಾಜಕುಮಾರ ಇಬ್ರಾಹಿಮನನ್ನು ಆದಿಲಶಾಹಿ ಪಟ್ಟದ ಮೇಲೆ ಕೂಡಿಸಲಾಯಿತು, ಹೀಗೆ ಇಬ್ರಾಹಿಮನು ಬಾದಶಹನಾದನು.

ಮಲ್ಲೂಖಾನನ ಅರಸೊತ್ತಿಗೆಯ ಅವಧಿಯು ಕೇವಲ ಆರು ತಿಂಗಳು ಮತ್ತು ಕೆಲವು ದಿನಗಳು ಮಾತ್ರವಾಗಿತ್ತು.

■

*

೪. ಇಸ್ಮಾಯಿಲ ಆದಿಲಶಾಹನ ಪುತ್ರ ಇಬ್ರಾಹಿಮ ಆದಿಲಶಾಹ

ಶೌರ್ಯ ಮತ್ತು ಪರಾಕ್ರಮ:

ಇಬ್ರಾಹಿಮ ಆದಿಲಶಾಹನು ಅತ್ಯಂತ ಪರಾಕ್ರಮಿಯಾಗಿದ್ದು, ತನ್ನ ಪ್ರಾಣ ಪಣಕ್ಕಿಟ್ಟು ಹೋರಾಡುವ ಶೂರ ಬಾದಶಾಹನಾಗಿದ್ದನೆಂದು ಇತಿಹಾಸಕಾರರು ಹೇಳುತ್ತಾರೆ. ಆತನು ತನ್ನ ಸಾಮರ್ಥ್ಯ, ಶೌರ್ಯ ಮತ್ತು ಪರಾಕ್ರಮದ ಬಲದಿಂದಾಗಿ, ಯಾವ ವ್ಯಕ್ತಿಯನ್ನೂ ಲಕ್ಷ್ಯಕ್ಕೆ ತರುತ್ತಿರಲಿಲ್ಲ. ಪ್ರತಿಕೂಲ ಮತ್ತು ಭಾವಾವೇಶದ ಪರಿಸ್ಥಿತಿಗಳನ್ನು ಎದುರಿಸುತ್ತ ಬಿರುಗಾಳಿಯಂತೆ ರಭಸವಾಗಿ ಮುನ್ನುಗ್ಗುತ್ತಿದ್ದನು. ಇಬ್ರಾಹಿಮನ ಶಕ್ತಿ, ಸಾಹಸ ಮತ್ತು ಪರಾಕ್ರಮದಂತೆ ಆತನ ಕೋಪ ಮತ್ತು ಆತನು ನೀಡಿದ ಕೊಡುಗೆಗಳು ಸಹ ರಾಜ್ಯದ ಮೂಲೆ ಮೂಲೆಯಲ್ಲಿ ಜನಜನಿತವಾಗಿದ್ದವು. ರಾಜ್ಯದ ಆಡಳಿತವನ್ನು ಸಂಭಾಳಿಸಲು ಆರಂಭಿಸಿದ ಸಮಯದಿಂದ ಸಾಯುವವರೆಗೆ, ಯುದ್ಧ ಮಾಡುವದರಲ್ಲಿ, ಯುದ್ಧದ ನೀತಿಯನ್ನು ರೂಪಿಸುವಲ್ಲಿ ಮತ್ತು ವೈರಿಗಳ ಮೇಲೆ ದಾಳಿ ಮಾಡುವಲ್ಲಿ ಇಬ್ರಾಹಿಮನು ನಿರತನಾಗಿದ್ದನು.

ಧಾರ್ಮಿಕ ಬದಲಾವಣೆ:

ತನ್ನ ಆಡಳಿತದ ಅವಧಿಯಲ್ಲಿ, ಇಬ್ರಾಹಿಮ ಆದಿಲಶಾಹನು ನಿಜಾಮಶಾಹಿ ಸೈನ್ಯದೊಡನೆ ಹತ್ತು ಸಲ ಯುದ್ಧ ಮಾಡಿದ್ದನೆಂದು ಅಧಿಕೃತವಲ್ಲದ ಮೂಲಗಳಿಂದ ತಿಳಿದುಬರುತ್ತದೆ. ಆದರೆ, ರಣರಂಗಕ್ಕೆ ಒಂದು ಸಲವೂ ಕೇವಲ ಸೈನ್ಯ ಮಾತ್ರ ಕಳುಹಿಸಿರಲಿಲ್ಲ, ಸೈನ್ಯದೊಡನೆ ಸ್ವತಃ ತಾನೂ ಯುದ್ಧಕ್ಕೆ ಹೋಗಿ ಸಾಹಸ ಮತ್ತು ಪರಾಕ್ರಮ ಮೆರೆಯುತ್ತಿದ್ದನು. ಇಷ್ಟಾದರೂ, ಆತನ ದುರಾದೃಷ್ಟದಿಂದ ಕೇವಲ ಎರಡು ಬಾರಿ ಮಾತ್ರ ನಿಜಾಮಶಾಹಿ ಸೈನ್ಯವನ್ನು ಪರಾಭವಗೊಳಿಸಲು ಆತನಿಂದ ಸಾಧ್ಯವಾಯಿತು. ಒಂದು ಸಲ ಕಸ್ಬಾದಲ್ಲಿ ಹಾಗೂ ಇನ್ನೊಂದು ಸಲ ಖಾನನು ಇರುವ ಪ್ರದೇಶದಲ್ಲಿ. ತನ್ನ ಪೂರ್ವಜರು ಮತ್ತು ಮನೆತನದವರ ಧರ್ಮವನ್ನು

ತೊರೆದು, ಇಬ್ಬರು ಇಮಾಮರ ಬದಲಾಗಿ, ರಜೀಉಲ್ಲಾತಾಲಾ ಇಮಾಮ ಅಬೂ ಹನೀಫರ ಅನುಯಾಯಿಯಾಗಿ ಪರಿವರ್ತನೆಯಾದ ವಂಶದ ಪ್ರಪ್ರಥಮ ವ್ಯಕ್ತಿಯಾಗಿದ್ದನು.

ಹೊಸ ಆದೇಶಗಳು:

ಬಾದಶಹನು ಇಮಾಮಿಯಾ ಪಂಗಡದ ಸಂಪ್ರದಾಯ, ರೀತಿ-ರಿವಾಜುಗಳನ್ನು ಬದಲಿಸಿಬಿಟ್ಟನು. ಯಾವುದೇ ಕಾರಣದಿಂದ, ಯಾವ ವ್ಯಕ್ತಿಯೂ ತಲೆಯ ಮೇಲೆ ಕೆಂಪು ವಸ್ತ್ರಗಳನ್ನು ಧರಿಸಬಾರದು ಎಂಬ ರಾಜಾಜ್ಞೆಯನ್ನು ಜಾರಿಗೊಳಿಸಿದನು. ಇಮಾಮೀ ಪಂಗಡದ ಜನರು ಕೆಂಪುವಸ್ತ್ರವನ್ನು ಧರಿಸುವುದು ಆಗಿನ ಕಾಲದಲ್ಲಿ ಹೆಮ್ಮೆಯ ವಿಷಯವಾಗಿತ್ತು. ಖುಷ್ ಕಲಾಯಿ ಆಖಾ, ಶಜಾತ್ ಖಾನ್ ಕುರ್ದ ಹಾಗೂ ಅಸದ್‌ಖಾನ ಲಾರಿ ಇವರನ್ನು ಹೊರತುಪಡಿಸಿ, ಹೊರರಾಜ್ಯಗಳೊಡನೆ ಸಂಬಂಧವಿಟ್ಟುಕೊಂಡ ಎಲ್ಲ ಸರದಾರರನ್ನು ಪದಚ್ಯುತಿಗೊಳಿಸಿಬಿಟ್ಟನು. ಅವರ ಸ್ಥಾನಗಳಲ್ಲಿ ದಕ್ಷಿಣದವರನ್ನು ಮತ್ತು ಹಬಶಿಗಳನ್ನು ನೇಮಿಸಿದನು. ಇಮಾದಶಾಹಿ ಮತ್ತು ನಿಜಾಮಶಾಹಿ ವಂಶದ ಪರಂಪರೆಗಳನ್ನು ಅಳವಡಿಸಿಕೊಳ್ಳಲಾಯಿತು, ಕೋರಾ ರೀತಿಯು ಸ್ಥಿರವಾಯಿತು. ಈ ರೀತಿಯಾಗಿ, ಬಾದಶಹನ ಆಸ್ಥಾನದಲ್ಲಿ ಕೇವಲ ನಾಲ್ಕು ನೂರು ಸೇವಕರನ್ನು ಹಾಗೆಯೇ ಇಟ್ಟುಕೊಳ್ಳಲಾಯಿತು, ಹೊರರಾಜ್ಯದವರೊಡನೆ ಸಂಪರ್ಕವಿಟ್ಟುಕೊಂಡ ಮೂರು ಸಾವಿರ ಸೇವಕರಲ್ಲಿ ಕೇವಲ ನಾಲ್ಕು ನೂರು ಸೇವಕರು ಮಾತ್ರ ಉಳಿದುಕೊಂಡರು.

ಹಳೆಯ ನಿಯಮಗಳ ಉಚ್ಚಾಟನೆ:

ವಜಾಗೊಳಿಸಿದ ಸೇವಕರು ಅನಿವಾರ್ಯವಾಗಿ ಅಹಮದ್‌ನಗರ ಮತ್ತು ದಕ್ಷಿಣ ಗುಜರಾತದತ್ತ ಹೊರಟು ಹೋದರು. ಇದಲ್ಲದೆ, ಇಬ್ರಾಹಿಮ ಆದಿಲನು ಫಾರ್ಸಿ ಭಾಷೆಯ ಬದಲಾಗಿ ದಖನಿ ಭಾಷೆಯನ್ನು ಆಡಳಿತ ಭಾಷೆಯಾಗಿ ಜಾರಿಗೊಳಿಸಿದನು. ಇಸ್ಮಾಯಿಲ ಆದಿಲಶಾಹ ಮತ್ತು ಯೂಸುಫ ಆದಿಲಶಾಹನ ಕಾಲದ ನಿಯಮಗಳನ್ನು ಕೊನೆಗಾಣಿಸಲಾಯಿತು. ಬ್ರಾಹ್ಮಣರ ದರ್ಜೆಯನ್ನು ಮೇಲೇರಿಸಲಾಯಿತು. ರಾಜಾ ರಾಮರಾಜನೊಡನೆ ರಾಯಭಾರಿ ಸಂಬಂಧವನ್ನು ಭದ್ರಗೊಳಿಸಲು ಯಾರಿಗೂ ತಿಳಿಸದಂತೆ ರಹಸ್ಯವಾಗಿ ದೂತನನ್ನು ಕಳುಹಿಸಿಕೊಟ್ಟನು. ಇಬ್ರಾಹಿಮನ ಪರಾಕ್ರಮ ಮತ್ತು ಸಹವರ್ತಿಗಳ ಬಗೆಗಿನ ಸಹಾನುಭೂತಿಯಿಂದ ಪ್ರಭಾವಿತರಾದ ಮೊಘಲ ಸರದಾರರು ಆತನೆಡೆಗೆ ಬಂದರು. ಮೊಘಲ ಸರದಾರರ ನೆಮ್ಮದಿ, ತೃಪ್ತಿ ಹಾಗೂ ಅವರ ಗೌರವದ ಹೆಚ್ಚಳಕ್ಕಾಗಿ ವಿಜಯನಗರದಲ್ಲಿ ಮಸೀದೆ ನಿರ್ಮಾಣ ಮಾಡಿದ ಉದ್ದೇಶವಾಗಿತ್ತು.

ವಿಜಯನಗರವನ್ನು ಗೆಲ್ಲುವುದು:

ವಿಜಯನಗರದ ಅರಸನು ಆಸನವೊಂದರ ಮೇಲೆ ಪವಿತ್ರ ಕುರಾನನ್ನು ಇಟ್ಟು ಮೊಘಲರಿಗೆ ಅವರ ಗೆಳೆತನದ ನೆನಪು ಮಾಡಿಕೊಡುತ್ತಿದ್ದನು, ತನ್ನ ಅರಸುತನವನ್ನು ಉಳಿಸಿಕೊಳ್ಳುವ ವಿಚಾರದಿಂದ ಅದಕ್ಕೆ ಗೌರವ ನೀಡುತ್ತಿದ್ದನು. ಪಟ್ಟಾಭಿಷೇಕವಾದ ಒಂದು ವರ್ಷದ ನಂತರ, ಇಬ್ರಾಹಿಮ ಆದಿಲಶಾಹನು ವಿಜಯನಗರದ ಮೇಲೆ ಆಕ್ರಮಣ ಮಾಡಿ, ಅದನ್ನು ಜಯಿಸಿದ ಮೇಲೆ ಉಸಿರು ಬಿಟ್ಟು ನಿರಾಳನಾದನು.

ವಿಜಯನಗರದ ವಿದ್ಯಮಾನ:

ಈ ವಿಷಯದ ವಿವರವೆಂದರೆ, ಏಳು ಶತಮಾನಗಳ ಕಾಲದಿಂದ ಆಡಳಿತ ನಡೆಸುತ್ತಿದ್ದ ವಿಜಯನಗರದ ಅರಸನು ನಿಧನನಾದ ನಂತರ ಆತನ ಮಗನು ರಾಜ್ಯಭಾರದ ಚುಕ್ಕಾಣಿ ಹಿಡಿದನು. ಇನ್ನೂ ಯುವಕನಾಗಿದ್ದಾಗ ಆತನು ಸಾವನ್ನಪ್ಪಿದನು. ಆಮೇಲೆ ಆತನ ತಮ್ಮನು ಆತನ ಸ್ಥಳಕ್ಕೆ ಹಕ್ಕುದಾರನಾದನು, ಆದರೆ ದುರ್ದೈವದಿಂದ ಆತನು ಸಹ ಹೆಚ್ಚು ಕಾಲ ಬಾಳಲಿಲ್ಲ, ಆತನು ಇಹಲೋಕ ಬಿಟ್ಟು ಹೊರಟನು. ಇದಾದ ತರುವಾಯ ಆತನ ಮೂರು ತಿಂಗಳ ಮಗನನ್ನು ಸಿಂಹಾಸನದ ಮೇಲೆ ಕೂಡಿಸಿದರು. ಈ ಅವಧಿಯಲ್ಲಿ ವಿಜಯನಗರದ ಅರಸನ ಸಲಹೆಗಾರನಾದ ತಿಮ್ಮರಾಜ ಎಂಬ ಸರದಾರನ ಪ್ರಭುತ್ವವು ಹೆಚ್ಚತೊಡಗಿತು. ಅರಸೊತ್ತಿಗೆಯ ವಾರಸುದಾರನು ಪ್ರಾಯಕ್ಕೆ ತಲುಪಿದ ಮೇಲೆ ತಿಮ್ಮರಾಜನು ಆತನಿಗೆ ವಿಷ ಕೊಟ್ಟು ಕೊಂದುಬಿಟ್ಟನು. ಇನ್ನೊಬ್ಬ ಬಾಲಕನಿಗೆ ಉತ್ತರಾಧಿಕಾರಿಯನ್ನಾಗಿ ಮಾಡಿ, ಅರಸೊತ್ತಿಗೆಯ ಅರಸನನ್ನಾಗಿ ಮಾಡಿದನು. ಇದಾಗಿ, ಕೇವಲ ಕೆಲವು ದಿನಗಳು ಮಾತ್ರ ಕಳೆದಿದ್ದವು, ಅಷ್ಟರಲ್ಲಿಯೇ ತಿಮ್ಮರಾಜನು ಈ ಲೋಕ ತ್ಯಜಿಸಿದನು.

ರಾಮರಾಜನ ಉಚ್ಛ್ರಾಯ:

ತಿಮ್ಮರಾಜನು ಬಿಟ್ಟು ಹೋದ ಖಾಲಿ ಸ್ಥಳವನ್ನು ಆತನ ಮಗ ರಾಮರಾಜನು ತುಂಬಿದನು. ರಾಮರಾಜನ ವೈವಾಹಿಕ ಸಂಬಂಧವು ಶಿವುರಾಯನ ಮಗನ ಮಗಳ ಜೊತೆ ನಿಶ್ಚಿತವಾಯಿತು. ಅರಸು ಮನೆತನದೊಡನೆ ವಿವಾಹದ ನೆಂಟಸ್ತಿಕೆ ಬೆಳೆಸಿದುದರಿಂದ, ಆತನ ಅಂತಸ್ತು ಇನ್ನೂ ಹೆಚ್ಚಿತು, ಸ್ವಭಾವದಲ್ಲಿಯೂ ಘನತೆ ಹುಟ್ಟಿಕೊಂಡಿತು. ಆತನು ಸ್ವತಂತ್ರನಾಗುವ ಅಪೇಕ್ಷೆ ಹೆಚ್ಚತೊಡಗಿತು. ಆದರೆ ಸರದಾರರು ಮತ್ತು ಸೇನಾನಿಗಳು ಆತನ ಸರ್ವಾಧಿಕಾರ ಒಪ್ಪಿ ತಮ್ಮ ತಲೆಬಾಗಿಸುವುದಕ್ಕೆ ಸಿದ್ಧರಾಗಲಿಲ್ಲ. ಈ ರೀತಿಯಾಗಿ ರಾಮರಾಜನ ಆಡಳಿತದ ಪ್ರಭುತ್ವವು ಸ್ಥಿರವಾಗಲಿಲ್ಲ. ಇದರಿಂದ ಬೇಸತ್ತ ರಾಮರಾಜನು ಅರಸು ಮನೆತನದ ಒಬ್ಬ ವ್ಯಕ್ತಿಯನ್ನು ಅರಸನಾಗಿ ಮಾಡಿ, ಭೋಜ ನಿರ್ಮಲರಾಜನನ್ನು ಪ್ರಧಾನಮಂತ್ರಿಯಾಗಿ ನಿಯುಕ್ತಿ ಮಾಡಿದನು. ಭೋಜ ನಿರ್ಮಲರಾಜನು ಅರಸನ ಚಿಕ್ಕಪ್ಪನಾಗಿದ್ದನು, ಆತನ ಬುದ್ದಿಯು

ಸರಿಯಾಗಿರಲಿಲ್ಲ. ಈ ರೀತಿಯಾಗಿ, ಪ್ರೌಢನಲ್ಲದ ರಾಜನ ತರಬೇತಿ, ಮತ್ತಿತರ ವ್ಯವಸ್ಥೆಯ ಎಲ್ಲ ಕೆಲಸವನ್ನು ಭೋಜ ನಿರ್ಮಲನ ಮೇಲ್ವಿಚಾರಣೆಗೆ ಒಪ್ಪಿಸಿಬಿಟ್ಟನು. ಈ ವಿಧವಾಗಿ ಕೋಪಿಷ್ಟ, ವಿದ್ರೋಹಕ್ಕೆಳಸಿದ ಎಲ್ಲ ಸರದಾರರ ಮತ್ತು ಸೇನಾನಿಗಳ ವಿರೋಧ ಕೊನೆಗಾಣಿಸಿದನು. ರಾಮರಾಜನು ತನ್ನ ಬುದ್ಧಿವಂತಿಕೆ ಮತ್ತು ಚಾತುರ್ಯದಿಂದ ಈ ಎಲ್ಲ ಕೆಲಸವನ್ನು ನಿರ್ವಹಿಸಿದನು.

ರಾಮರಾಜನ ಚಟುವಟಿಕೆಗಳು:

ರಾಮರಾಜನು ತನ್ನ ಒಬ್ಬ ಗುಲಾಮನಿಗೆ ಉನ್ನತ ಹುದ್ದೆಯ ಗೌರವ ಕೊಟ್ಟು, ಎಳೆಯ ಪ್ರಾಯದ ರಾಜ ಮತ್ತು ಬಿಜಾಪುರ ಅರಸೊತ್ತಿಗೆಯನ್ನು ರಕ್ಷಿಸುವ ಹೊಣೆಯನ್ನು ಗುಲಾಮನಿಗೆ ಒಪ್ಪಿಸಿ, ತನ್ನ ಪ್ರಭುತ್ವವನ್ನು ತಗ್ಗಿಸುವ ಹುನ್ನಾರದಲ್ಲಿದ್ದ ರಾಜರ ಮೇಲೆ ದಾಳಿ ಮಾಡಲು ತೆರಳಿದನು. ಕೆಲವು ರಾಜರು ಆತನ ದಾಳಿಗೆ ಗುರಿಯಾದರು. ಕೋಟೆಯೊಂದನ್ನು ವಶಪಡಿಸಿಕೊಳ್ಳುವದಕ್ಕಾಗಿ, ಅದನ್ನು ಜಯಿಸುವುದಕ್ಕಾಗಿ ಎಲ್ಲ ಸಂಪತ್ತು ನೀರಿನಂತೆ ಹರಿಯತೊಡಗಿತು. ರಾಮರಾಜನು ಐವತ್ತು ಸಾವಿರ ಹುನ್ನಗಳನ್ನು ಕಳುಹಿಸಲು ಗುಲಾಮನಿಗೆ ಆಜ್ಞೆ ಮಾಡಿದನು. ಗುಲಾಮನು ರಾಮರಾಜನ ಆದೇಶ ಪಾಲಿಸುವುದಕ್ಕಾಗಿ ಖಜಾನೆಯನ್ನು ತೆರೆದನು. ಅಲ್ಲಿಯ ಸಂಪತ್ತಿನ ರಾಶಿ ಆತನ ಕಣ್ಣು ಕುಕ್ಕಿತು. ಆತನು ತನ್ನನ್ನು ತಾನು ನಿಯಂತ್ರಿಸಲಾಗದೆ ರಾಮರಾಜನನ್ನು ವಿರೋಧಿಸಿ ಬಂಡಾಯವನ್ನು ಜಾಹೀರುಪಡಿಸಿದನು. ಗುಲಾಮನು ತನ್ನ ರಹಸ್ಯದಲ್ಲಿ ಭೋಜನಿರ್ಮಲನನ್ನು ಸೇರಿಸಿಕೊಂಡು, ಪಾಲುದಾರನನ್ನಾಗಿ ಮಾಡಿಕೊಂಡನು. ಅವರಿಬ್ಬರು ರಾಜಸಿಂಹಾಸನ, ಕಿರೀಟ ಹಾಗೂ ಇತರ ಸಂಪತ್ತನ್ನು ವಶಪಡಿಸಿಕೊಳ್ಳುವ ಉಪಾಯ ಯೋಚಿಸತೊಡಗಿದರು. ರಾಮರಾಜನಿಗೆ ಹೆದರುತ್ತಿದ್ದ ಆತನ ವಿರೋಧಿಗಳು ಎಳೆವಯಸ್ಸಿನ ರಾಜನ ಅನುಯಾಯಿಗಳಾದರು. ಈ ರೀತಿಯಾಗಿ ವಿಜಯನಗರದಲ್ಲಿ ಒಂದು ವಿಚಿತ್ರ ಸಂಘಟನೆಯಾಯಿತು. ಅರ್ಹತೆಯಿಲ್ಲದ, ವಿಶ್ವಾಸಕ್ಕೆ ಯೋಗ್ಯನಲ್ಲದ ಆ ಗುಲಾಮನು ರಾಮರಾಜನ ಅನುಯಾಯಿ ಎಂದು ತಿಳಿದು ಭೋಜನಿರ್ಮಲನು ಆತನನ್ನು ವಧಿಸಿ, ಸ್ವತಃ ತಾನು ಅರಸನಾಗಿ ಕುಳಿತುಬಿಟ್ಟನು.

ರಾಮರಾಜ ಮತ್ತು ಭೋಜನಿರ್ಮಲರಲ್ಲಿ ಒಪ್ಪಂದ:

ವಿಷಯವು ದೀರ್ಘವಾಗುತ್ತಿರುವುದನ್ನು ನೋಡಿದ ರಾಮರಾಜನು ಭೋಜನಿರ್ಮಲನೊಡನೆ ಜಗಳ ಕೊನೆಗಾಣಿಸಬೇಕೆಂದುಕೊಂಡನು. ಕೆಲವು ಆಯ್ದ ವ್ಯಕ್ತಿಗಳನ್ನು ಸಂಧಾನಕ್ಕಾಗಿ ಕಳುಹಿಸಿದನು. ರಾಮರಾಜನು ವಶಪಡಿಸಿಕೊಂಡ ಪ್ರದೇಶವನ್ನು ರಾಮರಾಜನು ಇಟ್ಟುಕೊಳ್ಳಲಿ, ರಾಜ್ಯಾಡಳಿತದ ಮುಖ್ಯ ಕೇಂದ್ರವಾದ ವಿಜಯನಗರವು ರಾಯನ ಅಧೀನತೆಯಲ್ಲಿರಲಿ ಎಂದು ಭೋಜನಿರ್ಮಲ ಮತ್ತಿತರರು

ಷರತ್ತನ್ನು ವಿಧಿಸಿದರು. ರಾಮರಾಜನು ಈ ತೀರ್ಮಾನ ನಿರಾಕರಿಸಲಾಗಲಿಲ್ಲ. ಆಗ ಆತನು ಮಾತನಾಡಲಿಲ್ಲ. ಈ ರೀತಿಯಾಗಿ, ಎಲ್ಲ ರಾಜರು ತಮ್ಮ ತಮ್ಮ ಪ್ರದೇಶಗಳತ್ತ ಹೊರಟರು.

ಭೋಜನಿರ್ಮಲನ ವಿರುದ್ಧ ಪ್ರಜೆಗಳ ಕಾರ್ಯಾಚರಣೆ:

ರಾಯನ ತಲೆತಿರುಗಿದ ಸೋದರಮಾವನು ಸ್ವಯಂಘೋಷಿತ ರಾಜನಾಗಬೇಕೆಂಬ ಕನಸು ಕಾಣತೊಡಗಿದನು. ಆತನು ಹಿಂಸೆಯಿಂದ ತನ್ನ ಕಾರ್ಯ ಸಾಧಿಸಬೇಕೆಂದು ತನ್ನ ಸೋದರ ಸಂಬಂಧಿಯನ್ನು ವಧಿಸಿ ತಾನೇ ಅರಸನೆಂದು ಸ್ವಯಂ ಘೋಷಿಸಿಕೊಂಡನು. ಭೋಜನಿರ್ಮಲನು ಕುಪಿತಗೊಂಡು ಸಾಮಾನ್ಯ ಮತ್ತು ಗಣ್ಯವ್ಯಕ್ತಿಗಳೊಡನೆ ಹಾಗೂ ಹಿರಿಯ ಮತ್ತು ಕಿರಿಯರೊಡನೆ ದುರ್ವರ್ತನೆಯಿಂದ ನಡೆದುಕೊಳ್ಳತೊಡಗಿದನು. ಇದರ ಪರಿಣಾಮವೇನಾಯಿ ತೆಂದರೆ, ಆತನ ವರ್ತನೆಯಿಂದ ಎಲ್ಲರೂ ಬೇಸತ್ತು, ರಾಮರಾಜನಿಗೆ ಬಲ ನೀಡತೊಡಗಿದರು, ದಾಳಿ ಮಾಡಲು ಸಹ ರಾಮರಾಜನನ್ನು ಹುರಿದುಂಬಿಸಿದರು.

ಇಬ್ರಾಹಿಮ ಆದಿಲಶಾಹನಿಗೆ ನೆರವಿನ ನಿವೇದನೆ:

ಭೋಜನಿರ್ಮಲನಿಗೆ ಜನರ ಅಸಂತುಷ್ಟತೆ ಮತ್ತಿತರ ವಿಷಯಗಳು ತಿಳಿದ ನಂತರ ಆತನು ಅತ್ಯುತ್ತಮ ಕಾಣಿಕೆ ಮತ್ತು ಆರು ಲಕ್ಷ ಹೋನುಗಳೊಡನೆ ರಾಯಭಾರಿಯೊಬ್ಬನನ್ನು ಇಬ್ರಾಹಿಮ ಆದಿಲಶಾಹನ ಸನ್ನಿಧಿಗೆ ನೆರವಿನ ಕೋರಿಕೆಯೊಂದಿಗೆ ಕಳುಹಿಸಿಕೊಟ್ಟನು. ಇತ್ತ ರಾಮರಾಜನು ಸಹ ಬಾದಶಹನ ಹೆಜ್ಜೆ ಹೆಜ್ಜೆಗೆ ಒಂದು ಲಕ್ಷ ಹೋನುಗಳನ್ನು ಸುರಿದು ಬಾದಶಹನೊಂದಿಗೆ ರಾಜಿ ಮಾಡಿಕೊಳ್ಳುವ ಸಂಕಲ್ಪ ಮಾಡಿದನು. ಹಿಜರಿ ಶಕೆ ೯೪೨ರಲ್ಲಿ ಇಬ್ರಾಹಿಮನು ವಿಜಯನಗರದತ್ತ ಹೊರಟನು.

ರಾಮರಾಜನ ಕುತಂತ್ರ:

ಇಬ್ರಾಹಿಮ ಆದಿಲಶಾಹನು ತನ್ನ ಸೈನ್ಯದೊಡನೆ ವಿಜಯನಗರದತ್ತ ಬರುವ ವಿಚಾರ ತಿಳಿದ ರಾಮರಾಜನು ಒಂದು ತಂತ್ರ ಹೂಡಿದನು. ಆತನು ಒಂದು ಸಭೆಯಲ್ಲಿ ಭೋಜನಿರ್ಮಲನಿಗೆ ತನ್ನ ಪ್ರಾಮಾಣಿಕತೆಯ ಪುರಾವೆ ಒದಗಿಸಿ, ಹಿಂದೆ ಮಾಡಿದ ತಪ್ಪುಗಳನ್ನು ಒಪ್ಪಿಕೊಂಡನು. ಮುಸಲ್ಮಾನರು ವಿಜಯನಗರದತ್ತ ಬರುವುದರಿಂದ ಹಿಂದುಗಳ ಸಮೃದ್ಧ ಪ್ರದೇಶ, ಮನೆ ಮಂದಿರಗಳು ಅವರ ಕುದುರೆಗಳ ಖುರದಿಂದ ಸರ್ವನಾಶವಾಗಿಬಿಡುತ್ತವೆ. ಬಹಮನಿ ಅರಸರ ಕಾಲದಲ್ಲಿ ನಡೆದಂತೆ, ನಮ್ಮ ಮಕ್ಕಳು ಅವರ ಯಾವ ಪಂಗಡದವರೊಡನೆ ಸೇರಿದರೂ ಮುಸಲ್ಮಾನರ ವಶವಾಗಿಬಿಡುತ್ತವೆ. ಸದ್ಯಕ್ಕೆ ಅನುಭವಿ ಮತ್ತು ಹಿರಿಯ ಸರದಾರನೊಬ್ಬನನ್ನು ಇಬ್ರಾಹಿಮ ಆದಿಲಶಾಹನ ಸನ್ನಿಧಿಯಲ್ಲಿ ರಾಯಭಾರಿಯಾಗಿ ಕಳುಹಿಸಿಕೊಟ್ಟು ಬಾದಶಹ ಹಿಂದಿರುಗಿ

ಹೋಗುವಂತೆ ಮಾಡುವುದು ಒಳ್ಳೆಯದು, ನಾನು ನಿಮ್ಮ ಆಜ್ಞಾಪಾಲಕ ಸೇವಕನಾಗಿ ಸೇವೆ ಸಲ್ಲಿಸುತ್ತೇನೆ ಎಂದು ರಾಮರಾಜನು ವಿನಂತಿಸಿಕೊಂಡನು.

ಭೋಜನಿರ್ಮಲನು ಮೋಸಹೋಗುವುದು:

ಭೋಜನಿರ್ಮಲನು ಮಂದಬುದ್ಧಿಯ ವ್ಯಕ್ತಿಯಾಗಿದ್ದುದರಿಂದ, ರಾಮರಾಜನ ವಂಚನೆಯ ಜಾಲದಲ್ಲಿ ಸಿಕ್ಕಿಹಾಕೊಂಡನು. ಈ ವೃತ್ತಾಂತವನ್ನು ಸಂಕ್ಷಿಪ್ತವಾಗಿ ಹೇಳಬೇಕೆಂದರೆ, ಹಿಂದು ಧರ್ಮದ ಸಂಪ್ರದಾಯದಂತೆ ಒಪ್ಪಂದವಾಯಿತು, ಇಬ್ರಾಹಿಮ ಆದಿಲಶಾಹನಿಗೆ ಹಿಂದಿರುಗಿ ಹೋಗುವ ನಿವೇದನೆ ಸಲ್ಲಿಸಿದರು, ಅದರ ಜೊತೆಗೆ ಭೋಜನಿರ್ಮಲನು ನಲವತ್ತು ಲಕ್ಷ ಹೋನುಗಳನ್ನು ಬಾದಶಹನಿಗೆ ಕಳುಹಿಸಿಕೊಟ್ಟನು. ಇಬ್ರಾಹಿಮ ಆದಿಲಶಾಹನು ಬಂದಿರುವ ಉದ್ದೇಶವು ಭೋಜನಿರ್ಮಲನಿಗೆ ಸಹಾಯ ಮಾಡುವುದಕ್ಕಾಗಿ ಹಾಗೂ ಆತನಿಂದ ಇನ್ನಿಷ್ಟು ಹಣ ವಸೂಲಿ ಮಾಡಲಿಕ್ಕಾಗಿ. ಇಬ್ರಾಹಿಮ ಆದಿಲಶಾಹನು ಹಿಂದಿರುಗಿ ಹೋಗದೇ ಇನ್ನೇನು ತಾನೇ ಮಾಡಿಯಾನು, ಇಬ್ಬರ ಉದ್ದೇಶವೂ ಪೂರ್ತಿಯಾದುದರಿಂದ ಇಬ್ರಾಹಿಮ ಆದಿಲಶಾಹನು ಹಿಂದಿರುಗಿ ಹೋದನು.

ರಾಮರಾಜನ ಆಕ್ರಮಣ:

ಇಬ್ರಾಹಿಮ ಆದಿಲಶಾಹನು ಕೃಷ್ಣಾ ಕೊಳ್ಳವನ್ನು ಇನ್ನೂ ದಾಟಿರಲಿಲ್ಲ, ಅಷ್ಟರಲ್ಲಿಯೇ ತನ್ನ ಎಲ್ಲ ಒಪ್ಪಂದಗಳನ್ನು ಬದಿಗಿರಿಸಿ, ರಾಮರಾಜನು ಮಿಂಚಿನ ವೇಗದಿಂದ ವಿಜಯನಗರದತ್ತ ಹೊರಟನು. ನಗರವನ್ನು ರಕ್ಷಿಸುತ್ತಲಿದ್ದ ನೌಕರ ಚಾಕರರನ್ನು ಮೂರ್ಖರನ್ನಾಗಿ ಮಾಡಿ ಅಥವಾ ಯಾವುದಾದರೂ ಆಮಿಷದ ವಚನ ಕೊಟ್ಟು, ಅವರನ್ನೆಲ್ಲ ಭೋಜನಿರ್ಮಲನ ವಿರುದ್ಧ ಎತ್ತಿ ಕಟ್ಟಿದನು. ಯಾವುದಾದರೂ ರೀತಿಯಿಂದ ಭೋಜನಿರ್ಮಲನನ್ನು ಕೈದು ಮಾಡಿ ತನ್ನ ವಶಕ್ಕೊಪ್ಪಿಸುವ ಸಲಹೆ ನೀಡಿದನು. ಭೋಜನಿರ್ಮಲನನ್ನು ವಧಿಸಿ ರಾಯನ ಕೊಲೆಯ ಪ್ರತೀಕಾರ ಗೈಯುವದು ರಾಮರಾಜನ ಉದ್ದೇಶವಾಗಿತ್ತು. ಭೋಜನಿರ್ಮಲನು ತಾನು ಎಲ್ಲ ವಿಧದಿಂದ ಅಸಹಾಯಕ ಮತ್ತು ಏಕಾಂಗಿಯಾದುದನ್ನು ಮನಗಂಡು, ಕುದುರೆಗಳ ಕಾಲುಗಳನ್ನು ಕಡಿಯಲು ಮತ್ತು ಆನೆಗಳ ಕಣ್ಣನ್ನು ಕೀಳಿಸಲು ಆಜ್ಞೆ ನೀಡಿದನು. ತಲತಲಾಂತರಗಳಿಂದ ಬಂದ ಅರಸೊತ್ತಿಗೆಯ ಸಂಪತ್ತು ಮತ್ತು ಐಶ್ವರ್ಯವನ್ನು ಬೆಂಕಿ ಹಚ್ಚಿ ಬೂದಿ ಮಾಡಲು ಹೇಳಿದನು. ರಾಜನ ಈ ಆಜ್ಞೆಯನ್ನು ಪ್ರಾಮಾಣಿಕವಾಗಿ ಪಾಲಿಸಲಾಯಿತು. ಆತನ ಸೇವಕರು ನಗರದ ದ್ವಾರವನ್ನು ದಾಟಿದ ನಂತರ ಭೋಜನಿರ್ಮಲನು ತನ್ನ ತಲವಾರದಿಂದ ತಾನೇ ಹೊಡೆದುಕೊಂಡು ಆತ್ಮಹತ್ಯೆ ಮಾಡಿಕೊಂಡನು. ರಾಮರಾಜನು ನೆಮ್ಮದಿಯಾಗಿ ವಿಜಯನಗರದ ಗಾದಿಯನ್ನು ಸಂಭಾಳಿಸತೊಡಗಿದನು, ಆತನನ್ನು ತಡೆಯುವರಾರೂ ಇರಲಿಲ್ಲ.

ದಾಳಿ ಮಾಡಲು ಇಬ್ರಾಹಿಮ ಆದಿಲಶಾಹನ ಆಜ್ಞೆ:

ಇಬ್ರಾಹಿಮ ಆದಿಲಶಾಹನಿಗೆ ವಿಜಯನಗರದಲ್ಲಿ ನಡೆದ ಸಮಾಚಾರ ತಲುಪಿದ ಮೇಲೆ, ಆತನು ಅದೋನಿ ಕಿಲ್ಲೆಯ ಮೇಲೆ ಆಕ್ರಮಣ ಮಾಡಲು ಅಸದ್‌ಖಾನ ಲಾರಿಯನ್ನು ನಿಯಮಿಸಿದನು. ಅಸದ್‌ಖಾನ ಲಾರಿಯ ಆದೇಶದಂತೆ ನಡೆಯಲು ಎಲ್ಲ ಸೈನಿಕರಿಗೆ ಆಜ್ಞೆ ಮಾಡಿದನು. ಈ ಸಂದರ್ಭದಲ್ಲಿ ರಾಮರಾಜನ ಸಹೋದರ ನೇಕನಾದ್ರಿ(ವೆಂಕಟಾದ್ರಿ)ಯು ಸಾಕಷ್ಟು ಸಂಖ್ಯೆಯಲ್ಲಿ ಕುದುರೆಸವಾರರು ಮತ್ತು ಪದಾತಿಗಳನ್ನು ಒಟ್ಟುಗೂಡಿಸಿ ಅಸದ್‌ಖಾನ ಲಾರಿಯನ್ನೆದುರಿಸಲು ಬಂದನು. ಅಸದ್‌ಖಾನ ಲಾರಿ, ಶತ್ರುಗಳನ್ನು ಎದುರಿಸಿ ಬಂಧಿಸುವ ಬದಲು ಅವರನ್ನು ಭೆಟ್ಟಿಯಾಗ ಬಯಸಿದನು. ಕೊನೆಗೆ, ಪ್ರಬಲವಾದ ಯುದ್ಧ ನಡೆಯಿತು, ಅಸದ್‌ಖಾನ ಲಾರಿಯು ರಣರಂಗ ತೊರೆದು ಪಲಾಯನ ಹೇಳಬೇಕಾಯಿತು. ವೈರಿಗಳು ಏಳು ಹರದಾರಿಗಳವರೆಗೆ ಆತನನ್ನು ಬಿಡದೆ ಬೆನ್ನಟ್ಟುತ್ತಾ ಹೋದರು.

ಅಸದ್‌ಖಾನ ಲಾರಿಯು ರಾತ್ರಿಯಲ್ಲಿ ವೈರಿಗಳನ್ನು ಕೊಲ್ಲುವದು:

ಹಗಲಿನ ಬೆಳಕು ಸಂಪೂರ್ಣವಾಗಿ ಕಳೆದು ರಾತ್ರಿಯ ಅಂಧಕಾರವು ಉಂಟಾದ ಮೇಲೆ ನೇಕನಾದ್ರಿಯು ಅಸದ್‌ಖಾನ ಲಾರಿಯ ಸೈನ್ಯದಿಂದ ಒಂದು ಹರದಾರಿ ದೂರದಲ್ಲಿ ಬಿಡಾರ ಹಾಕಿದನು. ಶತ್ರುಗಳನ್ನು ಪರಾಭವಗೊಳಿಸಿದ ನೆಮ್ಮದಿಯಿಂದ ನಿದ್ರೆ ಹೋದನು. ಆಗ ಅಸದ್‌ಖಾನ ಲಾರಿಯು ನಾಲ್ಕು ಸಾವಿರ ಕಟ್ಟುಮಸ್ತಾದ, ವೀರ ಸೇನಾನಿಗಳೊಡನೆ ರಾತ್ರಿಯ ಸಮಯದಲ್ಲಿ ನೇಕನಾದ್ರಿಯ ಸೈನ್ಯದ ಮೇಲೆ ಆಕ್ರಮಣ ಮಾಡಿದನು. ಬಹಳ ಸಮಯದವರೆಗೆ ಹಿಂದು ಸೈನಿಕರು ತಮ್ಮನ್ನು ರಕ್ಷಿಸಿಕೊಳ್ಳುವ ಪ್ರಯತ್ನ ಮಾಡತೊಡಗಿದರು. ಆದರೆ ಕೊನೆಗೆ ಅಸಹಾಯಕರಾಗಿ, ಮುಸಲ್ಮಾನರ ಪ್ರಬಲ ದಾಳಿಯನ್ನು ತಡೆಯಲಾಗದೇ ಓಡಿಹೋದರು. ಅಸದ್‌ಖಾನ ಲಾರಿಯು ವೈರಿಗಳ ಎಲ್ಲ ಆನೆಗಳು ಮತ್ತು ವೈರಿಗಳ ಮಕ್ಕಳನ್ನು ಬಂಧಿಸಿದನು. ಅಸದ್‌ಖಾನ ಲಾರಿಯು ಅದೇ ಮೈದಾನದಲ್ಲಿ ಡೇರೆ ಹಾಕಿದನು. ನೇಕನಾದ್ರಿಯು ಅಲ್ಲಿಂದ ಆರು ಹರದಾರಿ ದೂರದಲ್ಲಿ ವಾಸ್ತವ್ಯ ಮಾಡಿದನು. ತರುವಾಯ, ನೇಕನಾದ್ರಿಯು ರಾಮರಾಜನಿಂದ ನೆರವು ಬಯಸಿ, ಈ ಯುದ್ಧದ ಎಲ್ಲ ವಿವರಗಳನ್ನು ರಾಮರಾಜನಿಗೆ ಬರೆದು ಕಳುಹಿಸಿದನು.

ರಾಮರಾಜನ ಸಲಹೆ:

ನೇಕನಾದ್ರಿಯ ಪತ್ರಕ್ಕೆ ಉತ್ತರವಾಗಿ ರಾಮರಾಜನು, ಅಸದ್‌ಖಾನ ಲಾರಿಯ ಬಳಿ ಮಕ್ಕಳು ಮತ್ತು ಪರಿವಾರದವರು ಬಂಧಿತರಾಗಿರುವುದರಿಂದ, ಯಾವುದಾದರೂ ರೀತಿಯಲ್ಲಿ ಅಸದ್‌ಖಾನ ಲಾರಿಯೊಡನೆ ಒಪ್ಪಂದ ಮಾಡಿಕೊಳ್ಳಬೇಕು ಇಲ್ಲವೇ ಸ್ನೇಹಹಸ್ತಕ್ಕಾಗಿ ಕೈ ಚಾಚಿ ಕೋರಿಕೊಳ್ಳುವುದು ಒಳಿತು. ರಾಮರಾಜನ ಸಲಹೆಯನ್ನು

ನೇಕನಾದ್ರಿಯು ಕಾರ್ಯರೂಪಕ್ಕೆ ತಂದನು. ದೂತನೊಬ್ಬನ ಮೂಲಕ ಅಸದ್‌ಖಾನ ಲಾರಿಯೊಡನೆ ಸಂಧಾನದ ಕೋರಿಕೆಯನ್ನು ಕಳುಹಿಸಿದನು. ಅಸದ್‌ಖಾನ ಲಾರಿಯು ಅಲ್ಲಿ ನಡೆದ ವಿಷಯವನ್ನು ಇಬ್ರಾಹಿಮ ಆದಿಲಶಾಹನಿಗೆ ತಿಳಿಸಿದನು, ಬಾದಶಹನ ಅನುಮತಿಯ ಮೇರೆಗೆ ನೇಕನಾದ್ರಿಯೊಡನೆ ಸಂಧಾನ ಮಾಡಿಕೊಂಡನು. ಅನಂತರ, ನೆಮ್ಮದಿಯಿಂದ ಅಸದ್‌ಖಾನ ಲಾರಿಯು ಬಿಜಾಪುರಕ್ಕೆ ತೆರಳಿದನು.

ಯೂಸುಫ್ ಶಹನಾನ ಕುತಂತ್ರ:

ಇಬ್ರಾಹಿಮ ಆದಿಲಶಾಹನು ನೇಕನಾದ್ರಿಯಿಂದ ವಶಪಡಿಸಿಕೊಂಡ ಆನೆ ಮತ್ತು ಕುದುರೆಗಳನ್ನು ಅಸದ್‌ಖಾನ ಲಾರಿಗೆ ಕಾಣಿಕೆಯಾಗಿ ಕೊಟ್ಟುಬಿಟ್ಟನು. ಈ ರೀತಿಯಾಗಿ ಅಸದ್‌ಖಾನ ಲಾರಿಯ ಗೌರವ ಮತ್ತು ಅಧಿಕಾರದಲ್ಲಿ ಹೆಚ್ಚಳವಾಯಿತು. ಅಸದ್‌ಖಾನನಿಗೆ ದೊರೆತ ವಿಶೇಷ ಮರ್ಯಾದೆ ಮತ್ತು ಗೌರವಾದರಗಳನ್ನು ನೋಡಲಾಗದೆ, ಯೂಸುಫ ಶಹಾನಾ ಮತ್ತಿತರರು ಮನದಲ್ಲಿಯೇ ಕುದಿಯುತ್ತಿದ್ದರು. ಇಬ್ರಾಹಿಮ ಆದಿಲಶಾಹನು ಏಕಾಂತದಲ್ಲಿದ್ದ ಸಮಯ ಸಾಧಿಸಿ, ಆತನ ಬಗ್ಗೆ ಕೆಟ್ಟ ಮಾತುಗಳನ್ನು ಹೇಳತೊಡಗಿದರು, ಆತನ ವಿರುದ್ಧ ರೊಚ್ಚಿಗೇಳಿಸತೊಡಗಿದರು. ಇತ್ತ ಬಾದಶಹನಿಗೆ ಸಹ ಅಸದ್‌ಖಾನ ಲಾರಿಯ ಪ್ರಾಮಾಣಿಕತೆಯ ಬಗ್ಗೆ ಸಂದೇಹ ಮೂಡತೊಡಗಿತು. ಅಸದ್‌ಖಾನ ಲಾರಿಯು ಶಿಯಾ ಧರ್ಮದೊಡನೆ ಸಂಪರ್ಕವಿಟ್ಟುಕೊಂಡಿದುದರಿಂದ ನಿಜಾಮಶಾಹಿ ಮನೆತನದವರ ಬಗ್ಗೆ ಶ್ರದ್ಧೆ ಮತ್ತು ಸಹಾನುಭೂತಿ ಉಳ್ಳವನಾಗಿದ್ದನು. ಬೆಳಗಾವಿ ಕಿಲ್ಲೆಯನ್ನು ಅಸದ್‌ಖಾನ ಲಾರಿ ನಿಜಾಮಶಾಹನಿಗೆ ಒಪ್ಪಿಸಿ, ಅವರ ಗುಲಾಮನಾಗುವ ಬಗ್ಗೆ ಬಾದಶಹನಿಗೆ ಅನುಮಾನ ಉಂಟಾಗತೊಡಗಿತು.

ಇಬ್ರಾಹಿಮ ಆದಿಲಶಾಹ ಮತ್ತು ಯೂಸುಫ ಶಹಾನಾ ಇವರಲ್ಲಿ ಪರಸ್ಪರ ಚರ್ಚೆ:

ಇಬ್ರಾಹಿಮ ಆದಿಲಶಾಹನು ಯಾವುದೇ ರೀತಿಯ ವಿಚಾರಣೆ ಮಾಡಲಿಲ್ಲ ಹಾಗೂ ಯೂಸುಫ್ ಶಹನಾ ಹೇಳಿದ ವಿಷಯಗಳನ್ನು ಒಪ್ಪಿಕೊಂಡು ಬಿಟ್ಟನು. ಅಸದ್‌ಖಾನ ಲಾರಿಯನ್ನು ಹೇಗೆ ಬೇರ್ಪಡಿಸಬೇಕೆಂಬ ಬಗ್ಗೆ ಇಬ್ಬರಲ್ಲಿಯೂ ಮಾತುಕತೆಗಳು ಮತ್ತು ಚರ್ಚೆ ನಡೆದವು. ರಾಜಕುಮಾರನ ಖತ್ನಾ ವಿಧಿಯ ಸಮಾರಂಭದ ವ್ಯವಸ್ಥೆಗಾಗಿ ಅಸದ್‌ಖಾನ ಲಾರಿಯನ್ನು ಬರಹೇಳಬೇಕು, ಆತನು ತಲುಪಿದ ತಕ್ಷಣ ಬಂಧಿಸಿ, ಆತನಿಂದ ಮುಕ್ತವಾಗಬೇಕೆಂದು ಯೂಸುಫ ಶಹಾನಾ ಬಾದಶಹನಿಗೆ ಸಲಹೆ ಕೊಟ್ಟನು. ಆಕಸ್ಮಿಕವಾಗಿ, ಅವರ ಚಿತಾವಣೆಯು ಬಯಲಾಗಿ, ಅಸದ್‌ಖಾನ ಲಾರಿಯು ಮೊದಲಿಗಿಂತ ಹೆಚ್ಚು ಜಾಗ್ರತನಾದನು. ಇಬ್ರಾಹಿಮ ಆದಿಲನು ಅಸದ್‌ಖಾನ ಲಾರಿಗೆ ಬರಲು ಆಜ್ಞೆ ಮಾಡಿದಾಗ, ಆತನು ತನ್ನ ವಿವೇಚನೆಯಿಂದ ದೇಹಾಲಸ್ಯದ ನೆಪ ಹೇಳಿ ಹಾಜರಾಗುವದನ್ನು ತಪ್ಪಿಸಿಕೊಂಡನು.

ಅಸದ್‌ಖಾನ ಲಾರಿಯನ್ನು ವಧಿಸುವ ಉಪಾಯ:

ಇಬ್ರಾಹಿಮ ಆದಿಲಶಾಹನು ಪುನಃ ಯೂಸುಫ ಶಹಾನಾನ ಅಭಿಪ್ರಾಯ ಕೇಳಿ, ಅಸದ್‌ಖಾನ ಲಾರಿಯ ಸಂಗಡಿಗರಿಂದ ಆತನಿಗೆ ವಿಷ ಕೊಡಬೇಕು ಎಂದು ನಿರ್ಧರಿಸಿದರು. ಆತನ ಸಂಗಡಿಗರಿಗೆ ಯಾವುದಾದರೂ ರೀತಿಯಲ್ಲಿ ಪ್ರೇರಿಸಿ, ಆತನನ್ನು ಹತಗೊಳಿಸಬೇಕೆಂದರು. ಬಾದಶಹನ ಈ ಉಪಾಯಗಳಾವೂ ಫಲಿಸಲಿಲ್ಲ. ಮತ್ತೊಂದು ಉಪಾಯವಾಗಿ, ಯೂಸುಫ ತುರ್ಕನಿಗೆ ಬೆಳಗಾವಿಯ (ನಲಗಾವ) ಆಸುಪಾಸಿನ ಪ್ರದೇಶವನ್ನು ಜಹಗೀರು ಕೊಟ್ಟು ವಕೀಲ ಸಲ್ತನತ್ ಪದವಿಯಿಂದ ತೆಗೆದು ಜಹಗೀರುದಾರನಾಗಿ ಮಾಡುವುದು, ಇದರಿಂದ ಯೂಸುಫ ತುರ್ಕನಿಗೆ ಅಸದ್‌ಖಾನ ಲ್ಯರಿಯನ್ನು ಜೀವಂತವಾಗಿ ಕೈದು ಮಾಡಲು ಸುಲಭವಾಗುವುದು ಎಂದು ಯೋಚಿಸಿದರು. ಅಸದ್‌ಖಾನ ಲಾರಿಯು ಅತ್ಯಂತ ಚತುರ, ಬುದ್ಧಿವಂತ ಮತ್ತು ಅನುಭವಿ ವ್ಯಕ್ತಿಯಾಗಿದ್ದನು. ಆತನು ಇನ್ನೂ ಜಾಗರೂಕತೆಯಿಂದ ಇರತೊಡಗಿದನು. ಒಂದು ದಿನ ಅಸದ್‌ಖಾನ ಲಾರಿಯು ತೋಟದಲ್ಲಿ ವಿಹಾರ ಮಾಡುವ ವಿಚಾರ ಮಾಡಿದನು, ಈ ಸ್ಥಳವು ಬೆಳಗಾವಿಯಿಂದ ಆರು ಮೈಲು ದೂರದಲ್ಲಿತ್ತು. ತನ್ನ ಜೊತೆಗೆ ಎಣಿಕೆಗೆ ಬರುವಷ್ಟು ಸೇವಕರನ್ನು ಕರೆದುಕೊಂಡು ತೋಟದಲ್ಲಿ ವಿಹಾರ ಮಾಡಲು ಹೊರಟನು.

ಅಸದ್‌ಖಾನ ಲಾರಿ ಮತ್ತು ಯೂಸುಫ ಶಹಾನಾರಲ್ಲಿ ಕದನ:

ತೋಟದತ್ತ ತೆರಳುವಾಗ ಅಸದ್‌ಖಾನ ಲಾರಿ, ತನ್ನ ಹಬಶಿ ಗುಲಾಮನಿಗೆ ನಾಲ್ಕು ನೂರು ಸೈನಿಕರನ್ನು ತಾನಿರುವ ಕಡೆಗೆ ಕಳುಹಿಸುವ ಕೆಲಸವನ್ನು ಒಪ್ಪಿಸಿದನು. ಅಸದ್‌ಖಾನ ಲಾರಿ ಒಬ್ಬನೇ ತೋಟದಲ್ಲಿ ವಾಯುಸಂಚಾರಕ್ಕೆ ತೆರಳಿರುವ ಸಂಗತಿಯನ್ನು ಯೂಸುಫ ಶಹಾನಾನ ಗುಪ್ತಚಾರರು ತಿಳಿಸಿದೊಡನೆ, ಆತನು ತನ್ನೊಡನೆ ಎರಡು ಸಾವಿರ ಸೈನಿಕರನ್ನು ಸೇರಿಸಿಕೊಂಡು ಹೊರಟು ಅಸದ್‌ಖಾನನ ಮೇಲೆ ದಾಳಿ ಮಾಡಿದನು. ತೋಟದ ಆವರಣವು ರಣರಂಗವಾಗಿ ಮಾರ್ಪಟ್ಟು ಎರಡೂ ಕಡೆಯಿಂದ ಯುದ್ದ ಆರಂಭವಾಯಿತು. ಅಸದ್‌ಖಾನ ಲಾರಿ ಬಹಳ ನಿಪುಣತೆಯಿಂದ ವೈರಿಗಳನ್ನು ಕೊಲ್ಲುವ ಸಾಹಸ ಮಾಡುತ್ತಿದ್ದನು, ಘನಘೋರ ಯುದ್ಧ ನಡೆಯತೊಡಗಿತು:

ಅಸದ್‌ಖಾನ ಲಾರಿಯ ವಿಜಯ:

ಶತ್ರುಗಳ ವಿರುದ್ಧ ಅಸದ್‌ಖಾನ ಲಾರಿ ವೀರಾವೇಶದಿಂದ ಹೋರಾಡುತ್ತಿದ್ದನು. ತನ್ನ ಅಚಲ ಸ್ವಭಾವದಿಂದ ಯುದ್ಧ ಮಾಡುತ್ತ ತನ್ನ ಪರಾಕ್ರಮಕ್ಕೆ ಪುರಾವೆ ನೀಡುತ್ತಿದ್ದನು. ಈ ಯುದ್ಧವು ಅತ್ಯಂತ ಘೋರವಾಗಿತ್ತು, ನೂರಾರು ಸೈನಿಕರು ಯುದ್ಧದಲ್ಲಿ ಹತರಾದರು. ಆದರೂ ರಣರಂಗವು ಅಸದ್‌ಖಾನ ಲಾರಿಯ

ಹಿಡಿತದಲ್ಲಿತ್ತು. ಅಂತಿಮವಾಗಿ ಅಸದ್‌ಖಾನ ಲಾರಿಗೆ ವಿಜಯವು ಲಭಿಸಿತು, ಯೂಸುಫ್ ಶಹಾನಾ ಜೀವ ಉಳಿಸಿಕೊಂಡು ರಣರಂಗದಿಂದ ಪರಾರಿಯಾದನು.

ಇಬ್ರಾಹಿಮ್ ಆದಿಲಶಾಹನ ಹೊಸ ತಂತ್ರ:

ಇಬ್ರಾಹಿಮ ಆದಿಲಶಾಹನು ಪರಿಸ್ಥಿತಿಯು ಬಿಗಡಾಯಿಸುತ್ತಿದ್ದುದನ್ನು ತಿಳಿದು ಅಸದ್‌ಖಾನ ಲಾರಿಯನ್ನು ಪ್ರಶಂಸೆ ಮಾಡಲು ಆರಂಭಿಸಿದನು. ಇಬ್ರಾಹಿಮನು ಯೂಸುಫ್ ತುರ್ಕನನ್ನು ಬಂಧಿಸಿ ಅಸದ್‌ಖಾನನ ವಶಕ್ಕೊಪ್ಪಿಸಿ, ಯೂಸುಫ್ ತುರ್ಕನು ಮಾಡಿದ ಅಪರಾಧಕ್ಕಾಗಿ ಅಸದ್‌ಖಾನನು ಇಚ್ಛಿಸಿದ ಶಿಕ್ಷೆಯನ್ನು ನೀಡಬಹುದೆಂದು ಹೇಳಿದನು. ಅಸದ್‌ಖಾನನು ಬಾದಶಹನ ತಂತ್ರವನ್ನು ಅರ್ಥಮಾಡಿಕೊಂಡನು. ಯೂಸುಫ್ ತುರ್ಕನಿಗೆ ಕ್ಷಮಾಪಣೆ ನೀಡಬೇಕೆಂದು ಬಾದಶಹನನ್ನು ವಿನಂತಿಸಿಕೊಂಡನು. ಅನಂತರ, ಅಸದ್‌ಖಾನನು ಆತನಿಗೆ ಕುದುರೆ ಮತ್ತು ಪೋಷಾಕು ಕೊಟ್ಟು ಕಳುಹಿಸಿದನು.

ಬುರ್ಹಾನ ನಿಜಾಮಶಾಹನು ಬಹಿರಂಗಗೊಳಿಸುವುದು:

ಈ ಸಂಗತಿಗಳೆಲ್ಲ ಬುರ್ಹಾನ ನಿಜಾಮಶಾಹನಿಗೆ ತಿಳಿದ ಮೇಲೆ, ಆದಿಲಶಾಹಿ ಪ್ರದೇಶವನ್ನು ಜಯಿಸಿ ಅದನ್ನು ನಿಜಾಮಶಾಹಿ ಅರಸೊತ್ತಿಗೆಯಲ್ಲಿ ಸೇರಿಸಬೇಕೆಂಬುದು ಅಸದ್‌ಖಾನನ ಸಂಕಲ್ಪವಾಗಿತ್ತೆಂದು ತುಂಬಿದ ಸಭೆಯಲ್ಲಿ ಹೇಳಿದನು. ಇದಲ್ಲದೆ, ಆಕ್ರಮಣ ಮಾಡಲು ಇದು ಸರಿಯಾದ ಸಮಯ ಎಂದು ಹೇಳಿದನು. ಇದೇ ಸಂದರ್ಭದಲ್ಲಿ ಅಂದರೆ ಹಿಜರಿ ಶಕೆ ೯೪೭ರಲ್ಲಿ ಬುರ್ಹಾನ ನಿಜಾಮಶಾಹನು ಅಮೀರ ಖಾಸಿಮ ಬರೀದನ ಪಾಲುದಾರನಾದನು ಮತ್ತು ಅಹಮದ್‌ನಗರದತ್ತ ಹೊರಟನು. ಇತ್ತ ಖ್ವಾಜಾ ಜಹಾನ ದಖನಿ ಮತ್ತು ಅಮೀರ ಖಾಸಿಮ ಬರೀದ ಪರಿಂದಾದ ಬಳಿ ಸಮೀಪಿಸಿ, ಯುದ್ಧದ ಸಿದ್ಧತೆ ಆರಂಭಿಸಿದರು.

ಅಸದ್‌ಖಾನ ಲಾರಿಯ ಉಪಾಯಗಳು:

ನಿಜಾಮಶಾಹಿಯ ಹಿತೈಷಿಗಳು ಆದಿಲಶಾಹಿ ಅರಸೊತ್ತಿಗೆ ಒಳಪಟ್ಟ ಹಾಗೂ ಜೈನಖಾನನ ವಶದಲ್ಲಿದ್ದ ಸೋಲಾಪುರದ ಐದೂವರೆ ಪರ್ಗಣೆಗಳನ್ನು ತಮ್ಮ ಅಧೀನ ಪಡೆದು ಖ್ವಾಜಾ ಜಹಾನ ದಖನಿಯ ಗುಲಾಮರ ವಶಕ್ಕೆ ಕೊಟ್ಟುಬಿಟ್ಟರು. ಅತ್ತ ಬುರ್ಹಾನ ನಿಜಾಮಶಾಹನು ಬೆಳಗಾವಿಯ ಮೇಲೆ ದಾಳಿ ಮಾಡಿದನು. ಅಸದ್‌ಖಾನ ಲಾರಿಗೆ ಈ ಬಗ್ಗೆ ಮಾಹಿತಿ ಇರಲಿಲ್ಲ. ಬುರ್ಹಾನ ನಿಜಾಮಶಾಹನಿಗೆ ನೆರವು ನೀಡುವವರು ಆರು ಸಾವಿರ ಸೈನ್ಯದೊಂದಿಗೆ ಅಲ್ಲಿ ಬಂದು ತಲುಪಿದರು, ಇದರಿಂದ ಬುರ್ಹಾನ ನಿಜಾಮಶಾಹನ ಉತ್ಸಾಹ ಇನ್ನೂ ಹೆಚ್ಚಿತು. ಈಗ ಆದಿಲಶಾಹಿ ಅರಸೊತ್ತಿಗೆಯನ್ನು ಧ್ವಂಸಗೊಳಿಸುವದು ತನ್ನ ಅಧಿಕಾರ ಎಂದು ತಿಳಿದನು. ಇಬ್ರಾಹಿಮ ಆದಿಲಶಾಹನಿಗೆ

ಶತ್ರುಗಳನ್ನೆದುರಿಸುವ ಸಾಮರ್ಥ್ಯವಿರಲಿಲ್ಲ. ಆತನು ಹುಸ್ನಾಬಾದ ಗುಲಬರ್ಗಾದತ್ತ ಹೊರಟುಬಿಟ್ಟನು.

ಅಸದ್‌ಖಾನ ಲಾರಿಯ ಪ್ರಾಮಾಣಿಕತೆ:

ಅಸದ್‌ಖಾನ ಲಾರಿಯು ಈ ಎಲ್ಲ ವಿದ್ಯಮಾನಗಳನ್ನು ಇಮಾದಶಾಹನಿಗೆ ತಿಳಿಸಲು ಹಾಗೂ ಇಬ್ರಾಹಿಮ ಆದಿಲಶಾಹನಿಗೆ ಸಹಾಯ ಮಾಡಲು ಅಲಿ ಮಹಮದ್ ಬದ್‌ಖುಷಿಯನ್ನು ಬೆರಾರದ ಅಲ್ಲಾವುದ್ದೀನ ಇಮಾದನ ಬಳಿ ದೂತನಾಗಿ ಕಳುಹಿಸಿಕೊಟ್ಟನು. ಇಮಾದಶಾಹನು ಒಪ್ಪಿದರೆ, ಅಸದ್‌ಖಾನ ಲಾರಿಯು ಬಾದಶಹನ ಸಂಶಯವನ್ನು ನಿವಾರಿಸಲು ನಿವೇದನೆ ಮಾಡಿಕೊಳ್ಳುವುದಾಗಿ ತಿಳಿಸಿದನು. ಪತ್ರವಾಹಕನು ಈ ಪತ್ರವನ್ನು ಮುಟ್ಟಿಸುತ್ತಿದ್ದಂತೆಯೇ, ಸ್ವತಃ ಬಾದಶಹನು ಇಮಾದಶಾಹನ ಸಭೆಗೆ ಆಗಮಿಸಿದನು. ಇದಾದ ತರುವಾಯ ಇಮಾದಶಾಹ ತೆರಳಿದನು.

ಇಮಾದಶಾಹನನ್ನು ಅಸದಖಾನ ಲಾರಿ ಭೇಟಿಯಾಗುವುದು:

ಅರಕ್ ಕಿಲ್ಲೆಯು ಬಿಜಾಪುರವನ್ನು ರಕ್ಷಿಸುತ್ತಿದ್ದುದರಿಂದ, ಬುರ್ಹಾನ ನಿಜಾಮಶಾಹನು ಅರಕ್ ಕೋಟೆಯ ಎಲ್ಲ ಮನೆಗಳನ್ನು ಅಗ್ನಿಗೆ ಆಹುತಿ ಮಾಡಿದನು. ತನ್ನೊಡನೆ ಅಮೀರ ಖಾಸಿಮ ಬರೀದನನ್ನು ಕರೆದುಕೊಂಡು, ಬುರ್ಹಾನ ನಿಜಾಮಶಾಹನು ಹುಸ್ನಾಬಾದ ಗುಲಬರ್ಗಾದತ್ತ ತೆರಳಿದನು. ಸ್ವಲ್ಪ ದೂರ ತೆರಳುವುದರಲ್ಲಿ, ಅಸದ್‌ಖಾನ ಲಾರಿಯು ಆತನಿಂದ ಬೇರ್ಪಟ್ಟು ಇಮಾದಶಾಹನ ಸೈನ್ಯದ ಬಳಿ ತಲುಪಿ, ತನ್ನ ವಿರುದ್ಧ ಎತ್ತಿಕಟ್ಟಿದ ಸಂಗತಿಯನ್ನು ಹೇಳಿದನು. ಅಸದ್‌ಖಾನ ಲಾರಿಯು ವೈರಿಗಳೊಂದಿಗೆ ಸೇರಿಕೊಂಡು ದ್ರೋಹ ಮಾಡುತ್ತಿರುವುದಾಗಿ ಯೂಸುಫ ಶಹಾನಾ ಹೇಳುತ್ತಿದ್ದುದನ್ನು ಬಾದಶಹನು ನಂಬುವಂತೆ ಮಾಡಿದುದನ್ನು ಹೇಳಿದನು. ಅಸದ್‌ಖಾನನ ನಿರ್ದೋಷತೆಯನ್ನು ದೂರ ಮಾಡುವ ಸಂದರ್ಭ ಈಗ ಒದಗಿ ಬಂದಿರುವುದರಿಂದ ಇಮಾದಶಾಹನು ವಾಸ್ತವ ಸಂಗತಿಯನ್ನು ಬಾದಶಹನಿಗೆ ತಿಳಿಸಿ ಆತನ ತಪ್ಪು ಕಲ್ಪನೆಯನ್ನು ದೂರ ಮಾಡಲು ಕೇಳಿಕೊಂಡನು. ಅಮೀರ ಖಾಸಿಮ ಬರೀದ ಮತ್ತು ನಿಜಾಮಶಾಹರು ಬೆಳಗಾವಿಯ ಸಮೀಪ ತಲುಪಿರುವುದರಿಂದ, ಯೂಸುಫ ಶಹಾನಾನ ಹೇಳಿಕೆಯು ನಿಜವೆಂದು ಭಾವಿಸಿ ಸಂಶಯ ಪಡುವಂತಾಗಿದೆಯೆಂದು ಹೇಳಿದನು. ಅಸದ್‌ಖಾನನ ಸಲಹೆಯ ಮೇರೆಗೆ ಶತ್ರುಗಳು ಆಕ್ರಮಣ ಮಾಡುತ್ತಿದ್ದಾರೆ ಎಂದು ಬಾದಶಹನು ತಿಳಿದುಕೊಂಡಿದ್ದಾನೆ. ಈ ಎಲ್ಲ ಕಾರಣಗಳಿಂದ ಅಸದ್‌ಖಾನ ಲಾರಿಯ ಚಿಂತೆಯು ಹೆಚ್ಚಿ, ಶತ್ರುಗಳ ಪಾಳಯದಲ್ಲಿ ಕೊಂಚ ಹೊತ್ತು ನಿಲ್ಲಬೇಕಾಯಿತೆಂದು ಇಮಾದಶಾಹನಿಗೆ ಹೇಳಿದನು.

ಇಬ್ರಾಹಿಮ ಆದಿಲಶಾಹ ಮತ್ತು ಅಸದ್‌ಖಾನ ಲಾರಿ ಇವರಲ್ಲಿ ಒಪ್ಪಂದ:

ಅಲ್ಲಾವುದ್ದೀನ ಇಮಾದಶಾಹನು ಅಸದ್‌ಖಾನ ಲಾರಿಯೊಂದಿಗೆ ಯಾವುದೇ

ತೊಂದರೆಗಳಿಲ್ಲದೆ, ಇಬ್ರಾಹಿಮ ಆದಿಲಶಾಹನ ಸೇವೆಯಲ್ಲಿ ಉಪಸ್ಥಿತನಾದನು, ಹಾಗೂ ಅಸದ್‌ಖಾನ ಲಾರಿಯು ಹೇಳಿದ ವಿಷಯ ಚಾಚೂ ತಪ್ಪದಂತೆ ಬಾದಶಹನಿಗೆ ಅರಿಕೆ ಮಾಡಿಕೊಂಡನು. ತತ್ಪರಿಣಾಮವಾಗಿ, ಬಾದಶಹನು ಅಸದ್‌ಖಾನ ಲಾರಿಯನ್ನು ಕ್ಷಮಿಸಿದನು. ಅದೇ ರೀತಿ ಅಸದ್‌ಖಾನ ಲಾರಿಯ ಬಗ್ಗೆ ದೂರು ಹೇಳುತ್ತಿದ್ದವರ ರಹಸ್ಯವು ಬಹಿರಂಗವಾಯಿತು. ಇಬ್ರಾಹಿಮ ಆದಿಲಶಾಹನು ಅಸದ್‌ಖಾನ ಲಾರಿಯನ್ನು ಆಲಂಗಿಸಿಕೊಂಡನು, ಆತನ ಗೌರವ ಮತ್ತು ಹುದ್ದೆಗಳಲ್ಲಿ ಹೆಚ್ಚಳವನ್ನು ಮಾಡಿದನು.

ಬುರ್ಹಾನ ನಿಜಾಮಶಾಹ ಮತ್ತು ಇಬ್ರಾಹಿಮ ಆದಿಲಶಾಹರಲ್ಲಿ ಕಾಳಗ:

ತನ್ನ ಶುಭಚಿಂತಕರಾದ ಇಮಾದ ಶಾಹ ಮತ್ತು ಅಸದ್‌ಖಾನ ಲಾರಿ ಇವರ ಸಲಹೆಯಂತೆ ಬಾದಶಹನು ಬುರ್ಹಾನ ನಿಜಾಮಶಾಹ ಮತ್ತು ಆತನ ಸಂಗಡಿಗ ಅಮೀರ ಖಾಸಿಮ ಬರೀದರ ಮೇಲೆ ಆಕ್ರಮಣ ಮಾಡುವ ಸಂಕಲ್ಪ ಮಾಡಿದನು. ಆದಿಲ ಶಾಹಿ ಸೈನ್ಯದ ದಾಳಿಯಿಂದ ಭೀತರಾದ ಇಬ್ಬರೂ ವೈರಿಗಳು ಪ್ರಾಣ ಉಳಿಸಿಕೊಂಡು ಬೀಡ ಪರ್ಗಣೆ(ಪ್ರದೇಶ)ಯ ಮಾರ್ಗವಾಗಿ ಸಾಗಿದರು. ವೈರಿಗಳು ಹೊರಟ ನಂತರ, ಇಮಾದ ಶಾಹ ಮತ್ತು ಇಬ್ರಾಹಿಮ ಆದಿಲಶಾಹರು ಅಲ್ಲಿಯೇ ಉಳಿಯುವುದು ಸಮಂಜಸವಲ್ಲವೆಂದು, ಬಾಲಾಘಾಟ ಮತ್ತು ದೌಲತಾಬಾದತ್ತ ತಿರುಗಿದರು. ಆದಿಲಶಾಹಿ ಸೈನ್ಯ ಮತ್ತು ಇಮಾದಶಾಹರು ಆ ಪ್ರದೇಶವನ್ನು ಎಲ್ಲ ರೀತಿಯಿಂದ ಧ್ವಂಸ ಮಾಡಿದರು.

ಅಮೀರ ಖಾಸಿಮ ಬರೀದನ ಮೃತ್ಯು, ಎರಡೂ ವಂಶದವರಲ್ಲಿ ಸಂಧಾನ:

ಇದೇ ಸಮಯದಲ್ಲಿ ಅಮೀರ ಖಾಸಿಮ ಬರೀದನು ರೋಗಪೀಡಿತನಾಗಿ, ಮೃತ್ಯುವಶನಾದನು. ಬಾಲಾಘಾಟ ಮತ್ತು ದೌಲತಾಬಾದದಲ್ಲಿ ಅಮೀರ ಬರೀದನ ಸಮಾಧಿ ನಿರ್ಮಿಸಲಾಯಿತು. ತರುವಾಯ, ಶಾಹ ತಾಹಿರನು ಮಧ್ಯವರ್ತಿಯಾಗಿ ಎರಡೂ ಮನೆತನಗಳಲ್ಲಿ ಶರತ್ತುಬದ್ಧ ಸಂಧಾನವನ್ನು ಏರ್ಪಡಿಸಿದನು. ನಿಜಾಮಶಾಹನಿಂದ ಇಬ್ರಾಹಿಮ ಆದಿಲಶಾಹನಿಗೆ ಸೋಲಾಪುರದ ಐದೂವರೆ ಪರ್ಗಣೆ ಪ್ರದೇಶವು ಪುನಃ ಮರಳಿ ದೊರೆಯುವುದು, ಭವಿಷ್ಯದಲ್ಲಿ ಪರಸ್ಪರರ ಮಧ್ಯೆ ಯಾವುದೇ ವಿಧದ ಸಮರಗಳಿರಬಾರದು ಎಂಬ ಷರತ್ತನ್ನು ವಿಧಿಸಲಾಯಿತು. ತಾತ್ಪೂರ್ತಿಕವಾದ ಸ್ವಾರ್ಥತೆಯಿಂದ ಕೂಡಿದ ಸ್ನೇಹಬಂಧದ ಒಪ್ಪಂದದ ನಂತರ ತಮ್ಮ ತಮ್ಮ ದಾರಿ ಹಿಡಿದರು.

ಬುರ್ಹಾನ ನಿಜಾಮಶಾಹನ ದಾಳಿ:

ಒಂದು ವರ್ಷದ ತರುವಾಯ, ಹಿಜರಿ ಶಕೆ ೯೫೦ರಲ್ಲಿ ಇಬ್ರಾಹಿಮ ಆದಿಲಶಾಹನ ವಿವಾಹವು ಅಲ್ಲಾವುದ್ದೀನ ಇಮಾದಶಾಹನ ಪುತ್ರಿ ರಾಜಾ ಸುಲ್ತಾನಳೊಡನೆ ನೆರವೇರಿತು. ಸೋಲಾಪುರದ ಐದೂವರೆ ಪರ್ಗಣೆಗಳ ರತ್ನದಂತಹ ಪ್ರದೇಶವನ್ನು

ಕಳೆದುಕೊಂಡ ಬುರ್ಹಾನ ನಿಜಾಮುಶಾಹನ ಎದೆಯ ಮೇಲೆ ಹಾವು ಹರಿದಾಡತೊಡಗಿತು. ಆತನ ಬದುಕು ಪ್ರತಿದಿನವೂ ಪ್ರಕ್ಷುಬ್ಧವಾಗತೊಡಗಿತು. ಈ ಸಂದರ್ಭದಲ್ಲಿ ಇಬ್ರಾಹಿಮ ಆದಿಲಶಾಹ ಮತ್ತು ಅಲ್ಲಾವುದ್ದೀನ ಇಮಾದಶಾಹರಲ್ಲಿ ಮನಸ್ತಾಪ ಉಂಟಾಗತೊಡಗಿತು. ನಿಜಾಮಶಾಹನಿಗೆ ಇಬ್ರಾಹಿಮ ಆದಿಲಶಾಹನ ಶತ್ರುಗಳನ್ನು ಎತ್ತಿ ಕಟ್ಟುವ ಸುಯೋಗ ಒದಗಿತು. ಆತನು ಜಮಶೇದ ಕುಲಿ ಕುತುಬಶಾಹ ಮತ್ತು ರಾಮರಾಜರನ್ನು ತನ್ನ ಸಂಚಿನಲ್ಲಿ ಸೇರಿಸಿಕೊಂಡನು. ಇವರಲ್ಲದೆ, ತನ್ನ ಕುತಂತ್ರ ಮತ್ತು ವಂಚನೆಯಿಂದ ಖ್ವಾಜಾ ಜಹಾನ ದಖನಿ ಮತ್ತು ಅಲಿ ಬರೀದರಿಂದ ರಕ್ಷಣೆಯನ್ನು ಪಡೆದುದಲ್ಲದೆ, ಅವರಿಬ್ಬರೊಡನೆ ಇಬ್ರಾಹಿಮ ಆದಿಲಶಾಹನ ಅಧೀನಕ್ಕೊಳಪಟ್ಟ ಪ್ರದೇಶದ ಮೇಲೆ ಆಕ್ರಮಣ ಮಾಡಿದನು.

ಇಬ್ರಾಹಿಮ ಆದಿಲಶಾಹನ ಪರಾಭವ ಮತ್ತು ವ್ಯಾಕುಲತೆ:

ಬುರ್ಹಾನ ನಿಜಾಮಶಾಹನು ಸೋಲಾಪುರ ಕಿಲ್ಲೆಯನ್ನು ತನ್ನ ವಶಪಡಿಸಿಕೊಂಡನು. ಐದು ಪರ್ಗಣೆಗಳು ಮತ್ತು ಅದರ ಸುತ್ತಮುತ್ತಲಿನ ಪ್ರದೇಶವನ್ನು ಅಧೀನಪಡಿಸಿ ಕೊಂಡನು, ಅಲ್ಲಿ ಲೂಟಿ ಮತ್ತು ಕೊಳ್ಳೆ ಮಾಡಿದನು. ಇಬ್ರಾಹಿಮ ಆದಿಲಶಾಹನ ಸೈನ್ಯವು ನಿಜಾಮುಶಾಹನ ಸೈನ್ಯವನ್ನೆದುರಿಸಿತು. ಆದರೆ, ಸೋಲಿನ ನಂತರ ಸೋಲುಂಡಿತು. ಇತ್ತ ನಿಜಾಮಶಾಹನ ಸಂಕೇತದಂತೆ ಖುಲಿ ಖುತುಬಶಾಹನು ಬಿಜಾಪುರದ ಮೇಲೆ ದಾಳಿ ಮಾಡಿದನು ಹಾಗೂ ಪರ್ಗಣೆಯನ್ನು ಕೇಂದ್ರ ಮಾಡಿಕೊಂಡು ಗುಲಬರ್ಗಾವನ್ನು ವಶಪಡಿಸಿಕೊಳ್ಳುವ ಪ್ರಯತ್ನ ಮಾಡತೊಡಗಿದನು. ಇನ್ನೊಂದು ಕಡೆ ರಾಮರಾಜನು ಹಟಕರ ಕಿಲ್ಲೆಗೆ ಮುತ್ತಿಗೆ ಹಾಕಿದ್ದನು. ಆತನ ಬಂಧು ನೇಕನಾದ್ರಿಯು ಪ್ರಬಲ ಸೈನ್ಯದೊಡನೆ ರಾಯಚೂರ ಕಿಲ್ಲೆಯನ್ನು ಮುತ್ತಿಗೆ ಹಾಕಲು ಹೊರಟನು. ಇದೆಲ್ಲವೂ ನಿಜಾಮಶಾಹನ ಸೂಚನೆಯಂತೆ ನಡೆಯುತ್ತಲಿತ್ತು.

ಅಸದ್‌ಖಾನ ಲಾರಿಗೆ ಕರೆ:

ಇಬ್ರಾಹಿಮ ಆದಿಲಶಾಹನು ತನ್ನನ್ನು ನಾಲ್ಕೂ ಕಡೆಯಿಂದ ಶತ್ರುಗಳು ಸುತ್ತುವರೆದಿದ್ದುದು ತಿಳಿದು ತಾನು ಏಕಾಂಗಿಯೆಂದು ಭಾವಿಸಿ ಅತೀವ ಕಳವಳ ಹಾಗೂ ಬೇಸರಗೊಂಡನು. ಅನುಭವಿಯಾದ ಅಸದ್‌ಖಾನ ಲಾರಿಯ ಅಭಿಪ್ರಾಯ ಪಡೆಯಲು ಇಬ್ರಾಹಿಮನು ತ್ವರಿತವಾಗಿ ಅಸದ್‌ಖಾನ ಲಾರಿಗೆ ಬರಹೇಳಿದನು. ಅಸದ್‌ಖಾನನು ಎಲ್ಲ ವಿದ್ಯಮಾನವನ್ನು ಕೂಲಂಕಶವಾಗಿ ವಿಚಾರಿಸಿ, 'ಇದೆಲ್ಲವೂ ಕೇವಲ ಒಬ್ಬ ಶತ್ರು ಬುರ್ಹಾನ ನಿಜಾಮಶಾಹನಿಂದಾಗಿ ಆಗುತ್ತಿರುವುದು, ಆದಿಲಶಾಹಿ ಮನೆತನದ ದೊಡ್ಡ ಶತ್ರುವೆಂದರೆ ಬುರ್ಹಾನ ನಿಜಾಮಶಾಹ ಮಾತ್ರ, ಉಳಿದ ಸರದಾರರು ಆತನು ಕುಣಿಸಿದಂತೆ ಕುಣಿಯುತ್ತಾರೆ, ಆತನಲ್ಲದೆ ಉಳಿದವರಿಗೆ ಆದಿಲಶಾಹಿ ಗಳನ್ನೆದುರಿಸುವ ಧೈರ್ಯವಿಲ್ಲ. ಬುರ್ಹಾನ ನಿಜಾಮಶಾಹನೊಡನೆ ಸಂಧಿ ಮಾಡಿಕೊಂಡಲ್ಲಿ

ಎಲ್ಲ ಕಾರ್ಯವು ಸುಗಮವಾಗುವುದು, ಉಳಿದೆಲ್ಲ ಸರದಾರರು ಕೊಡುವ ಕಿರುಕುಳದಿಂದ ಬಿಡುಗಡೆ ಪಡೆಯಬಹುದು' ಎಂಬ ನಿರ್ಧಾರಕ್ಕೆ ಬಂದನು.

ಅಸದ್‌ಖಾನನ ಸಲಹೆ:

'ಸೋಲಾಪುರದ ಐದು ಪರ್ಗಣೆಗಳ ಕಾರಣದಿಂದ ಪದೇ ಪದೇ ಯುದ್ಧ ಮತ್ತು ಜಗಳ ಆಗುತ್ತಿರುವುದರಿಂದ, ಬುರ್ಹಾನ ನಿಜಾಮಶಾಹನೊಂದಿಗೆ ವಿರೋಧವನ್ನು ಅಂತ್ಯಗೊಳಿಸಲು ಐದು ಪರ್ಗಣೆ ಪ್ರದೇಶವನ್ನು ಹಿಂದಿರುಗಿಸುವುದು ಅವಶ್ಯವಾಗಿದೆ. ತರುವಾಯ ರಾಮರಾಜನಿಗೆ ಪ್ರೀತಿ ಮತ್ತು ವಿಶ್ವಾಸವನ್ನು ವ್ಯಕ್ತ ಪಡಿಸುವ ಪತ್ರವೊಂದನ್ನು ಬರೆಯಬೇಕು, ಇದಲ್ಲದೆ, ಸುತ್ತಮುತ್ತಲಿನ ಇತರ ರಾಜರಿಗೆ ಉತ್ತಮವಾದ ಕಾಣಿಕೆ ಮತ್ತು ಉಡುಗೊರೆಗಳನ್ನು ಕೊಡಬೇಕು. ಉತ್ತಮ ವಾಕ್ಪಟುಗಳಾದ ದೂತರ ಮೂಲಕ ಬಳುವಳಿ ಮತ್ತು ಕಾಣಿಕೆಗಳನ್ನು ಸಂಬಂಧಪಟ್ಟ ರಾಜರಿಗೆ ತಲುಪಿಸಬೇಕು. ರಾಮರಾಜನು ಇತ್ತೀಚೆಗೆ ಎಲ್ಲೆಡೆಯಲ್ಲಿಯೂ ಪ್ರಸಿದ್ದಿ ಪಡೆಯುತ್ತಿದ್ದಾನೆ, ಇತರ ರಾಜರಿಗೆ ಚಿಕ್ಕಪುಟ್ಟ ಕೊಡುಗೆಗಳನ್ನು ನೀಡಿ ಆದಿಲಶಾಹಿ ಅರಸೊತ್ತಿಗೆಯ ಪರವಾಗಿ ಮಾಡಿಕೊಳ್ಳಬಹುದು. ರಾಮರಾಜನಿಗೆ ತನ್ನ ಶತ್ರುಗಳ ಭಯ ಕುಟುಕುತ್ತಿದೆ, ಆತನು ತ್ವರಿತವಾಗಿ ಬಾದಶಹನ ಅನುಯಾಯಿಯಾಗುವನು. ಅವರೆಲ್ಲರನ್ನು ಸಂತೃಪ್ತಿಗೊಳಿಸಿದ ನಂತರ ಜಮಶೆದ ಕುಲಿ ಕುತುಬನನ್ನು ಮುಗಿಸುವುದು ಸುಲಭ' ಎಂದು ಅಸದ್‌ಖಾನ ಸಲಹೆ ನೀಡಿದನು.

ಕುಲಿ ಖುತುಬಶಾಹನ ಮೇಲೆ ದಾಳಿ:

ಅಸದ್‌ಖಾನನು ಪ್ರಸ್ತಾಪಿಸಿದ ಸಲಹೆಗಳನ್ನು ಇಬ್ರಾಹಿಮ ಆದಿಲಶಾಹನು ಸಂಪೂರ್ಣವಾಗಿ ಒಪ್ಪಿಕೊಂಡು, ಆತನು ನೀಡಿದ ಸಲಹೆಗಳನ್ನು ಕಾರ್ಯರೂಪಕ್ಕೆ ತರಲಾರಂಭಿಸಿದನು. ಅಸದ್‌ಖಾನ ಲಾರಿ ಯೋಜಿಸಿದ ಉಪಾಯಗಳು ಇಬ್ರಾಹಿಮ ಆದಿಲಶಾಹನಿಗೆ ಅತ್ಯಂತ ಪರಿಣಾಮಕಾರಿಯಾಗಿ ಪರಿಣಮಿಸಿದವು. ಪ್ರಾಣವನ್ನು ಪಣಕ್ಕಿಡುವ ಪರಾಕ್ರಮಿಗಳ ಸೈನಿಕರ ದಂಡನ್ನು ಅಸದ್‌ಖಾನನ ವಶಕ್ಕೊಪ್ಪಿಸಿ, ಕುಲಿ ಕುತುಬಶಾಹನ ವಿದ್ರೋಹವನ್ನು ಕೊನೆಗಾಣಿಸಬೇಕೆಂದು ಬಾದಶಹನು ಅಪ್ಪಣೆ ಮಾಡಿದನು. ಚಳಿಗಾಲವು ಆರಂಭವಾಗುವ ಮುಂಚಿತವಾಗಿ, ಕಾಕನಿ ಕಿಲ್ಲೆಗೆ ಮುತ್ತಿಗೆ ಹಾಕಿದನು, ಚಳಿಗಾಲವು ಆರಂಭವಾದ ದಿನದಂದು ಕಾಕನಿ ಕಿಲ್ಲೆಯನ್ನು ಗೆದ್ದು ಆತನಿಗೆ ತಿರುಗೇಟು ನೀಡಿದನು.

ಅಸದ್‌ಖಾನ ಲಾರಿಯ ಮತ್ತಿತರ ಗೆಲುವಿನ ಸರಮಾಲೆಗಳು:

ತರುವಾಯ, ಅಸದ್‌ಖಾನ ಲಾರಿ ಅಟಕರದ ದಾರಿ ಹಿಡಿದನು. ಕುಲಿ ಖುತುಬಶಾಹನು ಪರಾಭವದ ಭೀತಿಯಿಂದ ತೆಲಂಗಾಣದತ್ತ ಓಡಿದಾಗ, ಆತನ ಬೆನ್ನಟ್ಟಿ ಅಸದ್‌ಖಾನನು ತನ್ನ ಕುದುರೆಯನ್ನು ಓಡಿಸಿದನು. ಖುತುಬಶಾಹಿ ಸೈನ್ಯದ ಮೇಲೆ ಎರಡು ಬಾರಿ ವಿಜಯ ಪಡೆದನು. ಅನಿವಾರ್ಯವಾಗಿ, ಖಲಿ ಖುತುಬಶಾಹನು

ಗೊಲ್ಕೊಂಡಾ ಕಿಲ್ಲೆಯ ಆಸುಪಾಸಿನಲ್ಲಿ ತನ್ನ ಸೈನ್ಯಕ್ಕೆ ಇನ್ನೂ ಹೆಚ್ಚಿನ ತರಬೇತಿಯನ್ನು ನೀಡಿದನು. ಆದರೂ ಯುದ್ಧದ ಪರಿಣಾಮವು ಖುತುಬಶಾಹಿ ಸೈನ್ಯದ ಪರವಾಗಿ ಆಗಲಿಲ್ಲ, ಖುತುಬಶಾಹಿಗಳು ಸೋಲಿನ ಮುಖ ಕಾಣಬೇಕಾಯಿತು. ಈ ಯುದ್ಧದಲ್ಲಿ ಉಭಯಪಕ್ಷದ ಮುಖಂಡರು ಒಬ್ಬರೊಡನೊಬ್ಬರು ಮುಖಾಮುಖಿಯಾಗಿ ಯುದ್ಧ ಮಾಡುವ ಅವಕಾಶ ದೊರೆಯಿತು. ಅಸದ್‌ಖಾನ ಲಾರಿ ಮತ್ತು ಜಮಶೇರ ಕುಲಿ ಕುತುಬಶಾಹ ಒಬ್ಬರ ಮೇಲೊಬ್ಬರು ತಲವಾರು ಮತ್ತು ಭಲ್ಲೆಗಳಿಂದ ಕದನ ಮಾಡಿದರು, ಅಸದ್‌ಖಾನ ಲಾರಿಯ ಕೈ ಮೇಲಾಯಿತು, ಕುಲೀ ಕುತುಬನು ಅಸದ್‌ಖಾನನಿಂದ ತೀವ್ರವಾಗಿ ಗಾಯಗೊಂಡನು, ಸಾಯುವವರೆಗೆ, ಈ ಗಾಯದ ನೋವನ್ನು ಅನುಭವಿಸಿದನು, ನಿಂತಾಗ, ಕುಳಿತಾಗ, ನಿದ್ರೆಯಲ್ಲಿದ್ದಾಗ, ಜಾಗ್ರತನಾಗಿದ್ದಾಗ, ಗಾಯದ ನೋವು ಆತನನ್ನು ಕಾಡುತ್ತಿತ್ತು. ವಿಜಯ ಪ್ರಾಪ್ತವಾದ ನಂತರ ಅಸದ್‌ಖಾನ ಲಾರಿಯು ಬಿಜಾಪುರದತ್ತ ಹೊರಟನು, ತನ್ನ ಸ್ವಭಾವದಂತೆ ಅಸದ್‌ಖಾನನು ಯಥಾಪ್ರಕಾರ ತನ್ನ ಕರ್ತವ್ಯದಲ್ಲಿ ನಿರತನಾದನು.

ಬುರ್ಹಾನ ನಿಜಾಮಶಾಹನ ಸೋಲು :

ಯುದ್ಧದ ತರುವಾಯು, ಇಬ್ರಾಹಿಮ ಆದಿಲಶಾಹನು ನೆಮ್ಮದಿಯ ಉಸಿರುಬಿಟ್ಟನು. ರಾಜ್ಯವು ನಾಲ್ಕೂ ಕಡೆಯಿಂದ ಸುರಕ್ಷಿತನಾಗಿರುವದನ್ನು ಮನವರಿಕೆ ಮಾಡಿಕೊಂಡು ಸರದಾರರು ತಮ್ಮ ಜಹಗೀರುಗಳನ್ನು ನೋಡಿಕೊಳ್ಳಲು ಕಳುಹಿಸಿಕೊಟ್ಟನು. ಹಿಜರಿಶಕೆ ೯೫೧ರಲ್ಲಿ ರಾಮರಾಜನ ಸಲಹೆಯ ಮೇರೆಗೆ ಬುರ್ಹಾನ ನಿಜಾಮಶಾಹನು ಹುಸ್ನಾಬಾದ ಗುಲಬರ್ಗಾದ ಮೇಲೆ ಆಕ್ರಮಣ ಮಾಡಿದನು. ಕೋಟೆಯನ್ನು ನಾಲ್ಕೂ ದಿಕ್ಕಿನಿಂದ ಸುತ್ತುವರೆದನು. ಇದಕ್ಕೆ ಉತ್ತರರೂಪವಾಗಿ, ಇಬ್ರಾಹಿಮನು ಸಹ ತನ್ನ ಸೈನ್ಯದೊಡನೆ ಭೀಮಾ ನದಿಯ ದಂಡೆಯ ಮೇಲೆ ಬಿಡಾರ ಹಾಕಿದನು. ಹೊಳೆಯ ದಂಡೆಯ ಪ್ರದೇಶವು ಬುರ್ಹಾನ ನಿಜಾಮಶಾಹನ ಅಧೀನದಲ್ಲಿತ್ತು. ಇಬ್ರಾಹಿಮ ಆದಿಲಶಾಹನ ಸೈನ್ಯವು ಎರಡು ಮೂರು ತಿಂಗಳವರೆಗೆ ಹೊಳೆಯ ಇನ್ನೊಂದು ಬದಿಯನ್ನು ತಲುಪಲಾಗಲಿಲ್ಲ. ಅನಿವಾರ್ಯವಾಗಿ ಮಳೆಗಾಲದಲ್ಲಿ ಇಬ್ರಾಹಿಮ ಆದಿಲಶಾಹನು ನದಿಯನ್ನು ದಾಟಬೇಕಾಯಿತು. ಉಭಯಪಕ್ಷದವರು ತಮ್ಮ ತಮ್ಮ ಸೈನ್ಯಗಳಿಗೆ ಶಿಕ್ಷಣ ಮತ್ತು ತರಬೇತಿಯನ್ನು ನೀಡತೊಡಗಿದರು. ಭೀಕರ ಯುದ್ಧ ನಡೆಯಿತು. ಆದಿಲಶಾಹಿ ಸೈನ್ಯಕ್ಕೆ ಜಯ ಲಭಿಸಿತು, ಕೊಳ್ಳೆ ಹೊಡೆದ ವಸ್ತುಗಳಲ್ಲಿ ಆನೆಗಳು ಮತ್ತು ಇತರ ವಸ್ತುಗಳು ದೊರಕಿದವು.

ಇಬ್ರಾಹಿಮ ಆದಿಲಶಾಹನ ಅಹಂಕಾರ :

ಬುರ್ಹಾನ ನಿಜಾಮಶಾಹನನ್ನು ಸೋಲಿಸಿ ವಿಜಯ ಪಡೆದ ಮೇಲೆ, ಇಬ್ರಾಹಿಮ ಆದಿಲಶಾಹನು ಜನರೊಂದಿಗೆ ದುರ್ವರ್ತನೆಯಿಂದ ನಡೆದುಕೊಳ್ಳತೊಡಗಿದನು.

ಆತನ ಅಹಂಕಾರವು ಆಕಾಶದೆತ್ತರಕ್ಕೆ ಏರಿತು. ಒಂದು ರಾತ್ರಿ ನಶೆಯ ಅಮಲಿನಲ್ಲಿ ಮತ್ತನಾಗಿ ಬುರ್ಹಾನ ನಿಜಾಮಶಾಹನ ದೂತರೊಂದಿಗೆ ಅತ್ಯಂತ ಕೆಟ್ಟ ರೀತಿಯಿಂದ ನಡೆದುಕೊಂಡನು, ಅವರಿಗೆ ಅವಾಚ್ಯ ಶಬ್ದಗಳನ್ನು ಉಪಯೋಗಿಸಿದನು. ಇದಲ್ಲದೆ, ಸಾಮಾನ್ಯವಾದ ಸಂಗತಿಗಳಿಗೆಲ್ಲ ಸರದಾರರಿಗೆ ಸಭಾಸದರಿಗೆ ಪದಚ್ಯುತಿ ಮಾಡುವುದು, ಹುದ್ದೆಯಿಂದ ವಜಾಗೊಳಿಸುವದನ್ನು ಆರಂಭಿಸಿದನು.

ಇಬ್ರಾಹಿಮ ಆದಿಲಶಾಹನ ಸೋಲು :

ಹಿಜರಿಶಕೆ ೯೫೨ರಲ್ಲಿ ಬುರ್ಹಾನ ನಿಜಾಮಶಾಹನು ಅಲಿ ಬರೀದನ ಪ್ರದೇಶದ ಮೇಲೆ ಆಕ್ರಮಣ ಮಾಡಿದನು. ಉದ್ಗೀರ, ಕಂಧಾರ ಮತ್ತು ಔಸಾಗಳ ಕಿಲ್ಲೆಗಳನ್ನು ವಶಪಡಿಸಿಕೊಳ್ಳಲು ಸಿದ್ಧನಾಗತೊಡಗಿದನು. ತನಗೆ ಸಹಾಯ ಮಾಡುವ ಷರತ್ತಿಗೆ ಒಪ್ಪಿದಲ್ಲಿ, ಕಲ್ಯಾಣದ ಕಿಲ್ಲೆಯನ್ನು ಇಬ್ರಾಹಿಮ ಆದಿಲಶಾಹನ ವಶಕ್ಕೆ ಒಪ್ಪಿಸುವುದಾಗಿ ಅಲಿ ಬರೀದನು ಹೇಳಿದನು. ಅಲಿ ಬರೀದನ ಕಾಣಿಕೆಯನ್ನು ಇಬ್ರಾಹಿಮ ಆದಿಲಶಾಹನು ಸ್ವೀಕರಿಸಿದನು, ರಾಜಠೀವಿಯಲ್ಲಿ ಅಲಿ ಬರೀದನಿಗೆ ಸೈನ್ಯವನ್ನು ಒಪ್ಪಿಸಿಕೊಡಲು ಸವಾರಿಯಾಗಿ ಹೊರಟನು. ಅರ್ಧ ವರ್ಷ ಕಳೆದು ಹೋಯಿತು, ಕೇವಲ ಎರಡು ಸಲ ಯುದ್ಧವಾಯಿತು, ಆದರೆ ಶತ್ರುಗಳಿಗೆ ವಿಜಯ ದೊರಕಿತು. ಇಬ್ರಾಹಿಮ ಆದಿಲಶಾಹನ ಗರ್ವವು ಯುದ್ಧ ಸಾಮಗ್ರಿಗಳನ್ನೆಲ್ಲ ಶತ್ರುಗಳಿಗೆ ಒಪ್ಪಿಸಿಕೊಡುವಂತೆ ಮಾಡಿತು. ಇಬ್ರಾಹಿಮ ಆದಿಲಶಾಹನಿಗೆ ತನ್ನ ಸೋಲಿನ ಕಾರಣ ಸರದಾರರು ಮತ್ತು ಸೇನಾನಿಗಳ ಪರಸ್ಪರ ಶತ್ರುತ್ವದಿಂದ ಆಗಿರಬಹುದೆಂದು ಕಂಡಿತು. ಈ ರೀತಿ ಆತನು ಎಪ್ಪತ್ತು ಮುಸಲ್ಮಾನ ಮತ್ತು ನಲವತ್ತು ಹಿಂದು-ಬ್ರಾಹ್ಮಣರನ್ನು ಕೊಲ್ಲಿಸಿದನು.

ಇಬ್ರಾಹಿಮ ಆದಿಲಶಾಹನ ವಿರುದ್ಧ ಕುತಂತ್ರ ;

ಪ್ರಜೆಗಳು ಇಬ್ರಾಹಿಮ ಆದಿಲಶಾಹನ ಅಕ್ರಮ ಚಟುವಟಿಕೆ, ಕ್ರೂರ ಕೆಲಸ, ದೌರ್ಜನ್ಯ ಮತ್ತು ಶೋಷಣೆಯಿಂದ ಬೇಸತ್ತು ಹೋಗಿದ್ದರು. ಜನರು ಆತನ ಭ್ರಾತೃಸಂಬಂಧಿ ರಾಜಕುಮಾರ ಅಬ್ದುಲ್ಲಾನನ್ನು ಬಾದಶಹನಾಗಿ ಮಾಡಲು ಇಚ್ಛಿಸುತ್ತಿದ್ದರು. ಆದರೆ ಇದಕ್ಕೆ ಮಾಡುವ ರಹಸ್ಯ ಕಾರ್ಯಾಚರಣೆಯು ಕಾರ್ಯಗತವಾಗುವ ಪೂರ್ವದಲ್ಲಿಯೇ ಇಬ್ರಾಹಿಮ ಆದಿಲಶಾಹನಿಗೆ ತಿಳಿದುಬಿಟ್ಟಿತು, ಆಗ ಆತನು ಅತ್ಯಂತ ಧೂರ್ತತೆಯಿಂದ, ಠಕ್ಕತನದಿಂದ ಕಾರ್ಯನಿರ್ವಹಿಸಿದನು, ಇದರಿಂದ ಹಲವಾರು ಸಂಖ್ಯೆಯಲ್ಲಿ ಜನರು ಜೀವ ತೆತ್ತರು. ರಾಜಕುಮಾರ ಅಬ್ದುಲ್ಲಾ ಅತ್ಯಂತ ಕಷ್ಟದಿಂದ ಪಾರಾಗಿ ಬಿಜಾಪುರ ತೊರೆದು ಕೋಹ ಬಂದರ (ಗೋವಾ ಬಂದರು) ತಲುಪಿದನು. ಅಲ್ಲಿ ಆತನು ಪೋರ್ಚುಗೀಜರ ನೆರವಿನಿಂದ ತನ್ನ ಪ್ರಾಣ ಉಳಿಸಿಕೊಂಡನು. ಪೋರ್ಚುಗೀಜರು ಬಹಳ ಚಾಲಾಕಿತನದಿಂದ ರಾಜಕುಮಾರ ಅಬ್ದುಲ್ಲಾನ ರಕ್ಷಣೆ ಮಾಡಿದರು.

ಇಬ್ರಾಹಿಮ ಆದಿಲಶಾಹನಿಗೆ ಅಸದ್‌ಖಾನನ ಬಗ್ಗೆ ಸಂಶಯ :

ಅದೇ ದಿನಗಳಲ್ಲಿ ಇಬ್ರಾಹಿಮ ಆದಿಲಶಾಹನು ಯಾವುದೇ ವಿಶೇಷ ಕಾರಣವಿಲ್ಲದೆ ಅಸದ್‌ಖಾನ ಲಾರಿಯ ಬಗ್ಗೆ ಪುನಃ ಸಂಶಯ ತಾಳಿದನು. ತನ್ನ ಎಲ್ಲ ಅಪಜಯಗಳಿಗೆ ಮೂಲ ಕಾರಣ ಅಸದ್‌ಖಾನನೆಂದು ತಿಳಿದು, ಅಸದ್‌ಖಾನನೊಡನೆ ಪತ್ರವ್ಯವಹಾರವನ್ನು ನಿಲ್ಲಿಸಿಬಿಟ್ಟನು. ಆಯಾ ಋತುವಿನಲ್ಲಿ ದೊರೆವ ಫಲಗಳನ್ನು ಉಡುಗೊರೆಯಾಗಿ ಕಳುಹಿಸುತ್ತಿದ್ದುದನ್ನು ನಿಲ್ಲಿಸಿಬಿಟ್ಟನು. ಅಸದ್‌ಖಾನ ಲಾರಿಯು ಬೆಳಗಾವಿಯಿಂದಲೇ ತನ್ನ ನಿಷ್ಠೆ ಮತ್ತು ಕೃತಜ್ಞತೆಯನ್ನು ಬಾದಶಹನಿಗೆ ಜಾಹೀರು ಪಡಿಸಿ, ತನ್ನ ಒಡೆಯನನ್ನು ಸಂತುಷ್ಟಗೊಳಿಸಲು ಪ್ರಯತ್ನಿಸಿದನು.

ಅಸದ್‌ಖಾನ ಲಾರಿಯ ಪತ್ರ:

ಅಸದ್‌ಖಾನನು ಬಾದಶಹನಿಗೆ ವಿವರವಾದ ಒಂದು ಪತ್ರ ಬರೆದು, ಪತ್ರದೊಡನೆ ವಿವಿಧ ರೀತಿಯ ಅತ್ಯುತ್ತಮವಾದ, ಬೆಲೆಬಾಳುವ ಕಾಣಿಕೆ ಮತ್ತು ಒಂಭತ್ತು ಆನೆ, ಒಂಭತ್ತು ಕುದುರೆಗಳನ್ನು ಕಳುಹಿಸಿಕೊಟ್ಟನು. ಅಸದ್‌ಖಾನನು ಈ ಪತ್ರವನ್ನು ಸ್ವಹಸ್ತದಿಂದ ಬರೆದಿದ್ದನು, ಪತ್ರದಲ್ಲಿ 'ಕೆಲವು ದ್ರೋಹಿ, ಮೋಸ ಮತ್ತು ವಂಚನೆ ಮಾಡುವ ಸ್ವಾರ್ಥ ಜನರು ನನ್ನ ಹುಜೂರಿಗೆ ಸಂಶಯ ಬರುವಂತೆ ಮಾಡಿದ್ದಾರೆ, ಈ ಬಗ್ಗೆ ನಾನು ವಿನಂತಿಸುವುದೇನೆಂದರೆ, ಒಂದು ವೇಳೆ ಅವರ ಅಪರಾಧಗಳನ್ನು ಲೆಕ್ಕ ಮಾಡುತ್ತ ಹೋದರೆ, ಅದು ಎಷ್ಟೋ ಪಟ್ಟು ಅಧಿಕವಾಗುತ್ತದೆ. ಆದರೆ, ಅವರು ನನ್ನ ಬಗ್ಗೆ ತಲೆಬುಡವಿಲ್ಲದ ಆಪಾದನೆ ಮಾಡಿರುತ್ತಾರೆ, ಅವುಗಳಿಗೂ ನನಗೂ ಯಾವ ಸಂಬಂಧವಿಲ್ಲ. ಬಾದಶಹರ ಘನತೆಯು ಇಂತಹ ಭಾಷೆಯನ್ನು ಪ್ರಯೋಗಿಸುವುದಿಲ್ಲ. ಬೆಳಗಾವಿಯಲ್ಲಿ ಕೆಲಸಮಯ ವಾಸ್ತವ್ಯ ಹೂಡಿರುವದು ಹಾಗೂ ಹುಜೂರರ ರಾಜ್ಯದಲ್ಲಿ ಕಾಲಿಡದೆ ಇರುವುದಕ್ಕೆ ಕಾರಣವೇನೆಂದರೆ ಶತ್ರುಗಳಿಂದ, ವಂಚಕರಿಂದ ಮತ್ತು ಸ್ವಾರ್ಥಿಗಳ ದಾಳಿಯಿಂದ ನನ್ನನ್ನು ರಕ್ಷಿಸಿಕೊಳ್ಳುವುದಾಗಿದೆ. ಇದು ಆ ಧೂರ್ತರಿಗೆ ಸರಿ ಕಂಡಿಲ್ಲ, ಅವರು ಇದಕ್ಕೆ ವಿಧವಿಧವಾದ ತಾತ್ಪರ್ಯದ ಉಡುಪು ತೊಡಿಸಿ, ನನ್ನ ಮುಂಜಾಗರೂಕತೆಯ ಸ್ವಭಾವಕ್ಕೆ ಕೃತಘ್ನತೆಯ ರೂಪ ನೀಡಿದ್ದಾರೆ. ಹುಜೂರರು ಅನುಮತಿಸಿದಲ್ಲಿ ಈಗಲೇ ತಮ್ಮ ಪಾದಗಳಿಗೆ ವಂದಿಸುವುದಕ್ಕಾಗಿ ತಮ್ಮ ಸನ್ನಿಧಿಯಲ್ಲಿ ಹಾಜರಾಗುತ್ತೇನೆ. ಸ್ವಾರ್ಥಸಾಧಕರು ಲಜ್ಜೆಯಿಂದ ತಲೆಬಾಗುವಂತೆ ಮಾಡುತ್ತೇನೆ.' ಎಂದು ಬರೆದಿದ್ದನು.

ಇಬ್ರಾಹಿಮ ಆದಿಲಶಾಹನ ಇರಾದೆ :

ಪತ್ರವನ್ನು ಓದಿದ ಬಾದಶಹನು ಅಸದ್‌ಖಾನನನ್ನು ಯಥಾಸ್ಥಿತಿಯಲ್ಲಿಯೇ ಇಡಬೇಕೆಂದು ಇಚ್ಛಿಸಿ, ಆತನ ಬಗ್ಗೆ ಇರುವ ಸಂಶಯವನ್ನು ಕೊನೆಗಾಣಿಸಬೇಕೆಂದು ಬಯಸಿದ್ದನು. ಅಸದ್‌ಖಾನ ಲಾರಿಯ ಶುಭಚಿಂತಕರು ಮತ್ತು ಸಂಗಡಿಗರನ್ನು

ಬೆಳಗಾವಿಗೆ ತಲುಪಿಸಬೇಕೆಂದು ಕೊಂಡಿದ್ದನು. ಆದರೆ ರಾಜಕುಮಾರ ಅಬ್ದುಲ್ಲಾನ ವಿದ್ರೋಹ ಮಾಡುತ್ತಿರುವ ಸಂಗತಿ ಅದೇ ಸಮಯಕ್ಕೆ ತಿಳಿದು, ಇಬ್ರಾಹಿಮ ಆದಿಲಶಾಹನು ತನ್ನ ಸಂಕಲ್ಪವನ್ನು ಕಾರ್ಯರೂಪಕ್ಕೆ ತರಲು ಸಾಧ್ಯವಾಗಲಿಲ್ಲ.

ರಾಜಕುಮಾರ ಅಬ್ದುಲ್ಲಾನ ವೃತ್ತಾಂತ :

ತನ್ನ ಸೋದರಸಂಬಂಧಿಯ ಹಿಂಸೆ, ದಬ್ಬಾಳಿಕೆ ಮತ್ತು ಕ್ರೋಧದಿಂದ ಭಯಭೀತನಾದ ರಾಜಕುಮಾರ ಅಬ್ದುಲ್ಲಾ ಕೋಹ ಬಂದರ(ಗೋವಾ ಬಂದರ)ನ್ನು ತಲುಪಿದನು. ಅಲ್ಲಿ ಆತನನ್ನು ಬೆಂಬಲಿಸಲು ಪೋರ್ಚುಗೀಜರು ಆತನಿಗೆ ಅದ್ದೂರಿಯಾದ ಸ್ವಾಗತ ಮಾಡಿದರು, ವಾಸ್ತವ್ಯಕ್ಕಾಗಿ ಉತ್ತಮ ವ್ಯವಸ್ಥೆ ಮಾಡಿದರು. ಬಿಜಾಪುರದಲ್ಲಿರುವ ಹಿತೈಷಿಗಳ ಸೂಚನೆಯಂತೆ ರಾಜಕುಮಾರ ಖುಲಿ ಖುತುಬಶಾಹ ಮತ್ತು ಬುರ್ಹಾನ ನಿಜಾಮಶಾಹರೊಡನೆ ಬಾಂಧವ್ಯವನ್ನು ಭದ್ರಗೊಳಿಸಿ, ಸೋದರನ ಮೇಲೆ ಸೇಡು ತೀರಿಸಿಕೊಳ್ಳಲು ಸಹಾಯ ಕೇಳಿದನು. ಇವರಿಬ್ಬರೂ ಅರಸರು ಮೊದಲಿನಿಂದಲೂ ಅಸದ್‌ಖಾನ ಲಾರಿ ಮತ್ತು ಇಬ್ರಾಹಿಮ ಆದಿಲಶಾಹರ ನೆರಳನ್ನು ಸಹ ದ್ವೇಷಿಸುತ್ತಿದ್ದರು. ಆದುದರಿಂದ, ಇಬ್ಬರೂ ಅರಸರು ಇಬ್ರಾಹಿಮ ಆದಿಲಶಾಹನನ್ನು ಸಿಂಹಾಸನದಿಂದ ಕೆಳಗಿಳಿಸಲು ಮತ್ತು ರಾಜಕುಮಾರ ಅಬ್ದುಲ್ಲಾನನ್ನು ಸಿಂಹಾಸನದ ಉತ್ತರಾಧಿಕಾರಿಯನ್ನಾಗಿ ಮಾಡಲು ಒಪ್ಪಿಕೊಂಡರು, ಹಾಗೂ ತಮ್ಮ ರಾಜ್ಯಗಳಿಂದ ಹೊರಟು ಇಬ್ಬರೂ ಬಿಜಾಪುರದತ್ತ ಪ್ರಯಾಣ ಆರಂಭಿಸಿದರು. ಇಬ್ರಾಹಿಮ ಆದಿಲಶಾಹಿಯ ಉತ್ತರಾಧಿಕಾರಿಯನ್ನಾಗಿ ಮಾಡಲು ಈ ಅರಸರು ರಾಜಕುಮಾರ ಅಬ್ದುಲ್ಲಾನನ್ನು ಕೂಡಲೇ ಕಳುಹಿಸಿಕೊಡಲು ಪೋರ್ಚುಗೀಜರ ಬಳಿ ಒಬ್ಬ ದೂತನನ್ನು ಕಳುಹಿಸಿಕೊಟ್ಟರು. ಪೋರ್ಚುಗೀಜರು ಅವರ ಆಜ್ಞೆಯನ್ನು ಪಾಲನೆ ಮಾಡಿದರು.

ಅಸದ್‌ಖಾನನಿಗೆ ಅರಿಕೆ :

ಕುಲಿ ಕುತುಬಶಾಹ ಮತ್ತು ಬುರ್ಹಾನ ನಿಜಾಮಶಾಹ ಇಬ್ಬರೂ ಪರಸ್ಪರ ಒಪ್ಪಿಗೆಯಿಂದ ಒಬ್ಬ ದೂತನನ್ನು ಅಸದ್‌ಖಾನ ಲಾರಿಯ ಬಳಿ ತಮ್ಮ ಉದ್ದೇಶವನ್ನು ತಿಳಿಸಲು ಕಳುಹಿಸಿಕೊಟ್ಟರು. ಇದಲ್ಲದೆ, ಇಬ್ರಾಹಿಮ ಆದಿಲಶಾಹನ ಹದ್ದು ಮೀರಿದ ವರ್ತನೆಯಿಂದ ಅಸದ್‌ಖಾನನಿಗೆ ಸಹ ಅಸಮಾಧಾನವಾಗಿರುವದರಿಂದ ಇಬ್ರಾಹಿಮ ಆದಿಲಶಾಹನ ಪದಚ್ಯುತಿ ಮತ್ತು ರಾಜಕುಮಾರ ಅಬ್ದುಲ್ಲಾನಿಗೆ ಪಟ್ಟಾಭಿಷೇಕ ಮಾಡುವ ಬಗ್ಗೆ ಆಲೋಚಿಸಬೇಕು, ಇದರಿಂದ ಅಸದ್‌ಖಾನ ಲಾರಿಯನ್ನು ಬಾದಶಹನ ಸಲಹೆಗಾರ ಎಂದು ನಿಯುಕ್ತಿಗೊಳಿಸಲಾಗುವುದು, ಎಂದು ದೂತನ ಮೂಲಕ ಹೇಳಿ ಕಳುಹಿಸಿದರು.

ಅಸದ್‌ಖಾನ ಲಾರಿಯ ಸ್ವಾಮಿನಿಷ್ಠೆ ಮತ್ತು ಬುರ್ಹಾನ ಮತ್ತಿತರರ ಆಶಾಭಂಗ :

ದೂತನು ಅಸದ್‌ಖಾನ ಲಾರಿಯ ಬಳಿ ಎಲ್ಲ ವಿದ್ಯಮಾನಗಳನ್ನು ವಿವರಿಸಿ ಹೇಳಿದಾಗ, ಆತನ ಮೇಲೆ ವಿಪರೀತ ಕೋಪ ಬಂದಿತು. ಆದರೇನು ಮಾಡುವುದು,

ದೂತನನ್ನು ವಧಿಸುವುದು. ನಿಯಮಬಾಹಿರವಾದುದರಿಂದ ಸುಮ್ಮನಾದನು. ಅಸದ್‌ಖಾನನ ನೆರವು ದೊರೆಯುವುದು ಅಸಾಧ್ಯವೆಂದು ಬುರ್ಹಾನ ನಿಜಾಮಶಾಹನಿಗೆ ತಿಳಿದುಹೋಯಿತು. ಇದೇ ಸಮಯಕ್ಕೆ ಅಸದ್‌ಖಾನನ ಆರೋಗ್ಯವು ಗಂಭೀರವಾಗಿರುವ ವಿಷಯ ಗೊತ್ತಾಯಿತು. ಬುರ್ಹಾನ ನಿಜಾಮಶಾಹನು ಒಬ್ಬ ಹಿಂದು ಬ್ರಾಹ್ಮಣ ತೇಜನಿಗೆ ರೂಪಾಯಿಗಳನ್ನು ಕೊಟ್ಟು ಬೆಳಗಾವಿಗೆ ಕಳುಹಿಸಿದನು. ಅಸದ್‌ಖಾನ ಲಾರಿಯು ಸತ್ತ ನಂತರ ಕಿಲ್ಲೆಯನ್ನು ವಶಪಡಿಸಿಕೊಳ್ಳಲು ಬುರ್ಹಾನ ನಿಜಾಮಶಾಹನಿಗೆ ಸಹಾಯ ಮಾಡಲು ಕಿಲ್ಲೆದಾರನಿಗೆ ಹಣಕೊಡಲು ಹೇಳಿದ್ದನು. ಅನಾರೋಗ್ಯದ ಗಂಭೀರ ಸ್ಥಿತಿಯಲ್ಲಿರುವಾಗ ಈ ವಿಷಯ ಗೊತ್ತಾಗಿ ಅಸದ್‌ಖಾನನು ತನ್ನ ಆರೋಗ್ಯವನ್ನೂ ಲೆಕ್ಕಿಸದೆ, ಆ ಬ್ರಾಹ್ಮಣನೊಡನೆ ಇನ್ನೂ ಎಪ್ಪತ್ತು ಜನ ವಿದ್ರೋಹಿಗಳನ್ನು ಕೊಲ್ಲಿಸಿಬಿಟ್ಟನು.

ಬಾದಶಹನಿಗೆ ಅಸದ್‌ಖಾನನಿಂದ ಪತ್ರ:

ಅಸದ್‌ಖಾನ ಲಾರಿಯ ಸ್ವಾಮಿನಿಷ್ಠೆಯ ಸಾಕ್ಷ್ಯ ನೀಡುವ ಈ ಸಂಗತಿಯು ಪ್ರತಿಯೊಬ್ಬರ ಕಿವಿಯ ಮೇಲೆ ಬಿದ್ದಿತು. ಇದರಿಂದ ರಾಜಕುಮಾರ ಅಬ್ದುಲ್ಲಾನ ರಕ್ಷಣೆ ಮಾಡುವ ವಿಚಾರವನ್ನು ಕೆಲವರು ಮನದಿಂದ ತೆಗೆದು ಹಾಕಿದರು. ಅಸದ್‌ಖಾನ ಲಾರಿಯು ಹದಗೆಡುತ್ತಿರುವ ಆರೋಗ್ಯ ಮತ್ತು ಅದರ ಚಿಕಿತ್ಸೆಯಿಂದ ಹತಾಶನಾದಾಗ, ದೂತನ ಮೂಲಕ ಇಬ್ರಾಹಿಮ ಆದಿಲಶಾಹನಿಗೆ ಬರಲು ಕೋರಿದನು.

ಅಸದ್‌ಖಾನ ಲಾರಿಯ ಮೃತ್ಯು :

ಇಬ್ರಾಹಿಮ ಆದಿಲಶಾಹನು ಅಸದ್‌ಖಾನ ಲಾರಿಯ ಕೋರಿಕೆಯನ್ನು ಮನ್ನಿಸಿ, ಹಿಜರಿ ಶಕೆ ೯೫೬ರಲ್ಲಿ ಅಸದ್‌ಖಾನ ಇರುವಲ್ಲಿಗೆ ತಲುಪುವಷ್ಟರಲ್ಲಿ ಅಸದ್‌ಖಾನ ಲಾರಿಯು ಮೃತ್ಯುವಿನ ವಶವಾಗಿದ್ದನು. ಆದರೂ ಬಾದಶಹನು ಬೆಳಗಾವಿಗೆ ಹೋಗಿ ಆತನ ಪರಿವಾರದವರಿಗೆ ಮತ್ತು ಸಂಗಡಿಗರಿಗೆ ಸಾಂತ್ವನ ಹೇಳಿ ಬಹಳಷ್ಟು ಕಾಣಿಕೆಗಳನ್ನು ನೀಡಿದನು. ಆತನ ಎಲ್ಲ ಸಂಪತ್ತನ್ನು ತನ್ನ ವಶಕ್ಕೆ ತೆಗೆದುಕೊಂಡನು. ರಾಜಕುಮಾರ ಅಬ್ದುಲ್ಲಾನ ಹಿತೈಷಿಗಳು ಸೋಲು ಮತ್ತು ಗೊಂದಲದ ಮನೋಭಾವದಿಂದ ಇರುವುದನ್ನು ಅರಿತ ಪೋರ್ಚುಗೀಜರು ಆತನನ್ನು ಮತ್ತೆ ಗೋವಾ ಬಂದರಗೆ ಕಳುಹಿಸಿದರು. ಖುತುಬಶಾಹ, ನಿಜಾಮಶಾಹ ಮತ್ತು ಆತನ ಸಂಗಡಿಗರು ತಮ್ಮ ತಮ್ಮ ಸ್ಥಾನಗಳಿಗೆ ತೆರಳಿದರು.

ಅಸದ್‌ಖಾನ ಲಾರಿಯ ಸದ್ಗುಣಗಳು :

ಅಸದ್‌ಖಾನನು ಅತ್ಯಂತ ನ್ಯಾಯನಿಷ್ಠುರ, ಅನುಭವಿ ಹಾಗೂ ಪರ್ವತದಂತೆ ಬಲಶಾಲಿ ವ್ಯಕ್ತಿಯಾಗಿದ್ದನು. ಆತನಿಗೆ ಅರಸೊತ್ತಿಗೆಯ ಕಾರ್ಯಭಾರಗಳಲ್ಲಿ ಮತ್ತು ಆಡಳಿತ ನಿರ್ವಹಣೆಯಲ್ಲಿ ಬಹಳ ಹಿಡಿತವಿತ್ತು. ಈ ಕ್ಷೇತ್ರದಲ್ಲಿ ಕೇವಲ ಆತನೊಬ್ಬನೇ ಪಹಿಲ್ವಾನನಾಗಿದ್ದನು. ಇತರ ಪ್ರದೇಶಗಳ ಅರಸರಲ್ಲದೆ, ವಿಜಯನಗರದ ರಾಜನು

ಸಹ ಅಸದ್‌ಖಾನನೊಂದಿಗೆ ಮನ್ನಣೆಯ ಸಂಪ್ರದಾಯಗಳನ್ನು ಪಾಲಿಸುತ್ತಿದ್ದರು. ಅಭಿವಂದನೆಗಳೊಡನೆ ಪತ್ರವ್ಯವಹಾರ ಮತ್ತು ಕಪ್ಪ ಕಾಣಿಕೆಗಳನ್ನು ನಿರಂತರವಾಗಿ ನೀಡುತ್ತಿದ್ದರು. ಆತನ ಗೌರವ–ಮರ್ಯಾದೆ, ಪ್ರಖ್ಯಾತಿ, ಸ್ವತ್ತು, ನಗದು ಹಣ ಮತ್ತು ಬೆಲೆಬಾಳುವ ಸಾಮಗ್ರಿಗಳ ಸಂಗ್ರಹವು ಎಣಿಕೆಗೆ ಬಾರದಷ್ಟಾಗಿತ್ತು. ಅಸದ್‌ಖಾನನ ದಿನಂಪ್ರತಿ ಊಟದ ವೆಚ್ಚವು ನೂರು ಕೋಳಿ, ಐವತ್ತು ಕುರಿ ಮತ್ತು ನೂರು ಮಣ ಅಕ್ಕಿಯಾಗಿತ್ತು. ದಕ್ಷಿಣದಲ್ಲಿ ಆತನು ಬಳಸುತ್ತಿದ್ದ ವಸ್ತುಗಳು ಉದಾಹರಣೆಗೆ ಪೋಷಾಕು ಮತ್ತು ಯುದ್ಧಕ್ಕೆ ಹೋಗುವಾಗ ಧರಿಸುವ ಕತ್ತಿ ಮತ್ತಿತರ ಸಾಮಗ್ರಿಗಳನ್ನು ಇಂದಿಗೂ ಸಂಗ್ರಹಾಲಯದಲ್ಲಿ ಕಾಣಬಹುದು. ಅಸದ್‌ಖಾನನಂತೆ ಆನೆಯ ಮೇಲೆ ಸವಾರಿ ಮಾಡಲು ಯಾರಿಗೂ ಬರುತ್ತಿರಲಿಲ್ಲ. ಬಾಯಲ್ಲಿ ಲಗಾಮು ಹಿಡಿದು ಕುದುರೆಯ ಮೇಲೆ ಸವಾರಿ ಮಾಡುವಂತೆ ಆನೆಯನ್ನು ಯಾರೂ ನಿಗ್ರಹ ಮಾಡುತ್ತಿರಲಿಲ್ಲ. ಆತನು ಅಂಕುಶವನ್ನು ಉಪಯೋಗಿಸದೇ ಆನೆಯನ್ನು ಹತೋಟಿಗೆ ತರುತ್ತಿದ್ದನು. ಆದರೆ ಅಸದ್‌ಖಾನನ ಈ ಶೂರತೆಯು ಹೆಚ್ಚು ಪ್ರಚಲಿತವಾಗಲಿಲ್ಲ. ಆತನು ಹೆಚ್ಚು ಕಾಲ ಜೀವಿಸಲಿಲ್ಲ.

ಬುರ್ಹಾನ ನಿಜಾಮಶಾಹ ಮತ್ತು ರಾಮರಾಜರಲ್ಲಿ ಗೆಳೆತನ :

ಇತಿಹಾಸಕಾರರ ಅಭಿಪ್ರಾಯವೇನೆಂದರೆ, ಸಮಾನ ಅಂತಸ್ತಿನವರಲ್ಲಿ ಸ್ನೇಹ ಬೆಳೆಸುವದಕ್ಕಾಗಿ ಇಬ್ರಾಹಿಮ ಆದಿಲಶಾಹನು ತನ್ನ ಮಗಳ ವಿವಾಹವನ್ನು ಅಲಿ ಬರೀದನೊಂದಿಗೆ ಮಾಡಿದ್ದನು. ಇತ್ತ, ಮಾತಿನಲ್ಲಿ ಚತುರರಾದ ವಾಕ್ಪಟುಗಳು ಬುರ್ಹಾನ ನಿಜಾಮಶಾಹ ಮತ್ತು ರಾಮರಾಜರಲ್ಲಿ ಸ್ನೇಹಬಾಂಧವ್ಯವನ್ನು ಹುಟ್ಟು ಹಾಕಿದರು. ಉಡುಗೊರೆ, ಬಳುವಳಿ ಇತ್ಯಾದಿಗಳನ್ನು ಪರಸ್ಪರರಿಗೆ ಕೊಡುತ್ತ ಪ್ರೇಮ ಮತ್ತು ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತಿದ್ದರು.

ರಾಮರಾಜನ ವಂಚಕತೆ :

ಬುರ್ಹಾನ ನಿಜಾಮಶಾಹ ಮತ್ತು ರಾಮರಾಜರಲ್ಲಿ ಗೆಳೆತನವಾದ ಸಂಗತಿಯು ಇಬ್ರಾಹಿಮ ಆದಿಲಶಾಹನಿಗೆ ತಿಳಿಯುತ್ತಲೇ ಆತನು ಬಿಜಾಪುರದಲ್ಲಿರುವ ನಿಜಾಮಶಾಹಿ ದೂತರನ್ನು ವಿಚಾರಣೆಗೆ ಒಳಪಡಿಸಿದನು. ಅವರು ಭಯಪಟ್ಟು ವಿಜಯನಗರದತ್ತ ಹೊರಟು ಹೋದರು. 'ಇಬ್ರಾಹಿಮ ಆದಿಲಶಾಹನು ನಮ್ಮನ್ನು ಹತಗೊಳಿಸ ಬೇಕೆನ್ನುತ್ತಿದ್ದಾನೆ. ಅವರಿಂದ ತಪ್ಪಿಸಿಕೊಂಡು ಬಹಳ ಕಷ್ಟಪಟ್ಟು ವಿಜಯನಗರ ತಲುಪಿದ್ದೇವೆ. ವಿಜಯನಗರದ ಮುಸಲ್ಮಾನೇತರರನ್ನು ಸಂಘಟಿಸುತ್ತಿದ್ದೇವೆ,' ಎಂದು ರಾಮರಾಜನಿಗೆ ದೂರು ನೀಡಿದರು. ರಾಮರಾಜನು ಸಂವೇದನಾಶೀಲ ವ್ಯಕ್ತಿಯಾಗಿದ್ದನು, ಈ ಮಾತು ಕೇಳಿ ಕ್ರೋಧಿತನಾದನು. ಕೂಡಲೇ ಬುರ್ಹಾನ ನಿಜಾಮಶಾಹನಿಗೆ, 'ಅಲಿ ಬರೀದನು ತನ್ನ ತಂದೆಯ ಇಚ್ಛೆಯ ವಿರುದ್ಧ ನಡೆದು

ಇಬ್ರಾಹಿಮ ಆದಿಲಶಾಹನೊಂದಿಗೆ ಸ್ನೇಹ ನೆಂಟಸ್ತಿಕೆಯನ್ನು ಬೆಳೆಸಿದ್ದಾನೆ, ಆತನ ವಿಚಾರಣೆ ಮಾಡುವುದಕ್ಕೆ ಸಿದ್ಧರಾಗಿರಬೇಕು ಹಾಗೂ ಕಲ್ಯಾಣ ಕಿಲ್ಲೆಯನ್ನು ವಶಪಡಿಸಿಕೊಳ್ಳಬೇಕು' ಎಂಬ ಸಂದೇಶವನ್ನು ಕಳುಹಿಸಿಕೊಟ್ಟನು. ಈ ಉದ್ದೇಶವನ್ನು ಪೂರ್ಣಗೊಳಿಸುವುದಕ್ಕಾಗಿ, ಬುರ್ಹಾನ ನಿಜಾಮಶಾಹನು ಒಂದು ಪ್ರಬಲ ಸೈನ್ಯದೊಡನೆ ಕಲ್ಯಾಣ ಕಿಲ್ಲೆಗೆ ಮುತ್ತಿಗೆ ಹಾಕಿದನು.

ಇಬ್ರಾಹಿಮ ಆದಿಲಶಾಹನ ದಾಳಿ :

ಇಬ್ರಾಹಿಮ ಆದಿಲಶಾಹನು ಕೋಟೆಯ ರಕ್ಷಣೆಗಾಗಿ ಬಿಜಾಪುರದಿಂದ ಹೊರಟು, ನಿಜಾಮಶಾಹಿ ಸೈನ್ಯದಿಂದ ಎರಡು ಹರದಾರಿ ದೂರದಲ್ಲಿ ಬಿಡಾರ ಹಾಕಿದನು. ಬುರ್ಹಾನ ನಿಜಾಮಶಾಹನು ಇನ್ನೂ ಯುದ್ಧ ಆರಂಭಿಸಿರಲಿಲ್ಲ. ಇಬ್ರಾಹಿಮ ಆದಿಲಶಾಹನು ತಮ್ಮ ಬಿಡಾರದ ನಾಲ್ಕೂ ಬದಿಗೆ ಗೋಡೆಯನ್ನು ಕಟ್ಟಿಸಿ, ನಿಜಾಮಶಾಹಿಗಳನ್ನು ಎದುರಿಸಿ ಯುದ್ಧ ಮಾಡುವ ತರಬೇತಿಯನ್ನು ತುರ್ಕಿ ಸೇನಾನಿಗಳಿಗೆ ಕೊಟ್ಟನು. ತುರ್ಕಿ ಸೇನಾನಿಗಳು ತಮ್ಮ ಪರಾಕ್ರಮ ಮತ್ತು ಪೌರುಷದಿಂದ ವಿಶ್ವದಲ್ಲಿಯೇ ಪ್ರಸಿದ್ಧಿ ಪಡೆದಿದ್ದರು. ನಿಜಾಮಶಾಹಿ ಸೈನಿಕರು ರೋಗಪೀಡಿತರಾಗಿ, ಕ್ಷಾಮದಿಂದ ನರಳತೊಡಗಿದರು. ಸೈನಿಕರು ವ್ಯಾಕುಲರಾಗಿ ಅಹಮದ್‌ನಗರದತ್ತ ತೆರಳುವ ನಿರ್ಧಾರಕ್ಕೆ ಬಂದರು.

ಇಬ್ರಾಹಿಮ ಆದಿಲಶಾಹನ ಪರಾಭವ :

ಈದುಲ್ ಫಿತರ್‌ದ ದಿನ ಇಬ್ರಾಹಿಮ ಆದಿಲಶಾಹನ ಸಂಗಡಿಗರು ಹಬ್ಬದ ವ್ಯಾಪಾರದಲ್ಲಿ ವ್ಯಸ್ತರಾಗಿರುವ ಸಮಾಚಾರವು ನಿಜಾಮಶಾಹಿ ಅರಸನ ಗಮನಕ್ಕೆ ಬಂದಿತು. ಎದುರಾಳಿಗಳ ಪಡೆಯು ವ್ಯಾಪಾರದಲ್ಲಿ ವ್ಯಸ್ತರಾಗಿರುವುದರಿಂದ ಅವರ ವಿರೋಧದ ಬಗ್ಗೆ ಸಂಪೂರ್ಣ ನಿರಾತಂಕವಿತ್ತು. ಸೈಫ ಐನುಲ್‌ಮುಲ್ಕ ಮತ್ತಿತರರು ಅವರ ಮೇಲೆ ಆಕ್ರಮಣ ಮಾಡಿ ಧ್ವಂಸ ಮಾಡುವಲ್ಲಿ ನಿರತರಾದರು. ಶತ್ರುಗಳ ದಾಳಿಯಿಂದ ಕಂಗೆಟ್ಟ ಆದಿಲಶಾಹಿ ಸೈನಿಕರು ಸೋಲಿನ ಭಯದಿಂದ ರಣರಂಗ ಬಿಟ್ಟು ಪಲಾಯನ ಮಾಡಿದರು. ಬಾದಶಹನು ಹಬ್ಬದ ರಿವಾಜಿನಂತೆ ಸ್ನಾನ ಮಾಡುತ್ತಲಿದ್ದನು. ವೈರಿಗಳ ದಾಳಿಯಿಂದ ಬಟ್ಟೆ ಧರಿಸಿಕೊಳ್ಳುವುದಕ್ಕೆ ಮೊದಲೆ ತೆರೆಯಿಂದ ಹೊರಬಂದನು. ಅಂದು ಬುರ್ಹಾನ ನಿಜಾಮಶಾಹನ ಸೈನಿಕರು ವ್ಯವಸ್ಥಿತರಾಗಿ ಕಲ್ಯಾಣದ ಕೋಟೆಯತ್ತ ಮುಂದುವರೆದರು. ಕೋಟೆಯಲ್ಲಿರುವವರು ಶರಣಾಗತರಾಗದಿದ್ದಲ್ಲಿ ಎಲ್ಲರನ್ನೂ ಹತಗೊಳಿಸುವ ಧೃಡ ನಿರ್ಧಾರ ಮಾಡಿದ್ದರು. ಕಿಲ್ಲೆಯಲ್ಲಿರುವವರು ಇಬ್ರಾಹಿಮ ಆದಿಲಶಾಹನ ಸೋಲಿನಿಂದ ಕಂಗೆಟ್ಟು ಹೋಗಿದ್ದರು, ಅವರು ಕಿಲ್ಲೆಯನ್ನು ನಿಜಾಮಶಾಹನ ವಶಕ್ಕೆ ಒಪ್ಪಿಸಿಬಿಟ್ಟರು. ಈ ವಿಧವಾಗಿ ಬುರ್ಹಾನ ಶಾಹನ ಹಬ್ಬದ ಸಂತೋಷವು ಮೂರು ಪಟ್ಟು ಅಧಿಕವಾಯಿತು.

ಪರಿಂದಾ ಕಿಲ್ಲೆಯನ್ನು ವಶಪಡಿಸಿಕೊಳ್ಳುವುದು :

ಇಬ್ರಾಹಿಮ ಆದಿಲಶಾಹನು ಆನೆಗಳನ್ನು ಮತ್ತು ತೋಪುಖಾನೆಗಳನ್ನು ಶತ್ರುಗಳಿಗೆ ಬಿಟ್ಟುಕೊಟ್ಟು ಅವರ ರಾಜ್ಯದತ್ತ ಪ್ರಯಾಣ ಬೆಳೆಸಿದನು. ಅಲ್ಲಿ ತಲುಪಿ ಜನರಿಂದ ನಾಲ್ಕು ಲಕ್ಷ ಹೋನುಗಳನ್ನು ವಸೂಲಿ ಮಾಡಿದನು, ರಾಜ್ಯವನ್ನು ಲೂಟಿ ಮಾಡಿದನು. ಮುಂದೆ ಪರಿಂದಾ ಕಿಲ್ಲೆಗೆ ಹೊರಟನು, ಅಲ್ಲಿ ಕೋಟೆಯ ದ್ವಾರವು ತೆರೆದಿರುವದನ್ನು ಕಂಡು ಕಿಲ್ಲೆಯ ಒಳಹೊಕ್ಕು. ಖ್ವಾಜಾ ಜಹಾನ ದಖನಿಯ ಹಿತಚಿಂತಕರನ್ನು ಹೊಡೆದೋಡಿಸಿದರು. ಕಿಲ್ಲೆಯನ್ನು ತಮ್ಮ ವಶಕ್ಕೆ ತೆಗೆದುಕೊಂಡು, ಪರಾಕ್ರಮಶಾಲಿಯೆಂದು ಪ್ರಖ್ಯಾತನಾದ ದಕ್ಷಿಣದ ಬಹಾದ್ದೂರ ಯುವಕನೊಬ್ಬನಿಗೆ ಕೋಟೆಯ ರಕ್ಷಣೆಯ ಕೆಲಸವನ್ನು ವಹಿಸಿ ಇಬ್ರಾಹಿಮ ಆದಿಲಶಾಹನು ಬಿಜಾಪುರ ತಲುಪಿದನು.

ದಕ್ಷಿಣದ ನಿವಾಸಿಯ ಪಲಾಯನ :

ಅಲ್ಲಿ ನಡೆದ ವರ್ತಮಾನವು ಖ್ವಾಜಾ ಜಹಾನ ದಖನಿ ಮತ್ತು ಬುರ್ಹಾನ ನಿಜಾಮಶಾಹರಿಗೆ ತಿಳಿದ ಮೇಲೆ ಅವರು ಪರಿಂದಾ ಕಿಲ್ಲೆಯತ್ತ ಹೊರಟರು. ಕೋಟೆಯ ದ್ವಾರದಿಂದ ಅವರು ಇಪ್ಪತ್ತು ಹರದಾರಿ ದೂರದಲ್ಲಿರುವಾಗ, ಶೂರತೆಗೆ ಖ್ಯಾತನಾದ ದಕ್ಷಿಣದ ಬಹಾದ್ದೂರ ಯುವಕನು ಪಲಾಯನ ಮಾಡಿದನು. ಆತನು ನೇರವಾಗಿ ಬಿಜಾಪುರ ತಲುಪಿ, ಅಲ್ಲಿ ನೆಮ್ಮದಿಯ ನಿಟ್ಟುಸಿರು ಬಿಟ್ಟನು.

ಶಾಹ ಜಮಾಲುದ್ದೀನ ಅಲ್‌ಜೂನ ಹೇಳಿಕೆ :

ಬುರ್ಹಾನ ನಿಜಾಮಶಾಹನ ಕಾಲದ ಚರಿತ್ರೆಕಾರ ಶಾಹ ಜಮಾಲುದ್ದೀನ ಅಲ್‌ಜೂ ಈ ಸಂಗತಿಯನ್ನು ವಿನೋದಭಾವದಿಂದ ಹೀಗೆ ವಿವರಿಸಿದ್ದಾನೆ. ದಕ್ಷಿಣದ ನಿವಾಸಿಗೆ ಖ್ವಾಜಾ ಜಹಾನ ದಖನಿ ಮತ್ತು ಬುರ್ಹಾನ ನಿಜಾಮಶಾಹರು ಬರುವ ವಿಷಯು ತಿಳಿದು ಅತ್ಯಂತ ವ್ಯಾಕುಲನಾದನು. ಆತನು ಅಲ್ಲಿಂದಪರಾರಿಯಾಗುವ ವಿಚಾರ ಮಾಡತೊಡಗಿದನು. ಆದರೆ ತನ್ನ ಗಾಬರಿ ಮತ್ತು ಚಿಂತೆಯನ್ನು ಇತರರಿಗೆ ತೋರಗೊಡಲಿಲ್ಲ. ಒಂದು ರಾತ್ರಿ ಮನೆಯಲ್ಲಿ ವಿಶ್ರಾಂತಿ ಪಡೆಯುತ್ತಿದ್ದಾಗ, ಆತನ ಕಿವಿಗಳಲ್ಲಿ ಸೊಳ್ಳೆಗಳ ಗುಯ್ಗುಡುವ ಝೇಂಕಾರವು ಕೇಳಿಸಿತು, ಆ ಶಬ್ದವು ನಿಜಾಮಶಾಹಿಗಳ ಸೈನ್ಯದ ಆಗಮನದ ಸದ್ದೆಂದು ತಿಳಿದು, ಹಿಂದೆ ನೋಡದೆ, ಬಾಗಿಲನ್ನು ಸಹ ಹಾಗೆಯೇ ತೆರೆದಿಟ್ಟು ಪಲಾಯನ ಮಾಡಿದನು.

ಬುರ್ಹಾನ ನಿಜಾಮಶಾಹ ಮತ್ತು ರಾಮರಾಜರಲ್ಲಿ ಒಪ್ಪಂದ :

ಇಬ್ರಾಹಿಮ ಆದಿಲಶಾಹನು ಆ ಪುಕ್ಕಲು ವ್ಯಕ್ತಿಯನ್ನು ವಧಿಸಿದನು. ಪುನಃ ಕೋಟೆಯನ್ನು ಅಧೀನಪಡಿಸಿಕೊಳ್ಳುವ ಉಪಾಯ ಯೋಚಿಸತೊಡಗಿದನು. ಬಾದಶಹನ

ರಹಸ್ಯವು ಬುರ್ಹಾನ ನಿಜಾಮಶಾಹನಿಗೆ ತಿಳಿದುಬಿಟ್ಟಿತು. ಆತನು ಈ ಸುದ್ದಿಯನ್ನು ರಾಮರಾಜನಿಗೆ ತಿಳಿಸಲು ತನ್ನ ಸಹಚರನಾಗಿದ್ದ ಆತ್ಮೀಯಮಿತ್ರನ ಸೇವೆಯನ್ನು ಪಡೆದುಕೊಂಡನು. ಆತನ ಮೂಲಕ ವಿಷಯವನ್ನು ತಿಳಿಸಿ, ರಾಯಚೂರಿನಲ್ಲಿ ಮುಂದಿನ ಕಾರ್ಯಸೂಚಿಯನ್ನು ನಿಗದಿಪಡಿಸುವುದೆಂದು ನಿರ್ಧಾರವಾಯಿತು. ಹಿಜರಿಶಕೆ ೯೪೯ರಲ್ಲಿ ರಾಮರಾಜನು ತನ್ನೊಡನೆ ಕಷ್ಟಸಹಿಷ್ಣುಗಳಾದ, ವೀರ ಸೈನಿಕರ ಪಡೆಯನ್ನು ಜೊತೆ ಮಾಡಿಕೊಂಡು ರಾಯಚೂರಿನತ್ತ ಹೊರಟನು. ಅತ್ತ ಬುರ್ಹಾನ ನಿಜಾಮಶಾಹನು ತನ್ನ ಹಿತಚಿಂತಕರಾದ ಸೈನಿಕರು ಮತ್ತು ಯುದ್ಧ ಸಾಮಗ್ರಿಗಳೊಡನೆ ಇಬ್ರಾಹಿಮ ಆದಿಲಶಾಹನ ಪ್ರದೇಶವನ್ನು ಕ್ರಮಿಸುತ್ತ ಬಿಜಾಪುರ ತಲುಪಿದರು. ಅಲ್ಲಿಯ ರಾಜನನ್ನು ಭೇಟಿಯಾದರು. ಮುದ್ಗಲ ಮತ್ತು ರಾಯಚೂರನ್ನು ಜಯಿಸಿ, ಮುಂದೆ ಸೋಲಾಪುರವನ್ನು ಅಧೀನಪಡಿಸಿಕೊಳ್ಳುವ ತೀರ್ಮಾನಕ್ಕೆ ಬಂದರು.

ರಾಮರಾಜ ಮತ್ತು ನಿಜಾಮಶಾಹರ ಉನ್ನತಿ :

ರಾಮರಾಜ ಮತ್ತು ನಿಜಾಮಶಾಹ ಇಬ್ಬರೂ ಸೇರಿ ರಾಯಚೂರನ್ನು ನಾಲ್ಕೂ ಕಡೆಯಿಂದ ಸುತ್ತುವರೆದು, ಬಹಳ ಸುಲಭವಾಗಿ ವಶಪಡಿಸಿಕೊಂಡರು. ಮುದ್ಗಲ ಕಿಲ್ಲೆಯ ಜನರು ಭಯಗ್ರಸ್ತರಾಗಿ ಕಿಲ್ಲೆಯ ಬೀಗದ ಕೈಯನ್ನು ರಾಮರಾಜನಿಗೆ ಕಳುಹಿಸಿಕೊಟ್ಟರು. ತರುವಾಯ ರಾಮರಾಜನು ಕೆಲವು ವಿಶ್ವಾಸಾರ್ಹ ವ್ಯಕ್ತಿಗಳ ವಶಕ್ಕೆ ಕೋಟೆಯನ್ನು ಕೊಟ್ಟನು. ತನ್ನ ಬಂಧುಗಳನ್ನು ಸೇರಿಸಿಕೊಂಡು ಸೈನಿಕರ ಸಂಖ್ಯೆಯನ್ನು ಹೆಚ್ಚಿಸಿದನು ಹಾಗೂ ಸೋಲಾಪುರ ಕೋಟೆಯನ್ನು ಗೆಲ್ಲುವ ಕಾರ್ಯದಲ್ಲಿ ಬುರ್ಹಾನ ನಿಜಾಮಶಾಹನಿಗೆ ಕೈಜೋಡಿಸಲು ಆಜ್ಞೆಮಾಡಿದನು. ಇದಲ್ಲದೆ ಕೋಟೆಯನ್ನು ಗೆದ್ದ ಮೇಲೆ ನಿಜಾಮಶಾಹನಿಗೆ ಒಪ್ಪಿಸಿ ಬರಬೇಕೆಂದು ತಾಕೀದು ಮಾಡಿ ತನ್ನ ರಾಜ್ಯದತ್ತ ಹೊರಟನು. ಬುರ್ಹಾನ ನಿಜಾಮಶಾಹನು ರಾಮರಾಜ ಮತ್ತು ಆತನ ಸೈನಿಕರ ಸಹಾಯದಿಂದ ಕೋಟೆಗೆ ಮುತ್ತಿಗೆ ಹಾಕಿದನು. ತರುವಾಯ ಬುರ್ಹಾನ ನಿಜಾಮಶಾಹನು ಭಾರವಾದ ಯುದ್ಧದ ತೋಪುಗಳನ್ನು ಉಪಯೋಗಿಸಿ, ಕೋಟೆಗೆ ಬಲವಾದ ಹೊಡೆತ ನೀಡಿದನು. ಕೋಟೆಯನ್ನು ವಶಪಡಿಸಿಕೊಂಡ ನಂತರ ಮತ್ತೆ ನಾಲ್ಕು ಗೋಡೆಗಳನ್ನು ಕಟ್ಟಿಸಿದನು, ಅಗತ್ಯವಿದ್ದ ದುರಸ್ತಿ ಮಾಡಿ, ಭರವಸೆ ಉಳ್ಳ ಸರದಾರರ ವಶಕ್ಕೆ ಕೋಟೆಯನ್ನೊಪ್ಪಿಸಿ, ತಾನು ಅಹಮದ್‌ನಗರಕ್ಕೆ ತೆರಳಿದನು.

ಬುರ್ಹಾನ ನಿಜಾಮನ ಮೃತ್ಯು, ಆದಿಲ ಮತ್ತು ನಿಜಾಮಶಾಹಿ ಮನೆತನಗಳಲ್ಲಿ ಸ್ನೇಹ

ಬುರ್ಹಾನ ನಿಜಾಮಶಾಹನ ಮರಣದ ನಂತರ, ಸರದಾರರ ಪ್ರಯತ್ನಗಳಿಂದ ನಿಜಾಮ ಮತ್ತು ಆದಿಲಶಾಹಿ ಮನೆತನಗಳಲ್ಲಿ ಸಂಧಾನವಾಯಿತು. ಇಬ್ರಾಹಿಮ ಆದಿಲಶಾಹ ಮತ್ತು ಹುಸೇನ ನಿಜಾಮಶಾಹರು ತಮ್ಮ ಸರಹದ್ದಿನಲ್ಲಿ ಒಬ್ಬರನ್ನೊಬ್ಬರು ಆಲಂಗಿಸಿಕೊಂಡರು. ಪರಸ್ಪರ ಸಲಹೆ, ಸಮಾಲೋಚನೆ ಮತ್ತು ಒಪ್ಪಂದಗಳ ನಂತರ ಅವರು ತಮ್ಮ ತಮ್ಮ ರಾಜ್ಯಗಳತ್ತ ಹಿಂದಿರುಗಿದರು.

ಸೈಫ ಐನುಲ್‌ಮುಲ್ಕನ ನೇಮಕಾತಿ :

ಕೆಲ ಸಮಯ ಕಳೆಯುವುದರಲ್ಲಿಯೇ ಪುನಃ ಎರಡೂ ಮನೆತನಗಳಲ್ಲಿ ಶತ್ರುತ್ವದ ವೈಮನಸ್ಸು ಪ್ರಾರಂಭವಾಯಿತು. ಹುಸೇನ ನಿಜಾಮಶಾಹನ ಭಯದಿಂದ ಹೆದರಿ ಬಿಜಾಪುರದಲ್ಲಿ ಇಬ್ರಾಹಿಮ ಆದಿಲಶಾಹನ ನೆರಳಿನಲ್ಲಿ ಆಶ್ರಯ ಪಡೆದ ಖ್ವಾಜಾ ಜಹಾನ ದಖನಿಯು ಸೋಲಾಪುರ ಕಿಲ್ಲೆಯನ್ನು ಜಯಿಸುವ ಕನಸು ಕಾಣತೊಡಗಿದ್ದನು. ರಾಮರಾಜ ಮತ್ತು ಇಬ್ರಾಹಿಮ ಆದಿಲಶಾಹರು ಒಬ್ಬರೊಡನೊಬ್ಬರು ಸಖ್ಯ ಬೆಳೆಸಿದರು. ಇಬ್ರಾಹಿಮ ಆದಿಲಶಾಹನು ಬಹಳ ಬುದ್ಧಿವಂತಿಕೆ ಮತ್ತು ಚಾಣಾಕ್ಷತೆಯಿಂದ ಬುರ್ಹಾನ ನಿಜಾಮಶಾಹನ ದಂಡನಾಯಕ ಐನುಲ್‌ಮುಲ್ಕನನ್ನು ತನ್ನಲ್ಲಿಗೆ ಕರೆಯಿಸಿ, ಆತನಿಗೆ ಕೆಲವು ಕೊಡುಗೆಗಳ ವಾಗ್ದಾನ ಮಾಡಿದನು. ಆ ದಿನಗಳಲ್ಲಿ ಐನುಲ್‌ಮುಲ್ಕನು ನಿಜಾಮನ ಭಯದಿಂದ ಪಲಾಯನ ಮಾಡಿ ತಲೆಮರೆಸಿಕೊಂಡು ಬೆರಾರದ ಒಡೆಯ ಬುರ್ಹಾನ ಇಮಾದಶಾಹನಲ್ಲಿ ಅತಿಥಿಯಾಗಿ ಉಳಿದಿದ್ದನು. ಇಬ್ರಾಹಿಮ ಆದಿಲಶಾಹನು ಅಸದ್‌ಖಾನ ಲಾರಿಯು ತೆರವು ಮಾಡಿದ ಹುದ್ದೆಯನ್ನು ಸೈಫ ಐನುಲ್‌ಮುಲ್ಕನಿಗೆ ನೀಡಿದನು. ಇದಲ್ಲದೆ ಸೈಫುದ್ದೌಲಾ ಅಲ್ ಖಾಹಿರಾ ಇಫಲ್ತುಲ್ ಸಲ್ತನುತುಲ್ ಎಂಬ ಉಪಾಧಿಯನ್ನು ನೀಡಿ ಗೌರವಿಸಿದನು. ತನ್‌ಕರಿ ಮತ್ತು ರಾಯಬಾಗದ ಸ್ವತ್ತನ್ನು ಆತನಿಗೆ ಕೊಟ್ಟನು.

ರಾಜಕುಮಾರ ಅಲಿ ಮತ್ತು ಸೋಲಾಪುರ ಕೋಟೆ :

ಇಬ್ರಾಹಿಮ ಆದಿಲಶಾಹನು ಇತರ ಬಳುವಳಿಗಳೊಂದಿಗೆ ನಗದು ಹಣವನ್ನು ಕೂಡ ಸೈಫುಲ್‌ಮುಲ್ಕನಿಗೆ ಕೊಟ್ಟು ಸಂತೃಪ್ತಗೊಳಿಸಿದನು. ಈ ಸಂದರ್ಭದಲ್ಲಿ ಆತನ ಅತಿಥಿಯಾಗಿದ್ದ ರಾಜಕುಮಾರ ಅಲಿಯನ್ನು ಖ್ವಾಜಾ ಜಹಾನ ದಖನಿಯ ಇಚ್ಛೆಯಂತೆ ಅಹಮದ್‌ನಗರದ ಅರಸನಾಗಿ ಮಾಡಬೇಕೆನ್ನುವ ವಿಚಾರ ಬಾದಶಹನಿಗೆ ಬಂದಿತು. ಇದರಿಂದ ಸೋಲಾಪುರ ಕೋಟೆಯನ್ನು ಬಹಳ ಸುಲಭವಾಗಿ ವಶಪಡಿಸಿಕೊಳ್ಳ ಬಹುದೆಂಬ ಆಲೋಚನೆಯೂ ಇತ್ತು. ಶೂರ ಸೇನಾನಿಗಳ ಸೈನ್ಯವನ್ನು ಸಿದ್ಧಪಡಿಸಲಾಯಿತು. ಹುಸೇನ ನಿಜಾಮಶಾಹನಿಂದ ಜೀವ ಉಳಿಸಿಕೊಂಡು ಪಾರಾಗಿ ವಲಸೆ ಬಂದ ಎರಡು ಸಾವಿರ ಸೈನಿಕರ ದಂಡನ್ನು ರಾಜಕುಮಾರ ಅಲಿಯೊಡನೆ ಕಳುಹಿಸುವ ಸಿದ್ಧತೆ ಮಾಡಲಾಯಿತು. ಈ ಸೈನಿಕರ ತಂಡವು ಬಿಜಾಪುರದಿಂದ ಸರಹದ್ದಿನತ್ತ ಹೊರಟಿತು.

ನಿಜಾಮಶಾಹಿ ಸರದಾರರಿಗೆ ಇಬ್ರಾಹಿಮ ಆದಿಲಶಾಹನ ಪತ್ರ :

ಇಬ್ರಾಹಿಮ ಆದಿಲಶಾಹನು ಬುರ್ಹಾನ ನಿಜಾಮಶಾಹನ ಸರದಾರರು, ಸೇನಾನಿಗಳು ಮತ್ತು ಸಿಪಾಯಿಗಳಿಗೆ ಹಣದ ಆಮಿಷವೊಡ್ಡಿ ಹುಸೇನ ನಿಜಾಮಶಾಹನ ವಿರುದ್ಧ ಎತ್ತಿ ಕಟ್ಟಿದನು. ಬುರ್ಹಾನನ ಮಗ ಅಲಿಯನ್ನು ತಮ್ಮ ಅರಸನೆಂದು ಮಾನ್ಯ ಮಾಡಲು

ಅವರಿಗೆ ಉನ್ನತ ಹುದ್ದೆಗಳ ಆಶೆ ತೋರಿಸಿ ವಂಚಿಸಬಯಸಿದನು. ಆದರೆ ಆತನ ಎಲ್ಲ ಪ್ರಯತ್ನಗಳು ವ್ಯರ್ಥವಾದವು. ಆತನ ದೂತರು ಒಬ್ಬ ಸರದಾರನನ್ನು ಕೂಡ ಹುಸೇನ ನಿಜಾಮಶಾಹನ ವಿರುದ್ಧ ಬಂಡು ಹೂಡುವಂತೆ ಮಾಡಲು ಸಾಧ್ಯವಾಗಲಿಲ್ಲ.

ಹುಸೇನ ನಿಜಾಮಶಾಹ ಹಾಗೂ ಇಬ್ರಾಹಿಮ ಆದಿಲಶಾಹರ ಯುದ್ಧದ ಸಿದ್ಧತೆ :

ಹುಸೇನ ನಿಜಾಮಶಾಹನಿಗೆ ಎಲ್ಲ ವಿದ್ಯಮಾನಗಳು ತಿಳಿದ ಮೇಲೆ ಆತನು ಬುರ್ಹಾನ ಇಮಾದಶಾಹನಿಗೆ ನೆರವು ನೀಡಲು ಕೋರಿದನು. ತರುವಾಯ ಆತನ ಸಿಪಾಯಿಗಳ ಜೊತೆಗೆ ಇಬ್ರಾಹಿಮ ಆದಿಲಶಾಹನ ಪ್ರದೇಶದ ಮೇಲೆ ಆಕ್ರಮಣ ಮಾಡಿದನು. ಹಿಂದಿನ ಅನುಭವವನ್ನು ನೆನಪಿಸಿಕೊಂಡ ಇಬ್ರಾಹಿಮ ಆದಿಲಶಾಹನು ಸೈನಿಕರಿಗೆ ಸರಿಯಾದ ತರಬೇತಿಯನ್ನು ನೀಡುವಲ್ಲಿ ಗಮನ ಕೊಟ್ಟನು. ಆತನು ಕೈಬಿಚ್ಚಿ ಆರು ಲಕ್ಷ ಹೋನುಗಳನ್ನು ಎಲ್ಲ ಸೈನಿಕರಿಗೆ ಹಂಚಿಬಿಟ್ಟನು. ಇತರ ಅರಸರ ನೆರವು ಪಡೆಯದೇ ತಾನೊಬ್ಬನೇ ಸೈಫ ಐನುಲ್‌ಮುಲ್ಕನ ನೇತೃತ್ವದಲ್ಲಿ ಯುದ್ಧ ಮಾಡುವ ಸಿದ್ಧತೆ ಮಾಡಿ, ಸರಹದ್ದಿನತ್ತ ಹೊರಟನು. ಎರಡೂ ಕಡೆಯ ಸೈನಿಕರು ಸೋಲಾಪುರದ ಮೈದಾನದಲ್ಲಿ ಬಿಡಾರ ಹಾಕಿದರು. ಆ ಸ್ಥಳದಲ್ಲಿ ಯುದ್ಧ ಮಾಡಬೇಕೆಂದು ಸಿದ್ಧರಾದರು.

ಉಭಯಪಕ್ಷದವರಲ್ಲಿ ಸೈನ್ಯದ ಕ್ರಮವಿನ್ಯಾಸ :

ಇಬ್ರಾಹಿಮು ಆದಿಲಶಾಹನು ಅತ್ಯಂತ ಚತುರತೆಯಿಂದ ಸೈನ್ಯವನ್ನು ವಿನ್ಯಾಸಗೊಳಿಸಿದನು. ಐನುಲ್‌ಮುಲ್ಕ ಕನ್ಹಾನಿ ಮತ್ತು ಆಂಕಸ್‌ಖಾನರನ್ನು ಬಲಭಾಗ, ಪೂರ್ ಖಾನ ಮತ್ತು ಇಮಾಮುಲ್ ಮುಲ್ಕರನ್ನು ಎಡಭಾಗ ನಿಯಂತ್ರಿಸಲು ನಿಯಮಿಸಿದನು, ಸ್ವತಃ ತಾನು ತನ್ನ ಆಪ್ತ ಸೈನಿಕರೊಡನೆ ಮಧ್ಯದಲ್ಲಿ ನಿಂತುಕೊಂಡನು. ಸೈಫುಲ್ ಮುಲ್ಕನಿಗೆ ಸೇನಾನಾಯಕನಾಗಿ ಮಾಡಿದನು. ಅತ್ತ ಹುಸೇನ ನಿಜಾಮಶಾಹನು ಸೈನ್ಯದ ವ್ಯವಸ್ಥೆ ಮಾಡಿ, ಇಮಾದಶಾಹಿ ಸೈನ್ಯದೊಡನೆ ಬಂಧುತ್ವವಿರುವ ಖಾನ ಜಮಾಲ ಬಹರಿ ಖಾನ ಮತ್ತು ಖಲಾಸ ಖಾನರಿಗೆ ಸೈನ್ಯದ ನೇತೃತ್ವ ವಹಿಸಿದನು. ಇದಲ್ಲದೆ, ಸೈನ್ಯದ ಮುಂದೆ ಯುದ್ಧದ ಸಾಮಗ್ರಿಗಳನ್ನು ಒಟ್ಟಲಾಗಿತ್ತು.

ಸೈಫ ಐನುಲ್‌ಮುಲ್ಕನ ಪ್ರಾಬಲ್ಯ :

ಬಾದಶಹನ ಕೃಪೆಯ ಭಾರವನ್ನು ಸ್ವಲ್ಪ ಹಗುರಗೊಳಿಸಿಕೊಳ್ಳಲು ಸೈಫ ಐನುಲ್‌ಮುಲ್ಕನು ತನ್ನ ಧೈರ್ಯ ಮತ್ತು ಪೌರುಷವನ್ನು ಮೆರೆಯಲು ಶತ್ರುಗಳತ್ತ ಮುನ್ನುಗ್ಗಿದನು. ಕೇವಲ ಒಂದು ದಾಳಿಯಲ್ಲಿ ನಿಜಾಮಶಾಹಿ ತೋಪುಖಾನೆಯನ್ನು ವಶಪಡಿಸಿಕೊಂಡನು. ಶೌರ್ಯ-ಪರಾಕ್ರಮಗಳ ಬಹಳ ದೂರ ದೂರದವರೆಗೆ ಖ್ಯಾತಿಪಡೆದ ಸೈನ್ಯದ ದಂಡನಾಯಕ ಸೈಫ ಐನುಲ್‌ಮುಲ್ಕನು ವೈರಿಗಳನ್ನು ತುಳಿಯುತ್ತ ಮುನ್ನಡೆದನು. ಹುಸೇನ ನಿಜಾಮಶಾಹನು 'ಫೀಲಮಸ್ತ' ಎಂಬ ಆನೆಯ ಮೇಲೆ

ಕುಳಿತಿದ್ದನು. ಆತನು ಮುಂದೆ ಬಂದು ಸೈಫ ಐನುಲ್‌ಮುಲ್ಕನ ಮೇಲೆ ಆಕ್ರಮಣ ಮಾಡಿದನು. ನೋಡನೋಡುತ್ತಲೇ ಘನಘೋರ ಯುದ್ಧ ಆರಂಭವಾಯಿತು. ಚರಿತ್ರೆಯಲ್ಲಿ ಇಂತಹ ಯುದ್ಧಗಳನ್ನು ಕಾಣುವುದು ಅಪರೂಪ. ರಕ್ತದ ಹೊಳೆ ಹರಿದ ಈ ಕಾಳಗದಲ್ಲಿ ಜೀವ ಕಳೆದುಕೊಂಡ ಸೈನಿಕರ ಸಂಖ್ಯೆ ಎಣಿಕೆಗೆ ಮೀರಿತ್ತು.

ನಿಜಾಮಶಾಹಿ ಸೈನ್ಯದ ಕುಮ್ಮಕ್ಕು :

ನಿಜಾಮಶಾಹಿ ಸೈನಿಕರು ರಣರಂಗದಿಂದ ಪಲಾಯನ ಮಾಡುವುದರಲ್ಲಿದ್ದರು, ಅಷ್ಟರಲ್ಲಿ ನಿಜಾಮ ಹುಸೇನಶಾಹನ ಕೆಲವು ಸೇನಾನಿಗಳು ರುಸ್ತುಮ ಖಾನ ದಖನಿ, ಜಹಾಂಗೀರಖಾನ ಹಬಶಿ ಮತ್ತು ಗಜ್ನಫರ ಖಾನ ಶಿರಾಜಿ ಮತ್ತಿತರ ಪ್ರಮುಖರು ಅಲ್ಲಿಗೆ ಬಂದರು. ಅವರೆಲ್ಲ ಬಲಭಾಗದಲ್ಲಿ ಯುದ್ಧ ಮಾಡುತ್ತಿದ್ದವರು, ಅಲ್ಲಿ ಸೋಲನ್ನು ಕಂಡು ಇತ್ತ ಬಂದಿದ್ದರು. ಅವರೆಲ್ಲ ಬಂದದ್ದರಿಂದ ಇತರ ನಿಜಾಮಶಾಹಿಗಳ ಸೈನಿಕರನ್ನು ಹುರಿದುಂಬಿಸಿದಂತಾಯಿತು. ಇತ್ತ ಇಬ್ರಾಹಿಮ ಆದಿಲಶಾಹನ ನೆರವಿಗೆ ಯಾರೂ ಬರಲಿಲ್ಲ, ಈ ಅವಸ್ಥೆಯನ್ನು ನೋಡಿದೊಡನೆ ಸೈಫ ಐನುಲ್‌ಮುಲ್ಕನ ಕಾಲುಗಳು ನಡುಗತೊಡಗಿದವು. ಶತ್ರುಗಳು ವಿಜಯಿಯಾಗುವುದನ್ನು ಕಂಡರೆ, ಯುದ್ಧಭೂಮಿಯಲ್ಲಿ ನಿಂತುಬಿಡುವುದು ಸೈಫ ಐನುಲ್‌ಮುಲ್ಕನ ರೂಢಿಯಾಗಿತ್ತು, ಈ ಸಂದರ್ಭದಲ್ಲಿ ಸಹ ಅದೇ ರೀತಿ ಕುದುರೆಯಿಂದ ಕೆಳಗೆ ಹಾರಿ ನೆಲದ ಮೇಲೆ ನಿಂತು ಬಿಟ್ಟನು.

ಇಬ್ರಾಹಿಮ ಆದಿಲಶಾಹನ ಅಪನಂಬಿಕೆ :

ಆದಿಲಶಾಹಿ ಸೈನ್ಯಕ್ಕೆ ವಿಜಯ ಪ್ರಾಪ್ತವಾಗುವಂತೆ ಮಾಡುವುದು ಇಲ್ಲವೇ ಎಲ್ಲರೂ ಹತರಾಗುವುದಕ್ಕೆ ಸಿದ್ಧವಾಗುವುದನ್ನು ಶತ್ರುಗಳಿಗೆ ಮನದಟ್ಟು ಮಾಡಬೇಕೆನ್ನುವುದು ಸೈಫುಲ್ ಮುಲ್ಕನ ಉದ್ದೇಶವಾಗಿತ್ತು. ನೆಲದ ಮೇಲೆ ನಿಲ್ಲುವುದರ ಅರ್ಥವು, 'ಹೊಡೆಯುವುದು ಇಲ್ಲವೇ ಸಾಯುವುದು' ಎಂದಾಗಿತ್ತು. ನೆಲದ ಮೇಲೆ ಸೈಫನು ನಿಲ್ಲುವುದಕ್ಕೆ ಬೇರೆ ಅರ್ಥವನ್ನು ಕಲ್ಪಿಸಿ ಒಬ್ಬ ದುಷ್ಟನು ಇಬ್ರಾಹಿಮನ ಕಿವಿ ಊದಿದನು. ಸೈಫ ಐನುಲ್‌ಮುಲ್ಕನು ಕುದುರೆಯಿಂದ ಇಳಿದು ಶತ್ರುಗಳಿಂದ ವೀಳ್ಯ ಪಡೆದು, ಇಬ್ರಾಹಿಮ ಆದಿಲಶಾಹನನ್ನು ಬಂಧಿಸಿ ಅವರ ವಶಕ್ಕೊಪ್ಪಿಸುವ ಪ್ರಮಾಣ ಮಾಡಿದ್ದಾನೆಂದು ಕತೆಕಟ್ಟಿ ಇಬ್ರಾಹಿಮನಿಗೆ ಹೇಳಿದನು.

ಇಬ್ರಾಹಿಮ ಆದಿಲಶಾಹ ಮತ್ತು ಸೈಫ ಐನುಲ್‌ಮುಲ್ಕರನ್ನು ಕಳುಹಿಸುವುದು :

ಇಬ್ರಾಹಿಮ ಆದಿಲಶಾಹನು ಈ ವಿಷಯವನ್ನು ಕೂಲಂಕಶವಾಗಿ ವಿಚಾರಿಸುವ ಪ್ರಯತ್ನ ಮಾಡದೆ ರಣಭೂಮಿಯನ್ನು ತೊರೆದು ಬಿಜಾಪುರದತ್ತ ಹೊರಟನು. ಸೈಫ ಐನುಲ್‌ಮುಲ್ಕನೊಬ್ಬನೇ ವೈರಿಗಳೊಡನೆ ಸೆಣಸಾಡುತ್ತಿದ್ದನು, ವಿಜಯವನ್ನೂ ಪಡೆಯಲಿದ್ದನು, ಆದರೆ ಅಷ್ಟರಲ್ಲಿಯೇ ಬಾದಶಹನು ಓಡಿಹೋಗುತ್ತಿರುವದು ತಿಳಿದು ಆತನೂ ಯುದ್ಧಭೂಮಿಯನ್ನು ಹಾಗೆಯೇ ಬಿಟ್ಟು ಹೊರಟನು. ತರುವಾಯ ತನ್ನ

ಸೋದರಿಯ ಪುತ್ರ ಸಲಾಬತ್ ಖಾನನಿಗೆ ಆಳವಾದ ಗಾಯವಾಗಿರುವುದರಿಂದ ಆತನ ಗಾಯಕ್ಕೆ ಬಟ್ಟೆ ಸುತ್ತಿದನು. ತರುವಾಯ ಸೈಫುಲ ಮುಲ್ಕನು ಬಾದಶಹನ ಹಿಂದೆ ಹೊರಟನು.

ಇಬ್ರಾಹಿಮ ಆದಿಲಶಾಹನ ತಪ್ಪು ತಿಳುವಳಿಕೆ :

ಬಾದಶಹನು ರಣರಂಗದಿಂದ ಓಡಿ ಪರಾರಿಯಾಗುವದನ್ನು ತಡೆದು ಶತ್ರುಗಳನ್ನು ಪರಾಭವಗೊಳಿಸಬೇಕೆಂಬುದು ಸೈಫ ಐನುಲ್‌ಮುಲ್ಕನ ಇಂಗಿತವಾಗಿತ್ತು. ಸೈಫ ಐನುಲ್‌ಮುಲ್ಕನ ಕೈಯಲ್ಲಿ ಬಾವುಟವನ್ನು ನೋಡಿದ ಮೇಲೆ ಇಬ್ರಾಹಿಮ ಆದಿಲಶಾಹನ ಸಂಶಯ ಇನ್ನೂ ಹೆಚ್ಚಿತು. ಸೈಫನು ನಿಸ್ಸಂದೇಹವಾಗಿಯೂ ತನ್ನನ್ನು ಬಂಧಿಸಲು ಬೆನ್ನಟ್ಟಿರುವುದಾಗಿ ತಿಳಿದು ಓಡುವ ವೇಗವನ್ನು ಇನ್ನೂ ತ್ವರಿತಗೊಳಿಸಿ, ಬಿಜಾಪುರ ತಲುಪಿದ ನಂತರ ಸಮಾಧಾನದ ಉಸಿರು ಬಿಟ್ಟನು.

ಸೈಫ ಐನುಲ್‌ಮುಲ್ಕನಿಂದ ಬಾದಶಹನಿಗೆ ಸಂದೇಶ :

ಇಬ್ರಾಹಿಮ ಆದಿಲಶಾಹನು ನಗರವನ್ನು ತಲುಪಿದ ಕೆಲವು ಕ್ಷಣಗಳ ನಂತರ ಸೈಫನು ನಗರವನ್ನು ತಲುಪಿದನು. ತನ್ನ ಸೇವಕನೊಬ್ಬನ ಮೂಲಕ ತನ್ನ ನಿಷ್ಠೆ ಮತ್ತು ನಿರ್ದೋಷತೆಯನ್ನು ತಿಳಿಸಿದನು. ಒಂದಿಷ್ಟು ನಗದು ಹಣವನ್ನು ವೆಚ್ಚಕ್ಕೆ ಕಳುಹಿಸಲು ಕೋರಿಕೊಂಡನು, ಏಕೆಂದರೆ, ಸೇವಕನು ಮಾಲಿಕನ ಸನ್ನಿಧಿಗೆ ಬರಲು ಭಯಪಡುತ್ತಿದ್ದಾನೆಂದು ತಿಳಿಸಿದನು.

ಇಬ್ರಾಹಿಮ ಆದಿಲಶಾಹನ ಉತ್ತರ ಮತ್ತು ಸೈಫನ ನಿಷ್ಠೆ :

ಇಬ್ರಾಹಿಮ ಆದಿಲಶಾಹನು ತನ್ನ ಪರಾಜಯ ಮತ್ತು ವಿನಾಶದ ಮೂಲ ಕಾರಣ ಸೈಫ ಐನುಲ್‌ಮುಲ್ಕನೆಂದು ಬಗೆಯುತ್ತಿದ್ದನು. ಹೀಗಾಗಿ ಬಾದಶಹನು ಆತನಿಗೆ ಆಸ್ಥಾನಕ್ಕೆ ಬರಲು ಅನುಮತಿ ನೀಡಲಿಲ್ಲ. ಬಾದಶಹನಿಗೆ ಸೈಫನಂತಹ ಕೆಲಸಕ್ಕೆ ಬಾರದ ಸೇವಕನ ಅಗತ್ಯವಿಲ್ಲ, ಮತ್ತೆಲ್ಲಿಗಾದರೂ ನೀನು ಹೊರಟು ಹೋಗು ಎಂಬ ಉತ್ತರ ಕಳುಹಿಸಿದನು. ಸೈಫ ಐನುಲ್‌ಮುಲ್ಕನ ಅಪರಾಧವೇನೂ ಇರದಿದ್ದರೂ, ಕೇವಲ ಆದಿಲಶಾಹಿ ಸೇನೆಯ ಮುಖಂಡತ್ವ ವಹಿಸಿದುದು ಹಾಗೂ ಕೊನೆಯ ಕ್ಷಣದವರೆಗೆ ಯುದ್ಧದ ಮುಖಂಡತ್ವ ನಿಷ್ಠೆಯಿಂದ ನಿರ್ವಹಿಸಿದುದು ಮಾತ್ರ ಆತನ ತಪ್ಪಾಗಿದ್ದುದರಿಂದ, ಬಾದಶಹನ ಈ ವಿಧದ ಉತ್ತರ ಪಡೆದು ಆತನಿಗೆ ಅತ್ಯಂತ ಖೇದವಾಯಿತು. ಆತನು ಆರು ನೂರು ಶತ್ರುಗಳನ್ನು ಹತಗೊಳಿಸಿದುದು ಹಾಗೂ ಯುದ್ಧಸಾಮಗ್ರಿಗಳನ್ನು ಹಾಳುಗೆಡವಿದ ಬಗ್ಗೆ ಹೇಳಿ ಕಳುಹಿಸಿ ಪುನಃ ತನ್ನ ನಿಷ್ಠೆಯನ್ನು ವ್ಯಕ್ತಪಡಿಸುವ ಪ್ರಯತ್ನ ಮಾಡಿದನು, ಬೇರೆಡೆ ಹೊರಟು ಹೋಗುವ ಇಲ್ಲವೇ ಬೇರೆ ಅರಸನ ಸೇವಕನಾಗಿ ಹೋಗುವ ನಿರ್ಧಾರವನ್ನು ಸಹ ಬಾದಶಹನಿಗೆ ತಿಳಿಸಿದನು. ಆತನು ಸಾದರಪಡಿಸಿದ ಎಲ್ಲ ವಿಷಯಗಳು ಸತ್ಯವಾಗಿದ್ದವು, ಹೀಗಿದ್ದರೂ ಇಬ್ರಾಹಿಮ

ಆದಿಲಶಾಹನು ಆತನ ಮಾತನ್ನು ನಂಬಲಿಲ್ಲ, ಇದು ಆತನ ಮತ್ತೊಂದು ತಂತ್ರವೆಂದು ಬಗೆದನು. ಈ ವಿಷಯವನ್ನು ತಂದ ದೂತನ ಕೆನ್ನೆಗೆ ಬಾರಿಸಿ ಆಸ್ಥಾನದಿಂದಾಚೆಗೆ ಓಡಿಸಿದನು.

ಇತರರೊಡನೆ ಸೈಫ ಐನುಲ್‌ಮುಲ್ಕನ ಸಮಾಲೋಚನೆ :

ಅನಿವಾರ್ಯವಾಗಿ, ಸೈಫ ಐನುಲ್‌ಮುಲ್ಕನು ಬುದ್ಧಿವಂತ ಹಾಗೂ ಅನುಭವಸ್ಥ ಜನರೊಡನೆ ಸಮಾಲೋಚನೆ ಮಾಡಿದನು. ಫತೇವುಲ್ಲಾಖಾನ, ಮಿರ್ಜಾ ಬೇಗ, ಶೀತಾನಿ, ಆಲಮ್ ಖಾನ ಮತ್ತು ಮೀರ ನಖೀ ಖಾನ ಅಂಜೂ ಮತ್ತಿತರರು ಬಾದಶಹನಿಂದ ಯಾವುದೇ ರೀತಿಯ ನೆರವು ನಿರೀಕ್ಷಿಸುವುದು ಜಾಣತನವಲ್ಲ, ವಸಾಹತು ಪ್ರದೇಶಗಳ ಜನರಿಂದ ಮುಂಗಾರು ಫಸಲಿನ ಕಂದಾಯವನ್ನು ವಸೂಲಿ ಮಾಡಿ ದೊರೆತ ಹಣದಿಂದ ಅಗತ್ಯ ಸಾಮಗ್ರಿಗಳನ್ನು ಖರೀದಿಸಬೇಕು, ಬಾದಶಹನಿಂದ ಈ ಕೆಲಸಕ್ಕೆ ಆತಂಕವಾದಲ್ಲಿ ಇನ್ನೊಂದು ಉಪಾಯವನ್ನು ಯೋಚಿಸಬೇಕು, ಎಂದು ಸಲಹೆ ನೀಡಿದರು. ಸೈಫುಲ್ ಮುಲ್ಕನು ಈ ಸಲಹೆಯನ್ನು ಕಾರ್ಯಗತಗೊಳಿಸ ಬೇಕೆಂದು ಬಿಜಾಪುರದ ಸಮೀಪ ತಲುಪಿದನು. ಇಬ್ರಾಹಿಮ ಆದಿಲಶಾಹನಿಗೆ ಈ ವಿಷಯ ತಿಳಿದು ಒಬ್ಬ ಸರದಾರನೊಡನೆ ಐದು ಸಾವಿರ ಸೇನಾನಿಗಳನ್ನು ಕಳುಹಿಸಿ ಸೈಫನ ವಿದ್ರೋಹವನ್ನು ತುಳಿದು ಹಾಕಲು ಕಳುಹಿಸಿಕೊಟ್ಟನು.

ಆದಿಲಶಾಹಿ ಸೈನ್ಯ ಮತ್ತು ಸಲಾಬತ್ ಖಾನರಲ್ಲಿ ಯುದ್ಧ :

ಆದಿಲಶಾಹನ ಸರದಾರನು ಸೈನ್ಯದೊಡನೆ ಹೊಳೆಯ ದಂಡೆಯ ಬಳಿ ಬರುವಷ್ಟರಲ್ಲಿ ಐನುಲ್‌ಮುಲ್ಕನ ಸಲಹೆ ಪಡೆಯದೇ ಆವರ ಮೇಲೆ ದಾಳಿ ಮಾಡಿದನು. ಸರದಾರ ಮತ್ತು ಆತನ ಸೈನಿಕರಿಗೆ ಈ ದಾಳಿಯನ್ನು ತಡೆಯಲಾಗಲಿಲ್ಲ, ಅವರು ರಣರಂಗದಿಂದ ಪಲಾಯನ ಮಾಡಿದರು. ಸಲಾಬತ್ ಖಾನನಿಗೆ ಕುದುರೆಗಳು ಮತ್ತು ಅರಸನ ಆನೆಗಳು ದೊರೆತವು. ಇದರಿಂದ ಸೈಫ ಐನುಲ್‌ಮುಲ್ಕನ ಉತ್ಸಾಹವು ಇನ್ನೂ ಹೆಚ್ಚಿತು. ಈಗ ಆತನು ಮುಂಗಾರು ಫಸಲಿನ ಕಂದಾಯವಲ್ಲದೆ ಹಿಂಗಾರು ಫಸಲಿನ ಕಂದಾಯವನ್ನು ಸಹ ಪ್ರಜೆಗಳಿಂದ ವಸೂಲಿ ಮಾಡತೊಡಗಿದನು, ಅದನ್ನು ಖರ್ಚು ಕೂಡ ಮಾಡತೊಡಗಿದನು.

ಸೈಫ ಐನುಲ್‌ಮುಲ್ಕನ ಗೆಲುವುಗಳು :

ಈ ಪ್ರದೇಶಗಳಲ್ಲದೆ, ಕಲ್ಹರ. ಮಿರಜ ಮತ್ತಿತರ ಪ್ರದೇಶಗಳನ್ನು ಕೂಡ ಸೈಫ ಐನುಲ್‌ಮುಲ್ಕನು ತನ್ನ ವಶಪಡಿಸಿಕೊಂಡನು. ಈ ಸಲ ಇಬ್ರಾಹಿಮ ಆದಿಲಶಾಹನು ಕುದುರೆ ಸವಾರ ಮತ್ತು ಪದಾತಿಗಳ ಸುಸಂಘಟಿತ ಸೈನ್ಯವನ್ನು ದಿಲಾವರಖಾನ ಹಬಶಿಯ ಸೇನಾನಾಯಕತ್ವದಲ್ಲಿ ವಹಿಸಿಕೊಟ್ಟನು, ಹೇರಳವಾದ ಶಸ್ತ್ರಾಸ್ತ್ರಗಳು ಮತ್ತು ಯುದ್ಧೋಪಕರಣಗಳಿಂದ ಸೈನ್ಯವನ್ನು ಸಜ್ಜುಗೊಳಿಸಿದನು. ಮುಂದೆ ಇದೇ

ದಿಲಾವರಖಾನನನ್ನು ವಕೀಲ ಅಲಸಲ್ತನತ್ (ಬಾದಶಹನ ಅಧಿಕೃತ ಪ್ರತಿನಿಧಿ) ಹುದ್ದೆ ನೀಡಿ ಗೌರವಿಸಲಾಯಿತು. ಹುಸ್ನಾಬಾದ ಗುಲಬರ್ಗಾವನ್ನು ಯುದ್ಧದ ಭೂಮಿಯಾಗಿ ಮಾಡಿಕೊಳ್ಳಬೇಕೆಂದು ಸಲಾಬತ್ ಖಾನ ಮತ್ತು ಸೈಫ ಐನುಲ್‌ಮುಲ್ಕ ಇಬ್ಬರೂ ತೀರ್ಮಾನಿಸಿದರು. ಇಬ್ರಾಹಿಮ ಆದಿಲಶಾಹನ ಸೈನ್ಯವು ಇದೇ ಸ್ಥಳದಲ್ಲಿ ದಯನೀಯ ರೀತಿಯಲ್ಲಿ ಸೋತು ಹೋಯಿತು. ದಿಲಾವರಖಾನ ಹಬಶಿಯು ಗಂಭೀರವಾಗಿ ಗಾಯಗೊಂಡು ನಾಲ್ಕು ಹರದಾರಿ ಹಿಂದೆ ಸರಿದನು. ಇದಲ್ಲದೆ, ಲೆಕ್ಕವಿಲ್ಲದಷ್ಟು ಆದಿಲಶಾಹಿ ಸೈನಿಕರನ್ನು ಮೃತ್ಯುವಿನ ಕೂಪಕ್ಕೆ ತಳ್ಳಿದರು. ಸಾಕಷ್ಟು ಸಂಖ್ಯೆಯ ಕುದುರೆ ಮತ್ತು ಆನೆಗಳು ವಶವಾದವು. ಯುದ್ಧಸಾಮಗ್ರಿಗಳು ಮತ್ತು ಶಸ್ತ್ರಾಸ್ತ್ರಗಳು ವಶವಾದವು. ಸೈಫುಲ್ ಮುಲ್ಕ ಮತ್ತು ಸಲಾಬತ್ ಖಾನರು ಅನುಭವಿಸಿದ ಕಷ್ಟಕೋಟಲೆಗಳಿಗೆ ಪ್ರತಿಯಾಗಿ ವೈರಿಗಳ ಸಾಮಗ್ರಿಗಳು, ಕುದುರೆ ಮತ್ತು ಆನೆಗಳ ರೂಪದಲ್ಲಿ ದೊರೆತವು. ಇಬ್ರಾಹಿಮ ಆದಿಲಶಾಹನು ತನ್ನ ಸೈನ್ಯವನ್ನು ಮತ್ತೆ ಮೊದಲಿನಂತೆ ಸಂಘಟಿಸಬೇಕಾಯಿತು, ತನ್ನ ಗೌರವ–ಮರ್ಯಾದೆ, ಐಶ್ವರ್ಯ ಮತ್ತು ಬಲವನ್ನು ಪಡೆಯಲು ಪರಿಶ್ರಮ ಪಡಬೇಕಾಯಿತು. ಸೈಫ ಐನುಲ್‌ಮುಲ್ಕ ಮತ್ತು ಆತನ ಸಂಗಡಿಗರಿಗೆ ಎರಡರಿಂದ ಆರು ತೋಪಖಾನೆಗಳು ಮತ್ತು ಐದು ಸಾವಿರ ಉತ್ತಮ ತಳಿಯ ಕುದುರೆಗಳು ದೊರೆತವು.

ಇಬ್ರಾಹಿಮ ಆದಿಲಶಾಹನ ಯುದ್ಧದ ಸಂಕಲ್ಪ :

ಇಬ್ರಾಹಿಮ ಆದಿಲಶಾಹನು ತೋಪುಖಾನೆ, ಆನೆಗಳು ಮತ್ತು ಇಪ್ಪತ್ತೈದು ಸಾವಿರ ಕುದುರೆ ಸವಾರರ ಸೈನ್ಯವನ್ನು ಸಜ್ಜುಗೊಳಿಸಿದನು. ಸೈಫ ಐನುಲ್‌ಮುಲ್ಕನ ಬಂಡಾಯವನ್ನು ಸದೆಬಡೆಯಲು ಸ್ವತಃ ಬಾದಶಹನು ಮಾನ ನದಿಯ ತೀರದಲ್ಲಿ ಬಿಡಾರ ಹೂಡಿದನು. ಅಲ್ಲಿ ತಲುಪಿದ ಮೇಲೆ ಸೈಫ ಐನುಲ್‌ಮುಲ್ಕನ ಸಂಗಡಿಗರು ಮಾನ ಪ್ರದೇಶದಲ್ಲಿ ತಂಗಿರುವುದು ಗೊತ್ತಾಯಿತು. ಕೆಲಕಾಲ ಬಾದಶಹನು ನದಿಯ ತೀರದಲ್ಲಿ ತಂಗಿದನು. ಸೈಫ ಐನುಲ್‌ಮುಲ್ಕನು ಬಾದಶಹನ ಕಣ್ಣಲ್ಲಿ ಕಣ್ಣಿಟ್ಟು ಮಾತನಾಡಬಯಸುತ್ತಿರಲಿಲ್ಲ, ಆತನು ತನ್ನ ಸಂಗಡಿಗರೊಡನೆ ಪರಾರಿಯಾಗಬೇಕೆಂದು ಕೊಂಡಿದ್ದನು. ಸೈಫ ಐನುಲ್‌ಮುಲ್ಕನು ಸೋತು ಹೆದರಿಕೊಂಡಿದ್ದಾನೆಂದು ಇಬ್ರಾಹಿಮ ಆದಿಲಶಾಹನು ಭಾವಿಸಿದನು. ಸೈಫ ಐನುಲ್‌ಮುಲ್ಕನು ತನ್ನ ಮೊದಲಿನ ಯೋಚನೆಯನ್ನು ಬಿಟ್ಟು ಯುದ್ಧದ ಸಿದ್ಧತೆಯನ್ನು ಆರಂಭಿಸಿದನು, ಸೈನಿಕರಿಗೆ ತರಬೇತಿ ಮತ್ತು ಪ್ರಶಿಕ್ಷಣದ ಮೂಲಕ ಯುದ್ಧದ ಘೋಷಣೆ ಮಾಡುತ್ತ, ಶತ್ರುಗಳ ಡೇರೆಯತ್ತ ಹೋಗುವುದು, ಯುದ್ಧ ಮಾಡದೆ ತಿರುಗಿ ಬರುವುದು, ಹೀಗೆ ಮೂರು ದಿನಗಳವರೆಗೆ ಇದೇ ರೀತಿ ನಡೆಯಿತು. ಆದಿಲಶಾಹಿ ಸೈನಿಕರು ಸೈನಿಕ ವೇಷದಲ್ಲಿ ದಿನವಿಡೀ ಕುದುರೆಯ ಮೇಲೆ ಸವಾರಿಯಾಗಿರುತ್ತಿದ್ದರು, ರಾತ್ರಿ ದಣಿದು ಬಿಡಾರದತ್ತ ಹೊರಡುತ್ತಿದ್ದರು. ಕೊನೆಗೆ, ನಾಲ್ಕನೆಯ ದಿನ ತನ್ನ ಸೈನಿಕರ ತಂಡಕ್ಕೆ ಶತ್ರುಗಳೆಡೆಗೆ

ನುಗ್ಗಲು ಹೇಳಿದನು. ಪ್ರತಿದಿನದಂತೆ ಅಂದು ಸಹ ಕವಾಯತು ಮಾಡುವರೆಂದು ಇಬ್ರಾಹಿಮ ಆದಿಲಶಾಹನ ಸೈನಿಕರು ತಿಳಿದುಕೊಂಡಿದ್ದರು, ಸೇನಾ ಮುಖ್ಯಸ್ಥರು ವೈರಿಗಳು ಬರುವ ಸೂಚನೆ ಕೊಡುತ್ತಿದ್ದರು, ಜಾಗ್ರತರಾಗಲು ಸೂಚನೆ ಕೊಡುತ್ತಿದ್ದರು, ಆದರೆ ಸೈನಿಕರು ಅವರ ಒಂದು ಮಾತನ್ನೂ ಕೇಳಿಸಿಕೊಳ್ಳಲಿಲ್ಲ, ಯುದ್ಧ ಸನ್ನದ್ಧರಾಗಲಿಲ್ಲ. ಕೆಲಸಮಯ ಕಳೆದ ನಂತರ, ಸೈಫ ಐನುಲ್‌ಮುಲ್ಕನ ದಾಳಿಯಾಗುತ್ತಿರುವುದು ಆದಿಲಶಾಹಿ ಸೈನಿಕರಿಗೆ ಖಚಿತವಾಯಿತು. ಬಾದಶಹನು ಸೈನ್ಯವನ್ನು ಸುಸಜ್ಜಿತಗೊಳಿಸದೆ ಸೈಫ ಐನುಲ್‌ಮುಲ್ಕನನ್ನು ಎದುರಿಸಲು ರಣರಂಗಕ್ಕೆ ಬಂದನು.

ಇಬ್ರಾಹಿಮ ಆದಿಲಶಾಹನ ಮೇಲೆ ಐನುಲ್‌ಮುಲ್ಕನ ದಾಳಿ :

ಬಾದಶಹನನ್ನು ಎದುರಿಸಿ ಯುದ್ಧ ಮಾಡುವ ವಿಚಾರದ ಬಗ್ಗೆ ಸೈಫ ಐನುಲ್‌ಮುಲ್ಕನು ಭಯಪಟ್ಟಿದ್ದನು. ತನ್ನ ಸಂಗಡಿಗರೊಡನೆ ಈ ಬಗ್ಗೆ ಸಮಾಲೋಚನೆ ಮಾಡಿದಾಗ, ಅವರು, "ಯಾವ ಸೈನ್ಯದ ಜೊತೆ ರಾಜಲಾಂಛನವಿರುವುದೋ ಅವರೊಡನೆ ಕದನ ಮಾಡುವುದು ಸಲ್ಲದು" ಎಂದು ಹೇಳಿದರು. ಈ ಸಂದರ್ಭದಲ್ಲಿ ಸಯ್ಯದ ವಂಶದವನಾದ ಹಾಗೂ ಸೈಫ ಐನುಲ್‌ಮುಲ್ಕನು ಗೌರವಿಸುತ್ತಿದ್ದ ಮುರ್ತುಜಾಖಾನ ಅಲ್‌ಜೂ, "ರಾಜಲಾಂಛನ ಉಳ್ಳವನು ಯುದ್ಧ ಮಾಡಿ ಧ್ವಂಸ ಮಾಡುವ ಚತುರನಾಗಿರಕೂಡದು. ಇಂತಹ ನಿರ್ದಯಿಗೆ ಗೌರವ ಕೊಡುವುದು ಖಂಡಿತವಾಗಿಯೂ ಯೋಗ್ಯವಲ್ಲ" ಎಂದು ಹೇಳಿದನು. ಐನುಲ್‌ಮುಲ್ಕನ ಸೈನ್ಯವು ಈ ಸಲಹೆಯನ್ನು ಕಾರ್ಯಗತಗೊಳಿಸಲು ಯುದ್ಧಕ್ಕೆ ಸಿದ್ಧವಾಯಿತು. ಐನುಲ್‌ಮುಲ್ಕನ ಐದು ಸಾವಿರ ಸರದಾರರು ಒಂದೆಡೆ ಒಟ್ಟುಗೂಡಿದರು, ಅವರು ಆದಿಲಶಾಹಿ ಸೈನ್ಯದ ಎಡ ಮತ್ತು ಬಲಭಾಗದತ್ತ ದೃಷ್ಟಿ ಹಾಯಿಸಿ, ಯಾವ ಸ್ಥಳದಲ್ಲಿ ರಾಜಲಾಂಛನದೊಂದಿಗೆ ಬಾದಶಹನಿದ್ದನೋ ಅಲ್ಲಿಯೇ ಆಕ್ರಮಣ ಮಾಡಿದರು. ಈ ಯುದ್ಧದಲ್ಲಿ ಭಾಗವಹಿಸಿದ ಮಿರ್ಜಾ ಬೇಗ ಎಂಬ ಸೈನಿಕನಿಂದ ಕೃತಿಕಾರನು ಕೇಳಿದ ವಿಷಯವೇನೆಂದರೆ, ಐನುಲ್‌ಮುಲ್ಕನು ಐದು ಸಾವಿರ ಸೈನಿಕರ ದಂಡಿನೊಡನೆ ಕುದುರೆಯನ್ನು ಓಡಿಸಿ ಇಬ್ರಾಹಿಮ ಆದಿಲಶಾಹನ ಸೈನ್ಯದ ಮೇಲೆ ದಾಳಿ ಮಾಡಿದನು. ಆದಿಲಶಾಹಿ ಸೈನಿಕರು ಈ ದಾಳಿಯಿಂದ ಭಯಪಟ್ಟು, ಹೆಚ್ಚು ಯೋಚಿಸದೇ ರಣರಂಗವನ್ನು ತೊರೆದು ಪರಾರಿಯಾದರು.

ಆದಿಲಶಾಹಿ ನಗರಗಳನ್ನು ಐನುಲ್‌ಮುಲ್ಕನು ವಶಪಡಿಸಿಕೊಳ್ಳುವುದು :

ಇಬ್ರಾಹಿಮು ಆದಿಲಶಾಹನು ಬಿಜಾಪುರ ತಲುಪಿದೊಡನೆ ಕೋಟೆಯನ್ನು ಮುಚ್ಚಲಾಯಿತು. ಆತನ ರಾಜಲಾಂಛನ, ಆನೆ, ತೋಪುಖಾನೆ ಮತ್ತು ರಾಜನ ಇತರ ಸಾಮಗ್ರಿಗಳು ಐನುಲ್‌ಮುಲ್ಕನ ವಶವಾದವು. ಆದಿಲಶಾಹಿ ಆಡಳಿತದಲ್ಲಿ ಕೋಲಾಹಲ ಉಂಟಾಯಿತು. ಐನುಲ್‌ಮುಲ್ಕನು ಬಿಜಾಪುರದಿಂದ ಎರಡು ಹರದಾರಿ

ದೂರದಲ್ಲಿರುವ ತೋದಾದಲ್ಲಿ ತಂಗಿ, ಇಬ್ರಾಹಿಮ ಆದಿಲಶಾಹನ ನಗರಗಳನ್ನು ವಶಪಡಿಸಿಕೊಂಡನು. ಐನುಲ್‌ಮುಲ್ಕನ ಸೈನಿಕರು ಸಗರದಿಂದ ಹೊರಕ್ಕೆ ಬಂದು ಜನರಿಗೆ ನಾನಾ ವಿಧದ ತೊಂದರೆಗಳನ್ನು ಕೊಡುತ್ತಿದ್ದರು. ಈ ಸೈನಿಕರು ಆಹಾರಧಾನ್ಯ ಮತ್ತಿತರ ವಸ್ತುಗಳನ್ನು ಕಸಿದುಕೊಂಡು ನಿವಾಸಿಗಳು ಒಳಗೆ ಪ್ರವೇಶಿಸದಂತೆ ತಡೆಯುತ್ತಿದ್ದರು.

ರಾಮರಾಜನಿಂದ ನೆರವು :

ಇಬ್ರಾಹಿಮ ಆದಿಲಶಾಹನು ತನ್ನನ್ನು ರಕ್ಷಿಸಿಕೊಳ್ಳುವದಕ್ಕಾಗಿ ಅನಿವಾರ್ಯವಾಗಿ ರಾಮರಾಜನಿಂದ ನೆರವನ್ನು ಬಯಸಿ. ಆರು ಲಕ್ಷ ಹೋನುಗಳನ್ನು ರಾಮರಾಜನ ಬಳಿ ಕಳುಹಿಸಿಕೊಟ್ಟನು. ಇಬ್ರಾಹಿಮ ಆದಿಲಶಾಹನ ಸಹಾಯಕ್ಕಾಗಿ ರಾಮರಾಜನು ತನ್ನ ಸಹೋದರ ತೆಂಕನಾದ್ರಿಯ ನೇತೃತ್ವದಲ್ಲಿ ಒಂದು ಪ್ರಬಲ ಸೈನ್ಯವನ್ನು ಕಳುಹಿಸಿಕೊಟ್ಟನು. ಸೈಫ ಐನುಲ್‌ಮುಲ್ಕನು ಅಸದ್‌ಖಾನ ಲಾರಿಯ ಯುದ್ಧದ ನೀತಿಯನ್ನು ಅನುಸರಿಸಿ, ಬಿಜಾಪುರದ ಮೇಲೆ ರಾತ್ರಿಯ ಸಮಯ ದಾಳಿ ಮಾಡಬೇಕೆಂದುಕೊಂಡನು. ತೆಂಕನಾದ್ರಿಗೆ ಆತನ ಉಪಾಯ ತಿಳಿದು, ತನ್ನ ಸೈನ್ಯದ ಪ್ರತಿಯೊಬ್ಬ ಸೈನಿಕನಿಗೆ ಆತ್ಮವಿಶ್ವಾಸ ಮತ್ತು ಮುಂಜಾಗರೂಕತೆಯಿಂದ ತಮ್ಮ ಕರ್ತವ್ಯ ನಿರ್ವಹಿಸಲು ಬೋಧಿಸಿದನು.

ರಕ್ತರಾತ್ರಿ :

ಎರಡೂವರೆ ಗಜ ಉದ್ದದ ಕಟ್ಟಿಗೆಯ ತುಂಡಿಗೆ ಬಟ್ಟೆಯನ್ನು ಸುತ್ತಿ, ಅದನ್ನು ಎಣ್ಣೆಯಲ್ಲಿ ಅದ್ದಿಡಬೇಕು, ಗುಲ್ಲು-ಗದ್ದಲಗಳ ಸದ್ದು ಕೇಳಿದೊಡನೆ ಎಲ್ಲ ಪಂಜುಗಳನ್ನು ಬೆಳಗಿಸಬೇಕೆಂದು ತೆಂಕನಾದ್ರಿಯು ಪ್ರತಿಯೊಬ್ಬ ಸೈನಿಕನಿಗೆ ಆಜ್ಞೆ ಮಾಡಿದನು. ಸೈಫ ಐನುಲ್‌ಮುಲ್ಕನಿಗೆ ಅವರ ಈ ಉಪಾಯವು ಗೊತ್ತಿರಲಿಲ್ಲ. ಆತನು ತನ್ನ ಸೈನ್ಯದಿಂದ ಆಯ್ದ ಎರಡು ಸಾವಿರ ಸೈನಿಕರನ್ನು ತನ್ನೊಡನೆ ಕರೆದುಕೊಂಡು ಸಲಾಬತ್‌ಖಾನನೊಡನೆ ರಕ್ತರಾತ್ರಿ ಮಾಡುವ ಸಿದ್ಧತೆಯಲ್ಲಿ ತೊಡಗಿದನು. ಬಿಜಾಪುರದಿಂದ ಮೂರು ಹರದಾರಿ ದೂರ ತಲುಪಿದೊಡನೆ ರಾತ್ರಿಯ ಅಂಧಕಾರದಲ್ಲಿ ಆಕ್ರಮಣ ಮಾಡಿದನು. ಅವರು ಶತ್ರುಗಳ ಸೈನ್ಯದತ್ತ ನಿಧಾನವಾಗಿ ತಲುಪಿದೊಡನೆ ಎಲ್ಲ ಸೈನಿಕರು ಮೊದಲೇ ಯೋಜಿಸಿದ ಉಪಾಯದಂತೆ ಪಂಜುಗಳನ್ನು ಬೆಳಗಿಸಿ ರಾತ್ರಿಯನ್ನು ಹಗಲು ಮಾಡಿದರು.

ಸೈಫ ಐನುಲ್‌ಮುಲ್ಕನ ವ್ಯಾಕುಲತೆ :

ವಿಜಯನಗರದ ಸೈನಿಕರು ಶತ್ರುಗಳನ್ನು ನಾಲ್ಕೂ ಕಡೆಯಿಂದ ಸುತ್ತುವರೆದು ದಾಳಿ ಮಾಡಿದರು. ಕಲ್ಲು, ಕಟ್ಟಿಗೆ, ಬಾಣ-ತುಪಂಗ ಮತ್ತಿತರ ಆಯುಧಗಳಿಂದ ಹೊಡೆದು ವೈರಿಗಳ ಅಗಣಿತ ಸೈನಿಕರನ್ನು ಮೃತ್ಯುವಿನ ಆಲಿಂಗನಕ್ಕೆ ಒಪ್ಪಿಸಿದರು.

ಸೈಫ ಐನುಲ್‌ಮುಲ್ಕ ಮತ್ತು ಸಲಾಬತ್‌ಖಾನರು ಚಿಂತಾಕ್ರಾಂತರಾದರು. ಅವರು ಬಹಳ ಪರಿಶ್ರಮದಿಂದ ಈ ಕಷ್ಟದಿಂದ ಹೊರ ಬಂದರು ಹಾಗೂ ಪಾದಗಳನ್ನು ತಲೆಯ ಮೇಲಿಟ್ಟುಕೊಂಡು ಓಡಿಹೋದರು. ಈ ಗೊಂದಲದಲ್ಲಿ ತಮ್ಮ ಸೈನ್ಯದ ನೆಲೆಯ ಮಾರ್ಗವನ್ನು ಮರೆತು, ಇನ್ನೊಂದೆಡೆ ಹೊರಟು ಪಾರಾದರು. ಸೈಫ ಐನುಲ್‌ಮುಲ್ಕನ ಬಾಕಿ ಉಳಿದ ಸೈನಿಕರ ಅವಸ್ಥೆಯೂ ಇದೇ ತೆರನಾಗಿ ಗೊಂದಲಮಯವಾಗಿ, ದಾರಿ ಮರೆತು ಅತ್ತಿತ್ತ ಚೆದರಿಹೋದರು.

ಸೈಫ ಐನುಲ್‌ಮುಲ್ಕನ ಪರಾರಿ :

ರಾತ್ರಿಯ ಮೂರು ಪ್ರಹರಗಳು ಕಳೆದರೂ ಐನುಲ್‌ಮುಲ್ಕನ ಯಾವ ಸಮಾಚಾರವೂ ತಿಳಿಯದಂತಾಗಲು ಆತನು ಸತ್ತು ಹೋಗಿರುವ ಸುದ್ದಿ ಎಲ್ಲೆಡೆ ಹರಡಿತು. ಆತನ ಸೈನಿಕರೆಲ್ಲ ಗಾಬರಿಯಾಗಿ, ನಿರಾಸೆಯಿಂದ ಅತ್ತಿತ್ತ ಚಲ್ಲಾಪಿಲ್ಲಿಯಾಗಿ ಹೋದರು. ಬೆಳಕು ಹರಿದ ನಂತರ ಐನುಲ್‌ಮುಲ್ಕನು ತನ್ನ ಸೈನ್ಯವು ತಂಗಿರುವ ಸ್ಥಳದತ್ತ ತಲುಪಿದನು, ಆದರೆ ಅಲ್ಲೇನಿದೆ, ಎಲ್ಲ ಸೈನಿಕರೂ ಹೊರಟು ಹೋಗಿದ್ದರು. ಅನಿವಾರ್ಯವಾಗಿ ಐನುಲ್‌ಮುಲ್ಕನು ಪರಾರಿಯಾಗುವ ದಾರಿಯನ್ನು ಆಯ್ದುಕೊಂಡನು. ಮಾನ್‌ದ ಮಾರ್ಗವಾಗಿ ನಿಜಾಮಶಾಹಿ ಪ್ರದೇಶದತ್ತ ಹೊರಟನು. ಆತನೊಂದಿಗೆ ಇನ್ನೂರು ಸೈನಿಕರು ಯಾವದೋ ವಿಧದಿಂದ ಬಂದು ಸೇರಿಕೊಂಡಿದ್ದರು. ಐನುಲ್‌ಮುಲ್ಕನ ಸ್ಥಿತಿಯನ್ನು ನಿಜಾಮಶಾಹಿ ಚರಿತ್ರೆಯನ್ನು ವಿವರಿಸುವಾಗ ಮುಂದೆ ಉಲ್ಲೇಖಿಸಲಾಗಿದೆ.

ಇಬ್ರಾಹಿಮ ಆದಿಲಶಾಹನು ರೋಗಪೀಡಿತನಾಗುವುದು :

ಇದೇ ಕಾಲದಲ್ಲಿ ಇಬ್ರಾಹಿಮ ಆದಿಲಶಾಹನು ವಿವಿಧ ರೋಗಗಳಿಂದ ಪೀಡಿತನಾದನು. ಮೂಲವ್ಯಾಧಿ, ಕೀಲುಗಳ ಸವೆಯುವಿಕೆ, ತಲೆಶೂಲೆ ಹೀಗೆ ಹಲವು ವ್ಯಾಧಿಗಳಿಗೆ ಬಲಿಯಾದನು. ಬಾದಶಹನು ತನ್ನ ರೋಗಗಳಿಗೆ ಹಲವಾರು ವೈದ್ಯರಿಂದ ಚಿಕಿತ್ಸೆ ಪಡೆದನು, ಆದರೆ ಪರಿಣಾಮಕಾರಿಯಾಗಲಿಲ್ಲ. ನಿರಾಸೆಯಿಂದ ವೈದ್ಯರು ಮತ್ತು ಹಕೀಮರನ್ನು ವಧಿಸಿಬಿಟ್ಟನು. ಈ ಪರಿಸ್ಥಿತಿಯು ಎಲ್ಲಿಗೆ ಮುಂದುವರೆಯಿತೆಂದರೆ, ಬಿಜಾಪುರದ ಎಲ್ಲ ವೈದ್ಯರು ತಲೆಮರೆಸಿಕೊಂಡು ವಲಸೆ ಹೋದರು, ಔಷಧಿ ಮಾರುವ ಅಂಗಡಿಯವರು ತಮ್ಮ ಅಂಗಡಿಗಳನ್ನು ಮುಚ್ಚಿಬಿಟ್ಟರು.

ಮೃತ್ಯು :

ಇಬ್ರಾಹಿಮ ಆದಿಲಶಾಹನು ಎರಡು ವರ್ಷಗಳ ಕಾಲ ರೋಗಪೀಡಿತನಾಗಿದ್ದನು. ಆತನ ಆರೋಗ್ಯದ ಪರಿಸ್ಥಿತಿಯು ಕ್ರಮೇಣವಾಗಿ ಕುಸಿಯತೊಡಗಿತು. ಕೊನೆಗೆ ಹಿಜರಿಶಕೆ ೯೫೬ರಲ್ಲಿ ಅಂತಿಮ ಪ್ರಯಾಣವನ್ನು ಕೈಗೊಂಡನು. ಗೋಗಿ ಕಸಬಾದ ಶೇಖ

ಹಬೀಬ ಹೈದರ ಪಹಲ್ವಿಯ ಆವರಣದಲ್ಲಿ, ತಂದೆ ಮತ್ತು ತಾತನ ಬದಿಯಲ್ಲಿ ಇಬ್ರಾಹಿಮ ಆದಿಲಶಾಹನನ್ನು ದಫನ ಮಾಡಲಾಯಿತು.

ಸಂತಾನ :

ಇಬ್ರಾಹಿಮನ ಸಂತಾನವು ಅಧಿಕ ಸಂಖ್ಯೆಯಲ್ಲಿರಲಿಲ್ಲ. ಕೇವಲ ಎರಡು ಗಂಡು ಮಕ್ಕಳು ಮತ್ತು ಎರಡು ಹೆಣ್ಣು ಮಕ್ಕಳನ್ನು ತನ್ನ ಜ್ಞಾಪಕಾರ್ಥ ಉಳಿಸಿದ್ದನು. ಗಂಡುಮಕ್ಕಳ ಹೆಸರು ರಾಜಕುಮಾರ ಅಲಿ ಹಾಗೂ ರಾಜಕುಮಾರ ಥಮಾಸ್ಪ. ಅಲಿಯು ತಂದೆಯ ವಾರಸುದಾರನಾದನು, ಥಮಾಸ್ಪನು ಆದಿಲಶಾಹಿ ಅರಸೊತ್ತಿಗೆಯ ಪ್ರಖ್ಯಾತ ಅರಸ ಇಬ್ರಾಹಿಮ ಆದಿಲಶಾಹ ಸಾನಿಯ ತಂದೆಯಾಗಿ ಹೆಸರು ಪಡೆದನು. ಪುತ್ರಿಯರ ಹೆಸರು ಬಾನಿ ಬೀಬೀ ಮತ್ತು ಹದಿಯಾ ಸುಲ್ತಾನ ಎಂದಿತ್ತು. ಬಾನಿ ಬೀಬಿಯ ವಿವಾಹವು ಅಲಿ ಬರೀದನೊಡನೆ ಹಾಗೂ ಹದಿಯಾ ಸುಲ್ತಾನಳ ವಿವಾಹವು ಮುರ್ತುಜಾ ನಿಜಾಮಶಾಹನೊಡನೆ ನೆರವೇರಿತು.

ಇಬ್ರಾಹಿಮ ಆದಿಲಶಾಹನು ಇಪ್ಪತ್ನಾಲ್ಕು ವರ್ಷಗಳಿಗೂ ಹೆಚ್ಚು ಕಾಲ ಆಡಳಿತ ನಡೆಸಿದನು.

■

*

೫. ಇಬ್ರಾಹಿಮ ಆದಿಲಶಾಹನ ಮಗ ಅಬುಅಲ್ ಮುಜಫ್ಫರ್ ಅಲಿ ಆದಿಲಶಾಹ

ಉಲ್ಲಾಸದ ಸ್ವಭಾವ :

ಕೃತಿಯ ಲೇಖಕ ಹೇಳುವುದೇನೆಂದರೆ, ಅಲಿ ಆದಿಲಶಾಹನು ಚಿಕ್ಕಂದಿನಿಂದಲೇ ತುಂಬ ಬುದ್ಧಿವಂತನಾಗಿದ್ದನು. ಆತನ ಸ್ವಭಾವದಲ್ಲಿ ವಿನೋದ, ಉಲ್ಲಾಸ ಮತ್ತು ತೀಕ್ಷ್ಣಮತಿಯನ್ನು ಅರೆದು ತುಂಬಲಾಗಿತ್ತು. ಆತನು ಪ್ರಾಯಕ್ಕೆ ಬಂದ ತರುವಾಯ, ಒಂದು ದಿನ ಆತನ ತಂದೆ ಇಬ್ರಾಹಿಮ ಆದಿಲಶಾಹನು ರಾಜಸಭೆಯಲ್ಲಿ ಅಲ್ಲಾಹನನ್ನು ಕೃತಜ್ಞತೆಯಿಂದ ಸ್ಮರಿಸುತ್ತ, ಅಲ್ಲಾಹನ ಅನುಗ್ರಹದಿಂದಾಗಿ, ತಾತಮುತ್ತಾತರ ಧರ್ಮ ತ್ಯಜಿಸಿ ಹಜರತ್ ಇಮಾಮ್ ಅಜಾಮರ ಧರ್ಮ ಅನುಸರಿಸಲು ಸಾಧ್ಯವಾಗಿದೆ ಹಾಗೂ ಶಿಯಾ ಧರ್ಮದ ರೀತಿ-ರಿವಾಜುಗಳನ್ನು ಹೇಳಹೆಸರಿಲ್ಲದಂತೆ ನಿರ್ನಾಮಗೊಳಿಸಲಾಗಿದೆ ಎಂದು ಹೇಳಿದನು.

ಧಾರ್ಮಿಕ ಸಮರಗೀತೆ :

ಅಲಿ ಆದಿಲಶಾಹನು ಈ ಸಭೆಯಲ್ಲಿ ಉಪಸ್ಥಿತನಿದ್ದನು. ತನ್ನ ತಂದೆಯ ಮಾತನ್ನು ಆಲಿಸಿದ ಅಲಿ ಆದಿಲಶಾಹನ ಚುರುಕುಬುದ್ಧಿಯು ಆತನಿಗೆ ಸುಮ್ಮನಿರಲು ಬಿಡಲಿಲ್ಲ. ಕೂಡಲೇ – "ಪೂರ್ವಜರ ಧರ್ಮವನ್ನು ತ್ಯಜಿಸುವುದು ಉತ್ತಮ ನಡತೆಯಾದರೆ, ಎಲ್ಲ ಮಕ್ಕಳೂ ಇಂತಹ ನಡವಳಿಕೆಯನ್ನು ಅನುಸರಿಸಬೇಕು" ಎಂದು ಹೇಳಿದನು. ಇಬ್ರಾಹಿಮನಿಗೆ ಈ ಉತ್ತರದಿಂದ ಬಹಳ ಕೋಪ ಬಂದಿತು. ಮಗನಿಗೆ, "ನಿನ್ನ ಧರ್ಮ ಯಾವದು?" ಎಂದು ಕೇಳಿದನು. ಅಲಿಯು, "ಸದ್ಯಕ್ಕಂತೂ ತಮ್ಮ ಧರ್ಮವೇ ನನ್ನ ಧರ್ಮವಾಗಿದೆ. ಮುಂದೆ ಏನಾಗುವದೋ ಅಲ್ಲಾಹನಿಗೆ ಗೊತ್ತು" ಎಂದು ಉತ್ತರಿಸಿದನು. ಈ ಸಂವಾದದ ಪರಿಣಾಮವೇನಾಯಿತೆಂದರೆ, ಅಲಿಯು ಶಿಯಾ ಧರ್ಮ ಅನುಸರಿಸುತ್ತಿದ್ದಾನೆ. ಇದು ಆತನ ಗುರು ಉಸ್ತಾದ ಖ್ವಾಜಾ ಇನಾಯಿತುಲ್ಲಾ

ನೀಡುತ್ತಿರುವ ಶಿಕ್ಷಣದ ಪ್ರಭಾವ ಎಂದು ಭಾವಿಸಿದ ಇಬ್ರಾಹಿಮನು ಧಾರ್ಮಿಕ ಆದೇಶ ಪಡೆದು, ಖ್ವಾಜಾ ಶಿರಾಜಿಯ ವಧೆ ಮಾಡಿಸಿಬಿಟ್ಟನು.

ರಾಜಕುಮಾರ ಅಲಿಯು ಹದಿಹರೆಯದ ವಯಸ್ಸಿಗೆ ಬಂದಾಗ, 'ಬನ್‌ಜಾರ್' ಹೆಸರಿನಿಂದ ಪರಿಚಿತನಾದ ಮುಲ್ಲಾ ಫತೇಉಲ್ಲಾ ಶಿರಾಜಿ ಆತನ ಗುರುವಾದನು. ಆಕಸ್ಮಿಕವೆಂಬಂತೆ ಆತನು ಇಮಾಮಿ ಧರ್ಮದ ಅನುಯಾಯಿಯಾಗಿದ್ದನು. ಆದರೆ ಕಾಲೋಚಿತವಾಗಿ ಹನ್‌ಫಿ ಧರ್ಮಕ್ಕೆ ಬದ್ಧನಾಗಿದ್ದನು. ಈ ಕಾರಣದಿಂದ ಅಲಿ ಆದಿಲಶಹನು ಶಿರಾಜಿಯನ್ನು ಇಷ್ಟಪಡುತ್ತಿದ್ದನು. ಆತನಿಗೆ ಬಹಳ ಗೌರವ ನೀಡುತ್ತಿದ್ದನು.

ಇಬ್ರಾಹಿಮ ಆದಿಲಶಾಹನ ವಿರುದ್ಧ ಪಿತೂರಿ :

ಇಬ್ರಾಹಿಮ ಆದಿಲಶಾಹನ ಸೇವಕರ ಒಂದು ಪಂಗಡದವರು ತಮ್ಮ ಒಡೆಯನ ವಿರುದ್ಧ ಪಿತೂರಿ ನಡೆಸಿ, ಬಾದಶಹನ ಅಡುಗೆಯವನ ಸಹಾಯದಿಂದ ಇಬ್ರಾಹಿಮನಿಗೆ ವಿಷವುಣ್ಣಿಸಿ, ಆತನ ಸ್ಥಳದಲ್ಲಿ ಆತನ ಸಹೋದರ ಅಬ್ದುಲ್ಲಾನನ್ನು ಸಿಂಹಾಸನದ ಮೇಲೆ ಕೂಡಿಸಿ, ಶಿಯಾ ಧರ್ಮವನ್ನು ಪುನರುತ್ಥಾನಗೊಳಿಸುವ ಯೋಜನೆ ಮಾಡಿದ್ದರು. ಅಡುಗೆಯವನು ಸುನ್ನೀ ಮತದ ಕಟ್ಟಾ ಅನುವರ್ತಿಯಾಗಿದ್ದನು. ಆತನು ಈ ಕುತಂತ್ರದಲ್ಲಿ ಭಾಗಿಯಾಗಲಿಲ್ಲ. ಇಬ್ರಾಹಿಮನಿಗೆ ಕುತಂತ್ರದ ವಿಚಾರ ತಿಳಿದು, ಎಲ್ಲ ಅಪರಾಧಿಗಳಿಗೆ ತಕ್ಕ ಶಿಕ್ಷೆ ವಿಧಿಸಿದನು.

ರಾಜಕುಮಾರ ಅಬ್ದುಲ್ಲಾನ ಪರಾರಿ:

ತನ್ನ ಸಹೋದರ ಅಬ್ದುಲ್ಲಾ ಅಪರಾಧಿಯಲ್ಲ ಎನ್ನುವುದು ಇಬ್ರಾಹಿಮ ಆದಿಲಶಾಹನಿಗೆ ಚೆನ್ನಾಗಿ ತಿಳಿದಿತ್ತು. ಆದರೂ ಆತನನ್ನು ಸಂಶಯದ ದೃಷ್ಟಿಯಿಂದ ನೋಡುತ್ತಿದ್ದನು. ಬಾದಶಹನ ಸಂಶಯದ ದೃಷ್ಟಿಯನ್ನು ಅಪಾಯದ ಮುನ್ಸೂಚನೆ ಎಂದು ಭಾವಿಸಿದ ಅಬ್ದುಲ್ಲಾ, ಇಬ್ರಾಹಿಮನು ಪನಾಲಾ ಕಿಲ್ಲೆಗೆ ವಾಯುವಿಹಾರಕ್ಕೆ ಹೊರಟ ಸಮಯ ಸಾಧಿಸಿ, ಒಂದು ದೊಡ್ಡ ಮೊತ್ತವನ್ನು ತನ್ನೊಡನೆ ತೆಗೆದುಕೊಂಡು ಗೋವಾ ಬಂದರಿನೆಡೆಗೆ ಪರಾರಿಯಾದನು.

ವಿವೇಚನೆಯುಳ್ಳ ಉಪಾಯ :

ಅಲಿ ಆದಿಲಶಾಹನು ಆಗಿನ್ನೂ ಯೌವನದ ಹೊಸ್ತಿಲಲ್ಲಿ ಕಾಲಿಟ್ಟ ಸಮಯ, ಇಬ್ರಾಹಿಮನಿಗೆ ಆತನಿಂದಲೂ ಸಂಶಯದ ಭಯ ಕಾಡಿತು. ಆತನನ್ನು ತನ್ನ ಗುರುವಿನ ಜೊತೆಗೆ, ಮಿರಜ ಕೋಟೆಗೆ ಕಳುಹಿಸಿಕೊಟ್ಟನು. ಕಿಲ್ಲೆಯ ಕಾವಲುದಾರನಾದ ಸಿಕಂದರಖಾನನಿಗೆ ರಾಜಕುಮಾರನನ್ನು ರಕ್ಷಣೆ ಮಾಡಲು ಹಾಗೂ ಶಿಯಾಗಳೊಡನೆ ಭೇಟಿಯಾಗದಂತೆ ನೋಡಿಕೊಳ್ಳಲು ಆಜ್ಞೆಯಿತ್ತನು. ಸುದೈವವಶಾತ್, ಸಿಕಂದರಖಾನ ಮತ್ತು ಆತನ ಅಳಿಯ ಕಾಮಿಲಖಾನ ದಖನಿ ಈರ್ವರೂ ಶಿಯಾ ಧರ್ಮವನ್ನು

ಅನುಸರಿಸುವವರಾಗಿದ್ದರು. ಅವರಿಬ್ಬರೂ ಅಲಿ ಆದಿಲನ ಸೇವೆಯನ್ನು ಮನಃಪೂರ್ವಕ ಮಾಡಿದರು. ಎಲ್ಲ ರೀತಿಯಿಂದ ಆತನು ಸಂತೋಷವಾಗಿರುವಂತೆ ನೋಡಿಕೊಳ್ಳತೊಡಗಿದರು.

ಅಲಿ ಆದಿಲನ ಶಿಯಾಧರ್ಮದ ಬಗ್ಗೆ ಮೆಚ್ಚಿಗೆ :

ಇಬ್ರಾಹಿಮ ಆದಿಲಶಾಹನು ರೋಗಗ್ರಸ್ತನಾದಾಗ, ರೋಗವು ಬಾದಶಹನ ಪ್ರಾಣ ತೆಗೆಯದೇ ಬಿಡದು ಎಂದು ಎಲ್ಲರೂ ಭಾವಿಸಿದ್ದರು. ಆ ಸಮಯದಲ್ಲಿ ಅಲಿ ಆದಿಲಶಾಹನು ನಮಾಜಿನ ಸಮಯದಲ್ಲಿ ಪೀಠದ ಮೇಲೆ ಸ್ವತಃ ನಿಂತು ಶಿಯಾ ಸಂಪ್ರದಾಯದ ಪ್ರಕಾರ ಆಜಾನ ಕೊಡುತ್ತಿದ್ದನು. ರಾಜಕುಮಾರನು ಪೀಠದ ಮೇಲೆ ಯಾವುದೇ ಕಾರಣದಿಂದ ಹೋಗಲಾಗದಿದ್ದಲ್ಲಿ, ಶಿಯಾ ಸಂಪ್ರದಾಯದಂತೆ ಅಜಾನ ಕೊಡುವ ಕೆಲಸವನ್ನು ನಿರ್ವಹಿಸಲು ಕಾಮಿಲಖಾನನಿಗೆ ಸೂಚನೆ ಕೊಡುತ್ತಿದ್ದನು.

ರಾಜಕುಮಾರ ಥಮಾಸ್ಪನ ಶಿಯಾ ಅನುಸರಣೆ :

ಇಬ್ರಾಹಿಮ ಆದಿಲಶಾಹನು ರೋಗಪೀಡಿತನಾದ ಸಮಯದಲ್ಲಿಯೇ, ರಾಜಕುಮಾರ ಅಲಿಯು ಮಾಡುತ್ತಿರುವ ಕೆಲಸಗಳ ಬಗೆಗೆ ತಿಳಿದುಬಂದಿತ್ತು. ಆತನಿಗೆ ಅಲಿಯ ಬಗ್ಗೆ ಅತೀವ ಬೇಸರವಾಯಿತು. ರಾಜಕುಮಾರ ಥಮಾಸ್ಪನನ್ನು ತನ್ನ ಉತ್ತರಾಧಿಕಾರಿಯನ್ನಾಗಿ ಮಾಡಿಕೊಳ್ಳುವ ನಿರ್ಧಾರ ಮಾಡಿದನು. ಆದರೆ, ಥಮಾಸ್ಪನೂ ಸಹ ತನ್ನ ಸಹೋದರನಂತೆ ಶಿಯಾ ಧರ್ಮದ ಸಂಪ್ರದಾಯವನ್ನು ಪಾಲಿಸುತ್ತಿರುವ ವದಂತಿ ಬಂದಿತು. ಇದನ್ನು ಕೇಳಿ ಮತ್ತಿಷ್ಟು ಆಘಾತಗೊಂಡ ಇಬ್ರಾಹಿಮ ಆದಿಲಶಾಹನು ಅತ್ಯಂತ ವ್ಯಥೆಯಿಂದ, “ತಿಳಿದೂ ತಿಳಿದೂ ಒಬ್ಬ ಶಿಯಾನ ವಶದಲ್ಲಿ ಅಲ್ಲಾಹನು ಸೃಷ್ಟಿಸಿದ ಮಾನವಕುಲದ ತೋಟವನ್ನು ಹೇಗೆ ಕೊಡಲಿ” ಎಂದು ಉದ್ಗರಿಸಿದನು.

ಅಲಿ ಆದಿಲಶಾಹನ ಪಟ್ಟಾಭಿಷೇಕದ ಸಿದ್ಧತೆ:

ಇಬ್ರಾಹಿಮ ಆದಿಲಶಾಹನು ಅಲಿ ಆದಿಲಶಹನಂತೆ ಥಮಾಸ್ಪನನ್ನು ಸಹ ನಲ್ಗಾವ ಕಿಲ್ಲೆಯಲ್ಲಿ ಬಂಧಿಸಿಟ್ಟನು. ರಾಜ್ಯದ ಕಾರ್ಯಭಾರಗಳನ್ನು ಅಲ್ಲಾಹನ ಭರವಸೆಯ ಮೇಲೆ ಬಿಟ್ಟುಬಿಟ್ಟನು. ಇಬ್ರಾಹಿಮನು ಬದುಕುವ ಭರವಸೆಯು ಕಡಿಮೆಯಾದಾಗ, ನಗರದ ಶ್ರೇಷ್ಠಿಗಳು ಹಾಗೂ ಆಸ್ಥಾನದ ಪಂಡಿತರು, ಕಂದಾಯ ವಸೂಲಿ ಮಾಡುತ್ತಲಿದ್ದ ಕಿಶ್ವರಖಾನನೊಡನೆ ದೊಡ್ಡ ಮೊತ್ತದ ಹಣವನ್ನು ಅಲಿ ಆದಿಲಶಹನ ಬಳಿ ಕಳುಹಿಸಿಕೊಟ್ಟರು. ಕಿಶ್ವರಖಾನನು ಮಿರಜ್ ಕಿಲ್ಲೆಯ ಕಿಲ್ಲೆದಾರ ಸಿಕಂದರಖಾನನಿಗೆ, “ಇಬ್ರಾಹಿಮ ಆದಿಲಶಾಹನ ಜೀವನವು ಅಂತಿಮಗುರಿ ತಲುಪುತ್ತಿದೆ. ಇಂದು ಅಥವಾ ನಾಳೆ ಇಬ್ರಾಹಿಮನ ಜೀವನವು ಕೊನೆಗಾಣಬಹುದು. ಬಾದಶಹನ ಆಪ್ತಸೇವಕರು ಮತ್ತು ನಲಗಾವ್ ಕೋಟೆಯ ಸುತ್ತುಮುತ್ತಲಿನ ಜಹಗೀರದಾರರು ರಾಜಕುಮಾರ

ಥಮಾಸ್ಪನೊಡನೆ ತಂತ್ರ ಕುತಂತ್ರಗಳನ್ನು ಮಾಡಿ ಕೋಲಾಹಲವನ್ನುಂಟು ಮಾಡುವ ಅಪಾಯ ಕಂಡುಬರುತ್ತಿದೆ. ಧವಳಛತ್ರ ಮತ್ತು ಇತರ ರಾಜಲಾಂಛನಗಳೊಡನೆ ರಾಜಕುಮಾರನನ್ನು ಕಳುಹಿಸಿ ಕೊಡಿ. ರಾಜಕುಮಾರನು ಮಿರಜ್ ಕಿಲ್ಲೆಯಲ್ಲಿ ಸದ್ಯಕ್ಕೆ ತಂಗಲಿ ಹಾಗೂ ಅಲ್ಲಿಯ ಜನರು ಮತ್ತು ಆಸುಪಾಸಿನವರು ಒಟ್ಟುಗೂಡಲಿ. ಇಬ್ರಾಹಿಮ ಆದಿಲಶಾಹನ ಮೃತ್ಯುವಿನ ನಂತರ ರಾಜಶೀವಿಯಲ್ಲಿ ರಾಜಕುವಾರನು ರಾಜಧಾನಿಯತ್ತ ತೆರಳಲಿ" ಎಂಬ ಸಂದೇಶ ರವಾನಿಸಿದನು.

ಅಲಿ ಆದಿಲಶಾಹ ಮಿರಜ ಕಿಲ್ಲೆಯತ್ತ ತೆರಳುವುದು :

ಸಿಕಂದರಖಾನನಿಗೆ ಕಿಶ್ವರಖಾನನ ಸಲಹೆಯು ಸಮಂಜಸವೆನ್ನಿಸಿತು. ರಾಜಲಾಂಛನಗಳೊಡನೆ, ರಾಜಕುಮಾರ ಅಲಿ ಆದಿಲಶಾಹನನ್ನು ತನ್ನ ಅಳಿಯ ಕಾಮಿಲಖಾನ ದಖನಿಯೊಡನೆ ಕಿಲ್ಲೆಯಿಂದ ಕಳುಹಿಸಿಕೊಟ್ಟನು. ಕಿಶ್ವರಖಾನನು ಅತಿವೇಗವಾಗಿ ರಾಜಕುಮಾರನ ಸೇವೆಯಲ್ಲಿ ಹಾಜರಾದನು. ತನ್ನೊಡನೆ ತಂದ ರೂಪಾಯಿಗಳನ್ನು ರಾಜಕುಮಾರನ ವಶಕ್ಕೆ ಕೊಟ್ಟನು. ಅಲಿ ಆದಿಲನು ಕಿಶ್ವರಖಾನನಿಗೆ ದಂಡನಾಯಕ ಹುದ್ದೆಗೆ ನಿಯುಕ್ತಿಗೊಳಿಸಿದನು. ಕಿಶ್ವರನು ತುಂಬ ಜಾಗರೂಕತೆ ಮತ್ತು ಚತುರತೆಯಿಂದ ರಾಜಕುಮಾರನ ಸುತ್ತ ಜನರನ್ನು ಜಮಾಯಿಸುವುದರಲ್ಲಿ ನಿರತನಾದನು.

ಸೈನ್ಯದ ಬರುವಿಕೆ :

ಅಲಿ ಆದಿಲನು ಕಮಾಲಖಾನ ದಖನಿಗೆ ಸರದಾರರ ಮುಖಂಡ ಹುದ್ದೆಯನ್ನು ನೀಡಿದನು. ಅಲಿ ಆದಿಲನು ಮಿರಜ ಕಿಲ್ಲೆಯಿಂದ ಬರುತ್ತಿರುವ ವಿಷಯವು ನಾಲ್ಕೂ ಕಡೆ ಹಬ್ಬಿತು. ಸುತ್ತಮುತ್ತಲಿನ ಸೈನ್ಯದ ತಂಡಗಳು ಒಂದಾದ ನಂತರ ಮತ್ತೊಂದರಂತೆ, ಆದಿಲನ ಸುತ್ತ ಸೇರತೊಡತೊಡಗಿದರು. ಆಸ್ಥಾನದ ಮತ್ತು ವಿಶೇಷ ಪಡೆಯಿಂದ ಎಣಿಕೆಗೆ ಬಾರದಷ್ಟು ಸೈನ್ಯವು ರಾಜಧಾನಿಯಿಂದ ಅಲಿ ಆದಿಲನ ಬಳಿ ಬಂದು ತಲುಪಿತು. ಇದೇ ಸಮಯಕ್ಕೆ ಇಬ್ರಾಹಿಮ ಆದಿಲಶಾಹನು ಇಹಲೋಕವನ್ನು ತ್ಯಜಿಸಿದನು. ಅಲಿ ಆದಿಲಶಾಹನು ಶೀಘ್ರವಾಗಿ ಬಿಜಾಪುರ ತಲುಪಿದನು.

ಅಲಿ ಆದಿಲಶಾಹನ ಪಟ್ಟಾಭಿಷೇಕ :

ಅಲಿ ಆದಿಲಶಾಹನು ಬಿಜಾಪುರ ತಲುಪುತ್ತಲೇ ಎಲ್ಲ ಸರದಾರರು ಮತ್ತು ಆಸ್ಥಾನದ ಸದಸ್ಯರು ರಾಜಕುಮಾರನ ಸೇವೆಯಲ್ಲಿ ಉಪಸ್ಥಿತರಾದರು. ಆತನ ಮೇಲೆ ಕಾಣಿಕೆಗಳ ನಿವಾಳಿಕೆ ತೆಗೆಯಲಾಯಿತು. ಬಿಜಾಪುರದಿಂದ ಒಂದು ಹರದಾರಿ ದೂರದಲ್ಲಿರುವ ಕಿಶ್ವರಖಾನನ ತೋಟದಲ್ಲಿ ಕಿರೀಟಧಾರಣೆಯ ವಿಧಿ ಪೂರ್ತಿಗೊಳಿಸಲಾಯಿತು. ನಗರದ ನಾಗರಿಕರು, ಸಯ್ಯದರು ಹಾಗೂ ಖಾಜಿ ಮತ್ತು ಇತರರು ಬಾದಶಹನ ಸೇವೆಯಲ್ಲಿ ಉಪಸ್ಥಿತರಾಗಿ ಅಭಿನಂದನೆಗಳನ್ನು ಸಲ್ಲಿಸಿದರು.

ಶಾಹಪುರ ಖಸ್ಬಾದ ಅಭಿವೃದ್ಧಿ :

ಜ್ಯೋತಿಷಿಗಳು ನಿಗದಿಗೊಳಿಸಿದ ಶುಭಮುಹೂರ್ತದ ಘಳಿಗೆಯಲ್ಲಿ ಅಲಿ ಆದಿಲನು ಬಿಜಾಪುರ ತಲುಪಿದನು ಹಾಗೂ ಸಿಂಹಾಸನಾರೂಢನಾಗಿ ಜನರಿಗೆ ದರ್ಶನ ಕೊಟ್ಟನು. ನಗರದ ಹೊರಗೆ, ಕಿರೀಟಧಾರಣೆಯ ವಿಧಿಯು ನಡೆದ ಸ್ಥಳವನ್ನು ಅಭಿವೃದ್ಧಿಗೊಳಿಸಲಾಯಿತು. ಆ ಸ್ಥಳವನ್ನು "ಶಾಹಪುರ" ಎಂದು ಕರೆಯಲಾಯಿತು. ಅಲಿಯು ತನ್ನ ವಂಶದ ಹಿರಿಯರಾದ ಯೂಸುಫ್ ಆದಿಲಶಾಹ ಮತ್ತು ಇಸ್ಮಾಯಿಲ ಆದಿಲಶಾಹರನ್ನು ಧಾರ್ಮಿಕ ವಿಷಯಗಳಲ್ಲಿ ಅನುಸರಣೆ ಮಾಡಿದನು. ಪಟ್ಟಾಭಿಷೇಕದ ದಿನ, ಹನ್ನೆರಡು ಇಮಾಮರ ಹೆಸರಿನಲ್ಲಿ ಖುತ್ಬಾ ಓದಿದನು. ಮಸೀದೆಗಳಲ್ಲಿ ಕರೆ ನೀಡುವ ಅಜಾನಗಳಲ್ಲಿ "ರಹಮತ್ ವಲಿ ಉಲ್ಲಾ" ಶಬ್ದಗಳನ್ನು ಹೆಚ್ಚಿಸಿದನು.

ಜ್ಞಾನ ಮತ್ತು ಪಾಂಡಿತ್ಯಕ್ಕೆ ಗೌರವ :

ಅಲಿ ಆದಿಲಶಾಹನು, ಮಸೀದೆಗಳಲ್ಲಿ ಹಾಗೂ ಪೇಟೆಗಳಲ್ಲಿ ಯಾವುದೇ ಭಯ ಮತ್ತು ಅಡೆತಡೆಗಳಿಲ್ಲದೆ ತಮ್ಮ ಕೆಲಸ ನಿರ್ವಹಿಸುವುದನ್ನು ನೋಡಿಕೊಳ್ಳುವುದಕ್ಕೆ ಭತ್ತ ನೀಡಿ ಇರಾನಿಗಳನ್ನು ನಿಯಮಿಸಿದನು. ಸಯ್ಯದರಿಗೆ, ಜ್ಞಾನಿಗಳಿಗೆ ಮತ್ತು ಪಂಡಿತರಿಗೆ ಆದರಿಸುತ್ತಿದ್ದನು. ಅವರಿಗೆ ಉನ್ನತ ಹುದ್ದೆಗಳನ್ನು ನೀಡಿದನು. ಅರ್ಹರಾದ ಹಾಗೂ ಉತ್ತಮ ಸಲಹೆಯನ್ನು ನೀಡುವವರನ್ನು ಆಸ್ಥಾನದಲ್ಲಿ ಸೇರಿಸಿಕೊಳ್ಳುವತ್ತ ತನ್ನ ಗಮನ ಕೇಂದ್ರೀಕರಿಸಿದನು. ಈ ರೀತಿಯ ಕಾರ್ಯಾಚರಣೆಯ ಪರಿಣಾಮವೆಂದರೆ, ಬಿಜಾಪುರದಲ್ಲಿ ಇರಾನ, ತುರಾನ ಮತ್ತಿತರ ದೂರ ದೂರದ ಸ್ಥಳಗಳಿಂದ ಶ್ರೇಷ್ಠ ದರ್ಜೆಯ ಜನರು ಬಿಜಾಪುರಕ್ಕೆ ಬಂದು ನೆಲೆಸತೊಡಗಿದರು. ಬಿಜಾಪುರ ನಗರವು ಸ್ವರ್ಗಕ್ಕೆ ಸಮಾನವಾಗಿ ಕಾಣತೊಡಗಿತು.

ದಾನಧರ್ಮ :

ಅಲಿ ಆದಿಲನಿಗೆ ತಂದೆಯ ಮರಣದ ನಂತರ ದೊರೆತ ಹಣವು ಒಂದೂವರೆ ಕೋಟಿ ಹೋನು (ನಾಣ್ಯ)ಗಳಾಗಿತ್ತು. ಕೆಲವೇ ದಿನಗಳಲ್ಲಿ ಈ ಹಣವನ್ನು ಪ್ರಜೆಗಳಿಗೆ ಹಂಚಿಬಿಟ್ಟನು. ಅಲಿ ಆದಿಲನ ದಾನಧರ್ಮ ಮತ್ತು ಹೃದಯವಂತಿಕೆಯ ಅನುಗ್ರಹದ ಹರಿವಾಣವು ಚಿಕ್ಕವರು-ದೊಡ್ಡವರು, ಬಡವರು-ಬಲ್ಲಿದರು ಎಂಬ ಭೇದವೆಣಿಸದೆ ಎಲ್ಲರಿಗೂ ಮೀಸಲಾಗಿತ್ತು. ನಗರದ ಎಲ್ಲ ದೀನದಲಿತರಿಗೆ ಅವಶ್ಯವಿದ್ದ ವಸ್ತುಗಳನ್ನು ನೀಡಿ ಅವರ ಅಗತ್ಯಗಳನ್ನು ಪೂರೈಸಿದನು. ಬಡವರು ಮತ್ತು ಭಿಕ್ಷುಕರು ನಗರದಲ್ಲಿ ಕಣ್ಣಿಗೆ ಬೀಳುತ್ತಿರಲಿಲ್ಲ.

ನ್ಯಾಯ-ನೀತಿ ಪಾಲನೆ ಮತ್ತು ರಾಜ್ಯಾಡಳಿತದ ವಿಸ್ತರಣೆ :

ಅಲಿ ಆದಿಲನು ತನ್ನ ಆಡಳಿತದಲ್ಲಿ ಹಿಂಸೆ ಮತ್ತು ದಬ್ಬಾಳಿಕೆಗಳ ಗುರುತು ಸಹ

ಇರದಂತೆ ನಿರ್ನಾಮಗೊಳಿಸಿಬಿಟ್ಟನು. ರಾಜ್ಯದ ನಾಲ್ಕೂ ಕಡೆಗಳಲ್ಲಿ ಅಲಿಯ ನ್ಯಾಯ ಪರಿಪಾಲನೆಯ ಜಾಗಟೆ ಬಾರಿಸತೊಡಗಿತು. ಅಲಿ ಆದಿಲಶಾಹನು ಜನರ ಮನಸ್ಸನ್ನು ಹೇಗೆ ವಶಪಡಿಸಿಕೊಂಡಿದ್ದನೆಂದರೆ, ಯಾವುದೇ ಪ್ರಯತ್ನವಿಲ್ಲದೆ ಆತನ ರಾಜ್ಯದ ವಿಸ್ತರಣೆಯಾಗತೊಡಗಿತು. ಯುದ್ಧ ಮತ್ತು ಜಗಳಗಳನ್ನು ಅಲಿ ವಿರೋಧಿಸುತ್ತಿದ್ದನು. ಯುದ್ಧ ಮತ್ತು ಗಲಭೆಗಳು, ಮಾನವಕುಲ ಮತ್ತು ಮಾನವೀಯತೆಯ ವಿನಾಶಕ್ಕೆ ದಾರಿ ಎಂದು ತಿಳಿಯುತ್ತಿದ್ದನು. ದಕ್ಷಿಣದ ಅರಸರೊಂದಿಗೆ ಮತ್ತು ಪ್ರಜೆಗಳೊಂದಿಗೆ ಮಧುರ ಬಾಂಧವ್ಯ ಇಟ್ಟುಕೊಂಡಿದ್ದನು. ಆತನು ತನ್ನ ಉತ್ತಮ ಶೈಲಿಯ ಆಡಳಿತದಿಂದ, ರಾಯಚೂರ, ವರಂಗಲ್, ಮುದ್ಗಲ್, ಕಲ್ಯಾಣ, ಸೋಲಾಪುರ, ಅದೋನಿ, ಧಾರವಾಡ ಮತ್ತು ಚಂದ್ರಕೋನಿ ಕಿಲ್ಲೆಗಳನ್ನು ಹಾಗೂ ಅವುಗಳ ಸುತ್ತಲಿನ ಪರ್ಗಣೆ(ಪ್ರದೇಶ)ಗಳನ್ನು ತನ್ನ ವಶಪಡಿಸಿಕೊಂಡಿದ್ದನು. ಯುದ್ಧ ಮತ್ತು ಗಲಭೆಗಳನ್ನು ಮಾಡದೇ ಈ ಕೋಟೆ ಮತ್ತು ಪ್ರದೇಶಗಳು ಅಲಿ ಆದಿಲಶಾಹನ ಅಧೀನಕ್ಕೆ ಒಳಪಟ್ಟವು. ಇವೆಲ್ಲವೂ ಆತನ ಸನ್ನಡತೆಗೆ ದೊರೆತ ಕಾಣಿಕೆಗಳಾಗಿದ್ದವು. ಅಲಿ ಆದಿಲಶಾಹನಿಗಿಂತ ಮೊದಲಿನ ಯಾವ ಮುಸ್ಲಿಮ ಅರಸರ ಆಳ್ವಿಕೆಯಲ್ಲಿಯೂ ಈ ಕೋಟೆಗಳನ್ನು ಜಯಿಸಲು ಸಾಧ್ಯವಾಗಿರಲಿಲ್ಲ.

ಜ್ಞಾನ ಮತ್ತು ಪಾಂಡಿತ್ಯದಲ್ಲಿ ಒಲವು :

ಅಲಿ ಆದಿಲಶಾಹನು ತನ್ನ ಗುರುವಿನಿಂದ ಕಾಫಿಯಾ, ಮುತವಸ್ಸಿತ್ ಮತ್ತು ಇಲ್ಮ-ಎ-ಕಲಾಮ ಬಗ್ಗೆ ಕೆಲವು ಗ್ರಂಥಗಳನ್ನು ಅಧ್ಯಯನ ಮಾಡಿದ್ದನು. ಇತರ ಕ್ಷೇತ್ರಗಳಲ್ಲಿಯೂ ಪಾಂಡಿತ್ಯ ಪಡೆದಿದ್ದನು. ವಿನೋದ ಮತ್ತು ಹಾಸ್ಯಗಳಲ್ಲಿಯೂ ಆತನಿಗೆ ಬಹಳ ಆಸಕ್ತಿ ಇತ್ತು. ಪತ್ರ ಬರೆಯುವ ಕಲೆಯನ್ನು ರೂಢಿಸಿಕೊಂಡಿದ್ದನು. ಉತ್ತಮವಾದ ಶೈಲಿಯಲ್ಲಿ ಸುಂದರವಾಗಿ ಅರಬ್ಬಿ ಲಿಪಿಯಲ್ಲಿ ಸಹ ಬರೆಯುತ್ತಿದ್ದನು. ತನ್ನ ಬರಹದ ಕೆಳಗೆ "ಕುತ್ಬಾ ಅಲಿ ಸೂಫಿ ಖಲಂದರ" ಎಂದು ನಮೂದಿಸುತ್ತಿದ್ದನು.

ಪ್ರೇಮದ ಅಭಿವ್ಯಕ್ತಿ :

ಆತನಿಗೆ ಪ್ರೀತಿಪ್ರೇಮದಲ್ಲಿಯೂ ಬಹಳ ಆಸಕ್ತಿ ಇತ್ತು. ಇತರ ಶಿಕ್ಷಣದೊಂದಿಗೆ ಆತನ ಸಭೆಯಲ್ಲಿ, ಇತರ ಬರಹಗಳ ಮೌಲ್ಯಮಾಪನ ನಡೆಯುತ್ತಿತ್ತು. ಆತನಿಗೆ ಈ ಕವನದ ಸಾಲುಗಳು ಬಹಳ ಇಷ್ಟವಾಗುತ್ತಿದ್ದವು. ಅದನ್ನು ಪುನಃ ಪುನಃ ಓದುತ್ತಿದ್ದನು.

ನಾವು ಮತ್ತು ನಮ್ಮ ಸುತ್ತಲಿನವರು ಪ್ರೇಮ (ಇಶ್ಕ)ದ ವಾತಾವರಣದಲ್ಲಿದ್ದೇವೆ. ಇಂಥ ಸಂದರ್ಭಗಳು ನಮಗೆ ಮೇಲಿಂದ ಮೇಲೆ ದೊರೆಯಲಿ.

ರಾಮರಾಜನೊಡನೆ ಸ್ನೇಹ :

ಪಟ್ಟಾಭಿಷೇಕವಾದ ಮೊದಲನೆಯ ವರ್ಷದಲ್ಲಿ, ಅಲಿ ಆದಿಲಶಾಹನಿಗೆ ಸೋಲಾಪುರ ಮತ್ತು ಕಲ್ಯಾಣದ ಕೋಟೆಗಳನ್ನು ನಿಜಾಮಶಾಹಿ ವಶದಿಂದ

ಸ್ವತಂತ್ರಗೊಳಿಸುವ ಹಂಬಲವಿತ್ತು. ಇದರ ಮೊದಲ ಹೆಜ್ಜೆಯಾಗಿ, ಕಿಶ್ವರಖಾನ ಮತ್ತು ಶಾಹಅಬೂತುರಾಬ ಶಿರಾಜಿಯನ್ನು ರಾಯಭಾರಿಗಳಾಗಿ ನಿಯಮಿಸಿ, ರಾಮರಾಜನ ಬಳಿ ಸ್ನೇಹದ ಸಂಬಂಧ ಬೆಳೆಸಲು ಕಳುಹಿಸಿದನು. ನಂತರ ಮಹಮದ್ ಹುಸೇನ ಅಸಫಹಾನಿಯನ್ನು ಅಹಮದ್‌ನಗರಕ್ಕೆ ಕಳುಹಿಸಿ ಅಲ್ಲಿಯ ಅರಸನೊಂದಿಗೆ ಉತ್ತಮ ಸಂಬಂಧವನ್ನು ಬೆಳೆಸುವ ಪ್ರಯತ್ನ ಮಾಡಿದನು. ರಾಮರಾಜನು ಅಲಿ ಆದಿಲಶಾಹನ ರಾಯಭಾರಿಗಳನ್ನು ಸ್ವಾಗತಿಸಿದರು. ಅಲಿ ಆದಿಲಶಾಹನ ಪಟ್ಟಾಭಿಷೇಕವಾದುದಕ್ಕೆ ಅಭಿನಂದನೆ ಸಲ್ಲಿಸಲು ರಾಯಭಾರಿಗಳು ಹಿಂತಿರುಗುವಾಗ ಅವರೊಡನೆ ಗೌರವಾನ್ವಿತ ವ್ಯಕ್ತಿಯೋರ್ವನನ್ನು ರಾಮರಾಜನು ಕಳುಹಿಸಿಕೊಟ್ಟನು.

ಹುಸೇನ ನಿಜಾಮಶಾಹನ ಅಸಂತುಷ್ಟತೆ :

ಹುಸೇನ ನಿಜಾಮಶಾಹನು ಅಲಿ ಆದಿಲಶಾಹನ ರಾಯಭಾರಿ ಮಹಮದ್ ಹುಸೇನ ಅಸಫಹಾನಿಯೊಡನೆ ಸರಿಯಾದ ರೀತಿಯಲ್ಲಿ ನಡೆದುಕೊಳ್ಳಲಿಲ್ಲ. ರಾಯಭಾರಿಯೊಡನೆ ಪ್ರಸನ್ನತೆಯಿಂದ ಮಾತನಾಡಲಿಲ್ಲ. ಆತನನ್ನು ಸ್ವಾಗತಿಸಲಿಲ್ಲ. ಅಲಿ ಆದಿಲನ ಪಟ್ಟಾಭಿಷೇಕವಾದುದಕ್ಕೆ ಅಭಿನಂದನೆ ಸಲ್ಲಿಸಲು ತನ್ನ ಆಪ್ತರನ್ನು ಕಳುಹಿಸಲಿಲ್ಲ. ಇದಲ್ಲದೆ, ರಾಮರಾಜ ಮತ್ತು ಅಲಿ ಆದಿಲರಲ್ಲಿ ಬೆಳೆದ ಹಿತಕರ ಸಂಬಂಧವನ್ನು ಇಷ್ಟಪಡಲಿಲ್ಲ. ಈ ವಿಷಯದಲ್ಲಿ ತನ್ನ ಅಸಂತುಷ್ಟತೆ ಮತ್ತು ಅಸಮಾಧಾನ ವ್ಯಕ್ತಪಡಿಸಿದನು.

ರಾಮರಾಜನ ಮಗನ ಮೃತ್ಯು ಮತ್ತು ಅಲಿ ಆದಿಲಶಾಹನ ಸಂತಾಪ :

ಅಲಿ ಆದಿಲಶಾಹನು ತನ್ನ ತಂದೆಯ ಆಡಳಿತದಲ್ಲಿ ಆದ ತಪ್ಪುಗಳನ್ನು ಸರಿಪಡಿಸುವದುಕ್ಕಾಗಿ ಎಲ್ಲ ಪ್ರಯತ್ನಗಳನ್ನು ಮಾಡಿದನು. ರಾಮರಾಜನೊಂದಿಗೆ ಸ್ನೇಹದ ನಂಟು ಬೆಳೆಸಲು ಬಹಳ ಚಾತುರ್ಯದಿಂದ ಉಪಾಯ ಯೋಜಿಸಿದನು. ಅಷ್ಟರಲ್ಲಿಯೇ, ರಾಮರಾಜನ ಪ್ರೀತಿಯ ಪುತ್ರನೊಬ್ಬನು ನಿಧನನಾದ ವಿಷಯ ತಿಳಿಯಿತು. ಕಿಶ್ವರಖಾನನ ಸಲಹೆಯಂತೆ, ತನ್ನ ಶೌರ್ಯ ಸಾಹಸದ ಮೇಲೆ ನಂಬಿಕೆಯಿಟ್ಟು, ಕಿಶ್ವರಖಾನನೊಡನೆ ಒಂದು ನೂರು ಕುದುರೆ ಸವಾರರ ಜೊತೆಗೂಡಿಕೊಂಡು, ಸಂತಾಪ ವ್ಯಕ್ತಗೊಳಿಸಲು ವಿಜಯನಗರ ತಲುಪಿದನು. ರಾಮರಾಜನ ಆಸ್ಥಾನ ತಲುಪಿದ ಮೇಲೆ ಅಲಿ ಆದಿಲನು ರಾಮರಾಜನ ಪುತ್ರನ ನಿಧನಕ್ಕೆ ಸಾಂತ್ವನ ಹೇಳಿದನು. ರಾಮರಾಜನು ಧರಿಸಿರುವ ಶೋಕಸೂಚಕ ವಸ್ತ್ರಗಳನ್ನು ತೆಗೆಸಿ, ತನ್ನೊಡನೆ ತಂದ ವಸ್ತ್ರಗಳನ್ನು ಧರಿಸಲು ನೀಡಿದನು.

ರಾಮರಾಜನ ದುರ್ವರ್ತನೆ :

ಅಜೀರಾಯನ ವಂಶದಿಂದ ಬಂದ ರಾಮರಾಜನ ಪತ್ನಿ, ಅಲಿ ಆದಿಲ ಬಂದಾಗ

ತೆರೆಯ ಹಿಂದೆ ಸರಿಯಲಿಲ್ಲ. ಅಲ್ಲದೆ, ಆತನಿಗೆ ತನ್ನ ಔರಸ ಪುತ್ರನೆಂದು ಕರೆದು ಆದರಿಸಿದಳು. ರಾಮರಾಜನು ಮೂರು ದಿನಗಳ ಕಾಲ ಅಲಿ ಆದಿಲಶಾಹನಿಗೆ ಅತಿಥಿ ಸತ್ಕಾರ ಮಾಡಿದನು. ನೆರವು ನೀಡುವ ವಚನ ಕೊಟ್ಟನು. ಆದರೆ, ಅಲಿ ಆದಿಲನನ್ನು ಬೀಳ್ಕೊಡುವ ಸಂದರ್ಭದಲ್ಲಿ ಸಭ್ಯತೆಯಿಂದ ನಡೆದುಕೊಳ್ಳಲಿಲ್ಲ. ಸಂಪ್ರದಾಯದಂತೆ ಆತನೊಡನೆ ಕೆಲವು ಹೆಜ್ಜೆಗಳನ್ನು ಹಾಕುವ ಸೌಜನ್ಯ ತೋರಲಿಲ್ಲ. ಈ ಕೆಲಸವನ್ನು ತನ್ನ ಸಹೋದರರು ಮತ್ತು ಬಂಧುಗಳಿಗೆ ಒಪ್ಪಿಸಿದನು. ಅಲಿ ಆದಿಲನಿಗೆ ಇದರಿಂದ ಬಹಳ ಖೇದವೆನಿಸಿತು. ಇದಕ್ಕೆ ತಕ್ಕ ಪ್ರತೀಕಾರ ಕೈಗೊಳ್ಳಬೇಕೆಂದು ಉದ್ದೇಶಿಸಿದನು. ಆದರೆ ಆ ಸಂದರ್ಭದಲ್ಲಿ ಮೌನವಾದನು, ಸರಿಯಾದ ಸಮಯಕ್ಕೆ ಕಾಯತೊಡಗಿದನು.

ಹುಸೇನ ನಿಜಾಮಶಾಹನಿಗೆ ಅಲಿ ಆದಿಲನಿಂದ ಸಂದೇಶ :

ಹಿಜರಿ ಶಕೆ ೯೭೨ರಲ್ಲಿ ಅಲಿ ಆದಿಲಶಾಹನು ಬಿಜಾಪುರಕ್ಕೆ ಮರಳಿ ಬಂದನು. ನಂತರ ಹುಸೇನ ನಿಜಾಮಶಾಹನಿಗೆ, "ಕಲ್ಯಾಣ ಮತ್ತು ಸೋಲಾಪುರದ ಕೋಟೆಗಳು ಆದಿಲಶಾಹಿ ಮನೆತನಕ್ಕೆ ಸೇರಿದವೆಂಬುದು ಎಲ್ಲರಿಗೂ ತಿಳಿದ ವಿಷಯ. ಇಬ್ರಾಹಿಮ ಆದಿಲಶಾಹನ ರಾಜ್ಯಾಡಳಿತದ ಸಮಯದಲ್ಲಿ, ಕೆಲವು ಜನರ ದುಷ್ಕೃತ್ಯದಿಂದಾಗಿ, ಆಡಳಿತವು ಕೆಟ್ಟು ಹೋಯಿತು ಹಾಗೂ ಈ ಕಿಲ್ಲೆಗಳು ನಿಜಾಮಶಾಹಿಗಳ ವಶವಾದವು. ನಿಜಾಮಶಾಹಿ ಮತ್ತು ಆದಿಲಶಾಹಿ ಮನೆತನಗಳಲ್ಲಿ ಸ್ನೇಹ ಮತ್ತು ಬಂಧುತ್ವ ಅಪೇಕ್ಷಿಸುತ್ತಿದ್ದರೆ, ಕಲ್ಯಾಣ ಮತ್ತು ಸೋಲಾಪುರದ ಕೋಟೆಗಳನ್ನು ಮರಳಿ ನನ್ನ ವಶಕ್ಕೆ ಕೊಟ್ಟು ಬಿಡಿ. ಒಂದು ವೇಳೆ ಎರಡೂ ಕೋಟೆಗಳನ್ನು ನನಗೆ ಒಪ್ಪಿಸುವುದು ಸಾಧ್ಯವಾಗದಿದ್ದಲ್ಲಿ, ಕಲ್ಯಾಣದ ಕೋಟೆ ನನ್ನ ವಶಕ್ಕೆ ಕೊಡಿ. ಬಹಳ ಉಪಕೃತನಾಗುತ್ತೇನೆ" ಎಂಬ ಸಂದೇಶ ಕಳುಹಿಸಿದನು.

ಕಲ್ಯಾಣ ಮತ್ತು ಸೋಲಾಪುರ ಕೋಟೆಗಳನ್ನು ಮರಳಿಸುವ ವಿಚಾರ :

ಹುಸೇನ ನಿಜಾಮಶಾಹನ ಒಡನಾಡಿಯಾಗಿದ್ದ ಶಾಹ ಹುಸೇನ ಅಂಜು, ಕಲ್ಯಾಣದ ಕಿಲ್ಲೆಯನ್ನು ಇಬ್ರಾಹಿಮ ಆದಿಲಶಾಹನಿಗೆ ಮರಳಿಸಲು ಬಹಳ ಪ್ರಯತ್ನ ಮಾಡಿದನು. ಆದರೆ ನಿಜಾಮಶಾಹನು ಆತನ ಮಾತನ್ನು ಕೇಳಲಿಲ್ಲ. ವಿಷಯವು ಬಹಳ ದೀರ್ಘವಾಗತೊಡಗಿತು. ಪರಿಸ್ಥಿತಿ ಎಲ್ಲಿಯವರೆಗೆ ಬಂದಿತೆಂದರೆ, ಆದಿಲಶಾಹನು ಸಯ್ಯದ ಅಲಿ ಎಂಬ ದೂತನನ್ನು, ಹುಸೇನ ನಿಜಾಮಶಾಹನ ಹತ್ತಿರ ಕಳಿಸಿದನು.

"ರಾಜ್ಯಾಡಳಿತದ ಮುಖ್ಯ ಮತ್ತು ಅಗತ್ಯ ಕಾರ್ಯಗಳಲ್ಲಿ ನಿರತನಾಗಿರುವಾಗ ಕದನ ಮಾಡುವದು ಉಚಿತವಲ್ಲ. ಒಂದು ವೇಳೆ ನೀವು ಮುಂದಾಲೋಚನೆ ಮತ್ತು ಮುಂಬರುವ ಪರಿಣಾಮಗಳನ್ನು ಯೋಚಿಸಿ, ಎರಡೂ ಕೋಟೆಗಳನ್ನು ನನಗೆ ಮರಳಿ ಕೊಟ್ಟರೆ, ನಮ್ಮಿಬ್ಬರಲ್ಲಿ ಹಿತವಾದ ಸ್ನೇಹಸಂಬಂಧ ಹುಟ್ಟಿಕೊಳ್ಳುತ್ತದೆ. ಇಲ್ಲವಾದಲ್ಲಿ

ಖಂಡಿತವಾಗಿಯೂ ನನ್ನ ಸೈನ್ಯವು ನಿಮ್ಮ ಪ್ರಜೆಗಳನ್ನು ಮತ್ತು ನಿಮ್ಮ ದೇಶದ ಪರಿಸ್ಥಿತಿ ನಾಶಮಾಡುತ್ತದೆ. ಗಲಭೆ ಕೋಲಾಹಲಗಳು ಸೃಷ್ಟಿಯಾಗುತ್ತವೆ."

ಹುಸೇನ ನಿಜಾಮಶಾಹಿ ಮತ್ತು ಅಲಿ ಆದಿಲಶಾಹಿಗಳ ಮಧ್ಯ ವಿರಸ :

ಹುಸೇನನು ಪತ್ರವನ್ನು ಓದಿ ಬಹಳ ಕೋಪಗೊಂಡನು. ಆತನು ಅಲಿ ಆದಿಲನ ಬಗ್ಗೆ ಉಪಯೋಗಿಸಿದ ಕೆಟ್ಟ ಶಬ್ದಗಳನ್ನು ಇಲ್ಲಿ ಹೇಳುವದು ಸಭ್ಯತೆ ಮತ್ತು ಸಂಸ್ಕೃತಿಗೆ ವಿರುದ್ಧವಾಗುತ್ತದೆ. ಈ ಉತ್ತರವನ್ನು ಪಡೆದ ಅಲಿ ಆದಿಲನಿಗೆ ರೋಷವುಕ್ಕಿತು. ಆತನು ತನ್ನ ಬಾವುಟದ ಬಣ್ಣ ಬದಲಾಯಿಸಿಬಿಟ್ಟನು. ಮೊದಲು ಅದು ಹಳದಿ ವರ್ಣದ್ದಾಗಿತ್ತು. ಅದನ್ನೀಗ ಕೆಂಪು ಬಣ್ಣಕ್ಕೆ ಬದಲಾಯಿಸಿದನು ಹಾಗೂ ಹುಸೇನ ನಿಜಾಮಶಾಹನಿಗೆ, "ನಿನ್ನಲ್ಲಿ ಧೈರ್ಯವಿದ್ದರೆ, ನಿನ್ನ ಸಂಕೇತವನ್ನು ನನ್ನಿಂದ ಕಿತ್ತಿಕೋ" ಎಂಬ ಸಂದೇಶವನ್ನು ಕಳುಹಿಸಿದನು.

ಅಲಿ ಆದಿಲಶಾಹನ ಗುರಿ–ಅಹಮದ್‌ನಗರ :

ದಕ್ಷಿಣದಲ್ಲಿರುವ ರೂಢಿಗತ ಸಂಪ್ರದಾಯವೆಂದರೆ, ಒಂದು ಅರಸೊತ್ತಿಗೆಯ ಸಂಕೇತವಾದ ಬಾವುಟವನ್ನು ಇನ್ನೊಂದು ಅರಸೊತ್ತಿಗೆ ಆಯ್ಕೆ ಮಾಡಿಕೊಳ್ಳುವುದಿಲ್ಲ. ಒಂದು ವೇಳೆ ಹಾಗೆ ಮಾಡಿದಲ್ಲಿ, ಅದರ ಉದ್ದೇಶ ಯುದ್ಧಕ್ಕೆ ಆಹ್ವಾನ ನೀಡಿದಂತಾಗುತ್ತದೆ. ಅಲಿ ಆದಿಲಶಾಹನ ಬಾವುಟ ಬದಲಾವಣೆಯ ಧೋರಣೆಯಿಂದ ಹುಸೇನನು ಬಹಳ ಚಿಂತಿತನಾದನು ಮತ್ತು ಯುದ್ಧ ಸನ್ನದ್ಧನಾಗಲು ಸೈನಿಕರನ್ನು ಒಟ್ಟುಗೂಡಿಸತೊಡಗಿದನು. ಹಿಜರಿ ಶಕೆ ೯೭೬ರಲ್ಲಿ ಅಲಿ ಆದಿಲಶಾಹನು ತನ್ನ ನೆರವಿಗೆ ಬರಲು ರಾಮರಾಜನಿಗೆ ಕರೆ ನೀಡಿದನು. ರಾಮರಾಜನು ಬಂದ ನಂತರ ಆತನೊಡನೆ ಅಹಮದ್‌ನಗರದತ್ತ ಹೊರಟನು.

ಗಲಭೆ – ಕೋಲಾಹಲ :

ಪರಿಂದಾದಿಂದ ಜನೀರವರೆಗೆ ಮತ್ತು ಅಹಮದ್‌ನಗರದಿಂದ ದೌಲತಾಬಾದವರೆಗೆ ಕೋಲಾಹಲದ ಬಿಸಿಗಾಳಿ ಬೀಸತೊಡಗಿತು. ವಿಜಯನಗರದ ಹಿಂದುಗಳು ಇಂತಹ ಅವಕಾಶವನ್ನು ಕಾಯುತ್ತಿದ್ದರು. ಅವರು ತಮ್ಮ ಮನಸ್ಸಿಗೆ ತೃಪ್ತಿಯಾಗುವಷ್ಟು ಹಿಂಸೆ ಮತ್ತು ದಬ್ಬಾಳಿಕೆ ಮಾಡಿದರು. ಅಲ್ಲಿಯ ಜನರ ಸಂತೋಷವನ್ನು ಮಣ್ಣು ಮಾಡಿದರು. ಅಲ್ಲಿಯ ಮಸೀದೆ ಮತ್ತು ಕುರಾನ್ ಗ್ರಂಥಗಳನ್ನು ಸಹ ಬಿಡದೆ, ಬೆಂಕಿಗಾಹುತಿ ಮಾಡಿದರು. ಹುಸೇನ ನಿಜಾಮಶಾಹನಿಗೆ ಈ ದಂಗೆಯನ್ನು ತಡೆಯುವ ಧೈರ್ಯವಾಗಲಿಲ್ಲ. ಆತನು ಖಾಸಿಮಬೇಗ್ ಹಕೀಮಶಾಹ ಜಫರ್ ಮತ್ತಿತರ ಸರದಾರರ ಸಲಹೆ ಪಡೆದ ನಂತರ ಕಲ್ಯಾಣ ಕಿಲ್ಲೆಯನ್ನು ಅಲಿ ಆದಿಲನ ವಶಕ್ಕೆ ಕೊಟ್ಟುಬಿಟ್ಟನು. ಯುದ್ಧ ಮುಂದೂಡಲಾಯಿತು. ರಾಮರಾಜ ಮತ್ತು ಅಲಿ ಆದಿಲಶಾಹ ತಮ್ಮ ತಮ್ಮ ದೇಶಕ್ಕೆ ಹಿಂತಿರುಗಿದರು.

ಹುಸೇನ ನಿಜಾಮಶಾಹನ ವಿರುದ್ಧ ಸಮರ :

ಹುಸೇನ ನಿಜಾಮುಶಾಹನು ಬೀಬೀ ಜವಾಲಳ ವಿವಾಹವನ್ನು ಕುತುಬಶಾಹನೊಂದಿಗೆ ಮಾಡಿದನು. ಅಲಿ ಆದಿಲನು ವಿಷಯ ಕೇಳಿ, ಮಹಮದ್ ಕಿಶ್ವರಖಾನ ಹಾಗೂ ಶಾಹ ಅಬೂತುರಾಬ ಶಿರಾಜಿಯನ್ನು ವಿಜಯನಗರಕ್ಕೆ ಕಳುಹಿಸಿ, ಪುನಃ ರಾಮರಾಜನ ಸಹಾಯ ಯಾಚಿಸಿದನು. ತಕ್ಷಣವೇ ರಾಮರಾಜನು ಐವತ್ತು ಸಾವಿರ ಕುದುರೆ ಸವಾರರು ಮತ್ತು ಎರಡು ಲಕ್ಷ ಪದಾತಿಗಳ ಸೈನ್ಯದೊಡನೆ ಬಿಜಾಪುರಕ್ಕೆ ಬಂದನು.

ಕುತುಬಶಾಹನ ಪರಾರಿ :

ಕುತುಬಶಾಹನು ಬಹಳ ಶೂರತನದಿಂದ ಹೋರಾಡಿದನು. ನಿಜಾಮಶಾಹನಿಗೆ ಭಾಷೆ ಕೊಟ್ಟಿದ್ದರೂ, ಆತನ ಸೈನ್ಯದ ನೆಲೆಯಿಂದ ಅರ್ಧರಾತ್ರಿಯ ಸಮಯದಲ್ಲಿ ಪಲಾಯನಮಾಡಿ ಅಲಿ ಆದಿಲನೊಂದಿಗೆ ಸೇರಿಕೊಂಡನು. ಸಂಧಾನವಾದ ಮೇಲೆ ಹುಸೇನ ನಿಜಾಮಶಾಹನು ತನ್ನ ಸೈನ್ಯದಲ್ಲಿ ಕುತುಬಶಾಹನನ್ನು ಕಂಡು ಗಾಬರಿಯಾದನು. ಇನ್ನು ಹೆಚ್ಚು ಸಮಯ ಅಲ್ಲಿರುವದು ಸಮಂಜಸವಲ್ಲವೆಂದು ಭಾವಿಸಿ, ತೀವ್ರವಾಗಿ ಅಹಮದ್‌ನಗರದತ್ತ ತೆರಳಿದನು.

ಅಹಮದ್‌ನಗರಕ್ಕೆ ಮುತ್ತಿಗೆ :

ಅಲಿ ಆದಿಲಶಾಹನ ಸೈನ್ಯವು ಹುಸೇನ ನಿಜಾಮಶಾಹನನ್ನು ಬೆನ್ನಟ್ಟಿತು. ಮಾರ್ಗದಲ್ಲಿರುವ ಪ್ರದೇಶವನ್ನು ಧ್ವಂಸ ಮಾಡುತ್ತ ಅಹಮದ್‌ನಗರ ಸಮೀಪಿಸಿತು. ಹುಸೇನ ನಿಜಾಮಶಾಹನು ರಾಜಧಾನಿ ಮತ್ತು ಕೋಟೆಯನ್ನು ಭದ್ರಪಡಿಸಿ, ಸ್ವತಃ ಜನೀರದತ್ತ ಹೊರಟನು. ಅಲಿ ಆದಿಲಶಾಹನು ಅಹಮದ್‌ನಗರಕ್ಕೆ ಮುತ್ತಿಗೆ ಹಾಕಿದನು. ತನ್ನ ಸರದಾರರಿಗೆ ನಗರದ ಸುತ್ತಮುತ್ತಲಿನ ಪ್ರದೇಶಕ್ಕೆ ಕಳುಹಿಸಿಕೊಟ್ಟನು. ಆದಿಲಶಾಹನ ಸರದಾರರು, ನಗರದ ಸುತ್ತಲಿನ ಗ್ರಾಮೀಣ ಜನರಿಗೆ ಹಿಂಸೆ ಕೊಟ್ಟರು. ಅಲ್ಲಿಯ ಜನವಸತಿಯನ್ನು ಗುರುತು ಸಹ ಇರದಂತೆ ಹೊಸಕಿ ಹಾಕಿದರು.

ವಧೆ ಮತ್ತು ಸುಲಿಗೆ :

ವಿಜಯನಗರದ ಹಿಂದುಗಳು ಹಿಂಸೆ ಕೊಡುವುದರಲ್ಲಿ ಹಿಂದೆ ಬೀಳಲಿಲ್ಲ. ಅವರು ಜನರನ್ನು ನಿರ್ದಯವಾಗಿ ಕೊಂದರು. ಕಟ್ಟಡಗಳಿಗೆ ಬೆಂಕಿ ಹಚ್ಚಿದರು. ಮಸೀದೆಗಳಿಗೆ ನುಗ್ಗಿ ಅಪಮಾನ ಮಾಡಿದರು. ಅವುಗಳನ್ನು ಕುದುರೆಲಾಯಗಳಾಗಿ ಪರಿವರ್ತಿಸಿದರು. ಕಟ್ಟಿಗೆಯಿಂದ ನಿರ್ಮಿಸಲ್ಪಟ್ಟ ಮಸೀದೆಗಳ ಛಾವಣಿ ಮತ್ತು ಇತರ ಸಾಮಾನುಗಳನ್ನು ಬೆಂಕಿಗೆ ಆಹುತಿ ಕೊಟ್ಟರು. ಅಷ್ಟರಲ್ಲಿಯೇ, ಮಳೆ ಬರತೊಡಗಿತು. ರಸ್ತೆಯೆಲ್ಲ ಕೆಸರು ಮತ್ತು ಕೊಚ್ಚೆಯಿಂದ ತುಂಬಿ ಹೋಯಿತು. ಹೀಗಾಗಿ ಸಾಮಗ್ರಿಗಳು ಬರುವದು

ತಡವಾಯಿತು. ಸೇನೆಗೆ ಬೇಕಾದ ಅವಶ್ಯಕ ಸಾಮಗ್ರಿಗಳು ಇರಲಿಲ್ಲ. ಕುತುಬಶಾಹನು ಕಳ್ಳತನದಿಂದ ಹುಸೇನ ನಿಜಾಮಶಾಹನ ಪರವಾಗಿ ಕೆಲಸ ಮಾಡುತ್ತಿದ್ದನು. ಕಿಲ್ಲೆಯಲ್ಲಿರುವವರಿಗೆ ಅವಶ್ಯಕ ಸಾಮಗ್ರಿಗಳನ್ನು ರಹಸ್ಯವಾಗಿ ತಲುಪಿಸುತ್ತಿದ್ದನು. ಕೋಟೆಯಲ್ಲಿರುವವರ ಧೈರ್ಯ ಕುಗ್ಗದಂತೆ ನೋಡಿಕೊಳ್ಳುತ್ತಿದ್ದನು.

ಕಿಶ್ವರಖಾನನ ಸಲಹೆ :

ಇವೆಲ್ಲ ವಿಷಯಗಳನ್ನು ಅಲಿ ಆದಿಲಶಾಹನು ಅರ್ಥಮಾಡಿಕೊಂಡನು. ರಾಮರಾಜನಿಗೆ ಸಹ ಮುಂಬರುವ ಅಪಾಯಗಳ ಬಗ್ಗೆ ಎಚ್ಚರಿಕೆ ನೀಡಿದನು. ಇಬ್ಬರೂ ಅರಸರು ಒಬ್ಬರೊಡನೊಬ್ಬರು ಪರಸ್ಪರ ಚರ್ಚೆ ಮಾಡಿ, ಅಲ್ಲಿಂದ ಹೊರಟುಹೋಗುವುದು ಯೋಗ್ಯವೆಂದು ಭಾವಿಸಿದರು. ಅಲಿ ಆದಿಲಶಾಹ ಮತ್ತು ರಾಮರಾಜ ಅಲ್ಲಿಂದ ಹೊರಟು ಐದಾರು ತಂಗುದಾಣಗಳನ್ನು ದಾಟಿದ್ದರಷ್ಟೆ, ಕಿಶ್ವರಖಾನನು ಅಲಿ ಆದಿಲನನ್ನು ರಾಮರಾಜನಿರುವ ಸ್ಥಳದಿಂದ ತುಸುದೂರ ಕರೆದೊಯ್ದು, “ಇದು ಸೋಲಾಪುರ ಕಿಲ್ಲೆಯನ್ನು ಮುತ್ತಿಗೆ ಹಾಕುವ ಸಮಯವಲ್ಲ, ಒಂದು ವೇಳೆ ಕೋಟೆಯನ್ನು ಗೆದ್ದು ವಿಜಯ ಪಡೆದರೆ, ರಾಮರಾಜನು ಕೋಟೆಯನ್ನು ತನ್ನ ವಶಪಡಿಸಿಕೊಳ್ಳಲು ಬಯಸುತ್ತಾನೆ. ಅಂತಹ ಸಂದರ್ಭದಲ್ಲಿ ನಮಗೆ ಏನೂ ಮಾಡಲಿಕ್ಕಾಗದು. ರಾಮರಾಜನು ಕೋಟೆಯನ್ನು ತನ್ನ ವಶಕ್ಕೆ ಪಡೆದ ಮೇಲೆ ಇನ್ನಿತರ ಪ್ರದೇಶಗಳ ಮೇಲೆ ಆಸೆಬುರುಕತನದಿಂದ ನೋಡುತ್ತಾನೆ. ಈಗ ನಾವು ಸೋಲಾಪುರ ಕೋಟೆ ಜಯಿಸುವ ವಿಚಾರ ತ್ಯಜಿಸಬೇಕು. ಸದ್ಯಕ್ಕೆ ರಾಮರಾಜನ ನೆರವು ಪಡೆದು ನಳದುರ್ಗದಲ್ಲಿ ಒಂದು ಹೊಸ ಕೋಟೆಯನ್ನು ನಿರ್ಮಿಸಬೇಕು. ನಿಧಾನವಾಗಿ ಈ ಕೋಟೆಯ ಕಾರಣದಿಂದ ಸೋಲಾಪುರ ಕಿಲ್ಲೆಯನ್ನು ವಶಕ್ಕೆ ತೆಗೆದುಕೊಳ್ಳಬೇಕು.

ಶಾಹದುರ್ಗ ಕಿಲ್ಲೆಯ ನಿರ್ಮಾಣ :

ಅಲಿ ಆದಿಲಶಾಹನು ಕಿಶ್ವರಖಾನನ ಈ ಸಲಹೆಯನ್ನು ಮೆಚ್ಚಿಕೊಂಡನು. ಆತನು ರಾಮರಾಜನಿಗೆ ನಳದುರ್ಗದತ್ತ ತೆರಳಲು ಅನಿವಾರ್ಯವಾಗಿ ಒಪ್ಪುವಂತೆ ಮಾಡಿದನು. ಅವರಿಬ್ಬರೂ ಅರಸರು ನಳದುರ್ಗ ತಲುಪಿದರು. ಪುರಾತನ ಕಾಲದಲ್ಲಿ ರಾಜಾ ನಳನು ತನ್ನ ಪುತ್ರನಿಗೆ ಮಹಲನ್ನು ಕಟ್ಟಿದ ಸ್ಥಳವನ್ನು, ಕೋಟೆಯನ್ನು ನಿರ್ಮಿಸುವ ಸ್ಥಾನಕ್ಕೆ ಆಯ್ದುಕೊಳ್ಳಲಾಯಿತು. ಆ ಸ್ಥಳದಲ್ಲಿ ಹಳೆಯ ಮಹಲಿನ ಅವಶೇಷಗಳು ಇನ್ನೂ ಉಳಿದುಕೊಂಡಿದ್ದವು. ಕಲ್ಲು ಮತ್ತು ಇಟ್ಟಿಗೆಗಳನ್ನು ಉಪಯೋಗಿಸಿ ಕೋಟೆಯ ಗೋಡೆಯನ್ನು ಮಳೆಗಾಲದಲ್ಲಿಯೇ ಕಟ್ಟಲಾಯಿತು. ಈ ಕೋಟೆಗೆ “ಶಾಹದುರ್ಗ ಕೋಟೆ” ಎಂಬ ಹೆಸರನ್ನು ಇಡಲಾಯಿತು. ಕೋಟೆಯ ನಿರ್ಮಾಣದ ನಂತರ ರಾಮರಾಜ, ಕುತುಬಶಾಹ ಮತ್ತು ಅಲಿ ಆದಿಲಶಾಹ, ಈ ಮೂವರು ಅರಸರು

ತಮ್ಮ ತಮ್ಮ ರಾಜ್ಯಕ್ಕೆ ಹೊರಟು ಹೋದರು. ಅಲಿ ಆದಿಲನು ಬಿಜಾಪುರಕ್ಕೆ ಮರಳಿ ಬಂದನು.

ರಾಮರಾಜನ ಅಜಾಗರೂಕತೆ :

ಅದೇ ವರ್ಷ ರಾಮರಾಜನು ಅಜಾಗರೂಕತೆಯಿಂದ ಆಡಿದ ಕೆಲವು ಮಾತುಗಳಿಂದ ಅಲಿ ಆದಿಲಶಾಹನ ಮನಸ್ಸು ಪೂರ್ವಗ್ರಹದಿಂದ ಪೀಡಿತವಾಯಿತು. ರಾಮರಾಜನ ದುರ್ವರ್ತನೆಯು ಆತನ ಅರಸೊತ್ತಿಗೆಯ ವಿನಾಶದ ಕಾರಣವಾಯಿತು. ಆತನ ತಪ್ಪುಗಳಿಗೆ ಕಠಿಣ ಶಿಕ್ಷೆ ದೊರೆಯಿತು. ಅಲ್ಪಾವಧಿಯಲ್ಲಿಯೇ ರಾಮರಾಜ ಮತ್ತು ಆತನ ಸಹಧರ್ಮಿಗಳ ಪರಿಸ್ಥಿತಿ ಕೆಟ್ಟು ಹೋಯಿತು. ಆತನ ರಕ್ತದಿಂದ ಭೂಮಿಯು ತೊಯ್ದು ಕೆಂಪಾಗಿ ಹೋಯಿತು. ಈ ವಿಷಯದ ವಿವರಗಳನ್ನು ಮುಂದೆ ನೀಡಲಾಗುವದು.

ಒಪ್ಪಂದದ ವಿರುದ್ಧ ವರ್ತನೆ :

ಹುಸೇನ ನಿಜಾಮಶಾಹನು ನೀಡುತ್ತಿದ್ದ ತೊಂದರೆಗಳಿಂದ ಪೀಡಿತನಾದ ಸಂದರ್ಭದಲ್ಲಿ, ಮೊದಲಬಾರಿ ಅಲಿ ಆದಿಲಶಾಹನು ರಾಮರಾಜನ ನೆರವನ್ನು ಕೋರಿದ್ದನು. ಅಲಿ ಆದಿಲಶಾಹ ಮತ್ತು ರಾಮರಾಜರಲ್ಲಿ, "ವಿಜಯನಗರದ ಹಿಂದುಗಳು ತಮ್ಮ ಹಳೆಯ ಶತ್ರುತ್ವದ ಕಾರಣದಿಂದ ಮುಸಲ್ಮಾನರೊಂದಿಗೆ ಯಾವುದೇ ರೀತಿಯ ಹಾನಿಯನ್ನು ಉಂಟು ಮಾಡುವುದಿಲ್ಲ, ನಾಗರಿಕರ ಸಂಪತ್ತನ್ನು ಲೂಟಿ ಮಾಡುವುದಿಲ್ಲ ಹಾಗೂ ಮುಸಲ್ಮಾನರ ಗೌರವಕ್ಕೆ ಭಂಗ ತರುವುದಿಲ್ಲ" ಎಂಬ ಒಪ್ಪಂದವಾಗಿತ್ತು. ಆದರೆ, ಹಿಂದುಗಳು ತಾವು ಮಾಡಿಕೊಂಡ ಒಪ್ಪಂದ ಮರೆತು ಅಹಮದ್‌ನಗರದ ಮುಸಲ್ಮಾನರನ್ನು ನಾನಾ ವಿಧದಿಂದ ಪೀಡಿಸಿದರು. ಅತ್ಯಾಚಾರ ಮಾಡಿದರು, ಕೊಲೆ ಮಾಡಿದರು. ಧನಸಂಪತ್ತನ್ನು ಲೂಟಿ ಮಾಡಿದರು. ಮಸೀದೆಗಳನ್ನು ಧ್ವಂಸ ಮಾಡಿದರು. ಅಲಿ ಆದಿಲಶಾಹನು ಇದೆಲ್ಲವನ್ನು ನೋಡಿ ಮತ್ತು ಕೇಳಿ ಬಹಳ ಕೋಪಾವಿಷ್ಟನಾದನು. ಆದರೆ ಆ ಸಂದರ್ಭದಲ್ಲಿ ಏನೂ ಹೇಳಲಿಲ್ಲ. ಏಕೆಂದರೆ ಅದು ಮೌನವಾಗಿರುವ ಸಮಯವಾಗಿತ್ತು.

ರಾಮರಾಜನ ಪಕ್ಷಪಾತ ಮತ್ತು ಅಹಂಕಾರ :

ಈ ಪ್ರಯಾಣದಿಂದ ಮರಳಿದ ನಂತರ ರಾಮರಾಜನ ಗರ್ವ ಮತ್ತು ಪಕ್ಷಪಾತದ ನಡತೆಯು ಉಚ್ಚಸ್ತರಕ್ಕೆ ಏರಿತು. ಆತನು ಇಸ್ಲಾಮ ಧರ್ಮವನ್ನು ದ್ವೇಷಿಸತೊಡಗಿದನು. ಯಾವುದೇ ಮುಸಲ್ಮಾನ ರಾಯಭಾರಿಗೆ ತನ್ನ ಆಸ್ಥಾನದಲ್ಲಿ ಪ್ರವೇಶಿಸಲು ರಾಮರಾಜನು ಅನುಮತಿ ನೀಡುತ್ತಿರಲಿಲ್ಲ. ಒಂದು ವೇಳೆ ಅನುಮತಿ ನೀಡಿದರೂ, ರಾಯಭಾರಿಯು ಆಸ್ಥಾನದಲ್ಲಿ ನಿಂತುಕೊಂಡಿರಬೇಕಾಗಿತ್ತು. ಕುಳಿತುಕೊಳ್ಳಲು ಅನುಮತಿ ಇರಲಿಲ್ಲ. ರಾಮರಾಜನು ಕುದುರೆ ಸವಾರಿ ಮಾಡುತ್ತಿರುವ ಸಂದರ್ಭದಲ್ಲಿ ರಾಯಭಾರಿ ಬಂದರೆ,

ರಾಮರಾಜನ ಕುದುರೆಯೊಡನೆ ಬಹುದೂರದವರೆಗೆ ಆತನ ಹಿಂದೆ ಓಡಬೇಕಾಗುತ್ತಿತ್ತು. ಬಹಳ ದೂರ ಓಡಿದ ನಂತರ, ಆತನಿಗೆ ಕುದುರೆಯನ್ನೇರುವ ಅನುಮತಿ ದೊರೆಯುತ್ತಿತ್ತು.

ಇನ್ನೊಂದು ವಿಷಯವೆಂದರೆ, ರಾಮರಾಜನು ಅಲಿ ಆದಿಲಶಾಹನೊಡನೆ ಅಹಮದ್‌ನಗರದಿಂದ ನಳದುರ್ಗದತ್ತ ತೆರಳುವ ಸಂದರ್ಭದಲ್ಲಿ ಹಿಂದು ಸೈನಿಕರು ಮುಸಲ್ಮಾನ ಸೈನಿಕರನ್ನು ಗೇಲಿ ಮಾಡುತ್ತಿದ್ದರು. ಅವರೆಡೆಗೆ ದ್ವೇಷದ ದೃಷ್ಟಿಯಿಂದ ನೋಡುತ್ತಿದ್ದರು.

ಅಲಿ ಆದಿಲಶಾಹ ಮತ್ತು ಕುತುಬಶಾಹನ ಮೇಲೆ ರಾಮರಾಜನ ಆಕ್ರಮಣ :

ರಾಮರಾಜನ ಮಹತ್ವಾಕಾಂಕ್ಷೆ ಹೆಚ್ಚುತ್ತಲೇ ಹೋಯಿತು. ಮುಸಲ್ಮಾನರು ವಶಪಡಿಸಿಕೊಂಡ ಸ್ಥಳಗಳನ್ನು ಅತಿಕ್ರಮಿಸುವ ಹಂಚಿಕೆ ಹಾಕಿದನು. ಅಲಿ ಆದಿಲಶಾಹ ಮತ್ತು ಕುತುಬಶಾಹಿಗಳ ಪ್ರದೇಶದ ಮೇಲೆ ದಾಳಿ ಮಾಡಲು, ತೆಂಕನಾದ್ರಿಯೊಡನೆ ಒಂದು ಬಲಿಷ್ಠ ಸೈನ್ಯವನ್ನು ಕಳುಹಿಸಿಕೊಟ್ಟನು. ಇವರಿಬ್ಬರು ಅರಸರು ಆ ವರ್ಷ ಹುಸೇನ ನಿಜಾಮಶಾಹನನ್ನು ತಮ್ಮ ಶತ್ರುವೆಂದು ಭಾವಿಸಿ, ಆತನ ಮೇಲೆ ಸಿಟ್ಟು ಮಾಡಿದ್ದರು. ಇದರಿಂದಾಗಿ, ತಮ್ಮ ಪ್ರದೇಶದ ಕೆಲವು ಭಾಗವನ್ನು ರಾಮರಾಜನ ವಶಕ್ಕೆ ಕೊಟ್ಟರು. ಉತ್ತಮ ಬಾಂಧವ್ಯದೊಡನೆ ಆತನೊಂದಿಗೆ ಸಂಧಾನ ಮಾಡಿಕೊಂಡರು.

ಪೂರಕಲ್ ಕಿಲ್ಲೆಯಲ್ಲಿ ಬಂಡಾಯ :

ಅಲಿ ಆದಿಲಶಾಹನು ಅತ್‌ಬಕರ್(ಯಾದಗಿರಿ?) ಮತ್ತು ನಾಗರಿಕೊಪ್ಪ (ಬಾಗಲಕೋಟೆ?) ಪ್ರದೇಶವನ್ನು ಹಾಗೂ ಕುತುಬಶಾಹನು ಕೋಪಲಕಂದ್ವಾ (ಕೋವಿಲಕೊಂಡ) ಕೋಟೆ, ಪಾಂಕಲ್(ಪಾನಗಲ್ಲು) ಮತ್ತು ದಕಮೋಜ ಪ್ರದೇಶವನ್ನು ರಾಮರಾಜನ ವಶಕ್ಕೆ ಒಪ್ಪಿಸಿ ತಮ್ಮನ್ನು ತಾವು ರಕ್ಷಿಸಿಕೊಂಡರು. ಆ ಕಾಲದಲ್ಲಿ ಪೂರಕಲ್ಲು ಕೋಟೆ (ಅಥವಾ ಪೋಂಕತಿ)ಯಲ್ಲಿ ದೇಸಾಯಿಯೊಬ್ಬನು ವಿದ್ರೋಹದ ಅಲೆ ಹರಡಿದನು. ದೇಸಾಯಿಯ ಮನೆಯು ಕೋಟೆಯಲ್ಲಿತ್ತು. ಸಮಾರಂಭದ ನೆಪದಿಂದ ಪ್ರವಾದಿಗಳನ್ನು ಕೋಟೆಯೊಳಗೆ ಕರೆದುಕೊಂಡು ಹೋದನು. ಪ್ರವಾದಿಗಳು ಮತ್ತು ಕೋಟೆಯೊಳಗಿನ ಜನರ ನೆರವಿನಿಂದ ದೇಸಾಯಿ ಕಿಲ್ಲೆದಾರನನ್ನು ವಧಿಸಿಬಿಟ್ಟನು ಹಾಗೂ ಕಿಲ್ಲೆಯನ್ನು ವಶಮಾಡಿಕೊಂಡನು. ಅಲಿ ಆದಿಲಶಾಹನು, ವಿಜಯನಗರದ ಮೇಲಿನ ಪ್ರೀತಿಯಿಂದ ಮತ್ತು ರಾಮರಾಜನ ಭಯದಿಂದ ಕಿಲ್ಲೆಯನ್ನು ಮರಳಿ ಪಡೆಯುವ ವಿಚಾರದ ಬಗ್ಗೆ ತಾಳ್ಮೆಯಿಂದ ಇದ್ದನು. ಸರಿಯಾದ ಸಮಯದ ದಾರಿ ಕಾಯುತ್ತಿದ್ದನು.

ಹಿಂದುಗಳ ಮೇಲೆ ದಾಳಿ ಮಾಡುವ ಸಂಕಲ್ಪ :

ಎರಡನೆಯ ವರ್ಷ ತೂರಕಲ್ ಪ್ರದೇಶದಲ್ಲಿ ಶಾಹದುರ್ಗ (ನಳದುರ್ಗ)

ಕೋಟೆಯನ್ನು ಭದ್ರವಾಗಿ ಕಟ್ಟುವ ಕೆಲಸ ಪೂರ್ಣವಾದ ನಂತರ, ಅಲಿ ಆದಿಲಶಾಹನು ಹಿಂದುಗಳೊಡನೆ ಸಮರ ಸಾರುವ ಸಂಕಲ್ಪ ಮಾಡಿದನು. ಈ ವಿಷಯದಲ್ಲಿ ಅಭಿಪ್ರಾಯ ಪಡೆಯಲು ತನ್ನ ಎಲ್ಲ ಸರದಾರ ಮತ್ತು ಆಸ್ಥಾನದ ಸದಸ್ಯರನ್ನು ಬರಹೇಳಿದನು. ರಾಜ್ಯದ ಅತ್ಯಂತ ಚತುರಮತಿಗಳಾದ ಹಾಗೂ ಬಾದಶಹನ ಪ್ರತಿಯೊಂದು ರಹಸ್ಯವನ್ನು ಬಲ್ಲವರಾದ ಮಹಮದ್ ಕಿಶ್ವರಖಾನ ಮತ್ತು ಅಬು ತರಾಬ ಶಿರಾಜಿ ಇವರು ಆಸ್ಥಾನದ ಸದಸ್ಯರಲ್ಲಿ ತಮ್ಮ ವಿಚಾರವನ್ನು ಬಿನ್ನವಿಸಿಕೊಂಡರು.

ಕಿಶ್ವರಖಾನ ಮತ್ತು ಶಿರಾಜಿ ಇವರ ಸಲಹೆ :

"ಹುಜೂರರ ವಿಚಾರವು ಅತ್ಯಂತ ಸಮಂಜಸವಾಗಿದೆ. ಇದರ ಬಗ್ಗೆ ಹೆಚ್ಚು ಆಲೋಚನೆ ಅಥವಾ ಚಿಂತೆ ಮಾಡುವ ಅವಶ್ಯಕತೆ ಇಲ್ಲ. ಆದಾಗ್ಯೂ ಹುಜೂರರು ನಮ್ಮ ಅಭಿಪ್ರಾಯವನ್ನು ಪಡೆಯಲು ಇಚ್ಛಿಸುತ್ತಿದ್ದಾರೆ. ನಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಲು ಆದೇಶ ನೀಡಿದ್ದಾರೆ. ಈಗ ಎಲ್ಲರಲ್ಲಿ ವಿನಂತಿಸುವುದೇನೆಂದರೆ, ಈ ಹೆಜ್ಜೆಯನ್ನು ಇಡಲು ಎಲ್ಲ ಮುಸಲ್ಮಾನ ಅರಸರು ಪರಸ್ಪರ ಒಗ್ಗಟ್ಟಿನಿಂದ ಕೆಲಸ ಮಾಡಬೇಕಾಗಿದೆ. ರಾಮರಾಜನ ಸೈನ್ಯದ ಬಲ ಮತ್ತು ಸಾಮರ್ಥ್ಯವು ಹಗಲಿನ ಬೆಳಕಿನಂತೆ ಎದ್ದು ಕಾಣುತ್ತಿದೆ. ಆತನ ರಾಜ್ಯವು ಆರು ಬಂದರುಗಳು, ಎಣಿಸಲಾಗದಷ್ಟು ಕಿಲ್ಲೆಗಳು ಮತ್ತು ನಗರಗಳಿಂದ ಒಳಗೊಂಡಿದೆ. ಇದರಿಂದ ಬರುವ ಕಂದಾಯದ ಹಣದ ಮೌಲ್ಯವು ಹನ್ನೆರಡು ಕೋಟಿ ಹೋನು(ನಾಣ್ಯ), ಆತನ ರಾಜಮುದ್ರೆಯು ಎಲ್ಲರ ಮನದ ಮೇಲೆ ಬಿದ್ದುಬಿಟ್ಟಿದೆ. ಇಂತಹ ರಾಜನೊಡನೆ ಯುದ್ಧ ಮಾಡುವುದು ಉಚಿತವಲ್ಲ, ನಮ್ಮ ಅಭಿಮತವೆಂದರೆ, ಹುಜೂರರು ಹುಸೇನ ನಿಜಾಮಶಾಹನೊಂದಿಗೆ ಮಿತ್ರತ್ವದ ಸಂಬಂಧವನ್ನು ಬೆಳೆಸುವುದು ಹಾಗೂ ಆತನೊಡನೆ ಶತ್ರುತ್ವವನ್ನು ತೊರೆಯುವುದು."

ಹುಸೇನ ನಿಜಾಮಶಾಹ ಮತ್ತು ಅಲಿ ಆದಿಲಶಾಹನೊಡನೆ ಉತ್ತಮ ಬಾಂಧವ್ಯ ಬೆಳೆಸುವ ಪ್ರಯತ್ನ :

ಅಲಿ ಆದಿಲಶಾಹನಿಗೆ ತನ್ನ ಸಲಹೆಗಾರರ ಈ ಸಲಹೆಯು ಬಹಳ ಮೆಚ್ಚುಗೆಯಾಯಿತು. ಅವರಿಬ್ಬರೂ ನೀಡಿದ ಸಮಂಜಸ ಸಲಹೆಯನ್ನು ಪ್ರಶಂಸಿಸಿ, ಮಹಮದ್ ಕಿಶ್ವರಖಾನನಿಗೆ ಈ ವಿಷಯದಲ್ಲಿ ಮುಖಂಡನಾಗಿ ನಿಯಮಿಸಿದನು. ಎಲ್ಲಕ್ಕೂ ಮೊದಲು, ಕಿಶ್ವರಖಾನನು ಅಲಿ ಆದಿಲಶಾಹನ ಪರವಾಗಿ ದೂತನೊಬ್ಬನನ್ನು ಇಬ್ರಾಹಿಮ್ ಕುತುಬಶಾಹನ ಬಳಿ ಕಳುಹಿಸಿ, ತಮ್ಮ ಇಂಗಿತವನ್ನು ಪ್ರಕಟಪಡಿಸಿದನು. ಇಬ್ರಾಹಿಮನು ಮೊದಲಿನಿಂದಲೇ ವಿಜಯನಗರದವರ ಬಗ್ಗೆ ರೋಷದಿಂದ ಕುದಿಯುತ್ತಿದ್ದನು. ಆತನು ಅಲಿ ಆದಿಲಶಾಹ ಮತ್ತು ಹುಸೇನ ನಿಜಾಮಶಾಹರಲ್ಲಿ ಸ್ನೇಹಸಂಬಂಧದ ಬೆಸುಗೆ ಹಾಕುವ ಹಾಗೂ ಗಲಭೆಗೆ ಕಾರಣವಾಗಿರುವ ಸೋಲಾಪುರ

ಕಿಲ್ಲೆಯನ್ನು ಹುಸೇನ ನಿಜಾಮಶಾಹನಿಂದ ಅಲಿ ಆದಿಲಶಾಹನ ವಶಕ್ಕೆ ಒಪ್ಪಿಸುವ ವಾಗ್ದಾನ ಮಾಡಿದನು.

ಮುಸ್ತಫಾಖಾನ್ ಅರ್ದಸ್ತಾನಿಯು ಹುಸೇನ ನಿಜಾಮಶಾಹನನ್ನು ಭೇಟಿಯಾಗುವದು

ಇಬ್ರಾಹಿಮ್ ಕುತುಬಶಾಹನು ಸಯ್ಯದ ವಂಶದವನಾದ, ಕುಲೀನ ಜನಾಂಗದ ವ್ಯಕ್ತಿಯಾದ ಮುಸ್ತಫಾಖಾನ ಅರ್ದಸ್ತಾನಿಯನ್ನು ಬಿಜಾಪುರದಲ್ಲಿ ಅಲಿ ಆದಿಲಶಾಹನನ್ನು ಭೇಟಿಯಾಗಲು, ಅಲ್ಲಿಂದ ಅಹಮದ್‌ನಗರಕ್ಕೆ ಹೊರಟು ಸಂಧಾನ ಮತ್ತು ಹೊಂದಾಣಿಕೆಗಳ ಬಗ್ಗೆ ಚರ್ಚೆ ಮಾಡಲು ಕಳುಹಿಸಿ ಕೊಟ್ಟನು. ಅರ್ದಿಸ್ತಾನಿಯು ಬಿಜಾಪುರ ತಲುಪಿ, ಅಲಿ ಆದಿಲಶಾಹನು ತನ್ನ ನಿಲುವಿಗೆ ಬದ್ಧವಾಗಿರುವುದನ್ನು ಖಚಿತಪಡಿಸಿಕೊಂಡು, ಅಹಮದ್‌ನಗರಕ್ಕೆ ತೆರಳಿದನು. ಅಹಮದ್‌ನಗರ ತಲುಪಿದ ನಂತರ ಅರ್ದಿಸ್ತಾನಿಯು ಹುಸೇನ ನಿಜಾಮಶಾಹನನ್ನು ಭೇಟಿಯಾಗಿ, ಏಕಾಂತದಲ್ಲಿರುವ ಸಮಯದಲ್ಲಿ, "ಬಹಮನಿ ಸುಲ್ತಾನರ ಆಳ್ವಿಕೆಯಲ್ಲಿ, ದಕ್ಷಿಣದ ಎಲ್ಲ ರಾಜ್ಯಗಳು ಬಹಮನಿ ಆಡಳಿತದ ಅಧೀನದಲ್ಲಿದ್ದವು. ಕೆಲವು ಸಲ ಮುಸಲ್ಮಾನರು ಹಿಂದುಗಳನ್ನು ಎದುರಿಸಿ ಜಯಗಳಿಸುತ್ತಿದ್ದರು. ಕೆಲವು ಬಾರಿ ವಿಜಯನಗರದ ಹಿಂದುಗಳು ಮುಸಲ್ಮಾನರಿಗಿಂತ ಪ್ರಬಲರಾಗುತ್ತಿದ್ದರು. ಬಹಮನಿ ಸುಲ್ತಾನರು ಕೆಲವು ಸಲ ಯಾವುದೇ ಪರಿಣಾಮವಿಲ್ಲದೆ ಯುದ್ಧ ನಿಲ್ಲಿಸಿಬಿಡುತ್ತಿದ್ದರು ಹಾಗೂ ವಿಜಯನಗರದ ಹಿಂದುಗಳೊಡನೆ ಸದ್ವರ್ತನೆಯಿಂದ ನಡೆದುಕೊಳ್ಳುತ್ತಿದ್ದರು. ಈಗ ದಕ್ಷಿಣದ ರಾಜ್ಯಗಳು ಒಬ್ಬರ ಆಳ್ವಿಕೆಗೆ ಒಳಪಟ್ಟಿಲ್ಲ. ಹಲವಾರು ಅರಸರ ಆಡಳಿತದಲ್ಲಿ ಹಂಚಿ ಹೋಗಿದೆ. ಈಗ ಎಲ್ಲ ಮುಸಲ್ಮಾನ ಅರಸರು ಪರಸ್ಪರ ಮಿತ್ರತ್ವದಿಂದ, ಒಗ್ಗಟ್ಟಿನಿಂದ ಇರುವುದು ವಿವೇಕಯುತವಾದ ನಿರ್ಧಾರವಾಗಿದೆ. ಪರಸ್ಪರರು ಸ್ನೇಹದಿಂದ ಇದ್ದಲ್ಲಿ, ಶತ್ರುಗಳ ಭಯದಿಂದ ರಕ್ಷಣೆ ಪಡೆಯಬಹುದು. ರಾಮರಾಜನ ಸಾಮರ್ಥ್ಯವು ಕ್ರಮೇಣ ಹೆಚ್ಚುತ್ತಿರುವುದು ನಿಮಗೆ ಚೆನ್ನಾಗಿ ಗೊತ್ತಿದೆ. ಇದಲ್ಲದೆ ಕರ್ನಾಟಕದ ಎಲ್ಲ ಅರಸರು ರಾಮರಾಜನ ಅಧೀನರಾಗಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ, ಮುಸಲ್ಮಾನ ಅರಸರು ಒಬ್ಬರೊಡನೊಬ್ಬರು ಮನಸ್ತಾಪ ಮಾಡಿಕೊಳ್ಳುವದು ವ್ಯರ್ಥ" ಎಂದು ಹೇಳಿದನು.

ಅರಸು ಮನೆತನಗಳಲ್ಲಿ ವಿವಾಹ ಬಂಧನ :

ಹುಸೇನ ನಿಜಾಮಶಾಹನು ಸಯ್ಯದ ಅರ್ದಿಸ್ತಾನಿಯ ಸ್ಪಷ್ಟ ಹಾಗೂ ನೇರ ನುಡಿಗಳನ್ನು ಕೇಳಿ ಬಹಳ ಪ್ರಸನ್ನನಾದನು. ಆತನು ನೀಡಿದ ಸಲಹೆಯನ್ನು ಹೊಗಳಿದನು. ಸಯ್ಯದ ಅರ್ದಿಸ್ತಾನಿಯು ಅಹಮದ್‌ನಗರದ ಸರದಾರರಾದ ಖಾಸಿಮ ಬೇಗ ಹಕೀಮ ತಬರೇಜಿ ಮತ್ತು ಮುಲ್ಲಾ ಇನಾಯಿತುಲ್ಲಾ ಖಸದನಿ ಇವರೊಂದಿಗೆ ಚರ್ಚೆ ಮಾಡಿದನು. ಇಬ್ಬರೂ ಸುಲ್ತಾನರ ನಡುವೆ ಮಿತ್ರತ್ವ ಉಂಟು ಮಾಡಲು ಉಪಾಯ ಮಾಡಿದರು. ಅವರು ದೀರ್ಘಾಲೋಚನೆ ಮಾಡಿ, ಹುಸೇನ ನಿಜಾಮಶಾಹನು

ತನ್ನ ಮಗಳು ಚಾಂದಬೀಬಿಯ ವಿವಾಹವನ್ನು ಅಲಿ ಶಾಹ ಸುಲ್ತಾನನೊಡನೆ ಮಾಡಬೇಕು. ತನ್ನ ಮಗಳ ವಿವಾಹದ ಕಾಣಿಕೆಯಾಗಿ ಸೋಲಾಪುರ ಕಿಲ್ಲೆಯನ್ನು ಕೊಡಬೇಕು. ಇದೇ ರೀತಿ, ಅಲಿ ಆದಿಲಶಾಹನು ತನ್ನ ಸಹೋದರಿ ಹದಿಯಾ ಸುಲ್ತಾನಳ ವಿವಾಹವನ್ನು ಹುಸೇನ ನಿಜಾಮಶಾಹನ ಹಿರಿಯ ಮಗ ರಾಜಕುಮಾರ ಮುರ್ತುಜಾನೊಡನೆ ಮಾಡಿಕೊಡಬೇಕು. ಈ ಸಂಬಂಧಗಳಿಂದ ಇಬ್ಬರೂ ಅರಸರ ನಡುವೆ ಉತ್ತಮ ಬಾಂಧವ್ಯ ಬೆಳೆಯುವುದು. ನಂತರ, ಮೂರೂ ರಾಜರು ಒಟ್ಟಾಗಿ ರಾಮರಾಜನ ಮೇಲೆ ದಾಳಿ ಮಾಡುವುದು ಹಾಗೂ ಅವರ ದುಷ್ಕೃತ್ಯಗಳಿಗೆ ಕಠಿಣ ಶಿಕ್ಷೆ ನೀಡುವದು ಎಂದು ನಿರ್ಧರಿಸಿದರು.

ಚಾಂದಬೀಬಿ ಮತ್ತು ರಾಜಕುವರಿ ಹದಿಯಾ ಸುಲ್ತಾನಳ ವಿವಾಹ :

ಮುಸ್ತಫಾಖಾನ ಅರ್ದಿಸ್ತಾನಿಯೊಡನೆ ಮುಲ್ಲಾ ಇನಾಯಿತುಲ್ಲಾ ರಾಯಭಾರಿಯಾಗಿ ಬಿಜಾಪುರಕ್ಕೆ ಬಂದನು. ಅಹಮದ್‌ನಗರದಲ್ಲಿ ತೆಗೆದುಕೊಂಡ ನಿರ್ಧಾರವನ್ನು ಬಿಜಾಪುರದಲ್ಲಿ ಬಲಪಡಿಸಿದರು. ಒಂದೇ ದಿನದಲ್ಲಿ ಎರಡೂ ಮನೆತನಗಳಲ್ಲಿ ವಿವಾಹ ಸಮಾರಂಭದ ಶೃಂಗಾರ ಮಾಡಲಾಯಿತು. ಚಾಂದಬೀಬಿ ಬಿಜಾಪುರಕ್ಕೆ ಬಂದಳು. ಹದಿಯಾ ಸುಲ್ತಾನಳನ್ನು ಅಹಮದ್‌ನಗರಕ್ಕೆ ಬೀಳ್ಕೊಡಲಾಯಿತು. ಈ ವಿವಾಹ ಸಮಾರಂಭಗಳು ಬಹಳ ಅದ್ಧೂರಿಯಾಗಿ ವಿಜೃಂಭಣೆಯಿಂದ ನಡೆದವು. ಉಭಯಪಕ್ಷದವರು ತುಂಬು ಹೃದಯದಿಂದ ಸಮಾರಂಭಗಳನ್ನು ಏರ್ಪಡಿಸಿದ್ದರು.

ರಾಮರಾಜನನ್ನು ನಾಶ ಮಾಡುವ ಹಂಚಿಕೆ :

ವಿವಾಹ ಕಾರ್ಯಕ್ರಮದ ಸಮಾರಂಭಗಳನ್ನು ಪೂರೈಸಿದ ನಂತರ, ಅಲಿ ಆದಿಲಶಾಹನು ರಾಯಚೂರ ಮತ್ತು ಮುದಗಲ್ ಕೋಟೆಗಳನ್ನು, ಅಹೆತ್‌ಕರ್ ಮತ್ತು ಯಾಕರಿ(ಯಾದಗಿರಿ) ಪರ್ಗಣೆ(ಪ್ರದೇಶ)ಗಳನ್ನು ವೈರಿಗಳ ವಶದಿಂದ ಹಿಂದಿರುಗಿ ಪಡೆಯುವ ನಿರ್ಧಾರ ಮಾಡಿದನು. ಈ ಉದ್ದೇಶವನ್ನು ಕಾರ್ಯಗತಗೊಳಿಸಲು, ಅಲಿ ಆದಿಲಶಾಹನು ರಾಮರಾಜನ ಬಳಿ ದೂತನನ್ನು ಕಳುಹಿಸಿದನು. ರಾಮರಾಜನು ದೂತನೊಡನೆ ದುರ್ವರ್ತನೆಯಿಂದ ನಡೆದುಕೊಂಡು, ವಿಜಯನಗರದಿಂದ ಹೊರಗೆ ಅಟ್ಟಿದನು. ರಾಮರಾಜನ ಬದಲಾದ ಈ ಬಣ್ಣವನ್ನು ನೋಡಿ, ಅಲಿ ಆದಿಲಶಾಹನಿಗೆ ಬಹಳ ಕೋಪ ಬಂದಿತು. ಆತನು ಹುಸೇನ ನಿಜಾಮಶಾಹ, ಇಬ್ರಾಹಿಮ ಕುತುಬಶಾಹ ಮತ್ತು ಅಲಿ ಬರೀದ ಇವರೊಡಗೂಡಿ ರಾಮರಾಜನನ್ನು ಸಂಪೂರ್ಣ ನಾಶಮಾಡುವ ಧೃಡ ನಿರ್ಧಾರ ಕೈಗೊಂಡನು.

ವಿಜಯನಗರದ ಮೇಲೆ ಮುಸಲ್ಮಾನ ಅರಸರ ದಾಳಿ :

ಹಿಜರಿ ಶಕೆ ೯೭೨ರಲ್ಲಿ ಈ ನಾಲ್ಕೂ ಜನ ಅರಸರು ಬಿಜಾಪುರದ ಬಳಿ ಒಂದು ಸ್ಥಳದಲ್ಲಿ ಒಟ್ಟುಗೂಡಿದರು. ಹಿಜರಿ ಶಕೆ ೯೭೨ರ ಜಮಾದಿಲ ತಿಂಗಳ ೩ನೆಯ

ದಿನದಂದು ವಿಜಯನಗರದತ್ತ ಹೊರಟರು. ಮಾರ್ಗವನ್ನು ಕ್ರಮಿಸುತ್ತ ಕೃಷ್ಣಾನದಿಯ ತೀರದಲ್ಲಿರುವ ಬಾಲಂಕೋಥ (ತಾಳಿಕೋಟೆ?)ತಲುಪಿದರು. ಈ ಪ್ರದೇಶವು ಅಲಿ ಆದಿಲಶಾಹನ ವಶದಲ್ಲಿತ್ತು. ಅಲ್ಲಿಗೆ ಬಂದ ನಂತರ ಅಲಿ ಆದಿಲಶಾಹನು ತನ್ನ ಜೊತೆಗಾರ ಅರಸರಿಗೆ ಪುನಃ ಆಮಂತ್ರಿಸಿದನು. ಅಲಿ ಆದಿಲಶಾಹನು ತನ್ನ ಅಧೀನದಲ್ಲಿರುವವರಿಗೆಲ್ಲ ಸಂದೇಶ ಕಳುಹಿಸಿ, ಮುಸಲ್ಮಾನ ಸೈನ್ಯಕ್ಕೆ ತೊಂದರೆಯಾಗದಂತೆ, ಆಹಾರಧಾನ್ಯ ಮತ್ತಿತರ ಎಲ್ಲ ಅಗತ್ಯ ಸಾಮಗ್ರಿಗಳನ್ನು ತರಿಸಿದನು.

ರಾಮರಾಜನ ಸಮರ ಸಿದ್ಧತೆ :

ವಿಜಯನಗರದ ರಾಜ ರಾಮರಾಜನಿಗೆ ಮುಸಲ್ಮಾನ ಬಾದಶಹರ ಬರುವಿಕೆಯ ಸಮಾಚಾರ ತಿಳಿದಾಗ, ಆತನು ಗಾಬರಿಯಾಗಲಿಲ್ಲ. ಈ ಅರಸರೊಂದಿಗೆ ಯುದ್ಧ ಮಾಡುವುದು ಬಹಳ ಸುಲಭ ಕೆಲಸವೆಂದು ತಿಳಿದುಕೊಂಡನು. ಮೊತ್ತಮೊದಲು, ಇಪ್ಪತ್ತು ಸಾವಿರ ಕುದುರೆ ಸವಾರರು, ಐದುನೂರು ಆನೆಗಳು ಮತ್ತು ಒಂದು ಲಕ್ಷ ಪದಾತಿಗಳ ಬೃಹತ್ ಸೈನ್ಯದೊಂದಿಗೆ, ತನ್ನ ಸೋದರ ತಿಮ್ಮರಾಜನನ್ನು ನದಿಯ ತೀರದ ಎಲ್ಲ ಮಾರ್ಗಗಳನ್ನು ಮುಚ್ಚಿಬಿಡಲು ಕಳುಹಿಸಿಕೊಟ್ಟನು. ತಿಮ್ಮರಾಜನನ್ನು ಕಳುಹಿಸಿದ ನಂತರ, ರಾಮರಾಜನು ತನ್ನ ಎರಡನೆಯ ಸೋದರ ತೆಂಕನಾದ್ರಿಯನ್ನು ಅಗತ್ಯ ಸಾಮಗ್ರಿಗಳೊಡನೆ ಕಳಹಿಸಿಕೊಟ್ಟನು. ಇವರು ನದಿಯ ದಂಡೆಯ ಪ್ರದೇಶವನ್ನು ವಶಪಡಿಸಿಕೊಂಡರು. ಇದರಿಂದಾಗಿ, ಮುಸಲ್ಮಾನರಿಗೆ ನದಿಯನ್ನು ದಾಟಿ ಮುಂದೆ ಸಾಗುವುದು ಕಷ್ಟವಾಯಿತು. ಕೊನೆಗೆ ರಾಮರಾಜನು ಸ್ವತಃ ಸುತ್ತಮುತ್ತಲಿನ ರಾಜರನ್ನು ಕರೆದುಕೊಂಡು ಬಲಿಷ್ಠ ಸೈನ್ಯದೊಡನೆ ವೈರಿಗಳತ್ತ ಹೊರಟನು.

ನದಿಯನ್ನು ದಾಟುವ ಮಾರ್ಗದ ಶೋಧ :

ಮುಸಲ್ಮಾನ ಅರಸರು ನದಿಯ ಆಳವನ್ನು ಅಂದಾಜಿಸಲು ಸೈನ್ಯದ ಒಂದು ಗುಂಪನ್ನು ನೀರಿನಲ್ಲಿ ಇಳಿಸಿದರು. ಅವರು ಮೂವತ್ತು ನಲವತ್ತು ಹರದಾರಿ ದೂರವನ್ನು ನದಿಯಲ್ಲಿ ಕ್ರಮಿಸಿದಾಗ, ಹೆಚ್ಚು ಆಳವಿಲ್ಲದ ದಾರಿ ಗೋಚರಿಸಿತು. ಇನ್ನೂ ಹೆಚ್ಚು ಶೋಧಿಸಿದ ಮೇಲೆ, ಆ ಗುಂಪಿನವರು "ನದಿಯ ನೀರು ಆಳವಿಲ್ಲದ ಮಾರ್ಗದಿಂದ ನಮ್ಮ ಸೈನ್ಯವು ನದಿಯನ್ನು ದಾಟಲು ಸಾಧ್ಯವಿರುವ ಸ್ಥಳದ ಎದುರಿಗೆ ನೇರವಾಗಿ ಹಿಂದುಗಳ ಸೈನ್ಯವು ಕಾಯುತ್ತ ನಿಂತುಬಿಟ್ಟಿದೆ. ಹಿಂದುಗಳು ಒಂದು ಗೋಡೆಯನ್ನು ಕಟ್ಟಿ ಅದರೊಳಗೆ ವಿವಿಧ ರೀತಿಯ ಗುಂಡು ಮತ್ತು ಸಿಡಿಮದ್ದುಗಳನ್ನು ತುಂಬಿ ಇಟ್ಟಿದ್ದಾರೆ" ಎಂದು ತಿಳಿಸಿದರು.

ಕಾರ್ಯಗತಗೊಳಿಸಲು ಅರ್ಹವಾದ ಒಂದು ಸಮಂಜಸ ಸಲಹೆ :

ಇಂತಹ ಪರಿಸ್ಥಿತಿಯನ್ನು ಎದುರಿಸುವುದು ಮುಸಲ್ಮಾನ ಅರಸರಿಗೆ ಬಹಳ ಕಷ್ಟವಾಯಿತು. ಈ ಸಮಸ್ಯೆಯ ಪರಿಹಾರಕ್ಕಾಗಿ ಪರಸ್ಪರರಲ್ಲಿ ಚರ್ಚೆಯಾಗಿ ಹಲವಾರು

ಅಭಿಪ್ರಾಯಗಳು ಕೇಳಿಬಂದವು. ಅಂತಿಮವಾಗಿ, 'ನಾವು ಇನ್ನೊಂದು ಸ್ಥಳದಿಂದ ನದಿಯ ಘಾಟನ್ನು ದಾಟಿರುವುದಾಗಿ ವದಂತಿ ಹಬ್ಬಿಸಬೇಕು' ಈ ಸ್ಥಳದಲ್ಲಿ ನಮ್ಮ ಸೈನ್ಯದ ತಂಡವೊಂದು ಆಗಾಗ ಮತ್ತೆ ತೆರಳಬೇಕು. ಇದನ್ನು ನೋಡಿದ ವೈರಿಗಳು ಮೋಸಹೋಗಿ ನಮ್ಮನ್ನು ಮಾರ್ಗ ಮಧ್ಯದಲ್ಲಿಯೇ ಬಂಧಿಸುವ ಯೋಜನೆ ಮಾಡುತ್ತಾರೆ. ಈ ಯೋಜನೆಯನ್ನು ಕಾರ್ಯಗತಗೊಳಿಸಲು ತಮ್ಮ ಸ್ಥಳವನ್ನು ಬಿಟ್ಟು ಸರಿದು ಹೋಗುತ್ತಾರೆ. ಮುಖ್ಯವಾದ ಘಾಟನ್ನು ಬಿಟ್ಟು ಹೋಗುತ್ತಾರೆ. ಇದಾದ ನಂತರ, ಮುಖ್ಯವಾದ ಘಾಟಿನ ಬಳಿ ನಾವು ಹೋಗಿ ಹೊಳೆಯನ್ನು ದಾಟಬೇಕು' ಎಂಬ ನಿರ್ಧಾರ ಮಾಡಿದರು.

ಹಿಂದುಗಳ ನಿಷ್ಕಾಳಜಿ :

ಮುಸಲ್ಮಾನರು ಈ ನಿರ್ಧಾರವನ್ನು ಕಾರ್ಯರೂಪಕ್ಕೆ ತರಲು ಹೊಳೆಯ ದಂಡೆಯಗುಂಟ ಹೊರಟರು. ಮುಸಲ್ಮಾನರು ಇನ್ನೊಂದು ದಡದ ಶೋಧ ಮಾಡಿರಬಹುದೆಂದು ವೈರಿಗಳು ತಿಳಿದರು. ಅವರು ಹೆಚ್ಚು ಯೋಚಿಸದೆ ನಿಷ್ಕಾಳಜಿಯಿಂದ ತಮ್ಮ ಸ್ಥಳವನ್ನು ಬಿಟ್ಟು ಮುಸಲ್ಮಾನರನ್ನು ಮುಖಾಮುಖಿ ಎದುರಿಸಲು ಹೊರಟುಬಿಟ್ಟರು. ಏಕೆಂದರೆ, ರಾಮರಾಜನ ವಂಶವು ಅಳಿದುಹೋಗಲಿ, ರಾಜ್ಯದ ಆಡಳಿತವು ಆತನ ಮನೆತನದಿಂದ ಹೊರಟುಹೋಗಲಿ ಎಂಬುದು ಅಲ್ಲಾಹನ ಇಚ್ಛೆಯಾಗಿತ್ತು. ಹೀಗಾಗಿ, ಹಿಂದುಗಳು ಹೆಚ್ಚು ಮುಂಜಾಗರೂಕತೆ ವಹಿಸದೆ ಮತ್ತು ಕಾಳಜಿಪೂರ್ವಕವಾಗಿ ವಿಚಾರ ಮಾಡದೆ, ಮುಸಲ್ಮಾನರ ಸೈನ್ಯವನ್ನು ತಡೆಯಲು ತಮ್ಮ ಸೈನ್ಯದ ಒಂದು ತುಕಡಿಯನ್ನೂ ಹೊಳೆಯ ಮುಖ್ಯ ದಡದ ಬಳಿ ಬಿಡದೆ ಹೊರಟು ಹೋದರು.

ಮುಸಲ್ಮಾನ ಸೈನ್ಯವು ಹೊಳೆಯನ್ನು ದಾಟುವುದು :

ಮುಸಲ್ಮಾನರು ತಮ್ಮ ಉಪಾಯವು ಫಲಿಸಿರುವುದನ್ನು ನೋಡಿ, ಮುಖ್ಯ ದಡದತ್ತ ತಿರುಗಿದರು. ಎರಡು ಮೂರು ದಿನಗಳ ದಾರಿಯನ್ನು ಕೇವಲ ಹನ್ನೆರಡು ಗಂಟೆಗಳಲ್ಲಿ ಕ್ರಮಿಸಿ ದಂಡೆಯನ್ನು ತಲುಪಿದರು. ಶತ್ರುಸೈನ್ಯವು ಅಲ್ಲಿಯವರೆಗೆ ಇನ್ನೂ ತಲುಪಿರಲಿಲ್ಲ. ಮುಸಲ್ಮಾನರ ತಂಡವೊಂದು ಸಾವಧಾನವಾಗಿ ದಂಡೆಯಿಂದ ಕೆಳಗಿಳಿಯಿತು. ನಂತರ, ಮುಸಲ್ಮಾನರ ಸೈನಿಕರು ಹೊಳೆಯನ್ನು ದಾಟಿ ಮೈದಾನದಲ್ಲಿ ಬಂದರು. ಬೆಳಗಾಗುತ್ತಲೇ ಈ ಸೈನ್ಯವು ಐದು ಹರದಾರಿ ದೂರದಲ್ಲಿ ಬಿಡಾರ ಹೂಡಿರುವ ರಾಮರಾಜನ ಸೈನ್ಯದತ್ತ ಹೊರಟಿತು. ಇಂತಹ ಪರಿಸ್ಥಿತಿಯನ್ನು ನಿರೀಕ್ಷಿಸಿರದ ಹಿಂದುಗಳು ಗಾಬರಿಗೊಂಡರು. ಆದರೆ ಧೈರ್ಯ ಕಳೆದುಕೊಳ್ಳಲಿಲ್ಲ. ರಾತ್ರಿಯಿಡೀ ಸಮರದ ಸಿದ್ಧತೆ ಮಾಡತೊಡಗಿದರು.

ಮುಸಲ್ಮಾನ ಸೈನ್ಯದ ವ್ಯವಸ್ಥೆ :

ಎರಡನೆಯ ದಿನ ಮುಸಲ್ಮಾನ ಬಾದಶಹರು ಹನ್ನೆರಡು ಇಮಾಮರ ಪ್ರಾರ್ಥನೆ ಮಾಡಿದರು. ತಮ್ಮ ಸೈನ್ಯವನ್ನು ಕ್ರಮಬದ್ಧವಾಗಿ ವ್ಯವಸ್ಥಿತಗೊಳಿಸಿದರು. ಅಲಿ ಬರೀದ ಮತ್ತು ಇಬ್ರಾಹಿಮ ಕುತುಬಶಾಹರಿಗೆ ಎಡಬಾಗದ ಸೈನ್ಯದ ನಿರ್ವಹಣೆ, ಬಲಭಾಗ ಮತ್ತು ಕೇಂದ್ರದ ಸೈನ್ಯದ ವ್ಯವಸ್ಥೆಯನ್ನು ಅಲಿ ಆದಿಲಶಾಹ ಮತ್ತು ಹುಸೇನ ನಿಜಾಮಶಾಹರಿಗೆ ನೀಡಲಾಯಿತು. ಯುದ್ಧದ ಆನೆಗಳನ್ನು ಎಲ್ಲೆಡೆಯಲ್ಲಿ ನಿಲ್ಲಿಸಲಾಯಿತು. ಇದಾದ ನಂತರ, ಮುಸಲ್ಮಾನರು ಶತ್ರುಗಳ ವಿರುದ್ಧ ಪ್ರಬಲವಾದ ಆಕ್ರಮಣ ಮಾಡಿದರು. ವಿಜಯನಗರದ ರಾಜನು ಸಹ ತನ್ನ ಸೇನೆಯನ್ನು ಶಿಸ್ತಿನಿಂದ ವಿಂಗಡಿಸಿದನು. ಸೈನಿಕರಿಗೆ ಬಹುಮಾನ-ಪುರಸ್ಕಾರಗಳನ್ನು ನೀಡುವ ವಾಗ್ದಾನಗಳಿಂದ ಪುಸಲಾಯಿಸಿ ಯುದ್ಧ ಮಾಡಲು ಹುರಿದುಂಬಿಸಿದನು.

ಹಿಂದು ಸೇನೆಯ ವ್ಯವಸ್ಥೆ :

ಹಿಂದು ಸೇನೆಯ ಬಲಭಾಗವು ತಿಮ್ಮರಾಜನ ವಶದಲ್ಲಿತ್ತು ಹಾಗೂ ಕುತುಬಶಾಹನ ಎದುರಾಗಿ ನಿಂತುಕೊಂಡಿತ್ತು. ತೆಂಕನಾದ್ರಿ ಎಡಭಾಗದ ಸೇನೆಯೊಡನಿದ್ದು, ಆದಿಲಶಾಹನಿಗೆ ಎದುರಾಗಿ ನಿಂತಿದ್ದನು. ರಾಮರಾಜನು ಸೈನ್ಯದ ಕೇಂದ್ರ ಭಾಗವನ್ನು ಸಂಭಾಳಿಸಲು ನಿಂತಿದ್ದನು. ಹೀಗಾಗಿ ರಾಮರಾಜನು ಹುಸೇನ ನಿಜಾಮಶಾಹನಿಗೆ ಮುಖಾಮುಖಿಯಾಗಿ ನಿಂತನು. ವಿಜಯನಗರದ ರಾಜನು ತನ್ನೊಡನೆ ಎರಡು ಸಾವಿರ ಆನೆ, ಒಂದು ಸಾವಿರ ತೋಪುಗಳನ್ನು ತೆಗೆದುಕೊಂಡು ಯುದ್ಧಭೂಮಿಗೆ ಬಂದಿದ್ದನು. ರಾಮರಾಜನು ಆನೆಯ ಮೇಲೆ ಅಂಬಾರಿಯಲ್ಲಿ ಕುಳಿತು, ಮಧ್ಯಾಹ್ನದ ಸಮಯ ಯುದ್ಧ ಮಾಡಲು ಹೊರಟನು. ಅಂಬಾರಿಯಲ್ಲಿ ಕುಳಿತು ಯುದ್ಧಕ್ಕೆ ಹೋಗುವುದನ್ನು ತಡೆಯಲು ರಾಜನ ಸಂಗಡಿಗರು ಪ್ರಯತ್ನಿಸಿದರು. ಆದರೆ ರಾಜನು ಕೇಳಲಿಲ್ಲ. ಅಲ್ಲದೆ, "ಇದು ಮಕ್ಕಳ ಯುದ್ಧ, ಕುದುರೆಸವಾರನಾಗಿ ಈ ಯುದ್ಧ ಮಾಡುವ ಅಗತ್ಯವೇನಿದೆ? ವೈರಿಗಳು ನಮ್ಮ ಮುಂದೆಯೇ ಪಲಾಯನ ಮಾಡುವರು" ಎಂದು ಹೇಳಿದನು.

ಯುದ್ಧದ ಆರಂಭ :

ಉಭಯಪಕ್ಷಗಳಲ್ಲಿ ಭೀಕರ ಕದನವು ಆರಂಭವಾಯಿತು. ಹಿಂದುಗಳು ಮತ್ತು ಮುಸ್ಲಿಮರು ರಕ್ತಪಿಪಾಸುಗಳಂತೆ ತಲವಾರುಗಳಿಂದ ಹೊಡೆದಾಡತೊಡಗಿದರು. ಯುದ್ಧವು ನಡೆಯುವ ರೀತಿಯನ್ನು ನೋಡಿದರೆ, ಒಂದು ಸಲ ಹಿಂದುಗಳ ವಿಜಯದ ತಕ್ಕಡಿಯ ತಟ್ಟೆ ಮೇಲೇರಿದರೆ, ಇನ್ನೊಂದು ಸಲ ಮುಸಲ್ಮಾನರದು ಮೇಲೇರುತ್ತಿತ್ತು. ವಿಜಯನಗರದ ಸಿಪಾಯಿಗಳು ಐವತ್ತು ಸಾವಿರ ಬಾಣ, ಸಿಡಿಮದ್ದು ಮತ್ತು ತುಫಂಗಗಳನ್ನು ಹಾರಿಸಿ, ತಮ್ಮೆಲ್ಲ ಬಲ ಪ್ರದರ್ಶಿಸಿ ಮುಸಲ್ಮಾನರ ಸಾಮರ್ಥ್ಯ

ಕಡಿಮೆ ಮಟ್ಟದ್ದು ಎಂದು ತೋರಿಸುವ ಪ್ರಯತ್ನ ಮಾಡುತ್ತಿದ್ದರು. ಮುಸಲ್ಮಾನರು ಪರಾಭವದಿಂದ ರಣರಂಗ ತೊರೆದು ಪಲಾಯನ ಮಾಡುವ ಸಾಧ್ಯತೆಗಳು ಕಂಡುಬಂದವು. ಆದರೆ, ಹುಸೇನ ನಿಜಾಮಶಾಹನು ತ್ವರಿತವಾಗಿ ಮಾಡಿದ ಉಪಾಯದಿಂದ, ರಾಮರಾಜನನ್ನು ಬಂದಿಯಾಗಿ ಮಾಡಲಾಯಿತು. ಇದರ ವಿವರಗಳು ಈ ಕೆಳಗಿನಂತಿವೆ.

ರಾಮರಾಜನ ಉದಾರತೆ :

ಮುಸಲ್ಮಾನರು ರಣಭೂಮಿಯನ್ನು ತೊರೆದು ಪರಾರಿಯಾಗುವರೆಂದು ರಾಮರಾಜನ ಕಲ್ಪನೆಯಾಗಿತ್ತು. ಆದರೆ, ಪರಿಸ್ಥಿತಿಯು ಇದರ ವಿರುದ್ಧವಾಗಿ ನಡೆದಾಗ, ಆತನು ರೋಷಗೊಂಡು ಆನೆಯ ಮೇಲಿನಿಂದ ಕೆಳಗೆ ಇಳಿದು ಆಸನದ ಮೇಲೆ ಕುಳಿತುಬಿಟ್ಟನು. ಅರಸನ ಆದೇಶದಂತೆ, ಆತನು ಕುಳಿತ ನಾಲ್ಕೂ ಕಡೆಗಳಲ್ಲಿ ರೂಪಾಯಿ, ಚಿನ್ನದ ನಾಣ್ಯ ಮತ್ತು ಮುತ್ತುಗಳನ್ನು ಗುಡ್ಡೆ ಹಾಕಿದನು. ಯುದ್ಧ ನಡೆದಾಗ ರಾಜನು ರೂಪಾಯಿ ಮತ್ತು ನಾಣ್ಯಗಳನ್ನು ತನ್ನ ಸರದಾರರು ಮತ್ತು ಸೈನಿಕರಲ್ಲಿ ಯಾವುದೇ ಲೆಕ್ಕವಿಲ್ಲದಂತೆ ಹಂಚತೊಡಗಿದನು.

ಹಿಂದುಗಳ ರೋಷಾವೇಶ :

ಯಾವ ಸೈನಿಕ ವಿಜಯಿಯಾಗಿ ನನ್ನ ಬಳಿ ಬರುತ್ತಾನೆಯೋ ಆತನಿಗೆ ಈ ಸಂಪತ್ತನ್ನು ನೀಡಲಾಗುವುದು ಎಂದು ರಾಮರಾಜನು ಘೋಷಿಸಿದ. ದಕ್ಷಿಣದ ಸೈನಿಕರು ಈ ವಿಷಯ ಕೇಳಿ ಬಹುಮಾನದ ಆಸೆಯಿಂದ ಮೊದಲಿಗಿಂತ ಮತ್ತಿಷ್ಟು ಹುರುಪಿನಿಂದ, ಹೆಚ್ಚು ರೋಶಾವೇಶದಿಂದ ಯುದ್ಧ ಮಾಡತೊಡಗಿದರು. ತಿಮ್ಮರಾಜ ಮತ್ತು ತೆಂಕನಾದ್ರಿ ಮತ್ತಿತರರು ಮುಸಲ್ಮಾನರ ಮೇಲೆ ರಭಸವಾಗಿ ಆಕ್ರಮಣ ಮಾಡಿದರು. ಈ ಆಕ್ರಮಣದಿಂದ ಮುಸಲ್ಮಾನರ ಬಲ ಮತ್ತು ಎಡಭಾಗದ ಸೈನಿಕರಲ್ಲಿ ಕೋಲಾಹಲವುಂಟಾಯಿತು. ರಣಭೂಮಿಯು ಪ್ರಳಯಭೂಮಿಯಾಗಿ ಪರಿವರ್ತನೆಯಾಯಿತು.

ಹುಸೇನ ನಿಜಾಮಶಾಹನ ಪರಾಕ್ರಮ :

ಸೈನ್ಯದ ಅವಸ್ಥೆಯನ್ನು ನೋಡಿ ಮುಸಲ್ಮಾನ ಬಾದಶಹರನ್ನು ನಿರಾಸೆಯು ಆವರಿಸತೊಡಗಿತು. ಅವರು ತಮ್ಮ ನಿರ್ಧಾರದಿಂದ ಹಿಂಜರಿಯುವಂತೆ ಮಾಡಿತು. ಆದರೆ ಹುಸೇನ ನಿಜಾಮಶಾಹನು ತನ್ನನ್ನು ತಾನು ಸಂಭಾಳಿಸಿಕೊಂಡು, ಶೂರತನದಿಂದ ಹೋರಾಡತೊಡಗಿದನು. ನಾಲ್ಕೂ ದಿಕ್ಕಿನಲ್ಲಿ ವೈರಿಗಳು ಪ್ರಬಲರಾಗಿದ್ದರು. ಆತನೆಡೆ ವೈರಿಗಳಿಂದ ಸಾವಿರಾರು ಬಾಣಗಳು ಮತ್ತು ತುಫಂಗಗಳು ಹಾರುತ್ತಿದ್ದವು. ಆದರೆ, ಹುಸೇನ ನಿಜಾಮಶಾಹನು ವೈರಿಗಳ ಮೇಲೆ ದಾಳಿ ಮಾಡಲು ನಿರ್ಭಯತೆಯಿಂದ ಮುಂದುವರಿದನು. ನಿರಾಸೆಯಿಂದ ಚಿಂತಿತರಾಗಿದ್ದ ಮುಸಲ್ಮಾನ ಸೈನಿಕರು ನಿಜಾಮಶಾಹಿ

ಬಾವುಟವು ಮೇಲೆ ಹಾರುತ್ತಿರುವುದನ್ನು ನೋಡಿದ ತಕ್ಷಣ ನಿಜಾಮಶಾಹನ ಬಳಿ ಬಂದು ತಲುಪಿದರು. ಹುಸೇನ ನಿಜಾಮಶಾಹನು ತೋಪುಗಳಲ್ಲಿ ನಾಣ್ಯಗಳನ್ನು ತುಂಬಿಸಿ ಶತ್ರುಗಳತ್ತ ಹಾರಿಸಿಬಿಡಲು ಆದೇಶವನ್ನಿತ್ತನು. ತಾನು ಸ್ವತಃ ಹುತಾತ್ಮನ ಭಾವಾವೇಶದಲ್ಲಿ ಮದೋನ್ಮತ್ತನಂತೆ ಶತ್ರುಗಳತ್ತ ನುಗ್ಗಿದನು.

ಹಿಂದುಗಳ ಸೈನ್ಯದಲ್ಲಿ ಕೋಲಾಹಲ :

ಹುಸೇನ ನಿಜಾಮಶಾಹನ ವೀರಾವೇಶದ ದಾಳಿಯಿಂದ ರಾಮರಾಜನ ಸೈನ್ಯದಲ್ಲಿ ಗೊಂದಲ ಮತ್ತು ಭೀತಿ ಹರಡಿಕೊಂಡಿತು. ಎಂಬತ್ತು ವರ್ಷದ ವಯೋವೃದ್ಧ ರಾಮರಾಜನು ಭಯಭೀತನಾಗಿ ಮತ್ತೆ ಸಿಂಹಾಸನದ ಮೇಲೆ ಕುಳಿತುಕೊಂಡನು. ಈ ಸಂದರ್ಭದಲ್ಲಿ ಹುಸೇನ ನಿಜಾಮಶಾಹನ "ಗುಲಾಮ ಅಲಿ" ಎಂಬ ಆನೆಯೊಂದು, ಸಿಂಹಾಸನದ ಬಳಿ ಬಂದು ಸೈನಿಕರನ್ನು ತುಳಿಯತೊಡಗಿತು. ರಾಮರಾಜನ ಸಮೇತವಾಗಿ ಸಿಂಹಾಸನವನ್ನು ಎತ್ತುತ್ತಿದ್ದ ಸೇವಕನು ಆನೆಯ ಹಾವಳಿಗೆ ಹೆದರಿ, ಸಿಂಹಾಸನವನ್ನು ನೆಲದ ಮೇಲೆಸೆದು ಓಡಿಹೋದನು. ರಣಭೂಮಿಯಲ್ಲಿ ರಾಮರಾಜನಿಗೆ ಸಹಾಯ ಮಾಡುವ ಸಂಗಡಿಗರಾರೂ ಇಲ್ಲದೆ ಬಿದ್ದುಬಿಟ್ಟಿದ್ದನು. ಕೆಲವು ಕ್ಷಣಗಳ ನಂತರ ಮಾವುತನ ದೃಷ್ಟಿಯು ಸಿಂಹಾಸನದ ಮೇಲೆ ಬಿದ್ದಿತು. ಸುಂದರವಾದ ಸಿಂಹಾಸನವನ್ನು ನೋಡಿ ಆತನ ಬಾಯಲ್ಲಿ ನೀರೂರಿತು. ಆತನು ಸಿಂಹಾಸನವನ್ನು ವಶಪಡಿಸಿಕೊಳ್ಳುವದಕ್ಕಾಗಿ, ಆನೆಯನ್ನು ಈ ಕಡೆಗೆ ಓಡಿಸಿದನು.

ರಾಮರಾಜನ ವಧೆ :

ಸಮೀಪದಲ್ಲಿಯೇ ಒಬ್ಬ ಬ್ರಾಹ್ಮಣನು ನಿಂತಿದ್ದನು. ಆತನು ರಾಮರಾಜನ ಉಪ್ಪುಂಡವನಾಗಿದ್ದನು. ಆತನು ಮಾವುತನಿಗೆ, "ಈ ಸಿಂಹಾಸನದ ಮೇಲೆ ರಾಜಾ ರಾಮರಾಜನು ಕುಳಿತಿದ್ದಾನೆ. ಆತನಿಗಾಗಿ ನೀನು ಕುದುರೆ ತಂದರೆ, ರಾಜನು ನಿನಗೆ ಬಹುಮಾನ ನೀಡುವನು" ಎಂದು ಕೇಳಿಕೊಂಡನು. ಮಾವುತನು ರಾಜನ ಹೆಸರು ಕೇಳಿದೊಡನೆ, ರಾಜನನ್ನು ತನ್ನ ಆನೆಯ ಸೊಂಡಿಲಿನಲ್ಲಿ ಸುತ್ತಿಕೊಂಡು ತ್ವರಿತವಾಗಿ ಹುಸೇನ ನಿಜಾಮಶಾಹನ ತೋಪಖಾನೆಯ ಅಧಿಕಾರಿಯಾದ ರೂಮಿಖಾನನಿರುವಲ್ಲಿಗೆ ತಲುಪಿದನು. ರೂಮಿಖಾನನು ರಾಮರಾಜನನ್ನು ಬಂಧಿಸಿ, ಹುಸೇನ ನಿಜಾಮಶಾಹನ ವಶಕ್ಕೆ ಸಲ್ಲಿಸಿದನು. ನಿಜಾಮಶಾಹನು ಕೂಡಲೇ ರಾಮರಾಜನನ್ನು ವಧಿಸಿದನು. ಆತನ ರುಂಡವನ್ನು ಮುಂಡದಿಂದ ಬೇರ್ಪಡಿಸಿ ರಣಭೂಮಿಯಲ್ಲಿ ಎಸೆದುಬಿಟ್ಟನು.

ಹಿಂದುಗಳ ವಧೆ :

ಯುದ್ಧಭೂಮಿಯಲ್ಲಿ ತಮ್ಮ ರಾಜನ ರುಂಡವನ್ನು ನೋಡಿದೊಡನೆ ಹಿಂದು ಸೈನಿಕರ ಧೈರ್ಯವು ಕುಗ್ಗಿ ಹೋಯಿತು. ಅವರು ತಮ್ಮ ಕಾಲಿಗೆ ಬುದ್ಧಿ ಹೇಳಿದರು. ಮುಸಲ್ಮಾನರು ಅವರನ್ನು ಬೆನ್ನಟ್ಟಿದರು. ಅಸಂಖ್ಯಾತ ಹಿಂದುಗಳನ್ನು ತಲವಾರದಿಂದ

ಹೊಡೆದು ಕೊಂದು ಹಾಕಿದರು. ಒಂದು ಮೂಲದ ಪ್ರಕಾರ, ಈ ಯುದ್ಧದಲ್ಲಿ ಮೂರು ಲಕ್ಷ ಹಿಂದುಗಳು ಜೀವ ತೆತ್ತರು ಎಂದು ಹೇಳುತ್ತದೆ. ಆದರೆ, ಖಚಿತವಾದ ಐತಿಹ್ಯದ ಮೂಲದಂತೆ, ಸತ್ತವರ ಸಂಖ್ಯೆ ಒಂದು ಲಕ್ಷ. ವಿಜಯನಗರದಿಂದ ಹತ್ತು ಹರದಾರಿ ದೂರದಲ್ಲಿ ಆನೆಗೊಂದಿ ಪ್ರದೇಶವಿತ್ತು. ರಣಭೂಮಿಯಿಂದ ಆನೆಗೊಂದಿ ವರೆಗಿನ ಎಲ್ಲ ಮೈದಾನವೂ ಹಿಂದುಗಳ ಹೆಣದಿಂದ ತುಂಬಿ ಹೋಗಿತ್ತು. ಮುಸಲ್ಮಾನರ ಕೈಗೆ ಅಗಾಧ ಸಂಪತ್ತು ದೊರೆಯಿತು.

ಸುಲಿಗೆಯ ಸಂಪತ್ತು :

ಮುಸಲ್ಮಾನ ಅರಸರು ವಿಜಯ ದೊರೆತುದಕ್ಕೆ ಅಲ್ಲಾಹನಿಗೆ ಕೃತಜ್ಞತೆ ಸಲ್ಲಿಸಿದರು. ತಮ್ಮ ಸೈನಿಕರಿಗೆ ದೊರೆತ ಸುಲಿಗೆಯ ಸಂಪತ್ತಿನಲ್ಲಿ, ಆನೆಗಳನ್ನು ಹೊರತುಪಡಿಸಿ, ಇನ್ನಿತರ ವಸ್ತುಗಳನ್ನು ಸೈನಿಕರಿಂದ ಮರಳಿ ಪಡೆಯಬಾರದು; ಯಾವ ವಸ್ತು ಯಾವ ಸೈನಿಕನಿಗೆ ದೊರೆತಿದೆಯೋ, ಅವರಿಗೇ ಕೊಡುಗೆಯಾಗಿ ಕೊಟ್ಟುಬಿಡಬೇಕು. ಹೆಚ್ಚಿನ ವಿಚಾರಣೆ ಮಾಡಬಾರದು ಎಂಬ ಆದೇಶವನ್ನು ಮುಸಲ್ಮಾನ ಅರಸರು ಹೊರಡಿಸಿದರು. ಮುಸಲ್ಮಾನರು ವಿಜಯನಗರ ಮತ್ತು ಅದರ ಸುತ್ತಮುತ್ತಲಿನ ಎಲ್ಲ ಕಟ್ಟಡಗಳನ್ನು ಧ್ವಂಸಮಾಡಿದರು. ಹಲವಾರು ಗ್ರಾಮಗಳನ್ನು, ಗ್ರಾಮೀಣ ಜನರನ್ನು ಸರ್ವನಾಶ ಮಾಡಿದರು. ರಾಮರಾಜನ ಸಹೋದರ ತೆಂಕನಾದ್ರಿಯು ರಣರಂಗದಿಂದ ಪಲಾಯನ ಮಾಡಿ ತಲೆಮರೆಸಿಕೊಂಡವನು. ವಿನಾಶವಾಗುತ್ತಿರುವ ಈ ಪರಿಸ್ಥಿತಿಯನ್ನು ನೋಡಿ, ಮುಸಲ್ಮಾನರ ಬಳಿ ತನ್ನ ದೂತನೊಬ್ಬನನ್ನು ಕಳುಹಿಸಿ, ಅತ್ಯಂತ ವಿನಯದಿಂದ ಜೀವಭಿಕ್ಷೆ ಬೇಡಿದ. ಆತನು ಆದಿಲಶಾಹಿ ಮತ್ತು ಕುತುಬಶಾಹಿ ಪರ್ಗಣೆ(ಪ್ರದೇಶ)ಗಳನ್ನು ಮತ್ತು ಕೋಟೆಗಳನ್ನು ಹಿಂದಿರುಗಿಸಿದನು. ಹುಸೇನ ನಿಜಾಮಶಾಹನನ್ನು ಕೂಡಾ ಸಂಧಾನಕ್ಕೆ ಒಪ್ಪಿಸಿದನು. ಇದಾದ ನಂತರ, ಮುಸಲ್ಮಾನರು ವಧೆ ಮತ್ತು ಸುಲಿಗೆಗಳಿಂದ ಹಿಂದೆ ಸರಿದು ತಮ್ಮ ರಾಜ್ಯಕ್ಕೆ ಹಿಂದಿರುಗಿದರು.

ಆನೆಗೊಂದಿಯ ರಾಜನಾಗಿ ತಿಮ್ಮರಾಜನ ನೇಮಕ :

ಯುದ್ಧ ನಡೆಯುತ್ತಿರುವಾಗಲೇ ತಿಮ್ಮರಾಜನು, ಅಲಿ ಆದಿಲಶಾಹನಿಗೆ ಶರಣು ಬಂದಿದ್ದನು. ಆತನು ಅಲಿ ಆದಿಲನಿಗೆ, "ತೆಂಕನಾದ್ರಿಯು ಸಾಕಷ್ಟು ಬಲ ಮತ್ತು ಸಾಮರ್ಥ್ಯ ಪಡೆದಿರುವುದರಿಂದ, ಆತನು ರಾಮರಾಜನ ಉತ್ತರಾಧಿಕಾರಿಯಾಗುವನು. ರಾಜ್ಯದ ಎಲ್ಲ ಸರದಾರರು ಮತ್ತು ಸೇನಾನಿಗಳು ಆತನ ಸಲಹೆಯಂತೆ ನಡೆದುಕೊಳ್ಳುತ್ತಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ, ಆನೆಗೊಂದಿ ಮತ್ತು ಅದರ ಆಸುಪಾಸಿನ ಹಳ್ಳಿಗಳ ಆಡಳಿತವನ್ನು ನನಗೆ ವಹಿಸಬೇಕು" ಎಂದು ವಿನಂತಿಸಿಕೊಂಡನು. ಅಲಿ ಆದಿಲಶಾಹನು ತಿಮ್ಮರಾಜನ ನಿವೇದನೆಯನ್ನು ಮನ್ನಿಸಿ, ಆತನನ್ನು ಆನೆಗೊಂದಿಯ ಅರಸನಾಗಿ ನಿಯಮಿಸಿ ಕಳುಹಿಸಿಕೊಟ್ಟನು. ಇದಲ್ಲದೆ, ತೆಂಕನಾದ್ರಿಗೆ, "ತಿಮ್ಮರಾಜನು ನನ್ನ ಆಜ್ಞೆಯ ಮೇರೆಗೆ ಆನೆಗೊಂದಿಯ ರಾಜ್ಯಭಾರವನ್ನು ಮಾಡಲು ಬರುತ್ತಲಿದ್ದಾನೆ.

ಈ ವಿಷಯದಲ್ಲಿ ನೀನು ಯಾವುದೇ ರೀತಿಯಲ್ಲಿ ತಡೆಯುಂಟು ಮಾಡಕೂಡದು. ಆನೆಗೊಂದಿ ಪ್ರದೇಶದ ಆಡಳಿತದ ನಿರ್ವಹಣೆಯನ್ನು ತಿಮ್ಮರಾಜನಿಗೆ ಒಪ್ಪಿಸು" ಎಂಬ ಸಂದೇಶ ಕಳುಹಿಸಿದನು.

ಹಿಂದುಗಳ ದುರ್ಭರತೆ :

ಅಲಿ ಆದಿಲಶಾಹನ ಆದೇಶವನ್ನು ವಿರೋಧಿಸುವ ಧೈರ್ಯ ತೆಂಕನಾದ್ರಿಯಲ್ಲಿರಲಿಲ್ಲ. ಅಸಹಾಯಕತೆಯಿಂದ ಆತನು ಆನೆಗೊಂದಿಯ ಪ್ರದೇಶವನ್ನು ತಿಮ್ಮರಾಜನ ವಶಕ್ಕೆ ಕೊಟ್ಟುಬಿಟ್ಟನು. ಈ ರೀತಿಯಾಗಿ ತಿಮ್ಮರಾಜನು ಸಹ ಸಿಂಹಾಸನಾರೂಢನಾದನು. ಆಗಿನಿಂದ ಇಲ್ಲಿಯವರೆಗೆ ಈ ಪ್ರದೇಶವು ತಿಮ್ಮರಾಜನ ವಂಶದವರ ಆಳ್ವಿಕೆಯಲ್ಲಿಯೇ ಇದೆ. ವಿಜಯನಗರದ ಪ್ರದೇಶವು ತೆಂಕನಾದ್ರಿಯ ಮಕ್ಕಳ ಅಧೀನದಲ್ಲಿದೆ. ಈ ಎರಡೂ ಮನತೆನಗಳ ಅಧೀನದಲ್ಲಿ ಬಹಳ ಕಡಿಮೆ ಪ್ರದೇಶವಿರುವುದರಿಂದ ರಾಜ್ಯಭಾರದ ನಿರ್ವಹಣೆಯು ದುಸ್ತರವಾಗುತ್ತಲಿತ್ತು. ಕರ್ನಾಟಕದ ಇತರ ಪ್ರದೇಶಗಳನ್ನು ಕೆಲವು ಸರದಾರರು ವಶಪಡಿಸಿಕೊಂಡಿರುವುದರಿಂದ, ರಾಜ್ಯದಲ್ಲೆಲ್ಲ ಅರಾಜಕತೆಯ ಅಲೆಯು ಸುತ್ತುವರೆದಿತ್ತು.

ಅಲಿ ಆದಿಲಶಾಹಿಯ ವಿಜಯದುಂದುಭಿ :

ಮೇಲೆ ವಿವರಿಸಿದ ಯುದ್ಧದ ನಂತರ, ಹಿಂದುಗಳು ಮುಸಲ್ಮಾನರಿಗೆ ಹಾನಿ ಮಾಡುವ ಪ್ರಯತ್ನ ಮಾಡಲಿಲ್ಲ. ಈಗಾಗಲೇ ವಿವರಿಸಿದಂತೆ, ಇದಕ್ಕೆ ಕಾರಣ ರಾಜ್ಯದಲ್ಲಿ ಹರಡಿದ ಅರಾಜಕತೆ ಮತ್ತು ಹಿಂದುಗಳ ದುಸ್ಥಿತಿ. ಅಲಿ ಆದಿಲಶಾಹನು ಬಂಕಾಪುರದ ಕಿಲ್ಲೆಯನ್ನು, ಚಂದ್ರಕೋನಿ ಪ್ರದೇಶದೊಡನೆ ಗೆದ್ದುಕೊಂಡನು. ಈ ಕಿಲ್ಲೆಯನ್ನು ಬಹಮನಿ ಸುಲ್ತಾನರ ಕಾಲದಲ್ಲಿಯೂ ಗೆದ್ದುಕೊಳ್ಳಲಾಗಿತ್ತು. ಅದೋನಿ ಕಿಲ್ಲೆಯನ್ನು ಸಹ ಅಲಿ ಆದಿಲಶಾಹನು ತನ್ನ ಸಮಯೋಚಿತಜ್ಞತೆಯಿಂದ ವಶಪಡಿಸಿಕೊಂಡನು. ಇದಲ್ಲದೆ, ಇನ್ನಿತರ ರಾಜ್ಯಗಳನ್ನು ಜಯಿಸಿದನು. (ಅದರ ವಿವರಗಳನ್ನು ಸಂದರ್ಭೋಚಿತವಾಗಿ ಮುಂದೆ ನೀಡಲಾಗಿದೆ.)

ವಿಜಯನಗರ ಪಟ್ಟಣವು ಹಿಜರಿ ಶಕೆ ೧೦೨೩ರವರೆಗೆ ಹಾಳು ಬಿದ್ದು ಹೋಗಿದೆ. ತೆಂಕನಾದ್ರಿಯ ಪುತ್ರನು ಅದನ್ನು ಪುನಃಶ್ಚೇತನಗೊಳಿಸುವತ್ತ ಗಮನ ಕೊಡಲಿಲ್ಲ. ಆತನು ನಲಗೊಂಡಾ ಪ್ರದೇಶವನ್ನು ತನ್ನ ರಾಜಧಾನಿಯಾಗಿ ಮಾಡಿಕೊಂಡನು.

ರಾಮರಾಜನನ್ನು ಹಿಜರಿಶಕೆ ೯೦೨ರಲ್ಲಿ ವಧಿಸಲಾಯಿತು.

ಆ ಸಮಯದಲ್ಲಿ ಹುಸೇನ ನಿಜಾಮಶಾಹನು ಇಹಲೋಕ ತ್ಯಜಿಸಿದನು. ಆತನ ಸ್ಥಾನಕ್ಕೆ ಆತನ ಮಗ ಮುರ್ತುಜಾ ನಿಜಾಮಶಾಹನು ಉತ್ತರಾಧಿಕಾರಿಯಾದನು. ಅಲಿ ಆದಿಲಶಾಹನು ಸಂದರ್ಭದ ಉಪಯೋಗ ಪಡೆದು, ಆನೆಗೊಂದಿಯ ಮೇಲೆ

ಆಕ್ರಮಣ ಮಾಡಿದನು. ಈ ಆಕ್ರಮಣದ ಉದ್ದೇಶವು ತಿಮ್ಮರಾಜನ ಬಲವನ್ನು ಹೆಚ್ಚಿಸುವುದಾಗಿತ್ತು ಹಾಗೂ ತಿಮ್ಮರಾಜನು ನಲಗೊಂಡಾದ ಮೇಲೆ ತನ್ನ ಆಡಳಿತವನ್ನು ಸ್ಥಿರಗೊಳಿಸಲಿ ಎಂಬುದಾಗಿತ್ತು. ತದನಂತರ, ಅಲಿ ಆದಿಲಶಾಹನು ತಿಮ್ಮರಾಜನ ನೆರವಿನಿಂದ ವಿಜಯನಗರ ಜಯಿಸುವ ವಿಚಾರ ಮಾಡಿದ್ದನು.

ತೆಂಕನಾದ್ರಿಗೆ ಅಲಿ ಆದಿಲಶಾಹನ ಯೋಜನೆಯು ತಿಳಿದು ಹೋಯಿತು. ಆತನು ಮುರ್ತುಜಾ ನಿಜಾಮಶಾಹ ಮತ್ತು ಆತನ ತಾಯಿ ಖುಂಜಾ ಹುಮಾಯೂನರಿಗೆ, "ಹುಸೇನ ನಿಜಾಮಶಾಹನು ಈ ಪ್ರದೇಶವನ್ನು ನನ್ನ ವಶಕ್ಕೆ ಕೊಟ್ಟಿದ್ದಾನೆ. ಈಗ ಅಲಿ ಆದಿಲಶಾಹನು ಇದನ್ನು ನನ್ನ ವಶದಿಂದ ಕಿತ್ತುಕೊಂಡು ತನ್ನ ಅಧೀನದಲ್ಲಿಟ್ಟು ಕೊಳ್ಳಬಯಸುತ್ತಿದ್ದಾನೆ. ನೀವು ನನ್ನ ಹಿತಚಿಂತಕರೆಂದು ಭಾವಿಸಿ ನೆರವು ಕೋರುತ್ತಲಿದ್ದೇನೆ ಹಾಗೂ ಅಲಿ ಆದಿಲಶಾಹನ ಗೊಂದಲದಿಂದ ನನ್ನನ್ನು ಮುಕ್ತಗೊಳಿಸುವಿರೆಂದು ಆಶಿಸುತ್ತೇನೆ." ಎಂಬ ಪತ್ರವನ್ನು ಬರೆದು ಕಳುಹಿಸಿದನು.

ಮುರ್ತುಜಾ ನಿಜಾಮಶಾಹನಿಂದ ಬಿಜಾಪುರದ ಮೇಲೆ ಆಕ್ರಮಣ :

ಮುಲ್ಲಾ ಇನಾಯಿತುಲ್ಲಾನ ಸಲಹೆಯ ಮೇರೆಗೆ ಖುಂಜಾ ಹುಮಾಯೂನಳು ಮುರ್ತುಜಾ ನಿಜಾಮಶಾಹನ್ನು ತನ್ನೊಡನೆ ಸೇರಿಸಿಕೊಂಡು, ಬಿಜಾಪುರದ ಮೇಲೆ ಆಕ್ರಮಣ ಮಾಡಿ, ನಗರದ ಮೇಲೆ ಮುತ್ತಿಗೆ ಹಾಕಿದಳು. ಅಲಿ ಆದಿಲಶಾಹನು ಆನೆಗೊಂದಿಯನ್ನು ವಶಪಡಿಸಿಕೊಳ್ಳುವ ವಿಚಾರ ತ್ಯಜಿಸಿ, ಮರಳಿ ಬಿಜಾಪುರಕ್ಕೆ ಬಂದನು. ಬಿಜಾಪುರ ನಗರದ ಸುತ್ತಮುತ್ತಲಿನ ಪ್ರದೇಶದಲ್ಲಿ ಅಲಿ ಆದಿಲಶಾಹ ಮತ್ತು ಮುರ್ತುಜಾ ನಿಜಾಮರಲ್ಲಿ ಕೆಲವು ದಿನಗಳ ಕಾಲ ಯುದ್ಧ ನಡೆಯುತ್ತಲಿತ್ತು. ಆಮೇಲೆ ಮುರ್ತುಜಾ ಅಹಮದ್‌ನಗರಕ್ಕೆ ಹಿಂದಿರುಗಿದನು.

ಬೆರಾರದ ಮೇಲೆ ಆಕ್ರಮಣ :

ಹಿಜರಿಶಕೆ ೯೭೪ರಲ್ಲಿ ಖುಂಜಾ ಹುಮಾಯೂನಳ ಇಚ್ಛೆಯ ಮೇರೆಗೆ, ಅಲಿ ಆದಿಲಶಾಹ ಮತ್ತು ಮುರ್ತುಜಾ ನಿಜಾಮಶಾಹರು ಪರಸ್ಪರ ಒಪ್ಪಿಗೆಯಿಂದ ಬೆರಾರದ ಮೇಲೆ ಆಕ್ರಮಣ ಮಾಡಿದರು. ಈ ದಾಳಿಯು ಮಳೆಗಾಲದಲ್ಲಿ ನಡೆಯಿತು. ಅಲಿ ಆದಿಲಶಾಹನು ಬೆರಾರದ ಪ್ರದೇಶವನ್ನು ಹಾಳು ಮಾಡಿ ಹಿಂದಿರುಗಿದನು. ಆತನು ಬಿಜಾಪುರದ ಕೋಟೆಯನ್ನು ನಿರ್ಮಿಸುವ ಕೆಲಸ ಆರಂಭಿಸಿದನು. ಈ ಕೋಟೆಯನ್ನು ಮಹಮದ್ ಕಿಶ್ವರಖಾನನ ಮೇಲ್ವಿಚಾರಣೆಯಲ್ಲಿ ಮೂರು ವರ್ಷಗಳ ಅವಧಿಯಲ್ಲಿ ನಿರ್ಮಿಸಲಾಯಿತು.

ಅಲಿ ಆದಿಲ ಮತ್ತು ನಿಜಾಮಶಾಹಿ ಅರಸೊತ್ತಿಗೆ :

ಖುಂಜಾ ಹುಮಾಯೂನಳ ರಾಜ್ಯಭಾರ ನಿರ್ವಹಣೆ ಮತ್ತು ನಿಜಾಮಶಾಹನ

ಸೈನ್ಯದ ಗಲಭೆಯ ಕಾರಣದಿಂದ ನಿಜಾಮಶಾಹಿ ಆಡಳಿತದ ವೈಭವ ಮತ್ತು ದರ್ಪಕ್ಕೆ ಮಿತಿ ಇಲ್ಲದಂತಾಯಿತು. ಅಲಿ ಆದಿಲಶಾಹನು ಈ ಸ್ಥಿತಿಯನ್ನು ನೋಡಿ, ಅಹಮದ್‌ನಗರದ ಇತರ ಪ್ರದೇಶಗಳನ್ನು ವಶಮಾಡಿಕೊಳ್ಳುವ ವಿಚಾರ ಮಾಡಿದನು. ಅಲಿ ಆದಿಲಶಾಹನು, ಅಸದಖಾನ ಲ್ಯಾರಿ ಮತ್ತು ಕಿಶ್ವರಖಾನರಿಗೆ ಉನ್ನತ ಹುದ್ದೆ ಮತ್ತು ಪುರಸ್ಕಾರ ನೀಡಿದನು. ಈ ಬಾವುಟದಲ್ಲಿ ಹುಲಿಯ ಚಿತ್ರವಿತ್ತು. ಹಿಜರಿ ಶಕೆ ೯೭೫ರಲ್ಲಿ ಅಲಿ ಆದಿಲನು ಇಪ್ಪತ್ತು ಸಾವಿರ ಸೈನಿಕರುಳ್ಳ ಸೈನ್ಯದೊಡನೆ ಕಿಶ್ವರಖಾನನನ್ನು ನಿಜಾಮಶಾಹಿ ರಾಜ್ಯದತ್ತ ಕಳುಹಿಸಿಕೊಟ್ಟನು. ಕಿಶ್ವರಖಾನನು ಪರಾಕ್ರಮದಿಂದ ಹೋರಾಡಿ, ಹಲವಾರು ನಿಜಾಮಶಾಹಿ ಪರ್ಗಣೆ(ಪ್ರದೇಶ)ಗಳನ್ನು ವಶಪಡಿಸಿಕೊಂಡನು. ಆತನು ತನ್ನನ್ನು ಎದುರಿಸಿದ ನಿಜಾಮಶಾಹಿ ಸರದಾರರನ್ನು ಸೋಲಿಸುತ್ತ, ಬೇಸರ ಖಸ್ಬೆಯ ಕಜ್‌ವರೆಗಿನ ಪ್ರದೇಶವನ್ನು ಜಯಿಸಿದನು.

ಮುರ್ತುಜಾ ನಿಜಾಮಶಾಹನ ಯುದ್ಧದ ಸಿದ್ಧತೆ :

ಕಿಶ್ವರಖಾನನು ಇನ್ನಿತರ ಪ್ರದೇಶಗಳ ಮೇಲೆ ಸುಲಭವಾಗಿ ಜಯಗಳಿಸಲು, ಬೇಸರ ಪರ್ಗಣೆಯಲ್ಲಿ ಒಂದು ಬೃಹತ್ತಾದ ಕೋಟೆಯನ್ನು ನಿರ್ಮಾಣ ಮಾಡಿದನು. ಈ ಕೋಟೆಗೆ "ದಾರವರ್" ಎಂಬ ಹೆಸರು ಕೊಟ್ಟನು. ಕಿಶ್ವರಖಾನನು ಈ ಕೋಟೆಯಲ್ಲಿ ಯುದ್ಧದ ಮತ್ತಿತರ ಸಾಮಗ್ರಿಗಳಿಂದ ಅಲಂಕರಿಸಿದನು. ಈ ಪ್ರದೇಶದ ಆಸುಪಾಸಿನಲ್ಲಿರುವ ಪ್ರಜೆಗಳಿಂದ ಎರಡು ವರ್ಷಗಳ ಕಂದಾಯವನ್ನು ವಸೂಲಿ ಮಾಡಿದನು. ನಂತರ ಇನ್ನಿತರ ಪ್ರದೇಶಗಳನ್ನು ಗೆಲ್ಲುವದಕ್ಕಾಗಿ ಸಿದ್ಧತೆ ಮಾಡತೊಡಗಿದನು. ಈ ಸಂದರ್ಭದಲ್ಲಿ ಮುರ್ತುಜಾ ನಿಜಾಮಶಾಹನು ತನ್ನ ತಾಯಿ ಖುಂಜಾ ಹುಮಾಯೂನಳ ಹಿಡಿತದಿಂದ ಬಿಡುಗಡೆ ಪಡೆದು ಕಿಶ್ವರಖಾನನನ್ನು ಎದುರಿಸುವ ಸಿದ್ಧತೆ ನಡೆಸಿದನು.

ಕಿಶ್ವರಖಾನನ ಸಂಗಡಿಗರ ಪಲಾಯನ :

ಹಿಜರಿ ಶಕೆ ೯೭೭ರಲ್ಲಿ ಮುರ್ತುಜಾ ನಿಜಾಮಶಾಹನು ಕಿಶ್ವರಖಾನನತ್ತ ತಿರುಗಿದನು. ಈ ಸಂಗತಿ ತಿಳಿದ ಕಿಶ್ವರಖಾನನು ಕೋಟೆಯನ್ನು ಮತ್ತಿಷ್ಟು ಭದ್ರಪಡಿಸಿದನು ಮತ್ತು ಸೈನ್ಯವನ್ನು ಬಲಪಡಿಸಿದನು. ಅಲಿ ಆದಿಲಶಾಹನು ಕಿಶ್ವರಖಾನನ ನೆರವಿಗೆ ಕಳುಹಿಸಿದ ಐನುಲ್‌ಮುಲ್ಕ, ಅಂಕಸ್‌ಖಾನ ಮತ್ತು ನೂರಖಾನರೊಡನೆ ಮುರ್ತುಜಾ ನಿಜಾಮಶಾಹನ ದಾರಿ ಕಾಯತೊಡಗಿದನು. ಈ ಸರದಾರರು ಧೈರ್ಯವಿಲ್ಲದ ಹಾಗೂ ಕಿಶ್ವರಖಾನನನ್ನು ವಿರೋಧಿಸುವರಾದುದರಿಂದ ಯುದ್ಧ ಮಾಡದೆ ಪಲಾಯನ ಮಾಡಿದರು ಹಾಗೂ ಕಿಶ್ವರಖಾನನಿಗೆ, "ಮುರ್ತುಜಾ ನಿಜಾಮಶಾಹನೊಡನೆ ಯುದ್ಧ ಮಾಡುವ ಸಾಮರ್ಥ್ಯ ನಮ್ಮಲ್ಲಿಲ್ಲ. ಆದುದರಿಂದ ನಾವು ನಿಮ್ಮಿಂದ ಬೇರ್ಪಟ್ಟು, ರಾಜಧಾನಿ ಅಹಮದ್‌ನಗರದಲ್ಲಿ ಗಲಭೆ-ಕೋಲಾಹಲಗಳನ್ನುಂಟು ಮಾಡಲು ಹೋಗುತ್ತಿದ್ದೇವೆ. ಈ ಹೆಜ್ಜೆಯನ್ನಿಡುವಲ್ಲಿ ನಮ್ಮ ಉದ್ದೇಶವೇನೆಂದರೆ, ಮುರ್ತುಜಾ

ನಿಜಾಮಶಾಹನು ಇತ್ತ ಬರದೆ, ನಮ್ಮನ್ನು ಬೆನ್ನಟ್ಟಿ ಅಹಮದ್‌ನಗರದತ್ತ ಹಿಂದಿರುಗಲಿ" ಎಂಬ ಸಂದೇಶವನ್ನು ಕಳುಹಿಸಿದನು.

ಕಿಶ್ವರಖಾನ ಮತ್ತು ಮುರ್ತುಜಾರಲ್ಲಿ ಕದನ :

ಕಿಶ್ವರಖಾನನನ್ನು ದಮನಗೊಳಿಸುವದು ಎಲ್ಲ ಕೆಲಸಗಳಿಗಿಂತ ಮೊದಲು, ಆದ್ಯತೆಯ ಮೇಲೆ ಮಾಡುವ ಕರ್ತವ್ಯವೆಂದು ಮುರ್ತುಜಾ ನಿಜಾಮಶಾಹನು ಅರಿತುಕೊಂಡಿದ್ದನು. ಆತನು ಕಿಶ್ವರಖಾನನನ್ನು ತನ್ನ ಗುರಿಯಾಗಿಸಿ ಆತನೆಡೆಗೆ ಹೊರಟನು. ಕಿಶ್ವರಖಾನನು ತನ್ನ ಕೆಲವು ಜೊತೆಗಾರರೊಡನೆ, ಮುರ್ತುಜಾನನ್ನು ಎದುರಿಸಿದನು. ಕೋಟೆಯನ್ನು ಗೆಲ್ಲುವವರೆಗೆ, ಕುದುರೆಯ ರಿಕಾಪಿನಿಂದ ಕಾಲನ್ನು ಕೆಳಗಿಳಿಸುವುದಿಲ್ಲವೆಂಬ ಶಪಥವನ್ನು, ಮುರ್ತುಜಾ ನಿಜಾಮಶಾಹನು ಮಾಡಿದ್ದನು. ಕೋಟೆಯೊಳಗಿಂದ ಮುರ್ತುಜಾನ ಸೇನೆಯ ಮೇಲೆ ಸಿಡಿಮದ್ದುಗಳ ಸುರಿಮಳೆಯಾಯಿತು. ಆದರೆ ಹದಿಹರೆಯದ ಬಾದಶಾಹ ಧೈರ್ಯ ಕಳೆದುಕೊಳ್ಳಲಿಲ್ಲ. ಕೋಟೆಯ ಮುತ್ತಿಗೆಯನ್ನು ಜಾರಿಯಲ್ಲಿಟ್ಟನು.

ಕಿಶ್ವರಖಾನನ ಮೃತ್ಯು :

ಮುರ್ತುಜಾ ನಿಜಾಮಶಾಹನ ಮೊಘಲ ಸೈನಿಕರು ಸಹ ಕೋಟೆಯಲ್ಲಿದ್ದವರ ಮೇಲೆ ಬಾಣಗಳ ಮಳೆ ಸುರಿಸುತ್ತಿದ್ದರು. ಕಿಶ್ವರಖಾನನು ಯುದ್ಧದ ತಮಾಷೆಯನ್ನು ನೋಡುತ್ತಲಿದ್ದನು. ಆಕಸ್ಮಿಕವಾಗಿ, ಒಂದು ಬಾಣವು ಆತನಿಗೆ ತಾಕಿ, ಆತನು ಅಲ್ಲಿಯೇ ಹತನಾಗಿಬಿಟ್ಟನು. ಕಿಶ್ವರಖಾನನ ಸಂಗಡಿಗರು, ತಮ್ಮ ಸರದಾರನು ಸಾಯುತ್ತಿದ್ದುದನ್ನು ನೋಡಿದೊಡನೆಯೇ ಕೋಟೆಯ ದ್ವಾರವನ್ನು ತೆರೆದು ಓಡತೊಡಗಿದರು. ಮುರ್ತುಜಾನು ಕೋಟೆಯನ್ನು ವಶಪಡಿಸಿಕೊಂಡನು. ಅದೇ ರೀತಿ, ಅಲಿ ಆದಿಲಶಾಹನ ಆಡಳಿತದ ಅಧೀನದಲ್ಲಿದ್ದ ಎಲ್ಲ ಪರ್ಗಣೆ(ಪ್ರದೇಶ)ಗಳನ್ನು ಸಹ ವಶಪಡಿಸಿಕೊಂಡನು.

ಐನುಲ್‌ಮುಲ್ಕ ಮತ್ತು ನೂರಖಾನರನ್ನು ಬೆನ್ನಟ್ಟುವುದು :

ಮುಂದೆ ನಿಜಾಮಶಾಹಿ ಸೈನ್ಯದ ಸರದಾರನಾಗಿ ಕೊನೆಗೆ, "ಚೆಂಗೀಜಖಾನ" ಎಂಬ ಹೆಸರಿನಿಂದ ಪ್ರತೀತಿ ಪಡೆದ ಖ್ವಾಜಾ ಮೀರಕ್ ದಬೀರ ಅಸಫಹಾನಿಯು ಐನುಲ್‌ಮುಲ್ಕ ಮತ್ತು ನೂರ್‌ಖಾನರ ಬೆನ್ನಟ್ಟಿ, ಅಹಮದ್‌ನಗರದತ್ತ ಹೊರಟನು. ಅಹಮದ್‌ನಗರದ ಸಮೀಪ ಉಭಯಪಕ್ಷದವರಲ್ಲಿ ಭೀಕರ ಕಾಳಗ ನಡೆಯಿತು. ಯುದ್ಧದಲ್ಲಿ ಖ್ವಾಜಾ ಮಿರಕ ಅಸಫಹಾನಿಯು ಜಯಗಳಿಸಿದನು. ಐನುಲ್‌ಮುಲ್ಕನು ಹತನಾದನು. ನೂರ್‌ಖಾನನು ಬಂದಿಯಾದನು. ಅವರ ಅರ್ಧ ಸೈನ್ಯವು ಭಯದಿಂದ ವಿವಶರಾಗಿ ಬಿಜಾಪುರಕ್ಕೆ ಹಿಂದಿರುಗಿತು.

ಗೋವಾ ಮೇಲೆ ಅಲಿ ಆದಿಲಶಾಹನ ದಾಳಿ :

ಈ ಯುದ್ಧದಿಂದ ಆದಿಲಶಾಹನ ಸೈನ್ಯಕ್ಕೆ ಬಹಳ ಹಾನಿಯಾಯಿತು. ಆತನ

ಎಲ್ಲ ಪ್ರಯತ್ನಗಳು ಅಯಶಸ್ವಿಯಾದವು. ಅಲಿ ಆದಿಲಶಾಹನಿಗೆ, ಅದೇ ದಿನಗಳಲ್ಲಿ ಗೋವಾ ಗೆಲ್ಲುವ ಹಾಗೂ ಕ್ರೈಸ್ತರನ್ನು ನಾಶಮಾಡುವ ವಿಚಾರ ಬಂದಿತು. ಅಲಿ ಆದಿಲಶಾಹನು ಗೋವಾದತ್ತ ಹೊರಟನು. ಇಲ್ಲಿಯೂ ಕೂಡ ಜಯ ದೊರಕಲಿಲ್ಲ. ಆತನ ಅಸಂಖ್ಯಾತ ಸೈನಿಕರು ಹತರಾದರು.

ಅದೋನಿ ಕಿಲ್ಲೆಯನ್ನು ವಶಪಡಿಸಿಕೊಳ್ಳುವ ಯೋಜನೆ :

ಶಾಹ ತಾಹಿರನ ಮಗನಾದ ಅಬು ಅಲ್ ಹುಸೇನನ ಸಲಹೆಯ ಮೇರೆಗೆ ಅಲಿ ಆದಿಲನು, ಅದೋನಿ ಕಿಲ್ಲೆಯನ್ನು ವಶಪಡಿಸಿಕೊಳ್ಳುವ ವಿಚಾರ ಮಾಡಿದನು. ಇದೊಂದು ಭದ್ರವಾದ ಕೋಟೆಯಾಗಿತ್ತು. ಈ ಕಿಲ್ಲೆಯನ್ನು ಗೆಲ್ಲುವುದು ಬಹಮನಿಗಳಿಗೂ ಸಹ ಸಾಧ್ಯವಾಗಿರಲಿಲ್ಲ. ಅಲಿ ಆದಿಲಶಾಹನು, ಎಂಟು ಸಾವಿರ ಕುದುರೆ ಸವಾರರು ಮತ್ತು ಪದಾತಿಗಳು ಬಹಳಷ್ಟು ತೋಪುಗಳೊಡನೆ ಆಂಕಸ್ ಖಾನನನ್ನು ಅದೋನಿ ಕಿಲ್ಲೆಯತ್ತ ಕಳುಹಿಸಿಕೊಟ್ಟನು. ಈ ಕೋಟೆಯು ರಾಮರಾಜನ ಸರದಾರನೊಬ್ಬನ ಒಡೆತನದಲ್ಲಿತ್ತು. ಆತನು ತನ್ನ ಅರಸನೊಂದಿಗೆ ವಿದ್ರೋಹ ಮಾಡಿ ತನ್ನ ಹೆಸರಿನ ಮುದ್ರೆಯನ್ನು ಜಾರಿಗೊಳಿಸಿದ್ದನು.

ಅದೋನಿಯ ಅರಸನ ವಿವಶತೆ :

ಅದೋನಿ ಕಿಲ್ಲೆಯ ಅರಸನು ಆಂಕಸ್‌ಖಾನನನ್ನು ಎದುರಿಸಿದನು. ಆತನು ವೈರಿಗಳೊಂದಿಗೆ ಅನೇಕ ಸಲ ಯುದ್ಧ ಮಾಡಿದನು. ಆದರೆ ಪ್ರತಿಸಲವೂ ಸೋಲನ್ನು ಅನುಭವಿಸುತ್ತಿದ್ದನು. ಈ ಕಾರಣದಿಂದ ಯುದ್ಧ ಮತ್ತಿತರ ಸಾಮಗ್ರಿಗಳನ್ನು ಸಂಗ್ರಹಿಸಿಕೊಂಡು, ಕೋಟೆಯೊಳಗೆ ಸೇರಿಕೊಂಡನು. ಆಂಕಸ್‌ಖಾನನು ಮುತ್ತಿಗೆ ಹಾಕಿದನು. ಈ ಮುತ್ತಿಗೆಯು ಒಂದು ಕಾಲಾವಧಿಯವರೆಗೆ ಹಾಗೆಯೇ ಇತ್ತು. ಆದರೆ ಅದರ ಪರಿಣಾಮವೇನೂ ಆಗಲಿಲ್ಲ. ಅಂತಿಮವಾಗಿ, ಅದೋನಿಯ ಅರಸನಿಗೆ ಇಂತಹ ಕಠಿಣ ಪರಿಸ್ಥಿತಿಯನ್ನು ಎದುರಿಸಲು ಆಗದೆ, ಆಂಕಸ್‌ಖಾನನಿಗೆ ಪ್ರಾಣ ಭಿಕ್ಷೆಯನ್ನು ಬೇಡಿದನು ಹಾಗೂ ಕಿಲ್ಲೆಯನ್ನು ಆತನ ವಶಕ್ಕೆ ಒಪ್ಪಿಸಿಬಿಟ್ಟನು.

ಅದೋನಿ ಕೋಟೆಯ ವಿಜಯ :

ಒಂದು ಪರ್ವತದ ಶಿಖರದ ಮೇಲೆ ಅದೋನಿ ಕಿಲ್ಲೆಯನ್ನು ನಿರ್ಮಿಸಲಾಗಿದೆ. ಇದರ ಆವರಣವು ಅತ್ಯಂತ ವಿಶಾಲವಾಗಿದ್ದು, ವೈಭವಯುತವಾಗಿದೆ. ಕೋಟೆಯ ಆವರಣದಲ್ಲಿ ಸುಂದರವಾದ ಚಿಲುಮೆಗಳು ಮತ್ತು ಉನ್ನತಕಟ್ಟಡಗಳಿವೆ. ಮುಸಲ್ಮಾನರ ಭೀತಿಯಿಂದ ಹಿಂದು ರಾಜರು ಈ ಕೋಟೆಯನ್ನು ಸುರಕ್ಷಿತವಾಗಿಡುವತ್ತ ಹೆಚ್ಚು ಗಮನ ಕೊಡುತ್ತಿದ್ದರು. ಶಿವುರಾಯನ ಸಲಹೆಯಂತೆ ಪ್ರತಿಯೊಬ್ಬ ಅರಸನು ತನ್ನ ಆಡಳಿತದಲ್ಲಿ ಒಂದೊಂದರಂತೆ ಕೋಟೆಯ ಗೋಡೆಯನ್ನು ಹೆಚ್ಚಿಸುತ್ತಿದ್ದರು. ಈ ಕೋಟೆಯನ್ನು ಜಯಿಸಿದ ಕಾಲದಲ್ಲಿ, ಹನ್ನೊಂದು ಆವರಣಗಳಿದ್ದವು. ಈ ಕಾರಣದಿಂದ

ಸುರಂಗ ತೋಡುವುದು ಮತ್ತು ತೋಪುಗಳನ್ನು ಹಾರಿಸುವುದರಿಂದ, ಕಿಲ್ಲೆಯನ್ನು ಗೆಲ್ಲುವುದು ಕಠಿಣವಷ್ಟೇ ಅಲ್ಲ, ಅಸಾಧ್ಯವೂ ಆಗಿತ್ತು. ಕೋಟೆಯನ್ನು ಗೆಲ್ಲಲು ಕೇವಲ ಒಂದು ಉಪಾಯವಿತ್ತು. ಅದೆಂದರೆ, ಕೋಟೆಗೆ ದೀರ್ಘಕಾಲದ ಮುತ್ತಿಗೆ ಹಾಕುವುದು. ಆಂಕಸ್‌ಖಾನನು ಈ ಉಪಾಯವನ್ನು ಕಾರ್ಯಗತಗೊಳಿಸಿ ಜಯಶಾಲಿಯಾದನು. ಈ ಕೋಟೆಯನ್ನು ಅಧೀನಪಡಿಸಿಕೊಂಡಿರುವುದು ಒಂದು ಮಹಾನ್ ವಿಜಯವಾಗಿತ್ತು. ಅಲಿ ಆದಿಲಶಾಹನಿಗೆ ಈ ಸಮಾಚಾರ ತಿಳಿದಾಗ ಆನಂದತುಂದಿಲನಾದನು.

ಅಲಿ ಆದಿಲಶಾಹ ಮತ್ತು ಮುರ್ತುಜಾ ನಿಜಾಮಶಾಹರಲ್ಲಿ ಒಪ್ಪಂದ :

ಇದಾದ ನಂತರ, ಅಲಿ ಆದಿಲಶಾಹನು ಇನ್ನಿತರ ಕೋಟೆಗಳನ್ನು ಹಾಗೂ ಪರ್ಗಣೆ(ಪ್ರದೇಶ)ಗಳನ್ನು ಜಯಿಸುವ ವಿಚಾರ ಮಾಡಿದನು. ಅಬೂ ಅಲ್ ಹುಸೇನ ಮತ್ತು ಖ್ವಾಜಾ ಮೀರಕ್ ದಬೀರ ಅಸಫಹಾನಿ ಇವರ ಸಂಧಾನದ ಪ್ರಯತ್ನದಿಂದ ಅಲಿ ಆದಿಲ ಮತ್ತು ಮುರ್ತುಜಾ ನಿಜಾಮುಲ್ ಮುಲ್ಕರು ತಮ್ಮ ಸರಹದ್ದಿನಲ್ಲಿ ಭೇಟಿಯಾದರು. ಇವರಿಬ್ಬರೂ ಅರಸರು ಚರ್ಚಿಸಿ, ಮುರ್ತುಜಾ ನಿಜಾಮಶಾಹನು ಬೆರಾರ ಪ್ರದೇಶವನ್ನು ತನ್ನ ವಶದಲ್ಲಿಟ್ಟುಕೊಳ್ಳುವದು ಹಾಗೂ ಅಲಿ ಆದಿಲಶಾಹನು, ಬೆರಾರ ಪ್ರದೇಶದ ವಿಸ್ತಾರದಷ್ಟು ಭಾಗವನ್ನು ವಿಜಯನಗರದ ಪ್ರದೇಶದಿಂದ ವಶಪಡಿಸಿಕೊಳ್ಳುವದು ಎಂಬ ಒಪ್ಪಂದಕ್ಕೆ ಬಂದರು. ಈ ತೀರ್ಮಾನದ ಉದ್ದೇಶವೆಂದರೆ, ಒಬ್ಬ ಬಾದಶಹನು ಇನ್ನೊಬ್ಬ ಬಾದಶಹನಿಗಿಂತ ಹೆಚ್ಚು ಪ್ರದೇಶವನ್ನು ಆಡಳಿತಕ್ಕೆ ಒಳಪಡದಿರಲಿ ಎಂಬುದಾಗಿತ್ತು.

ತೋರಕಲ್ ಕಿಲ್ಲೆಯ ಮುತ್ತಿಗೆ :

ಹಿಜರಿಶಕೆ ೯೮೧ರಲ್ಲಿ, ಅಲಿ ಆದಿಲಶಾಹನು ತೋರಕಲ್ ಕಿಲ್ಲೆಯನ್ನು ವಶಪಡಿಸಿಕೊಳ್ಳುವ ಸಂಕಲ್ಪ ಮಾಡಿದನು. ಅಲ್ಲಿ ನಡೆದ ಬೇರೆ ಬೇರೆ ಯುದ್ಧಗಳಲ್ಲಿ, ಈ ಕೋಟೆಯು ರಾಮರಾಜನ ವಶದಿಂದ ಒಬ್ಬ ಮಾಮೂಲಿ ಸೈನಿಕನ ಅಧೀನಕ್ಕೊಳಪಟ್ಟಿತ್ತು. ಅಲಿ ಆದಿಲಶಾಹನು ಈ ಕೋಟೆಗೆ ಮುತ್ತಿಗೆ ಹಾಕಿದನು. ಸುಮಾರು ಐದಾರು ತಿಂಗಳವರೆಗೆ ಈ ಮುತ್ತಿಗೆಯು ಹಾಗೆಯೇ ಇದ್ದಿತು. ಕೋಟೆಯಲ್ಲಿರುವವರು ಚಿಂತಿತರಾಗಿದ್ದರು. ಅಷ್ಟರಲ್ಲಿಯೇ ಅಲಿ ಆದಿಲಶಾಹನ ಸೈನ್ಯದ ಒಂದು ತೋಪು ಒಡೆದು ಹೋಯಿತು. ಇದರಿಂದಾಗಿ, ಕೆಲವು ದಿನಗಳವರೆಗಾದರೂ ಸುರಕ್ಷಿತವಾಗಿರಬಹುದೆಂದು ಭಾವಿಸಿ, ಕೋಟೆಯಲ್ಲಿರುವವರು ಸಂತಸಪಟ್ಟರು. ಅಲಿ ಆದಿಲಶಾಹನು ತೋಪು ಒಡೆದ ಕಾರಣದ ಬಗ್ಗೆ ವಿಚಾರಣೆ ಮಾಡಿದಾಗ, ಇದು ಶಾಹ ಅಬುಲ್ ಹಸನ್‌ನ ನಿರ್ಲಕ್ಷ್ಯದಿಂದಾಗಿರುವದನ್ನು ತಿಳಿದು, ಆತನನ್ನು ಪದಚ್ಯುತಿಗೊಳಿಸಿ, ಮುಸ್ತಫಾ ಅರ್ದಿಸ್ತಾನಿಯನ್ನು ಲೆಕ್ಕಾಧಿಕಾರಿ ಮತ್ತು ವಕೀಲನೆಂದು ನಿಯಮಿಸಲಾಯಿತು. ರಾಜ್ಯಾಡಳಿತದ ಎಲ್ಲ ಭಾರವನ್ನು ಆತನಿಗೆ ವಹಿಸಲಾಯಿತು.

ತೋರಕಲ್ ಕಿಲ್ಲೆಗೆ ಮುತ್ತಿಗೆ :

ಮುಸ್ತಫಾಖಾನ ಅರ್ದಿಸ್ತಾನಿಯು ತೋರಕಲ್ ಕಿಲ್ಲೆಯನ್ನು ಗೆಲ್ಲಲು ಬಹಳ ಯತ್ನಿಸಿದರು. ಎರಡು ತಿಂಗಳ ಅವಧಿಯಲ್ಲಿ ಕೋಟೆಯಲ್ಲಿರುವವರಿಗೆ ಆಹಾರ ಸಾಮಾಗ್ರಿಗಳು ದೊರೆಯದಂತಾದಾಗ, ಅವರಿಗೆ ವಿಧೇಯರಾಗಿರುವುದನ್ನು ಬಿಟ್ಟು ಇನ್ನಾವ ಮಾರ್ಗವೂ ಇರಲಿಲ್ಲ. ಅವರು ಶರಣಾಗತರಾಗಿ ಅಭಯದಾನ ಬೇಡಿದರು. ವೆಂಕುಟ್ಟಿ ಬಸಾನಿ, ಆತನ ಮಕ್ಕಳು ಹಾಗೂ ಬಂಧುಗಳನ್ನು ಬಂಧಿಸಿ ಆದಿಲಶಾಹಿ ಸೈನ್ಯದ ವಶಕ್ಕೊಪ್ಪಿಸುವ ಷರತ್ತಿಗೆ ಕೋಟೆಯಲ್ಲಿರುವವರು ಒಪ್ಪಿದಲ್ಲಿ ಅಭಯದಾನ ಮಾಡುವುದಾಗಿ, ಮುಸ್ತಫಾಖಾನನು ಹೇಳಿದನು. ಕೋಟೆಯಲ್ಲಿರುವವರು ಷರತ್ತನ್ನು ಒಪ್ಪಿಕೊಂಡು ತಮ್ಮ ಬಂಧುಗಳನ್ನು ಬಂಧಿಸಿ ಶತ್ರುಗಳ ವಶಕ್ಕೊಪ್ಪಿಸಿ, ತಮ್ಮ ಸಾಮಾನುಗಳ ಸಮೇತ ಕೋಟೆಯಿಂದ ಹೊರಗೆ ಹೊರಟು ಹೋದರು. ಬಾದಶಹನು ಈ ಕೈದಿಗಳಿಗೆ ನಾನಾವಿಧದಲ್ಲಿ ಹಿಂಸಿಸಿ ವಧಿಸಿದನು. ಕೋಟೆಯ ಆಡಳಿತವನ್ನು ತನ್ನ ಜನರಿಗೆ ವಹಿಸಿಕೊಟ್ಟನು.

ದಾರವಾ (ಧಾರವಾಡ?) ಕೋಟೆಯನ್ನು ಗೆಲ್ಲುವದು :

ಆಮೇಲೆ ಅಲಿ ಆದಿಲಶಾಹನು ಮುಸ್ತಫಾಖಾನನ ಸಲಹೆಯಂತೆ, ದಾರವಾ ಕಿಲ್ಲೆಯ ಮೇಲೆ ಆಕ್ರಮಣ ಮಾಡಿದನು. ದಾರವಾ ಕಿಲ್ಲೆಯು ಕರ್ನಾಟಕದ ಪ್ರಸಿದ್ಧ ಕಿಲ್ಲೆಯಾಗಿದ್ದು, ಆಗಿನ ಕಾಲದಲ್ಲಿ ರಾಮರಾಜನ ಸರದಾರನ ವಶದಲ್ಲಿತ್ತು. ಈ ಸರದಾರನು ಒಂದಿಷ್ಟು ನಗದು ಹಣ ಮತ್ತು ಕೆಲವು ಆನೆಗಳನ್ನು ತೆಂಕನಾದ್ರಿ ಮತ್ತು ಭೀಮರಾಜರಿಗೆ ಕಳುಹಿಸಿಕೊಡುತಿದ್ದನು. ಇದರಿಂದಾಗಿ ಆತನು ಪ್ರಬಲನಾಗಿದ್ದನು. ಅಲಿ ಆದಿಲಶಾಹನು ಆರು ತಿಂಗಳ ಕಾಲ ಕೋಟೆಗೆ ಮುತ್ತಿಗೆ ಹಾಕಿದನು. ಮುಸ್ತಫಾಖಾನನ ಉಪಾಯಗಳಿಂದ ಈ ಕೋಟೆಯು ಸಹ ಅಲಿ ಆದಿಲಶಾಹನ ವಶವಾಯಿತು. ಕೋಟೆಯಲ್ಲಿರುವವರು ಶರಣಾಗತರಾದರು.

ಬಂಕಾಪೂರ ಕೋಟೆಯ ಮೇಲೆ ಆಕ್ರಮಣ :

ಅಲಿ ಆದಿಲಶಾಹನು ಏಳು ತಿಂಗಳವರೆಗೆ ಈ ಪ್ರದೇಶದಲ್ಲಿ ನೆಲೆಸಿದ್ದನು. ಅಲ್ಲಿಯ ದಾಳಿಕೋರರು ಮತ್ತು ಗಲಭೆ ಮಾಡುವವರನ್ನು ಹತೋಟಿಗೆ ತಂದನು. ತದನಂತರ, ಬಂಕಾಪುರ ಕೋಟೆಯನ್ನು ಗೆಲ್ಲುವ ಯೋಜನೆಯಿಂದ ಪ್ರಯಾಣ ಆರಂಭಿಸಿದನು. ಕಿಲ್ಲೆಯ ಆಡಳಿತವು ರಾಮರಾಜನ ಸೋದರ ಸಂಬಂಧಿಯಾದ ಬಲಬ್ ವಜೀರನ ವಶದಲ್ಲಿತ್ತು. ರಾಮರಾಜನ ವಧೆಯ ನಂತರ ಬಲಬ್ ವಜೀರನು ಕೋಟೆಯನ್ನು ತನ್ನ ಸಂಪೂರ್ಣ ವಶದಲ್ಲಿಟ್ಟುಕೊಂಡನು. ಚಂದ್ರಕೋನಿ ಮತ್ತು ಜೇರಾಹ ಕಿಲ್ಲೆಯ ರಾಜ ಆತನ ನೆರೆಯಲ್ಲಿದ್ದರು. ಅಲಿ ಆದಿಲಶಾಹನು ಬರುವ ವದಂತಿ ತಿಳಿದೊಡನೆ ಕೋಟೆಯ ದ್ವಾರವನ್ನು ಮುಚ್ಚಿಸಿ ಬಲಬ್‌ನು ಒಳಗೆ ಕುಳಿತು ಬಿಟ್ಟನು. ಮುಸಲ್ಮಾನ

ಸೈನಿಕರು ಮುಂದುವರಿಯದಂತೆ ಹಾಗೂ ಅವರಿಗೆ ಕಿರುಕುಳ ನೀಡಲು, ಒಂದು ಸಾವಿರ ಕುದುರೆ ಸವಾರರು ಮತ್ತು ಹತ್ತು ಸಾವಿರ ಸೈನಿಕರೊಡನೆ ತನ್ನ ಮಗನನ್ನು ಅರಣ್ಯದೆಡೆಗೆ ಕಳುಹಿಸಿಕೊಟ್ಟನು.

ತೆಂಕನಾದ್ರಿಗೆ ಬಲಬ್‌ನ ಪತ್ರ :

ರಾಮರಾಜನ ಮಗ ತೆಂಕನಾದ್ರಿಗೆ ಬಲಬ್‌ನು ಒಂದು ಪತ್ರ ಬರೆದನು. ಅದರ ಒಕ್ಕಣೆ ಹೀಗಿತ್ತು: "ನನ್ನ ಒಡೆಯನಿಗೆ ಪ್ರಾಮಾಣಿಕನಾಗಿರುವುದನ್ನು ಬಿಟ್ಟು ವಿದ್ರೋಹಿಯಾಗಿ, ಬಹಳ ತೊಂದರೆಗೆ ಒಳಗಾಗಿದ್ದೇನೆ. ತಿಳಿಯದೆ ಮಾಡಿದ ಈ ಕೆಲಸದಿಂದ ಆತಂಕವಾಗಿದೆ. ಇದಕ್ಕಾಗಿ ಕ್ಷಮೆ ಕೋರುತ್ತೇನೆ. ನನ್ನ ಪರಿಸ್ಥಿತಿಯು ಈಗ ಬಹಳ ಚಿಂತಾಜನಕವಾಗಿದೆ. ಅಲಿ ಆದಿಲಶಾಹನು ಬಂಕಾಪುರ ಕೋಟೆಯ ಮೇಲೆ ಆಕ್ರಮಣ ಮಾಡಲು ಬರುತ್ತಿದ್ದಾನೆ. ತಾವು ನನ್ನ ಹಿಂದಿನ ಅಪರಾಧಗಳನ್ನು ಕ್ಷಮಿಸಿ, ಸ್ವತಃ ತಾವು ಇಲ್ಲಿಗೆ ಬರಬೇಕು. ಇಲ್ಲವೆ, ಸೈನ್ಯದ ಅಧಿಕಾರಿಯನ್ನು ಕಳುಹಿಸಿಕೊಟ್ಟು ನನ್ನ ಸಹಾಯ ಮಾಡಿ. ಮುಸಲ್ಮಾನರ ದಬ್ಬಾಳಿಕೆಯಿಂದ ರಕ್ಷಿಸಿಕೊಳ್ಳಲು ತಮ್ಮ ನೆರವು ಬೇಕು. ಇನ್ನು ಮುಂದೆ ಪ್ರತಿ ವರ್ಷ ಕಂದಾಯದ ಹಣ ಕೊಡುತ್ತೇನೆ ಹಾಗೂ ತಮ್ಮ ವಿಧೇಯತೆಯ ಸೀಮಾರೇಖೆ ಮೀರಿ ಹೆಜ್ಜೆ ಇಡುವದಿಲ್ಲವೆಂದು ಪ್ರಮಾಣ ಮಾಡುತ್ತೇನೆ."

ತೆಂಕನಾದ್ರಿಯ ಉತ್ತರ :

ತೆಂಕನಾದ್ರಿಯು ಬಲಬ್‌ನಿಗೆ, "ನಿನ್ನ ಬಂಡಾಯ ಹಾಗೂ ಕೃತಘ್ನತೆಯಿಂದ ಇನ್ನಿತರರೂ ವಿದ್ರೋಹದ ಮಾರ್ಗದಲ್ಲಿದ್ದಾರೆ. ನಿನ್ನ ಕಾರಣದಿಂದಲೇ, ಎಲ್ಲ ರಾಜ್ಯವೂ ನನ್ನ ವಶದಿಂದ ತಪ್ಪಿಹೋಗುತ್ತಿದೆ. ಈಗ ನನ್ನ ಅಧೀನದಲ್ಲಿ, ಕೇವಲ ಬಲಕುಂದರಿ ಮತ್ತು ಚಂದಾಕರಿ ನಗರಗಳಿವೆ. ಉಳಿದ ಎಲ್ಲ ಪ್ರದೇಶವು ಮುಸಲ್ಮಾನರ ಬಳಿ ಇದೆ. ನನ್ನ ರಕ್ಷಣೆಯನ್ನು ಸಹ ನಾನು ಮಾಡಿಕೊಳ್ಳುವದು ದುಸ್ತರವಾಗಿದೆ. ಇಂತಹ ಪರಿಸ್ಥಿತಿಯಲ್ಲಿ ನಿನಗೆ ನೆರವು ನೀಡುವದು ನನ್ನ ಸಾಮರ್ಥ್ಯಕ್ಕೆ ಹೊರತಾದುದು. ನನ್ನ ಸಲಹೆಯೇನೆಂದರೆ, ನೀನು ನಿನ್ನ ದುರಾಸೆ ಮತ್ತು ಜಿಪುಣತೆಯನ್ನು ಬಿಟ್ಟುಬಿಡು. ನಿನ್ನಲ್ಲಿರುವ ಮುತ್ತುರತ್ನ ಮತ್ತಿತರ ಧನಕನಕಗಳಿಂದ ನಿನ್ನ ರಕ್ಷಣೆ ಮಾಡಿಕೋ. ನಿನ್ನ ಸಂಪತ್ತಿನ ಆಸೆಯಿಂದ ಮುಸಲ್ಮಾನರು ನಿನ್ನೊಡನೆ ಸಂಧಾನ ಮಾಡಿಕೊಳ್ಳಬಹುದು." ಎಂದು ಉತ್ತರಿಸಿದನು.

ಮುಂದುವರೆಸಿ, "ಸಂಪತ್ತಿನ ಆಮಿಷದಿಂದ ಸಂಧಾನವು ಸಾಧ್ಯವಾಗದಿದ್ದಲ್ಲಿ, ಆಸುಪಾಸಿನಲ್ಲಿರುವ ರಾಜರೊಡನೆ ಸ್ನೇಹಸಂಬಂಧವನ್ನು ಬೆಳೆಸು. ಅವರನ್ನು ಸಂತುಷ್ಟಿಗೊಳಿಸು. ಇದರಿಂದಾಗಿ ಆ ರಾಜರು ನಿನ್ನ ಮಕ್ಕಳೊಡನೆ ಸೇರಿಕೊಂಡು ಮುಸಲ್ಮಾನ ಸೈನಿಕರಿಗೆ ತೊಂದರೆ ಕೊಡಲಿ ಅಥವಾ ನಿನ್ನ ಸೈನಿಕರು ಮುಸಲ್ಮಾನ

ಸೈನ್ಯದೊಡನೆ ರಹಸ್ಯವಾಗಿ ಹೊಕ್ಕು ಸೈನಿಕರನ್ನು ಹತಗೊಳಿಸಲಿ. ನಾನು ಈ ವಿಷಯದ ಬಗ್ಗೆ ಇತರ ರಾಜರಿಗೆ ರಾಯಸ ಕಳುಹಿಸುತ್ತಿದ್ದೇನೆ. ನಿನಗೆ ಸಹಾಯ ನೀಡಲು ಅವರಿಗೆ ತಾಕೀದು ಮಾಡುತ್ತಿದ್ದೇನೆ. ಅವರು ನಿನ್ನೊಡನೆ ಸೇರಿಕೊಂಡು ಮುಸಲ್ಮಾನರನ್ನು ಎದುರಿಸಲು ಸಿದ್ಧವಾದರೆ ಒಳಿತು, ಇಲ್ಲವಾದಲ್ಲಿ ಬಂಕಾಪುರದ ಕಿಲ್ಲೆಯ ನಂತರ ಉಳಿದ ಎಲ್ಲ ಕಿಲ್ಲೆಗಳು ಸುಲಭವಾಗಿ ಮುಸಲ್ಮಾನರ ಅಧೀನವಾಗುತ್ತವೆ." ಎಂಬ ಸಂದೇಶ ಕಳುಹಿಸಿದನು

ಹಿಂದುಗಳ ಹಗೆತನದ ಕಾರ್ಯವಿಧಾನ :

ತೆಂಕನಾದ್ರಿಯ ಉತ್ತರದಿಂದ ಬಲಬ್‌ನು ಅತ್ಯಂತ ಖೇದಗೊಂಡನು. ಆದಾಗ್ಯೂ, ತೆಂಕನಾದ್ರಿಯ ಸಲಹೆಯನ್ನು ಕಾರ್ಯಗತಗೊಳಿಸುವ ವಿಚಾರ ಮಾಡಿದನು. ಜೇರಾ ಮತ್ತು ಚಂದ್ರಕೋನಿ ರಾಜರು ತನ್ನ ಮಕ್ಕಳ ಜೊತೆಗೆ ಸೇರಿ ಮುಸಲ್ಮಾನ ಸೈನ್ಯವನ್ನು ಧ್ವಂಸ ಮಾಡಲು ನೆರವಾಗಲೆಂದು ಬಲಬ್‌ನು ಅವರನ್ನು ಸಂಪರ್ಕಿಸಿ, ತನ್ನ ಸಹಮತೀಯರನ್ನಾಗಿಸಿಕೊಂಡನು. ಹಿಂದುಗಳು ಹಗೆತನದಿಂದ ತಮ್ಮ ಕಾರ್ಯಾಚರಣೆಯನ್ನು ಆರಂಭಿಸಿದರು. ಇದರಿಂದಾಗಿ, ಅಲಿ ಆದಿಲಶಾಹನ ಸೈನ್ಯದಲ್ಲಿ ಆಹಾರ ಧಾನ್ಯ ಮತ್ತಿತರ ಸಾಮಗ್ರಿಗಳು ಕಡಿಮೆಯಾಗತೊಡಗಿದವು. ಪ್ರತಿದಿನ, ರಾತ್ರಿಯ ಅಂಧಕಾರದಲ್ಲಿ, ಸೈನ್ಯದ ಯಾವುದಾದರೂ ಭಾಗದಲ್ಲಿ ಹಿಂದುಗಳು ಕಳ್ಳರಂತೆ ಬಂದು ದಾಳಿ ಮಾಡಿ, ಮುಸಲ್ಮಾನರನ್ನು ವಧಿಸುತ್ತಿದ್ದರು.

ಹಿಂದುಗಳಿಗೆ ಅದೃಷ್ಟ ತಂದ ಯುದ್ಧ :

ಈ ಯುದ್ಧದಲ್ಲಿ ಹಿಂದುಗಳಿಗೆ ವಿಜಯ ದೊರಕಿತು. ಇದಕ್ಕೆ ಕಾರಣವೇನೆಂದರೆ, ಕರ್ನಾಟಕದ ಸೈನಿಕರು ಒಂದು ಚಿಕ್ಕ ವಸ್ತುವಿನ ಆಸೆಗೆ, ತಮ್ಮ ಪ್ರಾಣವನ್ನು ಪಣವಾಗಿ ಒಡ್ಡುತ್ತಿದ್ದರು. ಶತ್ರುಗಳಿಂದ ರಕ್ಷಿಸಿಕೊಳ್ಳುವ ಹಲವಾರು ವಿಧಾನಗಳು ಅವರಿಗೆ ತಿಳಿದಿದ್ದವು. ಹಿಂದು ಸೈನಿಕರು ತಮ್ಮ ಮೈಗೆಲ್ಲ ಒಂದು ವಿಧದ ಎಣ್ಣೆಯನ್ನು ಬಳಿದುಕೊಳ್ಳುತ್ತಿದ್ದರು. ಇದರಿಂದಾಗಿ ಶತ್ರುಗಳಿಗೆ ಅವರನ್ನು ಹಿಡಿಯಲು ಸಾಧ್ಯವಾಗದೆ ನುಣುಚಿಕೊಳ್ಳುತ್ತಿದ್ದರು. ಸಮಯಸಾಧಿಸಿ, ಸೈನಿಕರನ್ನು ಮತ್ತು ಕುದುರೆಗಳನ್ನು ಕತ್ತಿಯಿಂದ ಹೊಡೆದು, ಸಾವಿನ ಸೆರಗಿನಲ್ಲಿ ಚಿರನಿದ್ರೆಗೆ ಕಳುಹಿಸುತ್ತಿದ್ದರು.

ಮಂತ್ರವಿದ್ಯೆ :

ಕರ್ನಾಟಕದ ನಿವಾಸಿಗಳು ಮಂತ್ರವಿದ್ಯೆಯಲ್ಲಿ ಅತ್ಯಂತ ಪ್ರವೀಣರಾಗಿದ್ದರೆಂದು ಹೇಳಲಾಗುತ್ತದೆ. ಅವರು ಯಾವುದಾದರೂ ಶವದ ದಹನ ಸಂಸ್ಕಾರ ಮಾಡಿದ ಮೇಲೆ ಅಲ್ಲಿಯ ಬೂದಿಯನ್ನು ತಮ್ಮ ಬಳಿ ಇಟ್ಟುಕೊಳ್ಳುತ್ತಾರೆ. ಅಗತ್ಯ ಬಿದ್ದಾಗ, ಬೂದಿಯನ್ನು ಮಂತ್ರಿಸಿ, ಯಾವುದಾದರೂ ಮನೆ ಅಥವಾ ಸೈನಿಕರ ಬಿಡಾರದಲ್ಲಿ ಹಾಕಿಬಿಡುತ್ತಾರೆ. ಇದರಿಂದ ಆ ಮನೆಯಲ್ಲಿ ವಾಸಿಸುವವರು ಅಥವಾ ಬಿಡಾರದಲ್ಲಿ

ವಾಸಿಸುವವರು ಮಂಕು ಬಡಿದವರಂತಾಗಿ ಬಿಡುತ್ತಾರೆ. ಅವರಿಗೆ ಯಾವುದೇ ಜ್ಞಾನವಿರುವುದಿಲ್ಲ. ಒಂದು ವೇಳೆ ಈ ಮಂಕು ಬೂದಿ ಎರಚಿದಾಗ, ಅವರು ಯಾವುದೇ ಕಾರಣದಿಂದ ಜಾಗ್ರತರಾಗಿದ್ದಲ್ಲಿ ಹಾಗೂ ಮಂತ್ರ ಹಾಕುವವರನ್ನು ನೋಡಿದಲ್ಲಿ, ಅವರ ಪರಿಸ್ಥಿತಿ ಇನ್ನೂ ವಿಚಿತ್ರವಾಗಿರುತ್ತದೆ. ಅವರು ತಮ್ಮ ನಾಲಗೆಯಿಂದ ಯಾವುದೇ ಮಾತುಗಳನ್ನು ಆಡಲು ಸಾಧ್ಯವಾಗುವುದಿಲ್ಲ. ತಾವಿರುವ ಸ್ಥಳದಿಂದ ನಡೆದಾಡಲೂ ಸಾಧ್ಯವಾಗುವುದಿಲ್ಲ.

ಮುಸಲ್ಮಾನರ ರಕ್ಷಣೆಗೆ ಉಪಾಯ :

ಅಲಿ ಆದಿಲಶಾಹನ ಸೈನ್ಯದಲ್ಲಿ ಕೋಲಾಹಲ ಹಬ್ಬಿತು. ಮುಸಲ್ಮಾನ ಸೈನಿಕರು ಹಿಂದಿರುಗಿ ಹೊರಟು ಹೋಗಬಯಸುತ್ತಿದ್ದರು. ಮುಸ್ತಫಾಖಾನನು ಅವರನ್ನು ಹುರಿದುಂಬಿಸಿ, ರಣರಂಗದಿಂದ ಓಡಿ ಹೋಗುವುದನ್ನು ತಡೆದನು. ಅಲ್ಲದೆ, ಕಳ್ಳರನ್ನು ಮತ್ತು ಗುಪ್ತಚಾರರನ್ನು ತಡೆಯುವ ಉಪಾಯ ಮಾಡತೊಡಗಿದನು. ಮುಸಲ್ಮಾನರಲ್ಲಿ ಬರ್‌ದ ಸರದಾರರು ಸಹ ಇದ್ದರು. ಇವರು ಮುಸ್ಲಿಮೇತರರಾಗಿದ್ದರು. ಅವರು ಶೌರ್ಯ–ಪರಾಕ್ರಮಕ್ಕೊಂದು ಮಾದರಿಯಾಗಿದ್ದರು. ಇಬ್ರಾಹಿಮ ಆದಿಲಶಾಹನ ಕಾಲದಿಂದ ಅಲಿ ಆದಿಲಶಾಹನ ಆಳ್ವಿಕೆಯವರೆಗೆ ಅವರು ಸರದಾರರ ಜೀವನವನ್ನು ನಡೆಸುತ್ತಿದ್ದರು. ಅವರ ಸಂಖ್ಯೆ ಆರು ಸಾವಿರವಿತ್ತು. ಆಹಾರ ಧಾನ್ಯ ಮತ್ತಿತರ ಸಾಮಗ್ರಿಗಳನ್ನು ತರುವ ದಾರಿಗೆ ಶತ್ರುಗಳು ಅಡ್ಡಿ ಮಾಡದಿರಲೆಂದು ಹಿಂದು ಸೈನಿಕರನ್ನು ಎದುರಿಸಲು ಅವರನ್ನು ನಿಯಮಿಸಲಾಯಿತು.

ಇದಲ್ಲದೆ, ಸೈನಿಕರ ರಕ್ಷಣೆ ಮಾಡುವ ಇಂತಹದೇ ಕೆಲಸಕ್ಕೆ, ಎಂಟು ಸಾವಿರ ಪದಾತಿಗಳನ್ನು ನಿಯಮಿಸಲಾಯಿತು. 'ವೈರಿಗಳ ಕಡೆಯಿಂದ ಕಳ್ಳರು ಮುಸಲ್ಮಾನ ಸೈನ್ಯದೊಳಗೆ ಬಂದು ಯಾವ ಭಾಗದಲ್ಲಿ ದಾಳಿ ಮಾಡುವರೋ, ಪದಾತಿಗಳು ಅಲ್ಲಿಗೆ ಹೋಗಬೇಕು. ಸೈನ್ಯದ ಹೊರಗಡೆ ಯಾವುದಾದರೂ ವ್ಯಕ್ತಿ ಕಂಡಲ್ಲಿ ಅವರನ್ನು ವಧಿಸಬೇಕು' ಎಂಬ ಆಜ್ಞೆಯನ್ನು ನೀಡಲಾಯಿತು. ಈ ಆಜ್ಞೆಯಿಂದ ಮುಸಲ್ಮಾನ ಸೈನ್ಯದ ಸೈನಿಕರು ತಮ್ಮ ದಂಡಿನಿಂದ ಹೊರಗೆ ಹೋಗುವುದನ್ನು ನಿಲ್ಲಿಸಿದರು.

ಮಾಮೂಲಿನಂತೆ ಶತ್ರು ಸೈನಿಕರು ಮುಸಲ್ಮಾನರ ಸೈನ್ಯದ ಮೇಲೆ ರಾತ್ರಿ ದರೋಡೆ ಮಾಡತೊಡಗಿದರು. ಕಳ್ಳರು ಸೈನ್ಯದ ಬಳಿ ಬಂದ ತಕ್ಷಣ, ಮುಸಲ್ಮಾನ ಪದಾತಿಗಳು ಅವರನ್ನು ಸಮೀಪಿಸುತ್ತಿದ್ದರು. ಕಳ್ಳರು ಅವರನ್ನು ನೋಡಿ ಓಡಲು ಪ್ರಯತ್ನಿಸುತ್ತಿದ್ದರು. ಆಗ ಸೈನಿಕರು ಅವರನ್ನು ವಧಿಸುತ್ತಿದ್ದರು. ಮುಸ್ತಫಾಖಾನನ ಈ ಉಪಾಯವು ಅತ್ಯಂತ ಪರಿಣಾಮಕಾರಿಯೆಂದು ಸಿದ್ಧವಾಯಿತು. ಮುಸಲ್ಮಾನರಿಗೆ ಕಳ್ಳರಿಂದ ಮುಕ್ತಿ ದೊರೆಯಿತು. ಕಳ್ಳರ ಕಾಟದಿಂದ ಮುಚ್ಚಲಾಗಿದ್ದ ಮಾರ್ಗವು ಈಗ ತೆರೆಯಲಾಯಿತು. ಮುಸಲ್ಮಾನರಿಗೆ ಆಹಾರ ಧಾನ್ಯ ಮತ್ತಿತರ ಸಾಮಗ್ರಿಗಳು ಸುಲಭವಾಗಿ ದೊರೆಯತೊಡಗಿದವು.

ಯುದ್ಧದ ವೃತ್ತಾಂತ :

ಯುದ್ಧದ ವೃತ್ತಾಂತವನ್ನು ಸಂಕ್ಷಿಪ್ತವಾಗಿ ಹೇಳಬೇಕೆಂದರೆ, ಬರ್‌ದ ಸರದಾರರು ಮತ್ತು ಬಲಬ್‌ನ ಮಗ ಇವರಲ್ಲಿ ಒಂದು ವರ್ಷದವರೆಗೆ ಯುದ್ಧ ನಡೆಯತೊಡಗಿತು. ಪ್ರತಿದಿನ ರಣರಂಗದಲ್ಲಿ ಘೋರ ಯುದ್ಧ ನಡೆಯುತ್ತಿತ್ತು. ಎರಡೂ ಪಕ್ಷದವರಲ್ಲಿ ಬಹಳ ಸೈನಿಕರು ಹತರಾಗುತ್ತಿದ್ದರು. ಮುಸಲ್ಮಾನರು ಬಹಳ ಸಮಾಧಾನದಿಂದ ಕೋಟೆಗೆ ಮುತ್ತಿಗೆ ಹಾಕಿದ್ದರು. ಮನಃಪೂರ್ವಕ ಯುದ್ಧದಲ್ಲಿ ಭಾಗವಹಿಸುತ್ತಿದ್ದರು. ಹಿಂದುಗಳು ತಮ್ಮ ಶೂರತನ ತೋರಿಸುವಲ್ಲಿ ಹಿಂದೆ ಬೀಳುತ್ತಿರಲಿಲ್ಲ. ಅವರು ಮದ್ದುಗುಂಡುಗಳು ಮತ್ತಿತರ ಅಸ್ತ್ರಗಳಿಂದ ಮುಸಲ್ಮಾನರನ್ನು ಎದುರಿಸುತ್ತಿದ್ದರು.

ಕೋಟೆಯಲ್ಲಿರುವವರ ಶರಣಾಗತಿ :

ಹೀಗೆ ಯುದ್ಧ ನಡೆಯುತ್ತಿರುವ ಸಂದರ್ಭದಲ್ಲಿ, ಬಲಬ್ ವಜೀರನ ಮಗನ ಆರೋಗ್ಯ ಕೆಟ್ಟು ಸಾವಿಗೀಡಾದನು. ಕೋಟೆಯಲ್ಲಿರುವವರು ಚಿಂತಾಕ್ರಾಂತರಾದರು. ಬಲಬ್‌ನ ಸ್ಥಿತಿಯೂ ಕೆಟ್ಟು ಹೋಯಿತು. ಕೋಟೆಗೆ ಮುತ್ತಿಗೆ ಹಾಕಿ ಒಂದು ವರ್ಷ ಮೂರು ತಿಂಗಳು ಕಳೆದ ಮೇಲೆಬಲಬನ ನೆರವಿಗೆ ಬಂದ ಸುತ್ತಮುತ್ತಲಿನ ರಾಜರು ಸಹ ವ್ಯಾಕುಲರಾಗಿ ತಮ್ಮ ತಮ್ಮ ಪ್ರದೇಶಗಳತ್ತ ಹೊರಟು ಹೋದರು. ಈ ವಿದ್ಯಮಾನಗಳಿಂದ ಕೊಟೆಯಲ್ಲಿರುವವರು ಭಯಪಟ್ಟು ಅಲಿ ಆದಿಲಶಾಹನಿಗೆ ಪ್ರಾಣಭಿಕ್ಷೆ ಬೇಡಿದರು. ಬಾದಶಹನು ಅವರ ಬೇಡಿಕೆಯನ್ನು ಮನ್ನಿಸಿ, ಅವರ ಇಚ್ಛೆಯ ಮೇರೆಗೆ ಕರಾರುಪತ್ರ ಬರೆದು ಕಳುಹಿಸಿದನು.

ಆದಿಲಶಾಹಿಗಳ ಅಧೀನತೆಯಲ್ಲಿ ಬಂಕಾಪುರ ಕೋಟೆ :

ಕೋಟೆಯಲ್ಲಿರುವವರು ತಮ್ಮ ಪರಿವಾರದೊಡನೆ ಕೋಟೆ ಖಾಲಿ ಮಾಡಿ ಹೋಗುವ ದಿನ, ಮುಸ್ತಫಾಖಾನನು ತನ್ನ ವಿಶೇಷ ಪಡೆಯ ಸೈನಿಕರೊಂದಿಗೆ, ಕೋಟೆಯ ಹತ್ತಿರದಲ್ಲಿಯೇ ನಿಂತುಕೊಂಡಿದ್ದನು. ಬಲಬ್‌ವಜೀರ ಮತ್ತು ಆತನ ಸೈನ್ಯವು ತಮ್ಮ ಸಾಮಗ್ರಿಗಳು ಮತ್ತು ಮಕ್ಕಳುಮರಿಗಳೊಡನೆ ಕೋಟೆಯಿಂದ ಹೊರಗೆ ಬಂದಿತು. ಅವರು ಮುಂದೆ ಕರ್ನಾಟಕದ ಪ್ರದೇಶಗಳಲ್ಲಿ ಅತ್ತಿತ್ತ ಚೆದರಿಹೋದರು. ತನ್ನ ಕೆಲವು ಆಪ್ತ ಸಂಗಡಿಗರೊಡನೆ, ಅಲಿ ಆದಿಲಶಾಹನು ಕೋಟೆಯೊಳಗೆ ಹೊಕ್ಕನು. ಅಂದು ಮಸೀದಿಗಳಲ್ಲಿ ಅಜಾನ ಕೊಡುವವನು ಶಿಯಾ ಧರ್ಮದ ಸಂಪ್ರದಾಯದಂತೆ ಅಜಾನ ನೀಡಿದನು. ಬೃಹತ್ ಮಂದಿರವನ್ನು ಧ್ವಂಸ ಮಾಡಿ, ಅದನ್ನು ಮಸೀದೆಯಾಗಿ ಪರಿವರ್ತಿಸಿದನು. ತಮಗೆ ಪ್ರಾಪ್ತವಾದ ವಿಜಯದ ಸಂಕೇತವಾಗಿ, ಅಲಿ ಆದಿಲಶಾಹ ಮತ್ತು ಮುಸ್ತಫಾಖಾನರು ಸ್ವತಃ ತಮ್ಮ ಕೈಯಿಂದ ಮಸೀದೆಯ ಅಡಿಗಲ್ಲನ್ನು ಇಟ್ಟರು.

ಮುಸ್ತಫಾಖಾನನಿಗೆ ಹೆಚ್ಚಿದ ಗೌರವ :

ಯುದ್ಧದಲ್ಲಿ ಪಡೆದ ವಿಜಯದ ತರುವಾಯ ಮುಸ್ತಫಾಖಾನನ ಪ್ರಭುತ್ವವು

ಇನ್ನೂ ಹೆಚ್ಚಿತು. ಅಲಿ ಆದಿಲಶಾಹನು ಮುಸ್ತಫಾಖಾನನಿಗೆ ವಿಶೇಷ ಪದವಿಯನ್ನು ಕೊಡುಗೆಯಾಗಿ ನೀಡಿದನು. ಅಸದ್‌ಖಾನ ಮತ್ತು ಕಿಶ್ವರಖಾನರನ್ನು ಹೊರತುಪಡಿಸಿ ಇದಕ್ಕೂ ಮೊದಲು ಇನ್ನಿತರರಿಗೆ ಈ ಪದವಿಯು ದೊರೆತಿರಲಿಲ್ಲ. ಬಂಕಾಪುರ ಪ್ರದೇಶದ ಬಹಳಷ್ಟು ಗ್ರಾಮಗಳು ಮತ್ತು ಗ್ರಾಮೀಣ ಜನರು ಮುಸ್ತಫಾಖಾನನ ಜಹಗೀರಿನಲ್ಲಿ ಸೇರ್ಪಡೆಯಾದರು. ಮುಸ್ತಫಾಖಾನನು ಕ್ರಮೇಣವಾಗಿ ಬಾದಶಹನನ್ನು ತನ್ನ ಮೋಹಿತನನ್ನಾಗಿ ಮಾಡಿಕೊಂಡನು. ಅಲಿ ಆದಿಲಶಾಹನ ರಾಜ್ಯದ ಸಮಸ್ತ ಕಾರ್ಯಭಾರವನ್ನು ಮುಸ್ತಫಾಖಾನನ ಅಧೀನಕ್ಕೆ ಕೊಡಲಾಯಿತು. ರಾಜನ ಉಂಗುರವನ್ನು ಸಹ ಆತನಿಗೆ ಕೊಡಲಾಯಿತು. ಇದಲ್ಲದೆ, ಮುಸ್ತಫಾಖಾನನು ತನ್ನ ಯೋಜನೆಯಂತೆ ಕಾರ್ಯ ನಿರ್ವಹಿಸಬಹುದು. ರಾಜನ ಆಣತಿಗಾಗಿ ಕಾಯುವ ಅಗತ್ಯವಿಲ್ಲವೆಂಬ ಆಜ್ಞೆಯನ್ನು ಸಹ ಮಾಡಲಾಯಿತು.

ಜರ್‍ಹಾ ಮತ್ತು ಚಂದ್ರಕೋನಿ ಕಿಲ್ಲೆಗಳನ್ನು ಅಧೀನಗೊಳಿಸಿಕೊಳ್ಳುವ ಯೋಜನೆ :

ನಾಲ್ಕು ತಿಂಗಳ ಅವಧಿಯಲ್ಲಿ ಬಂಕಾಪುರ ಕಿಲ್ಲೆಯು ಸಂಪೂರ್ಣವಾಗಿ, ಅಲಿ ಆದಿಲಶಾಹನ ವಶದಲ್ಲಿ ಬಂದುಬಿಟ್ಟಿತು. ಅಲ್ಲಿಯ ಪ್ರಜೆಗಳು ಸಂತೋಷದಿಂದ ಅಲಿ ಆದಿಲಶಾಹನ ಆಳ್ವಿಕೆಯನ್ನು ಒಪ್ಪಿ, ವಿಧೇಯರಾದರು. ಅಲಿ ಆದಿಲನು ಬಂಕಾಪುರ ಕಿಲ್ಲೆಯಲ್ಲಿ ವಾಸಿಸತೊಡಗಿದನು ಹಾಗೂ ಮುಸ್ತಫಾಖಾನನಿಗೆ ಇಪ್ಪತ್ತು ಸಾವಿರ ಅಶ್ವ ಸವಾರರು. ಹಣ ಮತ್ತು ಇತರ ಯುದ್ಧಸಾಮಗ್ರಿಗಳನ್ನು ಕೊಟ್ಟು ಜರ್‍ಹಾ ಮತ್ತು ಚಂದ್ರಕೋನಿ ಕಿಲ್ಲೆಗಳನ್ನು ಜಯಿಸಿ ಬರಲು ಆಜ್ಞೆ ಮಾಡಿದನು.

ಜರ್‍ಹಾ ರಾಜನ ವಿಧೇಯತೆ :

ಮುಸ್ತಫಾಖಾನನು ಜರ್‍ಹಾ ಕಿಲ್ಲೆಯನ್ನು ತಲುಪಿದನು. ಜರ್‍ಹಾ ಅರಸನಾದ ಔರಸಪ್ ನಾಯಕನು ಗೌರವ ಮತ್ತು ವಿನಯವನ್ನು ತೋರಿಸಿ, ಪ್ರತಿವರ್ಷವೂ ಕಂದಾಯ ನೀಡುವ ಪ್ರಮಾಣ ಮಾಡಿದನು. ಬಂಕಾಪುರದ ಯುದ್ಧದ ಸಂದರ್ಭದಲ್ಲಿ, ಜರ್‍ಹಾ ಅರಸನು ಮುಸ್ತಫಾಖಾನನಿಗೆ ತೋಪುಗಳನ್ನು ಹಾಗೂ ಇತರ ಕಾಣಿಕೆಗಳನ್ನು ನೀಡಿ ತನ್ನ ವಿಧೇಯತೆಯನ್ನು ತೋರಿಸಿದ್ದನು. ಹೀಗಾಗಿ ಮುಸ್ತಫಾಖಾನನು ಆತನನ್ನು ಹೆಚ್ಚು ವಿಚಾರಣೆ ಮಾಡದೆ, ಆತನ ಸಂಧಾನದ ನಿವೇದನೆಯನ್ನು ಒಪ್ಪಿಕೊಂಡನು. ಕಂದಾಯದ ಹಣ ವಸೂಲಿ ಮಾಡಿ ಮುಂದೆ ಸಾಗಿದನು. ಅಲ್ಲಿಂದ ಮುಸ್ತಫಾಖಾನನು ಚಂದ್ರಕೋನಿಯತ್ತ ಪ್ರವಾಸ ಕೈಗೊಂಡನು.

ಚಂದ್ರಕೋನಿ ಕೋಟೆಯನ್ನು ಜಯಿಸುವುದು :

ಚಂದ್ರಕೋನಿಯ ರಾಜನು ಮುಂದಿನ ಪರಿಣಾಮವನ್ನು ಊಹಿಸದೆ ನಿರ್ಧಾರವನ್ನು ತೆಗೆದುಕೊಂಡನು. ಆತನು ಸಂಧಾನಕ್ಕೆ ರಾಜಿಯಾಗಲಿಲ್ಲ. ಆತನಿಗೆ ತನ್ನ ಸಾಮರ್ಥ್ಯ, ಕೋಟೆಯ ಭದ್ರತೆ ಮತ್ತು ನಿಬಿಡ ಅರಣ್ಯಗಳ ಬಗ್ಗೆ ಬಹಳ ಹೆಮ್ಮೆ ಇತ್ತು. ಹೀಗಾಗಿ

ಆತನು ಮುಸ್ತಫಾಖಾನನನ್ನು ಎದುರಿಸುವ ನಿರ್ಧಾರ ಮಾಡಿದನು. ಮುಸ್ತಫಾಖಾನನು ಕೋಟೆಗೆ ಮುತ್ತಿಗೆ ಹಾಕಿದನು ಹಾಗೂ ಚಂದ್ರಕೋನಿಯ ನಿವಾಸಿಗಳ ನೆರವಿಗೆ ಸುತ್ತಮುತ್ತಲಿನ ಪ್ರದೇಶಗಳಿಂದ ಬಂದ ಮುಸ್ಲಿಮೇತರರನ್ನು ಎದುರಿಸಲು ಬರ್ದ ಸರದಾರರನ್ನು ನಿಯಮಿಸಿದನು. ಮುಸಲ್ಮಾನರು ಹತ್ತು ತಿಂಗಳ ಕಾಲ ಕೋಟೆಯ ಮುತ್ತಿಗೆಯನ್ನು ಜಾರಿಯಲ್ಲಿಟ್ಟರು. ಕೋಟೆಗೆ ಬರುವ ಆಹಾರ ಧಾನ್ಯ ಮತ್ತಿತರ ಸಾಮಗ್ರಿಗಳನ್ನು ಬರದಂತೆ ರಸ್ತೆಗೆ ತಡೆಯೊಡ್ಡಿದರು. ಅಂತಿಮವಾಗಿ, ಹಿಜರಿಶಕೆ ೯೮೩ರಲ್ಲಿ ಕೋಟೆಯ ಮೇಲೆ ಜಯ ಸಾಧಿಸಲಾಯಿತು. ಇನ್ನೂ ಸ್ಪಷ್ಟವಾಗಿ ಹೇಳಬೇಕೆಂದರೆ, ಇದಕ್ಕೂ ಮೊದಲು ಈ ಕೋಟೆಯನ್ನು ಮುಸಲ್ಮಾನರಿಂದ ಸ್ಪರ್ಶಿಸಲೂ ಸಾಧ್ಯವಾಗಿರಲಿಲ್ಲ.

ಅಲಿ ಆದಿಲಶಾಹ ಬಿಜಾಪುರಕ್ಕೆ ಮರಳುವುದು :

ಮುಸ್ತಫಾಖಾನನು ಚಂದ್ರಕೋನಿ ಕಿಲ್ಲೆಯನ್ನು ಗೆದ್ದನಂತರ, ಅಲಿ ಆದಿಲಶಾಹನ ಸನ್ನಿಧಿಗೆ ವಿಜಯಪತ್ರವನ್ನು ಕಳುಹಿಸಿದನು. ಅಲಿ ಆದಿಲಶಾಹನು ಬಹಳ ಸಂತುಷ್ಟಗೊಂಡು, ಈ ಕೋಟೆಯಲ್ಲಿ ವಿಹಾರ ಮಾಡುವ ಅಪೇಕ್ಷೆ ಮಾಡಿದನು. ಬಂಕಾಪುರದಿಂದ ಚಂದ್ರಕೋನಿಯನ್ನು ತಲುಪಿ, ಅಲ್ಲಿ ಕೆಲವು ದಿನಗಳ ಕಾಲ ಐಷಾರಾಮಿನಿಂದ ಕಳೆದನು. ಚಂದ್ರಕೋನಿಯ ಜನರನ್ನು ಅಲಿ ಆದಿಲಶಾಹನು ಬಹಳ ಮೆಚ್ಚಿಕೊಂಡನು. ಮೂರು ವರ್ಷ ಮತ್ತು ಕೆಲವು ತಿಂಗಳ ಕಾಲ ಚಂದ್ರಕೋನಿಯಲ್ಲಿದ್ದು ಬಿಜಾಪುರಕ್ಕೆ ಮರಳಿದನು. ಅಲಿ ಆದಿಲಶಾಹನು ತನ್ನ ರಾಜಮುದ್ರೆಯನ್ನು ಮುಸ್ತಫಾಖಾನನಿಗೆ ಕೊಟ್ಟು, ಚಂದ್ರಕೋನಿ ಮತ್ತು ಅದರ ಆಸುಪಾಸಿನ ಪ್ರದೇಶವನ್ನು ರಕ್ಷಿಸುವ ಆಜ್ಞೆ ಮಾಡಿದನು. ಅಲಿ ಆದಿಲಶಾಹನು ಮುಸ್ತಫಾಖಾನನಿಗೆ, “ಯಾರಾದರೂ ಬಿಜಾಪುರದಿಂದ ರಾಜಾಜ್ಞೆಯನ್ನು ಚಂದ್ರಕೋನಿಗೆ ತಂದು ಅನುಸರಿಸಲು ಹೇಳಿದರೆ, ಅದನ್ನು ಪರಿಶೀಲಿಸಿ, ಅಗತ್ಯ ಹಾಗೂ ಅನಿವಾರ್ಯವೆನಿಸಿದಲ್ಲಿ ಮಾತ್ರ, ಅದರ ಮೇಲೆ ರಾಜಮುದ್ರೆಯನ್ನು ಹಾಕಬೇಕು. ಇಲ್ಲವಾದಲ್ಲಿ ಹರಿದು ಹಾಕಬೇಕು” ಎಂದು ಹೇಳಿ ಬಿಜಾಪುರಕ್ಕೆ ಹೋದನು.

ಚಂದ್ರಕೋನಿಯಲ್ಲಿ ಹೊಸ ಕೋಟೆಗಳ ನಿರ್ಮಾಣ :

ಅಲಿ ಆದಿಲಶಹಿಗೆ ಈ ಪತ್ರ ತಲುಪಿದ ತಕ್ಷಣ ತನ್ನ ಖಾಸಾ ದರ್ಬಾರಿ ಜನರಜೊತೆ ಚಂದ್ರಕೋನಿಗೆ ಹೋಗಿ ಮುಟ್ಟಿದ್ದನು. ಮುಸ್ತಫಾಖಾನನ ಅಭಿಪ್ರಾಯದಂತೆ ಗುಡ್ಡದ ಮೇಲೆ ಕೋಟೆಯನ್ನು ಕಟ್ಟಲು ಆದೇಶಿಸಿದನು. ನಂತರ ನಲಗೊಂಡಾದ ದಾರಿಹಿಡಿದು ತಿರುಗಿ ಬಿಜಾಪುರಕ್ಕೆ ಬಂದನು. ಮುಸ್ತಫಾಖಾನನು ಒಂದು ವರುಷದಲ್ಲಿ ಒಂದು ಹೊಸ ಕೋಟೆಯನ್ನು ಅಲ್ಲಿ ಕಟ್ಟಿಸಿದನು. ಅಲಿ ಆದಿಲಶಹನು ಎರಡನೆಯ ಸಲ ಮುಸ್ತಫಾಖಾನನ ವಿನಂತಿಯನ್ನು ಮನ್ನಿಸಿ ಚಂದ್ರಕೋನಿಗೆ ಬಂದನು. ಮತ್ತು

ಹೊಸ ಕೋಟೆಯನ್ನು ನೋಡಿ ಸಂತೋಷ ಪಟ್ಟನು. ಮುಸ್ತಫಾಖಾನನ ಶ್ರಮ ಮತ್ತು ನಿಷ್ಠೆಯನ್ನು ನೋಡಿ ಸಂತೋಷಪಟ್ಟನು.

ಅಲಿ ಆದಿಲಶಹನ ಕರೂರ ಕೋಟೆ ಇರಾದೆ :

ಅದೇ ದಿನಗಳಲ್ಲಿ ಮುಸ್ತಫಾಖಾನನು ಚಂದ್ರಕೋನಿಯ ಕೋಟೆಯ ಮುಖ್ಯಸ್ಥನಾದ ರಾಜಾ ಶಂಕರನಾಯಕನ ಹತ್ತಿರ ಒಬ್ಬ ದೂತನನ್ನು ಕಳಿಸಿದನು. ತಮ್ಮ ಅಧೀನತೆಯನ್ನು ಒಪ್ಪಿಕೊಳ್ಳಲು ಅವನಿಗೆ ಆದೇಶಿಸಿದನು. ಶಂಕರನಾಯಕನು ಅದನ್ನು ಒಪ್ಪಿಕೊಂಡನು. ಆಲಿ ಆದಿಲಶಹನ ಪಾದ ಸ್ಪರ್ಶಿಸಲು ಚಂದ್ರಕೋನಿಗೆ ಬಂದನು. ಮತ್ತು ತನ್ನ ಕೋಟೆಗೆ ಬರಲು ಆಮಂತ್ರಿಸಿದನು. ಬಾದಶಹನು ಅವನ ಆಮಂತ್ರಣವನ್ನು ಒಪ್ಪಿಕೊಮಡನು. ಮುಸ್ತಫಾಖಾನ ಮತ್ತು ಐದಾರುಸಾವಿರ ಸವಾರರ ಜೊತೆ ಚಂದ್ರಕೋನಿಯಿಂದ ಕರೂರ ಕೋಟೆಯತ್ತ ಹೊರಟನು.

ಕರೂರಕೋಟೆಯ ಮುಖ್ಯಸ್ಥನ ಶರಣಾಗತಿ :

ಕರೂರಕೋಟೆಯು ಅರಣ್ಯ ಮಧ್ಯದಲ್ಲಿದ್ದು ದಾರಿ ಇಕ್ಕಟ್ಟಾಗಿತ್ತು. ಕೆಲವೊಂದು ಕಡೆಗೆ ಒಬ್ಬನಿಗಿಂತ ಹೆಚ್ಚು ಅಲ್ಲಿಂದ ಹೋಗಲು ಸಾಧ್ಯವಿರಲಿಲ್ಲ. ಇದನ್ನು ಕಂಡ ಬಾದಶಹನ ಜೊತೆ ಬಂದ ಸವಾರರು ಗಾಬರಿಯಾಗಿ ತಿರುಗಿ ಹೋಗಲು ವಿನಂತಿಸಿಕೊಂಡರು. ಇದನ್ನು ಬಾದಶಹನು ತನ್ನ ಅಮೀರರ ಜೊತೆಗೆ ಚರ್ಚಿಸಿ ಕರೂರ ಕೋಟೆಯ ಆಡಳಿತವನ್ನು ಶಂಕರನಾಯಕನಿಗೆ ಒಪ್ಪಿಸಿ ತಾನು ಸವಾರರೊಂದಿಗೆ ತಿರುಗಿ ಚಂದ್ರಕೋನಿಗೆ ಮರಳಿ ಬಂದನು. ಈ ವಿಷಯವನ್ನು ಮುಸ್ತಫಾಖಾನನು ಬಹಳ ಜಾಣತನದಿಂದ ಶಂಕರನಾಯಕನಿಗೆ ಹೇಳಿದನು. 'ಈ ಐದಾರಸಾವಿರ ಯೋಧರು ಬಾದಶಹನೊಂದಿಗೆ ನಿನ್ನಲ್ಲಿಗೆ ಬಂದರೆ ನಿನಗೆ ಬಹಳ ತೊಂದರೆಯಾಗುತ್ತದೆ ಎಂದು ನಾನೇ ಬಾದಶಹನಿಗೆ ತಿಳಿ ಹೇಳಿ ತಿರುಗಿ ಕಳಿಸಿರುವೆ. ಈಗ ನೀನು ಕಪ್ಪನ್ನು ಕೊಟ್ಟು ಶರಣಾಗತನಾಗು. ಅದರಲ್ಲೆ ನಿನ್ನ ಸುರಕ್ಷಿತೆ ಇದೆ ಮತ್ತು ಬೇರೆ ರಾಜರಿಗೂ ಇದನ್ನೇ ಹೇಳಿ ಒಪ್ಪಿಸು ಇದನ್ನೆ ನಾನು ಬಾದಶಹನಿಗೆ ಹೇಳಿ ಎಲ್ಲವನ್ನೂ ಸರಿ ಮಾಡುತ್ತೇನೆ' ಎಂದನು.

ಉಳಿದ ಅರಸರ ಶರಣಾಗತಿ :

ಶಂಕರನಾಯಕನು ತಕ್ಕಣ ಶರಣಾಗತನಾಗಲು ಒಪ್ಪಿದನು ಮತ್ತು ಉಳಿದ ಅರಸಲ್ಲಿಯ ಚಂದಜೇರದ [ಚಂದ್ರಗಿರಿ] ಅರಸಪ್ಪನಾಯಕ, ಕಣಾರಾಬದ ಕೋಟೆಯ ಮುಖ್ಯಸ್ಥನಾರ ಬಹೆರಾದೇವಿ, ಬಂದರ ಬಾಸಲೋರ ಹಾಗೂ ಸಾಹಿಲ ಉಮಾನ ಕೋಟೆಯ ಮುಖ್ಯಸ್ಥನಾದ ಜಲ್ವಿ ಮತ್ತು ಬಾಕಲೋ ಮತ್ತು ಬಾದಕಲ್ಲದ ರಾಜರಿಗೆ ಶರಣಾಗತರಾಗಲು ಒಪ್ಪಿಸಿ ಅವರಿಗೂ ಕಪ್ಪನ್ನು ಕೊಡಲು ಒಪ್ಪಿಸಿದನು. ಇವರೆಲ್ಲ ಶಂಕರನಾಯಕನ ಮಾತು ಕೇಳಿ ಅಲಿ ಆದಿಲಶಹನ ಸೇವೆಯಲ್ಲಿ ಉಪಸ್ಥಿತರಾದರು.

ಅವರೆಲ್ಲರೂ ೬೦ ಲಕ್ಷ ೫೦ ಸಾವಿರ ಹುನ್ನಗಳನ್ನು ತಂದು ಅಲಿ ಆದಿಲಶಹನಿಗೆ ಕಾಣಿಕೆಯಾಗಿ ಕೊಟ್ಟರು. ಮತ್ತು ಪ್ರತಿ ವರುಷ ಎಲ್ಲರು ಕೂಡಿ ಮೂರೂವರೆ ಲಕ್ಷ ಹುನ್ನಗಳನ್ನು ಆದಿಲಶಾಹಿಯ ಖಜಾನೆಯಲ್ಲಿ ತುಂಬಲು ಒಪ್ಪಿಕೊಂಡರು.

ಅಲಿ ಆದಿಲಶಾಹನಿಗೆ ಮುಸ್ತಫಾಖಾನನ ಪತ್ರ :

ಎರಡನೆಯ ವರ್ಷ ಮುಸ್ತಫಾಖಾನನು ಅಲಿ ಆದಿಲಶಾಹನಿಗೆ ಪತ್ರ ಬರೆದನು. ಅದರ ವಿಷಯ ಹೀಗಿತ್ತು "ಪೂರ್ವಕಾಲದಲ್ಲಿ ಚಂದ್ರಕೋನಿ ಕೋಟೆಯು ಒಂದು ಪರ್ವತದ ಮೇಲಿತ್ತು. ದುರ್ಘಟನೆಯಿಂದ ಅದು ಕುಸಿದು ಹೋಗಿರುವುದರಿಂದ, ನಂತರ ಆಳ್ವಿಕೆ ವಹಿಸಿದ ರಾಜರು ಕೋಟೆಯನ್ನು ನಿರ್ಮಿಸುವುದಕ್ಕಾಗಿ, ಪರ್ವತದ ಸೆರಗಿನಲ್ಲಿ ಸ್ಥಳ ಪಡೆದು, ಅಲ್ಲಿಯೇ ಪರ್ವತವನ್ನು ನಿರ್ಮಿಸಿದ್ದಾರೆ. ನನ್ನ ಅಭಿಪ್ರಾಯವೇನೆಂದರೆ, ಕೋಟೆಯಲ್ಲಿರುವವರು ನಮ್ಮ ಆಳ್ವಿಕೆಗೆ ಒಳಪಟ್ಟು ಕಂದಾಯ ನೀಡುವ ಉಪದೇಶ ಮಾಡಿದರು. ಅವರೆಲ್ಲ ಶಂಕರನಾಯಕನ ಉಪದೇಶವನ್ನು ಒಪ್ಪಿಕೊಂಡು ಬಾದಶಹನ ಸನ್ನಿಧಿಯಲ್ಲಿ ಉಪಸ್ಥಿತರಾದರು. ಅವರು ಏಳು ಲಕ್ಷ ಐವತ್ತು ಸಾವಿರ ಹೋನುಗಳನ್ನು ಅಲಿ ಆದಿಲಶಾಹನಿಗೆ ಕಾಣಿಕೆಯಾಗಿ ಕೊಟ್ಟಿದ್ದಾರೆ. ಸುತ್ತಮುತ್ತಲಿನ ರಾಜರು ಒಟ್ಟಾರೆಯಾಗಿ ಪ್ರತಿವರ್ಷ ಮೂರೂವರೆ ಲಕ್ಷ ಹೋನುಗಳನ್ನು ಬಾದಶಹರ ಖಜಾನೆಗೆ ನೀಡುವವರು."

ಪ್ರತಿವರ್ಷ ನಗದು ಹಣ ನೀಡುವದು :

ಅಲಿ ಆದಿಲಶಾಹನು ಎಲ್ಲ ರಾಜರಿಗೆ ವಸ್ತ್ರಗಳನ್ನು ನೀಡಿದನು. ಅವರು ಸಂತುಷ್ಟರಾಗಿ ತಮ್ಮ ತಮ್ಮ ಪ್ರದೇಶಗಳತ್ತ ಹೊರಟುಹೋದರು. ಅಲಿ ಆದಿಲಶಾಹನ ಆಳ್ವಿಕೆಯಲ್ಲಿ ಈ ರಾಜರು ನಿಗದಿತ ಮೊತ್ತ ಮೂರೂವರೆ ಲಕ್ಷ ಹೋನುಗಳನ್ನು ತಪ್ಪದೆ ಕೊಡುತ್ತಿದ್ದರು. ಇದಲ್ಲದೆ, ಮುಸ್ತಫಾಖಾನನಿಗೆ ಸಹ ಗುಪ್ತವಾಗಿ ಪ್ರತಿವರ್ಷ ಮೂರು ಸಾವಿರ ಹೋನು, ಮುತ್ತು, ಮಾಣಿಕ್ಯ, ಪಚ್ಚೆ ಇತ್ಯಾದಿಗಳನ್ನು ಕೊಡುತ್ತಿದ್ದರು.

ಶೂರ ರಾಣಿಯರು :

ಅಲ್ಲಿಯ ಎಲ್ಲ ರಾಜರು ಮತ್ತು ರಾಣಿಯರು ಅಲಿ ಆದಿಲನ ಆಸ್ಥಾನದಲ್ಲಿ ಉಪಸ್ಥಿತರಾದಾಗ, ಬಾದಶಹನು ಎಲ್ಲರಿಗೂ ರಾಜವಸ್ತ್ರಗಳನ್ನು ನೀಡಿದನು. ಆಗ ದೇವಲ್ ಮತ್ತು ಜುಲೂಮಿ ಎಂಬ ಇಬ್ಬರು ರಾಣಿಯರಿಗೆ ಸ್ತ್ರೀಯರ ವಸ್ತ್ರಗಳನ್ನು ನೀಡಿದನು. ಆ ಶೂರ ರಾಣಿಯರು, ಅವುಗಳನ್ನು ಸ್ವೀಕರಿಸಲು ಒಪ್ಪಲಿಲ್ಲ. ಅವರು, "ನಾವು ನೋಡಲು ಸ್ತ್ರೀಯರಂತೆ ಕಾಣುತ್ತೇವೆ. ಆದರೆ, ನಮ್ಮ ತಲವಾರುಗಳಿಂದ ನಾವು ತೋರಿಸುವ ಶಕ್ತಿಯನ್ನು ಜನರು ನಮ್ಮ ಪೌರುಷವೆಂದು ತಿಳಿಯುತ್ತಾರೆ. ಇದರಿಂದ ನಾವು ನಮ್ಮ ರಾಜ್ಯವನ್ನು ಆಳುತ್ತೇವೆ" ಎಂದು ಹೇಳಿದರು. ಈ ರಾಣಿಯರು ಹೇಳಿದ ಮಾತುಗಳು ಅಲಿ ಆದಿಲಶಾಹನಿಗೆ ಬಹಳ ಮೆಚ್ಚಿಗೆಯಾದವು. ಅವರಿಗೆ

ತಲವಾರುಗಳನ್ನು, ಸವಾರಿ ಮಾಡದ ಹೊಸ ಕುದುರೆಗಳನ್ನು ಮತ್ತು ಪುರುಷ ವಸ್ತ್ರಗಳನ್ನು ನೀಡಿ ಗೌರವಿಸಿದನು.

ಆ ದಿನಗಳಿಂದ ಇಂದಿನವರೆಗೆ ಮಹಿಳೆಯರು ತಮ್ಮ ರಾಜ್ಯದ ಆಡಳಿತವನ್ನು ನಿರ್ವಹಿಸುತ್ತಿದ್ದಾರೆ. ಆ ಪ್ರದೇಶದಲ್ಲಿ ರಾಜ್ಯದ ಆಡಳಿತವು ಮಹಿಳೆಯರ ಕೈಯಲ್ಲಿಯೇ ಇರುತ್ತಿತ್ತು. ಈ ರಾಣಿಯರ ಗಂಡಂದಿರು ಸರದಾರರ ಗುಂಪಿನಲ್ಲಿ ಇರುತ್ತಿದ್ದರು ಹಾಗೂ ಇತರ ಸರದಾರರಂತೆ ರಾಣಿಯ ಸೇವೆ ಮಾಡುತ್ತಿದ್ದರು. ಅವರಿಗೆ ಪತ್ನಿಯರ ಅರಸೊತ್ತಿಗೆಯ ರಾಜ್ಯಭಾರದ ಚಿಂತೆ ಅಥವಾ ಭೋಗವಿಲಾಸದ ಸಂತೋಷದೊಡನೆ ಯಾವುದೇ ಸಂಬಂಧವಿರುತ್ತಿರಲಿಲ್ಲ.

ಅಲಿ ಆದಿಲಶಾಹನು ಬಿಜಾಪುರಕ್ಕೆ ಹಿಂದಿರುಗುವುದು :

ಅಲ್ಲಿರುವ ಎಲ್ಲ ಅರಸರು ಬಾದಶಹನ ಅನುವರ್ತಿಗಳಾದ ಮೇಲೆ ಅಲಿ ಆದಿಲಶಾಹನು ಬಂದರಿ ಪಂಡಿತನಿಗೆ ದಿವಾನನೆಂದು ನಿಯಮಿಸಿದನು. ಈತನು ಬ್ರಾಹ್ಮಣ ಪಂಗಡದವನಾಗಿದ್ದನು. ಆದಿಲಶಾಹಿ ಮನೆತನಕ್ಕೆ ಹಿಂದಿನಿಂದಲೂ ಪ್ರಾಮಾಣಿಕನಾಗಿ ಕೃತಜ್ಞತೆಯಿಂದ ಸೇವೆ ಸಲ್ಲಿಸಿದವನಾಗಿದ್ದನು. ಮುಸ್ತಫಾಖಾನನಿಗೆ ಅಲ್ಲಿಯ ಸಂಪೂರ್ಣ ಒಡೆತನ ನೀಡಿದನು. ಅಫಜಲ್ ಖಾನ ಶಿರಾಜಿಗೆ ವಕೀಲ ಮನಸಬ್ ಮತ್ತು ಲೆಕ್ಕಾಧಿಕಾರಿಯ ಹುದ್ದೆಯು ದೊರೆಯಿತು. ಅಲಿ ಆದಿಲಶಾಹನು ಬಿಜಾಪುರಕ್ಕೆ ತೆರಳಿದನು.

ನಲಗೊಂಡಾ ಪ್ರದೇಶವನ್ನು ವಶಪಡಿಸಿಕೊಳ್ಳುವ ವಿಚಾರ :

ಮುಸ್ತಫಾಖಾನನ ಸ್ವಭಾವದಲ್ಲಿ ಪ್ರಾಮಾಣಿಕತೆಯನ್ನು ತೀಡಿ ತೀಡಿ ತುಂಬಲಾಗಿತ್ತು. ತನ್ನ ಒಡೆಯನ ರಾಜ್ಯವು ದಿನದಿಂದ ದಿನಕ್ಕೆ ವಿಸ್ತಾರಗೊಳ್ಳುತ್ತಿರಲಿ ಎಂಬುದು ಸದಾ ಆತನ ಅಪೇಕ್ಷೆಯಾಗಿರುತ್ತಿತ್ತು. ಈ ಉದ್ದೇಶದ ಸಫಲತೆಗೆ ಆತನು ಅಲೀ ಖಾನ ಎಂಬ ಸರದಾರನನ್ನು ಅಲಿ ಆದಿಲಶಾಹನ ಸನ್ನಿಧಿಗೆ ಕಳುಹಿಸಿ, ನಲಗೊಂಡಾ ಕೋಟೆಯನ್ನು ಜಯಿಸಲು ಅನುಮತಿಯನ್ನು ಕೇಳಿದನು. ನಲಗೊಂಡಾ, ಕರ್ನಾಟಕದ ರಾಜಧಾನಿಯಾಗಿತ್ತು. ಮುಸ್ತಫಾಖಾನನ ದೂತನು ಬಾದಶಹನ ಬಳಿ ತಲುಪಿ, ಮುಸ್ತಫಾಖಾನನ ನಿವೇದನೆಯನ್ನು ಸಲ್ಲಿಸಿದಾಗ, ಬಾದಶಹನು ಅತ್ಯಂತ ಸಂತೋಷಗೊಂಡನು. ಏಕೆಂದರೆ, ಬಾದಶಹನೂ ಸ್ವತಃ ಇದನ್ನೇ ಬಯಸುತ್ತಿದ್ದನು. ಕೂಡಲೇ ಸೈನ್ಯವನ್ನು ಸಿದ್ಧಗೊಳಿಸುವ ಆದೇಶವನ್ನಿತ್ತನು.

ತೆಂಕನಾದ್ರಿಯ ಪರಾರಿ :

ಅಲಿ ಆದಿಲಶಾಹನು ಬಹಳ ವೈಭವ ಮತ್ತು ಠೀವಿಯಿಂದ ಬಿಜಾಪುರದಿಂದ ಹೊರಟನು. ಮಾರ್ಗದಲ್ಲಿ ಅದೋನಿ ಕಿಲ್ಲೆಯನ್ನು ವೀಕ್ಷಿಸಿ, ಮುಂದುವರಿದನು.

ಬಾದಶಹನು ಬಂಕಾಪುರದ ಬಳಿ ತಲುಪಿದೊಡನೆ, ಮುಸ್ತಫಾಖಾನನು ತನ್ನ ಸೈನ್ಯ ಮತ್ತು ಆಪ್ತ ಸರದಾರರೊಡನೆ ಬಾದಶಹನ ಸೇವೆಯಲ್ಲಿ ಉಪಸ್ಥಿತನಾದನು. ಅಲ್ಲಿಂದ ಆದಿಲಶಾಹಿ ಸೈನ್ಯವು ನಲ್ಗೊಂಡಾದತ್ತ ಪ್ರಯಾಣ ಬೆಳೆಸಿತು. ಮುಸಲ್ಮಾನರನ್ನು ಎದುರಿಸುವಷ್ಟು ಧೈರ್ಯ ತೆಂಕನಾದ್ರಿಯಲ್ಲಿರಲಿಲ್ಲ. ಆದಿಲಶಾಹಿ ಸೈನ್ಯವು ನಲ್ಗೊಂಡಾದತ್ತ ಬರುವ ಸಮಾಚಾರ ತಿಳಿದ ತಕ್ಷಣ ತನ್ನ ಸಾಮಾನು, ಆನೆಗಳು ಮತ್ತಿತರ ಬೆಲೆಬಾಳುವ ಸಾಮಗ್ರಿಗಳನ್ನು ತನ್ನ ಜೊತೆಗೆ ತೆಗೆದುಕೊಂಡು ಚಂದ್ರಕೋನಿಯತ್ತ ಪರಾರಿಯಾದನು. ಆತನು ಕೋಟೆಯನ್ನು ತನ್ನ ಆಪ್ತನೊಬ್ಬನ ವಶಕ್ಕೆ ಕೊಟ್ಟುಬಿಟ್ಟನು.

ನಗರದಲ್ಲಿರುವವರ ವಿವಶತೆ :

ಅಲಿ ಆದಿಲಶಾಹನು ನಲ್ಗೊಂಡಾ ತಲುಪಿದನು. ಮೊದಲು ನಗರದ ಬೇರೆ ಬೇರೆ ಭಾಗಗಳನ್ನು ಹಾಗೂ ಕಿಲ್ಲೆಗಳನ್ನು ತನ್ನ ಸರದಾರರಲ್ಲಿ ಭಾಗ ಮಾಡಿಕೊಟ್ಟನು. ಆ ಭಾಗಗಳಿಗೆ ಬೇರೆ ಬೇರೆ ಸೈನ್ಯದ ತುಕಡಿಗಳನ್ನು ನಿಯಮಿಸಿದನು. ಮೂರು ತಿಂಗಳ ಕಾಲ ಆದಿಲಶಾಹಿ ಸೈನ್ಯವು ಚಟುವಟಿಕೆಯಿಂದ ಕಾರ್ಯ ನಿರ್ವಹಿಸುತ್ತಿತ್ತು. ನಗರದವರೆಗೆ ಸಾಮಗ್ರಿಗಳು ತಲುಪುವ ಎಲ್ಲ ಮಾರ್ಗಗಳನ್ನು ಮುಚ್ಚಲಾಗಿತ್ತು. ನಗರವಾಸಿಗಳು ಬಾದಶಹನಲ್ಲಿ ಜೀವಭಿಕ್ಷೆಯನ್ನು ಬೇಡಿ ಕಿಲ್ಲೆಯನ್ನು ಆದಿಲಶಾಹನ ಅಧೀನಕ್ಕೆ ಒಪ್ಪಿಸುವವರಿದ್ದರು. ಅಷ್ಟರಲ್ಲಿಯೇ ತೆಂಕನಾದ್ರಿಗೆ ಇಲ್ಲಿಯ ವಿದ್ಯಮಾನ ತಿಳಿದುಬಿಟ್ಟಿತು. ಆತನು ಎಂಟು ಲಕ್ಷ ಹೋನು ಹಾಗೂ ಐದು ಆನೆಗಳನ್ನು ಹಿಂದಿಯಾಹತಮ್ ನಾಯಕನ ಬಳಿ ಕಳುಹಿಸಿದನು. ಹಿಂದಿಯಾಹತಮ್‌ನು ಆದಿಲಶಾಹನ ಬರ್‌ದ ಸರದಾರರಲ್ಲಿ ಒಬ್ಬ ಹಿರಿಯ ಸರದಾರನಾಗಿದ್ದನು. ಹಿಂದಿಯಾಹತಮ್‌ನು ತನ್ನ ಒಡೆಯನಿಗೆ ದ್ರೋಹ ಮಾಡಿ, ತನ್ನೊಡನಿರುವ ನಾಲ್ಕು ಸಾವಿರ ಸೈನಿಕರ ತುಕಡಿಯ ಜೊತೆಗೆ ಪರಾರಿಯಾಗಲಿ ಎಂಬ ಉದ್ದೇಶದಿಂದ ಈ ಹಣದ ಆಮಿಷ ಒಡ್ಡಲಾಗಿತ್ತು.

ಬರ್‌ದ ಸರದಾರರ ಬಂಡಾಯ :

ಹಿಂದಿಯಾಹತಮ್‌ನು ತೆಂಕನಾದ್ರಿಯ ಇಚ್ಛೆಯಂತೆ ಅಲಿ ಆದಿಲಶಾಹನ ವಿರುದ್ಧ ಬಂಡಾಯ ಹೂಡಿ ನಾಲ್ಕು ಸಾವಿರ ಕುದುರೆ ಸವಾರರೊಡನೆ ಬಾದಶಹನ ಸೈನ್ಯಕ್ಕೆ ಹಾನಿ ಮಾಡಿ ಬೇರೆಯಾದನು. ಎರಡನೆಯ ದಿನ, ಮತ್ತೆ ನಾಲ್ಕು ಜನ ಬರ್‌ದ ಸರದಾರರು ಹಿಂದಿಯಾನ ಪ್ರಚೋದನೆಗೆ ಒಳಗಾಗಿ, ಬಾದಶಹನನ್ನು ವಿರೋಧಿಸಿದರು ಮತ್ತು ಐದು ಸಾವಿರ ಕುದುರೆಸವಾರರೊಂದಿಗೆ ಹಿಂದಿಯಾನನ್ನು ಸೇರಿಕೊಂಡರು. ಈ ಜನರು ಕಳ್ಳತನ ಮತ್ತು ದರೋಡೆ ಮಾಡುವುದರಲ್ಲಿ ಸಿದ್ಧಹಸ್ತರಾಗಿದ್ದರು. ಅವರು ತಮ್ಮ ಕೈಚಳಕವನ್ನು ತೋರಿಸಿ ಆದಿಲಶಾಹಿ ಸೈನ್ಯಕ್ಕೆ ಕಿರುಕುಳ ಕೊಡತೊಡಗಿದರು. ಆಹಾರಧಾನ್ಯ ಮತ್ತಿತರ ಸಾಮಗ್ರಿಗಳನ್ನು ಕದಿಯುವುದರಲ್ಲಿ ತಮ್ಮ ಚುರುಕುತನ

ತೋರಿಸಿದರು. ಈ ವಿದ್ಯಮಾನವನ್ನು ಕಣ್ಣಾರೆ ನೋಡಿದ ಅಲಿ ಆದಿಲ ಮತ್ತು ಮುಸ್ತಫಾಖಾನರು ಮುತ್ತಿಗೆಯಿಂದ ಹಿಂದೆ ಸರಿದು ಬೇಕಾನಗರದ ಹತ್ತಿರ ಬಂದು ತಲುಪಿದರು.

ಅಲಿ ಆದಿಲಶಾಹನು, ಬೇಕಾಪುರದ ಸುತ್ತಮುತ್ತಲಿನ ಪ್ರದೇಶವನ್ನು ವ್ಯವಸ್ಥಿತಗೊಳಿಸಲು ಮುಸ್ತಫಾಖಾನನನ್ನು ಬಿಟ್ಟು, ಬಿಜಾಪುರಕ್ಕೆ ಹಿಂದಿರುಗಿದನು. ವಿಜಯನಗರದ ಗಡಿಯಲ್ಲಿರುವ ಪರ್ಗಣೆಗಳಲ್ಲಿರುವ ಬರ್‌ದ ಸರದಾರರು ಬಂಡಾಯ ಹೂಡಿ, ತಮ್ಮ ತಮ್ಮ ಪರ್ಗಣೆ(ಪ್ರದೇಶ)ಗಳನ್ನು ವಶಪಡಿಸಿಕೊಂಡಿರುವ ವಿಷಯ ಬಾದಶಹನಿಗೆ ತಿಳಿದು ಬಂದಿತು. ಬಾದಶಹನು ಮುರ್ತುಜಾಖಾನ ಅಂಜೂನನ್ನು ಈ ಪರ್ಗಣೆಗಳ ಜಹಗೀರದಾರನಾಗಿ ನಿಯಮಿಸಿದನು. ಆತನೊಡನೆ ಮೂರು ಸಾವಿರ ಬಿಲ್ವಿದ್ದೆಯನ್ನರಿತ ಕುದುರೆ ಸವಾರರು ಹಾಗೂ ದಖನಿ ಮತ್ತು ಹಬಶಿ ಸರದಾರರನ್ನು ಜೊತೆ ಮಾಡಿ ಬರ್‌ದ ಸರದಾರರ ಬಂಡಾಯವನ್ನು ದಮನಗೊಳಿಸಲು ಕಳುಹಿಸಿಕೊಟ್ಟನು.

ಬರ್‌ದ ಬಂಡುಕೋರರೊಡನೆ ಕದನ :

ಸೈಫ್ ಐನುಲ್‌ಮುಲ್ಕನ ವಧೆಯ ನಂತರ, ಮುರ್ತುಜಾಖಾನನು ಅಲಿ ಆದಿಲಶಾಹನ ಆಡಳಿತದಲ್ಲಿ ಸರದಾರನ ಶ್ರೇಣಿಯಲ್ಲಿ ಸೇರ್ಪಡೆಯಾಗಿದ್ದನು. ಮುರ್ತುಜಾ ಮತ್ತು ಬರ್‌ದ ಬಂಡುಕೋರರಲ್ಲಿ ಅನೇಕ ಸಲ ಕದನವಾಯಿತು. ಈ ಯುದ್ಧಗಳಲ್ಲಿ ಉಭಯಪಕ್ಷದವರ ಅಸಂಖ್ಯಾತ ಸೈನಿಕರು ಹತರಾದರು. ಇಂತಹ ಭೀಕರ ಯುದ್ಧದಲ್ಲಿ ವಿಜೇತರಾದವರಾರು ಮತ್ತು ಪರಾಜಿತರಾದವರು ಯಾರು ಎಂಬುದನ್ನು ಗುರುತಿಸಲು ಸಾಧ್ಯವಾಗಲಿಲ್ಲ. ಬೇಕಾಪುರದಲ್ಲಿ ತಂಗಿದ್ದ ಮುಸ್ತಫಾಖಾನನು, ಈ ಪರಿಸ್ಥಿತಿಯನ್ನರಿತುಕೊಂಡು, ಅಲಿ ಖಾನನನ್ನು ಅಲಿ ಆದಿಲಶಾಹನ ಬಳಿ ಕಳುಹಿಸಿ, "ಕಳ್ಳರನ್ನು ಎದುರಿಸಲು ನಮ್ಮ ಸೈನ್ಯವನ್ನು ಕಳುಹಿಸುವುದು ಬುದ್ಧಿವಂತಿಕೆಗೆ ದೂರವಾದದ್ದು. ಉಪಾಯವಾಗಿ ಬಂಡುಕೋರರನ್ನು ಬಿಜಾಪುರಕ್ಕೆ ಬರುವಂತೆ ಮಾಡಬೇಕು. ಮುಂದೆ ಅವರಿಗೆ ತಕ್ಕ ಪಾಠ ಕಲಿಸಿದರಾಯಿತು." ಎಂಬ ಸಲಹೆಯನ್ನು ಬಾದಶಹನಿಗೆ ರವಾನಿಸಿದನು.

ಅಲಿ ಆದಿಲಶಾಹನ ಉಪಾಯ :

ಅಲಿ ಆದಿಲಶಾಹನಿಗೆ ಈ ಸಲಹೆಯು ಸಮಂಜಸವೆನ್ನಿಸಿ, ಕಾರ್ಯಗತಗೊಳಿಸಿದನು. ಬಾದಶಹನು, ರಾಸೂಪಂಡಿತನೆಂಬ ಬ್ರಾಹ್ಮಣನನ್ನು, ತನ್ನ ಕೆಲವು ಆಪ್ತಸೇವಕರ ಜೊತೆಗೆ ಬಂಡುಕೋರರನ್ನು ಪುಸಲಾಯಿಸಿ ಬಿಜಾಪುರಕ್ಕೆ ಕರೆತರಲು ಅವರ ಬಳಿ ಕಳುಹಿಸಿಕೊಟ್ಟನು. ಹಿಂದಿಯಾನಾಯಕನು ತನ್ನ ಗುಂಪು ಬಿಜಾಪುರಕ್ಕೆ ತೆರಳುವದು ಜಾಣತನವಲ್ಲವೆಂದು ಭಾವಿಸಿದನು. ಆತನು ಬರ್‌ದ ಸರದಾರರ ಸಭೆಯನ್ನು

ಏರ್ಪಡಿಸಿದನು. ಆ ಸಭೆಯಲ್ಲಿ ಸರೂಪ ನಾಯಕ, ರಾಯ್ ಹೋಜ್, ದೇವನಾಯಕ ಮತ್ತು ತಿಮ್ಮನಾಯಕ ಮತ್ತು ಇತರ ಸರದಾರರು ಉಪಸ್ಥಿತರಿದ್ದರು.

ಹಿಂದಿಯಾನಾಯಕನ ಅಭಿಪ್ರಾಯ :

ಹಿಂದಿಯಾನಾಯಕನು ಬರ್‌ದ ಸರದಾರರನ್ನು ಸಂಬೋಧಿಸಿ, "ಕರ್ನಾಟಕವು ಸಂಪೂರ್ಣವಾಗಿ ಬಾದಶಹನ ವಶವಾಗುವ ಮತ್ತು ಕರ್ನಾಟಕದ ಅರಸೊತ್ತಿಗೆಯು ರಾಮರಾಜನ ಮನೆತನದಿಂದ ಕಿತ್ತು ಹಾಕಿ, ಅಲಿ ಆದಿಲಶಹನ ವಂಶದಲ್ಲಿ ಸ್ಥಿರವಾಗಿ ಸೇರ್ಪಡೆಯಾಗುವ ಕಾಲದಲ್ಲಿ ನಾವು ಆದಿಲಶಾಹನ ವಿರೋಧ ಮಾಡಿ, ಬಂಡಾಯದ ವಾತಾವರಣ ಹಬ್ಬಿಸಿದೆವು. ನಾವು ಬಾದಶಾಹನ ದಾರಿಯಲ್ಲಿ ಅಡ್ಡಬಂಡೆಯಾಗಿ ಅವರ ಉದ್ದೇಶದಲ್ಲಿ ಸಫಲರಾಗುವುದನ್ನು ತಪ್ಪಿಸಿದ್ದೇವೆ. ಬಾದಶಹನ ದೃಷ್ಟಿಯಲ್ಲಿ ಈ ಕಾರ್ಯವು ಒಂದು ಮಹಾ ಅಪರಾಧವಾಗಿದೆ. ಹೀಗಾಗಿ, ಬಾದಶಹನು ನಮ್ಮನ್ನು ಕ್ಷಮಿಸುತ್ತಾನೆ ಎಂಬ ಭರವಸೆ ನನಗಿಲ್ಲ. ಇದಕ್ಕೆ ಪ್ರತಿಯಾಗಿ, ಮುಸಲ್ಮಾನರು ನಮ್ಮನ್ನು ವಂಚಿಸಿ, ಬಿಜಾಪುರಕ್ಕೆ ಕರೆದೊಯ್ಯ ಬಯಸುತ್ತಾರೆ. ಅಲ್ಲಿ ನಮ್ಮನ್ನು ಕೊಲ್ಲಿಸಿಬಿಡುತ್ತಾರೆ" ಎಂದು ತನ್ನ ಅಭಿಪ್ರಾಯವನ್ನು ವ್ಯಕ್ತಪಡಿಸಿದನು.

ಬಿಜಾಪುರಕ್ಕೆ ಬಂಡುಕೋರರ ಆಗಮನ :

ಹಿಂದಿಯಾನಾಯಕನ ಮಾತುಗಳು ಲಕ್ಷ್ಯಕೊಡಲು ಯೋಗ್ಯವೆಂದು ಬರ್‌ದ ಸರದಾರರು ಭಾವಿಸಲಿಲ್ಲ. ಅವರೆಲ್ಲರೂ ಕೂಡಲೇ ಸಿದ್ಧರಾಗಿ ಬಿಜಾಪುರದತ್ತ ಹೊರಟರು. ಹಿಂದಿಯಾನಾಯಕನು ಅವರ ಜೊತೆ ಹೋಗದೆ ನಲಗೊಂಡಾಕ್ಕೆ ಹೊರಟುಹೋದನು. ಅಲ್ಲಿ ತೆಂಕನಾದ್ರಿಯ ಸೇವಕನಾಗಿ, ಸೇವೆಯನ್ನು ಸಲ್ಲಿಸತೊಡಗಿದನು. ಮೊತ್ತಮೊದಲು ಬಿಜಾಪುರ ತಲುಪಿದ ಬಂಡುಕೋರನಿಗೆ ಬಾದಶಹನು ಉತ್ತಮ ವಸ್ತ್ರ ಮತ್ತು ಉಚ್ಚ ಹುದ್ದೆಯನ್ನು ನೀಡಿದನು. ಈ ವಾರ್ತೆಯು ನಾಲ್ಕೂ ಕಡೆ ಹಬ್ಬಿತು. ಒಬ್ಬರಾದ ಮೇಲೆ ಒಬ್ಬರಂತೆ, ಎಲ್ಲ ಬಂಡುಕೋರರು ಬಿಜಾಪುರಕ್ಕೆ ಬಂದು ಸೇರತೊಡಗಿದರು.

ಬಂಡುಕೋರರ ವಧೆ :

ಎಲ್ಲ ವಿದ್ರೋಹಿಗಳು ಬಿಜಾಪುರದಲ್ಲಿ ಒಟ್ಟುಗೂಡಿದಾಗ, ಅಲಿ ಆದಿಲಶಾಹನ ಪ್ರತೀಕಾರದ ಜ್ವಾಲೆಯು ಹೊತ್ತಿಕೊಂಡಿತು. ಮೊದಲು ತಲುಪಿದ ಬಂಡುಕೋರನ ಕಣ್ಣುಗಳಲ್ಲಿ ಸಲಾಕೆಗಳನ್ನು ತಿರುವಿಸಿದನು. ಭೋಜಮಲ್ ನಾಯಕ, ದೇವ ನಾಯಕ ಮತ್ತು ತಿಮ್ಮ ನಾಯಕರಿಗೆ ತರತರದ ಚಿತ್ರಹಿಂಸೆ ನೀಡಿ ಕೊಲ್ಲಿಸಿದನು. ಅವರ ಶವಗಳನ್ನು ಪೀಠಗಳ ಮೇಲಿಟ್ಟು ನಗರದಲ್ಲೆಲ್ಲ ಮೆರವಣಿಗೆ ಮಾಡಿಸಿದನು. ಈ ರೀತಿಯಾಗಿ ಮುಸ್ತಫಾಖಾನನು ನೀಡಿದ ಸಲಹೆಯಿಂದ ಅಲಿ ಆದಿಲಶಹನು ಬಂಡುಕೋರರನ್ನು ಕೊನೆಗಾಣಿಸಿದನು.

ರಾಜಕುಮಾರ ಇಬ್ರಾಹಿಮನ ಪಟ್ಟಾಭಿಷೇಕ :

ಅಲಿ ಆದಿಲಶಾಹನ ಮನೆಯಲ್ಲಿ ಗಂಡುಮಕ್ಕಳು ಹುಟ್ಟಲಿಲ್ಲ. ಇದರಿಂದಾಗಿ ತನ್ನ ಸಹೋದರ ಥಮಾಸ್ಪನ ಪುತ್ರ ರಾಜಕುಮಾರ ಇಬ್ರಾಹಿಮನಿಗೆ ಹಿಜರಿಶಕೆ ೯೮೭, ಶವ್ವಾಲ ತಿಂಗಳಲ್ಲಿ ತನ್ನ ಉತ್ತರಾಧಿಕಾರಿ ಯುವರಾಜನೆಂದು ನೇಮಿಸಿದನು. ಅದೇ ತಿಂಗಳಲ್ಲಿ ರಾಜಕುಮಾರ ಇಬ್ರಾಹಿಮನ ಖತ್ನಾ ರೂಢಿಯನ್ನು ಕೂಡ ಮಾಡಲಾಯಿತು. ಆಗ ಒಂದು ಉತ್ಸವದ ಸಮಾರಂಭವನ್ನು ವಿಜೃಂಭಣೆಯಿಂದ ಏರ್ಪಡಿಸಲಾಗಿತ್ತು. ರಾಜಕುಮಾರನ ಖತ್ನಾ ಮಾಡಿದ ದಿನ, ಆ ರಾತ್ರಿ, ಸಂಪ್ರದಾಯದಂತೆ ರಾಜಕುಮಾರನಿಗೆ ಕೆಂಪು ವಸ್ತ್ರವನ್ನು ಉಡಿಸಿ, ನಗರದಲ್ಲಿ ಮೆರವಣಿಗೆ ಮಾಡಿದರೆಂದು ಹೇಳಲಾಗುತ್ತದೆ. ನಗರದ ರಸ್ತೆಗಳ ಇಕ್ಕೆಲಗಳಲ್ಲಿ ಪಟಾಕಿ ಮತ್ತು ಬಾಣಬಿರುಸುಗಳನ್ನು ಹಾರಿಸಲಾಗುತ್ತಿತ್ತು. ಸ್ವಾಗತ ಫಲಕಗಳನ್ನು ಹಾಕಲಾಗಿತ್ತು. ಆಕಸ್ಮಿಕವಾಗಿ ಸಿಡಿಮದ್ದಿನಲ್ಲಿ ಬೆಂಕಿ ಹೊತ್ತಿಕೊಂಡಿತು. ಈ ಕಾರಣದಿಂದ ಸುಮಾರು ಏಳುನೂರು ಜನ ಸತ್ತು ಹೋದರು. ಆದರೆ, ಅಲ್ಲಾಹನ ಕೃಪೆಯಿಂದ ರಾಜಕುಮಾರ ಇಬ್ರಾಹಿಮನಿಗೆ ಯಾವ ಹಾನಿಯೂ ಆಗಲಿಲ್ಲ.

ಅಲಿ ಆದಿಲಶಾಹನ ಚಾರಿತ್ರ್ಯ :

ಅಲಿ ಆದಿಲಶಾಹನು ಶ್ರೇಷ್ಠ ಗುಣಗಳುಳ್ಳ ವ್ಯಕ್ತಿಯಾಗಿದ್ದನು. ಆತನು ತನ್ನ ಕೃಪೆ ಮತ್ತು ಕರುಣೆಯಿಂದ ಪ್ರತಿ ಸಾಮಾನ್ಯ ಮತ್ತು ಗಣ್ಯ ವ್ಯಕ್ತಿಗಳನ್ನು ಸಂತುಷ್ಟಗೊಳಿಸುತ್ತಿದ್ದನು. ಆತನ ಆಡಳಿತವು ಸರ್ವರಿಗೂ ನೆಮ್ಮದಿ ಮತ್ತು ಸಮೃದ್ಧಿಯನ್ನು ತಂದಿತ್ತು. ರಾಜ್ಯಗಳನ್ನು ಮತ್ತು ಕೋಟೆಗಳನ್ನು ವಶಪಡಿಸಿಕೊಳ್ಳುವದು ಹಾಗೂ ಹಬಶಿ, ಬರ್ಕಿಗಳನ್ನು ಸದೆಬಡೆದ ನಂತರ, ಆತನು ಕೆಲವೊಮ್ಮೆ ಏಕಾಂಗಿಯಾಗಿ, ಆರಾಮದಾಯಕ ಜೀವನವನ್ನು ನಡೆಸುತ್ತಿದ್ದನು. ಕೆಲವು ಸಲ ಸಿಂಹಾಸನಾರೂಢನಾಗಿ ಪ್ರಜೆಗಳಿಗೆ ದರ್ಶನಭಾಗ್ಯ ನೀಡಿ ಅವರ ಯೋಗಕ್ಷೇಮದ ಬಗ್ಗೆ ವಿಚಾರಿಸುತ್ತಿದ್ದನು. ಆತನು ಉತ್ತಮ ಸ್ವಭಾವದ ನಡತೆ, ಅಭಿರುಚಿ, ಹವ್ಯಾಸಗಳ ಗೂಡಾಗಿದ್ದನು. ಇದರೊಡನೆ ಸೌಂದರ್ಯಾರಾಧನೆ ಆತನ ಪ್ರಿಯವಾದ ಹವ್ಯಾಸವಾಗಿತ್ತು.

ಸೌಂದರ್ಯೋಪಾಸನೆ :

ಅಲಿ ಆದಿಲಶಾಹನಿಗೆ ಸುಂದರ ಖೋಜಾ(ನಪುಂಸಕ) ಮತ್ತು ಗುಲಾಮರನ್ನು ಅಂತಃಪುರಕ್ಕೆ ಸೇರಿಸಿಕೊಳ್ಳುವಲ್ಲಿ ಬಹಳ ಆಸಕ್ತಿ ಇತ್ತು. ಒಂದು ಸಲ ಅಲಿ ಆದಿಲಶಹನು ತನ್ನ ದೂತನೊಬ್ಬನನ್ನು ಅಮೀರ ಬರೀದನ ಬಳಿ ಕಳುಹಿಸಿ, ಆತನೊಂದಿಗೆ, "ನಿನ್ನ ಬಳಿ ಇಬ್ಬರು ಅತ್ಯಂತ ಸುಂದರ ಖೋಜಾಗಳು ಇರುವುದು ತಿಳಿದುಬಂದಿದೆ. ನೀನು ಕೂಡಲೇ ಆ ಖೋಜಾಗಳನ್ನು ನನ್ನಲ್ಲಿಗೆ ಕಳುಹಿಸಿಕೊಡು" ಎಂಬ ಸಂದೇಶವನ್ನು

ಕಳುಹಿಸಿದನು. ಅಮೀರ ಬರೀದನು ಕೆಲದಿನಗಳ ಕಾಲ ಹಾಗೆಯೇ ಕಾಲ ತಳ್ಳಿ, ಕೊನೆಗೆ ಖೋಜಾಗಳನ್ನು ಅಲಿ ಆದಿಲಶಾಹನ ಬಳಿ ಕಳುಹಿಸುವ ನಿರ್ಧಾರ ಮಾಡಿದನು.

ಅದೇ ದಿನಗಳಲ್ಲಿ ಮುರ್ತುಜಾ ನಿಜಾಮಶಾಹ ಸಜರಿಯು, ಅಮೀರ ಅಲಿ ಬರೀದನ ಮೇಲೆ ದಾಳಿ ಮಾಡಿದನು. ಆಗ ಬರೀದನು ಅಲಿ ಆದಿಲಶಾಹನ ಸಹಾಯ ಯಾಚಿಸಿದನು. ಅಲಿ ಆದಿಲಶಾಹನು ಎರಡು ಸಾವಿರ ಕುದುರೆ ಸವಾರರನ್ನು ಆತನ ನೆರವಿಗಾಗಿ ಕಳುಹಿಸಿದನು. ಬರೀದನು ಆದಿಲಶಾಹನ ಉಪಕಾರದಿಂದ ಉಪಕೃತನಾಗಿ, ಆದಿಲಶಾಹನು ಇಚ್ಛಿಸಿದ ಇಬ್ಬರು ಸುಂದರ ಖೋಜಾಗಳನ್ನು ಬೀದರದಿಂದ ಬಿಜಾಪುರಕ್ಕೆ ಕಳುಹಿಸಿಕೊಟ್ಟನು.

ಅಲಿ ಆದಿಲನ ಮರಣ :

ಇವರಿಬ್ಬರೂ ಖೋಜಾಗಳು ಬಿಜಾಪುರ ತಲುಪಿದ ಮೇಲೆ ಅವರನ್ನು ಬಿಜಾಪುರಕ್ಕೆ ಕಳುಹಿಸಿದ ಕಾರಣ ತಿಳಿದು ಅವರಿಗೆ ಬಹಳ ಖೇದವಾಯಿತು. ಅವರು ಅಲಿ ಆದಿಲಶಾಹನನ್ನು ಮುಗಿಸಿಬಿಡುವ ವಿಚಾರ ಮಾಡಿದರು. ಖೋಜಾಗಳಿಬ್ಬರನ್ನೂ ಬಾದಶಹನ ಸನ್ನಿಧಿಯಲ್ಲಿ ಕಳುಹಿಸಿದ ದಿನದಂದು, ರಾತ್ರಿಯ ಸಮಯದಲ್ಲಿ ಅಲಿ ಆದಿಲಶಾಹನಿಗೆ ಚಾಕುವಿನಿಂದ ಇರಿದು ವಧಿಸಿಬಿಟ್ಟರು. ಈ ದುರಂತವು ಹಿಜರಿಶಕೆ ೯೮೯ರಲ್ಲಿ ೨೩ನೆಯ ದಿನದಂದು ಸಂಭವಿಸಿತು. ಈ ದಿನದ ದಾಖಲೆಯು ಚರಿತ್ರೆಯ "ಜುಲ್ಮದೀತ್" ಪುಸ್ತಕದಿಂದ ಲಭ್ಯವಾಗುತ್ತದೆ. ರಜಾಯಿ ಮಶಹದಿ ಮುಲ್ಲಾನು, ಅತ್ಯಂತ ಶೋಕಭರಿತ ಹಾಗೂ ಮನತಟ್ಟುವ ಶೋಕಗೀತೆಯನ್ನು ರಚಿಸಿದನು. ರಾಜ್ಯದ ಎಲ್ಲ ಸರದಾರರು ಮತ್ತು ಆಸ್ಥಾನದ ಸದಸ್ಯರು ಅತ್ಯಂತ ವ್ಯಾಕುಲರಾದರು.

ಶವಸಂಸ್ಕಾರ :

ಬಾದಶಹನ ಅಧೀನತೆಯಲ್ಲಿದ್ದ ಅರಸರು ಮತ್ತು ಸಂಗಡಿಗರಾದ ಮುರ್ತುಜಾ ಖಾನ, ಶಾಹ ಫತೇಉಲ್ಲಾ ಶಿರಾಜಿ, ಶಾಹ ಅಬೂ ಅಲ್ ಖಾಸಿಮ್, ಅಂಜೂ ಮತ್ತಿತರರು ಮತ್ತು ಪಂಡಿತರು ಅವರಲ್ಲಿ ಶಮ್ಸುದ್ದೀನ ಅಸಫಘಾನಿ ಇವರು ಬಾದಶಹನ ಅಂತ್ಯಸಂಸ್ಕಾರದಲ್ಲಿ ಪಾಲುಗೊಂಡರು. ಒಂದು ಪ್ರಸಿದ್ಧವಾದ ಸ್ಥಳದಲ್ಲಿ ಬಾದಶಹನ ಅಂತಿಮ ಸಂಸ್ಕಾರ ಮಾಡಲಾಯಿತು. ಆ ಸ್ಥಳವು ಈಗ "ರೋಜಾ ಅಲಿ" ಎಂಬ ಹೆಸರಿನಿಂದ ಪ್ರಚಲಿತವಾಗಿದೆ.

ಅಲಿ ಆದಿಲಶಾಹನ ದಾನಧರ್ಮ :

ಅಲಿ ಆದಿಲಶಾಹನನ್ನು ವಧಿಸಿದ ಎರಡನೆಯ ದಿನ, ಅಲಿ ಆದಿಲಶಾಹನ ಉತ್ತರಾಧಿಕಾರಿಯಾದ ಇಬ್ರಾಹಿಮ ಆದಿಲಶಾಹ ಸಾನಿಯು ಇಬ್ಬರೂ ಖೋಜಾಗಳನ್ನು ಕೊಲ್ಲಿಸಿಬಿಟ್ಟನು. ಅಲಿ ಆದಿಲನ ಆಳ್ವಿಕೆಯಲ್ಲಿ ನಿರ್ಮಿತವಾದ ಹಲವಾರು ಕಟ್ಟಡಗಳಲ್ಲಿ

ಬಿಜಾಪುರದ ಜಾಮಾ ಮಸೀದೆ, ಶಾಹಪುರದ ಕೊಳ, ಮತ್ತಿತರ ಸ್ಮಾರಕಗಳು ಇನ್ನೂ ಉಳಿದಿವೆ. ಅಲಿ ಆದಿಲನು ದಯಾಳು ಮತ್ತು ವಿಶಾಲ ಮನೋಭಾವದ ವ್ಯಕ್ತಿಯಾಗಿದ್ದನು. ಆತನ ತಂದೆಯಾದ ಇಬ್ರಾಹಿಮ ಆದಿಲ (ಪ್ರಥಮ) ಸಾಯುವಾಗ ಒಂದು ಕೋಟಿ ಹೋನು ಹಾಗೂ ಎಣಿಸಲು ಬಾರದಷ್ಟು ಅಮೂಲ್ಯವಾದ ರತ್ನಗಳು ಮತ್ತು ವಜ್ರಗಳನ್ನು ಬಿಟ್ಟು ಹೋಗಿದ್ದನು. ಈ ಎಲ್ಲ ಸಂಪತ್ತನ್ನು ಇರಾನ, ತೌರಾನ, ಅರಬ್, ರೋಮ್ ಮತ್ತು ಇತರ ರಾಜ್ಯಗಳ ಗಣ್ಯರಿಗೆ, ಪಂಡಿತರಿಗೆ ಹಂಚಿಬಿಟ್ಟನು.

ಸಾಮ್ರಾಟ್ ಅಕಬರ್‌ನ ರಾಯಭಾರಿ :

ಅಲಿ ಆದಿಲಶಾಹನು ನಿಧನನಾದ ನಂತರ, ಮುಸ್ತಫಾಖಾನನ ಪ್ರಯತ್ನದಿಂದ ಕರ್ನಾಟಕದಿಂದ ಪಡೆದ ಹಣ ಮಾತ್ರ ರಾಜಭಾಂಡಾರದಲ್ಲಿ ಉಳಿದಿತ್ತು. ಇದಲ್ಲದೆ ಮತ್ತೇನೂ ಇರಲಿಲ್ಲ. ಈ ಹಣದಲ್ಲಿಯ ಒಂದು ದೊಡ್ಡ ಭಾಗವನ್ನು ಹಂಚಲಾಗಿತ್ತು. ಅಲಿ ಆದಿಲಶಾಹನ ಆಡಳಿತದಲ್ಲಿ ಸಾಮ್ರಾಟ ಅಕ್ಬರನ ಇಬ್ಬರು ರಾಯಭಾರಿಗಳು ಬಿಜಾಪುರಕ್ಕೆ ಬಂದಿದ್ದರು. ಅಲಿ ಆದಿಲನು ಅವರಿಗೆ ಸಾಕಷ್ಟು ಆದರಾತಿಥ್ಯ ಮಾಡಿದ್ದನು. ಇವರಿಬ್ಬರೂ ಬಿಜಾಪುರದಲ್ಲಿ ತಂಗಿದ್ದರು. ಅಕ್ಬರನ ಮೊದಲ ರಾಯಭಾರಿ ಹಕೀಮ ಅಲಿ ಗಿಲಾನಿಯು ಬೆಲೆಬಾಳುವ ಕಾಣಿಕೆಗಳನ್ನು ಪಡೆದು ಹಿಂದಿರುಗಿದ್ದನು. ಎರಡನೆಯ ರಾಯಭಾರಿ ಐನುಲ್‌ಮುಲ್ಕ. ಬಾದಶಹನನ್ನು ವಧಿಸಿದ ಸಂದರ್ಭದಲ್ಲಿ ಐನುಲ್ ಮುಲ್ಕನು ಅಲ್ಲಿಯೇ ಇದ್ದನು. ಹೀಗಾಗಿ ಐನುಲ್‌ಮುಲ್ಕನು ಯಾವುದೇ ಕಾಣಿಕೆ ಪಡೆಯದೇ, ಅಕ್ಬರನ ಬಳಿ ಹಿಂದಿರುಗಿದನು.

■

*

೬. ಇಬ್ರಾಹಿಮ್ ಆದಿಲ್‌ಶಾಹ ಸಾನಿ

ಪಟ್ಟಾಭಿಷೇಕ:

ಅಲಿ ಆದಿಲ್‌ಶಾಹನು ನಿಧನನಾದ ನಂತರ, ಇಬ್ರಾಹಿಮ್ ಆದಿಲ್‌ಶಾಹ ಸಾನಿಯ ಪಟ್ಟಾಭಿಷೇಕವಾಯಿತು. ಆತನು ಸಿಂಹಾಸನಾರೂಢನಾಗಿ ರಾಜ್ಯಭಾರ ವಹಿಸಿಕೊಂಡನು. ಆ ಸಮಯದಲ್ಲಿ ಇಬ್ರಾಹಿಮನು ಕೇವಲ ಹತ್ತು ವರ್ಷದ ಬಾಲಕನಾಗಿದ್ದನು. ಆದರೆ, ಆತನ ಜಾಣ್ಮೆಯು ಎಳೆಯ ವಯಸ್ಸಿಗೆ ಮೀರಿದುದಾಗಿತ್ತು. ಆತನು ತನ್ನ ಜಾಣ್ಮೆಯಿಂದ ರಾಜ್ಯದ ಪ್ರಜೆಗಳನ್ನು ತನ್ನ ಆಪ್ತರಾಗಿಸಿಕೊಂಡನು. ಆಸ್ಥಾನದ ಸಭಿಕರು ಪಟ್ಟಾಭಿಷೇಕದ ಸಮಯದಲ್ಲಿ ಇಬ್ರಾಹಿಮನಿಗೆ ಹೊನ್ನು ಮತ್ತು ನಾಣ್ಯಗಳಿಂದ ನಿವಾಳಿಕೆ ತೆಗೆದರು. ಬಾದಶಹನ ಹೆಸರಿನಲ್ಲಿ ಖುತ್ಬಾ ಓದಲಾಯಿತು. ವರ್ತಕರು ತಮ್ಮ ಅಂಗಡಿಗಳನ್ನು ರೇಶಿಮೆಯ ವಸ್ತ್ರಗಳಿಂದ ಸಿಂಗರಿಸಿದರು. ಹಿಂದುಸ್ತಾನದ ಸಂಪ್ರದಾಯದ ಪ್ರಕಾರ, ಪ್ರಜೆಗಳು ಮಣ್ಣಿನ ಪಾತ್ರೆಗಳಲ್ಲಿ ನಾಣ್ಯಗಳನ್ನು ತುಂಬಿ ತುಂಬಿ, ಬಾದಶಹನ ಮೇಲೆ ನಿವಾಳಿಸಿದರು.

ಇಬ್ರಾಹಿಮನು ಬಾಲಕನಿದ್ದಾಗ ಸೈನಿಕ ತರಬೇತಿ ಪಡೆದು ಯುದ್ಧ ವಿದ್ಯೆಯಲ್ಲಿ ನೈಪುಣ್ಯ ಸಂಪಾದಿಸಿದ್ದನು. ಕುರಾನ್ ಗ್ರಂಥವನ್ನು ಪಠಿಸಿ ಮನನ ಮಾಡಿಕೊಂಡಿದ್ದನು. ಇನ್ನಿತರ ಅಗತ್ಯ ವಿದ್ಯೆ ಮತ್ತು ಆಡಳಿತ ತರಬೇತಿ ಪಡೆದಿದ್ದನು. ತನ್ನ ಸಮವಯಸ್ಕರಂತೆ ಆಟಪಾಠದಲ್ಲಿ ಸಮಯ ವ್ಯರ್ಥ ಮಾಡದೆ, ಕೇವಲ ಒಂಬತ್ತು ವರ್ಷದ ಬಾಲಕನಾಗಿದ್ದಾಗಲೇ, ಪ್ರೌಢತೆಯ ಗಾಂಭೀರ್ಯ ಆತನ ಮುಖದಲ್ಲಿ ಕಂಡುಬರುತ್ತಿತ್ತು.

ಇಬ್ರಾಹಿಮನು ರಾಜ್ಯಭಾರ ವಹಿಸಿಕೊಂಡ ಆರಂಭಿಕ ಸಮಯದಲ್ಲಿ, ಆತನಿನ್ನೂ ಚಿಕ್ಕವನೆಂದು ಆಸ್ಥಾನದ ಕೆಲವು ಸದಸ್ಯರು, ರಾಜ್ಯದ ಸಮಸ್ತ ಆಡಳಿತವನ್ನು ತಮ್ಮ ಕೈಯಲ್ಲಿಟ್ಟುಕೊಂಡಿದ್ದರು. ಅಲಿ ಆದಿಲ್‌ಶಾಹಿಯ ಆಡಳಿತದಲ್ಲಿ ಅಧಿಕಾರಿಯಾಗಿ ಸೇವೆ ಸಲ್ಲಿಸಿದ ಕಾಮಿಲ್ ಖಾನನು ಅಧಿಕಾರ ವಹಿಸಿಕೊಳ್ಳಲು ಮುಂದೆ ಬಂದನು.

ಮಿರಜ ಕೋಟೆಯ ಮುತ್ತಿಗೆಯ ಸಂದರ್ಭದಲ್ಲಿ ತನ್ನ ಪರಾಕ್ರಮವನ್ನು ಪ್ರದರ್ಶಿಸಿ, ಆತನು ರಾಜ್ಯದ ಸರ್ವಾಧಿಕಾರಿಯಾಗಿದ್ದನು.

ಕಾಮಿಲ್ ಖಾನನ ಪ್ರಭುತ್ವ :

ದಕ್ಷಿಣದ ಕಾಮಿಲ್ ಖಾನನು ತನ್ನ ವಿಶ್ವಾಸಿಕ ಅನುಯಾಯಿಗಳನ್ನು ಇಬ್ರಾಹಿಮ್ ಆದಿಲ್‌ಶಾಹ ಸಾನಿಯ ಬಳಿ ಕೆಲಸಕ್ಕೆ ನಿಯಮಿಸಿದ. ಕಾಮಿಲ್ ಖಾನನು ಕೋಟೆಯ ಠಾಣೇದಾರನನ್ನು ತನ್ನ ಕೆಲಸಗಳಲ್ಲಿ ಜೊತೆಗೂಡಿಸಿಕೊಂಡು, ಬಾದಶಹನ ಪಾಲನೆ, ಪೋಷಣೆ ಮತ್ತು ಶಿಕ್ಷಣದ ಜವಾಬ್ದಾರಿಯನ್ನು ಅಲಿ ಆದಿಲ್‌ಶಾಹನ ಪತ್ನಿ ಚಾಂದಬೀಬಿಗೆ ವಹಿಸಿಕೊಟ್ಟನು. ಬುಧುವಾರ ಮತ್ತು ಶುಕ್ರವಾರ ಹೊರತುಪಡಿಸಿ, ಇತರ ದಿನಗಳಂದು ಬಾಲಕ ಇಬ್ರಾಹಿಮನನ್ನು ಶಾಹಿಮಹಲಿನಿಂದ ಹೊರಗೆ ಕರೆತಂದು ಪ್ರಜೆಗಳಿಗೆ ಬಾದಶಹನ ದರ್ಶನ ಭಾಗ್ಯವನ್ನು ನೀಡುತ್ತಿದ್ದನು. ರಾಜ್ಯದ ಆಡಳಿತವನ್ನು ಉತ್ತಮ ರೀತಿಯಿಂದ ನಿರ್ವಹಿಸುವ ಕುರಿತು ತಿಳಿಹೇಳುತ್ತಿದ್ದನು.

ಅಹಂಕಾರದ ಅಮಲು :

ಕಾಮಿಲ್ ಖಾನನು ಸುಮಾರು ಎರಡು ತಿಂಗಳವರೆಗೆ ಇದೇ ರೀತಿಯಲ್ಲಿ ಕಾರ್ಯ ನಿರ್ವಹಿಸಿದನು. ನಂತರ ಅಧಿಕಾರದ ಮದ ಮಾಯಾಜಾಲದಂತೆ ತಲೆಗೇರಿತು. ತನ್ನ ಸಾಮರ್ಥ್ಯದ ಅಹಂಕಾರದಿಂದ ವಿಚಿತ್ರವಾಗಿ ನಡೆದುಕೊಳ್ಳ ತೊಡಗಿದನು. ಚಾಂದಬೀಬೀಯೊಡನೆ ಸಹ ಅಗೌರವದಿಂದ ನಡೆದುಕೊಳ್ಳ ತೊಡಗಿದನು. ಈ ನಡತೆಯನ್ನು ಚಾಂದಬೀಬೀ ಸಹಿಸಲಿಲ್ಲ. ಚಾಂದಬೀಬೀ ಕುಪಿತಳಾಗಿ ಕಮಾಲಖಾನನ ಮಗ ಹಾಜಿ ಕಿಶ್ವರ ಖಾನನಿಗೆ, "ಕಾಮಿಲ್ ಖಾನನು ಮುನಸಿಫ್ ವಕೀಲ ಹುದ್ದೆಗೆ ಯೋಗ್ಯನಲ್ಲ, ಈ ಕೆಲಸವನ್ನು ನೀನು ವಹಿಸಿಕೊಳ್ಳಬೇಕೆಂಬುದು ನನ್ನ ಇಚ್ಛೆಯಾಗಿದೆ. ಕಾಮಿಲ್ ಖಾನನನ್ನು ಯಾವುದಾದರೂ ರೀತಿಯಲ್ಲಿ ಗತಿಕಾಣಿಸು. ಈ ವಿಷಯದಲ್ಲಿ ಜಾಗ್ರತೆಯಾಗಿ ಕೆಲಸ ನಿರ್ವಹಿಸಬೇಕು. ತಡವಾದಲ್ಲಿ ಕಾಮಿಲ್ ಖಾನನ ಅಧಿಕಾರವು ಇನ್ನೂ ಅಧಿಕವಾಗಿ, ಆತನ ದುರ್ವರ್ತನೆಯಿಂದ ತಪ್ಪಿಸಿಕೊಳ್ಳುವುದು ಕಠಿಣವಾಗುವುದು" ಎಂಬ ಸಂದೇಶ ಕಳುಹಿಸಿದಳು.

ಕಿಶ್ವರ ಖಾನನ ಕೋಲಾಹಲ:

ಹಾಜಿ ಕಿಶ್ವರಖಾನನಿಗೆ ಈ ಸಂದೇಶ ತಲುಪಿದಾಗ ಮಿತಿ ಮೀರಿದ ಸಂತೋಷವಾಯಿತು. ಕಾಮಿಲ್ ಖಾನನು ಮಂತ್ರಿಯಾಗಿ ಕಾರ್ಯ ನಿರ್ವಹಿಸುತ್ತಿರುವ ಸಬ್ಜ ಮಹಲಿನತ್ತ ಕಿಶ್ವರಖಾನನು ನಾಲ್ಕು ನೂರು ಬಲಶಾಲಿ ಸಂಗಾತಿಗಳ ಜೊತೆ ಹೊರಟನು. ಕಿಶ್ವರಖಾನನು ಕೋಟೆಯ ಒಳಹೊಕ್ಕು ಕೋಟೆಯ ಬಾಗಿಲನ್ನು ಒಳಗಿನಿಂದ ಮುಚ್ಚಿಸಿದನು. ಅಲ್ಲಿಯ ಠಾಣೆದಾರನನ್ನು ಬಂಧಿಸಿ, ಸಬ್ಜ ಮಹಲಿನೆಡೆಗೆ ಮುಂದೆ ಸಾಗಿದನು. ಕಾಮಿಲ್‌ಖಾನನಿಗೆ ಈ ವಿಷಯದ ಮಾಹಿತಿ ಇರಲಿಲ್ಲ. ಕಿಶ್ವರ ಖಾನನು

ಮಹಲಿನತ್ತ ಬರುವದು ತಿಳಿದ ತಕ್ಷಣ ತನ್ನ ಜೀವ ಉಳಿಸಿಕೊಳ್ಳುವುದಕ್ಕಾಗಿ ಅರಮನೆಯ ಅಂತಃಪುರದತ್ತ ಓಡಿದನು. ಚಾಂದಬೀಬೀ ರಕ್ಷಣೆ ಮಾಡುವಳೆಂಬ ಕಲ್ಪನೆ ಆತನಿಗಿತ್ತು. ಆದರೆ, ಕಾಮಿಲ್ ಖಾನನ ಕೆಲವು ವಿಶ್ವಾಸಿಕ ಅನುಯಾಯಿಗಳು, ಇದೆಲ್ಲವೂ ಚಾಂದಬೀಬೀಯ ಸೂಚನೆಯಂತೆ ನಡೆಯುತ್ತಿದೆ. ಚಾಂದಬೀಬೀಯಿಂದ ರಕ್ಷಣೆ ದೊರೆಯುವುದು ಅಸಾಧ್ಯ ಎಂದು ಹೇಳಿದರು.

ಕಾಮಿಲ್‌ಖಾನನ ವ್ಯಾಕುಲತೆ :

ಕಾಮಿಲ್ ಖಾನನು ಇದನ್ನು ಕೇಳಿ ವಿಷಣ್ಣನಾದನು. ಚಾಂದಬೀಬೀಯಿಂದ ನೆರವು ಕೇಳುವ ವಿಚಾರ ತ್ಯಜಿಸಿ, ವೈರಿಗಳಿಂದ ಪಾರಾಗುವ ಉಪಾಯ ಯೋಚಿಸತೊಡಗಿದನು. ಕೋಟೆಯ ದ್ವಾರದ ಬಳಿಯ ಪ್ರದೇಶವನ್ನು ಕಿಶ್ವರಖಾನನು ತನ್ನ ವಶಕ್ಕೆ ತೆಗೆದುಕೊಂಡಿರುವುದನ್ನು ತಿಳಿದ ಕಾಮಿಲ್ ಖಾನನು ಮಹಲಿನ ಹಿಂಭಾಗದ ಕೋಟೆಯ ಗೋಡೆಯನ್ನು ಏರಿ, ಜೀವ ಉಳಿಸಿಕೊಳ್ಳಲು ನೀರು ತುಂಬಿದ ಕಂದಕದಲ್ಲಿ ಹಾರಿದನು. ಕಂದಕದ ನೀರಿನಲ್ಲಿ ಈಜುತ್ತ ಪಾರಾಗಿ, ನಗರದತ್ತ ತೆರಳಿದ. ಆತನ ಜೀವನದ ಇನ್ನೂ ಕೆಲವು ದಿನಗಳು ಬಾಕಿ ಉಳಿದಿರುವುದರಿಂದ, ನಗರದ ನಿವಾಸಿಗಳು ಆತನನ್ನು ಗುರುತಿಸಲಿಲ್ಲ.

ಮನೆಯ ದಾರಿಯಲ್ಲಿ ಕಾಮಿಲ್ ಖಾನ :

ಕಾಮಿಲ್ ಖಾನನು ಅರಕ್ ಕೋಟೆಯ ಕಂದಕದ ಬಳಿ ಇರುವ ಇಮಾಮ ದ್ವಾರದತ್ತ ಬಂದನು. ಪುನಃ ಮರಗಳ ಮಧ್ಯ ಅಡಗಿಕೊಳ್ಳುತ್ತ ಕೋಟೆಯ ಬಳಿ ತಲುಪಿದನು. ಕೋಟೆಯ ಗೋಡೆಯು ಹನ್ನೆರಡು ಗಜ ಎತ್ತರವಿತ್ತು. ಗೋಡೆಯಿಂದ ಕೆಳಗಿಳಿಯಲು ತಲೆಯ ಮೇಲಿನ ಪಗಡಿ, ಮೈಮೇಲೆ ಹೊದ್ದಿರುವ ಶಾಲು ಹಾಗೂ ಸೊಂಟಕ್ಕೆ ಕಟ್ಟಿಕೊಂಡ ಬಟ್ಟೆಗಳನ್ನು ಒಂದಕ್ಕೊಂದು ಕಟ್ಟಿ ಹಗ್ಗದ ಏಣಿಯಂತೆ ಮಾಡಿಕೊಂಡು, ಅದರ ಒಂದು ತುದಿಯನ್ನು ಗೋಡೆಯ ತುದಿಯಲ್ಲಿರುವ ಮೊಳೆಗೆ ಕಟ್ಟಿ, ಅದರ ಆಧಾರದಿಂದ ಕೆಳಗಿಳಿದನು. ಚಿಂತೆ ಮತ್ತು ವ್ಯಾಕುಲಭರಿತನಾಗಿದ್ದ ಕಾಮಿಲ್ ಖಾನನು ತುಂಬ ಕಷ್ಟದಿಂದ ನಗರದ ಹೊರವಲಯದಲ್ಲಿದ್ದ ತನ್ನ ಮನೆ ತಲುಪಿದನು. ಸಬ್ಜ ಮಹಲಿನಿಂದ ಮನೆ ತಲುಪುವವರೆಗೆ ಆತನಿಗೆ ಯಾವ ವ್ಯಕ್ತಿಯೂ ಸಹಾಯ ಮಾಡಲಿಲ್ಲ. ಮನೆ ತಲುಪಿದ ನಂತರ, ಅಲ್ಲಿಂದ ಪರಾರಿಯಾಗುವ ಸಿದ್ಧತೆಯನ್ನು ಮಾಡಿಕೊಳ್ಳತೊಡಗಿದನು.

ಕಾಮಿಲ್ ಖಾನ ದಖನಿಯ ವಧೆ :

ಕಾಮಿಲ್ ಖಾನನು ಮಿಂಚಿನ ವೇಗದಲ್ಲಿ ಓಡಿ ಮಹಲಿನಿಂದ ಪರಾರಿಯಾಗುವನೆಂದು ಹಾಜಿ ಕಿಶ್ವರ ಖಾನ ಮತ್ತು ಆತನ ಸಂಗಡಿಗರು ಕಲ್ಪನೆ ಮಾಡಿರಲಿಲ್ಲ. ಅವರು ಕೆಲಸಮಯದ ವರೆಗೆ ಕೋಟೆಯ ಒಳ ಆವರಣದಲ್ಲಿಯೇ ಹುಡುಕತೊಡಗಿದರು.

ನಂತರ ಆತನು ಗೋಡೆಯಿಂದ ಹಾರಿ ಮನೆಗೆ ಹೋಗಿರುವ ಸಮಾಚಾರ ತಿಳಿಯಿತು. ಕಾಮಿಲ್ ಖಾನನನ್ನು ಬಂಧಿಸಿ ಕರೆತರಲು ಸೇನೆಯ ಒಂದು ತುಕಡಿಯನ್ನು ಅವರ ಮನೆಯತ್ತ ಕಳುಹಿಸಲಾಯಿತು. ಕಾಮಿಲ್ ಖಾನನಿಗೆ ಈ ವಿಷಯ ತಿಳಿದು, ತನ್ನ ಎಲ್ಲ ಸಂಪತ್ತು ಮತ್ತು ನಗದು ಹಣವನ್ನು ತೆಗೆದುಕೊಂಡು, ತನ್ನೊಡನೆ ಏಳೆಂಟು ಸಂಗಡಿಗರನ್ನು ಜೊತೆಗೂಡಿಸಿಕೊಂಡು ಅಹಮದ್ ನಗರದತ್ತ ಹೊರಟನು. ಆತನು ಕೊಂಚ ದೂರ ಸಾಗಿರುವಾಗ, ಕಿಶ್ವರ ಖಾನನ ಜನರು ಆತನನ್ನು ಬಂಧಿಸಿದರು. ಆತನ ಸಂಗಡಿಗರು ಆತನನ್ನು ಉಳಿಸಿಕೊಳ್ಳುವ ಪ್ರಯತ್ನ ಮಾಡಬಹುದೆಂದು ಯೋಚಿಸಿ ಕಾಮಿಲ್ ಖಾನನ ಶಿರಚ್ಛೇದನ ಮಾಡಿಬಿಟ್ಟರು. ಕಾಮಿಲ್ ಖಾನನು ತನ್ನೊಡನೆ ತಂದಿದ್ದ ಧನಕನಕವನ್ನೆಲ್ಲ ಲೂಟಿ ಮಾಡಿದರು.

ಕಿಶ್ವರ ಖಾನನ ಆಡಳಿತ :

ಇದಾದ ನಂತರ ಹಾಜಿ ಕಿಶ್ವರ ಖಾನನು ರಾಜ್ಯದ ಆಡಳಿತಾಧಿಕಾರವನ್ನು ತನ್ನ ವಶಕ್ಕೆ ತೆಗೆದುಕೊಂಡು, ಚಾಂದಬೀಬೀಯ ಸಲಹೆಯಂತೆ ಸಮತೋಲನದಿಂದ ತನ್ನ ಕರ್ತವ್ಯ ನಿರ್ವಹಿಸತೊಡಗಿದ. ಇದೇ ಸಮಯದಲ್ಲಿ ಮುರ್ತುಜಾ ನಿಜಾಮಶಾಹನ ಸರನೌಬತ ಬಹಜಾದ ಮಲಿಕ ತುರ್ಕನು ಹದಿನೈದು ಸಾವಿರ ಕುದುರೆ ಸವಾರರ ದಂಡಿನೊಡನೆ ಆದಿಲಶಾಹಿ ಗಡಿ ಪ್ರದೇಶದಲ್ಲಿರುವ ಕೆಲವು ಪರ್ಗಣೆ(ಪ್ರದೇಶ)ಗಳನ್ನು ವಶಪಡಿಸಿಕೊಳ್ಳಲು ಬರುತ್ತಿರುವ ವಿಚಾರ ತಿಳಿದು ಬಂದಿತು. ಕಿಶ್ವರಖಾನನು ಈ ವಿಷಯವನ್ನು ತಕ್ಷಣವೇ ಬಾದಶಹನ ಗಮನಕ್ಕೆ ತಂದನು. ಇಬ್ರಾಹಿಮನು ಆದಿಲ್‌ಶಾಹನ ಆಜ್ಞೆಯನುಸಾರ, ಐನುಲ್‌ಮುಲ್ಕ, ಆಂಕಸ್ ಖಾನ, ಅಖ್ಲಾಸ ಖಾನ, ದಿಲಾವರಖಾನ ಮತ್ತಿತರ ಹಬಶಿ ಸರದಾರರನ್ನೊಳಗೊಂಡ ಒಂದು ಶೂರರ ಸೈನ್ಯವನ್ನು ಬಹಜಾದ್ ಮಲಿಕ ತುರ್ಕನನ್ನು ಎದುರಿಸಲು ಕಳುಹಿಸಿಕೊಡುತ್ತಾನೆ.

ಆದಿಲ್‌ಶಾಹಿ ಮತ್ತು ನಿಜಾಮಶಾಹಿ ಸೈನ್ಯಗಳಲ್ಲಿ ಯುದ್ಧ :

ಎಲ್ಲ ಸೇನಾನಿಗಳು ಶಹದುರ್ಗದ ಬಳಿ ತಲುಪಿ, ಕೆಲವು ದಿನ ಅಲ್ಲಿಯೇ ವಾಸ್ತವ್ಯ ಹೂಡಿದರು. ಅನಂತರ, ನಿಜಾಮಶಾಹಿ ಸೈನ್ಯದ ಮೇಲೆ ದಾಳಿ ಮಾಡಲು ಐದು ಹರದಾರಿ ದೂರದಲ್ಲಿದ್ದಾಗ, ಬಹಜದ್ ಮಲಿಕನಿಗೆ ಆದಿಲ್‌ಶಾಹಿ ಸೈನ್ಯವು ಬರುತ್ತಿರುವ ವಿಷಯ ತಿಳಿಯಿತು. ಆತನು ತನ್ನ ಸೇನೆಯನ್ನು ಸುಸಜ್ಜಿತವಾಗಿ ಸಂಘಟಿಸಿ, ಯುಧ್ಧದ ಸಿಧ್ಧತೆಯನ್ನು ಮಾಡತೊಡಗಿದ. ಉಭಯಪಕ್ಷದವರಲ್ಲಿ ಪ್ರಬಲವಾದ ಯುದ್ಧ ನಡೆಯಿತು. ಅಂತಿಮವಾಗಿ, ಆದಿಲ್‌ಶಾಹಿ ಸೈನ್ಯಕ್ಕೆ ಜಯ ದೊರೆಯಿತು ಹಾಗೂ ನಿಜಾಮಶಾಹಿ ಸೈನ್ಯವು ಯುದ್ಧ ಭೂಮಿಯಿಂದ ಹಿಮ್ಮೆಟ್ಟಿ ಓಡಿಹೋಯಿತು.

ಆದಿಲ್‌ಶಾಹಿ ಸೈನ್ಯದ ವಿಜಯ :

ಯುದ್ಧದಲ್ಲಿ ಪಾಲುಗೊಂಡ ಸೇನಾಪತಿಗಳು ವಿಜಯಪತ್ರವನ್ನು ಮಹಾರಾಜರ

ಅವಗಾಹನೆಗೆ ಕಳುಹಿಸಿಕೊಟ್ಟರು. ನಗರದಲ್ಲಿ ವಿಜಯದ ಸಂತೋಷವನ್ನು ಸಂಭ್ರಮದಿಂದ ಆಚರಿಸಲಾಯಿತು. ಓಣಿ-ಓಣಿಗಳಲ್ಲಿ, ಅಂಗಡಿಗಳಲ್ಲಿ, ಪಾನಕವನ್ನು ಹಂಚಲಾಯಿತು. ಚಾಂದಬೀಬೀಯ ಆಜ್ಞೆಯಂತೆ ಈ ಸಂತಸದ ಸಮಯದಲ್ಲಿ ಎಲ್ಲ ಸೇನಾಪತಿಗಳಿಗೆ ಗೌರವಸೂಚಕ ವಸ್ತ್ರಗಳನ್ನು ಉಡುಗೊರೆಯಾಗಿ ನೀಡಲಾಯಿತು. ಆದಿಲ್‌ಶಾಹಿ ಸೈನ್ಯದ ವಿಜಯವು ಎಲ್ಲರಿಗೂ ಸಂತೋಷ ಮತ್ತು ಸಮೃದ್ಧಿ ನೀಡಿತು.

ಆನೆಗಳನ್ನು ಗಜಶಾಲೆಗೆ ಒಪ್ಪಿಸುವ ಸಂಗತಿ :

ತದನಂತರ, ಚಾಂದಬೀಬೀಯ ಸಲಹೆಯಂತೆ, ನಿಜಾಮಶಾಹಿ ಸೈನ್ಯದಿಂದ ತಂದ ಆನೆಗಳನ್ನು ಅರಸರ ಗಜಶಾಲೆಗೆ ಒಪ್ಪಿಸಿ ಕೊಡಬೇಕು ಎಂಬ ಆಜ್ಞೆಯನ್ನು ಕಿಶ್ವರಖಾನನು ಸೇನಾಪತಿಯ ಹೆಸರಿನಲ್ಲಿ ಜಾರಿ ಮಾಡಿದನು. ಈ ಆಜ್ಞೆ ಪಾಲಿಸಲು ಸೇನಾಪತಿಗಳು ಒಪ್ಪಿಕೊಳ್ಳದೆ, ತಮ್ಮಲ್ಲಿಯೇ ಸಮಾಲೋಚನೆ ಮಾಡತೊಡಗಿದರು. ಕೆಲವು ಸರದಾರರು ಈ ವಿಷಯವನ್ನು ಚಾಂದಬೀಬೀಯ ಗಮನಕ್ಕೆ ತಂದು ವಸ್ತುಸ್ಥಿತಿಯನ್ನು ವಿವರಿಸಬೇಕೆಂದು ಸಲಹೆ ನೀಡಿದರು. ಅದೂ ಅಲ್ಲದೆ, ಕಿಶ್ವರಖಾನನನ್ನು ಪದಚ್ಯುತಿಗೊಳಿಸಿ, ಆತನ ಸ್ಥಳದಲ್ಲಿ ಮುಸ್ತಫಾಖಾನನನ್ನು ನಿಯಮಿಸಿಕೊಳ್ಳಬೇಕೆಂದು ಚಾಂದಬೀಬೀಗೆ ಮನವಿ ಮಾಡಬೇಕೆಂಬ ಸೂಚನೆಯನ್ನು ನೀಡಿದರು.

ಸರದಾರರ ಸಲಹೆ :

ಮಲಿಕ್ ಬಹಜದ್‌ನ ಸೋಲಿನ ವಿಷಯ ತಿಳಿದ ಮುರ್ತುಜಾ ನಿಜಾಮಶಾಹನು ಸ್ವತಃ ಇಲ್ಲಿಗೆ ಯುದ್ಧ ಮಾಡಲು ಬರುತ್ತಿದ್ದಾನೆ. ನಾವೆಲ್ಲ ಈಗ ಮೌನಕ್ಕೆ ಶರಣಾಗುವುದು ಉಚಿತ ಹಾಗೂ ನಿಜಾಮಶಾಹನ ದಾಳಿಯನ್ನು ಎದುರಿಸಿದ ನಂತರ ನಾವೇ ಸ್ವತಃ ರಾಜಧಾನಿಗೆ ಹೋಗಿ ಚಾಂದಬೀಬೀಗೆ ದೂರು ಸಲ್ಲಿಸಿ, ಈ ವಿಷಯವನ್ನು ತಿಳಿಸಿ ನಿರ್ಧರಿಸುವದು ಎಂದು ಇನ್ನೂ ಕೆಲವು ಸರದಾರರು ಅಭಿಪ್ರಾಯಪಟ್ಟರು.

ಮುಸ್ತಫಾಖಾನನ ವಿರುದ್ಧ ಕುತಂತ್ರ :

ಸರದಾರರ ವಿಚಾರದ ಸುಳಿವನ್ನು ಅದು ಹೇಗೋ ತಿಳಿದ ಕಿಶ್ವರಖಾನನು, ಮುಸ್ತಫಾಖಾನನನ್ನು ವಧಿಸುವ ಆಜ್ಞೆಯನ್ನು ಚಾಂದಬೀಬೀಯಿಂದ ಪರೋಕ್ಷವಾಗಿ ಪಡೆದು, ಅದರ ಮೇಲೆ ರಾಜಮುದ್ರೆಯನ್ನು ಹಾಕಿ ಅಮೀನನೆಂಬ ವ್ಯಕ್ತಿಯ ಕೈಯಲ್ಲಿ ಮಿರ್ಜಾ ನೂರುದ್ದೀನ ಮೊಹಮ್ಮದನಿಗೆ ತಲುಪಿಸಲು ಕಳುಹಿಸಿದನು. ಮಿರ್ಜಾ ನೂರುದ್ದೀನ ಮೊಹಮ್ಮದನು ಸೈಯದ ವಂಶದವನಾಗಿದ್ದು, ಯುದ್ಧವೊಂದರಲ್ಲಿ ಬಂದಿಯಾಗಿ ಕೈದಿಯಾಗಿದ್ದವನು. ಮುಸ್ತಫಾಖಾನನ ದಯೆಯಿಂದ ಅರಸರ ಸೇನೆಯಲ್ಲಿ ಸೇರಿಕೊಂಡಿದ್ದನು. ಕಿಶ್ವರಖಾನನು ಮಿರ್ಜಾ ನೂರುದ್ದೀನನಿಗೆ, "ತಕ್ಷಣವೇ ಮುಸ್ತಫಾಖಾನನನ್ನು ವಧಿಸು. ಮುಸ್ತಫಾಖಾನನನ್ನು ವಧಿಸಿದ ನಂತರ ಆತನ

ಸಮಸ್ತ ಜಹಗೀರು ಹಾಗೂ ಆಸ್ತಿಗೆ ನಿನ್ನನ್ನೇ ಒಡೆಯನನ್ನಾಗಿ ಮಾಡಲಾಗುವದು" ಎಂಬ ಸಂದೇಶ ಕಳುಹಿಸಿದನು.

ಮಿರ್ಜಾ ನೂರುದ್ದೀನನ ಕೃತಘ್ನತೆ :

ಕಿಶ್ವರಖಾನನ ಸಂದೇಶ ತಲುಪುತ್ತಲೇ ಮಿರ್ಜಾ ನೂರುದ್ದೀನನಿಗೆ, ಮುಸ್ತಫಾಖಾನನು ಮಾಡಿದ ಎಲ್ಲ ಉಪಕಾರಗಳು ಮರೆತುಹೋದವು. ಮಹಮದ್ ಅಮೀನನನ್ನು ಕೋಟೆಯತ್ತ ಕಳುಹಿಸಿದನು ಹಾಗೂ ಕೋಟೆಯಲ್ಲಿರುವ ಅಧಿಕಾರಿಗಳಿಗೆ, "ಮುಸ್ತಫಾಖಾನನು ಕೋಟೆಯ ಅಧಿಕಾರಿಗಳನ್ನು ಕೊಲ್ಲಿಸಿ, ಕೋಟೆಯನ್ನು ನಾಯಕನಿಗೆ ವಹಿಸಿಕೊಡುವ ಉದ್ದೇಶವಿದ್ದು, ಬಾದಶಹನ ವಿರುದ್ಧ ಬಂಡೆದ್ದು ಎಲ್ಲ ಜಹಗೀರನ್ನು ವಶಪಡಿಸಿಕೊಳ್ಳಬಯಸಿದ್ದಾನೆ. ಈಗ ಬಾದಶಹನ ಆಜ್ಞೆಯನ್ನು ಪಾಲಿಸುವದು ನಿಮ್ಮ ಕರ್ತವ್ಯ. ಮುಸ್ತಫಾಖಾನನಿಗೆ ನೀವು ಅಂಜಬೇಕಾಗಿಲ್ಲ. ಈ ಕಾರ್ಯಕ್ಕೆ ತಕ್ಕ ಇನಾಮು ಮತ್ತು ಬಹುಮಾನಗಳನ್ನು ನಿಮಗೆ ನೀಡಲಾಗುವದು" ಎಂಬ ಸಂದೇಶ ರವಾನಿಸಿದ.

ಮುಸ್ತಫಾಖಾನನ ವಧೆ :

ಮಹಮದ್ ಅಮೀನನು ಸಂಜೆಯ ಸಮಯ ಕೋಟೆಯೊಳಗೆ ಪ್ರವೇಶಿಸಿ, ಅತ್ಯಂತ ಜರೂರಿಯಾದ ರಾಜಾಜ್ಞೆಯನ್ನು ತಂದಿರುವುದಾಗಿ ಮುಸ್ತಾಫಾಖಾನನಿಗೆ ಸಮಾಚಾರ ಕಳುಹಿಸಿದನು. ಮಹಮದ್ ಅಮೀನನ ಮಾತನ್ನು ನಂಬಿದ ಮುಸ್ತಾಫಾಖಾನನು ಆತನನ್ನು ಉತ್ತಮ ಮತ್ತು ಅನುಕೂಲಕರವಾದ ಮನೆಯಲ್ಲಿ ವಾಸಮಾಡಲು ಅನುವು ಮಾಡಿಕೊಟ್ಟನು. ಮಹಮದ್ ಅಮೀನನು, ರಾತ್ರಿಯ ವೇಳೆಯಾದುದರಿಂದ ರಾಜಾಜ್ಞೆಯನ್ನು ಬೆಳಗಿನ ಸಮಯ ರಾಜಸಭೆಯಲ್ಲಿ ಪ್ರಸ್ತುತಪಡಿಸುವುದಾಗಿ ಮುಸ್ತಫಾಖಾನನಿಗೆ ಹೇಳಿ ಕಳುಹಿಸಿದನು. ಎಲ್ಲರೂ ನಿದ್ರೆಯಲ್ಲಿರುವಾಗ, ಅಮೀನನು ನಾಯಕ ಹಾಗೂ ಇತರ ರಾಜರನ್ನು ಸಂಪರ್ಕಿಸಿ, ಮುಸ್ತಫಾಖಾನನನ್ನು ವಧಿಸುವ ಕಾರ್ಯಕ್ಕೆ ಒಪ್ಪಿಸಿದನು. ಬೆಳಗಿನ ಜಾವ ನಮಾಜ ಮತ್ತು ಕುರಾನ ಪಠಿಸುವಲ್ಲಿ ಮುಸ್ತಫಾಖಾನನು ನಿರತನಾಗಿರುವಾಗ, ಈ ದುಷ್ಟರು ಮುಸ್ತಫಾಖಾನನನ್ನು ನಿರ್ದಯವಾಗಿ ವಧಿಸಿದರು.

ಒಬ್ಬ ಯೋಗ್ಯ ಜ್ಯೋತಿಷಿ :

ಬಂಕಾಪುರದಲ್ಲಿ ಒಬ್ಬ ವೃದ್ಧ ಜ್ಯೋತಿಷಿ ಇದ್ದನು. ಆತನು ಹೇಳುವ ಭವಿಷ್ಯವು ಸದಾ ಸತ್ಯವಾಗಿ ಸಂಭವಿಸುತ್ತಿತ್ತು. ಆತನು ಮುಂದೆ ಘಟಿಸುವ ವಿಷಯಗಳನ್ನು ಎರಡು-ಮೂರು ವರ್ಷ ಮೊದಲೇ ಹೇಳಿಬಿಡುತ್ತಿದ್ದನು. ಬಂಕಾಪುರದ ಕೋಟೆಯು ಮುಸ್ತಫಾಖಾನ ಎಂಬ ಹೆಸರಿನ ಸೇನಾಪತಿಯ ಆಳ್ವಿಕೆಗೆ ಒಳಪಡುವದು ಎಂಬ ಭವಿಷ್ಯವನ್ನು ಜ್ಯೋತಿಷಿಯು ಮೊದಲೇ ನುಡಿದಿದ್ದನು. ಜ್ಯೋತಿಷಿಯ ಭವಿಷ್ಯವಾಣಿಯು

ಸತ್ಯವಾಗಿತ್ತು. ಮುಸ್ತಫಾಖಾನನಿಗೆ ಈ ಜ್ಯೋತಿಷಿಯ ವಿಷಯ ತಿಳಿದಾಗ ಆತನನ್ನು ಕರೆದು ತನ್ನ ಜಾತಕವನ್ನು ಬರೆಯಿಸಿ, ತನ್ನ ಭವಿಷ್ಯವನ್ನು ಹೇಳಲು ಕೋರಿದನು.

ಭವಿಷ್ಯವಾಣಿ :

ಮೊದಲು ಜ್ಯೋತಿಷಿಯು ಭವಿಷ್ಯವನ್ನು ಹೇಳಲು ನಿರಾಕರಿಸಿದರೂ, ಮುಸ್ತಫಾಖಾನನು ಒತ್ತಾಯಿಸಿದ ಮೇಲೆ, "ನಕ್ಷತ್ರರಾಶಿಗಳ ಚಲನೆಯನ್ನು ಆಧರಿಸಿ ಈ ಭವಿಷ್ಯವನ್ನು ನುಡಿಯಲಾಗುತ್ತಿದೆ,

ಮುಂಬರುವ ವರ್ಷದಲ್ಲಿ ರಾಜಧಾನಿಗೆ ಪ್ರಸಿದ್ಧ ಸರದಾರನೊಬ್ಬನು ಬರುವನು. ಆತನು ಕುತಂತ್ರದಿಂದ ನಿನ್ನನ್ನು ಇದೇ ಮಹಲಿನಲ್ಲಿ ವಧಿಸುವನು. ಆದರೆ, ಆ ಸರದಾರನೂ ನೆಮ್ಮದಿಯಿಂದ ಇರಲಾರನು. ರಾಜಧಾನಿಯಿಂದ ಪರಾರಿಯಾಗಿ, ತೆಲಂಗಾಣದಲ್ಲಿ ವಾಸಿಸುವನು. ಅಲ್ಲಿ ಒಬ್ಬ ವ್ಯಕ್ತಿ ಆತನನ್ನು ಕೊಲ್ಲುವನು" ಎಂದು ಹೇಳಿದನು. ಜ್ಯೋತಿಷಿಯ ಈ ಭವಿಷ್ಯವಾಣಿಯು ಅಕ್ಷರಶಃ ಸತ್ಯವಾಯಿತು. ಜನರು ಜ್ಯೋತಿಷಿಯ ವಾಕ್ಸಿದ್ಧಿಗೆ ಅಚ್ಚರಿಪಟ್ಟರು.

ಕಿಶ್ವರಖಾನನ ವಿನಾಶದ ವೃತ್ತಾಂತ :

ಮುಸ್ತಫಾಖಾನನ ಕಗ್ಗೊಲೆಯ ವಿಷಯವು ಬಿಜಾಪುರಕ್ಕೆ ತಲುಪಿದಾಗ, ಚಾಂದಬೀಬೀಗೆ ಅತೀವ ದುಃಖವಾಯಿತು. ಏಕೆಂದರೆ, ಮುಸ್ತಫಾಖಾನನು ಸಯ್ಯದಜಾ ವಂಶಸ್ಥನಾಗಿದ್ದ ಹಾಗೂ ಚಾಂದಬೀಬೀ ಸಯ್ಯದ ಕುಟುಂಬದವರನ್ನು ಗೌರವಾದರಗಳಿಂದ ನೋಡುತ್ತಿದ್ದಳು. ಇದೇ ಕಾರಣದಿಂದ ಚಾಂದಬೀಬೀ ಕಿಶ್ವರಖಾನನನ್ನು ದ್ವೇಷಿಸತೊಡಗಿದಳು. ಆತನನ್ನು ಕೆಟ್ಟ ಶಬ್ದಗಳಿಂದ ನಿಂದಿಸತೊಡಗಿದಳು. ಚಾಂದಬೀಬೀಯ ದ್ವೇಷದ ಅರಿವಾದಾಗ, ಮೊದಲು ಕಿಶ್ವರಖಾನನು ಕಡೆಗಣಿಸಿದರೂ, ಅನಂತರ, ಚಾಂದಬೀಬೀಯು ತನ್ನ ಸೋದರ ಮುರ್ತುಜಾ ನಿಜಾಮಶಾಹನ ಅರಸೊತ್ತಿಗೆಯ ಎಲ್ಲ ರಾಜರೊಡನೆ ಸಂಪರ್ಕ ಬೆಳೆಸಿ ಆದಿಲಶಾಹಿ ಸರಹದ್ದನ್ನು ವಶಪಡಿಸಿಕೊಳ್ಳಲು ಪ್ರೇರೇಪಿಸಿದ್ದಾಳೆ ಎಂಬ ಅಪವಾದ ಹೊರಿಸಿದನು.

ಚಾಂದಬೀಬೀಯ ವಿರುದ್ಧ ಪಿತೂರಿ :

ಕಿಶ್ವರಖಾನನು ಚಾಂದಬೀಬಿಯ ವಿರುದ್ಧ ಇಬ್ರಾಹಿಮ ಆದಿಲ್‌ಶಾಹ ಸಾನಿಗೆ ದೂರಿತ್ತನು. ಚಾಂದಬೀಬಿಯನ್ನು ಕೆಲಸಮಯದ ವರೆಗೆ ಸಾತಾರಾ ಜಿಲ್ಲೆಯಲ್ಲಿ ಬಂಧನದಲ್ಲಿಟ್ಟು, ನಿಜಾಮಶಾಹಿ ಕಲಹದಿಂದ ಮುಕ್ತರಾದ ಮೇಲೆ ಚಾಂದಬೀಬೀಯನ್ನು ಪುನಃ ಅಂತಃಪುರಕ್ಕೆ ಮರಳಿ ಕರೆತರುವ ಸಲಹೆಯನ್ನು ಕಿಶ್ವರಖಾನನು ನೀಡಿದ. ಇನ್ನೂ ಎಳೆಹರೆಯದ ಬಾಲಕನಾದ ಕಾರಣದಿಂದ ಇಬ್ರಾಹಿಮನು ಅಸಹಾಯಕನಾಗಿದ್ದನು. ರಾಜ್ಯದ ಕಾರ್ಯಭಾರದ ವಿಷಯಗಳಲ್ಲಿ ಆತನ ಸಲಹೆಗಳಿಗೆ

ಮಾನ್ಯತೆ ಇರಲಿಲ್ಲ. ತನ್ನ ಯೋಜನೆಯನ್ನು ತಕ್ಷಣ ಕಾರ್ಯಗತ ಮಾಡುವಲ್ಲಿ ಕಿಶ್ವರಖಾನನು ಆತುರನಾಗಿದ್ದನು. ಆದರೆ, ಚಾಂದಬೀಬೀ ಅಂತಃಪುರದಿಂದ ಹೊರಗೆ ಕಾಲಿಡುತ್ತಿರಲಿಲ್ಲ. ಅಲ್ಲದೆ, ಅರಮನೆಯ ವೃದ್ಧ ಮಹಿಳೆಯರು ಮತ್ತು ಹಿರಿಯ ಖೋಜಾಗಳು ಚಾಂದಬೀಬೀಯನ್ನು ಬಲವಂತದಿಂದ ಹೊರಗೆ ಕರೆದೊಯ್ಯಲು ತಡೆಯುಂಟು ಮಾಡುತ್ತಿದ್ದರು.

ಚಾಂದಬೀಬೀಯ ಬಂಧನ :

ಚಾಂದಬೀಬೀಯನ್ನು ಯಾವುದೇ ಕ್ರಮದಿಂದ ವಶಪಡಿಸಿಕೊಳ್ಳಲಾಗುವುದಿಲ್ಲ ಎಂದರಿತ ಕಿಶ್ವರಖಾನನು, ಖೊಜಾಗಳನ್ನೂ ವೃದ್ಧ ಮಹಿಳೆಯರನ್ನು ಅರಮನೆಗೆ ಕರೆಸಿ, ಚಾಂದಬೀಬೀಯನ್ನು ಅಂತಃಪುರದಿಂದ ಎಳೆದು ತರಬೇಕೆಂದು ಆಜ್ಞೆ ಮಾಡಿದ. ಉಪಾಯಗಾಣದೆ ಅವರು ಆಜ್ಞಾಪಾಲನೆ ಮಾಡಿ, ಚಾಂದಬೀಬೀಯನ್ನು ಅರಮನೆಯಿಂದ ಹೊರಕ್ಕೆ ತಂದು, ಪಲ್ಲಕ್ಕಿಯಲ್ಲಿ ಕೂಡಿಸಿ, ಸಾತಾರಾ ಜಿಲ್ಲೆಗೆ ಕರೆದೊಯ್ದು, ಅಲ್ಲಿ ಬಂಧನದಲ್ಲಿಟ್ಟರು.

ಮಿಯಾ ಬದ್ದೂನ ಮುಖಂಡತ್ವ :

ಕಿಶ್ವರಖಾನನು ಅಸಭ್ಯ ವರ್ತನೆಯನ್ನು ತನ್ನ ಬಹು ದೊಡ್ಡ ವಿಜಯವೆಂದು ಭಾವಿಸಿ, ಇನ್ನೂ ಹೆಚ್ಚು ಗರ್ವದಿಂದ ಬೀಗತೊಡಗಿದನು. ಕಿಶ್ವರಖಾನನಿಗೆ ಆಪ್ತನಾದ ಮಿಯಾ ಬದ್ದೂ ಎಂಬ ಅಮೀರನನ್ನು ಸರಹದ್ದಿನ ದಂಡನಾಯಕನಾಗಿ ನೇಮಿಸಿದನು. ಹೆಚ್ಚು ಯೋಧರಿರುವ ಸೈನ್ಯ, ಆನೆ ಮತ್ತು ಕುದುರೆಗಳನ್ನು ಕೊಟ್ಟು ಶಹದುರ್ಗದತ್ತ ಆತನನ್ನು ಕಳುಹಿಸಿದನು. ಮಿಯಾ ಬದ್ದೂವಿನ ಆಗಮನದ ವಾರ್ತೆ ತಿಳಿದ ದಖನಿ ಮತ್ತು ಹಬಶಿ ಸರದಾರರು ಆತನನ್ನು ಗೌರವದಿಂದ ಸ್ವಾಗತಿಸಿ, ಸೈನ್ಯವು ಬೀಡು ಬಿಟ್ಟಿರುವ ಸ್ಥಳಕ್ಕೆ ಕರೆದೊಯ್ದರು.

ಕಿಶ್ವರಖಾನನ ಸಲಹೆ :

ಮಿಯಾ ಬದ್ದೂ ಲೌಕಿಕ ಜ್ಞಾನವುಳ್ಳ, ಅನುಭವಿ, ಬುದ್ಧಿವಂತ ಹಾಗೂ ಚತುರ ವ್ಯಕ್ತಿಯಾಗಿದ್ದನು. ಆಂಕಸ್ ಖಾನ ಮತ್ತು ಐನುಲ್‌ಮುಲ್ಕ ಇವರಿಂದ ಆಣೆ ಪ್ರಮಾಣ ಮಾಡಿಸಿ, ಇವರನ್ನು ಕಿಶ್ವರಖಾನನ ಹಿತಚಿಂತಕರನ್ನಾಗಿ ಮಾಡಿದನು. ಅನಂತರ ಸೈನ್ಯದ ಇತರ ಸರದಾರರನ್ನು ಸೋಲಿಸುವ ಉಪಾಯ ಯೋಚಿಸತೊಡಗಿದನು. ಕಿಶ್ವರಖಾನನು ಇದರ ಬಗ್ಗೆ, "ಸೈನ್ಯದ ಸೇನಾನಿಗಳು ತಮ್ಮ ಸಾಮರ್ಥ್ಯದ ಬಗ್ಗೆ ಅಭಿಮಾನಪಡುತ್ತಿರುವುದು ನನಗೆ ತಿಳಿದುಬಂದಿದೆ. ಅವರು ಬಾದಶಹನ ಆಜ್ಞೆಯನ್ನು ವಿರೋಧಿಸುತ್ತಿರುವುದೂ ಗೊತ್ತಾಗಿದೆ. ಹೇಗಾದರೂ ಅವರನ್ನು ಬಂಧಿಸಿ ಶಾಹದುರ್ಗದ ಕೋಟೆಯಲ್ಲಿ ಬಂಧನದಲ್ಲಿರಿಸು. ಅವರ ಆನೆ-ಕುದುರೆಗಳನ್ನು ಬಾದಶಹರಿಗೆ

ಕಳುಹಿಸಿಕೊಡು. ಈ ಎಲ್ಲ ಕೆಲಸವನ್ನು ಅತ್ಯಂತ ವಿಶ್ವಾಸದಿಂದ ನಿರ್ವಹಿಸಬೇಕು" ಎಂದು ಬದ್ದೂ ಮಿಯಾನಿಗೆ ಆದೇಶಿಸಿದ.

ಬದ್ದೂ ಮಿಯಾನ ಯೋಜನೆ :

ಬದ್ದೂ ಮಿಯಾ ಲೋಭಿಯಾಗಿದ್ದ. ಮಹಾದಂಡನಾಯಕ ಹುದ್ದೆಯ ಅಭಿಲಾಷಿಯಾಗಿದ್ದನು. ಕಿಶ್ವರಖಾನನ ಆಜ್ಞೆಯನ್ನು ಪಾಲಿಸುವ ಉದ್ದೇಶದಿಂದ, ಹಮೀದ ಖಾನ ಮತ್ತು ಅಖ್ಲಾಸಖಾನರನ್ನು ನಾಶ ಮಾಡುವ ಉಪಾಯ ಯೋಚಿಸತೊಡಗಿದನು. ಇವರಿಬ್ಬರನ್ನು ತಮ್ಮ ಮನೆಗೆ ಊಟಕ್ಕೆ ಆಹ್ವಾನಿಸಿ, ಅವರನ್ನು ಬಂಧಿಸುವ ಹಂಚಿಕೆ ಹೂಡಿದನು. ಸರದಾರರ ಗುಂಪಿಗೆ ಈ ಹಂಚಿಕೆಯ ಗುಟ್ಟು ತಿಳಿದುಬಿಟ್ಟಿತು. ಅವರು ತಮ್ಮೊಳಗೆ ಚರ್ಚಿಸಿ ಮೊದಲು ತಾವೇ ಬದ್ದೂ ಮಿಯಾನನ್ನು ಆಹ್ವಾನಿಸಿ ಆತನನ್ನು ಬಂಧಿಸಿಡಬೇಕು. ನಂತರ ರಾಜಧಾನಿಗೆ ಹೋಗಿ ಕಿಶ್ವರಖಾನನನ್ನು ವಧಿಸಬೇಕು, ಆಮೇಲೆ ನಿಜಾಮಶಾಹಿಯನ್ನು ಎದುರಿಸಿ ಅವರ ಗಲಭೆಯನ್ನು ಮುಕ್ತಾಯಗೊಳಿಸಬೇಕು ಎಂದು ನಿರ್ಧರಿಸಿದರು.

ಬದ್ದೂ ಮಿಯಾನ ಬಂಧನ :

ಬಿಜಾಪುರದಿಂದ ಪುತ್ರ ಜನಿಸಿದ ಶುಭ ಸಮಾಚಾರ ಬಂದಿದ್ದು, ತನ್ನಿಮಿತ್ತ ಮನೆಯಲ್ಲಿ ಸಂತೋಷಕೂಟ ಏರ್ಪಡಿಸಿರುವುದಾಗಿ ಅಖ್ಲಾಸಖಾನನು ಬದ್ದೂ ಮಿಯಾನನ್ನು ತನ್ನ ಮನೆಗೆ ಆಹ್ವಾನಿಸಿದನು. ಆತನು ಕೆಲವು ಆನೆಗಳನ್ನು ಒಟ್ಟುಗೂಡಿಸಿ ಅವುಗಳನ್ನು ಬದ್ದೂ ಮಿಯಾನಿಗೆ ಕಾಣಿಕೆಯಾಗಿ ನೀಡಬೇಕಾಗಿದೆ ಎಂದು ಜಾಹೀರುಪಡಿಸಿದನು. ಅಖ್ಲಾಸಖಾನನು ಹೆಣೆದ ಈ ಜಾಲದಲ್ಲಿ ಬದ್ದೂ ಮಿಯಾ ಸಿಲುಕಿ, ಕೆಲವು ವಿಶ್ವಾಸಿಕ ಸಂಗಡಿಗರೊಡನೆ ಅವರ ಮನೆಗೆ ಬಂದನು. ಬದ್ದೂ ಮಿಯಾ ಇತರ ಸರದಾರರೊಡನೆ ಹೂಡಿದ ಸಂಚನ್ನು ಅಖ್ಲಾಸಖಾನನು ಕಾರ್ಯಗತ ಮಾಡಿ ತೋರಿಸಿದನು.

ಬಿಜಾಪುರದತ್ತ ಸೇನಾನಿಗಳು :

ಬದ್ದೂ ಮಿಯಾನನ್ನು ಬಂಧಿಸಿದ ನಂತರ ಹಬಶಿ ಸೇನಾನಿಗಳು ಬಿಜಾಪುರದತ್ತ ಪ್ರಯಾಣ ಆರಂಭಿಸಿದರು. ಈ ಘಟನೆಗಳೆಲ್ಲ ಅತಿ ಶೀಘ್ರವಾಗಿ ಸಂಭವಿಸಿದುದರಿಂದ ಸರದಾರರ ಸೇನೆಯಲ್ಲಿ ಗಲಭೆ ಉಂಟಾಯಿತು. ಐನುಲ್‌ಮುಲ್ಕ ಮತ್ತು ಆಂಕಸ್‌ಖಾನರು ಇನ್ನೊಂದು ದಾರಿಯಿಂದ ತಮ್ಮತಮ್ಮ ಜಹಗೀರಿನತ್ತ ಹೊರಟರು. ಕಿಶ್ವರಖಾನನಿಗೆ ಈ ಸಮಾಚಾರ ತಿಳಿಯಿತು. ಅಂತರಂಗದಲ್ಲಿ ಕಿಶ್ವರಖಾನನಿಗೆ ಈ ಹಬಶಿ ಸರದಾರರನ್ನು ಎದುರಿಸುವ ಧೈರ್ಯವಿರಲಿಲ್ಲ. ಆದರೆ ಬಹಿರಂಗವಾಗಿ, ಅವರನ್ನು ಎದುರಿಸುವ ಸಿಧ್ಧತೆಯನ್ನು ಮಾಡಿಕೊಳ್ಳತೊಡಗಿದನು.

ಕಿಶ್ವರಖಾನನ ತೆಗಳಿಕೆ :

ಬಾದಶಹನ ಮನಸ್ಸನ್ನು ಉಲ್ಲಸಿತಗೊಳಿಸಲು ಕಿಶ್ವರಖಾನನು ಐಷಾರಾಮದ ಒಂದು ದೊಡ್ಡ ಸಮಾರಂಭವನ್ನು ತನ್ನ ಮನೆಯಲ್ಲಿ ಏರ್ಪಡಿಸಿದನು. ಬಾದಶಹನಿಗೆ ತರತರದ ಅತ್ಯುತ್ತಮ ಕಾಣಿಕೆಗಳನ್ನು ಸಮರ್ಪಿಸಿ ಸೇವೆ ಸಲ್ಲಿಸಿದರೂ ಯಾವ ಪ್ರಯೋಜನವಾಗಲಿಲ್ಲ. ಕಿಶ್ವರಖಾನನು ನಗರದಲ್ಲಿ ಸುತ್ತಾಡುವಾಗ ಜನಸಾಮಾನ್ಯರು ಮತ್ತು ಮಹಿಳೆಯರು ಆತನತ್ತ ಬೆರಳು ತೋರಿ, "ಈತನೇ ದುಷ್ಟ ಕಿಶ್ವರಖಾನನು. ಉತ್ತಮವಂಶಜನಾದ ಮುಸ್ತಫಾಖಾನನನ್ನು ವಧಿಸಿದ್ದಾನೆ. ಚಾಂದಬೀಬೀಯನ್ನು ಅಸಭ್ಯತೆಯಿಂದ ಬಂಧನದಲ್ಲಿಟ್ಟ ದುಷ್ಟ ಅಧಿಕಾರಿ" ಎಂದು ನಿಂದಿಸುತ್ತಿದ್ದರು.

ಸಾರ್ವಜನಿಕರು ಆತನನ್ನು ದ್ವೇಷಿಸುತ್ತಿರುವುದು ಕಿಶ್ವರಖಾನನಿಗೆ ಗೊತ್ತಾಯಿತು. ಹಬಶಿ ಸರದಾರರು ಬಿಜಾಪುರ ಸಮೀಪಿಸುತ್ತಿರುವ ಸಮಾಚಾರ ತಿಳಿದ ಕಿಶ್ವರಖಾನನು ಬಾದಶಹನನ್ನು ಬೇಟೆಯ ನೆಪದಲ್ಲಿ ನಗರದ ಹೊರವಲಯಕ್ಕೆ ಕರೆತಂದನು. ಕಲಾಗ್‌ಬಾಗದಲ್ಲಿ ಕೆಲಸಮಯ ಕಳೆದ ನಂತರ ಕಿಶ್ವರಖಾನನು ಬಾದಶಹರಲ್ಲಿ, "ಈ ದಿನ ಬಹಳ ಶೆಕೆ ಇದೆ. ಶಿಕಾರಿಯ ಆಸೆ ಬಿಟ್ಟು ಅರಮನೆಗೆ ಹೋಗುವುದು ಉಚಿತವೆನಿಸುತ್ತಿದೆ. ಹುಜೂರರು ನಗರಕ್ಕೆ ಹಿಂದಿರುಗುವುದು ಒಳ್ಳೆಯದು. ನಾನು ಶಹಾಪುರದ ಪೇಟೆಯಲ್ಲಿ ಸುತ್ತಾಡಿ ಬರುತ್ತೇನೆ. ಸುತ್ತಾಟದ ನಂತರ ಪುನಃ ತಮ್ಮ ಸೇವೆಯಲ್ಲಿ ಹಾಜರಾಗುತ್ತೇನೆ" ಎಂದು ವಿನಂತಿಸಿಕೊಂಡನು.

ಕಿಶ್ವರಖಾನನ ವಧೆ :

ಬಾದಶಹನು ಕೋಟೆಯೊಳಗೆ ಬಂದನು. ಇತ್ತ ಕಿಶ್ವರಖಾನನು ತನ್ನ ಮಡದಿ ಮಕ್ಕಳಿಗೆ ವಿದಾಯ ಹೇಳಿ ನಾಲ್ಕು ನೂರು ಕುದುರೆಸವಾರರರು ಹಾಗೂ ಹೇರಳ ಧನಕನಕದೊಡನೆ ಅಹಮದನಗರದತ್ತ ಓಡಿ ಹೋದನು. ಕಿಶ್ವರಖಾನನು ದಾರಿಯಲ್ಲಿ ಎಲ್ಲಿಯೂ ತಂಗದೆ, ನಿಜಾಮಶಾಹಿ ಸರಹದ್ದಿನವರಗೆ ಮಿಂಚಿನ ವೇಗದಲ್ಲಿ ಸಾಗಿ ಹಬಶಿ ಸರದಾರರಿಂದ ಸುರಕ್ಷಿತವಾಗಿ ಪಾರಾದನು. ನಿಜಾಮಶಾಹಿ ಸರದಾರರಿಗೂ ಕಿಶ್ವರಖಾನನ ಬಗ್ಗೆ ತಿಳಿದಿತ್ತು. ಅವರು ಕಿಶ್ವರಖಾನ್ ಒಳ್ಳೆಯ ವ್ಯಕ್ತಿ ಎಂದು ಪರಿಗಣಿಸುತ್ತಿರಲಿಲ್ಲ. ಹೀಗಾಗಿ ಕಿಶ್ವರಖಾನ ಅಹಮದ್‌ನಗರಕ್ಕೆ ಹೋಗಲಿಲ್ಲ. ಮುಂದೆ ಕುತುಬ ಶಾಹಿಗಳ ರಾಜಧಾನಿಯಾದ ಗೊಲ್ಕೊಂಡಾದ ಕಡೆಗೆ ಪ್ರಯಾಣ ಬೆಳೆಸಿದನು. ಅಲ್ಲಿದ್ದ ವ್ಯಕ್ತಿಯೋರ್ವ ಕಿಶ್ವರಖಾನನನ್ನು ವಧಿಸಿ, ಮುಸ್ತಫಾಖಾನನ ಕೊಲೆಯ ಸೇಡು ತೀರಿಸಿಕೊಂಡನು. ಹೀಗೆ, ಜ್ಯೋತಿಷಿಯು ಹೇಳಿದ ಭವಿಷ್ಯವಾಣಿ ಅಕ್ಷರಶಃ ಸತ್ಯವಾಯಿತು.

ಇಖ್ಲಾಸಖಾನನ ಅಧಿಕಾರ :

ಗಡಿಯಲ್ಲಿರುವ ಸೈನ್ಯದ ಸರದಾರರು ಬಿಜಾಪುರ ತಲುಪಿ ಆದಿಲ್‌ಶಾಹಿ

ಪ್ರಭುತ್ವವನ್ನು ಒಪ್ಪಿಕೊಂಡು ಬಾದಶಾಹನ ಸೇವೆಗೆ ಹಾಜರಾದರು. ಅವರಿಗೆ ಉತ್ತಮ ವಸ್ತ್ರಗಳನ್ನು ನೀಡಿ ಗೌರವಿಸಲಾಯಿತು. ಅವರಲ್ಲಿ ಇಖ್ಲಾಸಖಾನನನ್ನು ಆಡಳಿತದ ಪ್ರಧಾನ ವಕೀಲನೆಂದು ನಿಯಮಿಸಲಾಯಿತು. ರಾಜ್ಯದ ಹಾಗೂ ಮತ್ತಿತರ ಮುಖ್ಯ ಆಡಳಿತವು ಇಖ್ಲಾಸಖಾನನ ಮೇಲ್ವಿಚಾರಣೆಗೆ ಒಳಪಟ್ಟಿತ್ತು. ಬಾದಶಹನ ಆಜ್ಞೆಯಂತೆ ಚಾಂದಬೀಬೀಯನ್ನು ಸಾತಾರಾ ಕಿಲ್ಲೆಯಿಂದ ಪುನಃ ಅರಮನೆಗೆ ಕರೆತರಲಾಯಿತು. ಬಾದಶಹನ ಶಿಕ್ಷಣ ಮತ್ತು ತರಬೇತಿಯ ಕರ್ತವ್ಯವನ್ನು ಇಖ್ಲಾಸಖಾನನು ಯಥಾಪ್ರಕಾರ, ಚಾಂದಬೀಬೀಗೆ ವಹಿಸಿದನು. ಅಫಜಲ್‌ಖಾನ ಶಿರಾಜಿಗೆ ಪೇಶ್ವೆ ಹುದ್ದೆಯನ್ನು ನೀಡಲಾಯಿತು. ಇದಕ್ಕೂ ಮೊದಲು ಅಲಿ ಆದಿಲ್‌ಶಾಹಿಯ ಆಳ್ವಿಕೆಯಲ್ಲಿ ಶಿರಾಜಿಯು ಪೇಶ್ವೆ ಹುದ್ದೆಯಲ್ಲಿ ಕಾರ್ಯನಿರ್ವಹಿಸಿದ್ದನು. ಪಂಡಿತ ಬ್ರಾಹ್ಮಣನನ್ನು ಮಹಾಲೇಖಪಾಲನಾಗಿ ನಿಯುಕ್ತಿಗೊಳಿಸಿದ.

ಇಖ್ಲಾಸಖಾನನು ಕ್ರಮೇಣ ಚಾಂದಬೀಬೀಯ ಹೃದಯದಲ್ಲಿ ಸ್ಥಾನ ಪಡೆದನು. ಆದರೆ, ಬಡವರನ್ನು ಸಂಶಯಾತ್ಮಕ ದೃಷ್ಟಿಯಿಂದ ನೋಡತೊಡಗಿದನು. ಕಿಶ್ವರಖಾನನಂತೆ ಇಖ್ಲಾಸಖಾನನು ಬಡವರ ಮೇಲೆ ದೌರ್ಜನ್ಯವೆಸಗತೊಡಗಿದನು. ಅನ್ಯರಾಜ್ಯದ ಸರದಾರರಿಂದ ತನ್ನ ಆಡಳಿತಕ್ಕೆ ತೊಂದರೆ ಉಂಟಾಗುವದೆಂಬ ಭ್ರಮೆಯಿಂದ, ಮೊತ್ತಮೊದಲು ಅಫಜಲ ಖಾನ ಶಿರಾಜಿ ಮತ್ತು ರಾಸೋ ಪಂಡಿತನನ್ನು ಕೊಲೆ ಮಾಡಿಸಿದನು. ಅನಂತರ, ಫತೇವುಲ್ಲಾ ಶಿರಾಜಿ, ಅಬೂಅಲ್ ಖಾಸಿಮ ಮತ್ತು ಶಾಹ ಮುರ್ತುಜಾಖಾನ ಅಂಜೂ ಮತ್ತಿತರರನ್ನು ಬಿಜಾಪುರದಿಂದ ಹೊರಗಟ್ಟಿದನು. ಆಮೇಲೆ ಹಮೀದಖಾನ ಮತ್ತು ದಿಲಾವರಖಾನರ ಸಹಾಯದಿಂದ ರಾಜ್ಯದ ಆಡಳಿತವನ್ನು ನಿರ್ವಹಿಸತೊಡಗಿದನು.

ಅಖ್ಲಾಸಖಾನನ ಬಂಧನ :

ಐನುಲ್‌ಮುಲ್ಕನನ್ನು ರಾಜಧಾನಿಗೆ ಕರೆದು ತರಲು ಇಖ್ಲಾಸಖಾನನು ರಾಜಾಜ್ಞೆಯನ್ನು ಕಳುಹಿಸಿದನು. ಬಾದಶಹನ ಆಜ್ಞೆಯಂತೆ ಐನುಲ್‌ಮುಲ್ಕನು ಬಿಜಾಪುರಕ್ಕೆ ಬಂದನು. ಇಖ್ಲಾಸಖಾನನು ತನ್ನ ಕೆಲವು ಅನುಯಾಯಿಗಳೊಡನೆ ಐನುಲ್‌ಮುಲ್ಕನನ್ನು ಸ್ವಾಗತಿಸಿದನು. ಇಖ್ಲಾಸಖಾನನೊಡನೆ ಕೇವಲ ಬೆರಳೆಣಿಕೆಯಷ್ಟು ಅನುಯಾಯಿಗಳಿರುವುದನ್ನರಿತ ಐನುಲ್‌ಮುಲ್ಕನು ಅವರೆಲ್ಲರನ್ನು ಬಂಧಿಸಿ, ಅವರ ಕಾಲುಗಳಿಗೆ ಬೇಡಿ ತೊಡಿಸಿ, ಬಾದಶಹನನ್ನು ಭೇಟಿಯಾಗಲು ಕೋಟೆಯೆಡೆಗೆ ಧಾವಿಸಿದನು. ಆತನು ಕೋಟೆಯ ದ್ವಾರವನ್ನು ತಲುಪುವಷ್ಟರಲ್ಲಿ, ದಸ್ತೂರಖಾನ ಠಾಣೇದಾರನು ಐನುಲ್‌ಮುಲ್ಕನೊಂದಿಗೆ ಒಳಸಂಚು ಮಾಡಿರುವ ಅಪರಾಧಕ್ಕಾಗಿ ಬಾದಶಹನ ಕೆಲವು ಸೇವಕರು ದಸ್ತೂರಖಾನನ ಕೊಲೆ ಮಾಡಿರುವ ಸಮಾಚಾರ ತಿಳಿಯಿತು.

ಬಿಡುಗಡೆ :

ಈ ಸಮಾಚಾರ ಕೇಳಿದ ಐನುಲ್‌ಮುಲ್ಕನು ವಿವಶನಾಗಿ, ತಾನು ಬಂಧಿಸಿ ತಂದ ಸರದಾರರತ್ತ ಗಮನ ಹರಿಸದೆ ತಕ್ಷಣ ತಿರುಗಿ ಹೊರಟನು. ಮಖ್‌ಸೂದಖಾನನೆಂಬ ಶಾಹೀ ಗುಲಾಮನು ಒಂದು ಚಿಕ್ಕ ಗುಂಪಿನೊಡನೆ ಇವರನ್ನು ಎದುರಿಸಿದನು. ಎದುರಾಳಿಗಳು ನಗರದಾಚೆ ಹೋಗುವಷ್ಟರಲ್ಲಿ, ಐನುಲ್‌ಮುಲ್ಕನು ಕಾಲಲ್ಲಿ ಬೇಡಿ ತೊಡಿಸಿದ ಇಖ್ಲಾಸಖಾನ ಮತ್ತು ಆತನ ಸಂಗಡಿಗರು ಕುಳಿತಿರುವ ಆನೆಗಳು ಮಖ್‌ಸೂದಖಾನನಿಗೆ ಕಂಡವು. ಮಖ್‌ಸೂದ ಖಾನನು ಆನೆಗಳನ್ನು ತಡೆದು, ಬಂಧಿಸಿದ ಖೈದಿಗಳನ್ನು ಆನೆಯಿಂದ ಕೆಳಗಿಳಿಸಿ, ಅವರ ಕಾಲಲ್ಲಿರುವ ಬೇಡಿಗಳನ್ನು ಕತ್ತರಿಸಿದನು. ಈ ಜನರು ಬಾದಶಹನ ಸೇವೆಗೆ ಪುನ: ಹಾಜರಾದರು ಹಾಗೂ ಐನುಲ್‌ಮುಲ್ಕನು ತನ್ನ ಜಾಗೀರಿನತ್ತ ಹೊರಟುಹೋದನು.

ಅರಾಜಕತೆ :

ಎರಡನೆಯ ಬಾರಿಗೆ ಪುನಃ ಅಧಿಕಾರಕ್ಕೆ ಬಂದ ಕೆಲವು ಸರದಾರರನ್ನು ಐನುಲ್‌ಮುಲ್ಕನು ತನ್ನೊಡನೆ ಸೇರಿಸಿಕೊಂಡು ಹಬಶಿ ಜನಾಂಗದವರಿಗೆ ವಿಧೇಯತೆ ತೋರದಿರಲು ಸೂಚಿಸಿದನು. ಇದರಿಂದಾಗಿ ರಾಜಧಾನಿಯಲ್ಲಿ ಗಲಭೆ ಹರಡತೊಡಗಿತು. ಇಂತಹ ಸಂದರ್ಭವನ್ನು ಕಾಯುತ್ತಿದ್ದ ನಿಜಾಮಶಾಹಿ ಆಡಳಿತವು ಈ ಅರಾಜಕತೆಯ ಸಂಪೂರ್ಣ ಪ್ರಯೋಜನವನ್ನು ಪಡೆದು, ಆದಿಲ್‌ಶಾಹಿ ರಾಜ್ಯದ ವಿಜಯದ ಕನಸು ಕಾಣತೊಡಗಿತು.

ಸೋಲಿನ ರುಚಿ ಕಂಡ ಬಹಜದ್ ಮಲಿಕ್‌ನು ಆದಿಲ್‌ಶಾಹಿ ಇಲಾಖೆಯಿಂದ ತುಸು ದೂರದಲ್ಲಿ ನೆಲೆಸಿದ್ದನು. ಆದಿಲ್‌ಶಾಹಿ ರಾಜ್ಯದಲ್ಲಿ ನಡೆಯುತ್ತಿರುವ ಅರಾಜಕತೆಯ ವಾರ್ತೆ ಕೇಳಿ ಬೆರಾರದ ಅಮೀರ ಮುರ್ತುಜಾಖಾನನ ಜೊತೆಗೂಡಿಸಿಕೊಂಡು ಯುದ್ಧ ಮಾಡಲು ಬಂದನು. ಹಿಜರಿಸನ್ ೯೮೯ರಲ್ಲಿ ತೆಲಂಗದ ಬಾದಶಹ ಇಬ್ರಾಹಿಮ ಖುತುಬಶಾಹನು ಇಹಲೋಕವನ್ನು ತ್ಯಜಿಸಿದನು. ಆತನ ಪುತ್ರ ಮಹಮದ್ ಖಲಿ ಶಾಹ, ಕಿರಿಯ ವಯಸ್ಸಿನಲ್ಲಿಯೇ ಬಾದಶಹನ ಉತ್ತರಾಧಿಕಾರಿಯಾದನು. ತನ್ನ ಸರದಾರರ ಸಲಹೆಯಂತೆ ಮಹಮದ್ ಖಲಿ ಖುತುಬ್ ಶಾಹನು ನಿಜಾಮಶಾಹಿಗಳೊಡನೆ ಸೇರಿಕೊಂಡು ಇಬ್ರಾಹಿಮ ಆದಿಲ್‌ಶಾಹಿ ಸಾನಿಯ ಆಧಿಪತ್ಯದಲ್ಲಿ ಬರುವ ಪರ್ಗಣೆ(ಪ್ರದೇಶ)ಗಳ ವಶಪಡಿಸಿಕೊಳ್ಳುವ ಸಂಕಲ್ಪ ಮಾಡಿದನು.

ನಿಜಾಮಶಾಹಿ ವಶದಲ್ಲಿ ಶಾಹದುರ್ಗ ಕಿಲ್ಲೆ :

ಬಹಜದ್ ಮಲಿಕ ಮತ್ತು ಸಯ್ಯದ್ ಮುರ್ತುಜಾ ಅವರ ಸಹಕಾರದಿಂದ ಮುರ್ತುಜಾ ನಿಜಾಮನು ಮೊತ್ತಮೊದಲು ಶಾಹದುರ್ಗ ಕೋಟೆಯನ್ನು

ಗೆದ್ದುಕೊಂಡನು. ಅನಂತರ ಗುಲಬರ್ಗಾ ಕೋಟೆಯನ್ನು ವಶಪಡಿಸಿಕೊಳ್ಳುವದು ಆತನ ಗುರಿಯಾಗಿತ್ತು. ಬಾದಶಹನು ಶೀಘ್ರವಾಗಿ ಗೋಲ್ಕೊಂಡಾ ಮಾರ್ಗದಿಂದ ಶಾಹದುರ್ಗ ತಲುಪಿದನು. ಬಹಜದ್ ಮಲಿಕ್ ಮತ್ತು ಸಯ್ಯದ್ ಮುರ್ತುಜಾ ಶಾಹದುರ್ಗ ಕೋಟೆಯ ಮುತ್ತಿಗೆ ಹಾಕಿದ್ದರು. ವೈರಿಗಳು ಕೋಟೆಯ ಮೂರು ಭಾಗದಲ್ಲಿ ತೋಪು ಮತ್ತು ಸಿಡಿಮದ್ದುಗಳನ್ನು ಸಿಡಿಸತೊಡಗಿದರು. ಬೆಳಗಿನಿಂದ ಸಂಜೆಯವರೆಗೆ ಯುದ್ಧ ನಡೆಯಿತು. ಕೋಟೆಯ ಮೇಲೆ ವಿಜಯ ಸಾಧಿಸುವ ಪ್ರಯತ್ನ ಅವ್ಯಾಹತವಾಗಿ ನಡೆದಿತ್ತು.

ಕಿಲ್ಲೆಯ ಠಾಣೇದಾರ ಮಹಮದ್ ಆಖಾ, ವೈರಿಗಳನ್ನು ತಡೆಯಲು ಎಲ್ಲ ರೀತಿಯಲ್ಲಿ ಪ್ರಯತ್ನಿಸಿ, ಶೌರ್ಯ ಪರಾಕ್ರಮಕ್ಕೊಂದು ಪುರಾವೆ ಒದಗಿಸಿದನು. ಬಿಜಾಪುರದಲ್ಲಿ ಅರಾಜಕತೆಯ ಅಲೆಯು ಹರಡಿ, ಅಲ್ಲಿಂದ ಯಾವುದೇ ರೀತಿಯ ಸಹಾಯ ಯಾಚಿಸಿದರೂ ನೆರವು ಸಿಗುವುದು ಕಷ್ಟ ಎಂಬುದು ಮಹಮದ್ ಆಖಾನಿಗೆ ತಿಳಿದಿತ್ತು. ಆತನು ಧೈರ್ಯದಿಂದ ಶತ್ರುಗಳನ್ನು ಎದುರಿಸಿ, ಹಿಮ್ಮೆಟ್ಟಿಸತೊಡಗಿದನು. ಪ್ರತಿದಿನ ಪ್ರಬಲ ಸಿಡಿಮದ್ದುಗಳನ್ನು ಸಿಡಿಸಿ, ನಿಜಾಮಶಾಹಿ ಮತ್ತು ಖುತುಬಶಾಹಿ ಸೈನ್ಯದ ಸೈನಿಕರನ್ನು ಕೊಲ್ಲುತ್ತಿದ್ದನು.

ಖುತುಬಶಾಹ ಮತ್ತು ನಿಜಾಮಶಾಹ ಇಬ್ಬರೂ ಮಹಮದ್ ಆಖಾನನ್ನು ವಿವಿಧ ರೀತಿಯಲ್ಲಿ ಪುಸಲಾಯಿಸುವ ಪ್ರಯತ್ನ ಮಾಡಿದರು. ತನ್ನ ಅರಸನಿಗೆ ಕೃತಜ್ಞನಾಗಿದ್ದ ಮಹಮದ್ ಆಖಾ, “ನನ್ನ ಮೇಲೆ ವಿಶ್ವಾಸವಿಟ್ಟು ದೊರೆಗಳು ಈ ಕೋಟೆಯ ಮೇಲ್ವಿಚಾರಣೆಯ ಕೆಲಸ ನನಗೆ ಒಪ್ಪಿಸಿದ್ದಾರೆ. ದೊರೆಯ ಆಳ್ವಿಕೆಯಲ್ಲಿ ನಾನು ಸಂತೋಷವಾಗಿದ್ದೇನೆ. ಇಂದು ನಾನು ಕೆಟ್ಟ ಯೋಚನೆಯಿಂದ ಈ ಕೋಟೆಯನ್ನು ನಿಮ್ಮ ವಶಕ್ಕೆ ಕೊಟ್ಟರೆ, ನಾಳೆ ದೇವರಿಗೆ ಮತ್ತು ನನ್ನ ಮನಸ್ಸಾಕ್ಷಿಗೆ ಉತ್ತರಿಸಬೇಕಾದ ಸಂದರ್ಭದಲ್ಲಿ ಅವಮಾನವಾದರೆ ನನಗೆ ಸಹಿಸಲಾಗದು. ನನ್ನಿಂದ ಇಂತಹ ನಿರೀಕ್ಷೆ ಮಾಡಬೇಡಿ, ನನ್ನ ದೊರೆಯ ಪ್ರಾಮಾಣಿಕ ಸೇವಕನೆಂದು ನನ್ನನ್ನು ಪರಿಗಣಿಸಿ” ಎಂದು ಉತ್ತರಿಸಿದನು.

ಠಾಣೇದಾರನ ಅಚಲ ಸ್ವಭಾವದಿಂದ ಖುತುಬಶಾಹನು ಗೊಂದಲಕ್ಕೊಳಗಾದನು. ಮುತ್ತಿಗೆ ಹಾಕಿ ನಾಲ್ಕು ತಿಂಗಳ ಅವಧಿ ಕಳೆದಿತ್ತು. ಮುತ್ತಿಗೆಯಿಂದ ಯಾವ ಪರಿಣಾಮವೂ ಆಗದುದರಿಂದ, ಈ ಸಲಹೆಯನ್ನು ನೀಡಿದುದಕ್ಕೆ ಮಿರ್ಜಾ ಅಸಫಖಾನಿಯನ್ನು ಬಾದಶಹನು ನಿಂದಿಸತೊಡಗಿದನು. ಬಹಜದ್ ಮಲಿಕ್ ಮತ್ತು ಸಯ್ಯದ್ ಮುರ್ತುಜಾರಿಗೆ ಈ ವಿಷಯ ತಿಳಿದಾಗ, ಮುತ್ತಿಗೆಯ ಕಾಲ ದೀರ್ಘವಾಗುತ್ತಿರುವುದರಿಂದ ಭಯಪಟ್ಟು, ಖುತುಬಶಾಹನೊಡನೆ ಧ್ವನಿಗೂಡಿಸಿ, “ನಾವು ಮುತ್ತಿಗೆ ಹಿಂದೆಗೆದುಕೊಂಡು ಇಲ್ಲಿಂದ ಹಿಂದೆ ಸರಿಯುವದು ಉಚಿತ. ಈಗ ಬಿಜಾಪುರದಲ್ಲಿ ಅರಾಜಕತೆಯ

ವಾತಾವರಣವಿದೆ. ನಾವಲ್ಲಿ ತಲುಪಿ ಗಲಭೆ ಮಾಡಿದರೆ ಅದರಿಂದ ಬಹಳಷ್ಟು ಪ್ರಯೋಜನವಾಗಬಹುದು." ಎಂದು ಹೇಳಿದನು.

ಬಿಜಾಪುರದ ಮೇಲೆ ಶತ್ರುಗಳ ಆಕ್ರಮಣ :

ಕುಲಿ ಕುತುಬಶಾಹನಂತೂ ಅಲ್ಲಿಂದ ದೂರ ಸರಿಯುವುದಕ್ಕೆ ನೆಪ ಹುಡುಕುತ್ತಿದ್ದನು. ಇನ್ನಿತರರು ಅದೇ ವಿಚಾರದಲ್ಲಿರುವುದನ್ನು ಅರಿತ ಮೇಲೆ, ಮಾರನೆಯ ದಿನವೇ ಎಲ್ಲರೂ ಶಾಹದುರ್ಗದಿಂದ ಬಿಜಾಪುರದೆಡೆಗೆ ತೆರಳಿದರು. ಅವರು ನಲವತ್ತು ಸಾವಿರ ಸಿಪಾಯಿಗಳ ಪ್ರಬಲ ಸೈನ್ಯದೊಂದಿಗೆ ಬಿಜಾಪುರ ತಲುಪಿ, ನಗರಕ್ಕೆ ಮುತ್ತಿಗೆ ಹಾಕಿದರು. ಆಗ ಕೇವಲ ಎರಡು ಮೂರು ಸಾವಿರ ಕುದುರೆ ಸವಾರರು ಮಾತ್ರ ರಾಜಧಾನಿಯಲ್ಲಿದ್ದರು. ಶತ್ರುಗಳು ನಗರದ ಹೊರವಲಯದಲ್ಲಿ ಡೇರೆ ಹಾಕಿ, ನಗರದ ಮೇಲೆ ವಿಜಯ ಸಾಧಿಸುವ ಪ್ರಯತ್ನ ಆರಂಭಿಸಿದರು.

ಯುದ್ಧದ ಸಮಾಚಾರ :

ಖುತುಬ್ ಶಾಹಿ ಮತ್ತು ನಿಜಾಮಶಾಹಿ ಸೈನ್ಯದೊಂದಿಗೆ ಆದಿಲ್‌ಶಾಹಿ ಸೈನ್ಯದ ಯುದ್ಧ ಆರಂಭವಾಯಿತು. ಹಬಶಿಗಳು ಕೋಟೆಯಲ್ಲಿದ್ದುಕೊಂಡು ಕೋಟೆಯನ್ನು ಬಲಪಡಿಸಿದರು. ಶತ್ರುಗಳ ಸಂಖ್ಯೆ ಅಧಿಕವಿದ್ದುದರಿಂದ ವಿಜಯದ ತಕ್ಕಡಿಯಲ್ಲಿ ಅವರ ತೂಕ ಹೆಚ್ಚುತ್ತ ಹೋಯಿತು. ಇದೇ ಸಮಯದಲ್ಲಿ ಮಳೆಯು ಸುರಿಯತೊಡಗಿ, ಇಪ್ಪತ್ತು ಗಜ ಕೋಟೆಯ ಗೋಡೆಯು ಬಿದ್ದು ಹೋಯಿತು. ಐನುಲ್‌ಮುಲ್ಕ ಕನ್ಹಾನಿ ಹಾಗೂ ಆಂಕಸ್‌ಖಾನರಿಗೆ ಬಾದಶಹನು ರಾಯಸ ಕಳುಹಿಸಿ, ಕರೆಯಿಸಿದನು. ಇವರಿಬ್ಬರೂ ಆರು ಸಾವಿರ ಕುದುರೆ ಸವಾರರೊಂದಿಗೆ ಬಿಜಾಪುರ ತಲುಪಿ, ಅಲ್ಲಾಪುರ ದ್ವಾರದ ಬಳಿ ಬೀಡುಬಿಟ್ಟರು.

ಸಯ್ಯದ ಮುರ್ತುಜಾನೊಡನೆ ಐನುಲ್‌ಮುಲ್ಕನ ಹೊಂದಾಣಿಕೆ :

ಐನುಲ್‌ಮುಲ್ಕ ಮತ್ತು ಆಂಕಸ್‌ಖಾನರಿಗೆ ಹಬಶಿ ಸರದಾರರಿಂದ ಗಂಡಾಂತರವಿದ್ದುದರಿಂದ, ಅವರು ಸಯ್ಯದ ಮುರ್ತುಜಾನೊಂದಿಗೆ ಶಾಮೀಲಾದರು. ಕುಲಿ ಕುತುಬ್‌ಶಾಹ ಮತ್ತು ಬಹಜದುಲ್ ಮುಲ್ಕ ಇವರು ಮುಂಜಾವಿನಲ್ಲಿ ಕೋಟೆಯ ಮೇಲೆ ದಾಳಿ ಮಾಡಬಯಸಿದರು. ಆದರೆ, ಬಹಜದುಲ್ ಮುಲ್ಕನ ಬಗೆಗಿನ ಅಪನಂಬಿಕೆಯಿಂದ ಸಯ್ಯದ ಮುರ್ತುಜಾ ಹಾಗೆ ಮಾಡಲು ಬಿಡಲಿಲ್ಲ. ಆದಿಲ್‌ಶಾಹಿಗಳು ಹೀಗೆ ದೊರೆತ ಸಮಯದ ಅವಕಾಶ ಪಡೆದು, ಕೋಟೆಯ ಒಡೆದ ಭಾಗವನ್ನು ಸರಿಪಡಿಸಿ ಭದ್ರಪಡಿಸಿದರು. ರಾಜ್ಯದ ಕೆಲವು ಸರದಾರರಿಗೆ ಆಸ್ಥಾನದ ಹಬಶಿ ಸದಸ್ಯರ ಬಗ್ಗೆ ಅಸಂತುಷ್ಟತೆ ಇದ್ದು, ಅವರ ಸಲಹೆಯಲ್ಲಿ ವಿಶ್ವಾಸವಿಡುತ್ತಿರಲಿಲ್ಲ.

ರಾಜ್ಯಾಡಳಿತದಿಂದ ಹಬಶಿಗಳನ್ನು ಬೇರ್ಪಡಿಸುವುದು :

ಹಬಶಿಗಳಿಗೆ ಪ್ರಸ್ತುತ ಪರಿಸ್ಥಿತಿಯ ಅರಿವಾಗಿ, ಚಾಂದಬೀಬೀಗೆ, "ನಾವು ಗುಲಾಮರಿರುವುದರಿಂದ, ಆಸ್ಥಾನದ ಸದಸ್ಯರು, ದರಬಾರಿಗಳು ಮತ್ತು ಶಿಷ್ಟ ನಾಗರಿಕರು ನಮ್ಮೊಂದಿಗೆ ಅಪನಂಬಿಕೆಯಿಂದ ನಡೆದುಕೊಳ್ಳುತ್ತಾರೆ. ಅವರು ನಮ್ಮ ಆಡಳಿತ ಒಪ್ಪಿಕೊಳ್ಳುವುದಿಲ್ಲ. ಇಂತಹ ಸಂದರ್ಭಕ್ಕಾಗಿ ವೈರಿಗಳು ಹೊಂಚು ಹಾಕುತ್ತಿದ್ದಾರೆ. ಆದಿಲ್‌ಶಾಹಿ ವಂಶಜನಾದ ಹಾಗೂ ಸದ್ಗುಣ ಸಂಪನ್ನನಾದ ಸರದಾರನೊಬ್ಬನಿಗೆ ಆಡಳಿತವನ್ನು ವಹಿಸಿಕೊಟ್ಟರೆ, ಆದಿಲ್‌ಶಾಹಿ ವಂಶಕ್ಕೆ ಒಳಿತಾಗುವುದು ಮತ್ತು ಪರಸ್ಪರಲ್ಲಿರುವ ಕಲಹ ಮತ್ತು ಗಲಭೆಗಳು ತಪ್ಪುತ್ತವೆ" ಎಂದು ಅವರು ಹೇಳಿದರು.

ಶಾಹ ಅಬುಲ್ ಹಸನ್‌ನಿಗೆ ಪ್ರಧಾನಿಯಾಗಿ ನೇಮಕ :

ಹಬಶಿಗಳ ಆಭಿಪ್ರಾಯವನ್ನು ಅರಿತುಕೊಂಡ ಚಾಂದಬೀಬೀ, ಅವರ ಸಲಹೆಯ ಮೇರೆಗೆ, ಶಾಹ ತಾಹೀರನ ಮಗ ಶಾಹ ಅಬುಲ್ ಹಸನ್‌ನನ್ನು ರಾಜ್ಯದ ಆಡಳಿತವನ್ನು ನಿರ್ವಹಿಸುವ ಪ್ರಧಾನಿಯಾಗಿ ನಿಯುಕ್ತಿ ಮಾಡಿದಳು. ಸಯ್ಯದ ಅಬುಲ್ ಹಸನ್‌ನು ಅಧಿಕಾರವನ್ನು ವಹಿಸಿಕೊಂಡ ತಕ್ಷಣ, ವೈರಿಗಳನ್ನು ಸದೆಬಡೆಯುವ ಉಪಾಯ ಮಾಡತೊಡಗಿದನು. ಮೊತ್ತಮೊದಲು ಬರ್‌ದ ಮುಖಂಡರಿಗೆ ಬಿಜಾಪುರಕ್ಕೆ ಬರಲು ಆಜ್ಞೆ ಮಾಡಿದನು.

ಸಯ್ಯದ ಮುರ್ತುಜಾನಿಗೆ ಸಯ್ಯದ ಅಬುಲ್ ಹಸನ್‌ನಿಂದ ಪತ್ರ :

ಶಾಹ ಅಬುಲ್ ಹಸನ್‌ನ ಪರಿವಾರದವರ ಬಗ್ಗೆ ಸಯ್ಯದ ಮುರ್ತುಜಾನಿಗೆ ಶ್ರದ್ಧೆ ವಿಶ್ವಾಸಗಳಿದ್ದವು. ಅಬುಲ್ ಹಸನ್‌ನು ಈ ಸಂಬಂಧವನ್ನು ನೆನಪಿಸಿಕೊಂಡು ಸಯ್ಯದ ಮುರ್ತುಜಾನಿಗೆ ಈ ವಿಷಯದ ಬಗ್ಗೆ ಪ್ರಸ್ತಾಪಿಸಿ, "ಇಬ್ರಾಹಿಮ ಆದಿಲ್‌ಶಾಹ ಸಾನಿ ತನ್ನ ಸಾಮರ್ಥ್ಯ, ಶಕ್ತಿ ಮತ್ತು ಚತುರತೆಯಲ್ಲಿ ಶತ್ರುಗಳನ್ನು ಮೀರಿಸಬಲ್ಲನು. ಆತನನ್ನು ಎದುರಿಸುವುದು ಸುಲಭವಲ್ಲ. ಬಾದಶಹನ ಸೈನ್ಯದ ಸಂಖ್ಯೆಯನ್ನು ನೋಡಿ, ನಮ್ಮ ಸಾಮರ್ಥ್ಯದ ತಪ್ಪು ಕಲ್ಪನೆ ಮಾಡದಿರಲು ಖುತುಬ್ ಶಾಹ ಮತ್ತು ಬಹಜದ್ ಮಲಿಕರಿಗೆ ತಿಳಿಸು. ಅಲ್ಪ ಸಮಯದಲ್ಲಿಯೇ ಲೆಕ್ಕವಿಲ್ಲದಷ್ಟು ಸೈನ್ಯವು ರಾಜಧಾನಿಯ ಸುತ್ತಲೂ ಬಂದು ಸೇರುತ್ತದೆ" ಎಂದು ಪತ್ರ ಬರೆದನು.

ಅಬುಲ್ ಹಸನ್‌ನು ಪತ್ರವನ್ನು ಮುಂದುವರೆಸಿ, "ಅಲಿ ಆದಿಲಶಾಹಿಯ ಆಳ್ವಿಕೆಯಲ್ಲಿ ರಾಜಧಾನಿಗೆ ಬರಲು ಭಯಪಡುತ್ತಿದ್ದ ಬರ್‌ದ ಸರದಾರರು, ವಿಜಯನಗರಕ್ಕೆ ಹೊರಟುಹೋಗಿದ್ದರು. ಅವರಿಗೆ ರಾಜಾಜ್ಞೆಯನ್ನು ಕಳುಹಿಸಲಾಗಿದ್ದು, ಅವರು ಇಷ್ಟರಲ್ಲಿಯೇ ಬಿಜಾಪುರಕ್ಕೆ ಬರುವವರಿದ್ದಾರೆ. ಈ ಸಂದರ್ಭದಲ್ಲಿ ನಮ್ಮನ್ನು ಎದುರಿಸಿ ಯುದ್ಧ ಮಾಡುವುದಷ್ಟೇ ಅಲ್ಲ, ಇಲ್ಲಿಂದ ಪರಾರಿಯಾಗುವುದೂ ನಿಮಗೆ ದುಸ್ತರವಾಗುತ್ತದೆ" ಎಂದು ಬರೆದನು.

ಆದಿಲಶಾಹಿಗಳ ಬಗ್ಗೆ ಸಯ್ಯದ ಮುರ್ತುಜಾನ ಒಲವು :

ಸಯ್ಯದ ಮುರ್ತುಜಾಗೆ ತನ್ನ ಸಂಗಡಿಗರ ಬಗ್ಗೆ ವೈಮನಸ್ಸಿನ ಭಾವನೆ ಇತ್ತು. ಖಲಿ ಖುತುಬ್ ಶಾಹ ಮತ್ತು ಬಹಜದ್ ಮಲಿಕ್ ಇವರು ತಮ್ಮ ಉದ್ದೇಶದಲ್ಲಿ ಸಾಫಲ್ಯತೆ ಪಡೆಯದಿರಲಿ ಎಂದು ಅಂತರಂಗದಲ್ಲಿ ಇಚ್ಛಿಸುತ್ತಿದ್ದನು. ಶಾಹ ಅಬುಲ್ ಹಸನ್‌ನ ಪತ್ರ ತಲುಪಿದ ನಂತರ, ಸಂಪೂರ್ಣವಾಗಿ ಆದಿಲಶಾಹಿಗಳ ಪರ ವಹಿಸತೊಡಗಿದನು, ಹಾಗೂ ಈ ಸಂಬಂಧ ಕಾರ್ಯಾಚರಣೆಯನ್ನು ಆರಂಭಿಸಿದನು. ಎಲ್ಲಕ್ಕಿಂತ ಮೊದಲು, ಐನುಲ್‌ಮುಲ್ಕ ಹಾಗೂ ಆಂಕಸ್‌ಖಾನರಿಗೆ ವಿಷಯವನ್ನು ವಿವರವಾಗಿ ತಿಳಿಸಿದನು ಹಾಗೂ ಅವರಿಗೆ, "ಸಮಾನರಲ್ಲಿ ಮನಸ್ತಾಪ ಸಲ್ಲದು, ಒಡೆಯನಿಗೆ ಕೃತಘ್ನನಾಗಿರುವುದು ಸಜ್ಜನರ ಕೆಲಸವಲ್ಲ, ಬಾದಶಹನ ಶತ್ರುಗಳೊಡನೆ ಸ್ನೇಹ ಬೆಳೆಸಿಕೊಳ್ಳುವುದು ನಿಮಗೆ ಶೋಭೆ ತರುವುದಿಲ್ಲ. ಆ ಸಮಯ ಬಿಜಾಪುರದಲ್ಲಿ ಹಬಶಿಗಳ ಆಡಳಿತವಿರಲಿಲ್ಲ. ಈಗ ಶಾಹ ಅಬುಲ್ ಹಸನ್‌ನು ಆಡಳಿತದ ಮುಖ್ಯಸ್ಥನಾಗಿದ್ದಾನೆ. ಆತನ ಮೇಲೆ ಭರವಸೆ ಇಟ್ಟು ಬಾದಶಹನಿಗೆ ವಿಧೇಯತೆ ತೋರಿಸುವುದು ಉಚಿತ" ಎಂದು ಹೇಳಿದನು.

ಆದಿಲ್‌ಶಾಹಿ ಅರಸೊತ್ತಿಗೆಯ ಭದ್ರತೆ :

ಐನುಲ್‌ಮುಲ್ಕ ಹಾಗೂ ಆಂಕಸ್‌ಖಾನರು ಈ ಸಲಹೆಯು ಸಮಂಜಸವಾದುದೆಂದು ಅರಿತುಕೊಂಡರು. ಅವರು ರಾತ್ರಿಯ ಅಂಧಕಾರದಲ್ಲಿ, ಸದ್ದುಗದ್ದಲವಿಲ್ಲದೆ ತಮ್ಮ ಸೈನ್ಯವನ್ನು ಮೊದಲು ತಂಗಿದ್ದ ಅಲ್ಲಾಪುರ ದ್ವಾರದ ಬಳಿ ಸಾಗಿಸಿದರು. ಅವರು ತುಂಬು ಹೃದಯದಿಂದ ಬಾದಶಾಹನಿಗೆ ತಮ್ಮ ವಿಧೇಯತೆ ಮತ್ತು ಆಜ್ಞಾಪಾಲನೆಯನ್ನು ವ್ಯಕ್ತಪಡಿಸಿದರು. ಈ ವಿಷಯ ತಿಳಿದ ಇತರ ಸರದಾರರು ಮತ್ತು ಸೇನಾನಿಗಳು ಬಿಜಾಪುರದಲ್ಲಿ ಒಟ್ಟುಗೂಡತೊಡಗಿದರು. ಬರ್‌ದ ಸರದಾರರು ಗುಂಪು ಗುಂಪಾಗಿ ಬಿಜಾಪುರಕ್ಕೆ ಬರತೊಡಗಿದರು. ಶಾಹ ಅಬುಲ್ ಹಸನ್‌ನ ಉತ್ತಮ ಶೈಲಿಯ ಆಳ್ವಿಕೆ ಮತ್ತು ಚಾತುರ್ಯದಿಂದ ಅಲ್ಪಾವಧಿಯಲ್ಲಿಯೇ ಬಿಜಾಪುರದಲ್ಲಿ ಇಪ್ಪತ್ತು ಸಾವಿರ ಸವಾರರು ಒಟ್ಟು ಸೇರಿದರು. ಅರಸೊತ್ತಿಗೆಯ ಬುನಾದಿಯು ಭದ್ರವಾಯಿತು.

ಶತ್ರುವಿನ ಹಿಮ್ಮೆಟ್ಟುವಿಕೆ :

ರಾಜಾಜ್ಞೆಯಂತೆ, ಎಲ್ಲರಿಗಿಂತ ಮೊದಲು ಬರ್‌ದ ಸರದಾರರು ವೈರಿಗಳನ್ನು ಸದೆ ಬಡೆಯಲು ಆರಂಭಿಸಿದರು. ಅವರು ತಮ್ಮ ಪರಾಕ್ರಮವನ್ನು ಪ್ರದರ್ಶನ ಮಾಡುತ್ತ ವೈರಿಗಳ ಸರ್ವನಾಶ ಮಾಡಿದರು. ವೈರಿಗಳ ಸೇನೆಯಲ್ಲಿ ಕ್ಷಾಮ ಉಂಟಾಗಿ ಶಾಹದುರ್ಗ ಬಿಟ್ಟುಹೋದ ರೀತಿಯಲ್ಲಿಯೇ, ಬಿಜಾಪುರಕ್ಕೆ ಹಾಕಿದ ಮುತ್ತಿಗೆಯನ್ನು ಹಿಂತೆಗೆದುಕೊಂಡರು. ಇಬ್ರಾಹಿಮ ಆದಿಲ್‌ಶಾಹನು ಸಂಧಾನಕ್ಕೆ ಒಪ್ಪಲಿಲ್ಲ. ಈ ಪರಿಸ್ಥಿತಿಯಲ್ಲಿ ಶತ್ರುಗಳು ಹಿಮ್ಮೆಟ್ಟುವ ವಿಚಾರ ಮಾಡಿದರು.

ಖುತುಬ್ ಶಾಹನು ತನ್ನ ಸೇನೆಯೊಂದಿಗೆ ಹುಸ್ನಾಬಾದ ಗುಲಬರ್ಗಾದತ್ತ ಹೊರಟನು. ಏಕೆಂದರೆ, ಸೋತರೂ ಅಲ್ಲಿ ತಮ್ಮ ವಿಜಯದ ಡಂಗುರ ಸಾರಬಹುದೆಂದುಕೊಂಡರು. ಬಹಜದ್ ಮಲಿಕ್ ಹಾಗೂ ಸಯ್ಯದ್ ಮುರ್ತುಜಾ ಇವರಿಬ್ಬರು ಪುನಃ ಶಾಹದುರ್ಗದತ್ತ ತೆರಳಿದರು. ಶಾಹದುರ್ಗವನ್ನು ನಿಜಾಮಶಾಹಿ ಅರಸೊತ್ತಿಗೆಯಲ್ಲಿ ಸೇರ್ಪಡೆ ಮಾಡಿಕೊಳ್ಳುವ ವಿಚಾರ ಮಾಡಿದರು. ಆದರೆ, ಶಾಹದುರ್ಗಕ್ಕೆ ಹೋಗುವ ಹಾಗೂ ಅಲ್ಲಿ ತಂಗುವ ಅದೃಷ್ಟ ಅವರಿಗಿರಲಿಲ್ಲ, ಅವರು ಕಲ್ಹರ ಹಾಗೂ ಮಿರಜದ ಮಾರ್ಗವಾಗಿ ಹೊರಟು, ದಾರಿಯಲ್ಲಿ ಕಂಡ ಸಮೃದ್ಧತೆಯನ್ನು ಹಾಳುಗೆಡುವುತ್ತ, ನಾಶಮಾಡುತ್ತ ಅಹಮದ್‌ನಗರಕ್ಕೆ ಹೊರಟುಹೋದರು.

ಖುತುಬ್‌ಶಾಹನು ಮುಂದೆ ಸಾಗುತ್ತಿರುವಾಗ ಮಾರ್ಗದಲ್ಲಿ ಶಾಹ ಸಯ್ಯದ ಜನೀಲ್ ಅಸ್ತರಾಬಾದಿ ಎಂಬ ಸರದಾರನಿಗೆ ಮುಸ್ತಫಾಖಾನನ ಹೆಸರಿನ ಬಿರುದು ನೀಡಿ, ಇಬ್ರಾಹಿಮ ಆದಿಲ್‌ಶಾಹಿಯ ರಾಜ್ಯದ ಒಂದು ಭಾಗವನ್ನು ಜಯಿಸಿ ಬರಲು ಕಳುಹಿಸಿದನು. ತದನಂತರ, ಖುತುಬಶಾಹನು ಗೊಲ್ಕೊಂಡಾಕ್ಕೆ ಮರಳಿದನು. ಆ ಸಮಯಕ್ಕೆ ಸರಿಯಾಗಿ, ಇಬ್ರಾಹಿಮ ಆದಿಲ್ ಶಾಹನು ಗೊಲ್ಕೊಂಡಾಕ್ಕೆ ಬಂದನು. ಇಬ್ರಾಹಿಮ ಆದಿಲ್‌ಶಾಹನಿಗೆ ಪರಿಸ್ಥಿತಿಯ ಅರಿವಾದಾಗ, ಅಖ್ಲಾಸಖಾನನ ಸಲಹೆಯಂತೆ, ಪ್ರಬಲ ಸೈನ್ಯದೊಂದಿಗೆ ದಿಲಾವರಖಾನ ಹಬಶಿಯನ್ನು ವೈರಿಗಳು ಬಿಡಾರ ಹೂಡಿರುವ ಗುಲಬರ್ಗಾದತ್ತ ಕಳುಹಿಸಿಕೊಟ್ಟನು.

ಖುತುಬಶಾಹಿಗಳ ಪರಾಭವ :

ದಿಲಾವರಖಾನನು ಅತಿವೇಗವಾಗಿ ಪಯಣಿಸುತ್ತ ಶತ್ರುಗಳನ್ನು ಸಮೀಪಿಸಿದನು. ಶತ್ರುಗಳ ವಿರುದ್ಧ ತನ್ನ ಸೈನಿಕರನ್ನು ಹುರಿದುಂಬಿಸುತ್ತ ಯುದ್ಧದಲ್ಲಿ ವಿಜೃಂಭಿಸತೊಡಗಿದನು. ಉಭಯತರಲ್ಲಿ ತಲವಾರಗಳು ಮಿಂಚಿನಂತೆ ಝಳಪಿಸತೊಡಗಿದವು. ಆದಿಲ್‌ಶಾಹಿ ಸೈನ್ಯವು ಯುದ್ಧದಲ್ಲಿ ಶೌರ್ಯಸಾಹಸಗಳನ್ನು ಪ್ರದರ್ಶಿಸಿತು. ಖುತುಬಶಾಹಿ ಸೈನಿಕರು ಭಯಗ್ರಸ್ತರಾಗಿ ರಣಭೂಮಿಯನ್ನು ತೊರೆದು ಓಡಿಹೋದರು. ದಿಲಾವರಖಾನ ಹಬಶಿ ವಿಜಯಿಯಾದನು.

ಇಬ್ರಾಹಿಮ ಆದಿಲ್ ಶಾಹನ ಅದೃಷ್ಟ :

ಈ ಯುದ್ಧದಲ್ಲಿ ದಿಲಾವರಖಾನನು ಅಪಾರ ಸಂಪತ್ತನ್ನು ಕೊಳ್ಳೆ ಹೊಡೆದನು. ಖುತುಬಶಾಹಿಗಳ ಒಂದುನೂರಾ ಐದು ದೊಡ್ಡ ಆನೆಗಳು ನಿಜಾಮಶಾಹಿಗಳ ವಶವಾದವು. ಈ ಜಗತ್ತಿನಲ್ಲಿ ಸಂಭವಿಸುವ ವಿದ್ಯಮಾನಗಳನ್ನು ವೀಕ್ಷಿಸಿ ವಿಶ್ಲೇಷಿಸುವವರಿಗೆ ಇದೊಂದು ಅಭೇದ್ಯ ರಹಸ್ಯವಲ್ಲ. ಇಂತಹ ಘಟನೆಗಳು ಸಂಭವಿಸುವುದಕ್ಕೆ ಇಬ್ರಾಹಿಮ ಆದಿಲ್ ಶಾಹನ ಅದೃಷ್ಟವಲ್ಲದೆ ಮತ್ತಾವ ಕಾರಣವೂ ಅಲ್ಲ. ಶತ್ರುಗಳ ನಲವತ್ತು ಸಾವಿರ ನುರಿತ ಯೋಧರು ಕೋಟೆಗೆ ಮುತ್ತಿಗೆ ಹಾಕುವದು, ವೈರಿಗಳನ್ನೆದುರಿಸಲು

ನಗರದಲ್ಲಿ ಕೇವಲ ಎರಡು ಮೂರು ಸಾವಿರ ಸೈನಿಕರಿರುವದು, ವೈರಿಗಳು ಒಂದು ವರ್ಷದವರೆಗೆ ಮುತ್ತಿಗೆ ಹಾಕಿದರೂ ಸಫಲರಾಗದೇ ಹಿಮ್ಮೆಟ್ಟುವದು, ಖುತುಬಶಾಹಿಯ ಆನೆಗಳು ಮತ್ತಿತರ ಯುಧ್ಧಸಾಮಗ್ರಿಗಳು ಇಬ್ರಾಹಿಮ ಆದಿಲಶಾಹನ ಸ್ವತ್ತಾಗುವದು, ಇವೆಲ್ಲ ಬಾದಶಹನ ಅದೃಷ್ಟಬಲವಲ್ಲದೆ ಮತ್ತಿನ್ನೇನು?

ದಿಲಾವರಖಾನನ ಕನಸು :

ಈ ಯುಧ್ಧದಲ್ಲಿ ಸಫಲತೆ ಪಡೆದ ನಂತರ, ದಿಲಾವರಖಾನನ ಅಹಂಕಾರವು ಆಕಾಶದೆತ್ತರಕ್ಕೆ ಏರಿಬಿಟ್ಟಿತು. ಆತನು ಪ್ರಧಾನಿಯ ಹುದ್ದೆಗೆ ನಿಯುಕ್ತನಾಗುವ ಕನಸು ಕಾಣತೊಡಗಿದನು. ಅರಕ್ ಕೋಟೆಯ ಠಾಣೆಯ ಠಾಣೇದಾರನ ಬಳಿ ತನ್ನ ಇಚ್ಛೆಯನ್ನು ರಹಸ್ಯವಾಗಿ ಹೇಳಿಕೊಂಡನು. ಠಾಣೇದಾರನಿಗೆ ಇನ್ನೂ ಉನ್ನತ ಹುದ್ದೆಯ ಆಮಿಷವೊಡ್ಡಿ, ಪ್ರಮಾಣ ಮಾಡಿಸಿಕೊಂಡು, ಆತನನ್ನು ತನ್ನ ಆಪ್ತನಾಗಿಸಿಕೊಂಡನು. ತನ್ನ ಉದ್ದೇಶವನ್ನು ಈಡೇರಿಸಿಕೊಳ್ಳುವುದಕ್ಕಾಗಿ, ಬಿಜಾಪುರದೆಡೆಗೆ ತ್ವರಿತವಾಗಿ ಧಾವಿಸಿದನು.

ಇಖ್ಲಾಸ ಖಾನನ ಅಜಾಗರೂಕತೆ :

ದಿಲಾವರಖಾನನು ಅತಿವೇಗವಾಗಿ ದಾರಿ ಸವೆಸುತ್ತ ಬಿಜಾಪುರ ತಲುಪಿ, ಅಲ್ಲಾಪುರ ದ್ವಾರದ ಬಳಿ ತಂಗಿದನು. ಅಲ್ಲಿಂದ, ತನಗೆ ಆಪ್ತರಾದ ಅನುಯಾಯಿಗಳನ್ನು ಇಖ್ಲಾಸಖಾನನ ಬಳಿ ಕಳುಹಿಸಿ, ಅವರ ಮೂಲಕ ಇಖ್ಲಾಸಖಾನನ ಮುಖಸ್ತುತಿಯನ್ನು ಮಾಡಿದನು. ದಿಲಾವರಖಾನನ ಮಹತ್ವಾಕಾಂಕ್ಷೆಯನ್ನರಿಯದ ಇಖ್ಲಾಸಖಾನನು ಕೋಟೆಯ ರಕ್ಷಣೆಯ ಯಾವ ವ್ಯವಸ್ಥೆಯನ್ನೂ ಮಾಡದೆ, ಅಜಾಗರೂಕತೆಯಿಂದ ಇದ್ದನು ಹಾಗೂ "ನನಗೆ ಅವಕಾಶ ದೊರೆತಾಗ, ನಿನ್ನ ಬಗ್ಗೆ ಬಾದಶಹರಲ್ಲಿ ರಹಸ್ಯವಾಗಿ ಅರಿಕೆ ಮಾಡಿಕೊಳ್ಳುತ್ತೇನೆ. ಅನುಮತಿ ಪಡೆದು ದೊರೆಯ ಸನ್ನಿಧಿಯಲ್ಲಿ ನಿನ್ನನ್ನು ನಿಲ್ಲಿಸುತ್ತೇನೆ" ಎಂಬ ಸಂದೇಶವನ್ನು ರವಾನಿಸಿದನು.

ದಿಲಾವರಖಾನನ ಕೋಲಾಹಲ :

ಈ ಸಂದೇಶ ಆಲಿಸಿದ ನಂತರ ದಿಲಾವರಖಾನನಿಗೆ ತನ್ನ ಆಶೆಯು ಈಡೇರುವಲ್ಲಿ ಇನ್ನೂ ಹೆಚ್ಚು ಆಶಾಭಾವನೆ ಮೂಡಿತು. ಇಖ್ಲಾಸಖಾನನು ಅರಸೊತ್ತಿಗೆಯ ಕಾರ್ಯಗಳಿಂದ ಕೊಂಚ ಬಿಡುವು ಮಾಡಿಕೊಂಡು ಮನೆಯಲ್ಲಿ ವಿರಮಿಸುತ್ತಿರುವ ವಿಷಯವನ್ನು ದಿಲಾವರಖಾನನ ಗೂಢಚರರು ತಿಳಿಸಿದರು. ಇದೊಂದು ಸದವಕಾಶವೆಂದು ತಿಳಿದ ದಿಲಾವರಖಾನನು ತನ್ನ ಮಕ್ಕಳು, ಏಳು ನೂರು ಕುದುರೆ ಸವಾರರು ಹಾಗು ಹದಿನೈದು ಆನೆಗಳ ಸಮೇತ ನಗರದಲ್ಲಿ ಕಾಲಿರಿಸಿದನು. ರಾಜನು ವಾಸವಾಗಿದ್ದ ಅರಕ್ ಕೋಟೆಯನ್ನು ತಲುಪಿ, ಬಾದಶಹನ ಸೇವೆಗೆ ಹಾಜರಾದನು. ಅನಂತರ ಇಖ್ಲಾಸಖಾನನನ್ನು ಎದುರಿಸುವ ಸಿದ್ಧತೆ ಮಾಡತೊಡಗಿದನು. ತನ್ನ ಸಂಗಡಿಗರನ್ನು ಮತ್ತು ಹಿತೈಷಿಗಳನ್ನು ಆಯಕಟ್ಟಿನ ಸ್ಥಾನಗಳಲ್ಲಿ ನಿಯುಕ್ತಿಸಿದನು.

ದಿಲಾವರಖಾನ ಮತ್ತು ಇಖ್ಲಾಸಖಾನರಲ್ಲಿ ಸಮರ :

ಇದೇ ಸಮಯಕ್ಕೆ ವಿಶ್ರಾಂತಿ ಪಡೆಯುತ್ತಿದ್ದ ಇಖ್ಲಾಸಖಾನನು ಕಣ್ತೆರೆದನು, ಆತನಿಗೆ ಪರಿಸ್ಥಿತಿಯ ಅರಿವುಂಟಾಯಿತು. ಕೂಡಲೇ ಮೂರರಿಂದ ನಾಲ್ಕು ಸಾವಿರ ಕುದುರೆ ಸವಾರರ ಸೈನ್ಯದೊಂದಿಗೆ ಕೋಟೆಯತ್ತ ಧಾವಿಸಿದನು. ಈ ವಿಷಯ ತಿಳಿದ ದಿಲಾವರಖಾನನು ತನ್ನ ಮಕ್ಕಳು ಮತ್ತು ಹೈದರನ ನೆರವಿನೊಂದಿಗೆ ಕೋಟೆಯ ಬಾಗಿಲನ್ನು ಮುಚ್ಚಿಸಿ ವೈರಿಗಳನ್ನು ಹಿಮ್ಮೆಟ್ಟಿಸುವ ಸಿದ್ಧತೆ ಆರಂಭಿಸಿದನು. ಉಭಯತರಲ್ಲಿ ಘೋರ ಯುದ್ಧ ನಡೆಯಿತು. ಈ ಯುದ್ಧದಲ್ಲಿ ವಿಜಯದ ತಕ್ಕಡಿಯು ಒಂದು ಸಲ ಇಖ್ಲಾಸಖಾನನತ್ತ ವಾಲಿದರೆ ಇನ್ನೊಂದು ಸಲ ದಿಲಾವರಖಾನನತ್ತ ವಾಲುತ್ತಿತ್ತು. ಆದರೆ, ಹೆಚ್ಚಿನ ನಷ್ಟವು ಇಖ್ಲಾಸಖಾನನಿಗಾಗಿತ್ತು. ಸಂಜೆಯ ಸಮಯಕ್ಕೆ ಇಖ್ಲಾಸಖಾನನ ಐವತ್ತರಿಂದ ಅರವತ್ತರಷ್ಟು ಸೈನಿಕರು ಹತರಾದರೆ, ಇದಕ್ಕೆ ಪ್ರತಿಯಾಗಿ, ಕೋಟೆಯಲ್ಲಿನ ಒಬ್ಬ ಸೈನಿಕ ಮಾತ್ರ ಹತನಾಗಿದ್ದನು.

ಕೋಟೆಗೆ ಮುತ್ತಿಗೆ :

ಸೂರ್ಯಾಸ್ತದ ನಂತರ, ಇಖ್ಲಾಸಖಾನನು ಮನೆಗೆ ತೆರಳಿದನು. ಆತನು ಬುಲ್‌ಬುಲ್ ಖಾನನನ್ನು ಕೋಟೆಗೆ ಮುತ್ತಿಗೆ ಹಾಕಲು ಹಾಗೂ ಕೋಟೆಯಲ್ಲಿರುವ ಜನರಿಗೆ ಸಾಮಗ್ರಿಗಳನ್ನು ಸಾಗಿಸುವ ದಾರಿಯನ್ನು ಭದ್ರಗೊಳಿಸಲು ನಿಯಮಿಸಿದನು. ಈ ಮೊದಲು ಬುಲ್‌ಬುಲ್ ಖಾನನು ಮುಸ್ತಫಾಖಾನನ ಸೇವೆಯಲ್ಲಿದ್ದು, ಪ್ರಸ್ತುತ ಇಖ್ಲಾಸಖಾನನ ಸೈನ್ಯ ಸೇರಿಕೊಂಡಿದ್ದನು. ಕೋಟೆಯ ಮುತ್ತಿಗೆಯನ್ನು ಸ್ಥಿರವಾಗಿಡುವಲ್ಲಿ ಜೀವದ ಹಂಗುದೊರೆದು ಕೆಲಸ ನಿರ್ವಹಿಸಿದನು. ಒಂದು ತಿಂಗಳವರೆಗೆ ಇದೇ ಸ್ಥಿತಿಯು ಮುಂದುವರಿದು, ಶತ್ರುಗಳು ಹಾಗೂ ಮಿತ್ರರು ಬುಲ್‌ಬುಲ್‌ನ ಪರಾಕ್ರಮದ ಪ್ರಶಂಸೆ ಮಾಡಿದರು.

ದಿಲಾವರಖಾನನು ಬುಲ್‌ಬುಲ್ ಖಾನನೆಡೆಗೆ ರಹಸ್ಯವಾಗಿ ದೂತನೊಬ್ಬನನ್ನು ಕಳುಹಿಸಿ, ಆತನ ಮೂಲಕ ಆಮಿಷಗಳನ್ನೊಡ್ಡಿ, ವಾಗ್ದಾನಗಳನ್ನು ನೀಡಿ, ಪುಸಲಾಯಿಸಿ ತನ್ನೆಡೆಗೆ ಸೆಳೆದುಕೊಂಡನು. ಈ ವಿಷಯ ತಿಳಿದ ಇಖ್ಲಾಸಖಾನನು, ಇನ್ನೋರ್ವ ಹಬಶಿಯನ್ನು ಬುಲ್‌ಬುಲ್ ಖಾನನ ಸ್ಥಳದಲ್ಲಿ ನಿಯಮಿಸಿದನು. ತಾನು ಮೊದಲಿನಂತೆ ಮನೆಯಲ್ಲಿ ಕುಳಿತುಬಿಟ್ಟನು. ದಿಲಾವರಖಾನನೊಡನೆ ಬುಲ್‌ಬುಲ್ ಖಾನನು ಸೇರಿಕೊಂಡಿರುವದು ಬಹಳಷ್ಟು ಸೈನಿಕರಿಗೆ ಸರಿಯಾದ ನಿರ್ಧಾರವೆನಿಸಿ, ಅವರೂ ಇಖ್ಲಾಸಖಾನನನ್ನು ತ್ಯಜಿಸಿ ದಿಲಾವರಖಾನನೊಂದಿಗೆ ಸೇರಿಕೊಂಡರು.

ಈ ರೀತಿಯಾಗಿ ದಿಲಾವರಖಾನನ ಪ್ರಾಬಲ್ಯವು ಮೊದಲಿಗಿಂತ ಹೆಚ್ಚಾಯಿತು. ಕೋಟೆಯಲ್ಲಿರುವ ಸೈನ್ಯವು ಬುಲ್‌ಬುಲ್ ಖಾನನ ನೇತೃತ್ವದಲ್ಲಿ ಕೋಟೆಯ ಹೊರಗೆ ಬಂದು ಇಖ್ಲಾಸಖಾನನ ಸೈನ್ಯದ ಮೇಲೆ ದಾಳಿ ಮಾಡಿ, ಅವರಿಗೆ ಹೆದರಿಸಿ ಹಿಂದೆ

ಸರಿಸಿ, ಅವಶ್ಯವಿದ್ದ ಸಾಮಗ್ರಿಗಳನ್ನು ಕೋಟೆಯೊಳಗೆ ತರುತ್ತಿದ್ದರು. ಇದರಿಂದ, ಮುತ್ತಿಗೆಯಿಂದಾದ ತೊಂದರೆಯಿಂದ ಬಿಡುಗಡೆಯಾಗಿ, ಕೋಟೆಯಲ್ಲಿರುವ ಜನರು ನಿರಾಳರಾದರು.

ಅಂತಃಕಲಹ :

ನಾಲ್ಕು ತಿಂಗಳವರೆಗೆ ಇಂತಹ ಗೊಂದಲಮಯ ಪರಿಸ್ಥಿತಿ ಮುಂದುವರಿಯಿತು. ನಗರದ ಓಣಿ ಮತ್ತು ಪೇಟೆಗಳಲ್ಲಿ ಗಲಭೆಗಳಾಗುತ್ತಿದ್ದವು. ಉಭಯಪಕ್ಷಗಳ ಸೈನಿಕರು ಹತರಾಗುತ್ತಿದ್ದರು. ಆದರೆ ವಿಶೇಷ ಪರಿಣಾಮವೇನೂ ಆಗುತ್ತಿರಲಿಲ್ಲ. ಈ ಪರಿಸ್ಥಿತಿಯಿಂದ ಎಲ್ಲ ಅಧಿಕಾರಿಗಳು ಮತ್ತು ಸಾರ್ವಜನಿಕರು ರೋಸಿ ಹೋದರು. ಇಂತಹ ಸಂದರ್ಭದಲ್ಲಿ ಬುಲ್‌ಬುಲ್ ಖಾನನು ಚತುರತೆಯಿಂದ ಕಾರ್ಯ ನಿರ್ವಹಿಸಿದನು. ಇಖ್ಲಾಸಖಾನನೊಡನೆ ಸೇರಿಕೊಂಡಿದ್ದ ಅಮೀರರ ಮನವೊಲಿಸಿ, ಆತನಿಂದ ದೂರಸರಿಯಲು ಹೇಳಿದನು. ಈ ಅಮೀರರು ತಮ್ಮ ಜಾಗೀರುಗಳತ್ತ ಹೊರಟು ಹೋದರು. ಇಖ್ಲಾಸಖಾನನು ಒಬ್ಬಂಟಿಯಾದನು, ಆದರೂ ಆತನು ಧೃಡತೆಯನ್ನು ಕಳೆದುಕೊಳ್ಳಲಿಲ್ಲ. ಬಿಜಾಪುರದಿಂದ ಹೊರಟು ಹೋಗುವದು ಅಪಮಾನಕರವೆಂದು ತಿಳಿದು ತನ್ನ ಮನೆಯಲ್ಲಿ ಉಳಿದುಬಿಟ್ಟನು.

ದಿಲಾವರಖಾನನ ಪ್ರಾಬಲ್ಯ :

ಅಂತಿಮವಾಗಿ, ದಿಲಾವರಖಾನನು ಕೆಲವು ವಿಶ್ವಾಸಿಕ ಸಿಪಾಯಿಗಳನ್ನು ಇಖ್ಲಾಸಖಾನನ ಮನೆಗೆ ಕಳುಹಿಸಿಕೊಟ್ಟನು. ಈ ಸಿಪಾಯಿಗಳು, ಇಖ್ಲಾಸಖಾನನನ್ನು ಬಂಧಿಸಿ ಕರೆತಂದರು. ಇಖ್ಲಾಸಖಾನನು ದಿಲಾವರಖಾನನಿಗೆ ಈ ಹಿಂದೆ ಮಾಡಿದ ಉಪಕಾರವನ್ನು ಸಂಪೂರ್ಣ ಮರೆತು ಆತನ ಎರಡೂ ಕಣ್ಣುಗಳನು ಕೀಳಿಸಿಬಿಟ್ಟನು. ಪ್ರಸಿದ್ಧ ಶಿಕ್ಷಣತಜ್ಞರ ಸ್ನೇಹ ಗಳಿಸಿ, ತನ್ನ ಮಕ್ಕಳಿಗೆ ಅತ್ಯುತ್ತಮ ಶಿಕ್ಷಣದ ಆಭರಣದಿಂದ ಅಲಂಕರಿಸಿ, ಬಾದಶಹನ ಒಡನಾಡಿಯಾಗಿ ಸೇರಿಸಿದನು.

ದಿಲಾವರಖಾನನ ಪುತ್ರರು :

ದಿಲಾವರಖಾನನ ಹಿರಿಯ ಮಗನು ಶ್ರೇಷ್ಠ ಸರದಾರರ ಸಂಘದಲ್ಲಿ ಸೇರ್ಪಡೆಯಾದನು. ಆತನು ಬಾದಶಹನಿಗೆ ಪವಿತ್ರ ಕುರಾನ್ ಮತ್ತು "ಗುಲಿಸ್ತಾನ್-ಎ-ಸಯೀದಿ" ಹಾಗೂ "ಬೋಸ್ತಾನ ಸಯೀದಿ" ಗ್ರಂಥಗಳನ್ನು ಬೋಧಿಸಲು ನೇಮಕನಾದನು. ಎರಡನೆಯ ಮಗ ಕಮಾಲಖಾನನಿಗೆ ಸರನೌಬತ್ ಹುದ್ದೆ ದೊರೆಯಿತು. ಕಮಾಲಖಾನನು ಬಾದಶಹನ ಜೊತೆ ಆಟವಾಡಲು ಸಂಗಾತಿಯೂ ಆಗಿದ್ದನು. ಮೂರನೆಯ ಮಗ ಖೈರಾಯಿತಖಾನನು ಅಮೀರರ ಗುಂಪಿನಲ್ಲಿ ಸೇರ್ಪಡೆಯಾಗಿ, ಬಾದಶಹನ ಆಪ್ತನಾಗಿ ನೇಮಕನಾದನು. ನಾಲ್ಕನೆಯ ಮಗ ಅಬ್ದುಲ ಖಾದರನನ್ನು ಅರಕ್ ಕೋಟೆಯ ಠಾಣೇದಾರನೆಂದು ನಿಯಮಿಸಲಾಯಿತು.

ಅಬ್ದುಲ್ ಖಾದರನು ಇನ್ನೂ ಚಿಕ್ಕ ವಯಸ್ಸಿನವನಾದುದರಿಂದ ಆತನ ಕರ್ತವ್ಯವನ್ನು ರೂಮೀಖಾನನಿಗೆ ವಹಿಸಲಾಯಿತು.

ಹಿಂಸೆ – ದಬ್ಬಾಳಿಕೆ :

ದಿಲಾವರಖಾನನು, ಬುಲ್‌ಬುಲ್ ಖಾನನನ್ನು ತನ್ನ ಔರಸಪುತ್ರನಾಗಿಸಿಕೊಂಡು ಉಚ್ಚವರ್ಗದ ಸರದಾರರ ಶ್ರೇಣಿಯಲ್ಲಿ ಸೇರಿಸಿಕೊಂಡನು. ದಿಲಾವರಖಾನನು ತನ್ನ ಪ್ರಭುತ್ವವನ್ನು ಸುಭದ್ರಗೊಳಿಸಲು ಒಂದು ಲಕ್ಷ ವಿದೇಶಿ ನಿವಾಸಿಗಳು ಮತ್ತು ಅರವತ್ತು ಸಾವಿರ ಹಬಶಿಗಳನ್ನು ಬಿಟ್ಟು ಉಳಿದೆಲ್ಲರನ್ನು ರಾಜ್ಯದಿಂದ ಹೊರಗಟ್ಟಿದನು. ಅಖ್ಲಾಸಖಾನನು ತನ್ನ ಆಡಳಿತದಲ್ಲಿ ಶಾಹ ಅಬುಲ್ ಹಸನ್‌ನನ್ನು ಒಂದು ಕೋಟೆಯಲ್ಲಿ ಬಂಧಿಸಿಟ್ಟಿದ್ದನು. ದಿಲಾವರಖಾನನಿಗೆ ಹಸನ್‌ನಿಂದಲೂ ಆಪತ್ತಿನ ಸೂಚನೆ ಕಂಡುಬಂದಿತು. ಕೈದಿಯಾಗಿದ್ದ ಶಾಹಸಾಹೇಬನ ಕಣ್ಣುಗಳಲ್ಲಿ ಸಲಾಕೆಗಳನ್ನು ತಿರುಗಿಸಿ ಅಂಧನನ್ನಾಗಿಸಿದನು. ಇದರಿಂದ ತೃಪ್ತನಾಗದೆ, ಆತನಿಗೆ ವೀರಮರಣವನ್ನು ಸಹ ದಯಪಾಲಿಸಿದನು.

ನಗರದ ನಿವಾಸಿಯಾಗಿದ್ದ ಹಾಜಿ ನೂರ್ ಮೊಯಿಜೀನ್‌ನು, ಅಲಿ ಆದಿಲ್‌ಶಾಹನ ಆತ್ಮೀಯನಾಗಿದ್ದನು. ಆತನಿಂದಲೂ ಅಪಾಯದ ಸೂಚನೆ ಕಂಡು ಬಂದಿತು. ಆದರೆ ಆತನನ್ನು ಪದಚ್ಯುತಿಗೊಳಿಸಿ ಒಬ್ಬ ಸಾಮಾನ್ಯ ಸೈನಿಕನಾಗಿಸಿದನು. ದಿಲಾವರಖಾನನು ಚಾಂದಬೀಬೀಯನ್ನು ಸಹ ತನ್ನ ದೌರ್ಜನ್ಯಕ್ಕೆ ಗುರಿಯಾಗಿಸಿದನು. ಚಾಂದಬೀಬೀಯ ಅಧಿಕಾರಕ್ಕೆ ಕೊಕ್ಕೆ ಹಾಕಿ, ಹಿತೈಷಿಗಳು ಮತ್ತು ಆಪ್ತೇಷ್ಟರನ್ನು ಚಾಂದಬೀಬೀಯ ಬಳಿ ಸುಳಿಯದಂತೆ ಮಾಡಿದನು. ಅರೋನಿ ಕಿಲ್ಲೆಯ ಠಾಣೇದಾರನ ಮೇಲೆ ದೌರ್ಜನ್ಯವೆಸಗಿದನು. ಠಾಣೇದಾರನನ್ನು ಪದಚ್ಯುತಿಗೊಳಿಸಲಿಲ್ಲ. ಆದರೆ ಆತನ ಕಣ್ಣುಗಳನ್ನು ಕೀಳಿಸಿಬಿಟ್ಟನು.

ಸುನ್ನತ್ ಧರ್ಮದ ಸಂಪ್ರದಾಯ :

ದಿಲಾವರಖಾನನು ರಾಜ್ಯದಲ್ಲಿ ಶಿಯಾ ಸಂಪ್ರದಾಯದ ಪ್ರಭುತ್ವವನ್ನು ಕೊನೆಗಾಣಿಸಿದನು. ಸುನ್ನತ್ ಧರ್ಮದ ಧಾರ್ಮಿಕ ಸಂಪ್ರದಾಯದ ಆಚರಣೆಗಳನ್ನು ಸಾದರಪಡಿಸಿದನು. ಇಂತಹ ಕೆಲಸಗಳನ್ನು ಯಾರ ಪ್ರತಿರೋಧದ ಭಯವಿಲ್ಲದೆ, ಸಾವಧಾನವಾಗಿ, ಸರ್ವಾಧಿಕಾರಿಯಾಗಿ ನಿರ್ವಹಿಸತೊಡಗಿದನು. ಆಡಳಿತದ ಕಾರ್ಯಭಾರವನ್ನು ಸಮರ್ಥವಾಗಿ ನಡೆಸತೊಡಗಿದನು.

ಮಲಬಾರದ ರಾಜರ ಅವಿಧೇಯತೆ :

ಮುಸ್ತಫಾಖಾನನ ಆಳ್ವಿಕೆಯ ನಂತರ ಮಲಬಾರದ ರಾಜರು ಆದಿಲ್‌ಶಾಹಿ ಆಡಳಿತಕ್ಕೆ ಕಪ್ಪಕಾಣಿಕೆ ಕೊಡುವದನ್ನು ನಿಲ್ಲಿಸಿಬಿಟ್ಟರು. ಹಿಜರಿಸನ್ ೯೮೮ರಲ್ಲಿ

ದಿಲಾವರಖಾನನು ಬುಲ್‌ಬುಲ್ ಖಾನನನ್ನು ಮಲಬಾರದ ರಾಜರನ್ನು ಎದುರಿಸಲು ಕಳುಹಿಸಿಕೊಟ್ಟನು. ಅದೇ ವರ್ಷ ಮುರ್ತುಜಾ ನಿಜಾಮಶಾಹನ ವಕೀಲನೊಡನೆ ಮಾತುಕತೆ ಮತ್ತು ಸಂಧಾನ ಮಾಡಿ ದಿಲಾವರಖಾನನು ನಿಜಾಮಶಾಹಿ ಅರಸೊತ್ತಿಗೆಯೊಂದಿಗೆ ಉತ್ತಮ ಬಾಂಧವ್ಯವನ್ನು ಕಲ್ಪಿಸಿದನು.

ನಿಜಾಮಶಾಹಿ ಆಡಳಿತದೊಂದಿಗೆ ಅನ್ಯೋನ್ಯ ಸಂಬಂಧ :

ಮುರ್ತುಜಾ ನಿಜಾಮಶಾಹನು ಇಬ್ರಾಹಿಮ ಆದಿಲ್‌ಶಾಹನಿಗೆ ಪ್ರೇಮಭರಿತ ಶಬ್ದಗಳಿಂದ ಕೂಡಿದ ಪತ್ರವನ್ನು ಬರೆದನು. ಪತ್ರದಲ್ಲಿ ತನ್ನ ಮಗ ಮೆರಾನ ಹುಸೇನಶಾಹನ ವಿವಾಹವನ್ನು ಬಾದಶಹನ ಸಹೋದರಿ ಖದೀಜಾ ಸುಲ್ತಾನ "ರಾಜಾ ಜಿಯೂ"ಳೊಂದಿಗೆ ಮಾಡುವ ಕೋರಿಕೆಯನ್ನು ಸಲ್ಲಿಸಿದನು. ಅದೇ ವರ್ಷ ಅಹಮದ್‌ನಗರದ ಉಚ್ಚ ಸರದಾರರು, ಆಸ್ಥಾನದ ಸದಸ್ಯರಾದ ಖಾಸಿಮ್ ಬುಜುರ್ಗನ ಮಗ ಖಾಸಿಮ ಬೇಗ ಹಕೀಮ ಹಾಗೂ ಮಿರ್ಜಾ ಅಹಮದ್ ನಖಿ ಮತ್ತಿತರರು ಮೆರಾನ ಹುಸೇನಶಾಹನ ವಿವಾಹಕ್ಕಾಗಿ ಬಿಜಾಪುರಕ್ಕೆ ಆಗಮಿಸಿದರು. ಖದೀಜಾ ಸುಲ್ತಾನಳ ವಿವಾಹವು ಮೆರಾನ ಹುಸೇನ ಶಾಹನೊಂದಿಗೆ ಜರುಗಿತು. ಖದೀಜಾ ಸುಲ್ತಾನಳನ್ನು ಅಹಮದನಗರಕ್ಕೆ ಬೀಳ್ಕೊಡಲಾಯಿತು.

ರಾಜಕುಮಾರಿ ಖದೀಜಾ ಸುಲ್ತಾನಾಳ ವಿವಾಹ :

ಚಾಂದಬೀಬೀ ತನ್ನ ಸಹೋದರ ಮುರ್ತುಜಾ ನಿಜಾಮಶಾಹನನ್ನು ಭೇಟಿಯಾಗಲು ಕಾತುರಳಾಗಿದ್ದಳು. ಆದುದರಿಂದ ರಾಜಕುವರಿ ಖದೀಜಾಳೊಡನೆ ಅಹಮದ್‌ನಗರಕ್ಕೆ ಹೊರಟಳು. ಖಾಸಿಮ ಬೇಗ್, ಮಿರ್ಜಾ ಮಹಮದ್ ನಖಿ ಮತ್ತು ಅಹಮದ್‌ನಗರದ ಇತರ ಸರದಾರರು ಇಬ್ರಾಹಿಮ ಆದಿಲಶಾಹನಿಂದ ವಸ್ತ್ರಾಭರಣಗಳ ಉಡುಗೊರೆ ಪಡೆದ ನಂತರ ಶಹಾಪುರಕ್ಕೆ ಹೊರಟರು. ಹಿಜರಿ ಸನ್ ೯೮೩ರ ಕೊನೆಯಲ್ಲಿ ಖದೀಜಾ ಸುಲ್ತಾನಳು ಅಹಮದ್‌ನಗರ ತಲುಪಿದಳು. ರಾಜಕುವರಿ ಖದೀಜಾ ಮೆರಾನ ಹುಸೇನ ಶಾಹನ ಮಹಲಿನಲ್ಲಿ ಸೇರ್ಪಡೆಯಾದಳು. ರಾಜಕುಮಾರಿಯ ಜೊತೆಗೆ ಬಂದ ಬಿಜಾಪುರದ ಸರದಾರರು (ಶೇಖ ಖಾಸಿಮ ಅರಬ್ ನಜಫೀ, ಮತ್ತು ಗಯಾಸ್ ಬೇಗ್ ಖಸ್‌ದನಿ ಮತ್ತಿತರರು) ಅಹಮದ್‌ನಗರದಿಂದ ಸಫಲರಾಗಿ ಬಿಜಾಪುರಕ್ಕೆ ಮರಳಿ ಬಂದರು.

ಇಬ್ರಾಹಿಮ್ ಆದಿಲ್‌ಶಾಹನ ವಿವಾಹದ ಸಿದ್ಧತೆ :

ಸಹೋದರಿಯ ವಿವಾಹವಾದ ನಂತರ ಇಬ್ರಾಹಿಮ್ ಆದಿಲ್‌ಶಾಹನಿಗೂ ವಿವಾಹವಾಗುವ ಇಚ್ಛೆ ಉಂಟಾಯಿತು. ಆಗ ಭಾಗ್ಯನಗರವೆಂಬ ಹೆಸರಿನಿಂದ ಪ್ರಸಿದ್ಧಿ ಪಡೆದ ಹೈದರಾಬಾದಿಗೆ ಬಿಜಾಪುರದ ಕೆಲವು ಸರದಾರರನ್ನು ತನ್ನ ಕೋರಿಕೆ ಈಡೇರಿಸಿಕೊಳ್ಳುವುದಕ್ಕೆ ಕಳುಹಿಸಿಕೊಟ್ಟನು. ಸುಲ್ತಾನ ಇಬ್ರಾಹಿಮ್ ಕುತುಬ ಶಾಹನ

ಮಗಳು ಚಾಂದ ಬೀಬೀ, ತನ್ನ ಸಹೋದರ ಮಹಮದ್ ಕುಲೀ ಕುತುಬಶಾಹನ ಪಾಲನೆ ಪೋಷಣೆಯಲ್ಲಿದ್ದಳು. ಚಾಂದ ಬೀಬೀಯನ್ನು ವಿವಾಹವಾಗುವ ಇಚ್ಛೆ ಇಬ್ರಾಹಿಮ್ ಆದಿಲ್‌ಶಾಹನಿಗಿತ್ತು. ಖ್ವಾಜಾ ಅಲೀ ಮುಲ್ಕ ಅಲ್ತಜಾರ್ ಶಿರಾಜಿಯ ಜೊತೆಗೆ ಬಿಜಾಪುರದ ಸರದಾರರ ಗುಂಪು ಹೈದರಾಬಾದಿಗೆ ಪ್ರಯಾಣ ಕೈಗೊಂಡಿತು. ಈ ಗುಂಪು ಕುತುಬಶಾಹಿ ಪ್ರದೇಶ ತಲುಪಿದೊಡನೆ ಅವರಿಗೆ ವೈಭವದ ಸ್ವಾಗತ ದೊರೆಯಿತು.

ಸಂತೋಷ ಕೂಟ :

ಬಿಜಾಪುರದ ಸರದಾರರು ಹೈದರಾಬಾದ ನಗರದ ಬಳಿ ತಲುಪಿದಾಗ, ಕುತುಬಶಾಹಿ ಸರದಾರರು ಅವರನ್ನು ಗೌರವಾದರಗಳಿಂದ ನಗರದೊಳಗೆ ಕರೆದುತಂದರು. ಭವ್ಯಬಂಗಲೆಗಳಲ್ಲಿ ಅವರಿಗೆ ವಾಸಿಸಲು ವ್ಯವಸ್ಥೆ ಮಾಡಿದರು. ವಿವಾಹದ ಮಾತುಕತೆಗಳು ಆರಂಭವಾದವು. ಕುತುಬಶಾಹಿಗಳು ಇಬ್ರಾಹಿಮನಿಂದ ಬಂದ ವಿವಾಹದ ಪ್ರಸ್ತಾಪವನ್ನು ಒಪ್ಪಿಕೊಂಡರು. ಉತ್ಸವ ಮತ್ತು ಸಂತೋಷಕೂಟಗಳ ಏರ್ಪಾಡು ನಡೆಯಿತು. ರಾಜಕುಮಾರಿಯ ಮದುವೆ ನಿಶ್ಚಯವಾಯಿತು.

ಸಂತಸದಲ್ಲಿ ಭಂಗ :

ಮುರ್ತುಜಾ ನಿಜಾಮಶಾಹ ಮತ್ತು ಶಾಹ ಕುಲಿ ಸಲಾಬತ್ ಖಾನರಿಗೆ ವಿವಾಹ ನಿಶ್ಚಯದ ವಿಷಯ ತಿಳಿಯಿತು. ಅವರ ಸಲಹೆಯನ್ನು ಪಡೆಯದೇ ವಿವಾಹ ನಿಶ್ಚಯ ಮಾಡಿದ್ದರಿಂದ ಇವರಿಬ್ಬರೂ ಕುಲಿ ಕುತುಬ್ ಶಾಹನಿಗೆ ದೂರು ತಂದರು. ಕುಲಿ ಕುತುಬ್ ಶಾಹನು ತನ್ನ ತಂದೆಯ ಸಲಹೆಯಂತೆ ನಿಜಾಮಶಾಹಿ ವಂಶಸ್ಥರಿಗೆ ಗೌರವ ಮತ್ತು ಮನ್ನಣೆ ನೀಡುತ್ತಿದ್ದನು. ಆತನು ತನ್ನ ಸೋದರಿಯನ್ನು ಬೀಳ್ಕೊಡುವ ಆಜ್ಞೆಯ ಪಾಲನೆ ಮಾಡಿದನು. ಇಬ್ರಾಹಿಮ್ ಆದಿಲ್‌ಶಾಹನಿಗೆ ಸದರಿ ವಿದ್ಯಮಾನವು ತಿಳಿದಾಗ, ಆತನಿಗೆ ಬಹಳ ಕೋಪ ಬಂದಿತು. ಈ ದಂಗೆಯನ್ನು ಹತ್ತಿಕ್ಕುವ ಸಿದ್ಧತೆ ನಡೆಸಿದನು.

ನಿಜಾಮ ಶಾಹಿಗಳ ಮೇಲೆ ದಾಳಿ :

ಇಬ್ರಾಹಿಮನು ಸೈನ್ಯವನ್ನು ಒಗ್ಗೂಡಿಸಲು ತಿಳಿಸಿದನು. ಎಲ್ಲ ಸೈನಿಕರು ಮತ್ತು ಸರದಾರರು ಸಂಘಟಿತರಾದ ನಂತರ, ಹಿಜರಿ ಸನ್ ೯೫೫ರಲ್ಲಿ ಬಾದಶಾಹನು ನಗರದಿಂದ ಹೊರಟನು. ಇದು ಬಾದಶಹನ ಪ್ರಥಮ ಯುದ್ಧವಾದುದರಿಂದ, ಆಸ್ಥಾನದ ಸದಸ್ಯರು ಮತ್ತು ದರ್ಬಾರಿನ ಸರದಾರರು ಬಾದಶಹನ ಮೇಲೆ ನಾಣ್ಯಗಳನ್ನು ನಿವಾಳಿಸಿದರು. ದಿಲಾವರಖಾನನ ಸಲಹೆಯ ಮೇರೆಗೆ, ಆಲಿಮ್‌ಖಾನನು ನಿಜಾಮಶಾಹಿ ಸರಹದ್ದಿನಲ್ಲಿ ಕಾಲಿಟ್ಟನು.

ಸಲಾಬತ್‌ಖಾನನ ಪದಚ್ಯುತಿ ಹಾಗೂ ಬಂಧನ :

ಆಲಮ್‌ಖಾನನು ದನೀರ ಕಿಲ್ಲೆಯ ಸಮೀಪದಲ್ಲಿ ಬೀಡು ಬಿಟ್ಟನು. ಆದಿಲ್‌ಶಾಹಿ ಸೈನ್ಯವು ಕೋಟೆಯ ಮೇಲೆ ವಿಜಯ ಸಾಧಿಸುವ ಸಿದ್ಧತೆ ನಡೆಸಿತು. ಸೋಲಾಪುರ, ಕಲ್ಯಾಣ ಮತ್ತು ಶಹದುರ್ಗದಿಂದ ಯುದ್ಧ ಸಾಮಗ್ರಿಗಳನ್ನು ತರಿಸಲಾಯಿತು. ಮುರ್ತುಜಾ ನಿಜಾಮ ಶಾಹನಿಗೆ ಈ ಗಲಭೆಯ ಹಿಂದೆ ಸಲಾಬತ್‌ಖಾನನಿರುವುದು ತಿಳಿದು ಕೋಪದಿಂದ ಸಂತಪ್ತನಾದನು. ಈ ಹಿಂದೆಯೂ ಸಲಾಬತ್‌ಖಾನನು ಮುರ್ತುಜಾ ನಿಜಾಮಶಾಹನ ವಿರೋಧವಾಗಿ ಹಲವಾರು ಕೆಲಸಗಳನ್ನು ಮಾಡಿದ್ದನು. ಈ ಬಾರಿ ರೋಷದಿಂದ ಸಲಾಬತ್‌ಖಾನನನ್ನು ಬಂಧಿಸಿ, ಆತನ ಸ್ಥಳದಲ್ಲಿ ಖಾಸಿಮ್‌ಬೇಗನನ್ನು ಪೇಶವಾಯಿ ಎಂದು ನಿಯಮಿಸಿದನು.

ಖುತುಬ್‌ಶಾಹಿಗಳು ದಾರಿಗೆ ಬರುವುದು :

ಮುರ್ತುಜಾ ನಿಜಾಮಶಾಹನ ನಡವಳಿಕೆಯು ಸಜ್ಜನಿಕೆ ಮತ್ತು ಆತ್ಮೀಯತೆಯಿಂದ ಕೂಡಿರುವುದನ್ನು ಇಬ್ರಾಹಿಮ್ ಆದಿಲ್‌ಶಾಹನು ಗಮನಿಸಿದನು. ಇದಲ್ಲದೆ, ಖಾಸಿಮ್ ಬೇಗನು ಬಾದಶಾಹನಿಗೆ ಆತ್ಮೀಯವಾಗಿ ಪತ್ರ ಬರೆದು ಕಳುಹಿಸಿದನು. ಹೀಗಾಗಿ ಬಾದಶಾಹನು ನಿಜಾಮಶಾಹಿ ರಾಜ್ಯದ ಮೇಲೆ ದಂಡೆತ್ತಿ ಹೋಗುವ ವಿಚಾರ ತ್ಯಜಿಸಿ ಖುತುಬ್‌ಶಾಹಿ ರಾಜ್ಯದತ್ತ ತಿರುಗಿದನು. ಕುತುಬ್‌ಶಾಹಿಗಳಿಗೆ ಈ ವಿಚಾರ ತಿಳಿದು ಅವರು ಗಾಬರಿಯಾದರು. ಮಹಮದ್ ಕುಲಿ ಕುತುಬ್‌ಶಾಹನಿಗೆ ಬಾದಶಾಹನ ಉದ್ದೇಶ ತಿಳಿದು, ಕೂಡಲೇ ವಿವಾಹದಲ್ಲಿ ಕನ್ಯೆಯೊಡನೆ ಕೊಡಬೇಕಾದ ವಸ್ತುಗಳನ್ನು ಹಾಗೂ ಬೆಲೆಬಾಳುವ ಉಡುಗೊರೆಗಳೊಂದಿಗೆ ತನ್ನ ಸೋದರಿಯನ್ನು ಇಬ್ರಾಹಿಮ್ ಆದಿಲ್‌ಶಾಹನ ಸೇವೆಗೆ ತಲುಪಿಸಿದನು. ಮುರ್ತುಜಾ ನಿಜಾಮಶಾಹನ ಪರವಾಗಿ ಮುಸ್ತಫಾಖಾನ್ ಅಸ್ತರಾಬಾದಿ ರಾಜಕುಮಾರಿಯ ಜೊತೆಗೆ ಬಂದನು.

ವಿಜಯೋತ್ಸವ, ಸಂಭ್ರಮ:

ಇಬ್ರಾಹಿಮ್ ಆದಿಲ್‌ಶಾಹನು ತನ್ನ ಆಸ್ಥಾನದ ಸದಸ್ಯರನ್ನು ಮತ್ತು ಎಲ್ಲ ಸರದಾರರನ್ನು ಕುಲಿ ಕುತುಬ ಶಾಹಿಯ ಪುತ್ರಿ ಮಲಿಕಾ ಜಹಾಳನ್ನು ಸ್ವಾಗತಿಸಲು ಕಳುಹಿಸಿದನು. ನಂತರ ಸ್ವತಃ ಬಾದಶಹನು ಹೊರಟನು. ಸೈನ್ಯದ ದಂಡು ಬೀಡು ಬಿಟ್ಟಿರುವಲ್ಲಿಗೆ ಮಹಾರಾಣಿಯನ್ನು ಕರೆತಂದನು. ನಾಲ್ಕು ದಿನಗಳ ಕಾಲ ದಂಡಿನಲ್ಲಿ ಸಂತೋಷ ಸಂಭ್ರಮದಲ್ಲಿ ಕಾಲ ಕಳೆದರು. ಇದಾದ ನಂತರ ಬಾದಶಹನು ಶಾಹದುರ್ಗದತ್ತ ಪಯಣ ಬೆಳೆಸಿದನು. ಅಲ್ಲಿ ಕೂಡಾ ಬಾದಶಹನ ಸೇವಕರು ಸಮಾರಂಭದ ಏರ್ಪಾಟು ಮಾಡಿದ್ದರು. ಹೀಗೆ ಒಂದು ತಿಂಗಳ ಕಾಲ ಅಲ್ಲಿ ಭೋಗವಿಲಾಸದ ವಾತಾವರಣವಿತ್ತು.

ಬಹುಮಾನ – ಪ್ರಶಸ್ತಿ :

ಈ ಸಮಯದಲ್ಲಿ ಬಾದಶಾಹ ಮತ್ತು ಮಲಿಕಾ ಜಹಾಳ ಪರಸ್ಪರ ಭೇಟಿಯಾಯಿತು. ಸೇವೆ ಸಲ್ಲಿಸಿದವರಿಗೆಲ್ಲ ಬಹುಮಾನಗಳಿಂದ ಸಂತುಷ್ಟಗೊಳಿಸಿದನು. ಅನಂತರ ಬಾದಶಹನು ರಾಜಧಾನಿಗೆ ಬಂದನು. ಅಲ್ಲಿ ಮುಸ್ತಫಾಖಾನ್ ಅಸ್ತರಾಬಾದಿಗೆ ಬೆಲೆಬಾಳುವ ಉಡುಗೊರೆ ಮತ್ತು ಕಾಣಿಕೆಗಳನ್ನು (ಎರಡು ದೊಡ್ಡ ಆನೆಗಳು, ಹದಿನಾಲ್ಕು ಚಿಕ್ಕ ಆನೆಗಳು, ಹನ್ನೆರಡು ಸಾವಿರ ಹುನ್ನು, ಒಂದು ಸೊಂಟಪಟ್ಟಿ ಹಾಗೂ ಮತ್ತಿತರ ಕಿಮ್ಮತ್ತಿನ ಸಾಮಾನುಗಳು) ಕೊಟ್ಟು ಬೀಳ್ಕೊಟ್ಟನು. ಮಲಿಕಾ ಜಹಾಳಿಗೆ ಮೂರು ಜನ ಗಂಡು ಮಕ್ಕಳು ಮತ್ತು ಇಬ್ಬರು ಹೆಣ್ಣು ಮಕ್ಕಳು ಜನಿಸಿದರು, ಅವರಲ್ಲಿ ಒಂದು ಗಂಡು ಮಗು ಮತ್ತು ಇಬ್ಬರೂ ಹೆಣ್ಣು ಮಕ್ಕಳು ಅಲ್ಲಾಹ್‌ನ ಪಾದವನ್ನು ಸೇರಿದರು.

ಅಹಮದ್‌ನಗರದ ವಿದ್ಯಮಾನ :

ಈ ಹಿಂದೆಯೇ ಹೇಳಿದಂತೆ ಮುರ್ತುಜಾ ನಿಜಾಮಶಾಹನು ಸಲಾಬತ್ ಖಾನನನ್ನು ಪದಚ್ಯುತಿಗೊಳಿಸಿ, ಆತನ ಸ್ಥಳಕ್ಕೆ ಖಾಸಿಮ್ ಬೇಗನನ್ನು ಪೇಶವಾಯಿಯಾಗಿ ನಿಯುಕ್ತಿಗೊಳಿಸಲಾಗಿತ್ತು. ಖಾಸಿಮ್ ಬೇಗನು ಅತ್ಯಂತ ಪ್ರಾಮಾಣಿಕ ಮತ್ತು ಉತ್ತಮ ಗುಣ–ನಡತೆಗಳುಳ್ಳ ವ್ಯಕ್ತಿಯಾಗಿದ್ದನು. ಆತನು ಯಾರಿಗೂ ತೊಂದರೆ ಕೊಡುತ್ತಿರಲಿಲ್ಲ. ಎಲ್ಲರೊಡನೆ ಪ್ರೀತಿ ಮತ್ತು ಆತ್ಮೀಯತೆಯಿಂದ ನಡೆದುಕೊಳ್ಳುತ್ತಿದ್ದನು. ಪರಿಣಾಮವಾಗಿ, ಮತಿಹೀನ ಮತ್ತು ದುಷ್ಟ ಸ್ವಭಾವದ ಜನರು ರಾಜ್ಯದ ಕಾರ್ಯಭಾರಗಳಲ್ಲಿ ಕೈಹಾಕಿ ಅಧಿಕಾರ ನಡೆಸತೊಡಗಿದರು. ಇಂತಹ ಜನರು ಸರದಾರರು ಮತ್ತು ಆಸ್ಥಾನ ಸದಸ್ಯರ ಬಗ್ಗೆ ತರತರದ ಅಪವಾದಗಳನ್ನು ಹೊರಿಸತೊಡಗಿದರು. ಅವರಲ್ಲಿ ಕೆಲವರನ್ನು ಬಂಧಿಸಿ ಕೈದು ಮಾಡಲಾಯಿತು, ಇನ್ನುಳಿದವರನ್ನು ನಗರದಿಂದಾಚೆಗೆ ಕಳುಹಿಸಲಾಯಿತು.

ದುರ್ಜನರ ಪ್ರಾಬಲ್ಯ :

ಮುರ್ತುಜಾ ನಿಜಾಮಶಾಹನು ರಾಜ್ಯದ ಕಾರ್ಯಭಾರಗಳಲ್ಲಿ ಆಸಕ್ತಿ ವಹಿಸುತ್ತಿರಲಿಲ್ಲ. ತನ್ನಲ್ಲಿಯೇ ತಾನು ಮೈಮರೆತು, ಹುಚ್ಚನಂತೆ ಇರುತ್ತಿದ್ದನು. ಹೀಗಾಗಿ, ದುಷ್ಟರ ನಿಗ್ರಹ ಮಾಡುವ ಪ್ರಯತ್ನ ಮಾಡಲಿಲ್ಲ. ಅರಸನ ಈ ಬೇಜವಾಬ್ದಾರಿತನದ ವರ್ತನೆಯ ಲಾಭ ಪಡೆದ ಸಮಯಸಾಧಕರು ಉನ್ನತ ಅಧಿಕಾರದ ಹುದ್ದೆಗಳನ್ನು ತಮ್ಮಲ್ಲಿಯೇ ಹಂಚಿಕೊಂಡರು. ಈ ಪರಿಸ್ಥಿತಿಯಿಂದಾಗಿ ನಿಜಾಮಶಾಹಿ ಮನೆತನದ ಗೌರವವು ಮಣ್ಣಲ್ಲಿ ಕಲೆತುಹೋಯಿತು.

ತಂದೆ ಮಗನಲ್ಲಿ ವೈರತ್ವ:

ಮುರ್ತುಜಾ ನಿಜಾಮಶಾಹನು ತನ್ನ ಮಗ ಮೆರಾನ ಹುಸೇನ ಶಾಹನನ್ನು ಮಿತಿಮೀರಿ ದ್ವೇಷಿಸುತ್ತಿದ್ದನು. ಮಗನ ಮೇಲಿನ ದ್ವೇಷದಿಂದ ಆತನ ತಲೆ ಬಿಸಿಯಾಗತೊಡಗಿತು. ಮಗನನ್ನು ಕೊಲೆ ಮಾಡುವ ಪ್ರಯತ್ನ ಮಾಡತೊಡಗಿದನು. ತನ್ನ ವಿಶ್ವಾಸದ ಸರದಾರ ಇಸ್ಮಾಯಿಲ್ ಖಾನ್ ದಖನಿಗೆ ಮೇರಾನ ಹುಸೇನ ಶಾಹನನ್ನು ವಧಿಸುವ ಕೆಲಸ ವಹಿಸಿದನು. ಆ ದಿನಗಳಲ್ಲಿ ಖಾಸಿಮ್ ಬೇಗ್‌ನ ಮನೆಯಲ್ಲಿ ವಾಸಿಸುತ್ತಿದ್ದ ಸುಲ್ತಾನ ಹುಸೇನ ಶಹಜಾದಿಯ ಪುತ್ರ ಮಿರ್ಜಾ ಖಾನನಿಗೆ ಅಲ್ಲಿ ನಡೆಯುತ್ತಿರುವ ವಿದ್ಯಮಾನಗಳ ಅರಿವಾಯಿತು. ಶಾಹಿ ಪ್ರಭುತ್ವದ ಕಲ್ಪನೆಯನ್ನು ಮನಸ್ಸಿನಿಂದ ಕಿತ್ತೆಸೆದು, ಮುರ್ತುಜಾ ನಿಜಾಮಶಾಹನನ್ನು ಪದಚ್ಯುತಿಗೊಳಿಸಿ ಮೀರಾನ್ ಹುಸೇನ್ ಶಾಹನನ್ನು ಅರಸನನ್ನಾಗಿ ಮಾಡುವ ಸಂಕಲ್ಪ ಮಾಡಿದನು.

ಮುರ್ತುಜಾ ನಿಜಾಮ ಶಾಹನನ್ನು ಕೊನೆಗಾಣಿಸುವ ಸಿದ್ಧತೆ :

ಈ ಕೆಲಸವು ಅತ್ಯಂತ ಕಠಿಣ ಹಾಗೂ ಜವಾಬ್ದಾರಿಯುತವಾಗಿದ್ದುದರಿಂದ, ಮಿರ್ಜಾಖಾನನಿಗೆ ಆದಿಲ್‌ಶಾಹಿ ಸರದಾರರ ಹಾಗೂ ಆಸ್ಥಾನದ ಸದಸ್ಯರ ಸಲಹೆಯ ಅವಶ್ಯಕತೆ ಕಂಡುಬಂದಿತು. ಈ ಕೆಲಸಕ್ಕೆ ಮಿರ್ಜಾಖಾನನು ತನ್ನ ವಿಶ್ವಾಸಾರ್ಹ ದೂತನನ್ನು ದಿಲಾವರಖಾನನ ಬಳಿ ಕಳುಹಿಸಿ, ತನ್ನ ಉದ್ದೇಶವನ್ನು ತಿಳಿಸಿದನು. ಮಿರ್ಜಾಖಾನನ ಸಂದೇಶವು, ಮೇರಾನ್ ಹುಸೇನ್ ಶಾಹ ಮತ್ತು ನಿಜಾಮಶಾಹನ ಕ್ಷೇಮದೊಡನೆ ಸಂಬಂಧಿಸಿರುವುದರಿಂದ, ಬಾದಶಹನು ಆತನಿಗೆ ನೆರವು ನೀಡುವ ವಾಗ್ದಾನ ಮಾಡಿದನು. ತದನಂತರ, ದಿಲಾವರಖಾನನು ಪ್ರಯಾಣದ ಸಿದ್ಧತೆ ಮಾಡತೊಡಗಿದನು.

ಅಹಮದ್‌ನಗರದತ್ತ ಇಬ್ರಾಹಿಮನ ಪಯಣ :

ಇಬ್ರಾಹಿಮ್ ಆದಿಲ್‌ಶಾಹನು ಹಿಜರಿಸನ್ ೯೯೬ರಲ್ಲಿ ಅಹಮದ್‌ನಗರದತ್ತ ಪ್ರವಾಸ ಪ್ರಾರಂಭಿಸಿದನು. ಸಾವಧಾನವಾಗಿ ಸಾಗುತ್ತ ಇಬ್ರಾಹಿಮನು ಅಹಮದ್‌ನಗರದ ಸಮೀಪ ಬಂದು ತಲುಪಿದನು. ಮಿರ್ಜಾಖಾನನಿಗೆ ಇಬ್ರಾಹಿಮನ ಆಗಮನದ ವಿಷಯ ತಿಳಿದಾಗ, ಅಹಮದ್‌ನಗರದ ಸರದಾರರನ್ನು ತನ್ನತ್ತ ಸೆಳೆದುಕೊಂಡು ತಾನು ದೌಲತಾಬಾದದತ್ತ ಹೊರಟನು. ಅಲ್ಲಿ ಮೆರಾನ್ ಹುಸೇನ ಶಾಹನು ಮುರ್ತುಜಾ ನಿಜಾಮ ಶಾಹನಿಂದ ಬಂಧಿತನಾಗಿ, ಸೆರೆಮನೆಯ ಕಷ್ಟ ಅನುಭವಿಸುತ್ತಿದ್ದನು.

ಮೀರಾನ್ ಹುಸೇನ್ ಶಾಹನ ಪಟ್ಟಾಭಿಷೇಕ :

ಮಿರ್ಜಾಖಾನನು ರಾಜಕುಮಾರ ಮೀರಾನ್ ಹುಸೇನ್ ಶಾಹನನ್ನು ಬಂಧನದಿಂದ ಮುಕ್ತಗೊಳಿಸಿ, ತನ್ನ ಸಂಗಡ ಅಹಮದ್‌ನಗರದತ್ತ ಕರೆದು ತಂದನು. ಪ್ರಜೆಗಳು

ಮುರ್ತುಜಾ ನಿಜಾಮಶಾಹನ ಪರವಾಗಿ ನಿಂತು ಮೀರಾನ್ ಹುಸೇನ್ ಶಾಹನ ಪಟ್ಟಾಭಿಷೇಕಕ್ಕೆ ಅಡ್ಡಿಯುಂಟು ಮಾಡದಿರಲೆಂದು, ಇಬ್ರಾಹಿಮ್ ಆದಿಲ್‌ಶಾಹನು ನಗರದತ್ತ ಹೊರಟನು. ಅಹಮದ್‌ನಗರದಿಂದ ಐದು ಹರದಾರಿ ದೂರದಲ್ಲಿರುವ ಮ್ಯಾತೂರನಲ್ಲಿ ಇಬ್ರಾಹಿಮನು ಬೀಡು ಬಿಟ್ಟ ದಿನದಂದು, ಮೀರಾನ್ ಹುಸೇನ್ ಶಾಹನು ಅಹಮದ್‌ನಗರವನ್ನು ಪ್ರವೇಶಿಸಿ ತಂದೆಯನ್ನು ಬಂಧಿಸಿದನು ಹಾಗೂ ತಂದೆಯ ಸ್ಥಾನದಲ್ಲಿ ಸಿಂಹಾಸನದ ಮೇಲೆ ಕುಳಿತನು.

ಮುರ್ತುಜಾ ನಿಜಾಮಶಾಹನ ವಧೆ :

ಮೀರಾನ್ ಹುಸೇನ್ ಶಾಹನು ಸಿಂಹಾಸನಾರೂಢನಾದುದಕ್ಕೆ ಇಬ್ರಾಹಿಮನು ಅಭಿನಂದಿಸಿದನು ಹಾಗೂ ತನ್ನ ಸೋದರಿಯನ್ನು ಭೇಟಿಯಾಗಲು ಅಪೇಕ್ಷಿಸಿದನು. ಮೀರಾನ್ ಹುಸೇನ್ ಶಾಹನು ಮಂದಮತಿ ಹಾಗೂ ತಿಳಿಗೇಡಿತನದಿಂದ ವರ್ತಿಸುತ್ತ ತನ್ನ ತಂದೆ ಮುರ್ತುಜಾ ನಿಜಾಮಶಾಹನಿಗೆ ವಿಪರೀತ ಕಷ್ಟಕೊಟ್ಟು ನಂತರ ಆತನನ್ನು ವಧಿಸಿದ ವಿಷಯ ಆಕಸ್ಮಿಕವಾಗಿ ಇಬ್ರಾಹಿಮನ ಕಿವಿಗೆ ಬಿದ್ದಿತು.

ಇಂತಹ ಭೀಕರಕೃತ್ಯದ ಮೂಲ ಕಾರಣಪುರುಷ ಮಿರ್ಜಾಖಾನನಾಗಿದ್ದನು. 'ನಿನ್ನ ತಂದೆ ದೀರ್ಘಕಾಲ ಅರಸನಾಗಿ ರಾಜ್ಯಭಾರ ಮಾಡಿದ್ದಾನೆ. ಹಲವಾರು ರಾಜ್ಯಗಳನ್ನು ಜಯಿಸಿದ್ದಾನೆ. ಮುರ್ತುಜಾ ಖಾನನು ಜೀವಿಸಿರುವವರೆಗೆ ನಿನಗೆ ಸಿಂಹಾಸನದ ಯೋಗ ಒದಗುವುದಿಲ್ಲ' ಎಂದು ಮಿರ್ಜಾ ಖಾನನು ಮೆರಾನ್ ಹುಸೇನ ಶಾಹನಿಗೆ ಹೇಳಿದನು. ಮಿರ್ಜಾ ಹುಸೇನನು ಹೆಣೆದ ವಂಚನೆಯ ಬಲೆಯಲ್ಲಿ ಮೀರಾನ ಹುಸೇನನು ಸಿಲುಕಿಕೊಂಡನು. ತನ್ನ ಹಿತೈಷಿಯಾದ ಇಬ್ರಾಹಿಮ ಆದಿಲ್‌ಶಾಹನ ಸಲಹೆ ಪಡೆಯದೇ ತನ್ನ ತಂದೆಯನ್ನು ಮೃತ್ಯುವಿನ ಕೂಪಕ್ಕೆ ತಳ್ಳಿಬಿಟ್ಟನು. ಮೀರಾನ್ ಹುಸೇನಶಾಹನು ಮುರ್ತುಜಾ ನಿಜಾಮಶಾಹನನ್ನು ವಧಿಸಿದ ವಾರ್ತೆ ಕೇಳಿದ ಇಬ್ರಾಹಿಮನಿಗ ಅತೀವ ದುಃಖವಾಯಿತು. ಆತನನ್ನು ಭೆಟ್ಟಿಯಾಗುವ ವಿಚಾರವನ್ನು ಇಬ್ರಾಹಿಮನು ತ್ಯಜಿಸಿಬಿಟ್ಟನು.

ಮೀರಾನ್ ಹುಸೇನನಿಗೆ ಇಬ್ರಾಹಿಮ್ ಆದಿಲ್‌ಶಾಹನ ಸಂದೇಶ :

ಇದಾದ ನಂತರ ಇಬ್ರಾಹಿಮ್ ಆದಿಲ್‌ಶಾಹನು ಹುಸೇನ ಕರ್ದನ ಮೂಲಕ "ನಿನ್ನ ತಂದೆ ಮುರ್ತುಜಾ ನಿಜಾಮ ಶಾಹನಿಂದ ರಾಜ್ಯಾಡಳಿತದ ಕಡಿವಾಣವನ್ನು ಕಸಿದು ನಿನ್ನ ಕೈಗೊಪ್ಪಿಸಬೇಕೆಂಬ ಉದ್ದೇಶದಿಂದ ನಾವು ನಮ್ಮ ಸೈನ್ಯದೊಡನೆ ಬಂದಿದ್ದೆವು. ಮುರ್ತುಜಾ ನಿಜಾಮ ಶಾಹನನ್ನು ಯಾವುದಾದರೊಂದು ಕಿಲ್ಲೆಯಲ್ಲಿ ಬಂಧಿಸಿ ನೀನು ನೆಮ್ಮದಿಯಿಂದ ರಾಜ್ಯದ ಆಡಳಿತವನ್ನು ನಿರ್ವಹಿಸಬೇಕೆಂಬುದು ನಮ್ಮ ಅಪೇಕ್ಷೆಯಾಗಿತ್ತು. ನೀನು ಅಲ್ಲಾಹುವಿನ ಭಯವನ್ನು ಮನದಿಂದ ತೆಗೆದು ನಿನ್ನ ತಂದೆಯನ್ನು ವಧಿಸಿರುವುದು ನನಗೆ ತಿಳಿದು ಬಂದಿದೆ. ನಿನಗೆ ನಿನ್ನ ತಂದೆಯಿಂದ

ಅಪಾಯವಿದ್ದಲ್ಲಿ ಮುರ್ತುಜಾ ನಿಜಾಮನನ್ನು ನನ್ನ ವಶಕ್ಕೆ ಒಪ್ಪಿಸಬಹುದಾಗಿತ್ತು. ಇಲ್ಲವೇ ಆತನ ಕಣ್ಣು ಕೀಳಿಸಿ, ಆತನ ಭಯದಿಂದ ಪಾರಾಗಬಹುದಿತ್ತು. ನೀನು ಮಾಡಿದ ಈ ಕೃತ್ಯದಿಂದ ಅಲ್ಲಾಹುವಿನಿಂದ ಶಿಕ್ಷೆ ಕಾದಿದೆ ಎಂಬುದು ನಿಶ್ಚಯ. ಏನಾಗಬಾರದಿತ್ತೋ ಆಗಿ ಹೋಗಿದೆ. ನಾನು ಈ ಬಗ್ಗೆ ಯಾವ ವಿಚಾರಣೆಯನ್ನೂ ಮಾಡುವುದಿಲ್ಲ, ಈ ವಿಷಯವನ್ನು ಅಲ್ಲಾಹನಿಗೆ ಬಿಡುತ್ತೇನೆ, ಇಲ್ಲವಾದಲ್ಲಿ, ನಿನ್ನ ರಾಜ್ಯವನ್ನು ವಶಪಡಿಸಿಕೊಳ್ಳುವ ಉದ್ದೇಶ ನನಗಿದೆ ಎಂದು ಜನರು ತಿಳಿಯುತ್ತಾರೆ" ಎಂಬ ಸಂದೇಶವನ್ನು ಮೀರಾನ್ ಹುಸೇನಶಾಹನಿಗೆ ಕಳುಹಿಸಿದನು.

ಮಲಬಾರದ ರಾಜರ ಆಜ್ಞೋಲ್ಲಂಘನೆ :

ಇದಾದ ನಂತರ ಇಬ್ರಾಹಿಮ್ ಆದಿಲ್‌ಶಾಹನು ತನ್ನ ರಾಜ್ಯಕ್ಕೆ ಮರಳಿ ಬಂದನು. ಬಿಜಾಪುರ ತಲುಪಿದ ನಂತರ ಮಲಬಾರದ ರಾಜರು ಕಂದಾಯದ ಹಣವನ್ನು ಕೊಡುವುದಕ್ಕೆ ನೆಪಗಳನ್ನು ಹುಡುಕುತ್ತಿದ್ದಾರೆ ಎಂಬ ವಿಷಯ ಇಬ್ರಾಹಿಮ್ ಆದಿಲಶಾಹನಿಗೆ ತಿಳಿದುಬಂದಿತು. ಆದಿಲ್‌ಶಾಹನ ಆಳ್ವಿಕೆಯಲ್ಲಿ ಮುಸ್ತಫಾಖಾನ್ ಅರ್ಧಸತಾನಿಯು ನಿಗದಿ ಪಡಿಸಿದ ಕಂದಾಯದ ಹಣವನ್ನು ನೀಡಲು ನಿರಾಕರಿಸುತ್ತಿದ್ದಾರೆ ಎಂಬ ವಿಷಯವು ತಿಳಿಯಿತು. ಬಾದಶಹನ ಆಜ್ಞೆಯನ್ನು ಪಾಲಿಸದ ರಾಜರನ್ನು ಸರಿದಾರಿಗೆ ತಂದು ಅವರಿಂದ ಮೂರು ವರ್ಷದ ಕಂದಾಯ ಇಪ್ಪತ್ತೊಂದು ಲಕ್ಷ ಐವತ್ತು ಸಾವಿರ ಹೋನ(ನಾಣ್ಯ) ವಸೂಲಿ ಮಾಡಲು ಬುಲ್‌ಬುಲ್‌ಖಾನ್ ಹಬ್‌ಶಿಯನ್ನು ಎರಡು ಸಾವಿರ ಕುದುರೆ ಸವಾರರೊಡನೆ ಮಲಬಾರದತ್ತ ಕಳುಹಿಸಿದನು.

ಮೀರಾನ್ ಹುಸೇನ್ ಶಾಹನ ಕೊಲೆ :

ಮೀರಾನ್ ಹುಸೇನ ಶಾಹನ ಬಗ್ಗೆ ಇಬ್ರಾಹಿಮ್ ಆದಿಲ್‌ಶಾಹನು ಹೇಳಿಕೆಯು ಕೇವಲ ಒಂದು ವರ್ಷದ ನಂತರ ಘಟಿಸಿದುದು ವಿಚಿತ್ರ. ಜಮಾಲ್ ಖಾನ್ ಮಹದ್ವಿಯು ಅಹಮದನಗರದ ಆಡಳಿತದಲ್ಲಿ ಸರ್ವಾಧಿಕಾರವನ್ನು ಪಡೆದು ಹುಸೇನ ಶಾಹನ ಕೊಲೆ ಮಾಡಿಸಿದನು ಹಾಗೂ ರಾಜ್ಯದಲ್ಲಿ ಮಹದ್ವಿ ಧರ್ಮವನ್ನು ಜಾರಿಗೊಳಿಸಿದನು. ಆತನು ಹೊರ ರಾಜ್ಯದ ಜನರೊಡನೆ ಪ್ರೀತಿಯಿಂದ ಹಾಗೂ ಮೃದುವಾಗಿ ವರ್ತಿಸುತ್ತಿದ್ದನು. ಈ ಎಲ್ಲ ಘಟನೆಗಳ ವದಂತಿಯು ಬಿಜಾಪುರ ತಲುಪಿದೊಡನೆ ಇಬ್ರಾಹಿಮ್ ಆದಿಲ್‌ಶಾಹನು ನಿಜಾಮಶಾಹಿ ಅರಸೊತ್ತಿಗೆಯ ಸುಧಾರಣೆ ಹಾಗೂ ಇನ್ನಿತರ ಜರೂರಿ ಕೆಲಸಗಳನ್ನು ಮಾಡುವ ಯೋಜನೆ ಕೈಗೊಂಡನು.

ಬಾದಶಹನ ಗುರಿ ಅಹಮದ್‌ನಗರ :

ದಿಲಾವರ್‌ಖಾನನ ಸಲಹೆಯ ಮೇರೆಗೆ, ಹಿಜರಿ ಸನ್ ೯೯೭ರಲ್ಲಿ ಇಬ್ರಾಹಿಮ್ ಆದಿಲ್‌ಶಾಹನು ಅಹಮದ್‌ನಗರಕ್ಕೆ ಪ್ರವಾಸ ಬೆಳೆಸಿದನು. ಬಾದಶಹನು

ಬುಲ್‌ಬುಲ್‌ಖಾನ್ ಮತ್ತು ಸೈನ್ಯದ ಇತರ ಅಧಿಕಾರಗಳಿಗೆ ನಿಜಾಮಶಾಹಿ ಗಡಿಯತ್ತ ಸಾಗಲು ಆದೇಶವನ್ನು ಜಾರಿ ಮಾಡಿದನು. ಎಲ್ಲ ಸರದಾರರಿಗೂ ತಮ್ಮ ತಮ್ಮ ಸೈನ್ಯದೊಂದಿಗೆ ಬಾದಶಹನ ಸೇವೆಯಲ್ಲಿ ಹಾಜರಾಗಲು ಆಜ್ಞೆಮಾಡಿದನು. ಬಾದಶಹನ ಸವಾರಿ ಶಹದುರ್ಗದ ಬಳಿ ಸಮೀಪಿಸಿದಾಗ ದಿಲಾವರಖಾನನ ಸಲಹೆಯಂತೆ ಆ ಪ್ರದೇಶದಲ್ಲಿ ಒಂದು ತಿಂಗಳ ಕಾಲ ಬೀಡು ಬಿಟ್ಟನು. ಬುಲ್‌ಬುಲ್‌ಖಾನನ ಸೈನ್ಯವು ಬಾದಶಹನ ಸೇವೆಗೆ ಹಾಜರಾಗಲಿಲ್ಲ. ಬುಲ್‌ಬುಲ್‌ಖಾನನ ಸೈನ್ಯಕ್ಕಾಗಿ ಕಾಯುತ್ತ ಅಲ್ಲಿಯೇ ಬೀಡು ಬಿಟ್ಟರೆ, ಜಮಾಲಖಾನ ವೈರಿಯು ಇನ್ನೂ ಹೆಚ್ಚು ಪ್ರಬಲನಾಗುತ್ತಾನೆಂಬ ವಿಚಾರವು ದಿಲಾವರಖಾನನಿಗೆ ಬಂದಿತು. ಹೀಗಾಗಿ ಅಹಮದ್‌ನಗರದತ್ತ ಮುಂದೆ ಸಾಗಿದನು.

ಜಮಾಲಖಾನ ಮಹದ್ವಿಯನ್ನು ಎದುರಿಸುವುದು :

ಇಬ್ರಾಹಿಮ್ ಆದಿಲ್‌ಶಾಹನು ದಂಡೆತ್ತಿ ಬರುವ ವಿಚಾರವು ಜಮಾಲಖಾನನಿಗೆ ತಿಳಿದ ತಕ್ಷಣ ಶೀಘ್ರವಾದ ಗತಿಯಲ್ಲಿ ಸಾಗುವ ಹದಿನೈದು ಸಾವಿರ ಕುದುರೆ ಸವಾರರ ಸೈನ್ಯದೊಂದಿಗೆ ಅಷ್ಟಿಗಿ ಪ್ರದೇಶದ ಬಳಿ ಬಾದಶಹನನ್ನು ಎದುರಿಸಲು ಸಿಧ್ಧವಾಗಿ ನಿಂತನು. ಆ ಸಮಯದಲ್ಲಿ ಸೋನೆ ಮಳೆಯು ಸುರಿಯುತ್ತಿತ್ತು. ಹೀಗಾಗಿ ಉಭಯಪಕ್ಷದ ಸೇನಾನಿಗಳು ಯುದ್ಧ ಪ್ರಾರಂಭಿಸಲಿಲ್ಲ. ಇಪ್ಪತ್ತು ದಿನಗಳ ಅವಧಿಯು ಇದೇ ಸ್ಥಿತಿಯಲ್ಲಿ ಕಳೆದು ಹೋಯಿತು. ಜಮಾಲ್‌ಖಾನ್ ಮಹದ್ವಿಯು ಚಿಂತಾಕ್ರಾಂತನಾಗಿ, ಸಂಧಾನದ ಬಗ್ಗೆ ಯೋಚಿಸತೊಡಗಿದನು. ಕೆಲವು ದೂತರನ್ನು ಬಾದಶಹನತ್ತ ಕಳುಹಿಸಿ ಸಂಧಾನದ ಕೋರಿಕೆ ಸಲ್ಲಿಸಿದನು ಹಾಗೂ ಬಾದಶಹನು ತಮ್ಮ ರಾಜ್ಯಕ್ಕೆ ಮರಳಲು ವಿನಂತಿ ಮಾಡಿಕೊಂಡನು. ಜಮಾಲಖಾನನು ಬಾದಶಹನಿಗೆ ಅತ್ಯಂತ ವಿನಮ್ರತೆಯಿಂದ ಈ ಕೋರಿಕೆಯನ್ನು ಸಲ್ಲಿಸಿದುದರಿಂದ ಬಾದಶಹನು ಆತನ ವಿನಂತಿಯನ್ನು ಮನ್ನಿಸಿದನು.

ಜಮಾಲಖಾನ್ ಮತ್ತು ಇಬ್ರಾಹಿಮ್ ಆದಿಲ್‌ಶಾಹರಲ್ಲಿ ಸಂಧಾನ :

ತನ್ನ ಸಹೋದರಿಯನ್ನು ಪಲ್ಲಕ್ಕಿಯ ಸಮೇತ ಗೌರವಾದರಗಳೊಡನೆ ತನ್ನ ಜೊತೆ ಕಳುಹಿಸಿದಲ್ಲಿ ಮಾತ್ರ ಮರಳಿ ಹೋಗುವದಾಗಿ ಬಾದಶಹನು ಜಮಾಲಖಾನನಿಗೆ ಹೇಳಿ ಕಳುಹಿಸಿದನು. ಈ ಷರತ್ತನ್ನು ಒಪ್ಪಿದ ಜಮಾಲಖಾನನು, ಕೂಡಲೇ ಎಪ್ಪತ್ತೈದು ಸಾವಿರ ಹೋನು(ಚಿನ್ನದ ನಾಣ್ಯ)ಗಳೊಂದಿಗೆ ಖದೀಜಾ ಸುಲ್ತಾನಳ ಪಲ್ಲಕ್ಕಿಯನ್ನು ಬಾದಶಹ ಇಬ್ರಾಹಿಮ್ ಆದಿಲ್‌ಶಾಹನ ಸೇವೆಗೆ ಕಳುಹಿಸಿಕೊಟ್ಟನು. ಬಾದಶಹನು ಬೀಡುಬಿಟ್ಟಿರುವ ಸ್ಥಳದಿಂದ ಮರಳುವ ದಿನವೇ ಬುಲ್‌ಬುಲ್‌ಖಾನನು ತನ್ನ ಸೈನ್ಯದೊಂದಿಗೆ ಬಾದಶಹನ ಸೇವೆಗೆ ಹಾಜರಾದನು. ಉಭಯತರಲ್ಲಿ ಸಂಧಾನದ ಮಾತುಕತೆಯಾದುದರಿಂದ ಬುಲ್‌ಬುಲ್ ಖಾನನು ಈ ಸಂದರ್ಭದಲ್ಲಿ ಅಲ್ಲಿಗೆ ಬಂದ ಪ್ರಯೋಜನವಾಗಲಿಲ್ಲ.

ಬುಲ್‌ಬುಲ್ ಖಾನನ ಪರಾಕ್ರಮ :

ಬುಲ್‌ಬುಲ್ ಖಾನನು ಶೂರನಾಗಿದ್ದನು. ಆತನ ಪರಾಕ್ರಮವು ರಾಜ್ಯದಲ್ಲಿ ಪ್ರತೀತಿ ಪಡೆದಿತ್ತು. ಮಲಬಾರದ ರಾಜರನ್ನು ಜಯಿಸಿ, ಅವರಿಂದ ಪಡೆದ ಕಂದಾಯದ ನಗದು ಹಣವನ್ನು ಹಾಗೂ ಇತರ ಕಾಣಿಕೆಗಳನ್ನು ಬಾದಶಹನ ದರ್ಶನದ ಸಂದರ್ಭದಲ್ಲಿ ಸಲ್ಲಿಸಿದನು. ಅಲ್ಪ ಸಮಯದಲ್ಲಿ ಬುಲಬುಲ್ ಖಾನನು ಮಲಬಾರದ ರಾಜರಿಂದ ಬಹಳಷ್ಟು ಕಂದಾಯ ಮತ್ತು ಕಪ್ಪಕಾಣಿಕೆಗಳನ್ನು ಪಡೆದಿದ್ದನು. ತಾನು ಸಂಗ್ರಹಿಸಿದ ಕಾಣಿಕೆಗಳನ್ನು ಸ್ವತಃ ಬಾದಶಹರ ಸನ್ನಿಧಿಯಲ್ಲಿ ಅರ್ಪಿಸಿ, ಬಾದಶಹರಿಂದ ಹೊಗಳಿಕೆಯ ಮಾತುಗಳನ್ನು ಕೇಳುವ ಆಸೆಯನ್ನಿಟ್ಟುಕೊಂಡಿದ್ದನು. ಆದರೆ ದಿಲಾವರಖಾನನ ವಿರೋಧದಿಂದಾಗಿ, ಬಾದಶಹನ ಸನ್ನಿದಿಗೆ ಬರಲಾಗಲಿಲ್ಲ ಹಾಗೂ ಆತನ ಆಕಾಂಕ್ಷೆ ಈಡೇರಲಿಲ್ಲ.

ಬುಲ್‌ಬುಲ್ ಖಾನನ ಅವಹೇಳನ :

ದಿಲಾವರಖಾನನ ಸೂಚನೆಯಂತೆ ಬುಲ್‌ಬುಲ್ ಖಾನನು ತನ್ನೊಂದಿಗೆ ತಂದ ಕಪ್ಪ-ಕಾಣಿಕೆಗಳನ್ನು ಅಪಮೌಲ್ಯ ಮಾಡಲಾಯಿತು. ಹತ್ತುಸಾವಿರ ಬೆಲೆಬಾಳುವ ವಸ್ತುವೊಂದರ ಬೆಲೆಯನ್ನು ಕೇವಲ ಒಂದು ಸಾವಿರವೆಂದು ತಿಳಿಸಲಾಯಿತು. ಹೀಗೆ ಆತನು ಒಪ್ಪಿಸಿದ ಪ್ರತಿಯೊಂದು ವಸ್ತುವನ್ನು ಅಸಲಿಗಿಂತ ಅತಿ ಕಡಿಮೆ ಬೆಲೆಯದಾಗಿ ಅಳೆಯಲಾಯಿತು. ಮಲಬಾರದ ರಾಜರಿಂದ ಪಡೆದ ನಗದು ಹಣವನ್ನು ಕಡಿಮೆ ಮಾಡಿ ಹೇಳಲಾಯಿತು. ಆಗ ಬುಲ್‌ಬುಲ್ ಖಾನನೊಂದಿಗೆ ಬಂದ ರಾಜರು ಬಾಕಿ ಹಣಕ್ಕೆ ತಗಾದೆ ಮಾಡತೊಡಗಿದರು. ಇದೆಲ್ಲದರ ಮೂಲ ಉದ್ದೇಶ ಬುಲ್‌ಬುಲ್ ಖಾನನನ್ನು ಅವಮಾನಗೊಳಿಸುವುದಾಗಿತ್ತು.

ದಿಲಾವರಖಾನ ಮತ್ತು ಬುಲ್‌ಬುಲ್ ಖಾನರಲ್ಲಿ ಮನಸ್ತಾಪ :

ಒಂದು ದಿನ ಬಾದಶಹನ ಆಸ್ಥಾನದಲ್ಲಿ ದಿಲಾವರಖಾನನು ತನ್ನ ಆಡಳಿತದ ಕಾರ್ಯ ನಿರ್ವಹಿಸುತ್ತ ಬಾದಶಹನ ಸೇವೆಯಲ್ಲಿ ನಿರತನಾಗಿರುವಾಗ ಬುಲ್‌ಬುಲ್ ಖಾನನು ಬಂದನು. ಆತನ ಕೈಯಲ್ಲಿ ಕರವಸ್ತ್ರವಿತ್ತು, ಬಾದಶಹನ ಬಳಿ ಬಂದು ತನ್ನ ಕರವಸ್ತ್ರದಿಂದ ಬಾದಶಹನಿಗೆ ಗಾಳಿ ಬೀಸತೊಡಗಿದನು. ಆಗ ದಿಲಾವರಖಾನನು ಕೆಟ್ಟ ದೃಷ್ಟಿಯಿಂದ ಬುಲ್‌ಬುಲ್ ಖಾನ್‌ನತ್ತ ದೃಷ್ಟಿ ಬೀರಿ ಅಗೌರವಭರಿತ ಧ್ವನಿಯಲ್ಲಿ, "ಬಾದಶಹನನ್ನು ವಿರೋಧಿಸುವ ಕೆಲಸ ಮಾಡಲು ಆಕಾಶವು ಸಹ ಭಯಪಡುತ್ತದೆ, ಆದರೆ ಇಂತಹ ಬಾದಶಹನ ಆಜ್ಞೆಯನ್ನು ಉಲ್ಲಂಘಿಸುವ ಧೈರ್ಯ ನೀನು ಮಾಡಿರುವೆ. ಬಾದಶಹನು ಬರಲು ಆದೇಶ ನೀಡಿದಾಗ ನೀನು ಎಲ್ಲ ಕೆಲಸವನ್ನು ಬಿಟ್ಟು ಬಾದಶಹರ ಸನ್ನಿಧಿಯಲ್ಲಿ ಹಾಜರಾಗಬೇಕಿತ್ತು." ಎಂದು ಹೇಳಿದನು.

ಬುಲ್‌ಬುಲ್ ಖಾನನ ಪ್ರಾಮಾಣಿಕ ಹೇಳಿಕೆ :

ಬಾದಶಹನಿಗೆ ತನ್ನ ಬಗ್ಗೆ ದಯಾಳು ಮನೋಭಾವವಿರುವುದನ್ನು ಅರಿತಿದ್ದ ಬುಲ್‌ಬುಲ್ ಖಾನನು, "ಬಾದಶಹನ ಪಾದಧೂಳಿಯ ಆಣೆ! ಅರಸೊತ್ತಿಗೆಯನ್ನು ವಿರೋಧಿಸುವ ಯಾವ ಕೆಲಸವನ್ನೂ ನಾನು ಮಾಡಿಲ್ಲ. ರಾಜಾಜ್ಞೆಯನ್ನು ಉಲ್ಲಂಘಿಸುವ ಧೈರ್ಯ ನನಗೆಲ್ಲಿಂದ ಬರಬೇಕು? ಮಲಬಾರದಲ್ಲಿ ತಂಗಿದುದು ನನ್ನ ಸ್ವಇಚ್ಛೆಯಿಂದಲ್ಲ. ಸತ್ಯ ಸಂಗತಿ ಏನೆಂದರೆ, ರಾಜಾಜ್ಞೆ ದೊರೆತಾಗ ನಾನು ಕರ್ನಾಟಕದಲ್ಲಿದ್ದು ಅಲ್ಲಿಯ ರಾಜರ ಮೇಲೆ ಒತ್ತಡ ತಂದು ಕಂದಾಯವನ್ನು ವಸೂಲಿ ಮಾಡುವಲ್ಲಿ ನಿರತನಾಗಿದ್ದೆನು. ಒಂದು ವೇಳೆ ನಾನು ಬರಿಗೈಯಲ್ಲಿ ಬಂದಿದ್ದರೆ ಅಥವಾ ಮಲಬಾರದ ರಾಜರಿಗೆ ವಿಷಯ ತಿಳಿದರೆ ಅವರು ಕಂದಾಯದ ಹಣವನ್ನು ನೀಡುತ್ತಿರಲಿಲ್ಲ. ಕಂದಾಯ ವಸೂಲಿಗೆ ನಾನು ಮಾಡಿದ ಪರಿಶ್ರಮ ನಿರರ್ಥಕವಾಗುತ್ತಿತ್ತು. ಅಲ್ಲದೆ, ಇಷ್ಟು ದೊಡ್ಡ ಮೊತ್ತವು ದೊರೆಯ ಖಜಾನೆಯನ್ನು ಸೇರುತ್ತಿರಲಿಲ್ಲ" ಎಂದು ಉತ್ತರಿಸಿದನು.

ಬುಲ್‌ಬುಲ್ ಖಾನನು ತನ್ನ ಮಾತನ್ನು ಮುಂದುವರಿಸುತ್ತ, "ಇದಲ್ಲದೆ, ಆ ಪ್ರದೇಶದ ಕಾಡುಗಳಲ್ಲಿ ನಮ್ಮ ಸೈನಿಕರು ಕಷ್ಟ-ಕಾರ್ಪಣ್ಯ ಮತ್ತು ಅತ್ಯಂತ ಕಠಿಣ ಪರಿಸ್ಥಿತಿ ಎದುರಿಸಬೇಕಾಗಿ ಬಂದಿತು, ಇದು ಸರ್ವರಿಗೂ ವಿದಿತವಾದ ವಿಷಯವಾಗಿದೆ. ಈ ಕಾರಣಗಳಿಂದ ಕೆಲಕಾಲ ಅಲ್ಲಿಯೇ ಬೀಡು ಬಿಡಬೇಕಾಯಿತು. ದಿಲಾವರಖಾನ್! ಈಗ ನಿನ್ನ ವಿಷಯ ಹೇಳು, ಮಲಬಾರದ ಸೈನ್ಯದ ನೆರವಿಲ್ಲದೆ ಮಹತ್ವದ ವಿಜಯ ಸಾಧಿಸಲು ಸಾಧ್ಯವಿಲ್ಲವೆಂಬುದು ನಿನಗೆ ಚೆನ್ನಾಗಿ ಗೊತ್ತಿದ್ದರೂ ವಿನಾಕಾರಣ ಬಾದಶಹರನ್ನು ತೆಲಂಗಾಣಕ್ಕೆ ಸೈನ್ಯದೊಡನೆ ಕರೆದೊಯ್ದಿದ್ದೆ. ಇನ್ನೂ ಹದಿನೈದು ದಿನಗಳ ಕಾಲ ನಮ್ಮ ಸೈನ್ಯದ ನಿರೀಕ್ಷೆ ಮಾಡಿದ್ದರೆ ಆಗ ನಾವೆಲ್ಲ ಸೇರಿ ನಿಜಾಮಶಾಹಿ ಪ್ರದೇಶಗಳ ಮೇಲೆ ದಾಳಿ ಮಾಡಿದ್ದರೆ, ನಾವು ಅಹಮದ್‌ನಗರದ ಹಲವಾರು ಕೋಟೆ ಮತ್ತು ಪ್ರದೇಶಗಳನ್ನು ನಮ್ಮ ವಶಕ್ಕೆ ಪಡೆದುಕೊಳ್ಳಬಹುದಾಗಿತ್ತು. ದೊರೆಯ ಸನ್ನಿಧಾನಕ್ಕೆ ಬರಲು ತಡವಾದುದಕ್ಕೆ ಕಾರಣವಿಲ್ಲದೇ ಇಲ್ಲ, ಆದರೂ ನನ್ನ ತಪ್ಪನ್ನು ಒಪ್ಪಿಕೊಳ್ಳುತ್ತೇನೆ ಹಾಗೂ ದಯಾಮಯನಾದ ನನ್ನೊಡೆಯನ ಉಪ್ಪು ತಿಂದ ಈ ಕೃತಘ್ನ ಸೇವಕನ್ನು ಕ್ಷಮಿಸಬೇಕೆಂದು ವಿನಂತಿಸುತ್ತೇನೆ" ಎಂದು ವಿನೀತನಾಗಿ ಕೇಳಿಕೊಂಡನು.

ಬುಲ್‌ಬುಲ್ ಖಾನನಿಗೆ ದೊರೆತ ಗೌರವ :

ಬುಲ್‌ಬುಲ್ ಖಾನನ ಈ ಸುದೀರ್ಘ ಉತ್ತರವನ್ನು ಕೇಳಿದ ದಿಲಾವರಖಾನನು ಕೋಪದಿಂದ ರೋಷಾವಿಷ್ಟನಾದನು. ಆತನ ಮನಸ್ಸಿನಲ್ಲಿ ಮತ್ತಷ್ಟು ನಿರ್ದಯತೆ ಮೂಡಿತು. ಸಾಧ್ಯವಿದ್ದರೆ ಅಲ್ಲಿಯೇ ಬುಲ್‌ಬುಲ್ ಖಾನನನ್ನು ವಧಿಸಿಬಿಡುತ್ತಿದ್ದನು.

ಆದರೆ, ಆ ಸಮಯದಲ್ಲಿ ಆತನು ರಾಜಸಭೆಯಲ್ಲಿದ್ದನು. ರಾಜಸಭೆಯ ಶಿಷ್ಟಾಚಾರದಂತೆ ಅಲ್ಲಿ ಇಂತಹ ದುಷ್ಕೃತ್ಯಗಳಿಗೆ ಅವಕಾಶವಿರಲಿಲ್ಲ. ದಿಲಾವರನು ತನ್ನ ರೋಷವನ್ನು ಮನದಲ್ಲಿಯೇ ಅದುಮಿಕೊಂಡು, ಬುಲ್‌ಬುಲ್ ಖಾನನ ಕೈಹಿಡಿದು ಬಾದಶಹನ ಬಳಿ ಸಾರಿ, "ಬುಲ್‌ಬುಲ್ ಖಾನನು ಹುಜೂರರ ಮನೆತನದ ಹಳೆಯ ಸೇವಕನಾಗಿದ್ದಾನೆ. ಆತನ ಅಪರಾಧವನ್ನು ಮಹಾಪ್ರಭುಗಳು ಮನ್ನಿಸಬೇಕು" ಎಂದು ವಿನಯದಿಂದ ಕೋರಿಕೊಂಡನು. ದಿಲಾವರಖಾನನ ಕೋರಿಕೆಯನ್ನು ಬಾದಶಹನು ಮನ್ನಿಸಿ, ವಸ್ತ್ರಗಳ ಉಡುಗೊರೆಯನ್ನು ನೀಡಿದನು.

ಸಭೆಯ ಕಲಾಪಗಳು ಮುಗಿದ ನಂತರ ದಿಲಾವರಖಾನನು ಬುಲ್‌ಬುಲ್ ಖಾನನನ್ನು ತನ್ನ ಸಂಗಡ ಮನೆಗೆ ಕರೆದೊಯ್ದು ಆದರ ಸತ್ಕಾರಗಳನ್ನು ಮಾಡಿದನು. ಮನೆಯಲ್ಲಿ, 'ನೀನು ನನ್ನ ಔರಸಪುತ್ರನೆಂದು ಎಲ್ಲರಿಗೂ ಹೇಳಿದ್ದೇನೆ. ರಾಜ್ಯಾಡಳಿತದ ಕೆಲಸಗಳಲ್ಲಿ ನಿನ್ನೊಡನೆ ಕಠಿಣವಾಗಿ ನಡೆದುಕೊಳ್ಳದಿದ್ದಲ್ಲಿ, ಮಗನಿಗೆ ರಿಯಾಯತಿ ನೀಡುತ್ತಿದ್ದಾನೆ ಎಂದು ಜನರು ನನಗೆ ಅಪವಾದ ಕೊಡುತ್ತಾರೆ' ಎಂದು ಹೇಳಿದನು. ಈ ರೀತಿಯಾಗಿ, ದಿಲಾವರಖಾನನು ಬುಲ್‌ಬುಲ್ ಖಾನನನ್ನು ತನ್ನ ಹಿತೈಷಿಯಾಗಿಸಿಕೊಂಡನು. ಅನಂತರ, ಬುಲ್‌ಬುಲ್ ಖಾನನೊಡನೆ ಬಂದ ಮಲಬಾರದ ರಾಜರಿಗೆ ತರತರದ ಇನಾಮುಗಳನ್ನು ನೀಡಿ ಕಳುಹಿಸಿಕೊಟ್ಟನು.

ಬುಲ್‌ಬುಲ್ ಖಾನನ ಬಂಧನ :

ಇಬ್ರಾಹಿಮ್ ಆದಿಲ್‌ಶಾಹ ಸಾನಿಯು ಪ್ರವಾಸವನ್ನು ಮಾಡುತ್ತ ಬುರ್ಹಾನ್‌ಪುರ ತಲುಪಿದನು. ತನ್ನೆದುರಿನಲ್ಲಿ ಬುಲ್‌ಬುಲ್ ಖಾನನ ಪ್ರಶಂಸೆ ಮತ್ತು ಹೊಗಳಿಕೆ ಕೇಳಿ ದಿಲಾವರಖಾನನು ಕೋಪಗೊಂಡಿದ್ದನು. ಆತನ ಮೇಲೆ ಇಲ್ಲಸಲ್ಲದ ಅಪವಾದಗಳನ್ನು ಹೊರೆಸಿ ಆತನನ್ನು ಬಂಧಿಸಿ ಸೆರೆಗಟ್ಟಿದನು. ಮುಂದೆ ಐದಾರು ತಿಂಗಳ ನಂತರ ದಿಲಾವರಖಾನನು ಅಖ್ಲಾಸ್ ಖಾನನನ್ನು ವಂಚನೆಯಿಂದ ತನ್ನ ಆಪ್ತನಾಗಿಸಿಕೊಂಡನು. ಬುಲ್‌ಬುಲ್ ಖಾನನ ಕಣ್ಣುಗಳನ್ನು ಸಲಾಕೆಗಳಿಂದ ತಿವಿದು ಅಂಧನನ್ನಾಗಿಸಿದನು. ದಿಲಾವರಖಾನನ ಈ ದುಷ್ಕೃತ್ಯಗಳಿಂದ ಬಾದಶಹನು ಸಂತಪ್ತನಾದನು. ಅಂತಿಮವಾಗಿ, ದಿಲಾವರಖಾನನಿಗೂ ತಾನು ಮಾಡಿದ ಪಾಪದ ಫಲ ಅನುಭವಿಸಬೇಕಾದ ಸಮಯ ಬಂದಿತು.

ಅಹಮದ್‌ನಗರದ ವಿದ್ಯಮಾನ :

ಈ ಕೃತಿಯ ಓದುಗರಿಗೆ ಮೀರಾನ್ ಹುಸೇನ್ ಶಾಹನು ತನ್ನ ತಂದೆಯನ್ನು ವಧಿಸಿದ ವಿಷಯ ಹಾಗೂ ಈ ಅಪರಾಧಕ್ಕೆ ತಕ್ಕ ಶಿಕ್ಷೆಯಾಗಿ ಮೀರಾನ್ ಹುಸೇನನು ತನ್ನ ಪ್ರಾಣವನ್ನು ತೆರಬೇಕಾದ ವಿಷಯ ಮನದಟ್ಟಾಗಿರಬಹುದು. ತದನಂತರ ಹುಸೇನ ನಿಜಾಮ ಶಾಹನ ಮಗನಾದ ಇಸ್ಮಾಯಿಲ್ ಬುರ್ಹಾನ್ ಶಾಹನು ಪಟ್ಟಕ್ಕೆ

ಬಂದನು. ಈತನ ಆಡಳಿತದಲ್ಲಿ ರಾಜ್ಯದ ನಾಲ್ಕು ದಿಶೆಯಲ್ಲೂ ದಾಳಿ ನಡೆದವು. ಎಲ್ಲೆಡೆಯಲ್ಲೂ ಗಲಭೆ-ಗೊಂದಲಗಳು ನಡೆಯತೊಡಗಿದವು. ಸಜ್ಜನರು ಮತ್ತು ದುಷ್ಟರ ಮಧ್ಯ ಯಾವ ವ್ಯತ್ಯಾಸವೂ ಇರದಂತಾಯಿತು. ರಾಜ್ಯದ ಪರಿಸ್ಥಿತಿಯು ವಿನಾಶದ ಅಂಚಿನತ್ತ ತಲುಪಿತು. ಜಮಾಲ್ ಮಹದ್ವಿಯು ದುಷ್ಟರ ಸ್ನೇಹ ಮಾಡಿ ಅವರ ಬಲದಿಂದ ಇಡೀ ರಾಜ್ಯವನ್ನು ವಶಪಡಿಸಿಕೊಂಡನು.

ಬುರ್ಹಾನ್‌ಶಾಹನ ಉದ್ದೇಶ :

ಇಸ್ಮಾಯಿಲ್ ಶಾಹನ ಮಗ ಬುರ್ಹಾನ್ ಶಾಹನು ತನ್ನ ಸಹೋದರ ಮುರ್ತುಜಾ ಶಾಹನ ಬಂಧನದಿಂದ ತಪ್ಪಿಸಿಕೊಂಡು ಸಾಮ್ರಾಟ್ ಅಕ್ಬರ್‌ನ ಸೇವೆಯಲ್ಲಿದ್ದನು. ಅಹಮದ್‌ನಗರದ ಸಿಂಹಾಸನದ ಮೇಲೆ ಒಬ್ಬ ಬಾಲಕನನ್ನು ಕುಳ್ಳಿರಿಸಲಾಗಿದೆಯೆಂಬ ವರ್ತಮಾನವು ಬುರ್ಹಾನ್ ಶಾಹನಿಗೆ ತಿಳಿಯಿತು. ಬುರ್ಹಾನ್ ಶಾಹನು ಪರಿಸ್ಥಿತಿಯ ಲಾಭ ಪಡೆದು ದೆಹಲಿಯಿಂದ ಒಂದು ಸೈನ್ಯದ ದಂಡನ್ನು ತೆಗೆದುಕೊಂಡುಹೋಗಿ ದಕ್ಷಿಣದ ಮೇಲೆ ದಾಳಿ ಮಾಡುವ ಹೊಂಚು ಹಾಕಿದನು. ಪುನಃ ಯೋಚಿಸಿ ತನ್ನ ಯೋಜನೆಯನ್ನು ಬದಲಿಸಿ, ದೊರೆ ಅಕ್ಬರ್‌ನಿಗೆ "ದೆಹಲಿಯ ಸೈನ್ಯವನ್ನು ನಾನು ತೆಗೆದುಕೊಂಡು ಹೋಗಿ ಅಹಮದ್‌ನಗರದ ಮೇಲೆ ದಾಳಿ ಮಾಡಿದರೆ, ಅಹಮದ್‌ನಗರದ ಸರದಾರರು ಭವಿಷ್ಯದಲ್ಲಿ ರಾಜ್ಯಾಡಳಿತವನ್ನು ನಿರ್ವಹಿಸಲು ಬಿಡದೆ ನನ್ನನ್ನು ವಿರೋಧಿಸುವರು. ನಾನೊಬ್ಬನೇ ಅಹಮದ್‌ನಗರಕ್ಕೆ ಹೋಗಿ, ಅಲ್ಲಿರುವ ಸರದಾರರೊಡನೆ ಸಂಚು ಮಾಡಿ, ನನ್ನ ಜನ್ಮಜಾತ ಹಕ್ಕಿನಿಂದ ದೊರೆಯಬೇಕಾದ ರಾಜ್ಯವನ್ನು ವಶಮಾಡಿಕೊಳ್ಳುವೆನು, ಇದಕ್ಕೆ ಖುದಾವಂದರ ಸಹಾಯ ಬೇಕು" ಎಂದು ಕೋರಿದನು.

ಅಕ್ಬರನು ಬುರ್ಹಾನ್ ಶಾಹನ ಕೋರಿಕೆಯನ್ನು ಮನ್ನಿಸಿದನು ಹಾಗೂ ತನ್ನ ರಾಜ್ಯವನ್ನು ವಶಪಡಿಸಿಕೊಂಡ ನಂತರ ಬೆರಾರದ ಪ್ರದೇಶವನ್ನು ಅವರ ವಶಕ್ಕೆ ಕೊಡಬೇಕು, ಇದಕ್ಕೂ ಪೂರ್ವ ಹಿಜರಿ ಸನ್ ೯೮೮ರಲ್ಲಿ ತೂಫಾಲಖಾನನು ಈ ಪ್ರದೇಶವನ್ನು ಅಕ್ಬರ್‌ನ ಸುಪರ್ದಿಗೆ ಬಿಟ್ಟುಕೊಟ್ಟಿದ್ದನು ಎಂದು ಹೇಳಿದನು. ನಿರ್ವಾಹವಿಲ್ಲದೆ, ಬುರ್ಹಾನ್‌ಶಾಹನು ಷರತ್ತನ್ನು ಒಪ್ಪಿಕೊಂಡು ದಕ್ಷಿಣದತ್ತ ತೆರಳಿದನು. ದಕ್ಷಿಣದ ಗಡಿಯಲ್ಲಿರುವ ಹಿಂದಿಯಾ ಪರ್ಗಣೆ(ಪ್ರದೇಶ)ಯಲ್ಲಿ ಕೆಲವು ದಿನಗಳ ಕಾಲ ವಾಸಮಾಡಿದನು. ಬುರ್ಹಾನ್ ಶಾಹನು ಅಕ್ಬರ್‌ನ ಪರವಾಗಿ ಹಿಂದಿಯಾ ಪ್ರದೇಶದ ಜಹಗೀರದಾರನಾಗಿದ್ದನು.

ಅಹಮದ್‌ನಗರವನ್ನು ವಶಮಾಡಿಕೊಳ್ಳುವ ಸಿದ್ಧತೆ :

ಬುರ್ಹಾನ್ ಶಾಹನು ಎಲ್ಲಕ್ಕೂ ಮೊದಲು ಬುರ್ಹಾನ್‌ಪುರ ಮತ್ತು ಅಸೀರದ ರಾಜ ಅಲೀಖಾನನ ಸಲಹೆಯಂತೆ ಖ್ವಾಜಾ ನಿಜಾಮ ಅಸ್ತರಾಬಾದಿಯನ್ನು

ಅಹಮದ್‌ನಗರದ ಸರದಾರರ ಬಳಿ ಕಳುಹಿಸಿಕೊಟ್ಟನು. ಖ್ವಾಜಾ ಅಸ್ತರಾಬಾದಿಯು ಖಲಂದರರಂತೆ ವೇಷ ಬದಲಿಸಿಕೊಂಡು ಅಹಮದ್‌ನಗರದ ಸರದಾರರ ನೆರವು ಕೇಳಲು ಹೊರಟನು. ಅಹಮದ್‌ನಗರದ ಸರದಾರರು ಮತ್ತು ಅಮೀರರನ್ನು ಖ್ವಾಜಾ ಸಂಪರ್ಕಿಸಿದಾಗ, ಕೆಲವು ಸರದಾರರು ಸಹಾಯ ಮಾಡಲು ಒಪ್ಪಿಕೊಂಡರೆ, ಇನ್ನೂ ಕೆಲವರು ನಿರಾಕರಿಸಿದರು. ಹೀಗೆ ನೆರವು ನೀಡುವುದಕ್ಕೆ ಒಪ್ಪಿಕೊಂಡವರಲ್ಲಿ ಜಹಾಂಗೀರ್ ಹಬಶಿಯು ಒಬ್ಬನಾಗಿದ್ದನು. ಆತನು ಬೆರಾರ ಮತ್ತು ಖಾನದೇಶದ ಬಳಿ ಇರುವ ಪರ್ಗಣೆ(ಪ್ರದೇಶ)ಯ ಜಹಾಗೀರದಾರನಾಗಿದ್ದನು. ಅಹಮದ್‌ನಗರದಲ್ಲಿ ಮಹದ್ವಿಧ್ವರ್ಯವು ಜಾರಿಯಾದ ನಂತರ ಜಹಾಂಗೀರನು ಜಮಾಲಖಾನನ ಬದ್ಧವೈರಿಯಾಗಿದ್ದನು.

ಜಹಾಂಗೀರಖಾನ್ ಹಬಶಿಯು ಖ್ವಾಜಾ ನಿಜಾಮ ಅಸ್ತರಾಬಾದಿಯೊಡನೆ ಸದ್ವರ್ತನೆಯಿಂದ ಮಾತನಾಡಿ ಆದರಿಸಿದನು. ಆತನು ಬುರ್ಹಾನ್‌ನಿಜಾಮ ಶಾಹನಿಗೆ ಪತ್ರ ಬರೆದು, ಅಹಮದ್‌ನಗರಕ್ಕೆ ಬರಲು ಆಮಂತ್ರಣ ನೀಡಿದನು. ಖ್ವಾಜಾ ಅಸ್ತರಾಬಾದಿಯು ಹೊರಟುಹೋದ ನಂತರ, ಬೆಲೆಬಾಳುವ ಉಡುಗೊರೆಗಳೊಂದಿಗೆ ತನ್ನ ಸಂಬಂಧಿಕನೊಬ್ಬನನ್ನು ಬುರ್ಹಾನ್ ನಿಜಾಮಶಾಹನ ಬಳಿ ಕಳುಹಿಸಿ, ಕೂಡಲೇ ಅಹಮದ್‌ನಗರಕ್ಕೆ ಬರಲು ಸಂದೇಶ ಕಳುಹಿಸಿದನು.

ಜಹಾಂಗೀರ ಖಾನ ಮತ್ತು ಬುರ್ಹಾನ್‌ಶಾಹರ ಯುದ್ಧ :

ಬುರ್ಹಾನ್ ನಿಜಾಮಶಾಹನು ಆತಂಕದ ಶಂಕೆಯಿಲ್ಲದೆ ಬೆರಾರದ ಸರಹದ್ದಿನಲ್ಲಿ ಕಾಲಿರಿಸಿ, ಜಹಾಂಗೀರಖಾನನು ವಾಸಿಸುತ್ತಿರುವ ಪ್ರದೇಶದ ಬಳಿ ತಲುಪಿದನು. ಬುರ್ಹಾನ್ ಮತ್ತು ಜಹಾಂಗೀರ ಖಾನರು ಪರಸ್ಪರ ಭೇಟಿಯಾದ ತಕ್ಷಣ ಯುದ್ಧವನ್ನು ಆರಂಭಿಸಿದೊಂದು ಆಕಸ್ಮಿಕವೆಂದು ಹೇಳಬಹುದು. ಬುರ್ಹಾನ್ ಶಾಹ ಪರಾಭವಗೊಂಡನು. ವ್ಯಾಕುಲನಾದ ಬುರ್ಹಾನ್‌ಶಾಹನು ಬಂದ ದಾರಿಯಲ್ಲಿ ಹಿಂದಿರುಗಿ ಹಿಂದಿಯಾಕ್ಕೆ ಹೊರಟು ಹೋದನು.

ಬುರ್ಹಾನ್ ಹಾಗೂ ರಾಜಾ ಅಲೀಖಾನರಲ್ಲಿ ಪತ್ರವ್ಯವಹಾರ :

ಬುರ್ಹಾನ್ ಶಾಹನು ರಾಜಾ ಅಲೀಖಾನನಿಗೆ ಪತ್ರ ಬರೆದು ಎಲ್ಲ ವಿದ್ಯಮಾನಗಳನ್ನು ವಿವರಿಸಿದನು. ಜಮಾಲಖಾನನಿಂದ ದೊರೆಯಬೇಕಾದ ತನ್ನ ವಾರಸಾ ರಾಜ್ಯವನ್ನು ವಶಪಡಿಸಿಕೊಳ್ಳುವ ಬಗ್ಗೆ ಆತನ ಸಲಹೆಯನ್ನು ಯಾಚಿಸಿದನು. ಅಲೀಖಾನನು, 'ಅಕ್ಬರನಿಂದ ಸೈನ್ಯದ ನೆರವು ಪಡೆದು ವಿಜಯಿಯಾದರೂ ದಕ್ಷಿಣದ ಎಲ್ಲ ಅರಸರು ನಿನ್ನನ್ನು ವಿರೋಧಿಸುವರು ಹಾಗೂ ಜಮಾಲ್‌ಖಾನನ ಪರವಾಗಿ ನಿಲ್ಲುವರು. ಈ ಕದನವು ಸುದೀರ್ಘ ಕಾಲ ನಡೆಯುವುದು, ಹತ್ತಿಪ್ಪತ್ತು ವರ್ಷಗಳು ಅಥವಾ ಇನ್ನೂ

ಹೆಚ್ಚು ಅವಧಿ ಬೇಕಾಗಬಹುದು. ಜಮಾಲಖಾನನೊಡನೆ ಯುಧ್ಧ ಮಾಡುವಷ್ಟು ದೊಡ್ಡ ಸೈನ್ಯ ನನ್ನ ಬಳಿ ಇಲ್ಲ. ಈ ವಿಷಯದಲ್ಲಿ ಇಬ್ರಾಹಿಮ ಆದಿಲ್ ಶಾಹಿಯ ಸಹಾಯ ಪಡೆಯುವುದು ಉಚಿತ. ಖಂಡಿತವಾಗಿಯೂ ಇಬ್ರಾಹಿಮನು ನಿನಗೆ ನೆರವು ನೀಡುವನು' ಎಂದು ಸಲಹೆ ಮಾಡಿದನು.

ಬುರ್ಹಾನ್‌ಶಾಹನಿಂದ ಇಬ್ರಾಹಿಮ ಆದಿಲ್ ಶಾಹಿಗೆ ಪತ್ರ :

ರಾಜಾ ಅಲೀಖಾನನ ಸಲಹೆಯನ್ನು ಬುರ್ಹಾನ್ ನಿಜಾಮುಶಾಹನು ಕಾರ್ಯಗತಗೊಳಿಸಿದನು. ಇಬ್ರಾಹಿಮ ಆದಿಲ್‌ಶಾಹನಿಗೆ ಹಲವು ಪತ್ರಗಳನ್ನು ಬರೆದು, ವೇಗವಾಗಿ ತಲುಪಿಸುವ ದೂತರ ಮೂಲಕ ಪತ್ರಗಳನ್ನು ರವಾನಿಸಿದನು. ಹಿಜರಿಸನ್ ೯೯೮ರಲ್ಲಿ ಈ ಹರಿಕಾರನು ರಬಿಉಲ್ ಅವ್ವಲ್‌ನ ಕೊನೆಯಲ್ಲಿ ಬಿಜಾಪುರ ತಲುಪಿ, ಈ ಕೃತಿಯ ಲೇಖಕ "ಫರಿಶ್ತಾ"ನ ಮನೆಯಲ್ಲಿ ತಂಗಿದನು. ಲೇಖಕನು ಇದೇ ತಿಂಗಳು ಇಬ್ರಾಹಿಮ ಆದಿಲ್‌ಶಾಹಿಯ ಸೇವೆಯಲ್ಲಿ ದಾಖಲಾಗಿದ್ದನು. ಆ ಪತ್ರಗಳಲ್ಲಿ ಒಂದು ಪತ್ರವು ಲೇಖಕ ಫರಿಶ್ತಾನಿಗೆ ಬರೆಯಲಾಗಿತ್ತು.

ಫರಿಶ್ತಾಗೆ ಬುರ್ಹಾನ್‌ಶಾಹ ಬರೆದ ಪತ್ರ :

ಈ ಪತ್ರದಲ್ಲಿ, "ಎಲ್ಲ ರಸ್ತೆಗಳು ಶತ್ರುಗಳ ವಶವಾಗಿವೆ. ನಮ್ಮ ದಾರಿಗಳೆಲ್ಲ ಮುಚ್ಚಿ ಹೋಗಿವೆ. ಹೀಗಾಗಿ ನಿನ್ನಲ್ಲಿಗೆ ದೂತನನ್ನು ಕಳುಹಿಸುತ್ತಿದ್ದೇವೆ. ನೀನು ನಮ್ಮ ಪ್ರಾಮಾಣಿಕ ಸೇವಕ ಮತ್ತು ಆಪ್ತನಾದುದರಿಂದ ಅತ್ಯಂತ ಜವಾಬ್ದಾರಿಯುತವಾದ ಈ ಕೆಲಸವನ್ನು ವಹಿಸುತ್ತಿದ್ದೇನೆ. ಹೇಗಾದರೂ ಈ ಪತ್ರಗಳನ್ನು ಬಾದಶಹರ ಸನ್ನಿಧಿಗೆ ತಲುಪುವಂತೆ ಮಾಡು ಹಾಗೂ ಈ ಪತ್ರಗಳ ಪ್ರತ್ಯುತ್ತರವನ್ನು ದೂತರ ಮೂಲಕ ಶೀಘ್ರವಾಗಿ ಕಳುಹಿಸು" ಎಂಬ ಸಂದೇಶವಿತ್ತು. ಈ ಕೃತಿಯ ಲೇಖಕನು ದೂತರನ್ನು ದಿಲಾವರಖಾನನ ಬಳಿ ಕರೆದೊಯ್ದು ಎಲ್ಲ ವೃತ್ತಾಂತವನ್ನು ನಿವೇದಿಸಿದನು.

ಬುರ್ಹಾನ್ ಶಾಹನ ನೆರವಿಗೆ ಇಬ್ರಾಹಿಮ ಆದಿಲ್ ಶಾಹಿಯ ಸಿದ್ಧತೆ :

ದಿಲಾವರಖಾನನು ಈ ಪತ್ರಗಳನ್ನು ಬಾದಶಹನ ಅವಗಾಹನೆಗೆ ಸಲ್ಲಿಸಿದನು. ದೊರೆಯು ಪತ್ರಗಳನ್ನು ಓದಿದ ನಂತರ ಬುರ್ಹಾನ್‌ಶಾಹನಿಗೆ ನೆರವು ನೀಡಲು ಒಪ್ಪಿಕೊಂಡನು. ಅದಕ್ಕನುಗುಣವಾಗಿ ಪ್ರತ್ಯುತ್ತರಗಳನ್ನು ಬರೆಯಿಸಿ ಪತ್ರ ತಂದ ದೂತರಿಗೆ ಕೊಟ್ಟು ಅವರಿಗೆ ವಾಪಸಾಗಲು ಅನುಮತಿ ನೀಡಿದನು. ಕೇವಲ ಎರಡು ಮೂರು ದಿನಗಳಲ್ಲಿ ಬಾದಶಹನು ವೇಗವಾಗಿ ಓಡುವ ದೂತರ ಮೂಲಕ ಸಂದೇಶ ಕಳುಹಿಸಿ ಸೈನ್ಯವನ್ನು ಒಗ್ಗೂಡಿಸಿದನು. ನಂತರ, ಬಾದಶಹನ ಮೆರವಣಿಗೆ ತೆಗೆದು, ಬಿಜಾಪುರದಿಂದ ಆರು ಹರದಾರಿ ದೂರದಲ್ಲಿರುವ ಬಹಮನ್ ಅಲಿಯ ನಿವಾಸಸ್ಥಳದ ಬಳಿ ಸೈನ್ಯವು ಬೀಡು ಬಿಟ್ಟಿತು.

ಶಾಹದುರ್ಗದತ್ತ ಪಯಣ :

ಬುರ್ಹಾನ್ ನಿಜಾಮಶಾಹನಿಗೆ ನೆರವು ನೀಡುವುದಕ್ಕಾಗಿ ಮತ್ತು ಜಮಾಲಖಾನ ಮಹದ್ವಿಯನ್ನು ವಿನಾಶ ಮಾಡುವುದಕ್ಕೆ ಹಿಜರಿಸನ್ ೯೯೮ರ ರಬೀವುಲ್‌ಸಾನಿ ಮಾಸದ ಗುರುವಾರದಂದು ಬಾದಶಹ ಇಬ್ರಾಹಿಮ ಆದಿಲ್‌ಶಾಹನು ಶಾಹದುರ್ಗದತ್ತ ಪ್ರಯಾಣ ಆರಂಭಿಸಿದನು. ಶಾಹದುರ್ಗವನ್ನು ತಲುಪಿದ ನಂತರ ವಿಹಾರ – ಮನರಂಜನೆಗಳಲ್ಲಿ ಕೆಲವು ದಿನಗಳ ಕಾಲ ಕಳೆಯಿತು. ನಂತರದಲ್ಲಿ ಬೆರಾರದ ಸರದಾರರು ಹಾಗೂ ಸಜ್ಜನರಿಗೆ ವಿನೀತಭಾವ ಸೂಸುವ ಪತ್ರವೊಂದನ್ನು ಬರೆದನು.

ಅದರ ವಿಷಯ ಹೀಗಿತ್ತು: "ಅಹಮದ್‌ನಗರದ ಸಿಂಹಾಸನದ ಮೇಲೆ ಇಸ್ಮಾಯಿಲನ ಬದಲಾಗಿ ಬುರ್ಹಾನ ನಿಜಾಮಶಾಹನನ್ನು ಕುಳ್ಳಿರಿಸಬೇಕೆಂಬ ನಿರ್ಧಾರವನ್ನು ನಾನು ಅಲ್ಲಾಹನ ಮೇಲೆ ಭರವಸೆ ಇಟ್ಟು ಮಾಡಿದ್ದೇನೆ. ಅವರಿಬ್ಬರಲ್ಲಿ ತಂದೆ ಮಗನ ಸಂಬಂಧವಿದೆ. ಆದರೆ ಇಸ್ಮಾಯಿಲನು ಇನ್ನೂ ಚಿಕ್ಕವನು. ತಂದೆಯ ಸಮಾನರಾದ ಹಿರಿಯರಿದ್ದಾಗ, ಮಗನು ಸಿಂಹಾಸನದ ಮೇಲೆ ಕುಳಿತುಕೊಳ್ಳುವದು ಸರಿಯಾದ ನಡತೆಯಲ್ಲ. ಆದುದರಿಂದ ನೀವೆಲ್ಲರೂ ನನ್ನ ಈ ಅಭಿಪ್ರಾಯವನ್ನು ವಿರೋಧಿಸಿ ನನ್ನ ಕಾರ್ಯಕ್ಕೆ ಅಡ್ಡಿ ಬರಬೇಡಿ. ಬುರ್ಹಾನ್ ನಿಜಾಮ ಶಾಹನ ಪ್ರಾಮಾಣಿಕತೆ ಮತ್ತು ವಿಧೇಯತೆಗೆ ಬಲ ಬರುವಂತೆ ಮಾಡಿ."

ರಾಜಾ ಅಲೀಖಾನ ಮತ್ತು ಬುರ್ಹಾನ ನಿಜಾಮಶಾಹರ ದೂತರ ಆಗಮನ :

ರಾಜಾ ಅಲೀಖಾನ ಮತ್ತು ಬುರ್ಹಾನ ನಿಜಾಮಶಾಹರ ಕೆಲವು ದೂತರು ಬಾದಶಹ ಇಬ್ರಾಹಿಮ ಆದಿಲ್‌ಶಾಹನ ಸನ್ನಿಧಾನದಲ್ಲಿ ಹಾಜರಾದರು. ಅವರು ಕೆಲವು ಪತ್ರಗಳನ್ನು ಬಾದಶಹನಿಗೆ ಒಪ್ಪಿಸಿದರು. ಆ ಪತ್ರಗಳಲ್ಲಿ, "ಹುಜೂರರ ಬರುವಿಕೆಯಿಂದ ನಮಗೆ ಸಂತೋಷವಾದಷ್ಟೇ ಶತ್ರುಗಳಿಗೆ ಭಯವಾಗಿದೆ. ಹುಜೂರರ ಸೈನ್ಯವು ದಾಳಿ ಮಾಡುವುದಕ್ಕೆ ಬಂದುದರ ಪರಿಣಾಮವಾಗಿ, ಬೆರಾರದ ಸರದಾರರು ಅದರಲ್ಲೂ ವಿಶೇಷತಃ ಜಹಾಂಗೀರ ಖಾನ ಹಬಶೀ ಮತ್ತು ಆತನ ಸಂಗಡಿಗರು ನಮ್ಮನ್ನು ತಲುಪುವುದಕ್ಕೆ ಆತುರದಲ್ಲಿ ಬರುವುದಕ್ಕೆ ಪ್ರಯತ್ನಿಸುತ್ತಿದ್ದಾರೆ. ಜಮಾಲಖಾನ ಮಹದ್ವಿ ಪ್ರವಾಸದ ಸಿದ್ಧತೆಯನ್ನು ಈಗಾಗಲೇ ಮಾಡಿಕೊಂಡಿದ್ದಾನೆ ಹಾಗೂ ಇಸ್ಮಾಯಲ್ ನಿಜಾಮಶಾಹನನ್ನು ಜೊತೆಗೆ ಕರೆದುಕೊಂಡು ಬೆರಾರದತ್ತ ಪ್ರಯಾಣ ಬೆಳೆಸುತ್ತಿದ್ದಾನೆಂಬ ವಾರ್ತೆ ಕೆಲವು ಗುಪ್ತಚಾರರಿಂದ ತಿಳಿದು ಬಂದಿದೆ. ಈ ಕಾರಣದಿಂದ ಬೆರಾರದ ಸರದಾರರು ತಮ್ಮ ಪ್ರದೇಶವನ್ನು ಬಿಟ್ಟು ಹುಜೂರರ ಸೇವೆಯನ್ನು ತಲುಪಲು ಇಚ್ಚಿಸುತ್ತಾರೆ. ಹುಜೂರರು ತಮ್ಮ ಸೈನ್ಯದೊಂದಿಗೆ ಇನ್ನೂ ಕೊಂಚ ದಾರಿ ಮುಂದೆ ಸಾಗಿಬಂದರೆ, ಜಮಾಲಖಾನನು ತಮ್ಮ ಆಕ್ರಮಣದ ಭೀತಿಯಿಂದ ಅಹಮದ್‌ನಗರದಿಂದ ಹೊರಕ್ಕೆ ಬರುವ ಹಾಗೂ ಬೆರಾರದ ಮೇಲೆ ದಾಳಿ ಮಾಡುವ

ಯೋಚನೆ ಬಿಟ್ಟುಬಿಡುತ್ತಾನೆ. ಅಷ್ಟರಲ್ಲಿ ಬೆರಾರದ ಸರದಾರರು ತಮ್ಮ ಸೇವೆಯಲ್ಲಿ ಹಾಜರಾಗುತ್ತಾರೆ." ಎಂದು ಬರೆಯಲಾಗಿತ್ತು.

ವಾರಾಸಂಗದತ್ತ ಬಾದಶಹ ಇಬ್ರಾಹಿಮ ಆದಿಲ್ ಶಾಹನ ಪಯಣ :

ಬಾದಶಹ ಇಬ್ರಾಹಿಮ ಆದಿಲ್‌ಶಾಹನಿಗೆ ಈ ಸಲಹೆಯು ಅತ್ಯಂತ ಸಮಂಜಸವಾದುದೆಂದು ತೋರಿತು. ಈ ಸಲಹೆಯನ್ನು ಕಾರ್ಯಗತಗೊಳಿಸಲು ಶಾಹದುರ್ಗದಿಂದ ಮುಂದೆ ಪ್ರಯಾಣ ಬೆಳೆಸಿ, ಬೆರಾರದ ಸರಹದ್ದಿನಲ್ಲಿರುವ ವಿರಾಸಂಗದತ್ತ ಹೊರಟನು. ಬಾದಶಹನು ಬುರ್ಹಾನ್ ನಿಜಾಮಶಾಹ ಮತ್ತು ಅಲೀಖಾನರಿಗೆ, 'ನಿಮ್ಮ ಸಲಹೆಯ ಮೇರೆಗೆ ನಮ್ಮ ಸೈನ್ಯದೊಡನೆ ನಾವು ಮುಂದೆ ಸಾಗಿ ಬಂದಿದ್ದೇವೆ. ಬುರ್ಹಾನ್ ನಿಜಾಮಶಾಹರಿಗೆ ವಿಧೇಯರಾಗಿದ್ದು ಆಜ್ಞಾಪಾಲನೆ ಮಾಡುವುದು ನಿಮ್ಮ ಕರ್ತವ್ಯವೆಂದು ಬೆರಾರದ ಸರದಾರರಿಗೆ ಪತ್ರಮುಖೇನ ತಿಳಿಸಿದ್ದೇವೆ. ನೀವೆಲ್ಲರೂ ಈ ಕೂಡಲೇ ಬೆರಾರದ ಸರಹದ್ದನ್ನು ತಲುಪಿ ಬೆರಾರದ ಸರದಾರರನ್ನು ನಿಮ್ಮೊಡನೆ ಸೇರಿಸಿಕೊಳ್ಳಿ. ಜಮಾಲ್‌ಖಾನ ಮಹದ್ವಿಯ ದಮನದ ನಂತರ ನಿಮ್ಮನ್ನು ಭೆಟ್ಟಿಯಾಗುತ್ತೇವೆ' ಎಂಬ ಸಂದೇಶ ಕಳುಹಿಸಿದನು.

ಜಮಾಲಖಾನ ಮಹದ್ವಿಯ ಉಪಾಯ :

ಜಮಾಲಖಾನ ಮಹದ್ವಿಗೆ ನಡೆಯುತ್ತಿರುವ ವಿದ್ಯಮಾನಗಳ ಅರಿವಾಯಿತು. ಜಮಾಲಖಾನನು ಶೂರನೂ ಹಾಗೂ ಬುದ್ಧಿವಂತನೂ ಆಗಿದ್ದನು. ಆತನು ಶತ್ರುಗಳ ಎರಡೂ ತಂಡಗಳನ್ನು ನಾಶಮಾಡುವ ನಿರ್ಧಾರ ಮಾಡಿದನು. ಬೆರಾರದ ದಂಡನಾಯಕ ಸಯ್ಯದ್ ಅಹ್ಮದ್ ಉಲ್ ಮುಲ್ಕನಿಗೆ, "ನಮ್ಮ ಪ್ರದೇಶದ ಸುತ್ತಮುತ್ತಲಿನ ಎಲ್ಲ ರಾಜರು ನನ್ನನ್ನು ಸಂಪೂರ್ಣ ನಾಶಮಾಡುವ ಹೊಂಚು ಹಾಕುತ್ತಿದ್ದಾರೆ. ಇದಕ್ಕೆ ಎರಡು ಕಾರಣಗಳಿವೆ. ಒಂದು ಕಾರಣ, ನನ್ನ ರಾಜ್ಯವನ್ನು ವಶಪಡಿಸಿ ಕೊಳ್ಳುವುದು. ಪ್ರಬಲರು ದುರ್ಬಲರ ಮೇಲೆ ದಾಳಿ ಮಾಡುವುದು ಜಗತ್ತಿನ ನಿಯಮವೇ ಆಗಿದೆ. ಎರಡನೆಯ ಕಾರಣ, ಮಹದ್ವಿ ಧರ್ಮವು ಪ್ರಚಲಿತವಾಗುತ್ತಿರುವುದು. ನಾನು ಅತ್ಯಂತ ಪರಿಶ್ರಮದಿಂದ ಮಹದ್ವೀ ಧರ್ಮವನ್ನು ಜಾರಿಗೊಳಿಸಿರುವದನ್ನು ಈ ಜನರು ಉಳಿಯದಂತೆ ಮಾಡಬೇಕೆನ್ನುವರು ಹಾಗೂ ಅದರ ಹೆಸರನ್ನು ಕೂಡಾ ಅಳಿಸಿಬಿಡಬೇಕೆನ್ನುವರು. ಈ ಸಂದರ್ಭದಲ್ಲಿ ಒಂದೇ ಧರ್ಮದವರಾದ ನಾವು, ಒಗ್ಗಟ್ಟಿನಿಂದ ಇರುವ ಅವಶ್ಯಕತೆ ಇದೆ. ನೀನು ಬೆರಾರದ ಸರದಾರರನ್ನು ನಿಯಂತ್ರಣದಲ್ಲಿಟ್ಟುಕೊ. ಅವರು ಬುರ್ಹಾನನೊಂದಿಗೆ ಸಂಚು ಮಾಡದಂತೆ ನೋಡಿಕೋ. ಅಷ್ಟೇ ಅಲ್ಲದೆ, ಬುರ್ಹಾನನಿಗೆ ಬೆರಾರ ಪ್ರದೇಶದಲ್ಲಿ ಪ್ರವೇಶಿಸಲು ಅವಕಾಶ ನೀಡಬೇಡ. ರಾಜಾ ಅಲೀಖಾನನು ನಿನಗೆ ವಿರೋಧವನ್ನು ಮಾಡುವನು. ನೀನು ಅದರ ಬಗ್ಗೆ ಭಯಪಡಬೇಡ. ಆತನೊಡನೆ ನಿರ್ಭೀತಿಯಿಂದ ಯುದ್ಧ ಮಾಡಿ, ನಿನ್ನ ಪ್ರಾಮಾಣಿಕತೆ

ಹಾಗೂ ವಿಶ್ವಾಸದ ಪ್ರಮಾಣವನ್ನು ಇಸ್ಮಾಯಿಲ್ ನಿಜಾಮಶಾಹನಿಗೆ ಒಪ್ಪಿಸಬೇಕು. ಅಷ್ಟರಲ್ಲಿಯೇ ನಾನು ದಿಲಾವರಖಾನನೊಂದಿಗೆ ಸಂಧಾನ ಮಾಡಿಕೊಂಡು ನಿಮ್ಮೆಡೆಗೆ ಬರುವೆನು" ಎಂಬ ಸಂದೇಶ ಕಳುಹಿಸಿದನು.

ವಿರಾಸಂಗದತ್ತ ಜಮಾಲ ಖಾನನ ಪಯಣ :

ತದನಂತರ, ಜಮಾಲಖಾನನು ದಿಲಾವರಖಾನನಿಗೆ ಪತ್ರ ಬರೆದು ಸಂಧಿಯ ಪ್ರಸ್ತಾಪ ಮಾಡಿದನು. ಈ ಸಂದರ್ಭದಲ್ಲಿ ಜಮಾಲಖಾನನು ಅತ್ಯಂತ ವಿನಯದಿಂದ ಕೋರಿಕೆ ಸಲ್ಲಿಸಿದರೂ ಯಾವುದೇ ಅನುಕೂಲಕರ ಪರಿಣಾಮವಾಗಲಿಲ್ಲ. ಜಮಾಲಖಾನನು ರಾಜ್ಯದ ಭಂಡಾರವನ್ನು ಒಡೆದು, ಹಣವನ್ನು ವೆಚ್ಚ ಮಾಡಿ, ಪ್ರಬಲವಾದ ಸೈನ್ಯವನ್ನು ಸಜ್ಜುಗೊಳಿಸಿದನು. ಸುಸಜ್ಜಿತ ಸೈನ್ಯ ಹಾಗೂ ದೊರೆ ಇಸ್ಮಾಯಲ್‌ನೊಡನೆ ಅಹಮದ್‌ನಗರದಿಂದ ವಿರಾಸಂಗದತ್ತ ಯುದ್ಧ ಮಾಡುವ ಉದ್ದೇಶದೊಡನೆ ಪ್ರಯಾಣ ಬೆಳೆಸಿದನು.

ಸಂಧಾನದ ವಿಫಲ ಪ್ರಯತ್ನ :

ಆದಿಲ್‌ಶಾಹಿ ಸೈನ್ಯವು ಬೀಡುಬಿಟ್ಟ ಸ್ಥಳದಿಂದ ಏಳು ಹರದಾರಿ ದೂರದಲ್ಲಿ ಜಮಾಲಖಾನನು ತಂಗಿದನು. ದಿಲಾವರಖಾನನ ಬಳಿ ದೂತರನ್ನು ಕಳುಹಿಸಿ ಪುನಃ ಸಂಧಾನದ ಮಾತುಕತೆಗೆ ಪ್ರಯತ್ನಿಸಿದನು. ಮೊದಲಿನಂತೆಯೇ ದಿಲಾವರಖಾನನು ಈ ಸಲವೂ ಸಂಧಾನಕ್ಕೆ ಒಪ್ಪಲಿಲ್ಲ. ಈ ಪರಿಸ್ಥಿತಿಯಲ್ಲಿ ಮುಂದಿನ ಪರಿಣಾಮವನ್ನು ಊಹಿಸಿ ಭೀತಿಯಿಂದ ಕಂಪಿಸತೊಡಗಿದನು.

ಸಂದರ್ಭ ಹೀಗಿರುವಾಗ, ದಿಲಾವರಖಾನನ ಕೆಲವು ಸಂಗಡಿಗರು ಮುನ್ನೆಚ್ಚರಿಕೆ ವಹಿಸದೆ, ಜಮಾಲಖಾನನು ಮಹದ್ವಿಗಳ ಒಂದು ಗುಂಪಿನೊಡನೆ ರಣರಂಗವನ್ನು ಬಿಟ್ಟು ಪರಾರಿಯಾಗುವ ಹಾಗೂ ಅರಣ್ಯದಲ್ಲಿ ಅವಿತುಕೊಳ್ಳುವ ಯೋಜನೆ ಮಾಡಿದ್ದಾನೆ ಎಂದು ಹೇಳಿದರು. ದಿಲಾವರಖಾನನು ದುರದೃಷ್ಟವಶಾತ್ ತನ್ನ ಸಂಗಡಿಗರ ಮಾತನ್ನು ನಂಬಿ ಆತನನ್ನು ಬಂಧಿಸುವ ಉಪಾಯ ಮಾಡತೊಡಗಿದನು. ಜಮಾಲಖಾನನಿಂದ ಅಸಂತುಷ್ಟನಾದ ಬೈತಕ್ ಎಂಬ ಸರದಾರನು ಆದಿಲ್‌ಶಾಹಿ ಸೈನ್ಯದಲ್ಲಿ ಬಂದು ಸೇರಿಕೊಂಡನು. ಆತನು ಬೀಡ ಮಾರ್ಗವಾಗಿ ಪ್ರಯಾಣ ಮಾಡಿ, ಬುರ್ಹಾನ್ ನಿಜಾಮಶಾಹನ ಬಳಿ ಬಂದು ತಲುಪಿದನು. ಈ ವಿಷಯ ತಿಳಿದ ಜಮಾಲಖಾನನು, ತನ್ನ ಎಲ್ಲ ಸರದಾರರು ಇದೇ ರೀತಿ ಒಬ್ಬರಾದ ಮೇಲೆ ಒಬ್ಬರು, ಶತ್ರುಗಳೊಡನೆ ಸೇರಿಕೊಳ್ಳುವರು ಎಂದು ಊಹಿಸಿದನು.

ಜಮಾಲಖಾನನ ವಿವಶತೆ :

ಈ ಕಲ್ಪನೆಯಲ್ಲಿ ಜಮಾಲಖಾನನು ಚಿಂತಾಕ್ರಾಂತನಾಗಿ, ತಾನು ಬೀಡು ಬಟ್ಟಿರುವ

ಸ್ಥಳದಿಂದ ಮುಂದೆ ಹೊರಟನು. ಸೈನಿಕರು ಅವಿತುಕೊಳ್ಳಲು ಅನುಕೂಲವಾದ ದೃಷ್ಟಿಯಿಂದ ಉತ್ತಮವಾದ, ಗಿರಿಕಂದರಗಳಿಂದ ಆವೃತವಾದ ಸ್ಥಳವನ್ನು ಅರಿಸಿಕೊಂಡು ಹೊರಟನು. ದಿಲಾವರಖಾನನ ಗುಪ್ತಚರರು ಈ ವಿಷಯವನ್ನು ತಿಳಿಸಿದರು. ಜಮಾಲಖಾನನು ಪರಾರಿಯಾಗುವ ಉದ್ದೇಶದಿಂದ ಮುಂದೆ ಹೊರಟಿದ್ದಾನೆಂದು ದಿಲಾವರಖಾನನು ಊಹಿಸಿ, ಇಪ್ಪತ್ತು ಸಾವಿರ ಕುದುರೆ ಸವಾರರೊಡನೆ ಜಮಾಲಖಾನನಿರುವಲ್ಲಿಗೆ ಹೊರಟನು. ಬಾದಶಹನ ಅನುಮತಿಯನ್ನು ಪಡೆಯದೆ ದಿಲಾವರನು ಈ ನಿರ್ಧಾರವನ್ನು ಕೈಗೊಂಡಿದ್ದನು.

ದಿಲಾವರಖಾನನ ನಿರ್ಭೀತಿಯ ಪರಿಣಾಮ :

ತನ್ನ ಸಾಮರ್ಥ್ಯದ ಬಗೆಗಿನ ಮದದಿಂದ ತನ್ನ ಬಳಿ ಸಾಕಷ್ಟು ಯುದ್ಧ ಸಾಮಗ್ರಿ ಇದೆಯೋ ಇಲ್ಲವೋ ಎಂಬ ಯೋಚನೆಯನ್ನೂ ಮಾಡಲಿಲ್ಲ. ಶತ್ರುಗಳಿರಬಹುದಾದ ತಾಣದಿಂದ ಇನ್ನೂ ಎರಡು ಮೂರು ಹರದಾರಿ ದೂರದಲ್ಲಿದ್ದಾಗ, ಅವರಿಗೆ ದೂರದಿಂದಲೇ ಡೇರೆಗಳು ಕಂಡು ಬಂದವು. ದಿಲಾವರಖಾನನು ಈ ಡೇರೆಗಳು ಯಾರದು ಎಂದು ತನ್ನ ಸಂಗಡಿಗರನ್ನು ಕೇಳಿದಾಗ, ಕೆಲವರು ನಿಜಾಮಶಾಹಿ ಸೈನ್ಯದ ಡೇರೆ ಎಂದು ಹೇಳಿದರೆ, ಇನ್ನು ಕೆಲವರು ಇದು ಆದಿಲ್‌ಶಾಹಿ ಸೈನ್ಯದ ಬೀಡು ಎಂದು ಹೇಳಿದರು. ದಿಲಾವರನು ಈ ಗೊಂದಲದಲ್ಲಿರುವಾಗಲೇ, ದೂತರು ನಿಜಾಮಶಾಹಿ ಸೈನ್ಯವು ಅಲ್ಲಿಯೇ ತಂಗಿರುವುದಾಗಿ ತಿಳಿಸಿ, ಡೇರೆಗಳು ನಿಜಾಮಶಾಹಿಗಳವು ಎಂಬ ಸುದ್ದಿ ತಂದರು.

ಪಶ್ಚಾತ್ತಾಪದ ಭಾವನೆ :

ಈ ವಿಷಯ ತಿಳಿದ ದಿಲಾವರಖಾನನು ಕೂಡಲೇ ಮುಂದುವರಿಯುವ ವಿಚಾರವನ್ನು ಬಿಟ್ಟು ಥಟ್ಟನೆ ನಿಂತನು. ಮುಂದಾಲೋಚನೆ ಮಾಡದೆ ಕೈಗೊಂಡ ತನ್ನ ನಿರ್ಧಾರದ ಬಗ್ಗೆ ಲಜ್ಜಿತನಾದನು. ಆತನು ಬಯಸಿದಲ್ಲಿ ಈಗಲೂ ಸುಲಭವಾಗಿ ಹಿಂದಿರುಗಬಹುದಾಗಿತ್ತು. ಆದರೆ, ಆತನ ಅಹಂಕಾರವು ಹಾಗೆ ಮಾಡಲು ಬಿಡಲಿಲ್ಲ. ಅಲ್ಲಿಯೇ ಬೀಡು ಬಿಟ್ಟನು. ಆತನ ಹಿಂದೆ ಬರುತ್ತಿರುವ ಸೈನ್ಯವು ಸಮೀಪಿಸಿದ ಮೇಲೆ ವೈರಿಗಳ ಮೇಲೆ ದಾಳಿ ಮಾಡಬೇಕೆಂದು ಯೋಜಿಸಿದನು. ಇದೇ ಸಮಯಕ್ಕೆ ದೂತನೊಬ್ಬನು ದಿಲಾವರಖಾನನ ಬಳಿ ಬಂದು ಬಾದಶಹ ಇಬ್ರಾಹಿಮ ಆದಿಲ್‌ಶಾಹನ ಸಂದೇಶವನ್ನು ತಂದನು. ಆ ಸಂದೇಶದಲ್ಲಿ, 'ಯುದ್ಧದ ಸಿದ್ಧತೆ ಪೂರ್ಣವಾಗಿರದ ಕಾರಣ ಇಂದು ದಾಳಿ ಮಾಡುವ ವಿಚಾರವನ್ನು ಬಿಟ್ಟು, ಯುದ್ಧದ ಸಿದ್ಧತೆಯಾದ ನಂತರ ವೈರಿಗಳ ಮೇಲೆ ಆಕ್ರಮಣ ಮಾಡುವುದು ಒಳಿತು, ಇಲ್ಲವಾದಲ್ಲಿ ನಷ್ಟವಾಗುವ ಸಾಧ್ಯತೆ ಉಂಟು.' ಎಂದಿತ್ತು.

ದಿಲಾವರಖಾನನ ಹಟಮಾರಿತನ :

ದಿಲಾವರಖಾನನು ಬಾದಶಹನ ಸಲಹೆಯನ್ನು ಕಾರ್ಯಗತಗೊಳಿಸಲಿಲ್ಲ. ಆತನಿಗೆ ತನ್ನ ಬಳಿ ಇರುವ ಆನೆಗಳ ಮತ್ತು ಸಿಪಾಯಿಗಳ ಬಲದಿಂದಾಗಿ, ತನ್ನ ಸಾಮರ್ಥ್ಯದ ಮೇಲೆ ಅಪಾರ ನಂಬಿಕೆ ಇತ್ತು. ಆತನು ದೂತನೊಡನೆ, 'ಸ್ವಲ್ಪ ಸಮಯದಲ್ಲಿಯೇ ಜಮಾಲ್‌ಖಾನನನ್ನು ಬಂಧಿಸಿ ಹುಜೂರರ ಸೇವೆಯಲ್ಲಿ ತರುವೆನೆಂದು ಬಾದಶಹರಲ್ಲಿ ನನ್ನ ಪರವಾಗಿ ಅರಿಕೆ ಮಾಡು' ಎಂದು ಹೇಳಿ ಕಳುಹಿಸಿದನು. ಇದಾದ ನಂತರ ಯುದ್ಧದ ಸಿದ್ಧತೆ ಮಾಡತೊಡಗಿದನು. ಗಾಯಗೊಂಡಿದ್ದ ಸೈನಿಕರಿಂದ ಅವ್ಯವಸ್ಥಿತವಾಗಿದ್ದ ತನ್ನ ಸೈನ್ಯವನ್ನು ದಿಲಾವರನು ಅತಿ ಕಷ್ಟದಿಂದ ಅಲ್ಲಿಂದ ಮುಂದೆ ಸಾಗಿಸಿ ವೈರಿಗಳೆದುರಿಗೆ ಅಚಲವಾಗಿ ನಿಂತನು.

ಯುದ್ಧದ ಸಿದ್ಧತೆ :

ನಿಜಾಮಶಾಹಿ ಸೈನ್ಯವು ಆನೆಗಳನ್ನು ಹಾಗೂ ಮತ್ತಿತರ ಯುದ್ಧ ಸಾಮಗ್ರಿಗಳನ್ನು ರಣರಂಗದಿಂದಾಚೆಗೆ ಸಾಗಿಸದಿರಲೆಂದು ದಿಲಾವರಖಾನನು ಐದಾರು ಸಾವಿರ ತುರ್ಕಿ ಸೈನಿಕರನ್ನು ಶತ್ರು ಸೈನ್ಯದ ಹಿಂದೆ ನಿಯಮಿಸಿದನು. ಇದೂ ಅಲ್ಲದೆ, ಮಹದ್ವೀ ಧರ್ಮದ ಸೈನಿಕರನ್ನು ಹೆಚ್ಚಿನ ಸಂಖ್ಯೆಯಲ್ಲಿ ಹತಗೊಳಿಸುವ ಯತ್ನವೂ ಇದಾಗಿತ್ತು. ಪರಾರಿಯಾಗುವ ಎಲ್ಲ ದಾರಿಗಳು ಮುಚ್ಚಿದಾಗ, ಜಮಾಲಖಾನನು ಅನಿವಾರ್ಯವಾಗಿ ಯುದ್ಧ ಮಾಡುವ ನಿರ್ಧಾರಕ್ಕೆ ಬಂದನು. ಜಮಾದಿಲ್ ಅವ್ವಲ್ ತಿಂಗಳ ಐದನೆಯ ದಿನದಂದು ಜಮಾಲಖಾನನು ದಿಲಾವರಖಾನನ್ನೆದುರಿಸಲು ಮುಂದೆ ಬಂದನು.

ಯುದ್ಧದ ಆರಂಭ :

ಎರಡೂ ಪಕ್ಷದ ಸೈನಿಕರು ಜೀವದ ಹಂಗು ತೊರೆದು, ವೀರಾವೇಷದಿಂದ ಯುದ್ಧ ಮಾಡತೊಡಗಿದರು. ಆದಿಲ್‌ಶಾಹಿ ಸರದಾರರಾದ ಆಲಿಮ್ ಖಾನ್, ಐನುಲ್‌ಮುಲ್ಕ ಕಗಾನಿ ಮತ್ತಿತರರು ಈ ಸಂದರ್ಭದಲ್ಲಿ ರಣರಂಗ ತೊರೆದು ಹೋಗುವ ಯೋಚನೆ ಮಾಡಿದರು. ಬಾದಶಹನು ದಿಲಾವರಖಾನನ ಬಗ್ಗೆ ಅಸಂತುಷ್ಟನಾಗಿರುವುದು ಇವರಿಗೆ ತಿಳಿದಿತ್ತು. ಬಾದಶಹನ ಅಸಂತುಷ್ಟತೆಗೆ ದಿಲಾವರಖಾನನು ಬುಲ್‌ಬುಲ್ ಖಾನನನ್ನು ಕುರುಡನನ್ನಾಗಿ ಮಾಡಿದುದು ಒಂದು ಕಾರಣವಾದರೆ, ಬಾದಶಹನ ಸಮ್ಮತಿ ಇಲ್ಲದೆ ಯುದ್ಧ ಆರಂಬಿಸಿದುದು ಇನ್ನೊಂದು ಕಾರಣವಾಗಿತ್ತು. ಈ ಯುದ್ಧದಲ್ಲಿ ಸೋಲು ಖಚಿತವೆಂಬ ನೆಪ ಮಾಡಿಕೊಂಡು ಈ ಸರದಾರರು ರಣರಂಗದಿಂದ ಪರಾರಿಯಾಗಿ ಬಾದಶಹನ ಸನ್ನಿಧಿಗೆ ಹಾಜರಾದರು.

ಯುದ್ಧ ಭೂಮಿಯಿಂದ ದಿಲಾವರಖಾನನ ಪರಾರಿ :

ಸರದಾರರೆಲ್ಲ ಹೊರಟು ಹೋದ ನಂತರ ದಿಲಾವರಖಾನನು ಆಸರೆ

ಇಲ್ಲದಂತಾದನು. ಇದೇ ವೇಳೆ, ಜಮಾಲ್‌ಖಾನ ಮತ್ತು ಖುದಾವಂದಖಾನ್ ಹಬಶಿ ದಿಲಾವರಖಾನನ ಮೇಲೆ ದಾಳಿ ಮಾಡಿದರು. ಆಗ ದಿಲಾವರಖಾನನ ಬಳಿ ಎರಡು ನೂರು ಕುದುರೆ ಸವಾರರಿಗಿಂತ ಹೆಚ್ಚು ಸೈನ್ಯವಿರಲಿಲ್ಲ. ಇಂತಹ ಪರಿಸ್ಥಿತಿಯಲ್ಲಿ ರಣರಂಗದಲ್ಲಿಯೇ ನಿಂತು ಯುದ್ಧ ಮಾಡುವುದು ಅಸಾಧ್ಯವೆಂದು ಬಗೆದನು. ಕೇವಲ ಏಳು ಜನ ಸಂಗಡಿಗರೊಡನೆ, ದಿಲಾವರಖಾನನು ಅಲ್ಲಿಂದ ಪರಾರಿಯಾದನು. ದಿಲಾವರಖಾನನೊಡನಿದ್ದ ಏಳು ಜನ ಸಂಗಡಿಗರಲ್ಲಿ ಈ ಕೃತಿಯ ಕರ್ತೃವಾದ ಫರಿಶ್ತಾ ಸಹ ಪರಾರಿಯಾಗುವುದನ್ನು ಆಯ್ಕೆ ಮಾಡಿಕೊಂಡವರಲ್ಲಿ ಒಬ್ಬನಾಗಿದ್ದನು.

ಆಲಿಮ್ ಖಾನ್ ಮತ್ತು ಐನುಲ್ ಮುಲ್ಕನಂತಹ ಬಹಾದೂರ ಸೇನಾನಿಗಳು ಪರಾಜಯದ ನೆಪ ಮಾಡಿಕೊಂಡು ಯುದ್ಧ ಭೂಮಿಯಿಂದ ಓಡಿ ಹೋಗಿರುವ ವಿಷಯ ಗುಪ್ತಚರರ ಮೂಲಕ ತಿಳಿಯಿತು. ದಿಲಾವರಖಾನನನ್ನು ಸರ್ವನಾಶ ಮಾಡುವುದಕ್ಕಾಗಿ ಅವರೀಗ ಬಾದಶಹನಿರುವ ವಾರಾಸಂಗಕ್ಕೆ ಹೊರಟಿರುವ ವಿಷಯವು ಸಹ ತಿಳಿಯಿತು. ಈ ಸಮಾಚಾರವನ್ನು ಕೇಳಿದ ದಿಲಾವರನು ಗಾಬರಿಯಾಗಿ, ವಿರೋಧಿ ಸರದಾರರು ತಲುಪುವ ಮೊದಲೇ ತಾನು ಬಾದಶಹನನ್ನು ತಲುಪಬೇಕೆಂದು ಅತಿ ವೇಗವಾಗಿ ಪಯಣ ಮಾಡಿ, ವಾರಾಸಂಗನ್ನು ತಲುಪಿದನು. ಶತ್ರುಗಳು ಬೆನ್ನಟ್ಟುವ ಭೀತಿ ಇದ್ದುದರಿಂದ ದಿಲಾವರಖಾನನು ಬಾದಶಹನ ಜೊತೆಗೂಡಿ ಶಾಹದುರ್ಗದತ್ತ ಪ್ರಯಾಣ ಬೆಳೆಸಿದನು. ರಾತ್ರಿಇಡೀ ಪಯಣಿಸಿದ ನಂತರ ಬೆಳಗಿನ ಸಮಯ ತಮ್ಮ ನೆಲೆಯನ್ನು ತಲುಪಿದರು.

ಶಾಹದುರ್ಗದತ್ತ ಇಬ್ರಾಹಿಮ್ ಶಾಹನ ಪಯಣ :

ಜಮಾಲಖಾನನು ಯುದ್ಧದಲ್ಲಿ ಜಯಶಾಲಿಯಾದನು. ಕನಸು ಮನಸ್ಸಿನಲ್ಲಿಯೂ ಕಂಡಿರದ ವಿಜಯವು ಜಮಾಲಖಾನನಿಗೆ ವರವಾಗಿ ದೊರೆಯಿತು. ದಿಲಾವರಖಾನನ ಸೈನ್ಯ ಮತ್ತು ಆತನ ಮೂರುನೂರು ಆನೆಗಳು ಜಮಾಲಖಾನನ ವಶವಾದವು. ಜಮಾಲಖಾನನು ವಿಜಯಿಯಾದ ಸಂಭ್ರಮದಲ್ಲಿ ಶೀಘ್ರಿಯಿಂದ ವಾರಾಸಂಗ ತಲುಪಿ ಅಲ್ಲಿಯೇ ತಂಗಿದನು. ಈ ಯುದ್ಧದಲ್ಲಿ ಭಾಗವಹಿಸಿದ ಕೃತಿಕರ್ತೃ ಫರಿಶ್ತಾ, ಗಾಯಗೊಂಡಿರುವುದರಿಂದ ದಿಲಾವರಖಾನ ಮತ್ತು ಬಾದಶಹರೊಡನೆ ಶಾಹದುರ್ಗದತ್ತ ಪ್ರಯಾಣ ಮುಂದುವರಿಸುವುದು ಸಾಧ್ಯವಾಗದೆ, ವಾರಾಸಂಗದಲ್ಲಿ ತಂಗಿದ್ದನು. ಫರಿಶ್ತಾನನ್ನು ಮಹದ್ವಿಗಳು ಬಂಧನದಲ್ಲಿಟ್ಟರು. ಫಕೀರ ಮತ್ತು ನಿರ್ಗತಿಕನಾದ ಫರಿಶ್ತಾ, ಮಹದ್ವಿಗಳನ್ನು ಅತಿ ವಿನಯದಿಂದ ಅಂಗಲಾಚಿ ಬೇಡಿಕೊಂಡನಂತರ ಅವರಿಂದ ಬಂಧಮುಕ್ತನಾದನು.

ಆದಿಲ್‌ಶಾಹಿಯ ಸಮಸ್ತ ಸರದಾರರು ಮತ್ತು ಸೈನ್ಯದ ಸೇನಾನಿಗಳು ಶಾಹದುರ್ಗದಲ್ಲಿ ಜಮಾಯಿಸಿದರು. ಅಲ್ಲಿ ಬುರ್ಹಾನ್ ನಿಜಾಮಶಾಹನೊಡನೆ ರಾಜಾ

ಅಲೀ ಖಾನನು ಒಪ್ಪಂದ ಮಾಡಿಕೊಂಡಿರುವ ಸಮಾಚಾರ ದೊರೆಯಿತು. ಅಂತೆಯೇ ಬೆರಾರದ ಸರದಾರರೂ ಸಹ ಬುರ್ಹಾನನೊಡನೆ ಸಂಧಾನ ಮಾಡಿಕೊಂಡಿರುವುದು ತಿಳಿಯಿತು. ಇವರೆಲ್ಲರೂ ಬುರ್ಹಾನ ನಿಜಾಮ ಶಾಹನೊಡನೆ ಸೇರಿಕೊಂಡು ಇಬ್ರಾಹಿಮ ಆದಿಲ್‌ಶಾಹ ಸಾನಿಯ ಆಜ್ಞೆಯ ಮೇರೆಗೆ ಅಹಮದ್‌ನಗರದ ಮೇಲೆ ಆಕ್ರಮಣ ಮಾಡುವ ಯೋಜನೆ ಮಾಡಿದ್ದರು. ಜಮಾಲ್‌ಖಾನನಿಗೆ ಪರಿಸ್ಥಿತಿಯ ಅರಿವಾದಾಗ ವಾರಾಸಂಗದಲ್ಲಿ ನೆಲೆಯಾಗಿ ನಿಲ್ಲುವುದು ಹಿತವೆನ್ನಿಸಲಿಲ್ಲ. ಆತನು ಬೆರಾರದತ್ತ ಪ್ರಯಾಣ ಬೆಳೆಸಿದನು. ಬೆರಾರನ್ನು ತಲುಪಿ ರಾಜಾ ಅಲೀ ಖಾನನೊಡನೆ ಯುದ್ಧ ಮಾಡುವ ನಿರ್ಧಾರ ಮಾಡಿದನು. ಈ ವಿಷಯ ತಿಳಿದ ಅಲೀಖಾನನು ಭಯಗೊಂಡನು. ಅಲೀಖಾನನು ಸಯ್ಯದ್ ಅಹಜದುಲ್ ಮುಲ್ಕ ಮತ್ತು ಇತರ ಮಹದ್ವಿ ಸರದಾರರನ್ನು ಅಸೀರ ಕೋಟೆಯಲ್ಲಿ ಬಂಧಿಸಿದನು. ನಂತರ, ಇಬ್ರಾಹಿಮ ಆದಿಲ್‌ಶಾಹ ಸಾನಿಗೆ ಪತ್ರ ಬರೆದು, ಜಮಾಲಖಾನನನ್ನು ನಾಶ ಮಾಡುವ ಯೋಜನೆಗೆ ಅನುಮತಿ ಪಡೆದನು.

ಜಮಾಲಖಾನನನ್ನು ಬೆನ್ನಟ್ಟುವದು :

ಬಾದಶಹ ಇಬ್ರಾಹಿಮ ಆದಿಲ್‌ಶಾಹನು ಜಮಾಲಖಾನನನ್ನು ಸಂಪೂರ್ಣ ಧ್ವಂಸ ಮಾಡುವ ದೃಢ ನಿರ್ಧಾರ ಮಾಡಿದನು. ಬಾದಶಹನು ಸೈನ್ಯ ಮತ್ತು ಯುದ್ಧದ ಸಾಮಗ್ರಿಗಳನ್ನು ಪರಿಶೀಲಿಸಿ, ಜಮಾಲಖಾನನ ಬೆನ್ನಟ್ಟಿ ಶಹದುರ್ಗದತ್ತ ಪ್ರಯಾಣ ಬೆಳೆಸಿದನು. ಎಂಬತ್ತು ಹರದಾರಿಯ ಮಾರ್ಗವನ್ನು ಅತಿ ವೇಗದಿಂದ ಕ್ರಮಿಸಿದ ನಂತರ ಪಾತರೀ ಖಸ್ಬಾ ಪ್ರದೇಶವನ್ನು ತಲುಪಿದರು. ಅಲ್ಲಿಂದ ಜಮಾಲಖಾನನ ಸೈನ್ಯವಿರುವ ಸ್ಥಳವು ಕೇವಲ ಎಂಟು ದಿನಗಳ ದಾರಿ ಮಾತ್ರ ಉಳಿದಿತ್ತು. ಜಮಾಲಖಾನನು ಬಾದಶಹನ ಸೈನ್ಯವು ಬೆನ್ನಟ್ಟಿದುದರಿಂದ ಮಾರ್ಗ ಮಧ್ಯದಲ್ಲಿ ಎಲ್ಲಿಯೂ ನಿಲ್ಲದೆ, ಭಯಗ್ರಸ್ತನಾಗಿ ಓಡತೊಡಗಿದನು.

ತುರ್ಕಿ ಸೈನ್ಯವನ್ನು ರವಾನಿಸುವುದು :

ಇಬ್ರಾಹಿಮ ಶಾಹನು ಎಂಟು ಸಾವಿರ ತುರ್ಕಿ ಸಿಪಾಯಿಗಳನ್ನು ತನ್ನ ಸೈನ್ಯದಿಂದ ಬೇರ್ಪಡಿಸಿ, ಜಮಾಲಖಾನನನ್ನು ಬೆನ್ನಟ್ಟುವುದಕ್ಕೆ ಕಳುಹಿಸಿದನು. ಏಕೆಂದರೆ, ಈ ಸೈನ್ಯವು ಆದಷ್ಟು ಬೇಗ ಶತ್ರುಪಾಳಯ ತಲುಪಿ, ಶತ್ರುಗಳಿಗಿರುವ ಎಲ್ಲ ರಸ್ತೆಗಳನ್ನು ಮುಚ್ಚಿಬಿಡುವುದು ಹಾಗೂ ಅವರಿಗೆ ಅವಶ್ಯವಿದ್ದ ಆಹಾರಧಾನ್ಯ, ಮೇವು ಮತ್ತಿತರ ಸಾಮಗ್ರಿಗಳು ಅವರನ್ನು ತಲುಪದಂತೆ ಮಾಡುವುದು, ಬಾದಶಹನ ಉದ್ದೇಶವಾಗಿತ್ತು. ಶತ್ರುಗಳಿಗೆ ತೊಂದರೆ ನೀಡಿ ಅವರು ರೋಸಿ ಹೋಗುವಂತೆ ಮಾಡಿದರೆ, ಬುರ್ಹಾನ್ ನಿಜಾಮುಶಾಹ ಮತ್ತು ರಾಜಾ ಅಲೀಖಾನರು ಅವರನ್ನು ಸುಲಭವಾಗಿ ಪರಾಭವಗೊಳಿಸಲು ಸಾಧ್ಯವಾಗುವುದು ಎಂಬುದು ಬಾದಶಹನ ವಿಚಾರವಾಗಿತ್ತು.

ದಿಲಾವರನನ್ನು ನಾಶಮಾಡುವ ಉಪಾಯ :

ತುರ್ಕಿ ಸೈನ್ಯವನ್ನು ಕಳುಹಿಸಿದ ನಂತರ, ಬಾದಶಹನು ಒಂದು ಹೊಳೆಯ ದಂಡೆಯ ಬಳಿ ಬೀಡು ಬಿಟ್ಟನು. ಆ ಸ್ಥಳವು ಅತ್ಯಂತ ರಮಣೀಯ ನಿಸರ್ಗ ಸೌಂದರ್ಯದ ತಾಣವಾಗಿತ್ತು. ಬಾದಶಹನು ಅಲ್ಲಿಯೇ ಕೆಲವು ದಿನಗಳ ಕಾಲ ಸಮಯ ಕಳೆದು ಮುಂದೆ ಪ್ರಯಾಣ ಮಾಡುವ ನಿರ್ಧಾರ ಮಾಡಿದನು. ದಿಲಾವರಖಾನನು ಈ ನಿರ್ಧಾರವನ್ನು ವಿರೋಧಿಸಿ, ಬಾದಶಹನು ಈ ಸ್ಥಳದಿಂದ ಹೊರಟುಬಿಡಬೇಕು ಹಾಗೂ ಕಾತ್‌ರೋಹಿನಕರದವರೆಗೆ ಯಾವುದೇ ಸ್ಥಳದಲ್ಲಿಯೂ ನಿಲ್ಲಕೂಡದು ಎಂದು ಹೇಳಿದನು. ದಿಲಾವರಖಾನನ ಅಸಭ್ಯ ವರ್ತನೆಯು ಬಾದಶಹನಿಗೆ ಅಪ್ರಿಯವಾಯಿತು. ದಿಲಾವರಖಾನನನ್ನು ಸದೆ ಬಡೆಯುವ ಅಚಲ ನಿರ್ಧಾರವನ್ನು ಮಾಡಿದನು. ಆದರೆ ಎಲ್ಲ ಸರದಾರರು ದಿಲಾವರಖಾನನ ರಾಯಸವನ್ನು ಒಪ್ಪುತ್ತಿದ್ದರು. ಇದರಿಂದಾಗಿ ಈ ವಿಷಯದಲ್ಲಿ ಅವರ ನೆರವು ಪಡೆಯಲಾಗುತ್ತಿರಲಿಲ್ಲ. ಈ ಕಾರ್ಯವನ್ನು ಸ್ವತಃ ತನ್ನ ಕೈಯಿಂದಲೇ ಮಾಡಿ ಗತಿಕಾಣಿಸಬೇಕೆಂಬ ಯೋಚನೆ ಮಾಡಿದನು.

ಐನುಲ್‌ಮುಲ್ಕನ ಸಲಹೆ :

ಬಾದಶಹನು ತನ್ನ ತಂದೆಯ ಕಾಲದಿಂದಲೂ ಸೇವೆಯಲ್ಲಿರುವ ಹಾಗೂ ಇತರರು ಗುರುತಿಸದ ಇಬ್ಬರು ಹಿಂದುಗಳನ್ನು ರಹಸ್ಯವಾಗಿ ಐನುಲ್‌ಮುಲ್ಕ ಕನಾನಿಯ ಬಳಿ ಕಳುಹಿಸಿ, ದಿಲಾವರಖಾನನ ಬಗ್ಗೆ ತನಗಿರುವ ಅತೃಪ್ತಿಯನ್ನು ವ್ಯಕ್ತಪಡಿಸಿದನು. ಐನುಲ್‌ಮುಲ್ಕನು ಚಾಣಾಕ್ಷ ಮತ್ತು ಬುದ್ಧಿವಂತ ಸರದಾರನಾಗಿದ್ದನು. ಐನುಲ್‌ಮುಲ್ಕನು, ದಿಲಾವರಖಾನನ ಬಗ್ಗೆ ಹುಜೂರರಿಗೆ ಅಸಮಾಧಾನವಿದ್ದಲ್ಲಿ, ಹುಜೂರರಿಗಾಗಿ ಜೀವ ಕೊಡುವ ನಮಗೆ ಆಜ್ಞೆ ನೀಡಿದರೆ, ಆತನಿಗೆ ಗತಿ ಕಾಣಿಸುತ್ತೇವೆ. ದಿಲಾವರಖಾನನು ಮಲಗಿದಾಗ ಮಧ್ಯರಾತ್ರಿಯಲ್ಲಿ ಅಂಕಸ್‌ಖಾನ್ ಮತ್ತು ಅಲೀಖಾನರನ್ನು ಜೊತೆಗೆ ಕರೆದುಕೊಂಡು ಹೋಗಿ ಆತನ ಮೇಲೆ ದಾಳಿ ಮಾಡುತ್ತೇವೆ ಎಂದು ಹಿಂದು ಸೇವಕರ ಮೂಲಕ ಬಾದಶಹನಿಗೆ ಸಂದೇಶ ಕಳುಹಿಸಿದನು.

ಸಲಹೆಯ ಕಾರ್ಯಗತಗೊಳಿಸುವಿಕೆ :

ಈ ಸಲಹೆಯು ಅತ್ಯಂತ ಸಮಂಜಸವಾದ ಸಲಹೆಯೆಂದು ಬಾದಶಹನು ಅರಿತುಕೊಂಡನು. ಹಿಜರಿಸನ್ ೯೩೮ರ ರಜಬ್ ೧೪ರಂದು ಅರ್ಧ ರಾತ್ರಿಯ ಸಮಯ ಬಾದಶಹನು ತನ್ನ ಡೇರೆಯಿಂದ ಹೊರಕ್ಕೆ ಬಂದನು. ತನ್ನ ಮನದಿಂಗಿತವನ್ನು ಬೇರೆಯವರ ಮುಂದೆ ಹೊರಹಾಕದೆ, ಕಫಷ್ದಾರ ಖಾನ ಎಂಬ ಗುಲಾಮನಿಗೆ ತನ್ನ ಖಾಸಾ ಕುದುರೆಲಾಯದಿಂದ ಒಂದು ಕುದುರೆಯನ್ನು ಕೂಡಲೆ ತರಲು ಆಜ್ಞಾಪಿಸಿದನು. ಗುಲಾಮನು ಕುದುರೆ ತರಲು ಲಾಯಕ್ಕೆ ಹೊರಟನು. ಅಲ್ಲಿಯ ಪರಿಜನರ ಸರದಾರನು ದಿಲಾವರಖಾನನ ಆದೇಶವಿಲ್ಲದೆ ಕುದುರೆ ಕೊಡಲಾಗುವುದಿಲ್ಲವೆಂದು ನಿರಾಕರಿಸಿದನು.

ಈ ಉತ್ತರವನ್ನು ಕೇಳಿದ ಗುಲಾಮನು ಅವನ ಬಾಯಿಗೆ ಜೋರಾಗಿ ಹೊಡೆದನು. ಆಗ, ಆ ಸರದಾರನು ಬಾಯಿಮುಚ್ಚಿಕೊಂಡು, ವಿಷಯವು ತನ್ನ ವ್ಯಾಪ್ತಿಗೆ ಮೀರಿದುದೆಂದು ತಿಳಿದು, ಒಂದು ಕುದುರೆಯನ್ನು ತಂದು ಒಪ್ಪಿಸಿದನು.

ಬಾದಶಹನು ಗುಲಾಮನ್ನು ತನ್ನ ಜೊತೆಗೆ ಕರೆದುಕೊಂಡು ಕುದುರೆಯ ಮೇಲೆ ಸವಾರಿ ಹೊರಟನು. ಆ ರಾತ್ರಿ ಬಾದಶಹನ ದಾಯಿಯ ಮಗ ಇಲಿಯಾಸ್ ಖಾನನು ಕಾವಲುಗಾರನಾಗಿದ್ದನು. ಬಾದಶಹನನ್ನು ಅಪರಾತ್ರಿಯಲ್ಲಿ ಸವಾರಿ ಹೊರಟಿದುದನ್ನು ನೋಡಿ ಓಡುತ್ತ ಬಂದನು. "ಹುಜೂರ್! ಇದು ಹೊರಗೆ ಹೋಗುವ ಸಮಯವಲ್ಲ. ಈ ಸಿದ್ಧತೆಯಲ್ಲಿ ಹೊರಗೆ ಹೋಗುವ ಮುಖ್ಯ ಕೆಲಸವೇನಾದರೂ ಇದೆಯೇ?" ಎಂದು ವಿನಯದಿಂದ ಕೇಳಿದನು. ಬಾದಶಹನು ಆತನಿಗೆ ಹೆಚ್ಚು ಮಾತನಾಡಲು ಅವಕಾಶ ಕೊಡದೆ ತನ್ನೊಡನೆ ಬಂದರೆ ಎಲ್ಲ ವಿಷಯ ತನ್ನಿಂದ ತಾನೇ ಅರ್ಥವಾಗುವುದೆಂದು ಹೇಳಿದನು. ಇಲಿಯಾಸ್ ಖಾನನು ಆಗ ತನ್ನೊಡನಿದ್ದ ನೂರಕ್ಕೂ ಕಡಿಮೆ ಸೈನಿಕರೊಂದಿಗೆ ಬಾದಶಹನನ್ನು ಸೇರಿಕೊಂಡನು.

ಬಾದಶಹನು ಮುಖ್ಯ ಸೈನ್ಯದಿಂದ ಬೇರ್ಪಟ್ಟು, ಐನುಲ್‌ಮುಲ್ಕನು ತಂಗಿರುವ ಬಿಡಾರವನ್ನು ತಲುಪಿದನು. ಬಾದಶಹನು ತನ್ನ ಡೇರೆಯಿಂದ ಹೊರಬಂದ ಸಮಾಚಾರ ಬಹಿರಂಗವಾದ ತಕ್ಷಣ ಬಾದಶಹನ ಆಪ್ತ ಸೈನ್ಯದ ಸೈನಿಕರು ಮತ್ತು ಆಸ್ಥಾನದ ಸರದಾರರು ಒಟ್ಟುಗೂಡಿದರು. ಅವರೊಡನೆ ಈ ಕೃತಿಯ ಲೇಖಕ ಫರಿಶ್ತಾ ಸಹ ಸೇರಿಕೊಂಡನು. ಇವರೆಲ್ಲರ ಸಂಖ್ಯೆ ಮೂರು ಸಾವಿರವಿತ್ತು.

ದಿಲಾವರಖಾನನ ಭೋಗವಿಲಾಸ :

ಎಂಬತ್ತು ವರ್ಷಕ್ಕೂ ಮೀರಿದ ವಯೋವೃದ್ಧ ದಿಲಾವರಖಾನನು ದಕ್ಷಿಣದ ಹುಡುಗಿಯೊಬ್ಬಳ ಮೋಹಪಾಶದಲ್ಲಿ ಸಿಲುಕಿದ್ದನು. ಬಾದಶಹನು ದಾಳಿ ಮಾಡಿದ ಸಮಯದಲ್ಲಿ ದಿಲಾವರಖಾನನು ಪಾನಮತ್ತನಾಗಿ ಸುಂದರಿಯೊಡನೆ ಪ್ರೇಮಸಲ್ಲಾಪದಲ್ಲಿದ್ದನು. ಬಾದಶಹನು ಐನುಲ್‌ಮುಲ್ಕನ ಸೈನ್ಯದತ್ತ ಹೋಗುತ್ತಿರುವಾಗ, ದಿಲಾವರಖಾನನ ಬೇಹುಗಾರರು ಪರಿಸ್ಥಿತಿಯ ಬಗ್ಗೆ ಮಾಹಿತಿ ನೀಡಿದರು. ದಿಲಾವರ್ ಮತ್ತು ಆತನ ಮಗನು ಐದಾರು ಸಾವಿರ ಕುದುರೆ ಸವಾರರೊಡನೆ ಯುದ್ಧದ ಸಿದ್ಧತೆಯನ್ನು ಮಾಡಿಕೊಂಡು ಬಾದಶಹನಿರುವತ್ತ ಹೊರಟರು. ಬಾದಶಹನ ವಿಶೇಷ ಸೈನ್ಯದ ಸೈನಿಕರು ಹಾಗೂ ಇತರ ಸರದಾರರು ಮೊದಲಿನಂತೆಯೇ ಬಾದಶಹನಿಗೆ ಅವಿಧೇಯರಾಗಿ, ವಿದ್ರೋಹಿಯಾಗಿ ದಿಲಾವರಖಾನನೊಡನೆ ಸೇರಿಕೊಳ್ಳುವರು ಹಾಗೂ ದಿಲಾವರಖಾನನ ಆದೇಶ ಪಾಲನೆ ಮಾಡುವರೆಂಬ ನಿರೀಕ್ಷೆ ಅವರಿಗಿತ್ತು. ಮತ್ತು ಹೀಗೆಯೇ, ದಿಲಾವರಖಾನನು ಸಾಮ್ರಾಜ್ಯದ ಸರ್ವಾಧಿಕಾರಿಯಾಗುವನೆಂದು ಅವರೆಲ್ಲರ ಊಹೆಯಾಗಿತ್ತು.

ಐನುಲ್‌ಮುಲ್ಕನ ವೇಷ ಬದಲಾವಣೆ :

ದಿಲಾವರಖಾನನು ಬಾದಶಹನನ್ನು ಸಮೀಪಿಸಿದಾಗ ಬಾದಶಹನು ತನ್ನ ಆಪ್ತದೂತನನ್ನು ಐನುಲ್‌ಮುಲ್ಕನ ಬಳಿ ಕಳುಹಿಸಿ, ದಿಲಾವರಖಾನನನ್ನು ಪ್ರತಿಬಂಧಿಸುವ ಆಜ್ಞೆ ನೀಡಿದನು. ಐನುಲ್‌ಮುಲ್ಕನು ಬಾದಶಹನ ಆಜ್ಞೆಯನ್ನು ವಿಧೇಯತೆಯಿಂದ ಅನುಸರಿಸಿದಂತೆ ತೋರಿದರೂ ರಹಸ್ಯವಾಗಿ ದಿಲಾವರಖಾನನಿಗೆ, "ಬಾದಶಹನು ಆಕಸ್ಮಿಕವಾಗಿ ನಮ್ಮಲ್ಲಿಗೆ ಬಂದು ಬಿಟ್ಟಿದ್ದಾನೆ. ನಾವು ಅಸಹಾಕತೆಯಿಂದ ವಿವಶರಾಗಿ ಅವರನ್ನು ಅನುಸರಿಸುತ್ತಿದ್ದೇವೆ. ನೀವು ನಿಶ್ಚಿಂತೆಯಿಂದ ಬಾದಶಹನನ್ನು ಜೊತೆಗೆ ಕರೆದುಕೊಂಡು ನಿಮ್ಮ ಸ್ಥಳಕ್ಕೆ ಹೊರಟುಬಿಡಿ. ನಾವು ನಿಮ್ಮ ದಾರಿಗೆ ಅಡ್ಡಿ ಬರುವುದಿಲ್ಲ" ಎಂಬ ಸಂದೇಶ ಕಳುಹಿಸಿದನು.

ದಿಲಾವರಖಾನನ ಮೇಲೆ ದಾಳಿ :

ಈ ಸಂದೇಶವನ್ನು ಕೇಳಿದ ನಂತರ ದಿಲಾವರಖಾನನು ತನ್ನ ಸೈನ್ಯ ಮತ್ತು ಮಗನನ್ನು ತುಸು ದೂರದಲ್ಲಿ ಬಿಟ್ಟು ಐದುನೂರು ಕುದುರೆ ಸವಾರರು ಹಾಗೂ ಆನೆಗಳ ಸಮೇತ ಸ್ವತಃ ಬಾದಶಹನೆದುರಿಗೆ ಬಂದು, ಬಾದಶಹನಿಗೆ, "ತಾವು ಅರ್ಧರಾತ್ರಿಯ ಸಮಯದಲ್ಲಿ ಬಹಿರಂಗವಾಗಿ ಹೀಗೆ ಬರುವುದು ತಮ್ಮ ಘನತೆಗೆ ತಕ್ಕುದಲ್ಲ. ಸರಿ ಆದದ್ದಾಯಿತು. ಈಗ ತಾವು ನನ್ನೊಂದಿಗೆ ಹಿಂದಿರುಗಿರಿ" ಎಂದು ಹೇಳಿದನು. ಬಾದಶಹನು ರೋಷಾವಿಷ್ಟನಾಗಿ ಅತ್ಯಂತ ಕೋಪದಿಂದ, "ಈ ಅಪರಾಧಿಗೆ ಶಿಕ್ಷೆ ನೀಡಲು ಯಾರು ಸಿದ್ಧರಿದ್ದೀರಿ?" ಎಂದು ಕೇಳಿದನು. ಬಾದಶಹನ ರೋಷದ ಮಾತನ್ನು ಕೇಳಿದ ತಕ್ಷಣ ಅಲ್ಲಿಯೇ ಇದ್ದ ಔಜಬಕ್ ಎಂಬ ಸೈನಿಕನು ಮುಂದೆ ಬಂದು ತಲವಾರವನ್ನು ಬೀಸಿದನು. ಹೊಡೆತವು ಅಷ್ಟೊಂದು ಬಲವಾಗಿರಲಿಲ್ಲ. ಆದರೂ ದಿಲಾವರಖಾನನು ಗಾಬರಿಯಿಂದ ತನ್ನ ಕುದುರೆಯನ್ನು ಹಿಂದೆ ಸರಿಸಿಕೊಂಡನು.

ದಿಲಾವರಖಾನನ ಪರಾರಿ :

ಔಜಬಕ್ ಖಾನನು ತಲವಾರದಿಂದ ಇನ್ನೊಂದು ಪೆಟ್ಟನ್ನು ಹಾಕಲೆಳಸಿದನು. ಅದೇ ಸಮಯಕ್ಕೆ ದಿಲಾವರಖಾನನ ಕುದುರೆಯು ಹಿಂದೆ ನೆಗೆಯಿತು. ಆಗ ದಿಲಾವರಖಾನನು ನೆಲದ ಮೇಲೆ ಬಿದ್ದು ಬಿಟ್ಟನು. ದಿಲಾವರನ ಸೈನ್ಯದ ಮಾವುತನೊಬ್ಬನು ಕೂಡಲೇ ತನ್ನ ಆನೆಯನ್ನು ದಿಲಾವರ ಹಾಗೂ ಬಾದಶಹನ ಸೇನೆಯ ಮಧ್ಯದಲ್ಲಿ ತಂದು ಗೋಡೆಯಂತೆ ನಿಲ್ಲಿಸಿಬಿಟ್ಟನು. ಈ ಅವಕಾಶವನ್ನು ಉಪಯೋಗಿಸಿಕೊಂಡು ದಿಲಾವರಖಾನನು ಇನ್ನೊಂದು ಕುದುರೆಯೇರಿ ಯುದ್ಧಕ್ಕೆ ಸನ್ನದ್ಧನಾಗಲಿ ಎಂಬುದು ಆ ಮಾವುತನ ಉದ್ಧೇಶವಾಗಿತ್ತು. ದಿಲಾವರಖಾನನ ಸೈನ್ಯದ ಮೇಲೆ ಬಾದಶಹನ ದರ್ಪ ಮತ್ತು ರಾಜಠೀವಿಯ ಪ್ರಭಾವದಿಂದ ಸೈನಿಕರು

ಭಯದಿಂದ ದಂಡಿನಿಂದ ಬೇರಯಾಗತೊಡಗಿದರು. ಪರಿಸ್ಥಿತಿಯನ್ನು ನೋಡಿದ ದಿಲಾವರಖಾನನು ತಾನೂ ರಣರಂಗದಿಂದ ಕಾಲು ಕಿತ್ತಿದನು. ಬಾದಶಹನ ಸೈನ್ಯವು ಆತನ ಬೆನ್ನಟ್ಟಿತು. ಆದರೆ, ದಿಲಾವರನು ಮಾರ್ಗದಲ್ಲಿ ಎಲ್ಲಿಯೂ ನಿಲ್ಲದೆ, ಅಹಮದಾಬಾದ್ ಬೀದರ ತಲುಪಿದನು.

ಈ ರೀತಿಯಾಗಿ ಬಾದಶಹನು ದಿಲಾವರಖಾನನ ದುಷ್ಟ ಕೆಲಸಗಳಿಂದ ಮುಕ್ತಿ ಪಡೆದನು. ಐನುಲ್‌ಮುಲ್ಕ ಮತ್ತು ಇತರ ಸರದಾರರಿಗೆ ಅವರು ಮಾಡಿದ ಅಪರಾಧಗಳು ತಿಳಿದರೂ ಅದಕ್ಕೆ ಪ್ರತಿಯಾಗಿ ಇನಾಮು ನೀಡಿದನು ಹಾಗೂ ಮುಂದೆ ಬಹುಮಾನ, ಪ್ರಶಸ್ತಿಗಳನ್ನು ನೀಡುವ ವಾಗ್ದಾನ ಮಾಡಿದನು. ಬೆಳಗಿನ ಸಮಯಕ್ಕೆ ಬಾದಶಹನು ತನ್ನ ನಿವಾಸವನ್ನು ತಲುಪಿ ರಾಜಸಿಂಹಾಸನದ ಮೇಲೆ ವಿರಾಜಮಾನನಾದನು. ಬಾದಶಹನಿಗೆ ವಿಧೇಯರಾಗಿದ್ದು, ಪ್ರಾಮಾಣಿಕತೆಯಿಂದ ಯುದ್ಧದಲ್ಲಿ ಪಾಲುಗೊಂಡವರಿಗೆ ತರತರದ ಇನಾಮುಗಳನ್ನಿತ್ತು ಗೌರವಿಸಿದನು. ಇದಾದ ನಂತರ ವಿಶೇಷ ಆಸ್ಥಾನಕ್ಕೆ ಬಂದನು. ಅಲ್ಲಿ ವಿಚಿತ್ರ ಘಟನೆಯೊಂದು ಸಂಭವಿಸಿತು.

ಧಾರ್ಮಿಕ ಸಂಗತಿ :

ದಿಲಾವರಖಾನನು ಹನ್‌ಫಿ ಧರ್ಮದವನಾಗಿದ್ದನು. ರಾಜ್ಯದಲ್ಲಿ ಶಿಯಾ ಧರ್ಮದ ರೀತಿ-ರಿವಾಜುಗಳನ್ನು ಬಿಟ್ಟು ಸುನ್ನತ್ ಧರ್ಮದ ಪದ್ಧತಿಗಳನ್ನು ಜಾರಿಗೆ ತಂದಿದ್ದನು. ನಾಲ್ಕು ಜನರ ಖುತ್ಬಾ ಜಾರಿಗೊಳಿಸಿದ್ದನು. ಬಾದಶಹನು ಹನ್‌ಫಿ ಧರ್ಮಕ್ಕೆ ಬದ್ಧನಾಗಿರುವುದಾಗಿ ಕೆಲವರ ಕಲ್ಪನೆಯಾಗಿತ್ತು. ಆದರೆ ಇನ್ನಿತರರು, ಇಬ್ರಾಹಿಮನು ತನ್ನ ತಂದೆ ಥಮಾಸ್ಪ ಶಾಹನಂತೆ ಹಾಗೂ ಚಿಕ್ಕಪ್ಪ ಅಲೀ ಆದಿಲ್‌ನಂತೆ ಶಿಯಾ ಧರ್ಮವನ್ನು ಅನುಸರಿಸುವನೆಂದು ತಿಳಿದಿದ್ದರು. ಇಬ್ರಾಹಿಮನು ಶಿಯಾ ಧರ್ಮದವನಾಗಿದ್ದುದು ಸತ್ಯವೆನಿಸುತ್ತದೆ. ಅರಸನನ್ನು ಓಲೈಸುವುದಕ್ಕಾಗಿ ಕೆಲವರು ತಮ್ಮ ಧರ್ಮವನ್ನು ಬದಲಿಸಿ ಶಿಯಾ ಧರ್ಮದವರಾದರು ಹಾಗೂ ಮಸೀದೆಗಳಲ್ಲಿ ಶಿಯಾ ಪದ್ಧತಿಯಂತೆ ನಮಾಜಿನ ಅಜಾನ(ಪ್ರಾರ್ಥನೆ) ಕೊಡತೊಡಗಿದರು.

ಹನ್‌ಫಿ ಧರ್ಮವನ್ನು ಅನುಸರಿಸುವ ಬಾದಶಹನಿಗೆ ಈ ವಿಷಯ ತಿಳಿದಾಗ, ತನ್ನನ್ನು ಅನುಸರಿಸುವುದಕ್ಕಾಗಿ ಶಿಯಾ ಧರ್ಮಕ್ಕೆ ಪರಿವರ್ತನೆಯಾದವರಿಗೆ ಉಗ್ರ ಶಿಕ್ಷೆಯನ್ನು ಕೊಡಬೇಕೆಂದು ಆದೇಶ ಮಾಡಿದನು. ಅನಂತರ ಅವರನ್ನು ಕ್ಷಮಿಸಲಾಯಿತು. ಆದರೆ ಅವರಿಗೆ ತಮ್ಮ ತಪ್ಪಿನ ಅರಿವಾಗಿ ಅಪಮಾನವಾಗಲಿ ಎಂದು ಅವರನ್ನು ಬಾದಶಹನು 'ಸಮಯಸಾಧಕ ಶಿಯಾ'ಗಳೆಂದು ಕರೆಯುತ್ತಿದ್ದನು.

ಬುರ್ಹಾನ್ ನಿಜಾಮಶಾಹನ ವಿಜಯ ಮತ್ತು ಜಮಾಲಖಾನನ ವಧೆ :

ಬಿಜಾಪುರದಲ್ಲಿ ಈಗಲೂ ನಾಲ್ವರು ಖಲೀಫಾರ ಹೆಸರಿನಲ್ಲಿ ಖುತ್ಬಾ ಓದಲಾಗುತ್ತದೆ. ಯೂಸುಫ ಆದಿಲ್‌ಶಹನ ಆಡಳಿತದಲ್ಲಿ ಇರುವಂತೆ ಹನ್ನೆರಡು ಇಮಾಮರ ಹೆಸರನ್ನು

ಸಹ ಖುತ್ಬಾದಲ್ಲಿ ಸೇರಿಸಲಾಗಿತ್ತು. ಆ ಕಾಲದಲ್ಲಿ ಅರಸರು ಧಾರ್ಮಿಕ ವಿಷಯದಿಂದ ಸುತ್ತುವರಿದಿರುತ್ತಿದ್ದರು ಹಾಗೂ ತಪ್ಪಿತಸ್ಥರಿಗೆ ಶಿಕ್ಷೆ ನೀಡಲಾಗುತ್ತಿತ್ತು. ಅವರಿಗೆ ಬುರ್ಹಾನ್ ನಿಜಾಮಶಾಹನ ವಿಜಯ ಹಾಗೂ ಜಮಾಲಖಾನ ಮಹದ್ವಿಯ ವಧೆಯ ವಿಷಯ ತಿಳಿದು ಬಹಳ ಸಂತೋಷವಾಯಿತು. ಬುರ್ಹಾನಶಾಹನಿಗೆ ಅಭಿನಂದನೆ ಸಲ್ಲಿಸಲಾಯಿತು. ಇದಾದ ನಂತರ ಬಾದಶಹನು ರಾಜಧಾನಿಗೆ ಮರಳುವ ವಿಚಾರ ಮಾಡಿದನು. ಸೈನ್ಯದೊಡನೆ ಪ್ರವಾಸ ಮಾಡುತ್ತ ಬಿಜಾಪುರ ತಲುಪಿದನು. ಬಿಜಾಪುರದಲ್ಲಿ ಬಾದಶಹನು ರಾಜ್ಯದ ಆಡಳಿತವನ್ನು ನಡೆಸಿದ ವೈಖರಿ ಎಲ್ಲರೂ ಪ್ರಶಂಸಿಸುವಂತೆ ಮಾಡಿದನು.

ಇಬ್ರಾಹಿಮ್ ಆದಿಲ್‌ಶಾಹನ ಆಡಳಿತದ ಆರಂಭದ ಪರಿಸ್ಥಿತಿ :

ಇಬ್ರಾಹಿಮ್ ಆದಿಲ್‌ಶಾಹ ಸಾನಿಯು ಥಮಾಸ್ಪ ಶಾಹನ ಮಗನಾಗಿದ್ದನು. ಥಮಾಸ್ಪನು ಪ್ರಥಮ ಇಬ್ರಾಹಿಮ್ ಆದಿಲ್‌ಶಾಹಿಯ ನಾಲ್ಕು ಮಕ್ಕಳಲ್ಲಿ ಒಬ್ಬನಾಗಿದ್ದನು. ಪ್ರಥಮ ಇಬ್ರಾಹಿಮ್ ಆದಿಲ್‌ಶಾಹನ ನಾಲ್ಕು ಮಕ್ಕಳಲ್ಲಿ ಇಬ್ಬರು ಗಂಡು ಮಕ್ಕಳು – ಇಬ್ರಾಹಿಮ್ ಮತ್ತು ಇಸ್ಮಾಯಿಲ್ ಹಾಗೂ ಇಬ್ಬರು ಹೆಣ್ಣು ಮಕ್ಕಳಲ್ಲಿ ಖದೀಜಾ ಸುಲ್ತಾನಳು, ಮೀರಾನ್ ಹುಸೇನ ಶಾಹಿಯ ಪತ್ನಿ ಮತ್ತು ಸಾನಿ ಬೀಬಿ, ಮಹಮ್ಮದ ಬರೀದ ಶಾಹನ ಪತ್ನಿಯಾಗಿದ್ದಳು. ರಾಜಕುಮಾರ ಇಬ್ರಾಹಿಮ್ ಆದಿಲ್‌ಶಾಹನು ತನ್ನ ಚಿಕ್ಕಪ್ಪ ಅಲಿ ಆದಿಲ್‌ಶಾಹನ ಉಯಿಲಿನಂತೆ ಸಿಂಹಾಸನ ಮತ್ತು ರಾಜ್ಯದ ಉತ್ತರಾಧಿಕಾರಿಯಾದನು. ರಾಜ್ಯದಲ್ಲಿ ಇಬ್ರಾಹಿಮ್ ಆದಿಲಶಾಹನ ಹೆಸರಿನಲ್ಲಿ ಖುತ್ಬಾ ಮತ್ತು ರಾಜಮುದ್ರೆಯನ್ನು ಜಾರಿಗೊಳಿಸಲಾಯಿತು.

ರಾಜಕುಮಾರ ಇಸ್ಮಾಯಿಲ್‌ನಿಗೆ ಬಾದಶಹನ ಸಂದೇಶ :

ಇಬ್ರಾಹಿಮನ ಪಟ್ಟಾಭಿಷೇಕದ ವೇಳೆ, ಶಹಜಾದಾ ಇಸ್ಮಾಯಿಲನು ಮೂರು ವರ್ಷದ ಬಾಲಕನಾಗಿದ್ದನು. ಆತನು ತನ್ನ ಅಣ್ಣನ ಪಾಲನೆ ಪೋಷಣೆಯ ನೆರಳಿನಲ್ಲಿದ್ದನು. ಇಸ್ಮಾಯಿಲನು ಪ್ರಾಯಕ್ಕೆ ಬಂದ ಮೇಲೆ, ಆಗ ರಾಜ್ಯದ ಪ್ರಧಾನಿಯ ಹುದ್ದೆಯಲ್ಲಿದ್ದ ದಿಲಾವರಖಾನ ಹಬಶಿಯು ಆತನನ್ನು ಬೆಳಗಾವ ಕಿಲ್ಲೆಯಲ್ಲಿ ಬಂಧನದಲ್ಲಿಟ್ಟನು. ಹಬ್‌ಶಿಗಳ ಗಲಭೆ ಮತ್ತು ದಿಲಾವರಖಾನನ ಪ್ರಭುತ್ವ ಕೊನೆಗೊಂಡ ನಂತರ ಬಾದಶಹನು ಆಸ್ಥಾನದಲ್ಲಿದ್ದ ತನ್ನ ಆಪ್ತನೊಬ್ಬನನ್ನು ಇಸ್ಮಾಯಿಲ್‌ನ ಬಳಿ ಕಳುಹಿಸಿ, "ಇಲ್ಲಿಯವರೆಗೆ ನಿನ್ನ ಮುಖದರ್ಶನದಿಂದ ನಾನು ನಿಷೇಧಿತನಾಗಿದ್ದೆ. ನಿನ್ನನ್ನು ನೋಡಬೇಕೆಂಬ ಹಂಬಲವು ನನ್ನ ಮನಸ್ಸಿನಲ್ಲಿ ಕೊರೆಯುತ್ತಲೇ ಇದೆ. ಕೆಲ ಅನಾನುಕೂಲತೆಯಿಂದ ನನ್ನ ಆಸೆಯು ಹಾಗೆಯೇ ಉಳಿದಿದೆ. ಇಲ್ಲಿ ನಡೆಯುತ್ತಿರುವ ವಿದ್ಯಮಾನಗಳ ಬಗೆಗೆ ನಿನಗೂ ತಿಳಿದಿರಬಹುದು. ಹೀಗಾಗಿ ನಾನು ಹೆಚ್ಚು ಹೇಳುವ ಅಗತ್ಯ ಕಂಡು ಬರುತ್ತಿಲ್ಲ. ಈಗ ಕೋಟೆಯಲ್ಲಿ ನೀನು ಐಶಾರಾಮಿನಿಂದ ಜೀವನ ಸಾಗಿಸು. ಮದ್ಯ ಮಾನಿನಿಯರ ಸಂಗದಲ್ಲಿ ಸಮಯ ಕಳೆಯುವುದರೊಡನೆ ಶಿಕ್ಷಣ

ಮತ್ತು ಕುಶಲಕಲೆಗಳಲ್ಲಿ ಕೂಡ ಆಸಕ್ತಿ ವಹಿಸು. ವಿಶೇಷವಾಗಿ ಇತಿಹಾಸ ಅಧ್ಯಯನ ಮತ್ತು ಶಾಯರಿಗಳನ್ನು ಓದುವುದರಲ್ಲಿ, ರಚಿಸುವುದರಲ್ಲಿ ತೊಡಗಿಕೊಂಡರೆ ಮನಸ್ಸಿಗೆ ಉಲ್ಲಾಸವಾಗುವುದು. ಕುದುರೆ ಸವಾರಿ ಮತ್ತು ಬಿಲ್ವಿದ್ದೆಯಲ್ಲಿ ಆಸಕ್ತಿ ತೋರಿಸು. ದುಃಖ ಮತ್ತು ತೊಂದರೆಗಳು ನಿನ್ನ ಬಳಿ ಸುಳಿಯದಂತೆ ನೋಡಿಕೋ. ಅರಸೊತ್ತಿಗೆಯ ಕೆಲವು ಮುಖ್ಯ ಕಾರ್ಯಗಳನ್ನು ನಿರ್ಧರಿಸಿದ ನಂತರ ನಿನ್ನನ್ನು ನನ್ನ ಬಳಿ ಕರೆಯಿಸಿಕೊಳ್ಳುತ್ತೇನೆ." ಎಂಬ ಸಂದೇಶವನ್ನು ಕಳುಹಿಸಿದನು.

ಶಹಜಾದಾ ಇಸ್ಮಾಯಿಲ್‌ನ ವಿಚಾರ :

ಸಂದೇಶವನ್ನು ಕಳುಹಿಸಿದ ನಂತರ ಬಾದಶಹನು ರಾಜಕುಮಾರ ಇಸ್ಮಾಯಿಲನ ಕಾಲಿನ ಬೇಡಿಯನ್ನು ತುಂಡರಿಸಲು ಬೆಳಗಾವಿಯ ಕೊತವಾಲ ಮತ್ತು ಠಾಣೇದಾರನಿಗೆ ಆದೇಶ ನೀಡಿದನು. ಬಾದಶಹನ ಆಜ್ಞೆಯನ್ನು ಪಾಲಿಸಿ ರಾಜಕುಮಾರ ಇಸ್ಮಾಯಿಲನನ್ನು ಬಂಧಮುಕ್ತಗೊಳಿಸಲಾಯಿತು. ರಾಜಕುಮಾರನಿಗೆ ಕೋಟೆಯ ನಾಲ್ಕೂ ದಿಕ್ಕುಗಳಲ್ಲಿ ಸುತ್ತಾಡುವ ಅವಕಾಶ ದೊರೆಯಿತು. ಆದರೆ, ಕೋಟೆಯಿಂದಾಚೆಗೆ ಹೋಗಲು ಮಾತ್ರ ಅನುಮತಿ ಇರಲಿಲ್ಲ. ಬಾದಶಹನು ರಾಜಕುಮಾರನ ವೆಚ್ಚಕ್ಕಾಗಿ ಪ್ರತಿ ತಿಂಗಳು ಒಂದು ಸಾವಿರ ಹೋನುಗಳನ್ನು ಕಳುಹಿಸುತ್ತಿದ್ದನು. ರಾಜಕುಮಾರನ ಮನಸ್ಸನ್ನು ಪ್ರಫುಲ್ಲಿತಗೊಳಿಸಲು ಬೆಲೆಬಾಳುವ ಉಡುಗೊರೆಗಳನ್ನು ಮತ್ತು ತರತರದ ಹಣ್ಣುಗಳನ್ನು ಬಾದಶಹನು ಆಗಾಗ ಕಳುಹಿಸುತ್ತಿದ್ದನು. ಹಬ್ಬ ಮತ್ತಿತರ ಶುಭ ದಿನಗಳಂದು ಬಾದಶಹನು ಮರೆಯದೆ ರಾಜಕುಮಾರನಿಗೆ ಶುಭಾಶಯಗಳನ್ನು ಕಳುಹಿಸುತ್ತಿದ್ದನು.

ಭ್ರಾತೃ ಪ್ರೇಮ :

ಒಂದು ಸಲ ಬೆಳಗಾವಿ ಕಿಲ್ಲೆಯಿಂದ ಅತ್ಯುತ್ತಮ ಮಾವಿನ ಹಣ್ಣುಗಳನ್ನು ಬಾದಶಹನ ಸೇವೆಗೆಂದು ಕಳುಹಿಸಲಾಯಿತು. ಮಾವಿನಹಣ್ಣುಗಳನ್ನು ನೋಡಿದೊಡನೆಯೇ ಬಾದಶಹನು "ಈ ಮಾವಿನಹಣ್ಣುಗಳನ್ನು ರಾಜಕುಮಾರ ಇಸ್ಮಾಯಿಲ್‌ನಿಗೂ ಕಳುಹಿಸಲಾಗಿದೆಯೇ" ಎಂದು ಪ್ರಶ್ನಿಸಿದನು. ಮಾವಿನಹಣ್ಣುಗಳನ್ನು ತಂದವರು, "ಮಾವಿನಮರಗಳಲ್ಲಿ ಮೊತ್ತಮೊದಲ ಬಾರಿಗೆ ಫಲ ಬಿಟ್ಟಿರುವುದರಿಂದ ಹುಜೂರರ ಸೇವೆಗೆ ಈ ಕಾಣಿಕೆಯನ್ನು ಸಲ್ಲಿಸಲಾಗಿದೆ. ಮುಂದೆ ಫಲ ಬಿಟ್ಟನಂತರ ರಾಜಕುಮಾರನಿಗೂ ಕೊಡಲಾಗುವುದು" ಎಂದು ವಿನಯದಿಂದ ಉತ್ತರಿಸಿದರು. ಬಾದಶಹನಿಗೆ ಈ ಉತ್ತರವು ಸಮಂಜಸವೆನ್ನಿಸಲಿಲ್ಲ. ಕೂಡಲೇ ಆ ಮಾವಿನಹಣ್ಣುಗಳನ್ನು ಬೆಳಗಾವಿಗೆ ರಾಜಕುಮಾರನಿಗೆ ಕಳುಹಿಸಿಕೊಟ್ಟನು. ಹಾಗೂ "ಬೆಳಗಾವಿಯಲ್ಲಿರುವ ಮರಗಳಲ್ಲಿ ಬಿಟ್ಟ ಫಲಗಳ ಮೇಲೆ ನಿನ್ನ ಅಧಿಕಾರವಿದೆ. ಆದುದರಿಂದ ಈ ಮಾವಿನಹಣ್ಣುಗಳನ್ನು ನಿನಗೆ ಕಳುಹಿಸುತ್ತಿದ್ದೇನೆ. ಮುಂದಿನ ದಿನಗಳಲ್ಲಿ ಮರಗಳಿಂದ ಹಣ್ಣುಗಳನ್ನು ಇಳಿಸಿದಾಗ ನನಗೆ ಕಳುಹಿಸು" ಎಂದು ಹೇಳಿ ಕಳುಹಿಸಿದನು. ಈ ವಿಷಯವನ್ನು ಇಷ್ಟಕ್ಕೇ ಬಿಡದೆ ಬಾದಶಹನು ಬೆಳಗಾವಿಯ ಠಾಣೇದಾರನಿಗೆ,

“ಬೆಳಗಾವಿಯಲ್ಲಿ ಬೆಳೆದ ಹಣ್ಣುಗಳನ್ನು ರಾಜಕುಮಾರನ ಸೇವೆಯಲ್ಲಿ ಮೊದಲು ಸಲ್ಲಿಸಬೇಕು, ನಂತರ ನನ್ನ ಬಳಿ ಕಳುಹಿಸಬೇಕು” ಎಂಬ ಆಜ್ಞೆಯನ್ನು ಮಾಡಿದನು. ಇಬ್ರಾಹಿಮ್ ಆದಿಲ್‌ಶಾಹಿಯ ಭ್ರಾತೃಪ್ರೇಮವನ್ನು ಜಾಹೀರು ಪಡಿಸುವ ಸಾಂದರ್ಭಿಕ ಘಟನೆಯ ವಿವರವನ್ನು ಅರಸರ ಸನ್ನಿಧಿಯಲ್ಲಿ ಆಪ್ತಸೇವೆಯಲ್ಲಿದ್ದ ಖಜಾಂಚಿ ಅಹಮದ್‌ಖಾನರಿಂದ ಈ ಕೃತಿಯ ಕರ್ತೃ ಫರಿಶ್ತಾ ಕೇಳಿದ್ದನು.

ಭಾದಶಹನು ಎಲ್ಲ ಸಂದರ್ಭಗಳಲ್ಲಿ ತನ್ನ ಸಹೋದರನೊಡನೆ ಪ್ರೀತಿ ಮತ್ತು ವಿಶ್ವಾಸವನ್ನು ವ್ಯಕ್ತಗೊಳಿಸುತ್ತಿದ್ದನು. ರಾಜಕುಮಾರ ಇಸ್ಮಾಯಿಲನು ಬೆಳಗಾವಿಯ ಕಿಲ್ಲೆಯಲ್ಲಿ ಭೋಗವಿಲಾಸದ ಜೀವನವನ್ನು ಕಳೆಯುತ್ತಿದ್ದನು. ಆತನಿಗೆ ರಾಜ್ಯಾಡಳಿತದ ಕಷ್ಟಕೋಟಲೆಗಳನ್ನು ಎದುರಿಸಬೇಕಾದ ಪ್ರಮೇಯವಿರಲಿಲ್ಲ.

ರಾಜಕುಮಾರ ಇಸ್ಮಾಯಿಲ್‌ನ ಬಂಡಾಯ :

ರಾಜಕುಮಾರ ಇಸ್ಮಾಯಿಲ್‌ನಿಗೆ ಒಮ್ಮಿಂದೊಮ್ಮೆಗೇ ಏನಾಯಿತೋ ಆ ಪರಮಾತ್ಮನೇ ಬಲ್ಲ. ಸೋದರ ವಾತ್ಸಲ್ಯದ ಪರಿವೆಯನ್ನೂ ಮಾಡದೇ ಚಾಡಿಕೋರರ ಮತ್ತು ಗಲಭೆಕೋರರ ಸಲಹೆಯಂತೆ ಬಾದಶಹನ್ನು ವಿರೋಧಿಸಲಾರಂಭಿಸಿದನು. ಹಿಜರಿಸನ್ ೧೦೦೨ರ ರಮಜಾನ ತಿಂಗಳ ಏಳನೆಯ ದಿನದಂದು ಬಾದಶಹನ ವಿರುದ್ಧ ತಿರುಗಿಬಿದ್ದು ಬಾದಶಹನ ಆಜ್ಞೋಲ್ಲಂಘನೆ ಮಾಡಿದನು. ಬಾದಶಹನ ವಿರುದ್ಧ ಬಹಿರಂಗವಾಗಿ ಕಾರ್ಯಾಚರಣೆಯನ್ನು ಆರಂಭಿಸಿದನು. ಬಾದಶಹನಿಗೆ ಎಲ್ಲ ವಿದ್ಯಮಾನಗಳ ಅರಿವಾಯಿತು. ಗಲಭೆ ಮಾಡುವವರ ಕುತಂತ್ರದ ರಹಸ್ಯವು ಬಯಲಾಯಿತು. ಆಗ ಎಲ್ಲಕ್ಕೂ ಮೊದಲು ಬಾದಶಹನು ರಾಜಕುಮಾರ ಇಸ್ಮಾಯಿಲನಿಗೆ ಬುದ್ಧಿವಾದ ಹೇಳುವ ಪತ್ರವೊಂದನ್ನು ಬರೆದನು.

ಬಾದಶಹನಿಂದ ರಾಜಕುಮಾರ ಇಸ್ಮಾಯಿಲ್‌ನಿಗೆ ಪತ್ರ :

ಇಬ್ರಾಹಿಮ್ ಬಾದಶಾಹನು ಇಸ್ಮಾಯಿಲ್‌ನಿಗೆ, “ನೀನು ನನ್ನ ವಿರೋಧವಾಗಿ ಮಾಡುವ ಕಾರ್ಯಾಚರಣೆಯ ವಿಷಯ ತಿಳಿದುಬಂದಿದೆ. ಪ್ರತಿರೋಧದ ಧೋರಣೆಯನ್ನು ಬಿಟ್ಟರೆ ನಿನಗೆ ಒಳಿತಾಗುವುದು. ಇಲ್ಲವಾದಲ್ಲಿ ನಿನಗೆ ಉಗ್ರ ಶಿಕ್ಷೆ ನೀಡಲಾಗುವುದು. ಸಿಂಹಾಸನ ಮತ್ತು ರಾಜ್ಯದ ಆಡಳಿತದ ಹೊಣೆಯನ್ನು ಅಲ್ಲಾಹನು ಯಾರಿಗೆ ಕೊಟ್ಟಿರುತ್ತಾನೆಯೋ ಅವರು ಇಂತಹ ಗಲಭೆಗಳಿಂದ ಭಯಪಡುವುದಿಲ್ಲ. ದಕ್ಷಿಣ ಪ್ರದೇಶದ ಅತ್ಯುತ್ತಮ ಭಾಗವು ನನ್ನ ವಶದಲ್ಲಿರುವ ವಿಷಯ ನಿನಗೆ ಚೆನ್ನಾಗಿ ಗೊತ್ತಿದೆ. ಅದೂ ಅಲ್ಲದೆ, ಎಲ್ಲ ಪ್ರಜೆಗಳು ಮತ್ತು ಸರದಾರರು ಮನಸಾಪೂರ್ವಕ ನನ್ನ ಆಜ್ಞಾಧಾರಕರಾಗಿದ್ದಾರೆ. ನನ್ನ ವಿರುದ್ಧ ಸಂಚು ಮಾಡುವ ನಿನ್ನ ಯೋಜನೆಯಿಂದಾಚೆಗೆ ಬಂದುಬಿಡು. ಒಂದು ವೇಳೆ ಯುದ್ಧಕ್ಕೆ ಸಿದ್ಧವಾದಲ್ಲಿ ನಿನಗೆ

ನಷ್ಟವಾಗುವ ಭಯ ನನಗಿದೆ. ನಿನ್ನ ದುರಾದೃಷ್ಟವು ನಿನ್ನನ್ನು ಉಪಯೋಗವಿಲ್ಲದಂತೆ ಮಾಡುವದು." ಎಂದು ಪತ್ರ ಬರೆದನು. ಈ ಪತ್ರವನ್ನು ತನ್ನ ವಿಶ್ವಾಸಾರ್ಹ ಸರದಾರ ನೂರ ಆಲಮ್‌ನ ಮೂಲಕ ಕಳುಹಿಸಿಕೊಟ್ಟನು. ನೂರ ಆಲಮ್‌ನು ಶೇಖ ಉಲ್ ಮಶಾಯಿಖ ಹಜರತ್ ಖುತುಬ್ ಆಲಮ್ ಜುನೈದ್ ಬಗ್‌ದಾದಿಯ ಪುತ್ರರಲ್ಲಿ ಒಬ್ಬನಾಗಿದ್ದನು.

ಬುರ್ಹಾನ್ ನಿಜಾಮಶಾಹ ಮತ್ತು ಇಸ್ಮಾಯಿಲ್‌ರ ಕುಯುಕ್ತಿ :

ಶಾಹ ನೂರ್ ಆಲಮ್‌ನು ಬಾದಶಹನ ಪತ್ರವನ್ನು ಬೆಳಗಾವಿಗೆ ತಲುಪಿಸಿದನು. ರಾಜಕುಮಾರನು ಪತ್ರವನ್ನೋದಿ ತನ್ನ ತಪ್ಪುಗಳನ್ನು ಅರಿತುಕೊಳ್ಳಲಿಲ್ಲ. ಆತನು ಪತ್ರ ತಂದ ನೂರ್ ಆಲಮ್‌ನನ್ನು ಬಂಧಿಸಿದನು. ಬಾದಶಹನಿಗೆ ಅತ್ಯಂತ ಕೆಟ್ಟ ಶಬ್ದಗಳಲ್ಲಿ ಮಾರುತ್ತರ ಕೊಟ್ಟನು. ಬಂಡಾಯ ಮತ್ತು ಯುದ್ಧದ ಸಿದ್ಧತೆಯಲ್ಲಿ ನಿರತನಾದನು. ಇಸ್ಮಾಯಿಲನು ಮೊದಲು ಬುರ್ಹಾನ ನಿಜಾಮ ಶಾಹನ ಬಳಿ ಒಬ್ಬ ದೂತನನ್ನು ಕಳುಹಿಸಿ ಆತನಿಂದ ನೆರವು ಕೋರಿದನು. ಬುರ್ಹಾನಶಾಹನು ಇಂತಹ ಸಮಯ ಮತ್ತು ಅವಕಾಶಕ್ಕಾಗಿ ಕಾಯುತ್ತಲೇ ಇದ್ದನು. ತಕ್ಷಣವೇ ನೆರವಿನ ವಾಗ್ದಾನವನ್ನು ಮಾಡಿದನು ಹಾಗೂ "ನಿನ್ನ ಕೆಲಸವು ಸರಿಯಾದ ರೀತಿಯಲ್ಲಿ ನಡೆದಲ್ಲಿ, ಬಿಜಾಪುರದ ಪ್ರಧಾನ ಸರದಾರರನ್ನು ಅವರು ಸಂತೋಷಪಡುವಂತೆ ಅವರಿಗಿಷ್ಟವಾಗುವ ಪ್ರಮಾಣ ಮಾಡಿ, ಅವರನ್ನು ನಿನ್ನ ಆಪ್ತರಾಗಿ ಮಾಡಿಕೋ. ಅದರಲ್ಲೂ ವಿಶೇಷವಾಗಿ ಐನುಲ್‌ಮುಲ್ಕ ಕಗಾನಿಯಲ್ಲಿ ಬಾದಶಹನ ಬಗ್ಗೆ ವಿರೋಧ ಹುಟ್ಟುವಂತೆ ಮಾಡು. ಇದಕ್ಕೆ ಕಾರಣವೇನೆಂದರೆ, ಐನುಲ್ ಮುಲ್ಕನು ಬೆಳಗಾವಿಯ ಸಮೀಪದ ಪ್ರದೇಶದ ಜಹಗೀರದಾರನಾಗಿದ್ದಾನೆ. ಈ ಸರದಾರನು ನಿನ್ನೊಡನೆ ಮಿತ್ರತ್ವಕ್ಕೆ ಒಪ್ಪಿದಲ್ಲಿ ಇತರ ಸರದಾರರು ನಿನ್ನ ಜೊತೆಗೂಡುವರು." ಎಂಬ ಸಲಹೆಯನ್ನು ಪ್ರತ್ಯುತ್ತರವಾಗಿ ನೀಡಿದನು.

ಐನುಲ್‌ಮುಲ್ಕ ಮತ್ತು ಇಸ್ಮಾಯಿಲರಲ್ಲಿ ವ್ಯವಹಾರ :

ರಾಜಕುಮಾರ ಇಸ್ಮಾಯಿಲನಿಗೆ ಬುರ್ಹಾನ ನಿಜಾಮಶಾಹನ ಈ ಉತ್ತರದಿಂದ ಅತ್ಯಂತ ಸಂತೋಷವಾಯಿತು. ಆಗ ಐನುಲ್ ಮುಲ್ಕ ಕಗಾನಿಯು ಹೈಗರಿ ದಂಡು ಪ್ರದೇಶದಲ್ಲಿ ಬೀಡು ಬಿಟ್ಟಿದ್ದನು. ರಾಜಕುಮಾರನು ಐನುಲ್‌ಮುಲ್ಕ ಮತ್ತು ಆತನ ಔರಸ ಪುತ್ರ ಆಂಕಸ್‌ಖಾನನೊಂದಿಗೆ ಸಂಬಂಧವಿಟ್ಟುಕೊಂಡನು. ಅವರಿಬ್ಬರನ್ನು ತನ್ನ ಜೊತೆಗಾರರನ್ನಾಗಿ ಮಾಡಿಕೊಂಡನು. ಐನುಲ್‌ಮುಲ್ಕನು, ಬಾದಶಹನೊಡನೆ ರಾಜಕುಮಾರನ ವಿರೋಧವು ಸುದೀರ್ಘವಾಗಲಿ. ಇಸ್ಮಾಯಿಲನು ಬೆಳಗಾವಿಯನ್ನು ಆಡಳಿತದ ಕೇಂದ್ರವಾಗಿಸಿಕೊಂಡು ತನ್ನ ಹೆಸರಿನಲ್ಲಿ ಖುತ್ಬಾ ಮತ್ತು ಮೊಹರನ್ನು ಜಾರಿಗೊಳಿಸಲಿ. ಒಂದೇ ರಾಜ್ಯದಲ್ಲಿ ಇಬ್ಬರು ದೊರೆಗಳ ಆಡಳಿತವು ನಡೆಯುವಂತಾಗಲಿ ಎಂದು ಬಯಸುತ್ತಿದ್ದನು.

ಇಸ್ಮಾಯಿಲನ ಕಡಿವಾಣಕ್ಕೆ ಸೈನ್ಯದ ರವಾನೆ :

ಐನುಲ್‌ಮುಲ್ಕನು ಬಹಿರಂಗವಾಗಿ ಬಾದಶಹ ಇಬ್ರಾಹಿಮ ಆದಿಲ್‌ಶಾಹಿಯ ಪ್ರಾಮಾಣಿಕ ಸೇವಕನಂತೆ ನಟಿಸುತ್ತಿದ್ದನು. ಆದರೆ ಅಂತರಂಗದಲ್ಲಿ ರಾಜಕುಮಾರ ಇಸ್ಮಾಯಿಲನೊಂದಿಗೆ ಸಂಚು ಮಾಡಬಯಸುತ್ತಿದ್ದನು. ಆತನು ಇಸ್ಮಾಯಿಲನಿಗೆ, "ರಾಜ್ಯಾಡಳಿತದ ಪ್ರಮುಖ ಕಾರ್ಯಗಳನ್ನು ವ್ಯವಸ್ಥಿತಗೊಳಿಸಿದ ನಂತರ, ಕೆಲವು ಸರದಾರರೊಡನೆ ತಮ್ಮ ಸೇವೆಯಲ್ಲಿ ಹಾಜರಾಗುತ್ತೇನೆ" ಎಂಬ ಸಂದೇಶ ಕಳುಹಿಸಿದನು. ಇದೇ ಸಮಯಕ್ಕೆ ನೂರ್ ಆಲಿಮನನ್ನು ಬಂಧಿಸಿರುವ ವಿಷಯ ಬಾದಶಹನಿಗೆ ತಿಳಿಯಿತು. ಬಾದಶಹನು ಕೋಪಗೊಂಡು ರಾಜಕುಮಾರ ಇಸ್ಮಾಯಿಲನ ಮಾಡುತ್ತಿರುವ ಕೋಲಾಹಲವನ್ನು ಅಂತ್ಯಗೊಳಿಸಲು ಇಲಿಯಾಸಖಾನನೊಡನೆ ಒಂದು ಪ್ರಬಲ ಸೈನ್ಯವನ್ನು ಬೆಳಗಾವಿಗೆ ಕಳುಹಿಸಿದನು.

ಬೆಳಗಾವಿ ಕೋಟೆಯ ಮುತ್ತಿಗೆ :

ಇಲಿಯಾಸ ಖಾನನು ಬೆಳಗಾವಿಯನ್ನು ತಲುಪಿ ಕೋಟೆಗೆ ಮುತ್ತಿಗೆ ಹಾಕಿದನು. ಇಸ್ಮಾಯಿಲನಿಗೆ ಸೈನ್ಯವನ್ನು ಎದುರಿಸುವ ಧೈರ್ಯವಿರಲಿಲ್ಲ. ಆತನು ಕೋಟೆಯಲ್ಲಿ ಬಂಧಿತನಾಗಿಬಿಟ್ಟನು. ಕೋಟೆಗೆ ಹೋಗುವ ಎಲ್ಲ ಮಾರ್ಗಗಳನ್ನು ಇಲಿಯಾಸಖಾನನು ಮುಚ್ಚಿಬಿಟ್ಟನು. ಐನುಲ್ ಮುಲ್ಕನು ಬಾದಶಹನ ಆಜ್ಞಾನುಸಾರ ಬೆಳಗಾವಿ ತಲುಪಿ, ಎಲ್ಲರಂತೆ ಆತನೂ ಬಹಿರಂಗವಾಗಿ ಕೋಟೆಗೆ ಮುತ್ತಿಗೆ ಹಾಕಿದನು. ಆದರೆ ಕಳ್ಳತನದಲ್ಲಿ ಕೋಟೆಯಲ್ಲಿರುವ ಜನರಿಗೆ ಆಹಾರಧಾನ್ಯ ಮತ್ತಿತರ ಅವಶ್ಯಕ ಸಾಮಗ್ರಿಗಳನ್ನು ತಲುಪಿಸುತ್ತಿದ್ದನು. ಬಾದಶಹನಿಗೆ ಐನುಲ್‌ಮುಲ್ಕನ ವಿದ್ರೋಹಿ ಕೃತ್ಯವು ತಿಳಿದು ಬಿಟ್ಟಿತು. ಕೂಡಲೇ ಐನುಲ್ ಮುಲ್ಕನಿಗೆ ಹಿಂತಿರುಗುವ ಆದೇಶವನ್ನು ಜಾರಿ ಮಾಡಿದನು.

ಐನುಲ್ ಮುಲ್ಕನಿಗೆ ಹಿಂದಿರುಗುವ ಆದೇಶ :

ಬಾದಶಹನು ಕಳುಹಿಸಿದ ಆದೇಶದಲ್ಲಿ, "ಈ ದಿನಗಳಲ್ಲಿ ಬೆಳಗಾವಿ ಕಿಲ್ಲೆಯನ್ನು ಗೆಲ್ಲುವುದು ಮುಖ್ಯ ಕೆಲಸವೆಂದು ನಿನಗೆ ಚೆನ್ನಾಗಿ ಗೊತ್ತಿದೆ. ನೀನು ಮಹಾದಂಡನಾಯಕನಾಗಿರುವುದರಿಂದ ಈ ವಿಷಯದ ಬಗ್ಗೆ ನಿನ್ನೊಡನೆ ಚರ್ಚಿಸಿ ನಿನ್ನ ಅಭಿಪ್ರಾಯ ಪಡೆಯುವದು ಅತ್ಯಂತ ಅವಶ್ಯಕವಾಗಿದೆ. ಕೂಡಲೇ ಆಸ್ಥಾನಕ್ಕೆ ಬಂದು ಬಿಡು. ನೀನು ನೀಡುವ ಸಲಹೆಯನ್ನು ಕಾರ್ಯಗತಗೊಳಿಸಲಾಗುವುದು. ಇದಲ್ಲದೆ ಇನ್ನೂ ಕೆಲ ಮುಖ್ಯ ವಿಷಯಗಳ ಬಗ್ಗೆ ನಿನ್ನೊಂದಿಗೆ ಚರ್ಚಿಸಬೇಕಾಗಿದೆ." ಎಂದು ಬರೆಯಲಾಗಿತ್ತು.

ಐನುಲ್ ಮುಲ್ಕನು ಬಿಜಾಪುರ ತಲಪುವುದು :

ಐನುಲ್ ಮುಲ್ಕನು ಅರಸನು ಕಳುಹಿಸಿದ ರಾಯಸವನ್ನು ಹಸನ್ಮುಖನಾಗಿ

ಸ್ವೀಕರಿಸಿದನು. ಬಾದಶಹನನ್ನು ಸಂತೃಪ್ತಿಗೊಳಿಸಲು ಐನುಲ್ ಮುಲ್ಕನು ಕೂಡಲೇ ರಾಜಧಾನಿಯತ್ತ ತೆರಳಿದನು. ತನಗೆ ಅತ್ಯಂತ ಆಪ್ತರಾದ ಕೆಲವು ಸಹಚರರೊಡನೆ ಬಾದಶಹನ ಸನ್ನಿಧಿಯಲ್ಲಿ ಹಾಜರಾದನು. ಮುಸ್ಲಿಮೇತರ ಕೆಲವು ಜನರಿಗೆ ಐನುಲ್ ಮುಲ್ಕನು ಹಣ ಕೊಟ್ಟು ಬಾದಶಹನ ಗುಣಗಾನ ಮತ್ತು ಪ್ರಶಂಸೆ ಮಾಡಲು ನಿಯಮಿಸಿದನು.

ಬಾದಶಹನ ದೂರದೃಷ್ಟಿ :

ಇಬ್ರಾಹಿಮ್ ಆದಿಲ್‌ಶಾಹ ಸಾನಿಗೆ ಐನುಲ್ ಮುಲ್ಕನ ವಿದ್ರೋಹಿ ಕೆಲಸದ ಬಗ್ಗೆ ಸಂಪೂರ್ಣ ಅರಿವಿತ್ತು. ಆದರೆ ಬಾದಶಹನು ತನ್ನ ಕೋಪವನ್ನು ಪ್ರದರ್ಶಿಸುವ ಯಾವ ಮಾತನ್ನೂ ಐನುಲ್ ಮುಲ್ಕನ ಮುಂದೆ ಆಡಲಿಲ್ಲ. ಐನುಲ್ ಮುಲ್ಕನು ಈ ಹಿಂವೆ ಬಾದಶಹನ ಸೇವೆ ಮಾಡಿದುದರ ಬಗ್ಗೆ ಇಬ್ರಾಹಿಮನ ಮನದಲ್ಲಿ ಗೌರವವಿತ್ತು. ಆದುದರಿಂದ ಬಾದಶಹನು ಮೃದುವಾದ ರೀತಿಯಲ್ಲಿ, ಉಪಕಾರ ಸ್ಮರಿಸುವ ರೀತಿಯಲ್ಲಿ ನಡೆದುಕೊಂಡು ಐನುಲ್ ಮುಲ್ಕನನ್ನು ದಾರಿಗೆ ತರಬೇಕೆಂಬ ಪ್ರಯತ್ನ ಮಾಡಿದನು. ಈ ರೀತಿಯ ನಡುವಳಿಕೆಯಿಂದ ಐನುಲ್ ಮುಲ್ಕನು ದುರ್ಬಲನಾಗಿ, ತನ್ನ ಮನದಿಂದ ಕೃತಘ್ನತೆ ಮತ್ತು ಬಂಡಾಯದ ವಿಚಾರವನ್ನು ತೊರೆಯಬಹುದು ಎಂದು ಬಾದಶಹನು ಕಲ್ಪಿಸಿದ್ದನು.

ರಾಜನ ಆಸ್ಥಾನದಲ್ಲಿ ಐನುಲ್ ಮುಲ್ಕ :

ಐನುಲ್ ಮುಲ್ಕನು ಬಂದ ನಂತರ ಬಾದಶಹನು ಆಸ್ಥಾನಕ್ಕೆ ಆಗಮಿಸಿ ಸಿಂಹಾಸನವನ್ನು ಅಲಂಕರಿಸಿದನು. ಎಲ್ಲ ಸರದಾರರು ಮತ್ತು ಅಸ್ಕರೀ ಸರದಾರರು ಬಾದಶಹನ ಎಡಬಲದಲ್ಲಿ ಬಂದು ನಿಂತರು. ಬಾದಶಹನ ರಾಜಗಾಂಭೀರ್ಯದ ಠೀವಿಯನ್ನು ನೋಡಿದ ಐನುಲ್ ಮುಲ್ಕನು ಹೆದರಿದನು. ಆತನು ಮೂರು ನಾಲ್ಕು ಕಡೆ ಭೂಮಿಯನ್ನು ಚುಂಬಿಸಿದನು. ಅನಂತರ ಬಾದಶಹನ ಸೇವೆಗೆ ಹಾಜರಾದನು. ಬಾದಶಹನು ಕುಳಿತಿರುವ ಸಿಂಹಾಸನದ ಕಾಲುಗಳನ್ನು ಚುಂಬಿಸಿ, ಬಾದಶಹನು ಕುಳಿತುಕೊಳ್ಳಲು ಆಜ್ಞೆ ನೀಡಿದ ನಂತರ ತನ್ನ ಸ್ಥಳದಲ್ಲಿ ಕುಳಿತುಕೊಂಡನು.

ಐನುಲ್ ಮುಲ್ಕನ ಮೇಲೆ ಬಾದಶಹನ ಕೃಪೆ :

ಐನುಲ್ ಮುಲ್ಕನು ಭಯಪಟ್ಟಿರುವುದು ಬಾದಶಹನ ದೃಷ್ಟಿಗೆ ಬಿದ್ದಿತು. ಬಾದಶಹನು ಕೆಲ ಸಮಯ ಇತರರೊಂದಿಗೆ ಮಾತನಾಡಿದ ನಂತರ, ಐನುಲ್ ಮುಲ್ಕನತ್ತ ಗಮನ ಹರಿಸಿದನು. ಐನುಲ್ ಮುಲ್ಕನೊಡನೆ ಸಿಹಿಸಿಹಿಯಾದ ಮಾತುಗಳನ್ನಾಡಿ, ವಸ್ತ್ರಗಳ ಉಡುಗೊರೆ, ಸೊಂಟದಪಟ್ಟಿ, ಮತ್ತಿತರ ಉಡುಗೊರೆಗಳೊಡನೆ ವಜ್ರಗಳಿಂದಲಕೃತವಾದ ಚಾಬೂಕನ್ನು ಕೊಟ್ಟನು. ನಂತರ, ಐನುಲ್ ಮುಲ್ಕನಿಗೆ

ತನ್ನ ಜಹಗೀರಿಗೆ ಹೊರಟು ಹೋಗಲು ಅನುಮತಿ ದೊರೆಯಿತು. ಮಾರನೆಯ ದಿನ ಬೆಳಗಿನ ಜಾವ ಐನುಲ್ ಮುಲ್ಕನು ಬಕರ್ಮಿ ಪರ್ಗಣೆ(ಪ್ರದೇಶ)ಯತ್ತ ಹೊರಟನು.

ಐನುಲ್ ಮುಲ್ಕನ ನಡೆ ನುಡಿ :

ಬಾದಶಹನು ಉತ್ತಮ ರೀತಿಯಲ್ಲಿ ನಡೆದುಕೊಂಡುದು ಐನುಲ್ ಮುಲ್ಕನ ಮೇಲೆ ಯಾವ ಪರಿಣಾಮ ಬೀರಲಿಲ್ಲ. ಮೊದಲಿನಂತೆಯೇ ಇಸ್ಮಾಯಿಲನ ಸ್ನೇಹವನ್ನು ಮುಂದುವರಿಸಿಕೊಂಡು ಹೋದನು. ಕಿಲ್ಲೆಯಲ್ಲಿರುವವರಿಗೆ ಆಹಾರ ಧಾನ್ಯ ಮತ್ತಿತರ ಅವಶ್ಯಕ ಸಾಮಗ್ರಿಗಳನ್ನು ಕಳುಹಿಸುತ್ತಿದ್ದನು.

ಐನುಲ್ ಮುಲ್ಕನ ಈ ಕೆಲಸವು ಎಲ್ಲರಿಗೂ ತಿಳಿದುಬಿಟ್ಟಿತು. ಆಕಸ್ಮಿಕವಾಗಿ ಅದೇ ದಿನಗಳಲ್ಲಿ ಹಯಾತ್‌ಖಾನನೆಂಬ ಕೊತವಾಲನು ಮದ್ದು ಗುಂಡುಗಳು ಮತ್ತಿತರ ಯುದ್ಧ ಸಾಮಗ್ರಿಗಳನ್ನು ಇನ್ನೊಂದೆಡೆ ಸಾಗಿಸಲು ಬೆಳಗಾವಿಗೆ ಹೋಗಿದ್ದನು. ಅಲ್ಲಿಂದ ಹಿಂದಿರುಗಿ ಬರುವಾಗ ಬಕರ್ಮಿ ಪರ್ಗಣೆಯತ್ತ ತಂಗಿದನು. ಅಲ್ಲಿ ಐನುಲ್ ಮುಲ್ಕನಿಂದ ಔತಣವಿತ್ತು.

ಹಯಾತ್ ಖಾನ ಮತ್ತು ಐನುಲ್ ಮುಲ್ಕರಲ್ಲಿ ಮಾತಿನ ಜಟಾಪಟಿ :

ಹಯಾತ್ ಖಾನನು ಕೆಟ್ಟ ನಡತೆಯ ಜನರ ಸಂಗದಲ್ಲಿ ಒಡನಾಡುತ್ತಿದ್ದನು. ಅವರೊಡನೆ ಅಶ್ಲೀಲವಾಗಿ ಮಾತನಾಡುತ್ತಿದ್ದನು. ಐನುಲ್ ಮುಲ್ಕನನ್ನು ಸಹ ಅಂತಹ ವ್ಯಕ್ತಿಯೆಂದು ತಿಳಿದಿದ್ದನು. ಆತನು ಐನುಲ್ ಮುಲ್ಕನೊಡನೆ ಕೆಳಮಟ್ಟದ ಸಂಭಾಷಣೆ ಆರಂಭಿಸಿದನು. ಐನುಲ್ ಮುಲ್ಕನು ಆತನ ಮಾತುಗಳಿಂದ ಕೋಪಗೊಂಡು ಅವಾಚ್ಯ ಶಬ್ದಗಳನ್ನು ಉಪಯೋಗಿಸಿದನು. ಹಯಾತ್ ಖಾನನೂ ಸುಶೀಲತೆಯ ಹದ್ದು ಮೀರಿ ಐನುಲ್ ಮುಲ್ಕನಿಗೆ ಬಂಡಾಯಕೋರ ಹಾಗೂ ಅಪ್ರಾಮಾಣಿಕನೆಂದು ಬಿಚ್ಚು ನುಡಿಗಳಲ್ಲಿ ಹೇಳಿದನು.

ಹಯಾತ್ ಖಾನನ ಬಂಧನ :

ಹಯಾತ್ ಖಾನನು ಐನುಲ್ ಮುಲ್ಕನಿಗೆ, "ಒಂದು ಅತ್ಯಂತ ಅವಶ್ಯ ಕೆಲಸಕ್ಕಾಗಿ ಬೆಳಗಾವಿಗೆ ಹೋಗಿದ್ದೆನು ಹಾಗೂ ಮಾರ್ಗ ಮಧ್ಯದಲ್ಲಿ ಇಲ್ಲಿಗೆ ಬಂದಿದ್ದೇನೆ. ನೀನು ದೊರೆಗೆ ಪ್ರಾಮಾಣಿಕನಾಗಿ ಸೇವೆ ಸಲ್ಲಿಸುತ್ತಿಲ್ಲ. ನಿನ್ನ ಬಂಡುಕೋರತನಕ್ಕೆ ನನ್ನಲ್ಲಿ ಸಾಕಷ್ಟು ಪುರಾವೆಗಳಿವೆ" ಎಂದು ಹೇಳಿದನು. ಈ ಮಾತುಗಳನ್ನು ಕೇಳಿ ಐನುಲ್ ಮುಲ್ಕನು ಭಯಪಟ್ಟು ಹಣವನ್ನು ಕೊಡಬಹುದೆಂದು ಹಯಾತ್ ಖಾನನು ತಿಳಿದುಕೊಂಡಿದ್ದನು. ಆದರೆ ಐನುಲ್ ಮುಲ್ಕನು ಇಂತಹ ವಿಷಯಕ್ಕೆ ಹೆದರುವವನಾಗಿರಲಿಲ್ಲ. ಈ ರೀತಿಯಿಂದ ಬಹಳ ದೂರ ಹೋಗಿದ್ದನು. ಆತನ ಬಂಡುಕೋರತನವು ರಹಸ್ಯವಾಗಿ ಉಳಿದಿರಲಿಲ್ಲ. ಆತನು ಮೃದುವಾದ ನಡತೆಯನ್ನು ಮರೆತು ಹಯಾತ್ ಖಾನನನ್ನು ಕೈದು ಮಾಡಿದನು.

ಐನುಲ್ ಮುಲ್ಕನ ಬಹಿರಂಗ ಬಂಡಾಯ :

ಇದಾದ ನಂತರ ಐನುಲ್ ಮುಲ್ಕನು ಎಲ್ಲರೆದುರು ಬಾದಶಹನ ವಿರೋಧ ಮಾಡತೊಡಗಿದನು. ತನ್ನ ಪರಾಕ್ರಮದ ಬಗ್ಗೆ ಹೆಮ್ಮೆ ಪಡತೊಡಗಿದನು. ಇದಲ್ಲದೇ, ತನ್ನ ಜಹಗೀರಿನ ಸುತ್ತುಮುತ್ತಲಿನ ಆಡಳಿತಾಧಿಕಾರಿಗಳಿಗೆ ಪತ್ರ ಬರೆದು ರಾಜಕುಮಾರ ಇಸ್ಮಾಯಿಲನಿಗೆ ವಿಧೇಯರಾಗಿರಲು ಸಲಹೆ ನೀಡಿದನು. ಅವರು ರಹಸ್ಯವಾಗಿ ಇಸ್ಮಾಯಿಲನಿಗೆ ವಿಧೇಯರಾಗಿರುವ ವಾಗ್ದಾನವನ್ನು ಮಾಡಿದರು. ಮಿರಜ್ ಕಿಲ್ಲೆಯ ಪ್ರಜೆಗಳು ಬಸ್ನರ್ ನಾಯಕನೆಂಬ ಠಾಣೇದಾರನನ್ನು ಬಿಟ್ಟು ಇಸ್ಮಾಯಿಲನನ್ನು ಅನುಸರಿಸುವದಾಗಿ ಬಹಿರಂಗವಾಗಿ ಹೇಳಿದರು.

ಬುರ್ಹಾನ್ ನಿಜಾಮಶಾಹನಿಗೆ ಐನುಲ್ ಮುಲ್ಕನ ಪತ್ರ :

ಇಬ್ರಾಹಿಮ್ ಆದಿಲ್‌ಶಾಹ ಸಾನಿಯನ್ನು ದೂರಿ ಐನುಲ್ ಮುಲ್ಕನು ಬುರ್ಹಾನ್ ನಿಜಾಮಶಾಹನಿಗೆ ಪತ್ರ ಬರೆದನು. ಆ ಪತ್ರದಲ್ಲಿ, 'ಬೆಳಗಾವಿ ಕೋಟೆ ಮತ್ತು ಸುತ್ತಲಿನ ಪ್ರದೇಶವು ರಾಜಕುಮಾರ ಇಸ್ಮಾಯಿಲ್‌ನ ವಶವಾಗಿ ಬಿಟ್ಟಿದೆ ಹಾಗೂ ಎಲ್ಲ ಸರದಾರರು ಮತ್ತು ರಾಜಧಾನಿಯಲ್ಲಿರುವ ಗಣ್ಯ ವ್ಯಕ್ತಿಗಳು ರಾಜಕುಮಾರನ ಆಜ್ಞಾಧಾರಿಗಳಾಗಿ ಸೇವೆ ಸಲ್ಲಿಸಬೇಕೆಂದು ಕೊಂಡಿದ್ದಾರೆ. ರಾಜಕುಮಾರನ ತಲೆಯ ಮೇಲೆ ಕಿರೀಟವಿಟ್ಟು ಛತ್ರಪತಿಯನ್ನು ಮಾಡಿ ಬಿಜಾಪುರದತ್ತ ಪ್ರಯಾಣ ಆರಂಭಿಸುವುದು ಎಲ್ಲರ ಇಚ್ಛೆಯಾಗಿದೆ. ಈ ಮಹತ್ಕಾರ್ಯವನ್ನು ನಿಮ್ಮ ಬೆಂಬಲವಿಲ್ಲದೆ ಮಾಡಲಾಗುವುದಿಲ್ಲ. ಹುಜೂರರು ಮನಸ್ಸು ಮಾಡಿದಲ್ಲಿ ಈ ಕಾರ್ಯವು ಸಫಲವಾಗುವುದು. ರಾಜಕುಮಾರನ ಕೈಗೆ ಆಡಳಿತದ ಚುಕ್ಕಾಣಿ ಬಂದಲ್ಲಿ ಎಲ್ಲರಿಗೂ ಶುಭವಾಗುವದು. ಈ ಕಾರ್ಯದಲ್ಲಿ ವಿಜಯಿಯಾದಲ್ಲಿ, ನಮ್ಮ ಕೃತಜ್ಞತೆಯ ಕಾಣಿಕೆಯಾಗಿ, ಶಾಹದುರ್ಗ, ಸೊಲಾಪುರ ಕೋಟೆ ಮತ್ತು ಎಲ್ಲ ಗಡಿ ಪ್ರದೇಶವನ್ನು ನಿಮ್ಮ ವಶಕ್ಕೆ ಸಲ್ಲಿಸಲಾಗುವುದು' ಎಂದು ಬರೆಯಲಾಗಿತ್ತು.

ಐನುಲ್ ಮುಲ್ಕನ ಸಂತೋಷ :

ಬುರ್ಹಾನ್ ನಿಜಾಮಶಾಹನಿಗೆ ಈ ಪತ್ರ ದೊರೆತೊಡನೆ, ಆತನಿಗೆ ಇಬ್ರಾಹಿಮ್ ಆದಿಲ್‌ಶಾಹನು ಮಾಡಿದ ಉಪಕಾರಗಳೆಲ್ಲ ಮರೆತು ಹೋದವು. ಬುರ್ಹಾನನು ರಾಜಕುಮಾರನಿಗೆ ನೆರವು ನೀಡುವ ವಾಗ್ದಾನವನ್ನು ಮಾಡಿದನು. ತನ್ನ ಸೈನ್ಯವು ಸಂಘಟಿತವಾಗಲು ಆಜ್ಞೆ ನೀಡಿದನು. ಐನುಲ್ ಮುಲ್ಕನಿಗೆ ಈ ವಿಷಯ ತಿಳಿದಾಗ, ಆತನಿಗೆ ಅತ್ಯಂತ ಸಂತೋಷವಾಯಿತು. ಇಲಿಯಾಸ್ ಖಾನನ ನೆರವಿಗಾಗಿ ಬೆಳಗಾವಿಗೆ ಕಳುಹಿಸಿದ ಸೈನ್ಯವನ್ನು ಹಿಂದಿರುಗಲು ಆದೇಶವಿತ್ತನು.

ಮಲಬಾರದ ಹಿಂದುಗಳ ಗಲಭೆ :

ಇದೇ ಸಂದರ್ಭದಲ್ಲಿ ಮಲಬಾರದ ಹಿಂದುಗಳು ಗಲಭೆ ಮಾಡತೊಡಗಿದರು.

ಅಲೀ ಆದಿಲ್‌ಶಾಹಿಯು ಮುತ್ತಿಗೆ ಹಾಕಿದ್ದ ಚಂದ್ರಕೋಯಿ ಕಿಲ್ಲೆಯನ್ನು ತಮ್ಮ ವಶವಮಾಡಿಕೊಂಡರು. ಮುಸ್ಲಿಮೇತರರ ಪ್ರಾಬಲ್ಯವು ಮತ್ತಿಷ್ಟು ಹೆಚ್ಚಿ, ಬಂಕಾಪುರದಲ್ಲಿಯೂ ವಿನಾಶದ ಬೆಂಕಿಯ ಕಿಡಿ ಹಬ್ಬಿತು.

ಇಲಿಯಾಸ್ ಖಾನ ಮತ್ತು ಮಹಮದ ಖಾನ್ ರೂಮಿ ಬಂಧನ :

ಇಲಿಯಾಸ್ ಖಾನನು ಬೆಳಗಾವಿ ಕೋಟೆಯ ಮುತ್ತಿಗೆ ಹಾಕಿದ್ದನು. ಆತನೂ ಇತರ ಸರದಾರರಂತೆ ಬಾದಶಹನ ವಿರೋಧಿಯಾಗಿದ್ದನು. ಆತನ ಮನಸ್ಸಿಗೇನು ತೋಚಿತೋ ಅಲ್ಲಾಹನಿಗೆ ಗೊತ್ತು. ಯಾವ ವಿಚಾರವನ್ನೂ ಮಾಡದೆ ಬಿಜಾಪುರಕ್ಕೆ ಬಂದು ಬಿಟ್ಟನು. ಬಿಜಾಪುರದಲ್ಲಿ ಆತನ ಬರುವಿಕೆಯ ಕೋಲಾಹಲವನ್ನುಂಟು ಮಾಡಿತು. ಎಲ್ಲರೂ ಭಯಭೀತರಾದರು. ರಾಜಧಾನಿಯಲ್ಲಿ ಗಲಭೆಯ ಬಿರುಗಾಳಿ ಬೀಸುವ ಸಾಧ್ಯತೆ ಕಂಡುಬಂದಿತು. ಬಾದಶಹನು ಸಾವಧಾನವಾಗಿ ಆಲೋಚಿಸಿ, ಶತ್ರುಗಳೊಡನೆ ಸಂಚು ಮಾಡಿದ ಇಲಿಯಾಸ್ ಖಾನ ಮತ್ತು ರೂಮೀ ಖಾನರನ್ನು ಬಂಧಿಸಿದನು. ಅವರನ್ನು ಕತ್ತಲುಭರಿತ ಸೆರೆಮನೆಯಲ್ಲಿ ಕೂಡಿ ಹಾಕಿದನು.

ಬಾದಶಹನು ನಾಲ್ಕೂ ದಿಕ್ಕುಗಳಲ್ಲಿರುವ ಸರದಾರರಿಗೆ ಬಾದಶಹರ ಸನ್ನಿಧಿಗೆ ಹಾಜರಾಗುವ ಆಜ್ಞೆಯನ್ನು ಹೊರಡಿಸಿದನು. ಅಲ್ಪ ಸಮಯದಲ್ಲಿಯೇ ರಾಜಧಾನಿಯಲ್ಲಿ ದೊಡ್ಡ ಸೈನ್ಯವು ಒಗ್ಗೂಡಿತು. ಹಿರಿಯ ಸರದಾರರಲ್ಲಿ ಒಬ್ಬನಾದ ಪ್ರಾಮಾಣಿಕ, ವಿಶ್ವಾಸಾರ್ಹನಾದ ಆಲಮ್ ಖಾನ ದಖನಿಯು ಎಲ್ಲರಿಗಿಂತ ಮೊದಲು ಐವತ್ತು ಕುದುರೆ ಸವಾರೊಡನೆ ಬಾದಶಹನ ಸೇವೆಗೆ ಬಂದು ನಿಂತನು. ಐನುಲ್ ಮುಲ್ಕನು ಬೆಳಗಾವಿಯ ಆಸುಪಾಸಿನ ಸರದಾರರು ಅಲ್ಲಿ ಇರುವುದು ಕಾಣದೆ ಹೋದುದರಿಂದ, ಆತನು ಆಂಕಸ್ ಖಾನನೊಡನೆ ಸೇರಿಕೊಂಡು, ತನ್ನ ಯೋಜನೆಯುನ್ನು ಕಾರ್ಯಗತಗೊಳಿಸುವ ಸಿದ್ಧತೆ ಮಾಡತೊಡಗಿದನು.

ಇಸ್ಮಾಯಿಲನು ಛತ್ರಪತಿಯ ಛಾಯೆಯಲ್ಲಿ :

ಆಂಕಸ್ ಖಾನನು ಹೇರಳ ಹಣವನ್ನು ವ್ಯಯ ಮಾಡಿ ಹತ್ತು ಸಾವಿರ ಕುದುರೆಸವಾರರ ಮತ್ತು ಇಪ್ಪತ್ತು ಸಾವಿರ ಕಾಲ್ದಳಗಳ ಪ್ರಬಲ ಸೈನ್ಯವನ್ನು ಸುಸಜ್ಜಿತಗೊಳಿಸಿದನು. ಆಂಕಸ್ ಖಾನನು ತನ್ನ ಸಾಮರ್ಥ್ಯದ ಮತ್ತಿನಿಂದ ಮದೋನ್ಮತ್ತನಾಗಿ ಬುರ್ಹಾನ್ ನಿಜಾಮ ಶಾಹನ ಬರುವಿಕೆಯ ದಾರಿಯನ್ನೂ ಕಾಯದೆ, ಬೆಳಗಾವಿಯತ್ತ ಹೊರಟನು. ಆಂಕಸ್ ಖಾನನು ರಾಜಕುಮಾರ ಇಸ್ಮಾಯಿಲನನ್ನು ಭೇಟಿಯಾಗಿ, ಬುರ್ಹಾನ್ ನಿಜಾಮಶಾಹನು ಬರುವ ಭರವಸೆಯ ಮೇಲೆ ರಾಜಕುಮಾರನ ಶಿರದ ಮೇಲೆ ಕಿರೀಟವಿಟ್ಟು ಛತ್ರಪತಿಯನ್ನಾಗಿ ಮಾಡಿದನು.

ವಿದ್ರೋಹಿಗಳನ್ನು ಸದೆಬಡೆಯುವ ವ್ಯವಸ್ಥೆ :

ಇಬ್ರಾಹಿಮ್ ಆದಿಲ್‌ಶಾಹ ಸಾನಿಗೆ ಈ ವಿದ್ಯಮಾನಗಳ ಬಗ್ಗೆ ತಿಳಿದೊಡನೆಯೇ,

ಹಮೀದ ಖಾನ್ ಹಬ್‌ಶಿಗೆ ಸೇನಾಧಿಪತಿಯಾಗಿ ನಿಯಮಿಸಿ, ರಬ್ಬಿಸ್ ಸಾನಿ ತಿಂಗಳದಲ್ಲಿ ಸರದಾರರು ಮತ್ತು ಸೇನಾನಿಗಳೊಡನೆ, ವಿದ್ರೋಹಿ ಮತ್ತು ಬಂಡುಕೋರರನ್ನು ದಮನಗೊಳಿಸಲು ಕಳುಹಿಸಿಕೊಟ್ಟನು. ಹಮೀದ ಖಾನನು ಅಸಾಲ್‌ಪುರ ತಲುಪಿದ ಮೇಲೆ, ಐನುಲ್ ಮುಲ್ಕ ಮತ್ತು ಆತನ ಸಂಗಡಿಗರು, ರಾಜಕುಮಾರ ಇಸ್ಮಾಯಿಲನ ಅರಸೊತ್ತಿಗೆಗೆ ವಿಧೇಯನಾಗಿರಲು ಹೇಳಿದರು. ಇಬ್ರಾಹಿಮ್ ಆದಿಲ್‌ಶಾಹ ಸಾನಿ ಹೇಳಿದಂತೆಯೇ ಹಮೀದ ಖಾನನು ಅವರೊಂದಿಗೆ ನಡೆದುಕೊಂಡನು. ಹಮೀದ ಖಾನನು ವಿದ್ರೋಹಿಗಳೊಡನೆ ಗೌರವದಿಂದ ನಡೆದುಕೊಂಡನು ಹಾಗೂ ಐನುಲ್ ಮುಲ್ಕನಿಗೆ, 'ನಾನು ನಿಮ್ಮೊಡನೆ ಯುದ್ಧ ಮಾಡಲು ಬಂದಿಲ್ಲ, ರಾಜಕುಮಾರ ಇಸ್ಮಾಯಿಲನಿಗೆ ನಮ್ಮ ವಿಶ್ವಾಸ ಮತ್ತು ಪ್ರಾಮಾಣಿಕತೆಯನ್ನು ತಿಳಿಸಬೇಕಾಗಿದೆ. ರಾಜಕುಮಾರ ಇಸ್ಮಾಯಿಲನು ಬುರ್ಹಾನ್ ನಿಜಾಮಶಾಹನು ಬರುವಿಕೆಗೆ ಮೊದಲೇ ಕೋಟೆಯ ಹೊರಗೆ ಬಂದು ಛತ್ರಪತಿಯಾದರೆ, ನಾನು ರಾಜಕುಮಾರನ ಸನ್ನಿಧಿಯಲ್ಲಿ ನನ್ನ ವಿಧೇಯತೆಯನ್ನು ಬಹಿರಂಗಗೊಳಿಸುವೆನು' ಎಂದು ಹೇಳಿ ಕಳುಹಿಸಿದನು.

ಐನುಲ್ ಮುಲ್ಕನ ಕಣ್ಣಿಗೆ ಬಟ್ಟೆ ಕಟ್ಟಿದಂತಾಯಿತು. ಬುರ್ಹಾನ್ ನಿಜಾಮಶಾಹನು ಪರಿಂದಾ ಸಮೀಪ ತಲುಪಿದ್ದನು. ಆದರೆ ಐನುಲ್ ಮುಲ್ಕನು ಹಮೀದ ಖಾನನ ಮಾತನ್ನು ನಂಬಿ, ಹಮೀದ ಖಾನನು ಹೇಳಿದಂತೆಯೇ, ಬುರ್ಹಾನ ನಿಜಾಮಶಾಹನು ಬರುವ ದಾರಿಯನ್ನು ಕಾಯದೇ, ರಾಜಕುಮಾರನ ಜೊತೆಗೂಡಿ ಕೋಟೆಯಿಂದ ಹೊರಬಂದನು. ಹಮೀದ ಖಾನ ಮತ್ತು ಆತನ ಸಂಗಡಿಗರು, ಐನುಲ್ ಮುಲ್ಕ ಮತ್ತು ರಾಜಕುಮಾರನನ್ನು ಉತ್ತಮ ರೀತಿಯಲ್ಲಿ ಸ್ವಾಗತಿಸಿದರು.

ಐನುಲ್ ಮುಲ್ಕನ ಹಿರಿಯ ಮಗ ಆಲೀಖಾನನು ಮುಂದಾಲೋಚನೆ ಮತ್ತು ತಿಳಿವಳಿಕೆಯುಳ್ಳ ವ್ಯಕ್ತಿಯಾಗಿದ್ದನು. ಬಾದಶಹನನ್ನು ವಿರೋಧಿಸುವ ರೀತಿ ಸರಿಯಾದುದಲ್ಲವೆಂದು ತಂದೆಗೆ ಯಾವಾಗಲೂ ಹೇಳುತ್ತಿದ್ದನು. ಅಲೀಖಾನನು, ಹಮೀದ ಖಾನ ಮತ್ತು ಆತನ ಸಂಗಡಿಗರ ಹಂಚಿಕೆಯನ್ನು ಅರಿತುಕೊಂಡಿದ್ದನು. ಅವರು ಬಹಿರಂಗವಾಗಿ ತೋರುವ ಗೌರವಾದರಗಳಲ್ಲಿ ವಿಷ ತುಂಬಿರುವುದನ್ನು ಚೆನ್ನಾಗಿ ಅರ್ಥ ಮಾಡಿಕೊಂಡಿದ್ದನು. ಐನುಲ್ ಮುಲ್ಕನು ಹಮೀದ ಖಾನನ ಬಗ್ಗೆ ಎಚ್ಚರಿಕೆ ವಹಿಸಲು ಹೇಳಿ ಆತನ ಬಳಿ ಹೋಗುವುದನ್ನು ತಪ್ಪಿಸುವ ಪ್ರಯತ್ನ ಮಾಡಿದನು. ಆದರೆ, ಐನುಲ್ ಮುಲ್ಕನಿಗೆ ನಂಬಿಕೆ ಬರಲಿಲ್ಲ. ಆಲೀಖಾನನ ಹೇಳಿಕೆಯು ಸ್ವಾರ್ಥದಿಂದ ತುಂಬಿದೆ ಎಂದು ತಿರಸ್ಕರಿಸಿದನು.

ಐನುಲ್ ಮುಲ್ಕನ ವಧೆ :

ರಬ್ಬಿಸ ಸಾನಿ ತಿಂಗಳ ೧೬ನೆಯ ದಿನ ಶುಕ್ರವಾರದಂದು ಹೈಕರಿಯಲ್ಲಿ ಎರಡೂ ಸೇನೆಗಳು ಎದುರುಬದರಾದವು. ಐನುಲ್ ಮುಲ್ಕನ ಆಜ್ಞೆಯಂತೆ ನೆಲದ ಮೇಲೆ ಸುಂದರವಾದ ಮೇಲ್ಹಾಸುಗಳನ್ನು ಮತ್ತು ರತ್ನಗಂಬಳಿಗಳನ್ನು ಹಾಕಿ ಆಸ್ಥಾನವನ್ನು

ಅಲಂಕರಿಸಲಾಗಿತ್ತು. ರಾಜಕುಮಾರ ಇಸ್ಮಾಯಿಲನು ಹಮೀದ ಖಾನನ ಬಗ್ಗೆ ಯಾವ ಪರಿಶೋಧನೆ ಮಾಡದೆ, ಶರಾಬು ಕುಡಿಯುವುದರಲ್ಲಿ ಮತ್ತು ಗಾಯನ ಕೇಳುವಲ್ಲಿ ತಲ್ಲೀನನಾಗಿದ್ದನು. ಹಮೀದ ಖಾನನು ಬೇರೆ ಯೋಚನೆ ಮಾಡಿದ್ದನು. ಆತನು ತಮ್ಮ ಸೈನ್ಯದಲ್ಲಿರುವ ತೋಪು ಹಾರಿಸುವವರಿಗೆ ಸೂಚನೆ ಕೊಟ್ಟನು. ರಾಜಕುಮಾರನ ಸೈನ್ಯದ ಮೇಲೆ ಗುಂಡಿನ ದಾಳಿಯಾಗತೊಡಗಿತು. ಐನುಲ್ ಮುಲ್ಕನು ತಪ್ಪಿಸಿಕೊಂಡು ಹೋಗುವ ಪ್ರಯತ್ನ ಮಾಡಿದನು. ಆದರೆ ಸುಹೇಲ ಖಾನ್ ಖ್ವಾಜಾಸರಾನ ದಾಳಿಯು ಆತನ ಸೈನ್ಯವನ್ನು ಸರ್ವನಾಶಮಾಡಿಬಿಟ್ಟವು. ಐನುಲ್ ಮುಲ್ಕನು ಗಾಯಗೊಂಡು ಕುದುರೆಯ ಮೇಲಿನಿಂದ ಕೆಳಗೆ ಬಿದ್ದನು. ಸುಹೇಲಖಾನನು ಕೂಡಲೇ ತನ್ನ ಖಡ್ಗದಿಂದ ಐನುಲ್‌ಮುಲ್ಕನ ಶಿರಚ್ಛೇದ ಮಾಡಿದನು.

ರಾಜಕುಮಾರ ಇಸ್ಮಾಯಿಲನ ಬಂಧನ :

ಐನುಲ್ ಮುಲ್ಕನನ್ನು ವಧಿಸಿದ ನಂತರ, ಸುಹೇಲಖಾನನು ರಾಜಕುಮಾರನ ಸೈನ್ಯದತ್ತ ತಿರುಗಿದನು. ರಾಜಕುಮಾರನು ಆಲೀಖಾನ ಮತ್ತು ಆಂಕಸ್ ಖಾನರತ್ತ ಹೋಗಬಯಸಿದನು. ಅವರಿಬ್ಬರು ಬುರ್ಹಾನ ನಿಜಾಮಶಾಹನತ್ತ ಕರೆದೊಯ್ಯುವರು. ನಂತರದಲ್ಲಿ ಯುದ್ಧದ ಸಿದ್ಧತೆಯನ್ನು ಮಾಡಿಕೊಂಡು ಯುದ್ಧಭೂಮಿಗೆ ಬರಬೇಕೆಂದು ವಿಚಾರ ಮಾಡಿದನು. ಆದರೆ, ರಾಜಕುಮಾರ ಇಸ್ಮಾಯಿಲನ ಮೇಲೆ ಮದ್ಯದ ಅಮಲು ಏರುತ್ತಿತ್ತು. ಇದರಿಂದಾಗಿ ಕುದುರೆಯನ್ನೋಡಿಸುವಾಗ ನೆಲದ ಮೇಲೆ ಬಿದ್ದು ಬಿಟ್ಟನು. ಸುಹೇಲಖಾನನ ಸಿಪಾಹಿಗಳು ಆತನನ್ನು ಬಂಧಿಸಿದರು.

ರಾಜಕುಮಾರನ ವಧೆ :

ಬಾದಶಹನ ಸೇವಕರು ಐನುಲ್ ಮುಲ್ಕನ ರುಂಡವನ್ನು ಬಿಜಾಪುರಕ್ಕೆ ಕಳುಹಿಸಿಕೊಟ್ಟರು. ರಾಜಧಾನಿಯಲ್ಲಿ ಐನುಲ್ ಮುಲ್ಕನ ರುಂಡವನ್ನು ಹಗ್ಗದಿಂದ ಕಟ್ಟಿ ತೂಗು ಹಾಕಿದರು. ಅದನ್ನು ನೋಡಲು ದೂರ ದೂರದಿಂದ ಜನರು ಬಂದರು. ಒಂದು ವಾರದವರೆಗೂ ರುಂಡವು ತೂಗಾಡುತ್ತಿತ್ತು. ಖಾಂಜಿಬನ್ ಶಜಾಅತ್ ಖಾನನೆಂಬ ಸರದಾರನು ರಾಜಕುಮಾರ ಇಸ್ಮಾಯಿಲನನ್ನು ವಧಿಸಿದನು. ಅನಂತರ, ಸುಹೇಲಖಾನ ಮತ್ತು ಎತ್‌ಮಾದ ಖಾನ ಮತ್ತಿತರರು ಬಿಜಾಪುರ ತಲುಪಿ, ಬಾದಶಹನ ಸನ್ನಿಧಿಯಲ್ಲಿ ಹಾಜರಾದರು. ಅವರು ಬಿಜಾಪುರ ತಲುಪಿದ ದಿನ, ಐನುಲ್ ಮುಲ್ಕನ ರುಂಡವನ್ನು ತೋಪಿನ ತುದಿಯಲ್ಲಿಟ್ಟು ಹಾರಿಸಿಬಿಟ್ಟರು.

ಕೃತಘ್ನರ ವಧೆ :

ಇಬ್ರಾಹಿಮ್ ಆದಿಲ್‌ಶಾಹ ಸಾನಿಯು ಮಿರಜ್ ಕಿಲ್ಲೆಯ ಠಾಣೇದಾರ ಮುಸಮಿ ಮಾಲಿಕನಿಗೆ, 'ಮಿರಜ್ ಕಿಲ್ಲೆಯಲ್ಲಿ ಹದಿನೇಳು ಜನ ಬಂಡುಕೋರರನ್ನು ಸೆರೆ ಹಿಡಿದು ಬಂಧಿಸಲಾಗಿದೆ. ಅವರನ್ನು ಆದಷ್ಟು ಬೇಗನೆ ವಧಿಸಿ, ಅವರ ರುಂಡಗಳನ್ನು ರಾಜಧಾನಿಗೆ

ಕಳುಹಿಸಬೇಕು' ಎಂದು ಆಜ್ಞೆ ಮಾಡಿದನು. ಕಿಲ್ಲೆಯ ಠಾಣೇದಾರನು ರಾಜಾಜ್ಞೆಯನ್ನು ಪಾಲಿಸಿದನು. ಹದಿನೇಳು ಜನ ಬಂಡುಕೋರರನ್ನು ಸಾಲಾಗಿ ನಿಲ್ಲಿಸಿ ಅವರನ್ನು ವಧಿಸಿ ರುಂಡವನ್ನು ರಾಜಧಾನಿ ಬಿಜಾಪುರಕ್ಕೆ ಕಳುಹಿಸಿದನು.

ಬಹುಮಾನ, ಪ್ರಶಸ್ತಿಗಳು :

ಬಂಡುಕೋರರು ಮತ್ತು ವಿದ್ರೋಹಿಗಳನ್ನು ಸದಬಡೆದ ನಂತರ, ನಾಲ್ಕೂ ದಿಕ್ಕುಗಳ ಪ್ರದೇಶದಲ್ಲಿ ಯಾವುದೇ ಗಲಭೆಗಳಿಲ್ಲದೆ ಬಾದಶಹನು ಸಂತೃಪ್ತನಾದನು. ಪ್ರಾಮಾಣಿಕರಾಗಿ ಸೇವೆ ಸಲ್ಲಿಸಿದ, ಜೀವ ಬಲಿದಾನಕ್ಕೂ ಹಿಂದೆ ಸರಿಯದ ಸೇನಾಪತಿಗಳಿಗೆ ಬಹುಮಾನ ನೀಡಿ ಸಂತೋಷಪಡಿಸಿದನು. ಆಲಮ್ ಖಾನನಿಗೆ ಮುಸ್ತಫಾಖಾನನ ಹೆಸರಿನಲ್ಲಿ ಪ್ರಶಸ್ತಿ ನೀಡಿದನು. ಆತನಿಗೆ ಇನ್ನೂ ಹೆಚ್ಚಿನ ಹುದ್ದೆಯನ್ನು ನೀಡಿ ಗೌರವಿಸಿದನು. ಸುಹೇಲಖಾನನು ಯುದ್ಧದಲ್ಲಿ ತನ್ನ ಶೌರ್ಯವನ್ನು ಪ್ರದರ್ಶಿಸಿ, ಶತ್ರುವನ್ನು ವಧಿಸಿದುದಕ್ಕಾಗಿ ಬೆಲೆ ಬಾಳುವ ವಸ್ತ್ರಗಳನ್ನು ನೀಡಿದನು. ಆತನಿಗೆ ಹೆಚ್ಚಿನ ಶ್ರೇಣಿಯ ಹುದ್ದೆಯನ್ನು ನೀಡಿದನು.

ಬುರ್ಹಾನ ನಿಜಾಮಶಾಹನ ವ್ಯಾಕುಲತೆ :

ನಡೆದು ಹೋದ ಘಟನೆಗಳೆಲ್ಲ ವೈರಿಗಳ ಪಾಲಿಗೆ ಅದರಲ್ಲೂ ವಿಶೇಷವಾಗಿ ಬುರ್ಹಾನ್ ನಿಜಾಮ ಶಾಹನಿಗೆ ಬಹಳ ಅಪ್ರಿಯವಾದವು. ಏಕೆಂದರೆ, ಬುರ್ಹಾನ್ ನಿಜಾಮಶಾಹನು ಆದಿಲ್‌ಶಾಹಿ ಮನೆತನವನ್ನು ಸರ್ವನಾಶ ಮಾಡುವ ಯೋಜನೆ ಮಾಡಿಕೊಂಡಿದ್ದನು. ಆತನು ಪರಿಂದಾ ಕಿಲ್ಲೆಯಿಂದ ಮರಳಿ ಹೋದನು.

ಶಾಹ ನವಾಜ ಖಾನನ ಪರಿಸ್ಥಿತಿ :

ಈ ಕೃತಿಯ ಕರ್ತೃ ಫರಿಶ್ತಾನಿಗೆ ಖಾನ್ ಶಾಹ್ ನವಾಜ್ ಖಾನನಿಂದ ಅಪರಿಮಿತ ಉಪಕಾರವಾಗಿದೆ ಎಂಬುದನ್ನು ಈ ಕೃತಿಯ ಓದುಗರು ಅರಿತುಕೊಳ್ಳಬೇಕು. ಈ ಕೃತಿಯನ್ನು ರಚಿಸಿ ಸಂಕಲನ ಮಾಡುವಾಗ ಶಾಹ ನವಾಜ್ ಖಾನ್‌ನಿಂದ ಲೇಖಕನಿಗೆ ಬಹಳ ಸಹಾಯವಾಗಿದೆ. ಹಿಂದುಸ್ತಾನದ ಅರಸರ ಜೀವನ ಚರಿತ್ರೆಯನ್ನು ಬರೆಯುವಾಗ ಶಾಹ ನವಾಜ್ ಖಾನನ ಪರಿಸ್ಥಿತಿಯ ಬಗ್ಗೆ ಸಹ ಉಲ್ಲೇಖಿಸಬೇಕೆಂಬುದು ಆತನ ಬೇಡಿಕೆಯಾಗಿತ್ತು.

ತನ್ನ ಕಾಲದಲ್ಲಿ ಖಾಜಾ ಅಲ್ಲಾವುದ್ದೀನ ಮಹಮ್ಮದ ಶಿರಾಜಿಯು ಪ್ರಸಿದ್ಧ ವಯೋವೃದ್ಧನಾಗಿದ್ದನು. ಶಿರಾಜ ನಗರದ ಆಡಳಿತಾಧಿಕಾರಿ ಮತ್ತು ನಗರದ ಶ್ರೇಷ್ಠಿಗಳು ಆತನ ಮಾತುಗಳಿಗೆ ಬಹಳ ಮನ್ನಣೆ ನೀಡುತ್ತಿದ್ದರು. ಆದರ ತೋರುತ್ತಿದ್ದರು. ಖಾಜಾ ಸಾಹೇಬನಿಗೆ ಮೂರು ಜನ ಮಕ್ಕಳು. ಖಾಜಾ ಮೊಯನುದ್ದೀನ್, ಖಾಜಾ ಮೊಯಿಜುದ್ದೀನ ಮತ್ತು ಖಾಜಾ ಹಿದಾಯಿತುಲ್ಲಾ. ಈ ಮೂರೂ ಜನ ಮಕ್ಕಳು ಜ್ಞಾನ ಮತ್ತು ಪ್ರಾವೀಣ್ಯತೆ ಪಡೆದು, ಪಾಂಡಿತ್ಯ ಶಿಖರದ ಔನ್ನತ್ಯಕ್ಕೇರಿದ್ದರು.

ಜ್ಞಾನ ಮತ್ತು ಪಾಂಡಿತ್ಯ :

ಖಾಜಾ ಶಿರಾಜಿಗೆ ತರ್ಕಶಾಸ್ತ್ರ ಮತ್ತು ಆಡಳಿತ ಶಾಸ್ತ್ರದಲ್ಲಿ ಬಹಳ ಆಸಕ್ತಿ ಇತ್ತು. ಆತನು ಈ ವಿಷಯದಲ್ಲಿ ಪರಿಣತೆ ಪಡೆದು, ಹಲವಾರು ಪುಸ್ತಕಗಳನ್ನು ಬರೆದಿದ್ದಾನೆ. ಈ ವಿಷಯವನ್ನು ಅಭ್ಯಸಿಸುವವರಿಗೆ, ಶಿರಾಜಿಯು ಬರೆದ ಪುಸ್ತಕಗಳು ಅತ್ಯುತ್ತಮ ಆಕರ ಗ್ರಂಥಗಳಾಗಿವೆ. ಅಲೀ ಆದಿಲ್‌ಶಾಹನು ಹಿಂದುಸ್ತಾನಕ್ಕೆ ಬರಲು ಆಮಂತ್ರಣ ನೀಡಿದ ದಿನವೇ, ಖಾಜಾ ಶಿರಾಜಿಯು ಪ್ರವಾಸಕ್ಕೆ ಸನ್ನದ್ಧನಾದನು. ಶಿರಾಜಿಯು ಸಮುದ್ರ ಮಾರ್ಗವಾಗಿ ಬಿಜಾಪುರಕ್ಕೆ ಬಂದು ಅಲ್ಲಿ ಕೆಲವು ದಿನಗಳ ಕಾಲ ವಾಸವಾಗಿದ್ದನು. ನಂತರ, ಬುರ್ಹಾನ್‌ಪುರ, ಮಾಂಡು, ಉಜ್ಜಯನಿ, ಆಗ್ರಾ, ದೆಹಲಿ ಮತ್ತು ಲಾಹೋರ ಮತ್ತಿತರ ಪ್ರಸಿದ್ಧ ನಗರಗಳ ಪ್ರವಾಸ ಮಾಡಲು ಹೊರಟನು.

ಪವಿತ್ರ ಸ್ಥಳಗಳ ಯಾತ್ರೆ :

ಪ್ರವಾಸ ಮಾಡಿದ ನಂತರ ಖ್ವಾಜಾ ಶಿರಾಜಿಯು, ಹಿಂದುಸ್ತಾನದ ಕಾಣಿಕೆಗಳನ್ನು ಪಡೆದುಕೊಂಡು ಶಿರಾಜ ನಗರಕ್ಕೆ ಹೊರಟನು. ಶಿರಾಜದಿಂದ ಹರ್ಮೇನ್ ಶರ್ಫೇನ್ (ಮಕ್ಕಾ)ದ ಯಾತ್ರೆಗೆ ಹೊರಟನು. ಮಾರ್ಗ ಮಧ್ಯದಲ್ಲಿ ಬಗ್‌ದಾದ್‌ನಲ್ಲಿ ಕೆಲಕಾಲ ತಂಗಿ, ಹಜರತ್ ಇಮಾಮ್ ಮೂಸಾ ಕಾಜಮ್ ಹಾಗೂ ಇಮಾಮ್ ಮೊಹಮದ್ ನಖೀಯ ರೋಜಾದ ಯಾತ್ರೆ ಮಾಡಿ ಸಾಮರಾ ತಲುಪಿದನು. ಅಲ್ಲಿ ಹಜರತ್ ಇಮಾಮ್ ನಖಿ ಮತ್ತು ಇಮಾಮ್ ಹಸನ್ ಅಸ್ಕರಿಯ ರೋಜಾದ ಯಾತ್ರೆ ಮಾಡಿ ಅಲ್ಲಿಯ ಪರಿಚಾರಕರಿಗೆ ಇನಾಮುಗಳನ್ನು ನೀಡಿ ಸಂತುಷ್ಟಗೊಳಿಸಿದನು.

ನಂತರ ಖ್ವಾಜಾ ಸಾಹೇಬನು ನಜಬ್ ಅಶರಫ್ ತಲುಪಿದನು. ಅಲ್ಲಿ ಹಜರತ ಅಲಿಯ ರೋಜಾದಲ್ಲಿ ಹಣೆತಾಗಿಸಿ ಪ್ರಾರ್ಥಿಸಿದನು. ಮುಂದೆ ಮಕ್ಕಾ ಮಸೀದೆಯ ದಾರಿ ಹಿಡಿದನು. ಅಲ್ಲಿ ಹಜ್ ಬೈತುಲ್ಲಾದಿಂದ ಸಂತೃಪ್ತನಾಗಿ ಮದೀನಾದತ್ತ ಹೊರಟನು. ಅಲ್ಲಿ ಹಜರತ್ ಮಹಮದ್ ಸಲ್ಲಮರಿಗೆ ಪ್ರಾರ್ಥಿಸಿ, ಮಾತೃಭೂಮಿ ಶಿರಾಜಗೆ ಬಂದನು. ಖ್ವಾಜಾ ಸಾಹೇಬನ ಪ್ರವಾಸದ ಇಚ್ಛೆಯು ಹೆಚ್ಚು ದಿನ ಶಿರಾಜಿನಲ್ಲಿರಲು ಬಿಡಲಿಲ್ಲ. ಪುನಃ ಮಾತೃಭೂಮಿಯಿಂದ ದೂರ ಹೊರಡುವಂತೆ ಮಾಡಿತು. ಹಿಜರಿ ಸನ್ ೯೯೭ರಲ್ಲಿ, ಕವಿ ಮುಲ್ಲಾ ಶಕೀಬಿ ಮತ್ತು ಖ್ವಾಜಾ ಇನಾಯಿತುಲ್ಲಾರೊಡನೆ ಸಮುದ್ರ ಮಾರ್ಗವಾಗಿ ಖುರ್ದಾನ ಬಂದರಿನಿಂದ ಹಡಗಿನಲ್ಲಿ ಪ್ರವಾಸ ಮಾಡಿ ಚೆವಾಯಿಲ್ ಬಂದರನ್ನು ತಲುಪಿದನು. ಕೆಲವು ದಿನಗಳ ಕಾಲ ಅಲ್ಲಿದ್ದು, ಅಲ್ಲಿಯ ಪಂಡಿತರ ಸಹವಾಸದಲ್ಲಿ ಹೆಚ್ಚಿನ ಜ್ಞಾನ ಪಡೆದು ಬಿಜಾಪುರ ತಲುಪಿದನು.

ಆ ದಿನಗಳಲ್ಲಿ ದಿಲಾವರಖಾನನು ಪ್ರಧಾನ ಆಡಳಿತಗಾರನಾಗಿದ್ದನು. ಖ್ವಾಜಾ ಸಾಹೇಬನು ದಿಲಾವರಖಾನನ ಮೂಲಕ ಬಾದಶಹನ ಸನ್ನಿಧಿಯಲ್ಲಿ ಹಾಜರಾದನು. ಬಾದಶಹನು ಆತನೊಂದಿಗೆ ಬಹಳ ಪ್ರೀತಿ ಗೌರವಗಳಿಂದ ಮಾತನಾಡಿ, ತನ್ನ

ಆಪ್ತಸಂಗಾತಿಗಳಲ್ಲಿ ಸೇರಿಸಿಕೊಂಡನು. ಹಿಜರಿಸನ್ ೧೦೦೦ದಲ್ಲಿ ಖ್ವಾಜಾ ಸಾಹೆಬನನ್ನು ಆದಿಲಶಾಹಿಯ ದೂತನೆಂದು ಬುರ್ಹಾನ ನಿಜಾಮಶಾಹನ ಬಳಿ ಕಳುಹಿಸಿದ್ದನು. ಖ್ವಾಜಾ ಸಾಹೇಬನು ತನಗೆ ವಹಿಸಿದ ಕರ್ತವ್ಯವನ್ನು ಅತ್ಯಂತ ಉತ್ತಮ ರೀತಿಯಲ್ಲಿ ನಿರ್ವಹಿಸಿದನು. ಬಾದಶಹನು ಆತನ ಸೇವೆಯಿಂದ ಸಂತೃಪ್ತನಾಗಿ, ಇನ್ನೂ ಉನ್ನತ ಹುದ್ದೆ ಪ್ರದಾನ ಮಾಡಿದನು.

ಹಿಜರಿಸನ್ ೧೦೦೨ರಲ್ಲಿ ಬಾದಶಹನ ಪರವಾಗಿ, ರಾಜ್ಯದ ಕಾರ್ಯಭಾರದ ಬಗ್ಗೆ ಚರ್ಚಿಸಲು, ಹೈದರಾಬಾದಿನ ಮಹಮದ್ ಖಲಿ ಶಾಹನ ಬಳಿ ಖ್ವಾಜಾಸಾಹೇಬನನ್ನು ಕಳುಹಿಸಿದ್ದನು. ಈ ಕೆಲಸವನ್ನು ಸಹ ಖ್ವಾಜಾಸಾಹೇಬನು ಉತ್ತಮ ರೀತಿಯಲ್ಲಿ ನಿರ್ವಹಿಸಿದನು. ಬೆಳಗಾವಿಯಲ್ಲಿ ಗಲಭೆಯುಂಟಾದಾಗ ಹಾಗೂ ರಾಜಕುಮಾರ ಇಸ್ಮಾಯಿಲನು ಬಂಡಾಯ ಮಾಡಿದಾಗ, ಐನುಲ್‌ಮುಲ್ಕನಂತಹ ಸರದಾರರು ಬಾದಶಹನನ್ನು ವಿರೋಧಿಸಿದಾಗ, ಬಾದಶಹನ ಪರವಾಗಿ ಖ್ವಾಜಾಸಾಹೇಬನು ಕರ್ತವ್ಯನಿಷ್ಠನಾಗಿ ಕೆಲಸ ಮಾಡಿದನು.

ಲೇಖಕ ಫರಿಶ್ತಾನಿಗೆ ಬಾದಶಹನ ದರ್ಶನ ಭಾಗ್ಯ :

ಖ್ವಾಜಾಸಾಹೇಬನು ಕೋಲಾಹಲ ಮತ್ತು ಗಲಭೆಗಳ ಸಮಯದಲ್ಲಿ, ಬಾದಶಹನ ವಿರೋಧಿಗಳಿಗೆ ಕಠಿಣ ಶಿಕ್ಷೆಯನ್ನು ಮತ್ತು ಹಿತೈಷಿಗಳಿಗೆ ಉನ್ನತ ಹುದ್ದೆಗಳನ್ನು ಕೊಡಿಸಿದನು. ಅದೇ ಸಮಯದಲ್ಲಿ ಖಾಜಾ ಸಾಹೇಬನು ಈ ಕೃತಿಯ ಕರ್ತೃ ಫರಿಶ್ತಾನ ಕೃತಿಯನ್ನು ಕೇಂದ್ರವಾಗಿಸಿ, ಬಾದಶಹನ ಸಮಕ್ಷಮ ಆಸ್ಥಾನದಲ್ಲಿ ಉಪಸ್ಥಿತನಾಗುವ ಅವಕಾಶ ನೀಡಿದನು. ಇಬ್ರಾಹಿಮ್ ಆದಿಲ್‌ಶಾಹ ಸಾನಿಯು ಲೇಖಕನೊಂದಿಗೆ ಕುಶಲೋಪರಿ ಮಾತನಾಡಿ ಪ್ರಸಿದ್ಧ ಇತಿಹಾಸ ಗ್ರಂಥ "ರೋಜತುಲ್ ಸಫಾ" ದ ಒಂದು ಪ್ರತಿ ನೀಡಿದನು. ಬೆಲೆಬಾಳುವ ವಸ್ತ್ರಗಳನ್ನು ದಯಪಾಲಿಸಿದನು. ಸ್ಥಾನ ಮತ್ತು ಜಹಗೀರನ್ನು ಹೆಚ್ಚಿಸಿದನು. ಬಾದಶಹನು ಫರಿಶ್ತಾನಿಗೆ, "ಹಿಂದುಸ್ತಾನಿ ಅರಸರ ಮತ್ತು ಆಡಳಿತಗಾರರ ಆಡಳಿತದ ಬಗ್ಗೆ ವಿವರವಾದ ಗ್ರಂಥವನ್ನು ಇಲ್ಲಿಯವರೆಗೆ ಯಾರೂ ಬರೆದಿಲ್ಲ. ನಿಜಾಮುದ್ದೀನ ಅಹಮದ್ ಬಕ್ಷಿ ಬರೆದ ಪುಸ್ತಕವಿದ್ದರೂ, ಅದು ಬಹಳ ಸಂಕ್ಷೇಪವಾಗಿದೆ. ಅದರಲ್ಲಿಯೂ ದಕ್ಷಿಣದ ಅರಸರ ಬಗ್ಗೆ ಇನ್ನೂ ಸಂಕ್ಷಿಪ್ತವಾಗಿದೆ. ಅದರಲ್ಲಿ ಸತ್ಯದ ಶೋಧನೆಯೂ ದೊರಕುವುದಿಲ್ಲ. ವಿವರಗಳೂ ದೊರೆತಿಲ್ಲ. ಈಗ ನೀನು ಧೈರ್ಯದಿಂದ ಶ್ರೇಷ್ಠ ಇತಿಹಾಸ ಗ್ರಂಥವನ್ನು ರಚಿಸಬೇಕು. ಅದು ಎಲ್ಲ ರೀತಿಯಲ್ಲಿಯೂ ಉತ್ತಮವಾಗಿರಬೇಕು. ಚಾರಿತ್ರಿಕವಾಗಿ ಬರೆಯುವ ಈ ಗ್ರಂಥವು ಅಸತ್ಯ ಮತ್ತು ಅಸಂಗತ ವಿಷಯಗಳಿಂದ ಮುಕ್ತವಾಗಿರಬೇಕು." ಎಂದು ಆದೇಶ ನೀಡಿದನು.

ಬಾದಶಹನ ಆಜ್ಞೆಯನ್ನು ಕಾರ್ಯಗತಗೊಳಿಸುವುದಾಗಿ ಪ್ರಮಾಣ ಮಾಡಿ, ಬಾದಶಹನಿಗೆ ವಂದಿಸಿ, ಆಸ್ಥಾನದಿಂದ ಫರಿಶ್ತಾ ಹೊರಬಂದನು. ಬಾದಶಹನು

ಆದೇಶ ನೀಡಿ ಒಂದು ವಾರ ಕಳೆಯುವುದರಲ್ಲಿಯೇ ಕೆಲವು ವಿಷಯಗಳನ್ನು ಬರೆದು, ಅದನ್ನು ಶಾಹನವಾಜ ಖಾನನ ಅವಗಾಹನೆಗೆ ಸಲ್ಲಿಸಿದನು. ಖಾನ ಮೌಸೂಫನು ಅವುಗಳನ್ನು ಅವಲೋಕಿಸಿ, ಕೆಲವು ತಿದ್ದುಪಡಿಗಳನ್ನು ಮಾಡಿ, ದೊರೆಯ ಸನ್ನಿಧಿಗೆ ಸಲ್ಲಿಸಿದನು.

ಪ್ರಧಾನ ವಕೀಲನಾಗಿ ಶಾಹನವಾಜ ಖಾನನ ನಿಯುಕ್ತಿ :

ರಾಜಕುಮಾರ ಇಸ್ಮಾಯಿಲನ ಕೋಲಾಹಲವನ್ನು ಕೊನೆಗಾಣಿಸಿದ ಮೇಲೆ, ಇಬ್ರಾಹಿಮ್ ಆದಿಲ್‌ಶಾಹ ಸಾನಿಯು ಬ್ರಾಹ್ಮಣರ ಕೈಯಲ್ಲಿದ್ದ ಆಡಳಿತದ ಚುಕ್ಕಾಣಿಯನ್ನು ತಮ್ಮ ವಶಕ್ಕೆ ತೆಗೆದುಕೊಳ್ಳಬೇಕು. ಅವರ ಸ್ಥಳದಲ್ಲಿ ಆಡಳಿತದ ವಿಷಯಗಳಲ್ಲಿ ಸೂಕ್ತ ನಿರ್ಧಾರಗಳನ್ನು ತೆಗೆದುಕೊಳ್ಳುವ ಮುತ್ಸದ್ದಿ ಮತ್ತು ಚಾಣಾಕ್ಷನನ್ನು ನಿಯಮಿಸಬೇಕೆಂದು ಆಲೋಚಿಸಿದನು. ಆಗ ಬಾದಶಹನ ದೃಷ್ಟಿ ಶಾಹನವಾಜನ ಮೇಲೆ ಬಿತ್ತು. ಹಿಜರಿ ಶಕೆ ೧೦೦೩ರಲ್ಲಿ ಖಾನಸಾಹೇಬ ಮೌಸೂಫನಿಗೆ ರಾಜ್ಯದ ಪ್ರಮುಖ ಹುದ್ದೆಯನ್ನು ನೀಡಲಾಯಿತು. ಆತನಿಗೆ ಪ್ರಧಾನ ವಕೀಲನನ್ನಾಗಿ ನಿಯಮಿಸಲಾಯಿತು.

ಶಾಹ ನವಾಜ ಖಾನನು ರಾಜ್ಯಾಡಳಿತದ ಕಾರ್ಯಗಳನ್ನು ಅತ್ಯುತ್ತಮ ಶೈಲಿಯಲ್ಲಿ ನಿರ್ವಹಿಸುವುದನ್ನು ಪ್ರಶಂಸಿಸಲು ಲೇಖಕನ ಲೇಖನಿಯು ಮುಂದೆ ಸಾಗುವುದಿಲ್ಲ. ಖಾನ ಸಾಹೇಬನ ಪ್ರಯತ್ನದ ಪರಿಣಾಮವಾಗಿ ರಾಜ್ಯವು ಶ್ರೇಯೋಭಿವೃದ್ಧಿಯ ಮಾರ್ಗದಲ್ಲಿ ಶೀಘ್ರಗತಿಯಲ್ಲಿ ಮುಂದೆ ಸಾಗತೊಡಗಿತು. ಕೃತಿಯ ಕರ್ತೃ ಫರಿಶ್ತಾ, ಖಾನಸಾಹೇಬರ ಗುಣಗಾನ ಮಾಡುವಲ್ಲಿ ಪರವಶನಾಗಿಬಿಡುತ್ತಾನೆ.

ರಾಜ್ಯದ ವಿದ್ಯಮಾನಗಳ ಬಗೆಗೆ ಬಾದಶಹನಿಗೆ ಮುನ್ನೆಚ್ಚರಿಕೆ :

ಪ್ರಧಾನ ವಕೀಲನ ಹುದ್ದೆಯ ಕಾರ್ಯವನ್ನು ನಿರ್ವಹಿಸಲು ಆರಂಭ ಮಾಡಿದ ಮೇಲೆ, ಶಾಹ ನವಾಜ ಖಾನನು ಬಾದಶಹನಿಗೆ ರಾಜ್ಯದಲ್ಲಿ ನಡೆಯುತ್ತಿರುವ ವಿದ್ಯಮಾನಗಳ ಬಗ್ಗೆ ಬಾದಶಹನ ಗಮನಕ್ಕೆ ತರುವುದರಿಂದ ಪ್ರಜೆಗಳಿಗೆ ಮತ್ತು ಬಾದಶಹನಿಗೆ ಒಳಿತಾಗುವುದೆಂದು ಆಲೋಚಿಸಿದನು. ಕಾಗದಗಳ ಮೂಲಕ ಕಳುಹಿಸಿರುವ ವಾರ್ತೆಗಳನ್ನು ತಾನು ಓದಿದ ಮೇಲೆ ಬಾದಶಹನ ಸನ್ನಿಧಾನಕ್ಕೆ ಕಳುಹಿಸಿಬಿಡುತ್ತಿದ್ದನು. ಕಾಗದಗಳಲ್ಲಿರುವ ವಿಷಯುವನ್ನು ಓದಿ, ರಾಜ್ಯದ ಆಗುಹೋಗುಗಳನ್ನು ತಿಳಿದುಕೊಳ್ಳುವುದಲ್ಲದೆ, ಇನ್ನಿತರ ವಿಷಯಗಳಲ್ಲಿಯೂ ಪಾಂಡಿತ್ಯ ಪಡೆದನು.

ಬಾದಶಹನ ಫಾರ್ಸಿ ಕಲಿಯುವಿಕೆ :

ನಂತರದಲ್ಲಿ ಶಾಹ ನವಾಜನು, ಬಾದಶಹನ ಸೇವೆಯಲ್ಲಿ ಫಾರ್ಸಿ ಕಾವ್ಯಗಳ ಪುಸ್ತಕಗಳನ್ನು ನೀಡತೊಡಗಿದನು. ಬಾದಶಹನು ಫಾರ್ಸಿ ಪುಸ್ತಕಗಳನ್ನು ಓದಿದ ಮೇಲೆ ಫಾರ್ಸಿ ಭಾಷೆಯ ಮೇಲೆ ಹಿಡಿತವನ್ನು ಸಾಧಿಸಿ ಫಾರ್ಸಿ ಭಾಷೆಯಲ್ಲಿ

ಸಂಭಾಷಣೆಯನ್ನು ಮಾಡತೊಡಗಿದನು. ಬಾದಶಹನು ಫಾರ್ಸಿ ಭಾಷೆಯಲ್ಲಿ ಮಾತನಾಡುವುದನ್ನು ಕೇಳಿದವರು, ಫಾರ್ಸಿ ಅಲ್ಲದೆ ಮತ್ತೊಂದು ಭಾಷೆಯಲ್ಲಿ ಮಾತನಾಡಬಲ್ಲ ಎಂದು ಹೇಳಲಾರರು.

ಶಾಹ ನವಾಜ್ ಖಾನನು ಬಾದಶಹನ ಗುರುವಾಗಿದ್ದನು. ಆದರೆ ಪ್ರಾಪಂಚಿಕ ವಿಷಯಗಳಲ್ಲಿ ಶಾಹ ನವಾಜನು ಬಾದಶಹನಿಂದ ಸಾಕಷ್ಟು ಕಲಿತುದರಿಂದ ಬಾದಶಹನನ್ನು ತನ್ನ ಗುರುವೆಂದು ಕರೆಯುತ್ತಿದ್ದನು. ಶಾಹನವಾಜನು ಬೆಲೆಬಾಳುವ ಮಾಣಿಕ್ಯದ ಮೇಲೆ, "ಇಬ್ರಾಹಿಮ್ ಆದಿಲ್‌ಶಾಹನ ಶಿಷ್ಯ – ಶಾಹನವಾಜ ಖಾನ" ಎಂಬ ಅಕ್ಷರಗಳನ್ನು ಬರೆಸಿದನು. ಈ ಮಾಣಿಕ್ಯವನ್ನು ಉಂಗುರದಲ್ಲಿ ಅಡಕಗೊಳಿಸಿ ಬಾದಶಹನಿಗೆ ಅರ್ಪಿಸಿದನು. ಬಾದಶಹನು ಅದಕ್ಕೆ ತಕ್ಕ ಇನಾಮು ನೀಡಿ ಪುರಸ್ಕರಿಸಿದನು.

ಶಾಹಿ ಮಹಲಿನ ನಿರ್ಮಾಣ :

ಒಂದು ದಿನ ಇಬ್ರಾಹಿಮ್ ಆದಿಲ್‌ಶಾಹ ಸಾನಿಯು ಶಾಹ ನವಾಜನಿಗೆ "ರಾಜ್ಯದಲ್ಲಿ ನಮ್ಮ ಸ್ಥಾನ ಎತ್ತರದಲ್ಲಿದೆ. ನಮ್ಮೊಡನಿರುವ ಜನರು ಕೂಡ ಉನ್ನತ ಸ್ಥಾನದಲ್ಲಿರಬೇಕು. ನೀವು ನಮ್ಮ ಆಪ್ತರಾದುದರಿಂದ, ನಿಮ್ಮ ಮಹಲು ಸಹ ಭವ್ಯವಾಗಿರಬೇಕು. ಆದುದರಿಂದ ಸ್ವರ್ಗಕ್ಕೆ ಸಮಾನವಾದ ಒಂದು ಸುಂದರವಾದ ಮಹಲನ ನಿರ್ಮಾಣ ಮಾಡು." ಎಂದು ಆಜ್ಞಾಪಿಸಿದನು. ಶಾಹ ನವಾಜನು ಕೂಡಲೇ ಬಾದಶಹನ ಆಜ್ಞೆಯ ಪಾಲನೆ ಮಾಡಿದನು. ಕುಶಲಕರ್ಮಿಗಳನ್ನು ಕೆಲಸಕ್ಕೆ ತೊಡಗಿಸಿದನು. ಸುಂದರವಾದ ಮಹಲಿನ ನಿರ್ಮಾಣವಾಯಿತು.

ಶಾಹಿ ಮಹಲಿಗೆ ನಾಲ್ಕು ಗೋಡೆಗಳಿದ್ದು ಅವುಗಳ ಉದ್ದವು ೪೦೦ ಗಜ ಹಾಗೂ ಉತ್ತರ ದಿಕ್ಕಿನಲ್ಲಿ ಎರಡು ದ್ವಾರಗಳಿವೆ. ಅವುಗಳಲ್ಲೊಂದು ದ್ವಾರವು ಪೇಟೆಯತ್ತ ತೆರೆಯುತ್ತದೆ. ಶಾಹ ನವಾಜನ ಹೆಸರಿನಿಂದ ಈ ಪೇಟೆಯು ಪ್ರತೀತಿ ಪಡೆದಿದ್ದು, ಇನ್ನೊಂದು ದ್ವಾರವು ಬಾದಶಹನ ದರಬಾರಿನತ್ತ ತೆರೆದಿದೆ. ಈ ದ್ವಾರದ ಮೇಲೆ ಕಟ್ಟಡವನ್ನು ನಿರ್ಮಿಸಲಾಗಿದೆ. ಕಟ್ಟಡದ ಗೋಡೆಯ ಒಳಭಾಗ ಮತ್ತು ಹೊರಭಾಗದಲ್ಲಿ ಬಂಗಾರದ ವರ್ಣದಲ್ಲಿ ಕುಸುರಿ ಚಿತ್ರಗಳನ್ನು ಬಿಡಿಸಲಾಗಿದೆ. ಶಾಹಿ ಮಹಲಿನ ಒಳಗೆ ಹೋಗುವ ಜನರು ಮೊತ್ತ ಮೊದಲು ಈ ಕುಸುರಿ ಚಿತ್ರಗಳನ್ನು ನೋಡಿ ಅದರ ಅಗಾಧ ಸೌಂದರ್ಯಕ್ಕೆ ಬೆರಳು ಕಚ್ಚುತ್ತಾರೆ. ನಂತರ ಮುಂದೆ ಸಾಗುತ್ತಾರೆ.

ಶಾಹ ನವಾಜ ಖಾನನು ಈ ಕಟ್ಟಡದಲ್ಲಿ ಸಭೆಗಳನ್ನು ಕರೆಯುತ್ತಿದ್ದನು. ಜನರ ಸುಖ ದುಃಖಗಳನ್ನು ಕೇಳಿ ಅಗತ್ಯವಿದ್ದವರಿಗೆ ನೆರವು ನೀಡುತಿದ್ದನು. ಮಹಲಿನ ನಾಲ್ಕು ಗೋಡೆಗಳ ಮಧ್ಯ ಒಂದು ಸುಂದರವಾದ ಕಟ್ಟಡವಿದ್ದು, ಅದರ ಎರಡೂ ಬದಿಯಲ್ಲಿ ಕೋಣೆಗಳನ್ನು ನಿರ್ಮಿಸಲಾಗಿದೆ. ಈ ಕಟ್ಟಡವು ಉತ್ತರ ದಿಕ್ಕಿಗೆ ಮುಖ

ಮಾಡಿದ್ದು ಹಿಂಭಾಗದಲ್ಲಿ ಲಾವಂಚದ ತೆರೆ ಇದೆ. ಕಟ್ಟಡದ ಹಿಂಭಾಗದಲ್ಲಿ ಎತ್ತರವಾದ ಮನೆಗಳಿದ್ದು ಅವುಗಳ ಮೇಲೆ ಹತ್ತಿ ನಗರದ ದೃಶ್ಯವನ್ನು ನೋಡಬಹುದಾಗಿದೆ. ಉತ್ತರ ದಿಕ್ಕಿನಲ್ಲಿ ಭದ್ರವಾದ ಜಗುಲಿ ಇದೆ. ಕಟ್ಟಡದ ಮುಂದೆ ಒಂದು ಕೊಳವಿದ್ದು, ನಿರ್ಮಲವಾದ ನೀರಿನಿಂದ ತುಂಬಿದೆ. ಕಟ್ಟಡದ ನಾಲ್ಕೂ ದಿಕ್ಕಿನಲ್ಲಿ ಸುಂದರವಾದ ತೋಟವಿದೆ.

ಮಿರ್ಜಾಅಲ್ಲಾವುದ್ದೀನ ದಿಲ್ಸಿಯಾನ ಜನನ:

ಈ ಕಟ್ಟಡವು ಶಾಹ ನವಾಜನಿಗೆ ಅದೃಷ್ಟದ ವರವನ್ನು ನೀಡಿತು. ಕಟ್ಟಡವನ್ನು ಪೂರ್ಣಗೊಳಿಸಿದ ನಂತರ ಶಾಹನವಾಜನ ಮನೆಯಲ್ಲಿ ರಬಿಸಾನಿ ತಿಂಗಳ ೩ನೆಯ ದಿನದಂದು ಪುತ್ರನ ಜನನವಾಯಿತು. ಪುತ್ರನಿಗೆ ಮಿರ್ಜಾ ಅಲ್ಲವುದ್ದೀನ ದಿಲ್ಸಿಯಾ ಎಂದು ನಾಮಕರಣ ಮಾಡಲಾಯಿತು. ನಗರದ ನಿವಾಸಿಗಳು ಶಾಹ ನವಾಜ ಖಾನನನ್ನು ಅಭಿನಂದಿಸಿದರು. ಮೌಲಾನಾ ಫಹಮಿಯು ಅಭಿನಂದನೆಯ ಕವನವನ್ನು ಅರ್ಪಿಸಿ, ಇನಾಮನ್ನು ಪಡೆದನು. ಈ ಮಹಲಿನ ನಿರ್ಮಾಣದಿಂದ ಸಂತೋಷಪಡುವ ಇನ್ನೊಂದು ಕಾರಣವೆಂದರೆ, ಶಾಹನವಾಜನ ಮನೆಯಲ್ಲಿ ಪುತ್ರನ ಜನನದ ವಿಷಯ ತಿಳಿದ ಬಾದಶಹನು ಖಾನ್ ಮೌಸೂಫನಿಗೆ ಅಭಿನಂದಿಸಲು ಸ್ವತಃ ಬಾದಶಹನು ಮಹಲಿನತ್ತ ಬರುವ ಇಚ್ಛೆ ವ್ಯಕ್ತಪಡಿಸಿರುವುದು.

ಬಾದಶಹನ ಸವಾರಿ :

ಶಾಹನವಾಜನಿಗೆ ಬಾದಶಹನ ಇಚ್ಛೆ ತಿಳಿದೊಡನೆ ಬಾದಶಹನ ಸ್ವಾಗತದ ಸಿದ್ಧತೆ ಮಾಡತೊಡಗಿದನು. ಬಾದಶಹನ ಸ್ವಾಗತಕ್ಕೆ ಅದ್ದೂರಿಯಾದ ಸಮಾರಂಭವನ್ನು ಆಯೋಜಿಸಿದನು. ಮಹಲಿನ ಮುಂಭಾಗದಲ್ಲಿ ಬೆಲೆಬಾಳುವ ರತ್ನಗಂಬಳಿಯನ್ನು ಹಾಕಲಾಯಿತು. ಅದರ ಮೇಲೆ ಜರಿಯುಳ್ಳ ಶಾಮಿಯಾನ ಹಾಕಲಾಯಿತು. ನಿಗದಿತ ದಿನದಂದು ಬೆಳಗಿನ ಸಮಯದಲ್ಲಿ ಬಾದಶಹವನ ಸವಾರಿಯು ಶಾಹನವಾಜನ ಮಹಲಿನತ್ತ ಆಗಮಿಸಿತು. ಬಾದಶಹನು ಬರುವ ಮಾರ್ಗವನ್ನು ನವವಧುವಿನಂತೆ ಶೃಂಗರಿಸಲಾಗಿತ್ತು. ಶಾಹನವಾಜ ಪೇಟೆಯ **ಇಕ್ಕೆಲಗಳಲ್ಲಿ** ತರತರದ ಬಣ್ಣ ಬಣ್ಣದ ಪತಾಕೆಗಳನ್ನು ಹಾರಿಸಲಾಗಿತ್ತು. ಪೇಟೆಯನ್ನು ಈ ರೀತಿಯಾಗಿ ಅಲಂಕರಿಸಿದುದನ್ನು ತಮ್ಮ ಜೀವಿತ ಕಾಲದಲ್ಲಿ ನೋಡಿರಲಿಲ್ಲವೆಂದು ಹಿರಿಯರು, ವಯೋವೃಧ್ಧರು ಹೇಳುತ್ತಿದ್ದರು.

ಶಾಹ ನವಾಜನ ಮನೆಯಲ್ಲಿ ಬಾದಶಹ :

ಶಾಹನವಾಜನ ಮಹಲನ್ನು ತಲುಪಿದ ನಂತರ ಬಾದಶಹನನ್ನು ಅತ್ಯಾದರದಿಂದ ಬರಮಾಡಿಕೊಳ್ಳಲಾಯಿತು. ಎಲ್ಲಕ್ಕೂ ಮೊದಲು ಬಾದಶಹನು ದ್ವಾರದ ಹೊಸ್ತಲಿನ ಬಳಿ ನಿಂತು ಮಹಲಿನ ಸೌಂದರ್ಯವನ್ನು ವೀಕ್ಷಿಸಿ, ಮುಂದುವರಿದನು. ಮುಂದೆ ನವರಸ ಮಂದಿರವನ್ನು ನೋಡಿದನು. ಕಟ್ಟಡದ ಸೌಂದರ್ಯದಿಂದ ಪ್ರಭಾವಿತನಾದ

ಬಾದಶಹನು ಅಲ್ಲಿಯೇ ಸಭೆಯನ್ನು ಏರ್ಪಡಿಸಲು ಹೇಳಿದನು. ಐದು ಗೊಂಚಲುಗಳ ತೂಗುದೀಪಗಳಲ್ಲಿ ಜ್ಯೋತಿ ಬೆಳಗಿಸಿ ಮಹಲನ್ನು ಪ್ರಕಾಶಮಾನಗೊಳಿಸಲಾಗಿತ್ತು. ವಾತಾವರಣವೆಲ್ಲ ಅತ್ತರಿನ ವಾಸನೆಯಿಂದ ಸುವಾಸಿತವಾಗಿತ್ತು. ಬಾದಶಹನು ಕವಿಗಳಿಗೆ, ಪಂಡಿತರಿಗೆ ಮತ್ತು ಆಸ್ಥಾನದ ಸಭಿಕರಿಗೆ ಮಹಲಿಗೆ ಬರಲು ಆದೇಶವಿತ್ತನು. ಅಖ್ಲಾಸ್ ಖಾನ ಮತ್ತಿತರ ಸರದಾರರು ಬಾದಶಹನ ಸೇವೆಯಲ್ಲಿ ಉಪಸ್ಥಿತರಾಗಿ, ಆಸ್ಥಾನದ ಸಂಪ್ರದಾಯದಂತೆ, ಬಾದಶಹನೆದುರು ಕೈಕಟ್ಟಿಕೊಂಡು ನಿಂತರು. ಮೌಲಾನಾ ಫಹಮಿ ಮತ್ತು ಮೌಲಾನಾ ಜಹೂರಿ ಸಂದರ್ಭೋಚಿತವಾದ ಕವನವಾಚನ ಮಾಡಿ ಸಭಿಕರ ಮನರಂಜಿಸಿದರು. ಬಾದಶಹನು ಕವಿಗಳ ಕಾವ್ಯಚಾತುರ್ಯ ಪ್ರಶಂಸಿಸಿ, ಕವಿಗಳನ್ನು ಹುರಿದುಂಬಿಸಿದನು.

ಸಂಭ್ರಮದ ಸಮಾರಂಭ :

ಕವಿಗೋಷ್ಠಿಯ ನಂತರ ಸೇವಕರು ಅತ್ಯುತ್ತಮವಾದ ಊಟವನ್ನು ಮತ್ತು ವಿವಿಧ ರೀತಿಯ ಫಲಗಳನ್ನು ಸಾಂಪ್ರದಾಯಕ ರೀತಿಯಲ್ಲಿ ತಂದಿರಿಸಿದರು. ಬಾದಶಹನ ಊಟವಾದ ನಂತರ ಶಾಹನವಾಜನು ಉತ್ತಮವಾದ ಕುದುರೆಯನ್ನು, ಬೆಲೆಬಾಳುವ ವಸ್ತ್ರಗಳನ್ನು ಮತ್ತು ಹಬಶಿ ಗುಲಾಮನನ್ನು ಬಾದಶಹನ ಸೇವೆಗೆ ಒಪ್ಪಿಸಿದನು. ಸಮಾರಂಭಕ್ಕೆ ಆಗಮಿಸಿದ ಅತಿಥಿಗಳಿಗೆ ವಸ್ತ್ರಗಳನ್ನು ನೀಡಿ ಗೌರವಿಸಿದನು. ಸಮಾರಂಭದ ಮುಕ್ತಾಯದ ನಂತರ, ಬಾದಶಹನು ಶಾಹನವಾಜನಿಗೆ ವಸ್ತ್ರಾಭೂಷಣಗಳನ್ನು ನೀಡಿದನು. ಅದೂ ಅಲ್ಲದೆ, ನಗದು ಹಣ ಒಂದು ಸಾವಿರ ಹೊನ್ನು, ತಲೆಗೆ ಕಟ್ಟಿಕೊಳ್ಳುವ ಎರಡು ಪೇಟಗಳು ಮತ್ತು ಒಂದು ಕುದುರೆ ನೀಡಿದನು. ಇದಾದ ನಂತರ ಮರಳಿ ತನ್ನ ಅರಮನೆಗೆ ಬಂದನು.

ಖ್ವಾಜಾ ಮೊಯಿನುದ್ದೀನ್ ಮಹಮ್ಮದ್ :

ಪ್ರಸ್ತುತ ಸಂದರ್ಭದಲ್ಲಿ ಶಾಹ ನವಾಜ ಖಾನನ ಹಿರಿಯ ಸಹೋದರ ಖ್ವಾಜಾ ಮೊಯಿನುದ್ದೀನ ಮಹಮ್ಮದನ ಬಗ್ಗೆ ಉಲ್ಲೇಖಿಸುವದು ಉಚಿತವಾಗಿದೆ. ಖ್ವಾಜಾ ಮೊಯಿನುದ್ದೀನನು ಸದ್ಗುಣ ಸಂಪನ್ನನಾಗಿದ್ದನು. ಸುಸ್ವಭಾವ ಮತ್ತು ಮಾನವ ಪ್ರೇಮಕ್ಕೊಂದು ಉದಾಹರಣೆಯಾಗಿದ್ದನು. ಶಾಹನವಾಜನು ಅರಸರ ಆಪ್ತನಾಗಿ ಸೇರಿಕೊಂಡಾಗ ಖ್ವಾಜಾ ಮೊಯಿನುದ್ದೀನನು ಬಾದಶಹರ ಸನ್ನಿಧಿಯಲ್ಲಿ ಉಪಸ್ಥಿತನಿದ್ದನು. ಬಾದಶಹನು ಆತನಿಗೂ ಜಹಗೀರು ಹುದ್ದೆಯನ್ನು ನೀಡಿದ್ದನು. ಆದರೆ ಕೆಲಸಮಯದಲ್ಲಿಯೇ ಹಿಜರಿಸನ್ ೧೦೧೦ರಲ್ಲಿ ಖ್ವಾಜಾ ಮೊಯಿನನು ನಿಧನನಾದನು. ಲೇಖಕ ಫರಿಶ್ತಾ ಖ್ವಾಜಾ ಮೊಯಿನುದ್ದೀನನ ಅಂತಿಮ ಕ್ಷಣಗಳಲ್ಲಿ ಆತನ ಬದಿಯಲ್ಲಿದ್ದನು. ಮಳೆಗಾಲವಲ್ಲದಿದ್ದರೂ, ಆತನ ನಿಧನದ ನಂತರ ರಭಸವಾದ ಮಳೆ ಸುರಿದಿತ್ತು.

ಖ್ವಾಜಾ ಮೊಯಿನನ ನಿಧನದ ನಂತರ, ಆತನ ಹಿರಿಯ ಮಗ ಮಹಮದ್ ಜರೀಫನಿಗೆ ತಂದೆಯ ಜಹಗೀರು ಮತ್ತಿತರ ಆಸ್ತಿಯ ಒಡೆಯನಾಗಿ ಮಾಡಿದರು. ಆಗ ಆತನು ಕೇವಲ ನಾಲ್ಕು ವರ್ಷದ ಬಾಲಕನಾಗಿದ್ದನು. ಮಹಮದ್ ಜರೀಫನು ತನ್ನ ಚಿಕ್ಕಪ್ಪನ ಪೋಷಣೆಯಲ್ಲಿದ್ದನು. ವಿದ್ಯೆ ಮತ್ತಿತರ ಕಲೆಗಳಲ್ಲಿ ಪ್ರಾವೀಣ್ಯತೆವನ್ನು ಪಡೆದನು. ಶಾಹನವಾಜನ ಕಿರಿಯ ಸೋದರ ಖ್ವಾಜಾ ಹಿದಾಯಿತುಲ್ಲಾ ತನ್ನ ಅಣ್ಣನ ನಿಧನದ ವಿಷಯ ತಿಳಿದು ಶಿರಾಜದಿಂದ ಬಿಜಾಪುರಕ್ಕೆ ಬಂದನು. ಶಾಹ ನವಾಜನಿಗೆ ತನ್ನ ಸಂತಾಪವನ್ನು ವ್ಯಕ್ತಪಡಿಸಿ ಮರಳಿ ಶಿರಾಜಿಗೆ ಹೊರಟು ಹೋದನು.

ಖ್ವಾಜಾ ಹಿದಾಯಿತುಲ್ಲಾ ಶಿರಾಜಿನಲ್ಲಿಯೇ ವಾಸಿಸುತ್ತಿದ್ದನು. ಹಿರಿಯ ಸೋದರನ ಪರವಾಗಿ ಒಂದು ಮಸೀದೆಯನ್ನು ನಿರ್ಮಿಸುತ್ತಿದ್ದನು. ಮಸೀದೆಯ ನಿರ್ಮಾಣ ಕಾರ್ಯಕ್ಕಾಗಿ, ಬಿಜಾಪುರದಿಂದ ಶಿರಾಜಕ್ಕೆ ಒಂದು ದೊಡ್ಡ ಮೊತ್ತವು ಕೈ ಸೇರುತ್ತಿತ್ತು.

ಬಂಡುಕೋರರ ಪದಚ್ಯುತಿ :

ಇಬ್ರಾಹಿಮ್ ಆದಿಲ್‌ಶಾಹ ಸಾನಿಯು ಬೆಳಗಾವಿ ಕೋಟೆಯನ್ನು ವಿದ್ರೋಹಿ ಮತ್ತು ಅವಿಧೇಯತೆಯಿಂದ ನಡೆದುಕೊಳ್ಳುವವರ ವಶದಿಂದ ತನ್ನ ವಶಕ್ಕೆ ಪಡೆದ ನಂತರ ಗಲಭೆಕೋರರತ್ತ ಗಮನ ಹರಿಸಿದನು. ಬಂಡಾಯದ ಯೋಜನೆ ಮಾಡುತ್ತಿದ್ದ ಎಲ್ಲ ಸರದಾರರನ್ನು ಪದಚ್ಯುತಿಗೊಳಿಸಿ, ಸೆರೆಯಲ್ಲಿಟ್ಟನು. ಬುರ್ಹಾನ ನಿಜಾಮ ಶಾಹನ ಬಗೆಗೆ ಸಹ ಬಾದಶಹನ ಮನಸ್ಸಿನಲ್ಲಿ ಕಹಿ ತುಂಬಿತ್ತು. ಆತನನ್ನು ಹತಗೊಳಿಸುವ ಯೋಜನೆ ಮಾಡಿದನು.

ಕರ್ನಾಟಕದ ದೊರೆಯ ವಿವಶತೆ :

ಹಿಂದೆಯೇ ವಿವರಿಸಿದಂತೆ ಬುರ್ಹಾನ ನಿಜಾಮ ಶಾಹನು, ರಾಜಕುಮಾರ ಇಸ್ಮಾಯಿಲನ ನೆರವಿಗಾಗಿ ಬೆಳಗಾವಿಗೆ ಬಂದಿದ್ದನು. ಪರಿಂದಾ ಕಿಲ್ಲೆಯ ಆಸುಪಾಸಿನಲ್ಲಿರುವಾಗ ಐನುಲ್ ಮುಲ್ಕನ ವಧೆ ಮತ್ತು ರಾಜಕುಮಾರನ ಬಂಧನದ ವಿಷಯ ತಿಳಿಯಿತು. ಇಂತಹ ಸಂದರ್ಭದಲ್ಲಿ ಬೆಳಗಾವಿಗೆ ಹೋಗುವ ವಿಚಾರ ಬಿಟ್ಟು, ಮರಳಿ ಅಹಮದ್‌ನಗರಕ್ಕೆ ಹೋಗಬೇಕೆಂದುಕೊಂಡನು. ಈ ಗೊಂದಲದಲ್ಲಿ, ಆದಿಲ್ ಶಾಹಿ ಆಳ್ವಿಕೆಗೆ ಒಳಪಟ್ಟ ಚಂದ್ರಕೋನಿ ಕೋಟೆಯು, ಮುಸ್ಲಿಮೇತರ ಹಿಂದುಗಳ ವಶದಲ್ಲಿ ಹೊರಟು ಹೋಯಿತು. ಕರ್ನಾಟಕದ ದೊರೆಯು ಅತ್ಯಂತ ಚಾಣಾಕ್ಷನಾಗಿದ್ದನು. ಇಬ್ರಾಹಿಮ್ ಆದಿಲ್ ಶಾಹನು ನಿಸ್ಸಂದೇಹವಾಗಿಯೂ ಇತ್ತ ಗಮನ ಕೊಡುವನೆಂದು ದೊರೆಯು ಊಹಿಸಿದ್ದನು. ಚಂದ್ರಕೋನಿ ಕೋಟೆಯನ್ನು ಬಾದಶಹನು ಪುನಃ ತನ್ನ ವಶಪಡಿಸಿಕೊಂಡಲ್ಲಿ ಕರ್ನಾಟಕಕ್ಕೆ ಬಹಳ ನಷ್ಟವಾಗುತ್ತದೆ ಎಂದು ಲೆಕ್ಕ ಹಾಕಿದ್ದನು.

ಅಲಿ ಶಾಹನ ಸಲಹೆ :

ದೊರೆಯು ಈ ವಿಚಾರದಿಂದ ಚಿಂತಾಕ್ರಾಂತನಾಗಿದ್ದನು. ಆ ದಿನಗಳಲ್ಲಿ ಐನುಲ್ ಮುಲ್ಕನ ಮಗ ಅಲಿ ಶಾಹನು ದೊರೆಯ ಬಳಿ ವಾಸವಾಗಿದ್ದನು. ಬುರ್ಹಾನ ನಿಜಾಮ ಶಾಹನೊಂದಿಗೆ ಸ್ನೇಹದ ನಂಟಸ್ತಿಕೆಯನ್ನು ಬೆಳೆಸಿಕೊಳ್ಳಬೇಕು ಮತ್ತು ಆದಿಲ್ ಶಾಹಿಯು ವಶಪಡಿಸಿಕೊಂಡ ಸ್ಥಳದ ಮೇಲೆ ಒಂದೆಡೆಯಿಂದ ಬುರ್ಹಾನ ನಿಜಾಮಶಾಹನು ದಾಳಿ ಮಾಡಬೇಕು ಹಾಗೂ ಇನ್ನೊಂದು ಕಡೆಯಿಂದ ಕರ್ನಾಟಕದ ದೊರೆಯು ಆಕ್ರಮಣ ಮಾಡಬೇಕು ಎಂಬ ಸಲಹೆಯನ್ನು ಅಲಿ ಶಾಹನು ದೊರೆಗೆ ನೀಡಿದನು. ಕರ್ನಾಟಕದ ದೊರೆಗೆ ಈ ಸಲಹೆಯು ಒಪ್ಪಿಗೆಯಾಯಿತು. ದೊರೆಯು ಬುರ್ಹಾನ ನಿಜಾಮಶಾಹನಿಗೆ ಸಂದೇಶ ಕಳುಹಿಸಿದನು.

ಬುರ್ಹಾನ ನಿಜಾಮ ಶಾಹನಿಗೆ ಸಂದೇಶ :

ದೊರೆಯು ಕಳುಹಿಸಿದ ಸಂದೇಶದಲ್ಲಿ, "ಇಬ್ರಾಹಿಮ್ ಆದಿಲ್ ಶಾಹನ ಪ್ರಭುತ್ವವು ಹೆಚ್ಚುತ್ತಿದೆ. ಆತನ ಆಳ್ವಿಕೆಯು ವಿಸ್ತಾರವು ಹೆಚ್ಚಿ, ದಕ್ಷಿಣದ ಇನ್ನಿತರ ಅರಸರನ್ನು ಪರಾಭವಗೊಳಿಸುವ ಸೂಚನೆಗಳು ಕಂಡುಬರುತ್ತಿವೆ. ಈ ಸಂದರ್ಭದಲ್ಲಿ, ನಾವು ನೆಮ್ಮದಿಯಿಂದಿರುವುದು ಸಲ್ಲದು. ಇಬ್ರಾಹಿಮ್ ಆದಿಲ್ ಶಾಹನ ಭಯವನ್ನು ತೊಡೆದು ಹಾಕಬೇಕಾಗಿದೆ" ಎಂದಿತ್ತು. ಬುರ್ಹಾನ ನಿಜಾಮ ಶಾಹನು ಸಹ ಇದನ್ನೇ ಬಯಸುತ್ತಿದ್ದನು. ಕೂಡಲೇ ಆತನು ದೊರೆಯನ್ನು ಭೇಟಿಯಾಗಿ, ರಾಮರಾಜನು ಮುದಗಲ್ ಮತ್ತು ಟಪಕಾಪುರ ಕಿಲ್ಲೆಗಳನ್ನು ವಶಪಡಿಸಿಕೊಳ್ಳುವುದು ಹಾಗೂ ಬುರ್ಹಾನನು ಸೋಲಾಪುರ ಮತ್ತು ಶಹದುರ್ಗದ ಕೋಟೆಗಳನ್ನು ಅಧೀನಪಡಿಸಿಕೊಳ್ಳುವುದು ಎಂದು ನಿರ್ಧಾರವಾಯಿತು.

ಆದಿಲಶಾಹಿ ಅಧೀನತೆಯ ಪ್ರದೇಶದ ಮೇಲೆ ಬುರ್ಹಾನನ ದಾಳಿ :

ಈ ವಿಷಯವನ್ನು ಸಂಕ್ಷಿಪ್ತವಾಗಿ ಹೇಳಬೇಕೆಂದರೆ, ಬುರ್ಹಾನ ನಿಜಾಮ ಶಾಹನು ಯಾವ ಉದ್ದೇಶವನ್ನೂ ಸಾಧಿಸದೆ ಪರಿಂದಾ ಕಿಲ್ಲೆಯಿಂದ ಮರಳಿ ಹೋಗುವ ಆಲೋಚನೆಯನ್ನು ಬಿಟ್ಟು ಯುದ್ಧದ ಸಿದ್ಧತೆಯಲ್ಲಿ ತೊಡಗಿದನು. ಮುರ್ತುಜಾಖಾನ್ ಅಂಜುನನ್ನು ದಂಡನಾಯಕನಾಗಿ ನಿಯಮಿಸಿ ಹತ್ತರಿಂದ ಹನ್ನೆರಡು ಸಾವಿರ ಸೈನಿಕರೊಂದಿಗೆ ಆದಿಲ್‌ಶಾಹಿಯ ಪ್ರದೇಶದತ್ತ ಕಳುಹಿಸಿಕೊಟ್ಟನು. ಶಹದುರ್ಗ ಮತ್ತು ಸೋಲಾಪುರದ ಕೋಟೆಗಳನ್ನು ವಶಪಡಿಸಿಕೊಳ್ಳುವುದು ಆತನ ಉದ್ದೇಶವಾಗಿತ್ತು.

ಕರ್ನಾಟಕದ ದೊರೆ ರಾಮರಾಜನು ಸಹ ಕೋಲಾಹಲವನ್ನುಂಟು ಮಾಡಿದನು. ರಾಮರಾಜನು ಆದಿಲ್‌ಶಾಹಿಯ ವಶದಲ್ಲಿದ್ದ ಕೆಲವು ಪಟ್ಟಣಗಳನ್ನು ತಮ್ಮ ವಶಕ್ಕೆ ತೆಗೆದುಕೊಂಡನು. ಬುರ್ಹಾನ ನಿಜಾಮ ಶಾಹನ ಸರದಾರ ಮುರ್ತುಜಾ ಖಾನ ಮತ್ತಿತರರು ಪರಿಂದಾ ಕೋಟೆ ಸಮೀಪಿಸಿದಾಗ, ರಾಮರಾಜನು ಇಬ್ರಾಹಿಮ್

ಆದಿಲ್‌ಶಾಹನ ಭಯದಿಂದ ತೊಂದರೆಯಲ್ಲಿರುವುದು ತಿಳಿಯಿತು. ಆ ಸೇನಾನಿಗಳು ಅಲ್ಲಿಯೇ ಬೀಡುಬಿಟ್ಟರು ಹಾಗೂ ತಮ್ಮ ಸೈನಿಕರನ್ನು ಗುಂಪುಗಳಾಗಿ ವಿಂಗಡಿಸಿ ಸುತ್ತಮುತ್ತಲಿನ ಹಳ್ಳಿಗಳನ್ನು ಧ್ವಂಸ ಮಾಡಲು ಕಳುಹಿಸಿ ಕೊಟ್ಟರು. ಸೈನಿಕರು ಹಳ್ಳಿಗಳಲ್ಲಿ ದೊಂಬಿ ಎಬ್ಬಿಸಿ ಪ್ರಜೆಗಳಿಗೆ ಕಿರುಕುಳ ಕೊಡತೊಡಗಿದರು. ಇಬ್ರಾಹಿಮ್ ಆದಿಲ್‌ಶಾಹನಿಗೆ ಪರಿಸ್ಥಿತಿಯ ಅರಿವಾದಾಗ, ಸರಹದ್ದಿನಲ್ಲಿರುವ ಸರದಾರರಿಗೆ, ಬಂಡುಕೋರರನ್ನು ಸದೆಬಡಿಯಲು ಆಜ್ಞೆಯಿತ್ತನು.

ಔಜಬಕ್ ಖಾನನ ವಧೆ :

ಈ ಸಂದರ್ಭದಲ್ಲಿ, ಆದಿಲ್‌ಶಾಹಿ ಪ್ರದೇಶದಲ್ಲಿ ಗಲಭೆಯುಂಟು ಮಾಡಿದ ನಿಜಾಮ ಶಾಹಿ ಅರಸೊತ್ತಿಗೆಯ ಸರದಾರ ಔಜಬಕ್ ಖಾನನು ಆದಿಲ್‌ಶಾಹಿಯ ಸರದಾರರಿಂದ ಹತನಾದನು. ಆತನ ಮೃತ್ಯುವಿನಿಂದ ನಿಜಾಮಶಾಹಿ ಸರದಾರರು ಭಯಗ್ರಸ್ತರಾದರು. ವಿಷಯ ತಿಳಿದ ಅಹಮದ್ ನಗರದ ಪ್ರಜೆಗಳು ಸಹ ಗಾಬರಿಗೊಂಡರು. ಇದಲ್ಲದೆ ಇನ್ನೊಂದು ಕಷ್ಟವು ಬಂದೊದಗಿತು. ಜಮಾದಿಲ್ ತಿಂಗಳ ಕೊನೆಯಲ್ಲಿ ಬುರ್ಹಾನ ನಿಜಾಮ ಶಾಹನಿಗೆ ಕ್ಷಯರೋಗ ತಗಲಿಕೊಂಡಿತು ಹಾಗೂ ರಜಬ ತಿಂಗಳ ೯ನೆಯ ದಿನದಂದು ರಕ್ತವಾಂತಿಯಾಗತೊಡಗಿತು. ಆತನ ಕಾಯಿಲೆ ವಿಷಯವು ಬಹಿರಂಗವಾದಾಗ, ಪರಿಂದಾ ಕಿಲ್ಲೆಯ ಬಳಿ ಬಿಡಾರ ಹೂಡಿದ ಸೈನ್ಯದಲ್ಲಿ ಕಳವಳ ಮತ್ತು ಗೊಂದಲ ಉಂಟಾಗತೊಡಗಿತು.

ನಿಜಾಮಶಾಹ ಸೈನ್ಯದಲ್ಲಿ ಗಲಭೆ :

ನಿಜಾಮಶಾಹಿ ಸೈನ್ಯದಲ್ಲಿ ಅಖ್ಲಾಸ ಖಾನ ಹಬಶಿಗಿಂತ ಪ್ರಬಲ ಸರದಾರರು ಮತ್ತಾರೂ ಇರಲಿಲ್ಲ. ಆತನು ನಿಜಾಮ ಶಾಹಿ ಗುಲಾಮಿ ತಂಡದೊಡನೆ ತನ್ನನ್ನು ಗುರುತಿಸಿಕೊಳ್ಳುತ್ತಿದ್ದನು. ಆತನು ಇತರ ಹಬಶಿ ಮತ್ತು ದಕ್ಷಿಣದ ಸರದಾರರೊಡನೆ ಸೇರಿಕೊಂಡು ಮುರ್ತುಜಾ ಖಾನ ಹಾಗೂ ಇತರ ಅನ್ಯ ರಾಜ್ಯದ ಸರದಾರರನ್ನು ನಾಶ ಮಾಡುವ ಸಂಚು ಮಾಡಿದನು. ಅನ್ಯ ರಾಜ್ಯದ ಸರದಾರರಿಗೆ ಆತನ ಸಂಚು ತಿಳಿದು ಸೇನೆಯಿಂದ ಬೇರೆಯಾದರು. ಹೀಗೆ ಸೇನೆಯಿಂದ ಬೇರೆಯಾದ ಸರದಾರರಲ್ಲಿ ಮುರ್ತುಜಾ ಖಾನ, ಅಹಮದ್ ಖಾನ ಖಜಲಿಬಾಶ ತಮ್ಮ ನಿಕಟ ಸಂಗಡಿಗರೊಡನೆ ಅಹಮದ್‌ನಗರದತ್ತ ತೆರಳಿದರು. ಖಲೀಫಾ ಅರಬ ಹಾಗೂ ಖಜಲಿಬಾಶ ಖಾನರು ಸೈನ್ಯದ ಒಂದು ದೊಡ್ಡ ಗುಂಪಿನೊಡನೆ ಆದಿಲ ಶಾಹಿ ಅರಸನ ಸನ್ನಿಧಿಯಲ್ಲಿ ಆಶ್ರಯ ಪಡೆದರು.

ಬುರ್ಹಾನ ನಿಜಾಮ ಶಾಹನ ಮೃತ್ಯು :

ನಿಜಾಮ ಶಾಹನಿಗೆ ನಡೆಯುತ್ತಿರುವ ವಿದ್ಯಮಾನಗಳ ಅರಿವುಂಟಾಯಿತು.

ವಿಷಯವೆಲ್ಲವನ್ನು ಕೇಳಿದ ಬುರ್ಹಾನನಿಗೆ ಆಘಾತವಾಯಿತು. ಆತನಿಗೆ ತಗುಲಿದ ರೋಗವು ಇನ್ನೂ ಹೆಚ್ಚು ಹರಡಿತು. ಬುರ್ಹಾನನು ಇಹಲೋಕವನ್ನು ತ್ಯಜಿಸಿದನು.

ಬುರ್ಹಾನ ನಿಜಾಮ ಶಾಹನ ಮೃತ್ಯುವಿನ ನಂತರ ಆತನ ಮಗ ಇಬ್ರಾಹಿಮ ನಿಜಾಮನು ಪಟ್ಟಕ್ಕೆ ಬಂದನು. ಮಿಯಾ ಮಂಜವಿ ದಖನಿಯು ಪ್ರಧಾನ ವಕೀಲ ಹುದ್ದೆಗೆ ನಿಯುಕ್ತನಾದನು. ಇಬ್ರಾಹಿಮ ನಿಜಾಮನ ತಾಯಿ ಹಬಶಿ ಪಂಗಡದವಳಾದುದರಿಂದ ಗಲಭೆ ಉಂಟು ಮಾಡುವ ಮತ್ತು ಬಂಡುಕೋರ ಹಬಶಿಗಳನ್ನು ಆಪ್ತರ ಮತ್ತು ಸ್ನೇಹಿತರ ವಲಯದಲ್ಲಿ ಸೇರಿಸಿಕೊಂಡರು. ಮಿಯಾ ಮಂಜವಿ ದಖನಿಯು ಅಸಹಾಯಕತೆಯಿಂದ ತೆಪ್ಪಗಾದನು.

ನಿಜಾಮಶಾಹಿ ಸರದಾರರ ಅಜಾಗರೂಕತೆ :

ಈ ಸಂದರ್ಭದಲ್ಲಿ ದಖನಿಗಳು, ಹಬಶಿಗಳು ಹಾಗೂ ಇತರ ಎಲ್ಲ ಪಂಗಡಗಳ ಸರದಾರರು ಮುಂದಿನ ಪರಿಣಾಮವನ್ನು ಯೋಚಿಸದೆ ಅಜಾಗರೂಕರಾದರು. ಒಬ್ಬರ ಮೇಲೊಬ್ಬರು ಹೊಂಚು ಹಾಕುತ್ತ, ಒಬ್ಬರನ್ನೊಬ್ಬರು ಹತಗೊಳಿಸುತ್ತ ಹೋದರು. ರಾಜ್ಯದ ಪರಿಸ್ಥಿತಿಯು ಹದಗೆಟ್ಟಿತು. ಈ ಸರದಾರರು ತಮ್ಮ ಪ್ರದೇಶದಲ್ಲಿರುವ ಆದಿಲ್‌ಶಾಹಿ ರಾಯಭಾರಿಗಳೊಂದಿಗೆ ಕೆಟ್ಟ ರೀತಿಯಲ್ಲಿ ನಡೆದುಕೊಂಡರು. ಆದಿಲ್‌ಶಾಹಿ ಆಡಳಿತವನ್ನು ಪ್ರಶ್ನಿಸತೊಡಗಿದರು. ಪರಿಸ್ಥಿತಿಯನ್ನು ತಿಳಿದುಕೊಂಡ ಇಬ್ರಾಹಿಮ ಆದಿಲ್‌ಶಹನು ದುರ್ವರ್ತನೆಯಿಂದ ನಡೆದುಕೊಳ್ಳುತ್ತಿರುವ ಹಾಗೂ ಆಜ್ಞೋಲ್ಲಂಘನೆ ಮಾಡುವವರನ್ನು ಸ್ವತಃ ಸದೆ ಬಡೆಯುವ ವಿಚಾರ ಮಾಡಿದನು. ಪ್ರಬಲ ಸೈನ್ಯದೊಡನೆ ಯುದ್ಧ ಸನ್ನದ್ಧನಾದನು.

ಇಬ್ರಾಹಿಮ ಆದಿಲಶಾಹನ ದಾಳಿ :

ಇಬ್ರಾಹಿಮ ಆದಿಲಶಹನು ಶಾಬಾನ ತಿಂಗಳ ೨೦ನೆಯ ದಿನದಂದು ಬಹಮನ್ ಅಲಿ ಎಂಬ ತಂಗುದಾಣವನ್ನು ತಲುಪಿದನು. ಬಾದಶಹನು ಅಲ್ಲಿ ಕೆಲವು ದಿನಗಳವರೆಗೆ ಇದ್ದು, ಅಲ್ಲಿಯ ಸರದಾರರಿಗೆ ಬಹುಮಾನ ಮತ್ತು ಪ್ರಶಸ್ತಿಗಳಿಂದ ಸಂತುಷ್ಟರನ್ನಾಗಿ ಮಾಡಿ ಶಹದುರ್ಗದತ್ತ ಹೊರಟನು. ಅಹಮದಾಬಾದದ ಪ್ರಜೆಗಳು ಮತ್ತು ಸರದಾರರು ಸಾವಧಾನವಾಗಿ ವರ್ತಿಸಿ ಯುದ್ಧ ಮಾಡುವ ವಿಚಾರದಿಂದ ಹಿಂದೆ ಸರಿದರೆ ಅವರ ಅಪರಾಧಗಳನ್ನು ಕ್ಷಮಿಸಿ ಸ್ನೇಹಹಸ್ತ ನೀಡಬೇಕೆಂಬ ಆಲೋಚನೆ ಬಾದಶಹ ಮಾಡಿದ್ದನು. ಈ ಆಲೋಚನೆಯನ್ನು ಕಾರ್ಯಗತಗೊಳಿಸಲು ಸೈನ್ಯದ ತುಕಡಿಯೊಂದನ್ನು ಇಬ್ರಾಹಿಮ ನಿಜಾಮ ಶಾಹನ ಬಳಿ ಕಳುಹಿಸಿಕೊಟ್ಟನು. ಬಾದಶಹನಿಗೆ ಸಂಧಾನದ ವಿಚಾರವಿದ್ದುದರಿಂದ, ಪ್ರತಿದಿನವೂ ಕೇವಲ ಒಂದು ಮೈಲು ಮಾತ್ರ ಪ್ರಯಾಣ ಮಾಡುತ್ತಿದ್ದನು. ಕೆಲವು ಸ್ಥಳಗಳಲ್ಲಿ ಐದೈದು ಅಥವಾ ಆರಾರು ದಿನ ಬಿಡಾರ ಹಾಕುತ್ತಿದ್ದನು. ನಿಜಾಮಶಾಹಿಗಳು ಯೋಚಿಸಲು ಸಮಯ ಸಿಗಲಿ, ತಮ್ಮ ತಪ್ಪುಗಳನ್ನರಿತು

ಸರಿಯಾದ ದಾರಿ ಹಿಡಿಯಲಿ ಎಂಬ ಉದ್ದೇಶದಿಂದ ಬಾದಶಹನು ಮಂದಗತಿಯಿಂದ ಸಾಗುತ್ತಿದ್ದನು. ಆದರೆ ಹೀಗಾಗಲಿಲ್ಲ, ನಿಜಾಮಶಾಹಿ ಸರದಾರರು ತಮ್ಮ ತಪ್ಪುಗಳನ್ನು ತಿದ್ದಿಕೊಳ್ಳದೆ, ಹಿಂದಿನ ರೀತಿಯಲ್ಲಿಯೇ ನಡೆಯತೊಡಗಿದರು.

ನಿಜಾಮಶಾಹಿ ಸರದಾರರ ಯುದ್ಧದ ಸಿದ್ಧತೆ :

ಇಬ್ರಾಹಿಮ ಆದಿಲಶಾಹನು ಶಾಹದುರ್ಗ ತಲುಪಿದನು. ಅಲ್ಲಿಯ ವಾತಾವರಣವು ಆಹ್ಲಾದಕರ ಮತ್ತು ರಮಣೀಯವಾಗಿದ್ದುದರಿಂದ ಬಾದಶಹನು ಕೆಲವು ದಿನಗಳ ಕಾಲ ಅಲ್ಲಿಯೇ ನೆಲೆಸಿದನು. ಸಂತೋಷಕೂಟಗಳನ್ನು ಏರ್ಪಡಿಸಿದನು. ಇದೇ ಸಂದರ್ಭದಲ್ಲಿ ಇಬ್ರಾಹಿಮ ನಿಜಾಮನನ್ನು ಸುತ್ತುವರೆದಿದ್ದ ಅಖ್ಲಾಸ ಖಾನ ಮತ್ತಿತರ ಸರದಾರರು ಯುದ್ಧದ ತಯಾರಿ ಮಾಡತೊಡಗಿದರು. ಇಪ್ಪತ್ತು ಸಾವಿರ ಕುದುರೆ ಸವಾರರೊಂದಿಗೆ ಇಬ್ರಾಹಿಮ ಆದಿಲ್‌ಶಾಹನನ್ನೆದುರಿಸಲು ಆದಿಲಶಾಹಿ ಸರಹದ್ದನ್ನು ತಲುಪಿದರು.

ಬುರ್ಹಾನ ನಿಜಾಮನ ಪೈರವಿ ಮಾಡುತ್ತಲಿದ್ದ ಈ ಸರದಾರರು, ಆದಿಲ್‌ಶಾಹಿ ಆಡಳಿತಕ್ಕೆ ಒಳಪಟ್ಟ ಹಾಗೂ ಬಾದಶಹನ ಆಜ್ಞಾಪಾಲನೆ ಮಾಡಬೇಕಿದ್ದ ರಾಜರಿಗೆ ಹಳ್ಳಿಗಳನ್ನು ಹಾಗೂ ಸುತ್ತಲಿನ ಪ್ರದೇಶಗಳನ್ನು ಹಾಳು ಮಾಡಲು ಉತ್ತೇಜನೆ ನೀಡಿದರು. ಇಬಾಹಿಮ ಆದಿಲ್‌ಶಾಹನಿಗೆ ಈ ವಿಷಯ ತಿಳಿದಾಗ, ಬಹಳ ಕೋಪಗೊಂಡನು. ಆತನು, "ಉತ್ತಮ ವಂಶ ಮತ್ತು ಸಜ್ಜನಿಕೆಯಿಂದ ಮಾಡಿದ ಸತ್ಕಾರ್ಯಗಳು ಕಾಣದಂತೆ ಮರೆಯಾಗಿ ಹಿಂದೆ ಸರಿಯುತ್ತವೆ ಎಂಬುದು ಸುಳ್ಳಲ್ಲ. ನಾವು ಸಾಕಷ್ಟು ಮೃದು ಧೋರಣೆಯಿಂದ ವರ್ತಿಸಿದರೂ ಹಬಶಿ ಮತ್ತು ದಖನಿ ಗುಲಾಮರ ಸ್ವಭಾವವು ಅವರನ್ನು ಸರಿಯಾದ ಮಾರ್ಗದಲ್ಲಿ ಸಾಗುವುದನ್ನು ತಡೆಯುತ್ತಿದೆ. ಮುಂದಿನ ಪರಿಣಾಮವನ್ನು ಯೋಚಿಸದ ಈ ಬಂಡುಕೋರರನ್ನು ಸರಿದಾರಿಗೆ ತರಲು ತಲವಾರಗಳನ್ನು ಬೀಸಬೇಕಾಗಿದೆ. ಇದಲ್ಲದೆ, ಇನ್ನು ಯಾವ ವಿಧಾನವೂ ಬಾಕಿ ಉಳಿದಿಲ್ಲ." ಎಂದು ಹೇಳಿದನು.

ತದನಂತರ ಇಬ್ರಾಹಿಮ ಆದಿಲ್‌ಶಾಹನು ಸೈನ್ಯದ ಸೇನಾಪತಿ ಮತ್ತು ಅಧಿಕಾರಿಗಳಿಗೆ ಶತ್ರುವನ್ನೆದುರಿಸಲು ಸೈನ್ಯವನ್ನು ಸಿದ್ಧಗೊಳಿಸಲು ಆಜ್ಞೆಯಿತ್ತನು. ಜೀಖದಾ ತಿಂಗಳ ೧೮ನೆಯ ದಿನದಂದು ಬೆಳಗಿನ ಸಮಯದಲ್ಲಿ ಬಾದಶಹನು ಶಾಹದುರ್ಗದ ಮಹಲಿನಲ್ಲಿದ್ದನು. ಪ್ರಜೆಗಳು ಮತ್ತು ಅಧಿಕಾರ ವರ್ಗದವರು ಸನ್ನಿಧಿಯಲ್ಲಿ ಹಾಜರಾದರು. ಬಾದಶಹನು ತನ್ನ ಸೈನ್ಯದ ಬಲದ ಅಂದಾಜು ಮಾಡಲು ಸೈನ್ಯವನ್ನು ಒಗ್ಗೂಡಿಸಿದನು. ಮಜೀದ ಖಾನ ಮತ್ತು ಶಜಾಅತ್ ಖಾನರನ್ನು ನಿಜಾಮ ಶಾಹಿ ಸೈನ್ಯದೊಂದಿಗೆ ಯುದ್ಧ ಮಾಡಲು ಮೂವತ್ತು ಸಾವಿರ ಕುದುರೆ ಸವಾರರೊಂದಿಗೆ ಕಳುಹಿಸಿಕೊಟ್ಟನು.

ಇಬ್ರಾಹಿಮ ಆದಿಲ್‌ಶಾಹನು ಸರದಾರರಿಗೆ, "ಯುದ್ಧ ಮಾಡುವ ಬದಲು

ಸಂಧಾನದಿಂದ ಕಾರ್ಯ ಸಫಲವಾಗುವಂತೆ ನೀವು ಪ್ರಯತ್ನಿಸಬೇಕು. ನಿಜಾಮಶಾಹಿ ಸೈನ್ಯಕ್ಕೆ ಯಾವ ರೀತಿಯಲ್ಲಿ ನಷ್ಟವಾಗದಂತೆ ನೋಡಿಕೊಳ್ಳಬೇಕು. ಒಂದು ವೇಳೆ ಶತ್ರುಗಳು ಹದ್ದು ಮೀರಿ ವರ್ತಿಸಿದಲ್ಲಿ ಹಾಗೂ ನಮ್ಮ ಸರಹದ್ದಿನಲ್ಲಿ ಪ್ರವೇಶಿಸಲು ಪ್ರಯತ್ನಿಸಿದಲ್ಲಿ ಶೂರತನ ಮತ್ತು ಧೈರ್ಯದಿಂದ ಅವರನ್ನು ನಾಶ ಮಾಡಿಬಿಡಬೇಕು" ಎಂಬ ಎಚ್ಚರಿಕೆ ಕೊಟ್ಟು ಕಳುಹಿಸಿದನು.

ಆದಿಲ್‌ಶಾಹಿ ಸೈನ್ಯದ ಪ್ರಶಿಕ್ಷಣ :

ನಿಜಾಮ ಶಾಹಿ ಸರದಾರರು ಯುದ್ಧ ಆರಂಭಿಸಲು ಕಾಯ್ದು ಕುಳಿತಿದ್ದರು. ಅವರು ಸಂಧಾನದ ಬಗ್ಗೆ ಗಮನ ಕೊಡಲಿಲ್ಲ. ಜಿಲ್‌ಹಜ್ ತಿಂಗಳ ಮೊದಲನೆಯ ದಿನದಂದು ಅವರು ಆದಿಲ್‌ಶಾಹಿ ಪ್ರದೇಶದಲ್ಲಿ ಕಾಲಿಟ್ಟರು ಹಾಗೂ ಯುದ್ಧಕ್ಕೆ ಸನ್ನದ್ಧರಾದರು. ಹಮೀದ ಖಾನನು ತನ್ನ ಸೈನ್ಯಕ್ಕೆ ಉತ್ತಮ ರೀತಿಯಲ್ಲಿ ತರಬೇತಿ ನೀಡಿದ್ದನು. ಸೈನ್ಯದ ಬಲಭಾಗದಲ್ಲಿ ಸುಹೇಲಖಾನ ಖ್ವಾಜಾಸರಾ ಮತ್ತು ಅಂಬರ ಖಾನ ಹಬಶಿಯನ್ನು ನಿಯಮಿಸಿದ್ದರೆ, ಎಡಭಾಗದಲ್ಲಿ ಶಜಾಅತ್ ಖಾನ ಮತ್ತು ತರ್‌ಜಾಹ ಖಾನ್‌ರನ್ನು ನಿಯುಕ್ತಿಗೊಳಿಸಲಾಗಿತ್ತು. ಮಧ್ಯಭಾಗದಲ್ಲಿದ್ದ ಹಮೀದ ಖಾನನು ಸ್ವತಃ ಸೈನ್ಯವನ್ನು ನಿಯಂತ್ರಿಸುತ್ತಿದ್ದನು. ಮಖ್ಸೂದ ಖಾನನು ಬಾದಶಹನ ಆನೆಗಳೊಂದಿಗೆ, ಮುಂಭಾಗದಲ್ಲಿ ನಿಂತುಕೊಂಡಿದ್ದನು.

ಆದಿಲ್‌ಶಾಹಿ ಸೈನ್ಯದ ಪರಾಭವ :

ಆದಿಲ್‌ಶಾಹಿ ಸೈನ್ಯವು ಸಹ ಸುಸಂಘಟಿತವಾಗಿ ಶತ್ರುಗಳತ್ತ ಮುನ್ನುಗ್ಗಿತು. ಯುದ್ಧ ಆರಂಭವಾಯಿತು. ಉಭಯಪಕ್ಷಗಳ ಸೈನಿಕರು ತಮ್ಮ ಪರಾಕ್ರಮವನ್ನು ಪ್ರದರ್ಶಿಸುತ್ತ ಹೋರಾಟ ಮಾಡಿದರು. ರಣಭೂಮಿಯು ಸೈನಿಕರ ರಕ್ತದಿಂದ ಕೆಂಪು ಕೆಂಪಾಗಿ ಹೋಯಿತು. ಭೀಕರ ಕಾಳಗದ ನಂತರ ಆದಿಲ್‌ಶಾಹಿ ಸೈನ್ಯವು ಎಡಭಾಗದ ಮತ್ತು ಮಧ್ಯಭಾಗದ ವೈರಿಗಳಿಂದ ಪರಾಜಿತವಾಯಿತು. ಆದಿಲ್‌ಶಾಹಿ ಸೈನ್ಯದ ಹೆಚ್ಚಾನೆಚ್ಚು ಸೈನಿಕರು ಯುದ್ಧದಲ್ಲಿ ಹತರಾದರು. ಇನ್ನುಳಿದವರಲ್ಲಿ ಹಲವರು ಗಾಯಗೊಂಡು ರಣರಂಗದಿಂದ ಓಡಿಹೋದರು.... ಆದರೆ ಇದು ಕೇವಲ ತೋರಿಕೆಯ ಪರಾಭವವಾಗಿತ್ತು. ಇದನ್ನು ಆದಿಲ್‌ಶಾಹಿ ವಿಜಯದ ಮುನ್ನುಡಿಯೆಂದು ತಿಳಿಯಬಹುದು. ಏಕೆಂದರೆ, ಆದಿಲ್‌ಶಾಹಿ ಸೈನ್ಯವು ಶೀಘ್ರದಲ್ಲಿಯೇ ಜಯಶಾಲಿಯಾಯಿತು.

ಯುದ್ಧಭೂಮಿಯಲ್ಲಿ ಬಹಳಷ್ಟು ಸಿಡಿಮದ್ದುಗಳನ್ನು ಹಾರಿಸಲಾಗಿತ್ತು. ಇದರಿಂದಾಗಿ ಹೊಗೆಯುಂಟಾಗಿ ಭೂಮಿ ಮತ್ತು ಆಕಾಶಗಳು ಕಾರ್ಗತ್ತಲಿನಿಂದ ಕವಿದು ಹೋಗಿದ್ದವು. ಆಗ ಗಾಳಿಯ ದಿಕ್ಕು ಆದಿಲಶಾಹಿ ಸೈನ್ಯದತ್ತ ಬೀಸುತ್ತಿತ್ತು. ಅರಸನ ಸೈನ್ಯವು ಹೊಗೆಯಲ್ಲಿ

ಸಿಲುಕಿಕೊಂಡಿತು.. ಇಂತಹ ಸಂದರ್ಭದಲ್ಲಿ ಸೈನಿಕರು ತಮ್ಮ ಸ್ಥಳದಲ್ಲಿ ನಿಂತುಕೊಂಡಿರುವುದು ಕಷ್ಟವಾಗಿತ್ತು. ಅದು ಸಾಧ್ಯವೇ ಇರಲಿಲ್ಲ. ಸೈನಿಕರು ಒಬ್ಬರಾದ ನಂತರ ಮತ್ತೊಬ್ಬರು ಓಡತೊಡಗಿದರು. ನಿಜಾಮಶಾಹಿ ಸರದಾರರು ಇದನ್ನು ತಮ್ಮ ವಿಜಯವೆಂದು ತಿಳಿದುಕೊಂಡು ಆದಿಲಶಾಹಿ ಸೈನ್ಯದ ಮೇಲೆ ದಾಳಿ ಮಾಡಿದರು. ಇದರ ಪರಿಣಾಮವಾಗಿ, ಆದಿಲಶಾಹಿ ಸೈನ್ಯದಲ್ಲಿ ಎಡಭಾಗದಂತೆ ಬಲಭಾಗ ಮತ್ತು ಮಧ್ಯಭಾಗದಲ್ಲಿಯ ಸೈನ್ಯದಲ್ಲಿಯೂ ಕೋಲಾಹಲವುಂಟಾಯಿತು. ನಿಜಾಮಶಾಹಿ ಸೈನ್ಯವು ಶತ್ರುಸೈನ್ಯದ ಬೆನ್ನಟ್ಟಿತು.

ಇಬ್ರಾಹಿಮ ನಿಜಾಮಶಾಹನು ತನ್ನ ಕ್ಷೇಮದ ದೃಷ್ಟಿಯಿಂದ ಸೈನ್ಯದ ಹಿಂದೆ ಅಡಗಿ ನಿಂತಿದ್ದನು. ಆದಿಲಶಾಹಿ ಸೈನ್ಯವು ಚೆದರಿ ಹೋಗುವುದನ್ನು ನೋಡಿ ಆತನಿಗೆ ಪರಮ ಸಂತೋಷವಾಯಿತು. ಆತನು ತನ್ನ ಕೆಲವು ಸಂಗಡಿಗರೊಂದಿಗೆ ಮುಂದುವರಿದನು. ಸುಂಬಲ್ ಖಾನ ಮತ್ತು ಆಂಬರ ಖಾನನೊಡನೆ ಕೆಲವು ಆದಿಲಶಾಹಿ ಸರದಾರರು ಒಂದೆಡೆ ನಿಂತುಕೊಂಡಿದ್ದರು. ಅವರು ಇನ್ನೂ ಯುದ್ಧ ಮಾಡುವುದರಲ್ಲಿ ಪಾಲುಗೊಂಡಿರಲಿಲ್ಲ. ಸರಿಯಾದ ಸಂದರ್ಭವನ್ನು ಕಾಯುತ್ತಿದ್ದರು. ಅವರು ನಿಜಾಮಶಾಹಿ ಬಾವುಟವನ್ನು ನೋಡಿದೊಡನೆ ಅವರತ್ತ ಸಾಗಿದರು. ನಿಜಾಮಶಾಹಿಯ ಸಂಗಡಿಗರು ವೈರಿಗಳನ್ನು ನೋಡಿದೊಡನೆ ಅವರು ಇಬ್ರಾಹಿಮ ನಿಜಾಮನಿಗೆ," ನಮ್ಮ ಸೈನಿಕರ ಸಂಖ್ಯೆಯು ಐದು ನೂರಕ್ಕಿಂತ ಮಿಗಿಲಾಗಿಲ್ಲ. ನಮ್ಮೆದುರು ಇರುವ ಶತ್ರು ಸೈನ್ಯವು ಸಾವಿರಕ್ಕಿಂತ ಹೆಚ್ಚಾಗಿದೆ. ಈ ಸಂದರ್ಭದಲ್ಲಿ ನಾವು ಯುದ್ಧ ಮಾಡದೇ, ಒಂದು ಸರಿಯಾದ ಸ್ಥಳದಲ್ಲಿ ತಂಗುವುದು ಕ್ಷೇಮಕರ. ನಮ್ಮ ಸರದಾರರು ಮತ್ತು ಸೈನಿಕರು ನಮ್ಮ ಕಡೆ ಬರುವವರೆಗೆ ನಾವು ಸುಮ್ಮನಿರುವುದು ಉಚಿತ. ಇಲ್ಲವಾದಲ್ಲಿ ಹಾನಿಯಾಗುವ ಸಂಭವವಿದೆ." ಎಂದು ಹೇಳಿದರು.

ಸುಂಬಲ ಖಾನ ಖ್ವಾಜಾಸರಾ ಮತ್ತು ಇಬ್ರಾಹಿಮ ನಿಜಾಮಶಾಹರ ಕಾಳಗ :

ಇಬ್ರಾಹಿಮ ನಿಜಾಮಶಾಹನಿಗೆ ಯೌವನದ ಮದವಂತೂ ಆವರಿಸಿತ್ತು. ಅದರೊಡನೆ ಈ ಸಂದರ್ಭದಲ್ಲಿ ಶರಾಬಿನ ನಶೆಯೂ ಸೇರಿಕೊಂಡಿತ್ತು. ಆತನು ತನ್ನ ಸಂಗಡಿಗರು ನೀಡಿದ ಸಲಹೆ ಹಿಡಿಸಲಿಲ್ಲ. ಆತನು ತನ್ನ ಸಂಗಡಿಗರಿಗೆ," ನನ್ನ ತಮ್ಮ ಇಸ್ಮಾಯಿಲನು ದಿಲಾವರಖಾನನ್ನು ಎದುರಿಸಿ, ತನ್ನ ಪರಾಕ್ರಮವನ್ನು ಪ್ರದರ್ಶಿಸಿದ್ದನು. ನಾನೇಕೆ ಹೇಡಿಯಾಗಬೇಕು? ಸುಂಬಲಖಾನ ಖ್ವಾಜಸರಾನನ್ನು ಎದುರಿಸದೇ ಹಿಮ್ಮೆಟ್ಟುವುದು ನನ್ನ ಗೌರವಕ್ಕೆ ತಕ್ಕದ್ದಲ್ಲ." ಎಂದು ಹೇಳಿ ತನ್ನ ತಲವಾರನ್ನು ಒರೆಯಿಂದ ತೆಗೆದು ಶತ್ರುಗಳ ಮೇಲೆ ಆಕ್ರಮಣ ಮಾಡಿದನು. ಆತನು ತನ್ನ ಶೌರ್ಯ ಪರಾಕ್ರಮವನ್ನು ಪ್ರದರ್ಶಿಸಿ ಹೋರಾಡಿದುದರಲ್ಲಿ ಯಾವ ಸಂದೇಹವೂ ಇಲ್ಲ. ಆದರೆ ವಿಧಿಯ ಲೀಲೆಯ ಮುಂದೆ ಆತನ ಶೂರತನದ ಪ್ರಯೋಜನವಾಗಲಿಲ್ಲ.

ಇಬ್ರಾಹಿಮ ನಿಜಾಮ ಶಾಹನ ವಧೆ :

ಯುದ್ಧವು ಭರದಿಂದ ನಡೆಯುತ್ತಿರುವಾಗ ಒಂದು ಬಾಣವು ಇಬ್ರಾಹಿಮ ನಿಜಾಮಶಾಹನಿಗೆ ತಾಗಿತು. ಅದರ ಪ್ರಖರತೆಯನ್ನು ತಾಳಲಾಗದೆ ಆತನು ಅಲ್ಲಿಯೇ ತಣ್ಣಗಾದನು. ಆತನ ಸಂಗಡಿಗರು ಆತನ ಶವವನ್ನು ಬಹಳ ಕಷ್ಟದಿಂದ ರಣಭೂಮಿಯಿಂದ ಹೊರಗೆ ತಂದರು. ನಿಜಾಮಶಾಹನು ತನ್ನ ಹಬಶಿ ಗುಲಾಮರ ಅನುಚಿತ ಸಲಹೆಯಿಂದ ಇಹಲೋಕ ತ್ಯಜಿಸಬೇಕಾಯಿತು. ಎಲ್ಲ ಸೈನಿಕರು ಮತ್ತಿತರ ಸಿಪಾಯಿಗಳು ದುಃಖದ ಭಾರದಿಂದ ಕುಗ್ಗಿ, ಅಹಮದ್‌ನಗರದತ್ತ ಹೊರಟರು.

ಸುಲಿಗೆ ಮಾಡುವುದರಲ್ಲಿ ನಿರತರಾಗಿದ್ದ ದಖನಿ ಮತ್ತು ಹಬಶಿ ಸರದಾರರು, ತಮ್ಮ ಅರಸನ ವಧೆಯ ವಿಷಯ ಕೇಳಿ, ಗಾಬರಿಗೊಂಡು ಚಲ್ಲಾಪಿಲ್ಲಿಯಾಗಿ ಮನಬಂದತ್ತ ಓಡಿ ಹೋದರು. ಈ ರೀತಿ ದಖನಿ ಮತ್ತು ಹಬಶಿ ಸರದಾರರು ತಮ್ಮ ದೊರೆಯ ವಂಶವನ್ನು ಸಂಪೂರ್ಣ ನಾಶ ಮಾಡಿದರು.

ಒಂದು ವಿಚಿತ್ರ ಘಟನೆ :

ಈ ಯುದ್ಧ ನಡೆದಾಗ ಒಂದು ವಿಚಿತ್ರ ಘಟನೆ ಸಂಭವಿಸಿತು. ಓದುಗರ ಮನಮುದಗೊಳಿಸುವುದಕ್ಕಾಗಿ ಈ ಸ್ವಾರಸ್ಯಕರ ಸಂಗತಿಯನ್ನು ಉಲ್ಲೇಖಿಸಲಾಗಿದೆ. ಯುದ್ಧ ನಡೆಯುತ್ತಿರುವಾಗ ಆದಿಲಶಾಹಿ ಸೈನ್ಯದ ಒಂದು ಭಾಗವು ಗೊಂದಲಕ್ಕೀಡಾಗಿ ಸೈನಿಕರು ರಣರಂಗದಿಂದ ಪರಾರಿಯಾದಾಗ, ಅವರಲ್ಲಿ ಕೆಲವರು ಭಯಭೀತರಾಗಿ ಓಡುತ್ತ ಶಾಹದುರ್ಗ ತಲುಪಿದರು. ಅವರು ಶಾಹನವಾಜನಿಗೆ, "ಸಾಯಂಕಾಲ ನಮಾಜು ಮಾಡುವ ಸಮಯಕ್ಕೆ ಎರಡೂ ಕಡೆಯ ಸೈನಿಕರು ಪರಸ್ಪರ ಎದುರಿಸಿದರು. ಆದಿಲಶಾಹಿ ಸೈನ್ಯದ ಪರಿಸ್ಥಿತಿ ಬಿಗಡಾಯಿಸಿತು. ಶತ್ರುಗಳು ಎಲ್ಲ ಸರದಾರರನ್ನು ವಧಿಸಿದ್ದಾರೆ. ಕೇವಲ ಕೆಲವರು ಮಾತ್ರ ಜೀವ ಉಳಿಸಿಕೊಂಡು ಓಡಿ ಹೋಗಿದ್ದಾರೆ. ಗಜಶಾಲೆಯ ಎಲ್ಲ ಆನೆಗಳನ್ನು ಶತ್ರುಗಳು ವಶಪಡಿಸಿಕೊಂಡಿದ್ದಾರೆ. ತುರ್ಕಿ ಗುಲಾಮನೊಬ್ಬನ ಸಾಹಸದಿಂದ ಕೇವಲ ಒಂದು ಆನೆ 'ರಿಜುವಾನ' ಮಾತ್ರ ಕ್ಷೇಮವಾಗಿದೆ." ಎಂದು ಹೇಳಿದರು.

ಬಾದಶಹನ ಸ್ವಾಗತ :

ಅಷ್ಟರಲ್ಲಿಯೇ ಇನ್ನೂ ಕೆಲವು ದೂತರು ಬಾದಶಹನ ಸನ್ನಿಧಿಯಲ್ಲಿ ಮೇಲೆ ಹೇಳಿದ ವಿಷಯವನ್ನು ಧೃಡೀಕರಿಸಿದರು. ಈ ವಿಷಯವು ತಲುಪಿದ ಮೇಲೆ ಆದಿಲಶಾಹಿ ಸೈನ್ಯವು ಕಳವಳಗೊಂಡಿತು. ಆದರೆ ಬಾದಶಹನು ಚಿಂತೆ ಮಾಡಲಿಲ್ಲ. ಯುದ್ಧದಲ್ಲಿ ವಿಜಯವಾಗಲೆಂದು ಪ್ರತಿಕ್ಷಣವೂ ಅಲ್ಲಾಹನಲ್ಲಿ ಪ್ರಾರ್ಥಿಸುತ್ತಿದ್ದನು. ಪ್ರಜೆಗಳು ಮತ್ತು ಸರದಾರರಿಗೆ, "ಈ ವದಂತಿಯು ಖಚಿತವಾಗಿ ಆಧಾರರಹಿತವಾದದ್ದು" ಎಂದು ಮತ್ತೆ ಮತ್ತೆ ಹೇಳುತ್ತಿದ್ದನು.

ಬಾದಶಹನ ಸುದೈವ :

ಒಂದು ದಿನ ತುಂಬಿದ ಸಭೆಯಲ್ಲಿ ಉಪಸ್ಥಿತರಿದ್ದವರಿಗೆ. ಬಾದಶಹನು, "ನಮ್ಮ ವಿಜಯ ಹಾಗೂ ವೈರಿಗಳ ಪರಾಜಯದ ವಿಷಯ ಕೇಳಿ ಸಂತೋಷ ಪಡುವ ಸುದಿನ ಬರುತ್ತದೆ. ನನಗೆ ಇದು ಖಂಡಿತವಾಗಿಯೂ ಗೊತ್ತು" ಎಂದು ಹೇಳುತ್ತಿದ್ದನು. ಈ ವಿಷಯದ ಬಗ್ಗೆ ಸಂವಾದವು ನಡೆಯುತ್ತಿರುವಾಗ, ಶಾಹ ನವಾಜ ಖಾನನು ಆಸ್ಥಾನಕ್ಕೆ ಬಂದು ಬಾದಶಹನಿಗೆ, "ಹುಜೂರ! ಅಭಿನಂದನೆಗಳು, ನಮ್ಮ ಸೈನ್ಯವು ಜಯಶಾಲಿಯಾಗಿದೆ. ಶತ್ರುಗಳು ಸೋತುಹೋಗಿದ್ದಾರೆ. ಇಬ್ರಾಹಿಮ ನಿಜಾಮಶಾಹನು ರಣರಂಗದಲ್ಲಿ ಹತನಾಗಿದ್ದಾನೆ. ನಮ್ಮ ಸೈನ್ಯವು ಗಜಶಾಲೆ ಮತ್ತು ತೋಪುಗಳನ್ನಿಡುವ ಉಗ್ರಾಣವನ್ನು ವಶಪಡಿಸಿಕೊಂಡಿದ್ದಾರೆ" ಎಂದು ಹೇಳಿದನು. ಇದನ್ನು ಕೇಳಿ ಸಭೆಯಲ್ಲಿದ್ದವರಿಗೆ ಅತೀವ ಸಂತಸವಾಯಿತು.

ಇಬ್ರಾಹಿಮ ಆದಿಲಶಾಹನ ಸದ್ಗುಣ ಸಂಪನ್ನತೆ :

ಇಬ್ರಾಹಿಮ ನಿಜಾಮಶಾಹನು ಮುಂದಿನ ಪರಿಣಾಮವನ್ನು ಯೋಚಿಸದೆ ಯುದ್ಧ ಮಾಡಿದ್ದನು. ಆದಾಗ್ಯೂ ಇಬ್ರಾಹಿಮ ಆದಿಲ ಶಾಹನಿಗೆ ಆತನ ನಿಧನದಿಂದ ಖೇದವಾಯಿತು. ತನ್ನ ಸೈನ್ಯದ ಸರದಾರರಿಗೆ, ನಿಜಾಮಶಾಹಿ ರಾಜ್ಯವನ್ನು ನಾಶ ಮಾಡತಕ್ಕದ್ದಲ್ಲ ಹಾಗೂ ಅಲ್ಲಿಯ ಪ್ರಜೆಗಳಿಗೆ ಯಾವುದೇ ರೀತಿಯ ಕಷ್ಟವಾಗತಕ್ಕದ್ದಲ್ಲ. ಆದಿಲಶಾಹಿ ಸೈನ್ಯವು ಅಲ್ಲಿಯೇ ತಂಗಿದರೆ, ವಿರೋಧಿಗಳಿಗೆ ತೊಂದರೆ ಉಂಟಾಗುವುದು. ಎಲ್ಲ ಸರದಾರರು, ಸೇನಾನಿಗಳು ಮತ್ತು ಸಿಪಾಹಿಗಳು ಬಿಜಾಪುರದತ್ತ ಮರಳಿ ಬರತಕ್ಕದ್ದು. ಎಂಬ ಆದೇಶವನ್ನು ನೀಡಿದನು.

ಬಹುಮಾನ ಪ್ರಶಸ್ತಿಗಳು :

ಅದೇ ತಿಂಗಳ ಕೊನೆಯ ದಿನಗಳಲ್ಲಿ, ಆಸ್ಥಾನದ ಸದಸ್ಯರು ಮತ್ತು ಆದಿಲಶಾಹಿ ಸರದಾರರು ಶಾಹದುರ್ಗದಲ್ಲಿ ಇಬ್ರಾಹಿಮ ಆದಿಲಶಾಹ ಸಾನಿಯ ಗುಂಪಿನಲ್ಲಿ ಕೂಡಿಕೊಂಡರು. ಬಾದಶಹನು ಪ್ರತಿಯೊಬ್ಬರಿಗೆ ಬಹುಮಾನಗಳನ್ನು ನೀಡಿ ಸಂತೃಪ್ತಗೊಳಿಸಿದನು. ಯುದ್ಧದಲ್ಲಿ ತಮ್ಮ ಶೌರ್ಯ ಮತ್ತು ಪರಾಕ್ರಮ ಮೆರೆದ ಸುಹೇಲ ಖಾನ ಮತ್ತು ಅಂಬರ ಖಾನರಿಗೆ ಎಲ್ಲರಿಗಿಂತ ಹೆಚ್ಚು ಇನಾಮುಗಳನ್ನು ನೀಡಿದನು. ಇದಾದ ನಂತರ ಬಾದಶಹನು ತನ್ನ ರಾಜಧಾನಿಗೆ ಬಂದನು ಮತ್ತು ಜಿಲ್‌ಹಜ್ ತಿಂಗಳ ೨೦ನೆಯ ದಿನದಿಂದ ಶಹೀದ ಕರ್‌ಬಲಾ ಪ್ರಾರ್ಥನೆಯಲ್ಲಿ ನಿರತನಾದನು.

ಇದೇ ಸಂದರ್ಭದಲ್ಲಿ, ವಿಜಯನಗರದ ಕೆಲವು ಮುಸ್ಲಿಮೇತರರು ಗಲಭೆ ಮಾಡಿ ಕೋಲಾಹಲ ಮಾಡುತ್ತಿದ್ದವರು, ಆದಿಲಶಾಹಿ ಸರದಾರರು ಬರುವ ವಿಷಯ ತಿಳಿದು

ಹಿಂತಿರುಗಿ ಹೋದರು. ಮುಸಲ್ಮಾನ ಸೈನಿಕರ ಹಿಡಿತಕ್ಕೆ ಸಿಕ್ಕವರನ್ನು ತಲವಾರದಿಂದ ಹತಗೊಳಿಸಲಾಯಿತು.

ಹಜರತ್ ಮಹಮ್ಮದರ ಪವಿತ್ರ ಕೂದಲುಗಳ ದರ್ಶನ :

ಹಿಜರಿಸನ್ ೧೦೦೫ರ ಮೊಹರಮ್‌ನ ಮೊದಲನೆಯ ದಿನದಂದು, ಮೀರ ಮೊಹಮದ್ ಸಾಲೇಹ ಹಮ್ದಾನಿಯು ಬರುವ ವಿಷಯ ತಿಳಿಯಿತು. ಆತನು ತನ್ನೊಡನೆ ಇಹ ಮತ್ತು ಪರಲೋಕದ ಒಡೆಯನಾದ ಹಜರತ್ ಮಹಮದ್ ಪೈಗಂಬರನ ಕೆಲವು ಗುರುತುಗಳನ್ನು ತರಲಿದ್ದಾನೆ ಎಂಬುದು ಗೊತ್ತಾದ ತಕ್ಷಣ ಬಾದಶಹನಿಗೆ ಅತ್ಯಂತ ಸಂತೋಷವಾಯಿತು ಹಾಗೂ ಅಲ್ಲಾಹನ ಸನ್ನಿಧಾನದಲ್ಲಿ ಕೃತಜ್ಞತೆಯನ್ನು ಸಾರಿದನು. ಬಾದಶಹನು ಗೌರವಾದರಗಳಿಂದ ಮಹಮದ್ ಸಾಲೇಹನ ಭೇಟಿಯಾದನು. ಪೈಗಂಬರರ ಚಿನ್ಹೆಗಳ ದರ್ಶನಲಾಭ ಪಡೆದನು. ಇದರಿಂದ ಬಾದಶಹನಿಗೆ ಶುಭಶಕುನಗಳುಂಟಾದವು.. ಇಬ್ರಾಹಿಮ ಆದಿಲಶಾಹಿಯ ಅರಸೊತ್ತಿಗೆಯ ಇತರ ರಾಜರು ಹಜರತ ಸಲ್ಲಮನ ಚಿನ್ಹೆಗಳ ದರ್ಶನ ಪಡೆಯಬೇಕೆಂದರೂ ಅವರಿಗೆ ಸಾಧ್ಯವಾಗಿರಲಿಲ್ಲ. ಇಬ್ರಾಹಿಮನ ಸುದೈವದಿಂದ ಇದು ಸಾಧ್ಯವಾಯಿತು.

ಬಾದಶಹನು ಈ ಚಿಹ್ನೆಗಳ ಮೆರವಣಿಗೆಗೆ ಸಿದ್ಧನಾದನು. ರಾಜನ ಸೇವಕರು ಬೆಳ್ಳಿ ಮತ್ತು ಬಂಗಾರಲೇಪಿತ ಪಾತ್ರೆಗಳಲ್ಲಿ ಗಂಧದ ಕಡ್ಡಿಗಳನ್ನು ಬೆಳಗಿಸಿದರು. ಇಹ ಮತ್ತು ಪರ ಎರಡೂ ಲೋಕದ ಪ್ರಭುವನ್ನು ಬಾದಶಹನು ಪ್ರಾರ್ಥಿಸಿದನು. ಹಜರತ್ ನಬಿಯ ಒಂದು ಸಾವಿರ ಐದು ವರ್ಷಗಳ ತರುವಾಯ ಈ ಚಿನ್ಹೆಯು ರಂಧ್ರವಿಲ್ಲದ ಡಬ್ಬದಿಂದ ಬೆಳಕಿನ ಪುಂಜದಂತೆ ಹೊಳೆಯತೊಡಗಿತು.

ಮೀರ ಮಹಮದ್ ಸಾಲೇಹನಿಗೆ ಗೌರವಾದರ :

ಮೀರ ಮಹಮದ್ ಸಾಲೇಹನಿಗೆ ಬಾದಶಹನು ಆದರದಿಂದ ಸತ್ಕರಿಸಿದನು. ಮೊಹರಮ್‌ನ ಪ್ರಥಮ ದಿನದಿಂದ ಬಾದಶಹನು ಪ್ರಾರ್ಥನೆಯಲ್ಲಿ ನಿರತನಾದನು. ಮೀರ ಮಹಮದ್ ಸಾಲೇಹನಿಗೆ, 'ವಂಶದ ಹಿರಿಯರ ಹೆಸರಿನಲ್ಲಿ ಪ್ರಾರ್ಥನೆ ಮಾಡುತ್ತಿದ್ದೇನೆ. ತಾವು ಸಹ ನನ್ನ ಜೊತೆಗೂಡಿದರೆ ಉಪಕಾರವಾಗುವದು' ಎಂದು ವಿನಂತಿಸಿಕೊಂಡನು. ಮೀರ ಮಹಮದ್ ಸಾಲೇಹನು ಬಾದಶಹನ ಆಣತಿಯನ್ನು ಒಪ್ಪಿಕೊಂಡನು ಹಾಗೂ ಪವಿತ್ರ ಚಿನ್ಹೆಯೊಡನೆ ಅರಮನೆಯಲ್ಲಿ ವಾಸಮಾಡ ತೊಡಗಿದನು. ಮೀರ ಮಹಮದ್ ಸಾಲೇಹನಿಗೆ ಯಾವುದೇ ತೊಂದರೆಯಾಗದಂತೆ ನೋಡಿಕೊಳ್ಳಲು ಹಾಗೂ ಅವಶ್ಯವಿದ್ದ ಸೇವೆ ಮಾಡಲು ಅರಮನೆಯ ಸೇವಕರಿಗೆ ಆಜ್ಞೆ ಮಾಡಿದನು.

ಮೀರ ಸಾಹೇಬನ ಬಯಕೆ :

ಮೀರ ಮಹಮದ್ ಸಾಲೇಹನನ್ನು ಬಾದಶಾಹನು ಆಗಾಗ ಭೇಟಿಯಾಗುತ್ತಿದ್ದನು

ಹಾಗೂ ಉಡುಗೊರೆಗಳನ್ನು ನೀಡುತ್ತಿದ್ದನು. ಮೊಹರಮ್ ತಿಂಗಳು ಕಳೆದು ಸಫರ ತಿಂಗಳು ಆರಂಭವಾದ ನಂತರ ಮತ್ತೆ ಉಡುಗೊರೆಗಳಿಂದ ಸತ್ಕರಿಸಿದನು. ಮೀರ ಮಹಮದ್ ಸಾಲೇಹನಿಗೆ ಹತ್ತರಿಂದ ಹನ್ನೆರಡು ಸಾವಿರ ನಗದು ಹೋನು(ನಾಣ್ಯ), ಬೆಲೆಬಾಳುವ ವಸ್ತ್ರಗಳ ಕೆಲವು ಗಂಟುಗಳನ್ನು ಕೊಟ್ಟು ಬಾದಶಹನು, "ಹುಜೂರರ ಮನಸ್ಸಿನಲ್ಲಿ ಮತ್ತಾವುದಾದರೂ ಕೋರಿಕೆಗಳಿದ್ದಲ್ಲಿ ಹೇಳಿ, ಕೂಡಲೇ ಪೂರೈಸಲಾಗುವದು" ಎಂದು ಕೇಳಿದನು. ಮೀರಸಾಹೇಬನು, "ದಯಾಳು ಬಾದಶಹನ ಕೃಪೆಯಿಂದ ನನಗೆ ಎಲ್ಲವೂ ದೊರೆತಿದೆ. ನನಗೆ ಮತ್ತಾವ ಇಚ್ಛೆಯೂ ಇಲ್ಲ. ಆದರೆ ಮಕ್ಕಾ ಮತ್ತು ಮದೀನದ ಯಾತ್ರೆ ಮಾಡಬಯಸುತ್ತೇನೆ. ಇನ್ನೂ ಕೆಲವು ಪವಿತ್ರ ಸ್ಥಳಗಳ ಯಾತ್ರೆ ಮಾಡುವ ಇಚ್ಛೆಯಿದ್ದರೂ ಈಗ ಎಂಬತ್ತು ವರ್ಷ ವಯಸ್ಸಾಗಿರುವುದರಿಂದ ಒಂದು ಪವಿತ್ರ ಸ್ಥಾನದಲ್ಲಿ ನನ್ನ ಜೀವಿತದ ಉಳಿದ ದಿನಗಳನ್ನು ಕಳೆಯುತ್ತೇನೆ." ಎಂದು ಉತ್ತರಿಸಿದನು.

ಬಾದಶಹನು ನೌಕೆಯಲ್ಲಿ ಕೆಲಸ ಮಾಡುವ ನೌಕರರಿಗೆ ಮೀರ ಸಾಹೇಬರ ಪ್ರವಾಸದ ಸಿದ್ಧತೆ ಮಾಡಲು ಆದೇಶ ನೀಡಿದನು. ಕೆಲವು ದಿನಗಳಲ್ಲಿ ಎಲ್ಲ ವ್ಯವಸ್ಥೆಯನ್ನು ಮಾಡಲಾಯಿತು. ಮೀರ ಸಾಹೇಬನು ಮಕ್ಕಾ ಯಾತ್ರೆಗೆ ಹೊರಟನು. ಹೋಗುವ ಸಂದರ್ಭದಲ್ಲಿ ಎರಡು ಚಿನ್ಹೆಗಳನ್ನು ಬಾದಶಹನಿಗೆ ಕೊಟ್ಟನು. ಅವುಗಳನ್ನು ಚಿನ್ನದ ಪೆಟ್ಟಿಗೆಯಲ್ಲಿ ಇಡಲಾಗಿದ್ದು, ಪ್ರತಿ ಶುಕ್ರವಾರ ಇದನ್ನು ಮೆರವಣಿಗೆ ಮಾಡಲಾಗುತ್ತದೆ. ಈ ಪವಿತ್ರ ಉಡುಗೊರೆಯಿಂದ ಬಾದಶಹನಿಗೆ ಶುಭವಾಗಿದೆ. ರಾಜ್ಯವು ಅಭಿವೃದ್ಧಿಯ ದಾರಿಯಲ್ಲಿ ಸಾಗುತ್ತಿದೆ.

ಅಹಮದ್ ನಗರದ ವಿದ್ಯಮಾನ :

ನಿಜಾಮಶಾಹಿ ಸರದಾರರು, ತಮ್ಮ ನೀಚತನದಿಂದ ಇಬ್ರಾಹಿಮ ನಿಜಾಮಶಾಹನನ್ನು ಮೃತ್ಯುವಿನ ಆಲಿಂಗನಕ್ಕೆ ತಳ್ಳಿದರು. ಆದರೆ ತಾವು ರಣರಂಗದಿಂದ ತ್ವರಿತವಾಗಿ ಅಹಮದ್‌ನಗರದತ್ತ ಹೊರಟು ಹೋದದ್ದು, ಓದುಗರ ಗಮನಕ್ಕೆ ಬಂದಿರಬಹುದು. ನಗರವನ್ನು ತಲುಪಿದ ನಂತರ ಅವರಲ್ಲಿ ದಕ್ಷಿಣದ ಮುಖ್ಯ ಸರದಾರ ಮಂಜವಿ ಖಾನ ಬೇಗಿಯು ಕೋಟೆ ಮತ್ತು ಖಜಾನೆಯನ್ನು ವಶಪಡಿಸಿಕೊಂಡನು. ಆತನು ಆಡಳಿತದ ಸೂತ್ರವನ್ನು ತನ್ನ ಕೈಗೆ ತೆಗೆದುಕೊಂಡು ರಾಜ್ಯಭಾರದ ಕೆಲಸಗಳನ್ನು ತನ್ನ ಇಚ್ಛೆಯಂತೆ ನಿರ್ಧರಿಸ ತೊಡಗಿದನು. ಸಾಕಷ್ಟು ವಾದವಿವಾದಗಳ ತರುವಾಯ, ಮಂಜವಿ ಖಾನನು ತಾಹಿರ ಶಾಹನ ಮಗ ಅಹಮದ್ ಶಾಹನನ್ನು ಹಿಜರಿ ಸನ್ ೧೦೦೩ರ ಜಿಲ್‌ಹಜ್ ತಿಂಗಳ ೧೦ನೆಯ ದಿನದಂದು ಸಿಂಹಾಸನದ ಮೇಲೆ ಕುಳ್ಳಿರಿಸಿದನು. ಎಲ್ಲ ಸರದಾರರಿಗೆ ಹುದ್ದೆಗಳನ್ನು ಮತ್ತು ಅಧಿಕಾರಗಳನ್ನು ನೀಡಲಾಯಿತು. ಮಾಮೂಲಿನಂತೆ, ಮಂಜವಿ ಖಾನನಿಗೆ ಪ್ರಧಾನ ಹುದ್ದೆಯಾದ ವಕೀಲ ಹುದ್ದೆಯನ್ನು ನೀಡಲಾಯಿತು.

ಹತ್ತು-ಹದಿನೈದು ದಿನಗಳ ತರುವಾಯ ಅಹಮದ್ ಶಾಹನು ನಿಜಾಮಶಾಹೀ ಮನೆತನಕ್ಕೆ ಸಂಬಂಧಿಸಿದವನಲ್ಲ ಎಂಬ ವಿಷಯ ತಿಳಿಯಿತು. ಆತನನ್ನು ಸಿಂಹಾಸನದಿಂದ ಕೆಳಗಿಳಿಸಿ, ಇಬ್ರಾಹಿಮ ಶಾಹನ ಮಗ ಬಹಾದೂರ ಶಾಹನನ್ನು ಅರಸನನ್ನಾಗಿ ಮಾಡುವ ವಿಚಾರ ಮಾಡಿದರು. ಮಿಯಾ ಮಂಜವಿ ಈ ಸಲಹೆಯನ್ನು ವಿರೋಧಿಸಿದನು. ಇದರ ಪರಿಣಾಮವಾಗಿ ದಖನಿ ಮತ್ತು ಹಬಶಿ ಸರದಾರರಲ್ಲಿ ಯುದ್ಧ ಆರಂಭವಾಯಿತು. ಮಂಜವಿ ಖಾನನು ಕೋಟೆಯ ದ್ವಾರವನ್ನು ಮುಚ್ಚಿಸಿ ಕುಳಿತುಬಿಟ್ಟನು. ಹಬಶಿ ಮತ್ತಿನ್ನಿತರ ಸರದಾರರು ಕೋಟೆಗೆ ಮುತ್ತಿಗೆ ಹಾಕಿ ಕೋಟೆಯಲ್ಲಿರುವವರಿಗೆ ತೊಂದರೆ ಕೊಡತೊಡಗಿದರು. ಅವರು ನೀಡುವ ಕಿರುಕುಳ ತಾಳಲಾರದಂತಾದಾಗ, ಮಂಜವಿ ಖಾನನಿಗೆ ದಿಕ್ಕು ತೋಚದಂತಾಯಿತು. ಆತನು ಅಸಹಾಯಕತೆಯಿಂದ, ತನ್ನ ದೂತರನ್ನು ಗುಜರಾತಕ್ಕೆ ಕಳುಹಿಸಿ, ಸಾಮ್ರಾಟ ಅಕ್ಬರನ ಮಗ ಮುರಾದನ ನೆರವು ಕೋರಿದನು. ಆತನಿಗೆ ಅಹಮದ್‌ನಗರಕ್ಕೆ ಬರಲು ಆಮಂತ್ರಿಸಿದನು.

ರಾಜಕುಮಾರ ಮುರಾದನ ಗುರಿ ಅಹಮದ್‌ನಗರ :

ರಾಜಕುಮಾರ ಮುರಾದನಿಗೆ ಅಹಮದ್‌ನಗರದ ಮೇಲೆ ವಿಜಯ ಪಡೆಯಲು ಸಾಮ್ರಾಟ ಅಕ್ಬರನಿಂದ ಅನುಮತಿ ದೊರೆತಿತ್ತು. ಆತನು ಸೂಕ್ತ ಸಮಯದ ದಾರಿ ಕಾಯುತ್ತಿದ್ದನು. ಅಷ್ಟರಲ್ಲಿಯೇ ಮಂಜವಿ ಖಾನನಿಂದ ಆಮಂತ್ರಣ ದೊರೆತಾಗ, ಈ ವಿಚಾರದಲ್ಲಿ ಹೆಚ್ಚು ಸಮಯ ಕಳೆಯದೇ, ಅಹಮದ್‌ನಗರಕ್ಕೆ ತೆರಳಲು ಸಿದ್ಧನಾದನು. ಖಾನ್‌ಖಾನಾ ಮತ್ತು ಇಪ್ಪತ್ತು ಸಾವಿರ ಸಿಪಾಯಿಗಳ ಸೈನ್ಯದೊಡನೆ ಸುಲ್ತಾನಪುರ ನಂದರಬಾರನ ಮಾರ್ಗವಾಗಿ ಅಹಮದ್‌ನಗರವನ್ನು ತಲುಪಿದನು.

ಕೋಟೆಯನ್ನು ವಶಪಡಿಸಿಕೊಳ್ಳುವ ಉದ್ದೇಶ :

ರಾಜಕುಮಾರ ಮುರಾದನು ಅಹಮದ್‌ನಗರವನ್ನು ತಲುಪುವ ಮೊದಲೇ ಮಂಜವಿ ಖಾನನು ವಿರೋಧಿಗಳ ಮೇಲೆ ಹತೋಟಿ ಪಡೆದಿದ್ದನು. ಮಂಜವಿ ಖಾನನಿಗೆ ಈಗ ರಾಜಕುಮಾರ ಮುರಾದನ ನೆರವಿನ ಅಗತ್ಯವಿರಲಿಲ್ಲ. ಇತ್ತ ಮುರಾದನ ಇಚ್ಛೆಯೂ ಬೇರೆಯೇ ಆಗಿತ್ತು. ಆತನು ಅಹಮದ್‌ನಗರದ ಕೋಟೆಯನ್ನು ತನ್ನ ವಶಕ್ಕೆ ಕೊಡುವ ಬೇಡಿಕೆಯನ್ನು ಮಂಜವಿ ಖಾನನಿಗೆ ತಿಳಿಸಿದನು. ತಾನು ಮಾಡಿದ ಕೆಲಸದ ಬಗ್ಗೆ ಮಂಜವಿ ಖಾನನಿಗೆ ಪಶ್ಚಾತ್ತಾಪವಾಯಿತು. ರಾಜಕುಮಾರ ಮುರಾದನನ್ನು ಅಹಮದ್‌ನಗರಕ್ಕೆ ಆಮಂತ್ರಣ ನೀಡಿದುದಕ್ಕೆ ಖೇದವಾಯಿತು. ಮಂಜವಿ ಖಾನನು ಕೋಟೆಯಲ್ಲಿ ಆಹಾರ ಧಾನ್ಯ ಮತ್ತಿತರ ಅವಶ್ಯಕ ವಸ್ತುಗಳನ್ನು ಸಂಗ್ರಹಿಸಿಕೊಳ್ಳುವ ವ್ಯವಸ್ಥೆ ಮಾಡಿದನು. ತನ್ನ ವಿಶ್ವಾಸಿಕ ಸರದಾರ ಅನಸಾರಖಾನನನ್ನು ಈ ಕೆಲಸದ ಮೇಲ್ವಿಚಾರಣೆಗೆ ನಿಯಮಿಸಿ, ಅಹಮದ್‌ಶಾಹ ಮತ್ತು ಎಂಟು ಸಾವಿರ ಕುದುರೆ ಸವಾರರೊಡನೆ ಸ್ವತಃ ಬೀಡದತ್ತ ತೆರಳಿದನು.

ಅಹಮದ್‌ನಗರದ ಸರದಾರರ ವಿರೋಧ :

ಪ್ರಸ್ತುತ ಸಂದರ್ಭದಲ್ಲಿ, ತನ್ನ ಸೈನ್ಯದ ಬಲವನ್ನು ಹೆಚ್ಚಿಸುವುದು ಹಾಗೂ ಇಬ್ರಾಹಿಮ ಆದಿಲ್‌ಶಾಹನಿಂದ ನೆರವು ಪಡೆಯುವುದು ಮಂಜವೀ ಖಾನನ ಉದ್ದೇಶವಾಗಿತ್ತು. ಅಷ್ಟರಲ್ಲಿ ಮೊಘಲರು ಅಹಮದ್‌ನಗರದ ಕೋಟೆಗೆ ಮುತ್ತಿಗೆ ಹಾಕಿರುವ ಹಾಗೂ ಚಾಂದಬೀಬೀ ಶತ್ರುಗಳನ್ನು ಪ್ರತಿಬಂಧಿಸುತ್ತಿರುವ ಸಮಾಚಾರ ದೊರೆಯಿತು. ಮಂಜವಿಯು ಸೈನ್ಯವನ್ನು ಸಂಘಟಿಸುವ ಪ್ರಯತ್ನ ಮಾಡಿದರೂ ಸಾಧ್ಯವಾಗಲಿಲ್ಲ. ಏಕೆಂದರೆ, ಅಹಮದ್‌ಮಗರದ ಸರದಾರರು ಮೂರು ಬಣಗಳಾಗಿ ಒಡೆದು ಹೋಗಿದ್ದವು. ಮೊದಲನೆಯ ಬಣವು ಅಹಂಗ ಖಾನ ಹಬಶಿಯದಾಗಿತ್ತು. ಆತನು ಬುರ್ಹಾನ ನಿಜಾಮ ಶಾಹನ ಮಗ ಶಾಹ ಅಲಿಯನ್ನು ಅರಸನನ್ನಾಗಿ ಮಾಡಿದ್ದನು. ಎರಡನೆಯ ಬಣವು ಅಖ್ಲಾಸ ಖಾನ ಹಬಶಿಯದಾಗಿತ್ತು. ಆತನು ಮೋತಿ ಎಂಬ ವ್ಯಕ್ತಿಯೊಬ್ಬನ ಹೆಸರಿನಲ್ಲಿ ರಾಜಮುದ್ರೆಯನ್ನು ಜಾರಿಗೊಳಿಸಿದ್ದನು. ಮೂರನೆಯ ಬಣವು ಮಂಜವಿ ಖಾನನದಾಗಿತ್ತು. ಆತನು ಅಹಮದ್ ಶಾಹನ ಹೆಸರಿನಲ್ಲಿ ಖುತ್ಬಾ ಮತ್ತು ಮುದ್ರೆಯನ್ನು ಜಾರಿಗೊಳಿಸಿದ್ದನು.

ಮೊಘಲರು ಅಹಮದ್‌ನಗರಕ್ಕೆ ಬಂದ ನಂತರ, ವಿವಿಧ ಬಣಗಳ ಪ್ರತಿಯೊಬ್ಬರ ಇಚ್ಛೆಯು ಮುತ್ತಿಗೆಯಿಂದ ಮುಕ್ತವಾಗುವುದು ಮತ್ತು ತಮ್ಮ ವಿರೋಧಿಗಳಿಗೆ ಹಾನಿಯುಂಟು ಮಾಡುವದಾಗಿತ್ತು. ಒಬ್ಬ ವ್ಯಕ್ತಿಯನ್ನು ಇಡೀ ರಾಜ್ಯದ ಬಾದಶಹನನ್ನಾಗಿ ಮಾಡಿದ ನಂತರ ಮೊಘಲರೊಡನೆ ಕದನ ಮಾಡುವದನ್ನು ಎಲ್ಲರೂ ಬಯಸುತ್ತಿದ್ದರು. ಆದರೆ, ಈ ವಿಧಾನವು ಬಹಳ ಹಾನಿಕಾರಕವಾಗಿತ್ತು. ಏಕೆಂದರೆ, ಇದಕ್ಕೆ ಮೊದಲನೆಯ ಕಾರಣ ಈ ವಿಧಾನವನ್ನು ಕಾರ್ಯಗತ ಮಾಡಲು ಬಹಳ ಸಮಯ ತಗಲುತ್ತಿತ್ತು. ಎರಡನೆಯ ಸಂಶಯವೆಂದರೆ, ಇದನ್ನೊಪ್ಪದ ತಂಡವು ಮೊಘಲರೊಡನೆ ಸೇರಿಕೊಳ್ಳುವದು. ಕೊನೆಗೆ ಇಡೀ ರಾಜ್ಯವು ಮೊಘಲರ ವಶವಾಗುವದು.

ಪರಸ್ಪರ ವಿರೋಧಕ್ಕೆ ಕೊನೆ :

ಮೂರೂ ಬಣದ ಸರದಾರರಿಗೆ ಇಬ್ರಾಹಿಮ್ ಆದಿಲಶಾಹ ಸಾನಿಯು, "ನಿಮ್ಮಲ್ಲಿಯ ಪರಸ್ಪರ ವಿರೋಧವನ್ನು ಮತ್ತು ಅಭಿಪ್ರಾಯಭೇದವನ್ನು ತೊರೆದು ಶತ್ರುಗಳನ್ನು ಒಗ್ಗಟ್ಟಿನಿಂದ ಎದುರಿಸುವುದು ಒಳ್ಳೆಯದು. ಅನಂತರ, ಆಡಳಿತವನ್ನು ಸಮರ್ಥವಾಗಿ ನಿರ್ವಹಿಸುವ ವ್ಯಕ್ತಿಗೆ ಪ್ರಭುತ್ವವನ್ನು ಕೊಡಲಾಗುವದು" ಎಂಬ ಸಂದೇಶವನ್ನು ಕಳುಹಿಸಿದನು. ಸರದಾರರು ಇಬ್ರಾಹಿಮ್ ಆದಿಲಶಾಹ ಸಾನಿಯ ಸಲಹೆಯು ಸಮಂಜಸವಾದುದೆಂದು ಅರಿತುಕೊಂಡರು. ತಮ್ಮ ಅಂತಃಕಲಹ ಕೊನೆಗಾಣಿಸಿ, ಶತ್ರುಗಳನ್ನು ಸದೆ ಬಡೆಯುವ ಉಪಾಯ ಮಾಡತೊಡಗಿದರು.

ನಿಜಾಮ ಶಾಹಿ ಸರದಾರರ ರಕ್ಷಣೆ :

ಮಿಯಾ ಮಂಜವಿಯು ತನ್ನ ಮಕ್ಕಳಾದ ಮಿಯಾ ಹುಸೇನ ಮತ್ತು ಮುರ್ತುಜಾ ಖಾನ ಅಂಜು ಇವರನ್ನು ನೆರವಿನ ಕೋರಿಕೆಯೊಂದಿಗೆ ಇಬ್ರಾಹಿಮ್ ಆದಿಲಶಾಹ ಸಾನಿಯ ಸನ್ನಿಧಿಗೆ ಕಳುಹಿಸಿಕೊಟ್ಟನು. ಈ ದೂತರು ಬಾದಶಹನೆದುರು ಹಾಜರಾದ ತಕ್ಷಣವೇ ಇಬ್ರಾಹಿಮನು ಸೈನ್ಯವನ್ನು ಕಳುಹಿಸಲು ಆಜ್ಞೆಯಿತ್ತನು. ಚಾಂದಬೀಬೀಯು ಸಹ ಇದೇ ವೇಳೆಗೆ ಇಬ್ರಾಹಿಮನಿಗೆ ನೆರವು ಕೋರಿ ಮನವಿಯನ್ನು ಕಳುಹಿಸಿದ್ದಳು. ಶಾಹ ನವಾಜ ಖಾನನು ಚಾಂದಬೀಬೀಯ ಮನವಿ ಪತ್ರವನ್ನು ಬಾದಶಹನ ಅವಗಾಹನೆಗೆ ಸಲ್ಲಿಸಿದನು. ಬಾದಶಹನು ನೆರೆಯ ರಾಜ್ಯ ಹಾಗೂ ಬಂಧುತ್ವದ ಶಿಷ್ಟತೆಯನ್ನು ಪಾಲಿಸಿ, ಸುಹೇಲ ಖಾನ ಖ್ವಾಜಾಸರಾನೊಡನೆ ಇಪ್ಪತ್ತು ಸಾವಿರ ಸೈನಿಕರನ್ನು ನಿಜಾಮಶಾಹಿಗಳ ನೆರವಿಗೆ ಕಳುಹಿಸಿಕೊಟ್ಟನು.

ದಕ್ಷಿಣದ ಸೈನ್ಯದಲ್ಲಿ ಒಗ್ಗಟ್ಟು :

ಇಬ್ರಾಹಿಮ್ ಆದಿಲಶಾಹ ಸಾನಿಯು ನಿಜಾಮಶಾಹಿ ಸರದಾರರಾದ ಮಂಜವಿ ಖಾನ, ಅಖ್ಲಾಸ ಖಾನ ಮತ್ತಿತರರಿಗೆ ತಮ್ಮ ಎಲ್ಲ ಸೈನ್ಯದೊಡನೆ ಶಾಹದುರ್ಗದಲ್ಲಿ ಸುಹೇಲಖಾನನೊಂದಿಗೆ ಸೇರಿಕೊಳ್ಳಲು ಹಾಗೂ ಎಲ್ಲರೂ ಸೇರಿ ಶತ್ರುಗಳನ್ನು ಎದುರಿಸಲು ಸಲಹೆ ಮಾಡಿದನು. ನಿಜಾಮಶಾಹಿ ಸರದಾರರು ಇಬ್ರಾಹಿಮನ ಸಲಹೆಯನ್ನು ಕಾರ್ಯಗತಗೊಳಿಸಿ, ಸುಹೇಲ ಖಾನನ ಜೊತೆಗೆ ಬಲಶಾಲಿಯಾದ ಸೈನ್ಯವನ್ನು ಸಂಘಟಿಸಿ ಮುಂದುವರಿದರು. ಮಹಮದ್ ಖಲಿ ಖುತುಬ ಶಾಹನು, ಮೆಹದಿ ಖಲಿ ತುರ್ಕಮಾನಿಯ ನೇತೃತ್ವದಲ್ಲಿ ತೆಲಂಗಾಣಾದ ಸೈನ್ಯವನ್ನು ನೆರವಿಗೆ ಕಳುಹಿಸಿಕೊಟ್ಟನು. ಈ ಸೈನ್ಯವೂ ಸುಹೇಲ ಖಾನನ ಸೈನ್ಯದೊಂದಿಗೆ ಸೇರಿಕೊಂಡಿತು.

ಅಕಬರನ ಸರದಾರರ ಸಲಹೆ :

ರಾಜಕುಮಾರ ಮುರಾದನಿಗೆ ಎಲ್ಲ ವರ್ತಮಾನಗಳು ತಿಳಿದು ಬಂದವು. ಆತನು ಅಕಬರನ ಸರದಾರರಾದ ಖಾನ್‌ಖಾನಾ ಮತ್ತು ಮಹಮುದ್ ಸಾದಿಖ ಮತ್ತಿತರರೊಂದಿಗೆ ಚರ್ಚೆ ಮಾಡಿದನು. ಆ ಸರದಾರರು, "ಕೋಟೆಗೆ ಕನ್ನ ಹಾಕುವ ಸಿದ್ಧತೆ ಮಾಡಿ, ಕಂದಕವನ್ನು ಅಗೆದು ಕೋಟೆಯನ್ನು ಗೆಲ್ಲುವದು ಬಹಳ ಕಷ್ಟಕರವಾದುದು. ಏಕೆಂದರೆ, ನಾವು ಕನ್ನ ಹಾಕಿ ಎದುರಿಸಬೇಕಾದ ಪ್ರತಿ ಸಲವೂ ಒಂದು ಹೊಸ ಬುರುಜನ್ನು ಸಿದ್ಧಪಡಿಸುತ್ತಾರೆ. ಇದರಿಂದ ನಮ್ಮ ಶ್ರಮವೆಲ್ಲ ವ್ಯರ್ಥವಾಗಿಬಿಡುತ್ತದೆ. ದಕ್ಷಿಣದ ಸೈನ್ಯವು ಇಲ್ಲಿಗೆ ಬರುವುದಕ್ಕಿಂತ ಮೊದಲು ಈ ಕೋಟೆಯ ಮೇಲೆ ವಿಜಯ ಸಾಧಿಸುವ ಉಪಾಯವನ್ನು ನಾವು ಮಾಡಬೇಕು" ಎಂದು ಹೇಳಿದರು. ಎಲ್ಲ ಸರದಾರರು ಬಹಳ ಸಮಯದವರೆಗೆ ಚಿಂತನೆ ಮಾಡಿದರು. ಅಂತಿಮವಾಗಿ, ಸುರಂಗ ಕೊರೆಯುವುದನ್ನುಳಿದು ಬೇರಾವ ಉಪಾಯದಿಂದಲೂ

ಕೋಟೆಯನ್ನು ವಶಪಡಿಸಿಕೊಳ್ಳಲಾಗುವುದಿಲ್ಲ ಎಂಬ ನಿಲುವು ತಾಳಿದರು. ರಾಜಕುಮಾರ ಮುರಾದನಿಗೆ ಸರದಾರರ ಈ ಸಲಹೆಯು ಒಪ್ಪಿಗೆಯಾಯಿತು.

ಸುರಂಗ ಕೊರೆಯುವ ಸಿದ್ಧತೆ:

ಸರದಾರರ ಸಲಹೆಯು ಕಾರ್ಯಗತವಾಗತೊಡಗಿತು. ಕೋಟೆಯಲ್ಲಿರುವವರಿಗೆ ಈ ವಿಷಯ ತಿಳಿದಿರಲೆಂದು ಕೋಟೆಯೊಳಗೆ ಬರುವ ಮತ್ತು ಹೋಗುವ ಮಾರ್ಗವನ್ನು ಮುಚ್ಚಲಾಯಿತು ಹಾಗೂ ಸುರಂಗ ಕೊರೆಯುವ ಕೆಲಸ ಜಾಗರೂಕತೆಯಿಂದ ಆರಂಭ ಮಾಡಲಾಯಿತು. ರಾಜಕುಮಾರ ಮುರಾದನು ಮೋರಚಲದೆಡೆಯಿಂದ ಕೋಟೆಯ ಗೋಡೆಯ ಮೇಲೆ ಐದು ಸ್ಥಳಗಳಲ್ಲಿ ರಂಧ್ರಗಳನ್ನು ಕೊರೆಯಿಸಿದನು. ರಜಬ್ ತಿಂಗಳ ಮೊದಲ ದಿನದಂದು ಸುರಂಗ ಕೊರೆಯುವ ಕೆಲಸ ಮುಗಿದು ಅವುಗಳಲ್ಲಿ ಸಿಡಿಮದ್ದನ್ನಿಟ್ಟು, ಕಲ್ಲು ಮತ್ತು ಸುಣ್ಣದಿಂದ ಅವುಗಳನ್ನು ಭದ್ರಪಡಿಸಲಾಯಿತು. ಮಾರನೆಯ ದಿನ ಶುಕ್ರವಾರದ ನಮಾಜಿನ ನಂತರ ಸುರಂಗಗಳಲ್ಲಿ ಬೆಂಕಿಯಿಟ್ಟು ಬುರುಜುಗಳನ್ನು ಹಾರಿಸಿಬಿಡಬೇಕೆಂದು ಅವರು ಯೋಚಿಸಿದ್ದರು.

ರಾಜಕುಮಾರನ ಸೇನೆಯಲ್ಲಿ ಖ್ವಾಜಾ ಮಹಮದ್ ಖಾನ ಶಿರಾಜಿಯು ಸಹ ಇದ್ದನು. ಆತನು ಸುರಂಗ ಕೊರೆಯುವ ಸಿದ್ಧತೆಯ ಬಗ್ಗೆ ಕೋಟೆಯೊಳಗಿರುವವರಿಗೆ ರಹಸ್ಯವಾಗಿ ತಿಳಿಸಿದ್ದನು. ಕೋಟೆಯೊಳಗಿರುವವರಿಗೆ ಈ ವಿಚಾರ ತಿಳಿದು ಸಂತೋಷವಾಯಿತು. ಅವರು ಎರಡು ಸುರಂಗಗಳನ್ನು ಕೂಡಲೇ ಹುಡುಕಿ, ಅವಗಳಲ್ಲಿದ್ದ ಸಿಡಿಮದ್ದನ್ನು ತೆಗೆದುಹಾಕಿದರು. ತದನಂತರ, ಉಳಿದ ಸುರಂಗಗಳನ್ನು ಹುಡುಕತೊಡಗಿದರು. ನಿಗದಿತ ಸಮಯಕ್ಕೆ ಮಹಮದ್ ಸಾದಿಖ ಮತ್ತು ಅಕ್ಬರನ ಇನ್ನಿತರ ಸರದಾರರೊಂದಿಗೆ, ರಾಜಕುಮಾರ ಮುರಾದನು ಖಾನ್‌ಖಾನಾನ ಸಲಹೆ ಪಡೆಯದೆ ಸಿದ್ಧರಾದರು. ಸಿಡಿಮದ್ದಿಗೆ ಬೆಂಕಿ ಹಚ್ಚಿದಾಗ ಕೋಟೆಯ ಗೋಡೆಯಲ್ಲಿ ಬಿರುಕು ಮೂಡಿದೊಡನೆಯೇ ಕೋಟೆಯೊಳಗೆ ಮುನ್ನುಗ್ಗಿ ಕೋಟೆಯನ್ನು ವಶಪಡಿಸಿಕೊಳ್ಳುವುದು ಅವರ ಉದ್ದೇಶವಾಗಿತ್ತು. ಖಾನ್‌ಖಾನಾನಿಂದ ಈ ವಿಷಯುವನ್ನು ರಹಸ್ಯವಾಗಿ ಇಟ್ಟಿರುವ ಕಾರಣವೇನೆಂದರೆ ಕೋಟೆಯನ್ನು ವಶಪಡಿಸಿಕೊಳ್ಳುವುದರಲ್ಲಿ ಆತನ ಪಾತ್ರವೇನೂ ಇಲ್ಲವೆಂಬುದನ್ನು ತೋರಿಸಬೇಕಾಗಿತ್ತು. ಹಾಗೂ ಯಶಸ್ಸಿನ ಕಿರೀಟವು ರಾಜಕುಮಾರ ಮುರಾದ ಹಾಗೂ ಇನ್ನಿತರ ಸರದಾರರ ಮುಕುಟದಲ್ಲಿರಲಿ ಎಂಬುದಾಗಿತ್ತು.

ಮುಂದಿನ ಕತೆಯನ್ನು ಸಂಕ್ಷೇಪವಾಗಿ ಹೇಳಬೇಕೆಂದರೆ, ಕೊರೆದ ಸುರಂಗಗಳಲ್ಲಿ ಬೆಂಕಿ ಹಚ್ಚಲಾಯಿತು. ಸಿಡಿಮದ್ದು ತುಂಬಿದ ಮೂರು ಸುರಂಗಗಳು ಕೂಡಲೇ ಹಾರಿದವು. ಸುಮಾರು ಐವತ್ತು ಗಜ ಗೋಡೆಯು ಸಿಡಿದು ಹೋಯಿತು. ಆದರೆ ಉಳಿದೆರಡು ಸುರಂಗಗಳು ಹಾರಲಿಲ್ಲ. ರಾಜಕುಮಾರ ಮುರಾದ, ಸಾದಿಖ ಇನ್ನಿತರರಿಗೆ

ನಿಜಸಂಗತಿಯ ಅರಿವಿರಲಿಲ್ಲ. ಅವುಗಳಲ್ಲಿಯೂ ಭಾರಿ ಪ್ರಮಾಣದ ಸಿಡಿಮದ್ದು ತುಂಬಿದೆ ಎಂದು ತಿಳಿದುಕೊಂಡಿದ್ದರು. ಅವುಗಳು ಹಾರುವದನ್ನು ಕಾಯುತ್ತಿದ್ದರು. ಅವು ಹಾರಿದ ನಂತರ ಕೋಟೆ ಪ್ರವೇಶಿಸಿ ನಗರವನ್ನು ಕೊಳ್ಳೆ ಹೊಡೆಯುವುದಕ್ಕೆ ಆತುರರಾಗಿದ್ದರು.

ಕೋಟೆಯಲ್ಲಿರುವವರ ಜಾಗರೂಕತೆ :

ರಾಜಕುಮಾರ ಮತ್ತು ಮಹಮದ್ ಸಾದಿಖರ ಸೈನ್ಯದ ದಾರಿ ಕಾಯುವದು ಕೋಟೆಯಲ್ಲಿರುವವರಿಗೆ ಒಂದು ವರವಾಯಿತು. ಅವರಿಗೆ ಒಂದು ಅವಕಾಶ ದೊರೆಯಿತು. ಅವರು ಬಿರುಕುಗಳಲ್ಲಿ ತೋಪುಗಳನ್ನು ಮತ್ತು ಮದ್ದನ್ನು ಇಟ್ಟು ಶತ್ರುಗಳನ್ನು ಎದುರಿಸುವ ವ್ಯವಸ್ಥೆ ಮಾಡಿಕೊಂಡಿದ್ದರು. ಅವರ ಈ ಕೆಲಸದಿಂದ ರಾತ್ರಿಯವರೆಗೆ ಯಾವ ಮೊಘಲ ಸೈನಿಕನೂ ಕೋಟೆಯ ಒಳಗೆ ಪ್ರವೇಶಿಸುವುದು ಸಾಧ್ಯವಾಗಲಿಲ್ಲ. ಕೋಟೆಯಲ್ಲಿರುವವರು, ಒಡೆದ ಗೋಡೆಯನ್ನು ಮತ್ತೆ ಕಟ್ಟುವತ್ತಲೂ ಗಮನ ಹರಿಸಿದರು. ರಾತ್ರಿಯ ಸಮಯದಲ್ಲಿ ಹಿರಿಯರು, ಕಿರಿಯರು ಮತ್ತು ಹೆಂಗಸರು ಸಹ ಗೋಡೆಯನ್ನು ಕಟ್ಟುತ್ತಲೇ ಇದ್ದರು. ಬೆಳಗಾಗುವಷ್ಟರಲ್ಲಿ ಮೂರು ಗಜ ಎತ್ತರದ ಗೋಡೆಯನ್ನು ಕಟ್ಟಿಬಿಟ್ಟರು.

ರಾಜಕುಮಾರ ಮುರಾದ ಮತ್ತು ಮಹಮದ್ ಸಾದಿಖರು ಕೋಟೆಯನ್ನು ಶೀಘ್ರವೇ ತಮ್ಮ ವಶ ಮಾಡಿಕೊಂಡು ಜಯಗಳಿಸಿಬಿಡುತ್ತೇವೆ ಎಂದುಕೊಂಡಿದ್ದರು. ಆದರೆ ಅಲ್ಲಿಯ ಪರಿಸ್ಥಿತಿಯನ್ನು ನೋಡಿದ ಮೇಲೆ ಹತಾಶರಾದರು. ಅದೇ ಸಮಯಕ್ಕೆ ಸುಹೇಲ ಖಾನನು ದಕ್ಷಿಣದ ಸೈನ್ಯದೊಡನೆ ಅಹಮದ್‌ನಗರದತ್ತ ತೆರಳಿದನು. ರಾಜಕುಮಾರನ ಸೈನ್ಯದಲ್ಲಿ ಕ್ಷಾಮವು ಉಂಟಾಯಿತು. ರಾಜಕುಮಾರನು ಯುದ್ಧದ ವಿಚಾರ ತ್ಯಜಿಸಿ, ಖಾನ್‌ಖಾನಾನಲ್ಲಿ ಸಲಹೆ ಕೇಳಿದನು. ರಾಜಕುಮಾರನು ಈ ಮೊದಲು ತನ್ನನ್ನು ಕೇಳದೆ ಇದ್ದುದು ಖಾನ್‌ಖಾನಾನಿಗೆ ಗೊತ್ತಿತ್ತು. ಆದುದರಿಂದ ಆತನು ಮಹಮದ್ ಸಾದಿಖನತ್ತ ಸನ್ನೆ ಮಾಡಿ, "ಹುಜೂರರ ಸಾಮೀಪ್ಯದಲ್ಲಿರುವ ಸರದಾರರು ನೀಡುವ ಸಲಹೆ ಅತ್ಯಂತ ಸಮಂಜಸವಾಗಿರುತ್ತದೆ" ಎಂದು ಹೇಳಿದನು.

ಖಾನ್‌ಖಾನಾನ ಸಲಹೆ :

ಈ ಉತ್ತರ ಕೇಳಿ ಎಲ್ಲರೂ ಲಜ್ಜಿತರಾದರು. ಮಹಮದ್ ಸಾದಿಖನು ಖಾನ್‌ಖಾನಾನ ಕ್ಷಮೆ ಬೇಡಿದನು. ಸಾಮ್ರಾಟ ಅಕ್ಬರನ ಹಿತಚಿಂತಕನಾದ ಖಾನ್‌ಖಾನಾನು, "ದಕ್ಷಿಣದ ಅರಸರ ಕಡೆಯಿಂದ ಸೈನ್ಯವು ಬಹಳ ವೇಗವಾಗಿ ಇತ್ತ ಬರುತ್ತಲಿದೆ. ನಮ್ಮ ಸೈನ್ಯದಲ್ಲಿ ಆಹಾರ ಧಾನ್ಯಗಳ ಕೊರತೆ ಇದೆ. ಇದರಿಂದಾಗಿ ಎಲ್ಲ ಸೈನಿಕರ ಮತ್ತು ಪ್ರಾಣಿಗಳ ಸ್ಥಿತಿಯು ಗಂಭೀರವಾಗಿದೆ. ಈ ಪರಿಸ್ಥಿತಿಯಲ್ಲಿ ಯುದ್ಧ ಮಾಡುವದು ಸರಿಯಲ್ಲ. ಈ ಸ್ಥಳವನ್ನು ಬಿಟ್ಟು ಹೊರಡುವದು ಮತ್ತು ಬೆರಾರದಲ್ಲಿ

ತಂಗಬೇಕೆನ್ನುವುದು ನನ್ನ ಅಭಿಪ್ರಾಯವಾಗಿದೆ. ಎಲ್ಲಕ್ಕೂ ಮೊದಲು ನಾವು ಬೆರಾರ ಮತ್ತು ಅದರ ಸುತ್ತಲಿನ ಪ್ರದೇಶವನ್ನು ಗೆಲ್ಲಬೇಕು. ನಮ್ಮ ಉದ್ದೇಶವು ಸಫಲವಾದಲ್ಲಿ ಬೆರಾರದ ಪ್ರಜೆಗಳು ಸಂಪೂರ್ಣ ನಮ್ಮ ಆಜ್ಞಾಪಾಲನೆ ಮಾಡುವವರನ್ನಾಗಿ ಪರಿವರ್ತಿಸಬೇಕು. ಇದಾದ ತರುವಾಯ ಅಹಮದ್‌ನಗರದತ್ತ ಗಮನ ಹರಿಸಬೇಕು. ಖಂಡಿತವಾಗಿಯೂ ಆಗ ಅಹಮದ್‌ನಗರದ ಕೋಟೆ ಗೆಲ್ಲಬಹುದು." ಎಂದು ಹೇಳಿದನು.

ಆಹಾರ ಧಾನ್ಯ ಮತ್ತಿತರ ಅವಶ್ಯಕ ಸಾಮಗ್ರಿಗಳ ಕೊರತೆಯಿಂದ ರಾಜಕುಮಾರ ಮುರಾದ ಮತ್ತು ಇತರ ಸರದಾರರು ಚಿಂತಿತರಾಗಿದ್ದರು. ಅವರಿಗೆ ಖಾನ್‌ಖಾನಾನ ಸಲಹೆ ಯೋಗ್ಯವೆನಿಸಿತು. ಅವರು ಖಾನ್‌ಖಾನಾನನ್ನು ತಮ್ಮ ಮಾರ್ಗದರ್ಶಕನಾಗಿ ಮಾಡಿಕೊಂಡರು. ಖಾನ್‌ಖಾನಾ ಮತ್ತು ಸಯ್ಯದ್ ಮುರ್ತುಜಾಖಾನ ಸಬ್ದವಾರಿ ಇವರು ಇಂತಹ ಹಲವಾರು ಉಪಾಯಗಳನ್ನು ಮಾಡಿದುದರಿಂದ, ಕೊನೆಗೆ ಸ್ವತಃ ಚಾಂದಬೀಬೀ ಸಂಧಾನದ ಸಂದೇಶವನ್ನು ಕಳುಹಿಸಿದಳು.

ಸಂಧಾನ :

ಈ ಕತೆಯನ್ನು ಸಂಕ್ಷಿಪ್ತವಾಗಿ ಹೇಳಬೇಕೆಂದರೆ, ರಾಜಕುಮಾರ ಮುರಾದನ ಸೈನ್ಯ ಮತ್ತು ಕಿಲ್ಲೆಯಲ್ಲಿದ್ದವರು, ಎರಡೂ ಕಡೆಯಿಂದ ಕೆಲವರು ಮಧ್ಯಸ್ತಿಕೆ ಮಾಡಿದರು. ಉಭಯಪಕ್ಷಗಳಲ್ಲಿ ಷರತ್ತುಬದ್ಧ ಒಪ್ಪಂದವಾಯಿತು. ಷರತ್ತು ಹೀಗಿತ್ತು." ತುಘಾಲಖಾನನ ವಶದಲ್ಲಿದ್ದ ಬೆರಾರದ ಭಾಗವನ್ನು ರಾಜಕುಮಾರ ಮುರಾದನ ವಶಕ್ಕೆ ಒಪ್ಪಿಸಬೇಕು ಹಾಗೂ ಉಳಿದೆಲ್ಲ ಭಾಗವನ್ನು (ಅಂದರೆ ಹೋರ ಕಿಲ್ಲೆಯಿಂದ ಚವೀಲ ಬಂದರಿನವರೆಗೆ ಮತ್ತು ಪರಿಂದಾದಿಂದ ದೌಲತಾಬಾದ ಮತ್ತು ಗುಜರಾತ ಸರಹದ್ದಿನ ವರೆಗೆ) ಅಹಮದ್‌ನಗರದ ಅರಸನ ವಶಕ್ಕೆ ವಹಿಸಬೇಕು."

ಈ ಒಪ್ಪಂದವನ್ನು ಯಥಾವತ್ತಾಗಿ ಪಾಲಿಸುವ ಬಗ್ಗೆ ಆಣೆ-ಭಾಷೆಗಳನ್ನು ಮಾಡಲಾಯಿತು. ಪ್ರಮಾಣ ಮಾಡಲಾಯಿತು. ಕರಾರು ಪತ್ರದ ಮೇಲೆ ನಗರದ ಗಣ್ಯರು ಮತ್ತು ಅಕ್ಬರನ ಸರದಾರರು ತಮ್ಮ ತಮ್ಮ ಮೊಹರು ಹಾಕಿದರು.

ಹಬಶಿ ಮತ್ತು ದಖನಿ ಸರದಾರರ ಪ್ರತ್ಯೇಕವಾಗುವಿಕೆ :

ಈ ಸಂದರ್ಭದಲ್ಲಿ ಸುಹೇಲ ಖಾನನು ತನ್ನ ಸೈನ್ಯದೊಡನೆ ಅಹಮದ್‌ನಗರದಿಂದ ಆರು ಹರದಾರಿ ದೂರದಲ್ಲಿದ್ದನು. ಸುಹೇಲನಿಗೆ ಮೊಘಲ ಸೈನ್ಯ ಮತ್ತು ಕೋಟೆಯಲ್ಲಿರುವವರಲ್ಲಿ ಸಂಧಾನವಾಗಿರುವ ವಿಷಯವನ್ನು ತಿಳಿದಾಗ, ದಖನಿ ಮತ್ತು ಹಬಶಿ ಸರದಾರರು ಮಿಯಾ ಮಂಜು ಮತ್ತು ಅಹಮದ್‌ಶಾಹರಿಂದ ಪ್ರತ್ಯೇಕವಾಗುವುದನ್ನು ಆಯ್ಕೆ ಮಾಡಿಕೊಂಡರು. ಹಾಗೂ ಅಹಮದ್‌ನಗರದತ್ತ

ಹೊರಟು ಹೋದರು. ಅವರು ಅಹಮದ್‌ನಗರವನ್ನು ತಲುಪಿ, ಚಾಂದಬೀಬೀ ಸುಲ್ತಾನಾಳ ಸಲಹೆ ಮತ್ತು ಉಪದೇಶದಂತೆ ಬಹಾದೂರ ಶಾಹನನ್ನು ತಮ್ಮ ಬಾದಶಹನೆಂದು ಮನ್ನಿಸಿದರು. ಬಾದಶಹನ ವಯಸ್ಸು ಆಗ ಮೂರು ಅಥವಾ ನಾಲ್ಕು ವರ್ಷ ಇತ್ತು. ಇದಾದ ಕೆಲವು ದಿನಗಳ ನಂತರ ಸುಹೇಲ ಖಾನನು ಮಿಯಾ ಮಂಜು ಹಾಗೂ ಅಹಮದ್‌ಶಾಹರನ್ನು ಜೊತೆಗೆ ಕರೆದುಕೊಂಡು ಬಿಜಾಪುರದತ್ತ ತೆರಳಿದನು.

■

II. ಅಹ್ಮದ್ ನಗರ ನಿಜಾಮಶಾಹಿ

*

೧. ಅಹ್ಮದ್ ನಿಜಾಮ್‌ಶಾಹ್

ಮಲಿಕ್ ನಾಯಿಬ್‌ನ ಪೂರ್ವಜರು :

ಇತಿಹಾಸಕಾರರ ಉಲ್ಲೇಖದಂತೆ ಅಹ್ಮದ್‌ಶಾಹ ಬಹರಿಯು ಮಲಿಕ್ ನಾಯಿಬ್ ನಿಜಾಮುಲ್ ಮುಲ್ಕ್ ಬಹರಿಯ ಮಗನಾಗಿದ್ದಾನೆ. ಈ ಕುಟುಂಬದ ಮೂಲಪುರುಷ ಬೇಜಾನಗರದ ಒಬ್ಬ ಬ್ರಾಹ್ಮಣನಾಗಿದ್ದನು. ಅವನ ಹೆಸರು ತಿಮ್ಮಾ ಬಹತ್ ಹಾಗೂ ಅವನ ತಂದೆಯ ಹೆಸರು ಭರ್ ಎಂದಿತ್ತು. ತಿಮ್ಮಾ ಬಹತ್ ಅಹ್ಮದ್‌ಷಾಹ್ ಬಹಮನಿಯ ಆಡಳಿತದಲ್ಲಿ ಮುಸಲ್ಮಾನರಿಂದ ಬಂಧಿಸಲ್ಪಟ್ಟನು. ಹಾಗೂ ಅವನು ಮತಾಂತರ ಹೊಂದಿ ಮುಸಲ್ಮಾನನಾಗಿ ತನ್ನ ಹೆಸರನ್ನು 'ಮಲಿಕ್ ಹಸನ್' ಎಂದು ಇಟ್ಟು ಕೊಂಡನು. ಮಲಿಕ್ ಹಸನ್‌ನು ತನ್ನ ವೈಯಕ್ತಿಕ ಪ್ರತಿಭೆಯಿಂದ ರಾಜನ ನಂಬಿಗಸ್ಥ ಸೇವಕರಲ್ಲಿ ಸೇರಿಕೊಂಡನು. ಸುಲ್ತಾನ್ ಅಹ್ಮದ್ ಷಾಹನು 'ಮಲಿಕ್ ಹಸನ್' ನು ಬಹಳೇ ಬುದ್ಧಿವಂತನೂ ಹಾಗೂ ಪ್ರತಿಭಾವಂತನೂ, ಮೇಧಾವಿಯೂ ಇರುವನೆಂದು ಕಂಡುಕೊಂಡನು. ಹಾಗೂ ಹಿಂದಿ ಭಾಷೆಯಲ್ಲಿ ಪ್ರಭುತ್ವ ಸಾಧಿಸಿದ ಪಂಡಿತನೆಂದೂ ಗುರುತಿಸಿದನು. ಈ ಕಾರಣಕ್ಕೆ ಈ ಸೇವಕನಿಗೆ ತನ್ನ ಮಗನಾದ ಮಹ್ಮದ್‌ಶಾಹ್‌ನನ್ನು ಶಿಕ್ಷಣ ಪೂರೈಸಲು ಒಪ್ಪಿಸಿದನು.

ಮಲಿಕ್ ಹಸನ್ ಬಹ್ರಿ :

ಅಹ್ಮದ್ ಶಾಹನ ಮಗನಾದ ಮುಹಮ್ಮದ್ ಶಾಹನೊಂದಿಗೆ ಮಲಿಕ್ ಹಸನ್‌ನು ವಿದ್ಯಾರ್ಜನೆಗೆ ಹೋಗತೊಡಗಿದನು ಹಾಗೂ ಅಲ್ಪ ಅವಧಿಯಲ್ಲಿಯೇ ಫಾರ್ಸಿ ಭಾಷೆಯಲ್ಲಿ ಪತ್ರ ವ್ಯವಹಾರ ಮಾಡುವಲ್ಲಿ ಪರಿಣಿತನಾಗಿ, ಮಲಿಕ್ ಹಸನ್ ಬರ್ಲೂ ಎಂಬ ಹೆಸರಿನಿಂದ ಖ್ಯಾತನಾದನು. ಬಾಲ್ಯದಲ್ಲಿ ಮಲಿಕ್ ಹಸನ್‌ನಿಗೆ ಸುಲ್ತಾನ್ ಮುಹಮ್ಮದ್ ಷಾಹ್‌ನು ಬರ್ಲೂವಿನ ಬದಲಾಗಿ ಬಹ್ರಿ ಎನ್ನುತ್ತಿದ್ದನು. ಮುಂದೆ ಇದೇ ಬಿರುದಾಗಿ ಎಲ್ಲೆಡೆಯೂ ಪ್ರಸಿದ್ಧಿಗೊಂಡಿತು.

ಅಧಿಕಾರದಲ್ಲಿ ಉನ್ನತಿ :

ಮುಹಮ್ಮದ್ ಶಾಹನು ತನ್ನ ಆಡಳಿತ ಅವಧಿಯಲ್ಲಿ ಮಲಿಕ್ ಹಸನ್‌ನ ಮೇಲೆ ಬಹಳೇ ಕೃಪೆದೋರಿದನು. ಹಾಗೂ ಅವನನ್ನು ತನ್ನ ಸಮೀಪದ ವಿಶ್ವಾಸದ ಸಂಗಾತಿಗಳಲ್ಲಿ ಸೇರಿಸಿಕೊಂಡನು. ಹಾಗೂ ಅವನಿಗೆ ಖೌಸ್ ವ ಬೇಗಿ ಎಂಬ ಪದವಿ ದಯಪಾಲಿಸಿದನು. (ಬೇಟೆಯಾಡುವ ಪ್ರಾಣಿಗಳ ಮೇಲೆ ಅಧಿಕಾರಿಯಾಗಿ ನೇಮಿಸಿದನು). ಕ್ರಮೇಣವಾಗಿ ಮಲಿಕ್ ಹಸನ್‌ನ ಅಧಿಕಾರ ಹಾಗೂ ಸ್ಥಾನಮಾನಗಳಲ್ಲಿ ಉನ್ನತಿಯಾಗುತ್ತಾ ಹೋಯಿತು. ಎಲ್ಲಿಯವರೆಗೆ ಎಂದರೆ ಮುಂದೆ ಅವನು 'ಅಶ್ರಫ್ ಹಿಮಾಯೂನ ನಿಜಾಮುಲ್ ಮುಲ್ಕ್' ಎಂಬ ಪದವಿಯಿಂದ ಗೌರವಿಸಲ್ಪಟ್ಟನು.

ತೆಲಂಗಾಣದ ತರಫ್‌ದಾರ :

ಖ್ವಾಜಾ ಜಹಾನ ಕಾವಾ ಕೂಡ ಮಲಿಕ್ ಹಸನ್‌ನ ಮೇಲೆ ಬಹಳೇ ಕೃಪಾದೃಷ್ಟಿ ಹರಿಸಿದನು ಹಾಗೂ ಅವನನ್ನು ತೆಲಂಗಾಣದ ತರಫ್‌ದಾರನನ್ನಾಗಿ ಮಾಡಿದನು. ರಾಜಮಂದ್ರಿ ಹಾಗೂ ಕುಂದಬಾರ್ ಪಟ್ಟಣಗಳನ್ನು ಅವನ ಜಾಗೀರಿಯಲ್ಲಿ ಸೇರಿಸಿದನು. ಈ ಅಧಿಕಾರದ ಪರಿಣಾಮ ಇದಾಯಿತು. ಮಲಿಕ್ ಹಸನ್‌ನು ತೆಲಂಗಾಣದ ಆಡಳಿತ ಹಾಗೂ ಆರ್ಥಿಕ ವ್ಯವಸ್ಥೆಯ ಮೇಲೆ ಹಿಡಿತ ಸಾಧಿಸಿದನು. ಖ್ವಾಜಾಜಹಾನ ಕೊಲೆಯಾದ ನಂತರ ಮಲಿಕ್ ಹಸನ್‌ನು ಆತನ ಉತ್ತರಾಧೀಕಾರಿಯಾದನು. ಹಾಗೂ ಅವನಿಗೆ 'ಮಲಿಕ್ ನಾಯಬ್' ಎಂಬ ಬಿರುದು ನೀಡಿ ಸೇನಾಪತಿಯನ್ನಾಗಿ ಮಾಡಲಾಯಿತು.

ಮಲಿಕ್ ಅಹ್ಮದ್‌ನ ನಿಯುಕ್ತಿ :

ಸುಲ್ತಾನ್ ಮಹ್ಮದ್ ಶಾಹನ ಮೃತ್ಯುವಿನ ನಂತರ ಅವನ ಉಯಿಲಿನ ಪ್ರಕಾರ ಮುಹಮ್ಮದ್ ಶಾಹನ ಪುತ್ರನಾದ ಮಹಮೂದ್ ಶಾಹನು ಮಲಿಕ್ ಹಸನ್‌ನಿಗೆ ಪ್ರಧಾನ ಮಂತ್ರಿಯ ಗೌರವದ ಹುದ್ದೆ ನೀಡಿ ನಿಯುಕ್ತಿ ಮಾಡಿದನು. ಮಲಿಕ್ ಹಸನನು ದೌಲತಾಬಾದ್‌ದ ಅಡಿಯಲ್ಲಿ ಬರುವ ಪರಗಣಗಳಾದ ಭೀಡ್, ಇತ್ಯಾದಿಗಳನ್ನು ಜೆನಿರ್ ಪಟ್ಟಣದಲ್ಲಿ ಸೇರಿಸಿದನು. ಹಾಗೂ ಈ ಪರಗಣಗಳನ್ನು ತನ್ನ ಮಗ ಮಲಿಕ್ ಅಹಮದ್‌ನಿಗೆ ಒಪ್ಪಿಸಿದನು. ಹಸನ್‌ನು ಖ್ವಾಜಾ ಜಹಾನ ದಖನಿಯ ಸಲಹೆಯ ಮೇರೆಗೆ ಈಗಾಗಲೇ ಉಲ್ಲೇಖಿಸಿರುವಂತೆ ಮಲಿಕ್ ಅಹ್ಮದ್‌ನಿಗೆ ಜನೀರ್‌ನ ಕಡೆಗೆ ಕಳುಹಿಸಿದನು. ಅಹ್ಮದ್‌ನು ಅಲ್ಲಿ ವಾಸಿಸಿ ಆಡಳಿತದ ಚುಕ್ಕಾಣಿ ಹಿಡಿದು ರಾಜಕೀಯ ಸಮಸ್ಯೆಗಳನ್ನು ಬಗೆಹರಿಸತೊಡಗಿದನು.

ಮರಾಠಿಗರ ಅವಿಧೇಯತೆ :

ಮಲಿಕ್ ಹಸನ್‌ನು ಮರಾಠರಿಗೆ ಈ ವಿಷಯದಲ್ಲಿ ಅನೇಕ ಬಾರಿ ಪತ್ರ

ವ್ಯವಹಾರವನ್ನು ಮಾಡಿ, ಭೀಡ್ ಹಾಗೂ ಜುನಾದ ಕೋಟೆಗಳನ್ನು ಮಲಿಕ್ ಅಹ್ಮದ್‌ನಿಗೆ ಒಪ್ಪಿಸಬೇಕು ಎಂದು ಆದೇಶಿಸಿದನು. ಆದರೆ ಮರಾಠರ ಒಂದು ತಂಡವು (ಯಾರ ಮೇಲೆ ವಿಶ್ವಾಸವಿಟ್ಟು ಖ್ವಾಜಾ ಜಹಾನ ಆ ಕೋಟೆಗಳನ್ನು ಅವರಿಗೆ ಒಪ್ಪಿಸಿದ್ದನು) ಈ ಪತ್ರಗಳ ಆದೇಶವನ್ನು ನಿರಾಕರಿಸಿ ಈ ಉತ್ತರ ಕೊಟ್ಟರು. ಯಾವಾಗಿನವರೆಗೆ ನಮ್ಮ ಬಾದಷಾಹ್‌ನಾದ ಮಹಮೂದ್‌ಶಾಹ ಪ್ರೌಢನಾಗುವುದಿಲ್ಲವೋ ಅಲ್ಲಿಯವರೆಗೆ ನಾವು ಬಾದಶಾಹನಿಗೆ ವಿಧೇಯರಾಗಿ ಉಳಿದು ಈ ಕೋಟೆಗಳನ್ನು ನಮ್ಮ ವಶದಲ್ಲಿ ಇರಿಸಿಕೊಳ್ಳುವೆವು ಹಾಗೂ ಯಾವಾಗ ದೊರೆಯು ಪ್ರಬುದ್ಧನಾಗುವನೋ ಆಗ ಅವನಿಗೆ ಒಪ್ಪಿಸುವೆವು.

ಭೀಡ್ ಕೋಟೆಯ ಮೇಲೆ ವಿಜಯ :

ಮಲಿಕ್ ಅಹ್ಮದ್‌ನಿಗೆ ಈ ಉತ್ತರವನ್ನು ಕೇಳಿ ಕೆಡಕೆನಿಸಿತು. ಹಾಗೂ ಕೋಟೆಗಳನ್ನು ತನ್ನ ಬಲ ಪ್ರಯೋಗದಿಂದ ಪಡೆದುಕೊಳ್ಳಲು ಯತ್ನಿಸಿದನು. ಎಲ್ಲಕ್ಕಿಂತ ಮೊದಲು ಭೀಡ್ ಕೋಟೆಯ ಮೇಲೆ ಆಕ್ರಮಣ ಮಾಡಿದನು ಹಾಗೂ ಅದರ ಸುತ್ತಲೂ ಸೈನ್ಯದ ಮೂಲಕ ದಿಗ್ಬಂಧನಗೊಳಿಸಿದನು. ಈ ಕೋಟೆಯು ಪರ್ವತದ ತುತ್ತ ತುದಿಯ ಮೇಲೆ ಇದೆ. ಕೋಟೆಯ ಒಳಗಡೆಯಿಂದ ಜನರು ಈ ದೀರ್ಘಕಾಲದ ದಿಗ್ಬಂಧನದಿಂದಾಗಿ ಬಹಳೇ ತೊಂದರೆಗೊಳಗಾದರು. ಕೊನೆಗೆ ೬ ತಿಂಗಳ ಅವಧಿಯಷ್ಟು ಸುದೀರ್ಘಕಾಲದಿಂದಾಗಿ ತಾಳ್ಮೆಯನ್ನು ಕಳೆದುಕೊಂಡರು. ಹಾಗೂ ವಿವಶರಾಗಿ ತಲೆಗೆ ಕಫನ್ ಬಟ್ಟೆ ಸುತ್ತಿಕೊಂಡು ಖಡ್ಗ ಹಿಡಿದು ಕೋಟೆಯ ಬಾಗಿಲಿನ ಕೀಲಿಕೈ ಕೈಯಲ್ಲಿ ಹಿಡಿದು ಮಲೀಕ ಅಹ್ಮದ್‌ನ ಬಳಿಗೆ ಬಂದರು.

ಮಲಿಕ್ ಅಹ್ಮದ್‌ನ ಸೈನ್ಯವು ಕೋಟೆಯ ಮೇಲೆ ಆಕ್ರಮಣ ಮಾಡಿತು. ಸೈನಿಕರು ಒಳಗೆ ಪ್ರವೇಶಿಸಿದಾಗ ತಿಳಿದು ಬಂದ ಸಂಗತಿಯೆಂದರೆ ಖ್ವಾಜಾ ಜಹಾನರ ಕೊಲೆಯ ನಂತರದ ಐದು ವರ್ಷದ ಮರಾಠರ ತೆರಿಗೆ ಹಣವು ಕೋಟೆಯಲ್ಲಿ ಇತ್ತು. ಸೈನಿಕರು ಈ ಹಣವನ್ನು ತಮ್ಮ ಸುಪರ್ದಿಗೆ ತೆಗೆದುಕೊಂಡರು ಹಾಗೂ ಮಲಿಕ್ ಅಹ್ಮದ್‌ನಿಗೆ ಒಪ್ಪಿಸಿದರು.

ಕೋಂಕನ್ ಪ್ರದೇಶ ವಶಪಡಿಸಿಕೊಂಡದ್ದು :

ಈ ಹಣವು ದೊರಕಿದ ಮೇಲೆ ಮಲಿಕ್ ಅಹ್ಮದ್‌ನು ಬಹಳೇ ಪ್ರಸನ್ನನಾದನು. ಅವನು ಈ ಹಣವನ್ನು ತನ್ನ ಸೈನಿಕರು ಹಾಗೂ ಅಧಿಕಾರಿಗಳಲ್ಲಿ ವಿತರಿಸಿ ಅವರನ್ನು ಸಂತೋಷಪಡಿಸಿದನು. ಮಲಿಕ್ ಅಹ್ಮದ್‌ನು ಅದೇ ಕಾಲದಲ್ಲಿ ಶ್ರಮವಹಿಸಿ ತಂಗಿ ತರೋನಿ, ಕುಂದಾಪುರ, ಪುರಂದ, ಊರಬ್, ಚಂದುಲ್, ಗರದುರ್ಗ, ಮುರಂಜನ್, ಮಾಹೋಲಿ ಹಾಗೂ ಮಾಳಿ ಪ್ರದೇಶದ ಮೇಲೆ ದಾಳಿಮಾಡಿ ವಿಜಯ ಸಾಧಿಸಿದನು. ಈ ತೆರನಾಗಿ ಕೊಂಕನ್‌ದ ಎಲ್ಲ ಪ್ರದೇಶಗಳನ್ನು ತನ್ನ ಹಿಡಿತಕ್ಕೆ ತೆಗೆದುಕೊಂಡನು.

ಈ ದಿನಗಳಲ್ಲಿ ಮಲಿಕ್ ಅಹ್ಮದ್ ನಿಜಾಮ್‌ನು ಕೋಟೆ ನಂದರಾಜ್‌ಪುರಿಯನ್ನು ವಶಪಡಿಸಿಕೊಳ್ಳಲು ತೊಡಗಿದ್ದನು. ಈ ದಿನಗಳಲ್ಲಿ ತನ್ನ ತಂದೆಯ ಬಿರುದು ಹಾಗೂ "ಅಹ್ಮದ್ ನಿಜಾಮುಲ್ ಮುಲ್ಕ ಬಹ್ರಿ" ಎಂಬ ಬಿರುದಿನಿಂದ ಪ್ರಸಿದ್ಧಿಗೊಂಡನು. ಆದರೆ ಮಲಿಕ್ ಅಹ್ಮದ್‌ನು ತನ್ನನ್ನು ತಾನು 'ಶಾಹ' ಬಿರುದಿನಿಂದ ಗುರುತಿಸಿಕೊಳ್ಳಲಿಲ್ಲ. ಆದರೆ ದಖ್ಖನಿನಲ್ಲಿ ಅವನ ಹೆಸರು "ಅಹ್ಮದ್ ನಿಜಾಮ್‌ಶಾಹ" ಎಂದೇ ಪ್ರಸಿದ್ಧವಾಗಿದೆ. ಆ ಕಾರಣಕ್ಕೆ ತಾರಿಖ್ ಫರಿಷ್ತಾದ ಬರಹಗಾರ ತನ್ನ ಗ್ರಂಥದಲ್ಲಿ ಅವನನ್ನು 'ಅಹ್ಮದ್ ನಿಜಾಮ್‌ಶಾಹ ಬಹ್ರಿ' ಎಂಬ ಹೆಸರಿನಿಂದಲೇ ನೆನಪಿಸುವನು.

ಮಲಿಕ್ ಅಹ್ಮದ್‌ನ ಧೈರ್ಯ :

ಮಲಿಕ್ ಅಹ್ಮದ್ ಜನೀರ ತಲುಪಿದನು. ತಂದೆಯ ಸಾವಿನ ನಂತರದ ಸಂಸ್ಕಾರಗಳನ್ನು ಮುಗಿಸಿದ ನಂತರ ಅವನು ತನ್ನ ಪ್ರಜೆಗಳಿಗೆ ಹಾಗೂ ಸೈನಿಕರಿಗೆ ಬಹುಮಾನ ಹಾಗೂ ಪುರಸ್ಕಾರ ನೀಡಿ ಸಂತೃಪ್ತಿಗೊಳಿಸಿದನು. ಮತ್ತೆ ಬೀರ್ ಗ್ರಾಮದ (ಕಾನು ಹಾಗೂ ಪಟ್ಟಣದ ಸೀಮೆಯವರೆಗೆ) ತನ್ನ ವಶದಲ್ಲಿ ತೆಗೆದುಕೊಂಡನು. ಮಲಿಕ್ ಅಹ್ಮದ್‌ನು ತನ್ನ ಯೌವನದ ದಿನಗಳಲ್ಲಿ ಕುಂದಬೇಲ್ ಹಾಗೂ ರಾಜಮಂದ್ರಿಯ ಹಿಂದೂ ರಾಜರೊಡನೆ ಮಲ್ಲಯುದ್ಧ ನಡೆಸಿ ತನ್ನ ಧೈರ್ಯ ಸ್ಥೈರ್ಯದ ನಿದರ್ಶನ ನೀಡಿದ್ದನು. ಹೀಗಾಗಿ ಸುಲ್ತಾನ್ ಮಹ್ಮೂದ್‌ಶಾಹ ತನ್ನ ಸೈನ್ಯವನ್ನು ಇವರ ಮೇಲೆ ಕಳಿಸಿದಾಗ ಇವರು ಅಂಜಿಕೆಯಿಂದಾಗಿ ಯುದ್ಧದ ಹೆಸರನ್ನು ಎತ್ತುತ್ತಿರಲಿಲ್ಲ.

ಯೂಸುಫ್ ಆದಿಲ್‌ಶಾಹ ಹಾಗೂ ಅಹ್ಮದ್ ನಿಜಾಮ್‌ಶಾಹರಲ್ಲಿ ಸ್ನೇಹ ಸಂಬಂಧ:

ಸುಲ್ತಾನ್ ಮಹ್ಮೂದ್‌ನು ಕಾಸಿಂ ಬರೀದ್‌ನ ಮಾತಿನಂತೆ ಯೂಸುಫ್ ಆದಿಲ್‌ಶಾಹನ ಹೆಸರಿನಲ್ಲಿ ಒಂದು ಆದೇಶ ಕಳುಹಿಸಿದನು. ಅದರ ವಿಷಯ ಹೀಗಿತ್ತು. "ನೀವು ಖ್ವಾಜಾಜಹಾನ ದಖನಿ ಹಾಗೂ ಜಾಲನಾದ ಅಧಿಕಾರಿಯಾಗಿ ಜೈನುದ್ದೀನ್ ಅಲಿತಾಶ್‌ನೊಂದಿಗೆ 'ಜನೀರ್‌ಗೆ ಹೋಗಿರಿ ಹಾಗೂ ಅಹ್ಮದ್ ನಿಜಾಮುಲ್ ಮುಲ್ಕನಿಗೆ ಸರಿಯಾದ ಹಾದಿಯಲ್ಲಿ ತನ್ನಿರಿ' ಯೂಸೂಫ್ ಆದಿಲ್‌ಶಾಹನು ಕ್ಷಮೆಯಾಚಿಸಿದನು. ಹಾಗೂ ಗೌಪ್ಯವಾಗಿ ತನ್ನ ಒಬ್ಬ ದೂತನನ್ನು ಅಹ್ಮದ್‌ನಿಜಾಮುಲ್ ಮುಲ್ಕನ ಬಳಿಗೆ ಕಳುಹಿಸಿದನು ಹಾಗೂ ಅವನಿಗೆ ಈ ಸಂದೇಶ ನೀಡಿದನು. "ಈ ಪ್ರದೇಶದ ಉಸ್ತುವಾರಿಯನ್ನು ಚೆನ್ನಾಗಿ ಮಾಡಿ ಹಾಗೂ ಬೇರೆಯ ಪ್ರದೇಶಗಳನ್ನು ತನ್ನ ವಶದಲ್ಲಿ ತರಲು ಪ್ರಯತ್ನಿಸಬೇಕು." ಇದನ್ನು ಹೊರತುಪಡಿಸಿ ಯೂಸುಫ್‌ನು ಅಹ್ಮದ್‌ನಿಗೆ ಸೈನ್ಯದ ಸಹಾಯವನ್ನೂ ಮಾಡಿದನು ಹಾಗೂ ಸೈನ್ಯದ ಶಕ್ತಿಯನ್ನು ಹೆಚ್ಚಿಸಿದನು.

ಜೈನುದ್ದೀನ್ ಅಲಿತಾಶ್‌ನ ಹೆಸರಿನಲ್ಲಿ ಸಂದೇಶ :

ಅಹ್ಮದ್ ನಿಜಾಮ್‌ಶಾಹನು 'ಅಮೀರುಲ್ ಉಮ್ರಾ' ದ ಹುದ್ದೆ ಜರೀಫುಲ್ ಮುಲ್ಕ ಅಫಘಾನನನ್ನು ಹಾಗೂ 'ಮೀರ್ ಜುಮ್ಲಾ' (ಮುಖ್ಯಸ್ಥರ ಮುಖ್ಯಸ್ಥ)

ಹುದ್ದೆಯನ್ನು ನಸಿರುಲ್ ಮುಲ್ಕ ಗುಜರಾತಿಗೆ ನೀಡಿದನು. ಜೈನುದ್ದೀನ್ ಅಲಿತಾಕ್‌ನ ಹೆಸರಿನಲ್ಲಿ ಅಹ್ಮದ್ ಈ ಸಂದೇಶ ಕಳುಹಿಸಿದನು. "ಏಕೆಂದರೆ ನಾನು ಹಾಗೂ ನೀವು ನೆರೆಹೊರೆಯವರಾಗಿದ್ದೇವೆ. ಅದಕ್ಕಾಗಿ ನಮ್ಮಿಬ್ಬರ ಮೇಲೂ ಕೆಲವು ಹಕ್ಕುಗಳಿವೆ. 'ನಾನು ನಿಮ್ಮ ಧೈರ್ಯ ಹಾಗೂ ಶಕ್ತಿಯನ್ನು ಹೃದಯಪೂರ್ವಕವಾಗಿ ಒಪ್ಪಿಕೊಳ್ಳುವವನಾಗಿದ್ದೇನೆ. ನನ್ನ ಇಚ್ಛೆ ಏನಾಗಿದೆ ಎಂದರೆ ನಾವು ಅಪರಿಚಿತರಂತೆ ಇರುವುದು ಬೇಡ. ಹಿಂದಿನ ಮಾತುಗಳನ್ನು ನಿಮ್ಮ ಮನಸ್ಸಿನಿಂದ ತೆಗೆದುಹಾಕಿ ಈ ಪ್ರದೇಶದಲ್ಲಿ ಸ್ನೇಹಿತರಂತೆ ಇರೋಣ. ಎಲ್ಲರ ಮೇಲೂ ಯಶ ಸಾಧಿಸೋಣ."

ಜುನ್ನರ್ ಮೇಲೆ ಶೇಖ್ ಮೋದಿಯ ಆಕ್ರಮಣ :

ಈ ದಿನಗಳಲ್ಲಿ ಶೇಖ ಮೋದಿ ಅರಬ್‌ನು ಅಹ್ಮದ್ ನಿಜಾಮ್ ಷಾಹ್‌ನ ವಿನಾಶಕ್ಕಾಗಿ ಪಣ ತೊಟ್ಟನು. ಹಾಗೂ ಅವನು ಧೈರ್ಯ ಮತ್ತು ಸ್ಥೈರ್ಯದಲ್ಲಿ ಉನ್ನತ ಸ್ಥಾನದಲ್ಲಿದ್ದನು. ಅದೇ ಕಾರಣದಿಂದಾಗಿ ಅವನಿಗೆ 'ಬಹಾದ್ದೂರುಜ್ಜಮಾ' ದ ಬಿರುದು ಲಭಿಸಿತ್ತು. ಶೇಖಮೋದಿ ಹನ್ನೆರಡು ಸಾವಿರ ಕುದುರೆಸವಾರರೊಂದಿಗೆ ಜನೀರ ಕೋಟೆಯ ಕಡೆಗೆ ಹೊರಟನು. ಮೊದಲು ಅವನು ಪರಿಂದಾ ಕೋಟೆಯ ಒಡಲಲ್ಲಿ ಆಶ್ರಯ ಪಡೆದನು. ಜೈನುದ್ದೀನ್ ಅಲಿಯ ಮನಸ್ಸು ಬದಲಾಯಿಸಿತು. ಈತನು ಶೇಖ ಮೋದಿಯ ಜೊತೆ ನೀಡುವ ಮನಸ್ಸಿನಿಂದ ಅವನ ಸೈನ್ಯ ಸೇರಲು ನಿಶ್ಚಯಿಸಿದನು. ಅಹ್ಮದ್ ನಿಜಾಮನಿಗೆ ಇದರ ಮಾಹಿತಿ ತಲುಪಲು ಆತನು ತನ್ನ ಮಕ್ಕಳನ್ನು ಸಬ್ಜ ಮೇನ ಕೋಟೆಯಲ್ಲಿ ಕಳುಹಿಸಿದನು ಹಾಗೂ ತಾನೇ ಸ್ವತಃ ಶೇಖಮೋದಿಯನ್ನು ಎದುರಿಸಲು ಮುಂದಾದನು.

ಜೈನುದ್ದೀನ್ ಅಲಿಯ ಮೇಲೆ ಅಹ್ಮದ್‌ನ ಆಕ್ರಮಣ :

ಅಹ್ಮದ್ ನಿಜಾಮುಲ್ ಮುಲ್ಕನು ಯಾವಾಗ ವೈರಿಯ ಸೈನ್ಯದ ಬಳಿಗೆ ಬಂದನೋ ಆಗ ಅವನು ತನ್ನ ಹಾಗೂ ವೈರಿಯ ಸೈನ್ಯದ ಬಲವನ್ನು ತಿಳಿದುಕೊಂಡು ಯುದ್ಧ ಮಾಡಬಾರದೆಂದು ನಿಶ್ಚಯಿಸಿದನು. ಹಾಗೂ ವೈರಿಯ ಸೈನ್ಯದಿಂದ ೧೨ ಮೈಲು (೪ ಕೊಸ್) ಅಂತರದಲ್ಲಿಯೇ ತಂಗಿದನು. ಅಹ್ಮದ್‌ನು ಬಹಳ ಯುಕ್ತಿಪೂರ್ವಕವಾಗಿ ನಡೆದುಕೊಂಡು ಇದನ್ನು ತಿಳಿದುಕೊಂಡನು ಏನೆಂದರೆ ಜೈನುದ್ದೀನ್ ಅಲಿಯು ಶೇಖ ಮೋದಿಯೊಂದಿಗೆ ಆದಷ್ಟು ಬೇಗ ಸೇರಿಕೊಳ್ಳಲು ಅವಕಾಶ ಹುಡುಕುತ್ತಿದ್ದಾನೆ ಎಂದು ತಿಳಿದುಕೊಂಡನು. ಅಹ್ಮದ್‌ನು ತನ್ನ ಸೈನ್ಯವನ್ನು ನಸೀರುಲ್ ಮುಲ್ಕ ಹಾಗೂ ಜೈನುಲ್ ಮುಲ್ಕನಿಗೆ ಒಪ್ಪಿಸಿದನು. ಹಾಗೂ ಸ್ವತಃ ಅಧಿಕಾರಿಗಳು ಹಾಗೂ ಹವಾಲ್ದಾರ್‌ರೊಂದಿಗೆ ಬೇಟೆಯ ನೆಪದಿಂದ ಹೊರಹೊರಟನು. ಅವನು ಜೈನುದ್ದೀನ್ ಅಲಿಯ ವಾಸಸ್ಥಾನವಾದ 'ಜಾಲನಾ' ದ ಮೇಲೆ ಆಕ್ರಮಣ ಮಾಡಿದನು.

ಜಾಲನಾ ಕೋಟೆಯ ವಿಜಯ :

ಅಹ್ಮದ್ ನಿಜಾಮುಲ್ ಮುಲ್ಕನು ರಾತ್ರಿಯ ಸಮಯದಲ್ಲಿ ಸೈನಿಕ ಡೇರೆಗೆ ನುಗ್ಗಿ ವೈರಿ ಪಡೆಯ ಎದುರು ನಿಂತನು. ಆಗ ಜೈನುದ್ದೀನ್ ಹಾಗೂ ಅವನ ಸ್ನೇಹಿತರು ನಿರ್ಲಕ್ಷ್ಯ ಸ್ಥಿತಿಯಲ್ಲಿದ್ದರು. ಅಹ್ಮದ್‌ನು ಕಟ್ಟಿಗೆಯ ಮೆಟ್ಟಿಲುಗಳನ್ನು ತನ್ನೊಡನೆ ತಂದಿದ್ದನು. ಈ ಮೆಟ್ಟಿಲುಗಳನ್ನು ಅವನು ಕೋಟೆಯ ಗೋಡೆಗಳಿಗೆ ಹಚ್ಚಿ ಎಲ್ಲರಿಗಿಂತ ಮೊದಲು ಸ್ವತಃ ಹದಿನೇಳು ಜನರ ಒಂದು ಗುಂಪಿನೊಂದಿಗೆ ಕೋಟೆಯೊಳಗೆ ಪ್ರವೇಶಿಸಿದನು. ಅದರ ನಂತರ ಎಲ್ಲ ಸೈನ್ಯವೂ ಕೋಟೆಯೊಳಗೆ ಈ ಕಟ್ಟಿಗೆಯ ಮೆಟ್ಟಿಲುಗಳ ಸಹಾಯದೊಂದಿಗೆ ಪ್ರವೇಶಿಸಿದರು. ಕೋಟೆಯ ಒಳಗೆ ಇದ್ದವರು ನಿರ್ಲಕ್ಷ್ಯದಿಂದ ಇದ್ದರು. ಈ ಅಪಾಯದ ಕುರಿತು ಏನೂ ಅರಿಯದವರಾಗಿದ್ದರು. ಹಾಗೂ ಅಹ್ಮದ್‌ನ ಎಲ್ಲ ಸೈನಿಕರು ಶಸ್ತ್ರ ಸಜ್ಜಿತರಾಗಿದ್ದರು. ಫಲಿತಾಂಶ ಏನಾಯಿತೆಂದರೆ ಜೈನುದ್ದೀನ್ ಕೊಲ್ಲಲ್ಪಟ್ಟನು. ಹಾಗೂ ಕೋಟೆ ಬಹಳ ಶೀಘ್ರದಲ್ಲಿಯೇ ವಶವಾಯಿತು.

ಶೇಖಮೋದಿ ಹಾಗೂ ನಸೀರುಲ್ ಮುಲ್ಕರ ನಡುವೆ ಯುದ್ಧ :

ಜಾಲನಾ ಕೋಟೆಯನ್ನು ವಶಪಡಿಸಿಕೊಳ್ಳುವಿಕೆಯ ಸುದ್ದಿಯು ಬಹಳೇ ಪ್ರಸಿದ್ಧಿಗೊಂಡಿತು. ನಸೀರುಲ್ ಮುಲ್ಕನಿಗೆ ಈ ಕುರಿತು (ಸುದ್ದಿ) ತಿಳಿದಾಗ ಅವನ ಮನಸ್ಸಿನಲ್ಲಿಯೂ ಏನಾದರೂ ಸಾಧಿಸಬೇಕೆಂದು ಇಚ್ಛೆಯುಂಟಾಯಿತು. ಅವನು ಸುಮಾರು ೩೦೦೦ ಸೈನಿಕರನ್ನು ಒಟ್ಟುಗೂಡಿಸಿ ಹಾಗೂ ಶೇಖಮೋದಿಯೆಡೆಗೆ ಧಾವಿಸಿದನು. ಯಾವಾಗ ಎರಡೂ ಸೈನ್ಯಗಳ ನಡುವೆ ೧ ಕೋಸ್ (೩ ಮೈಲಿಗಳ) ಅಂತರವಿರುವಾಗ ಶೇಖ ಮೋದಿಯು ನಸೀರುಲ್ ಮುಲ್ಕನ ಆಗಮನವನ್ನು ಅರಿತು ಸೈನಿಕರ ಒಂದು ತಂಡವನ್ನು ಅವನನ್ನು ಎದುರಿಸಲು ಕಳುಹಿಸಿದನು. ಎರಡೂ ಸೈನ್ಯಗಳ ನಡುವೆ ಭೀಕರ ರೂಪದ ಕಾಳಗ ನಡೆಯಿತು. ಕೊನೆಗೆ ಶೇಖಮೋದಿಯ ಸೈನ್ಯಕ್ಕೆ ಸೋಲಾಯಿತು. ೨ನೆಯ ದಿನ ಮತ್ತೇ ತನ್ನ ಸೈನಿಕರನ್ನು ಶೇಖ ಮೋದಿಯು ಕಳುಹಿಸಿದನು. ಇವರಿಗೂ ನಸೀರುಲ್ ಮುಲ್ಕನು ಸೋಲನ್ನುಣಿಸಿದನು. ಈಗ ಶೇಖ ಮೋದಿಯು ತನ್ನ ಸೈನ್ಯವನ್ನು ಕಳುಹಿಸುವುದು ಸರಿಯಲ್ಲವೆಂದು ತಿಳಿದನು ಹಾಗೂ ತಾನೇ ಸ್ವತಃ ನಸೀರುಲ್ ಮುಲ್ಕನನ್ನು ಎದುರಿಸಲು ಬಂದನು.

ನಸೀರುಲ್ ಮುಲ್ಕನ ಸೋಲು :

ನಸೀರುಲ್ ಮುಲ್ಕನು ೨ ದಿನ ಸತತ ಗೆಲುವಿನ ರುಚಿಯನ್ನು ಕಂಡು ಬಹಳ ಸಂತೋಷ ಹಾಗೂ ಕೆಲಮಟ್ಟಿಗೆ ಜಂಬವನ್ನೂ ತೋರಿದನು. ದಣಿವಿನಿಂದ ಬಳಲಿ ಬೆಂಡಾಗಿ ಸುಸ್ತಾದ ತನ್ನ ಸೈನ್ಯದೊಂದಿಗೆ ಶೇಖ ಮೋದಿಯನ್ನು ಎದುರಿಸಿದನು. ಹಾಗೂ ಬೇಗನೇ ಸೋಲು ಕಂಡು ಜರೀಫುಲ್ ಮುಲ್ಕನ ಬಳಿಗೆ ಬಂದನು. ಇದೇ

ಸಮಯದಲ್ಲಿ ಅಹ್ಮದ್ ನಿಜಾಮ್ ಶಾಹನೂ ಸಹ ಜಾಲನಾದಿಂದ ಮರಳಿ ಬಂದನು. ಅವನಿಗೆ ಎಲ್ಲ ಸ್ಥಿತಿಯ ಅರಿವಾಯಿತು. ಆ ಕಾರಣದಿಂದ ಅವನು ನಸೀರುಲ್ ಮುಲ್ಕನ ಶಿಬಿರಕ್ಕೆ ಹೋಗಿ ಅವನ ಕುಶಲ ಕ್ಷೇಮ ತಿಳಿದುಕೊಂಡು ಅವನಿಗೆ ಧೈರ್ಯ ನೀಡಿದನು ಹಾಗೂ ಸೋಲಿನ ಕಾರಣದಿಂದ ನಸೀರನಿಗೆ ಉಂಟಾದ ಕೀಳರಿಮೆಯನ್ನು ದೂರ ಮಾಡಲು ಪ್ರಯತ್ನಿಸಿದನು.

ಅಹ್ಮದ್ ನಿಜಾಮ್‌ಶಾಹನ ವಿಜಯ :

ಕೆಲವು ದಿನಗಳ ನಂತರ ಅಹ್ಮದ್ ನಿಜಾಮ್ ಶಾಹನು ಒಂದು ಬೃಹತ್ ಸೈನ್ಯವನ್ನು ತನ್ನ ಜೊತೆ ತೆಗೆದುಕೊಂಡನು ಹಾಗೂ ಅರ್ಧರಾತ್ರಿಯಲ್ಲಿ ವೈರಿಯೆಡೆಗೆ ಹೊರಟನು. ಅಹ್ಮದ್‌ನು ಶತ್ರುವಿನ ಮೇಲೆ ಇರುಳಿನಲ್ಲಿಯೇ ಆಕಸ್ಮಿಕವಾಗಿ ಆಕ್ರಮಿಸಿ ಶತ್ರುವಿನ ಸೈನ್ಯವನ್ನು ಛಿದ್ರಛಿದ್ರಗೊಳಿಸಿದನು. ಶೇಖಮೋದಿಯ ಜೊತೆ ಜೊತೆಗೆ ಬಹಳಷ್ಟು ಅರಬೀ, ದಖನೀ, ಹಬಶಿಗಳ ಅಮೀರರೂ ಕೂಡ ಕೊಲ್ಲಲ್ಪಟ್ಟರು. ಬಹಳಷ್ಟು ಶತ್ರುವಿನ ನಗನಾಣ್ಯಗಳು ಅಹ್ಮದ್‌ನ ಕೈ ಸೇರಿದವು. ಶೇಖ್ ಮೋದಿಯ ಬಿಡಾರಗಳು ಹಾಗೂ ಸರಕು ಸಾಗಾಣಿಕೆಯ ವಸ್ತುಗಳು ಹಾಗೂ ಸೈನ್ಯಕ್ಕೆ ಬೇಕಾಗುವ ಭಾರ ಎತ್ತುವ ವಾಹಕಗಳು, ಕುದುರೆ ಇತ್ಯಾದಿಗಳು ಲಭಿಸಿದ್ದರಿಂದ ಅಹ್ಮದ್‌ನ ಸೈನ್ಯದ ಹಿರಿಮೆಗರಿಮೆಯಲ್ಲಿ ಬಹಳಷ್ಟು ವೃದ್ಧಿಯಾಯಿತು. ಈ ಘಟನೆಯ ನಂತರ ಅಹ್ಮದ್ ನಿಜಾಮ್ ಶಾಹನು ಜನೀರಕ್ಕೆ ಮರಳಿ ಬಂದನು.

ಬೀದರ ಮೇಲೆ ಅಹ್ಮದ್ ನಿಜಾಮ್‌ಶಾಹನ ಆಕ್ರಮಣ :

ಸುಲ್ತಾನ ಮಹ್ಮದ್ ಶಾಹನಿಗೆ ಈ ಘಟನೆಯ ಕುರಿತು ಸುದ್ದಿ ಬಂದಾಗ ಬಹಳ ಕೋಪಗೊಂಡನು. ಅವನು ಅಜ್ಮತುಲ್‌ಮುಲ್ಕ ದಬೀರ್‌ನಿಗೆ ೧೮ ಅಮೀರರೊಂದಿಗೆ ಹಾಗೂ ಒಂದು ಬೃಹತ್ ಸೈನ್ಯದೊಂದಿಗೆ ಜನೀರ್‌ವನ್ನು ಗೆಲ್ಲಲು ಆದೇಶಿಸಿದನು. ಅಹ್ಮದ್ ನಿಜಾಮ್‌ಶಾಹನೂ ಕೂಡ ತನ್ನ ಸೈನ್ಯದೊಂದಿಗೆ ಹೊರಟು ಖಾದರ್ ಆಬಾದ್‌ದ ಗುಡ್ಡಗಾಡು ಪ್ರದೇಶದಲ್ಲಿ ನೆಲೆಸಿದನು. ಸುಲ್ತಾನ್ ಮಹ್ಮೂದ್‌ಷಾಹನ ಸೈನ್ಯವು ಸೇರಿಘಾಟದ ಕೆಳಭಾಗದಲ್ಲಿ ತಲುಪಿತು. ಅಹ್ಮದ್ ನಿಜಾಮನು ೩೦೦೦ ಶೂರ ಹಾಗೂ ಅನುಭವಿ ಸೈನಿಕರನ್ನು ಜೊತೆಗೆ ತೆಗೆದುಕೊಂಡು ಖಾದರಾಬಾದದಿಂದ ಅಹ್ಮದಾಬಾದ್ ಬೀದರ್ ಮೇಲೆ ಆಕ್ರಮಣಗೈದನು. ರಾತ್ರಿಯ ವೇಳೆ ಎಲ್ಲ ಜನರು ಇದರ ಕುರಿತು ನಿರ್ಲಕ್ಷ್ಯದಿಂದ ಇದ್ದರು. ಅಹ್ಮದ್ ನಿಜಾಮನು ಬಹಳೇ ಶಾಂತರೀತಿಯಿಂದ ಬೀದರನ್ನು ತಲುಪಿದನು. ಪಟ್ಟಣದ ಕಾವಲುಗಾರರ ಓರ್ವ ವ್ಯಕ್ತಿಯು ಅಹ್ಮದ್ ನಿಜಾಮನೊಂದಿಗೆ ಸೇರಿಕೊಂಡಿದ್ದನು. ಆ ಕಾರಣಕ್ಕೆ ಪಟ್ಟಣದ ಕೋಟೆಯ ದ್ವಾರವು ಯಾವುದೇ ಅಡೆತಡೆ ಇಲ್ಲದೇ ತೆರೆಯಲ್ಪಟ್ಟಿತು. ಅಹ್ಮದ್ ನಿಜಾಮ್‌ನು ತನ್ನ ಸೈನ್ಯದೊಂದಿಗೆ ಪಟ್ಟಣವನ್ನು ಪ್ರವೇಶಿಸಿದನು.

ನಾಮ ನಿರ್ದೇಶಿತ ಅಮೀರರ, ಸಂಬಂಧಿಕರ ಬಂಧನ :

ಅಹ್ಮದ್ ನಿಜಾಮ್‌ನು ಎಲ್ಲಕ್ಕಿಂತ ಮೊದಲು 'ಅಮೀರ್ ನಾಯಿಬ್'ನ ಮನೆಗೆ ಹೋದನು. ಅವನು ತನ್ನ ತಂದೆಯ ಸಮೀಪದ ಸಂಬಂಧಿಕರ ಹಾಗೂ ಕುಟುಂಬವನ್ನು ತನ್ನ ವಿಶ್ವಾಸದ ಜನರ ಜೊತೆಗೆ ಪಲ್ಲಕ್ಕಿಗಳಲ್ಲಿ ಕೂಡಿಸಿ ಜನೀರ್‌ಕ್ಕೆ ಕಳುಹಿಸಿದನು. ಅದರ ನಂತರ ಅವನು ಸಂಪೂರ್ಣ ನಗರವನ್ನು ಸುತ್ತಿದನು. ಹಾಗೂ ನಾಮ ನಿರ್ದೇಶಿತ ಅಮೀರರ ಪತ್ನಿ ಹಾಗೂ ಮಕ್ಕಳನ್ನು ಬಂಧಿಸಿದನು. ಮುಂಜಾನೆಯ ಸಮಯದಲ್ಲಿ ಪಟ್ಟಣದಿಂದ ಹೊರ ಹೊರಟನು. ಬೀಡ್ ಪಟ್ಟಣದ ಮುಖಾಂತರ ಪರಿಂದಾ ಕೋಟೆಯನ್ನು ತಲುಪಿದನು ಹಾಗೂ ಅಮೀರರ ಬಂಧಿತ ಕುಟುಂಬವನ್ನು ಬಹಳೇ ಗೌರವಿಸಿದನು ಹಾಗೂ ರಕ್ಷಿಸಿದನು. ನಾಮ ನಿರ್ದೇಶಿತ ಅಮೀರರಿಗೆ ಸೇರಿಘಾಟದ ಸಮೀಪದಲ್ಲಿ ತಿಳಿದು ಬಂದದ್ದೇನೆಂದರೆ ಅಹ್ಮದ್ ನಿಜಾಮ್‌ನು ಬೀದರ ಕಡೆ ಪ್ರಯಾಣಿಸಿದನು. ಆದಕಾರಣ ಅಮೀರರು ಅಹ್ಮದ್ ನಿಜಾಮಶಾಹನನ್ನು ಹಿಂಬಾಲಿಸಿದರು. ಪಟ್ಟಣದ ಸಮೀಪವೆ ಈ ಅಮೀರರು ಅಹ್ಮದ್ ನಿಜಾಮನ ಬಳಿ ಸೇರಿಕೊಂಡರು ಹಾಗೂ ಈ ಸಂದೇಶವನ್ನು ನೀಡಿದರು.

ಅಮೀರರ ಸಂದೇಶ :

"ನೀವು ನಮ್ಮ ಕುಟುಂಬದವರ ಸಂಪೂರ್ಣ ರಕ್ಷಣೆಯನ್ನು ಮಾಡಿದ್ದೀರಿ. ಆ ಕಾರಣಕ್ಕೆ ನಾವು ನಿಮಗೆ ಬಹಳ ಕೃತಜ್ಞರಾಗಿದ್ದೇವೆ, ಹೃದಯಪೂರ್ವಕವಾಗಿ ನಿಮ್ಮ ನಾಯಕತ್ವವನ್ನು ಒಪ್ಪುತ್ತೇವೆ, ಹಾಗೂ ವಿಧೇಯವಾಗಿ ಇರುತ್ತೇವೆ, ಆದರೆ ಒಂದು ವಿಷಯದಲ್ಲಿ ವಿಷಾದವಿದೆ. ತಾವು ದರೋಡೆಕೋರ ಹಾಗೂ ಲೂಟಿಕೋರರಂತೆ ನಮ್ಮ ಮುಂದಿನಿಂದ ಓಡಿ ಹೋಗಿದ್ದೀರಿ. ಈ ವಿಷಯವು ನಿಮ್ಮ ಶೂರತನ, ವೀರತನಕ್ಕೆ ವಿರುದ್ಧವಾದುದಾಗಿದೆ. ನೀವು ಘೋಷಾದಲ್ಲಿರುವ ಹೆಣ್ಣು ಮಕ್ಕಳನ್ನು ಹಿಂಸಿಸಿದ್ದೀರಿ. ಇದು ಎಂಥ ವಿಷಾದದ ವಿಷಯವಾಗಿದೆ ಎಂದರೆ ಇದನ್ನು ಫಿರಂಗಿ ಯುವಕರೂ ಸಹ ಸಹಿಸುವುದಿಲ್ಲ". ಅಹ್ಮದ್ ನಿಜಾಮ್‌ಷಾಹನು ಈ ಸಂದೇಶದಿಂದಾಗಿ ಬಹಳೇ ಲಜ್ಜಿತನಾದನು. ಅದೇ ವೇಳೆಯಲ್ಲಿ ಈ ಅಮೀರರ ಕುಟುಂಬವನ್ನು ಅವರ ಬಳಿಗೆ ಕಳುಹಿಸಿದನು.

ತನ್ನ ಅಮೀರರ ಹೆಸರಿನಲ್ಲಿ ಸುಲ್ತಾನ್ ಮಹ್ಮೂದ್‌ಶಾಹನ ಸಂದೇಶ :

ಇದೇ ದಿನಗಳಲ್ಲಿ ಸುಲ್ತಾನ್ ಮಹ್ಮೂದ್‌ಶಾಹನು ತನ್ನ ಅಮೀರರ ಹೆಸರಿನಲ್ಲಿ ಈ ಸಾರಾಂಶವುಳ್ಳ ಆದೇಶವನ್ನು ಜಾರಿಗೊಳಿಸಿದನು. ಏನೆಂದರೆ "ಅಹ್ಮದ್ ನಿಜಾಮನು ಬಿಡುವಿಲ್ಲದೇ ಪಿತೂರಿ ನಡೆಸುತ್ತಿದ್ದಾನೆ. ವಿನಾಶ ಹಾಗೂ ನಷ್ಟವನ್ನುಂಟು ಮಾಡುವ ಕುಕೃತ್ಯವನ್ನವನು ಸತತವಾಗಿ ಮಾಡುತ್ತಿದ್ದಾನೆ ಹಾಗೂ ಅದರಲ್ಲಿ ಯಾವುದೇ ರೀತಿಯ

ಹಿಂಜರಿಕೆಯಿಲ್ಲದೇ ನಿರಂತರವಾಗಿ ಮುಂದುವರೆಯುತ್ತಿದ್ದಾನೆ. ನಿಮಗೇನಾಗುತ್ತಿದೆಯೋ ದೇವನೇ ಬಲ್ಲ ! ಅವನಿಗೆ ಹೆದರಿ ನಿಮ್ಮ ಬಿಡಾರಗಳಲ್ಲಿ ಅಡಗಿ ಕುಳಿತಿದ್ದೀರಿ. ನಿಮ್ಮ ಒಳಿತು ಇದರಲ್ಲಿಯೇ ಇದೆ. ನೀವು ಅಹ್ಮದ್ ನಿಜಾಮನಿಗೆ ಬಂಧಿಸಿ, ನನ್ನ ಸನ್ನಿಧಿಯಲ್ಲಿ ತನ್ನಿರಿ. ಒಂದು ವೇಳೆ ನೀವು ಮಾಡಲಾರಿರಾದರೆ ದೊಡ್ಡ ಹಾನಿಯನ್ನು ಅನುಭವಿಸಲಿದ್ದೀರಿ. ನಾನು ನಿಮಗೆ ಬಹಳ ಅವಮರ್ಯಾದೆಯನ್ನು ಮಾಡುವೆನು.

ಅಮೀರರ ಉತ್ತರ :

ಈ ಆದೇಶ ಕೇಳಿದ ನಂತರ ಎಲ್ಲ ಅಮೀರರು ನಗರದ ಮುಖ್ಯಸ್ಥ (ಅಮೀರ್ ಶಹರ್)ನ ಬಳಿ ಸೇರಿದರು. ಹಾಗೂ ಅವರು ಪರಸ್ಪರ ಗಂಭೀರವಾಗಿ ಸಮಾಲೋಚಿಸಿ ಬಾದಶಾಹನಿಗೆ ಒಂದು ಮನವಿ ಕಳುಹಿಸಿದರು. ಅದರ ಸಾರಾಂಶ ಹೀಗಿತ್ತು. "ನಮ್ಮ ವೃತ್ತಿಯು ಶಸ್ತ್ರ ಪ್ರಾವೀಣ್ಯ ತೋರುವುದಾಗಿದೆ. ಹಾಗೂ ನಮ್ಮ ಕೆಲಸವು ಖಡ್ಗ ಝಳಪಿಸುವುದು ಹಾಗೂ ವೈರಿಯ ವಿನಾಶ ಮಾಡುವುದಾಗಿದೆ. ಒಂದು ವೇಳೆ ನಮ್ಮಿಂದ ಏನಾದರೂ ಕುಂದುಕೊರತೆ ಉಂಟಾಗಿದ್ದರೆ ಅದರ ಜವಾಬ್ದಾರಿಯು ಅಜ್ಮತುಲ್ ಮುಲ್ಕನ ಮೇಲೆ ಬರುತ್ತದೆ. ನಮ್ಮ ನಮ್ರ ಸಲಹೆ ಏನೆಂದರೆ ಅಜ್ಮತುಲ್ ಮುಲ್ಕನ ಸ್ಥಾನದಲ್ಲಿ ಬೇರೆ ನಾಯಕನನ್ನು ಮುಖ್ಯಸ್ಥನನ್ನಾಗಿ ನೇಮಿಸಬೇಕು. ಈ ಸ್ಥಿತಿಯಲ್ಲಿ ವೈರಿಯ ಮೇಲೆ ಹಿಡಿತ ಸಾಧಿಸುವುದು ಸುಲಭವಾಗುವುದು." ಸುಲ್ತಾನ ಮಹ್ಮದ್‌ಶಾಹನು ಅಜ್ಮತುಲ್ ಮುಲ್ಕನಿಗೆ ಮರಳಿ ಕರೆಸಿಕೊಂಡನು. ಹಾಗೂ ಅವನ ಸ್ಥಾನದಲ್ಲಿ ಜಹಾಂಗೀರ್‌ಖಾನನನ್ನು ನೇಮಿಸಿ ಮೂರುಸಾವಿರ ಸವಾರರೊಂದಿಗೆ ಭೀಡಗೆ ಕಳುಹಿಸಿದನು.

ಜಹಾಂಗೀರಖಾನನ ನೇಮಕ :

ಜಹಾಂಗೀರಖಾನನು ಬಹಮನಿ ಸಾಮ್ರಾಜ್ಯದ ಹೆಸರಾಂತ ಅಮೀರರರಲ್ಲಿ ಒಬ್ಬನಾಗಿದ್ದನು. ಅವನ ಶೂರತನ ಹಾಗೂ ದೂರಾಲೋಚನೆಯ ಪ್ರಖ್ಯಾತಿಯು ದೇಶದ ನಾಲ್ಕೂ ಕಡೆ ಹಬ್ಬಿತ್ತು. ಮತ್ತು ಬಹಳಷ್ಟು ಯುದ್ಧಗಳಲ್ಲಿ ಭಾಗಿಯಾಗಿದ್ದನು. ಸುಲ್ತಾನ್ ಮಹ್ಮದ್‌ಶಾಹನ ಆಜ್ಞೆಯ ಮೆರೆಗೆ ಅವನು ಕೂಡಲೆ ಪರಿಂದಾ ಕೋಟೆಗೆ ಹೊರಟನು. ಮಕ್ದೂಮ್‌ಖ್ವಾಜಾಜಹಾನನು ಪರಿಂದಾಕೋಟೆಗೆ ಬಂದನು ಹಾಗೂ ಅವನು ತನ್ನ ಮಗನಾದ ಆಜಂಖಾನ್‌ನಿಗೆ ಅಹ್ಮದ್ ನಿಜಾಮನನ್ನು ಎದುರಿಸಲು ಆಯ್ಕೆ ಮಾಡಿದನು. ಅಹ್ಮದ್ ನಿಜಾಮನು ಯುದ್ಧ ಮಾಡುವುದು ಸರಿಯಲ್ಲವೆಂದು ಪರಿಗಣಿಸಿದನು ಹಾಗೂ ಪಟ್ಟಣದ ಕಡೆಗೆ ಹೊರಟನು. ಅವನು ತನ್ನ ದೂತರ ಮೂಲಕ ಫತೇ ಅಲ್ಲಾಹ್ ಅಮಾದಿಗೆ ಎಲ್ಲ ಸ್ಥಿತಿಗತಿಗಳನ್ನು ಮನಗಾಣಿಸಿದನು. ಫತೇಅಲ್ಲಾಹ್ ಅಮಾದಿಯು ಇದನ್ನು ಗಂಭೀರವಾಗಿ ಪರಿಗಣಿಸಲಿಲ್ಲ. ಹಾಗೂ ಜಹಾಂಗೀರ್‌ಖಾನನು ಪಟ್ಟಣದ ಸಮೀಪ ಬಂದನು.

ಜಹಾಂಗೀರನ ಟಪಕಾಪುರ ತಲುಪುವಿಕೆ :

ಅಹ್ಮದ್ ನಿಜಾಮ್‌ಶಾಹನು ಪಟ್ಟಣದಿಂದ ನಿರ್ಗಮಿಸಿದನು. ಜೇವರ್‌ಘಾಟ್ ದಾಟಿ ಅವನು ಜನೀರ್‌ದ ಗುಡ್ಡಗಾಡು ಪ್ರದೇಶದಲ್ಲಿ ಪ್ರವೇಶಿಸಿದನು. ನಸೀರುಲ್ ಮುಲ್ಕ ಗುಜರಾತಿಯು ಖಾದರ್ ಆಬಾದ್‌ನಿಂದ ಸೈನ್ಯ, ಭಂಡಾರ, ಹಾಗೂ ದವಸ ಧಾನ್ಯ ಇತ್ಯಾದಿ ತೆಗೆದುಕೊಂಡು ಜೇವರ್‌ಘಾತದ ಹಾದಿಗಳನ್ನು ಮುಚ್ಚುತ್ತಾ ಅಹ್ಮದ್‌ನಿಜಾಮನ ಬಳಿ ತಲುಪಿದನು ಹಾಗೂ ಅಲ್ಲಿಯೇ ವಾಸಿಸತೊಡಗಿದನು. ಜಹಾಂಗೀರ ಖಾನನಿಗೆ ಈ ಸುದ್ಧಿ ತಲುಪಿತು. ಏನೆಂದರೆ ಜೇವರ್‌ಘಾತವನ್ನು ನಿಜಾಮಶಾಹನು ವಶಪಡಿಸಿಕೊಂಡಿದ್ದಾನೆ. ಅದಕ್ಕಾಗಿ ಅವನು ಬೇಗಾನುಘಾತದ ಮುಖಾಂತರ ಟಪಕಾಪುರ ತಲುಪಿದನು. ಮತ್ತು ಅಹ್ಮದ್ ನಿಜಾಮಶಾಹನ ಹಾದಿಯಲ್ಲಿ ತಡೆಯೊಡ್ಡಿದನು.

ಶಾಹಿ ಸೈನ್ಯದ ನಿರ್ಲಕ್ಷ್ಯ :

ಪರಸ್ಪರ ವಿರೋಧಿಗಳ ನಡುವೆ ಕೇವಲ ೬ ಕೋಸ್‌ದ ಅಂತರವಿತ್ತು. ಸೈನ್ಯಗಳು ಪೂರ್ತಿ ಒಂದು ತಿಂಗಳು ಎದುರುಬದುರಾಗಿ ಬಿಡಾರದಲ್ಲಿ ಉಳಿದರು. ಇದು ಮಳೆಗಾಲದ ಸಮಯವಿತ್ತು. ಜಹಾಂಗೀರ ಖಾನನ ಸೈನ್ಯವು ಅಹ್ಮದ್ ನಿಜಾಮ್‌ನ ಸೈನ್ಯದ ಎದುರಾಗಿ ಬಹಳ ಕಷ್ಟ ಹಾಗೂ ತೊಂದರೆಗಳನ್ನು ಅನುಭವಿಸಿತ್ತು. ಅದಕ್ಕಾಗಿ ಎಲ್ಲ ಸೈನಿಕರು ಐಷಾರಾಮಿಯಲ್ಲಿ ಮುಳುಗಿದರು. ಹಾಗೂ ಹಗಲಿರುಳು ಮದ್ಯ ಸೇವಿಸುತ್ತಿದ್ದರು ಮತ್ತು ಮಗ್ನರಾಗಿರುತ್ತಿದ್ದರು. ವೈರಿಯ ಕಡೆಯಿಂದ ಅವರು ನಿರ್ಲಕ್ಷ್ಯರಾಗಿದ್ದರು. ಅಹ್ಮದ್ ನಿಜಾಮ್ ಷಾಹನಿಗೆ ಈ ಸ್ಥಿತಿಯ ಕುರಿತು ತಿಳಿದಾಗ ಷಾಹೀ ಸೈನ್ಯದ ನಿರ್ಲಕ್ಷ್ಯತೆಯ ಲಾಭ ಪಡೆದುಕೊಂಡು ೩ ರಜ್ಜಬ ೮೯೫ ಹಿಜ್ರಿಯ ರಾತ್ರಿ ಆಜಂಖಾನ್‌ನೊಂದಿಗೆ ಜೇವರ್ ಗ್ರಾಮದಿಂದ ಹೊರಬಿದ್ದನು ಹಾಗೂ ಸಿಡಿಲಿಗಿಂತ ತೀವ್ರವಾಗಿ ಹಾದಿ ಸವೆಸುತ್ತಾ ಬೆಳಿಗ್ಗೆಯೇ ಟಪಕಾಪುರದ ಸಮೀಪ ತಲುಪಿದನು.

ಶಾಹಿ ಸೈನ್ಯದ ವಿನಾಶ :

ಅಹ್ಮದ್ ನಿಜಾಮ್‌ನು ಪೂರ್ಣ ಪ್ರಮಾಣದ ಶಕ್ತಿ ಹಾಗೂ ಬಲದೊಂದಿಗೆ ವೈರಿಯ ಮೇಲೆ ದಾಳಿ ವೆಸಗಿದನು. ಶಾಹಿ ಸೈನ್ಯವು ಯುದ್ಧಕ್ಕೆ ಒಂದಿನಿತೂ ಸಿದ್ಧವಾಗಿರಲಿಲ್ಲ. ಬಹಳಷ್ಟು ಸೈನಿಕರು ವಿಲಾಸದಲ್ಲಿ ಮಗ್ನರಾಗಿದ್ದರು. ಮತ್ತು ಬಹಳಷ್ಟು ಸೈನಿಕರು ದೀರ್ಘನಿದ್ರೆಯ ವಶವಾಗಿದ್ದರು. ಅಹ್ಮದ್ ನಿಜಾಮನು ಹಲವಾರು ಸೈನಿಕರನ್ನು ಕೊಂದನು. ಹಾಗೂ ಅಗಣಿತ ಸೈನಿಕರು ಜೀವವುಳಿಸಿಕೊಂಡು ಓಡಿಹೋದರು. ಜಹಾಂಗೀರಖಾನ್, ಸೈಯದ್‌ಇಸಾಖ್, ಸೈಯದ್ ಲತೀಫುಲ್ಲಾ ನಿಜಾಮಖಾನ್ ಹಾಗೂ ಫತೆಅಲ್ಲಾಹ್‌ಖಾನ್ ಇತರರು ಕೊಲ್ಲಲ್ಪಟ್ಟರು. ಅವರ ಹೊರತಾಗಿ ಬಹಳಷ್ಟು

ಅಮೀರರು ಬಂಧಿಸಲ್ಪಟ್ಟರು. ಅಹ್ಮದ್ ನಿಜಾಮ್ ಶಾಹ್‌ನು ಈ ಕೈದಿಗಳಿಗೆ ಆಕಳು ಹಾಗೂ ಎಮ್ಮೆಯ ಮೇಲೆ ಸವಾರಿ ಮಾಡಿಸಿ ಹಾಗೂ ಅವರ ಉಟ್ಟ ಬಟ್ಟೆಗಳನ್ನು ಮೊಣಕಾಲುಗಳವರೆಗೆ ಹರಿದು ತನ್ನ ಸೈನ್ಯದ ಸುತ್ತ ತಿರುಗಿಸಿದನು. ಅದರ ನಂತರ ಅವರಿಗೆ ಜೀವದಾನ ಮಾಡಿ ರಾಜಧಾನಿಗೆ ರವಾನಿಸಿದನು.

ನಿಜಾಮನ ಉದ್ಯಾನವನ :

ಇತಿಹಾಸಕಾರನಾದ ತಾರೀಖೇ ಫರಿಷ್ತಾದ ಗ್ರಂಥಕರ್ತನಿಗೆ (ಇದರ ವಿವರವಾದ ಉಲ್ಲೇಖವನ್ನು ಮುರ್ತುಜಾ ನಿಜಾಮಶಾಹನ ಆಡಳಿತಾವಧಿಯ ಘಟನೆಗಳೊಂದಿಗೆ ವಿವರಿಸಲಾಗುವುದು) ಇದನ್ನು ಹೀಗೆ ವಿವರಿಸಲಾಗಿದೆ ಏನೆಂದರೆ ಈ ಯುದ್ಧವು 'ಜಂಗ್‌ಬಾಗ್' ಹೆಸರಿನಿಂದ ಖ್ಯಾತಿ ಹೊಂದಿದೆ. ಈ ಹೆಸರಿನ ಕಾರಣವೆಂದರೆ ಟಪಕಾಪುರ ಪಟ್ಟಣದ ಈ ಸ್ಥಳದಲ್ಲಿ ಎಲ್ಲಿ ಅಹ್ಮದ್ ನಿಜಾಮ್‌ಶಾಹ್‌ನಿಗೆ ಗೆಲವು ಲಭಿಸಿತ್ತೋ ಅಲ್ಲಿ ಒಂದು ತೋಟವನ್ನು ವೃದ್ಧಿಗೊಳಿಸಿದನು. ಅದಕ್ಕೆ 'ಬಾಗೇ ನಿಜಾಮ್' ಎಂದು ಹೆಸರಿಸಿದ್ದನು. ಈ ತೋಟದ ಸುತ್ತಮುತ್ತಲು ಉತ್ತಮ ದರ್ಜೆಯ ಗೋಡೆಗಳನ್ನು ನಿರ್ಮಿಸಲಾಗಿತ್ತು. ಈ ತೋಟದಲ್ಲಿ ಸುಂದರ ಹಾಗೂ ಅನುಪಮ ಇಮಾರತ್‌ನ್ನು ಕಟ್ಟಿಸಿದನು. ಕೆಲವು ಸಮಯದ ನಂತರ ಈ ತೋಟವು ಸ್ವರ್ಗೋದ್ಯಾನದಂತೆ ಕಂಗೊಳಿಸತೊಡಗಿತು. ಬುರ್ಹಾನ್ ನಿಜಾಮಶಾಹ ಹಾಗೂ ಅವನ ಸಂತಾನವು ಈ ತೋಟವನ್ನು ತಮಗಾಗಿ ಬಹಳ ಮಂಗಳಕರವೆಂದು ತಿಳಿದರು. ಇಲ್ಲಿ ಒಂದು ಕೋಟೆಯನ್ನು ನಿರ್ಮಿಸಲಾಯಿತು ಹಾಗೂ ಇದರಲ್ಲಿ ವಾಸಿಸತೊಡಗಿದರು.

ಅಹ್ಮದ್ ನಿಜಾಮಶಾಹನ ಹೆಸರಿನಲ್ಲಿ 'ಖುತ್ಬಾ' ಹಾಗೂ ನಾಣ್ಯ :

ಈ ವಿಜಯದ ಸಂತೋಷದಲ್ಲಿ ಅಹ್ಮದ್ ನಿಜಾಮ್‌ಶಾಹನು ಟಪಕಾಪುರ ಪಟ್ಟಣವನ್ನು ವಿದ್ವಾಂಸರು ಹಾಗೂ ಧಾರ್ಮಿಕ ಮಾರ್ಗದರ್ಶಕರಿಗೆ ವಕ್ಫ್ ಮಾಡಿದನು. ಹಾಗೂ ಸ್ವತಃ ಯಶಸ್ವಿಯಾಗಿ ಜನೀರ್‌ಗೆ ಮರಳಿ ಬಂದು ಸಿಂಹಾಸನಾರೂಢನಾದನು. ಯೂಸೂಫ್ ಆದಿಲ್‌ನ ಸಲಹೆಯ ಮೇರೆಗೆ ಅಹ್ಮದ್ ನಿಜಾಮ್‌ನು ಸುಲ್ತಾನ್ ಮಹ್ಮೂದ್‌ನ ಜಾಗದಲ್ಲಿ ತನ್ನ ಹೆಸರಿನ 'ಖುತ್ಬಾ' ಹಾಗೂ ನಾಣ್ಯ ಜಾರಿಗೊಳಿಸಿದನು. ಹಾಗೂ ಶ್ವೇತಛತ್ರವನ್ನು ತನ್ನ ತಲೆಯ ಮೇಲೆ ನೆರಳು ಮಾಡಿಕೊಂಡನು. (ಅದೇ ಆ ಕಾಲದಲ್ಲಿ ದೆಹಲಿ, ಗುಜರಾತ್ ಹಾಗೂ ಮಂದುವಿನ ಆಡಳಿತಗಾರರ ಗುರುತಾಗಿತ್ತು) ಅಹ್ಮದ್ ನಿಜಾಮ್‌ಶಾಹನ ನಂಬಿಗಸ್ತ ಹಾಗೂ ಹಿತೈಷಿಗಳಾದ ದಖನಿ ಅಮೀರರು, ಅವರಲ್ಲಿ ಖ್ವಾಜಾ ಜಹಾನನೂ ಸೇರಿದ್ದನು. ಈ ಮಾತಿನಿಂದ ಎಲ್ಲರೂ ಬಹಳೇ ಮುನಿಸಿಕೊಂಡರು. ಅವರು ಈ ವಿಚಾರ ವ್ಯಕ್ತಪಡಿಸಿದರು. ಏನೆಂದರೆ "ಸುಲ್ತಾನ್ ಮಹ್ಮೂದ್ ಶಾಹನ ಜೀವಿತ ಕಾಲದಲ್ಲಿ ತನ್ನ ಹೆಸರಿನ 'ಖುತ್ಬಾ' ಹಾಗೂ ನಾಣ್ಯ ಜಾರಿಗೊಳಿಸುವುದು ಹಾಗೂ ತಲೆಯ ಮೇಲೆ ಛತ್ರಛಾಯೆ ಮಾಡಿಕೊಳ್ಳುವುದು ಶಿಷ್ಟಾಚಾರದ ವಿರುದ್ಧವಾಗಿದೆ."

ಖುತ್ಬಾದ ರದ್ದುಗೊಳಿಸುವಿಕೆ :

ಅಹ್ಮದ್ ನಿಜಾಂ ಶಾಹನು ಅವಕಾಶವನ್ನು ಸದುಪಯೋಗಪಡಿಸಿಕೊಳ್ಳುವ ಹಾಗೂ ಜ್ಞಾನಿ ಮತ್ತು ಬುದ್ಧಿವಂತ ವ್ಯಕ್ತಿಯಾಗಿದ್ದನು. ಅವನು ತನ್ನ ಅಮೀರರನ್ನು ಹೀಗೆ ವಿಮುಖರಾಗುವುದನ್ನು ಕಂಡು, ಕೂಡಲೇ ತನ್ನ ಹೆಸರಿನ "ಖುತ್ಬಾ"ವನ್ನು ರದ್ದುಗೊಳಿಸಿದನು. ಹಾಗೂ ಸೈನ್ಯದ ಸರದಾರರಿಗೆ ಕರೆಯಿಸಿ ಅವರಿಗೆ ಹೀಗೆ ಹೇಳಿದನು. "ನಿಮ್ಮ ಸಲಹೆಯು ಸೂಕ್ತ ಹಾಗೂ ಸರಿಯಾಗಿದೆ. ನಾನು 'ಖುತ್ಬಾ'ವನ್ನು ರದ್ದುಗೊಳಿಸಿದ್ದೇನೆ. ಆದರೆ ಛತ್ರಛಾಯೆ ನನ್ನ ತಲೆಯ ಮೇಲೆ ಇರಿಸಿಕೊಳ್ಳುವೆನು. ಇದರಿಂದ ನನ್ನ ಉದ್ದೇಶವೆಂದರೆ ಬಿಸಿಲಿನಿಂದ ಉಳಿಯುವೆನು." ಇದನ್ನು ಕೇಳಿ ಸೈನ್ಯಾಧಿಕಾರಿಗಳು ಹೇಳಿದರು. "ಒಂದು ವೇಳೆ ವಿಷಯ ಹೀಗಿದೆಯೆಂದಾದರೆ ಸಾರ್ವಜನಿಕವಾಗಿ ಘೋಷಿಸಬೇಕು ಏನೆಂದರೆ ಯಾರೂ ಬೇಕಾದರೂ ಬಿಸಿಲಿನಿಂದ ಉಳಿಯುವುದಕ್ಕಾಗಿ ಛತ್ರದ ಉಪಯೋಗ ಮಾಡಬಹುದು." ಅಹ್ಮದ್ ನಿಜಾಮ್‌ಶಾಹನಿಗೆ ಅನಿವಾರ್ಯವಾಗಿ ಈ ಮಾತನ್ನು ಒಪ್ಪಿಕೊಳ್ಳಬೇಕಾಯಿತು. ಈ ವಿಷಯದಲ್ಲಿ ಮಾರ್ಗಸೂಚಿಯನ್ನು ಜಾರಿಗೊಳಿಸಲಾಯಿತು. ಅಧಿಕಾರಿ ಹಾಗೂ ಪ್ರಜೆಗಳಲ್ಲಿ ಈ ಭಿನ್ನತೆ ಇಡಲಾಯಿತು. ಏನೆಂದರೆ ಅಹ್ಮದ್‌ನ ಛತ್ರವು ಶ್ವೇತವರ್ಣದ್ದಿದ್ದು ಅದರ ಮೇಲ್ಗಡೆ ಒಂದು ಕೆಂಪುಬಣ್ಣದ ಹೂವು ಅಲಂಕರಿಸಲ್ಪಡುವುದು ಹಾಗೂ ಸಾಮಾನ್ಯ ಜನರ ಛತ್ರವು ಕೇವಲ ಬಿಳಿಯ ಬಣ್ಣದ್ದಾಗಿರುವುದು.

ಸಾರ್ವಜನಿಕವಾಗಿ ಛತ್ರದ ಉಪಯೋಗ :

ಇದರ ಪರಿಣಾಮವೇನಾಯಿತೆಂದರೆ ಸಾವಧಾನವಾಗಿ ಆದಿಲ್‌ಷಾಹಿ, ಬರೀದ್‌ಷಾಹಿ, ಕುತುಬ್‌ಷಾಹಿ, ಹಾಗೂ ಅಮಾದ್‌ಷಾಹಿ ವಂಶಗಳಲ್ಲಿ ಛತ್ರದ ಉಪಯೋಗ ರೂಢಿಯಲ್ಲಿ ಬಂದಿತು. ಅದೇ ಸಮಯದಲ್ಲಿ ಹಿಜ್ರಿ ೧೦೧೮ ರಲ್ಲಿ ಯಾವಾಗ ಈ ಗ್ರಂಥವು ಬರೆಯಲ್ಪಡುತ್ತಿತ್ತೋ (ತಾರೀಖೇ ಫರಿಸ್ತಾ) ಆಗ ದಖ್ಖನ್ನಿನ ಪ್ರತಿಯೊಬ್ಬ ಪ್ರಜೆಯ ತಲೆಯ ಮೇಲೆ ಛತ್ರ ಕಾಣಿಸಿಕೊಳ್ಳತೊಡಗಿತು. ಆದರೆ ಹಿಂದೂಸ್ಥಾನದ ಬೇರೆ ಬೇರೆ ಪ್ರದೇಶಗಳಲ್ಲಿ 'ಛತ್ರ'ದ ಉಪಯೋಗವು ಕೇವಲ ಆಡಳಿತಗಾರರಿಗೆ ಮೀಸಲಾಗಿತ್ತು.

ಅಹ್ಮದ್ ನಿಜಾಮ್‌ನ ಹೆಸರಿನಲ್ಲಿ 'ಖುತ್ಬಾ' ಎರಡನೆಯ ಸಲ ಜಾರಿಗೊಳ್ಳುವಿಕೆ:

ಅಹ್ಮದ್ ನಿಜಾಮ್‌ಷಾಹನು ಖ್ವಾಜಾ ಜಹಾಂ, ಅಜಮ್‌ಖಾನ ಹಾಗೂ ಇತರ ದಖ್ಖನ್ನಿನ ಅಮೀರರ ಮೇಲೆ ಬಹಳಷ್ಟೇ ಕೃಪೆದೋರಿದನು ಹಾಗೂ ಅವರನ್ನು ಬಹಳ ತೆರನಾಗಿ ಪುರಸ್ಕರಿಸಿದನು. ಈ ಸನ್ನಡತೆಯ ಪರಿಣಾಮವೇನಾಯಿತೆಂದರೆ ಎಲ್ಲ ಅಮೀರರು ಒಟ್ಟುಗೂಡಿ ಅಹ್ಮದ್ ನಿಜಾಮ್‌ಷಾಹ್‌ನಿಗೆ ಈ ಮನವಿ ಮಾಡಿದರು. ತನ್ನ ಹೆಸರಿನಲ್ಲಿ ಖುತ್ಬಾ ಜಾರಿಗೊಳಿಸಬೇಕೆಂದು ಕೇಳಿಕೊಂಡರು. ಅಹ್ಮದ್

ನಿಜಾಮ್‌ಷಾಹನು ಇದನ್ನೇ ಬಯಸುತ್ತಿದ್ದನು. ಅದಕ್ಕಾಗಿ ಅವನು ಕೂಡಲೇ ತನ್ನ ಹೆಸರಿನ 'ಖುತ್ಬಾ' ಜಾರಿಗೊಳಿಸಿದನು.

ದಂಡಾ ರಾಜಪುರಿ ಕೋಟೆಯ ಮೇಲೆ ವಶ :

ಅಹ್ಮದ್ ನಿಜಾಮನು ದಂಡಾ ರಾಜಪುರಿ ಕೋಟೆಯನ್ನು ವಶಪಡಿಸಿಕೊಳ್ಳಲು ಬಯಸಿದನು. ಅದು ಬಹಳ ಸುಭದ್ರಕೋಟೆಯಾಗಿತ್ತು. ಹಾಗೂ ಬಂದರ್ ಚೇವಲದ ಪ್ರದೇಶದಲ್ಲಿತ್ತು. ಅಹ್ಮದ್ ನಿಜಾಮ್‌ನು ಸ್ವತಃ ಈ ಕೋಟೆಯ ಮೇಲೆ ಆಕ್ರಮಣ ಮಾಡಿದನು ಹಾಗೂ ಎರಡು ತಿಂಗಳು ಅಥವಾ ಒಂದು ವರ್ಷದವರೆಗೆ ಆ ಕೋಟೆಯನ್ನು ಮುತ್ತಿಗೆ ಹಾಕಿದನು. ಕೊನೆಗೆ ಪರಸ್ಪರರಲ್ಲಿ ಸಂಧಾನವಾಯಿತು. ಹಾಗೂ ಕೋಟೆಯು ಅಹ್ಮದ್ ನಿಜಾಮನ ಪಾಲಾಯಿತು.

ದೌಲತಾಬಾದ್ ಕೋಟೆಯನ್ನು ವಶಪಡಿಸಿಕೊಳ್ಳುವ ಯೋಚನೆ :

ದಂಡಾ ರಾಜಪುರಿ ಕೋಟೆಯನ್ನು ವಶಪಡಿಸಿಕೊಂಡ ನಂತರ ಅಹ್ಮದ್ ನಿಜಾಮ್‌ಶಾಹನು ದೌಲತಾಬಾದ್ ಕೋಟೆಯನ್ನು ವಶಪಡಿಸಿಕೊಳ್ಳಲು ಯೋಚಿಸತೊಡಗಿದನು. ಅಹ್ಮದ್ ನಿಜಾಮನಿಗೆ ಈ ವಿಷಯದ ಕುರಿತು ಪೂರ್ಣಪ್ರಮಾಣದ ತಿಳಿವಳಿಕೆ ಇತ್ತು. ಏನೆಂದರೆ ಕೇವಲ ಶಕ್ತಿಯ ಬಲದಿಂದ ಈ ಕೋಟೆಯನ್ನು ವಶಪಡಿಸಿಕೊಳ್ಳುವುದು ಕಠಿಣವಾಗಿದೆ. ಅದಕ್ಕಾಗಿ ಅವನು ಬೇರೆ ದಾರಿ ತುಳಿದನು ಹಾಗೂ ಕೋಟೆಯ ಮುಖ್ಯಸ್ಥ ಮಲಿಕ್ ವಜಿಯುದ್ದೀನ್ ಹಾಗೂ ಮಲಿಕ್ ಅಶ್ರಫ್‌ರೊಂದಿಗೆ ಸಾಮಿಪ್ಯ ಹೊಂದಿದನು. ಇವರಿಬ್ಬರೂ ಸಹೋದರರಾಗಿದ್ದರು. ಮತ್ತು ಒಬ್ಬರಿಗೊಬ್ಬರು ಅಮಿತ ರೀತಿಯಲ್ಲಿ ಪ್ರೀತಿಸುತ್ತಿದ್ದರು. ಈ ಇಬ್ಬರು ಸಹೋದರರು 'ಖ್ವಾಜಾ ಜಹಾನ ಕಾವಾ' ದ ಸೇವಕರಾಗಿದ್ದರು. ಅದರ ನಂತರ ಸುಲ್ತಾನ ಮಹ್ಮೂದ್‌ನ ಹವಾಲ್ದಾರ್‌ರಲ್ಲಿ ಸೇರಿಕೊಂಡಿದ್ದರು.

ಮಲಿಕ್ ವಜಿ ಹಾಗೂ ಮಲಿಕ್ ಅಶ್ರಫ್ :

ಮಲಿಕ್ ನಾಯಬುಲ್ ಮುಲ್ಕ್‌ನು ಈ ಇಬ್ಬರು ಸಹೋದರರ ಮೇಲೆ ಬಹಳೇ ಕೃಪೆದೋರಿದನು ಹಾಗೂ ಅವರನ್ನು ಅಮೀರರ ಗುಂಪಿನಲ್ಲಿ ಸೇರಿಸಿದನು. ಮಲಿಕ್ ವಜಿಯುದ್ದೀನ್‌ನನ್ನು ದೌಲತಾಬಾದ್ ಕೋಟೆಯ ಠಾಣಾಧಿಕಾರಿ ಹಾಗೂ ಮಲಿಕ್ ಅಶ್ರಫ್‌ನಿಗೆ ಪಟ್ಟಣದ ಅಧಿಕಾರಿಯನ್ನಾಗಿ ನೇಮಿಸಿದನು. ಈ ಇಬ್ಬರೂ ಸಹೋದರರು ಈ ಪ್ರದೇಶದ ಅಭಿವೃದ್ಧಿಗಾಗಿ ಸಂಪೂರ್ಣ ಗಮನವನ್ನು ನೀಡಿದರು. ಎಲ್ಲ ಕಳ್ಳಕಾಕರು ಹಾಗೂ ದುರ್ಜನರನ್ನು ದಮನಗೊಳಿಸಿದರು. ದಾರಿಹೋಕರನ್ನು ಲೂಟಿ ಮಾಡುವವರನ್ನು ನಿರ್ನಾಮಗೊಳಿಸಿದರು. ಇದರಿಂದಾಗಿ ಎಲ್ಲ ರಸ್ತೆಗಳು ಸುರಕ್ಷಿತವಾದವು ಹಾಗೂ ವ್ಯಾಪಾರಿಗಳು ನಿಶ್ಚಿಂತೆಯಿಂದ ಪ್ರವಾಸ ಮಾಡತೊಡಗಿದರು. ಸಾರ್ವಜನಿಕರು

ಸಂತೃಪ್ತಗೊಂಡರು. ಪ್ರದೇಶವು ಅಭಿವೃದ್ಧಿಗೊಂಡಿತು. ಹಾಗೂ ನಾಲ್ಕೂ ಕಡೆ ಶಾಂತಿ ನೆಲೆಸಿತು.

ಅಹ್ಮದ್ ನಿಜಾಮ್‌ಷಾಹನ ಸಹೋದರಿಯೊಂದಿಗೆ ಮಲಿಕ್ ವಜಿಯ ವಿವಾಹ :

ಮರಾಠರ ಒಬ್ಬ ಸರದಾರನು ಬಹಮನಿ ಸಾಮ್ರಾಜ್ಯದ ದೌರ್ಬಲ್ಯವನ್ನು ಸದುಪಯೋಗಪಡಿಸಿಕೊಂಡು ಜಾಲನಾ ಕೋಟೆಯನ್ನು ವಶಪಡಿಸಿಕೊಂಡಿದ್ದನು. ವಜಿಯುದ್ದೀನ್ ಹಾಗೂ ಅಶ್ರಫ್‌ರು ಈ ಮರಾಠಾ ಸರದಾರನೊಂದಿಗೆ ಸಂಬಂಧ ಬೆಳೆಸಿದರು. ಹಾಗೂ ಅವನಿಗೆ ಲೂಟಿ ಮತ್ತು ಸಂಚು ಹೆಣೆಯುವಿಕೆಯಿಂದ ತಡೆದರು. ಈ ಇಬ್ಬರು ಸಹೋದರರು ಮಲಿಕ್ ನಾಯಿಬ್ ನಿಜಾಮುಲ್ ಮುಲ್ಕನ ಕೃಪೆಯ ಕಾರಣದಿಂದ ಅಹ್ಮದ್‌ನಿಜಾಮ್‌ಶಾಹನ ಹಿತೈಷಿಗಳಾಗಿದ್ದರು. ಅಹ್ಮದ್‌ನಿಜಾಮನು 'ಬಾಗ್‌ವನಿಜಾಮ್' ಹಾಗೂ ದಂದಾ ರಾಜಪುರಿಯ ಯಶಸ್ಸಿನ ನಂತರ ತನ್ನ ಸಹೋದರಿ 'ಜೈನಬ್ ಬೀಬಿ'ಯ ಮದುವೆಯನ್ನು ಮಲಿಕ್ ವಜಿಯುದ್ದೀನ್‌ನೊಂದಿಗೆ ಮಾಡಿದನು. ಹಾಗೂ ಈ ವಿಧವಾಗಿ ವಿರೋಧಿಯೊಂದಿಗೆ ಒಳ್ಳೆಯ ಸಂಬಂಧ ಸ್ಥಾಪಿತವಾಯಿತು. 'ಜೈನಬ್ ಬೀಬಿ'ಗೆ ದಯಾಮಯ ದೇವನು ಒಬ್ಬ ಪುತ್ರನನ್ನು ದಯಪಾಲಿಸಿದನು. ಮಲಿಕ್ ವಜಿಯುದ್ದೀನ್‌ನು ಅಹ್ಮದ್ ನಿಜಾಮಷಾಹ್‌ನಿಗೆ ಅರಿಕೆ ಮಾಡಿದನು. ಅವನು ಈ ಪುತ್ರನ 'ನಾಮಕರಣ' ಮಾಡಲು ಹೆಸರು ಆಯ್ಕೆಗೊಳಿಸಬೇಕು. ಅಹ್ಮದ್‌ನು ಹೇಳಿದನು 'ಬಾಲ್ಯದಲ್ಲಿ ನನ್ನ ಪಾಲಕರು ನನ್ನನ್ನು 'ಮೋತಿ' ಎಂದು ಕರೆಯುತ್ತಿದ್ದರು. ಅದಕ್ಕಾಗಿ ನೀನು ಈ ಮಗುವಿನ ಹೆಸರು 'ಮೋತಿ' ಎಂದು ಇಡುವುದು ಒಳ್ಳೆಯದು. ಅದರ ನಂತರ ಮಲಿಕ್ ವಜಿಯುದ್ದೀನ್‌ನು ಅಹ್ಮದ್‌ನ ಸಲಹೆಯನ್ನು ಒಪ್ಪಿಕೊಂಡನು. ಹಾಗೂ ಮಗನ ಹೆಸರನ್ನು 'ಮೋತಿ' ಎಂದು ಇಟ್ಟನು.

ಮಲಿಕ್ ವಜಿಯ ಕೊಲೆ :

ಮಲಿಕ್ ಅಶ್ರಫ್‌ನು ಯಾವಾಗ ತನ್ನ ಈ ಸಹೋದರನ ಉತ್ತರೋತ್ತರ ಪ್ರಗತಿಯನ್ನು, ದಿನನಿತ್ಯ ಹೆಚ್ಚುತ್ತಿರುವ ಕೀರ್ತಿಯನ್ನು ಕಂಡು ಅಸೂಯೆಯಿಂದ ಬೇಯತೊಡಗಿದನು. ಅದಕ್ಕಾಗಿ ಅವನು ತನ್ನ ಸಹೋದರನನ್ನು ಕೊಲ್ಲಲು ನಿಶ್ಚಯಿಸಿದನು. ಮಲಿಕ್ ಅಶ್ರಫ್‌ನು ಮಲಿಕ್ ವಜಿಯುದ್ದೀನ್‌ನನ್ನು ಕೊಂದು ದೌಲತಾಬಾದ್, ಜತ್‌ಬುರ್ ಹಾಗೂ ಇತರ ಪರಗಣಗಳ ಮೇಲೆ ಹಿಡಿತ ಸಾಧಿಸಲು ಯೋಚಿಸಿದನು. ಹಾಗೂ ಅವನು ತನ್ನ ಹೆಸರಿನ 'ಖುತ್ಬಾ' ಹಾಗೂ 'ನಾಣ್ಯ' ಜಾರಿಗೊಳಸಿಲು ಇಚ್ಛಿಸಿದನು. ಕೋಟೆಯಲ್ಲಿರುವ ಇತರರನ್ನು ತನ್ನ ಸಂಚಿನಲ್ಲಿ ಭಾಗಿಯಾಗಿಸಿ ಅಶ್ರಫ್‌ನು ಮಲ್ಲಿಕ್ ವಜೀಯುದ್ದೀನ್‌ನನ್ನು ಕೊಲೆಗೈದನು. ಅವನ ಮಗನಾದ 'ಮೋತಿ'ಯನ್ನು ಕೂಡ ವಿಷಪ್ರಾಶನ ಮಾಡಿಸಿ ಕೊಂದನು ಹಾಗೂ ಸ್ವತಃ ದೌಲತಾಬಾದ್‌ದ ಆಡಳಿತಗಾರನಾದನು.

ಮಲಿಕ್ ಅಶ್ರಫ್‌ನ ಆಡಳಿತ :

ಮಲಿಕ್ ಅಶ್ರಫ್‌ನು ಬುರ್ಹಾನಪುರ ಹಾಗೂ ಬರಾರ್‌ದ ಆಡಳಿತಗಾರರೊಂದಿಗೆ ಸ್ನೇಹ ಸಂಬಂಧ ಬೆಳೆಸಿದನು. ಹಾಗೂ ಮಹ್ಮೂದ್‌ಶಾಹ ಗುಜರಾತಿಗೆ ವಿಧೇಯತೆಯನ್ನು ತೋರಿದನು. ಮಹ್ಮೂದ್‌ನ ಸೇವೆಯಲ್ಲಿ ಆಗಾಗ ಕಾಣಿಕೆಗಳನ್ನು ಅರ್ಪಿಸುತ್ತಿದ್ದನು. ಏಕೆಂದರೆ ಮಲಿಕ್ ಆಶ್ರಫ್‌ನನ್ನು ಮಹ್ಮೂದ್‌ನು ತನ್ನ ಹಿತೈಷಿ ಹಾಗೂ ಸ್ನೇಹಿತರವಲಯದಲ್ಲಿ ಪರಿಗಣಿಸಬೇಕೆಂದು ಇಚ್ಛಿಸಿದನು.

ದೌಲತಾಬಾದ್‌ದೆಡೆಗೆ ಅಹ್ಮದ್ ನಿಜಾಮ್‌ಶಾಹನ ಪಯಣ :

ತನ್ನ ಪತಿ ಹಾಗೂ ಪುತ್ರನ ಕೊಲೆಯ ನಂತರ 'ಬೀಬಿ ಜೈನಬ'ಳು ಜನೀರ್‌ನಲ್ಲಿ ತನ್ನ ಸಹೋದರ ಅಹ್ಮದ್ ನಿಜಾಮ್‌ಶಾಹನ ಬಳಿ ಬಂದಳು. ಹಾಗೂ ಅವನಿಗೆ ಎಲ್ಲ ಪರಿಸ್ಥಿತಿ ಕುರಿತು ವಿವರಿಸಿದಳು. ಅಹ್ಮದನು ತನ್ನ ಸಹೋದರಿಗೆ ಸಾಂತ್ವನ ನೀಡಿದನು. ಹಾಗೂ ಹಿಜ್ರಿ ಶಕೆ ೮೯೯ರಲ್ಲಿ ಒಂದು ಬೃಹತ್ ಸೈನ್ಯವನ್ನು ತೆಗೆದುಕೊಂಡು ದೌಲತಾಬಾದ್‌ದ ಮೇಲೆ ವಿಜಯ ಹೊಂದಲು ಇಚ್ಛಿಸಿ ಭೀಡ್‌ನಿಂದ ಹೊರಟನು. ಅಹ್ಮದ್‌ನಿಜಾಮ್‌ನು ಟಪಕಾಪುರದ ಬಳಿ ತಲುಪಿ 'ಬಾಗ್‌ನಿಜಾಮ್'ದಲ್ಲಿ ವಿಶ್ರಾಂತಿ ಪಡೆಯತೊಡಗಿದನು. ಕೆಲವು ದಿನ ಸಂತೋಷದಿಂದ ಐಷಾರಾಮಿ ಜೀವನದಲ್ಲಿ ಮುಳುಗಿದನು. ಇದೇ ಸಮಯದಲ್ಲಿ ಖಾಸಿಂ ಬರೀದ್‌ನ ಕಡೆಯಿಂದ ತಾಜುದ್ದೀನ್ ದಖನಿ ಹಾಗೂ ದೇವರಸಪಂಡಿತ ಅಹ್ಮದ್‌ನ ಬಳಿ ಬಂದರು ಹಾಗೂ ಅವನಿಗೆ ಅಮೀರ್ ಖಾಸಿಂ ಬರೀದ್‌ನ ಸಂದೇಶವನ್ನು ನೀಡಿದರು.

ಅಮೀರ್ ಖಾಸಿಂ ಬರೀದ್‌ನ ಸಂದೇಶ :

"ಯೂಸೂಫ್ ಆದಿಲ್‌ಶಾಹನು ನನ್ನ ವಿನಾಶಕ್ಕಾಗಿ ಪೂರ್ಣರೀತಿಯಲ್ಲಿ ಯೋಜನೆ ಮಾಡಿದ್ದಾನೆ ಹಾಗೂ ಅವನು ಅಹ್ಮದಾಬಾದ್ ಬೀದರ್‌ವನ್ನು ಸೈನ್ಯದೊಂದಿಗೆ ಸುತ್ತುವರಿದಿದ್ದಾನೆ. ಒಂದು ವೇಳೆ ತಾವು ಈ ಸಮಯದಲ್ಲಿ 'ದೌಲತಾಬಾದ್'ವನ್ನು ವಶಪಡಿಸಿಕೊಳ್ಳುವ ಇಚ್ಛೆ ಬದಿಗಿರಿಸಿ ಹಾಗೂ ನನ್ನೆಡೆಗೆ ಗಮನ ನೀಡಿದರೆ ಜೀವನಪೂರ್ತಿ ನಿಮಗೆ ಋಣಿಯಾಗಿರುವೆನು. ನಾನು ಪ್ರಮಾಣ ಮಾಡುತ್ತೇನೆ. ಏನೆಂದರೆ ಯೂಸೂಫ್ ಆದಿಲ್‌ಷಾಹನ ಕ್ಷೋಭೆಯಿಂದ ಮುಕ್ತಿಹೊಂದಿದ ನಂತರ ನಿಮ್ಮೊಂದಿಗೆ ಸೇರಿ ದೌಲತಾಬಾದ್‌ದ ಮೇಲೆ ವಿಜಯ ಸಾಧಿಸಲು ಯತ್ನಿಸುವೆನು."

ಬೀದರ್ ಕೋಟೆಯ ಮುತ್ತಿಗೆ :

ಅಹ್ಮದ್ ನಿಜಾಮ್‌ನು ಖಾಸಿಂ ಬರೀದ್‌ನ ಮನವಿಯನ್ನು ಸ್ವೀಕರಿಸಿದನು. ಹಾಗೂ ದೌಲತಾಬಾದ್‌ವನ್ನು ವಶಪಡಿಸಿಕೊಳ್ಳುವ ವಿಚಾರವನ್ನು ಅಲ್ಲಿಯೇ ಬಿಟ್ಟು ಅಹ್ಮದಾಬಾದ್ ಬೀದರ್‌ಗೆ ಹೋಗಿ ತಲುಪಿದನು. ಅವನು ಕೋಟೆಯನ್ನು ಮುತ್ತಿಗೆ

ಹಾಕಿದನು. ದಿಗ್ಬಂಧನಗೊಳಿಸಿ ಎರಡು ತಿಂಗಳು ಗತಿಸಿದವು ಆಗ ಅಹ್ಮದ್ ನಿಜಾಮನು ಕೋಟೆಯ ಸುತ್ತಲಿನ ಪ್ರದೇಶವನ್ನು ವೀಕ್ಷಿಸಿ ಈ ನಿರ್ಣಯಕ್ಕೆ ಬಂದನು. ಕೋಟೆಯನ್ನು ಬಲಪ್ರಯೋಗ ಮಾತ್ರದಿಂದ ವಶಪಡಿಸಿಕೊಳ್ಳುವುದು ಅಸಾಧ್ಯವಾದುದಾಗಿದೆ. ಅದಕ್ಕಾಗಿ ಅವನು ದಿಗ್ಬಂಧನವನ್ನು ಸಡಿಲುಗೊಳಿಸಿ ಜನೀರ್‌ನತ್ತ ಮರಳಿದನು.

ಮಾರ್ಗದಲ್ಲಿ ಟಪಕಾಪುರದ ಬಳಿಯಲ್ಲಿ ವಿಶ್ರಾಂತಿ ಪಡೆದನು. ಹಾಗೂ ಈ ಸ್ಥಳದಲ್ಲಿ ಒಂದು ಹೊಸ ಪಟ್ಟಣವನ್ನು ನಿರ್ಮಿಸಲು ನಿರ್ಧರಿಸಿದನು. ಏಕೆಂದರೆ ಈ ಸ್ಥಳವು ಜನೀರ್ ಹಾಗೂ ದೌಲತಾಬಾದ್‌ದ ನಡುವೆ ಇರುವುದು. ಅಹ್ಮದ್‌ನು ಈ ಯೋಜಿತ ನಿವೇಶನವನ್ನು ಪಟ್ಟಣವನ್ನಾಗಿ ಪರಿವರ್ತಿಸಿ ತನ್ನ ರಾಜಧಾನಿಯನ್ನಾಗಿ ಮಾಡಿಕೊಳ್ಳಲು ನಿರ್ಧರಿಸಿದನು. ಇದರಿಂದಾಗಿ ಪ್ರತಿವರ್ಷ ವಸಂತ ಗ್ರೀಷ್ಮ ಋತುಗಳಲ್ಲಿ ದೌಲತಾಬಾದ್‌ಕ್ಕೆ ದವಸಧಾನ್ಯ ಹಾಗೂ ನಿತ್ಯೋಪಯೋಗಿ ವಸ್ತುಗಳು ಹೊರಗಿನಿಂದ ಬಂದರೆ ಅದನ್ನು ಲೂಟಿ ಮಾಡಲು ಅನುಕೂಲವಾಗುವುದು. ಅಹ್ಮದ್‌ನ ಯೋಜನೆಯೆಂದರೆ ಇದರಿಂದಾಗಿ ದೌಲತಾಬಾದ್‌ದವರನ್ನು ತೊಂದರೆಗೀಡುಮಾಡಬಹುದಾಗಿದೆ ಹಾಗೂ ಒಂದು ದಿನ ಅವರು ವಿವಶರಾಗಿ ಕೋಟೆಯನ್ನು ಅಹ್ಮದ್‌ನಿಗೆ ಒಪ್ಪಿಸುವರು.

ಅಹ್ಮದ್‌ನಗರದ ಬುನಾದಿ :

ಹಿಜ್ರಿ ಶಕೆ ೯೦೦ ರಲ್ಲಿ ಅಹ್ಮದ್‌ನಿಜಾಮ್‌ನು ಜ್ಯೋತಿಷಿಗಳು ಹೇಳಿದಂತಹ ಮಂಗಳಕರ ಸಮಯದಲ್ಲಿ 'ಬಾಗ್‌ಏನಿಜಾಮ್'ದ ಎದುರಿಗೆ ಸೇನ್ ಸರೋವರದ ತೀರದಲ್ಲಿ ಒಂದು ಹೊಸ ಪಟ್ಟಣದ ಬುನಾದಿ ಹಾಕಿದನು. ಅಹ್ಮದ್ ನಿಜಾಮನು ಇದನ್ನು ಗ್ರಹಿಸಿಕೊಂಡಿದ್ದನು. ಏನೆಂದರೆ ಅಹ್ಮದಾಬಾದ್ ಗುಜರಾತ್‌ದ ಹೆಸರನ್ನು ಅಹ್ಮದ್‌ಶಾಹ ಗುಜರಾತಿಯು ಸೂಚಿಸಿದ್ದನು. ಅದರ ಕಾರಣವೆಂದರೆ ರಾಜ, ಮಂತ್ರಿ ಹಾಗೂ ನಗರದ ನ್ಯಾಯಾಧೀಶ ಈ ಮೂವರ ಹೆಸರೂ ಅಹ್ಮದ್ ಎಂತಲೇ ಇತ್ತು. ಅದಕ್ಕಾಗಿ ಈ ಪಟ್ಟಣದ ಬುನಾದಿಯ ಸಮಯದಲ್ಲಿಯೂ ಇದೇ ಸ್ಥಿತಿಯು ಎದುರಾಯಿತು. ರಾಜನ ಹೆಸರು ಅಹ್ಮದ್ ನಿಜಾಮ್ ಎಂದಿತ್ತು. ಸಿಂಹಾಸನಾರೂಢ ನಸೀರುಲ್ ಮುಲ್ಕ ಗುಜರಾತಿಯ ನಿಜವಾದ ಹೆಸರು ಕೂಡ ಅಹ್ಮದ ಎಂದಿತ್ತು. ಮತ್ತು ಇದೇ ತೆರನಾಗಿ ಸೈನ್ಯದ ನ್ಯಾಯಾಧೀಶನ ಹೆಸರು ಅಹ್ಮದ್ ಎಂತಲೇ ಇತ್ತು. ಅದಕ್ಕಾಗಿ ಅಹ್ಮದ್ ನಿಜಾಮನು ಹೊಸ ಪಟ್ಟಣದ ಹೆಸರನ್ನು 'ಅಹ್ಮದ್‌ನಗರ' ಎಂದು ನಾಮಕರಣಗೊಳಿಸಿದನು.

ದೌಲತಾಬಾದ್‌ದ ಮೇಲೆ ಧಾಳಿ :

ಅಹ್ಮದ್ ನಿಜಾಮನು ಈ ಪಟ್ಟಣದ ನಿರ್ಮಾಣಕ್ಕಾಗಿ ಬಹಳ ಆಸಕ್ತಿ ತೋರಿದನು. ಕೆಲವೇ ಸಮಯದಲ್ಲಿ ಎಲ್ಲ ಅಮೀರರು ಹಾಗೂ ಆಡಳಿತಾಧಿಕಾರಿಗಳೂ ತಮಗಾಗಿ

ಕಟ್ಟಡಗಳನ್ನು ಕಟ್ಟಿಸಿಕೊಂಡರು. ಎರಡು ಮೂರು ವರ್ಷಗಳಲ್ಲಿ ಈ ಪಟ್ಟಣವು ಈಜಿಪ್ತ ಹಾಗೂ ಬಾಗ್ದಾದ ನಗರದ ಹಾಗೆ ಸಮೃದ್ಧಿ ಕಂಡಿತು. ಯಾವಾಗ ಪಟ್ಟಣವು ಪೂರ್ಣಪ್ರಮಾಣದಲ್ಲಿ ನಿರ್ಮಾಣಗೊಂಡಿತೊ ಆಗ ಅಹ್ಮದ್ ನಿಜಾಮನು ತನ್ನ ಯೋಜಿತ ಯೋಜನೆಯನ್ನು ಅನುಷ್ಠಾನಗೊಳಿಸಲು ತೊಡಗಿದನು. ಆತನು ವರ್ಷದಲ್ಲಿ ಎರಡು ಸಲದಂತೆ ಪ್ರತಿವರ್ಷವೂ ತನ್ನ ಸೈನ್ಯಕ್ಕೆ ದೌಲತಾಬಾದ್ ಮೇಲೆ ದಾಳಿ ಮಾಡಲು ಕಳುಹಿಸುತ್ತಿದ್ದನು. ನಿಜಾಮ್‌ಷಾಹಿ ಸೈನ್ಯವು ಈ ಪಟ್ಟಣವನ್ನು ನಿರ್ದಯಿಯಾಗಿ ಲೂಟಿ ಮಾಡುತ್ತಿತ್ತು. ಮನೆಗಳನ್ನು ಅಗ್ನಿಗಾಹುತಿ ಮಾಡುತ್ತಿತ್ತು.

ಬುರ್ಹಾನಪುರದ ಆಡಳಿತಗಾರನೊಂದಿಗೆ ಸಂಬಂಧ :

"ವಿಖಾಯೆ ನಿಜಾಮಷಾಹಿಯಾ"ದಲ್ಲಿ (ಇದರ ಲೇಖಕ ಸಯ್ಯದ್ ಅಲಿ ಸಮ್‌ನಾನಿ ಇರುವನು) ಅವನು ಬುರ್ಹಾನ್ ನಿಜಾಮ್‌ಷಾಹನ ಆಡಳಿತಾವಧಿಯಲ್ಲಿ ಈ ಗ್ರಂಥವನ್ನು ಬರೆಯಲು ತೊಡಗಿದನು. ಆದರೆ ಅಕಾಲ ಮೃತ್ಯುವು ಆವರಿಸಿ ಈ ಗ್ರಂಥವನ್ನು ಪೂರ್ತಿಕರಿಸುವ ಅವಕಾಶ ದೊರೆಯಲಿಲ್ಲ. ಹೀಗಾಗಿ ಇದು ಅಪೂರ್ಣವಾಗಿಯೇ ಉಳಿಯಿತು. ಹೀಗೆ ವ್ಯಾಖ್ಯಾನಿಸಲಾಗಿದೆ ಅಹ್ಮದ್ ನಿಜಾಮ್‌ಶಾಹ್‌ನ ಪ್ರತಾಪದ ಪ್ರಭಾವವು ನಾಲ್ಕೂ ದಿಕ್ಕಿಗೆ ಪ್ರಸಿದ್ಧಿಗೊಂಡಿತು. ಮುಬಾರಕ್‌ಖಾನ್ ಫಾರೂಕಿಯ ಮಗನಾದ ಬುರ್ಹಾನ್‌ಪುರದ ಆಡಳಿತಗಾರನಾದ ಆದಿಲ್‌ಖಾನ್‌ನು ಅಹ್ಮದ್ ನಿಜಾಮಷಾಹ್‌ನೊಂದಿಗೆ ಸಂಬಂಧ ಬೆಳೆಸಿದನು. ಹಾಗೂ ಎರಡು ಸಾವಿರ ಸವಾರರನ್ನು ಈ ಉದ್ದೇಶದಿಂದ ನೀಡಿದನು. ಯಾವಾಗ ಅಹ್ಮದ್ ನಿಜಾಮ್‌ಶಾಹ್‌ನು ದೌಲತಾಬಾದ್ ಕಡೆಗೆ ಹೋದಾಗ ಈ ಸವಾರರು ಅವನೊಂದಿಗೆ ಇರಬೇಕು.

ಆದಿಲ್‌ಖಾನ್‌ನು ಫತಾ ಅಲ್ಲಾಹ್ ಅಮಾದುಲ್ ಮುಲ್ಕನೊಂದಿಗೆ ಸ್ನೇಹ ಸಂಬಂಧ ಬೆಳೆಸಿದನು. ಹಾಗೂ ಅವನೊಂದಿಗೆ ಬಹಳ ಗಾಢಸಂಬಂಧವನ್ನು ಇಟ್ಟುಕೊಂಡಿದ್ದನು. ತನ್ನ ಪೂರ್ವಜರ ಸಂಪ್ರದಾಯದ ವಿರುದ್ಧ ಆದಿಲ್‌ನು ಸುಲ್ತಾನ ಮಹ್ಮೂದ್ ಗುಜರಾತಿಯ ವಿರೋಧಿಯಾದನು. ಈ ವಿರೋಧವು ಎಲ್ಲಿಯವರೆಗೆ ಹೋಯಿತೆಂದರೆ ಆದಿಲ್‌ನು ಆ ಹಣವನ್ನು ಯಾವುದನ್ನು ಪ್ರತಿವರ್ಷವೂ ಗುಜರಾತಿಯ ಭಂಡಾರದಲ್ಲಿ ಸೇರಿಸಲಾಗುತ್ತಿತ್ತೋ ಅದನ್ನು ನಿಲ್ಲಿಸಿದನು.

ಮಲಿಕ್ ಅಶ್ರಫ್‌ನತ್ತ ಸುಲ್ತಾನ್ ಮಹ್ಮೂದ್ ಗುಜರಾತಿಯ ಸಹಾಯಹಸ್ತ ಚಾಚುವಿಕೆ:

ಸುಲ್ತಾನ್ ಮಹ್ಮೂದ್ ಗುಜರಾತಿಯು ಹಿಜ್ರಿ ಶಕೆ ೯೦೫ ರಲ್ಲಿ ತನ್ನ ಸಾಮ್ರಾಜ್ಯದಲ್ಲಿ ಪ್ರವಾಸದ ನೆಪದಿಂದ ಪಯಣ ಆರಂಭಿಸಿದನು. ದೌಲತಾಬಾದ್‌ನ ಆಡಳಿತಗಾರನಾದ ಮಲಿಕ್ ಅಶ್ರಫ್‌ನು ಈ ಅವಕಾಶವನ್ನು ಸದುಪಯೋಗಪಡಿಸಿಕೊಂಡು ಕೂಡಲೇ ತನ್ನ ದೂತರನ್ನು ಮಹ್ಮೂದ್ ಗುಜರಾತಿಯ ಸೇವೆಯಲ್ಲಿ ಕಳುಹಿಸಿದನು. ಹಾಗೂ ಅವನಿಗೆ ಈ ಸಂದೇಶವನ್ನು ನೀಡಿದನು. "ಅಹ್ಮದ್ ನಿಜಾಮ್ ಶಾಹ್‌ನ ದಿಗ್ಬಂಧನ

ಹಾಗೂ ದೊಂಬಿಯ ಕಾರಣದಿಂದ ನಾನು ತುಂಬಾ ವ್ಯಥಿತನಾಗಿದ್ದೇನೆ. ಒಂದು ವೇಳೆ ನೀವು ನನ್ನ ಸಹಾಯಕ್ಕಾಗಿ ಇತ್ತ ಆಗಮಿಸುವಿರಾದರೆ ನಾನು ಬಹಳೇ ಋಣಿಯಾಗುವೆನು". ಸುಲ್ತಾನ್ ಮಹ್ಮೂದ್‌ನು ದೌಲತಾಬಾದ್‌ದ ಕೋಟೆಯನ್ನು ವಶಪಡಿಸಿಕೊಳ್ಳುವ ತನ್ನ ದುರಾಸೆಯಿಂದ ಒಂದು ದೊಡ್ಡ ಸೈನ್ಯವನ್ನು ಒಟ್ಟುಗೂಡಿಸಿದನು. ಹಾಗೂ ದಖ್ಖನ್ನಿನ ಕಡೆಗೆ ಹೊರಟನು. ಅವನು ಆದಿಲ್ ಖಾನ್ ಫಾರೂಕಿಯನ್ನು ಛೀಮಾರಿ ಹಾಕಿ ದೌಲತಾಬಾದ್‌ದೆಡೆಗೆ ಹೊರಡಲು ನಿಶ್ಚಯಿಸಿದನು.

ಬುರ್ಹಾನಪುರ ವಶಪಡಿಸಿಕೊಳ್ಳುವತ್ತ ಅಹ್ಮದ್ ನಿಜಾಮಶಾಹನ ಧೃಢನಿಶ್ಚಯ :

ಯಾವಾಗ ಮಹ್ಮೂದ್ ಗುಜರಾತಿಯು ಸುಲ್ತಾನಪುರ ನಂದರ್‌ಬಾರ್‌ದ ಸಮೀಪ ತಲುಪಿದನೋ ಆಗ ಆದಿಲ್‌ಖಾನ್‌ನು ಬಹಳ ಚಿಂತೆಗೀಡಾದನು. ಅಹ್ಮದ್ ನಿಜಾಮ್‌ಷಾಹ್ ಬಹ್ರಿಯಿಂದ ಸಹಾಯವನ್ನು ಯಾಚಿಸಿದನು. ಹಾಗೂ ಅವನಿಂದ ದೌಲತಾಬಾದ್‌ದ ದಿಗ್ಬಂಧನವನ್ನು ಸಡಿಲುಗೊಳಿಸಲು ಅರಿಕೆ ಮಾಡಿದನು. ಅಹ್ಮದ್ ನಿಜಾಮಶಾಹ್‌ನು ಹದಿನೈದು ಸಾವಿರ ಸೈನಿಕರೊಂದಿಗೆ ಬುರ್ಹಾನಪುರದತ್ತ ಹೊರಟನು. ಅವನು ಅಲ್ಲಿ ತಲುಪಿದಾಗ ಫತಃ ಅಲ್ಲಾಹ್ ಅಮಾದಿಯು ಕೂಡ ತನ್ನ ಸೈನ್ಯದೊಂದಿಗೆ ಆದಿಲ್ ಖಾನನ ಸಹಾಯಕ್ಕಾಗಿ ಬಂದನು. ನಸೀರುಲ್ ಮುಲ್ಕ ಗುಜರಾತಿಯು ಅಹ್ಮದ್ ನಿಜಾಮನ ಸಲಹೆಯಂತೆ ಒಬ್ಬ ಗುಜರಾತಿ ಅಮೀರನ ಮುಖಾಂತರ ಮಹ್ಮೂದ್ ಶಾಹ್ ಗುಜರಾತಿಯ ಹೆಸರಿನಲ್ಲಿ ಒಂದು ಪತ್ರ ಕಳುಹಿಸಿದನು. ಅದರ ಸಾರಾಂಶ ಹೀಗಿತ್ತು. :

ನಸೀರುಲ್ ಮುಲ್ಕ್‌ನ ಪತ್ರ, ಮಹ್ಮೂದ್ ಶಾಹ ಗುಜರಾತಿಯ ಹೆಸರಿನಲ್ಲಿ :

'ಒಂದು ವೇಳೆ ನಾನು ವಿಧಿಲಿಖಿತದಿಂದಾಗಿ ಅಹ್ಮದ್ ನಿಜಾಮ ಶಾಹನ ಸೇವಕ ಹಾಗೂ ನಂಬಿಗಸ್ತನಾಗಿದ್ದೇನೆ. ಆದರೆ ಗುಜರಾತಿನ ಪ್ರಜೆಯಾಗಿರುವ ಕಾರಣ ತನ್ನ ದೇಶದ ಆಡಳಿತಗಾರನ ಹಿತೈಷಿಯಾಗುವುದು ನನ್ನ ಮೊದಲ ಕರ್ತವ್ಯವಾಗಿದೆ. ತಮ್ಮಂಥ ಮಹಾನ್ ವ್ಯಕ್ತಿತ್ವದ ಆಡಳಿತಗಾರನಿಗೆ ಇದು ಯಾವುದೇ ಕಾರಣದಿಂದ ಶೋಭೆ ತರುವುದಿಲ್ಲ. ಸಣ್ಣ ಸಣ್ಣ ಸಮಸ್ಯೆಗಳನ್ನು ಬಗೆಹರಿಸಲು ತಾವೇ ಸ್ವತಃ ಕಷ್ಟಪಡುವುದು ಸರಿಯಲ್ಲ. ಬುರ್ಹಾನ್‌ಪುರದ ಆಡಳಿತಗಾರ ತನ್ನ ಸೈನ್ಯದ ಬಲದಿಂದ ತಮ್ಮ ಯಾವುದೇ ಅಮೀರನನ್ನು ಎದುರಿಸಲು ಸಮಬಲನಾಗಲಾರನು ಅಂದಾಗ ತಾವು ಸ್ವತಃ ಅವನನ್ನು ಎದುರಿಸಲು ಬರುವುದೇ? ಈ ದಿನಗಳಲ್ಲಿ ವಿಶೇಷವಾಗಿ ಹೀಗೆ ಮಾಡುವುದು ಒಳಿತಲ್ಲ. ಏಕೆಂದರೆ ದಖ್ಖನ್ನಿನ ಮಹಾನ್ ಆಡಳಿತಗಾರರಾದ ತಾವು ಆದಿಲ್ ಖಾನ್‌ನ ಸಹಾಯಕ್ಕಾಗಿ ಆಗಮಿಸಿದ್ದೀರಿ'

'ತಾವು ಯುದ್ಧದ ವಿಚಾರವನ್ನು ಮನಸ್ಸಿನಿಂದ ತೆಗೆದುಹಾಕುವುದು ಒಳಿತು, ಸಂಧಾನದ ಹಾದಿ ಎಲ್ಲಕ್ಕಿಂತ ಒಳ್ಳೆಯದು' ಒಂದು ವೇಳೆ ತಾವು ಯುದ್ಧ ಮಾಡಲು

ನಿಶ್ಚಯಿಸಿದ್ದೇ ಆದರೆ ಸೋಲು ಅಥವಾ ಗೆಲುವನ್ನು ಕಾಣುವಿರಿ. ಎರಡೂ ಸ್ಥಿತಿಯಲ್ಲಿ ತಮಗೆಯೇ ಹಾನಿಯುಂಟಾಗುವುದು. ಅದು ಹೇಗೆಂದರೆ ಒಂದು ವೇಳೆ ತಾವು ಸೋತರೆ ಜಗತ್ತು ಹೀಗೆನ್ನುವುದು, ಒಂದು ಸಣ್ಣ ಸೈನ್ಯ ಮಹ್ಮೂದ್ ಗುಜರಾತಿಗೆ ಸೋಲುಣಿಸಿತು. ಒಂದು ವೇಳೆ ತಾವು ಗೆದ್ದರೆ ಹೀಗೆನ್ನಲಾಗುವುದು. ಮಹ್ಮೂದ್ ಗುಜರಾತಿಯು ಒಂದು ದೊಡ್ಡ ಸೈನ್ಯದ ಸಹಾಯದಿಂದ ಕೆಲವು ಜನರನ್ನು ತನ್ನ ವಶಪಡಿಸಿಕೊಂಡನು. ಅಂದಾಗ ಅದೇನು ದೊಡ್ಡ ಕೆಲಸ ಮಾಡಿದನು. ಅದಕ್ಕಾಗಿ ಎರಡೂ ಸ್ಥಿತಿಯಲ್ಲಿ ತಮ್ಮ ಪ್ರಸಿದ್ಧ ವಂಶದ ಹೆಸರಿಗೆ ಚ್ಯುತಿ ಬರುವುದು.

ಅಹ್ಮದ್ ನಿಜಾಮ್‌ಶಾಹನ ಸಂಚು :

ಮೇಲೆ ವ್ಯಾಖ್ಯಾನಿಸಲಾದ ಗುಜರಾತಿ ಅಮೀರನು ನಸೀರುಲ್ ಮುಲ್ಕನ ಪತ್ರ ಮಹ್ಮೂದ್ ಶಾಹ್ ಗುಜರಾತಿಯ ಸೇವೆಯಲ್ಲಿ ಅರ್ಪಿಸಿದನು. ಮಹ್ಮೂದ್‌ನು ಈ ಪತ್ರವನ್ನು ಓದಿದನು ಹಾಗೂ ಯೋಚನೆಯಲ್ಲಿ ತೊಡಗಿದನು. ಏನನ್ನು ಮಾಡುವುದು, ಹಾಗೂ ಏನನ್ನು ಮಾಡಬಾರದು ಎಂದು. ಮತ್ತೊಂದು ಕಡೆ ಅಹ್ಮದ್ ನಿಜಾಮ್‌ಶಾಹನು ಮಹ್ಮೂದ್ ಗುಜರಾತಿಯ ಒಬ್ಬ ಮಾವುತನಿಗೆ ಯಾವನು ಬಹ್ರಿಸಾಲ ಹೆಸರಿನ ಆನೆಯ ಮಾವುತನಾಗಿದ್ದನೊ ಅವನಿಗೆ ಅಪಾರ ದ್ರವ್ಯ ನೀಡಿ ತನ್ನವನನ್ನಾಗಿಸಿದನು ಹಾಗೂ ಅವನಿಗೆ ಈ ಮಾತಿಗೆ ಒಪ್ಪಿಸಿದನು. ಏನೆಂದರೆ ರಾತ್ರಿಯ ವೇಳೆ ಯಾವಾಗ ಮಹ್ಮೂದ್ ಗುಜರಾತಿ ಹಾಗೂ ಅವನ ಸೈನ್ಯವು ತಮ್ಮ ತಮ್ಮ ಬಿಡಾರಗಳಲ್ಲಿ ನಿದ್ರಾವಶರಾದಾಗ ಅವನು ತನ್ನ ಬಲಾಢ್ಯ ಹಾಗೂ ಮದೋನ್ಮತ್ತ ಆನೆಯ ಸರಪಳಿ ಬಿಚ್ಚಿ ಸೈನ್ಯದ ಕಡೆಗೆ ಓಡಿಸಬೇಕು.

ಗುಜರಾತಿಗಳ ಮೇಲೆ ನಿಜಾಮಶಾಹಿ ಸೈನ್ಯದ ದಾಳಿ :

ಈ ಯೋಜನೆಯಂತೆ ಅಹ್ಮದ್ ನಿಜಾಮ್ ಶಾಹಿಯು ಆ ರಾತ್ರಿ ೫೦೦೦ ಕಾಲಾಳು ಹಾಗೂ ೫೦೦೦ ಶರಪ್ರಾವೀಣ್ಯರಾದ ಸವಾರರ ಒಂದು ತಂಡವನ್ನು ಗುಜರಾತಿಯ ಸೈನ್ಯದತ್ತ ಕಳುಹಿಸಿದನು. ಅಹ್ಮದ್ ನಿಜಾಮ್‌ನು ತನ್ನ ಸೈನ್ಯಕ್ಕೆ ಈ ಆದೇಶ ನೀಡಿದನು. ಅವರು ತಮ್ಮ ಆಶ್ರಯದಾಣದಲ್ಲಿ ಅಡಗಿ ಕುಳಿತಿರಬೇಕು. ಹಾಗೂ ಯಾವಾಗ ಗುಜರಾತಿಯ ಸೈನ್ಯದಲ್ಲಿ ಹಾಹಾಕಾರ ಉಂಟಾಗುವುದೋ ಆಗ ನೀವು ಹೊರಬಂದು ವೈರಿಯ ವಿನಾಶ ಮಾಡಬೇಕು. ನಿಜಾಮಶಾಹಿ ಸೈನಿಕರು ಈ ಆದೇಶವನ್ನು ಪಾಲಿಸಿದರು. ಹಾಗೂ ಗುಜರಾತಿ ಸೈನ್ಯದ ಬಳಿ ತಲುಪಿ ಅಲ್ಲಿ ಇಲ್ಲಿ ಅಡಗಿಕೊಂಡರು. ಅರ್ಧರಾತ್ರಿ ಕಳೆದ ಮೇಲೆ ಮಾವುತನು ಆನೆಯನ್ನು ಬಿಡುಗಡೆಗೊಳಿಸಿ ಗುಜರಾತಿಯ ಸೈನ್ಯದತ್ತ ಓಡಿಸಿದನು. ಆನೆಯು ವಿನಾಶವುಂಟು ಮಾಡಲು ಪ್ರಾರಂಭಿಸಿತು. ಆಗ ಸೈನಿಕರು ದಿಗ್ಭ್ರಮೆಗೊಂಡು ಅತ್ತಿತ್ತ ಓಡಾಡತೊಡಗಿ ಚೀರುವುದನ್ನು ಚೀತ್ಕರಿಸುವುದನ್ನು ಮಾಡತೊಡಗಿದರು. ಆಗ ಈ ಚೀರಾಟವನ್ನು ಕೇಳಿ

ನಿಜಾಮಶಾಹಿಯ ಸವಾರರು ಹಾಗೂ ಕಾಲಾಳುಗಳು ತಮ್ಮ ತಂಗುದಾಣದಿಂದ ಹೊರಬಂದು ಗುಜರಾತಿಯ ಸೈನ್ಯದ ಮೇಲೆ ದಾಳಿ ಮಾಡಿದರು.

ಗುಜರಾತಿಗಳ ಸ್ಥಿತಿಗತಿ :

ನಾಲ್ಕೂ ಕಡೆ ಸಣ್ಣದೊಡ್ಡ ನಗಾರಿಗಳ ಧ್ವನಿ ಪ್ರತಿಧ್ವನಿಸತೊಡಗಿತು. ನಿಜಾಮಷಾಹಿಯ ಸೈನಿಕರು ಬಿರುಸಾಗಿ ಬಾಣ ಹಾಗೂ ಪಿಸ್ತೂಲನ್ನು ಪ್ರಯೋಗಿಸತೊಡಗಿದರು. ಸುಲ್ತಾನ ಮಹ್ಮೂದ್ ಹಾಗೂ ಅವನ ಅಮೀರರಿಗೆ ದಖನ್ನಿಗಳಿಂದ ಇಂಥ ಧೈರ್ಯ, ಸ್ಥೈರ್ಯ ಹಾಗೂ ಶೂರತನದ ಪ್ರದರ್ಶನ ತೋರುತ್ತಾರೆಂದು ಭಾವಿಸಿರಲಿಲ್ಲ. ಅವರು ವೈರಿಯಿಂದ ನಿಶ್ಚಿಂತರಾಗಿ ತಮ್ಮ ತಮ್ಮ ತಂಗುದಾಣಗಳಲ್ಲಿ ನಿರ್ಲಕ್ಷ್ಯದಿಂದ ಬಿದ್ದಿದ್ದರು. ಅವರು ಚೀತ್ಕಾರಗಳ ಧ್ವನಿಯನ್ನು ಕೇಳಿದಾಗ ಎಚ್ಚರಗೊಂಡರು ಹಾಗೂ ತಮ್ಮ ಜೀವಗಳನ್ನು ಉಳಿಸಿಕೊಳ್ಳುವುದಕ್ಕಾಗಿ ಕುದುರೆ ಸವಾರಿ ಮಾಡಿದರು.

ಈ ಘಟನೆಗಿಂತ ಮುಂಚೆ ಸುಲ್ತಾನ ಮೆಹ್ಮೂದ್ ಗುಜರಾತಿಯು ಇದರ ಕುರಿತು ತಿಳಿದುಕೊಂಡಿದ್ದನು. ಏನೆಂದರೆ ಅಹ್ಮದ್ ನಿಜಾಮಷಾಹನು ಬಹಮನಿಯ ಆಡಳಿತಗಾರರ ಸೈನ್ಯದಿಂದ ಆಯ್ದುಕೊಂಡ ಹೆಸರಾಂತ ನಾಲ್ಕು ಸಾವಿರ ಸೈನಿಕರಿಗೆ ಬಹುಮಾನದಿಂದ ಪುರಸ್ಕರಿಸಿ ತನ್ನ ಆಪ್ತಸೈನ್ಯದಲ್ಲಿ ಸೇರ್ಪಡೆಗೊಳಿಸಿಕೊಂಡಿದ್ದನು. ಅಹ್ಮದ್ ನಿಜಾಮನು ಎಷ್ಟೋ ಸಲ ಈ ಮಾತನ್ನು ಪುಷ್ಟೀಕರಿಸಿದ್ದನು. ಏನೆಂದರೆ ನಾನು ಈ ನಾಲ್ಕು ಸಾವಿರ ಸೈನಿಕರನ್ನು ಜೊತೆಗೆ ತೆಗೆದುಕೊಂಡು ಸುಲ್ತಾನ್ ಮೆಹ್ಮೂದ್ ಗುಜರಾತಿಯ ಮೇಲೆ ರಣಭೂಮಿಯಲ್ಲಿ ದಾಳಿ ಮಾಡುವೆನು ಹಾಗೂ ಅದಕ್ಕೆ ವಿರೋಧದ ರುಚಿ ಉಣಿಸುವೆನು. ಮುಂದೆ ದೇವನ ಇಚ್ಛೆ ಇದ್ದಂತಾಗುವುದು.

ಮೆಹ್ಮೂದ್ ಗುಜರಾತಿಯ ಚಿಂತೆ :

ಮೆಹ್ಮೂದ್ ಶಾಹ್ ಗುಜರಾತಿಗೆ ಮೇಲಿಂದ ಮೇಲೆ ಈ ಮಾತು ನೆನಪಿಗೆ ಬರುತ್ತಿತ್ತು. ಹಾಗೆ ನೋಡಿದರೆ ಆ ರಾತ್ರಿ ಈ ಸುದ್ದಿಯು ಪ್ರಚಾರ ಪಡೆದಿತ್ತು. ಏನೆಂದರೆ ಅಹ್ಮದ್ ನಿಜಾಮನು ಮೇಲೆ ಹೇಳಿದಂತೆ ನಾಲ್ಕು ಸಾವಿರ ಹೆಸರಾಂತ ಸೈನಿಕರನ್ನು ಆಯ್ಕೆ ಮಾಡಿ ಇರುಳದಾಳಿ ಮಾಡುವವನಿದ್ದಾನೆ. ಹಾಗೂ ಮೆಹ್ಮೂದ್ ಶಾಹ್ ಗುಜರಾತಿಯ ತಂಗುದಾಣದ ಮೇಲೆ ದಾಳಿ ಮಾಡಿ ಅವನಿಗೆ ಹಾನಿಯುಂಟು ಮಾಡಲು ಯೋಚಿಸಿದ್ದಾನೆ. ಸುಲ್ತಾನ್ ಮೆಹ್ಮೂದ್ ಕುದುರೆ ಸವಾರಿ ಮಾಡಿ ಹತ್ತಾರು ಸೈನಿಕರೊಂದಿಗೆ ತನ್ನ ತಂಗುದಾಣದಿಂದ ಹೊರಬಿದ್ದನು. ಆ ಸಮಯದಲ್ಲಿ 'ಭೈರಿಸಾಲ' ಹೆಸರಿನ ಆನೆಯು ಶಾಹಿ ತಂಗುದಾಣದ ಹಿಂದೆ ತಲುಪಿ ಬಿಡಾರವನ್ನು ತುಂಡು ತುಂಡುಗಳನ್ನಾಗಿ ಮಾಡಿತು. ಸ್ತ್ರೀಯರು ಅಳುವುದು, ಚೀರುವುದನ್ನು ಮಾಡತೊಡಗಿದರು. ಮೆಹ್ಮೂದ್ ಶಾಹ್‌ನಿಗೆ ಈಗ ಪೂರ್ಣ ರೀತಿಯಲ್ಲಿ ನಂಬಿಕೆಯುಂಟಾಯಿತು. ಅಹ್ಮದ್ ನಿಜಾಮಶಾಹನು ಹಿಂದಿನಿಂದ ದಾಳಿ

ಮಾಡಿರುವನು. ಅದಕ್ಕಾಗಿ ಅವನು ಕೂಡಲೇ ತನ್ನ ಸಮೀಪಸ್ಥ ಬಂಧುಗಳೊಂದಿಗೆ ಈ ಸ್ಥಳದಿಂದ ಪರಾರಿಯಾದನು. ಹಾಗೂ ಬೇರೊಂದು ಸ್ಥಳದಲ್ಲಿ ತಂಗಿದನು.

ದಖನಿ ಸೈನ್ಯದ ಮರಳುವಿಕೆ :

ಆ ಸ್ಥಾನದಲ್ಲಿ ಮೂರು ನಾಲ್ಕು ವ್ಯಕ್ತಿಗಳು ಅವನ ಸುತ್ತ ಸೇರಿಕೊಂಡರು. ಚೀರಾಟದ ಧ್ವನಿ ಮತ್ತಷ್ಟು ಉತ್ತುಂಗಕ್ಕೇರಿತು. ಈ ದೃಶ್ಯವನ್ನು ಕಂಡು ಮೊಹ್ಮದ್‌ನು ಅಲ್ಲಿಂದಲೂ ಕಾಲು ಕಿತ್ತನು. ಹಾಗೂ ಮೂರು ಕೋಸ್ ದೂರದ ಸ್ಥಳಕ್ಕೆ ತಲುಪಿದನು. ಅದೇ ವೇಳೆಯಲ್ಲಿ ಗುಜರಾತಿಯ ಅಮೀರರು ಸೈನ್ಯವನ್ನು ಒಟ್ಟುಗೂಡಿಸಿ ವೈರಿಯನ್ನು ಎದುರಿಸಿದರು. ಅದರ ಪರಿಣಾಮ ಏನಾಯಿತೆಂದರೆ ದಖನಿ ಸೈನ್ಯವು ಹಿಮ್ಮೆಟ್ಟಿತು. ಗುಜರಾತಿ ಅಮೀರರು ತನ್ನ ದೊರೆಗೆ ಶುಭಾಶಯ ತಿಳಿಸಲು ಅವನ ತಂಗುದಾಣಕ್ಕೆ ತಲುಪಿದರು. ಆದರೆ ಅಲ್ಲಿ ಮೆಹ್ಮೂದ್ ಶಾಹನು ಕಾಣಲಿಲ್ಲ. ಇದರಿಂದ ಆ ಸ್ಥಿತಿಯ ಚಿತ್ರಣ ಅವರ ಕಣ್ಣೆದುರು ಬಂದಿತು.

ಗುಜರಾತಿ ಅಮೀರರು ಆ ರಾತ್ರಿ ಎಲ್ಲರೂ ಸೇರಿ ಯೋಚಿಸಿ ಕೆಟ್ಟ ವಾತಾವರಣದ ನೆಪ ಹೇಳಿ ಅಲ್ಲಿಂದ ಮೆಹ್ಮೂದ್ ಶಾಹ್ ಗುಜರಾತಿಯ ಹಿಂದೆ ಹೊರಟು ಹೋದರು. ಹೀಗಾಗಿ ಸುಲ್ತಾನ್ ಮೆಹ್ಮೂದ್‌ನಿಗೆ ದಖ್ಖನ್ನಿನವರ ಕುಟಿಲತೆಯು ಅರಿವಾಯಿತು. ಏಕೆಂದರೆ ಅದೇ ರಾತ್ರಿ ಮರಳುವುದು, ರಣತಂತ್ರಕ್ಕೆ ವಿರುದ್ಧವಾಗಿತ್ತು. ಅದಕ್ಕಾಗಿ ಅವನು ಎಲ್ಲಿ ತಲುಪಿದ್ದನೋ ಅಲ್ಲಿಯೇ ಉಳಿದುಕೊಂಡನು. ಅಹ್ಮದ್ ನಿಜಾಮಶಾಹನು ಕೂಡ ಇದನ್ನೇ ಬಯಸುತ್ತಿದ್ದನು. ಅದಕ್ಕಾಗಿ ಅವನು ಬೆಳ್ಳಂಬೆಳಿಗ್ಗೆಯೇ ಆದಿಲ ಖಾನನೊಂದಿಗೆ ಹೊರಟು ಮೆಹ್ಮೂದ್ ಗುಜರಾತಿಯ ತಂಗುದಾಣದಲ್ಲಿ ಉಳಿದುಕೊಂಡನು.

ವಿರೋಧಿಗಳ ನಡುವೆ ಸಂಧಾನ :

ಈ ಘಟನೆಯ ನಂತರ ಎರಡೂ ಕಡೆಯ ಜನ ಒಂದೆಡೆ ಸೇರಿ ವಿರೋಧಿಗಳ ನಡುವೆ ಸಂಧಾನ ಮಾಡಿಸಿದರು. ಸಂಧಾನ ಈ ತೆರನಾಗಿ ಜರುಗಿತು. ಆಡಳಿತದ ಮುಖ್ಯಸ್ಥರು ತಮ್ಮ ತಮ್ಮ ಪ್ರದೇಶಕ್ಕೆ ಮರಳಿ ಹೋಗಬೇಕು. ಇತಿಹಾಸಕಾರನಾದ ಗ್ರಂಥಕರ್ತನ ವಿಚಾರವೇನೆಂದರೆ ಈ ಸಂಧಾನದ ಸಂಪೂರ್ಣ ವಿವರಣೆಯ ವಿವರವು ಸಾಮಾನ್ಯವಾಗಿ ನಿರ್ಲಕ್ಷಿಸಲಾಗಿದೆ ಎಂದು ಹೇಳಲಾಗುತ್ತದೆ. ಎಂದರೆ ಅಹ್ಮದ್ ನಿಜಾಮ್ ಶಾಹ್ ಬುರ್ಹಾನಪುರದಿಂದ ಮರಳಿ ಬಂದನು ಹಾಗೂ ದೌಲತಾಬಾದ್ ತಲುಪಿದನು. ಈ ಸಲವು ಅವನು ತನ್ನ ಸೈನ್ಯಕ್ಕೆ ದಿಗ್ಬಂಧನ ಮಾಡುವ ಹೊಣೆಗಾರಿಕೆ ನೀಡಿದನು. ಹಾಗೂ ತಾನು ಸ್ವತಃ 'ಬಾಲಾಘಾಟ್' ದಲ್ಲಿ ವಿಲಾಸೀ ಜೀವನದಲ್ಲಿ ತೊಡಗಿದನು.

'ಬಾಲಾಘಾಟ್'ದ ಹೆಸರಾಂತ ತೋಟಗಾರರ ತಂಡವು ಅಹ್ಮದ್ ನಿಜಾಮನ ಸೇವೆಯಲ್ಲಿ ಕೆಲವು ಮಾವಿನಹಣ್ಣುಗಳನ್ನು ಕೊಡುಗೆಯಾಗಿ ನೀಡಿದರು. ಹಾಗೂ

ಹೀಗೆ ಹೇಳಿದರು. "ಇಂದಿನಿಂದ ಏಳು ವರ್ಷಗಳ ಹಿಂದೆ ತಾವು ಈ ಕೋಟೆಯನ್ನು ಗೆಲ್ಲಬೇಕೆಂಬ ನಿಯತ್ತಿನಿಂದ ಈ ಕಡೆಗೆ ಬಂದಿದ್ದೀರಿ ಹಾಗೂ ಇಲ್ಲಿಯೇ ತಂಗಿದ್ದೀರಿ. ತಮ್ಮ ತಂಗುದಾಣದ ಎದುರಿಗೆ ಕೆಲವು ಮಾವಿನ ಗೊರಟೆಗಳು ಬಿದ್ದುಕೊಂಡಿದ್ದವು. ಏಕೆಂದರೆ ಮಳೆಗಾಲವಿದ್ದಿದ್ದರಿಂದ ಮಾವಿನ ಗೊರಟೆಗಳು ಚಿಗುರೊಡೆದವು. ನಾವು ನಿಮ್ಮ ನಂಬಿಗಸ್ಥ ಸೇವಕರಾಗಿರುವುದರಿಂದ ಈ ಮೊಳಕೆಯೊಡೆದ ಗಿಡಗಳನ್ನು ಕಾಪಾಡಿದೆವು. ತಮ್ಮ ಸುದೈವ ಹಾಗೂ ನಮ್ಮ ನಿಷ್ಠೆಯಿಂದಾಗಿ ಈ ಮರಗಳು ಹಣ್ಣುಗಳನ್ನು ನೀಡತೊಡಗಿವೆ. ಅವುಗಳನ್ನೇ ನಿಮ್ಮ ಸೇವೆಯಲ್ಲಿ ಅರ್ಪಿಸುತ್ತಿದ್ದೇವೆ".

ಮೆಹ್ಮೂದ್ ಗುಜರಾತಿಯ ಹೆಸರಿನಲ್ಲಿ ಮಲೀಕ್ ಅಶ್ರಫ್‌ನ ಪತ್ರ :

ಅಹ್ಮದ್ ನಿಜಾಮನು ಈ ಮಾವಿನ ಹಣ್ಣುಗಳನ್ನು ಸ್ವೀಕರಿಸಿದನು. ಹಾಗೂ ತೋಟಗಾರರನ್ನು ಉದ್ದೇಶಿಸಿ ಹೇಳಿದನು. "ಇದು ಈ ಕೋಟೆಯ ಗೆಲುವಿನ ಗುರುತಾಗಿದೆ". ಮಲಿಕ್ ಅಶ್ರಫ್‌ನಿಗೆ ಅಹ್ಮದ್ ನಿಜಾಮನ ಕ್ರಮಗಳ ಅರಿವಾಯಿತು. ಅವನು ಮಹ್ಮೂದ್ ಶಾಹ್ ಗುಜರಾತಿಯ ಹೆಸರಿನಲ್ಲಿ ಒಂದು ಪತ್ರವನ್ನು ಬರೆದನು. ಅದರಲ್ಲಿ ಅಹ್ಮದ್ ನಿಜಾಮನ ದೊಂಬಿ, ಗೊಂದಲ ಹಾಗೂ ಕೋಟೆಯ ದಿಗ್ಬಂಧನದ ದೂರುಗಳು ಇದ್ದವು. ಹಾಗೂ ಅವನಿಗೆ ಈ ಸಂದೇಶವನ್ನು ಕೊಡಲಾಗಿತ್ತು. "ಈ ಕೋಟೆಯು ನಿಜವಾಗಿಯೂ ನಿಮ್ಮದೇ ಆಸ್ತಿಯಾಗಿರುತ್ತದೆ". ಒಂದು ವೇಳೆ ಒಮ್ಮೆಯಾದರೂ ಈ ಕಡೆಗೆ ತಾವು ಆಗಮಿಸಿದರೆ ಹಾಗೂ ನನಗೆ ಅಹ್ಮದ್ ನಿಜಾಮ್ ಶಾಹ್‌ನ ಹಿಡಿತದಿಂದ ಮುಕ್ತಿಗೊಳಿಸಿದರೆ, ನಾನು ಸಂಪೂರ್ಣ ಪ್ರದೇಶದಲ್ಲಿ ತಮ್ಮ ಹೆಸರಿನ "ಖುತ್ಬಾ" ಜಾರಿಗೊಳಿಸುವೆನು. ಹಾಗೂ ಪ್ರತಿವರ್ಷ ತೆರಿಗೆಯನ್ನು ತಮ್ಮ ಖಜಾನೆಗೆ ಸಂದಾಯ ಮಾಡುವೆನು".

ದೌಲತಾಬಾದ್‌ಕ್ಕೆ ಮೆಹ್ಮೂದ್ ಗುಜರಾತಿಯ ಮರಳುವಿಕೆ :

ಸುಲ್ತಾನ ಮೆಹ್ಮೂದ್‌ನು ತನ್ನ ಮೇಲೆ ಬಂದ "ಪಲಾಯನ ಗೈದ ಅಪಕೀರ್ತಿ"ಯನ್ನು ಹೇಗಾದರೂ ಮಾಡಿ ಕಳಚಿಕೊಳ್ಳಬೇಕೆಂದು ಹ್ರನ್ಮನಗಳಿಂದ ಬಯಸುತ್ತಿದ್ದನು. ಹಾಗೂ ತನಗಾದ ಅವಮಾನವನ್ನು ಹೇಗಾದರೂ ಮಾಡಿ ದೂರಗೊಳಿಸಿಕೊಳ್ಳಬೇಕೆಂದು ಇಚ್ಚಿಸಿದನು. ಅವನು ದಖ್ಖನ್ನಿನವರಿಗೂ ಶಿಕ್ಷಿಸಬಯಸಿದ್ದನು. ಏಕೆಂದರೆ ಆ ಜನರು ಅವನಿಗೆ ಇರುಳ ದಾಳಿಯ ಘಟನೆಯ ನಂತರ "ಸುಲ್ತಾನ್ ಮೆಹ್ಮೂದ್ ಬೇಕರಾ" ಎಂಬ ಹೆಸರಿನಿಂದ ಕರೆಯಹತ್ತಿದ್ದರು. ಮೆಹ್ಮೂದ್‌ನು ಮಲೀಕ್ ಅಶ್ರಫ್‌ನ ಕೋರಿಕೆಯನ್ನು ಒಪ್ಪಿದನು. ಹಾಗೂ ಬಹಳ ಆಡಂಬರದೊಂದಿಗೆ ದೌಲತಾಬಾದ್‌ದೆಡೆಗೆ ಹೊರಟನು.

ಅಹ್ಮದ್ ನಗರಿಗೆ ಅಹ್ಮದ್ ನಿಜಾಮಶಾಹ್‌ನ ಮರಳುವಿಕೆ :

ಸುಲ್ತಾನ್ ಮೆಹ್ಮೂದ್‌ನು ಪಟ್ಟಣದ ನದಿಯ ದಂಡೆಗೆ ತಲುಪಿದನು. ಆಗ ಅಹ್ಮದ್ ನಿಜಾಮನು ಮುತ್ತಿಗೆಯನ್ನು ಹಿಂತೆಗೆದುಕೊಂಡು ಅಹ್ಮದ್ ನಗರಕ್ಕೆ ಮರಳಿದನು.

ಮಲಿಕ್ ಅಶ್ರಫ್ ಇದರಿಂದ ಬಹಳ ಸಂತಸಗೊಂಡನು. ಅವನು ಸುಲ್ತಾನ್ ಖುತ್ಬುದ್ದೀನ್ ಕಟ್ಟಿಸಿದ ಮಸೀದಿಯಲ್ಲಿ ಮೆಹ್ಮೂದ್ ಗುಜರಾತಿಯ ಹೆಸರಿನಲ್ಲಿ 'ಖುತ್ಬಾ' ಓದಿಸಿದನು. ಹಾಗೂ ಅವನ ಸೇವೆಯಲ್ಲಿ ಉಪಸ್ಥಿತನಾಗಿ ಅಮೂಲ್ಯ ಕಾಣಿಕೆಗಳನ್ನು ಅರ್ಪಿಸಿದನು. ಹಾಗೂ ಪ್ರತಿವರ್ಷ ಕಂದಾಯವನ್ನು ಸಂದಾಯ ಮಾಡುವ ಪ್ರಮಾಣ ಮಾಡಿ ಮೆಹ್ಮೂದ್ ಶಾಹ್‌ನಿಗೆ ಆನಂದತುಂದಿಲಗೊಳಿಸಿದನು.

ನಿಜಾಮಶಾಹ್‌ನಲ್ಲಿ ದೌಲತಾಬಾದ್‌ದ ಪಟ್ಟಣಿಗರ ಮನವಿ :

ಸುಲ್ತಾನ್ ಮಹ್ಮೂದ್ ಗುಜರಾತಿಯು ಈ ಅವಕಾಶವನ್ನು ಅಮೂಲ್ಯವೆಂದು ತಿಳಿದನು. ಹಾಗೂ ಅದಿಲಖಾನನಿಂದ ಎಷ್ಟೋ ವರ್ಷಗಳ ಕಂದಾಯ ಹಣವನ್ನು ಪಡೆದುಕೊಂಡು ತನ್ನ ಪ್ರದೇಶಕ್ಕೆ ಮರಳಿದನು. ಅಹ್ಮದ್ ನಿಜಾಮಶಾಹನಿಗೆ ಇವನ ಮರಳುವಿಕೆಯ ಸುದ್ದಿ ತಲುಪಲು ಕೂಡಲೇ ಅವನು ದೌಲತಾಬಾದ್‌ಕ್ಕೆ ಮತ್ತೊಮ್ಮೆ ಆಗಮಿಸಿದನು. ಕೋಟೆಯ ಜನರು ಮಲಿಕ್ ಅಶ್ರಫ್‌ನಿಂದ ಬಹಳ ಮುನಿಸಿಕೊಂಡಿದ್ದರು. ಅದರ ಕಾರಣವೆಂದರೆ ಅವನು ಸುಲ್ತಾನ್ ಮೆಹ್ಮೂದ್ ಗುಜರಾತಿಯ ಹೆಸರಿನಲ್ಲಿ 'ಖುತ್ಬಾ' ಓದಿಸಿದ್ದನು. ಆ ಜನರು ಗೌಪ್ಯವಾಗಿ ಅಹ್ಮದ್ ನಿಜಾಮನಿಗೆ ಈ ತೆರನಾದ ಪತ್ರಗಳನ್ನು ಕಳುಹಿಸಿದ್ದರು. "ನಾವೆಲ್ಲರೂ ನಿಮ್ಮ ಸೇವಕರಾಗಿದ್ದೇವೆ ಹಾಗೂ ಹೃನ್ಮನಗಳಿಂದ ನಿಮ್ಮ ಹಿತೈಷಿಗಳಾಗಿದ್ದೇವೆ. ನಮ್ಮ ಬಯಕೆ ನೀವೇ ನಮ್ಮ ನಾಯಕರಾಗಿ ಇರಬೇಕು. ನಮಗೆ ತಮ್ಮ ಮೇಲೆ ನಿಷ್ಠೆಯಿದೆ. ತಾವು ಸ್ವತಃ ಬಂದು ನಮ್ಮ ವಿಧೇಯತನವನ್ನು ಪರೀಕ್ಷಿಸಬೇಕು".

ಮಲಿಕ್ ಅಶ್ರಫ್‌ನ ಸಾವು :

ಅಹ್ಮದ್ ನಿಜಾಮಶಾಹನು ಈ ಪತ್ರಗಳನ್ನು ಗಂಗಾನದಿಯ ದಡದ ಮೇಲೆ ಓದಿದನು. ಅದೇ ರಾತ್ರಿ ಅವನು ಎರಡು ಮೂರು ಸಾವಿರ ಸವಾರರೊಂದಿಗೆ ದೌಲತಾಬಾದ್ ತಲುಪಿದನು. ಹಾಗೂ ಕೋಟೆಯನ್ನು ಸುತ್ತುವರಿದು ದಿಗ್ಬಂಧನಗೊಳಿಸಿದನು. ಕೋಟೆಯಲ್ಲಿಯ ಸಮಸ್ತರೂ ಮರಾಠರಾಗಿದ್ದರು. ಮಲಿಕ್ ಅಶ್ರಫ್‌ನಿಗೆ ಅವರ ಇಚ್ಛೆ ಏನೆಂದು ಅರ್ಥವಾಯಿತು. ಈ ಮಾತಿನಿಂದ ಅವನಿಗೆ ಎಷ್ಟು ದುಃಖವಾಯಿತೆಂದರೆ ಅವನು ಹಾಸಿಗೆ ಹಿಡಿದನು. ಹಾಗೂ ಐದಾರು ದಿನಗಳಲ್ಲಿಯೇ ಸಾವನ್ನಪ್ಪಿದನು.

ದೌಲತಾಬಾದ್‌ದ ಕೋಟೆಯನ್ನು ವಶಪಡಿಸಿಕೊಳ್ಳುವಿಕೆ

ಕೋಟೆಯ ರಕ್ಷಕರು ಅಹ್ಮದ್ ನಿಜಾಮಶಾಹನ ಸೇವೆಯಲ್ಲಿ ಉಪಸ್ಥಿತರಾದರು. ಹಾಗೂ ಕೋಟೆಯ ಬಾಗಿಲಿನ ಕೀಲಿಕೈಯನ್ನು ಒಪ್ಪಿಸಿದರು. ಅಹ್ಮದ್ ನಿಜಾಮನು ಈ ಜನರ ಜೊತೆ ಬಹಳ ವಿನಯದೊಂದಿಗೆ ನಡೆದುಕೊಂಡನು. ಹಾಗೂ ಕೋಟೆಯನ್ನು ವೀಕ್ಷಿಸಿದನು. ಹಾಗೂ ಎಲ್ಲೆಲ್ಲಿ ದುರಸ್ತಿಯ ಅವಶ್ಯಕತೆ ಇತ್ತು, ಅದನ್ನು

ಪೂರ್ಣಗೊಳಿಸಿದನು. ಅದರ ನಂತರ ಅವನು ಆ ಕೋಟೆಯನ್ನು ತನ್ನ ನಂಬಿಗಸ್ತ ಅಮೀರರ ವಶಕ್ಕೆ ಕೊಟ್ಟು ತಾನು ಅಹ್ಮದ್ ನಗರಿಗೆ ಮರಳಿದನು.

ಶೌರಾಕೋಟೆ ಮತ್ತು ಇತರ ಕೋಟೆಗಳ ಮೇಲೆ ವಿಜಯ :

ಅಹ್ಮದ್ ನಿಜಾಮನು 'ನಿಜಾಮುದ್ಯಾನ ಅಂದರೆ ಬಾಗ್‌ಎನಿಜಾಮ್' ತನಗಾಗಿ ಬಹಳ ಅದೃಷ್ಟದ್ದೆಂದು ತಿಳಿಯುತ್ತಿದ್ದನು. ಅವನು ಆ ಉದ್ಯಾನದಲ್ಲಿ ತನಗಾಗಿ ಒಂದು ವೈಭವೋಪಿತ ಮಹಲ್ ಅನ್ನು ಹಾಗೂ ಒಂದು ಸುಭದ್ರ ಕೋಟೆಯನ್ನು, ಬಹಳಷ್ಟು ಬೃಹತ್ ಆಕಾರದ ಕಟ್ಟಡಗಳನ್ನು ಕಟ್ಟಿಸಿದನು ಹಾಗೂ ಈ ಇಮಾರತುಗಳಲ್ಲಿ ಬೆಳ್ಳಿ ಬಂಗಾರವನ್ನು ಬಳಿಸಿ ಬಹಳಷ್ಟು ಸುಂದರ ಹಾಗೂ ಹೃದಯಸ್ಪರ್ಶಿ ಚಿತ್ರಕಲೆಯನ್ನು ಕೆತ್ತಿಸಿದನು. ಹಾಗೂ ಕಲಾತ್ಮಕ ಚಿತ್ರಗಳನ್ನು ಅಂಟಿಸಿದನು. ಇದೇ ಸಮಯದಲ್ಲಿ ಅಹ್ಮದ್ ನಿಜಾಮನು ಸುಮ್ಮನೆ ಕೂಡ್ರಲಿಲ್ಲ. ಹಾಗೂ ಬಹಳಷ್ಟು ಯುದ್ಧಗಳನ್ನೂ ಮಾಡಿದನು. ಶೌರಾ ಕೋಟೆ ಹಾಗೂ ಇತರ ಬಹಳಷ್ಟು ಕೋಟೆಗಳನ್ನು ಗೆದ್ದುಕೊಂಡನು. ಹಾಗೂ ಕಾಽನಾ, ಬಕಾಲನಾದ ರಾಜರುಗಳನ್ನು ಕಂದಾಯ ಹಾಗೂ ಕಪ್ಪ ಒಪ್ಪಿಸಲು ಆಜ್ಞಾಪಿಸಿದನು.

ಬುರ್ಹಾನಪುರದಲ್ಲಿ ಗೊಂದಲ :

ಹಿಜ್ರಿ ಶಕೆ ೯೧೩ ರಲ್ಲಿ ದಾವುದಖಾನ್‌ನ ಅಂತ್ಯವಾಯಿತು. ಬುರ್ಹಾನಪುರದಲ್ಲಿ ಈ ಸಮಸ್ಯೆಯ ಕುರಿತು ಗೊಂದಲವುಂಟಾಯಿತು. ಸಾಮ್ರಾಜ್ಯ ವಾರಸುದಾರ ಯಾರಾಗಬೇಕು ? ಎಲ್ಲ ಅಮೀರರು ಈ ವಿಷಯದಲ್ಲಿ ಭಿನ್ನ ಅಭಿಪ್ರಾಯ ಹೊಂದಿದ್ದರು. ಬುರ್ಹಾನಪುರದ ಪ್ರಧಾನಿ ಮಲಿಕ್ ಹಸ್ಸಾನುದ್ದೀನ್ ಮೊಘಲನು ಅಹ್ಮದ್ ನಿಜಾಮನ ಬಳಿ ದೂತರನ್ನು ಕಳುಹಿಸಿದನು. ಹಾಗೂ ಖಾನ್‌ಜಾದಾ ಆಲಂಖಾನ್‌ನಿಗೆ ಬುರ್ಹಾನಪುರದ ಆಡಳಿತಗಾರನಾಗಿ ಮಾಡಲು ತನ್ನ ಬಳಿ ಕರೆಸಿಕೊಂಡನು. ಖಾನ್‌ಜಾದಾ ಆಲಂ ಖಾನ್‌ನು ಅಸೀರ್ ಆಡಳಿತಗಾರನ ವಂಶದವನಾಗಿದ್ದನು. ಹಾಗೂ ಈ ದಿನಗಳಲ್ಲಿ ಅಹ್ಮದ್ ನಗರದಲ್ಲಿ ವಾಸವಾಗಿದ್ದನು. ಅಹ್ಮದ್ ನಿಜಾಮ ಹಾಗೂ ಕಾವೆಲ್‌ದ ಆಡಳಿತಗಾರನ ಸಲಹೆಯಂತೆ ಖಾನ್‌ಜಾದಾ ಆಲಂಖಾನ್‌ನಿಗೆ ಬುರ್ಹಾನಪುರದ ಆಡಳಿತಗಾರನೆಂದು ಸ್ವೀಕರಿಸಿದನು.

ಮೆಹ್ಮೂದ್ ಗುಜರಾತಿಯ ಇಚ್ಛೆ :

ಗುಜರಾತಿನ ಆಡಳಿತಗಾರನಾದ ಸುಲ್ತಾನ್ ಮೆಹ್ಮೂದಶಾಹ ಗುಜರಾತಿಯು ಅವನ ಮೊಮ್ಮಗನಾದ ಹಸನ್ ಖಾನ್ ಫಾರೂಕಿಯ ಮಗನಾದ ಆದಿಲ್ ಖಾನ್‌ನು ಬುರ್ಹಾನಪುರದ ವಾರಸುದಾರನಾಗಬೇಕೆಂದು ಬಯಸುತ್ತಿದ್ದನು. ಈ ಉದ್ದೇಶದ ಪೂರ್ತಿಗಾಗಿ ಈತನು ಸೈನ್ಯವನ್ನು ಒಟ್ಟುಗೂಡಿಸಿ ಖಾಂದೇಶದತ್ತ ಪ್ರಯಾಣ ಬೆಳೆಸಿದನು. ಮಲಿಕ್ ಹಸ್ಸಾಮುದ್ದೀನ್‌ನು ನಿಜಾಮ್ ಶಹ ಹಾಗೂ ಅಮಾದುಲ್ ಮುಲ್ಕನಿಂದ

ಸಹಾಯವನ್ನು ಕೋರಿದನು. ಈ ಇಬ್ಬರೂ ಆಡಳಿತಗಾರರು ತಮ್ಮ ತಮ್ಮ ಸೈನ್ಯದೊಂದಿಗೆ ಬುರ್ಹಾನಪುರದತ್ತ ಸಾಗಿದರು. ಮಲಿಕ್ ಲಾಡನ್ ಬರ್ಹಾನಪುರದ ಪ್ರಸಿದ್ಧ ಆಡಳಿತಗಾರನಾಗಿದ್ದನು. ಅವನು ಮಲಿಕ್ ಹಸ್ಸಾಮುದ್ದೀನ್‌ನ ಅಭಿಪ್ರಾಯವನ್ನು ಪರಿಗಣಿಸಲಿಲ್ಲ. ಈ ಕಾರಣದಿಂದ ಪ್ರಾಂತ್ಯದಲ್ಲಿ ಗೊಂದಲವುಂಟಾಯಿತು.

ಸುಲ್ತಾನ್ ಮೆಹ್ಮೂದ್‌ನು ತಾಮೀಜ್‌ದ ಬಳಿ ತಲುಪಿದನು. ಹಾಗೂ ಅವನು ಒಂದು ಸಾವಿರ ಸವಾರರನ್ನು ಮಲೀಕ್ ಹಸಾಮುದ್ದೀನ್‌ನಿಗಾಗಿ ಮೀಸಲಿಟ್ಟನು. ಈ ಎರಡೂ ಸೈನ್ಯಗಳು ಬುರ್ಹಾನಪುರದ ಕಾವೆಲ್ ದತ್ತ ಪ್ರಯಾಣಿಸಿದವು. ಅಹ್ಮದ್ ನಿಜಾಮನು ಯಾವಾಗ ಈ ಸ್ಥಿತಿಗತಿಯನ್ನು ಅವಲೋಕಿಸಿದನೋ ಆಗ ಅವನು ಅಮಾದುಲ್ ಮುಲ್ಕನಿಗೆ ಮರಳಿ ಕಳುಹಿಸಿದನು. ಹಾಗೂ ಸ್ವತಃ ದೌಲತಾಬಾದಕ್ಕೆ ಮರಳಿ ಬಂದನು. ಖಾನ್‌ಜಾದಾ ಆಲಂಖಾನ್‌ನು ಖಾಂದೇಶದಿಂದ ಓಡಿ ಮತ್ತೊಮ್ಮೆ ಅಹ್ಮದ್ ನಗರಕ್ಕೆ ಬಂದನು.

ಮೆಹ್ಮೂದ್ ಗುಜರಾತಿಗೆ ಅಹ್ಮದ್ ನಿಜಾಮನ ಪತ್ರ :

ಯಾವಾಗ ಸುಲ್ತಾನ್ ಮೆಹ್ಮೂದ್ ಗುಜರಾತಿಯು ಮರಳಿ ಹೋದನೋ ಆಗ ಅಹ್ಮದ್ ನಿಜಾಮ್ ಶಾಹನು ಆಲಂಖಾನನಿಗೆ ತನ್ನ ಜೊತೆ ಕರೆದುಕೊಂಡು ತನ್ನ ಪ್ರಾಂತ್ಯದ ಸರಹದ್ದಿನಲ್ಲಿ ಉಳಿದುಕೊಂಡನು. ಅವನ ಒಬ್ಬ ದೂತನಿಗೆ ಪತ್ರ ನೀಡಿ ಸುಲ್ತಾನ್ ಮೆಹ್ಮೂದ್ ಗುಜರಾತಿಯ ಬಳಿ ಕಳುಹಿಸಿದನು. ಪತ್ರದಲ್ಲಿ ಹೀಗೆ ಬರೆಯಲಾಗಿತ್ತು. "ಖಾನ್‌ಜಾದಾ ಆಲಂಖಾನ್‌ನು ನನ್ನ ಬಳಿ ಇರುವನು. ಅದಕ್ಕಾಗಿ ತಮ್ಮ ಗೌರವಾನ್ವಿತ ವ್ಯಕ್ತಿತ್ವದಿಂದ ಬಯಸುವುದೆಂದರೆ ಅಸ್ಸಿರ್ ಹಾಗೂ ಬುರ್ಹಾನಪುರದ ಒಂದು ಭಾಗವನ್ನು ಅವನಿಗೂ ನೀಡಬೇಕು".

ಮೆಹ್ಮೂದ್ ಗುಜರಾತಿಯ ಉತ್ತರ :

ಸುಲ್ತಾನ್ ಮೆಹ್ಮೂದ್‌ನು ಅಹ್ಮದ್ ನಿಜಾಮನ ಪೂರ್ವದ ವೈರತ್ವ ಹಾಗೂ ದುರ್ನಡತೆಯಿಂದಾಗಿ ಬಹಳೇ ಮುನಿಸಿಕೊಂಡಿದ್ದನು. ಅದೂ ಅಲ್ಲದೇ ಆದಿಲ್‌ಖಾನ್‌ನು ಬಹಳ ಸಲ ಅವನ ಕುರಿತು ತಕರಾರು ಸಲ್ಲಿಸಿದನು. ಆ ಕಾರಣದಿಂದ ಮೆಹ್ಮೂದ್‌ನು ದೂತನೊಡನೆ ದುರ್ವರ್ತನೆಯೊಂದಿಗೆ ನಡೆದುಕೊಂಡನು. ಹಾಗೂ ಅವನಿಗೆ ಹೇಳಿದನು. "ಬಹಮನಿ ಆಡಳಿತಗಾರರ ಒಬ್ಬ ಸೇವಕನ ಧೈರ್ಯವು ಇಷ್ಟು ಹೆಚ್ಚು ಹೇಗಾಯಿತು ? ಅವನು ರಾಜನೊಂದಿಗೆ ಈ ರೀತಿಯ ಪತ್ರ ವ್ಯವಹಾರ ಮಾಡಬಹುದೇ? ಅವನು ತನ್ನ ಹಾಸಿಗೆ ಇದ್ದಷ್ಟೇ ಕಾಲು ಚಾಚಬೇಕು. ಹಾಗೂ ತನ್ನ ಮಿತಿಯಲ್ಲಿದ್ದು ಮಾತನಾಡಬೇಕು. ಒಂದು ವೇಳೆ ಅವನು ತನ್ನ ಪೂರ್ವ ಕಾಲದ ತಪ್ಪಿಗಾಗಿ ಪಶ್ಚಾತ್ತಾಪ ಪಡದಿದ್ದರೆ ತನ್ನ ದುರ್ನಡತೆಯ ಮೇಲೆ ನಾಚಿಕೆ ಪಟ್ಟು ಸುಧಾರಿಸಿಕೊಳ್ಳದಿದ್ದರೆ ಬೇಗನೆಯೇ ಅವನಿಗೆ ಕಠಿಣ ಶಿಕ್ಷೆ ನೀಡಲಾಗುವುದು.

ನಸೀರುಲ್ ಮುಲ್ಕನ ಅಂತ್ಯ :

ಈ ಉತ್ತರವನ್ನು ಪಡೆದು ಅಹ್ಮದ್ ನಿಜಾಮ್‌ಷಾಹನು ಮೌನ ತಾಳಿದನು. ಅವನು ಯಾವುದೇ ತೆರನಾದ ಮಾತು ಮುಂದುವರಿಸಲಿಲ್ಲ. ಹಾಗೂ ಖಾನ್‌ಜಾದಾ ಆಲಂಖಾನ್‌ನಿಗೆ ತನ್ನ ಜೊತೆ ಕರೆದುಕೊಂಡು ಕೂಡಲೇ ಅಹ್ಮದ್ ನಗರಿಗೆ ಮರಳಿ ಬಂದನು. ಅಹ್ಮದ್ ನಿಜಾಮನ ಎಲ್ಲ ಕೆಲಸ ಕಾರ್ಯಗಳು ಅವನ ಇಚ್ಛೆಯಂತೆಯೇ ಒಂದೊಂದಾಗಿ ಪೂರ್ತಿಗೊಂಡವು. ಅದಕ್ಕಾಗಿ ಈಗ ಘನತ್ ಪೀರನು ತನ್ನ ಕೆಲಸ ಕಾರ್ಯ ಪ್ರಾರಂಭಿಸಿದನು. ಎಲ್ಲಕ್ಕಿಂತ ಮೊದಲು ನಸೀರುಲ್ ಮುಲ್ಕನು ಅಹ್ಮದ್ ನಿಜಾಮನ ರುಕ್ನುದ್ದೌಲಾ ಇದ್ದನು. ಸಾವನ್ನಪ್ಪಿದನು. ಹಾಗೂ ಮಕಮ್ಮಲ್ ಖಾನ್ ಹಬಶಿಯನ್ನು ಅವನ ಉತ್ತರಾಧಿಕಾರಿಯಾಗಿ ನೇಮಿಸಲಾಯಿತು.

ಅಹ್ಮದ್ ನಿಜಾಮನ ಸಾವು :

ನಸೀರುಲ್ ಮುಲ್ಕನ ಸಾವಿನ ಎರಡು ಮೂರು ತಿಂಗಳಿನ ನಂತರ ಅಹ್ಮದ್ ನಿಜಾಮನು ರೋಗಗ್ರಸ್ತನಾದನು. ಅದು ಗುಣ ಕಾಣದ ಕಾಯಿಲೆಯಾಗಿತ್ತು. ಅವನು ಎಲ್ಲ ಅಮೀರರನ್ನು ಹಾಗೂ ಪ್ರತಿನಿಧಿಗಳನ್ನು ತನ್ನ ಸುತ್ತ ಸೇರಿಸಿಕೊಂಡನು. ಹಾಗೂ ತನ್ನ ಏಳು ವರ್ಷದ ಪುತ್ರನಾದ ಬುರ್ಹಾನಶಾಹ್‌ನಿಗೆ ತನ್ನ ಉತ್ತರಾಧಿಕಾರಿಯಾಗಿ ನೇಮಿಸಿ ಎಲ್ಲ ಅಮೀರರಿಂದ ವಿಧೇಯತೆ ಹಾಗೂ ನಿಷ್ಠೆಯ ಪ್ರಮಾಣವನ್ನು ತೆಗೆದುಕೊಂಡನು. ಕೊನೆಗೆ ಹಿಜ್ರಿ ಶಕೆ ೯೦೪ ರಲ್ಲಿ ಅಹ್ಮದ್ ನಿಜಾಮ್‌ನ ಆತ್ಮವು ಶರೀರದಿಂದ ಬೇರ್ಪಟ್ಟಿತು. ಇಹಲೋಕದಿಂದ ಪರಲೋಕಕ್ಕೆ ಪ್ರಯಾಣಿಸಿತು.

ಅಹ್ಮದ್ ನಿಜಾಮ್‌ಷಾಹನ ವ್ಯಕ್ತಿತ್ವ :

ಒಂದು ವೇಳೆ ಅಹ್ಮದ್ ನಿಜಾಮನ ಉನ್ನತ ಆದರ್ಶ ವಿಚಾರಗಳ ವಿವರಣೆಯನ್ನು ನೀಡಲು ಕುಳಿತರೆ ಒಂದು ಗ್ರಂಥವೇ ಸಾಕಾಗುವುದಿಲ್ಲ. ಆದರೂ ಓದುಗರ ಮಾಹಿತಿಗಾಗಿ ಇತಿಹಾಸಕಾರರ ಪೂರ್ವ ಪರಂಪರೆಯನ್ನು ಪಾಲಿಸುತ್ತ ಸಂಕ್ಷಿಪ್ತವಾಗಿ ವಿವರಿಸುವೆನು. ಈ ಒಳ್ಳೆಯ ನಡತೆಯ ಹಾಗೂ ಉತ್ತಮ ಪ್ರಕೃತಿಯ ರಾಜನು ಯಾವಾಗ ಕುದುರೆ ಸವಾರಿ ಮಾಡಿ ಮಾರುಕಟ್ಟೆಯಿಂದ ಹೊರಡುತ್ತಿದ್ದನೋ ಆಗ ಯಾವಾಗಲೂ ತನ್ನ ಎಡಬಲಕ್ಕೆ ಕಣ್ಣು ಹಾಯಿಸುತ್ತಿರಲಿಲ್ಲ. ಒಬ್ಬ ಉದ್ಧಟ ಅಮೀರನು ಒಂದು ಸಲ ಬಾದಶಾಹನೊಂದಿಗೆ ಇದರ ಕಾರಣವನ್ನು ಕೇಳಿದನು. ಆಗ ಅದಕ್ಕೆ ಹೀಗೆ ಉತ್ತರಿಸಿದನು. 'ಮಾರುಕಟ್ಟೆಯಿಂದ ಸಾಗುವಾಗ ಎಲ್ಲ ತೆರನಾದ ಹೆಣ್ಣು ಹಾಗೂ ಗಂಡುಗಳು ಕಂಡು ಬರುವವರು ಹಾಗೂ ಅವರು ಸವಾರಿಯನ್ನು ನೋಡಲು ಎರಡೂ ಕಡೆಗೆ ನಿಂತಿರುವರು. ನಾನು ಅಂಜುತ್ತೇನೆ. ಎಲ್ಲಾದರೂ ನನ್ನ ದೃಷ್ಟಿ ನಿಷಿದ್ಧ ಹೆಣ್ಣಿನ ಮೇಲೆ ಬಿದ್ದರೆ ಅನವಶ್ಯಕವಾಗಿ ಪಾಪಿಯಾಗುವೆನು'.

ಇಂದ್ರಿಯಗಳ ಪರಿಶುದ್ಧತೆ :

ಅಹ್ಮದ್ ನಿಜಾಮನ ತನ್ನ ಆಡಳಿತದ ಪ್ರಾರಂಭದ ದಿನಗಳಲ್ಲಿ ಆಗ ಆತನ ತಾರುಣ್ಯವು ಉತ್ತುಂಗದಲ್ಲಿತ್ತು. ಕಾವೇಲ್‌ದ ವಿಜಯಕ್ಕಾಗಿ ಪ್ರಯಾಣ ಬೆಳೆಸಿದನು. ಅವನು ಕೋಟೆಯನ್ನು ಸುತ್ತುವರೆದು ಅದನ್ನು ವಶಪಡಿಸಿಕೊಂಡನು. ಆಗ ಯಾವ ಜನರು ಬಂಧನಕ್ಕೊಳಗಾದರೋ ಅವರಲ್ಲಿ ಒಬ್ಬ ಸ್ತ್ರೀಯು ಅಪೂರ್ವ ಸುಂದರಿಯಾಗಿದ್ದಳು. ಹೀಗೆ ಹೇಳಲಾಗುತ್ತದೆ. ಏನೆಂದರೆ ಸೌಂದರ್ಯದಲ್ಲಿ ಅವಳಿಗೆ ಸಾಟಿಯಾಗಿ ಬೇರೆ ಯಾರೂ ಇರಲಿಲ್ಲ. ನಸೀರುಲ ಮುಲ್ಕನು ಅವಳನ್ನು ನೋಡಿದನು. ಹಾಗೂ ಅವಳಲ್ಲಿ ಅನುರಕ್ತನಾದನು. ನಸೀರುಲ ಮುಲ್ಕನು ಸ್ವತಃ ಅವಳನ್ನು ಪಡೆದು ಅದೃಷ್ಟವಂತನಾಗಬಯಸಿದ್ದನು. ಆದರೆ ಹೀಗೆ ಮಾಡಲಾರದಾದನು. ವಿವಶನಾಗಿ ಅವನು ಆ ಸ್ತ್ರೀಯನ್ನು ಬಾದಶಾಹನ ಸೇವೆಯಲ್ಲಿ ಅರ್ಪಿಸಲು ನಿಶ್ಚಯಿಸಿದನು. ಸಮಯ ನೋಡಿಕೊಂಡು ನಸೀರುಲ್ ಮುಲ್ಕನು ಅಹ್ಮದ್ ನಿಜಾಮಶಾಹನಿಗೆ ಹೇಳಿದನು. "ಬಂಧಿತರಲ್ಲಿ ಓರ್ವ ಅಪೂರ್ವ ಸುಂದರ ಸ್ತ್ರೀಯೂ ಇದ್ದಾಳೆ. ನಾನು ಅವಳನ್ನು ಎಲ್ಲರ ದೃಷ್ಟಿಯಿಂದ ಅಡಗಿಸಿ ಇಟ್ಟಿರುವೆನು. ಏಕೆಂದರೆ ತಮ್ಮ ಸೇವೆಯಲ್ಲಿ ಅವಳನ್ನು ಅರ್ಪಿಸಬೇಕೆಂದು ಇಚ್ಚಿಸಿರುವೆನು. ತಾವು ಒಂದು ವೇಳೆ ಅನುಮತಿಸಿದರೆ ತಮ್ಮ ಸ್ತ್ರೀಗೃಹದಲ್ಲಿ ಕಳುಹಿಸುವೆನು." ಈ ಮಾತನ್ನು ಆಲಿಸಿ ಅಹ್ಮದ್ ನಿಜಾಮ ಶಾಹ್ ಬಹಳ ಸಂತಸಪಟ್ಟನು. ಹಾಗೂ ನಸೀರುಲ್ ಮುಲ್ಕನನ್ನು ಬಹಳೇ ಪ್ರಶಂಶಿಸಿದನು. ರಾತ್ರಿ ವೇಳೆಯಲ್ಲಿ ನಸೀರುಲ್ ಮುಲ್ಕನು ಸ್ತ್ರೀಯನ್ನು ಅಹ್ಮದ್‌ಶಾಹನ ಸ್ತ್ರೀ ಗೃಹದಲ್ಲಿ ಕಳುಹಿಸಿದನು. ಬಾದಶಾಹನು ಅವಳನ್ನು ಸ್ಪರ್ಶಿಸದೇ ಈ ರೀತಿ ವಿಚಾರಿಸಿದನು. ಅವಳು ಯಾವ ಬುಡಕಟ್ಟು ಹಾಗೂ ಸಮುದಾಯಕ್ಕೆ ಸೇರಿದವಳು. ಆಗ ಸ್ತ್ರೀಯು ಹೀಗೆಂದು ಉತ್ತರಿಸಿದಳು. "ನನ್ನ ಜೀವನವು ಬಾದಶಾಹನಿಗೆ ಅರ್ಪಿತವಾಗಲಿ, ನಾನು ಇಂತಿಂತಹ ಸಮುದಾಯಕ್ಕೆ ಸೇರಿದವಳಾಗಿದ್ದೇನೆ. ನನ್ನ ಪಾಲಕರು ಹಾಗೂ ನನ್ನ ಪತಿಯು ಖಾವಂದರ ಬಂಧಿಗಳಲ್ಲಿದ್ದಾರೆ." ಅಹ್ಮದ್ ನಿಜಾಮನು ಸ್ತ್ರೀಯ ನಾಲಿಗೆಯಿಂದ 'ಪತಿ' ಎಂಬ ಶಬ್ದ ಕೇಳಿದ ಕೂಡಲೇ ತಕ್ಷಣ ದೂರ ಸರಿದು ಕುಳಿತನು. ಹಾಗೂ ಹೀಗೆಂದನು "ನೀನು ಚಿಂತೆ ಮಾಡಬೇಡ, ನಾನು ನಿನ್ನ ಪಾಲಕರನ್ನು ಹಾಗೂ ಪತಿಯನ್ನು ಬಿಡುಗಡೆಗೊಳಿಸುವೆನು. ಹಾಗೂ ನಿನ್ನನ್ನು ಅವರಿಗೆ ಒಪ್ಪಿಸುವೆನು". ಸ್ತ್ರೀಯು ಧನ್ಯತಾಬಾವದೊಂದಿಗೆ ಬಾದಶಾಹನೆಡೆಗೆ ನೋಡಿದಳು ಹಾಗೂ ಬಾದಶಾಹನ ಉನ್ನತಿ ಹಾಗೂ ಸಮೃದ್ಧಿಗಾಗಿ ಪ್ರಾರ್ಥಿಸಿದಳು.

ಪ್ರಾಥಃಕಾಲದಲ್ಲಿ ನಸೀರುಲ್ ಮುಲ್ಕನು ಬಾದಷಾಹನ ಸೇವೆಯಲ್ಲಿ ಹಾಜರಾದನು. ಏಕೆಂದರೆ ಬಾದಷಾಹನಿಗೆ ಅಭಿನಂದನೆಗಳನ್ನು ಅರ್ಪಿಸಲೆಂದು ಬಾದಷಾಹನು ಅವನನ್ನು ನೋಡಿದ ಕೂಡಲೇ ನಸುನಕ್ಕು ಹೇಳಿದನು. "ಸ್ತ್ರೀಯು ಅದೇ ಸ್ಥಿತಿಯಲ್ಲಿದ್ದಾಳೆ. ಯಾವ ಸ್ಥಿತಿಯಲ್ಲಿ ನನ್ನ ಬಳಿ ಬಂದಿದ್ದಳು, ನಾನು ಅವಳನ್ನು ಮುಟ್ಟುವ ಪ್ರಯತ್ನವನ್ನೂ

ಮಾಡಿಲ್ಲ. ಹಾಗೂ ಅವಳೊಂದಿಗೆ ಈ ವಚನ ನೀಡಿರುವೆನು. ಏನೆಂದರೆ ಅವಳಿಗೆ ಅವಳ ಸಂಬಂಧಿಕರಿಗೆ ಒಪ್ಪಿಸುವೆನು." ಅದರ ನಂತರ ಅಹ್ಮದ್ ನಿಜಾಮನು ಅದೇ ವೇಳೆ ಆ ಸ್ತ್ರೀಯ ಪಾಲಕರನ್ನು ಹಾಗೂ ಪತಿಯನ್ನು ಕರೆಯಿಸಿದನು. ಸ್ತ್ರೀಯನ್ನು ಅವರಿಗೆ ಒಪ್ಪಿಸಲಾಯಿತು. ಹಾಗೂ ಅವರಿಗೆ ಬಹುಮಾನದಿಂದ ಪುರಸ್ಕರಿಸಲಾಯಿತು.

ಸೈನಿಕರಿಗೆ ಪ್ರೋತ್ಸಾಹ :

ಅಹ್ಮದ್ ನಿಜಾಮಷಾಹನ ಉನ್ನತ ಹವ್ಯಾಸಗಳಲ್ಲಿ ಒಂದು ಹವ್ಯಾಸವು ಹೀಗೆಯೂ ಇತ್ತು. ಒಂದೊಮ್ಮೆ ರಣರಂಗದಲ್ಲಿ ಯಾವುದೇ ಸೈನಿಕನು ಸಾಹಸದ ಪ್ರದರ್ಶನ ಮಾಡಿದಾಗ ಅವನಿಗೆ ಅಹ್ಮದ್‌ಷಾಹನು ಬಹಳಷ್ಟು ಪ್ರಶಂಸಿಸುತ್ತಿದ್ದನು. ಹಾಗೂ ಯುದ್ಧದ ನಂತರ ಎಲ್ಲರಿಗಿಂತ ಮೊದಲು ಆತನಿಗೆ ಸನ್ಮಾನಿಸುತ್ತಿದ್ದನು. ಹಾಗೂ ಉಳಿದವರ ಸರದಿ ಆಮೇಲೆ ಬರುತ್ತಿತ್ತು.

ಒಂದು ಸಲ ಒಬ್ಬ ಉದ್ಧಟನಾದ ಬಾದಶಾಹನ ಆಪ್ತವಲಯದಲ್ಲಿಯ ನಂಬಿಗಸ್ತನು ಬಾದಷಾಹನಿಗೆ ಕೇಳಿದನು. ಇಂತಿಂಥ ಸೈನಿಕರಿಗೆ ಏಕೆ ಸನ್ಮಾನಿಸಲಾಯಿತು ? ಏಕೆಂದರೆ ಅವನು ಯುದ್ದ ಭೂಮಿಯಲ್ಲಿ ಯಾವುದೇ ಶೂರತನದ ಪ್ರದರ್ಶನ ಮಾಡಿರಲಿಲ್ಲ. ಆದರೆ ಅವನು ಯುದ್ಧದಿಂದ ಬೆನ್ನುತೋರಿಸಿ ಓಡಿ ಬಂದಿದ್ದನು. ಆಗ ಬಾದಶಾಹನು ಉತ್ತರಿಸಿದನು. "ಈ ಸಮಯವು ನಿಜವಾಗಿ ನಡೆದಿದ್ದನ್ನು ಹೇಳುವ ವೇಳೆಯಲ್ಲ. ಯಾವಾಗ ಸೂಕ್ತ ಸಂದರ್ಭ ಬರುವುದೋ ಆಗ ನಿನಗೆ ಹೇಳಲಾಗುವುದು".

ಅದೃಷ್ಟದಿಂದ ಇದೇ ದಿನಗಳಲ್ಲಿ ಅಹ್ಮದ್ ನಿಜಾಮಶಾಹನು ಸುಲ್ತಾನ ಮೆಹ್ಮೂದ್ ಬಹಮನಿಯ ಸಹಾಯದ ನೆಪದಿಂದ ಯೂಸುಫ್ ಆದಿಲ್‌ಷಾಹನನ್ನು ಹಿಂಬಾಲಿಸಿದನು. ಪಟ್ಟಣದ ಸಮೀಪ ಯೂಸೂಫ್ ಅದಿಲ್‌ಶಾಹನ ಸೈನ್ಯವು ಅಹ್ಮದ್ ನಿಜಾಮಷಾಹನ ಸೈನ್ಯದಿಂದ ಬಹಳೇ ಹೆದರಿತು. ಹಾಗೂ ಅವನಿಗೆ ಸೋಲಾಯಿತು. ಬಹಮನಿ ಸೈನ್ಯದ ಹಿಂದೆ ನಿಜಾಮಶಾಹಿಯ ಸೈನ್ಯವಿತ್ತು. ಅದು ಯೂಸುಫ್ ಅಧಿಲ್ ಶಾಹಿಯ ಸೈನ್ಯವನ್ನು ಎದುರಿಸಿತು. ವೈರಿಯ ಸೈನ್ಯದ ಮೇಲೆ ಮೊತ್ತ ಮೊದಲು ಯಾವ ಸೈನಿಕನು ದಾಳಿ ಮಾಡಿದನೋ ಅ ಸೈನಿಕನು ಅವನೇ ಆಗಿದ್ದನು. ವಿವರಣೆ ಮೇಲೆ ಮಾಡಲಾಗಿದೆಯೆಂದು ಅಹ್ಮದ ನಿಜಾಮಶಾಹನು ಆ ನಂಬಿಗಸ್ತನನ್ನು ಕರೆಯಿಸಿದನು. ಯಾರು ಈ ಸೈನಿಕನ ಬಗ್ಗೆ ಪ್ರಶ್ನಿಸಿದ್ದನು. ಹೇಳಿದನು. 'ಬಾದಷಾಹನು ಬೇಟೆಗಾರನಾಗಿದ್ದಾನೆ ಹಾಗೂ ಸೈನಿಕರನ್ನು ವೈರಿಗಳ ಮೇಲೆ ಬೇಟೆಯಾಡಲು ಬಿಡುತ್ತಾನೆ.'

ಕತ್ತಿವರಸೆಯ ಪರಂಪರೆ :

ದಖ್ಖನ್ನಿನ ಪ್ರಾಂತ್ಯದಲ್ಲಿ ಕತ್ತಿ ವರಸೆಯ ಸಂಪ್ರದಾಯವು ಅಹ್ಮದ್ ನಿಜಾಮ್ ಷಾಹಿಯ ಕಾರಣದಿಂದಲೇ ಆಯಿತು. ಅಹ್ಮದ್‌ಷಾಹನಿಗೆ ಖಡ್ಗ ಝಳಪಿಸುವುದೆಂದರೆ

ಅತ್ಯುತ್ಸಾಹ ಹಾಗೂ ಅದಮ್ಯ ಇಚ್ಛೆಯಿತ್ತು. ಹಾಗೂ ಆತನು ಕತ್ತಿ ವರಸೆಯಲ್ಲಿ ಅವನಿಗೆ ಅವನೇ ಸಾಟಿಯಾಗಿದ್ದನು. ಅವನನ್ನು ನೋಡಿ ನೋಡಿ ಪ್ರಜೆಗಳೂ ಸಹ ಈ ಕಲೆಯಲ್ಲಿ ಉತ್ಸುಕರಾದರು. ಪಟ್ಟಣದ ಎಲ್ಲ ಹಿರಿಕಿರಿಯರು ತಮ್ಮ ಅಧಿಕ ಸಮಯವನ್ನು ಈ ಕಾರಣಕ್ಕೆ ಮೀಸಲಿಡುತ್ತಿದ್ದರು. ಅಹ್ಮದ್ ನಗರದಲ್ಲಿ ಮದರಸಾಗಳು ಖಾಲಿಯಾದವು. ಖಡ್ಗ ಪ್ರದರ್ಶನದ ಅಖಾಡಗಳು ಅಲ್ಲಲ್ಲಿ ತೆರೆಯಲ್ಪಟ್ಟವು. ಈ ಕಲೆಗೆ ಬಹಳೇ ಗೌರವ ಸಿಗತೊಡಗಿತು. ಪ್ರತಿಯೊಂದು ಸಭೆ ಸಮಾರಂಭಗಳಲ್ಲಿ ಇದರ ಕುರಿತು ಚರ್ಚೆ ನಡೆಯತೊಡಗಿದವು.

ಜನರಿಗೆ ಕತ್ತಿವರಸೆಯ ಆಸಕ್ತಿಯು ಎಷ್ಟು ಮಟ್ಟಿಗೆ ಉಂಟಾಯಿತೆಂದರೆ ಪ್ರತಿಯೊಬ್ಬ ಪ್ರಜೆಯೂ ತಾನು ಈ ಕಲೆಯಲ್ಲಿ ನಿಪುಣನೆಂದು ತಿಳಿಯತೊಡಗಿದನು. ತಮ್ಮೆದುರು ಬೇರೆಯವರನ್ನು ಏನೂ ತಿಳಿಯುತ್ತಿರಲಿಲ್ಲ. ಎಷ್ಟೋ ಸಲ ಖಡ್ಗ ಪ್ರದರ್ಶಕರಲ್ಲಿ ತಮ್ಮತಮ್ಮಲ್ಲಿ ತಂಟೆಗಳೂ ಜರುಗುತ್ತಿದ್ದವು. ಇಂತಹ ಜಗಳಗಳ ನ್ಯಾಯವು ಸಾಮಾನ್ಯವಾಗಿ ಅಹ್ಮದ್ ನಿಜಾಮಶಾಹ ಸ್ವತಃ ತಾನೇ ಮುಂದಾಗಿ ಮಾಡುತ್ತಿದ್ದನು. ಅವನು ಪರಸ್ಪರ ಸ್ಪರ್ಧಿಗಳನ್ನು ಕರೆದು ಕತ್ತಿವರಸೆಯನ್ನು ವೀಕ್ಷಿಸುತ್ತಿದ್ದನು. ಯಾವ ವ್ಯಕ್ತಿಯು ವೈರಿಗೆ ಮೊದಲು ಹೊಡೆತ ನೀಡುತ್ತಿದ್ದನೋ ಅವನನ್ನು ಉತ್ತಮನೆಂದು ಪರಿಗಣಿಸಲಾಗುತ್ತಿತ್ತು.

ದಿನನಿತ್ಯ ಖಡ್ಗ ಪ್ರದರ್ಶಕರ ಒಂದು ಗುಂಪು ಷಾಹೀ ದಿವಾನ್‌ಖಾನೆಯಲ್ಲಿ ಒಟ್ಟುಗೂಡುತ್ತಿತ್ತು. ಹಾಗೂ ತಮ್ಮ ನೈಪುಣ್ಯ ಕುಶಲತೆಯ ಪ್ರದರ್ಶನ ಮಾಡುತ್ತಿತ್ತು. ಅಹ್ಮದ್ ನಿಜಾಮನು ಬಹಳೇ ಉತ್ಸುಕನಾಗಿ ಜನರ ಕೌಶಲ್ಯತೆಯನ್ನು ಬಾಯಿತುಂಬ ಹೊಗಳುತ್ತಿದ್ದನು. ಏಕೆಂದರೆ ಈ ಸ್ಪರ್ಧೆಯಲ್ಲಿ ಜೀವದ ಅಪಾಯವೂ ಇರುತ್ತಿತ್ತು. ಆ ಕಾರಣಕ್ಕಾಗಿಯೇ ಶಾಹೀ ದಿವಾಣಖಾನೆಯಲ್ಲಿ ದಿನನಿತ್ಯ ಎರಡು ಮೂರು ಜನರಾದರೂ ಪ್ರಾಣ ತ್ಯಜಿಸುತ್ತಿದ್ದರು. ಬಾದಷಾಹ ಈ ರಕ್ತಪಾತವನ್ನು ಸಹಿಸುತ್ತಿರಲಿಲ್ಲ. ಅದಕ್ಕಾಗಿ ಅವನು ಈ ಆಜ್ಞೆಯನ್ನು ಹೊರಡಿಸಿದನು. ಮುಂದಿನ ದಿನಗಳಲ್ಲಿ ಈ ಆಟವು ಕಾಲಾ ಚಬೂತರಾದ ಮೈದಾನದಲ್ಲಿ ಯಾವುದು ಕೋಟೆಯ ಎದುರಲ್ಲಿ ಇದೆ ಅಲ್ಲಿ ಜರುಗಬೇಕು. ಸ್ಪರ್ಧಿಗಳಿಗೆ ಪೂರ್ಣ ಸ್ವಾತಂತ್ರ್ಯ ನೀಡಬೇಕು. ಹಾಗೂ ಅಧಿಕಾರಿಗಳು ನಡುವೆ ಯಾವುದೇ ತೆರನಾಗಿ ಅಡ್ಡಿಪಡಿಸಬಾರದು. ಬಾದಶಾಹನು ಇದನ್ನೂ ಸಹ ತಕ್ಷಣವೇ ಹೇಳಿದನು. ಈ ಸ್ಪರ್ಧೆಯಲ್ಲಿ ಯಾವುದೇ ವ್ಯಕ್ತಿಯೂ ಕೂಡ ಸಾವನ್ನಪ್ಪಿದರೂ ಅವನನ್ನು ಕೊಂದವನಿಗೆ ಯಾವುದೇ ಮರಣ ದಂಡನೆ ಇರುವುದಿಲ್ಲ. ಅಂದರೆ ಅವನಿಗೆ ಬೇಷರತ್ ಕ್ಷಮೆ ಇರುತ್ತದೆ.

ದಖ್ಖನ್ನಿನ ಮುಸ್ಲಿಮರಿಗೆ ಖಡ್ಗ ಪ್ರದರ್ಶನದ ಹವ್ಯಾಸದ ರುಚಿ ಎಷ್ಟು ಹತ್ತಿತ್ತೆಂದರೆ ಇಡೀ ದಖ್ಖನ್ನಿನಲ್ಲಿ ಈ ಕಲಾ ಪ್ರದರ್ಶನದ ರೂಢಿ ಬೆಳೆಯಿತು. ಏನು ರಾಜ, ಏನು ವಿದ್ವಾಂಸರು, ಏನು ವಿದ್ಯಾರ್ಥಿಗಳು ಏನು ಧಾರ್ಮಿಕ ವ್ಯಕ್ತಿಗಳೂ ಹಾಗೂ ಅಮೀರರು ಅವರಿವರೆನ್ನದೆ ಎಲ್ಲರೂ ಇದರ ಪ್ರೇಮಿಗಳಾದರು. ಈ ಕಲೆಯು ವ್ಯಕ್ತಿತ್ವದ ಹೆಗ್ಗುರುತು

ಎಂದು ಪರಿಗಣಿಸಲ್ಪಟ್ಟಿತು. ಒಂದು ವೇಳೆ ಯಾರಾದರೂ ಕತ್ತಿ ವರಸೆಯಲ್ಲಿ ನಿಪುಣತೆ ಸಾಧಿಸದಿದ್ದರೆ ಅವನನ್ನು ಶೂರರಲ್ಲಿ ಪರಿಗಣಿಸಲಾಗುತ್ತಿರಲಿಲ್ಲ.

ಕಣ್ಣಾರೆ ಕಂಡ ಒಂದು ಘಟನೆ :

ತಾರೀಖೆ ಫರಿಸ್ತಾದ ಗ್ರಂಥಕರ್ತನು ಹಿಜ್ರಿ ಶಕೆ ೧೦೧೦ ರಲ್ಲಿ ಬಿಜಾಪುರದಲ್ಲಿ ಇದ್ದನು. ಅವನು ಅಲ್ಲಿ ಇದೇ ಘಟನೆಯನ್ನು ಕಣ್ಣಾರೆ ಕಂಡಿದ್ದಾನೆ. ಏನೆಂದರೆ ಇಬ್ಬರು ಸಹೋದರರಿದ್ದರು. ಸಯ್ಯದ್ ಮುರ್ತುಜಾ ಹಾಗೂ ಸೈಯದ್ ಹಸನ್ ಇವರಿಬ್ಬರೂ ವೃದ್ಧರಾಗಿದ್ದರು. ಹಾಗೂ ಯೂಸೂಫ್ ಆದಿಲ್ ಷಾಹಿಯ ದರಬಾರಿಗಳಲ್ಲಿ ಒಬ್ಬರಾಗಿದ್ದರು. ಪ್ರತಿಯೊಬ್ಬ ವ್ಯಕ್ತಿಯೂ ಇವರ ವೃದ್ಧಾವಸ್ಥೆಯನ್ನು ಗೌರವಿಸುತ್ತಿದ್ದರು. ಹಾಗೂ ಗೌರವಾನ್ವಿತ ವ್ಯಕ್ತಿಗಳೆಂದು ಪರಿಗಣಿಸುತ್ತಿದ್ದರು. ಇವರಿಬ್ಬರು ವೃದ್ಧರ, ಯಾವುದೇ ಕಾರಣಕ್ಕಾಗಿ ಮಾರುಕಟ್ಟೆಯಲ್ಲಿ ಮೂರು ಜನರೊಂದಿಗೆ ತಕರಾರು ನಡೆಯಿತು. ಆ ಮೂವರು ಆಪ್ತ ಸಹೋದರರಾಗಿದ್ದರು. ಹಾಗೂ ಅವರೂ ಕೂಡ ಗೌರವಾನ್ವಿತರೂ, ವೃದ್ಧರೂ ಆಗಿದ್ದರು. ಸೈಯ್ಯದ್ ಮುರ್ತುಜಾನ ಇಪ್ಪತ್ತು ವರ್ಷದ ಮಗನು ತನ್ನ ತಂದೆಯ ಕಡೆಯಿಂದ ಮಾತನಾಡಲು ಬಂದಾಗ ಕೊಲ್ಲಲ್ಪಟ್ಟನು. ಸೈಯದ್ ಮುರ್ತುಜಾನು ತನ್ನ ಮಗನು ಕೊನೆಯುಸಿರು ಎಳೆಯುವುದನ್ನು ಕಂಡು ಅವನೂ ಶತ್ರುಗಳ ಮೇಲೆ ಎರಿ ಹೋದನು. ಹಾಗೂ ಬಹಳೇ ಉತ್ತಮ ರೀತಿಯಲ್ಲಿ ಕತ್ತಿವರಸೆಯನ್ನು ಪ್ರದರ್ಶಿಸಿದನು. ಹಾಗೂ ಕೊನೆಗೆ ಶತ್ರುವಿನಿಂದ ಕೊಲ್ಲಲ್ಪಟ್ಟನು.

ಸೈಯದ್ ಹಸನ್‌ನೂ ಸಹ ಸಹೋದರ ಹಾಗೂ ಸಹೋದರನ ಪುತ್ರನ ಮೃತ್ಯುವಿನ ನಂತರ ಜೀವವನ್ನೇ ಪಣಕ್ಕಿಟ್ಟು ಹೋರಾಡಿ ಕೆಲಸಮಯದಲ್ಲಿ ಮರಳಿ ಬಾರದ ಲೋಕಕ್ಕೆ ಪಯಣ ಬೆಳೆಸಿದನು. ಈ ಮೂವರ ಶವಗಳು ಇನ್ನೂ ಮೈದಾನದಲ್ಲೇ ಬಿದ್ದಿದ್ದವು. ಎದುರಿನ ಮೂರು ಎದುರಾಳಿಗಳು ಯಾರು ಖಡ್ಗದ ಹೊಡೆತಗಳಿಂದ ಗಾಯಾಳುಗಳಾಗಿದ್ದರೊ ಅವರೂ ಸಾವನ್ನಪ್ಪಿದರು. ಹೀಗೆ ಅಲ್ಪ ಸಮಯದಲ್ಲಿಯೇ ಆರು ಕುಟುಂಬಗಳು ನಾಶವಾದವು.

ಇದರಲ್ಲಿ ಯಾವುದೇ ಸಂಶಯವಿಲ್ಲ. ದಖ್ಖನ್ನಿನಲ್ಲಿ ಮುಸ್ಲಿಮರು ಕತ್ತಿವರಸೆಯಲ್ಲಿ ತಮಗೆ ತಾವೇ ಸಾಟಿಯಾಗಿರುತ್ತಿದ್ದರು. ಯಾವಾಗಿನವರೆಗೆ ಒಬ್ಬ ವ್ಯಕ್ತಿ ಈ ಕಲೆಯಲ್ಲಿ ನಿಷ್ಣಾತನಾಗಿಲ್ಲವೋ ಅವನೊಂದಿಗೆ ಸ್ಪರ್ಧೆ ಮಾಡುತ್ತಿರಲಿಲ್ಲ. ಇದೇ ಕಾರಣದಿಂದ ಬಹಳಷ್ಟು ಜನರು ಕತ್ತಿ ವರಸೆಯನ್ನು ರೂಢಿಗೊಳಿಸುವಲ್ಲಿ ತೊಡಗಿರುತ್ತಿದ್ದರು. ಈ ಜನರು ಈ ಕಲೆಯಲ್ಲಿ ಎಷ್ಟು ಗಾಢವಾಗಿ ಮುಳುಗಿರುತ್ತಿದ್ದರೆಂದರೆ ಕುದುರೆ ಸವಾರಿ, ಪೋಲೋ ಆಟ, ಭರ್ಚಿ ಎಸೆಯುವುದರಲ್ಲಿ, ಬಾಣ ಪ್ರಯೋಗದಲ್ಲಿ ಪರಿಣಿತರಾಗುತ್ತಿರಲಿಲ್ಲ. ಈ ವಿಧಾನವು ಬಹಳ ಅಪಾಯಕಾರಿಯಾಗಿದೆ. ಏಕೆಂದರೆ ಒಂದು ವೇಳೆ ಯಾವುದೇ ದಖನ್ನಿಯಲ್ಲದವನೊಂದಿಗೆ ಸ್ಪರ್ಧೆ ಏರ್ಪಟ್ಟರೆ ಇದರಲ್ಲಿ

ದಖ್ಖನ್ನಿಯಲ್ಲದವನಿಗೆಯೇ ಯಶ ದೊರೆಯುತ್ತಿತ್ತು. ಆದರೆ ಯಾವಾಗ ಕುಟುಂಬಗಳಲ್ಲಿ ಜಗಳ ಅಥವಾ ಮಾರುಕಟ್ಟೆಯಲ್ಲಿ ತಂಟೆಗಿಳಿದಾಗ ಈ ದಖ್ಖನ್ನಿನ ವ್ಯಕ್ತಿಗಳು ಹುಲಿಯ ಹಾಗೆ ಎದುರಾಳಿಗಳನ್ನು ಎದುರಿಸುತ್ತಿದ್ದರು.

ಬಹಮನಿ ಆಡಳಿತದ ನಂತರ ದಖ್ಖನ್ನಿನಲ್ಲಿ ಎಷ್ಟು ಜನ ಆಡಳಿತಗಾರರಾದರೋ ಅವರಲ್ಲಿ ಯಾರೂ ಇಂಥ ಅಪಾಯಕಾರಿ ಆಟವನ್ನು ನಿಲ್ಲಿಸಲು ಪ್ರಯತ್ನಿಸಲಿಲ್ಲ. ಆದರೆ ಎಲ್ಲರೂ ಈ ಕಲೆಯನ್ನು ಉನ್ನತಿಗೊಳಿಸುವಲ್ಲಿ ಆಸಕ್ತಿಯಿಂದ ಭಾಗವಹಿಸಿದರು. ಇಂಥ ಅಪಾಯಕಾರಿ ಆಟವನ್ನು ಪ್ರೋತ್ಸಾಹಿಸುವುದು ಯಾವುದೇ ಕಾರಣಕ್ಕೂ ಯೋಗ್ಯವಲ್ಲ, ಉಚಿತವಲ್ಲ. ಸುಲ್ತಾನ್ ಇಬ್ರಾಹಿಂ ಆದಿಲ್‌ಶಾಹ ದ್ವಿತೀಯನು ಈ ವಿಷಯದಲ್ಲಿ ಬಹಳೇ ಸರಿಯಾದ ಕ್ರಮ ತೆಗೆದುಕೊಂಡನು. ಅವನು ಖಡ್ಗ ಪ್ರದರ್ಶಕರಿಗೆ ಯಾವಾಗಲೂ ಪ್ರೋತ್ಸಾಹ ನೀಡಲಿಲ್ಲ. ಅದರ ಪರಿಣಾಮವೇನಾಯಿತೆಂದರೆ ಈಗ ದಖ್ಖನ್ನಿನಲ್ಲಿ ಕತ್ತಿವರಸೆ ಕಲೆಯು ಅಸ್ತಿತ್ವದಲ್ಲಿಲ್ಲ..

ಈ ಅಪಾಯಕಾರಿ ಆಟವು ಹಾಗೂ ಜೀವಕ್ಕೆ ಬಾಧೆ ತರುವ ಸ್ಪರ್ಧೆಯು ಮಹಾನ್ ರಾಜರು ಹಾಗೂ ನ್ಯಾಯಯುತ ಆಡಳಿತಗಾರರ ಕೃಪೆಯಿಂದ ಯಾವುದೇ ಪ್ರಾಂತ್ಯದಲ್ಲಿಯೂ ಅಸ್ತಿತ್ವದಲ್ಲಿ ಇರಲಾರದೆಂದು ನಿರೀಕ್ಷಿಸಬಹುದಾಗಿದೆ. ಹಾಗೂ ಎಲ್ಲ ಪ್ರಾಂತ್ಯಗಳು ಕುಟುಂಬ ಕದನಗಳಿಂದ ಉಳಿಯುವವು. ಸುಲ್ತಾನ್ ಇಬ್ರಾಹಿಂ ಆದಿಲ್ ದ್ವಿತೀಯನ ಹಾದಿಯಲ್ಲಿಯೇ ಸಾಗಿ ತೆಲಂಗಾಣದಲ್ಲಿ ಸುಲ್ತಾನ್ ಮೆಹ್ಮೂದ್ ಕುಲಿ ಕುತುಬ್‌ಶಾಹನೂ ಈ ಕತ್ತಿವರಸೆಯ ಮೇಲೆ ನಿಷೇಧ ಹೇರಿದನು.. ನಿರೀಕ್ಷೆಯೇನೆಂದರೆ ಈಗ ಕತ್ತಿವರಸೆಯ ಹೆಸರೂ ಕೂಡ ದಖ್ಖನಿನಲ್ಲಿ ಉಳಿಯಲಾರದು.

ಅಹ್ಮದ್ ನಿಜಾಮ್ ಶಾಹನು ಹತ್ತೊಂಬತ್ತು ವರ್ಷದ ವರೆಗೆ ಆಡಳಿತ ನಡೆಸಿದನು.

■

*

೨. ಅಹ್ಮದ್ ನಿಜಾಮಶಾಹ ಬಹ್ರಿಯ ಪುತ್ರ ಬುರ್ಹಾನ್ ನಿಜಾಮಶಾಹ

ಸಿಂಹಾಸನಾರೂಢ :

ಬುರ್ಹಾನ ನಿಜಾಮಷಾಹನು ಯಾವಾಗ ಅಹ್ಮದ್ ನಗರದ ಸಿಂಹಾಸನವನ್ನು ಅಲಂಕರಿಸಿದನೋ ಆಗ ಅವನ ವಯಸ್ಸು ಏಳು ವರ್ಷವಿತ್ತು. ಅವನು ಸಿಂಹಾಸನಾಧೀಶನಾಗಿರುವ ದಿನಾಂಕವು ಧೃಢಿಕರಿಸಲ್ಪಟ್ಟಿದೆ. 'ಫೈಜ್ ಏಜಾವಿದ್' ಇದೆ. ಬುರ್ಹಾನಿನ ಆಡಳಿತಾವಧಿಯಲ್ಲಿ ಮುಕಮ್ಮಿಲ್‌ಖಾನ್ ದಖ್ಖನಿ ಅಹ್ಮದ್ ನಿಜಾಮ್‌ಷಾಹನ ಆಡಳಿತದಲ್ಲಿದ್ದಂತೆ ನಾಯಕತ್ವದ ಹುದ್ದೆ ಹಾಗೂ ಅಮೀರರ ಮುಖ್ಯಸ್ಥನ 'ಫೈಜೇ ಜಾವೀದ್' ಸ್ಥಾನವನ್ನು ವಹಿಸಿಕೊಂಡಿದ್ದನು. ಅವನ ಪುತ್ರನಾದ ಮೀಯಾ ಜವಾಲುದ್ದೀನನಿಗೆ 'ಅಜೀಜುಲ್ ಮುಲ್ಕ' ಎಂಬ ಬಿರುದಿನಿಂದ ಸನ್ಮಾನಿಸಲಾಯಿತು. ಹಾಗೂ ಸಿರೇನೌಬತಿಯ ಹುದ್ದೆಯನ್ನು ನೀಡಲಾಯಿತು. ನಿಜಾಮಶಾಹಿ ವಂಶದ ಎಲ್ಲ ಪ್ರಾಂತ್ಯ ಹಾಗೂ ಆರ್ಥಿಕ ವ್ಯವಹಾರಗಳು ತಂದೆ ಹಾಗೂ ಮಗನ ಹಿಡಿತದಲ್ಲಿ ಬಂದವು.

ಅಜೀಜುಲ್ ಮುಲ್ಕನ ಅಸಮತೋಲನ :

ಮೂರು ವರ್ಷದವರೆಗೂ ಇದೇ ಪರಿಸ್ಥಿತಿ ಮುಂದುವರಿಯಿತು. ಎಲ್ಲಿಯವರೆಗೆಂದರೆ 'ಅಜೀಜುಲ್‌ಮುಲ್ಕ್' ಸಿರೇನೌಬತ್‌ನು ಬಹಳೇ ಗರ್ವದಿಂದ ಮನಸ್ಸಿಗೆ ಬಂದಂತೆ ನಡೆದುಕೊಳ್ಳತೊಡಗಿದನು. ಅವನ ಈ ನಡತೆಯನ್ನು ನೋಡಿ ಬೇರೆ ಪ್ರತಿಷ್ಠಿತ ಅಮೀರರಾದ ರೂಮಿಖಾನ್, ಕರಮ್‌ಖಾನ್ ಹಾಗೂ ಅಮೀರ್ ಖಾನ್‌ರು ಸಿಡಿಮಿಡಿಗೊಂಡರು. ತಾವು ಅವನಂತೆ ಅಧಿಕಾರಿಗಳಾಗಿ ಮೆರೆಯಬೇಕೆಂದು ಅಸೂಯೆಯಿಂದ ಬೇಯತೊಡಗಿದರು. ಈ ಅಮೀರರು ಮುಕಮ್ಮಿಲ್‌ಖಾನ್ ದಖನಿ

ಹಾಗೂ ಅಜೀಜುಲ್ ಮುಲ್ಕರ ವಿನಾಶವನ್ನು ಮಾಡುವುದಕ್ಕಾಗಿ ಎಲ್ಲ ರೀತಿಯಾಗಿ ಪ್ರಯತ್ನಿಸಿದರು. ಆದರೆ ಇದರಲ್ಲಿ ಅವರು ಯಶ ಕಾಣಲಿಲ್ಲ.

ಅಮೀರರ ಯೋಜನೆಗಳು :

ಈ ಅಮೀರರು ವ್ಯಥಿತರಾಗಿ ಕೊನೆಗೆ ಇಂಥ ಸಂಚನ್ನು ಹೆಣೆದರು. ಏನೆಂದರೆ ಸ್ತ್ರೀ ಗೃಹದಲ್ಲಿಯ ಓರ್ವ ಸ್ತ್ರೀಯಾದ ಬೀಬಿ ಆಯಿಷಾಳ ಜೊತೆ ಸಂಬಂಧ ಬೆಳೆಸಿದರು. ಈ ಸ್ತ್ರೀಯು ಬುರ್ಹಾನ ನಿಜಾಮ್ ಶಾಹನ ದಾಯಿಯಾದ ಇವಳು ಬಹಳ ಪ್ರಭಾವಶಾಲಿಯಾಗಿದ್ದಳು. ಆಯಿಷಾಳ ಜೊತೆ ಸಂಬಂಧ ವೃದ್ಧಿಗೊಳಿಸಿ ಮೇಲೆ ಹೇಳಿದಂತಹ ಅಮೀರರು ಇದನ್ನು ನಿಶ್ಚಯಿಸಿದರು. ಏನೆಂದರೆ ಆಯಿಷಾಳು ಅವಕಾಶ ನೋಡಿಕೊಂಡು ಬುರ್ಹಾನ ನಿಜಾಮಷಾಹಿಯ ತಮ್ಮನಾದ ರಾಜಾಜಿಯೊನನ್ನು ಕೋಟೆಯಿಂದ ಹೊರತಂದು ಅವರಿಗೆ ಒಪ್ಪಿಸುವುದು. ಅದರಿಂದ ಈ ಅಮೀರರ ಉದ್ದೇಶವೇನಿತ್ತೆಂದರೆ ರಾಜಾಜಿಯೋಗೆ ಅಹ್ಮದ್‌ನಗರದ ಸಿಂಹಾಸನದ ಮೇಲೆ ಕೂಡ್ರಿಸುವುದು. ಹಾಗೂ ಬುರ್ಹಾನ ನಿಜಾಮಶಾಹನಿಗೆ ಪದಚ್ಯುತಗೊಳಿಸುವುದು ಹಾಗೂ ಈ ತೆರನಾಗಿ ಮುಕಮ್ಮಿಲ್‌ಖಾನ್ ಹಾಗೂ ಅಜೀಜುಲ್ ಮುಲ್ಕನ ಅಧಿಕಾರವು ತನ್ನಿಂದ ತಾನೇ ಕೊನೆಗಾಣುವುದು.

ರಾಜಕುಮಾರ ಜಿಯೋನ ಕಾಣೆಯಾಗುವಿಕೆ :

ಬೀಬಿ ಆಯಿಷಾಳು ವಾಗ್ದಾನ ಮಾಡಿದಂತೆ ತನ್ನ ಕೆಲಸವನ್ನು ಪ್ರಾರಂಭಿಸಿದಳು. ಹಾಗೂ ಅವಕಾಶ ಸಿಗುವುದನ್ನೇ ಕಾಯುತ್ತಿದ್ದಳು. ಒಂದು ದಿನ ಅವಳು ರಾಜಾಜಿಯೋಗೆ ಅವನ ವಯಸ್ಸು ಕೇವಲ ನಾಲ್ಕು ವರ್ಷವಿತ್ತು. ಹೆಣ್ಣು ಮಗುವಿನ ವಸ್ತ್ರಗಳನ್ನು ತೊಡಿಸಿ ಹಾಗೂ ಆತನನ್ನು ಪಲ್ಲಕ್ಕಿಯಲ್ಲಿ ಕೂಡ್ರಿಸಿ ಪಟ್ಟಣದ ಕಡೆಗೆ ತೆಗೆದುಕೊಂಡು ಹೋದಳು. ಆಕಸ್ಮಿಕವಾಗಿ ಅದೇ ವೇಳೆಯಲ್ಲಿ ಬುರ್ಹಾನ ನಿಜಾಮಷಾಹನ ತಾಯಿಯು ತನ್ನ ಚಿಕ್ಕ ಮಗನಾದ ರಾಜಾಜಿಯೋನನ್ನು ನೆನೆಸಿದಳು. ಶಾಹೀ ಸ್ತ್ರೀಗೃಹದಲ್ಲಿ ರಾಜಕುಮಾರನನ್ನು ಹುಡುಕಲಾಯಿತು. ಆದರೆ ಆತ ಎಲ್ಲಿಯೂ ಸಿಗಲಿಲ್ಲ. ನಾಲ್ಕೂ ಕಡೆ ಗೊಂದಲವುಂಟಾಯಿತು. ಮಹಲಿನ ಎಲ್ಲ ಒಳ ಹೊರಗಿನ ಸೇವಕರು ಒಂದು ಕಡೆ ಸೇರಿದರು. ಇವರಲ್ಲಿ ಓರ್ವನು ಹೀಗೆಂದನು. "ರಾಜಕುಮಾರನು ಅರಮನೆಯ ಯಾವುದೇ ಒಂದು ಹೊಂಡದಲ್ಲಿ ಬಿದ್ದಿರುವ ಸಾಧ್ಯತೆ ಇದೆ.

ಕೋಟೆಯಲ್ಲಿ ಮರಳುವಿಕೆ :

ಸೇವಕರ ಒಂದು ತಂಡವು ಹೊಂಡಗಳಲ್ಲಿಳಿದು ಜಿಯೋನನ್ನು ಹುಡುಕಿದರು. ಆದರೆ ಆತನ ಪತ್ತೆಯಾಗಲಿಲ್ಲ. ಕೆಲವು ಜನರು ಬೀಬಿ ಆಯಿಷಾಳನ್ನು ಹಿಂಬಾಲಿಸಿದರು. ಅವಳು ಇನ್ನೂ ರೂಮಿಖಾನ್‌ನ ಮನೆಗೆ ತಲುಪಿರಲಿಲ್ಲ. ಆಗಲೇ ಅವಳನ್ನು ಬಂಧಿಸಲಾಯಿತು. ರಾಜಕುಮಾರನನ್ನು ಕೋಟೆಯಲ್ಲಿ ಮರಳಿ ತರಲಾಯಿತು. ಬೀಬಿ

ಆಯಿಷಾ ಆಗಾಗ ರಾಜಕುಮಾರ ಜಿಯೋಗೆ ತನ್ನ ಮನೆಗೆ ಕರೆದುಕೊಂಡು ಹೋಗುತ್ತಿದ್ದಳು. ಹಾಗೂ ತನ್ನನ್ನು ತಾನು ಜಿಯೋನ ಅಜ್ಜಿ ಎಂದು ಕರೆದುಕೊಳ್ಳುತ್ತಿದ್ದಳು. ಅಂದು ಸಹ ಅವಳು ಇದೇ ನೆಪ ಮಾಡಿದಳು. ನಾನು ರಾಜಾಜಿಯೋನನ್ನು ನನ್ನ ಮನೆಗೆ ಕರೆದೊಯ್ಯುತ್ತಿದ್ದೆ. ಕೆಲವು ದಿನಗಳ ನಂತರ ನಿಜವಾದ ರಹಸ್ಯ ಬಯಲಾಯಿತು. ಹಾಗೂ ಪ್ರತಿಯೊಬ್ಬ ವ್ಯಕ್ತಿಯು ಇದು ಅಮೀರರ ಸಂಜ್ಞೆಯಂತೆ ಜರುಗಿದೆ ಎಂದು ತಿಳಿದುಕೊಂಡರು.

ಬುರ್ಹಾನ ನಿಜಾಮಶಾಹನ ಶಿಕ್ಷಣ ಹಾಗೂ ತರಬೇತಿ :

ಈ ಘಟನೆಯ ನಂತರ ಮುಕ್‌ಮ್ಮಿಲ್‌ಖಾನ್‌ನು ಬುರ್ಹಾನ ನಿಜಾಮ್‌ಷಾಹ ಹಾಗೂ ರಾಜಾಜಿಯೋನ ಕಡೆಗೆ ಬಹಳಷ್ಟು ಗಮನ ನೀಡಿದನು. ಹಾಗೂ ಅವರ ರಕ್ಷಣೆಯನ್ನು ಬಹಳೇ ಸುಭದ್ರ ರೀತಿಯಲ್ಲಿ ಮಾಡತೊಡಗಿದನು. ಯಾವಾಗಲೂ ಎಚ್ಚರಿಕೆ ವಹಿಸುತ್ತಿದ್ದನು. ಒಂದು ಕ್ಷಣವೂ ಅಲಕ್ಷ್ಯ ಮಾಡುತ್ತಿರಲಿಲ್ಲ. ಬುರ್ಹಾನ್ ನಿಜಾಮಷಾಹ್‌ನ ಶಿಕ್ಷಣದ ವ್ಯವಸ್ಥೆಯನ್ನು ತುಂಬಾ ಉತ್ತಮ ರೀತಿಯಲ್ಲಿ ಏರ್ಪಡಿಸಿದನು. ಕೇವಲ ಹತ್ತು ವರ್ಷದ ವಯಸ್ಸಿನಲ್ಲಿಯೇ ಪ್ರಾಸಬದ್ಧ ಪದ್ಯವನ್ನು ವಾಚಿಸುವುದು ಹಾಗೂ ಬಹಳ ಉತ್ತಮ ರೀತಿಯಲ್ಲಿ ಅರಬಿ ಭಾಷೆಯ ಮೇಲೆ ಹಿಡಿತ ಸಾಧಿಸಿ ಬರೆಯುವ ಪ್ರತಿಭೆಯನ್ನು ತೋರಿದನು. ಮುರ್ತುಜಾ ನಿಜಾಮಷಾಹನ ಆಡಳಿತ ಕಾಲದಲ್ಲಿ ಇತಿಹಾಸಕಾರ ಫೆರಿಷ್ತಾನು ಷಾಹೀ ಗ್ರಂಥಾಲಯದಲ್ಲಿ ಒಂದು ಪತ್ರಿಕೆಯನ್ನು ನೋಡಿದನು. ಅದು ಉತ್ತಮ ನಡುವಳಿಕೆ ಹಾಗೂ ನೈತಿಕತೆಯನ್ನು ಪ್ರಸ್ತುತ ಪಡಿಸುತ್ತಿತ್ತು. ಈ ಪತ್ರಿಕೆಯ ಕೊನೆಯಲ್ಲಿ ಈ ನಾಮಾಂಕಿತವಿತ್ತು. "ಲೇಖಕ ಶೇಖ ಬುರ್ಹಾನ್ ಬಿನ್ ಮಲೀಕ್ ಅಹ್ಮದ್ ನಿಜಾಮುಲ್ ಮುಲ್ಕಿಲ್ ಮಲ್ಬಟ್ ಬ ಹಜ್ರತುಲ್ ಬಹ್ರಿ" ನಿಜಾಮುಲ್ ಮಲೀಕ್ ಅಹ್ಮದ್ ಮುಲ್ಕನ ಬಿರುದು 'ಹಜ್ರತುಲ್ ಬಹ್ರಿ' ಎಂದಿತ್ತು. ಆತನ ಪುತ್ರನಾದ 'ಶೇಖ ಬುರ್ಹಾನ್' ಎಂದು ಬರೆದಿತ್ತು.

ವಿರೋಧಿ ಅಮೀರರ ಪರಾರಿ :

ಮೇಲೆ ಉಲ್ಲೇಖಿಸಿದ ಮೂವರು ಅಮೀರರು ಹಾಗೂ ಮುಕಮ್ಮಿಲ್‌ಖಾನ್‌ನೊಂದಿಗೆ ಪರಸ್ಪರ ವಿರೋಧವು ಮೊದಲಿಗಿಂತಲೂ ಹೆಚ್ಚು ರೀತಿಯಲ್ಲಿ ಹೆಚ್ಚುತ್ತಲೇ ಹೋಯಿತು. ಸಂಧಾನದ ಯಾವುದೇ ಹಾದಿ ಕಾಣದೇ ಈ ಮೂವರು ಅಮೀರರು ಅಹ್ಮದ್ ನಗರದಿಂದ ಪರಾರಿಯಾಗಿ ಶೇಖ ಅಲ್ಲಾವುದ್ದೀನ್ ಅಮಾದುಲ್‌ಮುಲ್ಕನ ಬಳಿಗೆ ಹೋದರು. ಅವರ ಜೊತೆಗೆ ಬೇರೆ ಐದು ಪ್ರತಿಷ್ಠಿತ ಅಮೀರರೂ ಇದ್ದರು. ಜೊತೆಗೆ ಎಂಟು ಸಾವಿರ ಸವಾರರ ಸೈನ್ಯವಿತ್ತು. ಈ ಅಮೀರರು ಶೇಖ ಅಲ್ಲಾವುದ್ದೀನನೊಂದಿಗೆ ಮುಖಾಮುಖಿಯಾಗಿ ಮಾತುಕತೆ ನಡೆಸಿದರು. ಹಾಗೂ ಅವನಿಗೆ ಈ ನಂಬಿಕೆಯನ್ನುಂಟು ಮಾಡಿದರು. ಏನೆಂದರೆ ಅಹ್ಮದ್ ನಗರವನ್ನು ಗೆಲ್ಲುವುದು

ಬಹಳೇ ಸುಲಭವಾಗಿರುವುದು. ಅಮಾದುಲ್‌ಮುಲ್ಕನ ಮೇಲೆ ಇವರ ಮಾತಿನ ಪ್ರಭಾವ ಬಹಳ ಆಯಿತು. ಹಾಗೂ ಅವನು ಪೂರ್ಣ ರೀತಿಯಲ್ಲಿ ಅವರ ಸಂಚಿನ ಪಾಲಾದನು. ಅವನು ಸೈನ್ಯವನ್ನು ಒಟ್ಟುಗೂಡಿಸಿದನು. ಹಾಗೂ ಕಾವೆಲ್ ಎಲ್ಚಿಪುರದಿಂದ ಹೊರಟು ನಿಜಾಮಷಾಹಿ ಸರಹದ್ದನ್ನು ಪ್ರವೇಶಿಸಿದನು. ಹಾಗೂ ಅವನು ಬಹಳಷ್ಟು ಪರಗಣ ಹಾಗೂ ಪಟ್ಟಣಗಳನ್ನು ವಶಪಡಿಸಿಕೊಂಡನು.

ಇಮಾದುಲ್ ಮುಲ್ಕ ಹಾಗೂ ಮುಕಮ್ಮಿಲ್ ಖಾನ್‌ರಲ್ಲಿ ಕಾಳಗ :

ಮುಕಮ್ಮಿಲ್‌ಖಾನನಿಗೆ ಯಾವಾಗ ಈ ಸುದ್ದಿ ತಿಳಿಯಿತೋ ಆಗ ಅವನು ಶತ್ರುವನ್ನು ಸರಿಯಾದ ಹಾದಿಯಲ್ಲಿ ತರುವ ಯೋಚನೆ ಮಾಡಿದನು. ಅವನು ತನ್ನ ಸೈನ್ಯವನ್ನು ಒಟ್ಟುಗೂಡಿಸಿದ. ಹಾಗೂ ಬುರ್ಹಾನ್ ನಿಜಾಮ್ ಹಾಗೂ ಪರಿಂದಾದ ಆಡಳಿತಗಾರನಾದ ಖ್ವಾಜಾ ಜಹಾಂನ ಜೊತೆ ಬಹಳೇ ಆಡಂಬರ ದೊಂದಿಗೆ ಇಮಾದುಲ್ ಮುಲ್ಕನಿಗೆ ಮುಖಭಂಗ ಮಾಡಲೆಂದು ಹೊರಟನು. ರಾನೂರಿ ಗ್ರಾಮದ ಬಳಿಯಲ್ಲಿ ಹಿಜ್ರಿಶಕೆ ೯೧೬ ರಲ್ಲಿ ಇಮಾದುಲ್ ಮುಲ್ಕ ಹಾಗೂ ಮುಕಮ್ಮಿಲ್‌ಖಾನ್‌ನ ಸೈನ್ಯಗಳು ಎದುರುಬದುರಾದವು. ಪರಸ್ಪರ ವಿರೋಧಿ ಸೈನಿಕರು ತಮ್ಮ ತಮ್ಮ ಸೈನ್ಯವನ್ನು ಸಿದ್ಧಗೊಳಿಸಿದರು. ಮುಕಮ್ಮಿಲ್‌ಖಾನ್‌ನು ಬುರ್ಹಾನ್ ನಿಜಾಮಷಾಹನನ್ನು ಚಿಕ್ಕ ವಯಸ್ಸಿನ ಕಾರಣಕ್ಕಾಗಿ ಸೈನ್ಯದ ನಡುವೆ ರಕ್ಷಣೆಯಲ್ಲಿಟ್ಟನು. ಒಬ್ಬ ತುರ್ಕಿ ಗುಲಾಮನಾದ ಆಜರ್‌ಖಾನ್‌ನನ್ನು ಬಾದಷಾಹನ ಅಂಗರಕ್ಷಕನಾಗಿ ನೇಮಿಸಲಾಯಿತು.

ಇಮಾದುಲ್ ಮುಲ್ಕನ ಸೋಲು :

ಯಾವಾಗ ಯುದ್ಧ ಪ್ರಾರಂಭಗೊಂಡಿತೋ ಆಗ ಮುಕಮ್ಮಿಲ್‌ಖಾನ್‌ನು ಇದರಲ್ಲಿ ಬಹಳೇ ಶೌರ್ಯದೊಂದಿಗೆ ಭಾಗವಹಿಸಿದನು. ಎರಡೂ ಕಡೆಯ ಸೈನಿಕರು ಪ್ರಾಣವನ್ನೇ ಪಣಕ್ಕಿಟ್ಟು ಹೋರಾಡಿದರು. ರಣರಂಗಕ್ಕೆ ಭೀಕರ ಕಳೆಯೇರಿತು. ಇದರ ಪರಿಣಾಮವಾಗಿ ನಿಜಾಮ್‌ಷಾಹಿಯು ಯಶಸ್ಸನ್ನು ಪಡೆದನು. ಇಮಾದುಲ್ ಮುಲ್ಕ ಹಾಗೂ ಅವನ ಸಂಗಡಿಗರು ರಣರಂಗದಿಂದ ದಿಕ್ಕೆಟ್ಟು ಓಟಕಿತ್ತರು. ಹಾಗೂ ಎಲ್ಚಿಪುರದವರೆಗೆ ದಾರಿಯಲ್ಲಿ ಎಲ್ಲಿಯೂ ನಿಲ್ಲಲಿಲ್ಲ. ಪರಾರಿಯಾದವರ ಬಹಳಷ್ಟು ವಸ್ತುಗಳು, ಕುದುರೆ ಹಾಗೂ ಆನೆಗಳು ಇತ್ಯಾದಿ ನಿಜಾಮ್ ಶಾಹಿಯ ಪಾಲಿಗೆ ಬಂದವು. ಬರಾರ್‌ದ ಬಹಳಷ್ಟು ಪರಗಣಗಳು ಹಾಗೂ ಹಳ್ಳಿಗಳು ಈ ದಾಳಿಯ ಕಾರಣದಿಂದ ನಾಶಹೊಂದಿದವು.

ಇಮಾದುಲ್ ಮುಲ್ಕನನ್ನು ಹಿಂಬಾಲಿಸುವಿಕೆ :

ಮುಕಮ್ಮಿಲ್‌ಖಾನ್‌ನು ಬುರ್ಹಾನನಿಜಾಮ್ ಷಾಹನನ್ನು ಜೊತೆಗೆ ಕರೆದುಕೊಂಡು ಪರಾರಿಯಾಗುವವರನ್ನು ಹಿಂಬಾಲಿಸಿದನು. ಅವರ ಹಿಂದೆ ಹಿಂದೆ ಬರಾರಕ್ಕೆ

ತಲುಪಿದನು. ಇಮಾದುಲ್ ಮುಲ್ಕನು ಗಾಬರಿಯಾಗಿ ಬುರ್ಹಾನಪುರದ ಹಾದಿ ಹಿಡಿದನು. ಮಕಮ್ಮಿಲ್‌ಖಾನ್‌ನು ಅಲ್ಲಿಯೂ ಅವನನ್ನು ಬೆನ್ನಟ್ಟಿದನು. ಕೊನೆಗೆ ಬುರ್ಹಾನಪುರದ ವಿದ್ವಾಂಸರು, ಹಾಗೂ ಧಾರ್ಮಿಕ ಪಂಡಿತರು ಮಧ್ಯಸ್ಥಿಕೆ ವಹಿಸಿ ಪರಸ್ಪರರಲ್ಲಿ ಈ ಷರತ್ತಿನ ಮೇಲೆ ಸಂಧಾನ ಮಾಡಲಾಯಿತು. ಎರಡೂ ಕಡೆಯವರು ತಮ್ಮ ತಮ್ಮ ಪ್ರಾಂತ್ಯಗಳಿಗೆ ಮರಳಬೇಕು.

ಪಾತ್ರಿ ಪಟ್ಟಣವನ್ನು ಪಡೆಯುವದಕ್ಕಾಗಿ ವಿವಾದ :

ಇತಿಹಾಸಕಾರನ ವ್ಯಾಖ್ಯಾನವಿದೆ. ನಿಜಾಮಶಾಹನ ಪೂರ್ವಜರಲ್ಲಿ ಕುಲಕರ್ಣಿ ಎಂಬ ಹೆಸರಿನ ಒಬ್ಬ ವ್ಯಕ್ತಿ ಇದ್ದನು. ಅವನು ಪಾತ್ರಿ ಪಟ್ಟಣದವನಾಗಿದ್ದನು. ಅವನು ಯಾವುದೋ ಕಾರಣಕ್ಕಾಗಿ ಪಟ್ಟಣವನ್ನು ತೊರೆದು ಬೇಜಾನಗರಕ್ಕೆ ವಲಸೆಹೋಗಿದ್ದನು. ಯಾವಾಗ ನಿಜಾಮಷಾಹನು ವಂಶಜರ ಕೈಗೆ ಆಡಳಿತ ಬಂದು ಅವರದೇ ಬೇರೆಯದಾದ ಸಾಮ್ರಾಜ್ಯಸ್ಥಾಪನೆಯಾಯಿತೋ ಆಗ ಆ ಎಲ್ಲ ಬ್ರಾಹ್ಮಣರು ಬಾದಷಾಹ್‌ನ ಸಂಬಂಧಿಕರಾಗಿದ್ದರೋ ಅವರೆಲ್ಲರೂ ಬೇಜಾನಗರದಿಂದ ಅಹ್ಮದ್ ನಗರಕ್ಕೆ ಆಗಮಿಸಿದರು. ಈ ಬ್ರಾಹ್ಮಣರಿಗೆ ತಮ್ಮ ಜನ್ಮಭೂಮಿಯಾದ ಪಾತ್ರಿಪಟ್ಟಣದ ಕುರಿತು ಅತೀವ ಒಲವು ಇತ್ತು. ಅದಕ್ಕಾಗಿ ಮುಕಮ್ಮಿಲ್‌ಖಾನನು ಅಮಾದುಲ್ ಮುಲ್ಕನಿಗೆ ಪತ್ರ ಬರೆದನು. ಇದರ ಸಾರಾಂಶ ಹೀಗಿತ್ತು.

"ಪಾತ್ರಿ ಪಟ್ಟಣವು ಯಾವುದು ನಿಮ್ಮ ಪ್ರಾಂತ್ಯದಲ್ಲಿದೆ ಹಾಗೂ ಗಡಿ ಪ್ರದೇಶದಲ್ಲಿದೆ ಇದರೊಂದಿಗೆ ನಮಗೆ ಬಹಳ ಹಳೆಯ ಸಂಬಂಧವಿದೆ ನಮ್ಮ ಹಾಗೂ ನಿಮ್ಮ ಸ್ನೇಹದ ಬೇಡಿಕೆ ಇದು ಆಗಿದೆ. ಏನೆಂದರೆ ಇದನ್ನು ನಮ್ಮ ವಶಕ್ಕೆ ಒಪ್ಪಿಸಿ ಅದರ ಬದಲಾಗಿ ನೀವು ನಮ್ಮ ಯಾವುದೇ ಪಟ್ಟಣವನ್ನು ನಮ್ಮಿಂದ ತೆಗೆದುಕೊಳ್ಳಿರಿ" ಅಮಾದುಲ್ ಮುಲ್ಕನು ಈ ಮಾತನ್ನು ಒಪ್ಪಲಿಲ್ಲ. ಯಾವಾಗ ಅವನು ಈ ವಿಷಯವನ್ನು ಗ್ರಹಿಸಿದನು ಆಗ ಈ ಪಟ್ಟಣಕ್ಕಾಗಿ ಬಹಳೆ ಪ್ರಮಾಣದ ಯುದ್ಧ ಜರುಗುವುದು ಎಂದು ಯೋಚಿಸಿದನು. ಹಾಗೂ ಅವನು ಈ ಪ್ರದೇಶದ ಸುತ್ತಲೂ ಒಂದು ಭದ್ರಕೋಟೆಯನ್ನು ನಿರ್ಮಿಸತೊಡಗಿದನು.

ಇಮಾದುಲ್ ಮುಲ್ಕನ ಹಟ :

ಈ ಪರಿಸ್ಥಿತಿಯನ್ನು ಮನಗಂಡು ಮುಕಮ್ಮಿಲ್ ಖಾನನು ಇಮಾದುಲ್ ಮುಲ್ಕನಿಗೆ ಪತ್ರ ಬರೆದನು "ಗಡಿ ಪ್ರದೇಶದಲ್ಲಿ ನೀವು ಕೋಟೆ ಕಟ್ಟಕೂಡದು ಏಕೆಂದರೆ ಈ ತೆರನಾಗಿ ನಿಮ್ಮ ಸೈನಿಕರು ಸದಾ ಸರ್ವದಾ ನಮ್ಮೊಂದಿಗೆ ಯುದ್ಧ ಮಾಡಲು ಮುಂದಾಗುವರು ಹಾಗೂ ಇದರಿಂದ ನಿರಂತರವಾಗಿ ನಮಗೆ ತೊಂದರೆಯುಂಟಾಗುವುದು. ಅದಕ್ಕಾಗಿ ನೀವು ಈ ಕೂಡಲೇ ಕೋಟೆಯ ನಿರ್ಮಾಣ ಕಾರ್ಯವನ್ನು ನಿಲ್ಲಿಸಬೇಕು." ಇಮಾದುಲ್ ಮುಲ್ಕನು ಈ ಸಂಬಂಧವಾಗಿ ನಿರ್ಲಕ್ಷ್ಯ

ಮಾಡಿದನು. ಹಾಗೂ ಕೋಟೆಯನ್ನು ಪೂರ್ಣ ಪ್ರಮಾಣದಲ್ಲಿ ನಿರ್ಮಿಸಿಯೇ ತನ್ನ ಪ್ರಾಂತ್ಯಕ್ಕೆ ಹಿಂದಿರುಗಿದನು.

ಪಾತ್ರಿ ಪಟ್ಟಣದ ವಿಜಯ :

ಮುಕಮ್ಮಿಲ್‌ಖಾನ್‌ನು ಈ ನೆಪದಿಂದ ತಾನು ಬಾಲಾಘಾಟ್ ದೌಲತಾಬಾದ್ ಹಾಗೂ ಎಲ್ಲೋರಾದ ಪ್ರವಾಸ ಮಾಡಬಯಸಿ ಸೈನ್ಯದ ಒಟ್ಟುಗೂಡಿಸುವಿಕೆ ಪ್ರಾರಂಭಿಸಿದನು. ಹಿಜ್ರಿ ಶಕೆ ೯೨೪ ರಲ್ಲಿ ಬುರ್ಹಾನ ನಿಜಾಮಷಾಹನೊಂದಿಗೆ ದೌಲತಾಬಾದ್‌ದೆಡೆಗೆ ಹೊರಟನು. ಪ್ರವಾಸದ ಕೆಲವು ಘಟ್ಟಗಳನ್ನು ದಾಟಿಕೊಂಡು ಮುಕಮ್ಮಿಲ್‌ಖಾನ್‌ನು 'ಪಾತ್ರಿಯ ಮೇಲೆ ದಾಳಿ ಮಾಡಿದನು. ಕೋಟೆಯ ದಿಗ್ಬಂಧನ ಮಾಡಿದನು. ಹಾಗೂ ಯುದ್ಧ ಪ್ರಾರಂಭಿಸಿದನು. ಮುಕಮ್ಮಿಲ್‌ಖಾನ್‌ನ ವೀರಯೋಧರು ಹಗ್ಗದ ಏಣಿಗಳ ಮುಖಾಂತರ ಹಾಗೂ ಮೆಟ್ಟಿಲುಗಳನ್ನು ಏರಿ ಕೋಟೆಯ ಮೀನಾರುಗಳ ಮೇಲೆ ಹೋಗಿ ಕೋಟೆಯನ್ನು ವಶಪಡಿಸಿಕೊಂಡರು. ಹೀಗೆ ಪಾತ್ರಿಯು ನಿಜಾಮಷಾಹರ ವಶಕ್ಕೆ ಬಂದಿತು. ಮೀಯಾ ಮೊಹ್ಮದ್ ಘೋರಿಯು ಈ ಯುದ್ಧದಲ್ಲಿ ಬಹಳೇ ಶೌರ್ಯವನ್ನು ಪ್ರದರ್ಶಿಸಿದನು. ಅವನಿಗೆ 'ಕಾಮಿಲ್‌ಖಾನ್' ಎಂಬ ಬಿರುದಿನಿಂದ ಪುರಸ್ಕರಿಸಲಾಯಿತು. ಹಾಗೂ ಕೋಟೆಯ ಆಡಳಿತಗಾರನಾಗಿ ನೇಮಿಸಲಾಯಿತು.

ಯೌವನದ ಹುಚ್ಚು :

ಬುರ್ಹಾನ್ ನಿಜಾಮ್‌ಷಾಹನು ಯಶಸ್ವಿಯಾಗಿ ಅಹ್ಮದನಗರಕ್ಕೆ ಮರಳಿದನು. ತುಂಬು ಯೌವನದ ಅವಸ್ಥೆಯಲ್ಲಿದ್ದನು. ಹುಚ್ಚು ಹರೆಯದ ಹೊಳೆ ಹರಿಯುತ್ತಿತ್ತು. ಕಾರಣ ಬುರ್ಹಾನ್‌ನು ಇದೇ ಯೌವನದ ಹುಚ್ಚು ಹೊಳೆಯಲ್ಲಿ ಹರಿಯುತ್ತಾ ಓರ್ವ ಗಣಿಕೆಯ ಮೋಹಕ್ಕೆ ಬಲಿಯಾದನು. ಅವಳನ್ನು ಮದುವೆಯಾಗಿ ಸ್ತ್ರೀಗೃಹದಲ್ಲಿ ತಂದುಕೊಂಡನು. ಜನಾನಾದ ಬೇರೆ ಎಲ್ಲ ಸ್ತ್ರೀಯರ ಮೇಲೆ ಅವಳ ಪರಮಾಧಿಕಾರ ಸ್ಥಾಪಿತವಾಯಿತು. ಈ ಹೆಣ್ಣು ಬುರ್ಹಾನ್ ನಿಜಾಮಷಾಹನಿಗೆ ಮದ್ಯವ್ಯಸನಿಯನ್ನಾಗಿಸಿದಳು.

ಮುಕಮ್ಮಿಲ್‌ಖಾನ್‌ನ ನಿವೃತ್ತಿ :

ಮುಕಮ್ಮಿಲ್‌ಖಾನನು ಬಹಳ ಬುದ್ಧಿವಂತನು ಹಾಗೂ ದೂರದರ್ಶಿ ವ್ಯಕ್ತಿಯಾಗಿದ್ದನು. ಅವನು ಸಮಯ ಪ್ರಜ್ಞೆಯೊಂದಿಗೆ ಒಂದು ದಿನ ಬುರ್ಹಾನ ನಿಜಾಮಷಾಹನೊಂದಿಗೆ ಹೀಗೆ ಹೇಳಿದನು. "ಇದೋ ತೊಗೊಳ್ಳಿ ಹುಜೂರ್, ರಾಜಪ್ರತಿನಿಧಿತ್ವ ಪದದ ಮುದ್ರೆಯುಕ್ತ ಉಂಗುರ ಯಾವಾಗಿನವರೆಗೆ ತಾವು ಅಪರ ವಯಸ್ಕರಾಗಿದ್ದೀರಿ, ನಾನು ನನ್ನ ವೃದ್ಧಾಪ್ಯದ ಹೊರತಾಗಿಯೂ ತಮಗಾಗಿ ಅತ್ಯುತ್ತಮ

ಸೇವೆಯನ್ನು ಮಾಡಿದೆನು. ತಾವು ಘನವಂತನಾದ ದೇವರ ದಯೆಯಿಂದ ಸಾಮ್ರಾಜ್ಯದ ಆಗುಹೋಗುಗಳನ್ನು ನಿಭಾಯಿಸಬಲ್ಲವರಾಗಿದ್ದೀರಿ. ನನಗೆ ಕ್ಷಮಿಸಿ, "ಮುಕಮ್ಮಿಲ್‌ಖಾನ್‌ನು ತನ್ನ ನಿವೃತ್ತಿಯ ಕುರಿತು ಪಟ್ಟು ಹಿಡಿದನು. ಅದಕ್ಕಾಗಿ ಬುರ್ಹಾನ್ ನಿಜಾಮಷಾಹನು ಮನಸ್ಸಿಲ್ಲದೇ ಅವನ ಬೇಡಿಕೆಯನ್ನು ಈಡೇರಿಸಿದನು. ಮುಕಮಿಲ್‌ಖಾನ್‌ನ ಪುತ್ರನಿಗೆ ಸಾಮ್ರಾಜ್ಯದ ಹೆಸರಾಂತ ಅಮೀರರಲ್ಲಿ ಸೇರಿಸಲಾಯಿತು. ಹಾಗೂ ನಾಯಕತ್ವದ ಹುದ್ದೆಯನ್ನು ಟಪಕಾಪುರದ ಒಬ್ಬ ವ್ಯಕ್ತಿಯಾದ ಶೇಖ ಜಾಫರ್ ದಖನಿಗೆ ನೀಡಲಾಯಿತು.

ಮುಕಮ್ಮಿಲ್ ಖಾನ್‌ನ ಮೃತ್ಯು :

ಮುಕಮ್ಮಿಲ್‌ಖಾನ್‌ನು ಎಲ್ಲ ರಾಜಕೀಯ ಹಾಗೂ ಸಾಮ್ರಾಜ್ಯದ ವ್ಯವಹಾರಗಳಿಂದ ಮುಕ್ತನಾದನು. ಹಾಗೂ ತನ್ನ ಗೃಹದಲ್ಲಿ ನಿವೃತ್ತ ಜೀವನವನ್ನು ವ್ಯಯಿಸತೊಡಗಿದನು. ಒಮ್ಮೊಮ್ಮೆ ಅವನು ಹಬ್ಬದ ಹಾಗೂ ಇತರ ಮಂಗಳದಾಯಕ ಕಾರ್ಯಕ್ರಮಗಳಲ್ಲಿ ತಮ್ಮ ಮಕ್ಕಳು ಹಾಗೂ ಸಂಬಂಧಿಕರ ಬೇಡಿಕೆಯ ಮೇರೆಗೆ ರಾಜದರ್ಬಾರದಲ್ಲಿ ಹಾಜರಿ ನೀಡುತ್ತಿದ್ದನು. ಅವನು ರಾಜದರ್ಬಾರದಲ್ಲಿ ಅಲ್ಪ ಸಮಯ ಮಾತ್ರ ವ್ಯಯಿಸುತ್ತಿದ್ದನು. ಹಾಗೂ ಬಾದಶಾಹನಿಗೆ ಶುಭಾಶಯಗಳನ್ನು ಅರ್ಪಿಸಿ ಕೂಡಲೇ ತನ್ನ ಮನೆಯತ್ತ ಮರಳುತ್ತಿದ್ದನು. ಕೊನೆಗೆ ಇಂಥ ಸ್ಥಿತಿಯಲ್ಲಿಯೇ ಮೃತ್ಯುವಿಗೆ ಶರಣಾದನು.

ಶಾಹ ತಾಹೀರನ ಆಗಮನ :

ಹಿಜ್ರಿ ಶಕೆ ೯೨೮ ರಲ್ಲಿ ಶಾಹತಾಹೀರ್‌ರು ಅಹ್ಮದ್ ನಗರಕ್ಕೆ ಆಗಮಿಸಿದರು. ಅವರನ್ನು ಮಹಾರಾಜರ ಸಹವರ್ತಿಗಳಲ್ಲಿ ಸೇರಿಸಲಾಯಿತು. ಇದೇ ಸಮಯದಲ್ಲಿ ಪಟ್ಟಣದ ತುಂಬೆಲ್ಲ ಮೆಹದವಿ ಧರ್ಮವು ಚಾಲ್ತಿಯಲ್ಲಿತ್ತು. ಎಲ್ಲಿಯವರೆಗೆಂದರೆ ಬಾದ್‌ಶಾಹನೂ ಕೂಡ ಈ ಧರ್ಮದಿಂದ ಪ್ರೇರಿತನಾಗಿ ತನ್ನ ಓರ್ವ ಪುತ್ರಿಯನ್ನು ಮೆಹದವಿ ನಾಯಕನಿಗೆ ಕೊಟ್ಟು ವಿವಾಹ ಮಾಡಿದನು. ಶಾಹ ತಾಹೀರ್ ಯಾವಾಗ ಅಹ್ಮದ್ ನಗರಕ್ಕೆ ಆಗಮಿಸಿದರೋ ಆಗ ಅವರ ಪ್ರಯತ್ನದಿಂದ ಮೆಹದವಿ ಧರ್ಮವು ನಿರ್ನಾಮವಾಯಿತು. ಎಲ್ಲ ಮೆಹದವಿಗಳಿಗಳಿಗೆ ಷಾಹೀ ದರ್ಬಾರದಲ್ಲಿ ಪ್ರವೇಶವನ್ನು ನಿಷೇಧಿಸಲಾಯಿತು. ಬುರ್ಹಾನ್ ನಿಜಾಮ ಷಾಹ್‌ನು ಮೆಹದವಿ ಧರ್ಮದೊಂದಿಗೆ ಸಂಬಂಧ ಬೆಳೆಸಿದನೋ ಅದಕ್ಕಾಗಿ ಬಹಳ ವ್ಯಥೆ ಪಟ್ಟನು. ಹಾಗೂ ಅಹ್ಮದ್ ನಗರದ ವಿದ್ವಾಂಸರೊಂದಿಗೆ ಬಹಳ ಕಠಿಣವಾಗಿ ವರ್ತಿಸಿದನು. ಹಾಗೂ ಅವರೊಂದಿಗೆ ಹೀಗೆ ಹೇಳಿದನು. ಯಾವ ತೆರನಾಗಿ ತಾಹೀರ್ ಶಾಹರು ಮೆಹದವಿ ಮತ ಸಂಕುಚಿತತೆ ಹಾಗೂ ಅದರ ಮಿಥ್ಯಗಳನ್ನು ಹಾಗೂ ಏನು ನನಗೆ ಮನಗಾಣಿಸಿದರೋ ತಾವೇಕೆ ಹಾಗೆ ಮಾಡಲಿಲ್ಲ.

ಬುರ್ಹಾನ್ ನಿಜಾಮ್ ಷಾಹ ಹಾಗೂ ಬೀಬಿ ಮರ್ಯಮರ ವಿವಾಹ :

ಷಾಹ್ ತಾಹೀರ್‌ರ ಪ್ರಯತ್ನದಿಂದಾಗಿ ಹಿಜ್ರಿ ಶಕೆ ೯೩೦ರಲ್ಲಿ ಬುರ್ಹಾನ್ ನಿಜಾಮಷಾಹ್ ಹಾಗೂ ಇಸ್ಮಾಯಿಲ್ ಆದಿಲ್ ಷಾಹ್‌ರು ಸೋಲಾಪುರದ ಕೋಟೆಯ ಸಮೀಪ ಭೇಟಿಯಾದರು. ಎರಡೂ ಕಡೆಯ ಅಮೀರರ ಪ್ರಯತ್ನದಿಂದ ಯೂಸೂಫ್ ಆದಿಲ್‌ಷಾಹ್‌ನ ಪುತ್ರಿಯಾದ ಬೀಬಿ ಮರ್ಯಮ್ ಸುಲ್ತಾನಾಳ ಮದುವೆಯು ಬುರ್ಹಾನ್ ನಿಜಾಮ್‌ಷಾಹ್‌ನೊಂದಿಗೆ ಮಾಡಲಾಯಿತು. ಈ ಸಂತೋಷದ ಸಂದರ್ಭದಲ್ಲಿ ಸಂಭ್ರಮದ ಸಮಾರಂಭವನ್ನು ಏರ್ಪಡಿಸಲಾಯಿತು. ಅಸದ್ ಖಾನ್ ಬಲ್ಗ್ ಗವಾನಿ ಹಾಗೂ ಇತರರು ಈ ವಾಗ್ದಾನವನ್ನು ಮಾಡಿದರು. ಏನೆಂದರೆ ಸೋಲಾಪುರದ ಕೋಟೆಯನ್ನು ಬೀಬಿ ಮರ್ಯಮ್‌ಳ ವರದಕ್ಷಿಣೆಯಾಗಿ ನೀಡಲಾಗುವುದು. ವಿವಾಹದ ನಂತರ ಬುರ್ಹಾನ್ ನಿಜಾಮ್‌ಶಾಹನು ಈ ಕೋಟೆಯನ್ನು ತನಗೆ ಕೊಡಬೇಕೆಂದು ಇಚ್ಛಿಸಿದನು. ಆಗ ಇಸ್ಮಾಯಿಲ್ ಅದಿಲ್‌ಷಾಹ್‌ನು ಹೀಗೆ ಉತ್ತರಿಸಿದನು. "ನಾನು ಈ ತೆರನಾಗಿ ಯಾವುದೇ ಭಾಷೆ ಕೊಟ್ಟಿರಲಿಲ್ಲ. ಆದರೆ ನನ್ನ ಸೇವಕರು ಒಂದು ವೇಳೆ ಇಂಥ ವಚನವನ್ನು ನೀಡಿದ್ದರೆ ಅವರಿಗೆ ಅದರ ಮೇಲೆ ಯಾವುದೇ ಅಧಿಕಾರವಿಲ್ಲ ಇನ್ನು ನನ್ನಮೇಲೆ ಈ ಉತ್ತರದಾಯಿತ್ವ ಇರುವುದಿಲ್ಲ."

ಸೋಲಾಪುರದ ಕೋಟೆಯನ್ನು ವಶಪಡಿಸಿಕೊಳ್ಳಲು ಸಿದ್ಧತೆ :

ಬುರ್ಹಾನ್ ನಿಜಾಮ್‌ಶಾಹನು ಶಾಹತಾಹೀರ್‌ರೊಂದಿಗೆ ಸಮಾಲೋಚಿಸಿದನು. ಶಾಹ್‌ತಾಹೀರರು ಈ ವಿಚಾರದಲ್ಲಿ ಮೌನವಾಗಿರಲು ಸಲಹೆ ನೀಡಿದರು. ಅದರ ನಂತರ ಬುರ್ಹಾನ್ ನಿಜಾಮಶಾಹನು ಅಹ್ಮದ್ ನಗರಕ್ಕೆ ಮರಳಿಬಂದನು. ಬುರ್ಹಾನ್‌ನ ಮೊದಲನೆಯ ಪತ್ನಿ ಅಂದರೆ ಮುರ್ತುಜಾ ನಿಜಾಮನ ತಾಯಿಯು ಬೀಬಿ ಮರ್ಯಮ್‌ಳ ಜೊತೆ ಅನಾದರ ತೋರಿದಳು. ಈ ವಿಷಯವು ಇಸ್ಮಾಯಿಲ್ ಆದಿಲಶಾಹನ ಗಮನಕ್ಕೂ ಬಂದಿತು. ಅವನು ಅಹ್ಮದ ನಗರದ ದೂತರೊಂದಿಗೆ ಯಾರು ಬಿಜಾಪುರದಲ್ಲಿ ವಾಸವಾಗಿದ್ದರೋ ಅವರಿಗೆ ಹೀಗೆ ಹೇಳಿದನು. "ಬಾದ್‌ಶಾಹನ ಸಂತಾನದೊಂದಿಗೆ ಹೀಗೆ ಕೆಟ್ಟರೀತಿಯಲ್ಲಿ ವರ್ತಿಸುವುದು ಯಾವ ಕಾರಣಕ್ಕೂ ಶೋಭೆಯಲ್ಲ." ಬುರ್ಹಾನ ನಿಜಾಮಶಾಹ್ ನವರೆಗೂ ಈ ವಿಷಯವು ತಲುಪಿದಾಗ ಅವನು ಸೋಲಾಪುರದ ಕೋಟೆಯನ್ನು ವಶಪಡಿಸಿಕೊಳ್ಳಲು ಸಿದ್ಧತೆ ನಡೆಸಿದನು.

ಯುದ್ಧ :

ಬುರ್ಹಾನ್‌ನು ಶಾಹತಾಹೀರ್‌ರಿಗೆ ಅಮೀರ್ ಬರೀದ್‌ನ ಬಳಿ ಹಾಗೂ ಮುಲ್ಲಾ ಹೈದರ ಅಸ್ತರ್ ಆಬಾದಿಗೆ ಅಮಾದುಲ್ ಮುಲ್ಕನ ಬಳಿ ಕಳುಹಿಸಿದನು. ಹಾಗೂ ಈ ಇಬ್ಬರು ಆಡಳಿತಗಾರರಿಂದ ಸಹಾಯವನ್ನು ಯಾಚಿಸಿದನು. ಅವರ ಬುರ್ಹಾನ್‌ನಿಗೆ

ಸಹಾಯ ಸಹಕಾರ ನೀಡಿದರು. ಹಿಜ್ರಿ ಶಕೆ ೯೩೧ ರಲ್ಲಿ ಬುರ್ಹಾನ್ ನಿಜಾಮನು ೩೦೦೦೦ (ಮೂವತ್ತು ಸಾವಿರ) ಸವಾರರೊಂದಿಗೆ ಹಾಗೂ ಒಂದು ಬೃಹತ್ ಆಕಾರದ ತೋಪಿನೊಂದಿಗೆ ಸೋಲಾಪುರದ ಕೋಟೆಯನ್ನು ಗೆಲ್ಲಲು ಹೊರಟರು. ಇಸ್ಮಾಯಿಲ್ ಆದಿಲ್ ಶಾಹ್‌ನು ೯೦೦೦ (ಒಂಭತ್ತು ಸಾವಿರ) ಅನುಭವೀ ಬಾಣ ಪ್ರಯೋಗ ಪ್ರವೀಣರೊಂದಿಗೆ ಹೊರಟು ಅವನನ್ನು ಎದುರಿಸಿದನು. ಎರಡೂ ಸೈನ್ಯಗಳು ನಡುವೆ ಭಯಂಕರ ರೀತಿಯಲ್ಲಿ ಯುದ್ಧ ನಡೆಯಿತು.

ನಿಜಾಮ ಶಾಹಿಯ ಸೋಲು :

ಎಲ್ಲಕ್ಕಿಂತ ಮೊದಲು ಅಸದ್‌ಖಾನ್ ಬಲಗವಾನಿಯ ಆಕ್ರಮಣವನ್ನು ಎದುರಿಸಲಾಗದೇ ಅಮಾದುಲ್‌ಮುಲ್ಕನು ಕಾವೆಲ್ ಕಡೆಗೆ ಓಡಿ ಹೋದನು. ಇದೇ ಸಮಯದಲ್ಲಿ ಯಾವಾಗ ಯುದ್ಧ ನಡೆಯುತ್ತಿತ್ತು. ಆಗ ನೀರಿನ ಕೊರತೆ ಹಾಗೂ ಸೂರ್ಯನ ತಾಪದಿಂದಾಗಿ ಬುರ್ಹಾನ್ ನಿಜಾಮ್‌ಷಾಹನು ಸ್ಮೃತಿ ತಪ್ಪಿದನು. ಖುರ್ಷಿದ್ ಎಂಬ ಹೆಸರಿನ ಒಬ್ಬ ಸೇವಕನು ಯಾರು ಬಾದ್‌ಷಾಹನಿಗೆ ಜಲಪಾನ ಮಾಡಿಸುತ್ತಿದ್ದನು ಅವನು ತಕ್ಷಣವೇ ಬಾದ್‌ಷಾಹ್‌ನಿಗೆ ಜಲಪಾನ ಮಾಡಿಸಿದನು. ಆಗ ಅವನಿಗೆ ಪ್ರಜ್ಞೆ ಮರಳಿತು. ಷಾಹ್‌ತಾಹೀರರ ಸಲಹೆಯಂತೆ ತುರ್ಕಿ ಹಾಗೂ ಹಬಷಿ ಗುಲಾಮರು ಬಾದ್‌ಷಾಹ್‌ನ ಶಸ್ತ್ರಾಸ್ತ್ರಗಳನ್ನು ತೆಗೆದು ಹಾಕಿದರು. ಹಾಗೂ ತಮ್ಮೊಂದಿಗೆ ಕರೆದುಕೊಂಡು ಅಹ್ಮದ್ ನಗರದತ್ತ ಪ್ರಯಾಣ ಬೆಳೆಸಿದರು.

ಪಾತ್ರಿ ಪಟ್ಟಣದ ವಿವಾದ :

ಹಿಜ್ರಿ ಶಕೆ ೯೩೩ ರಲ್ಲಿ ಇಸ್ಮಾಯಿಲ್ ಆದಿಲ್‌ಷಾಹ್‌ನ ಪ್ರಚೋದನೆಯಂತೆ ಅಮಾದ್‌ಷಾಹ್‌ನು ಸುಲ್ತಾನ್ ಕುತುಬ್‌ಕುಲಿಯ ಕೃಪೆಯಿಂದ ಪಾತ್ರಿ ಪಟ್ಟಣವನ್ನು ತನ್ನ ವಶದಲ್ಲಿ ತೆಗೆದುಕೊಂಡನು. ಬುರ್ಹಾನ್ ನಿಜಾಮ್‌ಷಾಹ್, ಅಮೀರಬರೀದ್ ಹಾಗೂ ಖ್ವಾಜಾ ಜಹಾಂ ದಖನಿಯೊಂದಿಗೆ ಒಂದು ಬೃಹತ್ ಸೈನ್ಯ ತೆಗೆದುಕೊಂಡು ಪಾತ್ರಿಯ ಕಡೆಗೆ ಹೊರಟನು. ಎರಡು ತಿಂಗಳಿನವರೆಗಿನ ನಿರಂತರ ಪ್ರಯತ್ನದ ನಂತರ ಬುರ್ಹಾನ್ ನಿಜಾಮನು ಎರಡನೆಯ ಸಲ ಪಾತ್ರಿಯ ಮೇಲೆ ಗೆಲುವು ಸಾಧಿಸಿದನು.

ಪಾತ್ರಿಯ ಬ್ರಾಹ್ಮಣರು :

ಇತಿಹಾಸಕಾರನಾದ ಫರಿಶ್ತಾನು ಗ್ರಂಥಕರ್ತನು ನಿಜಾಮಶಾಹಿ ರಾಜವಂಶದ ಗೌರವಾನ್ವಿತ ಬ್ರಾಹ್ಮಣರಿಂದ ಹೀಗೆ ಕೇಳಿಸಿಕೊಂಡಿದ್ದಾನೆ. ಏನೆಂದರೆ ನಿಜಾಮ್‌ಶಾಹ ಬಹ್ರಿಯ ಆಡಳಿತಕ್ಕಿಂತ ಮೊದಲು ಈ ವಂಶದ ಪೂರ್ವಜರು ಪಾತ್ರಿ ಪಟ್ಟಣದಲ್ಲಿ ಇರುತ್ತಿದ್ದರು. ಅವರು ಬ್ರಾಹ್ಮಣರಾಗಿದ್ದರು. ಯಾವುದೋ ಕಾರಣದಿಂದ ಈ ಜನರು ಪಾತ್ರಿಯನ್ನು ಬಿಟ್ಟು ಬೇಜಾನಗರಕ್ಕೆ ವಲಸೆ ಹೋಗಿದ್ದರು ಹಾಗೂ ಅಲ್ಲಿಯೇ

ಇರತೊಡಗಿದ್ದರು. ಯಾವಾಗ ಮಲಿಕ್ ಹಸನ್‌ನು ಸಿಂಹಾಸನಾರೂಢನಾಗಿ ತನ್ನ ತಲೆಯ ಮೇಲೆ ಛತ್ರದ ನೆರಳನ್ನು ಮಾಡಿಕೊಂಡನೋ ಆಗ ಈ ಬ್ರಾಹ್ಮಣರು ಸಂಬಂಧಿಕ ಯೋಚನೆಯಿಂದ ಅಹ್ಮದ್ ನಗರಕ್ಕೆ ಆಗಮಿಸಿದರು. ಈ ಜನರು ಬಾದ್‌ಶಾಹ್‌ನೊಂದಿಗೆ ಆಗಾಗ ಹೇಳುತ್ತಿದ್ದರು. ಏನೆಂದರೆ ಪಾತ್ರಿಕೋಟೆಯಲ್ಲಿನ ಆಯಾ ಹಳ್ಳಿಗಳು ಪುರಾತನ ಕಾಲದಿಂದ ನಮ್ಮ ಪೂರ್ವಜರ ವಶದಲ್ಲಿವೆ.

ಮಲಿಕ್ ಅಹ್ಮದ್‌ನು ಅಮಾದುಲ್ ಮುಲ್ಕನಿಗೆ ಒಂದು ಸಲ ಈ ಸಾರಾಂಶದ ಪತ್ರವನ್ನು ಬರೆದನು. "ಪಾತ್ರಿ ಪಟ್ಟಣದಿಂದ ನಮ್ಮ ಸಂಬಂಧ ಬಹಳ ಪುರಾತನವಾದುದಾಗಿದೆ. ಅದಕ್ಕಾಗಿ ನಮ್ಮ ಹಾಗೂ ನಿಮ್ಮ ಸ್ನೇಹದ ಬಯಕೆ ಇದಾಗಿದೆ. ತಾವು ಈ ಪಟ್ಟಣವನ್ನು ನಮಗೆ ಒಪ್ಪಿಸಿರಿ ಹಾಗೂ ಇದರ ಬದಲಾಗಿ ತಮಗೆ ಯಾವ ಪಟ್ಟಣವು ಬೇಕೋ ಅದನ್ನು ತೆಗೆದುಕೊಳ್ಳಿರಿ." ಅಮಾದುಲ್ ಮುಲ್ಕನು ಈ ಬೇಡಿಕೆಯನ್ನು ತಿರಸ್ಕರಿಸಿದನು. ಇನ್ನೂ ಈ ಮಾತುಕತೆ ನಡೆದಿರುವಾಗಲೇ ಅಹ್ಮದ್ ನಿಜಾಮ್‌ಷಾಹ್‌ನು ಈ ಕೋಟೆಯನ್ನು ವಶಪಡಿಸಿಕೊಂಡನು. ಹಾಗೂ ತನ್ನ ಜಾತಿಯವರಾದ ಪ್ರಸಿದ್ಧ ಸಿರಿವಂತ ಬ್ರಾಹ್ಮಣರಿಗೆ ಒಪ್ಪಿಸಿದನು.

ಮಹಾವರ್ ಕೋಟೆಯ ಮೇಲೆ ವಿಜಯ :

ಮೊಘಲ್ ಎ ಅಜಮ್ ಜಲಾಲುದ್ದೀನ್ ಅಕಬರನ ಆಡಳಿತಾವಧಿವರೆಗೆ ಪಾತ್ರಿ ಪಟ್ಟಣವು ಉಪರೋಕ್ತ ಬ್ರಾಹ್ಮಣರ ವಶದಲ್ಲಿತ್ತು. ಬುರ್ಹಾನ್ ನಿಜಾಮುಷಾಹ್‌ನು ಈ ಸ್ಥಳದಿಂದ ಮಹಾವರ್ ಕೋಟೆಯ ಕಡೆಗೆ ಪ್ರಯಾಣಿಸಿದನು. ಹಾಗೂ ಈ ಕೋಟೆಯನ್ನು ಸಹ ಗೆದ್ದುಕೊಂಡನು. ಮತ್ತು 'ಖುದಾವಂದ್ ಹಬ್ಷಿ' ಯ ವಶಕ್ಕೆ ಒಪ್ಪಿಸಿದನು. ಅದರ ನಂತರ ಏಲ್ಚಿಪುರವನ್ನು ವಶಪಡಿಸಿಕೊಳ್ಳಲು ಪ್ರಯಾಣ ಬೆಳೆಸಿದನು. ಅಮಾದುಲ್‌ಮುಲ್ಕನನ್ನು ಎದುರಿಸಲಾಗದೇ ಮೊದಲಿನಂತೆಯೇ ಬುರ್ಹಾನ್‌ಪುರದ ಕಡೆಗೆ ಓಟಕ್ಕಿತ್ತನು. ಸುಲ್ತಾನ ಮೊಹ್ಮದ್ ಶಾಹ್ ಫಾರೂಕಿಯು ಅಮಾದುಲ್ ಮುಲ್ಕನಿಗೆ ಸಹಾಯ ಮಾಡಿದನು. ಹಾಗೂ ಅವನೊಂದಿಗೆ ಬುರ್ಹಾನ್ ನಿಜಾಮಷಾಹ ಹಾಗೂ ಅಮೀರ್ ಬರೀದ್‌ರ ವಿರುದ್ಧ ಯುದ್ಧ ಮಾಡಲು ಹೊರಟನು.

ಇಮಾದುಲ್ ಮುಲ್ಕ ಹಾಗೂ ಮೊಹ್ಮದ್ ಶಾಹ್ ಫಾರೂಕಿಯ ಸೋಲು :

ಎರಡೂ ಕಡೆಯ ಸೈನ್ಯಗಳು ಪರಸ್ಪರ ಭೀಕರ ರೂಪದಲ್ಲಿ ಕಾದಾಟಕ್ಕಿಳಿದವು. ಇದರಲ್ಲಿ ಬುರ್ಹಾನ್ ನಿಜಾಮ್ ಶಾಹ್‌ನ ಸೈನ್ಯದ ಕೈ ಮೇಲಾಯಿತು. ಇಮಾದುಲ್ ಮುಲ್ಕ ಹಾಗೂ ಮೊಹ್ಮದ್ ಶಾಹ್ ಫಾರೂಕಿ ರಣರಂಗದಿಂದ ಬುರ್ಹಾನ್‌ಪುರದತ್ತ ಓಡಿ ಹೋದರು. ಬುರ್ಹಾನ್ ನಿಜಾಮ್ ಶಾಹನು ವೈರಿಯ ಬಹಳಷ್ಟು ಧನ, ವಸ್ತ್ರ, ವೈಢೂರ್ಯ ಹಾಗೂ ಶಸ್ತ್ರಾಸ್ತ್ರ, ಮತ್ತು ಇದರಲ್ಲಿ ೩೦೦ ಆನೆಗಳು ಹಾಗೂ ಇತರ

ವಸ್ತುಗಳನ್ನು ವಶಪಡಿಸಿಕೊಂಡನು. ಹಾಗೂ ಬರಾರ್‌ದ ಕೆಲವು ಪ್ರಾಂತ್ಯಗಳನ್ನು ತನ್ನ ಆಡಳಿತಕ್ಕೆ ಸೇರಿಸಿಕೊಂಡನು.

ದಖ್ಖನ್ನಿನತ್ತ ಗುಜರಾತಿನ ಆಡಳಿತಗಾರರ ಚಿತ್ತ :

ಈ ಪರಿಸ್ಥಿತಿಯನ್ನು ಮನಗಂಡು ಆಮಾದುಲ್‌ಮುಲ್ಕ ಹಾಗೂ ಮೆಹ್ಮೂದ್‌ಶಾಹ್ ಘಾರೂಕಿಯು ಗುಜರಾತಿನ ಆಡಳಿತಗಾರನಾದ ಸುಲ್ತಾನ್‌ಬಹಾದ್ದೂರನ ಸೇವೆಯಲ್ಲಿ ಬಹಳಷ್ಟು ಅಮೂಲ್ಯ ಕೊಡುಗೆಗಳನ್ನು ಕಳುಹಿಸಿದರು. ಹಾಗೂ ಸಹಾಯವನ್ನು ಯಾಚಿಸಿದರು. ಸುಲ್ತಾನ್‌ಬಹಾದ್ದೂರನು ಅವರ ಬೇಡಿಕೆಗೆ ಸ್ಪಂದಿಸಿದನು. ಹಾಗೂ ಅವನು ತನ್ನ ಸೈನ್ಯ, ಭಂಡಾರದ ಜೊತೆಗೆ ದರ್ಬಾರ್ ಹಾಗೂ ಸುಲ್ತಾನ್‌ಪುರದ ಹಾದಿಯಿಂದ ಹಿಜ್ರಿ ಶಕೆ ೯೩೫ ರಲ್ಲಿ ದಖ್ಖನ್ನಿನ ಕಡೆಗೆ ಹೊರಟನು.

ಬಾಬರನ ಹೆಸರಿನಲ್ಲಿ ಬುರ್ಹಾನ್ ನಿಜಾಮಶಾಹನ ಪತ್ರ :

ಬುರ್ಹಾನ್ ನಿಜಾಮ್‌ಶಾಹ್‌ನು ಈ ಸುದ್ದಿ ತಿಳಿದು ಬಹಳ ವ್ಯಾಕುಲಗೊಂಡನು. ಅವನು ಮೊದಲಿಗೆ ಷಾಹ್‌ತಾಹೀರ್‌ರ ಸಲಹೆಯಂತೆ ಮೊಘಲ್ ಬಾದ್‌ಶಾಹ್ ಜಹೀರುದ್ದೀನ್ ಬಾಬರ್‌ನ ಹೆಸರಿನಲ್ಲಿ ಒಂದು ಪತ್ರವನ್ನು ಬರೆದನು. ಇದರಲ್ಲಿ ಕಿರೀಟಧಾರಣದ ಅಭಿನಂದನೆಗಳನ್ನು ಅರ್ಪಿಸಲಾಗಿತ್ತು. ಅದರ ಜೊತೆ ವಿಧೇಯತೆ ಹಾಗೂ ಪ್ರೇಮವನ್ನು ಅಭಿವ್ಯಕ್ತಿಸಲಾಗಿತ್ತು. ಈ ಪತ್ರದ ಸಾರಾಂಶವು ಹೀಗಿತ್ತು. “ನಮಗೆ ಮೆಹರ್‌ಬಾನ್‌ರಿಂದ ವಿಶೇಷ ಗಮನ ಹಾಗೂ ದಯೆಯು ಅವಶ್ಯಕತೆಯಿದ್ದು ತಾವು ಆದಷ್ಟು ಬೇಗನೇ ದಖ್ಖನ್ನಿನತ್ತ ಆಗಮಿಸುವಿರೆಂದು ತಮ್ಮಿಂದ ನಿರೀಕ್ಷೆ ಇದೆ. ಹಾಗೂ ಈ ಪ್ರಾಂತ್ಯದ ಶತ್ರುಗಳು ಹಾಗೂ ಗೊಂದಲ ಗಲಾಟೆ ಮಾಡುವವರನ್ನು ವಿನಾಶಗೊಳಿಸಿ ದಖ್ಖನ್ನಿನ ಪ್ರಜೆಗಳಿಗೆ ಸತ್ಯವನ್ನು ಉಳಿಸಿ ಮಿಥ್ಯವನ್ನು ಅಳಿಸಿ ಸಂತಸದ ಸುದ್ದಿಯನ್ನು ತಿಳಿಸುವಿರಿ ಹಾಗೂ ತಮ್ಮ ಬರುವಿಕೆಯನ್ನು ಅದಮ್ಯ ಆಸೆಯೊಂದಿಗೆ ಇಚ್ಛಿಸುತ್ತಿದ್ದೇವೆ. ಬನ್ನಿ ಬೇಗ ಬನ್ನಿ”.

ಸುಲ್ತಾನ್ ಕುಲಿ ಕುತುಬ್‌ಷಾಹ್ ಹಾಗೂ ಇಸ್ಮಾಯಿಲ್ ಆದಿಲ್‌ಷಾಹ್‌ರಿಂದ ಸಹಾಯದ ಅಪೇಕ್ಷೆ :

ಬಾಬರ್‌ನ ಹೊರತಾಗಿ ಬುರ್ಹಾನ್ ನಿಜಾಮುಷಾಹ್ ಸುಲ್ತಾನ್ ಕುಲಿ ಕುತುಬ್‌ಷಾಹ್‌ನ ಹೆಸರಿನಲ್ಲಿಯೂ ಪತ್ರ ಬರೆದನು. ಸುಲ್ತಾನ್ ಕುಲಿಕುತುಬ್‌ಷಾಹ್ ಈ ದಿನಗಳಲ್ಲಿ ‘ಕಛ್’ದ ಯುದ್ಧದಲ್ಲಿ ನಿರತನಾಗಿದ್ದನು. ಆ ಕಾರಣಕ್ಕಾಗಿ ಅವನು ಬುರ್ಹಾನ್ ನಿಜಾಮ್‌ಷಾಹ್‌ನಿಗೆ ಸಹಾಯವನ್ನು ಮಾಡಲು ನಿರಾಕರಿಸಿದನು. ಇಸ್ಮಾಯಿಲ್ ಆದಿಲ್‌ಶಾಹನು ಬುರ್ಹಾನ್‌ನತ್ತ ಸಹಾಯ ಹಸ್ತ ಚಾಚಿದನು. ಹಾಗೂ ತನ್ನ ಸೈನ್ಯದ ಕೆಲವು ಸಾವಿರ ಸವಾರರನ್ನು ಆಯ್ಕೆ ಮಾಡಿ ಯುದ್ಧಕ್ಕಾಗಿ ಅವರನ್ನು

ಅಮೀರ್ ಬರೀದ್‌ನೊಂದಿಗೆ ಭಂಡಾರ, ಯುದ್ಧ ಸಾಮಗ್ರಿ, ಶಸ್ತ್ರಾಸ್ತ್ರಗಳೊಂದಿಗೆ ಕಳುಹಿಸಿದನು.

ಸುಲ್ತಾನ್ ಬಹಾದ್ದೂರನಿಗೆ ಇಮಾದುಲ್ ಮುಲ್ಕನ ವಿನಂತಿ :

ಸುಲ್ತಾನ್ ಬಹಾದ್ದೂರ್‌ನು ಮಹಾವರ್ ಕೋಟೆ ಹಾಗೂ ಪಾತ್ರಿಯನ್ನು ನಿಜಾಮಶಾಹ್‌ನ ಕಪಿಮುಷ್ಟಿಯಿಂದ ಬಿಡುಗಡೆಗೊಳಿಸಲು ಬರಾರ್‌ದಲ್ಲಿ ತನ್ನ ಪ್ರದೇಶದಲ್ಲಿ ಪ್ರವೇಶಿಸಿದನು. ಅವನ ದುರಾಸೆಯು ಅವನಲ್ಲಿ ಗೆಲುವಿನ ಸುಳ್ಳು ಆಸೆ ಹುಟ್ಟಿಸಿತು. ಹಾಗೂ ಅವನು ಕೆಲವು ದಿನಗಳಿಗಾಗಿ ಬರಾರ್‌ದಲ್ಲಿ ಉಳಿದುಕೊಂಡನು. ಇಮಾದುಲ್ ಮುಲ್ಕನು ಈ ಪರಿಸ್ಥಿತಿಯನ್ನು ಮನಗಂಡು ತನ್ನ ಪರಿಣಾಮವನ್ನು ತಿಳಿದು ನಡುಗಿಹೋದನು. ಅವನು ಸುಲ್ತಾನ್ ಬಹಾದ್ದೂರ್‌ನಿಗೆ ವಿನಂತಿಮಾಡಿದನು. "ಇದು ನನ್ನ ಪ್ರಾಂತ್ಯವಿದೆ. ತಾವು ಮುಂದೆ ಸಾಗಿ ಬುರ್ಹಾನ್ ನಿಜಾಮ್‌ಶಾಹ್‌ನನ್ನು ನಿರ್ನಾಮಗೊಳಿಸಿ ಅವನ ಪ್ರಾಂತ್ಯದ ಕೆಲವು ಭಾಗವನ್ನು ನನಗೂ ಸಹ ನೀಡಿದರೆ ನಾನೂ ಸಹ ನನ್ನ ಪತ್ನಿ ಹಾಗೂ ಪುತ್ರರನ್ನು ಹೊರಗೆ ಕಳುಹಿಸಿ, ಬರಾರ್ ಪ್ರಾಂತ್ಯವನ್ನು ಸಂಪೂರ್ಣವಾಗಿ ನಿಮಗೆ ಅರ್ಪಿಸುವೆನು. ಹಾಗೂ ಸೇವಕನಂತೆ ನಿಮ್ಮೊಂದಿಗಿರುವೆನು".

ಅಮೀರ್ ಬರೀದ್‌ನ ದಾಳಿ :

ಸುಲ್ತಾನ್ ಬಹಾದ್ದೂರ್‌ನು ಇವನ ವಿನಂತಿಯನ್ನು ಸ್ವೀಕರಿಸಿದನು. ಹಾಗೂ ನಿಜಾಮ್‌ಶಾಹ್‌ನ ಸೈನ್ಯದತ್ತ ನಡೆದನು. ಅದು ಗುಡ್ಡಗಾಡು ಪ್ರದೇಶದಲ್ಲಿ ನೆಲೆಸಿತ್ತು. ಮುಂದೆ ಸಾಗಿದನು. ಅಮೀರ್ ಬರೀದ್‌ನು ೬೦೦೦ ಅದಿಲ್‌ಶಾಹಿ ಹಾಗೂ ೩೦೦೦ ತನ್ನ ವಿಶೇಷ ಸೈನಿಕರೊಂದಿಗೆ ಅವನನ್ನು ಎದುರಿಸಿದನು. ಹಾಗೂ ಮರಳಿದ ಸಮಯದಲ್ಲಿ ಬೀಡ್ ಹಾಗೂ ಪಟ್ಟಣದ ನಡುವೆ ಜರಾತನವರ ಮೇಲೆ ದಾಳಿ ಮಾಡಿದನು. ಈ ದಾಳಿಯಲ್ಲಿ ಸುಲ್ತಾನ್ ಬಹಾದ್ದೂರ್‌ನ ೨–೩ ಸಾವಿರ ಸೈನಿಕರು ಕೊಲ್ಲಲ್ಪಟ್ಟರು. ಹಾಗೂ ಅಮೀರ್ ಬರೀದ್‌ನ ಕೈಗೆ ಬಹಳಷ್ಟು ಯುದ್ಧ ಸಾಮಗ್ರಿ, ವಸ್ತುಗಳು ಹಾಗೂ ಸಿರಿ ಸಂಪತ್ತನ್ನು ಹೊತ್ತ ೭೨ ಒಂಟೆಗಳು ಲಭಿಸಿದವು.

ಸುಲ್ತಾನ್ ಬಹಾದ್ದೂರನ ಕೋಪ :

ಸುಲ್ತಾನ್ ಬಹಾದ್ದೂರನಿಗೆ ಈ ಘಟನೆಯ ವಿವರವು ಯಾವಾಗ ತಿಳಿಯಿತೋ ಆವಾಗ ಅವನು ಬಹಳಷ್ಟು ಕೋಪೋದ್ರಿಕ್ತನಾದನು. ಯಾವ ಜಾಗದಲ್ಲಿ ಈ ಸುದ್ದಿಯನ್ನು ತಿಳಿದನೋ ಅಲ್ಲಿಯೇ ತಂಗಿದನು. ಹಾಗೂ ತನ್ನ ಮಂತ್ರಿಯಾದ ಖುದಾವಂದ್ ಖಾನ್‌ನ ಜೊತೆ ಇಪ್ಪತ್ತು ಸಾವಿರ ಸವಾರರನ್ನು ಶತ್ರುವಿನೊಂದಿಗೆ ಸೇಡು ತೀರಿಸಿಕೊಳ್ಳಲು ನೇಮಿಸಿದನು. ಅಮೀರ್‌ಬರೀದ್‌ನು ಬುರಹಾನ್ ನಿಜಾಮ್‌ಶಾಹ್‌ನ ಸಹಾಯವಿಲ್ಲದೆಯೇ ಈ ಸೈನ್ಯವನ್ನೆದುರಿಸಲು ನಿಶ್ಚಯಿಸಿದನು. ಎರಡೂ ಸೈನ್ಯಗಳು ಮುಖಾಮುಖಿಯಾಗುವ ಮುಂಚೆ ದಖ್ಖನಿ ಮತ್ತು ಗುಜರಾತಿಗಳು ಪರಸ್ಪರ ರಕ್ತದ

ನದಿಗಳನ್ನು ಹರಿಸುವ ಮೊದಲೇ ಅಮೀರ್‌ಬರೀದ್ ಹಾಗೂ ಆದಿಲ್‌ಶಾಹಿ ಅಮೀರರು ಗೆಲುವಿನ ನಿರೀಕ್ಷೆಯಲ್ಲಿ ತಮ್ಮ ತಮ್ಮ ಸೈನ್ಯವನ್ನು ಒಟ್ಟುಗೂಡಿಸಲು ನಿರತರಾದರು.

ಗುಜರಾತಿ ಹಾಗೂ ದಖ್ಖನಿಗಳ ನಡುವೆ ಕಾಳಗ :

ಅಮೀರ್ ಬರೀದ್‌ನು ರಣರಂಗದಿಂದ ಹಿಮ್ಮೆಟ್ಟಿ ಓಡಿಹೋದನು. ಇದರಿಂದಾಗಿ ಗುಜರಾತಿಗಳಿಗೆ ಮನಸೋಇಚ್ಛೆ ವರ್ತಿಸುವ ಅವಕಾಶ ಒದಗಿಬಂದಿತು. ಅವರು ಎಲ್ಲ ನೈತಿಕತೆಯ ಮೇರೆಗಳನ್ನು ಮೀರಿ ಶೋಷಣೆ ನಡೆಸಿದರು. ಆಮೀರ್ ಬರೀದ್‌ನು ತಂಗುದಾಣದಲ್ಲಿ ಅಡಗಿ ಕುಳಿತಿದ್ದನು. ಸಮಯ ನೋಡಿಕೊಂಡು ಹೊರಬಂದನು ಹಾಗೂ ಶತ್ರುವಿನ ಮೇಲೆ ಪ್ರಹಾರ ಮಾಡಿದನು. ಕೆಲವೇ ಸಮಯದಲ್ಲಿ ಗುಜರಾತಿಗಳ ಸೈನ್ಯವನ್ನು ಛಿದ್ರವಿಛಿದ್ರ ಮಾಡಿದನು. ಸುಲ್ತಾನ್ ಬಹಾದ್ದೂರನು ಅಮಾದುಲ್ ಮುಲ್ಕ ಹಾಗೂ ಖುದಾವಂದ್ ಖಾನ್‌ನ ಮೇಲ್ವಿಚಾರಣೆಯಲ್ಲಿ ಇಪ್ಪತ್ತೈದು ಸಾವಿರ ಸವಾರರೊಂದಿಗೆ ಮತ್ತೊಂದು ತಂಡವನ್ನು ಕಳುಹಿಸಿದನು. ಬುರ್ಹಾನ್ ನಿಜಾಮ್‌ಶಾಹ್, ಅಮೀರ್ ಬರೀದ್ ಹಾಗೂ ಖ್ವಾಜಾ ಜಹಾಂನಿಗೆ ಈ ಸೈನ್ಯವನ್ನೆದುರಿಸುವ ಸಾಮರ್ಥ್ಯವಿರಲಿಲ್ಲ. ಆ ಕಾರಣಕ್ಕೆ ಇವರು ಕೂಡಲೇ ಪರಿಂದಾದತ್ತ ಸಾಗಿದರು.

ಬುರ್ಹಾನ್ ನಿಜಾಮಶಾಹ್‌ನ ಮಾತೃವಿಯೋಗ :

ಗುಜರಾತಿಗಳು ಈ ಜನರನ್ನು ಹಿಂಬಾಲಿಸಿದರು. ದಖ್ಖನಿಗಳು ಪರಿಂದಾದಲ್ಲಿಯೇ ಉಳಿದರು. ಇಲ್ಲಿ ಬುರ್ಹಾನ್ ನಿಜಾಮ್ ಶಾಹನ ತಾಯಿಯು ಮರಣವನ್ನಪ್ಪಿದಳು. ಅವಳನ್ನು ಪರಿಂದಾದಲ್ಲಿಯೇ ದಫನ್ ಮಾಡಲಾಯಿತು. ದಿವಂಗತ ಮಾತೆಯು ಆಸ್ತರಾಬಾದ್‌ನ ಓರ್ವ ಅಮೀರನ ಮಗಳಾಗಿದ್ದಳು.

ಅಹ್ಮದ್ ನಗರದಲ್ಲಿ ಸುಲ್ತಾನ್ ಬಹಾದ್ದೂರ್ :

ಸುಲ್ತಾನ್ ಬಹಾದ್ದೂರ್‌ನು ಅಹ್ಮದ್ ನಗರಕ್ಕೆ ಆಗಮಿಸಿದನು. ಅವನು ಸ್ವತಃ "ಬಾಗೇ ನಿಜಾಮ್" ದಲ್ಲಿ ತಂಗಿದನು. ಹಾಗೂ ಅವನ ಅಮೀರ್‌ರು ಅಹ್ಮದ್ ನಗರದ ಬೇರೆ ಬೇರೆ ಮನೆಗಳಲ್ಲಿ ತಂಗಿದರು. ಸುಲ್ತಾನ್ ಬಹಾದ್ದೂರ್‌ನು ಆದೇಶ ನೀಡಿದನು. 'ಬಾಗಏನಿಜಾಮ' (ನಿಜಾಮ ಉದ್ಯಾನ) ದಲ್ಲಿ ಕಟ್ಟಡದ ನಿರ್ಮಾಣಕ್ಕಾಗಿ ಕಲ್ಲು ಹಾಗೂ ಸುಣ್ಣವನ್ನು ಒಟ್ಟುಗೂಡಿಸಲಾಗಿದೆಯೋ ಅದನ್ನು ಹೊರಗೆ ತರುವುದು ಹಾಗೂ ಅದರಿಂದ ಒಂದು ಎತ್ತರದ ಮತ್ತು ವಿಸ್ತಾರದ ವೇದಿಕೆಯನ್ನು ನಿರ್ಮಿಸಬೇಕು. ಹಾಗೂ ಅದರ ಮೇಲೆ ಆಸೀನರಾಗಿ ಆನೆಗಳ ನಡುವಿನ ನಡೆಯುವ ತುಂಟಾಟವನ್ನು ವೀಕ್ಷಿಸಲು ಅನುವಾಗಬೇಕು. ಅನುಭವಿ ಕಟ್ಟಡಗಾರರು (ಗೌಂಡಿಗಳು) ಒಂದು ದಿನ ಹಾಗೂ ಒಂದು ರಾತ್ರಿಯಲ್ಲಿಯೇ ವಿಸ್ತಾರವಾದ ವೇದಿಕೆಯನ್ನು ನಿರ್ಮಿಸಿದರು. ಆ ವೇದಿಕೆಯು 'ಕಾಲಾಚಬೂತರಾ' ಎಂಬ ಹೆಸರಿನಿಂದ ಪ್ರಸಿದ್ಧವಾಗಿದೆ. ಬಾದ್‌ಶಾಹ್‌ನು ೪೦ ದಿನಗಳ ವರೆಗೆ ನಿರಂತರವಾಗಿ ಈ ವೇದಿಕೆಯಲ್ಲಿ ಕೂಡ್ರುತ್ತಿದ್ದನು. ಹಾಗೂ

ಎಲ್ಲ ಪ್ರಜೆಗಳ ಗೌರವವನ್ನು ಸ್ವೀಕರಿಸುತ್ತಿದ್ದನು. ಆನೆ, ಒಂಟೆ ಹಾಗೂ ಜಿಂಕೆಗಳನ್ನು ಮೈದಾನದಲ್ಲಿ ಬಿಡಲಾಗುತ್ತಿತ್ತು. ಹಾಗೂ ಬಾದ್‌ಷಾಹ್‌ನು ಅವುಗಳ ನಡುವೆ ನಡೆಯುವ ತುಂಟಾಟವನ್ನು ವೀಕ್ಷಿಸಿ ಆನಂದ ತುಂದಿಲನಾಗುತ್ತಿದ್ದನು.

ಗುಜರಾತಿ ಸೈನ್ಯದೊಳಗೆ ಭೀಕರ ಕ್ಷಾಮ :

ಸುಲ್ತಾನ್ ಬಹಾದ್ದೂರ್‌ನು ಇನ್ನೂ ಕೆಲವು ದಿನಗಳವರೆಗೆ ಅಹ್ಮದ್ ನಗರದಲ್ಲಿ ಉಳಿಯುವ ಇಚ್ಚೆಯುಳ್ಳವನಾಗಿದ್ದನು. ಆದರೆ ನಿಜಾಮ್‌ಷಾಹೀ ಅಮೀರರ ಕ್ಷೋಭೆ ಹರಡುವ ಗುಣದಿಂದಾಗಿ ಅವನ ಇಚ್ಛೆಯು ಪೂರ್ತಿಯಾಗುವಂತಿರಲಿಲ್ಲ. ಈ ಜನರು ಧಾನ್ಯ ಧವಸಗಳನ್ನು ಹಾಗೂ ಅವಶ್ಯಕ ವಸ್ತುಗಳನ್ನು ಸುಲಭವಾಗಿ ಗುಜರಾತಿಗಳಿಗೆ ತಲುಪಲು ಬಿಡುತ್ತಿರಲಿಲ್ಲ. ಈ ಕಾರಣದಿಂದಾಗಿ ಗುಜರಾತಿಗಳ ಸೈನ್ಯದಲ್ಲಿ ಭೀಕರ ಆಹಾರದ ಕೊರತೆವುಂಟಾಯಿತು. ಅಸಂಖ್ಯ ಸೈನಿಕರು, ಕುದುರೆ ಹಾಗೂ ಆನೆಗಳು ಮೃತ್ಯು ಹೊಂದಿದವು. ಈ ಪರಿಸ್ಥಿತಿಯನ್ನು ಮನಗಂಡು ಖುದಾವಂದ್‌ಖಾನ್ ಹಾಗೂ ಉಳಿದ ಗುಜರಾತಿ ಅಮೀರ್‌ರು ಬಾದ್‌ಶಾಹ್‌ನಿಗೆ ಈ ಮನವಿ ಮಾಡಿದರು. ಒಂದು ವೇಳೆ ಈ ಪ್ರಾಂತ್ಯವನ್ನು ಗೆಲ್ಲುವ ಇಚ್ಛೆ ಇದ್ದರೆ ಎಲ್ಲಕ್ಕಿಂತ ಮೊದಲು ದೌಲತಾಬಾದ್ ಕೋಟೆಯನ್ನು ವಶಪಡಿಸಿಕೊಳ್ಳಬೇಕು. ಅದು ಗಡಿಪ್ರದೇಶದಲ್ಲಿದೆ.

ಸುಲ್ತಾನ್ ಬಹಾದ್ದೂರ್‌ನ ಭಯಂಕರ ಸ್ವಪ್ನ :

ಸುಲ್ತಾನ್ ಬಹಾದ್ದೂರ್‌ನಿಗೆ ಅಮೀರ್‌ರ ಈ ಸಲಹೆ ಒಪ್ಪಿಗೆಯಾಯಿತು. ಆದರೆ ಇಲ್ಲಿಂದ ಹೊರಡಲು ತಡವಾಯಿತು. ಇದೇ ಸಮಯದಲ್ಲಿ ಸುಲ್ತಾನ್ ಬಹಾದ್ದೂರ್ ಒಂದು ಭಯಂಕರ ರೂಪದ ಸ್ವಪ್ನ ಕಂಡನು. ಏನೆಂದರೆ ಪಿಶಾಚಿಗಳ ಒಂದು ಗುಂಪು ಅವನೆಡೆಗೆ ಧಾವಿಸಿ ಬರುತ್ತಿವೆ. ಈ ಪಿಶಾಚಿಗಳು ಅತೀ ಭಯಂಕರ ಹಾಗೂ ವಿಕೃತ ರೂಪದವುಗಳಾಗಿದ್ದವು. ಇವುಗಳಲ್ಲಿ ಕೆಲವು ಪಿಶಾಚಿಗಳ ಕೈಯಲ್ಲಿ ಬೆಂಕಿಯಿತ್ತು. ಇನ್ನೂ ಕೆಲವರ ಕೈಯಲ್ಲಿ ಪರ್ವತಗಳು ಇದ್ದವು. ಸುಲ್ತಾನ್ ಬಹಾದ್ದೂರನು ತನ್ನ ಮಂಚದ ಮೇಲೆ ಮಲಗಿದ್ದನು. ಈ ಪಿಶಾಚಿಗಳು ತಮ್ಮ ತಮ್ಮ ಕೈಯಲ್ಲಿಯ ಬೆಂಕಿ ಹಾಗೂ ದೊಡ್ಡ ದೊಡ್ಡ ಪರ್ವತಗಳನ್ನು ಈತನ ಮೇಲೆ ಎಸೆಯಲು ಬಯಸುತ್ತಿದ್ದವು.

ಆತ್ಮಗಳ ಪ್ರಭಾವ :

ಸುಲ್ತಾನ್ ಬಹಾದ್ದೂರ್‌ನು ಕೂಡಲೇ ಸ್ವಪ್ನಲೋಕದಿಂದ ಹೊರಬಂದನು. ಯಾವ ಜನರು ಅವನ ಬಳಿ ಇದ್ದರೋ ಅವರಿಗೆ ಕನಸಿನ ವಿವರವನ್ನು ವಿವರಿಸಿದನು. ಈ ಜನರು ಹೀಗೆ ಉತ್ತರಿಸಿದರು. "ನಿಜಾಮಶಾಹನನ ಕಾಲದಲ್ಲಿ ಈ ಸ್ಥಳದಲ್ಲಿ ಒಂದು ದೊಡ್ಡ ಯುದ್ಧ ಜರುಗಿತ್ತು. ಹಿಂದೂ, ಮುಸ್ಲಿಂರ ಒಂದು ಬೃಹತ್ ಸಂಖ್ಯೆಯ ಜನಸಮೂಹವನ್ನು ಮದದಿಂದ ಕಗ್ಗೊಲೆ ಮಾಡಲಾಗಿತ್ತು. ಈ ಕೊಲ್ಲಲ್ಪಟ್ಟವರ ಆತ್ಮಗಳು ಅಂತರ್‌ಪಿಶಾಚಿಗಳಾದವು. ಪರಲೋಕದಲ್ಲಿ ಸ್ಥಾನ ಸಿಗಲಿಲ್ಲ. ಆದ ಕಾರಣ

ಅವುಗಳು ಇದೇ ಲೋಕದಲ್ಲಿ ಮತ್ತು ಇದೇ ಜಾಗದಲ್ಲಿ ಇರತೊಡಗಿವೆ. ಹಾಗೂ ಪಿಶಾಚಿಗಳ ರೂಪದಲ್ಲಿ ಕಂಡು ಬರುತ್ತಿವೆ. ನಮಗೆ ವಿಶ್ವಾಸವಿದೆ. ಇದೇ ಈಗ ತಾವು ವಿವರಿಸಿರುವ ಸ್ವಪ್ನವು ಇದೇ ಪಿಶಾಚಿಗಳ ಪ್ರಭಾವದಿಂದ ತಮಗೆ ಗೋಚರವಾಗಿರಬೇಕು".

ದೌಲತಾಬಾದಕ್ಕೆ ಸುಲ್ತಾನ್ ಬಹಾದ್ದೂರನ ತಲುಪುವಿಕೆ :

ಸುಲ್ತಾನ್ ಬಹಾದ್ದೂರನು ಅದೇ ರಾತ್ರಿ ಈ ಸ್ಥಳದಿಂದ ನಿರ್ಗಮಿಸಿ 'ಕಾಲಾ ಚಬೂತರಾ'ದ ಬಳಿ ತಂಗಿದ್ದು ಎರಡು ಮೂರು ದಿನಗಳ ನಂತರ ಅಲ್ಲಿಂದ ಹೊರಟನು. ಹಾಗೂ ಯಾವಾಗ ಅಮಾದುಲ್ ಮುಲ್ಕ ಬರಾರಿ ಹಾಗೂ ಗುಜರಾತಿನ ಅಮೀರರು ಬಂದರೋ ಆಗ ಸುಲ್ತಾನ್ ಬಹಾದ್ದೂರ್‌ನು ಈ ಜನರನ್ನು ಕೋಟೆಯ ದಿಗ್ಬಂಧನಕ್ಕಾಗಿ ನೇಮಿಸಿದನು. ಹಾಗೂ ಸ್ವತಃ ತಾನೇ ಸುಲ್ತಾನ್ ಮೊಹಮದ ಫಾರೂಕಿಯ ಜೊತೆಯಾಗಿ 'ಬಾಲಾಘಾಟ್' ದೌಲತಾಬಾದ್‌ನಲ್ಲಿ ವಾಸಿಸತೊಡಗಿದನು.

ಬುರ್ಹಾನ್‌ನ ನಿಜಾಮ್‌ಶಾಹ್‌ನಿಗೆ ಇಸ್ಮಾಯಿಲ್ ಆದಿಲ್‌ಶಾಹ್‌ನಿಂದ ಸಹಾಯ :

ಬುರ್ಹಾನ್ ನಿಜಾಮ್‌ಷಾಹ್‌ನು ಇಸ್ಮಾಯಿಲ್ ಆದಿಲ್‌ಶಾಹ್‌ನ ಬಳಿಗೆ ದೂತರನ್ನು ಕಳುಹಿಸಿದನು ಹಾಗೂ ಅವನಿಗೆ ಈ ಸಂದೇಶವನ್ನು ರವಾನಿಸಿದನು.

"ತಾವು ಯಾವ ಸಹೋದರ ಪ್ರೀತಿಯನ್ನು ನನ್ನ ಮೇಲೆ ತೋರಿ ನನಗೆ ಸಹಾಯ ಮಾಡಿದಿರೋ ಆ ಕಾರಣಕ್ಕೆ ನಾನು ತಮಗೆ ತುಂಬಾ ಋಣಿಯಾಗಿದ್ದೇನೆ. ಆದರೆ ಯಾವಾಗಿನವರೆಗೆ ತಾವೇ ಸ್ವತಃ ಈ ಕಡೆಗೆ ಗಮನ ಕೊಡಲಾರಿರೋ ಅಲ್ಲಿಯವರೆಗೆ ನನಗೆ ಈ ಕಷ್ಟದಿಂದ ಬಿಡುಗಡೆಯಿಲ್ಲ". ಆದಿಲ್‌ಶಾಹ್‌ನು ಈ ಸಂದೇಶದ ಉತ್ತರ ರೂಪವಾಗಿ ಹೀಗೆ ಹೇಳಿದನು. "ಬೇಜಾನಗರದ ಹಿಂದೂಗಳು ಈಗ ಅವಕಾಶವನ್ನು ಹುಡುಕುತ್ತಿದ್ದಾರೆ. ಒಂದು ವೇಳೆ ನಾನು ಬೇಜಾನಗರದಿಂದ ಹೊರ ಹೊರಟ್ಟಿದ್ದೇ ಆದರೆ ಈ ಜನರು ಕೃಷ್ಣಾ ನದಿಯನ್ನು ದಾಟಿ ಸಂಪೂರ್ಣ ಪಟ್ಟಣವನ್ನೇ ವಿನಾಶಗೊಳಿಸುವರು. ಅದಕ್ಕಾಗಿ ಸಧ್ಯಕ್ಕೆ ಹೈದರುಲ್ ಮುಲ್ಕ ಖಜೋತಿಯ ಮೇಲ್ವಿಚಾರಣೆಯಲ್ಲಿ ೫೦೦ ಕುದುರೆಸವಾರರನ್ನು ಕಳುಹಿಸುತ್ತಿದ್ದೇನೆ. ದಯಾಘನನಾದ ಅಲ್ಲಾಹುವಿನ ದಯೆಯಿಂದ ನೀವು ಯಶವನ್ನು ಹೊಂದುವಿರೆಂದು ನಿರೀಕ್ಷೆಯಿದೆ".

ಶೇಖ್ ಜಾಫರನ ವಜಾ ಹಾಗೂ ಕಾನೂನೌಸಿಯ ನೇಮಕ :

ಆದಿಲ್‌ಶಾಹನು ಬರದೇ ಇರುವುದರಿಂದ ಬುರ್ಹಾನ್ ನಿಜಾಮ್‌ಶಾಹನಿಗೆ ಬಹಳೇ ನಿರಾಶೆಯಾಯಿತು. ಹಾಗೂ ಅವನು ತನ್ನ ಗತಿಯನ್ನು ನೆನೆದು ಬಹಳೇ ಚಿಂತಿತನಾದನು. ಎಲ್ಲ ಪ್ರಜೆಗಳು ಹಾಗೂ ಸೈನಿಕರು ಶೇಖ್‌ಜಾಫರನ ನಾಯಕತ್ವದಿಂದ ಅಸಂತೃಪ್ತರಾಗಿದ್ದರು. ಬುರ್ಹಾನ್ ನಿಜಾಮ್‌ಶಾಹನು ಜಾಫರ್‌ನಿಗೆ ವಜಾಮಾಡಿ ಅವನ ಸ್ಥಾನದಲ್ಲಿ ಅವನದೇ ಸೇವಕನಾದ ಕಾನೂನೌಸಿಯನ್ನು ಯಾರು ಬ್ರಾಹ್ಮಣ

ಕೋಮಿನೊಂದಿಗೆ ಸಂಬಂಧ ಹೊಂದಿದ್ದನೋ ಅವನನ್ನು ನಾಯಕನನ್ನಾಗಿ ನೇಮಿಸಿದನು. ಕಾನೂನೌಸಿಯು ಬಹಳೇ ಚತುರ ಹಾಗೂ ಸಮಯಪ್ರಜ್ಞೆಯುಳ್ಳವನಾಗಿದ್ದನು. ಸತ್ಯವಂತ ಹಾಗೂ ನ್ಯಾಯವಂತನಾಗಿದ್ದನು. ಆ ಕಾರಣಕ್ಕೆ ಬಹಳೇ ಘನತೆಯುಳ್ಳ ವ್ಯಕ್ತಿಯಾಗಿದ್ದನು.

ದೌಲತಾಬಾದ್‌ನಲ್ಲಿ ಬುರ್ಹಾನ್ ನಿಜಾಮ್‌ಷಾಹ್ :

ಕಾನೂನೌಸಿಯ ಸಲಹೆಯ ಮೇರೆಗೆ ಬುರ್ಹಾನ್ ನಿಜಾಮನು ಅಹ್ಮದ್‌ನಗರದತ್ತ ಸಾಗಿದನು. ಅವನು ತನ್ನ ಶಕ್ತಿಗೆ ತಕ್ಕಂತೆ ಸೈನ್ಯವನ್ನು ಒಟ್ಟುಗೂಡಿಸಿದನು. ಹಾಗೂ ದೌಲತಾಬಾದದತ್ತ ಹೊರಟನು. ಸುಲ್ತಾನ್ ಬಹಾದ್ದೂರ್‌ನ ಸೈನ್ಯದ ಸಮೀಪ ತಲುಪಿ ೪ ಕೋಸದಷ್ಟು ದೂರದಲ್ಲಿ ತಂಗಿದನು. ಈ ಸ್ಥಳದಲ್ಲಿ ಬಹಳೇ ಎಚ್ಚರದೊಂದಿಗೆ ಸಂಭಾಳಿಸಿಕೊಂಡು ೩ ತಿಂಗಳಿನವರೆಗೆ ಉಳಿದುಕೊಂಡನು. ದಖನಿ ಸೈನ್ಯವು ಗುಜರಾತಿಗಳನ್ನು ಪ್ರಚೋದಿಸತೊಡಗಿತು. ಹಾಗೂ ತುಂಬಾ ತೊಂದರೆ ಕೊಟ್ಟಿತು. ಅದರಿಂದ ಗುಜರಾತಿ ಜನರು ಬಹಳ ಚಿಂತಿತರಾದರು. ಹಾಗೂ ಯುದ್ಧಕ್ಕೆ ಸಿದ್ಧರಾದರು. ಸುಲ್ತಾನ್ ಬಹಾದ್ದೂರ್‌ನಿಗೆ ಈ ವಿಷಯದ ಕುರಿತು ಮಾಹಿತಿ ಸಿಕ್ಕಿತು.

ಗುಜರಾತಿಗಳೊಂದಿಗೆ ಕದನ :

ಅಮೀರ್ ಬರೀದ್‌ನು ಶೌರ್ಯದಲ್ಲಿ ತನಗೆ ತಾನೇ ಸಾಟಿಯಾಗಿದ್ದನು. ನಿಜಾಮ್‌ಶಾಹನ ಅನುಮತಿ ಇಲ್ಲದೆಯೇ ಸೈನ್ಯದ ವ್ಯೂಹವನ್ನು ರಚಿಸತೊಡಗಿದನು. ದಖನಿ ಸೈನ್ಯದಲ್ಲಿ ಈ ಸುದ್ಧಿಯು ತಿಳಿಯಿತು. ಬುರ್ಹಾನ್ ನಿಜಾಮ್‌ಶಾಹನು ಅಮೀರ್ ಬರೀದ್‌ನ ಧೈರ್ಯ ಸ್ಥೈರ್ಯ ಹಾಗೂ ನಿರ್ಭಯದ ನಡುವಳಿಕೆಯನ್ನು ಅರಿತವನಾಗಿದ್ದನು. ಅದೇ ಸಮಯದಲ್ಲಿ ರಣರಂಗಕ್ಕೆ ಆಗಮಿಸಿದನು. ಹಾಗೂ ಯುದ್ಧ ಪ್ರಾರಂಭವಾಯಿತು. ಪರಸ್ಪರ ಎದುರಾಳಿಗಳು ಸಂಪೂರ್ಣ ಶಕ್ತಿಯನ್ನು ಕ್ರೋಡೀಕರಿಸಿ ಮುಗಿಬಿದ್ದರು. ಕೊನೆಗೆ ಅಮೀರ್ ಬರೀದ್ ಹಾಗೂ ಆದಿಲ್ ಶಾಹಿಯ ಸೈನ್ಯವು ಮೇಲುಗೈ ಸಾಧಿಸಿತು. ಗುಜರಾತಿಗಳಿಗೆ ಸೋಲಿನ ಮುಖ ನೋಡಬೇಕಾಯಿತು.

ಪರಾರಿಯಾದ ಬುರ್ಹಾನ್ ನಿಜಾಮ್‌ಶಾಹ್ ಹಾಗೂ ಅಮೀರ್ ಬರೀದ್ :

ಸುಲ್ತಾನ್ ಬಹಾದ್ದೂರನಿಗೆ ಯಾವಾಗ ಈ ಸುದ್ದಿ ತಿಳಿಯಿತೋ ಆಗ ಅವನು ಖುದಾವಂದ್ ಖಾನ್, ಅಸ್ಸದುಲ್ ಮುಲ್ಕ ಹಾಗೂ ಸಫ್ದರ್‌ಖಾನ್ ಹಾಗೂ ಇತರ ಅಮೀರರನ್ನು ಶತ್ರುಗಳನ್ನು ಹೆಡೆಮುರಿ ಕಟ್ಟುವುದಕ್ಕಾಗಿ ಕಳುಹಿಸಿದನು. ಈ ಗುಜರಾತಿ ಅಮೀರರು ತಮ್ಮ ಸೈನ್ಯದೊಂದಿಗೆ ರಣರಂಗವನ್ನು ಪ್ರವೇಶಿಸಿದರು. ಮೊದಲನೆಯ ದಾಳಿಯಲ್ಲಿಯೇ ಆಲಮ್‌ಖಾನ್ ಮೇವಾತಿ ಯಾರು ಅಹ್ಮದ್ ನಗರದ ಪ್ರಸಿದ್ಧ ಸೇನಾಧಿಪತಿಯಾಗಿದ್ದನೋ ಕೊಲ್ಲಲ್ಪಟ್ಟನು. ಅಮೀರ್ ಬರೀದ್ ಹಾಗೂ ಬುರ್ಹಾನ್

ನಿಜಾಮರು ಈಗ ಯುದ್ಧಭೂಮಿಯಲ್ಲಿ ನಿಲ್ಲುವುದು ಸರಿಯಲ್ಲವೆಂದು ಬಗೆದರು. ಅಲ್ಲಿಂದ ಓಡಿ ಪರ್ವತ ಪ್ರದೇಶಕ್ಕೆ ಬಂದರು.

ಮೀರಾ ಮೊಹಮ್ಮದ ಶಾಹ್ ಹಾಗೂ ಇಮಾದುಲ್ ಮುಲ್ಕರ ಸ್ನೇಹ ಸಂಬಂಧ :

ಬುರ್ಹಾನ್ ನಿಜಾಮ್‌ಶಾಹ್ ಹಾಗೂ ಅಮೀರ್ ಬರೀದ್ ತಮ್ಮನ್ನು ತಾವು ಸುಲ್ತಾನ್ ಬಹಾದ್ದೂರ್‌ನಿಗಿಂತಲೂ ಕನಿಷ್ಠರೆಂತಲೂ ಯುದ್ಧವನ್ನು ಮಾಡಲು ತಾವು ಅವನಿಗೆ ಸಮವಲ್ಲವೆಂದೂ ಬಗೆಯುತ್ತಿದ್ದರು. ಈ ಈರ್ವರೂ ಕಾನೂನೌಸಿಯ ಸಲಹೆಯ ಮೇರೆಗೆ ಇಮಾದುಲ್ ಮುಲ್ಕ ಹಾಗೂ ಮೀರಾಮೊಹಮ್ಮದ್‌ಷಾಹ್‌ನ ಬಳಿಗೆ ತಮ್ಮ ದೂತರನ್ನು ಕಳುಹಿಸಿದರು. ಅವನೊಂದಿಗೆ ಸ್ನೇಹ ಸಂಬಂಧವನ್ನು ಬೆಳೆಸಲು ಪ್ರಯತ್ನಿಸಿದರು. ಹಾಗೂ ಅವನೊಂದಿಗೆ ಈ ವಾಗ್ದಾನವನ್ನು ಮಾಡಲಾಯಿತು. ಯಾವ ಆನೆ, ಹಾಗೂ ಕೋಟೆ ಅವನಿಂದ ಕಸಿಯಲ್ಪಟ್ಟಿದ್ದವೋ ಅವುಗಳನ್ನು ಮರಳಿಸಲಾಗುವುದು.

ಸುಲ್ತಾನ್ ಬಹಾದ್ದೂರ್‌ನ ದೂರು :

ಮೀರಾ ಮೊಹಮ್ಮದ್‌ಶಾಹ ಹಾಗೂ ಅಮಾದುಲ್ ಮುಲ್ಕ ಖುದಾವಂದ್‌ರು ಗುಜರಾತಿಯ ಬಹಳೇ ಸ್ನೇಹಮಯಿ ಹಾಗೂ ಘನವ್ಯಕ್ತಿತ್ವದ ಮಂತ್ರಿಯಾಗಿದ್ದನು ಬಳಿಗೆ ಹೋದರು. ಅವನೊಂದಿಗೆ ಹೀಗೆಂದರು. "ನಾವು ಪ್ರತಿಯೊಂದು ಸಲವೂ ಸುಲ್ತಾನ್ ಬಹಾದ್ದೂರ್‌ನಿಗೆ ಜೊತೆ ನೀಡಿದೆವು. ಅವನೊಂದಿಗೆ ಸೇರಿ ಪಾತ್ರಿ ಹಾಗೂ ಮಹಾವರ್ ಕೋಟೆಗಳನ್ನು ನಿಜಾಮ್‌ಶಾಹಿಯ ಕಪಿಮುಷ್ಠಿಯಿಂದ ಬಿಡುಗಡೆ ಮಾಡಿದೆವು. ಬರಾರ್, ಹಾಗೂ ಅಹ್ಮದ್‌ನಗರದಲ್ಲಿ ಅವನ ಹೆಸರಿನ 'ಖುತ್ಬಾ' ಜಾರಿಗೊಳಿಸಿದೆವು. ಪ್ರತಿವರ್ಷವೂ ಅವನಿಗೆ ಅಮೂಲ್ಯವಾದ ಕೊಡುಗೆಗಳನ್ನು ಅರ್ಪಿಸಿದೆವು. ಆದರೆ ಈ ಎಲ್ಲದರ ಹೊರತಾಗಿಯೂ ಈಗ ನಮಗೆ ಹೀಗನ್ನಿಸುತ್ತಿದೆ. ಸುಲ್ತಾನ್ ಬಹಾದ್ದೂರ್‌ನು ನಮ್ಮಿಂದ ನಮ್ಮ ಪ್ರಾಂತ್ಯವನ್ನು ಕಸಿಯುತ್ತಿದ್ದಾನೆ ಎಂದು".

ಖುದಾವಂದ್ ಖಾನ್‌ನ ಉತ್ತರ :

ಖುದಾವಂದ್ ಖಾನ್‌ನು ಹೀಗೆಂದು ಉತ್ತರಿಸಿದನು. 'ಈ ವಿನಾಶದ ಕಾರಣ ಸ್ವತಃ ತಾವೇ ಆಗಿದ್ದೀರಿ, ಯಾವ ವೇಳೆಯಲ್ಲಿ ದಖ್ಖನ್ನಿನ ಎಲ್ಲ ಆಡಳಿತಗಾರರು ಒಗ್ಗಟ್ಟಾಗಿರುವರೋ ಹಾಗೂ ಎಲ್ಲ ಬಿಕ್ಕಟ್ಟುಗಳನ್ನು ಬಗೆಹರಿಸಿಕೊಳ್ಳುವರೋ ಆಗ ವಿಷಯವು ತನ್ನಿಂದ ತಾನೇ ಸರಿಯಾಗುವುದು. ಆಮಾದುಲ್ ಮುಲ್ಕ ಹಾಗೂ ಮೀರಾಮೊಹಮ್ಮದ್‌ಶಾಹನು ಖುದಾವಂದ್‌ಖಾನ್‌ನ ಮಾತಿನ ಸಾರಾಂಶ ಅರಿತುಕೊಂಡರು. ಹಾಗೂ ಅಲ್ಲಿಂದ ಮರಳಿದರು.

ಗುಜರಾತಿಗಳ ಸಲಹೆ :

ಎಲ್ಲಕ್ಕಿಂತ ಮೊದಲು ಅಮಾದುಲ್ ಮುಲ್ಕನು ಬಹಳಷ್ಟು ಧವಸ ಧಾನ್ಯ ಹಾಗೂ ಅವಶ್ಯಕ ವಸ್ತುಗಳನ್ನು ದೌಲತಾಬಾದ್‌ದಲ್ಲಿ ಮಂಜನ್‌ಖಾನ್‌ನ ಬಳಿ ಕಳುಹಿಸಿದನು. ಹಾಗೂ ಸ್ವತಃ ಅದೇ ರಾತ್ರಿ ಎಲ್ಚಿಪುರಕ್ಕೆ ಹೊರಟನು. ಸುಲ್ತಾನ್ ಬಹಾದ್ದೂರ್‌ನು ಮೊಹ್ಮದ್‌ಖಾನ್‌ಫಾರೂಕಿ ಹಾಗೂ ತಮ್ಮ ಅಮೀರ್‌ರೊಂದಿಗೆ ಮರಳುವ ಕುರಿತು ವಿಚಾರಿಸಿದನು. ಆಗ ಅಮೀರರು ಹೀಗೆಂದರು. 'ಈ ದಿನಗಳಲ್ಲಿ ತಾಪ್ತಿ ನದಿಯ ಹೊರತಾಗಿ ಬೇರೆ ನದಿಗಳಲ್ಲೂ ನೀರಿನ ಮಟ್ಟ ಬಹಳ ಏರಿರುವುದು. ಗುಜರಾತ್ ಹಾಗೂ ಖಾನ್ ದೇಶದಿಂದ ಧವಸ ಧಾನ್ಯ ಹಾಗೂ ಅವಶ್ಯಕ ವಸ್ತುಗಳನ್ನು ತರಿಸಿಕೊಳ್ಳುವುದು ಬಹಳ ದುಸ್ತರವಾಗಿದೆ. ಈ ಸಾಧ್ಯತೆಯನ್ನು ಅಲ್ಲಗಳೆಯುವಂತಿಲ್ಲ. ಅದೆಂದರೆ ದಖ್ಖನ್ನಿನ ಆಡಳಿತಗಾರರು ತಮ್ಮ ತಮ್ಮಲ್ಲಿ ಒಗ್ಗಟ್ಟಾಗುವರು. ಹಾಗೂ ಈ ತೆರನಾಗಿ ಅನವಶ್ಯಕವಾಗಿ ವಿಷಯವು ಗಂಭೀರವಾಗುವುದು. ಒಳಿತು ಇದರಲ್ಲಿಯೇ ಇದೆ. ಈ ಪ್ರದೇಶಗಳನ್ನು ಅಮಾದುಲ್ ಮುಲ್ಕ ಹಾಗೂ ನಿಜಾಮ್ ಶಾಹ್‌ನಿಗೆ ಒಪ್ಪಿಸಿ ಅವರಿಗೆ ನಮ್ಮ ವಿಧೇಯನನ್ನಾಗಿಸುವುದು'.

ಸುಲ್ತಾನ್ ಬಹಾದ್ದೂರ್‌ನ ಮರಳುವಿಕೆ :

ಬುರ್ಹಾನ್ ನಿಜಾಮ್‌ಶಾಹ್ ಹಾಗೂ ಅಮಾದುಲ್ ಮುಲ್ಕ, ಮೀರಾಮೊಹಮ್ಮದ್‌ಷಾಹ್‌ನ ಸಲಹೆಯ ಮೇರೆಗೆ ಸುಲ್ತಾನ್ ಬಹಾದ್ದೂರನ ಹೆಸರಿನಲ್ಲಿ 'ಖುತ್ಬಾ' ಓದಿಸಿದರು. ಹಾಗೂ ತನ್ನ ಸೇವಕರನ್ನು ಕೊಡುಗೆ ಹಾಗೂ ಕಾಣಿಕೆಗಳೊಂದಿಗೆ ಅವನ ಸೇವೆಯಲ್ಲಿ ಕಳುಹಿಸಿದರು. ಸುಲ್ತಾನ್ ಬಹಾದ್ದೂರನು ದಖ್ಖನಿಗಳ ವೈರತ್ವದ ವಿಚಾರವನ್ನು ಮನದಿಂದ ತೆಗೆದುಹಾಕಿದನು. ಹಾಗೂ ಗುಜರಾತಕ್ಕೆ ಮರಳಿದನು.

ಬುರ್ಹಾನ್ ನಿಜಾಮ್‌ಷಾಹ್‌ನು ಅಹ್ಮದ್ ನಗರಕ್ಕೆ ಆಗಮಿಸಿದನು. ಮೀರಾಮೊಹ್ಮದ್‌ಷಾಹ್‌ನು ಅವನಿಗೆ ಈ ಸಂದೇಶ ನೀಡಿದನು. 'ನೀವು ಕೊಟ್ಟಂತಹ ವಚನವನ್ನು ಪೂರೈಸಿರಿ, ಪಾತ್ರಿ ಹಾಗೂ ಮಹಾವರ್‌ದ ಕೋಟೆಗಳನ್ನು ಆನೆಗಳೊಂದಿಗೆ ಅಮಾದುಲ್‌ಮುಲ್ಕನಿಗೆ ಒಪ್ಪಿಸಿರಿ' ಅದರ ಉತ್ತರವಾಗಿ ಬುರ್ಹಾನ್‌ನು ಮೂರು ಆನೆಗಳು ಯಾವುವು, ರಾನೂರಿಯ ಯುದ್ಧದಲ್ಲಿ ಅವನಿಗೆ ದಕ್ಕಿದ್ದವು. ಮೀರಾ ಮೊಹ್ಮದಷಾಹ್‌ನಿಗೆ ಕಳುಹಿಸಿ ಕೊಟ್ಟನು. ಹಾಗೂ ಅಮಾದುಲ್ ಮುಲ್ಕನನ್ನು ಕಡೆಗಣಿಸಿದನು. ಹಾಗೂ ಮೊಹಮ್ಮದ್‌ಶಾಹ್‌ನ ಪ್ರಶ್ನೆಗೆ ಯಾವುದೇ ಉತ್ತರ ನೀಡಲಿಲ್ಲ.

ಮೀರಾ ಮೊಹಮ್ಮದ್ ಶಾಹ್‌ನು ತನ್ನ ಉದ್ದೇಶವನ್ನು ಈಡೇರಿಸಬಯಸುತ್ತಿದ್ದನು. ಯಾವಾಗ ಅದು ಪೂರ್ತಿಯಾಯಿತೋ ಅವನು ಬುರ್ಹಾನ್ ನಿಜಾಮ್‌ಶಾಹ್‌ನೊಂದಿಗೆ ಅಮಾದುಲ್ ಮುಲ್ಕನ ಕುರಿತು ಏನನ್ನೂ ಹೇಳಲಿಲ್ಲ. ಹಾಗೂ ಬುರ್ಹಾನ್‌ನೊಂದಿಗೆ ಮೊದಲಿಗಿಂತಲೂ ಹೆಚ್ಚು ಸ್ನೇಹವನ್ನು ಪ್ರದರ್ಶಿಸತೊಡಗಿದನು.

ಸುಲ್ತಾನ್ ಬಹಾದ್ದೂರನ ಮುನಿಸು:

ಎರಡನೆ ವರ್ಷ ಬುರ್ಹಾನ್ ನಿಜಾಮ್‌ಶಾಹ್‌ನು ಶಾಹ್‌ತಾಹೀರ್‌ನಿಗೆ ತನ್ನ ದೂತನಾಗಿಸಿ ಉತ್ಕೃಷ್ಟ ಕೊಡುಗೆಗಳೊಂದಿಗೆ ಹಾಗೂ ಕೆಲವು ಪ್ರಸಿದ್ಧ ಆನೆಗಳೊಂದಿಗೆ ಸುಲ್ತಾನ್ ಬಹಾದ್ದೂರ್‌ನ ಸೇವೆಯಲ್ಲಿ ಗುಜರಾತಿಗೆ ಕಳುಹಿಸಿದನು. ಸುಲ್ತಾನ್ ಬಹಾದ್ದೂರನು ಶಾಹ್‌ತಾಹೀರ್‌ನನ್ನು ಭೇಟಿ ಮಾಡಲು ತಡಮಾಡಿದನು. ಹಾಗೂ ಮೀರಾ ಮೊಹಮ್ಮದ್‌ಶಾಹ್‌ನಿಗೆ ಹೀಗೆ ಬರೆದನು. "ನನಗೆ ತಿಳಿದು ಬಂದಿರುವುದೇನೆಂದರೆ ಬುರ್ಹಾನ್ ನಿಜಾಮನು ನನ್ನ ಹೆಸರಿನ 'ಖುತ್ಬಾ' ಕೇವಲ ಒಂದು ಸಲ ಓದಿಸಿದ್ದಾನೆ'. ಮೀರಾ ಮೊಹಮ್ಮದ್ ಶಾಹ್‌ನು ಉತ್ತರಿಸಿದನು. "ಬುರ್ಹಾನ್‌ನು ನಿಮ್ಮ ವಿಧೇಯನಾಗಿದ್ದಾನೆ. ಒಂದು ವೇಳೆ ಅವನ ಯಾವುದೇ ನಡತೆಯು ನಿಮ್ಮ ಇಚ್ಛೆಯ ವಿರುದ್ಧವಾಗಿ ಜರುಗಿದ್ದರೆ ತಾವು ದಯವಿಟ್ಟು ಕ್ಷಮಿಸಿರಿ ಹಾಗೂ ಅವನ ಮನವಿಯಂತೆ ಅವನ ದೂತನಾದ ಶಾಹ್ ತಾಹೀರ್‌ನಿಗೆ ಭೇಟಿಯ ಅವಕಾಶ ನೀಡಿರಿ".

ಸುಲ್ತಾನ್ ಬಹಾದ್ದೂರ್ ಹಾಗೂ ಶಾಹ್ ತಾಹೀರ್‌ರ ಭೇಟಿ :

ಸುಲ್ತಾನ್ ಬಹಾದ್ದೂರ್‌ನು ಶಾಹ್ ತಾಹೀರ್‌ರೊಂದಿಗೆ ಭೇಟಿ ಮಾಡಿದನು. ಆದರೆ ಅವರ ಘನತೆಗೆ ತಕ್ಕಂತೆ ನಡೆದುಕೊಳ್ಳಲಿಲ್ಲ. ಹಾಗೂ ಗೌರವ ನೀಡಲಿಲ್ಲ. ಖುದಾವಂದ್‌ಖಾನ್‌ನು ಶಾಹ್ ತಾಹೀರ್‌ರ ವಿದ್ಯೆ, ಗೌರವ, ಹಾಗೂ ಅವರ ಘನತೆಯನ್ನು ಅರಿತವನಾಗಿದ್ದನು. ಅವನು ಸುಲ್ತಾನ್ ಬಹಾದ್ದೂರ್‌ನಿಗೆ ಸತ್ಯವನ್ನು ಮನಗಾಣಿಸಿದನು. ಸುಲ್ತಾನ್ ಬಹಾದ್ದೂರನು ಅದರ ನಂತರ ಶಾಹ್‌ತಾಹೀರ್‌ನೊಂದಿಗೆ ಬಹಳೇ ಸದ್ವರ್ತನೆಯೊಂದಿಗೆ ನಡೆದುಕೊಂಡನು. ಹಾಗೂ ಒಂದು ದೊಡ್ಡದಾದ ಸಭೆಯನ್ನು ಏರ್ಪಡಿಸಿದನು ಹಾಗೂ ಅದರಲ್ಲಿ ಶಾಹ್ ತಾಹೀರ್‌ರಿಗೆ ಆಮಂತ್ರಿಸಿದನು.

ಶಾಹ್ ತಾಹೀರ್‌ರಿಗೆ ಗೌರವಾರ್ಪಣೆ :

ಶಾಹ್‌ಸಾಹೇಬರು ಬಾದಶಾಹನ ಸಭೆಯಲ್ಲಿ ಆಗಮಿಸಿದರು. ಸುಲ್ತಾನ್ ಬಹಾದ್ದೂರನು ಇವರನ್ನು ಎಲ್ಲ ವಿದ್ವಾಂಸರು ಹಾಗೂ ಶ್ರೇಷ್ಠ ವ್ಯಕ್ತಿಗಳಿಗಿಂತ ಎತ್ತರದ ಪೀಠದಲ್ಲಿ ಕೂಡ್ರಿಸಿದನು ಹಾಗೂ ಹೀಗೆಂದನು. 'ತಮಗೆ ಗೌರವವನ್ನು ನೀಡುವಲ್ಲಿ ನನ್ನಿಂದ ಯಾವುದೇ ಬಗೆಯ ಕುಂದುಕೊರತೆಯುಂಟಾಗಿದ್ದರೆ ನನ್ನನ್ನು ದಯವಿಟ್ಟು ಕ್ಷಮಿಸಬೇಕು. ಮೊದಲನೆಯ ಭೇಟಿಯಲ್ಲಿ ನಾನು ತಮ್ಮೊಂದಿಗೆ ಸದ್ವರ್ತನೆಯಿಂದ ನಡೆದುಕೊಂಡಿರಲಿಲ್ಲ. ಅದರ ಸುಧಾರಣೆಗಾಗಿ ಈ ಸಭೆಯನ್ನು ಏರ್ಪಡಿಸಲಾಯಿತು. ಗುಜರಾತಿನ ಆ ಎಲ್ಲ ವಿದ್ವಾಂಸರು ಹಾಗೂ ಶ್ರೇಷ್ಠ ವ್ಯಕ್ತಿಗಳು, ಗಣ್ಯರು ಈ ಸಭಾಂಗಣದಲ್ಲಿ ಉಪಸ್ಥಿತರಿದ್ದರು. ಅವರು ಶಿಯಾ ಪಂಥದವರಾಗಿದ್ದರು. ಅವರಿಗೆ ಶಾಹ್‌ತಾಹೀರ್‌ರಿಗೆ ಸಲ್ಲುತ್ತಿರುವ ಗೌರವ ಸ್ವಲ್ಪವೂ ಹಿಡಿಸಲಿಲ್ಲ.

ಪ್ರಾಜ್ಞರ ಸಾಂಗತ್ಯ :

ಈ ಜನರು ಮನಸ್ಸಿನಲ್ಲಿಯೇ ಬಹಳಷ್ಟು ಮತ್ಸರ ಪಟ್ಟರು. ಹಾಗೂ ಕೊನೆಗೆ ಪರಿಸ್ಥಿತಿ ಎಲ್ಲಿಯವರೆಗೆ ತಲುಪಿತೆಂದರೆ ಮನಸ್ಸಿನ ಮಾತು ನಾಲಿಗೆಯ ಮೇಲೆ ಬಂದವು ಹಾಗೂ ಶಾಹ್ ಸಾಹೇಬರ ಘನತೆಗೆ ಧಕ್ಕೆಯುಂಟು ಮಾಡುವ ಮಾತನಾಡತೊಡಗಿದರು. ಸುಲ್ತಾನ್ ಬಹಾದ್ದೂರ್‌ನು ಖುದಾವಂದ್ ಖಾನ್‌ನಿಗೆ ಆಜ್ಞೆ ನೀಡಿದನು. ಅದೆಂದರೆ ಅವನು ಒಂದು ಇಂಥಹ ಸಭೆಯನ್ನು ಏರ್ಪಡಿಸಬೇಕು. ಅದರಲ್ಲಿ ಎಲ್ಲ ವಿದ್ವಾಂಸರಿಗೆ ಆಹ್ವಾನಿಸಬೇಕು. ಹಾಗೂ ಶಾಹ್ ಸಾಹೇಬರೊಂದಿಗೆ ವಿದ್ವತ್ ಸಂಭಾಷಣೆ ಜರುಗಿಸಲು ಅವಕಾಶ ಕಲ್ಪಿಸಬೇಕು. ಈ ಸಭೆಯು ಏರ್ಪಟ್ಟಿತು. ಪ್ರಾಜ್ಞರು ಶಾಹ್ ಸಾಹೇಬರೊಂದಿಗೆ ಮಾತುಕತೆ ನಡೆಸಿದರು. ಆಗ ಅವರ ಮೇಲೆ ಶಾಹ್ ಸಾಹೇಬರ ವಿದ್ವತ್ತಿನ ಪ್ರಭಾವವು ಉಂಟಾಯಿತು. ಈ ಜನರು ತಮ್ಮ ಹಿಂದಿನ ವ್ಯವಹಾರಕ್ಕಾಗಿ ಲಜ್ಜಿತಗೊಂಡರು. ಹಾಗೂ ಈ ಮಾತನ್ನು ಒಪ್ಪಿದರು. ಏನೆಂದರೆ ಶಾಹ್ ಸಾಹೇಬರು ಗುಜರಾತಿನ ವಿದ್ವಾಂಸರು ಹಾಗೂ ಶ್ರೇಷ್ಠ ವ್ಯಕ್ತಿಗಳಿಗಿಂತ ಎಲ್ಲ ರೀತಿಯಲ್ಲಿಯೂ ಉನ್ನತ ದರ್ಜೆಯುಳ್ಳವರಾಗಿದ್ದಾರೆ. ಸುಲ್ತಾನ್ ಬಹಾದ್ದೂರ್‌ನು ಎಲ್ಲ ಮಾತುಕತೆಗಳನ್ನು ಸ್ವತಃ ಆಲಿಸಿದನು. ಹಾಗೂ ಅವನ ಹೃದಯದಲ್ಲಿ ಶಾಹ್ ಸಾಹೇಬರ ಕುರಿತು ಗೌರವವು ಮೊದಲಿಗಿಂತಲೂ ಹೆಚ್ಚಾಯಿತು. ಶಾಹ್ ತಾಹೀರರು ಮೂರು ತಿಂಗಳಿನವರೆಗೆ ಗುಜರಾತಿನಲ್ಲಿಯೇ ಉಳಿದರು. ಅದರ ನಂತರ ಸುಲ್ತಾನ್ ಬಹಾದ್ದೂರ್‌ನು ಅವರಿಗೆ ಮರಳಲು ಅನುಮತಿ ನೀಡಿದನು.

ಸುಲ್ತಾನ್ ಬಹಾದ್ದೂರ್‌ನ ಗೌರವ ಹಾಗೂ ಶ್ರೇಷ್ಠತೆ :

ಹಿಜ್ರಿಶಕೆ ೯೩೭ರಲ್ಲಿ ಸುಲ್ತಾನ್ ಬಹಾದ್ದೂರನು ಖಿಲ್ಜಿ ಆಡಳಿತಗಾರರಿಗೆ ಸೋಲುಣಿಸಿದನು. ಹಾಗೂ 'ಮಂದು'ವನ್ನು ವಶಪಡಿಸಿಕೊಂಡನು. ಬುರ್ಹಾನ್ ನಿಜಾಮ್‌ಶಾಹ್ ಸುಲ್ತಾನ್ ಬಹಾದ್ದೂರನ ಗೌರವ ಹಾಗೂ ಶ್ರೇಷ್ಠತೆಯನ್ನು ಕಂಡು ದಂಗಾದನು. ಅವನು ಶಾಹ್ ತಾಹೀರ್‌ರಿಗೆ ನರಸು ಬ್ರಾಹ್ಮಣನೊಂದಿಗೆ ಎರಡನೆಯ ಸಲ ಸುಲ್ತಾನ್ ಬಹಾದ್ದೂರನಲ್ಲಿ ವಿಜಯದ ಅಭಿನಂದನೆಗಳನ್ನು ಅರ್ಪಿಸಲು ಕಳುಹಿಸಿಕೊಟ್ಟನು. ಯಾವಾಗ ಶಾಹ್ ತಾಹೀರ್‌ರು ಬುರ್ಹಾನ್ಪುರ ತಲುಪಿದರೋ ಆಗ ಆಕಸ್ಮಿಕವಾಗಿ ಸುಲ್ತಾನ್ ಬಹಾದ್ದೂರನೂ ಆಗಮಿಸಿದನು. ಮೀರಾ ಮೊಹಮ್ಮದ ಶಾಹ್‌ನು ಸುಲ್ತಾನ್ ಬಹಾದ್ದೂರನಿಗೆ ಶಾಹ್ ತಾಹೀರರನ್ನು ಭೇಟಿ ಮಾಡಿಸಿದನು.

ಮೀರಾ ಮೊಹಮದಶಾಹನ ಸದ್ವರ್ತನೆ :

ಮೀರಾ ಮೊಹಮ್ಮದ್‌ಶಾಹನು ಬಹಳೇ ಸದ್ವರ್ತನೆಯೊಂದಿಗೆ ಸುಲ್ತಾನ್ ಬಹಾದ್ದೂರನಿಗೆ ಬುರ್ಹಾನ್ ನಿಜಾಮ್‌ಶಾಹ್‌ನ ಸ್ನೇಹ ಸೌಹಾರ್ದದ ಕುರಿತು ನಂಬಿಕೆ ಮೂಡಿಸಿದನು. ಹಾಗೂ ಹೀಗೆ ಹೇಳಿದನು. 'ಇದು ನನ್ನ ಅಭಿಪ್ರಾಯವಿದೆ

ತಾವು ಬುರ್ಹಾನ್ ನಿಜಾಮಶಾಹನ ಮೇಲೆ ದಯೆ ಹಾಗೂ ಕರುಣೆ ತೋರಿ ಅವನಿಗೆ ನಿಮ್ಮ ಹಿತೈಷಿ ಮಾಡಿಕೊಳ್ಳಬೇಕು.' ಸುಲ್ತಾನ್ ಬಹಾದ್ದೂರ್‌ನು ತನಗೆ ತಾನು ಶ್ರೇಷ್ಠನೆಂದು ಬಗೆಯುತ್ತಿದ್ದನು. ಹಾಗೂ ದೆಹಲಿ ಸುಲ್ತಾನರ ಸಮನೆಂದು ಸ್ವಪ್ನ ಕಾಣುತ್ತಿದ್ದನು. ಅದಕ್ಕಾಗಿ ಅವನು ಮೀರಾ ಮೊಹಮ್ಮದ್ ಶಾಹ್‌ನ ಮಾತಿಗೆ ಬೆಲೆ ಕೊಟ್ಟನು. ಮೊಹ್ಮದ್ ಶಾಹ್, ಶಾಹ್ ತಾಹೀರ್‌ರೊಂದಿಗೆ ಬಹಳೆ ಸದ್ವರ್ತನೆಯೊಂದಿಗೆ ನಡೆದುಕೊಂಡನು. ಅವರಿಗೆ ಕಾಣಿಕೆ, ಕೊಡುಗೆಗಳೊಂದಿಗೆ ಪುರಸ್ಕರಿಸಿದನು. ಹಾಗೂ ಬೇಗನೇ ಅಹ್ಮದ್ ನಗರದತ್ತ ಕಳುಹಿಸಿದನು. ಏಕೆಂದರೆ ಬುರ್ಹಾನ್ ನಿಜಾಮ್‌ಶಾಹ್‌ನನ್ನು ಇಲ್ಲಿ ಕರೆತರಬೇಕು. ಹಾಗೂ ಅವನ ಭೇಟಿಯನ್ನು ಸುಲ್ತಾನ್ ಬಹಾದ್ದೂರನೊಂದಿಗೆ ಮಾಡಿಸಬೇಕು.

ಬುರ್ಹಾನ್‌ಪುರಕ್ಕೆ ಬುರ್ಹಾನ್ ನಿಜಾಮನ ಮರಳುವಿಕೆ :

ಶಾಹ್ ತಾಹೀರ್‌ರು ಬೇಗ ಬೇಗನೆ ಗುರಿಯತ್ತ ಸಾಗುತ್ತ ಅಹ್ಮದ್ ನಗರಕ್ಕೆ ತಲುಪಿದರು. ಹಾಗೂ ಬುರ್ಹಾನ್ ನಿಜಾಮ್ ಶಾಹ್‌ನಿಗೆ ತಮ್ಮೊಂದಿಗೆ ಮರಳಲು ಹೇಳಿದರು. ಮೊದಲಲ್ಲಿ ಬುರ್ಹಾನ್‌ನು ಪ್ರಯಾಣವನ್ನು ನಿರಾಕರಿಸಿದನು. ಆದರೆ ನಂತರ ನರಸು ಬ್ರಾಹ್ಮಣನ ಹೇಳಿಕೆಯ ಮೇಲೆ ಒಪ್ಪಿದನು. ಅವನು ತನ್ನ ಜ್ಯೇಷ್ಠ ಪುತ್ರ ಶಹಜಾದಾಹುಸೇನ್‌ನಿಗೆ ವಾರಿಸುದಾರನಾಗಿ ನೇಮಿಸಿದನು. ಎಲ್ಲ ಪ್ರಾಂತ್ಯದ ಕಾರ್ಯಕೆಲಸಗಳನ್ನು ನರಸುಬ್ರಾಹ್ಮಣನಿಗೆ ಒಪ್ಪಿಸಿದನು. ಹಾಗೂ ಏಳು ಸಾವಿರ ಕಾಲಾಳು ಹಾಗೂ ಸವಾರರನ್ನು ಜೊತೆಗೆ ಕರೆದುಕೊಂಡು ಶಾಹ್ ತಾಹಿರ್‌ರೊಂದಿಗೆ ಬುರ್ಹಾನ್‌ಪುರಕ್ಕೆ ಹೊರಟನು.

ಚಾಣಕ್ಯದೇವಿ ಗ್ರಾಮದಲ್ಲಿ ವಾಸ :

ಬುರ್ಹಾನ್ ನಿಜಾಮ್‌ಶಾಹ್‌ನು ಖ್ವಾಜಾ ಇಬ್ರಾಹಿಮನಿಗೆ ತನ್ನ ದೂತನನ್ನಾಗಿಸಿ ತನಗಿಂತ ಮೊದಲು ಮೀರಾ ಮೊಹಮ್ಮದ್ ಶಾಹ್‌ನ ಬಳಿ ಕಳುಹಿಸಿದ್ದನು. ಅವಶ್ಯಕ ಕೆಲಸದ ಕುರಿತು ಮೊದಲೇ ಮಾತುಕತೆ ನಡೆಸಬೇಕೆಂದು ಇಚ್ಛಿಸಿದ್ದನು. ಬುರ್ಹಾನ್ ನಿಜಾಮ್ ಚಾಣಕ್ಯದೇವಿ ಗ್ರಾಮಕ್ಕೆ ತಲುಪಿದನು. ಅದು ತಾಪ್ತಿ ನದಿಯ ದಡದಲ್ಲಿದೆ. ಮೊಹಮ್ಮದ್ ಶಾಹ್‌ನು ಅವನನ್ನು ಬರಮಾಡಿಕೊಂಡನು ಹಾಗೂ ಭೇಟಿ ಮಾಡಿದನು. ಮಾತುಕತೆಯ ನಡುವೆ ಮೊಹಮ್ಮದ್ ಶಾಹ್‌ನು ಹೀಗೆಂದನು. 'ಹೀಗೆ ಕರಾರು ಆಗಿರುವುದು ಏನೆಂದರೆ ಸುಲ್ತಾನ್ ಬಹಾದ್ದೂರನು ಸಿಂಹಾಸನದ ಮೇಲೆ ಆಸೀನರಾಗಿರಬೇಕು ಹಾಗೂ ನಾವು ಅವನೆದುರಿಗೆ ಕೈಕಟ್ಟಿ ಸಲಾಂ ಮಾಡಬೇಕು'

ಶಾಹ್ ತಾಹೀರರೊಂದಿಗೆ ಚರ್ಚೆ :

ಬುರ್ಹಾನ್ ನಿಜಾಮ್‌ಶಾಹ್‌ನು ಶಾಹ್ ತಾಹೀರ್‌ರಿಗೆ ಏಕಾಂತದಲ್ಲಿ ಕರೆದನು ಹಾಗೂ ಅವರೊಂದಿಗೆ ಹೀಗೆ ಹೇಳಿದನು. 'ನನ್ನಿಂದ ಇದು ಎಂದಿಗೂ ಸಾಧ್ಯವಾಗಲಾರದು.

ಅದೆಂದರೆ ಸುಲ್ತಾನ್ ಬಹಾದ್ದೂರನು ಸಿಂಹಾಸನಾ ರೂಢನಾಗಿರಬೇಕು. ಹಾಗೂ ನಾನು ಅವನ ಎದುರಿಗೆ ಕೈಕಟ್ಟಿ ನಿಲ್ಲುವೆನು. ಒಳಿತು ಇದರಲ್ಲಿಯೇ ಇದೆ. ಏನೆಂದರೆ ಭೇಟಿಯ ವಿಚಾರವನ್ನು ಕೈಬಿಡುವುದು ಹಾಗೂ ಎಲ್ಲ ವಿಷಯಗಳನ್ನು 'ಖ್ವಾಜಾ'ರ ಮೇಲೆಯೇ ಬಿಟ್ಟುಕೊಡುವುದು' ಶಾಹ್ ತಾಹೀರ್‌ರು ಹೀಗೆ ಉತ್ತರಿಸಿದರು. 'ಜಗತ್ತಿನ ವ್ಯವಹಾರದ ಬೇಡಿಕೆ ಇದಾಗಿದೆ. ಏನೆಂದರೆ ಸಮಯಕ್ಕೆ ತಕ್ಕಂತೆ ಒಂದು ದಿನಕ್ಕಾಗಿ ಯಾರದೇ ಎದುರಿಗೆ ಕೈಕಟ್ಟಿ ನಿಂತು ಜೀವನ ಪೂರ್ತಿ ನೆಮ್ಮದಿಯಿಂದ ಇರುವುದಾಗಿದೆ.'

ಒಂದು ಸೂಕ್ತ ಯೋಜನೆ :

ಬುರ್ಹಾನ್ ನಿಜಾಮ್‌ಶಾಹ್‌ನು ಬಹಳೇ ಬುದ್ಧಿವಂತ ವ್ಯಕ್ತಿಯಾಗಿದ್ದನು ಹಾಗೂ ವಿವೇಕಿಯಾಗಿದ್ದನು. ಆ ಕಾರಣಕ್ಕೆ ಅವನು ಶಾಹ್‌ತಾಹೀರ್‌ರ ಸಲಹೆಯಂತೆ ನಡೆದುಕೊಳ್ಳಲು ನಿಶ್ಚಯಿಸಿದನು. ಈ ಮಾತುಕತೆಯ ನಡುವೆ ಶಾಹ್‌ಸಾಹೇಬರಿಗೆ ಒಂದು ಯೋಜನೆ ಹೊಳೆಯಿತು. ಹಾಗೂ ಅವರು ಬುರ್ಹಾನ್‌ನಿಗೆ ಹೀಗೆ ಹೇಳಿದರು. 'ನನ್ನ ಹತ್ತಿರ ಪವಿತ್ರ ಕುರ್‌ಆನಿನ ಅಮೂಲ್ಯ ಹಸ್ತಬರಹದ ಪ್ರತಿಯೊಂದು ಇದೆ. ಅದು ಹಜ್ರತ್ ಅಮೀರುಲ್ ಮೋಮಿನಿನ್ ಅಲಿ ಇಬ್ನ ಅಬಿ ತಾಲಿಬ್‌ರ ಅಮೃತ ಹಸ್ತದಿಂದ ಬರೆಯಲ್ಪಟ್ಟಿದೆ. ಸುಲ್ತಾನ್ ಬಹಾದ್ದೂರ್‌ನು ಈ ಪವಿತ್ರ ಕುರ್‌ಆನಿನ ಬರಹದ ಪುಟವನ್ನು ನೋಡಲು ಉತ್ಸುಕಇರುವನು. ನನ್ನ ಯೋಚನೆಯಿದೆ ನಾವು ಖುದಾವಂದ್ ಖಾನ್‌ನನ್ನು ಈ ಅಮೂಲ್ಯವಾದ ಪುಟದ ಇರುವಿಕೆಯ ಕುರಿತು ತಿಳಿಸುವುದು ಹಾಗೂ ಭೇಟಿಯ ಸಮಯದಲ್ಲಿ ಅದನ್ನು ಜೊತೆಗೆ ಒಯ್ಯೋಣ. ಕಾರಣ ಸುಲ್ತಾನ್ ಬಹಾದ್ದೂರ್‌ನು ಈ ಪವಿತ್ರ ಕುರ್‌ಆನಿನ ಅಮೂಲ್ಯ ಪುಟಕ್ಕೆ ಗೌರವ ನೀಡುವುದಕ್ಕಾಗಿ ತನ್ನ ಸಿಂಹಾಸನದಿಂದ ಕೆಳಗೆ ಇಳಿದು ಬರಲೇ ಬೇಕಾಗುತ್ತದೆ.' ಶಾಹ್ ತಾಹೀರ್‌ರ ಈ ಯೋಜನೆಯಿಂದ ಬುರ್ಹಾನ್ ನಿಜಾಮ್‌ಶಾಹ್‌ನು ಬಹಳ ಆನಂದ ತುಂದಿಲನಾದನು. ಹಾಗೂ ಅವರ ದೂರದರ್ಶಿತ್ವವನ್ನು ಮೆಚ್ಚಿದನು.

ಎರಡನೆಯ ದಿನ ಬೆಳಿಗ್ಗೆ ಸೂರ್ಯೋದಯವಾದ ನಂತರ ಬುರ್ಹಾನ್ ನಿಜಾಮ್‌ಶಾಹ್‌ನು ಶಾಹ್ ತಾಹೀರ್ ಹಾಗೂ ಮೀರಾ ಮೊಹಮ್ಮದ್ ಶಾಹ್‌ನೊಂದಿಗೆ ಆ ಸ್ಥಳದ ಕಡೆಗೆ ಹೊರಟನು. ಯಾವ ಸ್ಥಳವು ಸುಲ್ತಾನ್ ಬಹಾದ್ದೂರ್ ಶಾಹ್‌ನೊಡನೆ ಭೇಟಿಗಾಗಿ ನಿಗದಿ ಮಾಡಲಾಗಿತ್ತು. ಯಾವಾಗ ಈ ಜನರು ಸುಲ್ತಾನ್ ಬಹಾದ್ದೂರ್‌ನ ವಾಸಸ್ಥಳದ ಸಮೀಪ ತಲುಪಿದರೋ ಆಗ ಶಾಹ್ ತಾಹೀರ್‌ರು ಪವಿತ್ರ ಪುಟವನ್ನು ತಮ್ಮ ತಲೆಯ ಮೇಲೆ ಹೊತ್ತುಕೊಂಡರು. ಹಾಗೂ ಶಾಹೀ ಅರಮನೆಯನ್ನು ಪ್ರವೇಶಿಸಿದರು. ಆಗ ಸುಲ್ತಾನ್ ಬಹಾದ್ದೂರ್‌ನು ಇವರನ್ನು ದೂರದಿಂದಲೇ ನೋಡಿದನು. ಹಾಗೂ ಖುದಾವಂದ್ ಖಾನ್‌ನಿಗೆ ಕೇಳಿದನು. 'ಶಾಹ್ ತಾಹೀರ್‌ರ ತಲೆಯ ಮೇಲೆ ಏನಿದೆ' ?

ಬುರ್ಹಾನ್ ನಿಜಾಮಶಾಹ್ ಹಾಗೂ ಸುಲ್ತಾನ್ ಬಹಾದ್ದೂರ್‌ರ ಭೇಟಿ :

ಖುದಾವಂದ್ ಖಾನ್‌ನು ಉತ್ತರಿಸಿದನು. 'ಇದು ಪವಿತ್ರ ಕುರ್‌ಆನಿನ ಒಂದು ಅಮೂಲ್ಯ ಹಸ್ತಬರಹವಿದೆ. ಅದನ್ನು ಹಜ್ರತ್ ಅಲಿ ಅಲೈಹಿಸ್ಸಲಾಮ್‌ರ ಅಮೃತ ಹಸ್ತದಿಂದ ಬರೆಯಲ್ಪಟ್ಟಿದೆ'. ಇದನ್ನು ಕೇಳುವುದೇ ತಡ ಸುಲ್ತಾನ್ ಬಹಾದ್ದೂರ್‌ನು ಎಚ್ಚರ ತಪ್ಪಿದವನಂತೆ ತನ್ನ ಸಿಂಹಾಸನದಿಂದ ಕೂಡಲೇ ಕೆಳಗಿಳಿದನು. ಹಾಗೂ ಆಹ್ವಾನಿಸಲು ಮುಂದಾದನು. ಅವನು ತಕ್ಷಣ ಆ ಪವಿತ್ರ ಹಾಗೂ ಅಮೂಲ್ಯ ಹಸ್ತ ಬರಹದ ಪ್ರತಿಯನ್ನು ತನ್ನ ಕೈಯಲ್ಲಿ ತೆಗೆದುಕೊಂಡನು. ಎರಡು ಮೂರು ಸಲ ಚುಂಬಿಸಿ, ಕಣ್ಣಿಗೆ ಒತ್ತಿಕೊಂಡನು. ಹಾಗೂ ಇದೇ ತೆರನಾಗಿ ನಿಂತಲ್ಲಿಯೇ ಬುರ್ಹಾನ್ ನಿಜಾಮ್‌ಶಾಹ್‌ನಿಂದ ಸಲಾಮ್ ಸ್ವೀಕರಿಸಿದನು.

ಮಾತುಕತೆಯ ಆರಂಭ :

ಸುಲ್ತಾನ್ ಬಹಾದ್ದೂರನು ಗುಜರಾತಿಭಾಷೆಯಲ್ಲಿ ಬುರ್ಹಾನ್ ನಿಜಾಮ್ ಶಾಹನ ಯೋಗಕ್ಷೇಮವನ್ನು ವಿಚಾರಿಸಿದನು. ಬುರ್ಹಾನ್‌ನು ಫಾರ್ಸಿ ಭಾಷೆಯಲ್ಲಿ ಉತ್ತರಿಸಿದನು. 'ಘನವಂತ ದಯಾಮಯಿ ಅಲ್ಲಾಹುವಿನ ಅಪಾರ ಕೃಪೆಯಿಂದ ಹಾಗೂ ತಮ್ಮ ಆದರ ಹಾಗೂ ಘನತೆಯ ಸಹಾಯದಿಂದ ನಾನು ಬಹಳ ಸಂತೋಷದಿಂದ ಇದ್ದೇನೆ' ಅದರ ನಂತರ ಸುಲ್ತಾನ್ ಬಹಾದ್ದೂರ್‌ನು ಸಿಂಹಾಸನಾರೂಢನಾದನು. ಹಾಗೂ ಬುರ್ಹಾನ್ ನಿಜಾಮ್ ಶಾಹ್, ಶಾಹ್ ತಾಹೀರ್ ಹಾಗೂ ಮೊಹಮ್ಮದ ಶಾಹ್ ಅವನ ಎದುರಿಗೆ ನಿಂತುಕೊಂಡರು. ಸುಲ್ತಾನ್ ಬಹಾದ್ದೂರನು ಯಾವಾಗ ಶಾಹ್ ತಾಹೀರ್‌ರಿಗೆ ತನ್ನೆದುರು ನಿಂತಿದ್ದನ್ನು ನೋಡಿದನೋ ಅವನಿಗೆ ಸರಿಯೆನಿಸಲಿಲ್ಲ. ಹಾಗೂ ಅವರಿಗೆ ಕೂಡ್ರಲು ವಿನಂತಿಸಿದನು. ಶಾಹ್ ಸಾಹೇಬರು ಅವನಿಗೆ ಉತ್ತರವಾಗಿ ಸಂಕೋಚ ವ್ಯಕ್ತಪಡಿಸಿದರು.

ಶಾಹ್ ತಾಹೀರ್‌ರಿಗೆ ಗೌರವ :

ಬಾದ್‌ಶಾಹನು ಮೂರು ಸಲ ಶಾಹ್ ಸಾಹೇಬರಿಗೆ ಕೂಡ್ರಲು ವಿನಂತಿಸಿದನು. ಕೊನೆಗೆ ಶಾಹ್ ಸಾಹೇಬರು ಹೀಗೆ ಉತ್ತರಿಸಿದರು.

'ಬಾದ್‌ಶಾಹ್‌ರ ಆದೇಶವನ್ನು ಪಾಲಿಸುವುದು ನನ್ನ ಕರ್ತವ್ಯವಾಗಿದೆ. ಆದರೆ ಪಾಲಿಸಲಾಗದ್ದಕ್ಕೆ ಕ್ಷಮೆ ಕೋರುತ್ತೇನೆ. ಬುರ್ಹಾನ್ ನಿಜಾಮನು ನನ್ನ ದೊರೆಯಾಗಿದ್ದಾನೆ. ಅವನು ನಿಂತುಕೊಂಡಿರುವಾಗ ನಾನು ಕೂಡ್ರುವುದು ಸಾಧುವಲ್ಲ. ಇದಕ್ಕೆ ಉತ್ತರವಾಗಿ ಸುಲ್ತಾನ್ ಬಹಾದ್ದೂರನು ಹೀಗೆಂದನು. 'ಇಲ್ಲಿ ಅವರೂ ಸಹ ಕೂತುಕೊಳ್ಳಲಿ ನಾನು ಅವರನ್ನು ಯಾವಾಗ ತಡೆದಿದ್ದೇನೆ'? ಶಾಹ್ ಸಾಹೇಬರು ಬುರ್ಹಾನ್ ನಿಜಾಮ್‌ಶಾಹನನ್ನು ಕೈಹಿಡಿದು ಅವನನ್ನು ಸೂಕ್ತ ಆಸನದ ಮೇಲೆ ಆಸೀನರಾಗಿಸಿದರು. ಮತ್ತು ತಾನು ಅವನಿಂದ ಸ್ವಲ್ಪೇ ದೂರದಲ್ಲಿ ಕೂತುಕೊಂಡರು.

ಪ್ರಶ್ನೋತ್ತರ :

ಅದರ ನಂತರ ಸುಲ್ತಾನ್ ಬಹಾದ್ದೂರನು ಮಾತುಕತೆ ಪ್ರಾರಂಭಿಸಿದನು. ಹಾಗೂ ಬಹಳ ವೇಳೆಯವರೆಗೆ ಫಾರ್ಸಿ ಭಾಷೆಯಲ್ಲಿ ಸಂಭಾಷಣೆಯಲ್ಲಿ ತೊಡಗಿದನು. ಅವನು ಬುರ್ಹಾನ್ ನಿಜಾಮ್ ಶಾಹ್‌ನಿಗೆ ಹೇಳಿದನು. 'ಪ್ರಸ್ತುತ ಸ್ಥಿತಿಯು ಗೊಂದಲಮಯವಾಗಿದೆ. ನಾಲ್ಕೂ ಕಡೆಗೆ ಕ್ಷೋಭೆ ಹರಡುವುದು ಚಾಲ್ತಿಯಲ್ಲಿದೆ. ಹೇಳಿ ಇಂಥ ಸ್ಥಿತಿಯಲ್ಲಿ ತಾವು ಯಾವ ತೆರನಾಗಿ ಬದುಕುತ್ತೀರಿ? ಬುರ್ಹಾನ್ ನಿಜಾಮ್ ಶಾಹ್‌ನು ಬಹಳೇ ನಮ್ರನಾಗಿ ಉತ್ತರಿಸಿದನು. ಯಾವ ಅಧೋಗತಿಯ ಗುರಿಯು ಉನ್ನತಿಯಾಗಿದೆಯೋ ಯಾವ ವಿರಹದ ಗುರಿಯು ಮಿಲನದಲ್ಲಿದೆಯೋ ಅದರ ಅಂತ್ಯದ ಯಶಸ್ಸಿನ ಸಿಹಿಯನ್ನು ನೆನಪಿಡಬೇಕಾಗಿದೆ. ಆರಂಭದ ನಿರಾಶೆಗಳನ್ನು ಮರೆಯಬೇಕಾಗಿದೆ. ದಯಾಮಯಿ ಅಲ್ಲಾಹುವಿಗೆ ಅನಂತ ಧನ್ಯವಾದಗಳು ಹಾಗೂ ಕೃತಜ್ಞತೆಗಳು. ನಾನು ಯಾವ ತೆರನಾಗಿ ತೊಂದರೆಗಳನ್ನು ಎದುರಿಸಿದೆನೋ ಇವತ್ತು ಅಲ್ಪ ಸಮಯದಲ್ಲಿಯೇ ಅದರ ಪರಿಹಾರವು ಲಭಿಸಿತು.

ಆನಂದದ ಅಭಿವ್ಯಕ್ತಿ :

ಬುರ್ಹಾನ್ ನಿಜಾಮನಿಂದ ಈ ನುಡಿಗಳನ್ನು ಆಲಿಸಿ ಸುಲ್ತಾನ್ ಬಹಾದ್ದೂರನು ಬಹಳೇ ಸಂತೋಷಪಟ್ಟನು. ಹಾಗೂ ಅವನನ್ನು ಬಹಳೇ ಪ್ರಶಂಶಿಸಿದನು. ಮೀರಾಮೊಹಮ್ಮದ್‌ಶಾಹ್‌ನನ್ನು ಕೇಳಿದನು. 'ನೀವು ಅವನ ಉತ್ತರ ಕೇಳಿದಿರಾ?' ಮೀರಾಮೊಹ್ಮದ್‌ಶಾಹ್‌ನು ಹೀಗೆಂದನು. 'ದೂರ ಇರುವುದರಿಂದಾಗಿ ನಾನು ಕೇಳಲಿಲ್ಲ'. ಇದಕ್ಕೆ ಉತ್ತರವಾಗಿ ಸುಲ್ತಾನ್ ಬಹಾದ್ದೂರನು ತನ್ನ ಪ್ರಶ್ನೆ ಹಾಗೂ ಬುರ್ಹಾನ್ ನಿಜಾಮನ ಉತ್ತರವನ್ನು ಎತ್ತರದ ಧ್ವನಿಯಲ್ಲಿ ಪುನರಾವರ್ತಿಸಿದನು. ಇದರಿಂದಾಗಿ ದರ್ಬಾರಿನ ಸಮಸ್ತ ಜನರು ಕೇಳಲು ಅನುಕೂಲವಾಯಿತು. ಅದರ ನಂತರ ಶಾಹ್ ತಾಹೀರ್ ಎದ್ದು ನಿಂತು ಕೈ ಕಟ್ಟಿಕೊಂಡು ಹೀಗೆ ಹೇಳಿದನು. 'ಈ ಎಲ್ಲವೂ ದೊರೆಯ ದಯೆಯ ಫಲವಾಗಿದೆ. ತಮ್ಮ ಕೃಪೆಯು ನಿತ್ಯ ನಿರಂತರ ನಮ್ಮೆಡೆಗೆ ಹೆಚ್ಚುತ್ತಲೇ ಹೋಗುವುದು ಎಂದು ನನ್ನ ನಿರೀಕ್ಷೆಯಿದೆ'.

ಸ್ನೇಹ ಸೇತು :

ಸುಲ್ತಾನ್ ಬಹಾದ್ದೂರರು ಸೊಂಟಪಟ್ಟಿಯಲ್ಲಿ ಕತ್ತಿ, ರತ್ನಖಚಿತ ಖಡ್ಗ, ಯಾವುದನ್ನು ತನ್ನ ದೇಹದ ಮೇಲೆ ಅಲಂಕರಿಸಿಕೊಂಡಿದ್ದರೋ ಅದನ್ನು ತನ್ನ ದೇಹದಿಂದ ಬೇರ್ಪಡಿಸಿ ಬುರ್ಹಾನ್ ನಿಜಾಮನಿಗೆ ತೊಡಿಸಿದರು. ಬುರ್ಹಾನ ನಿಜಾಮನು ತನಗಾಗಿ 'ಶಾಹ್' ಎಂಬ ಶಬ್ದವನ್ನು ಇನ್ನೂವರೆಗೂ ಉಪಯೋಗಿಸಿರಲಿಲ್ಲ. ಅದಕ್ಕಾಗಿ ಸುಲ್ತಾನ್ ಬಹಾದ್ದೂರ್‌ನು ಅವನಿಗೆ ಹೀಗೆಂದನು 'ನಿಜಾಮ್‌ಶಾಹ್'ವೆಂಬ ಬಿರುದು ನಿಮಗೆ ಮಂಗಳಕರವಾಗಲಿ'

ಕುದುರೆ ಸವಾರಿ :

ಕೆಲವು ಸಮಯದ ನಂತರ ಸುಲ್ತಾನ್ ಬಹಾದ್ದೂರ್‌ನು ಬುರ್ಹಾನ್ ನಿಜಾಮನಿಗೆ ತನ್ನ ಒಂದು ವಿಶೇಷ ಕುದುರೆ ಮೇಲೆ ಕೂಡ್ರಿಸಿದನು. ಹಾಗೂ ಅವನೊಂದಿಗೆ ಹೀಗೆಂದನು. 'ನನಗೆ ತಿಳಿದು ಬಂದಿರುವುದೇನೆಂದರೆ ನೀವು ಕುದುರೆ ಸವಾರಿಯ ಕಲೆಯಲ್ಲಿ ಪರಿಣಿತರಾಗಿದ್ದೀರಿ. ಈ ಅರಬಿ ಕುದುರೆ ನಿಮಗಾಗಿಯೇ ಇದೆ. ಮೈದಾನದಲ್ಲಿ ಎರಡು ಸುತ್ತಾದರೂ ತಿರುಗಿಸಿರಿ. ಬುರ್ಹಾನ್ ನಿಜಾಮನು ದಖ್ಖನ್ನಿನ ಸಂಪ್ರದಾಯದಂತೆ ಕುದುರೆಯ ಮೇಲೆ ಸವಾರನಾಗಿ ಅದನ್ನು ಸುತ್ತು ಹೊಡೆದನು. ಸುಲ್ತಾನ್ ಬಹಾದ್ದೂರನು ಅವನನ್ನು ಬಹಳ ಪ್ರಶಂಸಿಸಿದನು. ಹಾಗೂ ಹೀಗೆಂದನು 'ಈ ಸವಾರಿಯು ಕೊಡೆಯ ಹೊರತಾಗಿ ಸರಿಯೆನಿಸುವುದಿಲ್ಲ.'

ಅದರ ನಂತರ ಸುಲ್ತಾನ್ ಬಹಾದ್ದೂರನು ಆದೇಶಿಸಿದನು. ಏನೆಂದರೆ ಯಾವುದನ್ನು ಶ್ವೇತವರ್ಣದ ಕೊಡೆಯು ಬಾದಶಾಹ್ 'ಮಂದು'ವಿನಿಂದ ಪಡೆಯಲಾಗಿತ್ತೋ ಅದನ್ನು ಬುರ್ಹಾನ್ ನಿಜಾಮ್ ಶಾಹ್‌ನ ಶಿರದ ಮೇಲೆ ಛಾಯೆಯಾಗಿ ಅಚ್ಚಾದಿಸಬೇಕು. ಮೀರಾ ಮೊಹಮ್ಮದ್ ಶಾಹ್ ಹಾಗೂ ಖುದಾವಂದ್ ಖಾನ್‌ನಿಂದ ಸುಲ್ತಾನನು ಹೀಗೆಂದನು. ಬುರ್ಹಾನ್ ನಿಜಾಮ್‌ಶಾಹನನ್ನು ಇದೇ ತೆರನಾಗಿ ಕುದುರೆಯ ಮೇಲೆ ಸವಾರಿ ಮಾಡಿಸಿ ಹೊರಗಡೆಗೆ ಒಯ್ಯಬೇಕು. ಹಾಗೂ ಅವನ ತಂಗುದಾಣಕ್ಕೆ ತಲುಪಿ ಸುಲ್ತಾನ್ ಮೆಹಮೂದ್ ಖಿಲ್ಜಿಯ ತಂಗುದಾಣವನ್ನು ಅವನಿಗೆ ಕೊಡಬೇಕು. ಹಾಗೂ ಸಮಸ್ತ ಜನರು ಅವನಿಗೆ ಅಭಿನಂದಿಸಬೇಕು.

ಬಹುಮಾನ ಹಾಗೂ ಪುರಸ್ಕಾರ :

ಹೇಳಲಾಗುತ್ತದೆ. ಮರುದಿನ ಸುಲ್ತಾನ್ ಬಹಾದ್ದೂರ್‌ನು ಒಂದು ವೈಭವೋಪಿತ ಸಮಾರಂಭವನ್ನು ಏರ್ಪಡಿಸಿದನು. ತನ್ನ ಸಿಂಹಾಸನದ ಸುತ್ತಲೂ ನಾಲ್ಕು ಚಿನ್ನ ಲೇಪಿತ ಆಸನಗಳನ್ನು ಅಲಂಕರಿಸಿದನು. ಹಾಗೂ ಬುರ್ಹಾನ್ ನಿಜಾಮ್‌ಶಾಹ್, ಶಾಹ್‌ತಾಹೀರ್, ಮೀರಾಮೊಹಮ್ಮದ್‌ಶಾಹ್ ಹಾಗೂ ಶೇಖ ಆರೀಫ್ ವಲ್ದ ಶೇಖುಲ್ ಔಲಿಯಾರನ್ನು ಆಹ್ವಾನಿಸಿದನು. ಹಾಗೂ ಅವರನ್ನು ಅವುಗಳ ಮೇಲೆ ಆಸೀನರಾಗಿಸಿದನು. ಸುಲ್ತಾನ್ ಬಹಾದ್ದೂರನು ತುಂಬ ಉದಾತ್ತತೆಯಿಂದ ಹಾಗೂ ಉದಾರ ಮನೋಭಾವದಿಂದ ಅವರ ಆದರಾತಿಥ್ಯವನ್ನು ಮಾಡಿದನು. ಬುರ್ಹಾನ್ ನಿಜಾಮ್‌ಶಾಹ್‌ನನ್ನು ಐದು ಕುದುರೆ, ಎರಡು ಆನೆ, ಹಾಗೂ ಹನ್ನೆರಡು ನೂರು ಹವನಗಳನ್ನು ಅರ್ಪಿಸಿದನು. ಶಾಹ್ ತಾಹೀರ್‌ರಿಗೆ ಎರಡು ಕುದುರೆ ಹಾಗೂ ಒಂದು ಬಲಾಢ್ಯ ಆನೆಯನ್ನು ಕೊಡುಗೆಯಾಗಿ ನೀಡಿದನು.

ಪೋಲೋ ಸ್ಪರ್ಧೆ :

ಸುಲ್ತಾನ್ ಬಹಾದ್ದೂರ್‌ನು ಆಲಮ್ ಖಾನ್ ಮೇವಾತಿ ಪುತ್ರನಿಗೆ (ಯಾವನು

ತನ್ನ ತಂದೆಯ ಹುದ್ದೆಯನ್ನಲಂಕರಿಸಿದ್ದನು ಹಾಗೂ ಜಾಗೀರವನ್ನು ಪಡೆದಿದ್ದನೋ) ವಸ್ತ್ರ, ಸೊಂಟಪಟ್ಟಿ, ಕತ್ತಿ, ವಜ್ರ ಖಚಿತ ಖಡ್ಗಗಳಿಂದ ಸನ್ಮಾನಿಸಿದನು. ಸುಲ್ತಾನ್‌ನಿಗೆ ಇದೂ ಕೂಡ ತಿಳಿದಿತ್ತು. ಪೋಲೋ ಸ್ಪರ್ಧೆಯಲ್ಲಿ ಬುರ್ಹಾನ್ ನಿಜಾಮನು ತನಗೆ ತಾನೇ ಸಾಟಿಯಾಗಿದ್ದನು. ಅದಕ್ಕಾಗಿ ಅವನು ಬುರ್ಹಾನ್‌ನೊಂದಿಗೆ ಸುಮಾರು ಎರಡು ತಾಸಿನವರೆಗೆ ಮೈದಾನದಲ್ಲಿ ಈ ಸ್ಪರ್ಧಾನಿರತನಾದನು.

ಇನ್ನೂ ಹೆಚ್ಚಿನ ಕೃಪೆ :

ಅದರ ನಂತರ ಇಬ್ಬರೂ ಆಡಳಿತಗಾರರು ಕುದುರೆ ಸವಾರಿ ಮಾಡಿ ಅರಮನೆಯ ಹೊರಗೆ ಬಂದರು. ಖ್ವಾಜಾ ಇಬ್ರಾಹಿಂ ಹಾಗೂ ಸಾಬಾಜಿ ಹೊರಗೆ ನಿಂತು ಇವರಿಗಾಗಿ ಕಾಯುತ್ತಿದ್ದರು. ಅವರು ಬಹಳಷ್ಟು ವಸ್ತುಗಳನ್ನು ಸುಲ್ತಾನ್ ಬಹಾದ್ದೂರ್‌ನ ಸೇವೆಯಲ್ಲಿ ಕೊಡುಗೆಯಾಗಿ ಅರ್ಪಿಸಿದರು. ಹಾಗೂ ಅವನು ಅವುಗಳನ್ನು ಸ್ವೀಕರಿಸಿದನು. ಹಾಗೂ ಆ ಜನರನ್ನು ಬಹುಮಾನ ಹಾಗೂ ಕಾಣಿಕೆಗಳಿಂದ ಪುರಸ್ಕರಿಸಿದನು. ಯಾವ ಕಾಣಿಕೆಗಳನ್ನು ಬಾದ್‌ಶಾಹನಿಗೆ ಅರ್ಪಿಸಿದನೋ ಅವುಗಳಲ್ಲಿ ಪವಿತ್ರ ಹೈಕಲ್ಲಿನ ಒಂದು ಪುಟವೂ, ಒಂದು ಖಡ್ಗ ಅದರಲ್ಲಿ ಖಲೀಫಾ ಅಬ್ಬಾಸಿಯ ಹೆಸರನ್ನು ಕೆತ್ತಲಾಗಿತ್ತು. ಅದನ್ನು ಹಾಗೂ ನಾಲ್ಕು ಬಲಾಢ್ಯ ಆನೆಗಳನ್ನು ಹಾಗೂ ಎರಡು ಅರಬಿ ಕುದುರೆಗಳಿದ್ದವು. ಅವುಗಳಲ್ಲಿ ತಾನು ಎರಡು ಅರಬಿ ಕುದುರೆಗಳನ್ನು ಇಟ್ಟುಕೊಂಡು ಉಳಿದ ಎಲ್ಲವೂಗಳನ್ನು ದಖ್ಖನ್ನಿನ ಸಾಮ್ರಾಜ್ಯದೊಂದಿಗೆ ಬುರ್ಹಾನ್ ನಿಜಾಮ್‌ಶಾಹ್‌ನಿಗೆ ನೀಡಿದನು. ಹಾಗೂ ಮರಳಲು ಅನುಮತಿಯನ್ನೂ ಸಹ ನೀಡಿದನು.

ಬುರ್ಹಾನ್ ನಿಜಾಮ್ ಶಾಹನ ಮರಳುವಿಕೆ ಹಾಗೂ ದೌಲತಾಬಾದ್‌ದಲ್ಲಿ ವಾಸ :

ಮರಳಿ ಬರುವಾಗ ಬುರ್ಹಾನ್ ನಿಜಾಮ್‌ಶಾಹ್‌ನು ಕೆಲಸಮಯ ಬಾಲಾಘಾಟ್, ದೌಲತಾಬಾದ್‌ದಲ್ಲಿಯೂ ತಂಗಿದನು. ಶೇಖ ಬುರ್ಹಾನುದ್ದೀನ್ ಹಾಗೂ ಶೇಖ ಜೈನುದ್ದೀನ್‌ರ ಸಮಾಧಿಗಳ ಜಿಯಾರತ್ ಮಾಡಿದನು. ಹಾಗೂ ಇಲ್ಲಿಯ ಮುಜಾವರರನ್ನು ದೃಷ್ಟಿ ಹಾಗೂ ದಾನದ ರೂಪದಲ್ಲಿ ಬಹಳಷ್ಟು ಧನವನ್ನು ನೀಡಿದನು. ಈ ದಿನಗಳಲ್ಲಿ ಚಂಪಾ ಹೂಗಳು ನಾಲ್ಕು ಕಡೆಗೆ ಅರಳಿದ್ದವು. ಈ ಹೂಗಳ ಸೌಂದರ್ಯ ತಾರುಣ್ಯದಲ್ಲಿತ್ತು. ಬುರ್ಹಾನ್ ನಿಜಾಮನು ಖತಲೂ ಹೊಂಡದ ಬಳಿ ತಂಗಿದನು. ಹಾಗೂ ಕೆಲವು ದಿನ ಐಷಾರಾಮೀ ಜೀವನ ನಡೆಸಿದನು.

ನವೀನ ವಿಜಯಗಳು :

ಶಹಜಾದಾ ಹುಸೇನ್, ಕಾಲೂ ಬ್ರಾಹ್ಮಣ ಹಾಗೂ ಇತರ ಅಮೀರರು ಬುರ್ಹಾನ್ ನಿಜಾಮ್‌ಶಾಹ್‌ನ ಸೇವೆಯಲ್ಲಿ ಉಪಸ್ಥಿತರಾದರು ಹಾಗೂ ಅವನನ್ನು ಅಭಿನಂದಿಸಿದರು. ಏಕೆಂದರೆ ಬುರ್ಹಾನ್ ಸುಲ್ತಾನ್ ಬಹಾದ್ದೂರರ ನಡುವೆ ಪರಸ್ಪರ ಸಂಬಂಧಗಳು ಉತ್ತಮವಾಗಿದ್ದವು. ಅದಕ್ಕಾಗಿ ಬುರ್ಹಾನ್ ನಿಜಾಮನು ಆ ಪ್ರಾಂತ್ಯದ ರಾಜರ

ಕಡೆಗೆ ಗಮನ ನೀಡಿದನು. ಕಾನೂನೌಸಿಯ ಬುದ್ಧಿವಂತಿಕೆಯಿಂದಾಗಿ ಮರಾಠರ ಬಹಳಷ್ಟು ರಾಜರು ಯಾರು ಅಹ್ಮದ್ ನಿಜಾಮನ ಆಡಳಿತದ ಸಮಯದಿಂದ ಇಲ್ಲಿಯವರೆಗೆ ಅಂದರೆ ಸ್ವತಂತ್ರಾಡಳಿತಗಾರರಾಗಿದ್ದರೋ ಅವರು ಬುರ್ಹಾನ್ ನಿಜಾಮನ ವಿಧೇಯ ರಾಜರಾದರು. ಯಾವುದೇ ತೆರನಾದ ಯುದ್ಧಗಳಿಲ್ಲದೇ ಬುರ್ಹಾನ್‌ನು ಇಪ್ಪತ್ತು ಕೋಟೆಗಳನ್ನು ತನ್ನ ವ್ಯಾಪ್ತಿಯಲ್ಲಿ ತೆಗೆದುಕೊಂಡನು. ಬುರ್ಹಾನ್ ನಿಜಾಮನು ಶಾಹ್ ತಾಹೀರರಿಗೆ ಕೆಲವು ಒಳ್ಳೆಯ ಗ್ರಾಮಗಳನ್ನು ಬಹುಮಾನ ರೂಪದಲ್ಲಿ ಕೊಟ್ಟು ತನ್ನ ವಿಶ್ವಾಸಿಕನನ್ನಾಗಿಸಿದನು. ಖ್ವಾಜಾ ಇಬ್ರಾಹಿಮನಿಗೆ ಲತೀಫ್ ಖಾನ್ ಹಾಗೂ ಸಾಬಾಜಿಗೆ 'ಪ್ರತಾಪರಾಯ' ಬಿರುದಿನಿಂದ ಸನ್ಮಾನಿಸಿದನು. ಗುಜರಾತಿಗಳ ದಾಳಿಗಳಿಂದ 'ಬಾಗೇನಿಜಾಮ್' (ನಿಜಾಮ್ ಉದ್ಯಾನ) ದ ಕಟ್ಟಡಗಳು ವಿಧ್ವಂಸವಾಗಿದ್ದವು. ಅವುಗಳನ್ನು ಪುನಃ ನಿರ್ಮಿಸಿದನು.

ಕಲ್ಯಾಣ ಹಾಗೂ ಕಂಧಾರ ಕೋಟೆಗಳ ಮೇಲೆ ಇಸ್ಮಾಯಿಲ್ ಆದಿಲ್ ಶಾಹ್‌ನ ದಾಳಿ:

ಇಸ್ಮಾಯಿಲ್ ಆದಿಲ್‌ಶಾಹಿಯು ಹಿಜ್ರಿ ಶಕೆ ೯೩೮ ರಲ್ಲಿ ಕಲ್ಯಾಣ ಹಾಗೂ ಕಂಧಾರ್ ಕೋಟೆಯ ಮೇಲೆ ದಾಳಿ ನಡೆಸಿದನು. ಅಮೀರ್ ಬರೀದನು ಬುರ್ಹಾನ್ ನಿಜಾಮ್ ಶಾಹ್‌ನಿಂದ ಸಹಾಯವನ್ನು ಕೋರಿದನು. ನಿಜಾಮ್‌ಶಾಹ್‌ನು ಇಸ್ಮಾಯಿಲ್ ಆದಿಲ್ ಶಾಹ್‌ನ ಹೆಸರಿನಲ್ಲಿ ಒಂದು ಪತ್ರವನ್ನು ಬರೆದನು. ಹಾಗೂ ಈ ಕೋಟೆಗಳನ್ನು ವಶಪಡಿಸಿಕೊಳ್ಳದಂತೆ ತಡೆದನು. ಇಸ್ಮಾಯಿಲ್ ಆದಿಲ್‌ನು ಅವನಿಗೆ ಉತ್ತರವಾಗಿ ಒಂದು ಬಹಳೇ ಕಠೋರ ರೀತಿಯ ಪತ್ರವನ್ನು ಬುರ್ಹಾನ್‌ನಿಗೆ ಕಳುಹಿಸಿದನು. ಅದರಲ್ಲಿ ಹೀಗೆ ಬರೆಯಲಾಗಿತ್ತು.

ಬುರ್ಹಾನ್ ನಿಜಾಮ್ ಶಾಹಿ ಹೆಸರಿನಲ್ಲಿ ಇಸ್ಮಾಯಿಲ್ ಆದಿಲ್ ಶಾಹ್‌ನ ಪತ್ರ :

"ಇಂದಿನವರೆಗೂ ನೀನು ಈ ತೆರನಾದ ವರ್ತನೆಯನ್ನು ತೋರಿರಲಿಲ್ಲ. ಏನು ನೀನು ಅಹ್ಮದ್ ನಗರದ ಮೊದಲಿನ ಘಟನೆಗಳನ್ನು ಮರೆತೆಯ? ಹೀಗೆ ಈ ರೂಪದಲ್ಲಿ ಶೋಭೆಯಲ್ಲದ, ಹಾಗೂ ಮೃದುವಲ್ಲದ ಭಾಷೆಯಲ್ಲಿ ನನ್ನನ್ನು ಬರೆದಿದ್ದೀಯಾ, ಒಂದು ವೇಳೆ ಮಂದು ಬಾದ್‌ಶಾಹ್‌ರು ಉಪಯೋಗಿಸಿದ ಹಳೆಯ ಕೊಡೆ ಹಾಗೂ ನೆರಳಾಗಿಸುವ ವಸ್ತುಗಳನ್ನು ಪಡೆದುಕೊಂಡು ನೀನು ಗರ್ವಿಯಾಗಿದ್ದರೆ ನಿನಗಿದು ತಿಳಿದಿರಬೇಕು. ಈ ಮದವು ಅರ್ಥವಿಲ್ಲದುದಾಗಿದೆ. ಹಾಗೂ ಒಂದು ವೇಳೆ ನೀನು 'ಕಿತಾಬ್‌ಏಶಾಹಿ' ಬಿರುದಿನಿಂದ ನಿನಗೆ ನೀನು ದುರಭಿಮಾನಿಯಾಗಿದ್ದರೆ ನೆನಪಿಡು, ಇದೆಲ್ಲವೂ ಹುಸಿ ಕನಸು ಹಾಗೂ ಭ್ರಮೆಯಾಗಿದೆ, ಅದರ ಕಾರಣವು ಇದಾಗಿದೆ, ಏನೆಂದರೆ ಆ ಹಿರಿಮೆಯು ನನಗೆ ನಿನಗಿಂತಲೂ ಹೆಚ್ಚಾಗಿ ಲಭಿಸಿದೆ. ನಿನಗಂತೂ ಗುಜರಾತಿಯ ಬಾದ್‌ಶಾಹ್‌ನು ಇದನ್ನು ದಯಪಾಲಿಸಿದ್ದಾನೆ, ಆದರೆ ನನಗೆ ಇರಾನಿನ ಶಹಿನ್‌ಶಾಹ್‌ನು ಅವರು ಓರ್ವ ಕುಲೀನ ವಂಶಸ್ಥ ಸಯ್ಯದ್‌ರಾಗಿದ್ದಾರೆ. ಅವರು ಈ ಬಿರುದನ್ನು ನೀಡಿದ್ದಾರೆ".

ನೀನು ನಿನ್ನ ಕೃತ್ಯಗಳಿಂದ ದುರ್ವರ್ತನೆಗಳಿಗೆ ಕಡಿವಾಣ ಹಾಕು. ಇದರಲ್ಲಿಯೇ ನಿನ್ನ ಒಳಿತು ಇದೆ. ಇಲ್ಲದಿದ್ದರೆ ಮುಂದೆ ಜರುಗುವ ಪರಿಣಾಮಗಳಿಗೆ ನೀನೇ ಹೊಣೆಯಾಗುವಿ, ನಾನು ನನ್ನ ಖಡ್ಗವನ್ನು ತೆಗೆದುಕೊಂಡು ರಣಭೂಮಿಯಲ್ಲಿ ಉಪಸ್ಥಿತನಿರುವೆನು. ಸ್ವಲ್ಪ 'ಬಾಗೇನಿಜಾಮ್' ನಿಂದ ಹೊರಗೆ ಬಂದು ನನ್ನ ಮುಖಾಮುಖಿಯಾಗು ಹಾಗೂ ನಿನಗೆ ಆದಿಲ್‌ಷಾಹೀ ಶೌರ್ಯದ ಪರಿಚಯವನ್ನು ಮಾಡಿಕೊಡಲಾಗುವುದು.

ಆದಿಲ್ ಶಾಹಿ ಗಡಿಯತ್ತ ಹೊರಡುವಿಕೆ :

ಬುರ್ಹಾನ್ ನಿಜಾಮನು ಈ ಪತ್ರವನ್ನು ಪಡೆದು ಬಹಳೇ ಲಜ್ಜಿತನಾದನು. ಹಾಗೂ ಅದೇ ವೇಳೆ ಆಜ್ಞೆ ಹೊರಡಿಸಿದನು. ಶಾಹಿ ತಂಗುದಾಣವನ್ನು ತೆಗೆಯಿರಿ. ಹಾಗೂ ಮರುದಿನ ಯುದ್ಧಕ್ಕೆ ಹೊರಟನು. ಅವನು ಹಳ್ಳಿಯಾದ ಅಮಂದಪುರ ತಲುಪಿ ಯಾವುದು ಶಹಜಾದಾ ಹುಸ್ಯೆನ್‌ನ ಮಾತೆಯಿಂದ ಬೆಳೆಯಿಸಲ್ಪಟ್ಟಿತ್ತೋ ಕೆಲವು ದಿನಗಳವರೆಗೆ ಅಲ್ಲಿ ತಂಗಿದನು. ಹಾಗೂ ಸೈನ್ಯದ ಒಗ್ಗೂಡುವಿಕೆಯತ್ತ ಗಮನಹರಿಸಿದನು. ಯಾವಾಗ ಸಮಸ್ತ ರೀತಿಯಲ್ಲಿ ಸಿದ್ಧತೆಯಾಯಿತೋ ಆಗ ಬುರ್ಹಾನ್ ನಿಜಾಮನು ಬಹಳ ಆಡಂಬರದೊಂದಿಗೆ ಆದಿಲ್‌ಶಾಹಿ ಸರಹದ್ದಿನತ್ತ ಪಯಣ ಬೆಳೆಸಿದನು.

ನಿಜಾಮ್‌ಶಾಹಿ ಹಾಗೂ ಆದಿಲ್‌ಶಾಹಿಗಳ ನಡುವೆ ಯುದ್ಧ :

ಆದಿಲ್‌ಶಾಹಿ ಹಾಗೂ ನಿಜಾಮ್‌ಶಾಹಿ ಸೈನ್ಯಗಳು ಎದುರುಬದುರಾದವು ಹಾಗೂ ರಕ್ತಪಾತದ ಯುದ್ಧ ಪ್ರಾರಂಭವಾಯಿತು. ಎರಡೂ ಕಡೆಯ ಯೋಧರು ತಮ್ಮತಮ್ಮ ಶೌರ್ಯವನ್ನು ಧೀರೋದ್ಧಾತ್ತತೆಯಿಂದ ಪ್ರದರ್ಶಿಸಿದರು. ಹಾಗೂ ಸೈನಿಕರ ರಕ್ತದಿಂದ ನೆಲವನ್ನು ಕೆಂಪಗಾಗಿಸಿದರು. ಈ ಯುದ್ಧದ ಪರಿಣಾಮವು ನಿಜಾಮಶಾಹಿಗಳ ವಿರುದ್ಧವಾಯಿತು. ಇವರಿಗೆ ಸೋಲುಂಟಾಯಿತು. ಈ ಯುದ್ಧದಲ್ಲಿ ಬಿಜಾಪುರದ ವಲಸಿಗ ತರುಣಯೋಧರು ಬಹಳ ಉತ್ಕೃಷ್ಟ ರೀತಿಯಲ್ಲಿ ಶೌರ್ಯದ ಪ್ರದರ್ಶನ ನೀಡಿದರು. ಶೇಖ ಜಾಫರನು ಬೇರೆ ಶಸ್ತ್ರಸಜ್ಜಿತ ರಣವೀರರ ಸಹಾಯದಿಂದ ಬುರ್ಹಾನ್ ನಿಜಾಮ್‌ಶಾಹ್‌ನನ್ನು ಯುದ್ಧಭೂಮಿಯಿಂದ ಸುರಕ್ಷಿತವಾಗಿ ಹೊರತಂದನು. ಅಹ್ಮದ್ ನಗರದ ಎರಡು ಮೂರು ಸಾವಿರ ಸೈನಿಕರು ಈ ಯುದ್ಧದಲ್ಲಿ ಹತರಾದರು. ಆದಿಲ್ ಶಾಹಿಗಳು ನಿಜಾಮ್‌ಶಾಹಿಗಳ ಬಹಳಷ್ಟು ಕುದುರೆ, ಆನೆಗಳನ್ನು ತಮ್ಮ ವಶದಲ್ಲಿ ತೆಗೆದುಕೊಂಡನು. ಹಾಗೂ ಈ ತೆರನಾಗಿ ಬುರ್ಹಾನ್ ನಿಜಾಮನ ಸಂಪೂರ್ಣ ಗರ್ವವು ಮಣ್ಣು ಮುಕ್ಕಿತು.

ಇಸ್ಮಾಯಿಲ್ ಆದಿಲ್‌ಶಾಹ್ ಹಾಗೂ ಬುರ್ಹಾನ್ ನಿಜಾಮ್‌ಶಾಹ್‌ರ ಭೇಟಿ :

ಈ ಘಟನೆ ಜರುಗಿದ ಕೆಲವು ದಿನಗಳ ನಂತರ ಹಿಜ್ರಿ ಶಕೆ ೯೩೯ರಲ್ಲಿ ಆದಿಲ್‌ಶಾಹಿ

ಹಾಗೂ ನಿಜಾಮ್‌ಶಾಹಿ ಅಮೀರರು ಬಾದಶಾಹನ ಗಡಿಪ್ರದೇಶದಲ್ಲಿ ಭೇಟಿಮಾಡಿಸಿದರು. ಈರ್ವರೂ ಆಡಳಿತಗಾರರು ಹಲವಾರು ವಿಷಯಗಳ ಕುರಿತು ಆಪ್ತ ಸಮಾಲೋಚನೆ ಮಾಡಿ ಈ ನಿರ್ಧಾರಕ್ಕೆ ಬಂದರು. ಬುರ್ಹಾನ್ ನಿಜಾಮ್‌ಶಾಹ್‌ನು ಬರಾರ್‌ವನ್ನು ಗೆಲ್ಲಬೇಕು. ಹಾಗೂ ಇಸ್ಮಾಯಿಲ್ ಆದಿಲ್‌ಶಾಹ್ ತೆಲಂಗಾಣಾದ ಮೇಲೆ ವಿಜಯ ಸಾಧಿಸಬೇಕು ಹಾಗೂ ದಖ್ಖನ್ನಿನ ಪ್ರದೇಶವನ್ನು ಸಮಾನವಾಗಿ ಪರಸ್ಪರರು ಹಂಚಿಕೊಳ್ಳಬೇಕು.

ಇಸ್ಮಾಯಿಲ್ ಆದಿಲ್‌ಶಾಹನ ನಿಧನ :

ಅಲ್ಲಾಹುವಿನ ಇಚ್ಛೆಯಂತೆ ಅದೇ ಕಾಲದಲ್ಲಿ ಇಸ್ಮಾಯಿಲ್ ಆದಿಲ್‌ಶಾಹನು ಸಹಜ ಮೃತ್ಯುವನ್ನಪ್ಪಿದನು ಹಾಗೂ ಎಲ್ಲ ಷರತ್ತುಗಳು ಹಾಗೆಯೇ ಉಳಿದುಕೊಂಡವು ಹಾಗೂ ಯಾವುದರ ಮೇಲೂ ನಿರ್ಬಂಧವಾಗಲಿಲ್ಲ.

ಬುರ್ಹಾನ್ ನಿಜಾಮಶಾಹ್‌ನ 'ಷಿಯಾ' ಧರ್ಮ ಸ್ವೀಕರಿಸುವಿಕೆ :

ಒಂದು ದಿನ ಬುರ್ಹಾನ್ ನಿಜಾಮ್‌ಶಾಹ್‌ನು ಶಾಹ್ ತಾಹೀರ್‌ರಿಗೆ ಕೇಳಿದನು. 'ಶಿಯಾ' ಪಂಥದ ಕುರಿತು ವ್ಯಾಖ್ಯಾನ ನೀಡಿರಿ. ಶಾಹ್ ತಾಹೀರ್‌ರು ಬಾರಾ ಇಮಾಮ್‌ರ ಹೆಸರುಗಳನ್ನು ಹಾಗೂ ಅವರ ಸ್ತುತಿ, ಸ್ತೋತ್ರಗಳನ್ನು ವಿವರಿಸಿದರು ಹಾಗೂ ಹೀಗೆಂದರು. "ಈ ಧರ್ಮದ ವಿಶೇಷತೆಯೆಂದರೆ ಅಲಿ ಹಾಗೂ ಅವರ ವಂಶಜರೊಂದಿಗೆ ಅನನ್ಯ ಪ್ರೀತಿಯಿರಿಸಬೇಕು ಹಾಗೂ ಅವರ ಶತ್ರುಗಳನ್ನೂ ಇಷ್ಟಪಡಬಾರದು". ಬುರ್ಹಾನ್ ನಿಜಾಮ್‌ನು ಅದೇ ದಿನ ಶಿಯಾಪಂಥವನ್ನು ಸ್ವೀಕರಿಸಿದನು.

ಶಾಹ್ ತಾಹೀರ್‌ರ ಸಲಹೆ :

ಬಾದಷಾಹನೊಂದಿಗೆ ಶಹಜಾದಾ ಹುಸೈನ್, ಅಬ್ದುಲ್ ಖಾದೀರ್, ಅವನ ತಾಯಿಯಾದ ಅಮೀನಾಬೀಬಿ ಹಾಗೂ ಶಾಹೀ ವಂಶಸ್ಥರಾದ ಇತರರು ಬೇರೆ ಎಲ್ಲ ಸ್ತ್ರೀ ಪುರುಷರು 'ಷಿಯಾ' ಪಂಥವನ್ನು ಸ್ವೀಕರಿಸಿದರು. ಅದರ ನಂತರ ಬುರ್ಹಾನ್ ನಿಜಾಮನು ಬಾರಾ ಇಮಾಮರ ಹೆಸರಿನ 'ಖುತ್ಬಾ' ಜಾರಿಗೊಳಿಸಲು ನಿಶ್ಚಯಿಸಿದನು. ಮೂವರು ಖಲೀಫಾಗಳ ಹೆಸರನ್ನು 'ಖುತ್ಬಾ' ದಿಂದ ತೆಗೆದು ಹಾಕುವ ವಿಚಾರ ವ್ಯಕ್ತಪಡಿಸಿದನು. ಶಾಹ್ ತಾಹೀರ್‌ರು ಬಾದ್‌ಶಾಹ್‌ನನ್ನು ಅದರಿಂದ ತಡೆದರು ಹಾಗೂ ಹೀಗೆಂದರು. "ತಕ್ಷಣ ಹೀಗೆ ಮಾಡುವುದು ಒಳಿತಲ್ಲ. ಎಲ್ಲಕ್ಕಿಂತ ಮೊದಲು ಎಲ್ಲ ಪಂಥದವರನ್ನು ಒಗ್ಗೂಡಿಸುವುದು ಚೆನ್ನಾಗಿರುವ ವಿಚಾರವಾಗಿದೆ. ತಾವು ಇವರೆಲ್ಲರಿಗೆ ಹೀಗೆ ಹೇಳಿರಿ. "ನಾನು ಸತ್ಯಧರ್ಮದ ಆಪೇಕ್ಷಿಯಾಗಿದ್ದೇನೆ. ನೀವು ಎಲ್ಲರೂ ಪರಸ್ಪರ ವಿಚಾರಿಸಿ ಒಂದು ಇಂಥ ಧರ್ಮವನ್ನು ಪಾಲಿಸಿರಿ ಅದರಿಂದಾಗಿ ನಾನು ಸಹ ಅದನ್ನು ಸ್ವೀಕರಿಸುವೆನು."

ಪ್ರಾಜ್ಞರಲ್ಲಿ ಪರಸ್ಪರ ಚರ್ಚೆ :

ಬುರ್ಹಾನ್ ನಿಜಾಮ್‌ಶಾಹನು ಶಾಹ್ ತಾಹೀರ್‌ರ ಸಲಹೆಯನ್ನು ಪಾಲಿಸಿದನು. ಹಾಗೂ ಎಲ್ಲ ಪಂಥದ ಪ್ರಾಜ್ಞರನ್ನು ಯಾರು ಅಹ್ಮದ್‌ನಗರದಲ್ಲಿ ವಾಸಿಸುತ್ತಿದ್ದರು ಅವರೆಲ್ಲರನ್ನು ಸೇರಿಸಿದನು. ಈ ಪ್ರಾಜ್ಞರಲ್ಲಿ ಮುಲ್ಲಾ ಪೀರ್ ಮೊಹಮ್ಮದ್, ಉಸ್ತಾದ್ ಅಫ್ಜಲ್‌ಖಾನ್, ದ್ವಿತಿಯ ಹಾಗೂ ಮುಲ್ಲಾ ದಾವೂದ್ ದೆಹಲ್ವಿಯೂ ಸಹ ಇದ್ದರು. ಪ್ರತಿ ಶುಕ್ರವಾರಕ್ಕೆ ಕೋಟೆಯಲ್ಲಿ ಶಾಹ್ ತಾಹೀರ್‌ರ ಮದ್ರಸಾದಲ್ಲಿ ಎಲ್ಲ ವಿದ್ವಾಂಸರು ಸೇರುತ್ತಿದ್ದರು. ಹಾಗೂ ಪರಸ್ಪರ ಚರ್ಚಿಸುತ್ತಿದ್ದರು. ಪ್ರತಿಯೊಬ್ಬ ಪ್ರಾಜ್ಞನ ಪ್ರಯತ್ನವೂ ಇದೇ ಆಗಿರುತ್ತಿತ್ತು. ಅದೇನೆಂದರೆ ಅವನು ತನ್ನ ಧರ್ಮದ ಹೆಚ್ಚು ಹೆಚ್ಚು ಒಳಿತುಗಳನ್ನು ಪ್ರಸ್ತುತಪಡಿಸುವನು. ಹಾಗೂ ವಿರೋಧಿ ವಿದ್ವಾಂಸರ ಪಂಥದ ನಿರಾಕರಣೆ ಮಾಡುವದು. ಪ್ರಾಜ್ಞರ ಈ ಸಭೆಗಳಲ್ಲಿ ಒಮ್ಮೊಮ್ಮೆ ಬುರ್ಹಾನ್ ನಿಜಾಮನೂ ಸಹ ಪಾಲ್ಗೊಳ್ಳುತ್ತಿದ್ದನು.

ಬುರ್ಹಾನ್ ನಿಜಾಮಶಾಹ್‌ನ ಆಶ್ಚರ್ಯ ವ್ಯಕ್ತಪಡಿಸುವಿಕೆ :

ಬುರ್ಹಾನ್ ನಿಜಾಮ್‌ನು ಧಾರ್ಮಿಕ ವಿಷಯದಲ್ಲಿ ಪರಿಣಿತನಾಗಿರಲಿಲ್ಲ. ಅವನು ವಿದ್ವಾಂಸರ ಸಭೆಗಳಲ್ಲಿ ಭಾಗಿಯಾಗಿರುತ್ತಿದ್ದನು. ಆದರೆ ಅವರ ವಿದ್ವತ್ ಚರ್ಚೆ ಇವನಿಗೆ ಅರ್ಥವಾಗುತ್ತಿರಲಿಲ್ಲ. ಆರು ತಿಂಗಳಿನವರೆಗೆ ಇದೇ ತೆರನಾಗಿ, ಚರ್ಚೆ ಮುಂದುವರೆಯಿತು. ಆದರೆ ಅದರ ಯಾವುದೇ ಪರಿಣಾಮ ಹೊರಬೀಳಲಿಲ್ಲ. ಕೊನೆಗೆ ಬುರ್ಹಾನ್ ನಿಜಾಮ್ ಶಾಹ್‌ನು ಒಂದು ದಿನ ಶಾಹ್ ತಾಹೀರ್‌ರಿಗೆ ಹೀಗೆಂದನು. "ಆಶ್ಚರ್ಯದ ವಿಷಯವಾಗಿದೆ. ವಿದ್ವಾಂಸರು ಯಾವುದೇ ತಾರ್ಕಿಕ ಕೊನೆಗೆ ತಲುಪಲಿಲ್ಲ. ಪ್ರತಿಯೊಬ್ಬನೂ ತನ್ನ ಧರ್ಮವನ್ನು ಹೊಗಳುತ್ತಾನೆ ಹಾಗೂ ಇನ್ನೊಂದು ಪಂಥವನ್ನು ತೆಗಳುತ್ತಾನೆ. ಒಂದು ವೇಳೆ ಈ ಧರ್ಮದ ಹೊರತಾಗಿ ಬೇರೊಂದು ಧರ್ಮವಿದ್ದರೆ ತಿಳಿಸಿರಿ. ಕಾರಣ ನಾನು ಅದನ್ನು ಸ್ವೀಕರಿಸುವೆನು."

ಶಾಹ್ ತಾಹೀರ್‌ರ ಪಂಥ :

ಶಾಹ್‌ತಾಹೀರ್‌ರು ಉತ್ತರಿಸಿದರು. "ಇನ್ನೊಂದು ಧರ್ಮವಿದೆ ಹಾಗೂ ಆ ಪಂಥವು ಅಸ್ನಾಅಶ್ರಿ (ಬಾರಾ ಇಮಾಮ್‌ರ) ಪಂಥವಿದೆ. ಒಂದು ವೇಳೆ ನೀವು ಆದೇಶಿಸಿದರೆ ಈ ಪಂಥದ ಗ್ರಂಥಗಳನ್ನು ನಿಮ್ಮ ಸೇವೆಯಲ್ಲಿ ಪ್ರಸ್ತುತಪಡಿಸುವೆನು." 'ಅಸ್ನಾಅಶ್ರಿ' ಪಂಥದ ಓರ್ವ ವಿದ್ವಾಂಸರಾದ ಶೇಖ ಅಹ್ಮದ್ ನಜ್‌ಫಿಯನ್ನು ಬಾದ್‌ಶಾಹ್‌ನು ಕರೆಯಿಸಿದನು. ಹಾಗೂ ಅವರನ್ನು ಉಳಿದ ವಿದ್ವಾಂಸರೊಂದಿಗೆ ಚರ್ಚಿಸಲು ಹೇಳಿದನು. ಈ ವಿದ್ವಾಂಸನು ಎಲ್ಲ ವಿದ್ವಾಂಸರೊಂದಿಗೆ ಪರಸ್ಪರ ಧಾರ್ಮಿಕ ಚರ್ಚೆ ನಡೆಸಿದನು. ಶಾಹ್ ತಾಹೀರ್‌ರು ಅವನಿಗೆ ಸಹಾಯ ಮಾಡಿದರು. ಹಾಗೂ ಅವನ ವಾದವನ್ನು ಪುರಸ್ಕರಿಸುತ್ತಿದ್ದರು. ಯಾವಾಗ ವಿದ್ವಾಂಸರಿಗೆ ಅರಿವಾಯಿತೋ ಸ್ವತಃ ಶಾಹ್‌ತಾಹೀರ್‌ರು ಷಿಯಾಧರ್ಮಿಯಾಗಿದ್ದಾರೆ ಎಂದು ಆಗ ಅವರು

ವಿರೋಧವಾಗಿ ಚರ್ಚೆಯನ್ನು ಮಂಡಿಸತೊಡಗಿದರು. ವಾದ ವಿವಾದ ನಡೆದಾಗ ಆಗಿನ 'ಸುನ್ನಿ' ವಿದ್ವಾಂಸರು ಉತ್ತರಿಸಲಾಗದೇ ಸಭಾತ್ಯಾಗ ಮಾಡುತ್ತಿದ್ದರು.

ಷಿಯಾಪಂಥದ ಸಂಪ್ರದಾಯ :

ಬುರ್ಹಾನ್ ನಿಜಾಮ್‌ಶಾಹ್‌ನು ಯಾವಾಗ ಇದನ್ನು ತಿಳಿದುಕೊಂಡನೋ 'ಸುನ್ನಿ' ವಿದ್ವಾಂಸರು ಶಾಹ್‌ತಾಹೀರ್‌ರ ವಾದಗಳಿಗೆ ಉತ್ತರಿಸುತ್ತಿಲ್ಲವೋ ಹಾಗೂ ಅವರೆದುರು ತತ್ತರಿಸುತ್ತಾರೋ ಹಾಗೂ ನಿರುತ್ತರರಾಗಿ ಸಭೆಯಿಂದ ನಿರ್ಗಮಿಸುತ್ತಾರೆಯೋ ಅದನ್ನು ಕಂಡು ಬುರ್ಹಾನ್ ನಿಜಾಮನು ಮುಕ್ತವಾಗಿ 'ಷಿಯಾ' ಪಂಥವನ್ನು ಸ್ವೀಕರಿಸಿರುವುದನ್ನು ಘೋಷಿಸಿದನು. ಅದರ ಪರಿಣಾಮವು ಏನಾಯಿತೆಂದರೆ ಸುಮಾರು ಮೂರು ಸಾವಿರ ಜನರು (ಅವರಲ್ಲಿ ಷಾಹಿ ನಂಬಿಗಸ್ತರಾದ ಹಿಂದಿ, ತುರ್ಕಿ ಹಾಗೂ ಹಬ್‌ಷಿ ಗುಲಾಮರು, ಅಮೀರರು, ಪದಾಧಿಕಾರಿಗಳು ಹಾಗೂ ಕಸಗುಡಿಸುವವರು, ನೆಲಹಾಸು ಹಾಸುವವರು ಹಾಗೂ ಎಲ್ಲ ತರದ ಜನರು ಸೇರಿದ್ದರು) ಅಸ್ನಾಅಸ್ರಿ ಧರ್ಮವನ್ನು ಸ್ವೀಕರಿಸಿದರು.

ಇಮಾಮರ ಹೆಸರಿನ ಖುತ್ಬಾ :

ಬುರ್ಹಾನ್ ನಿಜಾಮ್‌ಶಾಹ್‌ನು ಮೂವರು ಖಲೀಫಾರ ಹೆಸರುಗಳನ್ನು ತೆಗೆಯಿಸಿದನು. ಹಾಗೂ ಅಹಲ್ ಬೈತ್ (ಹಜ್ರತ್ ಮುಹಮ್ಮದ್ ಪೈಗಂಬರರ ಕುಟುಂಬದವರು, ಸೈಯ್ಯದಾ, ಬೀಬಿಫಾತಿಮಾ, ಹಜ್ರತ್ ಅಲಿ ಹಾಗೂ ಅವರ ಮಕ್ಕಳು) ಹಾಗೂ ಅಹಲ್‌ಬೈತ್‌ದ ಧರ್ಮಗುರುಗಳು ಅವರ ಹೆಸರಿನ 'ಖುತ್ಬಾ' ಜಾರಿಗೊಳಿಸಿದನು. ಆ ಶ್ವೇತ ಕೊಡೆಯು ಯಾವುದನ್ನು ಸುಲ್ತಾನ್ ಬಹಾದ್ದೂರ್ ಗುಜರಾತಿಯು ಬುರ್ಹಾನ್ ನಿಜಾಮ್‌ಶಾಹ್‌ನಿಗೆ ನೀಡಿದ್ದನೋ ಅದರ ಬಣ್ಣವನ್ನು 'ಹಸಿರು' ಗೊಳಿಸಲಾಯಿತು.

'ಸುನ್ನಿ'ಗಳಲ್ಲಿ ದುಃಖ ಹಾಗೂ ಕೋಪದ ಅಲೆ :

ಸುನ್ನಿ ವಿದ್ವಾಂಸರಾದ ಮುಲ್ಲಾ ಪೀರ್ ಮೊಹಮ್ಮದ್ ಹಾಗೂ ಇತರರು ಯಾವಾಗ ಈ ಸ್ಥಿತಿಗತಿಗಳನ್ನು ಮನಗಂಡರೋ ಆಗ ಅವರು ಬಹಳ ಕೋಪೋದ್ರಿಕ್ತರಾದರು. ಸಂಪೂರ್ಣ ನಗರದಲ್ಲಿ ಒಂದು ವಿಚಿತ್ರವಾದ ಗೊಂದಲವುಂಟಾಯಿತು. ಅಮೀರರು ಹಾಗೂ ಪದಾಧಿಕಾರಿಗಳ ಒಂದು ಗುಂಪು ರಾತ್ರಿಯ ವೇಳೆಯಲ್ಲಿ ಪೀರ್ ಮೊಹಮ್ಮದ್‌ರ ಮನೆಗೆ ಹೋಯಿತು. ಈ ಜನರು ಮುಲ್ಲಾ ಸಾಹೇಬರಿಗೆ ಹೀಗೆಂದರು "ಈ ಶಾಹ್ ತಾಹೀರ್ ಎಲ್ಲಿಂದ ಮುಗಿಬಿದ್ದರು. ಅವನಂತೂ ನಮ್ಮ ಬಾದಶಾಹ್‌ರ ಮೇಲೆ 'ಜಾದೂ' ಮಾಡಿರುವನು ಹಾಗೂ ಅದೇ ಜಾದೂವಿನ ಬಲದಿಂದ ನಮ್ಮ ನಾಲಿಗೆಗೆ ಬೀಗ ಹಾಕಿದ್ದಾನೆ".

ಬುರ್ಹಾನ್ ನಿಜಾಮ್‌ಶಾಹ್‌ನ ವಿರುದ್ಧ ಕುತಂತ್ರ :

ಜನರು ಶಾಹ್‌ತಾಹೀರ್‌ನಿಂದ ಮುಕ್ತಿಯನ್ನು ಹೊಂದುವ ಯುಕ್ತಿಯನ್ನು ಯೋಚಿಸತೊಡಗಿದರು. ಕೆಲಜನರು ಶಾಹ್ ತಾಹೀರ್‌ನನ್ನು ಹತ್ಯೆಗೈಯ್ಯುವ ಸಲಹೆ ನೀಡಿದರು. ಈ ಮಾತಿಗೆ ಉತ್ತರವಾಗಿ ಮುಲ್ಲಾ ಪೀರ್ ಮೊಹಮ್ಮದ್ ಹೀಗೆಂದರು. "ಎಲ್ಲಿಯವರೆಗೆ ಬುರ್ಹಾನ್ ನಿಜಾಮ್‌ಶಾಹ್‌ನು ಜೀವಂತವಿರುವನೋ ಅಲ್ಲಿಯವರೆಗೆ ಶಾಹ್‌ತಾಹೀರ್‌ರ ಹತ್ಯೆಗೈಯ್ಯುವುದು ಅಸಾಧ್ಯವಾಗಿರುವುದು. ಎಲ್ಲಕ್ಕಿಂತ ಉಚಿತವಾದುದು ಇದಾಗಿದೆ, ಏನೆಂದರೆ ನಾವು ಮೊದಲು ಬುರ್ಹಾನ್ ನಿಜಾಮ್‌ಶಾಹ್‌ನನ್ನು ಪದಚ್ಯುತಗೊಳಿಸುವುದು ಹಾಗೂ ಅವನ ಸ್ಥಾನದಲ್ಲಿ ಯುವರಾಜನಾದ ಅಬ್ದುಲ್ ಖಾದರ್‌ರನ್ನು ಬಾದಶಾಹ್‌ನನ್ನಾಗಿಸುವುದು. ಅದರ ನಂತರ ಶಾಹ್‌ತಾಹೀರ್‌ನನ್ನು ಖಡ್ಗದ ರುಚಿ ತೋರಿಸುವುದು. ಏಕೆಂದರೆ ಇದರಿಂದ ಜನರಿಗೆ ಪಾಠ ದೊರೆಯುವುದು.

ಅಹ್ಮದ್ ನಗರದಲ್ಲಿ ದೊಂಬಿ :

ಬಿಜಾಪುರದ ಹಾಗೆ ಅಹ್ಮದ್‌ನಗರವೂ ದೊಂಬಿ, ಗೊಂದಲ, ಗದ್ದಲುಗಳ ತವರಾಯಿತು. ಯಾವ ತೆರನಾಗಿ ಅಲ್ಲಿ ಯೂಸೂಫ್ ಆದಿಲ ಶಾಹನ ವಿರುದ್ಧ ದೊಂಬಿಗಳೆದ್ದವೋ ಅದೇ ತೆರನಾಗಿ ಇಲ್ಲಿಯೂ ಪ್ರಜೆಗಳು ಬುರ್ಹಾನ್ ನಿಜಾಮ್‌ನ ವಿರುದ್ಧ ಸಿಡಿದೆದ್ದರು. ಮುಲ್ಲಾ ಪೀರ್ ಮೊಹಮ್ಮದ್ ೧೨೦೦೦ ಸೈನಿಕ ಹಾಗೂ ಸೇವಕರೊಂದಿಗೆ ಕೋಟೆಯ ದ್ವಾರದ ಎದುರಿಗೆ ಬಂದನು. ಕಾಲೆಚಬೂತರಾದ ಸಮೀಪ ತಂಗಿದನು. ಹಾಗೂ ಕೋಟೆಯ ದಿಗ್ಬಂಧನದ ಸಿದ್ಧತೆಯಲ್ಲಿ ತೊಡಗಿದನು. ಆ ಜನರು ಶಾಹ್ ತಾಹೀರ್ ಹಾಗೂ ಅವನ ಪುತ್ರರಿಗೆ ಕೋಟೆಯ ರಕ್ಷಣಾ ಅಧಿಕಾರಿಗಳ ವಶದಲ್ಲಿರಿಸಿ ದೊಂಬಿಯನ್ನುಂಟು ಮಾಡಿದರು.

ಬುರ್ಹಾನ್ ನಿಜಾಮ್‌ಶಾಹ್‌ನ ಚಿಂತೆ :

ಬುರ್ಹಾನ್ ನಿಜಾಮ್‌ಶಾಹ್‌ನಿಗೆ ಯಾವಾಗ ಈ ದೊಂಬಿಯ ಸುದ್ಧಿ ತಲುಪಿತೋ ಆಗ ಅವನು ಕೋಟೆಯ ದ್ವಾರಗಳನ್ನು ಮುಚ್ಚಲು ಆಜ್ಞೆ ಮಾಡಿದನು. ಎತ್ತರದ ಬುರುಜಗಳ ಮೇಲೆ ಸೈನ್ಯವು ಏರಬೇಕು ಹಾಗೂ ವೈರಿಗಳ ಮೇಲೆ ಗುಂಡಿನ ಸುರಿಮಳೆಗೈದು ಅವರನ್ನು ವಿನಾಶಗೊಳಿಸಬೇಕು. ಯಾವಾಗ ಪರಿಸ್ಥಿತಿಯು ಹದಗೆಟ್ಟಿತೋ ಆಗ ಬುರ್ಹಾನ್ ನಿಜಾಮ್‌ನು ಚಿಂತೆಗೀಡಾಗಿ ಶಾಹ್‌ತಾಹೀರ್‌ರೊಂದಿಗೆ ವಿಚಾರಿಸಿದನು. ಕೊನೆಗೆ ಈ ಗೊಂದಲದ ಪರಿಣಾಮವೇನಾಗಬಹುದು ? ಶಾಹ್ ತಾಹೀರ್‌ರಿಗೆ ಜ್ಯೋತಿಷ್ಯ ವಿದ್ಯೆಯಲ್ಲಿ ಬಹಳೇ ಪರಿಣತಿಯಿತ್ತು. ಹಾಗೂ ಮುಲ್ಲಾ ಶಮಶೋದ್ದೀನ್ ಜಾಫ್ರಿಯ ಶಿಷ್ಯರಾಗಿದ್ದರು. ಅವರು ತಕ್ಷಣವೇ ಲೆಕ್ಕ ಹಾಕಿ ಹೀಗೆ ಹೇಳಿದರು. ಕೋಟೆಯ ಆಯಾಭಾಗದ ಬಾಗಿಲು ತೆರೆದು ವೈರಿಯ ಮೇಲೆ ಆಕ್ರಮಣ ಮಾಡಬೇಕು. ಶತ್ರುಗಳು

ಚೆಲ್ಲಾಪಿಲ್ಲಿಯಾಗಿ ಓಡಿಹೋಗುವರು ಹಾಗೂ ಬಾದ್‌ಶಾಹ್‌ನಿಗೆ ವಿಜಯ ಪ್ರಾಪ್ತಿಯಾಗುವುದು.

ಬಂಡೆದ್ದವರಿಗೆ ಶಿಕ್ಷೆ :

ಆ ಸಮಯದಲ್ಲಿ ಬುರ್ಹಾನ್ ನಿಜಾಮ್‌ನು, ಅಮೀರರು, ನಾಲ್ಕುನೂರು ಸೈನಿಕರು ಹಾಗೂ ಒಂದು ಸಾವಿರ ಸೇವಕರು ಐದು ಆನೆಗಳನ್ನು ಜೊತೆಗೆ ತೆಗೆದುಕೊಂಡು ಹೊರಬಂದನು. ಶಾಹ್‌ತಾಹೀರ್‌ನು ಒಂದು ಹಿಡಿ ಮಣ್ಣನ್ನು ಎತ್ತಿಕೊಂಡು ಅದರ ಮೇಲೆ ಕುರ್‌ಆನಿನ ಯಾವುದೋ ಸೂಕ್ತ (ಆಯತ್) ಓದಿ ಅದನ್ನು ಶತ್ರುಗಳ ಮೇಲೆ ಎಸೆದನು. ಅದರ ನಂತರ ಷಾಹಿ ದೊರೆಯ ಕಡೆಯಿಂದ ದೂತರ ಒಂದು ತಂಡವನ್ನು ವೈರಿಗಳತ್ತ ಕಳುಹಿಸಿಲಾಯಿತು. ಆ ದೂತರು ಉಚ್ಚ ಸ್ವರದಲ್ಲಿ ಹೀಗೆ ಹೇಳಿದರು. "ಯಾವ ವ್ಯಕ್ತಿಯು ಬಾದಶಾಹ್‌ನ ವಿಧೇಯ ಹಾಗೂ ವಿಶ್ವಾಸಿಯಾಗಿರುವನೋ ಅವನು ನಮ್ಮ ಕಡೆಗೆ ಬರಬೇಕು. ಯಾರು ಬಂಡಾಯ ಎದ್ದಿರುವರೋ ಹಾಗೂ ಉಪ್ಪು ತಿಂದೂ ಕೂಡ ಎರಡು ಬಗೆದಿರುವರೋ ಅವರು ಮುಲ್ಲಾ ಪೀರ್ ಮೊಹಮ್ಮದ್‌ನ ಜೊತೆಗೆ ಇರಬೇಕು. ಅದರಿಂದ ಬೇರ್ಪಟ್ಟವರ ಮೇಲೆ ಸುಲ್ತಾನ್‌ರ ಪ್ರಳಯಾಂತಕ ಪ್ರಹಾರದಿಂದ ವಿನಾಶಗೊಳಿಸಲು ಸುಲಭವಾಗುವುದು.

ಮುಲ್ಲಾ ಪೀರ್ ಮೊಹಮ್ಮದ್‌ನ ಬಂಧನ :

ದೂತರ ಈ ಘೋಷಣೆ ಕೇಳಿ ಎಲ್ಲ ಜನರು ಬಾದ್‌ಶಾಹ್‌ನ ಕಡೆಗೆ ಬಂದರು. ಹಾಗೂ ಮುಲ್ಲಾ ಪೀರ್ ಮೊಹಮ್ಮದ್ ತನ್ನ ಕೆಲವು ಆಪ್ತ ಮಿತ್ರರೊಂದಿಗೆ ತನ್ನ ಮನೆಯ ಕಡೆಗೆ ಹೋದನು. ಬುರ್ಹಾನ್ ನಿಜಾಮ್‌ಶಾಹ್‌ನು ಅಹ್ಮದ್ ತಬ್ರೇಜಿ (ಯಾರು ಬಾದಶಾಹ್‌ನ ಆಪ್ತವಲಯದಲ್ಲಿದ್ದನು) ಹಾಗೂ ಖ್ವಾಜಗಿ ಮೆಹಮೂದ್ (ಯಾರು ಮಿರ್ಜಾ ಜಹಾಂಷಾಹ್‌ನ ಪುತ್ರನಾಗಿದ್ದನು) ರಿಗೆ ಮುಲ್ಲಾ ಪೀರ್ ಮೊಹಮ್ಮದ್‌ನ ಬಂಧನಕ್ಕಾಗಿ ನೇಮಿಸಲಾಯಿತು. ಮುಲ್ಲಾನನ್ನು ಬಂಧಿಸಿ ಶಾಹೀದರ್ಬಾರದಲ್ಲಿ ಹಾಜರು ಪಡಿಸಲಾಯಿತು. ಬುರ್ಹಾನ್ ನಿಜಾಮ್‌ಶಾಹ್‌ನು ಮುಲ್ಲಾನನ್ನು ಶಿರಚ್ಛೇದಗೈಯ್ಯಲು ಆಜ್ಞೆ ನೀಡಿದನು.

ಮುಲ್ಲಾನ ಬಿಡುಗಡೆ ಹಾಗೂ ಪುನರ್ನೇಮಕ :

ಶಾಹ್‌ತಾಹೀರ್‌ನು ಮುಲ್ಲಾ ಪೀರ್ ಮೊಹಮ್ಮದ್‌ನ ಈ ಹಿಂದಿನ ಅನುಪಮ ಸೇವೆಯನ್ನು ಅನುಲಕ್ಷಿಸಿ ಬುರ್ಹಾನ್ ನಿಜಾಮ್ ಶಾಹ್‌ನಿಗೆ ಅವನ ಕುರಿತು ಶಿಫಾರಸು ಮಾಡಿದನು. ಬುರ್ಹಾನ್‌ನು ಮುಲ್ಲಾನ ಶಿರಚ್ಛೇದದ ಆಜ್ಞೆಯನ್ನು ಹಿಂಪಡೆದುಕೊಂಡನು. ಹಾಗೂ ಅವನನ್ನು ಒಂದು ಕೋಟೆಯಲ್ಲಿ ಬಂಧಿಸಿಟ್ಟನು. ನಾಲ್ಕು ವರ್ಷದ ನಂತರ ತಾಹೀರ್‌ನ ಕೋರಿಕೆಯ ಮೇರೆಗೆ ಮುಲ್ಲಾ ಪೀರ್

ಮೊಹಮ್ಮದನಿಗೆ ಬಿಡುಗಡೆಗೊಳಿಸಲಾಯಿತು. ಬಾದ್‌ಶಾಹ್‌ನು ಮೊದಲಿನ ಹಾಗೆಯೇ ಮತ್ತೇ ಅವನನ್ನು ಮಂತ್ರಿಯನ್ನಾಗಿಸಿದನು.

ಬಾರಾ ಇಮಾಮ್‌ರ ಹೆಸರಿನ ದಾಸೋಹ ಮನೆ :

ಬುರ್ಹಾನ್ ನಿಜಾಮ್‌ಶಾಹ್‌ನು ಷಿಯಾ ಧರ್ಮವನ್ನು ಪ್ರಚಾರ ಹಾಗೂ ಪ್ರಸಾರಗೊಳಿಸುವಲ್ಲಿ ಮಂಚೂಣಿಯಲ್ಲಿ ನಿಂತು ಭಾಗವಹಿಸಿದನು. ಆ ಎಲ್ಲ ಪತಣ (ವಜೀಫಾ)ಗಳು ಯಾವುವು, ಸುನ್ನಿ ಧರ್ಮದ ಹೆಸರಿನಲ್ಲಿ ಜಾರಿಗೊಳಿಸಲಾಗಿತ್ತೋ ಅವುಗಳನ್ನು ಷಿಯಾ ಜನರಿಗಾಗಿ ವಕ್ಫ ಮಾಡಲಾಯಿತು. ಅಹ್ಮದ್‌ನಗರದ ಕೋಟೆಯ ಎದುರಲ್ಲಿ ನಾಲ್ಕು ಗೋಡೆಗಳನ್ನು ನಿರ್ಮಿಸಲಾಯಿತು. ಅವುಗಳ ನಡುವೆ ಒಂದು ಕಟ್ಟಡವನ್ನು ಕಟ್ಟಿಸಿ ಅದನ್ನು ಬಾರಾ ಇಮಾಮ್‌ರ ಲಂಗರ್‌ಖಾನಾ (ದಾಸೋಹಮನೆ) ಎಂದು ಹೆಸರಿಸಲಾಯಿತು. ಈ ಲಂಗರ್ ಖಾನಾದ ಖರ್ಚುವೆಚ್ಚಗಳಿಗಾಗಿ ಎಷ್ಟೋ ಗ್ರಾಮಗಳನ್ನು (ಉದಾಹರಣೆಗೆ ಜೋನ್‌ಪುರ, ದಸ್ನೂರ, ದಾಸಬಾಪುರ ಇತ್ಯಾದಿ) ದತ್ತಿ ನೀಡಲಾಯಿತು. ಇಲ್ಲಿ ದಿನನಿತ್ಯ ಭೋಜನ ತಯಾರಿಸಿ ವಿತರಿಸಲಾಗುತ್ತಿತ್ತು.

ಅಹ್ಮದ್‌ನಗರದಲ್ಲಿ ಪ್ರಾಜ್ಞರ ಸಮಾವೇಶ :

ಶಾಹ್‌ತಾಹೀರ್‌ರು ನಿಜಾಮ್‌ಶಾಹಿ ವಂಶದ ಬಹಳಷ್ಟು ಸೇವೆಗೈದರು. ಈ ವಂಶದ ಪುರೋಭಿವೃದ್ಧಿ ಹಾಗೂ ಸಮೃದ್ಧಿಗಾಗಿ ಶ್ರಮಿಸಿದರು. ಅವರು ಈ ಪ್ರಯತ್ನವನ್ನು ಮಾಡಿದರು. ಪ್ರವಾದಿ ವಂಶಸ್ಥರನ್ನು, ಶ್ರದ್ಧಾಳಗಳನ್ನು ಜಗತ್ತಿನ ಮೂಲೆ ಮೂಲೆಯಿಂದ ಬರಮಾಡಿಕೊಂಡು ಅಹ್ಮದ್ ನಗರದಲ್ಲಿ ಸೇರಿಸಿದರು. ಶಾಹ್ ಸಾಹೇಬರು ಶಾಹೀ ಭಂಡಾರದಿಂದ ನಿಧಿಯನ್ನು ಪಡೆದು ಇರಾಕ್, ಖರಾಸಾನ್, ಫಾರಸ್, ರೋಮ್, ಗುಜರಾತ್ ಹಾಗೂ ಆಗ್ರಾಕ್ಕೆ ಕಳುಹಿಸಿದರು. ಹಾಗೂ ಷಿಯಾ ವಿದ್ವಾಂಸರನ್ನು ಜ್ಞಾನಿಗಳನ್ನು ಅಹ್ಮದಾಬಾದಕ್ಕೆ ಬರಲು ಆಹ್ವಾನಿಸಿದರು. ಈ ಪ್ರಯತ್ನದ ಪರಿಣಾಮವಿದಾಯಿತು ಏನೆಂದರೆ ಕೆಲವೇ ಸಮಯದಲ್ಲಿ ಅಹ್ಮದ್‌ನಗರದಲ್ಲಿ ವಿದ್ವಾಂಸರು ಹಾಗೂ ಜ್ಞಾನಿಗಳ ಒಂದು ಅನುಪಮ ತಂಡವೇ ಸಮಾವೇಶಗೊಂಡಿತು.

ಅಹ್ಮದ್‌ನಗರ ಜ್ಞಾನದ ಸ್ವರ್ಗ :

ಖ್ವಾಜಾ ಮೋಯಿನ್ ಸಾಅದಿಯ ಜೊತೆಗೆ ಇಸ್ಮಾಯಿಲ್ ಸಫ್‌ವಿ ಅಹ್ಮದ್ ನಗರಕ್ಕೆ ಬಂದರು. ಅವರು ಒಂದು ದೀರ್ಘಾವಧಿಯವರೆಗೆ ಶಿರಾಜ್ ಪಟ್ಟಣದಲ್ಲಿ ಆಡಳಿತ ನಡೆಸಿದ ನಂತರ ಗುಜರಾತ್‌ಕ್ಕೆ ಬಂದರು. ಹಾಗೂ ಈ ಪ್ರಾಂತ್ಯದಲ್ಲಿ ನೆಲೆಸಿ ವಾಸಿಸತೊಡಗಿದರು. ಬುರ್ಹಾನ್ ನಿಜಾಮನ ಕಡೆಯಿಂದ ಶಾಹ್‌ತಾಹೀರ್‌ರು ಇಸ್ಮಾಯಿಲ್ ಸಫ್‌ವಿಯವರಿಗೆ ಹನ್ನೆರಡು ಸಾವಿರ ಹವನ್ ಕಳುಹಿಸಿದರು. ಅದರಿಂದ ಅವರು ಅಹ್ಮದ್ ನಗರಕ್ಕೆ ಬರಲೆಂದು ಆಪೇಕ್ಷೆ ಪಟ್ಟರು. 'ಶಾಹಹಸನ್ ಅಂಜು'ವಿಗೆ ಅಹ್ಮದನಗರಕ್ಕೆ ಕರೆಯಿಸಿ ಬಾದಶಾಹ್‌ನ ಆಪ್ತವಲಯದಲ್ಲಿ ಸೇರ್ಪಡಿಸಲಾಯಿತು.

ಅವರ ಹೊರತಾಗಿ ಶಾಹಜಾಫರ್, ಮುಲ್ಲಾ ಮುಹಮ್ಮದ್ ನಿಶಾಪುರಿ, ಮುಲ್ಲಾ ಅಲಿ ಗುಲ್ ಆಸ್ತ್‌ರ್ ಅಬಾದಿ, ಮುಲ್ಲಾ ರುಸ್ತುಮ್ ಜರ್ಜಾನಿ, ಮುಲ್ಲಾ ಮಾಜಂದ್‌ರಾನಿ, ಅಬುಲ್ ಬರಕಾತ್, ಮುಲ್ಲಾ ಅಜೀಜ್ ಅಲ್ಲಾ ಗಿಲಾನಿ, ಮುಲ್ಲಾ ಮುಹಮ್ಮದ್ ಇಮಾಮಿ ಅಸ್ತರಾಬಾದಿ, ಹಾಗೂ ಇನ್ನಿತರ ಬಹಳಷ್ಟು ವಿದ್ವಾಂಸರು ಹಾಗೂ ಜ್ಞಾನಿಗಳು ಅಹ್ಮದ್‌ನಗರಕ್ಕೆ ಆಗಮಿಸಿದರು. ಈ ನಗರವು ಜ್ಞಾನದ ಸ್ವರ್ಗವಾಗಿ ಪರಿವರ್ತಿತವಾಯಿತು.

ಧಾರ್ಮಿಕ ಅಸಹಿಷ್ಣುತೆ :

ಮದೀನಾದ ಪ್ರಸಿದ್ಧ ಧಾರ್ಮಿಕ ಗುರುಗಳಾದ ಸೈಯದ್ ಹಸನ್ ಮದನಿಯವರಿಗೆ ಬಾದ್‌ಶಾಹ್‌ನು ತನ್ನ ಅಳಿಯನನ್ನಾಗಿಸಿದನು. ಹಾಗೂ ಅವರಿಗೆ ಹಲವಾರು ಉತ್ಕೃಷ್ಟ ಗ್ರಾಮಗಳನ್ನು ಹಾಗೂ ಜಮೀನುಗಳನ್ನು ಜಾಗೀರು ರೂಪದಲ್ಲಿ ದಯಪಾಲಿಸಲಾಯಿತು. ಹಾಗೂ ಅಲ್ಲಿ ಅಸಹಾಯಕರು, ಬಡವರು, ಫಕೀರರು ಇತ್ಯಾದಿ ಜನರಿಗೆ ಜಮೀನನ್ನು ಹಂಚಲಾಯಿತು. ಈ ಧಾರ್ಮಿಕ ವಾತಾವರಣದ ಫಲವಿದಾಯಿತು. ಏನೆಂದರೆ ಅಹ್ಮದ್‌ನಗರದ ನಿರಕ್ಷರಕುಕ್ಷಿಗಳೂ ನಾಲ್ಕೂ ಖಲೀಫಾಗಳ ಹಿರಿಮೆ ಗರಿಮೆಗೆ ಧಕ್ಕೆ ತರಹತ್ತಿದರು. ಕೊನೆಗೆ ಸುಲ್ತಾನ್ ಮೆಹಮ್ಮೂದ್ ಗುಜರಾತಿ, ಮೀರಾ ಮುಬಾರಕ್ ಫಾರೂಕಿ, ಇಬ್ರಾಹಿಂ ಆದಿಲ್‌ಶಾಹ ಹಾಗೂ ಅಮಾದುಲ್ ಮುಲ್ಕರಿಂದ ಈ ಪರಿಸ್ಥಿತಿ ನೋಡಲಾಗಲಿಲ್ಲ. ಹಾಗೂ ಅವರು ಅಹ್ಮದ್‌ನಗರದ ಮೇಲೆ ವಿಜಯ ಸಾಧಿಸಿ ಪರಸ್ಪರರಲ್ಲಿ ಹಂಚಿಕೊಳ್ಳುವುದೆಂದು ನಿರ್ಧರಿಸಲಾಯಿತು.

ಹುಮಾಯೂನ್‌ನ ಹೆಸರಿನಲ್ಲಿ ಬುರ್ಹಾನ್ ನಿಜಾಮ ಶಾಹ್‌ನ ಕೋರಿಕೆ :

ಮೇಲೆ ಹೇಳಿದಂತೆ ಆಡಳಿತಗಾರರು ನಿಶ್ಚಯಿಸಿದ ನಿರ್ಧಾರದ ಸುದ್ದಿಯು ಬುರ್ಹಾನ್ ನಿಜಾಮ್‌ಶಾಹ್‌ನಿಗೆ ತಿಳಿಯಿತು. ಅವನು ತಕ್ಷಣ ರಾಸ್ತಿಖಾನ್ ಎಂಬ ವ್ಯಕ್ತಿಯನ್ನು ತನ್ನ ದೂತನನ್ನಾಗಿಸಿ ಶೆಹೆನ್‌ಷಾಹ್ ಹುಮಾಯೂನ್ ದೆಹಲಿಯ ಹತ್ತಿರ ರವಾನಿಸಿದನು. ಈ ದೂತನ ಕೈಯಲ್ಲಿ ಒಂದು ಮನವಿ ಪತ್ರವನ್ನು ಕಳುಹಿಸಲಾಗಿತ್ತು. ಆ ಸಮಯದಲ್ಲಿ ಶೇರ್‌ಶಾಹನ ದೊಂಬಿಯು ಹುಮಾಯೂನನ ಎಲ್ಲ ಗಮನವನ್ನು ತನ್ನೆಡೆಗೆ ಸೆಳೆದುಕೊಂಡಿತ್ತು. ಆ ಕಾರಣದಿಂದಾಗಿ ಈ ಮನವಿ ಪತ್ರವನ್ನು ಗಂಭೀರವಾಗಿ ಪರಿಗಣಿಸಲಾಗಲಿಲ್ಲ. ಹೀಗಾಗಿ ರಾಸ್ತಿಖಾನ್ ಅಸಫಲನಾಗಿ ಮರಳಿದನು.

ಆದಿಲ್‌ಶಾಹಿಗಳೊಡನೆ ಯುದ್ಧ ಹಾಗೂ ಬುರ್ಹಾನ್ ನಿಜಾಮ್‌ಶಾಹ್‌ನ ವಿಜಯ:

ಅದರ ನಂತರ ಬುರ್ಹಾನ್ ನಿಜಾಮ್‌ಶಾಹ್‌ನು ಬುರ್ಹಾನ್‌ಪುರ ಹಾಗೂ ಗುಜರಾತಿ ಆಡಳಿತಗಾರರಿಗೆ ಅಮೂಲ್ಯವಾದ ಕೊಡುಗೆ, ಕಾಣಿಕೆಗಳನ್ನು ಅರ್ಪಿಸಿ ಅವರಿಂದ ಸಸ್ನೇಹ ಸಂಬಂಧಗಳನ್ನು ಬೆಳೆಯಿಸಿದನು. ಹಾಗೂ ಅವರನ್ನು ತನ್ನ ಹಿತೈಷಿಯನ್ನಾಗಿಸಿಕೊಂಡನು. ಮತ್ತು ಬುರ್ಹಾನ್ ನಿಜಾಮನು ಇಸ್ಮಾಯಿಲ್ ಆದಿಲ್‌ನ

ತಿರಸ್ಕೃತ ಬಾಣಗುರಿಕಾರರನ್ನು ತನ್ನ ಬಳಿ ಸೇವೆಯಲ್ಲಿ ನೇಮಿಸಿಕೊಂಡನು. ಹಾಗೂ ಇವರನ್ನು ಜಾಗೀರುಗಳಿಂದ ಪುರಸ್ಕರಿಸಿದನು. ಹಾಗೂ ಅವರ ಸಹಾಯದಿಂದ ಬಿಜಾಪುರದ ಮೇಲೆ ದಾಳಿ ಮಾಡಿದನು. ಪರಸ್ಪರ ಎದುರಾಳಿಗಳಲ್ಲಿ ಭೀಕರ ರೂಪದ ಯುದ್ಧ ನಡೆಯಿತು. ಇದರ ಪರಿಣಾಮವಾಗಿ ಆದಿಲ್‌ಷಾಹಿಗಳಿಗೆ ಸೋಲು ಕಾಣಬೇಕಾಯಿತು. ಹಾಗೂ ಬುರ್ಹಾನ್ ನಿಜಾಮ್‌ಶಾಹ್ ವಿಜಯದ ಧ್ವಜ ಹಾರಿಸಿದನು. ಬುರ್ಹಾನ್‌ನು ಬಹಳಷ್ಟು ಆದಿಲ್‌ಷಾಹಿ ತೋಪುಗಳನ್ನು ಹಾಗೂ ಒಂದು ನೂರು ಆನೆಗಳನ್ನು ವಶಪಡಿಸಿಕೊಂಡನು. ಮತ್ತು ಅಹ್ಮದ್ ನಗರಕ್ಕೆ ಮರಳಿದನು.

ಬುರ್ಹಾನ್ ನಿಜಾಮ್‌ಶಾಹ ಹಾಗೂ ಇಬ್ರಾಹಿಂ ಆದಿಲ್‌ಶಾಹರ ನಡುವೆ ಇನ್ನಷ್ಟು ಯುದ್ಧಗಳು:

ಈ ವಿಜಯದ ನಂತರ ಬುರ್ಹಾನ್ ನಿಜಾಮಷಾಹನು ಬಹಳೇ ಖ್ಯಾತಿ ಹೊಂದಿದನು. ನಾಲ್ಕೂ ಕಡೆಗೆ ಆತನ ಶೌರ್ಯದ ಹಾಗೂ ಸಾಹಸಗಾಥೆ ಪ್ರಸಿದ್ಧಗೊಂಡಿತು. ಮೂರು ನಾಲ್ಕು ವರ್ಷಗಳ ಅವಧಿಯಲ್ಲಿ ಇಬ್ರಾಹಿಂ ಆದಿಲ್‌ಶಾಹ ಹಾಗೂ ಬುರ್ಹಾನ್ ನಿಜಾಮ್‌ಶಾಹನ ಮಧ್ಯೆ ಮೂರು ಸಲ ಯುದ್ಧ ಜರುಗಿತು. ಈ ಯುದ್ಧಗಳ ವಿವರವು ಯಾವುದೇ ಇತಿಹಾಸ ಗ್ರಂಥಗಳಲ್ಲಿ ನನಗೆ ಕಂಡು ಬಂದಿಲ್ಲ. ಆದರೆ ವಾಸ್ತವಾಂಶವು ನನಗೆ ತಿಳಿದಿದೆ ಏನೆಂದರೆ ಈ ಮೂರು ಯುದ್ಧಗಳಲ್ಲಿ ಬುರ್ಹಾನ್ ನಿಜಾಮಷಾಹ್‌ನಿಗೆ ವಿಜಯ ಪ್ರಾಪ್ತಿಯಾಯಿತು.

ಬಿಜಾಪುರದ ಮೇಲೆ ಬುರ್ಹಾನ್ ನಿಜಾಮ್‌ಷಾಹನ ದಾಳಿ :

ಹಿಜ್ರಿ ಶಕೆ ೯೪೯ ರಲ್ಲಿ ಬಿಜಾಪುರದ ಪ್ರಸಿದ್ಧ ಹಾಗೂ ಖ್ಯಾತ ಅಮೀರರಾದ ಅಸದ್‌ಖಾನ್ ಬಲಗ್ವಾನಿ ಹಾಗೂ ಇಬ್ರಾಹಿಂ ಆದಿಲ್‌ಶಾಹರ ನಡುವೆ ಭಿನ್ನಾಭಿಪ್ರಾಯವುಂಟಾಯಿತು. ಬುರ್ಹಾನ್ ನಿಜಾಮ್‌ಶಾಹನು ಅಮೀರ್ ಬರೀದ್‌ನನ್ನು ಜೊತೆಯಲ್ಲಿ ತೆಗೆದುಕೊಂಡು ಬಿಜಾಪುರದ ಮೇಲೆ ದಾಳಿ ಮಾಡಿದನು. ಹಾಗೂ ಧಾರ್ಮಿಕ ಸೌಹಾರ್ದಕ್ಕಾಗಿ ಅಸದ್‌ಖಾನ್ ಬಲಗ್ವಾನಿಯು ಬುರ್ಹಾನ್ ನಿಜಾಮ್‌ಶಾಹನಿಗೆ ಈ ಪ್ರಾಂತ್ಯದಲ್ಲಿ ಕರೆಯಿಸಿಕೊಂಡಿದ್ದಾರೆ ಎಂದು ಪ್ರಸಿದ್ಧಿಸಲಾಯಿತು. ಅದಕ್ಕಾಗಿ ಬಲಗ್ವಾನ್‌ದ ಕೋಟೆಯನ್ನು ಅವನ ವಶ ನೀಡಬೇಕು ಎಂದು ನಿರ್ಧರಿಸಲಾಯಿತು.

ಮಿರರ್ಜ ಮತ್ತು ಕಲ್ಹಾರ್‌ದ ವಿನಾಶ :

ಇಬ್ರಾಹಿಂ ಆದಿಲ್‌ಶಾಹ್‌ನಿಗೆ ಯಾವಾಗ ಈ ಸುದ್ದಿ ತಿಳಿಯಿತೋ ಆಗ ಅವನು ಬಹಳ ಚಿಂತಿತನಾದನು. ಹಾಗೂ ಬಿಜಾಪುರದ ಕೋಟೆಯಿಂದ ಹೊರಬರಲಿಲ್ಲ. ಬುರ್ಹಾನ್ ನಿಜಾಮ್ ಸೋಲಾಪುರದ ಬಳಿ ತಲುಪಿದನು. ಜೈನ್ ಖಾನ್‌ನ ಪರಗಣಗಳನ್ನು ವಶಪಡಿಸಿಕೊಂಡನು. ಹಾಗೂ ಅವರನ್ನು ಖ್ವಾಜಾಜಹಾನನ ವಶಕ್ಕೆ ಒಪ್ಪಿಸಿ, ಅದರ ನಂತರ ಅವನು ಬಲಗ್ವಾನಿನತ್ತ ನಡೆದನು. ಹಾಗೂ ಮಿರ್ಜ, ಕಲ್ಹಾರ್

ಹಾಗೂ ಮಾನ್‌ದಯಾಗಳನ್ನು ಪ್ರಳಯಾಂತಕ ರೂಪದಲ್ಲಿ ಪ್ರಹಾರ ಮಾಡಿ ವಿನಾಶಗೊಳಿಸಿದನು. ಈ ಪಟ್ಟಣಗಳಲ್ಲಿ ಎಂಥಹ ದೊಂಬಿ, ಗೊಂದಲ, ಗದ್ದಲವುಂಟಾಯಿತೆಂದರೆ ಅಲ್ಲಿ ಜನಸಮುದಾಯದ ಗುರುತು ಸಹಿತ ಉಳಿಯಲಿಲ್ಲ.

ಇಬ್ರಾಹಿಂ ಆದಿಲ್ ಶಾಹನು ಪರಾರಿಯಾದದ್ದು :

ಅಸದ್‌ಖಾನ್ ಬಲಗ್ವಾನಿಯಲ್ಲಿಯೇ ಇದ್ದನು. ಸುಳ್ಳು ಸುದ್ಧಿ ಹರಡಿರುವುದರಿಂದಾಗಿ ಅವನು ಇಬ್ರಾಹಿಂ ಆದಿಲ್‌ಷಾಹ್‌ನ ಸೇವೆಯಲ್ಲಿ ತೊಡಗಲಾರದಾಗಿದ್ದನು. ಅವನು ತನ್ನ ಸುರಕ್ಷೆಗಾಗಿ ಈ ಯುಕ್ತಿಯನ್ನು ಅಪ್ಪಿಕೊಂಡನು. ಆರು ಸಾವಿರ ಸೈನಿಕರೊಂದಿಗೆ ಬುರ್ಹಾನ್ ನಿಜಾಮ್‌ಶಾಹನೊಂದಿಗೆ ಸೇರಿಕೊಂಡನು. ಬುರ್ಹಾನ್‌ನು ಯಾವಾಗ ಇದನ್ನು ನೋಡಿದನೋ ದೈವವು ತನ್ನ ಕಡೆಗೆ ಒಲಿದಿದೆಯೆಂದು ಬಗೆದು ಅವನು ಬಿಜಾಪುರದತ್ತ ಹೊರಟನು. ಇಬ್ರಾಹಿಂ ಆದಿಲ್‌ಶಾಹನಲ್ಲಿ ಇಷ್ಟು ಶಕ್ತಿ ಹಾಗೂ ಸೈನಿಕ ಬಲವಿರಲಿಲ್ಲ. ಇದರಿಂದ ಅವನು ಬುರ್ಹಾನ್‌ನನ್ನು ಎದುರಿಸಲು ಸಿದ್ಧನಾಗಲಿಲ್ಲ. ಅದಕ್ಕೆ ಅವನು ಹಸನ್‌ಆಬಾದ್ ಗುಲ್ಬರ್ಗಾಕ್ಕೆ ಹೋದನು.

ಅಹ್ಮದ್‌ನಗರಕ್ಕೆ ಬುರ್ಹಾನ್‌ನ ಮರಳುವಿಕೆ :

ಬುರ್ಹಾನ್ ನಿಜಾಮನು ಇದನ್ನು ಯೋಚಿಸಿ ವೈರಿಯನ್ನು ಎದುರಿಸುವುದು ಈಗ ಸಮ್ಮತವಲ್ಲವೆಂದು ತಿಳಿದು ಅಮೀರ್‌ಬರೀದ್‌ನೊಂದಿಗೆ ಅಹ್ಮದ್‌ನಗರಕ್ಕೆ ಮರಳಿದನು. ವೈರಿಯು ಅಹ್ಮದ್‌ನಗರದ ಸರಹದ್ದಿನವರೆಗೂ ಅವನನ್ನು ಹಿಂಬಾಲಿಸಿದನು. ಹಾಗೂ ಈ ಸುತ್ತಮುತ್ತಲಿನ ಪರಗಣ ಹಾಗೂ ಹಳ್ಳಿಗಳನ್ನು ವಿನಾಶಗೊಳಿಸಿದನು. ಬುರ್ಹಾನ್ ನಿಜಾಮ್ ಹಾಗೂ ಅಮೀರ್ ಬರೀದ್‌ನು ಇಲ್ಲಿ ತಂಗುವುದು ಒಳಿತಲ್ಲ ಎಂದು ಬಗೆದರು. ಹಾಗೂ ದೌಲತಾಬಾದದತ್ತ ಪಯಣ ಬೆಳೆಸಿದರು. ಆಕಸ್ಮಿಕವಾಗಿ ಇಲ್ಲಿ ಅಮೀರ್ ಬರೀದ್ ಸಹಜ ಮೃತ್ಯುವನ್ನಪ್ಪಿದನು. ಬುರ್ಹಾನ್ ನಿಜಾಮ್‌ಶಾಹ್‌ನು ಈ ಸ್ನೇಹಿತನ ಅಗಲುವಿಕೆಯಿಂದ ಬಹಳ ವಿಷ್ವಲಿತಗೊಳಗಾದನು. ಬುರ್ಹಾನ್‌ನು ಶಾಹ್‌ತಾಹೀರ್, ಕಾಸಿಂ ಬೇಗ್ ಹಾಗೂ ಖ್ವಾಜಾ ಜಹಾನರ ಸಲಹೆಯಂತೆ ಇಬ್ರಾಹಿಂ ಆದಿಲ್‌ಶಾಹ್‌ನ ಆ ಪ್ರಾಂತ್ಯವು ಯಾವುದರಿಂದಾಗಿ ಈ ಎಲ್ಲ ಗೊಂದಲವುಂಟಾಗಿತ್ತು ಅದನ್ನು ಮರಳಿಸಿದನು.

ಗೊಲ್ಕೊಂಡಾಕ್ಕೆ ಶಾಹ್‌ತಾಹೀರ್‌ರು ಹೋಗಿದ್ದು :

ಸುಲ್ತಾನ್ ಕುತುಬ್‌ಷಾಹ್‌ನು ಹಿಜ್ರಿ ಶಕೆ ೯೫೦ ರಲ್ಲಿ ಸಿಂಹಾಸನಾಧೀಶನಾದನು. ಈತನ ಈ ಪಟ್ಟಾಭಿಷೇಕಕ್ಕೆ ಶುಭಾಶಯಗಳನ್ನರ್ಪಿಸಲು ಬುರ್ಹಾನ್ ನಿಜಾಮ್‌ಷಾಹ್‌ನು ಶಾಹ್‌ತಾಹೀರ್‌ರಿಗೆ ಗೊಲ್ಕೊಂಡಾಕ್ಕೆ ಕಳುಹಿಸಿದನು. ಕುತುಬ್ ಷಾಹ್‌ನು ಶಾಹ್‌ತಾಹೀರ್‌ರನ್ನು ಒಂದು ಕೆರೆಯ ಬಳಿಯಲ್ಲಿ ಭೇಟಿಯಾದನು. ಆ ಕೆರೆಯು ಅಹ್ಮದ್‌ನಗರದ ಹಾದಿಯಲ್ಲಿ ಗೊಲ್ಕೊಂಡಾದಿಂದ ೧೬ ಕೋಸ್ ದೂರದಲ್ಲಿದೆ. ಈ

ಭೇಟಿಯಲ್ಲಿ ಕುತುಬ್‌ಷಾಹ್ ಶಾಹ್‌ತಾಹಿರ್‌ರನ್ನು ಬಹಳಷ್ಟು ಆದರಪೂರ್ವಕವಾಗಿ ಕಂಡನು. ಹಾಗೂ ಎಷ್ಟು ಸನ್ನಡತೆಯಿಂದ ವರ್ತಿಸಿದನೆಂದರೆ ಒಬ್ಬ ಶಿಷ್ಯನು ತನ್ನ ಗುರುವಿಗೆ ಭೇಟಿಯಾಗುತ್ತಿದ್ದಾನೇನೋ ಎಂಬಂತ್ತಿತ್ತು. ಅದರ ನಂತರ ಷಾಹ್‌ತಾಹೀರ್‌ರಿಗೆ ತನ್ನ ಜೊತೆ ಗೋಲ್ಕೊಂಡಾಕ್ಕೆ ಕರೆತಂದನು.

ಇಬ್ರಾಹಿಂ ಆದಿಲ್‌ಶಾಹನ ಯುಕ್ತಿಪೂರ್ವಕ ನಡೆ :

ಆ ದಿನಗಳಲ್ಲಿ ಬುರ್ಹಾನ್ ನಿಜಾಮ್‌ಷಾಹ್‌ನು ವಾಗ್ದಾನ ಮುರಿದು ಕುತುಬ್‌ಷಾಹ್ ಹಾಗೂ ರಾಜಾರಾಂ ರಾಜನಿಗೆ ಆದಿಲ್‌ಷಾಹಿ ಸಾಮ್ರಾಜ್ಯದ ಪರಗಣಗಳ ಮೇಲೆ ದಾಳಿ ನಡೆಸಿ ವಶಪಡಿಸಿಕೊಳ್ಳಲು ಉತ್ತೇಜಿಸಿದನು. ಯಾವಾಗ ಷಾಹ್‌ತಾಹೀರ್‌ರು ಗೋಲ್ಕೊಂಡಾದಿಂದ ಮರಳಿದರು ಅಗಲೇ ಬುರ್ಹಾನ್ ನಿಜಾಮ್‌ಷಾಹ್‌ನು ಸ್ವತಃ ಸೋಲಾಪುರದತ್ತ ಹೊರಟನು. ಇಬ್ರಾಹಿಂ ಆದಿಲ್‌ಷಾಹ್‌ನು ಯಾವಾಗ ಇದನ್ನು ಗಮನಿಸಿದನೋ ವೈರಿಗಳು ನಾಲ್ಕು ಕಡೆಗಳಿಂದಲೂ ತನ್ನ ಮೇಲೆ ಕಾಕದೃಷ್ಟಿಯಿಟ್ಟುಕೊಂಡಿರುವರೋ ಆಗ ಆತನು ತನ್ನ ಐದು ಭಾಗಗಳುಳ್ಳ ಪ್ರಾಂತ್ಯಗಳ ಪ್ರದೇಶವನ್ನು ಬುರ್ಹಾನ್ ನಿಜಾಮ್‌ಶಾಹನ ವಶಕ್ಕೆ ನೀಡಿದನು. ಹಾಗೂ ರಾಜಾರಾಂ ರಾಜನಿಗೂ ಕೊಡುಗೆ ಕಾಣಿಕೆಗಳನ್ನು ನೀಡಿ ಸಂತೈಸಿದನು.

ಇರಾನಿನ ದೊರೆಯ ದೂತರ ಆಗಮನ :

ಅದೇ ಕಾಲದಲ್ಲಿ ಷಾಹ್ ಇಸ್ಮಾಯಿಲ್ ಸಫ್‌ವಿಯವರಿಗೆ ಈ ಸುದ್ದಿಯು ತಿಳಿಯಿತು ಏನೆಂದರೆ ಬುರ್ಹಾನ್ ನಿಜಾಮ್‌ಷಾಹ್‌ನು ಷಿಯಾ ಧರ್ಮ ಸ್ವೀಕರಿಸಿದನು ಅವನು ತನ್ನ ನಂಬಿಗಸ್ತನಾದ ಆಕಾ ಸುಲೈಮಾನ್ ತೆಹ್‌ರಾನಿ, ಯಾವನು ಮೆಹತರ್ ಜಮಾಲ್ ಎಂದು ಪ್ರಸಿದ್ದನಾಗಿದ್ದನು ಅವನನ್ನು ಅಹ್ಮದ್‌ನಗರಕ್ಕೆ ಕಳುಹಿಸಿದನು. ಅವನಿಗೆ ಬುರ್ಹಾನ್ ನಿಜಾವ್‌ಶಾಹನಿಗೆ ಶುಭಾಶಯಗಳನ್ನು ತಿಳಿಸಲು ಹೇಳಿದನು. ಇಸ್ಮಾಯಿಲ್‌ನ ಕಡೆಯಿಂದ ಒಬ್ಬ ತುರ್ಕಿ ಸೇವಕನಾದ ಶಾಹ ಕುಲಿಯೂ ಬುರ್ಹಾನ್ ನಿಜಾಮ್‌ಶಾಹ್‌ನ ಬಳಿ ಬಂದನು. ಅವನು ಶೆಹಿನ್‌ಶಾಹ ಇರಾನ್‌ನ ಕಡೆಯಿಂದ ಒಂದು ಜಮ್‌ರೂದ್ 'ವಜ್ರ' ಯಾವೂದು ಹುಮಾಯೂನ್ ಬಾದ್‌ಶಾಹ್‌ನಿಂದ ದೊರೆತಿತ್ತು ಮತ್ತು ಇದರ ಮೇಲೆ 'ಮುಸ್ತ ಆಸಮ್ ಬಿಲ್ಲಾ ಅಬ್ಬಾಸಿ' ಯ ಹೆಸರು ಕೆತ್ತಲಾಗಿತ್ತು, ಜೊತೆ ಜೊತೆಗೆ ಬೇರೆ ಕೊಡುಗೆಗಳೊಂದಿಗೆ ಇದನ್ನು ಸಹ ಅರ್ಪಿಸಲಾಯಿತು.

ಷಾಹ್ ಇಸ್ಮಾಯಿಲ್ ಸಫ್‌ವಿಯು ಮೇಲೆ ಉಲ್ಲೇಖಿಸಿದ ಕಾಣಿಕೆಗಳ ಹೊರತಾಗಿ ಅಖೀಕ್ ಹರಳು ಖಚಿತ ಉಂಗುರವನ್ನು ಕಳುಹಿಸಿದನು. ಅದರ ಮೇಲೆ 'ಅಲ್‌ತೌಫೀಕ್ ಮನಲ್ಲಾಹ್' ಎಂದು ಕೆತ್ತಲಾಗಿತ್ತು. ಈ ಉಂಗುರವು ಒಂದು ದೀರ್ಘ ಅವಧಿಯವರೆಗೆ ಸ್ವತಃ ಇಸ್ಮಾಯಿಲ್ ಸಫ್‌ವಿಯ ಬೆರಳಲ್ಲಿ ಅಲಂಕರಿತವಾಗಿತ್ತು.

ಇರಾನಿನ ದೂತನ ದುರ್ನಡತೆ :

ಮೆಹತರ್ ಜಮಾಲ್‌ನು ಅಹ್ಮದ್‌ನಗರವನ್ನು ತಲುಪಿ ಬುರ್ಹಾನ್ ನಿಜಾಮ್‌ಶಾಹ್‌ನನ್ನು ಭೇಟಿಯಾದನು. ಹಾಗೂ ಇಸ್ಮಾಯಿಲ್ ಶಾಹನಿಗೆ ಆ ಕೊಡುಗೆ ಕಾಣಿಕೆಗಳನ್ನು ಅವನ ಸೇವೆಯಲ್ಲಿ ಅರ್ಪಿಸಲಾಯಿತು. ಪ್ರಾರಂಭದಲ್ಲಿ ಬುರ್ಹಾನ್ ನಿಜಾಮನು ಮೆಹತರ್ ಜಮಾಲ್‌ನನ್ನು ಬಹಳೇ ಗೌರವಿಸಿದನು. ಆದರೆ ಅವನು ಶಾಹೀ ದರ್ಬಾರದಲ್ಲಿ ದುರ್ನಡತೆಯ ಪ್ರದರ್ಶನ ನೀಡಿದನು. ಹಾಗೂ ಷಾಹ್ ತಾಹೀರ್‌ರೊಂದಿಗೆ ಅಗೌರವ ಸಲ್ಲಿಸಲು, ಷಾಹ್ ಬುರ್ಹಾನ್‌ನು ಮೆಹತರ್ ಜಮಾಲ್‌ನನ್ನು ಷಾಹೀ ದರ್ಬಾರಕ್ಕೆ ಬರಲು ತಡೆದನು. ಬುರ್ಹಾನ್ ನಿಜಾಮ್ ಈ ದೂತನಿಂದ ಎಷ್ಟು ನೊಂದುಕೊಂಡನೆಂದರೆ ಅವನು ಇಸ್ಮಾಯಿಲ್ ಸಫ್‌ವಿಯು ಕಳುಹಿಸಿದ ಕೊಡುಗೆಗಳ ಬದಲಾಗಿ ಯಾವುದೇ ಕಾಣಿಕೆಗಳನ್ನು ಮರಳಿ ಕಳುಹಿಸಲಿಲ್ಲ. ಷಾಹ್ ತಾಹೀರ್‌ರೂ ಕೂಡ ಮೆಹತರ್ ಜಮಾಲ್‌ನಿಂದ ಬಹಳ ನೊಂದುಕೊಂಡರು. ಅದರ ನಂತರ ಅವರು ತಮ್ಮ ಜ್ಯೇಷ್ಠಪುತ್ರನಾದ ಶಾಹ್ ಹೈದರ್‌ನಿಗೆ ಯಾರು ಮಹಾಜ್ಞಾನಿಯಾಗಿದ್ದನು ಅವನೊಂದಿಗೆ ಬಹಳಷ್ಟು ಕೊಡುಗೆ ಕಾಣಿಕೆಗಳನ್ನು ನೀಡಿ ಅಹ್ಮದ್‌ನಗರದಿಂದ ಇರಾನ್‌ಕ್ಕೆ ಕಳುಹಿಸಿದರು.

ಆದಿಲ್ ಶಾಹಿಗಳೊಂದಿಗೆ ಯುದ್ಧ :

ಈ ದಿನಗಳಲ್ಲಿ ಬುರ್ಹಾನ್ ನಿಜಾಮಶಾಹ್‌ನು ರಾಜಾರಾಂ ರಾಜನ ಸಂಗದೊಂದಿಗೆ ಗುಲ್ಬರ್ಗಾದ ಕೋಟೆಯನ್ನು ವಶಪಡಿಸಿಕೊಳ್ಳಲು ನಿಶ್ಚಯಿಸಿದನು. ಹಾಗೂ ಗುಲ್ಬರ್ಗಾದ ಪಟ್ಟಣವಾದ ಆಝುರ್ಜಾನ್‌ದ ಸಮೀಪ ಆದಿಲ್‌ಷಾಹೀ ಸೈನ್ಯವನ್ನು ಎದುರಿಸಿದನು. ಪರಸ್ಪರರಲ್ಲಿ ಭೀಕರ ರೂಪದ ಯುದ್ಧವಾಯಿತು. ಮೊದಲಲ್ಲಿ ಆದಿಲ್‌ಶಾಹಿಯ ಎಡ ಹಾಗೂ ಬಲ ಪಾರ್ಶ್ವದ ಸೈನ್ಯವು ಸೋಲಿನ ಮುಖ ನೋಡಬೇಕಾಯಿತು. ಅವನ ಸೈನಿಕರು ಹೆದರಿ ಚೆಲ್ಲಾಪಿಲ್ಲಿಯಾದರು. ಆದರೆ ಯಾವಾಗ ಸ್ವತಃ ಆದಿಲ್‌ಶಾಹನು ತಂಗುದಾಣದಿಂದ ಹೊರಬಂದು ನಿಜಾಮ್‌ಷಾಹೀ ಸೈನ್ಯದ ಮೇಲೆ ಆಕ್ರಮಣಕ್ಕಿಳಿದನೋ ಆಗ ಮತ್ತೆ ನಿಜಾಮಶಾಹೀಗಳಿಗೆ ಸೋಲಿನ ರುಚಿ ಉಣ್ಣಬೇಕಾಯಿತು. ಹಾಗೂ ಅವರು ಚತರ್‌ಕ್ (ಕೊಡೆ) ಧ್ವಜ, ಆನೆ, ಹಾಗೂ ತೋಪಖಾನೆ ಇತ್ಯಾದಿಗಳನ್ನು ರಣಭೂಮಿಯಲ್ಲಿ ಬಿಟ್ಟು ಅಹ್ಮದ್‌ನಗರದೆಡೆಗೆ ಓಡಿ ಹೋದರು.

ಅಲೀ ಬರೀದ್‌ನ ಕಡೆಯಿಂದ ನಿರಾಸೆ :

ಬುರ್ಹಾನ್ ನಿಜಾಮ್‌ಷಾಹ್‌ನು ಷಾಹ್ ತಾಹೀರ್‌ರಿಗೆ ಅಲಿಬರೀದ್‌ನ ಬಳಿ ಕಳುಹಿಸಿದನು. ಹಾಗೂ ಅವನ ಸ್ನೇಹ ಸಂಪಾದಿಸಲು ಪ್ರಯತ್ನಿಸಿದನು. ಆದರೆ ಅಲೀ ಬರೀದ್‌ನು ತನ್ನ ತಂದೆಯ ಪರಂಪರೆಯನ್ನು ಮುಂದುವರೆಸಿ ಆದಿಲ್‌ಶಾಹನ

ಜೊತೆಯಿಂದ ದೂರಾಗಲು ಸಿದ್ಧನಾಗಲಿಲ್ಲ. ಅದರ ಹೊರತಾಗಿ ಅವನ ಚಿಕ್ಕಪ್ಪ ಖಾನ್ ಜಹಾನನು ಶಾಹ ತಾಹೀರ್‌ರೊಂದಿಗೆ ಕೆಲವು ಧಾರ್ಮಿಕ ವಿಷಯಗಳ ಕುರಿತು ಚರ್ಚಿಸಿದನು. ಹಾಗೂ ಅವರ ಜೊತೆ ಸದ್ವರ್ತನೆಯಿಂದ ನಡೆದುಕೊಳ್ಳದೇ ಅಗೌರವ ತೋರಿದನು. ಈ ಸಂದರ್ಭವನ್ನು ಅರಿತ ಶಾಹ ತಾಹೀರನು ನಿರಾಸೆಯೊಂದಿಗೆ ಅಹ್ಮದ್ ನಗರಕ್ಕೆ ಮರಳಿದರು. ಬುರ್ಹಾನ್ ನಿಜಾಮನಿಗೆ ಈ ಘಟನೆಯ ಬಗ್ಗೆ ಬಹಳ ಖೇದವಾಯಿತು.

ಓಸಾ ಕೋಟೆಯ ಮುತ್ತಿಗೆ :

ಅಲೀ ಬರೀದ್‌ನ ಈ ವರ್ತನೆಯಿಂದ ಬುರ್ಹಾನ್ ನಿಜಾಮ್‌ಶಾಹನು ಬಹಳೇ ಕೋಪೋದ್ರಿಕ್ತನಾದನು. ಹಾಗೂ ಅವನೊಂದಿಗೆ ಸೇಡು ತೀರಿಸಿಕೊಳ್ಳಲು ಸಿದ್ಧತೆ ಮಾಡತೊಡಗಿದನು. ಶಸ್ತ್ರಾಸ್ತ್ರ ಹಾಗೂ ಸೈನ್ಯದೊಂದಿಗೆ ಸಿದ್ಧನಾಗಿ ಬುರ್ಹಾನ್ ನಿಜಾಮನು ಅಲಿ ಬರೀದ್‌ನ ಪ್ರಾಂತ್ಯಗಳನ್ನು ವಶಪಡಿಸಿಕೊಳ್ಳಲು ಅಲಿಬರೀದ್‌ನತ್ತ ಹೊರಟನು. ಎಲ್ಲಕ್ಕಿಂತ ಮೊದಲು ಅವನು ಓಸಾ ಕೋಟೆಯನ್ನು ಮುತ್ತಿಗೆ ಹಾಕಿದನು ಹಾಗೂ ಕೋಟೆಯ ಒಳಗಿನ ಜನರಿಗೆ ತೊಂದರೆಗೀಡು ಮಾಡಿದನು. ಅಲಿಬರೀದ್‌ನು ಯಾವಾಗ ಈ ಪರಿಸ್ಥಿತಿಯನ್ನು ಅರಿತು ಅವನು ಆದಿಲ್ ಶಾಹನಿಗೆ ಕಲ್ಯಾಣದ ಕೋಟೆಯನ್ನು ಅರ್ಪಿಸಿ ತನ್ನ ಸಹಾಯಕನನ್ನಾಗಿಸಿದನು.

ವೈರಿಯೊಂದಿಗೆ ಮುಖಾಮುಖಿ ಹಾಗೂ ಕೋಟೆಯ ಮೇಲೆ ವಿಜಯ :

ಆದಿಲ್ ಶಾಹನು ಬಿಜಾಪುರದಿಂದ ಹೊರಟನು. ಅವನ ಜೊತೆ ಅಲಿಬರೀದ್‌ನು ಹೊರಟನು. ಬುರ್ಹಾನ್ ನಿಜಾಮ್‌ನು ವೈರಿಯನ್ನು ಎದುರಿಸಿದನು. ಹಾಗೂ ಓಸಾ ಕೋಟೆಯ ಒಂದು ಮೈಲು ದೂರದಲ್ಲಿ ಎದುರಾಳಿಗಳಲ್ಲಿ ಯುದ್ಧ ನಡೆಯಿತು. ನಿಜಾಮ್‌ಷಾಹ್‌ನು ಬಹಳೇ ಶೌರ್ಯ ತೋರಿದನು. ಹಾಗೂ ವೈರಿಗಳನ್ನು ರಣಭೂಮಿಯಿಂದ ಕಾಲ್ತೆಗೆಸಿದನು. ಅದರ ನಂತರ ಅವನು ಓಸಾ ಕೋಟೆಯನ್ನು ಮತ್ತೊಮ್ಮೆ ದಿಗ್ಬಂಧನಗೊಳಿಸಿದನು. ಹಾಗೂ ಕೆಲವೇ ಸಮಯದಲ್ಲಿ ಈ ಕೋಟೆಯನ್ನು ವಶಪಡಿಸಿಕೊಂಡನು.

ಇನ್ನಷ್ಟು ಹೆಚ್ಚಿನ ಗೆಲುವು :

ಓಸಾ ಕೋಟೆಯನ್ನು ಗೆದ್ದ ನಂತರ ಬುರ್ಹಾನ್ ನಿಜಾಮ್‌ಶಾಹ್‌ನು ಉದ್ಗೀರ್ ದತ್ತ ಪಯಣ ಬೆಳೆಸಿದನು. ಈ ಸಮಯದ ನಂತರ ಈ ಕೋಟೆಯನ್ನು ಸಹ ಗೆದ್ದುಕೊಂಡನು. ಹಾಗೂ ಮತ್ತೆ ಕಂಧಾರ್‌ನ ಕಡೆಗೆ ಹೋದನು. ಅವನು ಈ ಕೋಟೆಯ ಸುತ್ತಲೂ ಸೈನ್ಯದ ದಿಗ್ಬಂಧನ ಮಾಡಿದನು. ದಿಗ್ಬಂಧನದ ವೇಳೆಯಲ್ಲಿ ಅಲೀಬರೀದ್ ಹಾಗೂ ಇಬ್ರಾಹಿಂ ಆದಿಲ್‌ಷಾಹ್‌ನು ಮತ್ತೊಮ್ಮೆ ಬುರ್ಹಾನ್ ನಿಜಾಮ್‌ಷಾಹ್‌ನ ಮೇಲೆ ಆಕ್ರಮಣ ಮಾಡಿದರು. ಬುರ್ಹಾನ್ ನಿಜಾಮ್

ಮೊದಲಿನಂತೆಯೇ ಈ ಸಲವೂ ತುಂಬಾ ದಿಟ್ಟತನದಿಂದ ಯುದ್ಧವನ್ನು ಎದುರಿಸಿದನು. ಹಾಗೂ ವೈರಿಯನ್ನು ಸೋಲಿಸಿದನು. ಈ ಯುದ್ಧದಲ್ಲಿ ಬಹಳಷ್ಟು ಕುದುರೆಗಳು ಹಾಗೂ ಆನೆಗಳು ಬುರ್ಹಾನ್ ನಿಜಾಮನ ಕೈಗೆ ಹತ್ತಿದವು.

ಬುರ್ಹಾನ್ ನಿಜಾಮ್‌ನ ಹೆಸರಿನಲ್ಲಿ ಆದಿಲ್‌ಷಾಹ್‌ನ ಅಮೀರರ ಪತ್ರ :

ಹಿಜ್ರಿಶಕೆ ೯೫೫ ಬುರ್ಹಾನ್ ನಿಜಾಮನು ಖಂದಹಾರ್ ಕೋಟೆಯನ್ನು ವಶಪಡಿಸಿಕೊಂಡನು. ಹಾಗೂ ಅದೇ ವರ್ಷ ಅಹ್ಮದ್ ನಗರಕ್ಕೆ ಮರಳಿ ಬಂದನು. ಇಬ್ರಾಹಿಂ ಆದಿಲ್ ಶಾಹನ ಅಮೀರರು ಹಾಗೂ ಪದಾಧಿಕಾರಿಗಳು ಬುರ್ಹಾನ್ ನಿಜಾಮ್‌ನಿಗೆ ಒಂದುಪತ್ರವನ್ನು ಬರೆದರು. ಇದರ ಸಾರಾಂಶವು ಹೀಗಿತ್ತು.

"ಬಾದಶಾಹನ ಅತ್ಯಾಚಾರವು ಹದಮೀರಿ ಬೆಳೆದು ಹೋಗಿದೆ. ಈ ಕಾರಣದಿಂದ ಬೇಜಾನಗರದ ಪ್ರಜೆಗಳು ತುಂಬಾ ತೊಂದರೆಗೊಳಗಾಗಿದ್ದಾರೆ. ನಾವು ಇದನ್ನು ಬಯಸುತ್ತೇವೆ ಏನೆಂದರೆ ಇಬ್ರಾಹಿಂ ಆದಿಲ್‌ಷಾಹ್‌ನನ್ನು ಸಿಂಹಾಸನದಿಂದ ಇಳಿಸಿ ಯುವರಾಜನಾದ ಅಬ್ದುಲ್ಲಾಹ್‌ರಿಗೆ ಯಾರು ಈ ದಿನಗಳಲ್ಲಿ ಬಂದ್‌ಕೋದಾದಲ್ಲಿ ತಂಗಿರುವರೋ ಅವರನ್ನು ಇಲ್ಲಿ ಕರೆಯಿಸಿ ನಮ್ಮ ಬಾದ್‌ಷಾಹ್‌ನನ್ನಾಗಿಸಬೇಕು. ಇದು ಜಗತ್ತಿಗೆ ಗೊತ್ತಿದೆ. ಈ ಕೆಲಸ ನಿಮ್ಮ ಸಹಾಯದ ಹೊರತು ಸಾಧ್ಯವಾಗಲಾರದು. ಅದಕ್ಕಾಗಿ ತಮ್ಮಲ್ಲಿ ವಿನಂತಿಯೇನೆಂದರೆ ಈ ಕಾರ್ಯದಲ್ಲಿ ನಮ್ಮ ಜೊತೆ ನೀಡಬೇಕು.

ಬೇಜಾನಗರಕ್ಕೆ ಪಯಣ :

ಆದಿಲ್ ಶಾಹಿ ಅಮೀರರ ಈ ಪತ್ರವನ್ನು ಪಡೆದು ಬುರ್ಹಾನ್ ನಿಜಾಮಶಾಹನು ಬಹಳ ಸಂತೋಷಪಟ್ಟನು. ಅವನಿಗೆ ಇದ್ದಕ್ಕಿದ್ದಂತೆಯೇ ಒಂದು ಒಳ್ಳೆಯ ಸುವರ್ಣಾವಕಾಶ ಲಭಿಸಿತು. ಅವನು ಕುತುಬ್‌ಷಾಹ್‌ನನ್ನು ಜೊತೆಯಾಗಿಸಿಕೊಂಡು ಆದಿಲ್‌ಶಾಹ ಸಾಮ್ರಾಜ್ಯದತ್ತ ಪಯಣ ಬೆಳೆಸಿದನು. ಆಕಸ್ಮಿಕವಾಗಿ ಅದೇ ಸಮಯದಲ್ಲಿ ಬಲಗ್ವಾವ್ ಕೋಟೆಯಲ್ಲಿ ಅಸದ್‌ಖಾನ್‌ನು ರುಗ್ಣಾವಸ್ಥೆಯಲ್ಲಿದ್ದನು. ಬುರ್ಹಾನ್ ನಿಜಾಮ್‌ನು ಅವನ ರೋಗ ಪೀಡಿತ ಅವಸ್ಥೆಯ ಸುದ್ಧಿಯನ್ನು ಕೇಳಿ ತನ್ನ ಮುಖ್ಯ ಉದ್ದೇಶವನ್ನು ಹಿಂದಿಕ್ಕಿ ಮೊದಲು ಬಲಗ್ವಾವ್ ಕೋಟೆಯನ್ನು ವಶಪಡಿಸಿಕೊಳ್ಳಲು ಪ್ರಯತ್ನಿಸಿದನು. ಆದರೆ ಕೆಲವೇ ದಿನಗಳಲ್ಲಿ ಅಸದ್‌ಖಾನ್‌ನು ಮೃತ್ಯುವಿನ ವಶವಾದನು. ಹಾಗೂ ಬುರ್ಹಾನ್ ನಿಜಾಮಶಾಹನು ಅಲ್ಲಿ ತಲುಪುವ ಮೊದಲೇ ಬಲಗ್ವಾವ್‌ದ ಮೇಲೆ ಇಬ್ರಾಹಿಂ ಆದಿಲಶಾಹನು ಅಧಿಕಾರ ಸ್ಥಾಪಿಸಿಕೊಂಡಿದ್ದನು. ಅದರನಂತರ ಬುರ್ಹಾನ್ ಅಹ್ಮದ್ ನಗರಕ್ಕೆ ಮರಳಿ ಬಂದನು.

ಶಾಹ ತಾಹೀರ್‌ರ ನಿಧನ :

ಬುರ್ಹಾನ್ ನಿಜಾಮನು ಅಹ್ಮದ್ ನಗರಕ್ಕೆ ಮರಳಿದ ಕೂಡಲೇ ಎಂದರೆ ಹಿಜ್ರಿ

ಶಕೆ ೯೫೭ ರಲ್ಲಿ ಶಾಹತಾಹೀರ್‌ರು ಕೆಲವು ದಿನಗಳವರೆಗೆ ರೋಗಪೀಡಿತರಾಗಿದ್ದು, ನಿಧನರಾದರು. ಅಹ್ಮದ್ ನಗರವಾಸಿಗಳು ಅವರ ಈ ಅಗಲುವಿಕೆಯಿಂದ ಬಹಳ ನೊಂದುಕೊಂಡರು. ಶಾಹ ಸಾಹೇಬರಿಗೆ ಮೊದಲು ಅಹ್ಮದ್ ನಗರದಲ್ಲಿ ದಫನ್ ಮಾಡಲಾಯಿತು. ಆದರೆ ಅದರ ನಂತರ ಅವರ ಶವವನ್ನು ಕರ್ಬಲಾ ಕ್ಷೇತ್ರಕ್ಕೆ ಕಳುಹಿಸಲಾಯಿತು. ಅಲ್ಲಿ ಅವರನ್ನು ಹಜ್ರತ್ ಇಮಾಮ್ ಹುಸೈನ್‌ರ ಪವಿತ್ರ ಸಮಾಧಿಯ ಬಳಿ ಒಂದೂವರೆ ಅಡಿಯ ಅಂತರದಲ್ಲಿ ದಫನ್ ಮಾಡಲಾಯಿತು.

ಕಲ್ಯಾಣದ ಕೋಟೆಯ ಮೇಲೆ ದಾಳಿ :

ಶಾಹತಾಹೀರ್‌ರ ನಿಧನದ ನಂತರ ಬುರ್ಹಾನ್ ನಿಜಾಮನು ಬೊಯಾಲ್ ರಾವ್ ಹಾಗೂ ಕಾಸಿಂ ಬೇಗ್ ಹಕಿಂರನ್ನು ತನ್ನ ನಂಬಿಗಸ್ಥರನ್ನಾಗಿಸಿದನು. ಅವನು ಅಮಾದ್‌ಷಾಹ್‌ನಿಗೆ ಕೆಲವು ಕಾರಣಗಳಿಗಾಗಿ ಆದಿಲಶಾಹನ ವಿರುದ್ಧ ನಿಲ್ಲಿಸಿದನು. ಹಾಗೂ ಸ್ವತಃ ಖ್ವಾಜಾ ಜಹಾನನನ್ನು ಜೊತೆಗೆ ತೆಗೆದುಕೊಂಡು ಕಲ್ಯಾಣ ಕೋಟೆಯ ಮೇಲೆ ದಾಳಿ ಮಾಡಿದನು. ಈ ಕೋಟೆಯನ್ನು ದಿಗ್ಬಂಧನಗೊಳಿಸಿ ಬುರ್ಹಾನ್ ನಿಜಾಮ್‌ನು ಕೋಟೆಯೊಳಗಿನ ಜನರನ್ನು ಬಹಳೇ ತೊಂದರೆಗೀಡುಮಾಡಿದನು. ಇಬ್ರಾಹಿಂ ಆದಿಲಶಾಹನು ಬಹಳಷ್ಟು ಬರ್ಕಿ ಅಮೀರರನ್ನು, ಬುರ್ಹಾನ್ ನಿಜಾಮ್‌ನನ್ನು ದೂರ ಅಟ್ಟಲು ಕಳುಹಿಸಿದನು. ನಂತರ ಸ್ವತಃ ತಾನೂ ಕೂಡ ಆ ಕಡೆಗೆ ಹೋದನು.

ಬರ್ಕಿ ಅಮೀರರಿಂದ ಶಾಂತಿಭಂಗ :

ಬರ್ಕಿ ಅಮೀರರು ಕಲ್ಯಾಣದ ಕೋಟೆಯ ಹಾದಿಯಲ್ಲಿ ತಂಗಿ, ವೈರಿಯ ಧಾನ್ಯ ದವಸ ಹಾಗೂ ಅವಶ್ಯಕ ವಸ್ತುಗಳನ್ನು ವಶಪಡಿಸಿಕೊಳ್ಳಲು ಆರಂಭಿಸಿದರು. ಅದರಿಂದಾಗಿ ನಿಜಾಮ್‌ಶಾಹಿಗಳಿಗೆ ಬಹಳ ತೊಂದರೆಯುಂಟಾಯಿತು. ಈ ಅಮೀರರು ವೈರಿಯನ್ನು ಬಹಳ ವಿಧವಾಗಿ ತೊಂದರೆ ನೀಡಿದರು. ಕೆಲವು ಸಲ ಇರುಳುದಾಳಿ ಮಾಡುತ್ತಿದ್ದರು. ಮತ್ತೆ ಕೆಲವು ಸಲ ಕಳ್ಳರ ಹಾಗೆ ಸೈನ್ಯದಲ್ಲಿ ಹೋಗಿ ಗೊಂದಲವೆಬ್ಬಿಸುತ್ತಿದ್ದರು. ಈ ಪರಿಸ್ಥಿತಿಗನುಗುಣವಾಗಿ ಬುರ್ಹಾನ್ ನಿಜಾಮನು ಈ ಆಜ್ಞೆಯನ್ನು ಹೊರಡಿಸಿದನು. ಸೈನ್ಯದ ಸುತ್ತಮುತ್ತ ಮೂರು ಅಡಿ, ಹಾಗೂ ಉಳಿದ ಜಾಗೆಗಳಲ್ಲಿ ನಾಲ್ಕು ಅಡಿಯಷ್ಟು ಎತ್ತರದ ಗೋಡೆ ನಿರ್ಮಿಸಬೇಕು. ಈ ಆಜ್ಞೆಯನ್ನು ಪಾಲಿಸಲಾಯಿತು. ಹಾಗೂ ಕಲ್ಯಾಣದ ಕೋಟೆಯು ಒಂದು ಹೊಸ ಕೋಟೆಯೊಳಗೆ ಬಂದಿತು.

ಇಬ್ರಾಹಿಂ ಆದಿಲಶಾಹನ ಆಗಮನ :

ಇಬ್ರಾಹಿಂ ಆದಿಲ್‌ಷಾಹ್‌ನೂ ಸಹ ಹೀಗೆ ಹಾದಿಯನ್ನು ಕ್ರಮಿಸುತ್ತಾ ಕಲ್ಯಾಣ ಕೋಟೆಯ ಬಳಿಗೆ ಬಂದನು ಹಾಗೂ ಬುರ್ಹಾನ್ ನಿಜಾಮಷಾಹ್‌ನ ಸೈನ್ಯದ ಬಳಿಯೇ ಬಿಡಾರ ಹೂಡಿದನು. ಬುರ್ಹಾನ್ ನಿಜಾಮಷಾಹನ ಹಾಗೆಯೇ ಆತನೂ

ಕೂಡ ತನ್ನ ಸೈನ್ಯದ ಸುತ್ತಲೂ ಒಂದು ಗೋಡೆಯನ್ನು ಕಟ್ಟಿಸಿದನು. ಸಮಯ ಕಳೆಯುತ್ತಾ ಹೋಯಿತು. ಎಲ್ಲಿಯವರೆಗೆಂದರೆ ರಂಜಾನ್‌ದ ಪವಿತ್ರ ತಿಂಗಳು ಆಗಮಿಸಿತು. ಧವಸಧಾನ್ಯ ಹಾಗೂ ಅವಶ್ಯಕ ವಸ್ತುಗಳು ತಲುಪದೇ ಇರುವುದರಿಂದ ನಿಜಾಮಶಾಹಿ ಅಮೀರರ ಸ್ಥಿತಿ ಹದಗೆಟ್ಟಿತು. ಅವರು ಎರಡು ಮೂರು ದಿನಗಳವರೆಗೆ ಹಸಿವಿನಿಂದಿದ್ದು 'ರೋಜಾ' ಆಚರಿಸತೊಡಗಿದರು.

ಬುರ್ಹಾನ್ ನಿಜಾಮ್‌ಶಾಹ್‌ನ ತೊಂದರೆ :

ಈ ಎಲ್ಲ ಘಟನೆಗಳು ಬುರ್ಹಾನ್ ನಿಜಾಮಶಾಹನನ್ನು ಧೃತಿಗೆಡಿಸಿದವು. ಅವನು ತನ್ನ ಅಮೀರ್‌ರೊಂದಿಗೆ ಸಲಹೆ ಸೂಚನೆ ಪಡೆದನು. ಕೆಲವರು ಮರಳಿ ಹೋಗಲು ಸಲಹೆ ನೀಡಿದರು. ಮತ್ತೆ ಕೆಲವರು ಕೋಟೆಯ ಒಳಗೆ ಹೋಗಿ ವೈರಿಯೊಂದಿಗೆ ಹೋರಾಡಲು ಹೇಳಿದರು. ಹಾಗೂ ಈ ಸಲಹೆಯನ್ನು ನೀಡಿದರು. "ಒಂದು ವೇಳೆ ನಮಗೆ ವಿಜಯ ಪ್ರಾಪ್ತಿಯಾದರೆ ನಾವು ಮತ್ತೊಮ್ಮೆ ಕೋಟೆಯ ದಿಗ್ಬಂಧನ ಮಾಡೋಣ, ಇಲ್ಲವಾದರೆ ಒಂದು ವೇಳೆ ಸೋಲು ಉಂಟಾದರೆ ಮರಳಿ ಅಹ್ಮದ್ ನಗರಕ್ಕೆ ಹೋಗೋಣ' ಬುರ್ಹಾನ್ ನಿಜಾಮನು ಈ ವೇಳೆಯಲ್ಲಿ ಹೀಗೆಂದನು. "ನಮ್ಮ ಕುದುರೆಗಳ ಸ್ಥಿತಿಯು ಈ ಸಮಯದಲ್ಲಿ ತುಂಬಾ ತೊಂದರೆಗೀಡಾಗಿದೆ. ಅವು ಯುದ್ಧದಲ್ಲಿ ಪಾಲ್ಗೊಳ್ಳುವ ಸ್ಥಿತಿಯಲ್ಲಿಲ್ಲ. ಅದಕ್ಕಾಗಿ ಒಳಿತು ಇದರಲ್ಲಿಯೇ ಇದೆ ನಾವು ಯುದ್ಧವನ್ನು ಮುಂದೂಡಿ ಅಹ್ಮದ್ ನಗರಕ್ಕೆ ಮರಳೋಣ, ಮತ್ತೆ ಯಾವಾಗಲಾದರೂ ಅವಕಾಶ ಸಿಕ್ಕರೆ ತುಂಬಾ ಸಿದ್ಧತೆಯೊಂದಿಗೆ ಈ ಕಡೆಗೆ ಬರೋಣ".

ಶಾಹಜಾಫರ್ ಹಾಗೂ ಖಾಸಿಂ ಬೇಗರ ಸಲಹೆ :

ಶಾಹಜಾಫರ್ (ಷಾಹ್ ತಾಹೀರ್‌ರ ಸಹೋದರ) ಹಾಗೂ ಖಾಸಿಂ ಬೇಗ್ ಹಕಿಮ್‌ರು ಬುರ್ಹಾನ್ ನಿಜಾಮಷಾಹ್‌ನ ವಿಚಾರವನ್ನು ಅನುಮೋದಿಸಿದರು. ಹಾಗೂ ಹೀಗೆಂದರು. "ನಾವು ವೈರಿಯನ್ನು ಎಷ್ಟೋ ಸಲ ಮಣ್ಣುಗೂಡಿಸಿದ್ದೇವೆ. ಅದಕ್ಕಾಗಿ ಒಂದು ವೇಳೆ ಈ ಸಲ ನಮಗೆ ಸೋಲಿನ ಮುಖ ನೋಡಬೇಕಾದರೆ ಇದರಲ್ಲಿ ಯಾವ ಮುಜುಗರವಿಲ್ಲ." ಇದನ್ನು ಕೇಳಿ ಬುರ್ಹಾನ್ ನಿಜಾಮನು ಮೌನ ತಾಳಿದನು. ಅದೇ ವೇಳೆ ಅಮೀರರಿಂದ ಬೇರ್ಪಟ್ಟನು. ಹಾಗೂ ಕುದುರೆಯ ಮೇಲೆ ಸವಾರನಾಗಿ ಒಬ್ಬನೇ ದೇವ್‌ಪಾಲ ಬ್ರಾಹ್ಮೀನ್‌ನ ಬಳಿ ತಲುಪಿದನು ಹಾಗೂ ಅವನ ಸಲಹೆ ಪಡೆದನು.

ದೇವಪಾಲನೊಂದಿಗೆ ಚರ್ಚೆ :

ದೇವಪಾಲನು ಬಾದ್‌ಷಾಹ್‌ನಿಗೆ ಹೀಗೆ ಹೇಳಿದನು. ನಾಳೆ ಹಬ್ಬದ ಸಮಯದಲ್ಲಿ ತಮಗೆ ನನ್ನ ಅಭಿಪ್ರಾಯ ತಿಳಿಸುವೆನು. ಆದರೆ ಈ ಮಧ್ಯೆ ತಾವು ತಮ್ಮ ಖಜಾಂಚಿಗೆ ಈ ಆಜ್ಞೆ ನೀಡಿರಿ, ನಾನು ಅವನಿಂದ ಏನನ್ನೇ ಬಯಸಿದರೂ ಏನೊಂದನ್ನು

ಪ್ರಶ್ನಿಸದೇ ನನಗೆ ಒದಗಿಸಬೇಕು, ಹಾಗೂ ಯಾವುದೇ ರೀತಿಯ ಸಂಕೋಚಪಡಬಾರದು ಹಾಗೂ ಸಂದೇಹ ಪಡಬಾರದು, ಬುರ್ಹಾನ್ ನಿಜಾಮ್‌ನಿಗೆ ದೇವಪಾಲನ ಮೇಲೆ ಸಂಪೂರ್ಣವಾಗಿ ನಂಬಿಗೆಯಿತ್ತು. ಹೀಗಾಗಿ ಅವನು ಅದೇ ಸಮಯದಲ್ಲಿ ದೇವಪಾಲನ ಇಚ್ಛೆಯಂತೆ ಆಜ್ಞೆಹೊರಡಿಸಿದನು. ಹಾಗೂ ತನ್ನ ಖಜಾಂಚಿಗೆ ಈ ಆಜ್ಞೆ ನೀಡಿದನು. "ದೇವಪಾಲನು ನಿನ್ನಿಂದ ಯಾವುದೇ ಸಮಯದಲ್ಲಿ ಏನನ್ನೇ ಬೇಡಿದರೂ ಅವನಿಗೆ ಅದನ್ನು ಕೊಟ್ಟು ಬಿಡು ಅವನೊಂದಿಗೆ ಯಾವುದೇ ರೀತಿಯ ವಿಚಾರಣೆ ಬೇಡ".

ದೇವಪಾಲ ಹಾಗೂ ಐನೂಲ ಮುಲ್ಕರ ಸಂವಾದ :

ಅದೇ ರಾತ್ರಿ ದೇವಪಾಲ ಬ್ರಾಹ್ಮೀನ್ ಷಾಹೀ ಭಂಡಾರದಿಂದ ೧ ಲಕ್ಷ ಹವನ್ ಪಡೆದುಕೊಂಡನು. ಹಾಗೂ ನಿಜಾಮಶಾಹನು ಎಲ್ಲರಿಗಿಂತ ಶ್ರೇಷ್ಠ ಅಮೀರ್‌ನಾದ ಐನುಲ್ ಮುಲ್ಕನ ಬಳಿ ಹೋದನು ಹಾಗೂ ಅವನೊಂದಿಗೆ ಹೀಗೆಂದನು. "ಎಲ್ಲ ಘಟನೆಗಳ ಬಗ್ಗೆ ನೀವು ತಿಳಿದುಕೊಂಡಿದ್ದೀರಿ, ಒಂದು ವೇಳೆ ನಾವು ವೈರಿಯ ಜೊತೆ ಯುದ್ಧ ಮಾಡದೇ, ಮುತ್ತಿಗೆ ಹಿಂಪಡೆದೆವಾದರೆ ಹಾಗೂ ನಮ್ಮ ಪ್ರಾಂತ್ಯಕ್ಕೆ ಮರಳಿದರೆ ಇದರ ಪರಿಣಾಮವು ಬಹಳ ಕೆಟ್ಟದ್ದಾಗುವುದು. ಆದರೆ ವೈರಿಯೊಂದಿಗೆ ಹೋರಾಡಿದರೆ ಇದೂ ಸಹ ಸಾದುವಲ್ಲ. ಏಕೆಂದರೆ ಈಗ ನಮ್ಮ ಸೈನ್ಯದ ಸ್ಥಿತಿಯು ಚೆನ್ನಾಗಿಲ್ಲ. ಈ ಪರಿಸ್ಥಿತಿಯಲ್ಲಿ ನಾವು ಏನು ಮಾಡಬೇಕು.? ಈ ವಿಷಯವಾಗಿ ತಾವು ಏನನ್ನಾದರೂ ವಿಚಾರಿಸಿದ್ದರೆ ತಿಳಿಸಿರಿ".

ದೇವಪಾಲನ ಯೋಜನೆ ಯುಕ್ತಿ :

ಐನುಲ್ ಮುಲ್ಕನು ಹೀಗೆಂದು ಉತ್ತರಿಸಿದನು. "ನಾವು ಕತ್ತಿವರಸೆಯಲ್ಲಿ ನಿಷ್ಣಾತರಾಗಿದ್ದೇವೆ. ನಮಗೆ ಬಾಯಿಮಾತಿನಲ್ಲಿ ಯಾವುದೇ ನಂಬುಗೆಯಿಲ್ಲ. ನೀವು ಏನನ್ನು ಸರಿಯಾದುದೆಂದುಭಾವಿಸುತ್ತಿರೋ ಅದನ್ನೇ ಮಾಡಿರಿ". ದೇವಪಾಲನು ಹೀಗೆಂದನು "ನನ್ನ ಸಲಹೆಯು ಹೀಗಿದೆ, ಹಬ್ಬದ ಮುಂಜಾವಿನಲ್ಲಿ ನಾವು ನಮ್ಮ ಸೈನ್ಯವನ್ನು ಒಗ್ಗೂಡಿಸಿ ವೈರಿಯ ಮೇಲೆ ಆಕ್ರಮಣ ಮಾಡೋಣ. ಈ ಸಮಯದಲ್ಲಿ ವೈರಿಯ ಪ್ರತಿಯೊಬ್ಬ ಸೈನಿಕನು ಹಬ್ಬದ ತಯಾರಿಯಲ್ಲಿ ತೊಡಗಿರುವನು. ಯಾರದೇ ಯೋಚನೆಯಲ್ಲಿ ಈ ವಿಷಯ ಬರಲಾರದು. ಅದೆಂದರೆ ನಾವು ಅವರ ಮೇಲೆ ದಾಳಿ ಮಾಡುವವರಿದ್ದೇವೆ. ನಾವು ಅವರ ಈ ನಿರ್ಲಕ್ಷ್ಯತನದ ಲಾಭ ಪಡೆದು ಪರಿಸ್ಥಿತಿಯನ್ನು ಹಿಡಿತಕ್ಕೆ ತೆಗೆದುಕೊಳ್ಳಬೇಕು."

ಸಿಪಾಯಿಗಳಲ್ಲಿ ಹಣದ ವಿತರಣೆ :

ಐನುಲ್‌ಮುಲ್ಕನು ದೇವಪಾಲನ ಅಭಿಪ್ರಾಯವನ್ನು ಹೃನ್ಮನದಿಂದ ಒಪ್ಪಿದನು. ದೇವಪಾಲನು ಯಾವ ಹಣವನ್ನು ನಿಜಾಮುಶಾಹಿ ಭಂಡಾರದಿಂದ ತೆಗೆದುಕೊಂಡಿದ್ದನೋ ಅದನ್ನು ಐನುಲ್ ಮುಲ್ಕನಿಗೆ ಒಪ್ಪಿಸಿದನು. ಹಾಗೂ ಹೀಗೆಂದನು.

'ನೀವು ಈ ಹಣವನ್ನು ಸಿಪಾಯಿಗಳಲ್ಲಿ ವಿತರಿಸಿರಿ ಹಾಗೂ ಇದನ್ನು ಹೀಗೆ ಜಾಹೀರುಗೊಳಿಸಿರಿ. ಈ ದುಡ್ಡು ಹಬ್ಬದ ಖರ್ಚಿಗಾಗಿ ಇದೆ. ಐನುಲ್ ಮುಲ್ಕನು ಅದೇ ಸಮಯದಲ್ಲಿ ಆ ದುಡ್ಡನ್ನು ಸಿಪಾಯಿ ಹಾಗೂ ಸೈನಿಕ ಪದಾಧಿಕಾರಿಗಳಲ್ಲಿ ವಿತರಿಸಿದನು. ಹಾಗೂ ಅವರನ್ನು ಉದ್ದೇಶಿಸಿ ಹೀಗೆಂದನು. 'ಬೆಳ್ಳಂಬೆಳಿಗ್ಗೆಯೇ ಬಾದಶಾಹರ ಸೇವೆಯಲ್ಲಿ ಸಲಾಂ ಹಾಗೂ ಶುಭಾಶಯಗಳನ್ನು ಅರ್ಪಿಸಲು ಹಾಜರಾಗಬೇಕು."

ಆದಿಲಶಾಹಿಗಳ ಮೇಲೆ ದಾಳಿ :

ಬೆಳಗಾಗಲು ನಿಜಾಮಶಾಹಿಗಳಿಗೆ ಈ ವಿಷಯ ಅರಿವಿಗೆ ಬಂತು. ಏನೆಂದರೆ ಆದಿಲ್‌ಶಾಹೀ ಸೈನ್ಯವು ಹಬ್ಬದ ಸಂತೋಷ, ಸಂಭ್ರಮದಲ್ಲಿ ಎಷ್ಟೊಂದು ಮುಳುಗಿದೆಯೆಂದರೆ ಅದಕ್ಕೆ ವೈರಿಗಳಿಂದ ಉಂಟಾಗುವ ಯಾವುದೇ ಅಪಾಯದ ಅರಿವಿಲ್ಲ. ಐನುಲ್‌ಮುಲ್ಕನು ತನ್ನ ಸೈನಿಕರ ಸುತ್ತವಿದ್ದ ಗೋಡೆಯನ್ನು ಒಂದು ಕಡೆಯಲ್ಲಿ ಒಡೆದನು. ಹಾಗೂ ಸಿಪಾಯಿಗಳನ್ನು ಜೊತೆಗೆ ತೆಗೆದುಕೊಂಡು ವೈರಿಯತ್ತ ಮುನ್ನುಗ್ಗಿದನು. ನಿಜಾಮ್‌ಷಾಹೀ ಆನೆಗಳು ಆದಿಲಶಾಹಿ ಸೈನ್ಯದ ಸುತ್ತಲಿದ್ದ ಗೋಡೆಯನ್ನು ಸುಮಾರು ನಾಲ್ವತ್ತು ಅಡಿಯಷ್ಟು ಬೀಳಿಸಿದವು. ಐನುಲ್ ಮುಲ್ಕನು ಅದೇ ಹಾದಿಯಿಂದ ಸಾಗಿ ವೈರಿಯ ಸೈನ್ಯದ ಬಳಿ ಬಂದನು. ಹಾಗೂ ಅವರ ಮೇಲೆ ಪ್ರಳಯಾಂತಕ ರೂಪದಲ್ಲಿ ಎರಗಿದನು ಮತ್ತು ರಕ್ತಪಾತಕ್ಕೆ ನಾಂದಿ ಹಾಡಿದನು. ಆದಿಲಶಾಹಿ ಸೈನ್ಯಕ್ಕೆ ವೈರಿಯ ಆಕ್ರಮಣದ ಕುರಿತು ಖಂಡಿತವಾಗಿ ಒಂದೆಳೆಯಷ್ಟು ಯೋಚನೆಯಿರಲಿಲ್ಲ. ಇದರಿಂದಾಗಿ ಪ್ರತಿಯೊಬ್ಬ ಸೈನಿಕನು ದಿಕ್ಕೆಟ್ಟು ಓಟಕ್ಕಿತ್ತನು.

ಬುರ್ಹಾನ್ ನಿಜಾಮಶಾಹನಿಗೆ ವಿಜಯ ಪ್ರಾಪ್ತಿ :

ಆದಿಲಶಾಹನು ಆ ಸಮಯದಲ್ಲಿ ಸ್ನಾನಗೃಹದಲ್ಲಿದ್ದನು. ಅವನಿಗೆ ದಾಳಿಯ ಸುದ್ದಿಯು ತಲುಪಲು ಅವನು ತಕ್ಷಣ ಒಂದು ಮೂಲೆ ಕಡೆಗೆ ಹೋದನು. ನಿಜಾಮ್‌ಷಾಹಿಗಳು ವೈರಿಯ ಅಸಂಖ್ಯ ಆನೆಗಳನ್ನು ಹಾಗೂ ಕುದುರೆಗಳನ್ನು ತಮ್ಮ ವಶಕ್ಕೆ ತೆಗೆದುಕೊಂಡರು. ಆದಿಲಶಾಹಿಗಳಿಗೆ ಭಾರೀ ಸೋಲುಂಟಾಯಿತು. ಹಾಗೂ ಈ ತೆರನಾಗಿ ಬುರ್ಹಾನ್ ನಿಜಾಮಶಾಹನು ಆಘುರಜಾನ ಸೋಲಿನ ಪ್ರತಿಕಾರವನ್ನು ತೀರಿಸಿಕೊಂಡನು.

ಬುರ್ಹಾನ್ ನಿಜಾಮ್‌ಶಾಹನ ವಶದಲ್ಲಿ ಕಲ್ಯಾಣ ಕೋಟೆ :

ಈ ಮಧ್ಯೆ ಸುದ್ದಿಯೊಂದು ತಲುಪಿತು. ಏನೆಂದರೆ ಸೈಫುಲ್ ಮುಲ್ಕ್‌ನ ಕಡೆಯಿಂದ ಒಂದು ತಂಡವು ಶುಭಾಶಯಗಳನ್ನು ಅರ್ಪಿಸಲು ಬಂದಿದ್ದು ಬುರ್ಹಾನ್ ನಿಜಾಮ್‌ಶಾಹ್‌ನಿಗೆ ಮುಖ್ಯವಾದ ವಿಷಯದ ಬಗ್ಗೆ ಮಾಹಿತಿ ಇರಲಿಲ್ಲ. ಅವನು ಒಂದು ಕುದುರೆಯ ಮೇಲೆ ಸವಾರನಾಗಿ ಕೋಟೆಯ ಎದುರು ಬಂದನು ಹಾಗೂ

ಇಲ್ಲಿ ಅವನು ಪ್ರಮಾಣ ಮಾಡಿದನು. ಒಂದು ವೇಳೆ ಕೋಟೆಯವರು ನನ್ನ ವಶದಲ್ಲಿ ಕೋಟೆಯನ್ನು ಒಪ್ಪಿಸದಿದ್ದರೆ ನಾನು ತುಂಬಾ ಕಠೋರ ರೀತಿಯಲ್ಲಿ ಶಿಕ್ಷೆಗೊಳಪಡಿಸುವೆನು. ಕೋಟೆಗೆ ಅಗ್ನಿಸ್ಪರ್ಶ ಮಾಡುವೆನು ಹಾಗೂ ಹೆಣ್ಣು ಗಂಡೆನ್ನದೆ ಎಲ್ಲರನ್ನೂ ಜೀವಂತವಾಗಿ ಸುಡುವೆನು. ಯಾವಾಗ ಈ ಮಾತನ್ನು ಕೋಟೆಯ ಒಳಗಿನ ಜನರು ಆಲಿಸಿದರೋ ಅವರು ಬಹಳೇ ಭಯಭೀತರಾಗಿ ಕೋಟೆಯನ್ನು ನಿಜಾಮನ ವಶಕ್ಕೆ ಒಪ್ಪಿಸಿದರು.

ಪರಿಂದಾ ಕೋಟೆಯು ಆದಿಲಶಾಹಿಗಳ ವಶಕ್ಕೆ :

ಆದಿಲಶಾಹ್ ತನ್ನ ಉಳಿದ ಸೈನ್ಯವನ್ನು ಜೊತೆಗೆ ತೆಗೆದುಕೊಂಡು ನಿಜಾಮ್‌ಶಾಹಿ ಪ್ರಾಂತ್ಯದ ಕಡೆಗೆ ಹೋದನು. ಅವನು ಭೀಡ, ಹಾಗೂ ಇನ್ನುಳಿದ ಪರಗಣಗಳನ್ನು ವಿನಾಶಗೊಳಿಸಿದನು. ಹಾಗೂ ಪರಿಂದಾ ಕೋಟೆಯ ಮೇಲೆ ದಾಳಿ ಮಾಡಿದನು. ಕೋಟೆಯ ಒಳಗಿನವರು. ಸಂಪೂರ್ಣ ರೀತಿಯಲ್ಲಿ ನಿರ್ಲಕ್ಷ್ಯತೆಯಿಂದ ಇದ್ದರು. ಹಾಗೂ ಕೋಟೆ ಬಾಗಿಲುಗಳು ತೆರೆದೇ ಇದ್ದವು. ಆದಿಲಶಾಹನ ಸೈನಿಕರು ನಗ್ನಖಡ್ಗಗಳನ್ನು ಬೀಸುತ್ತಾ ಯಾವುದೇ ಅಡೆತಡೆಗಳಿಲ್ಲದೇ ಕೋಟೆಯನ್ನು ಪ್ರವೇಶಿಸಿದರು. ಖ್ವಾಜಾಜಹಾಂನ ಬಹಳಷ್ಟು ಸೈನಿಕರನ್ನು ಕೊಂದರು. ಆದಿಲ್‌ಷಾಹ್‌ನು ಕೋಟೆಯ ಮೇಲೆ ದಿಗ್ವಿಜಯ ಸಾಧಿಸಿದನು. ಹಾಗೂ ನಂತರ ಅವನು ಈ ಕೋಟೆಯನ್ನು ತನ್ನ ಒಬ್ಬ ಪ್ರತಿಭಾವಂತ, ನಂಬಿಗಸ್ತನಾದ ದಖನಿ ಅಮೀರನ ವಶಕ್ಕೆ ಒಪ್ಪಿಸಿದನು. ಹಾಗೂ ತಾನು ಸ್ವತಃ ಬಿಜಾಪುರಕ್ಕೆ ಮರಳಿ ಬಂದನು.

ಬುರ್ಹಾನ್ ನಿಜಾಮ್‌ಷಾಹ್‌ನ ಮರಳುವಿಕೆ :

ಬುರ್ಹಾನ್ ನಿಜಾಮಶಾಹನಿಗೆ ಯಾವಾಗ ಈ ಸುದ್ದಿಯು ತಲುಪಿತೋ ಆಗ ಅವನು ಕಲ್ಯಾಣದ ಕೋಟೆಯನ್ನು ತನ್ನ ಓರ್ವ ಅಮೀರನ ವಶಕ್ಕೆ ನೀಡಿ ಹಾಗೂ ತಾನು ಬೇಗಬೇಗನೇ ಪ್ರಯಾಣದ ವೇಗವನ್ನು ಹೆಚ್ಚಿಸಿ ಪರಿಂದಾದತ್ತ ಧಾವಿಸಿದನು. ಕೋಟೆಯಿಂದ ಎರಡು ದಿನದ ಹಾದಿ ಉಳಿದಾಗ ಒಂದು ಆಶ್ಚರ್ಯಕರ ಘಟನೆ ನಡೆಯಿತು. ಅದೇ ರಾತ್ರಿ ಕೋಟೆಯ ಆದಿಲ್‌ಷಾಹಿ ರಕ್ಷಣಾಧಿಕಾರಿಯು ಸೊಳ್ಳೆಗಳ ಧ್ವನಿಯನ್ನು ಕೇಳಿದನು. ಹಾಗೂ ಅದನ್ನು ನಗಾರಿಯ ಶಬ್ದವೆಂದು ಬಗೆದನು. ಮತ್ತು ಅವನು ವೈರಿ ಬಂದನೆಂದು ತಿಳಿದನು. ಅದಕ್ಕಾಗಿ ಅವನು ಅಲ್ಲಿಂದ ತಕ್ಷಣ ಓಟ ಕಿತ್ತನು. ಅವನ ಉಳಿದ ಸೈನಿಕರೂ ದಿಕ್ಕೆಟ್ಟು ಕೋಟೆಯಿಂದ ಓಡಿಹೋದರು.

ಪರಿಂದಾ ಕೋಟೆಯು ನಿಜಾಮಶಾಹನ ವಶಕ್ಕೆ :

ಎರಡು ದಿನಗಳ ನಂತರ ಬುರ್ಹಾನ್ ನಿಜಾಮಶಾಹನು ಯಾವಾಗ ಪರಿಂದಾ ಕೋಟೆಗೆ ಆಕ್ರಮಿಸಿದನೋ ಅವನು ಕೋಟೆಯನ್ನು ಸಂಪೂರ್ಣವಾಗಿ ಯಾರೂ ಸೈನಿಕರಿಲ್ಲದ್ದನ್ನು ಕಂಡನು. ಅವನು ಕೋಟೆಯನ್ನು ಖ್ವಾಜಾ ಜಹಾನನ ವಶಕ್ಕೆ

ನೀಡಿದನು. ಹಾಗೂ ಅಹ್ಮದ್ ನಗರಕ್ಕೆ ಹೋದನು. ಹೀಗೆ ಈ ಕೋಟೆಯು ಯಾವುದೇ ಪ್ರತಿರೋಧವಿಲ್ಲದೇ ಮತ್ತೊಮ್ಮೆ ನಿಜಾಮ್‌ಶಾಹಿಯ ವಶಕ್ಕೆ ಬಂದಿತು.

ರಾಮ್‌ರಾಜ ಹಾಗೂ ಬುರ್ಹಾನ್ ನಿಜಾಮರಲ್ಲಿ ಸಸ್ನೇಹ ಸಂಬಂಧ :

ಅದೇ ಕಾಲದಲ್ಲಿ ಬುರ್ಹಾನ್ ನಿಜಾಮನು ಬೇಜಾನಗರದ ಆಡಳಿತಗಾರನಾದ ರಾಮರಾಜನ ಜೊತೆಗೆ ಸ್ನೇಹ ಸಂಬಂಧವನ್ನು ಬೆಳೆಯಿಸಿದನು. ಹಾಗೂ ತನ್ನ ಸೈನ್ಯದೊಂದಿಗೆ ಆದಿಲಶಾಹಿ ಪ್ರಾಂತ್ಯದಿಂದ ಸಾಗುತ್ತಾ ಸೋಲಾಪುರದ ಕೋಟೆಯ ಬಳಿ ತಲುಪಿದನು. ಹಾಗೂ ರಾಮರಾಜನೊಂದಿಗೆ ಭೇಟಿ ಮಾಡಿದನು. ಬುರ್ಹಾನ್‌ನು ರಾಮರಾಜನೊಂದಿಗೆ ಇದನ್ನು ನಿಶ್ಚಯಿಸಿದನು. ಏನೆಂದರೆ ರಾಯಚೂರು ಹಾಗೂ ಮುದ್ಗಲ್‌ಗಳನ್ನು ರಾಮರಾಜನು ವಶಪಡಿಸಿಕೊಳ್ಳಬೇಕು ಹಾಗೂ ಸೋಲಾಪುರ ಕೋಟೆಯನ್ನು ಬುರ್ಹಾನ್‌ನು ತನ್ನ ಉಪಯೋಗದಲ್ಲಿ ತೆಗೆದುಕೊಳ್ಳಬೇಕು.

ಸೋಲಾಪುರದ ವಿಜಯ :

ಅದರ ನಂತರ ರಾಮರಾಜನು ರಾಯಚೂರು, ಹಾಗೂ ಮುದ್ಗಲ್‌ನ್ನು ಹಾಗೂ ಬುರ್ಹಾನ್ ನಿಜಾಮ್‌ಶಾಹನು ಸೋಲಾಪುರದ ಕೋಟೆ ಸುತ್ತ ದಿಗ್ಬಂಧನ ಮಾಡಿದನು. ಬುರ್ಹಾನ್‌ನು ಸೋಲಾಪುರದ ಮೇಲೆ ಬಹಳ ಬೇಗನೇ ವಿಜಯ ಸಾಧಿಸಿದನು. ಹಾಗೂ ರಾಮರಾಜನ ಸಹಾಯಕ್ಕಾಗಿ ರಾಯಚೂರಿನತ್ತ ಸಾಗಿದನು. ವಾಸ್ತವಾಂಶವು ಹೀಗಿದೆ. ಏನೆಂದರೆ ಕೆಲವು ದಿನಗಳ ನಂತರ ಬುರ್ಹಾನ್ ನಿಜಾಮ್‌ಷಾಹಿಯು ತನಕನಾದರಿಗೆ ಹೇಳಿದನು. ಮಳೆಗಾಲ ಋತುವು ಸಮೀಪ ಬಂದಿದೆ. ಹೀಗಾಗಿ ನನ್ನ ಹಾಗೂ ರಾಮರಾಜನ ಅಮೂಲ್ಯ ವೇಳೆಯು ಈ ಕೋಟೆಯ ದಿಗ್ಬಂಧನ ಮಾಡುವಲ್ಲಿ ವ್ಯರ್ಥವಾಗಿ ಕಳೆಯುವುದು, ಯಾವುದೇ ಕಾರಣಕ್ಕೆ ಒಳಿತಲ್ಲ. ಒಂದು ವೇಳೆ ನೀನು ಬಯಸಿದರೆ ನಾನು ಸೋಲಾಪುರಕ್ಕೆ ತಲುಪಿ ಅಲ್ಲಿಯ ಕೋಟೆಯನ್ನು ಮತ್ತೊಮ್ಮೆ ದಿಗ್ಬಂಧನಗೊಳಿಸುವೆನು. ಹಾಗೂ ಎರಡೂ ಕಡೆ ಒಂದೇ ಸಲ ವಿಜಯ ಸಾಧಿಸೋಣ.

ತನಕನಾದರಿಯು ರಾಮರಾಜನಿಗೆ ತಿಳಿಹೇಳಿ ಇದರ ಅನುಮತಿ ಪಡೆದುಕೊಂಡನು. ಹಾಗೂ ಬುರ್ಹಾನ್ ನಿಜಾಮನು ರಾಮರಾಜನ ಸೈನ್ಯದ ಒಂದು ಭಾಗವನ್ನು ತನ್ನೊಂದಿಗೆ ತೆಗೆದುಕೊಂಡು ಹೊರಟನು. ಸೋಲಾಪುರ ತಲುಪಿ ಬುರ್ಹಾನ್ ನಿಜಾಮನು ಕೋಟೆಯನ್ನು ದಿಗ್ಬಂಧನಗೊಳಿಸಿದನು. ರೂಮಿಖಾನ್‌ನು ನಿಜವಾಗಿ ಮೆಹಮೂದ್ ಷಾಹ್ ಗುಜರಾತಿಯ ಸೇವಕನಾಗಿದ್ದನು. ಕೋಟೆಯನ್ನು ವಶಪಡಿಸಿಕೊಳ್ಳಲು ಬಹಳ ಪ್ರಯತ್ನಿಸಿದನು. ಹಾಗೂ ಕೊನೆಗೆ ಇವನ ಪ್ರಯತ್ನದಿಂದಲೇ ಮೂರು ತಿಂಗಳುಗಳ ಅವಧಿಯಲ್ಲಿ ಕೋಟೆಯ ಮೇಲೆ ವಿಜಯ ಸಾಧಿಸಲಾಯಿತು.

ಗುಲ್ಬರ್ಗಾದ ಮೇಲೆ ವಿಜಯ ಸಾಧಿಸಲು ನಿಶ್ಚಯ :

ಅದರ ನಂತರ ಬುರ್ಹಾನ್ ನಿಜಾಮನು ಗುಲ್ಬರ್ಗಾಕ್ಕೆ ಹೋಗಲು ನಿಶ್ಚಯಿಸಿದನು.

ಅಲ್ಲಿಯ ಕೋಟೆಯನ್ನು ಸಹ ಗೆಲ್ಲಬೇಕು. ಆದರೆ ಯಾವಾಗ ಅವನಿಗೆ ಈ ಸುದ್ದಿ ತಿಳಿಯಿತೋ ಆಗ ರಾಮರಾಜನು ರಾಯಚೂರು ಹಾಗೂ ಮುದ್ಗಲ್ ಕೋಟೆಗಳನ್ನು ಗೆದ್ದು ಬೇಜಾನಗರಕ್ಕೆ ಮರಳಿದ್ದಾನೆ. ಆಗ ಅವನು ಈ ವರ್ಷ ಗುಲ್ಬರ್ಗಾದ ಕೋಟೆಯನ್ನು ಗೆಲ್ಲುವ ಬಯಕೆಯನ್ನು ಬಿಟ್ಟುಕೊಟ್ಟನು.

ಬಿಜಾಪುರಕ್ಕೆ ಪ್ರಯಾಣ :

ಹಿಜ್ರಿಶಕೆ ೯೬೦ ರಲ್ಲಿ ಬುರ್ಹಾನ್ ನಿಜಾಮ್‌ಷಾಹ್‌ನು ಮತ್ತೊಮ್ಮೆ ಆದಿಲ್‌ಶಾಹ ಸಾಮ್ರಾಜ್ಯದಲ್ಲಿ ಗೆಲ್ಲಲು ಬಯಸಿದನು. ಈ ಉದ್ದೇಶವನ್ನು ಪೂರ್ತಿಗೊಳಿಸುವದಕ್ಕಾಗಿ ಅವನು ರಾಮರಾಜನೊಂದಿಗೆ ಪರಸ್ಪರ ಒಪ್ಪಂದ ಮಾಡಿದನು. ಅವನು (ರಾಮರಾಜ) ಸಾಗರದ ಕೋಟೆ ಹಾಗೂ ಆಹತ್ಕರ್‌ವನ್ನು ಗೆಲ್ಲಬೇಕು ಹಾಗೂ ಬಿಜಾಪುರ ಮತ್ತು ಗುಲ್ಬರ್ಗಾಗಳು ನಿಜಾಮನ ವಶವಾಗಬೇಕು. ಹಿಜ್ರಿಶಕೆ ೯೬೧ ರಲ್ಲಿ ಬುರ್ಹಾನ್ ನಿಜಾಮಷಾಹ್‌ನು ರಾಮರಾಜನಿಗೆ ಜೊತೆಯಲ್ಲಿ ಕರೆದುಕೊಂಡು ಬಿಜಾಪುರದತ್ತ ಹೊರಟನು.

ಬುರ್ಹಾನ್ ನಿಜಾಮಷಾಹ್‌ನು ರೋಗಪೀಡಿತನಾದುದು :

ಆದಿಲ್‌ಷಾಹ್‌ನು ಬುರ್ಹಾನ್ ನಿಜಾಮ್‌ಷಾಹ್‌ನನ್ನು ಎದುರಿಸುವ ಧೈರ್ಯ ತೋರಲಿಲ್ಲ. ಹಾಗೂ ಪನಾಲಾಕ್ಕೆ ಹೊರಟುಹೋದನು. ಬುರ್ಹಾನ್ ನಿಜಾಮನು ಬಿಜಾಪುರದ ಕೋಟೆಯ ಸುತ್ತ–ಮುತ್ತ ದಿಗ್ಬಂಧನಗೊಳಿಸಿದನು. ಅವನು ಈ ಕೋಟೆಯನ್ನು ಗೆಲ್ಲುವುದರಲ್ಲಿದ್ದನು. ಆದರೆ ವಿಧಿಯ ಆಟವೇ ಬೇರೆ ಇತ್ತು. ನಿಜಾಮ್‌ಷಾಹ್‌ನ ಮೇಲೆ ರೋಗದ ಆಕ್ರಮಣವಾಯಿತು. ಹಾಗೂ ಅವನು ಅಹ್ಮದ್ ನಗರಕ್ಕೆ ಮರಳಿ ಬಂದನು.

ನಿಧನ :

ಬುರ್ಹಾನ್ ನಿಜಾಮ್‌ನ ರೋಗವು ಪ್ರಾಣಾಪಹರಣವಾಗಿ ಪರಿಣಮಿಸಿತು. ಬಹಳಷ್ಟು ರೀತಿಯಿಂದ ಚಿಕಿತ್ಸೆಯನ್ನು ನೀಡಲಾಯಿತು. ಆದರೆ ಯಾವ ಯುಕ್ತಿಯು, ಚಿಕಿತ್ಸೆಯು ಪರಿಣಾಮಕಾರಿಯಾಗಲಿಲ್ಲ. ಹಾಗೂ ಅವನು ಇಹಲೋಕವನ್ನು ತ್ಯಜಿಸಿದನು. ಬುರ್ಹಾನ್‌ನನ್ನು 'ಬಾಗೇರೋಜಾ'ದಲ್ಲಿ ಅವನ ತಂದೆಯ ಸಮಾಧಿಯ ಬಳಿ ದಫನ್ ಮಾಡಲಾಯಿತು. ಕೆಲಸಮಯದ ನಂತರ ಅಹ್ಮದ್ ನಿಜಾಮ್ ಹಾಗೂ ಬುರ್ಹಾನ್ ನಿಜಾಮ್‌ಷಾಹ್‌ನ ಶವಪೆಟ್ಟಿಗೆಗಳನ್ನು ಪವಿತ್ರ ಕರ್ಬಲಾದ ಕಬರಸ್ತಾನಕ್ಕೆ ಕಳುಹಿಸಲಾಯಿತು. ಹಾಗೂ ಅವರ ಶವವನ್ನು ಹಜ್ರತ್ ಇಮಾಮ್ ಹುಸೈನ್‌ರ ಪವಿತ್ರ ಸಮಾಧಿಯ ಹೊರಭಾಗದಲ್ಲಿ ಒಂದು ಅಡಿ ದೂರದಲ್ಲಿ ದಫನ್ ಮಾಡಲಾಯಿತು.

ನಿಧನದ ದಿನಾಂಕ :

ಅದೇ ವರ್ಷ ಗುಜರಾತಿನ ಆಡಳಿತಗಾರನಾದ ಸುಲ್ತಾನ್ ಮಹ್ಮೂದ್ ಗುಜರಾತಿ ಹಾಗೂ ದೆಹಲಿಯ ಷೆಹನ್‌ಷಾಹನಾದ ಸಲಿಂಷಾಹ್‌ನೂ ಸಹ ಮೃತ್ಯುವಶರಾದರು. "ತಾರೀಖ ಇ ಫರಿಶ್ತಾದ ಗ್ರಂಥಕರ್ತನ ತಂದೆಯವರಾದ ಗೌರವಾನ್ವಿತ ವಿದ್ವಾಂಸ ಗುಲಾಮ್ ಅಲಿಯವರು ಈ ಮೂವರು ಆಡಳಿತಗಾರರ ನಿಧನದ ನಿಖರ ದಿನಾಂಕ "ಜವಾಲೆ ಖುಸರ್ವಾ" ದಾಖಲಿಸಿದ್ದಾರೆ.

ಸಂತಾನ :

ಬುರ್ಹಾನ್ ನಿಜಾಮಶಾಹನ ನಂತರ ಆತನ ಸಂತಾನ ಯಾರು ಜೀವಂತವಿದ್ದರೋ – ಅವರ ಹೆಸರುಗಳು ಹೀಗಿವೆ – ಹುಸೈನ್ ಹಾಗೂ ಅಬ್ದುಲ್ ಖಾದಿರ್ ಇವರಿಬ್ಬರು ಬೀಬಿ ಅಮೀನಾಳ ಪವಿತ್ರ ಗರ್ಭದಿಂದ ಜನಿಸಿದ್ದರು. ಷಾಅಲಿಹಸನ್ ಈತನು ಯೂಸುಫ್ ಆದಿಲಶಾಹನ ಪುತ್ರಿಯಾದ ಬೀಬಿ ಮರಿಯಮ್ಮಳ ಹೊಟ್ಟೆಯಲ್ಲಿ ಹುಟ್ಟಿದವನಾಗಿದ್ದನು. ಷಾಹ್ ಹೈದರ್ ಯಾರ ವಿವಾಹವು ಖ್ವಾಜಾ ಜಹಾನನ ಪುತ್ರಿಯೊಂದಿಗೆ ಜರುಗಿತ್ತು. ಮೀರಾಮೊಹಮ್ಮದ ಬಾಖರ್ ಆತನ ನಿಧನವು ಬಿಜಾಪುರದಲ್ಲಿ ಆಯಿತು. ಯುವರಾಜ ಮೊಹಮ್ಮದ್ ಖುದಾಬಂದಾ ಆತನು ಬಂಗಾಳದಲ್ಲಿ ನಿಧನನಾದನು.

■

*

೩. ಬುರ್ಹಾನ್ ನಿಜಾಮಶಾಹನ ಪುತ್ರ ಹುಸೈನ್ ನಿಜಾಮಶಾಹ

ಪಟ್ಟಾಭಿಷೇಕ ಹಾಗೂ ರಾಜಕುಮಾರ ಅಬ್ದುಲ್‌ಖಾದಿರ್‌ನ ವಿರೋಧ :

ಪಟ್ಟಾಭಿಷೇಕದ ವೇಳೆಯಲ್ಲಿ ಹುಸೈನ್ ನಿಜಾಮ್‌ನ ವಯಸ್ಸು ಮೂವತ್ತು ವರ್ಷವಿತ್ತು. ರಾಜಕುಮಾರನಾದ ಅಬ್ದುಲ್ ಖಾದಿರ್ ತನ್ನ ತಂದೆಯ ಪ್ರಿಯಪುತ್ರನಾಗಿದ್ದನು. ಅವನು ಹುಸೈನ್ ನಿಜಾಮ್‌ನ ದೊರೆತನವನ್ನು ಒಪ್ಪಲಿಲ್ಲ. ಹಾಗೂ ಪಟ್ಟಾಭಿಷೇಕದ ವೇಳೆ ತನ್ನ ಸಹೋದರರನ್ನು ಜೊತೆಗೆ ಕರೆದುಕೊಂಡು ಕೋಟೆಯ ಹೊರಗಡೆಗೆ ಬಂದನು. ಅಮೀರರು ಎರಡು ಗುಂಪುಗಳಲ್ಲಿ ವಿಂಗಡನೆಯಾದರು. ವಿದೇಶಿಯರು ಹಾಗೂ ಹಬಶಿ ಅಮೀರರು ಹುಸೈನ್‌ಷಾಹ್‌ನ ಜೊತೆ ನೀಡಿದರು. ದಖನಿ ಹಾಗೂ ಹಿಂದುಗಳು ರಾಜಕುಮಾರ ಅಬ್ದುಲ್ ಖಾದಿರ್‌ನ ಬೆಂಬಲಕ್ಕೆ ನಿಂತರು. ಹಾಗೂ ಬಂಕಾಪುರ ಪಟ್ಟಣದಲ್ಲಿ ಅವನ ತಲೆಯ ಮೇಲೆ ಷಾಹೀ ಕೊಡೆಯನ್ನು ಹಿಡಿದರು.

ಸಹೋದರರಲ್ಲಿ ವಿವಾದ :

ಬುರ್ಹಾನ್ ನಿಜಾಮಶಾಹನ ಇತರ ಪುತ್ರರು ಮೊಹ್ಮದ್ ಖುದಾಬಿಂದಾ, ಷಾಹ್ ಹೈದರ್ ಹಾಗೂ ಮೀರಾ ಮುಹಮ್ಮದ್‌ಬಾಖರ್‌ರು ಅಬ್ದುಲ್ ಖಾದಿರ್‌ನ ಜೊತೆ ನೀಡಿದರು. ಈ ಎಲ್ಲ ಸಹೋದರರಲ್ಲಿ ರಕ್ತಪಾತವಾಗುವ ಸಂಭವವಿತ್ತು. ಆದರೆ ಖಾಸಿಂ ಬೇಗ್ ಇವರ ಪ್ರಯತ್ನದಿಂದ ನಾಲ್ಕು ಐದು ನೂರು ಶಸ್ತ್ರಾಸ್ತ್ರ ಸಜ್ಜಿತ ಸೈನಿಕರು ಹಾಗೂ ಹವಾಲ್ದಾರ್‌ರು ರಾಜಕುಮಾರ ಅಬ್ದುಲ್ ಖಾದಿರ್‌ನಿಂದ ಬೇರ್ಪಟ್ಟು ಹುಸೈನ್ ನಿಜಾಮಶಾಹನ ಬಳಿ ತಲುಪಿದರು. ಕೋಟೆಯ ಒಳಗಿನ ಜನರಿಗೆ ಇದರಿಂದ ದೃಢವಾದ ಬೆಂಬಲ ಸಿಕ್ಕಿತು. ಅವರು ಹುಸೈನ್‌ನಿಜಾಮನ ತಲೆಯ ಮೇಲೆ ಷಾಹೀ ಕೊಡೆಯ ನೆರಳನ್ನು ಮಾಡಿದರು.

ಅಬ್ದುಲ್ ಖಾದಿರ್‌ನಿಂದ ದಖನಿ ಅಮೀರರ ಬೇರ್ಪಡುವಿಕೆ :

ಇದರ ನಂತರ ಕೋಟೆಯ ಜನರು ಯುವರಾಜ ಅಬ್ದುಲ್ ಖಾದಿರ್‌ನ ಕ್ಷೋಭೆಯನ್ನು ಹುಟ್ಟಡಗಿಸಲು ಪ್ರಯತ್ನಿಸಿದರು. ಹಾಗೂ ಈ ಉದ್ದೇಶಕ್ಕಾಗಿ ಜನರನ್ನು ತಮ್ಮೊಡನೆ ತೆಗೆದುಕೊಳ್ಳಲು ಅವರಲ್ಲಿ ಅಪಾರ ದ್ರವ್ಯವನ್ನು ಹಂಚತೊಡಗಿದರು. ಪ್ರಸಿದ್ಧ ದಖನಿ ಅಮೀರರಾದ ಖುರ್ಷಿದ ಖಾನ್ ಹಾಗೂ ಆಲಂ ಖಾನ್ ಮೇವಾತಿ ಇತರರು ಈ ಸ್ಥಿತಿಯನ್ನು ಗಮನಿಸಿದರು. ಹಾಗೂ ಹುಸೈನ್ ನಿಜಾಮ್‌ಷಾಹ್‌ನ ನಕ್ಷತ್ರಗಳು ಉನ್ನತವಾಗಿವೆ. ಅದಕ್ಕೆ ಅವರು ಖಾಸಿಂ ಬೇಗ್ ಹಕಿಂರ ಮೂಲಕ ಒಪ್ಪಿಗೆಯನ್ನು ನೀಡಿದರು. ಹಾಗೂ ರಾಜಕುಮಾರ ಅಬ್ದುಲ್ ಖಾದಿರ್‌ನಿಂದ ಬೇರ್ಪಟ್ಟು ತಮ್ಮ ತಮ್ಮ ಮನೆಗೆ ಹೊರಟು ಹೋದರು.

ರಾಜಕುಮಾರ ಅಬ್ದುಲ್ ಖಾದಿರ್‌ನು ಪರಾರಿಯಾದದ್ದು ಹಾಗೂ ಮೃತ್ಯು ಹೊಂದಿದ್ದು:

ಈ ಪರಿಸ್ಥಿತಿಯನ್ನು ಮನಗಂಡು ಯುವರಾಜ ಅಬ್ದುಲ್ ಖಾದಿರ್ ಬಹಳೇ ಚಿಂತಿತನಾದನು. ಅವನು ತನ್ನ ಸಹೋದರರು ಹಾಗೂ ಸಂಬಂಧಿಕರೊಂದಿಗೆ ಇದರ ಕುರಿತು ಚರ್ಚಿಸಿದನು. ಎಲ್ಲರೂ ಇಲ್ಲಿಂದ ಓಡಿ ಹೋಗುವುದು ಸರಿಯಾದುದು ಎಂದು ಸಲಹೆ ನೀಡಿದರು. ಯುವರಾಜ ಅಬ್ದುಲ್ ಖಾದಿರ್ ತನ್ನ ಕೆಲವು ಸಂಬಂಧಿಕರು ಹಾಗೂ ಆಪ್ತರೊಂದಿಗೆ ಅಬ್ದುಲ್ ಮಲೀಕ್‌ನ ಹತ್ತಿರ ಬರಾರ್‌ಕ್ಕೆ ಹೋದನು ಹಾಗೂ ಅಲ್ಲಿಯೇ ಅವನು ಮೃತ್ಯುವಶವಾದನು.

ಶಾಂತಿ ಹಾಗೂ ನೆಮ್ಮದಿಯ ಕಾಲ :

ಶಾಹ ಅಲಿ, ಮುಹಮ್ಮದ್ ಖುದಾಬಂದಾ ಹಾಗೂ ಮೀರಾಮುಹಮ್ಮದ್ ಬಾಖರ್ ಬಿಜಾಪುರಕ್ಕೆ ಹೋದರು. ಷಾಹ್ ಹೈದರ್‌ನು ಪರಿಂದಾಕ್ಕೆ ಹೊರಟನು. ಸಾರಾಂಶದಲ್ಲಿ ಹೇಳುವುದಾದರೆ ಹುಸೈನ್ ನಿಜಾಮಶಾಹನ ಎಲ್ಲ ವೈರಿಗಳು ಯಾರು ಸಾಮ್ರಾಜ್ಯದ ವಾರಸುದಾರರಾಗುವವರಿದ್ದರೋ ಒಬ್ಬೊಬ್ಬರಾಗಿ ದೇಶವನ್ನು ತ್ಯಜಿಸಿ ಹೊರಹೋದರು. ಅದರ ನಂತರ ಹುಸೈನ್ ನಿಜಾಮನು ದೇಶದಲ್ಲಿ ಅಹ್ಲೆಬೈತ್‌ದ ಧಾರ್ಮಿಕ ಮುಖಂಡನ ಹೆಸರಲ್ಲಿ 'ಖುತ್ಬಾ' ಜಾರಿಗೊಳಿಸಿದನು. ಬಹಳೇ ಶಾಂತಿಯುತವಾಗಿ ಹಾಗೂ ನೆಮ್ಮದಿಪೂರ್ವಕವಾಗಿ ಆಡಳಿತದ ಚುಕ್ಕಾಣಿಯನ್ನು ಹಿಡಿದು ತನ್ನ ಜವಾಬ್ದಾರಿ ಹಾಗೂ ಕರ್ತವ್ಯಗಳನ್ನು ನಿಭಾಯಿಸತೊಡಗಿದನು.

ಸೈಫ್ ಐನುಲ್ ಮುಲ್ಕನು ಪರಾರಿಯಾದದ್ದು :

ಕೆಲವೇ ದಿನಗಳಲ್ಲಿ ಹುಸೈನ್ ನಿಜಾಮಶಾಹನು ಯುವರಾಜನಾದ ಅಬ್ದುಲ್ ಖಾದಿರ್‌ನನ್ನು ಸಹಾಯ ಮಾಡುವವರನ್ನು ಕಠಿಣಾತಿ ಕಠಿಣ ಶಿಕ್ಷೆಗಳನ್ನು ನೀಡಿದನು. ಸೈಫ್ ಐನುಲ್‌ಮುಲ್ಕ ಯಾರು ಸುಲ್ತಾನ್ ಬಹಾದ್ದೂರ್ ಗುಜರಾತಿಯ ನಿಧನದ

ನಂತರ ಅಹ್ಮದ್ ನಗರಕ್ಕೆ ಬಂದು ಸೇನಾಧಿಪತಿಯ ಪದಾಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿದ್ದನು. ಬಾದಶಾಹನ ಕ್ರೋಧದಿಂದ ಭಯಭೀತನಾಗಿ ಬರಾರ್‌ಕ್ಕೆ ಓಡಿಹೋದನು.

ಖ್ವಾಜಾ ಜಹಾನನ ಆಪೇಕ್ಷೆ :

ಯುವರಾಜ ಹೈದರ್‌ನ ವಿವಾಹವನ್ನು ಪರಿಂದಾ ಪಟ್ಟಣದ ಆಡಳಿತಗಾರನಾದ ಖ್ವಾಜಾ ಜಹಾನನ ಪುತ್ರಿಯೊಂದಿಗೆ ಜರುಗಿತು. ಅವನು ತನ್ನ ಅಳಿಯನನ್ನು ಬಾದಷಾಹನನ್ನಾಗಿಸುವ ಬಯಕೆ ಹೊಂದಿದ್ದನು. ಅವನು ಇಬ್ರಾಹಿಂ ಆದಿಲ್‌ಷಾಹ್‌ನ ಸಹಾಯದಿಂದ ಈ ಉದ್ದೇಶವನ್ನು ಪೂರ್ತಿಕರಿಸುವ ಪ್ರಯತ್ನವನ್ನು ಮಾಡಿದನು. ಹುಸೈನ್ ನಿಜಾಮಷಾಹ್‌ನಿಗೆ ಯಾವಾಗ ಇದರ ಕುರಿತು ತಿಳಿಯಿತೋ ಅವನು ಬಹಳ ಕೋಪೋದ್ರಿಕ್ತನಾದನು. ಆದರೆ ಯುಕ್ತಿಪೂರ್ವಕವಾಗಿ ತನ್ನ ಕೋಪವನ್ನು ಪ್ರದರ್ಶಿಸಲಿಲ್ಲ. ಇದರ ಹೊರತಾಗಿ ಅವನಿಗೆ ಒಂದು ಪ್ರೇಮಭರಿತ ಪತ್ರವನ್ನು ಬರೆದನು.

ಹುಸೈನ್ ನಿಜಾಮಶಾಹನಿಂದ ಖ್ವಾಜಾ ಜಹಾನನಿಗೆ ಒಂದು ಪ್ರೇಮ ಭರಿತ ಪತ್ರ:

ಹುಸೈನ್ ನಿಜಾಮನ ಈ ಪ್ರೇಮಭರಿತ ಪತ್ರವನ್ನು ನೋಡಿ ಖ್ವಾಜಾ ಜಹಾನ ಹೌಹಾರಿದನು. ಹಾಗೂ ವಿಚಿತ್ರವಾದ ಸಂಕಟದಲ್ಲಿ ಬಿದ್ದನು. ಅವನಲ್ಲಿ ಇಷ್ಟು ಧೈರ್ಯವೂ ಇರಲಿಲ್ಲ. ಏಕೆಂದರೆ ನೇರವಾಗಿ ಬಾದಶಾಹನನ್ನು ವಿರೋಧಿಸಲು ಆಗುತ್ತಿರಲಿಲ್ಲ ಹಾಗೂ ಅವನು ಇಷ್ಟು ಯೋಗ್ಯತೆಯನ್ನು ಹೊಂದಿರಲಿಲ್ಲ. ಏನೆಂದರೆ ಬಾದಷಾಹನ ಎದುರಲ್ಲಿ ಹಾಜರಾಗಿ ವಿನಮ್ರ ವಿಧೇಯತೆಯನ್ನು ಪ್ರದರ್ಶಿಸುತ್ತಿದ್ದನು. ಬಹಳೇ ರೀತಿಯಲ್ಲಿ ಯೋಚಿಸಿ ಖ್ವಾಜಾಜಹಾನನು ಹುಸೈನ್ ನಿಜಾಮನ ಹೆಸರಲ್ಲಿ ಒಂದು ಪತ್ರವನ್ನು ರವಾನಿಸಿದನು. ಅದರಲ್ಲಿ ಅವನು ಹೀಗೆ ಬರೆದಿದ್ದನು. "ಏಕೆಂದರೆ ನನ್ನಿಂದ ಒಂದು ತಪ್ಪು ಜರುಗಿದೆ. ಅದಕ್ಕಾಗಿ ನಾನು ಲಜ್ಜಿತನಾಗಿದ್ದೇನೆ. ಹಾಗೂ ಬಾದ್‌ಶಾಹ್‌ನ ಕ್ರೋಧದ ಭಯದಿಂದಾಗಿ ಖಾವಂದ್‌ರ ದರ್ಬಾರದಲ್ಲಿ ಹಾಜರಾಗಲು ಅಯೋಗ್ಯನಾಗಿದ್ದೇನೆ. ನನಗೆ ತಮ್ಮ ಅರಸುಕೃಪೆಯ ಮೇಲೆ ಸಂಪೂರ್ಣ ನಿರೀಕ್ಷೆಯಿದೆ. ತಾವು ನನ್ನ ತಪ್ಪುಗಳನ್ನು ಮನ್ನಿಸುವಿರೆಂದು ನಂಬಿದ್ದೇನೆ."

ಪರಿಂಡಾ ಕೋಟೆ ಪಡೆಯುವ ಹುಸೈನ್ ನಿಜಾಮ್‌ಷಾಹ್‌ನ ಬಯಕೆ :

ಹುಸೈನ್ ನಿಜಾಮಶಾಹನು ಇದನ್ನು ಸ್ಪಷ್ಟವಾಗಿ ಅರಿತುಕೊಂಡನು. ಏನೆಂದರೆ ಖ್ವಾಜಾ ಜಹಾಂನ್‌ನು ಎಂದಿಗೂ ಅಹ್ಮದ್‌ನಗರಕ್ಕೆ ಬರಲಾರನು. ಆದುದರಿಂದ ಅವನು ಖ್ವಾಜಾ ಜಹಾಂನನ್ನು ಬಗ್ಗು ಬಡಿಯಲೆಂದು ಪರಿಂದಾದತ್ತ ಪ್ರಯಾಣ ಬೆಳೆಸಿದನು. ಅಲ್ಲಿ ತಲುಪಿ ಕೊಲೆ ಹಾಗೂ ರಕ್ತಪಾತವನ್ನು ಉಂಟು ಮಾಡಿದನು. ಖ್ವಾಜಾ ಜಹಾಂನ್‌ನು ಬಹಳ ಭಯಭೀತನಾದನು. ಹಾಗೂ ಅವನು ತನ್ನ ಓರ್ವ

ಹಿತೈಷಿಯನ್ನು ಕೋಟೆಯ ರಕ್ಷಣೆಗಾಗಿ ನೇಮಿಸಿದನು. ಸ್ವತಃ ಇಬ್ರಾಹಿಂ ಆದಿಲ್‌ಷಾಹ್‌ನ ಸಹಾಯ ಪಡೆಯಲು ಬಿಜಾಪುರಕ್ಕೆ ಹೋದನು.

ಪರಿಂದಾ ಕೋಟೆಯ ವಶಪಡಿಸಿಕೊಳ್ಳುವಿಕೆ :

ಹುಸೈನ್ ನಿಜಾಮ್‌ಷಾಹ್‌ನು ಕೋಟೆಯನ್ನು ದಿಗ್ಬಂಧನಗೊಳಿಸಿದನು. ಹಾಗೂ ಕೋಟೆಯ ಒಳಗಿನವರಿಗೆ ಇಬ್ರಾಹಿಂ ಆದಿಲ್‌ಷಾಹ್‌ನ ಸಹಾಯದ ನಿರೀಕ್ಷೆಯಿತ್ತು. ಅದಕ್ಕಾಗಿ ಅವರು ಸಾಯಂಕಾಲದವರೆಗೆ ನಿಜಾಮಷಾಹಿಗಳನ್ನು ಎದುರಿಸಿದರು. ನಿಜಾಮಷಾಹಿಗಳು ತೋಪುಗಳಿಂದ ಮದ್ದು ಹಾರಿಸಿ ಗೋಡೆಗಳನ್ನು ಕೆಡವಿದರು. ಹಾಗೂ ಕೋಟೆಯ ಒಳಗಿನ ಜನರಿಗೆ ಖಡ್ಗದ ರುಚಿ ತೋರಿಸಿದರು. ಹುಸೈನ್ ನಿಜಾಮನು ಕೋಟೆಯನ್ನು ವಶಪಡಿಸಿಕೊಂಡನು. ಹಾಗೂ ತನ್ನ ಓರ್ವ ನಂಬಿಗಸ್ತ ಅಮೀರನನ್ನು ಕೋಟೆಯ ಆಡಳಿತಗಾರನನ್ನಾಗಿ ನೇಮಿಸಿ ಅಹ್ಮದ್‌ನಗರಕ್ಕೆ ಮರಳಿದನು.

ಇಬ್ರಾಹಿಂ ಆದಿಲ್‌ಷಾಹ್‌ನ ಬಯಕೆ :

ಮಗದೂಮ್ ಖ್ವಾಜಾ ಜಹಾಂ ಹಾಗೂ ಹಲವಾರು ಯುವರಾಜರು ಹುಸೈನ್ ನಿಜಾಮಷಾಹ್‌ನಿಂದ ಭಯಪಟ್ಟು ಬಿಜಾಪುರಕ್ಕೆ ಹೊರಟು ಹೋದರು. ಹಾಗೂ ಇಬ್ರಾಹಿಂ ಆದಿಲ್‌ಷಾಹ್‌ನ ಅಡಿಯಲ್ಲಿ ಬಂದರು. ಅದೇ ಸಮಯದಲ್ಲಿ ಸೈಫ್ ಐನುಲ್ ಮುಲ್ಕನು ಸಹ ಬರಾರ್‌ರಿಂದ ಬಿಜಾಪುರಕ್ಕೆ ಬಂದನು. ಹಾಗೂ ಆದಿಲ್‌ಷಾಹನ ಪದಾಧಿಕಾರಿಯಾಗಿ ನೇಮಕಗೊಂಡನು. ಇಬ್ರಾಹಿಂ ಆದಿಲ್‌ಷಾಹ್‌ನು ತನ್ನ ಅತ್ತೆಯ ಮಗ ಮೀರಾಷಾಹ್ ಅಲಿಯನ್ನು ಚತರ್ (ಕೊಡೆ) ನೀಡಿ ಪುರಸ್ಕರಿಸಿದನು. ಹಾಗೂ ಈ ಎಲ್ಲ ಜನರನ್ನು ಯಾರು ಹುಸೈನ್ ನಿಜಾಮನ ಅತ್ಯಾಚಾರ ಹಾಗೂ ಶೋಷಣೆಗೆ ಬಲಿಯಾಗಿದ್ದಾರೆ. ಮೀರಾ ಷಾಹ್ ಅಲಿ ಸುತ್ತ ಸೇರಿಸಬೇಕು ಹಾಗೂ ಮತ್ತೆ ಷಾಹ್ ಅಲಿಯನ್ನು ಅಹ್ಮದ್‌ನಗರದ ಸಿಂಹಾಸನಾಧೀಶನನ್ನಾಗಿಸಲು ಇಚ್ಛಿಸಿದನು.

ಇಮಾದುಲ್ ಮುಲ್ಕನಿಂದ ಸಹಾಯದ ಕೋರಿಕೆ :

ಹುಸೈನ್ ನಿಜಾಮ್‌ಷಾಹ್‌ನಿಗೆ ಯಾವಾಗ ಈ ಎಲ್ಲ ಮಾತುಗಳು ಅರಿವಿಗೆ ಬಂದವೋ ಆಗ ಅವನು ವಾಸು ಪಂಡಿತನಿಗೆ ತನ್ನ ದೂತನನ್ನಾಗಿಸಿ ಇಮಾದುಲ್‌ಮುಲ್ಕನ ಬಳಿ ಕಳುಹಿಸಿದನು. ಏಕೆಂದರೆ ಈರ್ವರೂ ಆಡಳಿತಗಾರರು ಪರಸ್ಪರ ಒಗ್ಗೂಡಿ ಇಬ್ರಾಹಿಂ ಆದಿಲ್‌ಷಾಹ್‌ನ ಮೇಲೆ ದಾಳಿ ಮಾಡಬೇಕು. ಹಾಗೂ ಇದರಿಂದ ವೈರಿಗಳ ಯೋಜನೆಗಳನ್ನು ವಿನಾಶ ಮಾಡಬೇಕು. ಇಮಾದುಲ್ ಮುಲ್ಕನು ಹುಸೈನ್ ನಿಜಾಮನ ಸಹಾಯಕ್ಕಾಗಿ ಸುಮಾರು ಏಳುಸಾವಿರ ಸೈನಿಕರನ್ನು ಕಳುಹಿಸಿದನು.

ಹುಸೈನ್ ನಿಜಾಮನು ಸೋಲಾಪುರಕ್ಕೆ ಹೊರಟಿದ್ದು :

ಆಮಾದುಲ್ ಮುಲ್ಕನ ಸವಾರರನ್ನು ಜೊತೆಯಾಗಿಸಿಕೊಂಡು ಹುಸೈನ್

ನಿಜಾಮ್‌ಶಾಹನು ಸೋಲಾಪುರದ ಕೋಟೆಯತ್ತ ಹೊರಟನು. ಯಾವುದರ ದಿಗ್ಬಂಧನವನ್ನು ಈಗಾಗಲೇ ಆದಿಲ್‌ಷಾಹ್‌ನು ಮಾಡಿದ್ದನು ಗುರಿಯತ್ತ ಪ್ರಯಾಣವನ್ನು ಬೆಳೆಸುತ್ತಾ ಹುಸೈನ್‌ನಿಜಾಮ್‌ಶಾಹನು ಸೋಲಾಪುರದ ಸಮೀಪ ಬಂದನು. ಆಗ ಇಬ್ರಾಹಿಂ ಆದಿಲ್‌ಶಾಹನು ಹುಸೈನ್ ನಿಜಾಮ ಶಾಹನನ್ನು ಬಗ್ಗು ಬಡಿಯುವ ಅಚಲ ನಿಶ್ಚಯ ಮಾಡಿದನು. ಇದರಿಂದ ಹಿಂದೆ ಉಂಡ ಸೋಲಿನ ಸೇಡನ್ನು ತೀರಿಸಿಕೊಳ್ಳಬೇಕು ಎಂದು ನಿರ್ಧರಿಸಿದನು.

ರಕ್ತಪಾತ :

ಹುಸೈನ್ ನಿಜಾಮ್‌ನು ಹಾಗೂ ಇಬ್ರಾಹಿಂ ಆದಿಲ್‌ಶಾಹನು ತನ್ನ ತನ್ನ ಸೈನ್ಯವನ್ನು ಸಿದ್ಧಗೊಳಿಸಿದನು. ಹಾಗೂ ಪರಸ್ಪರ ಎದುರು ಬದುರಾದರು. ಎರಡೂ ಕಡೆಯ ಸೈನ್ಯದಲ್ಲಿ ಭೀಕರ ರೂಪದ ಕಾಳಗ ನಡೆದು ರಕ್ತಪಾತವಾಯಿತು. ಈ ಯುದ್ಧದಲ್ಲಿ ಸೈಫ್ ಐನುಲ್‌ಮುಲ್ಕನು ಯಾರು ಇಬ್ರಾಹಿಂ ಆದಿಲ್‌ಶಾಹನ ಜೊತೆಗಿದ್ದನು. ಬಹಳೇ ಶ್ರೇಯುಕರ ಪ್ರದರ್ಶನ ಮಾಡಿದನು. ಅವನು ಅಮಾದ್‌ಶಾಹೀ ಹಾಗೂ ನಿಜಾಮ್‌ಷಾಹೀಗಳ ಮೊದಲ ಪಂಕ್ತಿಯ ಸೈನ್ಯದ ಸೈನಿಕರನ್ನು ಬಗ್ಗುಬಡಿದನು. ನಿಜಾಮ್‌ಷಾಹಿಗಳ ವಾಮಭಾಗಗಳ ಸೈನ್ಯದ ಪರಿಸ್ಥಿತಿಯು ಹದಗೆಟ್ಟಿತ್ತು. ಅದರ ನಂತರ ಐನುಲ್ ಮುಲ್ಕನು ವೈರಿಯ ಷಾಹೀ ಕೊಡೆ ಹಾಗೂ ಧ್ವಜದತ್ತ ಧಾವಿಸಿದನು.

ನಿಜಾಮ್‌ಷಾಹಿಗಳ ಧೈರ್ಯ :

ನಿಜಾಮ್ ಶಾಹಿಗಳೂ ಸಹ ಸಂಪೂರ್ಣ ರೀತಿಯಲ್ಲಿ ರಣೋತ್ಸಾಹ ತೋರಿದರು. ಅವರು ವೈರಿಗಳ ಸುಮಾರು ನಾಲ್ಕುನೂರು ಶೂರರನ್ನು ಹಾಗೂ ಅನುಭವಿ ಸೈನಿಕರನ್ನು ನೋಡುನೋಡುತ್ತಿದ್ದಂತೆಯೇ ಕೊನೆಗಾಣಿಸಿದರು. ಈ ಕೋಲಾಹಲದಲ್ಲಿ ಸೈಫುಲ್ ಮುಲ್ಕನ ಸೋದರಳಿಯ (ಸಹೋದರಿಯ ಪುತ್ರ) ನಾದ ಸಲಾಬತ್‌ಖಾನ್‌ನು ಸಹ ಗಾಯಗೊಂಡನು. ಹಾಗೂ ತನ್ನ ಕುದುರೆ ಮೇಲಿನಿಂದ ಬಿದ್ದನು.

ಸೈಫ್ ಐನುಲ್ ಮುಲ್ಕನ ಶೌರ್ಯ :

ಐನುಲ್‌ಮುಲ್ಕನ ಹವ್ಯಾಸವಿದಾಗಿತ್ತು. ಯಾವಾಗಲಾದರೂ ಅವನು ರಣರಂಗದಲ್ಲಿ ತೊಂದರೆಗೆ ಒಳಗಾಗುತ್ತಿದ್ದನೋ ಆಗ ಅವನು ಕುದುರೆಯಿಂದ ಕೆಳಗಿಳಿದು ತನ್ನ ಸೈನಿಕರ ಆತ್ಮ ಸ್ಥೈರ್ಯ ಹೆಚ್ಚಿಸುತ್ತಿದ್ದನು. ಹಾಗೂ ಅವರನ್ನು ಹೊರಾಡಲು ಪ್ರೇರೆಪಿಸುತ್ತಿದ್ದನು. ಈ ಯುದ್ಧದಲ್ಲಿಯೂ ಸಹ ಐನುಲ್‌ಮುಲ್ಕನು ಕುದುರೆಯಿಂದ ಕೆಳಗಿಳಿದು ತನ್ನ ಸೈನಿಕರ ಧೈರ್ಯ ಇಮ್ಮಡಿಸಿದನು. ಹಾಗೂ ಶೌರ್ಯದ ಪರಾಕ್ರಮವನ್ನು ಹೀಗೆ ಮೆರೆದನು. ನಿಜಾಮಶಾಹೀ ಸೈನ್ಯವು ದಿಕ್ಕೆಟ್ಟು ಕಕ್ಕಾಬಿಕ್ಕಿಯಾಗಿ ರಣರಂಗದಿಂದ ಓಟಕ್ಕಿತ್ತಿತು.

ಹುಸೇನ್ ನಿಜಾಮ್‌ಶಾಹನ ಪರಾಕ್ರಮ :

ನಿಜಾಮ್‌ಶಾಹ ಸೈನಿಕರ ಹಿಮ್ಮೆಟ್ಟುವಿಕೆಯ ಪರಿಣಾಮವಿದಾಯಿತು. ಏನೆಂದರೆ ಅವರ ಧ್ವಜದ ಸನಿಹ ಕೇವಲ ಒಂದು ಸಾವಿರ ಸೈನಿಕರು ಹಾಗೂ ಒಂದು ನೂರು ಗಜಗಳು ಮಾತ್ರ ಉಳಿದವು. ಹುಸೈನ್ ನಿಜಾಮನು ತನ್ನ ಸೈನಿಕರ ತತ್ತರಗೊಂಡ ಅವಸ್ಥೆಯನ್ನು ತನ್ನ ಸೈನಿಕರ ಧೈರ್ಯಗೆಡುವಿಕೆಯನ್ನು ಸ್ವಲ್ಪವೂ ಪರಿಗಣಿಸಲಿಲ್ಲ. ಹಾಗೂ ವೈರಿ ಸೈನ್ಯದ ಎದುರು ದೃಢವಾಗಿ ನಿಂತನು. ರಣರಂಗದಲ್ಲಿ ಸೋಲುಗೆಲುವಿನ ನಿರ್ಧಾರವು ದೇವನ ಇಚ್ಛೆಯನ್ನು ಅವಲಂಬಿಸಿರುತ್ತದೆ. ಹಾಗೂ ಇದರಲ್ಲಿ ಮನುಷ್ಯರ ಪಾತ್ರವಿರುವುದಿಲ್ಲ. ಈ ಯುದ್ಧದ ಪರಿಣಾಮವೂ ಸಹ ನಿರೀಕ್ಷೆಯ ವಿರುದ್ಧವಾಯಿತು.

ಒಂದು ಉಹಾಪೋಹದ ಸುದ್ದಿ :

ದ್ವಂದ್ವ ಪ್ರವೃತ್ತಿಯ ಕೆಲ ಜನರು ಇಬ್ರಾಹಿಂ ಆದಿಲ್‌ಷಾಹನಿಗೆ ಈ ಸುದ್ದಿಯನ್ನು ತಲುಪಿಸಿದರು. ಏನೆಂದರೆ "ಐನುಲ್ ಮುಲ್ಕನು ಬಹಳ ಕುಟಿಲಬುದ್ಧಿಯವನಾಗಿದ್ದಾನೆ. ಅವನು ಕೇವಲ ವಂಚನೆ ಮಾಡಲು ಬಿಜಾಪುರಕ್ಕೆ ಆಗಮಿಸಿದ್ದನು. ಈಗ ರಣರಂಗದಲ್ಲಿ ತಾನು ತನ್ನ ಕುದುರೆಯಿಂದ ಕೆಳಗಿಳಿದು ಹುಸೈನ್ ನಿಜಾಮನ ಎದುರಲ್ಲಿ ಕೈಕಟ್ಟಿಕೊಂಡು ನಿಂತಿರುವನು." ಇಬ್ರಾಹಿಂ ಆದಿಲ್‌ಶಾಹನು ಸುಳ್ಳು ಸುದ್ದಿಗಾರರ ಮಾತನ್ನು ನಂಬಿದನು. ಹಾಗೂ ತನ್ನ ಅಮೀರರನ್ನು ಹಾಗೂ ಸೈನಿಕರನ್ನು ರಣಭೂಮಿಯಲ್ಲಿಯೇ ಬಿಟ್ಟು ಸ್ವತಃ ಬಿಜಾಪುರದೆಡೆಗೆ ಹೋದನು.

ಸೈಫ್ ಐನುಲ್ ಮುಲ್ಕನ ಯುದ್ಧದಿಂದ ಹಿಂತೆಗೆತ :

ಐನುಲ್‌ಮುಲ್ಕನು ಒಂದು ಘಟ್ಟದವರೆಗೆ ಯುದ್ಧವನ್ನು ಗೆದ್ದಿದ್ದನು. ವೈರಿಯ ಮೇಲೆ ಸಂಪೂರ್ಣವಾಗಿ ಹಿಡಿತವನ್ನು ಸಾಧಿಸಲು ಇನ್ನೇನು ಸ್ವಲ್ಪವೇ ಪ್ರಯತ್ನ ಉಳಿದಿತ್ತು. ಆದರೆ ಯಾವಾಗ ಅವನಿಗೆ ಇಬ್ರಾಹಿಂ ಆದಿಲ್‌ಷಾಹ್‌ನ ಹಿಂದಿರುಗುವಿಕೆಯ ಸುದ್ಧಿ ತಲುಪಿತೋ ಆಗ ಅವನು ಅನ್ಯ ಮನಸ್ಕನಾದನು. ಹಾಗೂ ಯುದ್ಧದಿಂದ ಹಿಮ್ಮೆಟ್ಟಿದನು. ಅವನು ಸಲಾಬತ್‌ಖಾನ್‌ನಿಗೆ ಯಾವನು ಗಾಯಗೊಂಡಿದ್ದನು ಅವನನ್ನು ಒಂದು ಚಾದರದಲ್ಲಿ ಕಟ್ಟಿದನು ಹಾಗೂ ತನ್ನೊಡನೆ ಕರೆದುಕೊಂಡು ಬಿಜಾಪುರದತ್ತ ಪಯಣ ಬೆಳೆಸಿದನು.

ಹುಸೈನ್ ನಿಜಾಮ್‌ಷಾಹ್‌ನ ಅಹ್ಮದ ನಗರಕ್ಕೆ ಮರಳುವಿಕೆ :

ಹುಸೈನ್ ನಿಜಾಮ್‌ಷಾಹ್‌ನೊಂದಿಗೆ ಈಗಾಗಲೇ ಮೇಲೆ ಉಲ್ಲೇಖಿಸಿದಂತೆ ಬಹಳ ಕಡಿಮೆ ಸೈನ್ಯವು ಉಳಿದಿತ್ತು. ಇಂಥ ಸ್ಥಿತಿಯಲ್ಲಿ ಅವನು ವೈರಿಯನ್ನು ಹಿಮ್ಮೆಟ್ಟಿಸುವುದು, ಒಳಿತಲ್ಲವೆಂದು ಬಗೆದನು ಹಾಗೂ "ವಖಾಯೇ ಆದಿಲ ಶಾಹಿಯಾ" ಗ್ರಂಥಕಾರನ ಅನಿಸಿಕೆಯಂತೆ ಎರಡು ದಿನಗಳ ನಂತರ ಅಹ್ಮದ್ ನಗರಕ್ಕೆ ಮರಳಿದನು.

ನಿಜಾಮಶಾಹೀಯ ಸಾಮ್ರಾಜ್ಯದಲ್ಲಿ ಐನುಲ್ ಮುಲ್ಕ :

ಸೈಫ್ ಐನುಲ್ ಮುಲ್ಕ ಆದಿಲ್‌ಶಾಹಿಯ ಪ್ರಾಂತ್ಯದ ಸರಹದ್ದಿನಿಂದ ಹೊರಬಂದನು. ಈ ಪ್ರಾಂತ್ಯದಲ್ಲಿ ನೆಲೆನಿಲ್ಲಲು ಅವನಿಗೆ ಅವಕಾಶವೇ ಸಿಗಲಿಲ್ಲ. ಪ್ರಯಾಣವನ್ನು ಮುಂದುವರೆಸುತ್ತ ಅವನು ನಿಜಾಮಶಾಹಿಯ ಗಡಿಯಲ್ಲಿ ಬಂದು ತಲುಪಿದನು. ಹುಸೈನ್ ನಿಜಾಮ್‌ಶಾಹನು ಐನೂಲ್ ಮುಲ್ಕನ ಮೇಲೆ ಅಪನಂಬಿಕೆ ಹೊಂದಿದ್ದನು. ಅವನಿಗೆ ಐನುಲ್ ಮುಲ್ಕನು ಯಾವ ಯಾವ ಹಾನಿಯನ್ನು ಉಂಟು ಮಾಡಿದ್ದನೋ ಅದರ ನೆನಪು ಇನ್ನೂ ಹಸಿರಾಗಿತ್ತು. ಆದರೆ ಯುಕ್ತಿಪೂರ್ವಕವಾಗಿ ಹುಸೈನ್ ನಿಜಾಮ್‌ನು ಐನುಲ್ ಮುಲ್ಕನ ಬರುವಿಕೆಯ ಮೇಲೆ ಪ್ರಸನ್ನತೆ ಪ್ರಕಟಪಡಿಸಿದನು. ಹಾಗೂ ಹೀಗೆಂದನು "ಇದು ನಮ್ಮ ಸೌಭಾಗ್ಯವಾಗಿದೆ. ಏನೆಂದರೆ ಐನುಲ್ ಮುಲ್ಕನು ಮತ್ತೊಮ್ಮೆ ನಮ್ಮ ಬಳಿಗೆ ಬಂದಿರುವನು."

ಐನುಲ್ ಮುಲ್ಕನ ಹೆಸರಿನಲ್ಲಿ ಹುಸೈನ್ ನಿಜಾಮ್‌ಶಾಹನ ಪತ್ರ :

ಹುಸೈನ್‌ನಿಜಾಮ್‌ಶಾಹನು ಹಕಿಂಕಾಸಿಂಬೇಗ್‌ನಿಗೆ ಸೈಫ್‌ಐನುಲ್‌ಮುಲ್ಕನನ್ನು ಸ್ವಾಗತಿಸುವುದಕ್ಕೆ ಕಳುಹಿಸಿದನು. ಹಾಗೂ ಅವನ ಹೆಸರಿನಲ್ಲಿ ಒಂದು ಪತ್ರವನ್ನು ಬರೆದನು. ಅದರ ವಿಷಯ ಹೀಗಿತ್ತು. "ಒಂದು ಕಾಲದಿಂದ ನಾನು ಇದನ್ನು ಬಯಸುತ್ತಿದ್ದೆ. ಏನೆಂದರೆ ನೀನು ಇಲ್ಲಿ ಬರಬೇಕು. ದೇವನ ಮಹಾಕೃಪೆಯಾಗಿದೆ ನನ್ನ ಈ ಬಯಕೆ ಪೂರ್ತಿಯಾಗಿದೆ. ನೀನು ಕೆಲಸಮಯದವರೆಗೆ ನಮ್ಮ ಸೇವೆಯಿಂದ ಹೊರಗುಳಿದಿದ್ದಿಯೇ ಇದು ಕೇವಲ ಒಂದು ಆಕಸ್ಮಿಕ ಘಟನೆಯಾಗಿತ್ತು. ಈ ವಿಷಯದಲ್ಲಿ ನಿನಗೆ ಯಾವುದೇ ರೀತಿಯ ದುಃಖ ಅಥವಾ ಭಯವಿರಕೂಡದು. ನನ್ನ ಗಮನವು ನಿನ್ನ ಮೇಲೆ ಮೊದಲಿಗಿಂತಲೂ ಹತ್ತು ಪಟ್ಟು ಹೆಚ್ಚಾಗಿರುವುದು ನೀನು ನಿರ್ಭಯನಾಗಿ ನನ್ನ ದರ್ಬಾರಿಗೆ ಬರಬೇಕು".

ನಾನು ನಿನಗೆ ನಿನ್ನ ಹಳೆಯ ಹುದ್ದೆಯಲ್ಲಿಯೇ ಮುಂದುವರಿಸುವೆನು. ನಿನ್ನ ಹೆಚ್ಚಿನ ನೆಮ್ಮದಿಗೋಸ್ಕರ ನಾನು ಈ ಪತ್ರವನ್ನು ನನ್ನ ವಿಶೇಷ ರುಮಾಲ್ (ವಸ್ತ್ರ) ದಲ್ಲಿ ಕಟ್ಟಿ ಕಳುಹಿಸಿರುವೆನು. ನನ್ನ ನಂಬಿಗಸ್ತನಾದ ಹಕಿಂ ಖಾಸಿಂ ಬೇಗ್‌ನು ನಿನ್ನ ಸ್ವಾಗತಕ್ಕಾಗಿ ಬರಲಿರುವನು. ನೀನು ಬಹಳ ಬೇಗನೇ ಅವನೊಂದಿಗೆ ನನ್ನ ಬಳಿ ತಲುಪಬೇಕು. ನಿನ್ನ ಬರುವಿಕೆಯಿಂದಾಗಿ ನಮ್ಮ ಸಭೆಗೆ ಉತ್ಸಾಹ ಹಾಗೂ ಕಳೆ ಬರಲಿ.

ಐನುಲ್ ಮುಲ್ಕನ ಪರತ್ತುಗಳು :

ಹಕೀಂಖಾಸಿಂಬೇಗ್‌ನು ಸೈಫ್‌ಐನುಲ್‌ಮುಲ್ಕನ ಬಳಿ ತಲುಪಿದನು. ಅವನೊಂದಿಗೆ ಭೇಟಿಯಾದನು. ಹಾಗೂ ಅವನಿಗೆ ಬಾದಷಾಹನ ಪತ್ರವನ್ನು ತಲುಪಿಸಿದನು. ಐನುಲ್

ಮುಲ್ಕನು ಹೀಗೆಂದನು. "ನನ್ನ ಎರಡು ಷರತ್ತುಗಳಿವೆ. ಅವುಗಳನ್ನು ಒಪ್ಪಿಕೊಳ್ಳಬೇಕು. ಹಾಗಾದರೆ ನನಗೆ ಹುಸೈನ್ ನಿಜಾಮನ ಬಳಿ ಬರಲು ಯಾವುದೇ ನಿರಾಕರಣೆಯಿಲ್ಲ. ಮೊದಲನೆಯ ಷರತ್ತು ಇದಾಗಿದೆ. ಏನೆಂದರೆ ಹುಸೈನ್ ನಿಜಾಮನು ಸ್ವತಃ ನನ್ನ ಸ್ವಾಗತಕ್ಕಾಗಿ ಬರಬೇಕು. ಹಾಗೂ ಎರಡನೆಯ ಷರತ್ತು ಇದಾಗಿದೆ. ಏನೆಂದರೆ ಯಾವಾಗಿನವರೆಗೆ ನಾನು ಬಾದಷಾಹ್‌ನನ್ನು ಬೇಟಿ ಮಾಡಲು ಹೋಗಿ ನಾನು ಮತ್ತೆ ಮರಳುವುವವರೆಗೆ ಅಲ್ಲಿಯವರೆಗೂ ಖಾಸಿಂ ಬೇಗನು ನನ್ನ ಸೈನ್ಯದಲ್ಲಿ ಇರಬೇಕು."

ಹಕಿಂ ಖಾಸಿಂ ಬೇಗ್‌ನು ಐನುಲ್ ಮುಲ್ಕನೊಂದಿಗೆ ಹೀಗೆಂದನು. " ಈಗ ನೀವು ನನಗೆ ಅನುಮತಿ ನೀಡಿರಿ ನಾನು ಬಾದಷಾಹ್‌ನ ಬಳಿ ಹೋಗಿ ಈ ಷರತ್ತುಗಳನ್ನು ಅವರೆದುರಿಗೆ ಮಂಡಿಸಿ ಮತ್ತೆ ಮರಳಿ ಬಂದು ನಿಮ್ಮ ಸೈನ್ಯದಲ್ಲಿ ಆ ವೇಳೆಯವರೆಗೆ ಇರುವೆ ಯಾವಾಗಿನವರೆಗೆ ನೀವು ಬಾದಷಾಹ್‌ನನ್ನು ಭೇಟಿ ಮಾಡಿ ಮರಳಲಾರಿರೋ, ಐನುಲ್ ಮುಲ್ಕನು ಖಾಸಿಂ ಬೇಗ್‌ನಿಗೆ ಅನುಮತಿ ನೀಡಿದನು. ಹಾಗೂ ಅವನು ಅಲ್ಲಿಂದ ಮರಳಿ ಬಾದಷಾಹ್‌ನ ಬಳಿ ಬಂದನು.

ಖಾಸಿಂ ಬೇಗನ ಕಾಯಿಲೆ :

ಖಾಸಿಂಬೇಗನು ಶಾಹಿ ದರ್ಬಾರಕ್ಕೆ ತಲುಪಿದನು. ಆದರೆ ಅವನು ಸಭೆಯ ವಿವರ್ಣತೆಯನ್ನು ಮನಗಂಡನು. ಹಾಗೂ ಅಲ್ಲಿಂದಲೇ ಅವನು ತನ್ನ ಮನೆಗೆ ಬಂದನು. ಇಲ್ಲಿ ಅವನು ತನ್ನ ಮುಖ ಹಾಗೂ ತಲೆಯ ಮೇಲೆ ಮುಲಾಮು ತಿಕ್ಕಿಕೊಂಡನು. ಅದರಿಂದಾಗಿ ಅವನ ಮುಖ ಹಾಗೂ ದೇಹ ಊದಿಕೊಂಡಿತು. ಖಾಸಿಂನು ಕಾಯಿಲೆಯ ನೆಪ ಹೂಡಿದನು. ಹಾಗೂ ಹಾಸಿಗೆ ಹಿಡಿದನು.

ಐನುಲ್ ಮುಲ್ಕನ ಹೆಸರಿನಲ್ಲಿ ಹುಸೈನ್ ನಿಜಾಮ್‌ನ ಸಂದೇಶ :

ಹುಸೈನ್ ನಿಜಾಮನು ತನ್ನ ಸಂಗಡಿಗರ ಒಂದು ತಂಡವನ್ನು ಬಹಳೇ ಸ್ವಾದಿಷ್ಟ ಹಾಗೂ ಉತ್ಕೃಷ್ಟವಾದ ಭೋಜನಗಳನ್ನು ಹಾಗೂ ಪೇಯಗಳನ್ನು ನೀಡಿ ಐನುಲ್ ಮುಲ್ಕನ ಬಳಿ ಕಳುಹಿಸಿದನು. ಹಾಗೂ ಅವನಿಗೆ ಹೀಗೆ ಹೇಳಿ ಕಳುಹಿಸಿದನು. "ನೀನು ಆಯಾ ಸಮಯದಲ್ಲಿ ನನಗೆ ಭೇಟಿ ಮಾಡು "ನನಗೆ ವಿಷಾದವಿದೆ. ಖಾಸಿಂ ಬೇಗ್‌ನು ಕಾಯಿಲೆಯಿಂದ ನರಳುತ್ತಿದ್ದಾನೆ. ಅದಕ್ಕಾಗಿ ಅವನು ನಿನ್ನ ಬಳಿ ಬರಲು ಅಸಹಾಯಕನಾಗಿದ್ದಾನೆ. ನೀನು ನಿನ್ನ ಸ್ಥಾನದಿಂದ ಹೊರಡು, ನಾನು ನಿನ್ನ ಸ್ವಂತಕ್ಕೋಸ್ಕರ ಬರಲಿದ್ದೇನೆ. ಐನುಲ್ ಮುಲ್ಕನು ಪರಿಸ್ಥಿತಿಯನ್ನು ಮನಗಾಣಲು ತನ್ನ ದೂತರನ್ನು ಖಾಸಿಂಬೇಗ್‌ನ ಮನೆಗೆ ಕಳುಜಹಿಸಿದನು. ಹಾಗೂ ದೂತರು ಮರಳಿಬಂದು ಹೀಗೆ ತಿಳಿಸಿದರು. ನಿಜವಾಗಿಯೂ ಖಾಸಿಂಬೇಗನು ಬಹಳೇ ರೋಗಪೀಡಿತನಾಗಿದ್ದಾನೆ.

ಬಾದ್‌ಷಾಹ್‌ನ ಭೇಟಿಗಾಗಿ ಹೊರಡುವಿಕೆ :

ಐನುಲ್ ಮುಲ್ಕನಿಗೆ ಈ ಸುದ್ದಿಯು ತಲುಪಿತು. ಹುಸೈನ್ ನಿಜಾಮನು ಅವನ ಸ್ವಾಗತಕ್ಕೋಸ್ಕರ ಹೊರಟಿರುವನು. ಅದಕ್ಕಾಗಿ ಅವನು ಒಂದು ಸಣ್ಣ ತಂಡದೊಂದಿಗೆ ಅದರಲ್ಲಿ ಸಲಾಬತ್ ಖಾನ್‌ನೂ ಇದ್ದನು. ಬಾದ್‌ಷಾಹ್‌ನ ಭೇಟಿಗಾಗಿ ಹೊರಟನು. ಐನುಲ್ ಮುಲ್ಕನ ನಂಬಿಗಸ್ತ ಸೇವಕನಾದ ಕಬೂಲ್ ಖಾನ್‌ನು ತನ್ನ ಒಡೆಯನನ್ನು ಹೋಗಲು ಬಹಳೇ ರೀತಿಯಲ್ಲಿ ತಡೆದನು. ಹಾಗೂ ಹೀಗೆಂದನು. ಖಾಸಿಂ ಬೇಗ್‌ನ ಕಾಯಿಲೆ ಸ್ವಯಂ ತಂದುಕೊಂಡದ್ದಾಗಿದೆ. ಹಾಗೂ ಖಂಡಿತವಾಗಿ ಕುಟಿಲತೆಯ ಸ್ವರೂಪದಾಗಿದೆ. ಆದರೆ ಐನುಲ್ ಮುಲ್ಕನು ಅವನ ಮಾತನ್ನು ಒಪ್ಪಲಿಲ್ಲ. ಹಾಗೂ ತನ್ನ ನಿಶ್ಚಯವನ್ನು ಸಡಿಲುಗೊಳಿಸಲಿಲ್ಲ.

ಕಬೂಲ್‌ಖಾನ್‌ನ ಚಾತುರ್ಯ :

ಕಬೂಲಖಾನನು ಸೈಫುಲ್ ಮುಲ್ಕನಿಂದ ಬೇರೆಯಾಗಿ ತನ್ನ ಸೈನ್ಯದಲ್ಲಿ ಸೇರಿಕೊಂಡನು. ಇವನು ಎಲ್ಲ ಸೈನಿಕರೊಂದಿಗೆ ಹೀಗೆಂದನು. ಎಲ್ಲರೂ ಪಟ್ಟಣದಲ್ಲಿ ಹೋಗಿರಿ ಹಾಗೂ ಬಾದಷಾಹನು ಯಾವ ಸ್ಥಳದಲ್ಲಿ ಅವರನ್ನು ತಂಗಲು ಸೌಕರ್ಯ ಕಲ್ಪಿಸಿದ್ದಾನೆ ಅಲ್ಲಿ ತಲುಪಿ ತಂಗಬೇಕು. ಕಬೂಲ್ ಖಾನ್‌ನು ಸ್ತ್ರೀಯರಿಗೂ ಪುರುಷವೇಷವನ್ನು ತೊಡಿಸಿದನು. ಹಾಗೂ ಅವರಿಗೆ ಕುದುರೆಯ ಮೇಲೆ ಸವಾರಿ ಮಾಡಿಸಿ ತನ್ನೊಂದಿಗೆ ಕರೆದುಕೊಂಡು ಹೊರಟನು.

ಐನುಲ್ ಮುಲ್ಕನಿಗೆ ಸ್ವಾಗತ :

ಐನುಲ್ ಮುಲ್ಕನು ಬಂಕಾಪುರಕ್ಕೆ ತಲುಪಿದನು. ಅವನು ಇದನ್ನು ನೋಡಿದನು. ಹುಸೈನ್ ನಿಜಾಮ್‌ಷಾಹ್‌ನು ಒಂದು ಕುದುರೆಯ ಮೇಲೆ ಸವಾರನಾಗಿದ್ದಾನೆ. ಅವನ ಎದುರು ಮತ್ತು ಅವನ ಎರಡೂ ಬದಿಯಲ್ಲಿ ಗಜಗಳ ಸಾಲು ಇದೆ. ಈ ಸಾಲುಗಳ ಕಾರಣದಿಂದ ಹುಸೈನ್ ನಿಜಾಮನು ಯಾವ ಸ್ಥಳದಲ್ಲಿದ್ದನೋ ಆ ಸ್ಥಳವು ಒಂದು ಬೀದಿಯಂತೆ ಕಂಡು ಬರುತ್ತಿತ್ತು. ಬಾದಷಾಹ್‌ನ ಸಂಗಡಿಗರು ಯಾವಾಗ ಐನುಲ್ ಮುಲ್ಕನು ಬರುವುದನ್ನು ಕಂಡರೋ ಆಗ ಅವರಲ್ಲಿ ಕೆಲವರು ಮುನ್ನುಗ್ಗಿ ಅವನಿಗೆ ಹಾಗೂ ಸಲಾಬತ್ ಖಾನ್‌ನಿಗೆ ಮೇಲೆ ಹೇಳಿದಂತೆ ಬೀದಿಯಂತೆ ಕಾಣುವ ಸ್ಥಳಕ್ಕೆ ಕರೆತಂದರು. ಐನುಲ್ ಮುಲ್ಕ ಹಾಗೂ ಸಲಾಬತ್ ಖಾನ್ ಈರ್ವರೂ ಕುದುರೆ ಮೇಲೆ ಸವಾರರಾಗಿದ್ದಾರೆ. ಕೆಲವೇ ಕ್ಷಣಗಳಲ್ಲಿ ಕೆಲವು ದರ್ಬಾರಿಗಳು ಈ ಈರ್ವರನ್ನು ಕೆಳಗಿಳಿಯಲು ಹೇಳಿದರು.

ಐನುಲ್ ಮುಲ್ಕನ ಬಂಧನ :

ಐನುಲ್ ಮುಲ್ಕನು ಇದನ್ನು ಬಯಸಿದ್ದನು. ಏಕೆಂದರೆ ಯಾವ ತೆರನಾಗಿ

ಹುಸೈನ್ ನಿಜಾಮನು ಕುದುರೆಯ ಮೇಲೆ ಸವಾರನಾಗಿದ್ದಾನೆಯೇ ಅದೇ ತೆರನಾಗಿ ತಾನೂ ಸಹ ಕುದುರೆಯ ಮೇಲೆ ಕುಳಿತುಕೊಂಡೇ ಅವನನ್ನು ಭೇಟಿ ಮಾಡುವುದು. ಆದರೆ ದರ್ಬಾರಿಗಳ ಒತ್ತಡದಿಂದಾಗಿ ಅವನ ಬಯಕೆ ಪೂರ್ತಿಗೊಳ್ಳಲಿಲ್ಲ. ಹಾಗೂ ಅವನಿಗೆ ಅನಿವಾರ್ಯವಾಗಿ ಕುದುರೆಯಿಂದ ಕೆಳಗೆ ಇಳಿಯಬೇಕಾಯಿತು. ಅದರ ನಂತರ ಐನುಲ್ ಮುಲ್ಕನು ಬಾದ್‌ಷಾಹ್‌ನ ಎದುರು ನಮ್ರನಾಗಿ ಬಾಗಿದನು. ಆದರೆ ಅವನು ಬಾದಷಾಹ್‌ನನ್ನು ಇನ್ನೂ ಸ್ಪರ್ಷಿಸಿರಲಿಲ್ಲ. ಅವನಿಗೆ ಹುಸೈನ್ ನಿಜಾಮನು ಐನುಲ್‌ಮುಲ್ಕ ಹಾಗೂ ಸಲಾಬತ್‌ಖಾನ್‌ನ ಬಂಧನಕ್ಕೆ ಆದೇಶ ನೀಡಿದನು. ಆಜ್ಞೆಯ ಪಾಲನೆಯಾಯಿತು. ಹಾಗೂ ಈರ್ವರನ್ನು ಸೆರೆಹಿಡಿದು ಆನೆಯ ಮೇಲೆ ಕೂಡ್ರಿಸಲಾಯಿತು.

ಐನುಲ್‌ಮುಲ್ಕ ಹಾಗೂ ಸಲಾಬತ್‌ಖಾನ್‌ನ ಹತ್ಯೆ :

ಯಾವಾಗ ಹುಸೈನ್ ನಿಜಾಮನು ತನ್ನ ಬೇಟೆಯ ಮೇಲೆ ಚೆನ್ನಾಗಿ ಹಿಡಿತ ಸಾಧಿಸಿದನೋ ಆಗ ಅವನು ತನ್ನ ಸೈನ್ಯದೊಂದಿಗೆ ಮರಳಿದನು. ಹಾದಿಯಲ್ಲಿ ಆ ಮಾವುತನಿಗೆ ಯಾವನ ಆನೆಯ ಮೇಲೆ ಸಲಾಬತ್ ಹಾಗೂ ಐನುಲ್‌ಮುಲ್ಕ ಸವಾರರಾಗಿದ್ದರು. ಒಮ್ಮಿಂದೊಮ್ಮೆಲೆ ಅವನಿಗೆ ಅದೇನು ಹೊಳೆಯಿತೋ ಕೆಲ ಕ್ಷಣಗಳಲ್ಲಿ ಯಾವುದೇ ಮುನ್ಸೂಚನೆ ನೀಡದೇ ಈ ಈರ್ವರ ಕುತ್ತಿಗೆಯನ್ನು ಹಿಸುಕಿ ಹತ್ಯೆಗೈದನು. ಹಾಗೂ ಅವರ ಶವಗಳನ್ನು ನೆಲದ ಮೇಲೆ ಎಸೆದನು. ಹುಸೈನ್ ನಿಜಾಮನು ಯಾವಾಗ ಈ ಈರ್ವರ ಗತಿಯನ್ನು ನೋಡಿದನೋ ವಿಷಾದ ವ್ಯಕ್ತಪಡಿಸಿದನು ಹಾಗೂ ಹೀಗೆಂದನು. ಪಾಪ ! ಭಯಭೀತರಾಗಿ ನಿಧನರಾದರು. ಬಾದಷಹನು ಕೆಲವು ಜನರಿಗೆ ಅವರ ಕಫನ್ ದಫನ್‌ದ ಆಜ್ಞೆ ನೀಡಿದನು.

ಕಬೂಲ್ ಖಾನ್‌ನ ಹೊರಡುವಿಕೆ :

ಅದರ ನಂತರ ಹುಸೈನ್ ನಿಜಾಮನು ಆದೇಶಿಸಿದನು. ಐನುಲ್ ಮುಲ್ಕನ ಸ್ತ್ರೀಯರನ್ನು ಹಾಗೂ ಅವನ ವಸ್ತುಗಳನ್ನು ಷಾಹೀ ದರ್ಬಾರದಲ್ಲಿ ವಿಚಾರಣೆಗಾಗಿ ಹಾಜರುಪಡಿಸಬೇಕು. ಹಾಗೂ ಉಳಿದ ಎಲ್ಲ ವಸ್ತುಗಳನ್ನು ನಾಶಪಡಿಸಬೇಕು. ಕಬೂಲ್ ಖಾನ್‌ನು ಬಹಳ ಬುದ್ಧಿವಂತ ಹಾಗೂ ವಿವೇಕವಂತ ಮನುಷ್ಯನಾಗಿದ್ದನು. ಅವನಿಗೆ ಈ ಎಲ್ಲ ಸ್ಥಿತಿಗತಿಗಳ ಮಾಹಿತಿ ಇತ್ತು. ಅವನು ಐನುಲ್ ಮುಲ್ಕನ ಸ್ತ್ರೀಯರನ್ನು ಸವಾರಿ ಮಾಡಿಸಿದನು, ಹಾಗೂ ಸುಮಾರು ಐದು ನೂರು ಜನರೊಂದಿಗೆ ಅವರೆಲ್ಲರೂ ಐನುಲ್ ಮುಲ್ಕನ ಸೇವೆಯಲ್ಲಿದ್ದವರು ಅವರೆಲ್ಲರನ್ನು ಕರೆದುಕೊಂಡು ಇಬ್ರಾಹಿಂ ಕುತುಬ್‌ಷಾಹ್‌ನ ಪ್ರಾಂತ್ಯದ ಕಡೆಗೆ ಹೊರಟನು.

ಕಬೂಲ್‌ಖಾನ್‌ನ ಯುದ್ಧಗಳು :

ಹುಸೈನ್ ನಿಜಾಮನ ಸೇವಕರು ಕಬೂಲ್‌ಖಾನ್‌ನನ್ನು ಹಿಂಬಾಲಿಸಿದರು. ಕೆಲವು

ಸ್ಥಳಗಳಲ್ಲಿ ಪರಸ್ಪರರಲ್ಲಿ ಕದನವೂ ಆಯಿತು. ಕಬೂಲ್‌ಖಾನ್‌ನು ಅಪ್ರತಿಮ ಶೌರ್ಯದ ಪ್ರದರ್ಶನವನ್ನು ಮಾಡಿದನು. ಹಾಗೂ ಅನುಪಮ ಪರಾಕ್ರಮವನ್ನು ತೋರಿದನು. ಎಲ್ಲಿಯವರೆಗೆ ಎಂದರೆ ಶತ್ರುಗಳು ಸಹ ಅವನ ಶೌರ್ಯವನ್ನು ಮೆಚ್ಚಿದರು. ಕಬೂಲ್‌ಖಾನ್‌ನು ಪ್ರಯಾಣವನ್ನು ಮುಂದುವರಿಸುತ್ತ ಇಂದೋರ್ ಗ್ರಾಮದವರೆಗೆ ತಲುಪಿದನು. ಇಲ್ಲಿಯ ನಿಜಾಮಷಾಹಿ ಅಮೀರರಿಗೆ ಇವನ ಆಗಮನದ ಸುದ್ದಿ ತಲುಪಿತೊ ಅವರು ಕಬೂಲ್‌ಖಾನ್‌ನನ್ನು ರಾತ್ರಿಯಲ್ಲಿಯೇ ಬಂಧಿಸಿದರು. ಕಬೂಲ್‌ಖಾನ್‌ನು ಈ ಅಮೀರರನ್ನು ಎದುರಿಸಿದನು. ಹಾಗೂ ಮೊದಲಿನಂತೆ ಧೈರ್ಯದೊಂದಿಗೆ ಶೌರ್ಯ ತೋರಿದನು. ನಿಜಾಮ್‌ಷಾಹೀ ಅಮೀರರಿಗೆ ಅವರಲ್ಲಿ ಜರೀಫುಲ್‌ಮುಲ್ಕ, ಚಂದಾಖಾನ್, ದಿಲಾವರ್‌ಖಾನ್, ಹಾಗೂ ಪಾಕ್‌ಬಾಜ್‌ಖಾನ್, ಇತರರೂ ಇದ್ದರು. ಇವರಿಗೆ ಸೋಲುಣಿಸಿದನು. ಈ ಅಮೀರರ ಬಹಳಷ್ಟು ಆಯುಧ ಇತರೆಗಳು ಕಬೂಲ್‌ಖಾನ್‌ನ ವಶವಾದವು ಹಾಗೂ ಅವನು ಗೊಲ್ಕೊಂಡಾದ ಕಡೆಗೆ ಹೋದನು.

ಕಬೂಲ್‌ಖಾನ್‌ನ ಜನಪ್ರಿಯತೆ :

ಇಬ್ರಾಹಿಂ ಕುತುಬ್‌ಷಾಹ್‌ನು ಕಬೂಲ್‌ಖಾನ್‌ನಿಗೆ ಬಹಳೇ ಆದರ ಹಾಗೂ ಗೌರವ ನೀಡಿದನು. ಕಬೂಲ್‌ಖಾನ್‌ನು ಯಾವ ತೆರನಾಗಿ ಸೈಫ್ ಐನುಲ್‌ಮುಲ್ಕನ ವಾರೀಸುದಾರರೊಂದಿಗೆ ಸದ್ವರ್ತನೆಯಿಂದ ನಡೆದುಕೊಂಡಿದ್ದನು, ಹಾಗೂ ತನ್ನ ಒಡೆಯನಿಗೆ ವಿಧೇಯತೆ ತೋರಿದನು, ಕುತುಬ್‌ಷಾಹನು ಅದರಿಂದ ಬಹಳೇ ಪ್ರಭಾವಿತನಾದನು. ಕಬೂಲ್‌ಖಾನ್‌ನಿಗೆ ಕಾಣಿಕೆಯ ರೂಪದಲ್ಲಿ ಜಾಗೀರು ನೀಡಲಾಯಿತು. ಕಬೂಲ್ ಖಾನ್‌ನು ಪ್ರತಿವರ್ಷ ತನ್ನ ಕೆಲವು ಜನರಿಗೆ ಅಹ್ಮದ್‌ನಗರಕ್ಕೆ ಕಳುಹಿಸುತ್ತಿದ್ದನು. ಹಾಗೂ ಐನುಲ್‌ಮುಲ್ಕ ಹಾಗೂ ಸಲಾಬತ್‌ಖಾನ್‌ರ ಸಮಾಧಿಗಳ ಮೇಲೆ ಯಾವುದು ಬಂಕಾಪುರದಲ್ಲಿ ಇವೆ. ನಿರ್ಗತಿಕರಿಗೆ ಅನ್ನದಾನ ಮಾಡಿಸುತ್ತಿದ್ದನು. ಹಾಗೂ ಸಮಾಧಿಗಳನ್ನು ನೋಡಿಕೊಳ್ಳುವ ಮುಜಾವರರಿಗೆ ಇನಾಮು ನೀಡುತ್ತಿದ್ದನು.

ನೆಚ್ಚಿಕೆ :

ಸೈಫ್ ಐನುಲ್ ಮುಲ್ಕ ಹಾಗೂ ಸಲಬತ್‌ಖಾನ್‌ನ ಕಾರ್ಯವು ಒಂದು ನಾಣ್ಣುಡಿಯಂತಾಯಿತು. ದಖ್ಖನ್ನಿನ ಎಲ್ಲ ಪ್ರಜೆಗಳು ಈ ಈರ್ವರ ಶೌರ್ಯಗಾಥೆಯನ್ನು ಹೃನ್ಮನಗಳಿಂದ ಒಪ್ಪಿಕೊಳ್ಳುತ್ತಿದ್ದರು. ನೆಚ್ಚಿಕೆಯ ಅವಸ್ಥೆಯು ಯಾವ ಮಟ್ಟ ಮುಟ್ಟಿತ್ತೆಂದರೆ ಜನರು ಅವರ ಸಮಾಧಿಗಳ ಮಣ್ಣನ್ನು ನೆಕ್ಕುತ್ತಿದ್ದರು. ಹಾಗೂ ಅವರ ಆತ್ಮಗಳಿಂದ ಧೈರ್ಯ, ಸ್ಥೈರ್ಯ, ಶೌರ್ಯದ ಬೇಡಿಕೆಗಳನ್ನು ಇಡುತ್ತಿದ್ದರು.

ಐನುಲ್‌ಮುಲ್ಕನ ಜೀವನ ಚರಿತ್ರೆ :

ಐನುಲ್‌ಮುಲ್ಕನ ತಂದೆಯಾದ ಸೈಫುಲ್‌ಮುಲ್ಕನು ಇರಾಕಿನವನಾಗಿದ್ದನು. ಆದರೆ

ಐನುಲ್ ಮುಲ್ಕನು ಗುಜರಾತಿನಲ್ಲಿ ಜನ್ಮ ತಾಳಿದ್ದನು. ಗುಜರಾತಿನ ಬಾದಷಾಹ್‌ರು ಯಾವಾಗ ಐನುಲ್‌ಮುಲ್ಕನ ಪರಾಕ್ರಮದ ಜನಪ್ರಿಯತೆಯನ್ನು ಕೇಳಿದರೋ ಆಗ ಅವನನ್ನು ತಮ್ಮ ಸೈನ್ಯದ ಪದಾಧಿಕಾರಿಯಾಗಿ ನೇಮಿಸಿದರು. ಐನುಲ್‌ಮುಲ್ಕನು ಸೇವೆಯಲ್ಲಿದ್ದಾಗ ಬಹಳಷ್ಟು ಒಳ್ಳೆಯ ಕಾರ್ಯಗಳನ್ನು ಎಸಗಿದನು. ಅದರಿಂದಾಗಿ ಕ್ರಮೇಣವಾಗಿ ಅವನು ಮೇಲ್ದರ್ಜೆಗೇರಿದನು. ಹಾಗೂ ಉನ್ನತ ಆಡಳಿತಗಾರರಲ್ಲಿ ಅವನ ಹೆಸರು ದಾಖಲಾಯಿತು.

ಸೈನ್ಯದ ಒಗ್ಗೂಡುವಿಕೆ :

ಐನುಲ್‌ಮುಲ್ಕನು ಪ್ರತಿಭಾವಂತರನ್ನು ಹಾಗೂ ಧೈರ್ಯಶಾಲಿಗಳನ್ನು ಹುಡುಕಿ ಹುಡುಕಿ ತನ್ನ ಸುತ್ತಲೂ ಒಗ್ಗೂಡಿಸಲು ಪ್ರಾರಂಭಿಸಿದನು. ಹತ್ತು ಹನ್ನೆರಡು ವರ್ಷದ ಅವಧಿಯಲ್ಲಿ ಸುಮಾರು ಹತ್ತು ಸಾವಿರ ಸೈನಿಕರನ್ನು ಒಗ್ಗೂಡಿಸಿ ಒಂದು ಬಲಾಢ್ಯ ಸೇನೆಯನ್ನು ನಿರ್ಮಿಸಿದನು. ಅದರಲ್ಲಿ ಮೊಘಲ್, ಅರಬ್, ಹಬ್ಷಿ, ಗುಜರಾತಿ, ಅಪಘಾನಿ, ದಖನಿ, ಹಾಗೂ ಎಲ್ಲ ಪ್ರಾಂತ್ಯಗಳ ಸೈನಿಕರು ಇದರಲ್ಲಿದ್ದರು. ಅವನು ಈ ಸೈನಿಕರೊಂದಿಗೆ ಬಹಳೇ ಶ್ರೇಷ್ಠ ರೀತಿಯಲ್ಲಿ ನಡೆದುಕೊಳ್ಳುತ್ತಿದ್ದನು. ಅವರಿಗೆ ಯಾವಾಗಲೂ ತನ್ನ ಸೇವಕರು ಎಂದು ಭಾವನೆ ಬರದಂತೆ ನೋಡಿಕೊಳ್ಳುತ್ತಿದ್ದನು.

ವ್ಯಕ್ತಿತ್ವದ ಶ್ರೇಷ್ಠತೆ :

ಐನುಲ್‌ಮುಲ್ಕನು ಎಂದೂ ಸಹ ತನಗಾಗಿ ವಿಶೇಷ ಕುದುರೆಗಳನ್ನು ಹಾಗೂ ತಂಗುದಾಣಗಳನ್ನು ಪ್ರತ್ಯೇಕವಾಗಿ ಇಡಲಿಲ್ಲ. ತನಗೆ ಯಾವಾಗಲಾದರೂ ಸವಾರಿ ಮಾಡುವುದಿದ್ದರೆ ತನ್ನ ಸೇವಕರಲ್ಲಿಯ ಒಂದು ಕುದುರೆಯನ್ನು ತೆಗೆದುಕೊಂಡು ಕೆಲಸ ಮಾಡಿಕೊಳ್ಳುತ್ತಿದ್ದನು. ಒಂದು ವೇಳೆ ಪ್ರಯಾಣದ ಮಧ್ಯದಲ್ಲಿ ತಂಗಬೇಕಾಗಿ ಬಂದರೆ ತನಗಾಗಿ ವಿಶೇಷವಾದ ತಂಗುದಾಣ ನಿರ್ಮಿಸುತ್ತಿರಲಿಲ್ಲ. ಆದರೆ ಯಾವುದೇ ಸೇವಕನ ಜೊತೆಯಲ್ಲಿ ಅವನ ತಂಗುದಾಣದಲ್ಲಿ ತಂಗುತ್ತಿದ್ದನು. ಐನುಲ್‌ಮುಲ್ಕನ ಈ ಸಂಪ್ರದಾಯವಿತ್ತು. ಏನೆಂದರೆ ಯಾವಾಗ ಅವನಿಗೆ ಬಾದಷಾಹ್‌ನಿಂದ ಹೊಸ ಕೊಡುಗೆಗಳು ಲಭಿಸುತ್ತಿದ್ದವೋ ಆಗ ಅವನು ತನ್ನ ಸೈನಿಕರಿಗೆ ಕರೆದು ಹೀಗೆ ಹೇಳುತ್ತಿದ್ದನು "ಅಲ್ಲಾಹು ನಮಗೆ ಈ ಕೊಡುಗೆಗಳನ್ನು ನೀಡಿದ್ದಾನೆ. ಈಗ ನೀವು ಇವುಗಳನ್ನು ಪರಸ್ಪರರಲ್ಲಿ ಹಂಚಿಕೊಳ್ಳಿರಿ".

ಯಶಸ್ವೀ ಬದುಕು :

ಈ ಸೈನಿಕರೂ ಸಹ ಬಹಳ ವಿವೇಕಿಗಳಾಗಿದ್ದರು. ಅವರು ಆ ಕೊಡುಗೆಗಳನ್ನು ಈ ರೀತಿಯಾಗಿ ವಿಭಾಗಿಸುತ್ತಿದ್ದರು. ತಮ್ಮ ಒಡೆಯನಿಗೂ ಸಹ ಒಂದು ಭಾಗವನ್ನು ತೆಗೆದಿಡುತ್ತಿದ್ದರು. ಐನುಲ್‌ಮುಲ್ಕನು ನಲ್ವತ್ತು ವರ್ಷದವರೆಗೆ ಅಧಿಕಾರಿಯ ಬದುಕನ್ನು ಬಾಳಿದನು. ಎಷ್ಟೋ ಸಲ ವೈರಿಗಳೊಂದಿಗೆ ಹೋರಾಡಬೇಕಾಯಿತು. ಆದರೆ ಯಾವುದೇ

ಯುದ್ಧದಲ್ಲಿಯೂ ಸೋಲಿನ ಮುಖ ಕಾಣಲಿಲ್ಲ. ಸುಲ್ತಾನ್ ಬಹಾದ್ದೂರ್‌ನ ಸಾವಿನ ನಂತರ ಐನುಲ್‌ಮುಲ್ಕನು ಬುರ್ಹಾನ್ ನಿಜಾಮ್‌ಷಾಹ್‌ನ ಬಳಿ ಹೋದನು. ಹಾಗೂ ಪ್ರಧಾನ ಮಂತ್ರಿಯ ಹುದ್ದೆಯನ್ನು ಅಲಂಕರಿಸಿದನು.

ಅಹ್ಮದಾಬಾದ್‌ಕ್ಕೆ ಷಾಹ್ ಹೈದರ್‌ನ ಆಗಮನ :

ಅದೇ ಕಾಲದಲ್ಲಿ ಷಾಹ್‌ತಾಹೀರ್‌ರ ಪುತ್ರರಾದ ಷಾಹ್‌ಹೈದರ್‌ನು ಇರಾನ್‌ನಿಂದ ದಖ್ಖನ್ನಿಗೆ ಮರಳಿ ಬಂದನು. ಹುಸೈನ್ ನಿಜಾಮ್‌ಷಾಹ್‌ನು ಅಲಿಕುಲಿಮುನ್ಷಿಯನ್ನು ಪಲ್ಲಕ್ಕಿಯ ಜೊತೆಗೆ ಷಾಹ್ ಸಾಹೇಬರ ಸ್ವಾಗತಕ್ಕಾಗಿ ಕಳುಹಿಸಿದನು. ಅವರನ್ನು ಬಹಳೇ ಗೌರವ ಹಾಗೂ ಆದರಗಳೊಂದಿಗೆ ಮನ್ನಣೆ ನೀಡಿ ಅಹ್ಮದ್ ನಗರಕ್ಕೆ ಕರೆತರಲಾಯಿತು. ಷಾಹ್‌ತಾಹೀರ್‌ರ ಜಾಗೀರು ಹಾಗೂ ದಂದರಾಜ್‌ಪುರಿ ಪಟ್ಟಣವನ್ನು ಷಾಹ್ ಹೈಪರರ್ ವಶದಲ್ಲಿ ನೀಡಲಾಯಿತು.

ಗುಲ್ಬರ್ಗಾದ ವಿಜಯಕ್ಕಾಗಿ ಹುಸೈನ್ ನಿಜಾಮ್‌ಷಾಹ್‌ನ ಪ್ರಯತ್ನ :

ಕೆಲವೇ ಸಮಯದಲ್ಲಿ ಇಬ್ರಾಹಿಂ ಆದಿಲ್‌ಷಾಹ್‌ನು ಮರಣ ಹೊಂದಿದನು. ಹುಸೈನ್ ನಿಜಾಮ್‌ಷಾಹನು ಈ ಅವಕಾಶವನ್ನು ಬಳಸಿಕೊಂಡು ಹಸನಾಬಾದ್ ಗುಲ್ಬರ್ಗಾವನ್ನು ಗೆಲ್ಲಲು ನಿಶ್ಚಯಿಸಿದನು. ಅವನು ಮುಲ್ಲಾ ಇನಾಯತಲ್ಲಾ ಹಾಗೂ ಖಾಸಿಂ ಬೇಗ್‌ರನ್ನು ಗೋಲ್ಕೊಂಡಾಕ್ಕೆ ಕಳುಹಿಸಿ ಇಬ್ರಾಹಿಂ ಕುತುಬ್‌ಷಾಹ್‌ನಿಗೆ ಸಂದೇಶವನ್ನು ನೀಡಿದನು. "ಈಗ ಪರಿಸ್ಥಿತಿಯು ನಮ್ಮ ಹತೋಟಿಯಲ್ಲಿದೆ, ನಾವು ಈಗ ಈ ಅವಕಾಶವನ್ನು ಸದುಪಯೋಗಪಡಿಸಿಕೊಂಡು ಗುಲ್ಬರ್ಗಾದ ಕೋಟೆಯನ್ನು ವಶಪಡಿಸಿಕೊಳ್ಳಬೇಕು. ಇಬ್ರಾಹಿಂ ಕುತುಬ್‌ಷಾಹ್‌ನೂ ಇದನ್ನೇ ಬಯಸುತ್ತಿದ್ದನು. ಆದುದರಿಂದ ಅವನು ತಕ್ಷಣ ಸೈನ್ಯವನ್ನು ಒಗ್ಗೂಡಿಸಿ ಅಲ್ಲಿಂದ ಹೊರಟನು.

ಹುಸೈನ್ ನಿಜಾಮ್‌ಷಾಹ್ ಹಾಗೂ ಇಬ್ರಾಹಿಂ ಕುತುಬ್‌ಷಾಹ್‌ರು ಗುಲ್ಬರ್ಗಾದಲ್ಲಿ:

ಹುಸೈನ್ ನಿಜಾಮನಿಗೆ ಯಾವಾಗ ಇಬ್ರಾಹಿಂ ಕುತುಬ್‌ಷಾಹ್‌ರು ಹೊರತು ಸುದ್ದಿ ತಲುಪಿತೋ ಆಗ ಅವನೂ ಸಹ ಗುಲ್ಬರ್ಗಾದತ್ತ ಪಯಣ ಬೆಳೆಸಿದನು. ಈರ್ವರೂ ಬಾದಷಾಹ್‌ರು ಗುಲ್ಬರ್ಗಾದಲ್ಲಿ ಒಬ್ಬರನ್ನೊಬ್ಬರು ಭೇಟಿಯಾದರು. ಹಾಗೂ ಈ ನಿರ್ಧಾರವನ್ನು ತೆಗೆದುಕೊಂಡರು. ಏನೆಂದರೆ ಮೊದಲು ಗುಲ್ಬರ್ಗಾವನ್ನು ಗೆಲ್ಲಬೇಕು ಹಾಗೂ ಅದರ ನಂತರ ಅಹತ್‌ಕರ್ ಕೋಟೆಯ ಮೇಲೆ ದಾಳಿ ಮಾಡುವುದು.

ಕೋಟೆಯ ಮುತ್ತಿಗೆ :

ಗುಲ್ಬರ್ಗಾದ ಕೋಟೆಯ ದಿಗ್ಬಂಧನ ಮಾಡಲಾಯಿತು. ನಿಜಾಮಶಾಹನ ತೋಪುದಾರರು ರೂಮಿಖಾನ್‌ರ ನಾಯಕತ್ವದಲ್ಲಿ ಕೋಟೆಯ ಗೋಪುರಗಳ ಬುನಾದಿಯನ್ನು ಅಲುಗಾಡಿಸಿದರು. ಇನ್ನೇನು ರೂಮಿಖಾನ್‌ನು ಕೋಟೆಯನ್ನು

ವಶಪಡಿಸಿಕೊಳ್ಳುವವನಿದ್ದನು. ಆಗಲೇ ಮುಸ್ತಫಾಖಾನ್ ಅರ್ದ್‌ಸನಾನಿಯು ಕುತುಬ್‌ಶಾಹನ ಉನ್ನತಾಧಿಕಾರಿಗಳಲ್ಲಿ ಒಬ್ಬನಾಗಿದ್ದನು. ಅವನು ತನ್ನ ದೊರೆಯೊಂದಿಗೆ ಹೀಗೆಂದನು. "ಬುರ್ಹಾನ್ ನಿಜಾಮ್‌ಷಾಹ್‌ನು ಅಪ್ರಾಮಾಣಿಕನಾಗಿದ್ದಾನೆ. ಅವನು ಸ್ವತಃ ಗುಲ್ಬರ್ಗಾವನ್ನು ವಶಪಡಿಸಿಕೊಳ್ಳುವನು. ಆದರೆ ನಿಮಗೆ ಆಹತ್‌ಕರ್ ಕೋಟೆಯ ಮೇಲೆ ಹಿಡಿತಸಾಧಿಸಲು ಬಿಡಲಾರನು. ನನ್ನ ಅಭಿಪ್ರಾಯವಿದಾಗಿದೆ. ತಾವು ಅವನ ಸಹಾಯ ಮಾಡಬೇಡಿರಿ".

ಇಬ್ರಾಹಿಂ ಕುತುಬ್‌ಶಾಹನ ಬೇರ್ಪಡುವಿಕೆ :

ಮುಸ್ತಫಾಖಾನ್‌ನ ನುಡಿಯು ಕುತುಬ್‌ಶಾಹನ ಮನಸೂರೆಗೊಂಡಿತು. ಅವನು ತನ್ನ ಎಲ್ಲ ವಸ್ತುಗಳನ್ನು ಅಲ್ಲಿಯೇ ಬಿಟ್ಟನು. ಹಾಗೂ ಸ್ವತಃ ಅರ್ಧ ರಾತ್ರಿಯಲ್ಲಿ ತನ್ನ ಪ್ರಾಂತ್ಯದೆಡೆಗೆ ಹೊರಟುಹೋದನು. ಹೋಗುವಾಗ ಅವನು ಕೋಟೆಯ ಒಳಗಿನವರಿಗೆ ನಿಜಾಮಶಾಹಿಗಳಿಂದ ಸಂರಕ್ಷಿಸಿಕೊಳ್ಳಲು ಎಚ್ಚರಿಸಿದನು. ಆದಿಲ್‌ಶಾಹಿ ಅಮೀರರಿಗೆ ಕುತುಬ್‌ಶಾಹನು ಹೊರಟು ಹೋದದ್ದು ಕಂಡು ಬಹಳ ಸಂತೋಷವಾಯಿತು. ಅವರು ನೆಮ್ಮದಿಯ ಉಸಿರು ಎಳೆದುಕೊಂಡರು.

ಹುಸೈನ್ ನಿಜಾಮ್‌ಷಾಹ್‌ನ ಸೋಲು :

ಅದರ ನಂತರ ಆದಿಲ್‌ಶಾಹಿಗಳು ನಿಜಾವ್‌ಶಾಹ್‌ನ ಸೈನ್ಯವನ್ನು ಬಗ್ಗುಬಡಿಯತೊಡಗಿದರು. ಈ ಸ್ಥಿತಿಯನ್ನು ಮನಗಂಡು ಹುಸೈನ್ ನಿಜಾಮಶಾಹನು ಆತಂಕಿತನಾದನು. ಅವನು ಕೋಟೆಯನ್ನು ವಶಪಡಿಸಿಕೊಳ್ಳುವ ವಿಚಾರವನ್ನು ಬಿಟ್ಟುಕೊಟ್ಟನು. ವೈಫಲ್ಯತೆ ಹಾಗೂ ನಿರಾಶೆಯಿಂದ ತನ್ನ ಪ್ರಾಂತ್ಯಕ್ಕೆ ಮರಳಿದನು.

ಮುಲ್ಲಾ ಇನಾಯತ್‌ನ ಓಡಿ ಹೋಗುವಿಕೆ :

ಮುಲ್ಲಾ ಇನಾಯತುಲ್ಲಾ ಹುಸೈನ್ ನಿಜಾಮ್ ಹಾಗೂ ಕುತುಬ್‌ಶಾಹನ ನಡುವೆ ಮಧ್ಯಸ್ಥನಾಗಿದ್ದನು. ಪರಸ್ಪರರಿಗೆ ಯಾವುದೇ ಸಂಕಟವನ್ನು ಪರಿಹರಿಸಿಕೊಳ್ಳುವುದಿದ್ದರೆ ಸಮಸ್ಯೆ ನಿವಾರಣೆಗಾಗಿ ಇವನ ಜೊತೆಗೆಯೇ ಮಾತುಕತೆ ನಡೆಸುತ್ತಿದ್ದರು. ಮುಲ್ಲಾ ಇನಾಯತ್‌ನು ಕುತುಬಶಾಹನ ಬೇರ್ಪಡುವಿಕೆಯ ಕಾರಣದಿಂದ ಬಹಳೇ ಭಯಭೀತನಾದನು. ಅವನು ಹುಸೈನ್ ನಿಜಾಮನ ಕ್ರೋಧವನ್ನು ಚೆನ್ನಾಗಿ ಅರಿತಿದ್ದನು. ಅದಕ್ಕಾಗಿ ಅವನು ಓಡಿ ಹೋಗುವದರಲ್ಲಿಯೇ ತನ್ನ ಒಳಿತು ಇದೆಯೆಂದು ಬಗೆದನು. ಹಾಗೂ ಗೋಲ್ಕೊಂಡಾದತ್ತ ಹೊರಟುಹೋದನು.

ಖಾಸಿಂಬೇಗ್‌ನನ್ನು ಹುದ್ದೆಯಿಂದ ವಜಾಗೊಳಿಸುವುದು ಬಂಧನ ಹಾಗೂ ಮರುನೇಮಕ:

ಮುಲ್ಲಾ ಇನಾಯತ್‌ನ ಓಡಿ ಹೋಗುವಿಕೆಯಿಂದ ಹುಸೈನ್‌ನಿಜಾಮನು ಕೋಪೋದ್ರಿಕ್ತನಾದನು. ಆದರೆ ಅವನು ಏನನ್ನೂ ಅಸಹಾಯಕನಾಗಿದ್ದನು. ಏಕೆಂದರೆ

ಬಾಣವು ಬಿಲ್ಲಿನಿಂದ ಹೊರಟ್ಟಿದ್ದಾಗಿತ್ತು. ಅವನು ತನ್ನ ಕ್ರೋಧವನ್ನು ಶಾಂತಗೊಳಿಸಲು ಖಾಸಿಂಬೇಗ್‌ನನ್ನು ಬಲಿಪಶು ಮಾಡಿದನು. ಅವನನ್ನು ಪರಿಂಧಾ ಕೋಟೆಯಲ್ಲಿ ಬಂಧಿಸಿಡಲಾಯಿತು. ಎರಡು ಮೂರು ತಿಂಗಳುಗಳ ನಂತರ ಹುಸೈನ್ ನಿಜಾಮನ ಮನಸ್ಸು ಕರಗಿತು. ಹಾಗೂ ಅವನು ಖಾಸಿಂಬೇಗ್‌ನನ್ನು ಬಿಡುಗಡೆ ಮಾಡಿ ಮೊದಲಿನ ತರಹ ಅವನ ಹುದ್ದೆಯನ್ನು ನೀಡಿ ಮರುನೇಮಕ ಮಾಡಿದನು.

ಅಲಿ ಆದಿಲಶಾಹನ ನಿರ್ಧಾರ :

ಅಲಿ ಆದಿಲಶಾಹನು ಹುಸೈನ್ ನಿಜಾಮಶಾಹನೊಂದಿಗೆ ಸೇಡು ತೀರಿಸಿಕೊಳ್ಳಲು ನಿಶ್ಚಯಿಸಿದನು. ಹಾಗೂ ಈ ಉದ್ದೇಶವನ್ನು ಪೂರ್ತಿಕರಿಸುವದಕ್ಕಾಗಿ ಅವನು ರಾಮರಾಜ ಹಾಗೂ ಕುತುಬಶಾಹನನ್ನು ತನ್ನ ಜೊತೆಗೆ ಸೇರಿಸಿಕೊಂಡನು. ಹುಸೈನ್ ನಿಜಾಮ್‌ನಿಗೆ ಯಾವಾಗ ಇದರ ಕುರಿತು ಮಾಹಿತಿ ಲಭ್ಯವಾಯಿತೋ ಆಗ ಅವನು ತನ್ನ ನಂಬಿಗಸ್ತನಾದ ಓರ್ವ ಮುಲ್ಲಾಅಲಿ ಮಾ ಜಂದರಾನಿ ಎಂಬುವವನನ್ನು ಅಮಾದುಲ್ ಮುಲ್ಕನ ಬಳಿ ದೂತನನ್ನಾಗಿ ಕಳುಹಿಸಿದನು. ಈ ಮೂಲಕ ನಿಜಾಮ್‌ಷಾಹೀ ಹಾಗೂ ಅಮಾದ್‌ಷಾಹೀ ಕುಟುಂಬಗಳ ವಂಶಗಳಲ್ಲಿ ಸ್ನೇಹ ಸಂಬಂಧವನ್ನು ಬೆಳೆಸುವುದರಿಂದ ಹುಸೈನ್ ನಿಜಾಮನು ಈ ತೆರನಾಗಿ ಲಾಭ ಪಡೆದುಕೊಳ್ಳಲು ಬಯಸಿದನು. ಅಮಾದುಲ್ ಮುಲ್ಕನು ಮುಲ್ಲಾ ಜಂದರಾನಿಯೊಂದಿಗೆ ಒಳ್ಳೆಯ ರೀತಿಯಲ್ಲಿ ನಡೆದುಕೊಂಡನು.

ರೇಗ್‌ವಂದಾ ಕೋಟೆಯ ಮೇಲೆ ದಾಳಿ :

ಅದೇ ವರ್ಷ ಹುಸೈನ್ ನಿಜಾಮ್‌ಷಾಹ್‌ನು ರೂಮಿಖಾನ್ ಹಾಗೂ ಮೌಲಾನಾ ಶಾಹ ಮೊಹಮ್ಮದ್ ನಿಶಾಪುರಿಗೆ ರೇಗ್‌ವಂದಾ ಕೋಟೆಯನ್ನು ವಶಪಡಿಸಿಕೊಳ್ಳಲು ಕಳುಹಿಸಿದನು. ಈ ದಾಳಿಯ ಉದ್ದೇಶವಿದಾಗಿತ್ತು. ಮುಸ್ಲಿಮೇತರ ಫಿರಂಗಿಗಳು ಹದ್ದು ಮೀರಿ ವರ್ತಿಸತೊಡಗುತ್ತಾ ಮುಸ್ಲಿಮರನ್ನು ತೊಂದರೆ ನೀಡಲು ಪ್ರಾರಂಭಿಸಿದ್ದರು. ನಿಜಾಮಶಾಹೀ ಸೈನ್ಯವು ಈ ಕ್ಷೋಭೆಯನ್ನೇ ಬೇರು ಸಹಿತ ಕಿತ್ತಿ ಹಾಕಲೆಂದು ಹೋಗಿತ್ತು. (ಆದರೆ ಯಾವುದೇ ಯುದ್ಧದ ಪ್ರಸಂಗವು ಬರಲಿಲ್ಲ). ಮುಸ್ಲಿಮೇತರರು ತಮ್ಮ ಕೀಟಲೆಯಿಂದ ನಾಚಿಕೆಪಟ್ಟರು. ಅವರು ಮುಂದೆ ಹೀಗಾಗದಂತೆ ಎಚ್ಚರಿಕೆ ವಹಿಸುವ ಪ್ರಮಾಣ ಮಾಡಿದರು. ಅದರ ನಂತರ ನಿಜಾಮ್‌ಶಾಹಿ ಸೈನ್ಯವು ಮರಳಿ ಬಂದಿತು.

ಜಾಲ್ನಾ ಕೋಟೆಯ ಮೇಲೆ ಹಿಡಿತ :

ಹಿಜ್ರಿ ಶಕೆ ೯೬೭ ರಲ್ಲಿ ಹುಸೈನ್ ನಿಜಾಮ್‌ಶಾಹನು ತನ್ನ ಪೂರ್ವಜರ ಸಂಪ್ರದಾಯವನ್ನು ಮೀರಿ ನವೀನಾಚಾರಕ್ಕೆ ಕೈ ಹಾಕಿದನು. ಜಾಲ್ನಾ ಕೋಟೆ ಹಾಗೂ ಈ ಸುತ್ತಲಿನ ಕೋಟೆಗಳನ್ನು ಅಲ್ಲಿ ಓರ್ವ ಹಿಂದೂ ರಾಜ ಆಡಳಿತ ನಡೆಸುತ್ತಿದ್ದನು.

ಅವುಗಳನ್ನು ಹುಸೈನ್ ನಿಜಾಮಶಾಹನು ಗೆದ್ದುಕೊಂಡನು. ಈ ಕೋಟೆಗಳ ಆಡಳಿತವನ್ನು ತನ್ನ ನಂಬಿಗಸ್ತ ಅಮೀರನಿಗೆ ಒಪ್ಪಿಸಿದನು. ಹಾಗೂ ಸ್ವತಃ ಅಹ್ಮದ್‌ನಗರಕ್ಕೆ ಮರಳಿಬಂದನು.

ಅಹ್ಮದ್‌ನಗರಕ್ಕೆ ಅಲಿಆದಿಲಶಾಹನ ಆಗಮನ :

ಅದೇ ದಿನಗಳಲ್ಲಿ ಹುಸೈನ್ ನಿಜಾಮಶಾಹನಿಗೆ ಈ ಸುದ್ದಿಯು ತಲುಪಿತು ಅದೇನೆಂದರೆ ಆದಿಲ್ ಪ್ರತಿಕಾರ ತೆಗೆದುಕೊಳ್ಳುವುದಕ್ಕಾಗಿ ಸೋಲಾಪುರ ಹಾಗೂ ಕಲ್ಯಾಣದ ಕೋಟೆಗಳನ್ನು ಗೆಲ್ಲಲೆಂದು ರಾಮರಾಜ ಹಾಗೂ ಕುತುಬ್‌ಷಾಹ್‌ರನ್ನು ತನ್ನ ಜೊತೆಗೆ ಕರೆದುಕೊಂಡು ಅಹ್ಮದ್‌ನಗರದ ಕಡೆಗೆ ಬರುತ್ತಲಿರುವನು.

ಶಾಹ ಹಸನ್ ಅಂಜುನೊಂದಿಗೆ ಸಮಾಲೋಚನೆ :

ಹುಸೈನ್ ನಿಜಾಮ್‌ಶಾಹನು ಖಾಸಿಂಬೇಗ್‌ನ ಸಲಹೆಯಂತೆ ಶಾಹ್‌ಹಸನ್ ಅಂಜುವನ್ನು ಕರೆಯಿಸಿಕೊಂಡನು. ಅವನು ಈ ದಿನಗಳಲ್ಲಿ ಬಂದರ್‌ಜೇವಲ್‌ದಲ್ಲಿ ಇರುತ್ತಿದ್ದನು. ಹಾಗೂ ಹಜ್‌ಯಾತ್ರೆಯ ಇಚ್ಛೆ ಹೊಂದಿದ್ದನು. ಬಾದ್‌ಶಾಹನು ಶಾಹಹಸನ್‌ನೊಂದಿಗೆ ಅಲಿಆದಿಲ್ ಹಾಗೂ ಇತರರ ಆಗಮನದ ಕುರಿತು ಚರ್ಚಿಸಿದನು. ಷಾಹ್ ಹುಸೈನ್‌ರು ಹೀಗೆಂದರು. "ನಾವು ಇಷ್ಟು ಶಕ್ತಿವಂತರಾಗಿಲ್ಲ. ಈ ಮೂವರು ಬಾದಷಾಹರನ್ನು ಎದುರಿಸಲು ಅಸಮರ್ಥರಾಗಿದ್ದೇವೆ. ಎಲ್ಲಕ್ಕಿಂತ ಒಳಿತಾದುದು ಇದೇ ಆಗಿದೆ ನಾವು ಕಲ್ಯಾಣದ ಕೋಟೆಗಳನ್ನು ಅಲಿ ಆದಿಲ್‌ಶಾಹನಿಗೆ ಒಪ್ಪಿಸಿ ಸಂಧಾನ ಮಾಡಿಕೊಳ್ಳೋಣ."

ಶಾಹ ಹಸನ್‌ನ ನೇರನುಡಿ :

ಹುಸೈನ್‌ನಿಜಾಮನು ಹಿಂದೆ ಉತ್ತರಿಸಿದನು. "ಯಾವ ಕೋಟೆಯನ್ನು ತಂದೆಯವರು ಬಹಳ ಶ್ರಮವಹಿಸಿ ಶೌರ್ಯದೊಂದಿಗೆ ಅದರ ಮೇಲೆ ವಿಜಯ ಸಾಧಿಸಿದ್ದಾರೆ ಅದನ್ನು ಯಾವುದೇ ಪ್ರತಿರೋಧವಿಲ್ಲದೇ ಶತ್ರುವಿನ ಕೈವಶ ಮಾಡುವುದು ನನಗೆ ನಾಚಿಕೆಯ ವಿಷಯವಾಗಿದೆ" ಇದಕ್ಕುತ್ತರವಾಗಿ ಶಾಹ ಹಸನ್‌ನು ಹೀಗೆಂದನು "ಇದು ಸಮಯದ ಬೇಡಿಕೆಯಾಗಿದೆ, ಹಾಗೂ ಪ್ರತಿಯೊಂದು ಕಾಲದ ಬೇಡಿಕೆಗಳು ಬೇರೆ ಬೇರೆ ತೆರನಾಗಿರುತ್ತವೆ. ನಿಮ್ಮ ತಂದೆಯವರಿಗೆ ಇದುವೇ ಸರಿಯಾಗಿತ್ತು. ಅವರು ಕಲ್ಯಾಣ ಕೋಟೆಯನ್ನು ವಶಪಡಿಸಿಕೊಂಡರು. ಆದರೆ ಈ ಸಮಯದಲ್ಲಿ ಇದೇ ಉಚಿತವಾಗಿದೆ. ತಾವು ಈ ಕೋಟೆಯಿಂದ ದೂರವಾಗಬೇಕು. ಬಾದಶಾಹರಿಗೆ ಅಥವಾ ಶ್ರೀ ಸಾಮಾನ್ಯನಿಗೆ ವೈಯಕ್ತಿಕ ಜೀವನದಲ್ಲಿ ಇಂತಹ ಅಸಂಖ್ಯ ಘಟನೆಗಳು ಜರುಗುತ್ತಿರುತ್ತವೆ.

ಅಹ್ಮದ್‌ನಗರದ ಸುತ್ತ ವೈರಿಯ ಆಗಮನ :

ಹುಸೈನ್ ನಿಜಾಮ್‌ನು ಇದನ್ನು ಎಂದಿಗೂ ಬಯಸುತ್ತಿರಲಿಲ್ಲ. ಏನೆಂದರೆ

ಕಲ್ಯಾಣದ ಕೋಟೆಯುನ್ನು ಅಲಿಆದಿಲಶಾಹನಿಗೆ ಒಪ್ಪಿಸುವುದು. ಅವನು ಶಾಹಹಸನ್‌ಅಂಜುವಿನ ಸಲಹೆಯನ್ನು ಒಪ್ಪಲಿಲ್ಲ. ಹಾಗೂ ತನ್ನ ಮಾತಿನ ಮೇಲೆ ಅಚಲವಾಗಿ ನಿಂತನು. ಎಲ್ಲಿಯವರೆಗೆ ಎಂದರೆ ವೈರಿಯು ಒಂದು ಲಕ್ಷ ಸವಾರರು ಹಾಗೂ ಎರಡು ಲಕ್ಷ ಕಾಲಾಳುಗಳನ್ನು ಹೊಂದಿದ ಭಯಂಕರ ಸೈನ್ಯವನ್ನು ತೆಗೆದುಕೊಂಡು ಅಹ್ಮದ್‌ನಗರದ ಸುತ್ತಮುತ್ತ ತಲುಪಿದನು.

ಪಟ್ಟಣಕ್ಕೆ ಹುಸೈನ ನಿಜಾಮಶಾಹನು ಪಟ್ಟಕ್ಕೆ ಹೋದದ್ದು :

ಹುಸೈನ್ ನಿಜಾಮಶಾಹನು ತಕ್ಷಣ ಅಹ್ಮದ್‌ನಗರದ ಅಭದ್ರ ಕೋಟೆಯಲ್ಲಿ ಯಾವುದರ ಎದುರು ಕಂದಕ ಕೂಡ ಇರಲಿಲ್ಲ. ಯುದ್ಧ ಸಾಮಗ್ರಿ, ಬೊಕ್ಕಸ, ಧವಸಧಾನ್ಯ ಹಾಗೂ ಇತರ ಅವಶ್ಯಕ ವಸ್ತುಗಳನ್ನು ಸೇರಿಸಿದನು. ಹಾಗೂ ಈ ಕೋಟೆಯನ್ನು ತನ್ನ ಕೆಲವು ನಂಬಿಗಸ್ತ ಅಮೀರರ ವಶಕ್ಕೊಪ್ಪಿಸಿ ತನ್ನ ಕುಟುಂಬದೊಂದಿಗೆ ಹಾಗೂ ರಾಜಬೊಕ್ಕಸದೊಂದಿಗೆ 'ಪಟ್ಟಣ'ದ ಕಡೆಗೆ ಹೊರಟನು. ಈ ಪ್ರಯಾಣದ ಉದ್ದೇಶವಿದಾಗಿತ್ತು. ಅಮೀರ್‌ಬರೀದ್, ಮೀರಾ ಮುಬಾರಕ್‌ಷಾಹ್ ಹಾಗೂ ಅಮಾದುಲ್‌ಮುಲ್ಕನಿಗೆ ತನ್ನೊಂದಿಗೆ ತರುವುದು ಹಾಗೂ ಅವರ ಸಹಾಯದಿಂದ ವೈರಿಯೊಂದಿಗೆ ಹೋರಾಡುವುದು.

ಖಾನಜಹಾನನ ಕ್ಷೋಭೆ :

ಆಕಸ್ಮಿಕ ಘಟನೆಯ ವಿಷಯವಿದೆ. ಅಮೀರ್ ಬರೀದ್‌ನ ಸಹೋದರ ಖಾನಜಹಾನನು ಹುಸೈನ ನಿಜಾಮಶಾಹನ ಉದ್ಧೇಶ ಪೂರ್ತಿಕರಿಸಲು ಬಿಡಲಿಲ್ಲ. ಖಾನಜಹಾನನು ಅಮಾದುಲ್‌ಮುಲ್ಕನ ಪ್ರಧಾನ ಮಂತ್ರಿಯಾಗಿದ್ದನು. ಅಲಿ ಅದಿಲ್‌ಷಾಹ್‌ನ ಹೇಳಿಕೆಯ ಮೇರೆಗೆ ಅವನ ಐದು ಸಾವಿರ ಸವಾರರ ಸೈನ್ಯವನ್ನು ಜೊತೆಗೆ ತೆಗೆದುಕೊಂಡು ಹುಸೈನ ನಿಜಾಮಶಾಹನ ಪ್ರಾಂತ್ಯದಲ್ಲಿ ವಿನಾಶದ ತಾಂಡವನೃತ್ಯ ಮಾಡಿದನು.

ಖಾನ ಜಹಾನನ ಸೋಲು :

ಹುಸೈನ್ ನಿಜಾಮಶಾಹನು ಮುಲ್ಲಾ ಮುಹಮ್ಮದ್ ನಿಶಾಪುರಿಗೆ ಸುಮಾರು ಎರಡು ಮೂರು ಸಾವಿರ ಸವಾರರೊಂದಿಗೆ ಖಾನಜಹಾನನನ್ನು ಸೋಲಿಸಲು ಕಳುಹಿಸಿದನು. ಮುಲ್ಲಾ ನಿಶಾಪುರಿಯು ಪ್ರಥಮ ಹೊಡೆತದಲ್ಲಿಯೇ ಖಾನ್‌ಜಹಾಂನ್‌ನಿಗೆ ಸೋಲಿನ ರುಚಿ ಉಣಿಸಿದನು. ಖಾನ್‌ಜಹಾನನು ಆತಂಕಿತನಾಗಿ ಓಡಿಹೋದನು. ಲಜ್ಜೆಯಿಂದಾಗಿ ಅವನು ತನ್ನ ಸಹೋದರ ಅಮಾದುಲ್‌ಮುಲ್ಕನಿಗೆ ಮುಖ ತೋರಿಸಲು ಅಯೋಗ್ಯನಾಗಿದ್ದನು. ಅದಕ್ಕಾಗಿ ಅವನು ಅಲಿಆದಿಲಶಾಹನ ಬಳಿ ಹೋದನು.

ಅಹ್ಮದ್‌ನಗರದಲ್ಲಿ ಗಲಭೆ :

ಜಹಾಂಗೀರ್‌ಖಾನ್ ದಖನಿಗೆ ಜುಮಲ್‌ತುಲ್‌ಮುಲ್ಕ (ಸರ್ವಾಧಿಕಾರಿ) ಎಂದು ನೇಮಿಸಲಾಯಿತು. ಅವನು ಬರಾರ್‌ದ ಸೈನ್ಯವನ್ನು ಜೊತೆಗೆ ತೆಗೆದುಕೊಂಡನು. ಹಾಗೂ ಹುಸೈನ ನಿಜಾಮನ ಸಹಾಯಕ್ಕಾಗಿ ಧಾವಿಸಿದನು. ಅದೇ ಸಮಯದಲ್ಲಿ ಅಲಿ ಆದಿಲಶಾಹ, ರಾಮರಾಜ, ಕುತುಬಶಾಹ, ಅಹ್ಮದ್‌ನಗರದಲ್ಲಿ ಪ್ರವೇಶಿಸಿದರು. ಅವರು ವಿನಾಶವನ್ನುಗೈಯ್ಯತೊಡಗಿದರು. ಅವರು ಮನೆ, ಮಸೀದ, ಹಾಗೂ ಅತಿಥಿಗೃಹಗಳು ಇತ್ಯಾದಿಗಳನ್ನು ಮನ ಬಂದಂತೆ ಹಾಳುಗೈಯ್ಯುಲಿಕ್ಕೆ ಪ್ರಾರಂಭಿಸಿದರು. ಹಾಗೂ ಮತ್ತೆ ಕೋಟೆಯನ್ನು ದಿಗ್ಬಂಧನಗೊಳಿಸಿದರು. ಈ ದಿಗ್ಬಂಧನದಿಂದಾಗಿ ಕೋಟೆಯೊಳಗಿನವರಿಗೆ ತುಂಬಾ ಕಷ್ಟನಷ್ಟ ಉಂಟಾಯಿತು.

ಕುತುಬಶಾಹನಿಗೆ ಗೌರವ :

ಕುತುಬಶಾಹನು ಹಾಗೇ ನೋಡಿದರೆ ಅಲಿ ಆದಿಲಶಾಹನ ಸಮ ಹುದ್ದೆಯಲ್ಲಿದ್ದನು. ಆದರೆ ಅವನ ಈ ಬಯಕೆಯೂ ಇತ್ತು. ಹೇಗಾದರೂ ಮಾಡಿ ಆದಿಲ್‌ಷಾಹನು ಹುಸೈನ ನಿಜಾಮನ ಮೇಲೆ ಯಾವುದೇ ರೀತಿಯ ಮೇಲುಗೈ ಸಾಧಿಸದಿರಲಿ. ಈ ಕಾರಣದಿಂದ ಅವನು ಕೋಟೆಯ ಒಂದು ಬದಿಯ ಹಾದಿಯನ್ನು ಯಾವ ಕಡೆ ಅವನು ಸ್ವತಃ ಇದ್ದನು ಕೋಟೆಯವರಿಗಾಗಿ ತೆರೆದಿದ್ದನು. ಕೋಟೆಯವರು ನಿರ್ಭಿತಿಯಿಂದ ಹೊರಒಳಗೆ ಬಂದುಹೋಗತೊಡಗಿದರು. ಹಾಗೂ ಅವಶ್ಯಕ ವಸ್ತುಗಳೆಲ್ಲವೂ ಅವರಿಗೆ ತಲುಪತೊಡಗಿದವು.

ಮುಲ್ಲಾ ಇನಾಯತನ ದೂರದರ್ಶಿತ್ವ :

ಮುಲ್ಲಾ ಇನಾಯತಲ್ಲಾಹ್‌ನು ಈ ದಿನಗಳಲ್ಲಿ ಇಬ್ರಾಹಿಂ ಕುತುಬಶಾಹನಲ್ಲಿ ಸೇವೆಗೆ ತೊಡಗಿದ್ದನು ಹಾಗೂ ಅವನು ಆಡಳಿತದ ಸೂತ್ರವನ್ನು ಹಿಡಿದಿದ್ದನು. ಕೋಟೆಯೊಳಗಿನವರ ಮೇಲೆ ಅನುಕಂಪವಿತ್ತು. ಹಾಗೂ ಅವರಿಂದ ಸ್ನೇಹ ಸಂಬಂಧವನ್ನಿರಿಸಿಕೊಂಡಿದ್ದನು. ಅಂದರೆ ಹುಸೈನ ನಿಜಾಮನ ಗುಣಗಾನವನ್ನು ಮಾಡುತ್ತಿದ್ದನು. ಆದಿಲಶಾಹ ಹಾಗೂ ರಾಮರಾಜರಿಗೆ ಯಾವಾಗ ಕುತುಬ್‌ಷಾಹನು ಕೋಟೆಯ ಬಾಗಿಲನ್ನು ತೆರೆದ ಸುದ್ಧಿಯು ತಿಳಿಯಿತೋ ಆಗ ಅವರು ಅವನಿಂದ ವಿಮುಖರಾದರು ಹಾಗೂ ಅವನನ್ನು ತೊಂದರೆಗೀಡುಮಾಡಲು ಪ್ರಯತ್ನಿಸಿದರು.

ಇಬ್ರಾಹಿಂ ಕುತುಬಶಾಹನು ಈ ಸಲವೂ ಮೊದಲಿನಂತೆ ಶಾಂತಿಯ ದಾರಿಯಲ್ಲಿ ಸಾಗಿದನು. ಯಾವ ತೆರನಾಗಿ ಗುಲ್ಬರ್ಗಾ ಕೋಟೆಯಿಂದ ಹೊರಬಿದ್ದಿದ್ದನು ಹಾಗೆಯೇ ಇಲ್ಲಿಂದಲೂ ರಾತ್ರಿಯ ವೇಳೆ ಎಲ್ಲ ವಸ್ತುಗಳನ್ನು ಇದ್ದಲ್ಲಿಯೇ ಬಿಟ್ಟು ಗೊಲ್ಕೊಂಡಾದ ಕಡೆಗೆ ಹೊರಟು ಹೋದನು. ಯಾವಾಗ ಕುತುಬ್‌ಷಾಹ ಅಲ್ಲಿಂದ ಹೊರಟನೋ

ಆಗ ಮುಲ್ಲಾ ಇನಾಯತ್‌ನು ಅವನ ಜೊತೆಗೆ ಹೋಗಲಿಲ್ಲ. ಹಾಗೂ ಹುಸೈನ್ ನಿಜಾಮನ ಬಳಿ ಬಂದನು. ನಿಜಾಮನು ಅವನನ್ನು ಆದರಪೂರ್ವಕವಾಗಿ ನೋಡಿಕೊಂಡನು.

ಜಹಾಂಗೀರಖಾನ್ ದಖನಿಯ ಕಾರ್ಯಾಚರಣೆ :

ಖಾನ್‌ಜಹಾನನ ಸೋಲಿನ ನಂತರ ಅಮಾದುಲ್ ಮುಲ್ಕನು ಜಹಾಂಗಿರಖಾನ ದಖನಿಗೆ ನಾಯಕನನ್ನಾಗಿ ನೇಮಿಸಿದನು. ಅವನನ್ನು ಯಥಾವಶ್ಯಕ ಸೈನ್ಯದ ಜೊತೆಗೆ ನಿಜಾಮಶಾಹನ ಸಹಾಯಕ್ಕಾಗಿ ಕಳುಹಿಸಿದನು. ಜಹಾಂಗೀರಖಾನನು ಆದಿಲಶಾಹಿಯ ಗಡಿಪ್ರದೇಶದಲ್ಲಿ ತಂಗಿದನು. ಹಾಗೂ ವೈರಿಯ ಆಗಮನ ನಿರ್ಗಮನವು ನಿಂತುಹೋಯಿತು. ಈ ಕಾರ್ಯದ ಪರಿಣಾಮ ಇದಾಯಿತು. ಏನೆಂದರೆ ರಾಮರಾಜ ಹಾಗೂ ಆದಿಲಶಾಹನ ಸೈನ್ಯಕ್ಕೆ ಧವಸಧಾನ್ಯತಲುಪಲಿಲ್ಲ. ಹಾಗೂ ಕ್ಷಾಮದ ಲಕ್ಷಣಗಳು ಕಂಡು ಬಂದವು.

ರಾಮರಾಜ ಹಾಗೂ ಆದಿಲಶಾಹನ ಯೋಜನೆ :

ಯಾವಾಗ ಆಹಾರ ಧಾನ್ಯಗಳ ಕೊರತೆಯು ಮುಗಿಲು ಮುಟ್ಟಿತೋ ಆಗ ತೊಂದರೆಯು ಹದ ಮೀರಿತು. ರಾಮರಾಜ ಹಾಗೂ ಆದಿಲಶಾಹರು 'ಅಶತಿ' ಹೆಸರಿನ ಗ್ರಾಮದಲ್ಲಿ ಬಂದರು. ಇಲ್ಲಿ ಅವರು ಒಂದು ಯೋಜನೆಯನ್ನು ಹಾಕಿಕೊಂಡರು. ಒಂದು ದೊಡ್ಡ ಸೈನ್ಯ ಅತಿರಥ ಮಹಾರಥರ ನಾಯಕತ್ವದ ಅಡಿಯಲ್ಲಿ ಪರಿಂದಾ ಕೋಟೆಯ ವಿಜಯಕ್ಕಾಗಿ ಕಳುಹಿಸುವುದು ಹಾಗೂ ನಂತರ ಮರಳಿ ಬಂದು ಅಹ್ಮದ ನಗರವನ್ನು ಹುಸೈನ ನಿಜಾಮಶಾಹನ ಹಿಡಿತದಿಂದ ಬಿಡಿಸಿಕೊಳ್ಳುವುದು.

ರಾಮರಾಜನ ಷರತ್ತುಗಳು :

ಹುಸೈನ್ ನಿಜಾಮನಿಗೆ ವೈರಿಯ ಯೋಜನೆಯ ಸುದ್ದಿ ಮುಟ್ಟಿತು. ಹಾಗೂ ಅವನು ಬಹಳ ಆತಂಕಕ್ಕೀಡಾದನು. ಅವನು ಖಾಸಿಂ ಬೇಗ್‌ಹಕಿಂ ಹಾಗೂ ಷಾಹ್ ಹಸನ್ ಅಂಜುವಿನ ಸಲಹೆಯಂತೆ ರಾಮರಾಜನೊಂದಿಗೆ ಸ್ನೇಹ ಸಂಬಂಧ ಬೆಳೆಸಿದನು. ಹಾಗೂ ಅವನೊಂದಿಗೆ ಸಂಧಾನದ ಮಾತುಕತೆ ನಡೆಸಿದನು. ರಾಮರಾಜನು ಸಂಧಾನಕ್ಕಾಗಿ ಕೆಲವು ಷರತ್ತುಗಳನ್ನು ಇಟ್ಟನು.

೧) ಕಲ್ಯಾಣದ ಕೋಟೆಯನ್ನು ಅಲಿ ಆದಿಲಶಾಹನಿಗೆ ಒಪ್ಪಿಸಬೇಕು.

೨) ಜಹಾಂಗೀರಖಾನನನ್ನು ಹತ್ಯೆಗೈಯ್ಯಬೇಕು. ಏಕೆಂದರೆ ಅವನು ನಮ್ಮ ಸೈನಿಕರಿಗೆ ಬಹಳ ಹಾನಿಯುಂಟು ಮಾಡಿರುವನು.

೩) ಹುಸೈನ್ ನಿಜಾಮನು ಸ್ವತಃ ನಮ್ಮ ಬಳಿ ಬರಬೇಕು.

ಜಹಾಂಗೀರಖಾನ್ ದಖನಿಯ ಹತ್ಯೆ :

ಹುಸ್ಸೈನನಿಜಾಮನು ತನ್ನ ಹಾಗೂ ತನ್ನ ಪ್ರಾಂತ್ಯದ ಒಳಿತಿಗಾಗಿ ಈ ಷರತ್ತುಗಳನ್ನು ಒಪ್ಪಿಕೊಳ್ಳುವುದು ಉಚಿತವೆಂದು ಬಗೆದನು. ಹಾಗೂ ಅವುಗಳನ್ನು ನಿಭಾಯಿಸಲು ಸಿದ್ಧನಾದನು. ಈ ಉದ್ದೇಶಪೂರ್ತಿಗಾಗಿ ಅವನು ಹಿತೈಷಿಗಳನ್ನು ಹಿಂಸಿಸಲೂ ಹಿಂಜರಿಯಲಿಲ್ಲ. ಎಲ್ಲಕ್ಕಿಂತ ಮೊದಲು ಅವನು ಯಾವುದೇ ಚರ್ಚೆ ಮಾಡದೇ ತನ್ನ ಕೆಲನಂಬಿಗಸ್ತರನ್ನು ಜಹಾಂಗೀರ್‌ಖಾನನ ಮನೆಗೆ ಕಳುಹಿಸಿದನು. ಹಾಗೂ ಆ ನಿಷ್ಪಾಪಿಗೆ ಯಾರು ಅತಿಥಿಯಾಗಿದ್ದನು ಅವನನ್ನು ಹತ್ಯೆಗೈದನು.

ರಾಮರಾಜನ ಗರ್ವ :

ಅಮಾದುಲ್‌ಮುಲ್ಕನು ಬಹಳೇ ಗಲಿಬಿಲಿಗೊಂಡನು. ಅವನು ಈ ವಿಷಯದಲ್ಲಿ ಹುಸ್ಸೈನ್ ನಿಜಾಮನಿಗೆ ಏನೊಂದನ್ನು ಹೇಳಲಿಲ್ಲ. ಹಾಗೂ ಮೌನವಹಿಸಿದನು. ಜಹಾಂಗೀರಖಾನನ ಹತ್ಯೆಯ ನಂತರ ಹುಸ್ಸೈನ ನಿಜಾಮನು ಓರ್ವ ಮುಸ್ಲಿಮೇತರನ ಹೇಳಿಕೆಯಂತೆ ತನ್ನ ಮತ್ತೊಬ್ಬ ಹಿತೈಷಿ ಹಾಗೂ ನಂಬಿಗಸ್ತನ ಹತ್ಯೆಯನ್ನು ಮಾಡಿದನು. ಯಾವಾಗ ಅಮಾದುಲಮುಲ್ಕನು ಹೊರಟು ಹೋದನು ಆಗ ಹುಸ್ಸೈನ ನಿಜಾಮನು ರಾಮರಾಜನ ಭೇಟಿಗಾಗಿ ಹೋದನು. ಭೇಟಿಯ ವೇಳೆಯಲ್ಲಿ ರಾಮರಾಜನು ಬಹಳ ಗರ್ವದ ಪ್ರದರ್ಶನ ಮಾಡಿದನು. ಹಾಗೂ ಅವನು ತನ್ನ ಸ್ಥಾನದಿಂದ ಕದಲಲಿಲ್ಲ. ಕುಳಿತಲ್ಲಿಂದಲೇ ಹುಸ್ಸೈನ್ ನಿಜಾಮ್‌ಷಾಹ್‌ನ ಕೈಗೆ ಚುಂಬಿಸಿದನು.

ದ್ವೇಷ ಪ್ರಕಟಿಸುವಿಕೆ :

ಹುಸ್ಸೈನನಿಜಾಮನು ರಾಮರಾಜನ ಈ ದುರ್ವರ್ತನೆಯಿಂದಾಗಿ ಬಹಳ ವಿವಶನಾದನು. ರಾಮರಾಜನಿಗೆ ತೊಂದರೆ ನೀಡುವುದಕ್ಕಾಗಿ ಅವನು ಅದೇ ವೇಳೆ ತುಂಬಿದ ಸಭೆಯಲ್ಲಿ ನೀರನ್ನು ತರಿಸಿದನು. ಹಾಗೂ ತನ್ನ ಕೈಗಳನ್ನು ತೊಳೆದುಕೊಂಡನು. ಅದನ್ನು ನೋಡಿ ರಾಮರಾಜನು ಕೋಪಗೊಂಡನು. ಹಾಗೂ ಕನ್ನಡ ಭಾಷೆಯಲ್ಲಿ ಹೇಳತೊಡಗಿದನು. "ಒಂದು ವೇಳೆ ಈ ವ್ಯಕ್ತಿಯು ನನ್ನ ಅತಿಥಿಯಾಗಿರದಿದ್ದರೆ ಈಗಿಂದೀಗಲೇ ಖಡ್ಗದಿಂದ ಅವನ ದೇಹವನ್ನು ತುಂಡರಿಸಿಬಿಡುತ್ತಿದ್ದೆ" ಅದರ ನಂತರ ರಾಮರಾಜನು ತಾನು ಸಹ ನೀರಿನಿಂದ ತನ್ನ ಕೈತೊಳೆದುಕೊಂಡನು.

ಘರ್ಷಣೆಯ ಸಮಾಪ್ತಿ :

ರಾಮರಾಜನ ಸಹೋದರರು ತನಕನಾದರಿ, ತಿಮ್ಮರಾಜನು ಖಾಸಿಂಬೇಗ ಹಾಗೂ ಮುಲ್ಲಾ ಇನಾಯತರೊಂದಿಗೆ ಮಾತುಕತೆ ನಡೆಸಿ ಈ ವಿಷಯವನ್ನು ಇಲ್ಲಿಯೇ ಸಮಾಪ್ತಿ ಮಾಡಿದರು ಹಾಗೂ ಹುಸ್ಸೈನ ನಿಜಾಮ ಮತ್ತು ರಾಮರಾಜರ ನಡುವೆ ಸಂಧಾನದ ಪ್ರಯತ್ನ ಮಾಡತೊಡಗಿದರು. ಹುಸ್ಸೈನ ನಿಜಾಮನು ಕಲ್ಯಾಣ ಕೋಟೆಯ

ಬೀಗದ ಕೈಯನ್ನು ರಾಮರಾಜನಿಗೆ ಒಪ್ಪಿಸಿದನು. ಹಾಗೂ ಅವನೊಂದಿಗೆ ಹೀಗೆಂದನು. "ನಾನು ಈ ಕೋಟೆಯನ್ನು ನಿನ್ನ ವಶಕ್ಕೊಪ್ಪಿಸುವೆನು" ರಾಮರಾಜನು ಈ ಬೀಗದ ಕೈಯನ್ನು ಅಲಿ ಆದಿಲ್‌ಶಾಹನಿಗೆ ಕಳುಹಿಸಿಕೊಟ್ಟನು. ಹುಸೈನ್ ನಿಜಾಮನು ರಾಮರಾಜನ ಗರ್ವದ ಮೂಲ ಕಾರಣವು ಅಲಿಆದಿಲಶಾಹನಿರುವನು ಎಂದು ಬಗೆದನು. ಈ ವಿಚಾರವಾಗಿ ಅವನು ಅಲಿ ಅದಿಲಶಾಹನನ್ನು ಭೇಟಿಯಾಗಲಿಲ್ಲ. ಹಾಗೂ ಅವನು ತನ್ನ ತಂಗುದಾಣದತ್ತ ಹೊರಟು ಹೋದನು. ಅದರ ನಂತರ ಎಲ್ಲ ನಾಯಕರು ತಮ್ಮ ತಮ್ಮ ಪ್ರಾಂತ್ಯಗಳಿಗೆ ಹೊರಟು ಹೋದರು.

ಅಹ್ಮದ್‌ನಗರ ಕೋಟೆಯ ಪುನರ್ ನಿರ್ಮಾಣ :

ಹುಸೈನ್ ನಿಜಾಮಷಾಹನು ಅಹ್ಮದ್ ನಗರಕ್ಕೆ ತಲುಪಿ ತನ್ನ ಅಭದ್ರ ಕೋಟೆಯನ್ನು ಯಾವುದು ನಾಶ ಹೊಂದಿತ್ತು ಅದರ ಪುನರ್ ನಿರ್ಮಾಣದಲ್ಲಿ ಕೈ ಹಾಕಿದನು. ಅವನು ಕೋಟೆಯನ್ನು ಸುಣ್ಣ ಹಾಗೂ ಇಟ್ಟಿಗೆಗಳಿಂದ ಭದ್ರಗೊಳಿಸಿದನು. ಹಾಗೂ ಅದರ ವಿಸ್ತೀರ್ಣವನ್ನು ವಿಸ್ತರಿಸಿದನು. ಅವನು ಕೋಟೆಯ ನಿರ್ಮಾಣದತ್ತ ಸಂಪೂರ್ಣ ಗಮನ ಕೊಟ್ಟನು. ಹಾಗೂ ಅಲ್ಪ ಸಮಯದಲ್ಲಿಯೇ ಈ ಕೋಟೆಯು ಸಿದ್ಧಗೊಂಡಿತು. ಕೋಟೆಯ ಹೊರಭಾಗದ ಸುತ್ತಲೂ ಒಂದು ಅಗಲ ಹಾಗೂ ಆಳವಾದ ಕಂದಕವನ್ನು ನಿರ್ಮಾಣ ಮಾಡಿದನು. ಬಾದಶಾಹನನ್ನು ಅನುಸರಿಸಿ ಶ್ರೀ ಸಾಮಾನ್ಯರು ಸಹ ತಮ್ಮ ತಮ್ಮ ಮನೆಗಳನ್ನು ದುರಸ್ತಿಗೊಳಿಸಿಕೊಂಡರು.

ಬೀಬಿ ಖದೀಜಾಳ ವಿವಾಹ :

ಹಿಜ್ರಿ ಶಕೆ ೯೬೯ ರ ಪ್ರಾರಂಭದಲ್ಲಿ ಹುಸೈನ ನಿಜಾಮ್‌ನು ತನ್ನ ಹಿರಿಯ ಪುತ್ರಿ ಬೀಬಿ ಖದೀಜಾ (ಯಾರು ಖೂನ್‌ಜಾ ಹಿಮಾಯೂನಳ ಪುಣ್ಯ ಗರ್ಭದಿಂದ ಜನಿಸಿದ್ದಳು) ಳ ವಿವಾಹವು ಷಾಹ್ ಜಮಾಲುದ್ದೀನಹುಸೈನ ಬಿನ್ ಶಾಹಹುಸೈನ್‌ನೊಂದಿಗೆ ಮಾಡಲಾಯಿತು. ಇದೇ ದಿನಗಳಲ್ಲಿ ಅಮಾದುಲ್ ಮುಲ್ಕನು ಮೃತ್ಯು ವಶವಾದನು. ಹಾಗೂ ಅವನ ಪುತ್ರ ಬಹಳ ಅಪರ ವಯಸ್ಕನಾಗಿದ್ದನು. ತನ್ನ ತಂದೆಯ ಉತ್ತರಾಧಿಕಾರಿಯಾದನು.

ಹುಸೈನ ನಿಜಾಮಶಾಹ ಹಾಗೂ ಕುತುಬಶಾಹರಲ್ಲಿ ಸೌಹಾರ್ದ :

ಹುಸೈನ ನಿಜಾಮಶಾಹನು ಕುತುಬಶಾಹನೊಂದಿಗೆ ಸ್ನೇಹ ಸಂಬಂಧವನ್ನು ಬೆಳೆಸಬಯಸಿದ್ದನು. ಏಕೆಂದರೆ ಅಹ್ಮದ್‌ನಗರದ ಕೋಟೆಯ ದಿಗ್ಬಂಧನದ ಸಮಯದಲ್ಲಿ ಕುತುಬ್‌ಷಾಹ್‌ನು ಇವನೊಂದಿಗೆ ಒಳ್ಳೆಯ ರೀತಿಯಲ್ಲಿ ವರ್ತಿಸಿದ್ದನು. ಈ ವಿಷಯದಲ್ಲಿ ಮುಲ್ಲಾ ಇನಾಯತ್‌ನು ಯಾವನು ಈ ದಿನಗಳಲ್ಲಿ ಹುಸೈನ ನಿಜಾಮಶಾಹನ ನಂಬಿಗಸ್ತರಲ್ಲಿ ಓರ್ವನಾಗಿದ್ದನು ಬಹಳ ಪ್ರಯತ್ನಪಟ್ಟು ಹುಸೈನ ನಿಜಾಮಶಾಹನಿಗೆ

ಸಲಹೆ ನೀಡಿದನು. ಏನೆಂದರೆ ಅವನು ಒಬ್ಬ ದೂತನನ್ನು ಕುತುಬಶಾಹನ ಬಳಿ ಕಳುಹಿಸಬೇಕು.

ಕಲ್ಯಾಣದ ಕೋಟೆಯನ್ನು ಗೆಲ್ಲುವ ಯೋಚನೆ :

ಹುಸೈನ ನಿಜಾಮ ಹಾಗೂ ಕುತುಬಶಾಹನಲ್ಲಿ ಒಳ್ಳೆಯ ಸ್ನೇಹ ಸಂಬಂಧ ಬೆಳೆಯಿತು. ಈ ಈರ್ವರೂ ಆಡಳಿತಗಾರರು ಕಲ್ಯಾಣದ ಕೋಟೆಯ ಬಳಿ ಭೇಟಿಯಾಗಲು ನಿರ್ಧರಿಸಿದರು. ಹಾಗೂ ಈ ಈರ್ವರೂ ಇದನ್ನು ಸಹ ನಿಶ್ಚಯಿಸಿದರು. ಏನೆಂದರೆ ಕಲ್ಯಾಣದ ಕೋಟೆಯ ಮೇಲೆ ವಿಜಯ ಸಾಧಿಸಬೇಕು. ಒಂದು ವೇಳೆ ಅಲಿ ಆದಿಲಶಾಹ ಹಾಗೂ ರಾಮರಾಜನು ಇದಕ್ಕೆ ಅಡ್ಡಿಯುಂಟು ಮಾಡಿದರೆ, ಹುಸೈನ ನಿಜಾಮನು ರಾಮರಾಜನೊಡನೆ ಯುದ್ಧ ಮಾಡುವುದು ಹಾಗೂ ಕುತುಬಶಾಹನು ಅಲಿಆದಿಲಶಾಹನನ್ನು ಎದುರಿಸುವುದು.

ಬೀಬಿ ಜಮಾಲ್‌ಳೊಂದಿಗೆ ಇಬ್ರಾಹಿಂ ಕುತುಬಶಾಹನ ವಿವಾಹ :

ಹಿಜ್ರಿ ಶಕೆ ೯೭೦ ರ ಪ್ರಾರಂಭದಲ್ಲಿ ನಿಜಾಮಶಾಹ ಹಾಗೂ ಕುತುಬಶಾಹರು ಕಲ್ಯಾಣದ ಕೋಟೆಯ ಹತ್ತಿರ ಪರಸ್ಪರ ಭೇಟಿಯಾದರು. ಒಬ್ಬರಿಗೊಬ್ಬರು ಬಹಳ ಅನ್ಯೋನ್ಯತೆಯೊಂದಿಗೆ ಅಪ್ಪಿಕೊಂಡರು. ಹುಸೈನ ನಿಜಾಮನು ತನ್ನ ಪುತ್ರಿಯಾದ ಬೀಬಿ ಜಮಾಲ್‌ಳನ್ನು ಇಬ್ರಾಹಿಂ ಕುತುಬಶಾಹನೊಂದಿಗೆ ವಿವಾಹ ಮಾಡಿಕೊಟ್ಟನು. ಈ ಸಂದರ್ಭದಲ್ಲಿ ಸಮಯೋಚಿತವಾಗಿ ಒಂದು ಸಂಭ್ರಮದ ಮಹಾಸಮಾರಂಭವನ್ನು ಏರ್ಪಡಿಸಿದನು.

ಕಲ್ಯಾಣದ ಕೋಟೆಯ ಮುತ್ತಿಗೆ :

ವಿವಾಹ ಸಮಾರಂಭದ ನಂತರ ಹುಸೈನ ನಿಜಾಮಶಾಹ ಹಾಗೂ ಇಬ್ರಾಹಿಂ ಕುತುಬಶಾಹರು ಕಲ್ಯಾಣದ ಕೋಟೆಯನ್ನು ದಿಗ್ಬಂಧನಕ್ಕೆ ಒಳಪಡಿಸಿದರು. ಕೋಟೆಯೊಳಗಿನವರು ಮೊದಲಿನಂತೆ ನಮ್ರರಾಗಿ ಹುಸೈನನಿಜಾಮಶಾಹನಲ್ಲಿ ಸಂರಕ್ಷಣೆಗಾಗಿ ಹಾಗೂ ಶಾಂತಿಗಾಗಿ ಬೇಡಿಕೊಳ್ಳುವವರಿದ್ದರು. ಆದರೆ ಅಕಸ್ಮಿಕವಾಗಿ ಈ ಸುದ್ದಿಯು ತಲುಪಿತು. ಏನೆಂದರೆ ಅಲಿ ಆದಿಲ ಹಾಗೂ ರಾಮರಾಜರು ಒಂದು ಬಲಾಢ್ಯ ಸೈನ್ಯವನ್ನು ತೆಗೆದುಕೊಂಡು ಈ ಕಡೆಗೆ ಬರುತ್ತಲಿರುವುರು.

ಕೋಟೆಯ ಮುತ್ತಿಗೆಯನ್ನು ಹಿಂತೆಗೆಯುವಿಕೆ :

ಬುರ್ಹಾನ್ ಅಮಾದುಲ ಮುಲ್ಕನಿಗೆ ಯಾವನು ತನ್ನ ತಂದೆಯ ನಿಧನದ ನಂತರ ಸಿಂಹಾಸನಾರೂಢನಾಗಿದ್ದನು ಜಹಾಂಗೀರ್‌ಖಾನನ ಹತ್ಯೆಯ ಕುರಿತು ಬಹಳ ವಿಹ್ವಲ ಹಾಗೂ ವಿಷಾದ ಹೊಂದಿದ್ದನು. ಅವನು ಅಲಿ ಬರೀದ್‌ನೊಂದಿಗೆ ಸೌಹಾರ್ದ ಸಂಬಂಧವನ್ನು ಹೊಂದಿ ಅಲಿ ಆದಿಲಶಾಹನ ಜೊತೆನೀಡಿದನು. ಈ ಪರಿಸ್ಥಿತಿಯನ್ನು

ಮನಗಂಡು ಹುಸೈನನಿಜಾಮನು ಕಲ್ಯಾಣದ ಕೋಟೆಯ ದಿಗ್ಬಂಧನದಿಂದ ಹಿಂದೆ ಸರಿದನು. ಅವನು ತನ್ನ ಕುಟುಂಬ ಹಾಗೂ ಇನ್ನಿತರರಿಗೆ ತನ್ನ ಪುತ್ರನಾದ ಯುವರಾಜ ಮುರ್ತುಜಾ ಹಾಗೂ ಅಳಿಯನಾದ ಜಮಾಲುದ್ದೀನ ಹಸನ ಅಂಜುವಿನ ಜೊತೆಗೆ ಓಸಾ ಕೋಟೆಯೆಡೆಗೆ ಕಳುಹಿಸಿದನು. ಹಾಗೂ ಸ್ವತಃ ಐದು ನೂರು ಆನೆ, ಏಳುನೂರು ತುಪಾಕಿ ತೋಪು ವಾಹನಗಳನ್ನು ತೆಗೆದುಕೊಂಡು ಕುತುಬಶಾಹನೊಂದಿಗೆ ವೈರಿಯನ್ನು ಎದುರಿಸಲು ಹೊರಟನು ಹಾಗೂ ಶತ್ರುವಿನಿಂದ ಆರು ಕೋಸು ದೂರದಲ್ಲಿ ತಂಗಿದನು.

ಯುದ್ಧದ ಸಿದ್ಧತೆ :

ಎರಡನೆಯ ದಿನ ಹುಸೈನ ನಿಜಾಮನು ಬೇಜಾನಗರದ ಹಿಂದುಗಳೊಂದಿಗೆ ಯುದ್ಧ ಮಾಡುವ ಇಚ್ಛೆಯಿಂದ ತನ್ನ ಸೈನಿಕರಲ್ಲಿ ಶಸ್ತ್ರಾಸ್ತ್ರಗಳನ್ನು ಹಂಚಿದನು. ಹಾಗೂ ರಾಮರಾಜನ ಸೈನ್ಯದ ಕಡೆಗೆ ಮುನ್ನುಗ್ಗಿದನು. ಕುತುಬಶಾಹನು ಸಹ ತನ್ನ ಸಾಮರ್ಥ್ಯಕ್ಕೆ ತಕ್ಕಂತೆ ತನ್ನ ಸೈನ್ಯವನ್ನು ಸಿದ್ಧಗೊಳಿಸಿದನು. ಹಾಗೂ ಹುಸೈನ ನಿಜಾಮನ ಸಹವರ್ತಿಗಳಾದ ಅಲಿ ಆದಿಲ್, ಬುರ್ಹಾನ, ಅಮಾದುಲ ಮುಲ್ಕ ಹಾಗೂ ಅಲಿ ಬರೀದ್‌ರೊಡನೆ ಕದನಕ್ಕಿಳಿಯಲು ಹೋದನು.

ಭಯಂಕರ ವರ್ಷಧಾರೆ :

ಈ ದಿನಗಳು ವರ್ಷಋತುವಿನ ದಿನಗಳಾಗಿರಲಿಲ್ಲ. ಆದರೂ ಸಹ ಭಯಂಕರ ರೂಪದ ಮಳೆ ಧಾರಾಕಾರವಾಗಿ ಸುರಿಯತೊಡಗಿತು. ಎಲ್ಲ ಕಣಿವೆ, ಅರಣ್ಯ, ಮರುಭೂಮಿ ನೀರಿನಿಂದ ಆವೃತವಾಯಿತು. ಕಂದಕಗಳು ಹಾಗೂ ಬಾವಿಗಳು ನೀರಿನಿಂದ ತುಂಬಿಕೊಂಡವು. ಸೈನ್ಯದ ಪರಿಸ್ಥಿತಿ ಹದಗೆಟ್ಟಿತು. ಸೈನಿಕರು, ಕುದುರೆಗಳು ಹಾಗೂ ಆನೆಗಳು ಎಲ್ಲವೂ ಅಸ್ತವ್ಯಸ್ತಗೊಂಡವು. ಸೈನಿಕರು ಆತಂಕಿತರಾಗಿ ತಮ್ಮ ಆಯುಧಗಳನ್ನು ತಮ್ಮಿಂದ ಬೇರ್ಪಡಿಸಿ ಎಸೆಯಲು ಆರಂಭಿಸಿದರು. ತೋಪು ವಾಹನಗಳು ಕೆಸರಿನಲ್ಲಿ ಹೂತು ಹೋದವು. ಇದು ನಿಜಕ್ಕೂ ಪ್ರಳಯ ಸದೃಶ್ಯ ದೃಶ್ಯವಾಗಿತ್ತು.

ತನ್ನ ತಂಗುದಾಣಕ್ಕೆ ಹುಸೈನ ನಿಜಾಮಶಾಹನ ಮರಳುವಿಕೆ :

ಮಳೆಯಾದ ದಿನದಂದು ಹುಸೈನ ನಿಜಾಮಶಾಹನು ನಿರ್ಧರಿಸಿದನು. ಏನೆಂದರೆ ಈಗ ವೈರಿಯೊಂದಿಗೆ ಯುದ್ಧ ಮಾಡುವುದು ಉಚಿತವಲ್ಲ. ಅದಕ್ಕಾಗಿ ಅವನು ತನ್ನ ದೊಡ್ಡ ತೋಪುಗಳ ವಾಹನಗಳ ಜೊತೆಗೆ ತನ್ನ ತಂಗುದಾಣಕ್ಕೆ ಮರಳಿ ಬಂದನು. ಶಾಹ ಅಬುಲ ಖಾಸಿಂನ ಅಂಜುವಿನ ಸಹೋದರನಾದ ಮುರ್ತುಜಾ ಖಾನನಿಗೆ (ಯಾವನು ಆದಿಲಶಾಹೀ ಅಮೀರರಲ್ಲಿ ಒಬ್ಬನಾಗಿದ್ದನು) ಈ ಕಾರ್ಯಕ್ಕಾಗಿ ನೇಮಿಸಲಾಯಿತು. ಅವನು ಬರ್ಕಿಯ ಅಮೀರರೊಂದಿಗೆ ರಣಭೂಮಿಯಲ್ಲಿ ಹೋಗಿ ತನ್ನ ಸೈನ್ಯದ ಪ್ರದರ್ಶನವನ್ನು ಹೇಗೆ ಮಾಡಿದನೆಂದರೆ ಅದನ್ನು ನೋಡಿ ಶತ್ರುವಿನ

ಸೈನ್ಯವು ಯುದ್ಧಕ್ಕಾಗಿ ಸಿದ್ಧವಾಯಿತು. ಅಕಸ್ಮಿಕವಾಗಿ ಮುರ್ತುಜಾನೂ ಸಹ ಈ ಸ್ಥಳಕ್ಕೆ ಆಗಮಿಸಿದನು. ಎಲ್ಲ ತೋಪುಗಳ ವಾಹನಗಳು ಕೆಸರಿನಲ್ಲಿ ಹೂತು ಹೋಗಿದ್ದವು.

ಕುತುಬಶಾಹನ ಮೇಲೆ ಶತ್ರುವಿನ ದಾಳಿ :

ಮುರ್ತುಜಾ ಖಾನನು ಈ ತೋಪುಗಳ ವಾಹನಗಳನ್ನು ನೋಡಿ ಆನಂದ ತುಂದಿಲನಾದನು. ಅವನು ತಕ್ಷಣ ಅಲಿ ಆದಿಲಶಾಹನ ಬಳಿ ಕೆಲ ಜನರನ್ನು ಕಳುಹಿಸಿ ಅವನಿಗೆ ಈ ಶತ್ರುಗಳಿಂದ ಲಭ್ಯವಾದ ವಸ್ತುಗಳ ಸುದ್ದಿಯನ್ನು ತಲುಪಿಸಿದನು. ಅಲಿ ಆದಿಲಶಾಹ ಹಾಗೂ ರಾಮರಾಜನು ತಮ್ಮ ಸೈನಿಕರನ್ನು ಈ ಸ್ಥಳಕ್ಕೆ ಕಳುಹಿಸಿ ತೋಪುಗಳ ವಾಹನಗಳನ್ನು ವಶಪಡಿಸಿಕೊಂಡರು ಹಾಗೂ ಕುತುಬಶಾಹನ ತಂಗುದಾಣಕ್ಕೆ ತಲುಪಿ ಅವನ ಮೇಲೆ ದಾಳಿ ನಡೆಸಿದರು.

ಮುಸ್ತಫಾಖಾನ ಅರ್ದಸ್ತಾನಿಯ ಶೌರ್ಯ :

ಕುತುಬಶಾಹನು ತನ್ನ ಅಮೀರರ ಒಂದು ತಂಡವನ್ನು ತನ್ನ ಜೊತೆಗೆ ತೆಗೆದುಕೊಂಡು ಅಲ್ಲಿಂದ ಕಾಲು ಕಿತ್ತನು. ಹಾಗೂ ಹುಸೈನ ನಿಜಾಮಶಾಹನ ತಂಗುದಾಣದ ಹಿಂದೆ ಬಂದು ನಿಂತುಕೊಂಡನು. ಕುತುಬಶಾಹನ ಪ್ರಧಾನ ಮಂತ್ರಿಯಾದ ಮುಸ್ತಫಾಖಾನ ಅರ್ದಸ್ತಾನಿಯು ಬಹಳೇ ಸ್ವಾಭಿಮಾನಿ ಹಾಗೂ ವೀರನಾಗಿದ್ದನು. ಅವನು ವೈರಿಗಳ ಚಲನೆಯನ್ನು ಗಮನಿಸಿದನು. ಹಾಗೂ ಬಹಳೇ ಕೋಪೋದ್ರಿಕ್ತನಾದನು. ತಕ್ಷಣ ತನ್ನ ಸೈನ್ಯವನ್ನು ಸಿದ್ಧಗೊಳಿಸಿದನು. ಹಾಗೂ ಯುದ್ಧ ಕಹಳೆಯನ್ನು ಊದಿದನು. ಪರಸ್ಪರರಲ್ಲಿ ಭಯಂಕರ ರೂಪದ ಕದನ ಪ್ರಾರಂಭವಾಯಿತು. ಮುಸ್ತಫಾಖಾನನು ಬಹಳ ಸಮಯದವರೆಗೆ ಯುದ್ಧನಿರತನಾದನು. ಧೈರ್ಯದೊಂದಿಗೆ ಶೌರ್ಯವನ್ನೂ ತೋರಿದನು. ಈ ಸಮಯದಲ್ಲಿ ಹುಸೈನ್ ನಿಜಾಮಶಾಹನು ಸಹ ಇವರ ಸಹಾಯಕ್ಕಾಗಿ ಆಗಮಿಸಿದನು. ಹಾಗೂ ಕುತುಬಶಾಹನ ಸೈನ್ಯ ವೈರಿಯಿಂದ ಸುರಕ್ಷಿತವಾಗಿ ಉಳಿಯಿತು.

ಅಮೀರರೊಂದಿಗೆ ಹುಸೈನ ನಿಜಾಮಶಾಹನ ಚರ್ಚೆ :

ಹುಸೈನ ನಿಜಾಮಶಾಹನು ತನ್ನ ಎಲ್ಲ ಅಮೀರರನ್ನು, ಪದಾಧಿಕಾರಿಗಳನ್ನು ಸೇರಿಸಿದನು. ಹಾಗೂ ಅವರೊಂದಿಗೆ ಹೀಗೆಂದನು. "ನಾನು ಈ ತೋಪುಗಳ ಕಾರಣದಿಂದ ರಾಮರಾಜನೊಂದಿಗೆ ಯುದ್ಧಮಾಡಬಯಸುತ್ತೇನೆ. ಹಾಗೂ ಕುತುಬಶಾಹನಿಗೆ ಆದಿಲಶಾಹನ ಎದುರಲ್ಲಿ ಯುದ್ಧ ಮಾಡಲು ಸಿದ್ಧಗೊಳಿಸಿದ್ದೆನು. ಈಗ ಪರಿಸ್ಥಿತಿಯು ಬದಲಾಗಿದೆ. ಕುತುಬಶಾಹನು ಒಬ್ಬ ಆದಿಲ್‌ಷಾಹಿ ಅಮೀರನಾದ ಮುರ್ತುಜಾ ಖಾನ್‌ನ ಭಯದಿಂದ ಯುದ್ಧ ಮಾಡದೇ ಓಡಿ ಹೋಗಿದ್ದಾನೆ ಹಾಗೂ ಎಲ್ಲ ತೋಪುಗಳ ವಾಹನಗಳು ವೈರಿಯ ವಶವಾಗಿವೆ. ಏನು ಇಂತಹ ಸ್ಥಿತಿಯಲ್ಲಿ ಶತ್ರುವಿನೊಂದಿಗೆ ಯುದ್ಧ ಮಾಡುವುದು ಉಚಿತವಾಗುವುದೇ?"

ಅಮೀರರ ಸಲಹೆ :

ಅಮೀರರು ಹುಸೈನ ನಿಜಾಮನಿಗೆ ಹೀಗೆ ಉತ್ತರಿಸಿದರು. 'ಸದ್ಯದ ಪರಿಸ್ಥಿತಿಯಲ್ಲಿ ವೈರಿಯೊಂದಿಗೆ ಹೋರಾಡುವುದು ಯಾವುದೇ ರೀತಿಯಲ್ಲಿ ಸಾಧ್ಯವಿಲ್ಲ. ಒಂದು ವೇಳೆ ಈಗ ಯುದ್ಧಕ್ಕಿಳಿದರೆ ಇದರ ಪರಿಣಾಮವು ವ್ಯತಿರಿಕ್ತವಾಗುವುದು. ಅನವಶ್ಯಕವಾಗಿ ಪ್ರಾಣ ಹಾಗೂ ಧನಹಾನಿಯಾಗುವುದು. ನಮ್ಮ ಸಲಹೆ ಇದಾಗಿದೆ. ಸಧ್ಯಕ್ಕೆ ಯುದ್ಧವನ್ನು ಕೈಬಿಡುವುದೇ ಒಳ್ಳೆಯದು ಹಾಗೂ ನಮ್ಮ ನಮ್ಮ ಪ್ರಾಂತ್ಯಕ್ಕೆ ಮರಳುವುದು. ಸರಿಯಾಗಿದೆ. ಮುಂದೆ ಯಾವಾಗಲಾದರೂ ಅವಕಾಶ ಸಿಕ್ಕರೆ ವೈರಿಯನ್ನು ಹೆಡೆಮುರಿ ಕಟ್ಟೋಣ".

ಅಹ್ಮದನಗರಕ್ಕೆ ಮರಳುವಿಕೆ :

ಇದರ ನಂತರ ಮೊದಲಿನ ತೆರನಾಗಿ ಅಲಿಆದಿಲ, ಅಮೀರ ಬರೀದ್ ಹಾಗೂ ರಾಮರಾಜರು ಯುದ್ಧವನ್ನು ಮಾಡುವ ಇಚ್ಛೆಯಿಂದ ನಿಜಾಮಷಾಹಿಯ ಸೈನ್ಯದ ಎದುರು ಬಂದರು. ಆದರೆ ನಿಜಾಮಶಾಹ ಹಾಗೂ ಕುತುಬಶಾಹರು ತಮ್ಮ ತಮ್ಮ ಸೈನ್ಯವನ್ನು ತೆಗೆದುಕೊಂಡು ಅಹ್ಮದ ನಗರದತ್ತ ಹೋದರು.

ಹುಸೈನ ನಿಜಾಮಶಾಹನನ್ನು ಬೆನ್ನಟ್ಟುವಿಕೆ :

ಶತ್ರುವು ಈ ಈರ್ವರನ್ನು ಬೆನ್ನಟ್ಟಿದನು. ಆ ಕಾರಣದಿಂದ ನಿಜಾಮಷಾಹೀ ಸೈನ್ಯದಲ್ಲಿ ಗೊಂದಲವುಂಟಾಯಿತು. ಇದರಿಂದಾಗಿ ಪರಿಸ್ಥಿತಿಯು ಎಷ್ಟು ಹದಗೆಟ್ಟಿತೆಂದರೆ ಹುಸೈನ ನಿಜಾಮಶಾಹನೊಂದಿಗೆ ಒಂದು ಸಾವಿರದಷ್ಟು ಸೈನಿಕರೂ ಸಹ ಉಳಿಯಲಿಲ್ಲ. ಈ ದುಃಸ್ಥಿತಿಯನ್ನು ಮೀರಿ ನಿಜಾಮಶಾಹನು ತನ್ನ ಬಿಳಿಕೊಡೆ ಹಾಗೂ ಧ್ವಜವನ್ನು ಎತ್ತರದಲ್ಲಿ ಹಿಡಿದು ಅತ್ಯಂತ ಪ್ರತಿಷ್ಠೆಯೊಂದಿಗೆ ಪ್ರವಾಸವನ್ನು ಮುಂದುವರೆಸಿದನು. ವೈರಿಯ ಐದು ಆರು ಸಾವಿರ ಸೈನಿಕರು ಅವನನ್ನು ಸುತ್ತುವರೆದಿದ್ದರು. ಆದರೆ ಯಾರಲ್ಲಿಯೂ ಹುಸೈನ ನಿಜಾಮಶಾಹನತ್ತ ಕಣ್ಣೆತ್ತಿ ನೋಡುವ ಧೈರ್ಯವಿರಲಿಲ್ಲ.

ನಮಾಜಿನ ಬದ್ಧತೆ :

ಹುಸೈನ ನಿಜಾಮಶಾಹನು ಕಟ್ಟುನಿಟ್ಟಾಗಿ ನಮಾಜನ್ನು ಪಾಲಿಸುತ್ತಿದ್ದನು. ತಪ್ಪದೇ ಐದು ಹೊತ್ತಿನ ನಮಾಜನ್ನು ವೇಳೆಗೆ ಸರಿಯಾಗಿ ಮಾಡುತ್ತಿದ್ದನು. ಪ್ರವಾಸದ ಸಮಯದಲ್ಲಿ ಮಧ್ಯಾಹ್ನದ (ಜೊಹರ) ನಮಾಜಿನ ಸಮಯವಾಯಿತು. ಬಾದಶಾಹನು ಕುದುರೆಯಿಂದ ಇಳಿದು ನಮಾಜನ್ನು ಮಾಡಲು ನಿಶ್ಚಯಿಸಿದನು. ಸಾಮ್ರಾಜ್ಯದ ಪದಾಧಿಕಾರಿಗಳು ಹುಸೈನ್ ನಿಜಾಮನೊಂದಿಗೆ ಹೀಗೆಂದರು. "ಸದ್ಯದ ಪರಿಸ್ಥಿತಿಯಲ್ಲಿ ಕುದುರೆಯಿಂದ ಕೆಳಗಿಳಿದು ನಮಾಜವನ್ನು ನೆಲದ ಮೇಲೆ ಮಾಡುವುದು ಉಚಿತವಲ್ಲ. ಕುದುರೆಯ ಮೇಲೆ ಕುಳಿತುಕೊಂಡೇ ಸಂಜ್ಞೆಯಿಂದ ನಮಾಜನ್ನು ಮಾಡುವುದು ಒಳಿತು". ಹುಸೈನ ನಿಜಾಮನು ಉತ್ತರಿಸಿದನು. "ದೇವನು ಅದನ್ನು ಮಾಡದಿರಲಿ, ನಾನು ಕುದುರೆಯ ಮೇಲೆ ಕೂತು ನಮಾಜನ್ನು ಮಾಡುವುದು".

ಅದರ ನಂತರ ಹುಸೈನ ನಿಜಾಮನು ಕುದುರೆಯಿಂದ ಇಳಿದನು. ಅವನ ಸೊಂಟ ಪ್ರದೇಶವು ಶಸ್ತ್ರಸಜ್ಜಿತವಾಗಿತ್ತು. ಇದೇ ಸ್ಥಿತಿಯಲ್ಲಿ ಅವನು ಬಹಳ ನಮ್ರನಾಗಿ ನಮಾಜನ್ನು ಮಾಡಿದನು. ಶತ್ರುವಿನ ಸೈನಿಕರು ದೂರದಿಂದ ಹುಸೈನ ನಿಜಾಮನು ನಮಾಜು ಮಾಡುತ್ತಿರುವುದನ್ನು. ವೀಕ್ಷಿಸಿದರು. ನಮಾಜಿನ ನಂತರ ಹುಸೈನ್ ನಿಜಾಮನಿಗೆ ಈ ವಿಚಾರ ಬಂದಿತು. 'ಶಿಯಾ' ಧರ್ಮದಲ್ಲಿ ಸೊಂಟಪಟ್ಟಿ ಕಟ್ಟಿಕೊಂಡು ನಮಾಜನ್ನು ಮಾಡುವಂತಿಲ್ಲ. ಅದಕ್ಕಾಗಿ ಅವನು ಸೊಂಟ ಪಟ್ಟಿ ಬಿಚ್ಚಿದನು ಹಾಗೂ ಮತ್ತೊಮ್ಮೆ ನಮಾಜನ್ನು ಮಾಡಿದನು.

ಬೆನ್ನಟ್ಟುವವರ ಹಿಂದಿರುಗುವಿಕೆ :

ನಮಾಜಿನ ನಂತರ ಬಾದಶಾಹನು ತನ್ನ ಶಸ್ತ್ರ ಸಜ್ಜಿತ ಸೊಂಟಪಟ್ಟಿಯನ್ನು ಕಟ್ಟಿಕೊಂಡನು ಹಾಗೂ ಮತ್ತೊಮ್ಮೆ ಕುದುರೆಯನ್ನೇರಿದನು. ಈ ಸಮಯದಲ್ಲಿ ವೈರಿಯ ಸೈನಿಕರು ಮೌನದಿಂದ ನಿಂತುಕೊಂಡರು. ಅವರು ಪರಸ್ಪರ ಒಬ್ಬರು ಮತ್ತೊಬ್ಬರಿಗೆ ಹೀಗೆ ಹೇಳಿದರು. "ನಾವು ಯಾವಾಗ ಇಂಥ ಸ್ಥಿತಿಯಲ್ಲಿ ಬಾದಶಾಹನು ಸಂಪೂರ್ಣ ನಿಶ್ಯಸ್ತ್ರ ಹಾಗೂ ನಿರ್ಲಕ್ಷಿತನಾಗಿದ್ದನು ಆಗ ಏನನ್ನೂ ಮಾಡಲಾರದಾದೆವು ಅಂದ ಮೇಲೆ ಮುಂದೆ ಏನನ್ನು ನಿರೀಕ್ಷಿಸಬಹುದು" ಅದರ ನಂತರ ವೈರಿ ಸೈನ್ಯವು ಹಿಂಬಾಲಿಸುವ ಬಯಕೆಯನ್ನು ಬಿಟ್ಟುಕೊಟ್ಟಿತು. ಹಾಗೂ ಹುಸೈನ್ ನಿಜಾಮನ ಸೇವೆಯಲ್ಲಿ ಓರ್ವ ದೂತನನ್ನು ಕಳುಹಿಸಿ ಈ ಸಂದೇಶವನ್ನು ತಲುಪಿಸಿದರು. "ಶೂರತ್ವ ಹಾಗೂ ಧೈರ್ಯದಲ್ಲಿ ತಾವು ತುಂಬಾ ಮೇಲ್ಮಟ್ಟದಲ್ಲಿದ್ದೀರಿ, ನಾವು ಹಿಂಬಾಲಿಸುವ ಇಚ್ಛೆಯನ್ನು ಬಿಟ್ಟುಬಿಟ್ಟೆವು, ದೇವನು ಹೀಗೆ ಮಾಡದಿರಲಿ, ನಮ್ಮ ಕೈಯಿಂದ ನಿಮಗೆ ಯಾವುದೇ ಬಗೆಯ ಹಾನಿಯಾಗದಿರಲಿ".

ಜನೀರಕ್ಕೆ ಹೋದದ್ದು :

ಹುಸೈನ ನಿಜಾಮನು ಪ್ರವಾಸ ಮುಂದುವರಿಸುತ್ತಾ ಓಸಾಕ್ಕೆ ಬಂದು ತಲುಪಿದನು. ಇಲ್ಲಿಂದ ಅವನು ಯುವರಾಜನಾದ ಮುರ್ತುಜಾನನ್ನು ತನ್ನೊಂದಿಗೆ ಕರೆದುಕೊಂಡನು. ಹಾಗೂ ಅಹ್ಮದ್‌ನಗರದತ್ತ ಹೊರಟನು. ಅಹ್ಮದನಗರಕ್ಕೆ ತಲುಪಿ ಅವನು ಕುತುಬ್‌ಷಾಹನನ್ನು ಕಳುಹಿಸಿದನು. ಹುಸೈನ ನಿಜಾಮಶಾಹನಿಗೆ ಯಾವಾಗ ಈ ಸುದ್ದಿ ತಲುಪಿತೋ ಏನೆಂದರೆ ರಾಮಥಾಜ ಅಲಿಬರೀದ, ಆದಿಲಶಾಹ ಹಾಗೂ ಬುರ್ಹಾನ, ಅಮಾದುಲಮುಲ್ಕರು ಶೀಘ್ರದಲ್ಲಿಯೇ ಅಹ್ಮದನಗರಕ್ಕೆ ಬರಲಿದ್ದಾರೆ. ಅದಕ್ಕಾಗಿ ಅವನು ತನ್ನ ಸೈನ್ಯಕ್ಕೆ ದವಸಧಾನ್ಯ, ಸೈನಿಕರು ಹಾಗೂ ಮದ್ದುಗುಂಡು, ಶಸ್ತ್ರಾಸ್ತ್ರಗಳಿಂದ ಸಜ್ಜುಗೊಳಿಸಿ ಭದ್ರಗೊಳಿಸಿದನು. ಹಾಗೂ ಸ್ವತಃ ಜನೀರದ ಕಡೆಗೆ ಹೊರಟನು.

ಅಹ್ಮದನಗರದಲ್ಲಿ ಶತ್ರುವಿನ ಬರುವಿಕೆ :

ವೈರಿಗಳು ಒಂದು ಬೃಹತ್ತ ಸೈನ್ಯದೊಡನೆ ಅಹ್ಮದನಗರಕ್ಕೆ ಬಂದರು. ಹಾಗೂ ಬಿಜಾಪುರದ ಹಿಂದೂಗಳು ಮಸೀದಿ ಹಾಗೂ ಮನೆಗಳನ್ನು ನಾಶಮಾಡಲು ಪ್ರಾರಂಭಿಸಿದರು. ಮಸೀದಿಗಳನ್ನು ಬಹಳೇ ಅಪವಿತ್ರ ಮಾಡತೊಡಗಿದರು. ಮುಸ್ಲೀಮರಿಗೆ ಮನಬಿಚ್ಚಿ ನಷ್ಟವನ್ನುಂಟು ಮಾಡತೊಡಗಿದರು. ಸಾರಾಂಶದಲ್ಲಿ ಹೇಳಬೇಕೆಂದರೆ ಅತ್ಯಾಚಾರ, ಅನಾಚಾರ ಹಾಗೂ ಹಿಂಸೆಯ ತಾಂಡವ ನೃತ್ಯವೇ ಅಲ್ಲಿ ನಡೆಯಿತು. ಇದೆಲ್ಲವನ್ನೂ ಗಮನಿಸಿದ ಆದಿಲಶಾಹನು ಬಹಳೇ ದುಃಖತಪ್ತನಾದನು. ಆದರೆ ಅವನು ಹಿಂದೂಗಳಿಗೆ ತಡೆಯುವಂತೆಯೂ ಇರಲಿಲ್ಲ.

ಜನೀರನಿಂದ ಹುಸೈನ ನಿಜಾಮಶಾಹನ ಮರಳುವಿಕೆ :

ಹುಸೈನ ನಿಜಾಮಶಾಹನಿಗೆ ಯಾವಾಗ ಶತ್ರುವಿನ ಇಚ್ಛೆಯ ಕುರಿತು ತಿಳಿಯಿತೋ ಆಗ ಅವನು ಹನ್ನೆರಡು ಜನ ನಿಜಾಮಷಾಹೀ ಅಮೀರರು, ಅವರಲ್ಲಿ ರುಸ್ತುಂಖಾನ ಹಬಶಿ ಹಾಗೂ ಸಾಬಾಜಿಯೂ ಜೊತೆಗಿದ್ದರು. ಅವರನ್ನು ಶತ್ರುವಿನ ಸೈನ್ಯದ ಹಿಂದೆ ಮುಂದೆ ಬರುವಂತೆ ಕಳುಹಿಸಿದರು. ಅದರಿಂದ ಧವಸಧಾನ್ಯ ಹಾಗೂ ಅವಶ್ಯಕ ವಸ್ತುಗಳು ಶತ್ರುವಿನವರೆಗೆ ತಲುಪಕೂಡದು. ಅದರ ನಂತರ ಹುಸೈನ ನಿಜಾಮನು ಸಮಸ್ತ ಶಸ್ತ್ರ, ಅಸ್ತ್ರ, ಅವಶ್ಯಕ ವಸ್ತುಗಳೊಂದಿಗೆ ಜನೀರನಿಂದ ಹೊರಟನು. ಹಾಗೂ ಅವರ್ಪುಲ ನದಿಯ ಕಡೆಗೆ ಯಾವುದು ಗುಡ್ಡಗಾಡು ಪ್ರದೇಶದಲ್ಲಿದೆ ಅತ್ತ ಹೋದನು.

ಶಾಹೀ ಆಜ್ಞೆಯ ಅನುಸಾರವಾಗಿ ರುಸ್ತುಂಖಾನ ಹಬಶಿ, ಕಾನೂ ಗ್ರಾಮದ ಬಳಿ ತಲುಪಿದನು. ಹಾಗೂ ಅವನು ಎಲ್ಲ ದಾರಿಗಳನ್ನು ಮುಚ್ಚಿಹಾಕಿದನು. ಈ ಮೂಲಕವೇ ಶತ್ರುವಿಗೆ ಧವಸಧಾನ್ಯಗಳು ಹಾಗೂ ಅವಶ್ಯಕ ವಸ್ತುಗಳು ಸಾಗಿಬರುತ್ತಿದ್ದವು. ಇದೇ ಸಮಯದಲ್ಲಿ ಒಂದು ದಿನ ಯಾವಾಗ ಅಲಿ ಆದಿಲನು ತನ್ನ ಚಿಕ್ಕಪ್ಪನ ಜೊತೆಯಲ್ಲಿ ಬೇಟೆಯಲ್ಲಿ ನಿರತನಾಗಿದ್ದನು. ರುಸ್ತುಂಖಾನ ಹಬಶಿಯು ಅವನ ಮೇಲೆ ದಾಳಿ ಮಾಡಿದನು. ಹಾಗೆ ನೋಡಿದರೆ ಶತ್ರುವಿನ ಸೈನ್ಯವು ರುಸ್ತುಂಖಾನನ ಸೈನ್ಯಕ್ಕಿಂತಲೂ ಎಷ್ಟೋ ಪಟ್ಟು ಬಲಾಢ್ಯವಾಗಿತ್ತು. ಆದರೆ ರುಸ್ತುಂಖಾನನು ಬಹಳೇ ಶೌರ್ಯ ತೋರಿದನು. ಅಲಿ ಆದಿಲಶಾಹನ ಚಿಕ್ಕಪ್ಪನು ಈ ಯುದ್ಧದಲ್ಲಿ ಹತನಾದನು. ರುಸ್ತುಂಖಾನ್‌ನೂ ಸಹ ಎರಡು ಸಾವಿರ ಸೈನಿಕರೊಂದಿಗೆ ವೈರಿಯ ಖಡ್ಗಕ್ಕೆ ಬಲಿಯಾದನು. ಆರು ನಿಜಾಮಷಾಹೀ ಸೈನಿಕರು, ಶತ್ರುವಿನ ಸೈನಿಕರಿಂದ ಪಾರಾಗಿದ್ದರು ಅವರು ಬಹಳೇ ತೊಂದರೆ ಹಾಗೂ ಸಂಕಷ್ಟದ ಸ್ಥಿತಿಯಲ್ಲಿ ರಣಭೂಮಿಯಿಂದ ಓಡಿಹೋದರು.

ಭೀಕರ ಬಿರುಗಾಳಿ ಮಳೆ ಪ್ರವಾಹ :

ರುಸ್ತುಂಖಾನ ಹಬಶಿಯ ಪರಾಕ್ರಮದ ಪ್ರದರ್ಶನದಿಂದ ಅಲಿ ಆದಿಲ ಹಾಗೂ

ರಾಮರಾಜ ಈರ್ವರೂ ಅಲ್ಲಾಡಿಹೋದರು. ಇದೇ ವೇಳೆಯಲ್ಲಿ ಮಳೆಗಾಲವು ಕಾಲಿಟ್ಟಿತು. ಹಾಗೂ ಮೇಲೆ ಹೇಳಿದಂತೆ ಈರ್ವರೂ ಆಡಳಿತಗಾರರು ಅಹ್ಮದನಗರಕ್ಕೆ ಮರಳಿ ಬಂದರು. ರಾಮರಾಜನು ಸೇನ್ ಕೆರೆಯ ಬದಿಯಲ್ಲಿ ತನ್ನ ಬಿಡಾರವನ್ನು ಹಾಕಿದನು. ಹಾಗೂ ಅಲಿ ಆದಿಲನು ರಾಮರಾಜನಿಂದ ಕೆಲವೇ ದೂರದಲ್ಲಿ ನೆಲೆನಿಂತನು. ಅಹ್ಮದ್‌ನಗರದ ಉತ್ತರ ದಿಕ್ಕಿನಲ್ಲಿ ಜಡಿಮಳೆ ಸುರಿಯಿತು. ಹಾಗೂ ರಾತ್ರಿಯ ವೇಳೆ ಬಿರುಗಾಳಿಯೊಂದಿಗೆ ಭೀಕರ ಪ್ರವಾಹವು ಪಟ್ಟಣದಲ್ಲಿ ಹರಿದು ಬಂದಿತು.

ರಾಮರಾಜನ ಸೈನ್ಯದ ವಿನಾಶ :

ಈ ಪ್ರವಾಹದಿಂದಾಗಿ ರಾಮರಾಜನ ಸೈನ್ಯವು ವಿನಾಶಕ್ಕೆ ತುತ್ತಾಯಿತು. ಇಪ್ಪತ್ತು ಅಮೀರರು, ಮುನ್ನೂರು ಆನೆಗಳು (ಯಾವುವು ಸರಪಳಿಯಲ್ಲಿ ಬಂಧಿಸಲ್ಪಟ್ಟಿದ್ದವು) ಹಾಗೂ ಹನ್ನೆರಡು ಸಾವಿರ ಹಿಂದೂ ಸವಾರರು ಯಾರು ರಾಮರಾಜನ ಸೇವೆಯಲ್ಲಿದ್ದರು ಈ ಪ್ರವಾಹಕ್ಕೆ ಬಲಿಯಾದರು. ಆನೆಗಳ ಹಾಗೂ ಸವಾರರ ಸಂಖ್ಯೆಯನ್ನು ಪರಿಗಣಿಸಿದರೆ ಓದುಗರು ಕುದುರೆ ಹಾಗೂ ಕಾಲಾಳುಗಳ ನಷ್ಟವಾದ ಸಂಖ್ಯೆಯನ್ನು ಉಹಿಸಬಹುದಾಗಿದೆ.

ರಾಮರಾಜನ ಹಿಂದಿರುಗುವಿಕೆ :

ರಾಮರಾಜನು ಈ ಘಟನೆಯನ್ನು ತನ್ನ ಪಾಲಿನ ಅಪಶಕುನವೆಂದು ಬಗೆದನು. ಹಾಗೂ ಅವನು ತನ್ನ ಪ್ರಾಂತ್ಯದತ್ತ ಪಯಣ ಬೆಳೆಸಿದನು. ಅಲಿ ಆದಿಲಶಾಹನು ನಳದುರ್ಗ ಕೋಟೆಯನ್ನು ಪುನಃ ನಿರ್ಮಿಸಿದನು.ಹಾಗೂ ರಾಮರಾಜನಿಗೆ ಹೇಳಿದನು. "ಒಂದು ವೇಳೆ ನೀವು ಒಪ್ಪಿದರೆ ನಾನು ಈ ಕೋಟೆಯ ಹೆಸರನ್ನು ನಿಮ್ಮ ಹೆಸರಿನಿಂದ ಕರೆಯುವೆನು. ಹಾಗೂ ಅದನ್ನು ಇನ್ನು ಮುಂದೆ 'ರಾಮದುರ್ಗ' ವೆಂದು ಕರೆಯಲಾಗುವುದು. ರಾಮರಾಜನು ಅಲಿ ಆದಿಲನ ಸಲಹೆಯನ್ನು ಒಪ್ಪಿದನು. ಅಲಿ ಆದಿಲ ಹಾಗೂ ರಾಮರಾಜ ಈರ್ವರೂ ಜೊತೆಜೊತೆಗೆ ಹೊರಟರು. ಹಾಗೂ ಪ್ರವಾಸವನ್ನು ಮುಂದುವರಿಸುತ್ತಾ ಬರ್ಕಿ ಗ್ರಾಮದಲ್ಲಿ ಯಾವುದು ಕುತುಬಶಾಹಿ ಸರಹದ್ದಿನಲ್ಲಿ ಬರುತ್ತದೆ ಅಲ್ಲಿ ತಲುಪಿದರು.

ರಾಮರಾಜನ ದುರಾಸೆ :

ಬರ್ಕಿ ಗ್ರಾಮಕ್ಕೆ ತಲುಪಿ ರಾಮರಾಜನ ದುರಾಸೆಯ ಗರಿಗೆದರಿತು. ಅವನು ಅಲಿ ಆದಿಲಶಾಹಿ ಹಾಗೂ ಕುತುಬಶಾಹಿಯ ಪ್ರಾಂತ್ಯಗಳ ಮೇಲೆ ಹಿಡಿತ ಸಾಧಿಸಲು ಬಯಸಿದನು. ಅವನು ಮಳೆಯ ನೆಪದಲ್ಲಿ ಬರ್ಕಿಯಲ್ಲಿಯೇ ಉಳಿದನು. ಹಾಗೂ ಕೆಲ ಪರಗಣಗಳನ್ನು ವಶಪಡಿಸಿಕೊಂಡು ಬೇಜಾನಗರಕ್ಕೆ ಮರಳಿದನು.

ಮುರ್ತುಜಾ ಖಾನ ಅಂಜುವಿನ ಕೀಟಲೆ :

ಅಲಿ ಆದಿಲ್‌ಷಾಹ್‌ನು ನಳದುರ್ಗದ ಪ್ರಾಂತ್ಯವನ್ನು ಮುರ್ತುಜಾಖಾನ ಅಂಜುವಿನ ವಶಕ್ಕೆ ಒಪ್ಪಿಸಿದನು. ಹಾಗೂ ಸ್ವತಃ ಹಿಂದಿರುಗಿ ಬಂದನು. ಮುರ್ತುಜಾ ಖಾನ್ ಆಗಾಗ ಸೋಲಾಪುರ ಕೋಟೆಯ ಮೇಲೆ ದಾಳಿ ಮಾಡಿ ವಿನಾಶಕ್ಕೆ ನಾಂದಿ ಹಾಡುತ್ತಿದ್ದನು. ಹುಸೈನ ನಿಜಾಮಶಾಹನು ಮುರ್ತುಜಾ ಖಾನನ ಈ ಕೀಟಲೆಯನ್ನು ಅಲಿಆದಿಲಶಾಹನ ಇಚ್ಛೆಯ ಮೇರೆಗೆ ನಡೆಯುತ್ತಿದೆ ಎಂದು ಭಾವಿಸಿ ಇದನ್ನು ತಹಬಂದಿಗೆ ತರಲು ಸೋಲಾಪುರದ ಕೋಟೆಯನ್ನು ಭದ್ರಗೊಳಿಸಲು ನಿಶ್ಚಯಿಸಿದನು.

ಮುರ್ತುಜಾಖಾನ ಹಾಗೂ ನಿಜಾಮಶಾಹಿಗಳ ನಡುವೆ ಯುದ್ಧ :

ಹುಸೈನ ನಿಜಾಮನು ಸೋಲಾಪುರದ ಕೋಟೆಯಲ್ಲಿ ಧವಸ ಧಾನ್ಯದ ಹನ್ನೆರಡು ಸಾವಿರ ಮೂಟೆಗಳನ್ನು ಶಾಹ ಮೊಹಮ್ಮದ ಅಂಜುಫರಹಾದ ಹಾಗೂ ಉದ್ಧಮಖಾನ ಹಬಶಿ ಜೊತೆಗೆ ಕಳುಹಿಸಿದನು. ಮುರ್ತುಜಾಖಾನನಿಗೆ ಇದರ ಸುದ್ಧಿ ತಲುಪಿತು. ಆಗ ಅವನು ಬರ್ಕಿ ಅಮೀರರನ್ನು ಜೊತೆಗೆ ತೆಗೆದುಕೊಂಡು ವೈರಿಯ ಮೇಲೆ ದಾಳಿ ಮಾಡಿದನು. ಸೋಲಾಪುರ ಹಾಗೂ ಪರಿಂದಾದ ಮಧ್ಯಭಾಗದಲ್ಲಿ ಪರಸ್ಪರರ ಸೈನ್ಯ ಎದುರುಬದುರಾಯಿತು. ಯುದ್ಧದ ಪ್ರಾರಂಭದಲ್ಲಿ ಈ ತೆರನಾಗಿ ಆಯಿತು. ಸಯ್ಯದ್ ತಕೀ ಹಾಗೂ ಶಂಷೀರ ಖಾನ ಎಂಬ ಈರ್ವರು ವ್ಯಕ್ತಿಗಳು ಪರಸ್ಪರ ಜಗಳವಾಡಿದರು. ಸೈಯದ ತಕೀಯನ್ನು ಬಂಧಿಸಿ ಆನೆಯ ಮೇಲೆ ಸವಾರಿ ಮಾಡಿಸಲಾಯಿತು. ಅದರ ನಂತರ ಎರಡೂ ಕಡೆಯ ಸೈನಿಕರು ರಣಭೂಮಿಯಲ್ಲಿ ಪ್ರವೇಶಿಸಿದರು.

ನಿಜಾಮಶಾಹಿಗಳ ಸೋಲು :

ನಿಜಾಮಶಾಹೀ ಅಮೀರರು ವೈರಿಯ ದಾಳಿಯನ್ನು ಎದುರಿಸಲಾರದಾದರು. ಹಾಗೂ ಸೋಲನ್ನುಂಡು ರಣಭೂಮಿಯಿಂದ ಕಾಲು ಕಿತ್ತರು. ಅವರು ತಮ್ಮ ಒಂದು ನೂರಾ ಇಪ್ಪತ್ತು ಆನೆಗಳನ್ನು ರಣಭೂಮಿಯಲ್ಲಿಯೇ ಬಿಟ್ಟು ಹೋದರು. ಅವುಗಳ ಮೇಲೆ ವೈರಿಯು ಹಿಡಿತ ಸಾಧಿಸಿದನು. ಬರ್ಕಿ ಅಮೀರರು ತಮ್ಮ ಹವ್ಯಾಸ ಹಾಗೂ ರೂಢಿಯಂತೆ ಲೂಟಿ ಮಾಡತೊಡಗಿದರು. ಅವರು ಧವಸಧಾನ್ಯಗಳ ಬಹಳಷ್ಟು ಮೂಟೆಗಳಿಗೆ ಬೆಂಕಿ ಹಚ್ಚಿದರು. ಹಾಗೂ ಬಹಳಷ್ಟು ಮೂಟೆಗಳನ್ನು ತಮ್ಮ ವಶಕ್ಕೆ ತೆಗೆದುಕೊಂಡರು. ಮುರ್ತುಜಾಖಾನ ಹಾಗೂ ಶಾಹ್‌ಕುಲಿಖಾನರು ಆನೆಗಳನ್ನು ಬಿಜಾಪುರಕ್ಕೆ ಕಳುಹಿಸಿಕೊಟ್ಟರು.

ಓರ್ವ ಹಬಶಿ ಗುಲಾಮನ ವಿವರ :

ಇದೇ ಕಾಲದಲ್ಲಿ ಒಬ್ಬ ಹಬಶಿ ಗುಲಾಮ ಕೈದಿಯು ಯಾರನ್ನು ಕಟ್ಟಿ ಆನೆಯ

ಮೇಲೆ ಕೂಡ್ರಿಸಲಾಗಿತ್ತು ಅವನು ಅಳುವುದನ್ನು ಚೀರುವುದನ್ನು ಪ್ರಾರಂಭ ಮಾಡಿದನು. ಮುರ್ತುಜಾಖಾನ್‌ನು ಅವನ ಚೀರುವಿಕೆಯ ಧ್ವನಿಯನ್ನು ಕೇಳಿ ಅವನೊಂದಿಗೆ ಹೀಗೆಂದನು. "ನೀನು ಏತಕ್ಕಾಗಿ ಅಳುತ್ತಿರುವಿ? ಒಂದು ವೇಳೆ ನಿನಗೆ ಕೆಲಸದ ಚಿಂತೆ ಇದ್ದರೆ ಇದರ ಕುರಿತು ಚಿಂತಿಸಬೇಡ ನಾನು ನಿನ್ನ ಜೀವನ ವ್ಯಯಿಸಲು ಬೇಕಾಗುವ ಅವಶ್ಯಕ ಕೆಲಸವನ್ನು ನೀಡುವೆನು. ಒಂದು ವೇಳೆ ನೀನು ನಿನ್ನ ಒಡೆಯನ ಬಳಿ ಹೋಗಲು ಬಯಸುತ್ತಿಯಾದರೆ ನಾನು ನಿನಗೆ ಬಿಡುಗಡೆ ಮಾಡುವೆನು", ಹಬಶಿ ಗುಲಾಮನು ಅದಕ್ಕುತ್ತರವಾಗಿ ಹೀಗೆಂದನು. "ನಾನು ನನ್ನ ಒಡೆಯನ ಬಳಿ ಹೋಗಬಯಸುತ್ತೇನೆ. ಮುರ್ತುಜಾ ಖಾನನು ತಕ್ಷಣ ಅವನ ಬಿಡುಗಡೆಯ ಆಜ್ಞೆ ನೀಡಿದನು. ಆ ಹಬಶಿ ಗುಲಾಮನು ತಕ್ಷಣ ಅಲ್ಲಿಂದ ಓಡುತ್ತಾ ಪರಾರಿಯಾದ ಅಮೀರರು ಶಾಹ ಮುಹಮ್ಮದ ಹಾಗೂ ಇತರರ ಬಳಿಗೆ ಬಂದನು ಹಾಗೂ ಅವರೊಂದಿಗೆ ಹೀಗೆಂದನು "ಆದಿಲಶಾಹಿ ಅಮೀರರು ಈ ವೇಳೆಯಲ್ಲಿ ಲೂಟಿ ಮಾಡುವುದರಲ್ಲಿ ನಿರತರಾಗಿದ್ದಾರೆ ಹಾಗೂ ಎಲ್ಲ ಕಡೆಯಿಂದ ನಿರ್ಲಕ್ಷಿತರಾಗಿದ್ದಾರೆ. ಮುರ್ತುಜಾಖಾನ್ ಈ ವೇಳೆಯಲ್ಲಿ ಕೆಲವೇ ಸೈನಿಕರ ಜೊತೆಗೆ ಇಂಥ ಸ್ಥಳದಲ್ಲಿ ಇರುವನು ಅವನನ್ನು ಆನೆಗಳ ಬದಲಾಗಿ ಬಂಧನ ಮಾಡುವುದು ಒಳಿತು".

ಮುರ್ತುಜಾಖಾನನ ಬಂಧನ :

ಮೊಹಮ್ಮದ್ ಬಾಖರನು ಅದೇ ವೇಳೆ ಎರಡು ಮೂರು ಸಾವಿರ ಸೈನಿಕರನ್ನು ತನ್ನೊಂದಿಗೆ ಕರೆದುಕೊಂಡು ಮುರ್ತುಜಾ ಖಾನನ ಬಳಿ ಹೋದನು. ಹಾಗೂ ಅವನನ್ನು ಬಂಧಿಸಿದನು. ಮೊಹಮ್ಮದ ಬಾಖರನು ಮುರ್ತುಜಾ ಖಾನ್‌ನನ್ನು ತನ್ನೊಂದಿಗೆ ತೆಗೆದುಕೊಂಡು ಅಹ್ಮದ ನಗರದತ್ತ ಪ್ರಯಾಣ ಬೆಳೆಸಿದನು.

ಹುಸೈನ ನಿಜಾಮಶಾಹನು ಸೋಲಾಪುರಕ್ಕೆ ಬಂದು ಹೋದದ್ದು :

ಹುಸೈನ ನಿಜಾಮಶಾಹನು ಮತ್ತೊಮ್ಮೆ ಧವಸಧಾನ್ಯದ ಹನ್ನೆರಡು ಸಾವಿರ ಮೂಟೆಗಳನ್ನು ಸಂಗ್ರಹಿಸಿ ಹಾಗೂ ಅವುಗಳನ್ನು ತನ್ನ ಜೊತೆಗೆ ತೆಗೆದುಕೊಂಡು ಬೇಗಬೇಗನೇ ಸೋಲಾಪುರ ಕೋಟೆಗೆ ತಲುಪಿದನು ಹಾಗೂ ಆ ಮೂಟೆಗಳನ್ನು ಕೋಟೆಯ ಒಳಗಿನವರಿಗೆ ಒಪ್ಪಿಸಿ ಮರಳಿ ಅಹ್ಮದನಗರಕ್ಕೆ ಬಂದನು. ಹೀಗೆ ಬಂದು ಹೋಗುವುದರಲ್ಲಿ ಅವನು ಹನ್ನೆರಡು ದಿನಗಳನ್ನು ಕಳೆದನು.

ಖೈದಿಗಳ ಬಿಡುಗಡೆ :

ಈ ಘಟನೆಯ ನಂತರ ಪರಸ್ಪರರಲ್ಲಿ ಸಂಧಾನ ಮಾಡಿಸಲು ಕೆಲಜನರು ಮುಂದಾದರು. ಹಾಗೂ ಇವರ ಮೂಲಕವಾಗಿ ಇದನ್ನು ನಿಶ್ಚಯಿಸಲಾಯಿತು. ಏನೆಂದರೆ ಪರಸ್ಪರರ ಖೈದಿಗಳನ್ನು ಸರಹದ್ದಿನ ಮೇಲೆ ಕರೆದುಕೊಂಡು ಹೋಗಿ ಬಿಡುಗಡೆ ಮಾಡಬೇಕು. ಮುರ್ತುಜಾಖಾನ ಹಾಗೂ ಶಾಹ ತಕೀಯನ್ನು ಸರಹದ್ದಿನ

ಬಳಿ ತರಲಾಯಿತು. ಇವರೀರ್ವರೂ ಒಬ್ಬರನ್ನೊಬ್ಬರು ನೋಡಿದರು. ಒಂದು ಕಡೆಯಿಂದ ಮುರ್ತುಜಾಖಾನನನ್ನು ಬಿಡುಗಡೆ ಮಾಡಲಾಯಿತು. ಹಾಗೂ ಎರಡನೆಯ ಕಡೆಯಿಂದ ಶಾಹ ತಕೀಯನ್ನು ಬಿಡುಗಡೆಗೊಳಿಸಲಾಯಿತು. ಮುರ್ತುಜಾಖಾನನು ಬಿಜಾಪುರಕ್ಕೆ ಹೊರಟುಹೋದನು. ಹಾಗೂ ಶಾಹ ತಕೀ ಅಹ್ಮದನಗರಕ್ಕೆ ಹೋದನು.

ಯುದ್ಧದಿಂದ ಬೇರ್ಪಡುವಿಕೆ :

ಈ ಘಟನೆಯ ನಂತರ ಹುಸೈನ ನಿಜಾಮಶಾಹನು ಯುದ್ಧಗಳಿಂದ ಬೇರ್ಪಟ್ಟನು. ಹಾಗೂ ಪ್ರಾಂತ್ಯಗಳ ಅಭಿವೃದ್ಧಿಯತ್ತ ಗಮನ ಹರಿಸಿದನು. ಅವನು ಪ್ರಾಂತ್ಯ ಹಾಗೂ ಆರ್ಥಿಕ ವ್ಯವಹಾರಗಳನ್ನು ದಕ್ಷ ಹಾಗೂ ಬುದ್ಧಿವಂತ ಅಮೀರರ ವಶಕ್ಕೆ ನೀಡಿದನು.

ಆಡಳಿತಗಾರರಲ್ಲಿ ಪರಸ್ಪರ ಸ್ನೇಹಸಂಬಂಧ :

"ವಖಾಯೇ ಆದಿಲಶಾಹೀ" ಗ್ರಂಥದಲ್ಲಿ ಬರೆಯಲ್ಪಟ್ಟಿದೆ ಏನೆಂದರೆ ಎಲ್ಲ ಪ್ರಾಂತ್ಯಗಳ ಶಾಂತಿಪ್ರಿಯ ಜನರ ಪ್ರಯತ್ನಗಳಿಂದ ಮೂವರು ಆಡಳಿತಗಾರರು ಪರಸ್ಪರ ಭಿನ್ನಾಭಿಪ್ರಾಯಗಳನ್ನು ಕೊನೆಗೊಳಿಸಿದರು. ಹಾಗೂ ಪರಸ್ಪರರು ಉತ್ತಮ ಸ್ನೇಹಿತರಾಗಿ ಪರಿವರ್ತಿತರಾದರು. ಹುಸೈನ್ ನಿಜಾಮಶಾಹನ ಪುತ್ರಿಯಾದ ಚಾಂದ್‌ಬೀಬಿಯ ವಿವಾಹವು ಅಲಿಆದಿಲಶಾಹನೊಂದಿಗೆ ಮಾಡಲಾಯಿತು. ಹಾಗೂ ಸೋಲಾಪುರದ ಕೋಟೆಯನ್ನು ಯಾವುದು ಎಲ್ಲ ಕದನಗಳ ಮೂಲವಾಗಿತ್ತು ಅದನ್ನು ಚಾಂದ್‌ಬೀಬಿಯ ವಿವಾಹದ ಉಡುಗೊರೆ ಆಗಿ ಅಲಿಆದಿಲಶಾಹನಿಗೆ ನೀಡಲಾಯಿತು.

ಇಬ್ರಾಹಿಂ ಆದಿಲಶಾಹನ ಪುತ್ರಿಯಾದ ಹದಿಯಾ ಸುಲ್ತಾನಾಳ ಮದುವೆಯು ಮುರ್ತುಜಾ ನಿಜಾಮಶಾಹನೊಂದಿಗೆ ನಡೆಯಿತು. ಹಾಗೂ ಈ ಎರಡು ವಂಶಗಳಲ್ಲಿ ಯಾರು ಷಿಯಾಪಂಥವನ್ನು ಪಾಲಿಸುತ್ತಿದ್ದರು. ಪರಸ್ಪರರು ಒಗ್ಗಟ್ಟು ಹಾಗೂ ನಿರಪೇಕ್ಷ ಪ್ರೇಮ ಹಾಗೂ ಸ್ನೇಹ ಸಂಬಂಧವನ್ನು ಗಟ್ಟಿಗೊಳಿಸಿದರು.

ರಾಮರಾಜನ ವಿನಾಶದ ಸಿದ್ಧತೆ :

ಅಲಿ ಆದಿಲಶಾಹನ ಜೀವನ ಚರಿತ್ರೆಯಲ್ಲಿ ಉಲ್ಲೇಖಿಸಲಾದಂತೆ ಹಿಜ್ರಿ ಶಕೆ ೯೭೨ ರಲ್ಲಿ ಅಮಾದುಲ್‌ಮುಲ್ಕನನ್ನು ಹೊರತುಪಡಿಸಿ ದಖ್ಖನ್ನಿನ ಎಲ್ಲ ಆಡಳಿತಗಾರರು ರಾಮರಾಜನ ವಿನಾಶದ ಕುರಿತು ನಿಶ್ಚಯಿಸಿದರು. ಯಾರು ತನ್ನನ್ನು ತಾನು ಬಲಿಷ್ಠನಾದ ಆಡಳಿತಗಾರನೆಂದು ಬಗೆಯುತ್ತಿದ್ದನು ಹಾಗೂ ಯಾರನ್ನೂ ತನ್ನ ಸಮಾನರೆಂದು ಪರಿಗಣಿಸುತ್ತಿರಲಿಲ್ಲ. ನಿಜಾಮಶಾಹ, ಕುತುಬಶಾಹ, ಬರೀದಶಾಹ, ಹಾಗೂ ಆದಿಲಶಾಹ ಈ ನಾಲ್ವರು ಬಾದಶಾಹರು ಯುದ್ಧದ ಸಿದ್ಧತೆಯನ್ನು ಮಾಡಿಕೊಳ್ಳತೊಡಗಿದರು. ಹಾಗೂ ಸೈನ್ಯವನ್ನು ಸಜ್ಜುಗೊಳಿಸಿ ಹೊರಟರು. ಅವರು ಕೃಷ್ಣಾ ನದಿಯನ್ನು ದಾಟಿ ಹೆಲ್ಗರಿ ನದಿಯ ತಟದಲ್ಲಿ (ಯಾವುದು ಕೃಷ್ಣಾ ನದಿಯಿಂದ ಆರು ಕೋಸ್ ದೂರದಲ್ಲಿದೆ) ತಂಗಿದರು.

ರಾಮರಾಜನ ಹಿರಿಮೆ, ಗರಿಮೆ :

ರಾಮರಾಜನು ಒಂದು ಬಲಾಢ್ಯ ಸೈನ್ಯವನ್ನು ಸಿದ್ಧಗೊಳಿಸಿದನು. ಅದು ಎಪ್ಪತ್ತು ಸಾವಿರ ಸವಾರರು ಹಾಗೂ ಒಂಬತ್ತು ಲಕ್ಷ ಕಾಲಾಳುಗಳನ್ನು ಹೊಂದಿತ್ತು. (ಅದರಲ್ಲಿ ಬಹಳಷ್ಟು ಸೈನಿಕರು, ತೋಪು ಹಾರಿಸುವವರು ಹಾಗೂ ಬಿಲ್ಗಾರರು ಇದ್ದರು) ಹಾಗೂ ಮುಸ್ಲಿಂ ದೊರೆಗಳನ್ನು ಎದುರಿಸಲು ಮುಂದಾದನು. ಮುಸ್ಲಿಮ್ ಬಾದಶಾಹರು ರಾಮರಾಜನ ಹಿರಿಮೆ ಗರಿಮೆಯನ್ನು ನೋಡಿದರೋ ಆಗ ಅವರಲ್ಲಿ ಭಯವುಂಟಾಯಿತು. ಹಾಗೂ ಅವರು ಹೀಗೆ ನಿರ್ಧಾರ ಮಾಡಿದರು. ಒಂದು ವೇಳೆ ರಾಮರಾಜನು ಈ ಆದಿಲಶಾಹೀ, ಕುತುಬಶಾಹೀ ಪ್ರಾಂತ್ಯಗಳನ್ನು ಹಿಂದಿರುಗಿಸಿದರೆ ಯಾವುದರ ಮೇಲೆ ಅವನ ಹಿಡಿತವಿದೆ ಹಾಗೂ ಇನ್ನು ಮುಂದೆ ಯಾವುದೇ ತೆರನಾದ ಗೊಂದಲವನ್ನುಂಟು ಮಾಡದಂತೆ ಅವನೊಂದಿಗೆ ಸಂಧಾನ ಮಾಡಲಾಗುವುದು.

ರಾಮರಾಜನ ಸೈನ್ಯದ ಸಿದ್ಧತೆ :

ರಾಮರಾಜನು ಮುಸ್ಲಿಮರಿಗೆ ನಿರ್ಬಲ, ನಿಶ್ಯಕ್ತರೆಂದು ಬಗೆಯುತ್ತಿದ್ದನು. ಅವನು ದಖ್ಖನ್ನಿನ ಬಾದಷಾಹ್‌ರ ಇಚ್ಛೆಯನ್ನು ಏನೊಂದನ್ನು ಗಂಭೀರವಾಗಿ ಪರಿಗಣಿಸಲಿಲ್ಲ. ಹಾಗೂ ಅವನು ತನ್ನ ಜನರನ್ನು ಅವರನ್ನು ಎದುರಿಸಲು ಕಳುಹಿಸಿದನು. ತನಕನಾದರಿಯು ಇಪ್ಪತ್ತೈದು ಸಾವಿರ ಸವಾರರನ್ನು ಹಾಗೂ ಎರಡು ಲಕ್ಷ ಕಾಲಾಳುಗಳನ್ನು ಹಾಗೂ ಐದು ನೂರು ಆನೆಗಳ ಜೊತೆಗೆ ಅಲಿ ಆದಿಲ್‌ಷಾಹ್‌ನ ಎದುರಿಗೆ ಬಂದನು. ತಿಮ್ಮರಾಜನು ಇಪ್ಪತ್ತು ಸಾವಿರ ಸವಾರರು, ಎರಡು ಲಕ್ಷ ಕಾಲಾಳು ಹಾಗೂ ಐದುನೂರು ಆನೆಗಳ ಸೈನ್ಯವನ್ನು ತೆಗೆದುಕೊಂಡು ಕುತುಬ್‌ಷಾಹ್ ಹಾಗೂ ಅಲೀ ಬರೀದ್‌ನ ಎದುರು ಯುದ್ಧಕ್ಕೆ ಸಿದ್ಧನಾದನು. ಸ್ವತಃ ರಾಮರಾಜನು ಮೂವತ್ತೈದು ಸಾವಿರ ಸವಾರರು ಹಾಗೂ ಸುತ್ತಮುತ್ತಲಿನ ಎರಡು ಸಾವಿರ ರಾಜರು, ಐದು ಲಕ್ಷ ಕಾಲಾಳು ಹಾಗೂ ಸುಮಾರು ಒಂದು ಸಾವಿರ ಯುದ್ಧಕ್ಕಾಗಿ ಸಿದ್ದಗೊಂಡ ಆನೆಗಳ ಜೊತೆಗೆ ಹುಸೈನ್ ನಿಜಾಮ್‌ನೊಂದಿಗೆ ಯುದ್ಧ ಮಾಡಲು ಸಿದ್ಧನಾದನು.

ಸೈನ್ಯದ ವ್ಯೂಹ ರಚನೆ :

ರಾಮರಾಜನು ತನ್ನ ಸೈನ್ಯಕ್ಕೆ ಆದೇಶ ನೀಡಿದನು. ಆದಿಲಶಾಹ ಹಾಗೂ ಕುತುಬ್‌ಷಾಹ್‌ನನ್ನು ಬಂಧಿಸಬೇಕು, ಹಾಗೂ ಇವರಿಬ್ಬರನ್ನು ಜೀವನ ಪರ್ಯಂತ ಕಾಲುಗಳಿಗೆ ಸರಪಳಿ ಬಿಗಿದು ಕಾರಾಗೃಹದಲ್ಲಿ ಬಂಧಿಸಿಡಬೇಕು. ಹಾಗೂ ಅದರ ನಂತರ ತನ್ನ ಎಡ ಹಾಗೂ ಬಲ ಭಾಗದ ಸೈನ್ಯದ ಸೈನಿಕರಿಗೆ ಹುಸೈನ ಶಾಹನ ರುಂಡವನ್ನು ಮುಂಡದಿಂದ ಭೇದಿಸಿ ತರಬೇಕೆಂದು ಆಜ್ಞೆ ಮಾಡಿದನು. ಅವನು ಬಲಭಾಗದ ಸೈನ್ಯದ ಮುಖಂಡನನ್ನಾಗಿ ತಿಮ್ಮರಾಜನನ್ನು ಹಾಗೂ ಎಡಭಾಗದ

ಸೈನ್ಯದ ಸೇನಾಪತಿಗಳಾಗಿ ತನ್ನ ಅತಿರಥ ಮಹಾರಥರಾದ ಯೋಧರನ್ನು ನೇಮಿಸಿದನು. ಹಾಗೂ ಸೈನ್ಯದ ಹೃದಯ ಭಾಗದಲ್ಲಿ ತಾನು ನಿಂತುಕೊಂಡನು.

ಮುಸ್ಲಿಮರ ಸೈನ್ಯ :

ಮುಸ್ಲಿಮ ಆಡಳಿತಗಾರರೂ ಸಹ ತಮ್ಮ ಸೈನ್ಯದಲ್ಲಿಯೂ ವ್ಯೂಹ ರಚನೆಯನ್ನು ಮಾಡಿದರು. ಆದಿಲಶಾಹನು ಬಲ ಭಾಗದ ಸೈನ್ಯದ ಸೇನಾಪತಿಯಾಗಿ ಅಲಿಬರೀದ್‌ನನ್ನು ಹಾಗೂ ಕುತುಬಶಾಹರು ಎಡಭಾಗದ ಸೈನ್ಯದ ಸೇನಾಪತಿಗಳಾಗಿ ತಾವೇ ಸ್ವತಃ ಅಧಿಕಾರ ವಹಿಸಿಕೊಂಡನು. ಹುಸೈನ ನಿಜಾಮಶಾಹನು ಸೈನ್ಯದ ಹೃದಯ ಭಾಗದಲ್ಲಿ ನಿಂತುಕೊಂಡನು. ಹಾಗೂ ಈ ಆಡಳಿತಗಾರರು ಬಾರಾ ಇಮಾಮ್‌ರ ಧ್ವಜವನ್ನು ನೆಟ್ಟು, ಯುದ್ಧ ಪ್ರಾರಂಭದ ನಗಾರಿಯನ್ನು ಬಾರಿಸಲಾಯಿತು. ಹುಸೈನ್ ನಿಜಾಮನು ಆರುನೂರು ತೋಪುಗಳ ವಾಹನಗಳನ್ನು, ಆರುನೂರು (ಸಣ್ಣ ತೋಪುಗಳನ್ನು ಹಾಗೂ ಮಧ್ಯಮ ತೋಪುಗಳನ್ನು) ತನ್ನೆದುರು ಮೂರು ಸಾಲುಗಳಲ್ಲಿ ನಿಲ್ಲಿಸಿದನು. ಈ ಸಾಲುಗಳ ವ್ಯೂಹವು ಹೀಗೆ ರಚಿಸಲಾಯಿತು. ಬೃಹತ್ ತೋಪುಗಳ ಎರಡುನೂರು ವಾಹನಗಳನ್ನು ಎಲ್ಲಕ್ಕಿಂತ ಮುಂದಿನ ಸಾಲುಗಳಲ್ಲಿ ನಿಲ್ಲಿಸಲಾಯಿತು. ಈ ಸಾಲಿನ ಹಿಂದೆ ಎರಡು ನೂರು ವಾಹನಗಳಲ್ಲಿ ಜರ್ಬೆಜನ (ಮಧ್ಯಮಸ್ತರದ ತೋಪುಗಳನ್ನು) ನಿಲ್ಲಿಸಲಾಯಿತು. ಹಾಗೂ ಮೂರನೇ ಸಾಲಿನಲ್ಲಿ ಜಂಬೂರಗಳನ್ನು (ಒಂದು ವಿಶೇಷವಾದ ಸಣ್ಣ ಪ್ರಮಾಣದ ತೋಪು ಆಗಿರುತ್ತದೆ, ಅದು ತುಪಾಕಿಗಿಂತ ದೊಡ್ಡದು ಹಾಗೂ ಜರ್ಬೇಜನ್‌ಗಿಂತ ಸಣ್ಣದು ಇರುತ್ತದೆ) ನಿಲ್ಲಿಸಲಾಯಿತು.

ಯುದ್ಧದ ಪ್ರಾರಂಭ :

ಈ ಎಲ್ಲ ತೋಪುಗಳನ್ನು ಮದ್ದು ಹಾಗೂ ಗುಂಡುಗಳಿಂದ ತುಂಬಲಾಯಿತು. ಹಾಗೂ ಇವುಗಳ ಮೇಲ್ವಿಚಾರಣೆಯ ಕರ್ತವ್ಯವು ರೂಮಿಖಾನನ ಹೆಗಲಿಗೇರಿತು. ಯಾವನು ಮದ್ದು ಹಾರಿಸುವ ಪರಿಣತಿಯಲ್ಲಿ ತನಗೆ ತಾನೇ ಸಾಟಿಯಾಗಿದ್ದನು. ಇದೇ ಸಮಯದಲ್ಲಿ ಹುಸೈನ್‌ನಿಜಾಮ್‌ನ ಬಾಣಪ್ರಯೋಗಗಾರರು ರಾಮರಾಜನ ಸೈನ್ಯಕ್ಕೆ ತೋಪುಗಳ ಎದುರಿಗೆ ನುಗ್ಗಿಸಿದರು. ರೂಮಿಖಾನ್‌ನು ತಕ್ಷಣ ದೊಡ್ಡ ತೋಪುಗಳನ್ನು ಚಲಾಯಿಸಲು ಪ್ರಾರಂಭಿಸಿದನು. ಇದರ ನಂತರ ಜರ್ಬಜೆನಗಳಿಂದ ಗುಂಡಿನ ಸುರಿಮಳೆಗೈಯ್ಯಲಾಯಿತು. ಹಾಗೂ ಮತ್ತೆ ಜಂಬೂಕಗಳನ್ನು ಉಪಯೋಗಿಸಲಾಯಿತು. ಈ ಕಾರ್ಯದ ಫಲಿತಾಂಶವು ಇದಾಯಿತು. ರಾಮರಾಜನ ಸೈನ್ಯದ ಬಹಳಷ್ಟು ಭಾಗವು ವಿನಾಶವಾಯಿತು.

ರಾಮರಾಜ ಹಾಗೂ ಸೈನ್ಯದ ಉದಾರಿತನ :

ರಾಮರಾಜನು ಯಾವಾಗ ಮುಸಲ್ಮಾನರ ಈ ಚಾತುರ್ಯವನ್ನು ಕಂಡನೋ ಆಗ ಅವನು ಬಹಳೇ ಎಚ್ಚರವಹಿಸಿದನು. ಮತ್ತು ತಕ್ಷಣ ತನ್ನ ಸಿಂಹಾಸನದಿಂದ

ಕೆಳಗಿಳಿದನು. ಕೂಡಲೇ ಅವನು ರತ್ನ ಖಚಿತ ಬಂಗಾರದ ದಾರಗಳಿಂದ ಶೃಂಗರಿಸಲ್ಪಟ್ಟ ಷಾಮಿಯಾನಾ ಹಾಕಲು ಆಜ್ಞೆ ನೀಡಿದನು. ಆಜ್ಞೆಯ ಪಾಲನೆ ಮಾಡಲಾಯಿತು. ಹಾಗೂ ಈ ಷಾಮಿಯಾನಾದಲ್ಲಿ ಒಂದು ರತ್ನಖಚಿತ ಸಿಂಹಾಸನದ ಮೇಲೆ ಆಸೀನನಾದನು. ರಾಜನು ತನ್ನ ಎರಡೂ ಕಡೆ ಹವನ ಹಾಗೂ ಪ್ರತಾಬ (ನಾಣ್ಯ) ಗಳ ರಾಶಿ ಹಾಕಿದನು. ಹಾಗೂ ನಿಃಸ್ಸಂಕೋಚವಾಗಿ ತನ್ನ ಸೈನಿಕರಿಗೆ ಬಂಗಾರದ ನಾಣ್ಯಗಳನ್ನು ಹಂಚತೊಡಗಿದನು. ರಾಮರಾಜನು ಈ ಸೈನಿಕರಿಗೆ ಮುಸ್ಲಿಮ್‌ರ ವಿರುದ್ಧ ತುಂಬಾ ಶೌರ್ಯದಿಂದ ಹೋರಾಡಲು ಅಣಿಗೊಳಿಸಿದನು. ಹಾಗೂ ಈ ವಾಗ್ದಾನ ಮಾಡಿದನು. ಯಾವ ಸೈನಿಕನು ಅಪ್ರತಿಮಪರಾಕ್ರಮ ತೋರುವನೋ ಆತನಿಗೆ ಬಹುಮಾನದಿಂದ ಪುರಸ್ಕರಿಸಲಾಗುವುದು.

ರಾಮರಾಜನ ದಾಳಿ :

ರಾಮರಾಜನ ಬಲ ಹಾಗೂ ಎಡ ಭಾಗದ ಸೈನ್ಯವು ಒಮ್ಮೆಲೆ ಮುಸ್ಲಿಮರ ಮೇಲೆ ಭೀಕರ ರೂಪದ ದಾಳಿ ಮಾಡಿದತು. ಈ ದಾಳಿಯು ಎಷ್ಟು ಭಯಂಕರ ಸ್ವರೂಪದ್ದಿತ್ತೆಂದರೆ ಆದಿಲಶಾಹಿ ಹಾಗೂ ಕುತುಬಶಾಹಿಗಳ ಬಲ ಹಾಗೂ ಎಡಭಾಗದ ಸೈನ್ಯದಲ್ಲಿ ಗಲಿಬಿಲಿ ಹಾಗೂ ಗೊಂದಲವುಂಟಾಯಿತು. ಪ್ರತಿಯೊಬ್ಬ ವ್ಯಕ್ತಿಯೂ ಹೀಗೆ ಯೋಚಿಸತೊಡಗಿದನು. ಹಿಂದೂಗಳಿಗೆ ವಿಜಯ ಲಭಿಸುವುದು.

ಮತ್ತೊಮ್ಮೆ ಗುಂಡಿನ ದಾಳಿ :

ಈ ಪರಿಸ್ಥಿತಿಯನ್ನು ಗಮನಿಸಿ ಹುಸೈನ ನಿಜಾಮಶಾಹನು ತನ್ನ ಸಂಗಡಿಗರಿಗೆ ಈ ಸಂದೇಶವನ್ನು ನೀಡಿದನು. "ದೇವನ ದಯೆ ಹಾಗೂ ಕೃಪೆಯಿಂದ ನಾವು ಈಗಲೇ ಯುದ್ಧದಲ್ಲಿ ವಿಜಯಿಗಳಾಗುವೆವು. ಅದಕ್ಕಾಗಿ ತಾವು ಧೀರತನದಿಂದ ಮುನ್ನುಗ್ಗಬೇಕು. ಹಾಗೂ ವೈರಿಯನ್ನು ಮಣ್ಣು ಮುಕ್ಕಿಸಲು ಎಲ್ಲ ತೆರನಾಗಿ ಪ್ರಯತ್ನಿಸಬೇಕು" ರೂಮಿಖಾನನು ಮತ್ತೊಮ್ಮೆ ತೋಪುಗಳಲ್ಲಿ ಮದ್ದನ್ನು ತುಂಬಿದನು. ಹಾಗೂ ವೈರಿಯ ಮೇಲೆ ತೋಪುಗಳಿಂದ ಮದ್ದಿನ ದಾಳಿ ಪ್ರಾರಂಭಿಸಿದನು. ಇದರ ಪರಿಣಾಮವಾಗಿ ವೈರಿಯ ಐದು, ಆರು ಸಾವಿರ ಸೈನಿಕರು ಹಾಗೂ ಕೆಲ ಕುದುರೆ, ಆನೆ ಇತ್ಯಾದಿಗಳು ಹತವಾದವು.

ಆನೆಗಳ ಕದನ :

ಇದೇ ಸಮಯದಲ್ಲಿ ಕಿಶ್ವರಖಾನನು ಏಳು ಎಂಟು ಸಾವಿರ ಆದಿಲಶಾಹಿ ಸವಾರರನ್ನು ಜೊತೆಗೆ ತೆಗೆದುಕೊಂಡು ನಿಜಾಮಶಾಹೀ ತೋಪುಗಳ ವಾಹನಗಳ ಹಿಂದಿನಿಂದ ಹೊರಟು ರೂಮಿಖಾನ್‌ನ ಹತ್ತಿರ ತಲುಪಿದನು. ಇದೇ ವೇಳೆ ಒಂದು ಭಯಂಕರವಾದ ಕದನವಾಯಿತು. ಪರಸ್ಪರರು ಒಬ್ಬರನ್ನು ಇನ್ನೊಬ್ಬರ ವಿನಾಶವನ್ನು ಮಾಡಲು ಪ್ರಾಣಪಣಕ್ಕಿಟ್ಟು ಹೋರಾಡತೊಡಗಿದರು. ಆಕಸ್ಮಿಕವಾಗಿ ಹುಸೈನ

ನಿಜಾಮಶಾಹನ ಒಂದು ಆನೆ ಅದರ ಹೆಸರು 'ಗುಲಾಮ ಅಲಿ' ಇತ್ತು ಹಾಗೂ ಅದು ರೂಮಿಖಾನನ ಜೊತೆಗಿತ್ತು. ಅದು ರಾಮರಾಜನ ಆನೆಯ ಮೇಲೆ ದಾಳಿಗಿಳಿಯಿತು. ಹಾಗೂ ಅದರ ಹಿಂದೆ ಓಡಿತು. ರಾಮರಾಜನ ಷಾಮಿಯಾನಾ ಹತ್ತಿರ ತಲುಪಿ ವೈರಿಯನ್ನು ಹುಡುಕತೊಡಗಿತು. ಆನೆಗಳ ಈ ಕದನದಿಂದ ರಾಮರಾಜನು ಬಹಳೇ ಆತಂಕಿತನಾದನು ಹಾಗೂ ತನ್ನ ಕುರ್ಚಿಯಿಂದ ಎದ್ದು ಸಿಂಹಾಸನದ ಮೇಲೆ ಕುಳಿತುಕೊಂಡನು.

ರಾಮರಾಜನ ಬಂಧನ :

ಎರಡೂ ಆನೆಗಳು ಕದನವಾಡುತ್ತ ರಾಜನ ಸಿಂಹಾಸನದ ಬಳಿ ತಲುಪಿದವು. ಆ ಸೇವಕರು ಯಾರು ಸಿಂಹಾಸನವನ್ನು ಎತ್ತಿ ಹಿಡಿದಿದ್ದರೋ ಅವರು ಅಂಜಿದರು. ಅವರು ಆ ಸಿಂಹಾಸನವನ್ನು ಅಲ್ಲಿಯೇ ಎಸೆದರು. ಹಾಗೂ ಸ್ವತಃ ಅಲ್ಲಿಂದ ಕಾಲುಕಿತ್ತರು. ನಿಜಾಮಶಾಹೀ ಆನೆಗಳ ಮಾವುತನು ಸಿಂಹಾಸನವನ್ನು ವಶಡಿಸಿಕೊಳ್ಳುವ ಇಚ್ಛೆಯಿಂದ ತನ್ನ ಆನೆಗೆ ಸಂಜ್ಞೆನೀಡಿದನು. ಅದು ಸಿಂಹಾಸನವನ್ನು ಸೊಂಡಿಲಿನಲ್ಲಿ ಸುತ್ತಿಕೊಂಡಿತು. ಇದೇ ಸಮಯದಲ್ಲಿ ರಾಮರಾಜನ ಒಬ್ಬ ಸೇವಕನು ಮಾವುತನನ್ನು ಹೀಗೆ ಮಾಡದಿರಲು ವಿನಂತಿಸಿದನು. ಮಾವುತನು ಇದನ್ನು ತಿಳಿದನು. ಏನೆಂದರೆ ಸಿಂಹಾಸನದ ಮೇಲೆ ರಾಜನು ಆಸೀನನಿರುವನು. ಅದಕ್ಕಾಗಿ ಅವನು ರಾಮರಾಜನನ್ನು ಆನೆಯ ಸೊಂಡಿಲಿನ ಮುಖಾಂತರ ಮೇಲೆ ಎಳೆದುಕೊಂಡನು ಹಾಗೂ ಅವನನ್ನು ಬಂಧಿಸಿ ರೂಮಿಖಾನನ ಬಳಿಗೆ ಕರೆದುಕೊಂಡು ಬಂದನು.

ರಾಮರಾಜನ ಹತ್ಯೆ :

ರೂಮಿಖಾನನು ತಕ್ಷಣ ರಾಮರಾಜನನ್ನು ಹುಸೈನನಿಜಾಮನ ಎದುರು ತಂದು ನಿಲ್ಲಿಸಿದನು. ಹುಸೈನ ನಿಜಾಮನು ಕೂಡಲೇ ರಾಜನ ರುಂಡವನ್ನು ಮುಂಡದಿಂದ ಬೇರೆ ಮಾಡಿದನು. ಮತ್ತೆ ಅವನ ರುಂಡವನ್ನು ಭರ್ಚಿ ಮೊನೆಯ ಮೇಲೆ ಇಟ್ಟು ವೈರಿಗಳಿಗೆ ತೋರಿಸಿದನು. ಬೇಜಾನಗರದ ಸೈನಿಕರು ಯಾವಾಗ ತಮ್ಮ ದೊರೆಯ ಈ ದುಃಸ್ಥಿತಿಯನ್ನು ಕಂಡರೋ ಆಗ ಅವರು ರಣಭೂಮಿಯಿಂದ ಓಡಿ ಹೋದರು. ರಾಮರಾಜನ ಸಹೋದರರು ಆದಿಲಶಾಹ ಹಾಗೂ ಕುತುಬಶಾಹರನ್ನು ಎದುರಿಸುವುದನ್ನು ಬಿಟ್ಟು ರಾಜನ ಸಹಾಯಕ್ಕಾಗಿ ಮುಂದೆ ಬಂದಿದ್ದರು. ಅವರಿಗೆ ಯಾವಾಗ ರಾಜನ ಹತ್ಯೆಯ ಸುದ್ದಿ ತಲುಪಿತೋ ಅವರೂ ದಿಕ್ಕೆಟ್ಟು ಓಡಿ ಹೋದರು.

ಮುಸಲ್ಮಾನರಿಗೆ ಶ್ರೇಷ್ಠ ವಿಜಯ :

ಮುಸ್ಲಿಂ ದೊರೆಗಳು ಗರ್ವಿಷ್ಠ ಹಿಂದೂಗಳನ್ನು ಅನಾಕಂಡಿಯವರೆಗೆ ಯಾವುದು ಬೇಜಾನಗರದಿಂದ ಹತ್ತು ಕೋಸ ದೂರದಲ್ಲಿದೆ ಅಲ್ಲಿಯವರೆಗೆ ಹಿಂಬಾಲಿಸಿದರು. ಇತಿಹಾಸಕಾರರು ಉಲ್ಲೇಖಿಸಿರುವಂತೆ ಈ ಯುದ್ಧದಲ್ಲಿ ಒಂದು ಲಕ್ಷದವರೆಗೆ

ಹಿಂದೂಗಳು ಹತರಾದರು. ಹಾಗೂ ಬಹಳಷ್ಟು ಸಿರಿಸಂಪತ್ತು ಹಾಗೂ ವಸ್ತುಗಳು ಮುಸ್ಲಿಂರ ಕೈ ಸೇರಿದುವು. ಮುಸ್ಲಿಮ ದೊರೆಗಳು ವೈರಿಯ ಧನಕನಕ ಹಾಗೂ ಕುದುರೆ ಆನೆಗಳಲ್ಲಿ ಕೇವಲ ಆನೆಗಳನ್ನು ತೆಗೆದುಕೊಂಡು ಉಳಿದ ಎಲ್ಲವನ್ನು ಸೈನಿಕರಲ್ಲಿ ಹಂಚಿದರು.

ಬೇಜಾನಗರದ ವಿನಾಶ :

ಹುಸೈನ ನಿಜಾಮಶಾಹ ರಾಮರಾಜನ ತಲೆಯಲ್ಲಿ ಹೊಟ್ಟನ್ನು ತುಂಬಿ ಅದನ್ನು ತುಖಾಲಖಾನ ಬರಾರಿಯ ಹತ್ತಿರ ಕಳುಹಿಸಿದನು. ತುಖಾಲಖಾನ ರಾಮರಾಜನ ಹಿತೈಷಿಯಾಗಿದ್ದನು. ಹಾಗೂ ರಾಮರಾಜನ ಹೇಳಿಕೆಯನ್ನು ಅನುಸರಿಸಿ ಅಹ್ಮದನಗರದ ಸುತ್ತಮುತ್ತ ಕ್ಷೋಭೆಯನ್ನು ಹರಡುತ್ತಿದ್ದನು. ಮುಸ್ಲಿಂ ಆಡಳಿತಗಾರರು ನಂತರ ಅನಾಕಂಡಿಯಿಂದ ಬೇಜಾನಗರಕ್ಕೆ ಹೋದರು. ಹಾಗೂ ಈ ಪಟ್ಟಣದಲ್ಲಿ ವಿನಾಶಕ್ಕೆ ಮುಂದಾದರು. ಎಷ್ಟು ಮಟ್ಟದ ಹಾನಿಯನ್ನುಂಟು ಮಾಡಿದರು ಎಂದರೆ ಈ ಗ್ರಂಥವನ್ನು ಬರೆಯುವ ಸಮಯದವರೆಗೂ (ಎಂದರೆ ಹಿಜ್ರಿ ಶಕೆ ೧೦೨೦ ರವರೆಗೆ) ಈ ಪಟ್ಟಣದಲ್ಲಿ ಜನರಿದ್ದ ಚಿಹ್ನೆ ಕೂಡ ಇರಲಿಲ್ಲ.

ಮುಸ್ಲಿಮ್ ದೊರೆಗಳ ಮರುಳುವಿಕೆ :

ತನಕನಾದರಿಂಯು ಈಗ ತುಂಬಾ ಅಸಹಾಯುಕನಾಗಿದ್ದನು. ಧೈರ್ಯಗುಂದಿದವನಾಗಿ ಇಷ್ಟು ಮುಸ್ಲಿಮರನ್ನು ಎದುರಿಸಲಾಗದವನಾಗಿದ್ದನು. ಅದಕ್ಕಾಗಿ ಅವನು ಮುಸ್ಲಿಮರ ಆ ಪರಗಣಗಳನ್ನು ಯಾವುವು ರಾಮರಾಜನು ಒತ್ತಡಪೂರ್ವಕವಾಗಿ ವಶಪಡಿಸಿಕೊಂಡಿದ್ದನೋ ಅವುಗಳನ್ನು ಅವರಿಗೆ ಮರಳಿಸಿದನು. ಯಾವ ತೆರನಾಗಿಯಾದರೂ ಮುಸ್ಲಿಮರೊಂದಿಗೆ ಸಂಧಾನ ಮಾಡಿಕೊಂಡನು. ಅದರ ನಂತರ ಮುಸ್ಲಿಂ ಆಡಳಿತಗಾರರು ತಮ್ಮ ತಮ್ಮ ಪ್ರಾಂತ್ಯಗಳಿಗೆ ಮರಳಿ ಬಂದರು.

ಹುಸೈನ ನಿಜಾಮಶಾಹನ ನಿಧನ :

ಹುಸೈನ ನಿಜಾಮಶಾಹನು ಅಹ್ಮದನಗರಕ್ಕೆ ತಲುಪಿದನು. ವಿಲಾಸೀ ಜೀವನದ ಕಾರಣದಿಂದ ಅವನ ಪರಿಸ್ಥಿತಿ ಹದಗೆಟ್ಟಿತು. ಅವನು ಗಂಭೀರ ಖಾಯಿಲೆಗೆ ತುತ್ತಾದನು. ಹಾಗೂ ಅಹ್ಮದನಗರಕ್ಕೆ ಬಂದ ಮೇಲೆ ಹನ್ನೊಂದು ದಿನಗಳ ನಂತರ ಅವನ ನಿಧನವಾಯಿತು. ಅವನು ಹನ್ನೊಂದು ವರ್ಷದವರೆಗೆ ಅಹ್ಮದನಗರದ ಮೇಲೆ ಆಡಳಿತ ನಡೆಸಿದನು.

ಸಂತಾನ :

ಹುಸೇನ ನಿಜಾಮಶಾಹನು ನಾಲ್ಕು ಮದುವೆಗಳನ್ನು ಮಾಡಿಕೊಂಡನು. ಅವರಿಂದ

ನಾಲ್ಕು ಪುತ್ರಿಯರು ಹಾಗೂ ನಾಲ್ಕು ಪುತ್ರರು ಜನಿಸಿದರು. ಯಾವಾಗ ಬಾದಶಾಹನ ಮೃತ್ಯುವಾಯಿತೋ ಆಗ ಈ ಎಂಟು ಜನರು ಜೀವಂತವಾಗಿದ್ದರು. ಮಹಾರಾಣಿ ಖೂನ್‌ಜಾಹಿಮಾಯೂಂವಿನ ಗರ್ಭದಿಂದ ಈರ್ವರು ಪುತ್ರರು ಹಾಗೂ ಈರ್ವರು ಪುತ್ರಿರು ಜನಿಸಿದರು. ಅವರ ಹೆಸರುಗಳು ಹೀಗಿವೆ:

ಚಾಂದಬೀಬಿ (ಯಾರ ವಿವಾಹವು – ಅಲಿಆದಿಲಶಾಹನೊಮದಿಗೆ ಜರುಗಿತು) ಹಾಗೂ ಬೀಬಿ ಖತೀಜಾ ಯಾರನ್ನು ಜಮಾಲುದ್ದೀನ ಹುಸೈನ ಅಂಜುವಿನೊಂದಿಗೆ ವಿವಾಹ ಮಾಡಿಕೊಡಲಾಯಿತು.

ಇತರ ಪತ್ನಿಯರಿಂದ ಈರ್ವರು ಪುತ್ರರಾದ ಷಾ ಖಾಸಿಂ ಹಾಗೂ ಷಾ ಮನ್ಸೂರ ಹಾಗೂ ಈರ್ವರು ಪುತ್ರಿಯರು ಆಖಾಬೀಬಿ ಯಾರು (ಅಬ್ದುಲವಹಾಬ ಬಿನ್ ಅಬ್ದುಲ ಅಜೀಮ) ಹಾಗೂ ಬೀಬಿ ಜಮಾಲ ಯಾರ ಮದುವೆಯ ಇಬ್ರಾಹಿಂ ಕುತುಬಶಾಹನೊಂದಿಗೆ ಜರುಗಿತು.

■

*

೪. ಹುಸೈನ ನಿಜಾಮಶಾಹನ ಪುತ್ರನಾದ ಮುರ್ತುಜಾ ನಿಜಾಮಶಾಹ "ಮತಿವಿಕಲ"ನೆಂದು ಪ್ರಸಿದ್ಧ

ಪಟ್ಟಾಭಿಷೇಕ ಹಾಗೂ ಷಿಯಾ ಪಂಥದ ಉನ್ನತಿ :

ಹುಸೈನ ನಿಜಾಮ ನಂತರ ಅಹ್ಮದನಗರ ಸಾಮ್ರಾಜ್ಯದ ಆಡಳಿತ ಸೂತ್ರವು ಮುರ್ತುಜಾ ನಿಜಾಮಶಾಹನ ಕೈಗೆ ಬಂದಿತು. ಆತನ ಪಟ್ಟಾಭಿಷೇಕ ಜರುಗಿದಂತೆಯೇ ಸಾಮ್ರಾಜ್ಯವು ಬಹಳ ವಿಸ್ತಾರಗೊಂಡಿತು. ಈ ಆಡಳಿತಗಾರನು ಷಿಯಾ ಪಂಥದ ಪ್ರಚಾರ ಹಾಗೂ ಪ್ರಚಾರದಲ್ಲಿ ತನ್ನ ಪೂರ್ವಜರಿಗಿಂತಲೂ ಹೆಚ್ಚಿನ ಆಸಕ್ತಿ ತೋರಿದನು. ಸೈಯದರು, ಷಿಯಾ ವಿದ್ವಾಂಸರು ಹಾಗೂ ಇತರ ದಕ್ಷ ಜನರ ವೇತನವನ್ನು ವೃದ್ಧಿಸಲಾಯಿತು.

ಚಿತ್ತ-ಚಾಂಚಲ್ಯ :

ಬರಾರದ ವಿಜಯದ ನಂತರ ಮುರ್ತುಜಾ ನಿಜಾಮಶಾಹನ ಮಾನಸಿಕ ಸ್ಥಿತಿಯು ಸ್ಥಿಮಿತದಲ್ಲಿ ಉಳಿಯಲಿಲ್ಲ. ಚಿತ್ತ ಚಾಂಚಲ್ಯವುಂಟಾಯಿತು. ಹಾಗೂ ಆತನು ಏಕಾಂತಪ್ರಿಯನಾದನು. ಈ ಕಾಲದಲ್ಲಿ ಒಂದಿಬ್ಬರು ವಿಶೇಷ ಸೇವಕರನ್ನು ಹೊರತು ಪಡಿಸಿ ಬಾದಶಾಹನ ಬಳಿ ಯಾರು ಹೋಗುತ್ತಿರಲಿಲ್ಲ. ಸಾಮ್ರಾಜ್ಯದ ಆಡಳಿತ ಹಾಗೂ ಆರ್ಥಿಕ ವ್ಯವಹಾರಗಳನ್ನು ಅಮೀರರು ಹಾಗೂ ಅಧಿಕಾರಿಗಳು ನೋಡಿಕೊಳ್ಳುತ್ತಿದ್ದರು. ಯಾವಾಗಲಾದರೂ ಅಮೀರರಿಗೆ ಏನಾದರೂ ಸಮಸ್ಯೆಯುಂಟಾದರೆ ಅಥವಾ ಏನಾದರೂ ಮುಖ್ಯ ಕೆಲಸ ಕಾರ್ಯವಿರುತ್ತಿತ್ತೋ ಆಗ ಒಂದು ಪತ್ರವನ್ನು ಬರೆದು ಬಾದಶಹನ ಸೇವೆಯಲ್ಲಿ ಕಳಿಸಿಕೊಡುತ್ತಿದ್ದರು. ಮುರ್ತುಜಾ ನಿಜಾಮನು ಈ ಪತ್ರಕ್ಕೆ ಸೂಕ್ತವಾದ ಉತ್ತರವನ್ನು ಬರೆದು ಕಳುಹಿಸುತ್ತಿದ್ದನು.

ಶಾಂತಿ ಹಾಗೂ ನೆಮ್ಮದಿ :

ಚಿತ್ತ ಚಾಂಚಲ್ಯದ ಈ ಸ್ವಭಾವವು ಸುಮಾರು ಹದಿನಾರು ವರ್ಷದವರೆಗೆ ಇತ್ತು.

"ತಾರೀಖೆ ಫರಿಸ್ತಾ"ದ ಗ್ರಂಥಕರ್ತನು ಇಂದಿನವರೆಗೂ ಯಾವುದೇ ಪುಸ್ತಕದಲ್ಲಿಯೂ ಓದಿಯೂ ಇಲ್ಲ ಹಾಗೂ ಯಾರ ಬಾಯಿಯಿಂದಲೂ ಕೇಳಿಯೂ ಇಲ್ಲ. ಏನೆಂದರೆ ಯಾವ ದೊರೆಯು ಈ ವಿಧವಾಗಿ ಹದಿನಾರು ವರ್ಷದವರೆಗೆ ಏಕಾಂತದಲ್ಲಿದ್ದನು ಹಾಗೂ ಆತನ ಸಾಮ್ರಾಜ್ಯದಲ್ಲಿ ಯಾವುದೇ ರೀತಿಯ ಕ್ಷೋಭೆ, ಗೊಂದಲ ಗದ್ದಲಗಳುಂಟಾಗಿಲ್ಲ.

ಮುರ್ತುಜಾ ನಿಜಾಮಶಾಹನ ಮಾತೃವಿನ ಅಧಿಕಾರಗಳು :

ಗ್ರಂಥಕರ್ತನು ಇದೇ ಬಾದಶಾಹನ ಆಡಳಿತಾವಧಿಯಲ್ಲಿ ಯುವಕನಾಗಿ ಶಾಹೀ ಗುಂಪಿನಲ್ಲಿ ಸೇರಿಕೊಂಡನು. ಮುರ್ತುಜಾ ನಿಜಾಮನು ಯಾವ ಕಾಲದಲ್ಲಿ ಸಿಂಹಾಸನವನ್ನೇರಿದನು ಈ ಕಾಲವು ಆತನ ತರುಣಾವಸ್ಥೆಯದ್ದಾಗಿತ್ತು. ಅದಕ್ಕಾಗಿ ಆರು ವರ್ಷದವರೆಗೆ ಆಡಳಿತ ವ್ಯವಸ್ಥೆಯು ಆತನ ತಾಯಿಯ ಕೈಯಲ್ಲಿತ್ತು. ಮಹಾರಾಣಿಯು ತನ್ನ ಸಹೋದರರಾದ ತಾಜಖಾನ, ಐನುಲಮುಲ್ಕ ಹಾಗೂ ಓರ್ವ ಖ್ವಾಜಾಸರಾ (ಶಿಖಂಡಿ) ಐತಬಾರಖಾನ ಹೆಸರಿನವನನ್ನು ಅಮಿರರಲ್ಲಿ ಸೇರ್ಪಡೆಗೊಳಿಸಿದಳು ಹಾಗೂ ಅವರಿಗೆ ಪೂರ್ಣ ಅಧಿಕಾರವನ್ನು ದಯಪಾಲಿಸಿದಳು.

ಮುರ್ತುಜಾ ನಿಜಾಮಶಾಹನ ನಿಶ್ಚಿಂತೆ :

ಮಹಾರಾಣಿಯು ಮುಲ್ಲಾ ಇನಾಯುತುಲ್ಲಾನಿಗೆ ನಾಯಕನ ಸ್ಥಾನ ಕಲ್ಪಿಸಿದಳು. ಅವಳು ದಿನನಿತ್ಯವೂ ಪರದೆಯ ಹಿಂದೆ ಕುಳಿತು ಖಾಸಿಂ ಬೇಗ ಹಕಿಂನ ಸಲಹೆಗಳನ್ನು ಆಲಿಸಿ ಆಡಳಿತದ ಕಾರ್ಯಗಳನ್ನು ನಿರ್ವಹಿಸುತ್ತಿದ್ದಳು. ಮುರ್ತುಜಾ ನಿಜಾಮಶಾಹನ ನಿತ್ಯದ ಚಟುವಟಿಕೆಗಳು, ಆಟಗಳಿಗೆ ಸೀಮಿತವಾಗಿದ್ದವು. ಅವನು ಅರಬರು ಹಾಗೂ ಹಬಶಿಗಳ ಒಂದು ಗುಂಪಿನೊಂದಿಗೆ ನಿಶ್ಚಿಂತೆಯಿಂದ ಸಮಯ ಕಳೆಯುತ್ತಿದ್ದನು. ಅವನು ಆಡಳಿತದ ಕಾರ್ಯ ಕೆಲಸಗಳಲ್ಲಿ ಎಳ್ಳಷ್ಟೂ ಅಡ್ಡಿ ಮಾಡುತ್ತಿರಲಿಲ್ಲ. ಮಹಾರಾಣಿ ಎಂದರೆ ಮುರ್ತುಜಾ ನಿಜಾಮಶಾಹಿಯ ಮಾತೆಯ ಹೆಸರು ಖೂನಜಾ ಹುಮಾಯೂನ ಎಂದಿತ್ತು.

ಅಲಿ ಆದಿಲಶಾಹನ ಬಯಕೆ :

ಅದೇ ಕಾಲದಲ್ಲಿ ಅಲಿ ಆದಿಲಶಾಹನು ಅವಕಾಶವನ್ನು ನೋಡಿಕೊಂಡು ಅನಿಕುಂದನಿ ಪಟ್ಟಣ ಹಾಗೂ ಬೇಜಾನಗರವನ್ನು ಗೆಲ್ಲಲು ಸಶಸ್ತ್ರ ಸೈನ್ಯವನ್ನು ಸಿದ್ಧಗೊಳಿಸಿದನು. ಅವನ ಈ ಬಯಕೆ ಇತ್ತು ರಾಮರಾಜನ ಪುತ್ರನಾದ ತಿಮ್ಮರಾಜನನ್ನು ಈ ಪ್ರಾಂತ್ಯದಿಂದ ಹೊರತೆಗೆದು ನಲಗುಂಡಾದ ಆಡಳಿತಗಾರನನ್ನಾಗಿ ಮಾಡಬೇಕೆಂಬುದಾಗಿತ್ತು. ಹಾಗೂ ಸ್ವತಃ ಬೇಜಾನಗರ ಹಾಗೂ ಅದರ ಸುತ್ತಮುತ್ತಲಿನ ಹಳ್ಳಿಗಳನ್ನು ವಶಪಡಿಸಿಕೊಳ್ಳುವುದು. ತನಕನಾದರಿ ನಲಗುಂಡಾದ ಆಡಳಿತಗಾರನಿಗೆ

ಯಾವಾಗ ಅಲಿ ಆದಿಲಶಾಹನ ಬಯಕೆಯ ಈ ಸುದ್ದಿ ತಲುಪಿತೋ ಆಗ ಅವನು ಬಹಳ ತಲ್ಲಣಗೊಂಡನು. ಹಾಗೂ ಅವನು ಮುರ್ತುಜಾ ನಿಜಾಮಶಾಹನಿಗೆ ಸಹಾಯವನ್ನು ಯಾಚಿಸಿದನು.

ಬೇಜಾನಗರಕ್ಕೆ ಮುರ್ತುಜಾ ನಿಜಾಮಶಾಹನ ಹೊರಡುವಿಕೆ :

ಮುರ್ತುಜಾ ನಿಜಾಮಶಾಹನು ತನಕನಾದರಿಯ ವಿನಂತಿಯನ್ನು ಮನ್ನಿಸಿದನು. ಹಾಗೂ ಮುಲ್ಲಾ ಇನಾಯತುಲ್ಲಾಹನ ಸಲಹೆಯಂತೆ ಬೇಜಾನಗರದ ಕಡೆಗೆ ಹೊರಟನು. ಅಲಿಆದಿಲಶಾಹನು ಈ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ತನ್ನ ಬಯಕೆಯನ್ನು ಬಿಟ್ಟುಕೊಟ್ಟನು. ನಿಜಾಮಷಾಹನು ಬೇಜಾನಗರದ ಸಮೀಪಕ್ಕೆ ಬಂದನು. ಹಾಗೂ ಅಲಿ ಆದಿಲಶಾಹನು ಬೇಗಬೇಗನೇ ಪ್ರಯಾಣವನ್ನು ಮಾಡುತ್ತಾ ಅನಿಕುಂದನಿಯಿಂದ ಬಿಜಾಪುರಕ್ಕೆ ಬಂದನು. ಹಾಗೂ ನಿಜಾಮಶಾಹನನ್ನು ಎದುರಿಸಲು ಸಿದ್ಧನಾದನು.

ಅಲಿಆದಿಲಶಾಹನೊಂದಿಗೆ ಸಂಧಾನ :

ಎರಡೂ ಸೈನ್ಯಗಳು ಪರಸ್ಪರ ಯುದ್ಧಕ್ಕಾಗಿ ಮುಖಾಮುಖಿಯಾದವು. ಆದರೆ ಯುದ್ಧವಾಗಲಿಲ್ಲ. ಪರಸ್ಪರರ ಸಂಧಾನಕಾರರು ಮಧ್ಯಸ್ತಿಕೆ ವಹಿಸಿ ಅವರು ಹೀಗೆಂದರು. "ಈರ್ವರೂ ಸಮಧರ್ಮಿಯರಾದ ಆಡಳಿತಗಾರರಿಗೆ ಒಬ್ಬರ ವಿರುದ್ಧ ಒಬ್ಬರು ಹೋರಾಡುವುದು ಶೋಭೆ ತರುವುದಿಲ್ಲ. ಒಳಿತು ಇದರಲ್ಲಿಯೇ ಇದೆ. ಪರಸ್ಪರ ಸಂಧಾನ ಮಾಡಿಕೊಳ್ಳಬೇಕು. ಆದ್ದರಿಂದ ಈರ್ವರಲ್ಲಿಯೂ ಸಂಧಾನವಾಯಿತು. ಹಾಗೂ ನಿಜಾಮಶಾಹಿ ಸೈನ್ಯವು ಮರಳಿ ಅಹ್ಮದನಗರಕ್ಕೆ ಬಂದಿತು.

ಬರಾರ್‌ದ ಮೇಲೆ ದಾಳಿ :

ಈ ಘಟನೆಯು ನಡೆದ ಒಂದು ವರ್ಷದ ಬಳಿಕ ಮುರ್ತುಜಾನಿಜಾಮ ಹಾಗೂ ಅಲಿ ಆದಿಲಶಾಹನು ಪರಸ್ಪರ ಮಾತುಕತೆ ನಡೆಸಿ ತುಖಾಲಖಾನನೊಂದಿಗೆ ಸೇಡು ತೀರಿಸಿಕೊಳ್ಳಲು ನಿರ್ಧರಿಸಿದರು. ಅದಕ್ಕೆ ಈ ಕಾರಣದಿಂದ ಅಂದರೆ ಬೇಜಾನಗರದಲ್ಲಿ ನಡೆಸಿದ ದೊಂಬಿಯಲ್ಲಿ ಈ ಆಡಳಿತಗಾರರ ಜೊತೆ ನೀಡಿರಲಿಲ್ಲ. ಬರಾರ್ ಮೇಲೆ ದಾಳಿ ಮಾಡಿದ ಮುರ್ತುಜಾ ನಿಜಾಮ ಹಾಗೂ ಅಲಿ ಆದಿಲನು ಎಲಚಿಪುರದವರೆಗಿನ ಎಲ್ಲ ಪ್ರದೇಶಗಳನ್ನು ನಾಶ ಮಾಡಿದರು. ರಕ್ತಪಾತ ನಡೆಸಿದರು. ಹಾಗೂ ಈ ತೆರನಾಗಿ ತುಖಾಲಖಾನನೊಂದಿಗೆ ತಮ್ಮ ಬಯಕೆಯಂತೆ ಸೇಡು ತೀರಿಸಿಕೊಂಡರು. ಅದೇ ಕಾಲದಲ್ಲಿ ಮಳೆಗಾಲವು ಬಂದಿತು. ತುಖಾಲಖಾಲನು ಅಲಿಆದಿಲಶಾಹನ ಸೇವೆಯಲ್ಲಿ ಹಾಜರಾದನು. ಹಾಗೂ ಅವನಿಗೆ ಬಹಳಷ್ಟು ಸಿರಿ ಸಂಪತ್ತನ್ನು ನೀಡಿ ರಾಜಿ ಮಾಡಿಕೊಂಡನು. ಅಲಿಆದಿಲನು ಮಳೆಗಾಲದ ನೆಪ ಮಾಡಿ ಮುರ್ತುಜಾಶಾಹನ ಸಂಗಡ ಮರಳಿ ಬಂದನು.

ಕಂದಾಲಾ ಕೋಟೆ ಅಲಿ ಆದಿಲಶಾಹನ ವಶಕ್ಕೆ :

ಹಿಜ್ರಿ ಶಕೆ ೯೫೦ ರಲ್ಲಿ ಅಲಿ ಆದಿಲಶಾಹನು ಆಯಾ ನಿಜಾಮಶಾಹಿಯ ಪ್ರದೇಶಗಳ ಮೇಲೆ ಹಿಡಿತ ಸಾಧಿಸಲು ಬಯಸಿದನು. ಅದರಂತೆ ಅವನು ಎಲ್ಲಕ್ಕಿಂತ ಮೊದಲು ಕಂದಾಲಾ ಕೋಟೆಯನ್ನು (ಯಾವುದು ಚಾಣಕ್ಯ ಗ್ರಾಮದಿಂದ ಇಪ್ಪತ್ತು ಕೋಸ್‌ಗಳ ಅಂತರದಲ್ಲಿದೆ) ವಶಪಡಿಸಿಕೊಂಡನು. ಹಾಗೂ ಅದರ ನಂತರ ಕಿಶ್ವರಖಾನನನ್ನು ಒಂದು ದೊಡ್ಡ ಸೈನ್ಯದೊಂದಿಗೆ ನಿಜಾಮಷಾಹೀ ಸೀಮೆಯ ಕಡೆಗೆ ಕಳುಹಿಸಿದನು.

ಕಿಶ್ವರಖಾನನು ಶಕ್ತಿಶಾಲಿ ಅಧಿಕಾರಿಯಾದದ್ದು :

ಖೂನಜಾ ಹುಮಾಯೂವಿಗೆ ಯಾವಾಗ ಈ ಘಟನೆಯ ಮಾಹಿತಿ ಲಭಿಸಿತೋ ಆಗ ಅವಳು ಕೆಲ ದಖನಿ ಅಮೀರರಿಗೆ ಕಿಶ್ವರಖಾನನನ್ನು ಎದುರಿಸಲು ಕಳುಹಿಸಿದಳು. ಕಿಶ್ವರಖಾನನು ಈ ಅಮೀರರನ್ನು ಕಚ್ಚ ಗ್ರಾಮದ ಬಳಿ ಸೋಲಿಸಿದನು. ಹಾಗೂ ಈ ಜನರು ಪೆಟ್ಟು ತಿಂದ ಪರಿಸ್ಥಿತಿಯಲ್ಲಿ ಅಹ್ಮದನಗರಕ್ಕೆ ಮರಳಿದರು. ಕಿಶ್ವರಖಾನನು ಗಡಿಪ್ರದೇಶವನ್ನು ಜನರನ್ನು ತನ್ನವರನ್ನಾಗಿಸಿಕೊಂಡನು. ಅವರಿಂದ ಮುಂಗಾರು ಹಿಂಗಾರು ಬೆಳೆಗಳ ಮೇಲಿನ ತೆರಿಗೆಯನ್ನು ಅದು ಸುಮಾರು ಇಪ್ಪತ್ತು ಲಕ್ಷಹವನಗಳಷ್ಟು ಆಗುತ್ತದೆ. ಅಷ್ಟನ್ನು ಪಡೆದುಕೊಂಡನು. ಅದರ ನಂತರ ಅವನು ಈ ರಣಭೂಮಿಯಲ್ಲಿ ಎಲ್ಲಿ ಅವನಿಗೆ ವಿಜಯ ಲಭಿಸಿತ್ತು ಅಲ್ಲಿ ಒಂದು ಭದ್ರಕೋಟೆಯನ್ನು ನಿರ್ಮಿಸಿದನು. ಹಾಗೂ ಶಕ್ತಿಶಾಲಿ ಅಧಿಕಾರಿಯಾದನು.

ಮಹಾರಾಣಿಯ ಕುರಿತು ಫಿರ್ಯಾದು :

ಖೂನಜಾ ಹುಮಾಯೂವು ನಿಜಾಮಶಾಹಿ ರಾಜ್ಯದ ಸುಮಾರು ಅರ್ಧದಷ್ಟು ಭಾಗವನ್ನು ತನ್ನ ಸಹೋದರರಿಗೆ ಹಾಗೂ ಸಂಬಂಧಿಗಳಿಗೆ ಜಾಗೀರು ರೂಪದಲ್ಲಿ ನೀಡಿದ್ದಳು. ಈ ಅಮೀರರು ತನ್ನ ಸೈನಿಕರ ಮೇಲೆ ಸರಿಯಾದ ರೀತಿಯಲ್ಲಿ ಮೇಲ್ವಿಚಾರಣೆ ಮಾಡುತ್ತಿರಲಿಲ್ಲ. ಆ ಕಾರಣದಿಂದ ಕಿಶ್ವರಖಾನನ ದಾಳಿಗಳನ್ನು ಎದುರಿಸುವುದು ಕಷ್ಟಕರವಾಗಿತ್ತು. ಶಾಹೀ ಅಧಿಕಾರಿಗಳು ಈ ಪರಿಸ್ಥಿತಿಯಿಂದ ಆತಂಕಿತರಾದರು. ಅವರು (ಷಾಜಮಾಲುದ್ದೀನ ಹುಸ್ಯೆನ ಅಂಜು, ಖಾಸಿಂಬೇಗ, ಶಾಹ ಅಹ್ಮದ ಹಾಗೂ ಮುರ್ತುಜಾಖಾನ ಇತರರು), ಮುರ್ತುಜಾಖಾನನಿಗೆ ಖೂನಜಾ ಹುಮಾಯೂವಿನ ಕುರಿತು ದೂರು ನೀಡಿದರು.

ಸಂಗಡಿಗರ ಸಲಹೆ :

ಮುರ್ತುಜಾ ನಿಜಾಮಶಾಹನು ಸಂಗಡಿಗರಿಗೆ ಹೀಗೆಂದನು. “ಆಡಳಿತಗಾರರ ಎಲ್ಲ ಪ್ರತಿನಿಧಿಗಳು, ಸೇವಕರುಹಾಗೂ ಎಲ್ಲ ಶಿಷ್ಯರು ಮಹಾರಾಣಿಯ ಕಡೆ ಇದ್ದಾರೆ.

ಇಂಥ ಸ್ಥಿತಿಯಲ್ಲಿ ಅಂಥ ಹಿಡಿತದಿಂದ ಮುಕ್ತಿ ಸಾಧಿಸುವುದು ಬಹಳ ಕಠಿಣವಾದ ಕೆಲಸವಾಗಿದೆ" ಸಂಗಡಿಗರು ಇದಕ್ಕೆ ಉತ್ತರವಾಗಿ ಹೀಗೆಂದರು. "ಒಂದು ವೇಳೆ ಬಾದಶಾಹರು ಅನುಮತಿ ನೀಡಿದರೆ ನಾವು ಫರ್ಹಾದಖಾನ, ಇಖ್ಲಾಸಖಾನ ಹಾಗೂ ಹಬ್ಷಿಖಾನ ರಂತಹ ಅತಿರಥ, ಮಹಾರಥರಾದ ಖ್ಯಾತ ಅಮೀರರನ್ನು ನಮ್ಮೊಂದಿಗೆ ಸೇರಿಸಿಕೊಂಡು ಮಹಾರಾಣಿಯ ಹಿಡಿತದಿಂದ ಮುಕ್ತಿ ಪಡೆಯಬಹುದಾಗಿದೆ." ಮುರ್ತುಜಾಖಾನನು ಈ ಜನರಿಗೆ ಅದರ ಅನುಮತಿ ನೀಡಿದನು.

ಮಹಾರಾಣಿಯನ್ನು ಬಂಧಿಸುವ ಯೋಚನೆ :

ಈ ಸಂಗಡಿಗರು ಹಬಶಿ ಸರದಾರರೊಂದಿಗೆ ಸಂಚು ನಡೆಸಿ ತನ್ನವರನ್ನಾಗಿಸಿಕೊಂಡರು. ಈ ಜನರು ಸಲಾಂ ಮಾಡುವ ನೆಪದಲ್ಲಿ ಕೋಟೆ ಒಳಗೆ ಬಂದರು. ಹಾಗೂ ಬಾದಶಾಹನಿಗೆ ಈ ಸಂದೇಶವನ್ನು ನೀಡಿದರು. "ಈ ಸಮಯದಲ್ಲಿ ಆಯಾ ಆಯಾ ಅಮೀರರು ಉಪಸ್ಥಿತರಿದ್ದಾರೆ. ಒಂದು ವೇಳೆ ಅನುಮತಿ ನೀಡಿದರೆ ನಪುಂಸಕರು ಹಾಗೂ ಸೇವಕಿಯರ ಮುಖಾಂತರ ಮಹಾರಾಣಿಯನ್ನು ಬಂಧಿಸಬಹುದಾಗಿದೆ". ಬಾದಶಾಹನು ಅದರ ಅನುಮತಿ ನೀಡಿದನು.

ಗುಟ್ಟು ರಟ್ಟಾದುದು :

ಆಕಸ್ಮಿಕವಾಗಿ ಮಹಾರಾಣಿ ಖೂನಜಾ ಹುಮಾಯೂವು, ಯಾವುದೇ ಕೆಲಸದ ನಿಮಿತ್ಯದಿಂದ ಮುರ್ತುಜಾ ನಿಜಾಮನಿಗೆ ಅಂತಃಪುರದಲ್ಲಿ ಕರೆಯಿಸಿಕೊಂಡಳು. ಮುರ್ತುಜಾ ಹೀಗೆ ತಿಳಿದನು. ಮಹಾರಾಣಿಗೆ ಸಂಚಿನ ಕುರಿತು ತಿಳಿದಿದೆ. ಆತನು ತನ್ನ ಮಾತೆಯ ಬಳಿ ತಲುಪಿದನು. ಹಾಗೂ ತನಗೆ ತಾನು ಅದೇ ಸ್ಥಿತಿಯಲ್ಲಿ ಇಡುವ ಉದ್ದೇಶದಿಂದ ಅವನು ಸಂಚನ್ನು ಸ್ಫೋಟಗೊಳಿಸಿದನು. ಹಾಗೂ ಹೀಗೆಂದನು. "ಆಯಾ ಆಯಾ ಅಮೀರರು ಸಂಚು ನಡೆಸಿ ತಮ್ಮನ್ನು ಬಂಧಿಸುವ ಯೋಜನೆ ಹಾಕಿದ್ದಾರೆ".

ಷಾ ಜಮಾಲನ ಬಂಧನ :

ಮಹಾರಾಣಿಯೂ ಸ್ಥಿತಿಯ ಗಂಭೀರತೆಯನ್ನು ಪರಿಗಣಿಸಿ ವೈರಿಗಳ ಯೋಜನೆಯನ್ನು ವಿಫಲಗೊಳಿಸಲು ಸಿದ್ಧತೆ ನಡೆಸಿದಳು. ಸಂಜೆಯ ಸಮಯದಲ್ಲಿ ಅವಳು ಪರದೆ ಹಿಂದೆ ಕುಳಿತು ಶಾಹ ಜಮಾಲ್‌ನಿಗೆ ಕರೆಯಿಸಿ ಅವನನ್ನು ಬಂಧಿಸಿದಳು. ಫರ್ಹಾದಖಾನ ಹಾಗೂ ಇತರರಿಗೆ ಯಾವಾಗ ಶಾ ಜಮಾಲ್‌ನ ಬಂಧನದ ಸುದ್ದಿ ತಿಳಿಯಿತೋ ಆಗ ಅವರು ತಮ್ಮ ಸಂಗಡಿಗರೊಂದಿಗೆ ಕೋಟೆಯಿಂದ ಹೊರಗೆ ಬಂದರು. ಮುರ್ತುಜಾಖಾನ ಹಾಗೂ ಶಾಹ ಅಹ್ಮದ ತಮ್ಮ ಕಾಲಾಳುಗಳ ಜೊತೆಗೆ ಬೇಗ ಬೇಗನೆ ತಮ್ಮ ಮನೆಗಳಿಗೆ ಹಿಂದಿರುಗಿದರು. ಸೈಯ್ಯದ ಮುರ್ತುಜಾ ಸಬ್ಜವಾರಿ, ಖ್ವಾಜಾ ಮೀರಕ ದಬೀರಅಸ್ಫಹಾನಿ ಹಾಗೂ ಇತರ ಹಲವಾರು ವಿದೇಶಿ ಅಮೀರರನ್ನು

ಈ ಸಂಚಿನ ಸಹಭಾಗಿಗಳೆಂದು ನಿಶ್ಚಯಿಸಲಾಯಿತು. ಅದಕ್ಕಾಗಿ ಈ ಜನರೂ ಸಹ ಬೇಗಬೇಗನೆ ಕೋಟೆಯಿಂದ ಹೊರಬಂದರು.

ವಿದೇಶಿ ಅಮೀರರ ಓಡಿಹೋಗುವಿಕೆ :

ಮಹಾರಾಣಿಯು ಸೈನಿಕರ ಒಂದು ತಂಡವನ್ನು ಮುರ್ತುಜಾಖಾನನ ಬಂಧನಕ್ಕಾಗಿ ನೇಮಿಸಿದಳು. ಮುರ್ತುಜಾಖಾನನಿಗೆ ಯಾವಾಗ ಇದರ ಸುದ್ದಿ ತಿಳಿಯಿತೋ ಆಗ ಅವನು ಸೈಯ್ಯದ ಮುರ್ತುಜಾ ಸಬ್ಜವಾರಿ, ದಬೀರ್ ಅಸ್ಫಹಾನಿ ಹಾಗೂ ಇತರ ವಿದೇಶೀ ಅಮೀರರೊಂದಿಗೆ ಬಿಜಾಪುರದ ಕಡೆಗೆ ಹೊರಟನು. ಫರ್ಹಾದಖಾನ ಹಾಗೂ ಅವನ ಸಂಗಡಿಗರು ಇಡೀ ರಾತ್ರಿ 'ಕಾಲಾಚಬೂತರಾ' ಮೈದಾನದಲ್ಲಿ ಉಳಿದರು. ಈ ಅಮೀರರು ಜನರನ್ನು ಕಳುಹಿಸಿ ತಮ್ಮ ಹೆಂಡತಿ, ಮಕ್ಕಳನ್ನು ಹಾಗೂ ಸಿರಿಸಂಪತ್ತನ್ನು ಇಲ್ಲಿಯೇ ತಂದುಕೊಂಡರು ಹಾಗೂ ಗುಜರಾತಿನೆಡೆಗೆ ಹೊರಡಲು ಸಿದ್ಧತೆ ಮಾಡತೊಡಗಿದರು.

ಮಹಾರಾಣಿಯ ಸಂದೇಶ :

ಮಹಾರಾಣಿ ಖೂನಜಾ ಹುಮಾಯೂವು ಈ ಅಮೀರರಿಗೆ, ಈ ಸಂದೇಶ ಕಳುಹಿಸಿದಳು. "ನೀವು ಈ ಸಂಚಿನ ಭಾಗಿಗಳಾಗಿಲ್ಲದಿದ್ದರೆ ಮತ್ತೇಕೆ ಇಷ್ಟು ಭಯಭೀತಗೊಂಡಿದ್ದೀರಿ. ನೀವು ನಿಮ್ಮ ನಿಮ್ಮ ಮನೆಗೆ ಮರಳಿರಿ, ಹಾಗೂ ಮೊದಲಿನ ಹಾಗೆ ಇಲ್ಲಿ ಬಂದು ವಾಸ ಮಾಡಿರಿ. ನಿಮಗೆ ಇದರಲ್ಲಿಯೇ ಒಳಿತು ಇದೆ ಹಾಗೂ ನೀವು ಇದನ್ನು ಪಾಲಿಸಬೇಕು."

ಹಬಶಿ ಅಮೀರರೊಂದಿಗೆ ಖಾಸಿಂ ಬೇಗನ ಭೇಟಿ :

ಈ ಅಮೀರರು ಮಹಾರಾಣಿಯ ಸಂದೇಶವನ್ನು ಯುಕ್ತಿಯ ರೂಪದಲ್ಲಿ ತೆಗೆದುಕೊಂಡು ಅದೇ ಸ್ಥಳದಲ್ಲಿಯೇ ಉಳಿದರು. ಎರಡನೆಯ ಸಲ ಖೂನಜಾ ಹುಮಾಯೂವು ಖಾಸಿಂ ಬೇಗ ಹಕಿಂನಿಗೆ ಯಾರು ಫರ್ಹಾತಖಾನನ ನಿಕಟ ಸ್ನೇಹಿತನಾಗಿದ್ದನು ಅವನನ್ನು ಈ ಅಮೀರರ ಬಳಿ ಕಳುಹಿಸಿದಳು. ಖಾಸಿಂ ಬೇಗನು ಹಬಶಿ ಅಮೀರರಿಗೆ ಮಹಾರಾಣಿಯ ಸಂದೇಶವನ್ನು ತಲುಪಿಸಿದನು. ಈ ಅಮೀರರು ಹೀಗೆ ಉತ್ತರಿಸಿದರು. "ಈಗ ಅದು ಏನೇನಾಯಿತು ಅಥವಾ ಏನೇನಾಗುವುದಿದೆಯೋ ಅದರಲ್ಲಿ ನೀವು, ನಾವು ಎಲ್ಲರೂ ಭಾಗಿಗಳಾಗಿದ್ದೇವು, ಮಹಾರಾಣಿಗೆ ಗೊತ್ತಿದೆ. ಈ ವೇಳೆ ಮಹಾರಾಣಿ ಹೀಗೆ ಬಯಸುತ್ತಿದ್ದಾಳೆ. ನಮ್ಮನ್ನು ಪುಸಲಾಯಿಸಿ ತನ್ನ ಸೇಡನ್ನು ತೀರಿಸಿಕೊಳ್ಳಬಹುದು. ನೀವು ಸಹ ಈ ಸತ್ಯವನ್ನು ಮನಗಾಣಿರಿ. ಇಲ್ಲದಿದ್ದರೆ, ನಿಮಗೂ ಖಂಡಿತ ಕೇಡು ಆಗುವುದು. ಒಳಿತು ಇದರಲ್ಲಿಯೇ ಇದೆ ನೀವು ನಮ್ಮೊಂದಿಗೆ ಸೇರಿಕೊಳ್ಳಿರಿ.

ಗುಜರಾತಕ್ಕೆ ಹಬಶಿ ಅಮೀರರ ಹೋಗುವಿಕೆ :

ಹಬಶಿ ಅಮೀರರ ಮಾತು ಖಾಸಿಂ ಬೇಗನಿಗೆ ಅರ್ಥವಾಯಿತು. ಹಾಗೂ ಅವನು ತನ್ನ ಪುತ್ರರಾದ ಕಮಾಲುದ್ದೀನ ಹುಸೈನ್‌ನನ್ನು ತನ್ನ ಜೊತೆಗೆ ಸಹಾಯಾತ್ರಿಯಾಗಿ ತೆಗೆದುಕೊಂಡು ಹಬಶಿಗಳ ಹತ್ತಿರ ಬಂದನು. ಅವನು ತಾನು ಸಂಗ್ರಹಿಸಿಟ್ಟಿದ್ದ ರತ್ನಗಳ ಸಣ್ಣ ಪೆಟ್ಟಿಗೆಯನ್ನು ಗೌಪ್ಯವಾಗಿ ಷಾಹ್‌ತಾಹೀರ್‌ರ ಪುತ್ರರಾದ ಷಾಹ್‌ರಫಿಯುದ್ದೀನನ ಹತ್ತಿರ ಅಮಾನತ್ತಿನ ರೂಪದಲ್ಲಿ ಇರಿಸಿದನು. ಫರ್ಹಾದಖಾನ ಅದೇ ರಾತ್ರಿ ಎಲ್ಲರೊಂದಿಗೆ ಗುಜರಾತಿಗೆ ಹೊರಟನು.

ಹಿಂಬಾಲಿಸುವಿಕೆ :

ಮಹಾರಾಣಿ ಖೂನಜಾ ಹುಮಾಯುವು ಅವರನ್ನು ಹಿಂಬಾಲಿಸಲು ಕೆಲ ಜನರನ್ನು ಕಳುಹಿಸಿದಳು. ಇಖ್ಲಾಸಖಾನ ಹಾಗೂ ಹಬಶಿಖಾನ ಮರಳಿ ಅಹ್ಮದನಗರಕ್ಕೆ ಬಂದರು. ಖಾಸಿಂಬೇಗ್ ಹಾಗೂ ಫರ್ಹಾದಖಾನ ಯಾರು ಬಹಳ ಭಯಭೀತರಾಗಿದ್ದರು ಬಲು ಬೇಗಬೇಗನೆ ಗುಜರಾತಿನ ಸರಹದ್ದನ್ನು ತಲುಪಿದರು. ಆ ಸ್ಥಳದಲ್ಲಿ ಹಿಂಬಾಲಿಸುವವರೂ ಅವರನ್ನು ಸಮೀಪಿಸಿದರು, ಹಾಗೂ ಖಾಸಿಂಬೇಗ್‌ನ ಹದಿನೇಳು ವರ್ಷ ವಯಸ್ಸಿನ ಪುತ್ರ ಕಮಾಲುದ್ದೀನನನ್ನು ಬಂಧಿಸಿದರು. ನಿಜಾಮಶಾಹಿ ಸೇವಕರು ಬೇರೆ ಪ್ರಾಂತ್ಯದ ಸರಹದ್ದಿನಲ್ಲಿ ಬಹಳ ಸಮಯ ಇರಲು ಸಾಧ್ಯವಿರಲಿಲ್ಲ. ಅದಕ್ಕಾಗಿ ಬಲುಬೇಗನೇ ಅಹ್ಮದನಗರಕ್ಕೆ ಮರಳಿ ಬಂದರು.

ಕಮಾಲುದ್ದೀನನ ಬಂಧನ ಮತ್ತು ಬಿಡುಗಡೆ :

ಮಹಾರಾಣಿಯು ಯಾವಾಗ ವೈರಿಗಳಿಂದ ಪೂರ್ಣ ರೀತಿಯಲ್ಲಿ ನೆಮ್ಮದಿಯನ್ನು ಹೊಂದಿದ್ದಳೋ ಆಗ ಅವಳು ಕಮಾಲುದ್ದೀನ ಹುಸೈನನಿಗೆ ದರ್ದಬ್ ಕೋಟೆಯಲ್ಲಿ ಬಂಧಿಸಿಟ್ಟಳು. ಆದರೆ ಕೆಲವೇ ದಿನಗಳ ನಂತರ ಮಹಾರಾಣಿಯು ಅವನನ್ನು ಬಿಡುಗಡೆ ಮಾಡಿ ಹುದ್ದೆ ಹಾಗೂ ಜಾಗೀರಿನಿಂದ ಪುರಸ್ಕರಿಸಿದಳು. ಅದರ ನಂತರ ಮಹಾರಾಣಿಯು ಬಂಧುಗಳು ಹಾಗೂ ಸಂಬಂಧಿಗಳಲ್ಲಿ ಗಮನ ಹರಿಸಿದಳು. ಅವಳು ಷಾಅಹ್ಮದ ಹಾಗೂ ಮುರ್ತುಜಾಖಾನನೊಂದಿಗೆ ಸದ್ವರ್ತನೆಯ ವಾಗ್ದಾನ ತೆಗೆದುಕೊಂಡು ಅವರನ್ನು ಬಿಜಾಪುರದಿಂದ ಕರೆಯಿಸಿಕೊಂಡಳು ಹಾಗೂ ಫರ್ಹಾದ್‌ಖಾನ್ ಹಾಗೂ ಖಾಸಿಂಬೇಗ್‌ನಿಗೂ ಇದೇ ಸಂದೇಶವನ್ನು ನೀಡಿದಳು.

ಖಾಸಿಂ ಬೇಗನ ನಿಧನ :

ಫರ್ಹಾದಖಾನನು ಅಹ್ಮದನಗರಕ್ಕೆ ಮರಳಿ ಬಂದನು. ಆದರೆ ಖಾಸಿಂ ಬೇಗನು ಅಹ್ಮದಾಬಾದ, ಗುಜರಾತಿನಲ್ಲಿಯೇ ಇರಲು ಬಯಸಿದನು. ಅವನು ಒಬ್ಬ ನಂಬಿಗಸ್ತವ್ಯಕ್ತಿಯನ್ನು ಶಾ ರಫಿಯುದ್ದೀನನ ಸೇವೆಯಲ್ಲಿ ಕಳುಹಿಸಿದನು. ಹಾಗೂ

ತನ್ನ ಅಮಾನತ್ತನ್ನು ಮರಳಿ ಪಡೆಯಲು ಬಯಸಿದನು. ಶಾ ಸಾಹೇಬರು ಆ ಮುದ್ರೆಯನ್ನೊತ್ತಿದ ರತ್ನಗಳ ಸಣ್ಣ ಪೆಟ್ಟಿಗೆಯನ್ನು ಆ ವ್ಯಕ್ತಿಯ ಕೈಯಲ್ಲಿ ಖಾಸಿಂಬೇಗನಿಗೆ ಕಳುಹಿಸಿಕೊಟ್ಟರು. ಖಾಸಿಂಬೇಗನು ಸಣ್ಣ ಪೆಟ್ಟಿಗೆಯನ್ನು ತೆರೆದನು. ಅದರಲ್ಲಿ ಎಲ್ಲ ವಸ್ತುಗಳು ಇದ್ದವು ಆದರೆ ಒಂದು ಸಣ್ಣ ಚೀಲ ಅದರಲ್ಲಿ ಬಹು ಅಮೂಲ್ಯ ರತ್ನ ವಜ್ರ ವೈಡೂರ್ಯಗಳಿದ್ದವು. ಅದೇ ಇರಲಿಲ್ಲ. ಖಾಸಿಂನು ಈ ಆಘಾತವನ್ನು ಸಹಿಸದಾದನು ಹಾಗೂ ಕಾಯಿಲೆಗೆ ತುತ್ತಾದನು. ಕೆಲಸಮಯದವರೆಗೆ ಅವನು ಈ ದುಃಖದಲ್ಲಿ ತಪ್ತನಾದನು ಕೊನೆಗೆ ಸಾವಿಗೀಡಾದನು.

ಮುಲ್ಲಾ ಇನಾಯತುಲ್ಲಾಹನ ಬಂಧನ :

ಮಹಾರಾಣಿ ಖೂನಜಾ ಹುಮಾಯೂವು ಯಾವಾಗ ಇದನ್ನು ಗ್ರಹಿಸಿದಳೋ ಕಿಶ್ವರಖಾನನ ಕೀಟಲೆಯು ಹೆಚ್ಚಾಗುತ್ತಲೇ ಹೊರಟಿದೆ. ಆದುದರಿಂದ ಅವಳು ಬಹಳೇ ಚಿಂತಿತಳಾದಳು. ಅವಳು ತನ್ನಲ್ಲಿಯೇ ತಾನು ಹೀಗೆ ತಿಳಿದುಕೊಂಡಳು. ಇದರ ಮೂಲ ಕಾರಣವು ಮುಲ್ಲಾ ಇನಾಯತುಲ್ಲಾ ಇರುವನು. ಅವನೇ ಕಿಶ್ವರಖಾನನೊಂದಿಗೆ ಸೇರಿ ಸಂಚು ನಡೆಸಿರುವುದರಿಂದ ಇವನು ಶಕ್ತಿಶಾಲಿ ಹಾಗೂ ಬಲಶಾಲಿಯಾಗಿರುವನು. ಈ ಯೋಚನೆಯಿಂದ ಮಹಾರಾಣಿ ಖೂನಜಾ ಹುಮಾಯುವು ಮುಲ್ಲಾ ಇನಾಯತನಿಗೆ ಜುನದ್ ಕೋಟೆಯಲ್ಲಿ ಬಂಧಿಸಿಟ್ಟಳು.

ಮಹಾರಾಣಿಯನ್ನು ಬಂಧಿಸಲು ಸಂಚು :

ಹಿಜ್ರಿ ಶಕೆ ೯೭೭ ರಲ್ಲಿ ಖೂನಜಾ ಹುಮಾಯುವೂ ಸೈನ್ಯವನ್ನು ಸಿದ್ಧಗೊಳಿಸಿದಳು ಹಾಗೂ ತನ್ನ ಪುತ್ರ ನಿಜಾಮಶಾಹನನ್ನು ಜೊತೆಗೆ ತೆಗೆದುಕೊಂಡು ಕಿಶ್ವರಖಾನನನ್ನು ಪಾಠ ಕಲಿಸಲು ಹೊರಟಳು. ಯಾವಾಗ ಶಾಹೀ ಸೈನ್ಯವು ಕಾನೂರ್ ಪ್ರದೇಶದ ವ್ಯಾಪ್ತಿಯಲ್ಲಿ ತಲುಪಿತೋ ಆಗ ಶಾಹೀ ಸಂಗಡಿಗರು, ಅಧಿಕಾರಿಗಳಾದ ಮುಲ್ಲಾ ಹುಸೈನ ತಬರೇಜಿ, ಶಾಹ ಅಹ್ಮದ ಹಾಗೂ ಮುರ್ತುಜಾಖಾನ ಇತರರು ಮತ್ತೊಮ್ಮೆ ಮುರ್ತುಜಾ ನಿಜಾಮಶಾಹನಿಗೆ ಮಹಾರಾಣಿಯನ್ನು ಬಂಧಿಸುವುದಕ್ಕಾಗಿ ಉತ್ತೇಜಿಸಿದರು. ಮುರ್ತುಜಾ ನಿಜಾಮನು ತನ್ನ ತಾಯಿಯ ಶಕ್ತಿಶಾಲಿ ಆಡಳಿತದಿಂದಾಗಿ ನಮ್ರನಾಗಿದ್ದನು. ಅವನು ತಕ್ಷಣ ಈ ಕಾರ್ಯಕ್ಕಾಗಿ ಸಿದ್ಧನಾದನು. ತನ್ನ ಅಮೀರರ ಸಲಹೆಯಂತೆ ಈ ಸಂಚಿನ ಕುರಿತು ಪ್ರಯತ್ನಿಸತೊಡಗಿದನು.

ಬೇಟೆಯ ಇಚ್ಛೆ :

ಮುರ್ತುಜಾ ನಿಜಾಮನು ಮಹಾರಾಣಿ ಖೂನಜಾಹುಮಾಯೂವಿಗೆ ಹೇಳಿದನು. "ನನ್ನ ಮನಸ್ಸು ಬೇಟೆಯಾಡಲು ಬಯಸುತ್ತಿದೆ. ನನಗೆ ಅನುಮತಿ ನೀಡಿದರೆ ನಾಳೆ ಬೆಳಿಗ್ಗೆ ಬೇಟೆಗಾಗಿ ಹೊರಡುವೆನು". ಮಹಾರಾಣಿಯು ಬಹಳೇ ಸಂತೋಷದೊಂದಿಗೆ

ಅನುಮತಿ ನೀಡಿದಳು. ಬಾದಶಾಹನು ಇಖ್ಲಾಸಖಾನ, ಹಬಶಿಖಾನ ಹಾಗೂ ಫರ್ಹಾದಖಾನರೊಂದಿಗೆ ಹೀಗೆಂದನು. "ನಾನು ನಾಳೆ ಬೇಟೆಗಾಗಿ ಹೋಗುವೆನು. ಬಹಳಷ್ಟು ಅಮೀರರು ನನ್ನೊಂದಿಗೆ ಹೊರಡುವರು. ನೀವು ಸಹ ನನ್ನ ಜೊತೆ ಬಂದರೆ ಒಳಿತು".

ಹೊರಡುವಿಕೆ :

ಮರುದಿನವೇ ಬಾದಶಾಹನು ಬೇಟೆಗಾಗಿ ಹೋದನು. ತಾಜುದ್ದೀನ ಹಾಗೂ ಐನುಲ್ ಮುಲ್ಕನ ಹೊರತಾಗಿ ಉಳಿದ ಎಲ್ಲ ಅಮೀರರು ಬಾದಶಾಹನ ಜೊತೆಗೆ ನಡೆದರು. ಮಹಾರಾಣಿ ಖೂನಜಾ ಹುಮಾಯೂವು ಬಹಳೇ ತಿಳಿವಳಿಕೆಯುಳ್ಳ ಹಾಗೂ ಬುದ್ಧಿವಂತ ಸ್ತ್ರೀಯಾಗಿದ್ದಳು. ಅವಳು ಬಾದಷಾಹ್‌ನು ಈ ತೆರನಾಗಿ ಅಮೀರರೊಂದಿಗೆ ಹೋಗುವುದು ಯುಕ್ತಿಯ ವಿರುದ್ಧವೆಂದು ಬಗೆದಳು. ಅದಕ್ಕಾಗಿ ಅವಳೂ ಸಹ ಕೆಲ ಸಂಗಡಿಗರೊಂದಿಗೆ ಸ್ವತಃ ಹೋದಳು.

ವಿಧಿಯಾಟ :

ಮಹಾರಾಣಿಯ ವಿಧಿಯು ಬೇರೆಯೇ ಬಗೆಯದಾಗಿತ್ತು. ಆ ಕಾರಣಕ್ಕೆ ಅವಳು ಸಮಯಕ್ಕಿಂತ ಮೊದಲೇ ತನ್ನ ಅಂತಃಪುರಕ್ಕೆ ಮರಳಿ ಬಂದಳು. ಎಲ್ಲ ಸೇವಕರು ತಮ್ಮ ತಮ್ಮ ಮನೆಗಳಿಗೆ ಹೊರಟು ಹೋದರು. ಶಾಹೀ ದರ್ಬಾರ್‌ದಲ್ಲಿ ಯಾರೂ ಇರಲಿಲ್ಲ. ಮುರ್ತುಜಾ ನಿಜಾಮಶಾಹನಿಗೆ ಯಾವಾಗ ಈ ವಿಷಯ ತಿಳಿಯಿತೋ ಆಗ ಅವನು ಎಲ್ಲಕ್ಕಿಂತ ಮೊದಲು ಹಬಶಿಖಾನನಿಗೆ ಯಾವನು ಬಹಳೇ ನಿರ್ದಯಿ ವ್ಯಕ್ತಿಯಾಗಿದ್ದನು ತನ್ನ ತಾಯಿಯ ಬಂಧನಕ್ಕಾಗಿ ಕಳುಹಿಸಿದನು. ಮತ್ತು ಅವನ ಹಿಂದೆ ಹಿಂದೆ ಇಖ್ಲಾಸಖಾನ ಹಾಗೂ ಫರ್ಹಾದಖಾನನಿಗೂ ತನ್ನ ವಿಶೇಷ ಸೈನ್ಯದೊಂದಿಗೆ ಕಳುಹಿಸಿದನು. ಅವರ ಹೊರತಾಗಿ ಇನ್ನಷ್ಟು ಅಮೀರರನ್ನು ಕಳುಹಿಸಿದನು.

ಹಬಶಿಖಾನ ಹಾಗೂ ಮಹಾರಾಣಿಯ ಭೇಟಿ :

ಹಬಶಿಖಾನನು ಮಹಾರಾಣಿಯ ಅಂತಃಪುರದ ಹೊಸ್ತಿಲ ಬಳಿ ತಲುಪಿದನು. ಮಹಾರಾಣಿಗೆ ಅವನ ಇಚ್ಛೆಯ ಅರಿವಾಯಿತು. ಅದಕ್ಕಾಗಿ ಅವಳು ಬಿಲ್ಲು, ಬಾಣ, ಬತ್ತಳಿಕೆ, ಕತ್ತಿ, ಖಡ್ಗದೊಂದಿಗೆ ತನ್ನನ್ನು ತಾನು ಸಿದ್ಧಗೊಳಿಸಿಕೊಂಡಳು. ಹಾಗೂ ಕುದುರೆಯ ಮೇಲೆ ಸವಾರಳಾದಳು. ಹಬಶಿಖಾನನೂ ಸಹ ಕುದುರೆಯ ಮೇಲೆ ಏರಿದನು. ಅದೇ ಸ್ಥಿತಿಯಲ್ಲಿ ಅವನು ಮಹಾರಾಣಿಯ ಬಳಿ ಬಂದನು. ಹಾಗೂ ಹೀಗೆಂದನು. "ಬಾದಶಾಹರು ಹೀಗೆ ಆಜ್ಞೆ ಮಾಡಿರುವರು. ತಾವೂ ಸಹ ಇತರ ಸ್ತ್ರೀಯರಂತೆ ಪರದೆಯ ಹಿಂದೆ ಕುಳಿತುಕೊಳ್ಳಬೇಕು ಹಾಗೂ ಆಡಳಿತದ ವಿಷಯದಲ್ಲಿ ತಲೆ ಹಾಕಬಾರದು".

ಮಹಾರಾಣಿಯ ಬಂಧನ :

ಇದನ್ನು ಕೇಳಿ ಖೂನಜಾ ಹುಮಾಯೂವು ಕೋಪೋದ್ರಿಕ್ತಳಾದಳು. ಹಾಗೂ ಅವಳು ಹೀಗೆಂದಳು. "ಓ ಗುಲಾಮನೇ ನಿನಗಿಷ್ಟು ಧೈರ್ಯವೇ ! ಇವತ್ತು ನೀನು ನನ್ನೊಡನೆ ಈ ರೀತಿಯಾಗಿ ದುರ್ವರ್ತನೆ ಹಾಗೂ ಧಾರ್ಷ್ಟ್ಯದಿಂದ ಮಾತನಾಡುತ್ತಿದ್ದಿಯೇ!!, ಹಬಶಿಖಾನನು ಮಹಾರಾಣಿಯ ಬಾಹುವನ್ನು ಹಿಡಿದು ಅವಳನ್ನು ಕುದುರೆಯಿಂದ ಕೆಳಗಿಳಿಸಲು ಪ್ರಯತ್ನಿಸಿದನು. ಮಹಾರಾಣಿಯು ತನ್ನ ಕತ್ತಿಯನ್ನು ಹೊರತೆಗೆದಳು ಹಾಗೂ ಹಬಶಿಖಾನನ ಮೇಲೆ ಎರಗಲು ಪ್ರಯತ್ನಿಸಿದಳು. ಹಬಶಿಖಾನನು ತನ್ನ ಪೂರ್ಣ ಶಕ್ತಿಯನ್ನು ಪ್ರಯೋಗಿಸಿ ಮಹಾರಾಣಿಯ ಕೈಯನ್ನು ತಿರುಚಿದನು. ಹಾಗೂ ಮಹಾರಾಣಿಯ ಕೈಯಿಂದ ಕತ್ತಿಯು ಕೆಳಗಡೆ ಬಿದ್ದಿತು. ಐನುಲ್‌ಮುಲ್ಕ ಹಾಗೂ ತಾಜಖಾನರು ಆ ಸ್ಥಳದಲ್ಲಿದ್ದರು. ಆದರೆ ಅವರು ತನ್ನ ಸಹೋದರಿಗೆ ಯಾವ ಸಹಾಯವನ್ನೂ ಮಾಡಲಿಲ್ಲ. ಮತ್ತು ತಮ್ಮ ತಮ್ಮ ಪ್ರಾಣ ಉಳಿಸಿಕೊಳ್ಳಲು ಅಲ್ಲಿಂದ ಓಡಿ ಹೋದರು. ಹಬಶಿಖಾನನು ಬಹಳೇ ಶಾಂತರೀತಿಯಲ್ಲಿ ಮಹಾರಾಣಿಯನ್ನು ಬಂಧಿಸಿ ಪಲ್ಲಕ್ಕಿಯಲ್ಲಿ ಕೂಡ್ರಿಸಿದನು. ಹಾಗೂ ಮುರ್ತುಜಾ ನಿಜಾಮನ ಬಳಿ ಕರೆದೊಯ್ದನು. ಬಾದಷಾಹ್‌ನು ತನ್ನ ತಾಯಿಯನ್ನು ಸೈನಿಕರ ವಶಕ್ಕೊಪ್ಪಿಸಿದನು.

ಶಾಹೀ ಪುರಸ್ಕಾರ :

ಈ ಘಟನೆಯ ನಂತರ ಮುರ್ತುಜಾ ನಿಜಾಮಶಾಹನು ಎಲ್ಲ ಅಮೀರರಿಗೆ ಶಾಹೀ ಪುರಸ್ಕಾರ ನೀಡಿ ಸನ್ಮಾನಿಸಿದನು. ಮುಲ್ಲಾ ಹುಸೈನ ತಬ್ರೇಜಿಗೆ 'ಖಾನೇಖಾನಾ' ಎಂಬ ಬಿರುದನ್ನು ಹಾಗೂ ನಾಯಕತ್ವವನ್ನು ನೀಡಿದನು. ಖಾಸಿಂಬೇಗ್‌ನ ಪುತ್ರನಾದ ಕಮಾಲುದ್ದೀನ ಹುಸೈನನನ್ನು ಯಾವನು ಗುಜರಾತಿನಿಂದ ಮರಳಿ ಬಂದಿದ್ದನು ಅವನಿಗೆ ಅವನ ತಂದೆಯ ಬಿರುದು ಬಾವಲಿಗಳಿಂದ ಪುರಸ್ಕರಿಸಿದನು. ಮುರ್ತುಜಾ ಖಾನನನ್ನು ಆಯ್ದ ಅಮೀರರ ಗುಂಪಿನಲ್ಲಿ ಸೇರಿಸಿಕೊಂಡನು. ಶಾಹಅಹ್ಮದನಿಗೆ ಬಿರುದು ನೀಡಲಾಯಿತು. ಹಾಗೂ ಐತಬಾರಖಾನನನ್ನು ಜಾಗೀರು, ಕುದುರೆಗಳ ಹಾಗೂ ಆನೆಗಳ ನಾಯಕನನ್ನಾಗಿಸಲಾಯಿತು.

ಐನುಲಮುಲ್ಕ ಹಾಗೂ ತಾಜಖಾನನನ್ನು ಬೆನ್ನಟ್ಟುವಿಕೆ :

ಮುರ್ತುಜಾ ನಿಜಾಮಶಾಹನು ತನ್ನ ಸೈನ್ಯದ ಒಂದು ತಂಡವನ್ನು ಐನುಲಮುಲ್ಕ ಹಾಗೂ ತಾಜಖಾನನನ್ನು ಹಿಂಬಾಲಿಸಲು ಕಳುಹಿಸಿದನು. ಐನುಲ್ ಮುಲ್ಕನನ್ನು ಗುಜರಾತಿನ ಸರಹದ್ದಿನ ಮೇಲೆ ಹಿಡಿಯಲಾಯಿತು. ಅವನನ್ನು ಬಂಧಿಸಿ ಅಹ್ಮದ್‌ನಗರಕ್ಕೆ ತರಲಾಯಿತು. ಆದರೆ ತಾಜಖಾನನು ಕೈಗೆ ಸಿಗಲಿಲ್ಲ. ಅವನು ಬೇಗಬೇಗನೇ ಪ್ರವಾಸವನ್ನು ಮುಂದುವರೆಸುತ್ತಾ ಇಬ್ರಾಹಿಂ ಕುತುಬಶಾಹ್‌ನ ಸೀಮೆಯಲ್ಲಿ ತಲುಪಿದನು.

ಹಾಗೂ ಹಿಂಬಾಲಿಸುವವರು ವಿಫಲರಾಗಿ ಹಾಗೂ ನಿರಾಶರಾಗಿ ಕೈಮಸೆಯುತ್ತಾ ಮರಳು ಬಂದರು.

ಕಿಶ್ವರಖಾನನ ವಿನಾಶ :

ಹೇಳಲಾಗುತ್ತದೆ. ಏನೆಂದರೆ ದಾಮಕಾಲೂವಿನಿಂದ ಮುರ್ತುಜಾ ನಿಜಾಮಶಾಹನು ಅಹ್ಮದ ನಗರಕ್ಕೆ ಮರಳಿಬಂದನು. ಮಹಾರಾಣಿ ಖೂನಜಾ ಹುಮಾಯೂವಿನ ಬಂಧನದ ಸುದ್ಧಿಯನ್ನು ಕೇಳಿ ವಿದೇಶಿಗರ ಒಂದು ತಂಡವು ಬಾದಶಾಹನ ಎದುರು ಹಾಜರಾಯಿತು. ಅವರ ಮೇಲೆ ಶಾಹೀ ಘನತೆಗೆ ತಕ್ಕಂತೆ ಹಾಗೂ ದಯೆಯ ಮಳೆ ಸುರಿಯಲಾಯಿತು. ಮುರ್ತುಜಾಖಾನನು ಕಿಶ್ವರಖಾನನ ವಿನಾಶವನ್ನು ಗೈಯ್ಯಲು ಅಚಲ ನಿರ್ಧಾರ ತೆಗೆದುಕೊಂಡನು ಹಾಗೂ ಈ ಉದ್ದೇಶದಿಂದ ದಾರವರ ಕೋಟೆಯ ಮೇಲೆ ದಾಳಿಮಾಡಿದನು. ಕಿಶ್ವರಖಾನನು ಇಬ್ರಾಹಿಂ ಕುತುಬಶಾಹನಿಂದ ಸಹಾಯ ಯಾಚಿಸಿದನು. ಕುತುಬಶಾಹನ ಸೈನ್ಯವು ಅವನ ಸಹಾಯಕ್ಕೆ ಬರುವ ಮೊದಲೇ ಕಿಶ್ವರಖಾನನು ಹತ್ಯೆಗೈಯಲ್ಪಟ್ಟನು. ಹಾಗೂ ಕೋಟೆಯ ಮೇಲೆ ವಿಜಯ ಸಾಧಿಸಲಾಯಿತು.

ದಾರೂರ ಕೋಟೆಯ ವಿಜಯದ ವಿವರ :

ದಾರೂರ ಕೋಟೆಯ ವಿಜಯದ ಉಲ್ಲೇಖವು ಬಹಳೇ ವಿಸ್ಮಯ ಹಾಗೂ ಅಚ್ಚರಿ ಹುಟ್ಟಿಸುವುದಾಗಿದೆ. ಅದಕ್ಕಾಗಿ ಅದರ ವಿವರವಾದ ವಿವರಣೆಯು ಓದುಗರಿಗೆ ವಿವರಿಸಲಾಗುವುದು. "ಮುರ್ತುಜಾ ನಿಜಾಮಶಾಹ ದಾರೂರನಿಂದ ಒಂದು ಕೋಸದ ಅಂತರದಲ್ಲಿ ನದಿಯ ದಡದಲ್ಲಿ ತಂಗಿದನು. ಅವನು ಅಲ್ಲಿ ಅಹ್ಮದಶಾಹ, ಮುರ್ತುಜಾಖಾನ ಹಾಗೂ ಇನ್ನಿತರ ವಿಶೇಷ ಸ್ನೇಹಿತರೊಂದಿಗೆ ಸ್ವತಃ ಅಡುಗೆ ಮಾಡತೊಡಗಿದನು. ಅದೇ ಸಮಯದಲ್ಲಿ ಕಿಶ್ವರಖಾನನ ಓರ್ವ ವ್ಯಕ್ತಿಯು ಮುರ್ತುಜಾಖಾನನ ಬಳಿ ಬಂದನು. ಹಾಗೂ ಅವನಿಗೆ ಒಂದು ಮುದ್ರೆಯೊತ್ತಿದ ಲಕೋಟೆಯನ್ನು ಕೊಟ್ಟನು. ಬಾದಶಾಹನು ಅದನ್ನು ತೆರೆದು ಓದಿದನು. ಪತ್ರದಲ್ಲಿಯ ದುರ್ನುಡಿಗಳನ್ನು ಓದಿ ಅವನು ಕೋಪೋದ್ರಿಕ್ತನಾದನು. ಕಣ್ಣು ಕೆಂಪಗಾಗಿಸಿಕೊಂಡು ಮುರ್ತುಜಾಶಾಹನು ತಕ್ಷಣ ಕುದುರೆಯನ್ನೇರಿದನು. ಹಾಗೂ ಹೀಗೆಂದನು. "ಎಲ್ಲಿಯವರೆಗೆ ನಾನು ಈ ಕೋಟೆಯನ್ನು ವಶಪಡಿಸಿಕೊಳ್ಳುವುದಿಲ್ಲವೋ ಅಲ್ಲಿಯವರೆಗೆ ಕುದುರೆಯಿಂದ ಇಳಿಯಲಾರೆ".

ಅಮೀರರ ಸಲಹೆ :

ಬಾದಶಾಹನು ದಾರೂರ ಕೋಟೆಯ ಸಮೀಪ ತಲುಪಿ ಕೋಟೆಯ ಬಾಗಿಲಿನತ್ತ ಸಾಗಿದನು. ಈ ಸಮಯದಲ್ಲಿ ಖಾನೆಖಾನಾನ, ಮುರ್ತುಜಾಖಾನ ಹಾಗೂ ಇನ್ನಿತರ ಗೌರವಾನ್ವಿತ ಅಮೀರರು ಬಾದಶಾಹನಲ್ಲಿ ವಿನಂತಿಸಿದರು. ಏನೆಂದರೆ "ಕೋಟೆಯನ್ನು

ವಶಪಡಿಸಿಕೊಳ್ಳುವ ಈ ರೀತಿಯು ಉಚಿತವಲ್ಲ. ಇನ್ನೂ ತಮ್ಮ ದೇಹದಿಂದ ಪ್ರವಾಸದಿಂದಾದ ಧೂಳಿಯೂ ದೂರವಾಗಿಲ್ಲ ಹಾಗೂ ಇಂಥ ಸುಭದ್ರ ಹಾಗೂ ಬಲಾಢ್ಯ ಕೋಟೆಯನ್ನು ಗೆಲ್ಲಲು ಸಿದ್ಧರಾಗಿದ್ದೀರಿ".

ಬಾದಶಾಹನ ಮನತಟ್ಟುವ ಉತ್ತರ :

ಮುರ್ತುಜಾ ನಿಜಾಮಶಾಹನಲ್ಲಿ ಕೋಟೆಯನ್ನು ಗೆದ್ದೇ ಗೆಲ್ಲುವ ಛಲವು ತಲೆ ತುಂಬಿಕೊಂಡಿತ್ತು. ಅವನು ಅಮೀರರ ಸಲಹೆಯನ್ನು ಗಂಭೀರವಾಗಿ ಪರಿಗಣಿಸಲಿಲ್ಲ ಹಾಗೂ ಹೀಗೆಂದನು. "ಒಂದು ವೇಳೆ ಅಲ್ಲಾಹುವಿನ ಸಹಾಯವು ಜೊತೆಗಿದ್ದರೆ ಕೋಟೆಯ ಬಾಗಿಲನ್ನು ಸಮೀಪಿಸಿ ಅದನ್ನು ಮುರಿದು ಹಾಕುವೆನು. ಹಾಗೂ ಕೋಟೆಯ ಒಳಗೆ ತಲುಪುವೆನು. ನನಗೆ ಯಾವುದೇ ಹಾನಿಯುಂಟಾಗುವುದಿಲ್ಲ. ಒಂದು ವೇಳೆ ನನ್ನ ಅಂತಿಮ ಸಮಯ ಬಂದಿದ್ದೇ ಆದರೂ ಸಹ ನನ್ನ ಕೊನೆಯ ಪ್ರಯತ್ನವನ್ನು ನನಗೆ ಅವಶ್ಯವಾಗಿ ಮಾಡಲೇಬೇಕಾಗಿದೆ. ಏಕೆಂದರೆ ನಾನು ಕೋಟೆಯಿಂದ ದೂರವಾಗಿಯೇ ಮೃತ್ಯುವಿನ ಕ್ರೂರ ಹಸ್ತಗಳಿಂದ ಉಳಿಯಲಾರೆನು".

ಕೋಟೆಯತ್ತ ಮುನ್ನುಗ್ಗುವಿಕೆ :

ಅಮೀರರು ಯಾವಾಗ ಇದನ್ನು ನೋಡಿದರೋ ಬಾದಶಾಹನು ತನ್ನ ನಿರ್ಧಾರದಿಂದ ಹಿಂದೆ ಸರಿಯಲಾರನು ಹಾಗೂ ಕೋಟೆಯನ್ನು ವಶಪಡಿಸಿಕೊಳ್ಳಲು ನಿರಂತರ ಪ್ರಯತ್ನ ಮಾಡುವನು ಎಂದಾಗ ಅವರು ಮುರ್ತುಜಾ ನಿಜಾಮಶಾಹನಿಗೆ ಶಸ್ತ್ರಾಸ್ತ್ರ ಧರಿಸಲು ವಿನಂತಿಸಿದರು. ಬಾದಶಾಹನು ಅದನ್ನೂ ಕೂಡ ನಿರಾಕರಿಸಿದನು. ಇದರ ನಂತರ ಅಮೀರರು ಅವನೊಂದಿಗೆ ಹೀಗೆ ಹೇಳಿದರು. "ಶಸ್ತ್ರಾಸ್ತ್ರವನ್ನು ಮೈಮೇಲೆ ಧರಿಸುವುದು ಹಜ್ರತ್ ಮುಹಮ್ಮದ ಪೈಗಂಬರ(ಸ) ರ ಚರ್ಯೆಯಾಗಿದೆ". ಇದನ್ನು ಕೇಳಿ ಬಾದಶಾಹನು ಕೂಡಲೇ ಶಸ್ತ್ರಾಸ್ತ್ರಗಳನ್ನು ಧರಿಸಿದನು. ಹಾಗೂ ಬಿಲ್ಲು ಬಾಣಗಳನ್ನು ಕೈಯಲ್ಲಿ ತೆಗೆದುಕೊಂಡು ಕೋಟೆಯತ್ತ ಸಾಗಿದನು.

ಮದ್ದುಗುಂಡಿನ ಸುರಿಮಳೆ :

ಇದೇ ಸಮಯದಲ್ಲಿ ಕೋಟೆಯೊಳಗಿನವರು ಗೋಪುರಗಳ ಮೇಲಿನಿಂದ ಮದ್ದುಗುಂಡಿನ ಸುರಿಮಳೆ ಪ್ರಾರಂಭಿಸಿದರು. ಒಂದೇ ಸಲಕ್ಕೆ ಎರಡು ಮೂರು ಸಾವಿರ ತೋಪುಗಳನ್ನು ಚಲಾಯಿಸಲಾಗುತ್ತಿತ್ತು. ಈ ತೆರನಾಗಿ ಅಸಂಖ್ಯ ಜನರನ್ನು ಕುದುರೆ, ಆನೆಗಳನ್ನು ಸಾವಿನ ದವಡೆಗೆ ಸಿಲುಕಿಸಲಾಗುತ್ತಿತ್ತು. ರಣಭೂಮಿಯು ಪ್ರಳಯ ಭೂಮಿಯ ಸ್ವರೂಪ ಪಡೆಯಿತು. ಆದರೂ ಸಹ ಮುರ್ತುಜಾ ನಿಜಾಮಶಾಹನು ಮರಳಲಿಲ್ಲ. ಅವನು ಹಾಗೆಯೇ ಮುನ್ನುಗ್ಗುತ್ತಿದ್ದನು. ಎಲ್ಲಿಯವರೆಗೆಂದರೆ ಅವನಿಗೆ ಹಾಗೂ ಕೋಟೆಯ ಗೋಡೆಗೆ ಕೇವಲ ಐವತ್ತು ಅಡಿಗಳ ಅಂತರ ಉಳಿದಿತ್ತು.

ಕೋಟೆಯವರ ಮೌನ :

ಈ ಸಮಯದಲ್ಲಿ ನಿಜಾಮಶಾಹೀ ಸೈನ್ಯವು ಬಾಣಗಳನ್ನು ಬಿರುಸಾಗಿ ಚಲಾಯಿಸತೊಡಗಿತು. ಪರಸ್ಪರರಲ್ಲಿ ಭೀಕರ ರೂಪದ ಯುದ್ಧವು ಪ್ರಾರಂಭವಾಯಿತು. ಈ ಗೊಂದಲದಲ್ಲಿ ಬಾದಶಾಹನ ಸಮೀಪದಿಂದ ಎರಡುಮೂರು ಗುಂಡುಗಳು ಹಾದು ಹೋದವು. ಆದರೆ ದೇವನ ಕೃಪೆಯಿಂದ ಅವನಿಗೆ ಯಾವುದೇ ರೀತಿಯ ಹಾನಿಯುಂಟಾಗಲಿಲ್ಲ. ಈ ಪ್ರತಿಕೂಲ ಪರಿಸ್ಥಿತಿಯಲ್ಲಿಂದ ಸಹ ಯಾವುದೇ ವ್ಯಕ್ತಿಗೆ ಧೈರ್ಯವುಂಟಾಗುತ್ತಿರಲಿಲ್ಲ. ಏನೆಂದರೆ ಅವನು ಬಾದಶಾಹನನ್ನು ಮರಳಲು ವಿನಂತಿಸಿಕೊಳ್ಳುತ್ತಿದ್ದನು. ಅದಕ್ಕಾಗಿ ಎರಡೂ ಕಡೆಯಿಂದ ವೈರಿಗಳನ್ನು ಒಬ್ಬರನ್ನೊಬ್ಬರು ಸೋಲಿಸಲು ಪ್ರಯತ್ನ ನಡೆಯಿತು. ಆಕಸ್ಮಿಕವಾಗಿ ಕೋಟೆಯ ಒಳಗಿನವರ ಧ್ವನಿ ಉಡುಗಿತು. ಎಲ್ಲರೂ ಆಶ್ಚರ್ಯಚಕಿತರಾದರು. ಇದು ಎಂಥಹ ಮೌನವಿದೆ ?

ಕಿಶ್ವರನ ಮೃತ್ಯು :

ನಿಜಾಮಶಾಹಿಗಳಿಗೆ ಕೋಟೆಯ ಒಳಗಿನವರ ಮೌನದಿಂದ ಬಹಳೇ ಆಶ್ಚರ್ಯವುಂಟಾಯಿತು. ಎಲ್ಲಿಯ ಆ ಯುದ್ಧದ ಗದ್ದಲ, ಎಲ್ಲಿಯ ಈ ಸಾವಿನ ಸೂತಕದ ಮೌನ, ಕೆಲ ಜನರು ಕೋಟೆಯ ಕಿಡಕಿಗಳನ್ನು ತೆರೆದು ಕೋಟೆಯಲ್ಲಿ ಪ್ರವೇಶಿಸಿದರು. ಅವರು ಕೋಟೆಯ ಒಳಗೆ ಹೋಗಿ ನೋಡಿದಾಗ ಕೋಟೆಯು ಬರಿದಾಗಿತ್ತು. ಎಲ್ಲರೂ ಓಡಿ ಹೋಗಿದ್ದಾರೆ. ಒಂದು ಕಡೆ ಕಿಶ್ವರಖಾನನ ಶವವು ಬಿದ್ದಿದೆ. ಕಿಶ್ವರಖಾನನ ಮೃತ್ಯುವು ಒಂದು ಬಾಣದ ನೆಡುವಿಕೆಯಿಂದ ಉಂಟಾಗಿತ್ತು. ಆ ಜನರು ಅವನ ರುಂಡವನ್ನು ಮುಂಡದಿಂದ ಬೇರ್ಪಡಿಸಿ ಕೋಟೆಯ ಒಂದು ಸಜ್ಜಾಗೋಪುರಕ್ಕೆ ಎತ್ತರಕ್ಕೆ ತೂಗಿ ಬಿಟ್ಟರು. ಮುರ್ತುಜಾ ನಿಜಾಮನು ವೈರಿಯ ರುಂಡದ ಈ ಸ್ಥಿತಿಯನ್ನು ನೋಡಿ ಆನಂದತುಂದಿಲನಾದನು. ಹಾಗೂ ದೇವನಿಗೆ ಧನ್ಯವಾದ ಅರ್ಪಿಸಿದನು.

ಆದಿಲಶಾಹಿ ಅಮೀರರ ದಾಳಿ :

ಇತಿಹಾಸಕಾರರ ಉಲ್ಲೇಖವಿದೆ. ಕಿಶ್ವರಖಾನನ ಅಂತ್ಯದ ಬಳಿಕ ಪ್ರಸಿದ್ಧ ಆದಿಲ್‌ಷಾಹಿ ಅಮೀರರು ಐನುಲ್‌ಮುಲ್ಕ ಹಾಗೂ ನೂರಖಾನರು ಹತ್ತು ಹನ್ನೆರಡು ಸಾವಿರ ಸವಾರರ ಸೈನ್ಯವೊಂದನ್ನು ತೆಗೆದುಕೊಂಡು ನಿಜಾಮಶಾಹೀ ಪ್ರಾಂತ್ಯದಲ್ಲಿ ಪ್ರವೇಶಿಸಿದರು. ಹಾಗೂ ವಿನಾಶವನ್ನು ಉಂಟು ಮಾಡಲು ಅಹ್ಮದನಗರದತ್ತ ಸಾಗಿದರು. ಮುರ್ತುಜಾ ನಿಜಾಮನು ಈ ಅಮೀರರನ್ನು ಎದುರಿಸಲು ಫರ್ಹಾದಖಾನ, ಇಖ್ಲಾಸಖಾನರನ್ನು ಐದು ಆರು ಸಾವಿರ ಸವಾರರೊಂದಿಗೆ ಖ್ವಾಜಾ ಮೀರಕ ದಬೀರ್ ಅಸ್ಫಹಾನಿಯ ಮೇಲ್ವಿಚಾರಣೆಯಲ್ಲಿ ಕಳುಹಿಸಿದನು. ಈ ತಂಡವು ವೈರಿಯ ಸಮೀಪ ತಲುಪಿತು.

ಖ್ವಾಜಾ ಅಸ್ಫಹಾನಿಯ ಅಮೀರರನ್ನು ಮುಂದೆ ಕಳುಹಿಸಿದನು. ಹಾಗೂ ಸ್ವತಃ ಬಿಡಾರದಲ್ಲಿ ಕುಳಿತುಕೊಂಡನು.

ರಣಭೂಮಿಯಲ್ಲಿ ವೈರಿಯ ಸೋಲು :

ಪರಸ್ಪರರು ತಮ್ಮ ತಮ್ಮ ಸೈನ್ಯವನ್ನು ಸಿದ್ಧಗೊಳಿಸಿದರು. ಎರಡೂ ಕಡೆಯಿಂದ ಯುದ್ಧ ಪ್ರಾರಂಭವಾಯಿತು. ಖ್ವಾಜಾ ಅಸ್ಫಹಾನಿಯೂ ಒಂದು ಉನ್ನತ ರೀತಿಯ ಉಪಾಯ ಮಾಡಿದನು. ಅವನು ನಲ್ವತ್ತು ಶಾಹೀ ಆನೆಗಳನ್ನು, ಹಸಿರು ಧ್ವಜವನ್ನು ಹಾಗೂ ವಿಶೇಷ ಸೈನ್ಯದ ನಾಲ್ಕುನೂರು ಸೈನಿಕರನ್ನು ರಣಭೂಮಿಯಲ್ಲಿ ಮುನ್ನುಗ್ಗಿಸಿದನು. ಹಾಗೂ ಹೀಗೆ ಪ್ರಸಿದ್ಧಗೊಳಿಸಿದನು. ಏನೆಂದರೆ ಬಾದಶಾಹನು ಸ್ವತಃ ರಣಭೂಮಿಯಲ್ಲಿ ಯುದ್ಧಕ್ಕಿಳಿದಿದ್ದಾನೆ. ಐನುಲಮುಲ್ಕ ಹಾಗೂ ನೂರಖಾನರು ಈ ಸುದ್ದಿಯನ್ನು ಸತ್ಯವೆಂದೇ ತಿಳಿದರು. ಹಾಗೂ ಕಾಲಿಗೆ ಬುದ್ಧಿ ಹೇಳಿದರು. ಖ್ವಾಜಾ ಅಸ್ಫಹಾನಿಯು ಅವರಿಬ್ಬರನ್ನು ಹಿಂಬಾಲಿಸಿದನು. ಐನುಲ್‌ಮುಲ್ಕ ಕೊಲ್ಲಲ್ಪಟ್ಟನು. ಹಾಗೂ ನೂರಖಾನ ಜೀವಂತ ಸೆರೆಯಾದನು. ಅವನನ್ನು ದಾರವರ್‌ದ ಸಮೀಪ ಬಾದಷಾಹ್‌ನ ಎದುರು ತರಲಾಯಿತು.

ಬಿಜಾಪುರದ ವಿಜಯದ ನಿಶ್ಚಯ :

ಇದೇ ಕಾಲದಲ್ಲಿ ಕುತುಬಶಾಹನು ನಿಜಾಮಶಾಹನೊಂದಿಗೆ ಸ್ನೇಹ ಸಂಬಂಧವನ್ನು ಬೆಳೆಸಿದನು. ಈ ಈರ್ವರೂ ಆಡಳಿತಗಾರರು ಪರಸ್ಪರರಲ್ಲಿ ಐಕ್ಯತೆ ಮೂಡಿಸಿಕೊಂಡು ಒಗ್ಗಟ್ಟಾಗಿ ಬಿಜಾಪುರವನ್ನು ಗೆಲ್ಲಲು ನಿರ್ಧರಿಸಿದರು. ಹಾಗೂ ಈ ಉದ್ದೇಶದಿಂದ ಆದಿಲಶಾಹಿ ಸರಹದ್ದಿನಲ್ಲಿ ಪ್ರವೇಶ ಮಾಡಿದರು. ಆದಿಲ್‌ಷಾಹ್‌ನ ಪ್ರಧಾನಮಂತ್ರಿ ಶಾಹ ಅಬುಲಹಸನನು ಸೈಯದಮೀರತಖೀ ಸಜ್ಜವಾರಿಯನ್ನು ಮುರ್ತುಜಾ ನಿಜಾಮಶಾಹನ ಸೇವೆಯಲ್ಲಿ ಕಳುಹಿಸಿ ಈ ಸಂದೇಶವನ್ನು ನೀಡಿದನು. "ನಾನು ನಿಜಾಮಶಾಹೀ ವಂಶದ ಹಿತೈಷಿಯಾಗಿರುವೆನು. ನನ್ನ ವಿಧೇಯತೆಯು ಜಗಜ್ಜಾಹೀರವಿದೆ. ಇದಕ್ಕಾಗಿ ಯಾವುದೇ ಸಾಕ್ಷಿಯು ಅಗತ್ಯವಿಲ್ಲ. ನಾನು ನಿಮ್ಮನ್ನು ಭೇಟಿ ಮಾಡಬಯಸುತ್ತೇನೆ. ಅದಕ್ಕಾಗಿ ನನ್ನ ನಮ್ರ ವಿಚಾರಗಳನ್ನು ಮುಂದಿಡಬಯಸುತ್ತೇನೆ. ಒಂದುವೇಳೆ ತಾವು ಈ ನಂಬಿಗಸ್ತನಿಗೆ ತಮ್ಮ ಭೇಟಿಯ ಅವಕಾಶವನ್ನು ಕಲ್ಪಿಸಿದರೆ ತಮಗೆ ಆಭಾರಿಯಾಗುವೆನು."

ಮುರ್ತುಜಾ ನಿಜಾಮಶಾಹ ಹಾಗೂ ಶಾಹ ಅಬುಲ್ ಹಸನನ ಭೇಟಿ :

ನಿಜಾಮಶಾಹನು ಈ ವಿನಂತಿಯ ಉತ್ತರವಾಗಿ ಹೀಗೆಂದನು. "ಶಾ ಅಬುಲ ಹಸನರು ನಮ್ಮ ಪೀರ್‌ರ ಪುತ್ರರಾಗಿದ್ದಾರೆ. ಒಂದು ವೇಳೆ ಅವರು ಇಲ್ಲಿ ಆಗಮಿಸಿದ್ದಾರೆಂದರೆ ನಾವು ನಮ್ಮ ಎಲ್ಲ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳುವೆವು". ಷಾ ಅಬುಲಹಸನರು ಖಾನೆಖಾನಾನನ ಮಧ್ಯಸ್ಥಿಕೆಯಿಂದ ವಾಕದರಿಯಲ್ಲಿ ಮುರ್ತುಜಾ

ನಿಜಾಮಶಾಹನೊಂದಿಗೆ ಭೇಟಿಯಾದರು. ಶಾಹ ಸಾಹೇಬರು ನಿಜಾಮಶಾಹನ ಸನ್ನಿಧಿಗೆ ಅಮೂಲ್ಯವಾದ ಕೊಡುಗೆಗಳನ್ನು ಅರ್ಪಿಸಿದರು. ಹಾಗೂ ಹೀಗೆಂದರು. ತಮ್ಮ ದಿವಂಗತ ತಂದೆಯವರು ಈ ಮಾತನ್ನು ಉತ್ತಮ ರೀತಿಯಲ್ಲಿ ತಿಳಿದುಕೊಂಡಿದ್ದರು. ಏನೆಂದರೆ ಆದಿಲಶಾಹೀ ವಂಶಸ್ಥರೊಂದಿಗೆ ಸ್ನೇಹವಿರಿಸಿಕೊಳ್ಳುವುದು ಯಾವುದೇ ರೀತಿಯ ಹಾನಿಗೆ ಕಾರಣವಾಗುವುದಿಲ್ಲ. ಅವರು ಆದಿಲಶಾಹೀ ಆಡಳಿತಗಾರರೊಂದಿಗೆ ಸ್ನೇಹಸಂಬಂಧ ಬೆಳೆಸಿ ರಾಮರಾಜನಂಥಹ ಬಲಾಢ್ಯ ರಾಜನಿಗೆ ಸೋಲಿಸಿದ್ದರು. ಆ ವೇಳೆ ಕೆಲವು ದೂರದರ್ಶಿಯಿಲ್ಲದ ಹಾಗೂ ಬುದ್ಧಿಹೀನರಾದ ಸೇವಕರ ಕಾರಣದಿಂದಾಗಿ ವೈರತ್ವ ಉಂಟಾಗಿದ್ದರೆ ತಮ್ಮ ಶೂರತನದಿಂದ ಹಾಗೂ ಸಮಸ್ಯೆಗಳನ್ನು ನಿವಾರಿಸುವ ಸಾಮರ್ಥ್ಯದಿಂದಾಗಿ ಅವು ಚಿಟಿಕೆ ಹೊಡೆಯುವುದರಲ್ಲಿ ಬಗೆಹರಿಯುವವು. ತಾವು. ಇಬ್ರಾಹಿಂ ಕುತುಬಶಾಹನ ತೋರಿಕೆಯ ಸ್ನೇಹವನ್ನು ನಂಬಿ ಆದಿಲಶಾಹನ ಎದುರಾಳಿಯಾಗಲು ಒಪ್ಪಿದ್ದೀರಿ. ಆದರೆ ಈ ಮಾತು ತಮ್ಮ ಬುದ್ಧಿವಂತಿಕೆ ಹಾಗೂ ಮನುಷ್ಯರನ್ನು ನೋಡಿ ಅರಿಯುವ ಯುಕ್ತಿಯಿಂದ ದೂರವಿದೆ.

ಕುತುಬ್‌ಷಾಹ್‌ನ ವಂಚಕ ಸ್ವಭಾವ :

ಅದರ ನಂತರ ಷಾ ಅಬುಲ್ ಹಸನನು ಕುತುಬಶಾಹನ ಒಂದು ಪತ್ರ ಯಾವುದು ಆದಿಲಶಾಹನ ಹೆಸರಿನಲ್ಲಿ ಬರೆಯಲ್ಪಟ್ಟಿತ್ತು. ಈ ವೇಳೆ ಶಾ ಸಾಹೇಬರ ಬಳಿಯಲ್ಲಿತ್ತು. ಮುರ್ತುಜಾ ನಿಜಾಮಶಾಹನಿಗೆ ತೋರಿಸಿದರು. ಈ ಪತ್ರದಲ್ಲಿ ಕುತುಬಶಾಹನು ಆದಿಲಶಾಹನೊಂದಿಗೆ ಸ್ನೇಹ ಹಾಗೂ ಸದ್ವರ್ತನೆಯ ಭಾವನೆ ಪ್ರಕಟಿಸಿದ್ದನು. ಶಾ ಸಾಹೇಬರು ಮುರ್ತುಜಾ ನಿಜಾಮರೊಂದಿಗೆ ಹೀಗೆಂದರು. "ಈ ವೇಳೆಯಲ್ಲಿ ಕುತುಬಶಾಹನು ನಿಮ್ಮೊಂದಿಗೆ ತೋರಿಕೆಯ ರೂಪದಲ್ಲಿ ಜೊತೆಗಿದ್ದಾನೆ. ಆದರೆ ಒಳಗೊಳಗೆ ಅವನು ಬೇರೆಯವರೊಂದಿಗೆ ಸಂಬಂಧವಿರಿಸಿಕೊಂಡಿದ್ದಾನೆ." ಅದರ ನಂತರ ಶಾ ಸಾಹೇಬರು ತನ್ನ ಹೇಳಿಕೆಯನ್ನು ಸಮರ್ಥಿಸುವುದಕ್ಕಾಗಿ ಸಾಕ್ಷಿಗಳನ್ನು ಹಾಜರುಪಡಿಸಿದರು. ಖಾನೆಖಾನಾನನೂ ಸಹ ಶಾಸಾಹೇಬರ ಜೊತೆ ಧ್ವನಿಗೂಡಿಸಿದನು.

ಕುತುಬಶಾ ಪರಾರಿಯಾದದ್ದು :

ಮುರ್ತುಜಾ ನಿಜಾಮಶಾಹನು ಇದೆಲ್ಲವನ್ನು ನೋಡಿ ವಿಹ್ವಲಗೊಂಡನು. ಅವನು ಅದೇ ವೇಳೆ ಆಜ್ಞೆ ನೀಡಿದನು. ಕುತುಬಶಾಹನನ್ನು ಎಚ್ಚರಿಕೆ ನೀಡಬೇಕು. ಇಬ್ರಾಹಿಂ ಕುತುಬಶಾಹನಿಗೆ ಯಾವಾಗ ಈ ವಿಷಯ ಗಮನಕ್ಕೆ ಬಂದಿತೋ ಆಗ ಅವನು ತನ್ನ ಜೀವವನ್ನು ಉಳಿಸಿಕೊಂಡು ರಣಭೂಮಿಯಿಂದ ಪರಾರಿಯಾದನು ಮತ್ತು ಗೊಲ್ಕೊಂಡಾದ ಕಡೆ ಹೊರಟು ಹೋದನು. ನಿಜಾಮಷಾಹೀ ಸೈನಿಕರು ಕುತುಬಶಾಹನ ತಂಗುದಾಣವನ್ನು ನೆಲ ಸಮಗೊಳಿಸಿ ಅದನ್ನು ವಿನಾಶ ಮಾಡಿದರು. ಹಾಗೂ ಅವನನ್ನು ಹಿಂಬಾಲಿಸಿದರು. ಹಾಗೂ ಸಾಗುವ ಎಲ್ಲ ಹಾದಿಗಳಲ್ಲಿ ಎಲ್ಲವನ್ನು ಹಾಳು ಮಾಡುತ್ತ ಸಾಗಿದರು.

ಯುವರಾಜ ಅಬ್ದುಲಖಾದಿರನ ಸಲಹೆ :

ಕುತುಬಶಾಹನ ಜೇಷ್ಠ ಪುತ್ರನಾದ ಯುವರಾಜ ಅಬ್ದುಲಖಾದಿರನು ಯಾವಾಗ ವೈರಿಗಳ ಮೇಲುಗೈ ಕಂಡನೋ ಆಗ ಅವನು ತನ್ನ ತಂದೆಯಿಂದ ಹೀಗೆಂದನು. "ನಿಜಾಮಶಾಹೀ ಸೈನ್ಯವು ಆಗಲೇ ಬಹಳಷ್ಟು ಮೇಲುಗೈ ಸಾಧಿಸಿದೆ ಹಾಗೂ ತನ್ನ ಈ ವಿನಾಶಗೈಯ್ಯುವ ಕಾರ್ಯದಿಂದ ವಿಮುಖರಾಗುವುದಿಲ್ಲ. ಒಂದು ವೇಳೆ ತಾವು ಅನುಮತಿ ನೀಡಿದರೆ ನಾನು ಒಂದು ಬಿಡಾರದಲ್ಲಿ ಅಡಗಿ ಕುಳಿತುಕೊಳ್ಳುವೆನು ಹಾಗೂ ಹಿಂಬಾಲಿಸುವ ವೈರಿಗಳನ್ನು ಹಿಂದಿನಿಂದ ಬಂದು ದಾಳಿ ಮಾಡುವೆನು. ನನ್ನ ಬಳಿ ಈ ಉಪಾಯುವು ತುಂಬಾ ಉತ್ತಮವಾದುದಾಗಿದೆ. ತಮ್ಮ ಅಭಿಪ್ರಾಯವೇನು?"

ಯುವರಾಜ ಅಬ್ದುಲಖಾದಿರನ ಮೃತ್ಯು :

ಕುತುಬಶಾಹನು ಬೇಗಬೇಗನೆ ಗುರಿಯನ್ನು ತಲುಪಬಯಸಿದ್ದನು. ಅವನು ತನ್ನ ಪುತ್ರನಿಗೆ ಯಾವುದೇ ವಿಧವಾದ ಉತ್ತರ ನೀಡಲಿಲ್ಲ ಹಾಗೂ ಗೋಲ್ಕೋಂಡಾ ತಲುಪಿ ಅವನಿಗೆ ಈ ವಿಚಾರವು ಮೂಡಿ ಬಂದಿತು. ಎಲ್ಲಿ ಯುವರಾಜನ ಶೂರತನದಿಂದ ಬೇರೊಂದು ಅಪಾಯವು ಉಂಟಾಗಬಾರದು. ಈ ವಿಚಾರದಿಂದ ಅವನು ಅಬ್ದುಲಖಾದಿರನನ್ನು ಒಂದು ಕೋಟೆಯಲ್ಲಿ ಬಂಧಿಸಿಟ್ಟನು. ಕೆಲ ದಿನಗಳ ನಂತರ ಅದೇ ಭಯದಿಂದ ಕುತುಬಶಾಹನು ತನ್ನ ವಿಧೇಯ ಪುತ್ರನನ್ನು ಹತ್ಯೆಗೈದನು. ಶಾ ಅಬುಲಹಸನನು ಈ ದೂತನ ಕಾರ್ಯವನ್ನು ಅತ್ಯುತ್ತಮ ರೀತಿಯಲ್ಲಿ ದಕ್ಷತೆಯಿಂದ ಪೂರ್ಣಗೊಳಿಸಿದನು. ಅವನು ಅಲಿ ಆದಿಲಶಾಹನ ಕಡೆಯಿಂದ ಮುರ್ತುಜಾ ನಿಜಾಮಶಾಹನ ಸ್ನೇಹ ಹಾಗೂ ಸೌಹಾರ್ದ ಸಂಬಂಧಗಳನ್ನು ಸುಧಾರಿಸುವ ನಿಟ್ಟಿನಲ್ಲಿ ಚರ್ಚಿಸಿದನು. ಹಾಗೂ ಅವನಿಂದ ಪ್ರಮಾಣ ಪಡೆದನು. ಅದರ ನಂತರ ಮುರ್ತುಜಾ ನಿಜಾಮನು ಅಹ್ಮದನಗರಕ್ಕೆ ಮರಳಿದನು.

ಮುಲ್ಲಾ ಇನಾಯತುಲ್ಲಾನ ಕೊಲೆ :

ಮುಲ್ಲಾ ಇನಾಯತುಲ್ಲನಿಂದ ಖಾನೆಖಾನಾನ ಬಹಳ ಹೆದರುತ್ತಿದ್ದನು. ಅವನಿಗೆ ಈ ಭಯವಿತ್ತು ಏನೆಂದರೆ ಮುಲ್ಲಾ ಇನಾಯತುಲ್ಲಾನನ್ನು ಮತ್ತೊಮ್ಮೆ ನಾಯಕತ್ವದ ಹುದ್ದೆಯನ್ನು ನೀಡಬಹುದು. ಈ ವಿಚಾರದಿಂದ ಖಾನೆಖಾನಾನನು ಬಾದಶಾಹನನ್ನು ಆಶ್ಚರ್ಯದಾಯಕ ಹಾಗೂ ವಿಸ್ಮಯಕಾರಿ ಸುದ್ದಿಗಳನ್ನು ಹೇಳಿ ಅವನನ್ನು ಮುಲ್ಲಾ ಇನಾಯತುಲ್ಲಾನ ಕುರಿತು ಸಂಶಯ ಮೂಡುವಂತೆ ಮಾಡಿದನು. ಅದರ ನಂತರ ಖಾನೆ ಖಾನಾನನು ಮುಲ್ಲಾ ಇನಾಯತುಲ್ಲಾಹನ ಕೊಲೆಯ ಆದೇಶವನ್ನು ಪಡೆದನು. ಹಾಗೂ ಆ ಮುಗ್ಧನನ್ನು ಮೃತ್ಯುವಿನ ಉಡಿಯಲ್ಲಿ ಮಲಗಿಸಿದನು.

ಇಬ್ರಾಹಿಂ ಕುತುಬಶಾಹನ ಮುನಿಸು :

ಮುಲ್ಲಾ ಇನಾಯತುಲ್ಲಾನ ಕೊಲೆಯ ಕಾರಣದಿಂದ ಒಂದು ಕಡೆ ಎಲ್ಲ ಪ್ರಜೆಗಳು ಖಾನೆ ಖಾನಾನನ್ನು ದ್ವೇಷಿಸತೊಡಗಿದರು. ಮತ್ತೊಂದೆಡೆ ಇಬ್ರಾಹಿಂ ಕುತುಬಶಾಹನು ಬಹಳೇ ವಿಹ್ವಲಿತನಾದನು. ಅವನು ಮುರ್ತುಜಾ ನಿಜಾಮಶಾಹನಿಗೆ ಈ ಸಾರಾಂಶವುಳ್ಳ ಪತ್ರ ಬರೆದನು: "ನನಗೆ ತನ್ನ ಆತ್ಮೀಯ ಸಹೋದರನಿಂದ ಯಾವ ಕಾರಣಕ್ಕೂ ಇಂಥ ನಿರೀಕ್ಷೆಯಿರಲಿಲ್ಲ. ಕ್ಷೋಭೆ ಹರಡುವವರ ಹಾಗೂ ಕೀಟಲೆ ಮಾಡುವವರ ಮಾತುಗಳಿಗೆ ಕಿವಿಗೊಟ್ಟು ತಾವು ನನ್ನೊಂದಿಗೆ ಈ ತೆರನಾಗಿ ವರ್ತಿಸುವಿರಿ, ತಾವು ನನ್ನ ಆನೆಗಳನ್ನು ಬಂಧಿಸಿಟ್ಟಿದ್ದೀರಿ, ಆದರೆ ಅದರ ಕುರಿತು ನನಗೆ ಎಳ್ಳಷ್ಟೂ ದುಃಖವಿಲ್ಲ. ತಾವು ಈ ಆನೆಗಳನ್ನು ನನ್ನ ಕಡೆಯಿಂದ ಮೌಲ್ಯರಹಿತ ಕಾಣಿಕೆಯಾಗಿ ಸ್ವೀಕರಿಸಿರಿ. ನನಗೆ ನಿಜವಾಗಿಯೂ ಆಶ್ಚರ್ಯ ಹಾಗೂ ವಿಷಾದವುಂಟಾಗಿದೆ. ಈ ವಿಷಯದ ಮೇಲೆ ನಾನು ಸಖೇದಾಶ್ಚರ್ಯ ಹೊಂದಿದ್ದೇನೆ. ಯಾವಾಗ ನಿಮ್ಮ ದರ್ಬಾರದಲ್ಲಿ ಒಬ್ಬರಿಗಿಂತ ಒಬ್ಬರು ಕುಲೀನರಾದ ಹಾಗೂ ಸಜ್ಜನರಾದ ಅಮೀರರಿದ್ದಾರೆ. ಆದರೆ ತಾವು ಶಸ್ತ್ರಚಿಕಿತ್ಸಕನಾದ ಉಸ್ತಾದನುರಿಯ ಮಗದಲ್ಲಿ ಅದೇನು ಗುಣಗಳನ್ನು ನೋಡಿ ನಾಯಕತ್ವದ ಹುದ್ದೆಯನ್ನು ನೀಡಿದಿರಿ.

ಖಾನೇಖಾನಾನನ ವಜಾ :

ಮುರ್ತುಜಾ ನಿಜಾಮನು ಯಾವಾಗ ಇಬ್ರಾಹಿಂ ಕುತುಬಶಾಹನ ಪತ್ರ ಓದಿದನೋ ಅವನಿಗೆ ಈ ವಿಚಾರ ಬಂದಿತು. ಎಲ್ಲಿ ಕುತುಬ್‌ಷಾಹನು ಆದಿಲಶಾಹನೊಂದಿಗೆ ಸೇರಿ ತನ್ನ ಆನೆಗಳನ್ನು ಬಿಡಿಸಿಕೊಳ್ಳಲು ಯಾವುದೇ ಉಪಾಯ ಹೂಡದಿರಲಿ. ಮುರ್ತುಜಾ ನಿಜಾಮನು ತಕ್ಷಣ ಖಾನೇಖಾನಾನನನ್ನು ವಜಾಗೊಳಿಸಿ ಅವನ ಹುದ್ದೆಯಿಂದ ಕೆಳಗಿಳಿಸಿದನು. ಹಾಗೂ ಅವನ ಸ್ಥಾನದಲ್ಲಿ ಶಾ ಜಮಾಲುದ್ದೀನ ಹುಸ್ಯೆನನನಿಗೆ ರಾಜಪ್ರತಿನಿಧಿತ್ವದ ಹುದ್ದೆಯನ್ನು ನೀಡಿದನು.

ರೇಕನದಾ ಕೋಟೆಯ ಮೇಲೆ ದಾಳಿ :

ಈ ಕಾಲದಲ್ಲಿ ಫಿರಂಗಿಗಳು ಸಹ ಕ್ಷೋಭೆಯನ್ನು ಹರಡತೊಡಗಿದರು. ಹಾಗೂ ಅವರು ತಮ್ಮ ರೇಕನದಾ ಕೋಟೆಯ ಭದ್ರತೆ ಹಾಗೂ ಬಲಾಢ್ಯತೆಯ ಮೇಲೆ ಬಹಳೇ ಗರ್ವಿಷ್ಠರಾದರು ಹಾಗೂ ಮುಸಲ್ಮಾನರನ್ನು ನಿಶಕ್ತ ಹಾಗೂ ನಿರ್ಬಲವೆಂದು ಬಗೆದು ಅವರಿಗೆ ತೆರತೆರನಾಗಿ ನಷ್ಟವುಂಟು ಮಾಡತೊಡಗಿದರು. ಮುರ್ತುಜಾ ನಿಜಾಮನು ಯಾವಾಗ ಈ ಸ್ಥಿತಿಯನ್ನು ಮನಗಂಡನೋ ಆಗ ಅವನು ಜಮಾಲುದ್ದೀನಹುಸ್ಯೆನಶಾ, ಅಹ್ಮದಮುರ್ತುಜಾಖಾನ ಹಾಗೂ ಇನ್ನಿತರ ಅಮೀರರೊಂದಿಗೆ ಸಮಾಲೋಚನೆ ನಡೆಸಿ ಅದೇ ವರ್ಷ ರೇಕನದಾ ಕೋಟೆಯ

ಮೇಲೆ ಯಾವುದು ಬಂದರಚೇವಲದ ಸಮೀಪವಿದೆ, ಅದರ ಮೇಲೆ ದಾಳಿ ಮಾಡಿದರು. ಹಾಗೂ ಕೋಟೆಯ ದಿಗ್ಬಂಧನ ಮಾಡಲಾಯಿತು.

ಮುತ್ತಿಗೆಯ ಸುದೀರ್ಘ ಅವಧಿ :

ಫಿರಂಗಿಗಳು ಅಂದರೆ ಇಸಾಯಿಗಳು ತಮ್ಮ ಸ್ವರಕ್ಷಣೆಗಾಗಿ ಪ್ರಯತ್ನಿಸಿದರು. ಆದರೆ ದಿಗ್ಬಂಧನವು ಎರಡು ವರ್ಷದವರೆಗೆ ಮುಂದುವರೆಯಿತು. ಆ ಸಮಯದಲ್ಲಿ ಮುಸ್ಲಿಮರ ಹಾಗೂ ಇಸಾಯಿಗಳ ನಡುವೆ ಆಗಾಗ ಯುದ್ಧಗಳು ನಡೆಯುತ್ತಿದ್ದವು. ಈ ಯುದ್ಧಗಳಲ್ಲಿ ಹೆಚ್ಚಾಗಿ ಮುಸ್ಲಿಮರಿಗೇ ನಷ್ಟವುಂಟಾಗುತ್ತಿತ್ತು. ಇಸಾಯಿಗಳ ತೋಪು ಹಾಗೂ ಬಂದೂಕುಗಳಿಂದ ಅಸಂಖ್ಯ ಮುಸ್ಲಿಮರು ಮೃತ್ಯುವಶರಾಗುತ್ತಿದ್ದರು. ಯಾವಾಗ ಗುಂಡಿನ ಸುರಿಮಳೆಯಾಗುತ್ತಿತ್ತೋ ಆಗ ನಿಜಾಮಷಾಹೀ ಸೈನ್ಯದಲ್ಲಿ ಪ್ರಳಯಸದೃಶ ದೃಶ್ಯ ಕಂಡು ಬರುತ್ತಿತ್ತು. ಮುಸ್ಲಿಮರು ತುಂಬಾ ತೊಂದರೆಗೆ ಒಳಗಾಗುತ್ತಿದ್ದರು. ಎಷ್ಟು ಕಷ್ಟ ನಷ್ಟ ಅನುಭವಿಸುತ್ತಿದ್ದರೆಂದರೆ ಅವರಿಗೆ ತಮ್ಮ ಶವಗಳಿಗೆ ಕಫನ ದಫನ ಮಾಡಲು ಅವಕಾಶ ಸಿಗುತ್ತಿರಲಿಲ್ಲ.

ದಖನಿ ಅಮೀರರ ಮೂರ್ಖತೆ :

ಮುಸ್ಲಿಮರ ಹಾನಿಯುಂಟಾಗುವ ಕಾರಣವೊಂದು ಇತ್ತು. ದಖನಿ ಅಮೀರರು ತಮ್ಮ ಅನೈಕ್ಯತೆ, ಮೂರ್ಖತೆ ಹಾಗೂ ದೂರದರ್ಶಿತ್ವರಹಿತತೆಯಿಂದಾಗಿ ಕೋಟೆಯ ಬುನಾದಿಯನ್ನು ಅಲುಗಾಡಿಸುವ ಯಾವ ಪ್ರಯತ್ನವನ್ನೂ ಮಾಡುತ್ತಿರಲಿಲ್ಲ. ಅದರ ಬದಲಾಗಿ ತಮ್ಮ ಸಂಪೂರ್ಣ ಸಮಯವನ್ನು ಕೋಟೆಗಳಲ್ಲಿ ರಂದ್ರವುಂಟು ಮಾಡಲು ವ್ಯಯಿಸುತ್ತಿದ್ದರು. ಇದರಿಂದ ಅವರ ಉದ್ಧೇಶವಿದಾಗಿತ್ತು. ಅದೇನೆಂದರೆ ಏಣಿಯನ್ನುಂಟು ಮಾಡಿ ಕೋಟೆಯ ಮೇಲೆ ಹತ್ತುವುದು ಹಾಗೂ ಕೋಟೆಯೊಳಗಿನವರನ್ನು ತೊಂದರೆಗೀಡು ಮಾಡಿ ಅವರ ಮೇಲೆ ಮೇಲುಗೈ ಸಾಧಿಸುವುದು.

ಕೋಟೆಯೊಳಗಿನವರ ತೊಂದರೆ :

ಇಸಾಯಿಗಳು ಮದ್ದುಗುಂಡು ಸುರಿಸುವ ಕಲೆಯಲ್ಲಿ ಸಂಪೂರ್ಣ ಪರಿಣತಿ ಹೊಂದಿದ್ದರು. ಅವರ ಎದುರಾಗಿ ಮುಸ್ಲಿಮರು ತಮ್ಮ ಉದ್ದೇಶದಲ್ಲಿ ಯಶಸ್ವಿಯಾಗಲು ಸಾಧ್ಯವಿರಲಿಲ್ಲ. ನಿತ್ಯವೂ ಕೋಟೆಯ ಒಳಗಿನವರಿಂದ ಗುಂಡಿನ ಭಾರಿ ಸುರಿಮಳೆಯಾಗುತ್ತಿತ್ತು. ಹಾಗೂ ಇದರಿಂದಾಗಿ ಮುಸ್ಲಿಮರ ಶವಗಳ ರಾಶಿ ರಾಶಿ ಬಿದ್ದಿರುತ್ತಿತ್ತು. ಈ ಪರಿಸ್ಥಿತಿಯನ್ನು ಮನಗಂಡು ಮುಸ್ಲಿಮರು ನಿರ್ಧರಿಸಿದ್ದು ಏನೆಂದರೆ ಕೋಟೆಯ ಒಳ ಹೊರಗೆ ಹೋಗುವ ಎಲ್ಲ ಹಾದಿಗಳನ್ನು ದಿಗ್ಬಂಧನಗೊಳಿಸುವುದು. ಯಾವಾಗ ಈ ಉಪಾಯುವನ್ನು ಅನುಷ್ಠಾನಗೊಳಿಸಲಾಯಿತೋ ಆಗ ಕೋಟೆಯೊಳಗಿನವರು ತುಂಬಾ ತುಂಬಾ ತೊಂದರೆಗೆ ಒಳಗಾದರು. ಹಾಗೂ ಅವರು

ಕೋಟೆಯನ್ನು ಬರಿದುಗೊಳಿಸಿ ಬೇರೆ ಯಾವುದೋ ಬಂದರಕ್ಕೆ ಹೋಗಲು ನಿಶ್ಚಯಿಸಿದರು.

ಇಸಾಯಿಗಳ ಯೋಜನೆ :

ಇಸಾಯಿಗಳಲ್ಲಿ ಕೆಲವರು ಈ ಯೋಜನೆಯನ್ನು ವಿರೋಧಿಸಿದರು. ಹಾಗೂ ಹೀಗೆಂದರು. "ಕೋಟೆಯಲ್ಲಿ ಯಾವ ನಿಧಿ ಇದೆಯೋ ಅದನ್ನು ಏಕೆ ನಮ್ಮ ಉದ್ದೆಶಪೂರ್ತಿಯಾಗಿ ಬಳಸಬಾರದು? ಒಂದು ವೇಳೆ ಇದರ ಹೊರತಾಗಿಯೂ ನಮ್ಮ ಕೆಲಸ ಕಾರ್ಯವಾಗದಿದ್ದರೆ ಆಗ ನಾವು ಈ ಕೋಟೆಯನ್ನು ಬಿಟ್ಟು ಬೇರೆ ಕಡೆಗೆ ಹೋಗೋಣ" ಈ ಯೋಜನೆಯನ್ನು ಎಲ್ಲ ಇಸಾಯಿಗಳು ಒಪ್ಪಿದರು. ಹಾಗೂ ಹಣವನ್ನು ನೀಡಿ ನಿಜಾಮಶಾಹೀ ಅಮೀರರೊಂದಿಗೆ ಸಂಬಂಧ ಬೆಳೆಸಿದರು.

ಹಬಶಿ ಅಮೀರರ ವಿಶ್ವಾಸ ದ್ರೋಹ :

ನಿಜಾಮಶಾಹೀ ಅಮೀರರು ಅವರಲ್ಲಿ ಫರ್ಹಾದಖಾನ ಹಾಗೂ ಇಖ್ಲಾಸಖಾನರೂ ಇದ್ದರು. ಅವರು ಲಂಚವನ್ನು ಸ್ವೀಕರಿಸಿ ಕೋಟೆಯೊಳಗಿನವರಿಗೆ ಮದ್ಯ ಹಾಗೂ ಅವಶ್ಯಕ ವಸ್ತುಗಳನ್ನು ತಲುಪಿಸಲು ಪ್ರಾರಂಭಿಸಿದರು. ಈ ದ್ರೋಹಿ ಹಬಶಿ ಅಮೀರರು ಈ ವ್ಯವಸ್ಥೆಯನ್ನು ಮಾಡಿದರು. ಪ್ರತಿ ರಾತ್ರಿ ಓರ್ವ ಅಮೀರನು ಕೋಟೆಯೊಳಗಿನವರಿಗೆ ವಸ್ತುಗಳನ್ನು ತಲುಪಿಸುತ್ತಿರಬೇಕು. ಈ ಜನರು ರಾತ್ರಿಯ ವೇಳೆಯಲ್ಲಿ ವೈರಿಯ ಸೇವೆಗೆ ನಿಲ್ಲುತ್ತಿದ್ದರು. ಹಾಗೂ ಹಗಲಿನಲ್ಲಿ ತೋರಿಕೆಗಾಗಿ ಯುದ್ಧದಲ್ಲಿ ಕಾದಾಡುತ್ತಿದ್ದರು.

ಇಸಾಯಿ ತಮ್ಮ ನಿತ್ಯದ ಚಟುವಟಿಕೆಯಂತೆ ಗುಂಡಿನ ಸುರಿಮಳೆಗೈದು ಮುಸ್ಲಿಮರನ್ನು ಕೊಲ್ಲುತ್ತಿದ್ದರು. ಆದರೆ ಉದ್ಧೇಶಪೂರ್ತಿಯಾಗುವುದು ಕಂಡು ಬರುತ್ತಿರಲಿಲ್ಲ.

ಶಾಜಮಾಲ್‌ಹುಸೈನನ ನಿರ್ಲಕ್ಷ :

ಶಾಜಮಾಲುದ್ದೀನನು ಯೌವನದ ಹುಚ್ಚು ಹೊಳೆಯಲ್ಲಿ ಮುಳಿಗೇಳುತ್ತಿದ್ದನು. ಅವನು ಸಾಮ್ರಾಜ್ಯದ ಆಡಳಿತದ ಕೆಲಸಗಳಲ್ಲಿ ಎಳ್ಳಷ್ಟೂ ಆಸಕ್ತಿ ತೋರುತ್ತಿರಲಿಲ್ಲ. ಹಾಗೂ ತನ್ನ ಇಡೀ ಸಮಯವನ್ನು ವಿಲಾಸೀ ಜೀವನದಲ್ಲಿ ವ್ಯಯಿಸುತ್ತಿದ್ದನು. ಅವನು ಖ್ವಾಜಾ ಮೀರಕನಿಗೆ ತನ್ನ ವಕೀಲನನ್ನಾಗಿಸಿ ಎಲ್ಲ ಜವಾಬ್ದಾರಿಗಳನ್ನು ಅವನಿಗೆ ವಹಿಸಿಕೊಟ್ಟಿದ್ದನು. ನಿಜಾಮಶಾಹ ದಿಗ್ಬಂಧನದ ಸುದೀರ್ಘ ಸಮಯದಿಂದಾಗಿ ತುಂಬಾ ತೊಂದರೆಗೊಳಗಾದನು. ಅವನು ಶಾ ಜಮಾಲುದ್ದೀನನ ನಿರ್ಲಕ್ಷ್ಯತನ ಹಾಗೂ ಪರಿಸ್ಥಿತಿಯಿಂದ ವಿಮುಖತೆಯ ಕುರಿತು ವಿಷಾದ ಮನಸ್ಕನಾಗಿದ್ದನು. ಈ ವಿಷಯವಾಗಿ ಖ್ವಾಜಾ ಮೀರಕನೊಂದಿಗೆ ಆಗಾಗ ಶಾಜಮಾಲನ ಕುರಿತು ದೂರು ಮಾಡುತ್ತಿದ್ದನು.

ಇಸಾಯಿಗಳ ವಶಕ್ಕೆ ಮುಸ್ಲಿಮರ ದೋಣಿ :

ಇದೇ ಸಮಯದಲ್ಲಿ ಈ ಘಟನೆ ಜರುಗಿತು. ಮುಸ್ಲಿಮರ ಒಂದು ದೋಣಿಯು ಯಾವುದು ಬಂದರ ಜರೂನನಿಂದ ಚೇವಲ ಕಡೆಗೆ ಬರುತ್ತಲಿತ್ತು. ಇಸಾಯಿಗಳು ಅದನ್ನು ತಮ್ಮ ವಶಕ್ಕೆ ತೆಗೆದುಕೊಂಡರು. ಅವರು ದೋಣಿಯ ಸಮಸ್ತ ವಸ್ತುಗಳನ್ನು ದೋಚಿಕೊಂಡರು. ಹಾಗೂ ಮುಸ್ಲಿಮರನ್ನು ಬಂಧಿಸಿದರು. ಈ ಮುಸ್ಲಿಮ್ ಖೈದಿಗಳಲ್ಲಿ ರುಸ್ತುಂಖಾನ ಹಾಗೂ ಶಮಶೀರಖಾನ ಎಂಬ ಹೆಸರಿನ ಈರ್ವರು ಯುವಕರಿದ್ದರು. ಅವರು ಶೂರತನ ಹಾಗೂ ಧೈರ್ಯದಲ್ಲಿ ತಮಗೆ ತಾವೇ ಸಾಟಿಯಾಗಿದ್ದರು. ಇಸಾಯಿಗಳು ಈ ಯುವಕರನ್ನು ಮುಸ್ಲಿಮರೊಂದಿಗೆ ಯುದ್ಧ ಮಾಡಲು ಗೋಪುರದ ಮೇಲೆ ನಿಲ್ಲಿಸಿದರು.

ಈರ್ವರು ಬಂಧಿತ ಯುವಕರು :

ರುಸ್ತುಂಖಾನ ಹಾಗೂ ಷಂಷೀರಖಾನರು ತಮ್ಮ ಸಹಧರ್ಮಿಗಳೊಂದಿಗೆ ಯುದ್ಧಮಾಡುವುದು ಉಚಿತವೆಂದು ಬಗೆಯುತ್ತಿರಲಿಲ್ಲ. ಆದರೆ ಬಂಧಿಗಳಾಗಿರುವುದರಿಂದ ಅವರಿಗೆ ಇಸಾಯಿಗಳ ಆಜ್ಞೆಯನ್ನು ಪಾಲಿಸಬೇಕಾಗಿತ್ತು. ಅವರು ಗೋಪುರದ ಮೇಲಿನಿಂದ ಆಗಾಗ ಮುಸ್ಲಿಂರ ಮೇಲೆ ಗುಂಡುಗಳನ್ನು ಸುರಿಸುತ್ತಿದ್ದರು. ಕೆಲವು ದಿನಗಳವರೆಗೆ ಈ ಈರ್ವರು ಯುವಕರು ಅನಿವಾರ್ಯವಾಗಿ ಸೇವೆಯನ್ನು ಮಾಡುತ್ತಿದ್ದರು. ಆದರೆ ನಂತರ ಅವರು ತಮ್ಮ ಈ ತಪ್ಪುನಡುವಳಿಕೆ ಯಿಂದಾಗಿ ಬಹಳೇ ಲಜ್ಜಿತಗೊಂಡರು.

ಇಸಾಯಿಗಳ ಸಮಾಲೋಚನೆ ಸಭೆ :

ಒಂದು ದಿನ ಇಸಾಯಿಗಳು ತಮ್ಮ ಸಲಹಾ ಸಮಿತಿಯ ಸಭೆಯನ್ನು ಜರುಗಿಸಿದರು. ಹಾಗೂ ಇದರಲ್ಲಿ ತಮ್ಮ ಈ ವಿಚಾರವನ್ನು ಪ್ರಕಟಿಸಿದರು. "ಎಲ್ಲ ನಿಜಾಮಶಾಹೀ ಅಮೀರರು ನಮ್ಮ ಜೊತೆಗೆ ಸೇರಿಕೊಂಡಿದ್ದಾರೆ. ಹಾಗೂ ನಮ್ಮ ಹಿತವನ್ನು ತಮ್ಮ ಜೀವನದ ಉದ್ದೇಶವೆಂದು ಬಗೆಯುತ್ತಾರೆ. ಆದರೆ ಖ್ವಾಜಾ ಮೀರಕ, ದಖೀರ ಅಸ್ಫಹಾನಿ ನಮ್ಮ ತೀವ್ರ ವಿರೋಧಿ ಹಾಗೂ ವೈರಿಗಳಾಗಿದ್ದಾರೆ" ರುಸ್ತುಂಖಾನ ಹಾಗೂ ಶಂಶೀರಖಾನರು ಈ ಚರ್ಚೆಯನ್ನು ಆಲಿಸಿದರು. ಹಾಗೂ ತಮ್ಮನ್ನು ತಾವು ಕೋಟೆಯಿಂದ ಧುಮುಕಲು ನಿರ್ಧರಿಸಿದರು. ಇದರ ಉದ್ದೇಶವು ಈ ಚರ್ಚೆಯನ್ನು ಖ್ವಾಜಾ ಮೀರಕನ ಗಮನಕ್ಕೆ ತರುವುದಾಗಿತ್ತು.

ರುಸ್ತುಂ ಹಾಗೂ ಶಂಶೀರ್‌ರ ಬಿಡುಗಡೆ :

ಈ ಈರ್ವರು ಯುವಕರು ಖ್ವಾಜಾ ಮೀರಕನ ಹೆಸರಿನಲ್ಲಿ ಒಂದು ಪತ್ರವನ್ನು ಬರೆದರು. ಈ ಪತ್ರವನ್ನು ಒಂದು ಕಲ್ಲಿನೊಂದಿಗೆ ಕಟ್ಟಿ ಖ್ವಾಜಾನ ಚಾಮರದ ಕಡೆಗೆ

ಎಸೆದರು. ರಾತ್ರಿಯ ವೇಳೆ ಈ ಈರ್ವರು ತಮಗೆ ತಾವು ಸ್ವತಂತ್ರರಾದರು ಹಾಗೂ ಹಗ್ಗದ ಮುಖಾಂತರ ಕೆಳಗಡೆ, ಖ್ವಾಜಾ ಮೀರಕನ ತಂಗುದಾಣದ ಎದುರಲ್ಲಿಯೇ ಇಳಿದರು. ಹಾಗೂ ಈ ತೆರನಾಗಿ ಇಸಾಯಿಗಳ ಬಂಧನದಿಂದ ಮುಕ್ತರಾದರು.

ಮುರ್ತುಜಾ ನಿಜಾಮ ಶಾಹನಿಗೆ ನಿಜವಾದ ಸತ್ಯವನ್ನು ಮನಗಾಣಿಸುವುದು :

ಮುರ್ತುಜಾ ನಿಜಾಮಶಾಹನಿಗೆ ಯಾವಾಗ ಈ ಯುವಕರ ಆಗಮನದ ಸುದ್ದಿ ತಲುಪಿತೋ ಆಗ ಅವನು ಈ ಈರ್ವರನ್ನು ತನ್ನ ಬಳಿಗೆ ಏಕಾಂತದಲ್ಲಿ ಕರೆಯಿಸಿದನು. ಹಾಗೂ ಕೋಟೆಯೊಳಗಿನವರ ಸ್ಥಿತಿಗತಿಯ ಕುರಿತು ವಿಚಾರಿಸಿದನು. ಈ ಈರ್ವರು ಎಲ್ಲ ವಿಷಯವನ್ನು ವಿವರಿಸಿದರು. ಹಾಗೂ ಹೀಗೆಂದರು. "ಇಸಾಯಿಗಳು ಬಹಳೇ ನೆಮ್ಮದಿಯಿಂದ ಸ್ವರಕ್ಷಣೆಯನ್ನು ಮಾಡಿಕೊಳ್ಳುತ್ತಿದ್ದಾರೆ. ಅವರಿಗೆ ದಿಗ್ಬಂಧನದಿಂದ ಯಾವುದೇ ರೀತಿಯ ತೊಂದರೆಯಾಗುತ್ತಿಲ್ಲ. ಈ ನೆಮ್ಮದಿಯ ಕಾರಣವಿದಾಗಿದೆ ಪ್ರತಿರಾತ್ರಿ ಅವರಿಗೆ ಅವಶ್ಯಕ ವಸ್ತುಗಳೆಲ್ಲವೂ ಲಭಿಸುತ್ತವೆ. ತಮ್ಮ ಹಬಶಿ ಅಮೀರರು ಅವರೊಂದಿಗೆ ಸೇರಿಕೊಂಡಿದ್ದಾರೆ ಹಾಗೂ ಲಂಚವನ್ನು ಸ್ವೀಕರಿಸಿ ಅವರಿಗೆ ಅವಶ್ಯಕ ವಸ್ತುಗಳನ್ನು ತಲುಪಿಸುತ್ತಿದ್ದಾರೆ. ಹಗಲಿನಲ್ಲಿ ತೋರಿಕೆ ಬುದ್ಧಿಯನ್ನು ಈ ಜನರು ಮಾಡುತ್ತಾರೆ. ಏಕೆಂದರೆ ಇದು ಗೌಪ್ಯ ವಿಷಯ ಬಹಿರಂಗವಾಗದಿರಲಿ ಎಂದು. ಖ್ವಾಜಾ ಮೀರಕ ಹಾಗೂ ದಬೀರ್ ಅಸ್ಫಹಾನಿಯ ಹೊರತಾಗಿ ಎಲ್ಲ ಅಮೀರರು ಇಸಾಯಿಗಳೊಂದಿಗೆ ಸೇರಿಕೊಂಡಿದ್ದಾರೆ.

ಷಾ ಜಮಾಲನೊಂದಿಗೆ ಬಾದಶಾಹನ ಮುನಿಸು :

ಇದನ್ನು ಆಲಿಸಿದ ಮುರ್ತುಜಾ ನಿಜಾಮಶಾಹನು ಆಶ್ಚರ್ಯಚಕಿತನಾದನು ಹಾಗೂ ಅವನು ಯಾರು ತನ್ನ ಹಿತೈಷಿಗಳು ಹಾಗೂ ಯಾರು ವಿಶ್ವಾಸದ್ರೋಹಿಗಳು ಎಂಬುದನ್ನು ಅರಿತುಕೊಂಡನು. ಬಾದಶಾಹನು ಖ್ವಾಜಾ ಮೀರಕ ಅಸ್ಫಹಾನಿಯ ಮೇಲೆ ಮೊದಲಿಗಿಂತಲೂ ಹೆಚ್ಚು ಕೃಪೆ ಮಾಡತೊಡಗಿದನು. ಹಾಗೂ ಅವರ ಗೌರವವನ್ನು ಇನ್ನಷ್ಟು ಎತ್ತರಕ್ಕೊಯ್ದನು. ಶಾ ಜಮಾಲುದ್ದೀನ ಹುಸೈನನೊಂದಿಗೆ ಬಾದಶಾಹನು ಇನ್ನಷ್ಟು ಹೆಚ್ಚು ಮುನಿಸಿಕೊಂಡನು. ಶಾಹ ಜಮಾಲನಿಗೆ ಯಾವಾಗ ಇದರ ಕುರಿತು ತಿಳಿಯಿತೋ ಆಗ ಅವನು ರಾಜಪ್ರತಿನಿಧಿತ್ವದ ಹುದ್ದೆಯಿಂದ ಬೇರ್ಪಡಿಸಿಕೊಂಡು ಬಾದಶಾಹನ ಅನುಮತಿ ಕೇಳದೆ ಅಹ್ಮದನಗರಕ್ಕೆ ಹೊರಟುಹೋದನು.

ಮುತ್ತಿಗೆಯ ತೆರವು :

ಮುರ್ತುಜಾ ನಿಜಾಮಶಾಹನು ದಿಗ್ಬಂಧನವನ್ನು ಸಡಿಲುಗೊಳಿಸುವ ಕಾರ್ಯದಲ್ಲಿ ಖ್ವಾಜಾ ಮೀರಕ ಅಸ್ಫಹಾನಿಯೊಂದಿಗೆ ಮಾತುಕತೆ ನಡೆಸಿದನು. ಖ್ವಾಜಾ ಹೀಗೆಂದನು.

“ತಾವು ಏನನ್ನು ಹೇಳಿದಿರೋ ಅದೇ ಉಚಿತವಾಗಿದೆ. ಆದರೆ ಸಧ್ಯದ ಪರಿಸ್ಥಿತಿಯಲ್ಲಿ ಇದೇ ಸರಿಯಾಗಿದೆ. ದಿಗ್ಬಂಧನವನ್ನು ಸಡಿಲುಗೊಳಿಸಿ ಅಹ್ಮದ ನಗರದತ್ತ ಪಯಣ ಬೆಳೆಸುವುದೇ ಆಗಿದೆ. ಅಲ್ಲಿ ತಲುಪಿ ತಾವು ಏನೇ ಹೇಳಿದರೂ ಅದನ್ನು ಮಾತ್ರ ಒಪ್ಪಿಕೊಳ್ಳಲಾಗುವುದು.

ಆಪ್ತ ಅಮೀರರ ಬಂಧನ :

ಮುರ್ತುಜಾ ನಿಜಾಮಶಾಹನು ಖ್ವಾಜಾ ಮೀರಕ ಅಸ್ಫಹಾನಿಯ ಸಲಹೆಯನ್ನು ಪಾಲಿಸಿದನು. ಹಾಗೂ ರೇಕ್‌ನದಾ ಕೋಟೆಯ ದಿಗ್ಬಂಧನವನ್ನು ತೆರವುಗೊಳಿಸಿ ಅಹ್ಮದನಗರಕ್ಕೆ ಬಂದು ತಲುಪಿದನು. ಅಲ್ಲಿ ತಲುಪಿ ಅವನು ಎಲ್ಲಕ್ಕಿಂತ ಮೊದಲು ಈ ಕಾರ್ಯವನ್ನು ಮಾಡಿದನು. ಏನೆಂದರೆ ಇಖ್ಲಾಸಖಾನ, ಫರ್ಹಾದಖಾನ ಹಾಗೂ ಇನ್ನಿತರ ಖ್ಯಾತ ಅಮೀರರನ್ನು ಬಂಧಿಸಿದನು. ಹಾಗೂ ಜಮಾಲುದ್ದೀನ ಹುಸೈನ ಹಾಗೂ ಅವನ ಪತ್ನಿಯನ್ನು ಬುರ್ಹಾನಪುರದತ್ತ ಓಡಿಸಿದನು.

ಖ್ವಾಜಾ ಮೀರಕರಿಗೆ ಗೌರವ ಸಲ್ಲಿಕೆ :

ಬಾದಶಾಹನು ಖ್ವಾಜಾಮೀರಕ ದಬೀರ ಅಸ್ಫಹಾನಿಗೆ ರಾಜಪ್ರತಿನಿಧಿತ್ವದ ಹುದ್ದೆ ನೀಡಿ “ರುಸ್ತುಂಖಾನ’ ಬಿರುದಿನಿಂದ ಸನ್ಮಾನಿಸಿದನು. ಹಾಗೂ ಜಮ್ಷೆದಖಾನ ಶಿರಾಜಿ, ಹಾಗೂ ಇತರರನ್ನು ಅಮೀರರ ತಂಡದಲ್ಲಿ ಸೇರಿಸಿದನು.

ಚಂಗೇಜಖಾನನ ದಕ್ಷತೆ :

ಚಂಗೇಜಖಾನ ಅಂದರೆ ಖ್ವಾಜಾಮೀರಕ ಬಹಳೇ ಬುದ್ಧಿವಂತ ಹಾಗೂ ಪರಿಸ್ಥಿತಿಯನ್ನು ಗ್ರಹಿಸುವ ವ್ಯಕ್ತಿಯಾಗಿದ್ದನು. ಅವನು ಸಾಮ್ರಾಜ್ಯದ ಸಮಸ್ಯೆ ಹಾಗೂ ಆರ್ಥಿಕ ಸಮಸ್ಯೆಗಳನ್ನು ಲೀಲಾಜಾಲವಾಗಿ ಬಗೆಹರಿಸುತ್ತಿದ್ದನು. ಇದರ ಪರಿಣಾಮವು ಇದಾಯಿತು. ಅಹ್ಮದನಗರವು ಶ್ರೇಷ್ಠ ನಗರಗಳಲ್ಲಿ ಒಂದೆಂದು ಪರಿಗಣಿತವಾಯಿತು. ಆಲಿ ಆದಿಲನಿಗೆ ಚಂಗೇಜಖಾನನ ಸಸ್ನೇಹ ಪ್ರವೃತ್ತಿ ಹಾಗೂ ಯೋಗ್ಯ ವ್ಯಕ್ತಿತ್ವದ ಪರಿಚಯವಾಗಿ ಅವನು ಇಬ್ರಾಹಿಂ ಕುತುಬಶಾಹನೊಂದಿಗೆ ಸ್ನೇಹ ಸಂಬಂಧ ಬೆಳೆಸಲು ನಿಶ್ಚಯಿಸಿದನು.

ಚಂಗೇಜಖಾನನಿಗೆ ಅಲಿ ಆದಿಲಶಾಹನ ಈ ವಿಚಾರದ ಅರಿವಾಯಿತು. ಆದಿಲಶಾಹನು ಕುತುಬಶಾಹನನ್ನು ಭೇಟಿ ಮಾಡುವ ಮೊದಲು ಚಂಗೇಜಖಾನ ಮುರ್ತುಜಾ ನಿಜಾಮಶಾಹನನ್ನು ತನ್ನೊಂದಿಗೆ ತೆಗೆದುಕೊಂಡು ಆದಿಲಶಾಹನ ಪ್ರಾಂತ್ಯದತ್ತ ಹೊರಟನು. ಅವನು ಎಷ್ಟೊಂದು ಯುಕ್ತಿಪೂರ್ವಕವಾದ ಉಪಾಯವನ್ನು ಹೂಡಿದನೆಂದರೆ ಆದಿಲಶಾಹ ಹಾಗೂ ಕುತುಬಶಾಹನ ಭೇಟಿಯೇ ಆಗಲಿಲ್ಲ.

ಆದಿಲಶಾಹ ಹಾಗೂ ಮುರ್ತುಜಾ ನಿಜಾಮ ಷಾಹ ಭೇಟಿ :

ಆದಿಲಶಾಹ ಹಾಗೂ ಮುರ್ತುಜಾ ನಿಜಾಮಶಾಹರು ಸರಹದ್ದಿನ ಮೇಲೆ ಒಬ್ಬರಿಗೊಬ್ಬರು ಭೇಟಿಯಾದರು. ಹಾಗೂ ಪರಸ್ಪರ ವಿಚಾರ ವಿಮರ್ಶೆಯ ನಂತರ ಇದನ್ನು ನಿರ್ಧರಿಸಲಾಯಿತು. ಏನೆಂದರೆ :

೧) ಆದಿಲಶಾಹನು ಕರ್ನಾಟಕದಿಂದ ಆ ಪಟ್ಟಣಗಳನ್ನು ವಶಪಡಿಸಿಕೊಳ್ಳಬೇಕು. ಯಾವುದರ ಗಳಿಕೆಯು ಬರಾರ ಹಾಗೂ ಬೀದರದ ತೆರಿಗೆಯ ಸಮವಾಗಿರಬೇಕು.

೨) ಮುರ್ತುಜಾ ನಿಜಾಮ, ತುಗಾಲಖಾನ ಹಾಗೂ ಅಲಿ ಬರೀದ್‌ನ ವಶದಿಂದ ಬರಾರ ಹಾಗೂ ಬೀದರನ್ನು ಬೇರ್ಪಡಿಸಿ ತನ್ನ ಸಾಮ್ರಾಜ್ಯದಲ್ಲಿ ಸೇರಿಸಿಕೊಳ್ಳುವುದು

೩) ಕುತುಬಶಾಹನಿಂದ ಮೇಲೆ ಹೇಳಿದ ಈರ್ವರು ಆಡಳಿತಗಾರರು ಯಾವುದೇ ತೆರನಾದ ಸಂಬಂಧವಿರಿಸಕೂಡದು, ಅವನಿಗೆ ಅವನ ಸ್ಥಿತಿಯ ಮೇಲೆ ಬಿಟ್ಟು ಬಿಡುವುದು.

೪) ಅದರ ನಂತರ ಈರ್ವರು ಬಾದಶಾಹರು ತಮ್ಮ ತಮ್ಮ ಪ್ರಾಂತ್ಯಗಳಿಗೆ ಹೊರಟು ಹೋದರು. ಹಾಗೂ ಯುದ್ಧಕ್ಕಾಗಿ ಸೈನ್ಯವನ್ನು ಸಿದ್ಧಗೊಳಿಸತೊಡಗಿದರು.

ಬರಾರ ಮೇಲೆ ದಾಳಿ :

ಹಿಜ್ರಿಶಕೆ ೯೮೦ ರಲ್ಲಿ ನಿಜಾಮಶಾಹನು ಬರಾರದ ಮೇಲೆ ದಾಳಿ ಮಾಡಿದನು. ಹಾಗೂ ಮುಲ್ಲಾ ಹೈದರ ಕಾಸಿಯನ್ನು ಯಾರು ಬಹಳಷ್ಟು ಓದಿಕೊಂಡಿದ್ದನು ನಿಜಾಮಶಾಹೀಯ ಆಪ್ತನಾಗಿದ್ದನು. ತುಗಾಲಖಾನನ ಹತ್ತಿರ ದೂತನನ್ನಾಗಿಸಿ ಕಳುಹಿಸಿದನು. ಹಾಗೂ ಅವನಿಗೆ ಈ ಸಂದೇಶವನ್ನು ನೀಡಿದನು.

"ದಿವಂಗತ ಅಮಾದುಲ ಮುಲ್ಕನು ನನ್ನ ಗೌರವಾನ್ವಿತ ಸಹೋದರನಾಗಿದ್ದನು. ಹಾಗೂ ಅವನೊಂದಿಗೆ ನನ್ನ ಸಂಬಂಧಗಳು ಬಹಳೇ ಸೌಹಾರ್ದಯುತವಾಗಿದ್ದವು. ಅವನ ಮೃತ್ಯುವಿನ ನಂತರ ಅವನ ಜ್ಯೇಷ್ಠ ಪುತ್ರ ಬುರ್ಹಾನ ಅಮಾದುಲ ಮುಲ್ಕ ಸಿಂಹಾಸನಾಧೀಶನಾಗಿದ್ದಾನೆ. ಎಲ್ಲಿಯವರೆಗೆ ಬುರ್ಹಾನನು ಅಪರ ವಯಸ್ಕನಾಗಿದ್ದನು ನೀವು ಸಾಮ್ರಾಜ್ಯದ ಎಲ್ಲ ಕೆಲಸ ಕಾರ್ಯಗಳನ್ನು ನಿಮ್ಮ ಹಿಡಿತದಲ್ಲಿರಿಸಿಕೊಂಡಿದ್ದೀರಿ. ಇದು ಬಹಳೇ ಒಳ್ಳೇಯ ವಿಷಯ ಹಾಗೂ ಇದೇ ರೀತಿ ಆಗಬೇಕಾದದ್ದೇ ಆಗಿತ್ತು. ಆದರೆ ಈಗ ಬುರ್ಹಾನನು ಪ್ರೌಢನಾಗಿದ್ದಾನೆ ಹಾಗೂ ಆಡಳಿತ ನಡೆಸಲು ಯೋಗ್ಯನಾಗಿದ್ದಾನೆ. ಅದಕ್ಕಾಗಿ ನಿಮಗೆ ಇದು ಶೋಭೆ ತರುವುದಿಲ್ಲ ಏನೆಂದರೆ ಅವನಿಗೆ ಗ್ರಹಬಂಧನದಲ್ಲಿರಿಸಿ ಸ್ವತಃ ಸರ್ವ ಸಾಮ್ರಾಜ್ಯದ ಒಡೆಯನಾಗಿರುವುದು. ಈ ಪತ್ರ ತಲುಪಿದ ಕೂಡಲೇ ನೀವು ನಿಮ್ಮ ಆಡಳಿತ ಕಾರ್ಯದಿಂದ ದೂರ

ಸರಿಯಿರಿ ಹಾಗೂ ಆಡಳಿತವನ್ನು ಬುರ್ಹಾನ ಅಮಾದುಲ ಮುಲ್ಕನಿಗೆ ಒಪ್ಪಿಸಿರಿ. ಇಲ್ಲದಿದ್ದರೆ ಮುಂದೆ ಉಂಟಾಗುವ ಪರಿಣಾಮಕ್ಕೆ ನೀವೇ ಹೊಣೆಗಾರರು".

ಶಂಶೀರುಲ್ ಮುಲ್ಕನ ಅಭಿಪ್ರಾಯ :

ತುಗಾಲಖಾನನು ಈ ಪತ್ರವನ್ನು ಓದಿ ಬಹಳೇ ಭಯಭೀತನಾದನು. ಅವನು ತನ್ನ ಜೇಷ್ಠ ಪುತ್ರನಾದ ಶಂಶೀರ್‌ಮುಲ್ಕನೊಂದಿಗೆ (ಯಾವನು ತನ್ನನ್ನು ತಾನು ಶೂರತನ ಹಾಗೂ ಧೈರ್ಯದಲ್ಲಿ ರುಸ್ತುಂ ಹಾಗೂ ಅಸ್ಫಂದ್‌ಯಾರ್‌ನ ಗುರುವೆಂದು ಬಗೆಯುತ್ತಿದ್ದನು). ಇದರ ಕುರಿತು ವಿಚಾರಿಸಿದನು. ಷಂಷೀರುಲ್ ಮುಲ್ಕನು ಹೀಗೆಂದನು. "ಮುರ್ತುಜಾ ನಿಜಾಮಶಾಹನು ಏನೆಲ್ಲ ಬರೆದಿದ್ದಾನೆ. ಅದರಿಂದ ಇದು ಸ್ಪಷ್ಟವಾಗುತ್ತದೆ ಏನೆಂದರೆ ಅವನು ಈ ಪ್ರಾಂತ್ಯದ ಮೇಲೆ ಅಧಿಕಾರ ಹೊಂದಬಯಸುತ್ತಾನೆ. ಹಾಗೂ ಬುರ್ಹಾನ ಅಮಾದುಲ ಮುಲ್ಕನ ಕುರಿತು ಅನುಕಂಪವು ಕೇವಲ ಒಂದು ನೆಪವಾಗಿದೆ. ಅವನು ಇದನ್ನು ಬಯಸುತ್ತಿದ್ದಾನೆ. ಏನೆಂದರೆ ಈ ತೆರನಾದ ಪತ್ರದಿಂದ ಪ್ರಜೆಗಳನ್ನು ಹಾಗೂ ಸೈನಿಕರನ್ನು ನಮ್ಮ ವಿರುದ್ಧ ಉತ್ತೇಜಿತಗೊಳಿಸುತ್ತಿದ್ದಾನೆ. ಇದು ತುಂಬಾ ಅಸಹನೀಯ ಕಾರ್ಯವಾಗಿದೆ. ನಾವು ನಮ್ಮ ಶಕ್ತಿ ಹಾಗೂ ಸಂಪತ್ತಿನ ಬಲದಿಂದ ಯಾವುದೇ ರೀತಿಯಲ್ಲಿ ನಿಜಾಮುಶಾಹನಿಗಿಂತ ಕಡಿಮೆಯಿಲ್ಲ. ಅದಕ್ಕಾಗಿ ನಾವು ಧೈರ್ಯ ಹಾಗೂ ಶೌರ್ಯದಿಂದ ಮುನ್ನುಗ್ಗಬೇಕು. ಮುರ್ತುಜಾ ನಿಜಾಮನ ಈ ಪತ್ರದ ಉತ್ತರವನ್ನು ಲೇಖನಿಯಿಂದ ನೀಡದೇ ಖಡ್ಗದಿಂದ ನೀಡುವುದು."

ಯುದ್ಧದ ಸಿದ್ಧತೆ :

ತುಗಾಲಖಾನನ ಕೆಟ್ಟ ದಿನಗಳು ಬಂದಿದ್ದವು. ಆದ್ದರಿಂದ ಅವನು ತನ್ನ ಪುತ್ರನ ಅಭಿಪ್ರಾಯವನ್ನು ಒಪ್ಪಿದನು ಹಾಗೂ ಅವನು ಮುಲ್ಲಾ ಹೈದರ (ಮುರ್ತುಜಾ ನಿಜಾಮಶಾಹನ ದೂತನು) ನನ್ನು ನಿರಾಶನನ್ನಾಗಿ ಮರಳಿಸಿದನು. ಮುರ್ತುಜಾ ನಿಜಾಮನಿಗೆ ಈ ವಿಷಯವು ಆ ಸಮಯದಲ್ಲಿ ತಿಳಿಯಿತು. ಯಾವಾಗ ಅವನು ಪಾತ್ರಿಯ ಸಮೀಪವಿದ್ದನು. ಈ ಸುದ್ದಿ ತಿಳಿಯುತ್ತಲೇ ಅವನು ಎಲಚಿಪುರದತ್ತ ಹೊರಟನು. ಈ ಕಡೆ ಶಂಶೀರುಲ್‌ಮುಲ್ಕನು ತನ್ನ ತಂದೆಯ ಸಂರಕ್ಷಕನಾಗಿ ಅವನಿಗಿಂತ ಮೊದಲು ನಿಜಾಮನನ್ನು ಎದುರಿಸಲು ಹೊರಟನು.

ನಿಜಾಮಶಾಹೀಯ ಸೈನ್ಯದ ಮುಂಭಾಗದ ಸೋಲು :

ಶಂಶೀರುಲ್ ಮುಲ್ಕನು ಮುರ್ತುಜಾ ನಿಜಾಮಶಾಹನ ಮೊದಲ ಪಂಕ್ತಿಯ ಸೈನಿಕರು ನಿರ್ಲಕ್ಷತೆಯಿಂದ ಇದ್ದದ್ದು ಕಂಡು ಅವರ ಮೇಲೆ ದಾಳಿ ಮಾಡಿದನು. ನಿಜಾಮಶಾಹೀ ಸೈನ್ಯವು ಎದುರಿಸಲಾಗದೇ ಓಡಿ ಹೋಯಿತು. ಚಂಗೇಜಖಾನನು

ಶಂಶೀರ್‌ಮುಲ್ಕನನ್ನು ಸೋಲಿಸುವುದಕ್ಕಾಗಿ ಬೇರೆ ಸೈನ್ಯಾಧಿಕಾರಿಗಳನ್ನು ನೇಮಿಸಿದನು. ಶಂಶೀರ್‌ನು ತನ್ನ ತಂದೆಯಿಂದ ಸಹಾಯವನ್ನು ಯಾಚಿಸಿದನು. ತುಗಾಲಖಾನನು ತನ್ನ ಸೈನ್ಯವನ್ನು ಜೊತೆಗೆ ತೆಗೆದುಕೊಂಡು ಬೇಗಬೇಗ ತನ್ನ ಪುತ್ರನ ಸಮೀಪ ತಲುಪಿದನು.

ಚಂಗೇಜಖಾನನ ಕಾರ್ಯ :

ಚಂಗೇಜಖಾನನಿಗೆ ಯಾವಾಗ ಈ ಸುದ್ದಿ ತಲುಪಿತೋ ಆಗ ಅವನು ಖುದಾವಂದಖಾನ ಜಂಷೀದಖಾನ, ಬಹಿರಿಖಾನ, ರುಸ್ತುಂ ಹಾಗೂ ಇನ್ನಿತರ ಖ್ಯಾತ ಅಮೀರರನ್ನು ತಮ್ಮ ಮೊದಲ ಪಂಕ್ತಿಯ ಸಂರಕ್ಷಕರ ರಕ್ಷಣೆಗಾಗಿ ಕಳುಹಿಸಿದನು. ಚಂಗೇಜ್‌ಖಾನ್‌ನು ಇಷ್ಟಕ್ಕೇ ಸುಮ್ಮನಿರಲಿಲ್ಲ. ಆದರೆ ಸ್ವತಃ ಮೂರುಸಾವಿರ ಬಿಲ್ಗಾರರ ಒಂದು ತಂಡದೊಂದಿಗೆ ತನ್ನ ಆನೆಗಳ ರಕ್ಷಣೆಗೆ ಹೋದನು. ಈ ವಿಷಯದಲ್ಲಿ ಅವರು ಬಾದಷಾಹ್‌ನ ಅನುಮತಿಯನ್ನೂ ಪಡೆಯಲಿಲ್ಲ ಹಾಗೂ ಅವನನ್ನು ಜೊತೆಗೆ ತೆಗೆದುಕೊಳ್ಳಲಿಲ್ಲ.

ಯುದ್ಧ :

ಎರಡೂ ಸೈನ್ಯಗಳು ಎದುರುಬದುರು ಬಂದವು. ಹಾಗೂ ತಮ್ಮ ಸೈನಿಕರ ಸಾಲುಗಳನ್ನು ಸಜ್ಜುಗೊಳಿಸತೊಡಗಿದರು. ಯಾವಾಗ ಯುದ್ಧ ಪ್ರಾರಂಭವಾಯಿತೋ ಅದೇ ವೇಳೆ ಚಂಗೇಜ್‌ಖಾನ್‌ನು ರಣರಂಗದಲ್ಲಿ ಪ್ರವೇಶಿಸಿದನು. ಹಾಗೂ ಅವನು ವೈರಿಗಳ ಮೇಲೆ ಭೀಕರ ರೂಪದ ದಾಳಿ ಮಾಡಿದನು. ಅವನು ಐದುನೂರು ಶೂರ ಸೈನಿಕರನ್ನು ಜೊತೆಗೆ ತೆಗೆದುಕೊಂಡು ವೈರಿಯ ಸೈನ್ಯದ ಹೃದಯ ಭಾಗವನ್ನೇ ವಿನಾಶಗೊಳಿಸಲು ಪ್ರಾರಂಭಿಸಿದನು. ತುಗಾಲಖಾನನ ಧ್ವಜವಾಹಕನ ಕಾಲಿನ ಮೇಲೆಯೇ ಖಡ್ಗದಿಂದ ದಾಳಿ ಮಾಡಿದನು. ಚಂಗೇಜ್‌ಖಾನ್ ಹಾಗೂ ಅವನ ಸಂಗಡಿಗರು ಇಂಥ ಶೌರ್ಯದ ಪ್ರದರ್ಶನ ಮಾಡಿದರು. ಇದರಿಂದ ವೈರಿಯ ಧೈರ್ಯ ಕುಗ್ಗಿತು.

ತಘಾಲಖಾನನ ಸೋಲು :

ತಘಾಲಖಾನ ಹಾಗೂ ಶಂಶೀರಖಾನರು ವೈರಿಯ ಈ ರೂಪವನ್ನು ನೋಡಿ ಅವರನ್ನು ಎದುರಿಸಲಾಗದೇ ರಣಭೂಮಿಯಿಂದ ಓಡಿಹೋದರು. ಚೆಂಗೇಜಖಾನ್‌ನು ಬರಾರ್‌ದ ಬಹಳಷ್ಟು ಅತ್ಯುತ್ತಮ ಆನೆಗಳನ್ನು ಬಂಧಿಸಿದನು. ಹಾಗೂ ಯಶಸ್ವಿಪೂರ್ವಕವಾಗಿ ವಿಜಯ ಸಾಧಿಸಿ ನಿಜಾಮಷಾಹ್‌ನ ಬಳಿ ಬಂದನು. ಈ ವಿಜಯದ ನಂತರ ಚೆಂಗೇಜ್‌ಖಾನ್‌ನ ಗೌರವವು ಹಾಗೂ ಜನಪ್ರಿಯತೆಯು ಪ್ರಸಿದ್ಧಗೊಂಡಿತು. ಹಾಗೂ ಅವನ ಆದರವು ಮೊದಲಿಗಿಂತಲೂ ಬಹಳಷ್ಟು ವೃದ್ಧಿಗೊಂಡಿತು.

ಬರಾರದ ಪ್ರಜೆಗಳ ವಿಧೇಯತೆ :

ಈ ಘಟನೆಯ ನಂತರ ಚೆಂಗೇಜ್‌ಖಾನ್‌ನು ಬರಾರ್‌ದ ಪ್ರಜೆಗಳಿಗೆ ನೆಮ್ಮದಿ ಹಾಗೂ ಸಾಂತ್ವನ ನೀಡಲು ಪತ್ರಗಳನ್ನು ಬರೆದನು. ಪ್ರಜೆಗಳು ಬುರ್ಹಾನ ನಿಜಾಮಶಾಹನಿಗೆ ವಿಧೇಯತೆ ತೋರಲು ಒಪ್ಪಿದರು. ಎಲ್ಲ ಜಮೀನ್ದಾರರು ಹಾಗೂ ಶಾಸಕರು ನಿಜಾಮಶಾಹೀ ದರ್ಬಾರದಲ್ಲಿ ಹಾಜರಾದರು ಹಾಗೂ ಅವರಿಗೆ ಕೊಡುಗೆ ಕಾಣಿಕೆಗಳನ್ನು ಬಾದಶಾಹನಿಂದ ಪೋಷಾಕುಗಳನ್ನೂ ಅರ್ಪಿಸಲಾಯಿತು. ಈ ಎಲ್ಲ ಜನರು ಸಸಂತೋಷದೊಂದಿಗೆ ತಮ್ಮ ತಮ್ಮ ಪ್ರಾಂತ್ಯಗಳಿಗೆ ಮರಳಿದರು. ಹಾಗೂ ಮುರ್ತುಜಾ ನಿಜಾಮನು ಬಹಳೇ ಶಾಂತಿಯಿಂದ ಮುಂದೆ ಸಾಗಿದನು.

ತಫಾಲಖಾನನ ಹಿಂಬಾಲಿಸುವಿಕೆ :

ತಫಾಲಖಾನ ಹಾಗೂ ಶಂಶೀರುಲ ಮುಲ್ಕ ಮತ್ತೊಮ್ಮೆ ನಿಜಾಮಷಾಹೀ ಸೈನ್ಯದ ಎದುರಿಗೆ ಬರಲಿಲ್ಲ. ಹಾಗೂ ಒಂದು ಕಾಡಿನಲ್ಲಿ ಮಾಯವಾದರು. ಮುರ್ತುಜಾ ನಿಜಾಮನು ಅವರನ್ನು ಹಿಂಬಾಲಿಸಿದನು. ಆದರೆ ಅವರು ಅವನ ಕೈಗೆ ಸಿಗಲಿಲ್ಲ. ಹಾಗೂ ಹೀಗೆಯೇ ಕಾಡುಮೇಡುಗಳಲ್ಲಿ ಅಲೆಯುತ್ತಿದ್ದನು. ಕೊನೆಗೆ ಆ ಈರ್ವರೂ ಒಂದು ಇಂಥ ಕಾಡಿನಲ್ಲಿ ಒಳಹೊಕ್ಕರು. ಅಲ್ಲಿಂದ ಓಡಿ ಹೋಗಲು ಯಾವುದೇ ದಾರಿ ಇರಲಿಲ್ಲ.

ಮೀರ್‌ಮೂಸಾ ಮಾಜಂದ್‌ರಾನಿಯೊಂದಿಗೆ ಭೇಟಿ :

ಇನ್ನೇನು ಮುರ್ತುಜಾ ನಿಜಾಮಷಾಹನು ತನ್ನ ವೈರಿಯನ್ನು ಎಲ್ಲ ಸರಕು ಸರಂಜಾಮುಗಳೊಂದಿಗೆ ತನ್ನ ವಶದಲ್ಲಿ ಮಾಡಿಕೊಳ್ಳುತ್ತಿದ್ದನು ಆದರೆ ಆಕಸ್ಮಿಕವಾಗಿ ನಡುಹಾದಿಯಲ್ಲಿ ಮುರ್ತುಜಾ ನಿಜಾಮನ ಮುಖಾಮುಖಿ ಮೀರ್‌ಮೂಸಾ ಮಾಜಂದ್‌ರಾನಿಯವರು ಯಾರು ಆಧ್ಯಾತ್ಮಿಕತೆಯಲ್ಲಿ ಮುಳುಗಿದ್ದ ವ್ಯಕ್ತಿ ಸೈಯದ್ ಆಗಿದ್ದರು ಅವರೊಂದಿಗೆ ಭೇಟಿ ಆಯಿತು. ಸೈಯದ್ ಸಾಹೇಬರು ಬಾದಷಾಹ್‌ನಿಂದ ಹೀಗೆಂದರು. "ನಿಮಗೆ ಬಾರಾ ಇಮಾಮ್‌ರ ಮೇಲೆ ಆಣೆಯಿದೆ ಏನೆಂದರೆ ಯಾವಾಗಿನವರೆಗೆ ನೀವು ನನಗೆ ಹನ್ನೆರಡು ಸಾವಿರ ಹವನ್‌ನನ್ನು ಕೊಡಲಾರಿರೋ ಅಲ್ಲಿಯವರೆಗೆ ಇಲ್ಲಿಂದ ಮುಂದೆ ಹೋಗುವಂತಿಲ್ಲ". ಬಾರಾ ಇಮಾಮ್‌ರ ಹೆಸರು ಕೇಳಿ ಮುರ್ತುಜಾ ನಿಜಾಮನು ತನ್ನ ಆನೆಯನ್ನು ತಡೆದನು. ಹಾಗೂ ಬಲ್ಲವರಿಂದ ಅವರ ವಂಶಾವಳಿಯ ಕುರಿತು ಕೇಳಿದನು.

ಹನ್ನೆರಡು ಸಾವಿರ ಹೊನ್ನುಗಳ ಬೇಡಿಕೆ :

ಬಲ್ಲವರು ಹೇಳಿದರು. ಆ 'ಮಸ್ತಮಲಂಗ್' ವ್ಯಕ್ತಿಯು ಸೈಯದ್‌ರ ವಂಶಾವಳಿಗೆ ಸೇರಿದವನು ಹಾಗೂ ಅಹಲ್ ಬೈತ್‌ರನ್ನು ಮೆಚ್ಚುವವನಾಗಿರುವನು. ಇದನ್ನು ಕೇಳಿ

ಬಾದಷಾಹನು ಅಮೀನುದ್ದೀನ್ ನಿಶಾಪುರಿ ಹಾಗೂ ಚಂಗೇಜ್‌ಖಾನ್‌ನನ್ನು ಕರೆಯಿಸಿ ಈ ಆದೇಶ ನೀಡಿದನು. ಏನೆಂದರೆ ಸೈಯದ್ ಸಾಹೇಬರಿಗೆ ಹನ್ನೆರಡು ಸಾವಿರ ಹವನ್‌ಗಳನ್ನು ಸಲ್ಲಿಸಬೇಕು. ಚಂಗೇಜ್‌ಖಾನ್‌ನು ಉತ್ತರದಲ್ಲಿ ಹೀಗೆಂದನು. "ದೊರೆಯ ಭಂಡಾರವು ಸೈನ್ಯದ ಹಿಂದೆ ಇದೆ. ತಾವು ಈ ಸಮಯದಲ್ಲಿ ಮುಂದೆ ಸಾಗುವುದೇ ಉಚಿತವಾಗಿದೆ ಏಕೆಂದರೆ ತುಘಾಲ್‌ಖಾನ್ ಹಾಗೂ ಇತರರು ಇನ್ನೇನು ಬಂಧಿಸಲ್ಪಡುತ್ತಿದ್ದಾರೆ. ನಂತರ ತಮ್ಮ ಆಜ್ಞೆ ಪಾಲಿಸಲಾಗುವುದು.

ಚಂಗೇಜ್‌ಖಾನ್‌ನ ವಿನಂತಿ :

ಬಾದ್‌ಷಾಹ್‌ನು ಇದನ್ನು ಕೇಳಿ ಹೀಗೆಂದನು. ಒಂದು ವೇಳೆ ತುಘಾಲ್‌ಖಾನ್‌ನು ನನಗೆ ಬರಾರ್‌ದ ಸಮನಾಗಿ ನೂರು ಪ್ರಾಂತ್ಯಗಳನ್ನು ನೀಡಿದರೂ ನಾನು ಬಾರಾಇಮಾಮ್‌ರ ಹೆಸರಿನ ಮೇಲೆ ತ್ಯಾಗ ಮಾಡಲು ಸಿದ್ಧನಾಗಿರುವೆನು. ಚಂಗೇಜ್‌ಖಾನ್‌ನು ಸೈಯದ್ ಸಾಹೇಬರಿಂದ ಹೀಗೆಂದನು. ಒಂದು ದೀರ್ಘ ಅವಧಿಯ ಹಾಗೂ ಬಹಳ ಕಷ್ಟಪಟ್ಟು ಬಹಳ ಪ್ರಯತ್ನದ ನಂತರ ನಾವು ಈ ಯೋಗ್ಯತೆ ಹೊಂದಿದ್ದೇವೆ ಏನೆಂದರೆ ವೈರಿಯನ್ನು ಬಂಧಿಸಿ ಅವನ ಕ್ಷೋಭೆಯಿಂದ ಮುಕ್ತಿ ಹೊಂದಬಹುದು. ದೇವನಿಗೋಸ್ಕರವಾಗಿ ತಾವು ಬಾದ್‌ಷಾಹ್‌ನಿಂದ ಹೀಗೆ ಹೇಳಿರಿ – ಸಂಪತ್ತು ನನಗೆ ತಲುಪಿದೆ ಎಂದು ನಾನು ವಾಗ್ದಾನ ಮಾಡುತ್ತೇನೆ. ಏನೆಂದರೆ ಗುರಿ ತಲುಪಿದ ನಂತರ ನಾನು ಈ ಧನರಾಶಿಯನ್ನು ತಮಗೆ ತಲುಪಿಸುವೆನು.

ಸೈಯದ್ ಸಾಹೇಬರ ಹಟ :

ಸೈಯದ್ ಸಾಹೇಬರು ಹೀಗೆಂದರು. "ಒಂದು ಅವಧಿಯ ನಂತರ ಈ ಅವಕಾಶ ನನಗೆ ಲಭಿಸಿದೆ ನನ್ನ ನಿರೀಕ್ಷೆಯು ಪೂರ್ತಿಯಾಗುತ್ತಿದೆ. ಒಂದು ವೇಳೆ ನಾನು ಹುಚ್ಚನಾಗಿದ್ದೇನೆ. ಆದರೆ ನಾನು ಇಷ್ಟು ಮಾತ್ರ ಬಲ್ಲೆ. ನಗದನ್ನು ಉದ್ರಿಯ ಮೇಲೆ ಬಿಡಲಾಗದು" ಚಂಗೇಜ್‌ಖಾನ್‌ನು ಬೇಗಬೇಗನೆ ಬಾದಷಾಹ್, ಅಮೀರರ ಹಾಗೂ ಇನ್ನಿತರರ ಬೆಲೆಬಾಳುವ ಕುದುರೆಗಳನ್ನು ಒಂದು ಕಡೆ ಸೇರಿಸಿ ಹಾಗೂ ಸೈಯದ್ ಸಾಹೇಬರಿಗೆ ಹೀಗೆಂದನು. "ತಾವು ಈ ಕುದುರೆಗಳನ್ನು ಗಿರವಿ ಇಟ್ಟುಕೊಳ್ಳಿರಿ. ಗುರಿ ತಲುಪಿ ನಾನು ತಮಗೆ ತುಂಬಾ ಧನರಾಶಿಯನ್ನು ನೀಡುವೆನು. ಹಾಗೂ ಕುದುರೆಗಳನ್ನು ಮರಳಿ ಪಡೆಯುವೆನು."

ವೈರಿಯಿಂದ ಅವಕಾಶದ ಸದ್ಬಳಕೆ :

ಸೈಯದ್ ಸಾಹೇಬರು ಹೀಗೆಂದರು. "ನಾನು ಈ ಮಾತನ್ನೂ ಸಹ ಒಪ್ಪುವುದಿಲ್ಲ. ನನಗೆ ಇದೇ ವೇಳೆ ನಗದು ಧನ ಬೇಕು. ಏಕೆಂದರೆ ಇದರ ನಂತರ ನನ್ನ ಹಾಗೂ ನಿಮ್ಮ ಭೇಟಿ ಇನ್ನೆಂದು ಆಗದು", ಚಂಗೇಜ್‌ಖಾನ್‌ನು ಸೈಯದ್ ಸಾಹೇಬರ ಎದುರು ಅಸಹಾಯಕನಾದನು. ಅವನು ಜನರಿಂದ ಧನವನ್ನು ಸಾಲ ರೂಪದಲ್ಲಿ

ಪಡೆದನು. ಹನ್ನೆರಡು ಸಾವಿರ ಹವನ್‌ಗಳನ್ನು ಸೈಯದ್ ಸಾಹೇಬರಿಗೆ ತಲುಪಿಸಿ ಕೈ ತೊಳೆದುಕೊಂಡನು. ಈ ವಿಷಯವನ್ನು ಬಗೆಹರಿಸಲು ಬಹಳ ಸಮಯ ಹಿಡಿಯಿತು. ವೈರಿಯು ಈ ಅವಕಾಶವನ್ನು ಬಳಸಿಕೊಂಡನು, ಹಾಗೂ ಕಾಡಿನಿಂದ ಹೊರಟು ಬುರ್ಹಾನ್ ಅಸೀರ್‌ನತ್ತ ಹೋದನು.

ಖಾನಿದೇಶದ ಆಡಳಿತಗಾರನ ಹೆಸರಿನಲ್ಲಿ ಮುರ್ತುಜಾ ನಿಜಾಮಷಾಹ್‌ನ ಪತ್ರ :

ಮುರ್ತುಜಾ ನಿಜಾಮಷಾಹ್‌ನು ಖಾಂದೇಶದ ಸರಹದ್ದಿನಲ್ಲಿ ಉಳಿದುಕೊಂಡನು. ಹಾಗೂ ಖಾಂದೇಶದ ಆಡಳಿತಗಾರನಾದ ಮೀರ್‌ಮೊಹಮ್ಮದ ಷಾಹ್‌ನ ಹೆಸರಿನಲ್ಲಿ ಈ ಸಾರಾಂಶವುಳ್ಳ ಒಂದು ಪತ್ರ ಬರೆದನು. "ತುಫಾಲ್‌ಖಾನ್‌ನು ನಿಜಾಮಷಾಹಿ ಸೈನ್ಯದಿಂದ ಪರಾರಿಯಾಗಿ ತಮ್ಮ ಸರಹದ್ದಿನಲ್ಲಿ ಪ್ರವೇಶಿಸಿದ್ದಾನೆ. ತಾವು ಅವನನ್ನು ಯಾವುದೇ ಕಾರಣಕ್ಕೆ ಆಶ್ರಯ ನೀಡಬಾರದು ಹಾಗೂ ತಕ್ಷಣವೇ ನಗರದಿಂದ ಹೊರಹಾಕಬೇಕು. ತಮ್ಮ ಬುದ್ಧಿವಂತಿಕೆ ಹಾಗೂ ಚತುರತೆಯ ಮೇಲೆ ನಮಗೆ ನಿರೀಕ್ಷೆಯಿದೆ. ಏನೆಂದರೆ ತಾವು ತಮ್ಮ ಪ್ರಾಂತ್ಯವನ್ನು ವಿನಾಶದಿಂದ ರಕ್ಷಿಸಲು ನಮ್ಮ ಅಭಿಪ್ರಾಯವನ್ನು ಮನ್ನಿಸುವಿರಿ".

ತಫಾಲಖಾನನ ಪತ್ರ ಷಹೀನ್‌ಷಾಹ್ ಅಕಬರನ ಹೆಸರಿನಲ್ಲಿ :

ಮೀರಾ ಮೊಹಮ್ಮದ್ ಶಾಹನು ಮುರ್ತುಜಾ ನಿಜಾಮನ ಪತ್ರವನ್ನು ಓದಿದನು. ಹಾಗೂ ಅದನ್ನು ತಫಾಲಖಾನನ ಹತ್ತಿರ ಕಳುಹಿಸಿದನು. ತಫಾಲಖಾನನು ಆ ಪತ್ರವನ್ನು ಓದಿದನು. ಹಾಗೂ ಬೇರೆ ಹಾದಿ ಹಿಡಿದು ಬರಾರ್‌ಕ್ಕೆ ಹೊರಟು ಹೋದನು. ಅಲ್ಲಿಗೆ ತಲುಪಿ ತಫಾಲಖಾನನು ಮೊಘಲ್ ದೊರೆ ಷಹಿನ್‌ಶಾಹ ಅಕಬರನ ಹೆಸರಿನಲ್ಲಿ ಒಂದು ಪತ್ರವನ್ನು ಬರೆದನು. ಅದರ ಸಾರಾಂಶವು ಹೀಗಿತ್ತು. "ದಖ್ಖನ್ನಿನ ಆಡಳಿತಗಾರರು ಧಾರ್ಮಿಕ ಐಕ್ಯತೆಯಿಂದಾಗಿ ಪರಸ್ಪರರು ರಾಜಕೀಯವಾಗಿಯೂ ಒಂದಾಗಿದ್ದಾರೆ. ಹಾಗೂ ಅವರು ನಿರ್ಧರಿಸಿದ್ದಾರೆ. ನನ್ನ ಪ್ರಾಂತ್ಯವನ್ನು ನನ್ನಿಂದ ಒತ್ತಡಪೂರ್ವಕವಾಗಿ ಕಸಿದುಕೊಂಡಿದ್ದಾರೆ. ನಾನು ಹುಜೂರ್‌ರ ದರ್ಬಾರಿನ ಒಬ್ಬ ನಮ್ರ ಸೇವಕನಾಗಿದ್ದೇನೆ. ಹಾಗೂ ಬರಾರ್ ಪ್ರಾಂತ್ಯವನ್ನು ತಮಗೆ ಸಲ್ಲಿಸುವೆನು. ತಾವು ತಮ್ಮ ಅಮೀರರಿಗೆ ಆದೇಶ ನೀಡಿರಿ. ಅವರು ನನ್ನ ಪ್ರಾಂತ್ಯವನ್ನು ವಶಕ್ಕೆ ತೆಗೆದುಕೊಳ್ಳಲಿ. ಆ ಕಾರಣದಿಂದ ನಾನು ತಮ್ಮ ಸೇವೆಯಲ್ಲಿ ಹಾಜರಾಗಿ ವೈರಿಯ ಕುದೃಷ್ಟಿಯಿಂದ ರಕ್ಷಣೆಗೊಳಪಡುವೆನು.

ಪಡತಾಲಾ ಕೋಟೆಯ ದಿಗ್ಬಂಧನ :

ಇನ್ನೂ ಈ ಪತ್ರದ ಉತ್ತರವೂ ಬಂದಿರಲಿಲ್ಲ. ತುಫಾಲ್‌ಖಾನ್ ಹಾಗೂ ಷಂಷಿರುಲ್ ಮುಲ್ಕ, ತಂದೆ ಮಗ ಇಬ್ಬರೂ ಬೇರೆಯವರ ಆಶ್ರಯ ಪಡೆಯಬೇಕಾಯಿತು. ತುಫಾಲ್‌ಖಾನ್‌ನು ಪಡತಾಲಾ ಕೋಟೆಯಲ್ಲಿ (ಯಾವುದು ಪರ್ವತದ ಮೇಲೆ

ಇದೆ) ಹಾಗೂ ಷಂಷೀರುಲ್‌ಮುಲ್ಕನಿಗೆ ಕಾವೆಲ್ ಕೋಟೆಯಲ್ಲಿ ಆಶ್ರಯ ಪಡೆಯಬೇಕಾಯಿತು. ಈ ಪರಿಸ್ಥಿತಿಯ ನಿರ್ಮಾಣದಿಂದ ಮುರ್ತುಜಾ ಷಾಹನಿಗೆ ಒಂದು ಉತ್ತಮ ಅವಕಾಶ ಲಭಿಸಿತು. ಅವನು ಪಡತಾಲಾ ಕೋಟೆಯನ್ನು ನಾಲ್ಕು ದಿಕ್ಕಿನಿಂದ ದಿಗ್ಭಂಧನಗೊಳಿಸಿದನು. ನಿಜಾಮಷಾಹೀ ಅಮೀರರು ಹಾಗೂ ಸೈನಿಕ ಅಧಿಕಾರಿಗಳು ಕೋಟೆಯ ದಿಗ್ಬಂಧನದಲ್ಲಿ ಭಾಗವಹಿಸಿದರು. ಹಾಗೂ ಪರಸ್ಪರರು ಸೈನ್ಯವನ್ನು ಸಜ್ಜುಗೊಳಿಸಿ ಈ ಪ್ರಾಂತ್ಯದಲ್ಲಿ ವಾಸ್ತವ್ಯ ಹೂಡಿದರು.

ಮುರ್ತುಜಾ ನಿಜಾಮಶಾಹನ ಹೆಸರಿನಲ್ಲಿ ಷಹಿನ್‌ಶಾಹ ಅಕಬರನ ಸಂದೇಶ :

ತುಘಾಲ್‌ಖಾನ್‌ನು ಷಹೀನ್‌ಶಾಹ ಅಕಬರನಿಗೆ ಯಾವ ಪತ್ರವನ್ನು ಬರೆದಿದ್ದನು ಅದು ಅವನಿಗೆ ಗುಜರಾತದಲ್ಲಿ ತಲುಪಿತು. ಅಕಬರನು ಮುರ್ತುಜಾ ನಿಜಾಮಷಾಹನಿಗೆ ಈ ಸಂದೇಶ ನೀಡಿದನು. "ತುಘಾಲ್‌ಖಾನ್ ನಮ್ಮ ಹಿತೈಷಿ ಹಾಗೂ ನಮ್ಮವನಾಗಿದ್ದಾನೆ. ಬರಾರ್ ಪ್ರಾಂತ್ಯವು ಈಗ ನಮ್ಮ ಆಡಳಿತದಲ್ಲಿ ಒಂದಾಗಿದೆ. ಈಗ ನಿಮಗೆ ಇದೇ ಉಚಿತವಾಗಿದೆ. ನೀವು ಬರಾರ್‌ವನ್ನು ವಶಪಡಿಸಿಕೊಳ್ಳುವ ಇಚ್ಛೆಯನ್ನು ಬಿಟ್ಟು ಬಿಡಿ ಹಾಗೂ ತುಘಾಲ್‌ಖಾನ್‌ನೊಂದಿಗೆ ದುರ್ವರ್ತನೆ ಮಾಡದಿರಿ"

ಷಹೀನ್‌ಷಾಹ್ ಅಕಬರನ ದೂತರೊಂದಿಗೆ ದುರ್ವ್ಯವಹಾರ :

ಮುರ್ತುಜಾ ನಿಜಾಮಷಾಹ್‌ನು ಚಂಗೇಜ್‌ಖಾನ್‌ನ ಅಭಿಪ್ರಾಯವನ್ನು ಪಾಲಿಸಿ ಅಕಬರನ ದೂತರೊಂದಿಗೆ ದುರ್ವರ್ತನೆಯಿಂದ ನಡೆದುಕೊಂಡನು. ಈ ದೂತನು ಆಗ್ರಾಕ್ಕೆ ಮರಳಿ ಬಂದನು. ಹಾಗೂ ಅವನು ಮುರ್ತುಜಾ ನಿಜಾಮನ ಗರ್ವ ಹಾಗೂ ಬಂಡಾಯದ ಪ್ರವೃತ್ತಿಯ ವಿವರವನ್ನು ಅಕಬರನ ಸನ್ನಿಧಿಯಲ್ಲಿ ವಿವರಿಸಿದನು. ಅಕಬರನು ಈ ದಿನಗಳಲ್ಲಿ ಬಂಗಾಲದ ಗೊಂದಲದಲ್ಲಿ ಸಿಲುಕಿದ್ದನು. ಈ ಕಾರಣದಿಂದಾಗಿ ಅವನಿಗೆ ದಖ್ಖನ್ನಿನ ಕಡೆ ಗಮನ ಹರಿಸಲು ಆಗಲಿಲ್ಲ. ನಿಜಾಮುಷಾಹ್‌ನು ಬಹಳೇ ಶಾಂತರೀತಿಯಲ್ಲಿ ಪಡತಾಲಾ ಕೋಟೆಯನ್ನು ದಿಗ್ಭಂಧನಗೊಳಿಸುವಲ್ಲಿ ನಿರತನಾದನು.

ಕೋಟೆಯನ್ನು ವಶಪಡಿಸಿಕೊಳ್ಳುವ ಪ್ರಯತ್ನ :

ತುಘಾಲ್‌ಖಾನ್‌ನು ತನ್ನ ಸ್ವರಕ್ಷಣೆಗಾಗಿ ಸಂಪೂರ್ಣ ರೀತಿಯಲ್ಲಿ ಪ್ರಯತ್ನಿಸಿದನು. ನಿಜಾಮಷಾಹೀ ಸೈನ್ಯದ ಕಡೆಯಿಂದ ಅಸದ್‌ಖಾನ್ ಹಾಗೂ ಸಿಕಂದರ್‌ಖಾನ್‌ರು ಯಾರು ಗುಂಡುಮದ್ದಿನ ಸುರಿಮಳೆ ಗೈಯ್ಯುವಲ್ಲಿ ಪರಿಣತರಾಗಿದ್ದರು ಅವರು ಎಲ್ಲ ರೀತಿಯಲ್ಲಿ ಕೋಟೆಯ ಗೋಡೆಗಳನ್ನು ಕೆಡವಲು ಪ್ರಯತ್ನಿಸಿದರು. ಆದರೆ ಅವರಿಗೆ ಯಶಸ್ಸು ದೊರಕಲಿಲ್ಲ.

ಯುವರಾಜ ಹುಸೈನ್‌ನ ಜನ್ಮ :

ಇದೇ ಸಮಯದಲ್ಲಿ ಅಹ್ಮದ್‌ನಗರದಿಂದ ಯುವರಾಜ ಹುಸೈನ್‌ನು ಜನ್ಮತಾಳಿದ ಸುದ್ಧಿ ಬಂದಿತು. ಚಂಗೇಜಖಾನನು ಯುವರಾಜನಾದ ಹುಸೈನ್‌ನ ಜನ್ಮದಿನಾಂಕ (ಪರಿಪೂರ್ಣ ಲಾಭ ತಲುಪಿಸುವ ಫೈಜ್‌ಏಕಾವಿಲ್) ನಿಂದ ತೆಗೆದನು. ಷಾಹೀ ಆಜ್ಞೆಯನ್ನು ಅನುಸರಿಸಿ ಒಂದು ದೊಡ್ಡ ಸಂತೋಷದ ಸಮಾರಂಭದ ಸಿದ್ಧತೆಗಳು ಭರದಿಂದ ನಡೆಯತೊಡಗಿದವು.

ಅಹ್ಮದನಗರಕ್ಕೆ ಮರಳುವ ಇಚ್ಛೆ :

ಮುರ್ತುಜಾ ನಿಜಾಮಶಾಹನ ಮನಸ್ಸು ತನ್ನ ಪುತ್ರನನ್ನು ನೋಡುವ ಇಚ್ಛೆಯಿಂದ ಬಹಳೇ ಚಂಚಲವಾಗಿತ್ತು. ಇದರ ಹೊರತಾಗಿ ಪ್ರವಾಸದಿಂದ ಉಂಟಾದ ಪ್ರಯಾಸದಿಂದಾಗಿ ಅವನು ಸ್ವಲ್ಪ ತೊಂದರೆ ಅನುಭವಿಸುತ್ತಿದ್ದನು. ಈ ಕಾರಣದಿಂದ ಬಾದಷಾಹ್‌ನು ಅಹ್ಮದ್‌ನಗರಕ್ಕೆ ಮರಳುವ ಬಯಕೆ ಹೊಂದಿದನು. ಅದೇ ಕಾಲದಲ್ಲಿ ಸಾಹೇಬ್‌ಖಾನ್ ಹೆಸರಿನ ಒಬ್ಬ ಅಮೀರನು ಬಾದಷಾಹ್‌ನ ಮೇಲೆ ಬಹಳೇ ಪ್ರಭಾವ ಬೀರಿದ್ದನು. ಅವನೂ ಸಹ ಅಹ್ಮದ್‌ನಗರಕ್ಕೆ ಮರಳುವ ಇಚ್ಛೆ ವ್ಯಕ್ತಪಡಿಸಿದನು.

ಒಬ್ಬ ಹಿಂದೂಸ್ತಾನಿ ವ್ಯಾಪಾರಿ :

ಇದು ಸಂಭವವಿತ್ತು, ಏನೆಂದರೆ ಮೂರು ವರ್ಷದ ಪ್ರಯತ್ನವು ವಿಫಲವಾಗುವುದರಲ್ಲಿತ್ತು. ಹಾಗೂ ಬಾದ್‌ಷಾಹ್‌ನು ತನ್ನ ಸೈನ್ಯದೊಂದಿಗೆ ಅಹ್ಮದನಗರಕ್ಕೆ ಮರುಳುವವನಿದ್ದನು. ಆದರೆ ಆಕಸ್ಮಿಕವಾಗಿ ಅಫ್‌ಘಾನ್ ಹೆಸರಿನ ಒಬ್ಬ ವ್ಯಾಪಾರಿ ಹಿಂದೂಸ್ಥಾನದಿಂದ ಕೆಲವು ಉತ್ತಮ ದರ್ಜೆಯ ಕುದುರೆ ಹಾಗೂ ಇತರ ವಸ್ತುಗಳನ್ನು ತಂದನು. ಅವನು ಚಂಗೇಜ್‌ಖಾನ್‌ನೊಂದಿಗೆ ಹೀಗೆ ಹೇಳಿದನು. "ಈ ಎಲ್ಲ ವಸ್ತುಗಳು ತುಘಾಲ್‌ಖಾನ್‌ನಿಗಾಗಿ ತಂದಿರುವೆನು. ಒಂದು ವೇಳೆ ನೀವು ಅನುಮತಿ ನೀಡಿದರೆ ನಾನು ಈ ವಸ್ತುಗಳನ್ನು ಕೋಟೆಯ ಒಳಗೆ ಒಯ್ದು ನಗರದ ಆಡಳಿತಗಾರನಿಗೆ ಮಾರಿಕೊಳ್ಳುವೆನು.

ಹಿಂದೂಸ್ತಾನಿ ವ್ಯಾಪಾರಿಯೊಂದಿಗೆ ಚಂಗೇಜ್‌ಖಾನ್‌ನ ಷರತ್ತು :

ಚಂಗೇಜ್‌ಖಾನ್‌ನು ಈ ವ್ಯಾಪಾರಿಯೊಂದಿಗೆ ಹೀಗೆ ಹೇಳಿದನು. ಒಂದು ಷರತ್ತಿನ ಮೇಲೆ ನಿನಗೆ ಒಳಗೆ ಹೋಗಲು ಅನುಮತಿ ನೀಡಲಾಗುವುದು. ಯಾವಾಗ ನೀನು ಹೊರಗೆ ಮರಳಿ ಬರುವೆಯೋ ಆಗ ನಿಜಾಮಷಾಹೀ ಸೇವಕರಲ್ಲಿ ಸೇರ್ಪಡೆಗೊಳ್ಳಬೇಕು. ನಿನ್ನ ಮುಖದಿಂದ ಚತುರತೆ ಹಾಗೂ ಬುದ್ಧಿವಂತಿಕೆಯು ಸ್ಪಷ್ಟವಾಗಿ ಗೋಚರಿಸುತ್ತಿದೆ. ಒಂದು ವೇಳೆ ನೀನು ವ್ಯಾಪಾರ ಮಾಡುವುದನ್ನು ಬಿಟ್ಟು ಬಾದಷಾಹ್‌ನ ಸಂಗಡಿಗನಾದರೆ ಈ ವಿಷಯವು ನಿನಗಾಗಿ ಬಹಳ ಲಾಭದಾಯಕವಾಗಿರುವುದು.

ಚಂಗೇಜ್‌ಖಾನ್‌ನ ಯೋಜನೆ :

ಈ ಮಾತನ್ನು ಕೇಳಿದ ವ್ಯಾಪಾರಿಯು ಹೀಗೆಂದನು. ಒಂದು ವೇಳೆ ಹೀಗೆ ಆಗುವುದಾದರೆ ಇನ್ನೇನು ಬೇಕು ? ಇದು ನನ್ನ ಅದೃಷ್ಟ. ಅದಕ್ಕೆ ಉತ್ತರವಾಗಿ ಚಂಗೇಜ್‌ಖಾನ್ ಹೀಗೆಂದನು. ನಿನ್ನ ಅದೃಷ್ಟದಲ್ಲಿ ಇದು ಬರೆಯಲಾಗಿದೆ. ನೀನು ರಾಜ್ಯಪಾಲನ ಹುದ್ದೆಯಿಂದ ಪುರಸ್ಕರಿಸಲ್ಪಡುವಿ. ಅದಕ್ಕಾಗಿ ನೀನು ನಿಜಾಮಷಾಹ್‌ನ ಹಿತೈಷಿಯಾಗಿರು. ವ್ಯಾಪಾರಿಯು ಈ ಷರತ್ತಿಗೆ ಒಪ್ಪಿದನು. ಅದರ ನಂತರ ಚಂಗೇಜ್‌ಖಾನ್‌ನು ತನ್ನ ನಂಬಿಗಸ್ತ ವ್ಯಕ್ತಿಗೆ ಬಹಳಷ್ಟು ಸಂಪತ್ತನ್ನು ನೀಡಿ ವ್ಯಾಪಾರಿಯ ಜೊತೆಗೆ ಕಳುಹಿಸಿದನು.

ಕೋಟೆಯ ಸಂರಕ್ಷಕರೊಂದಿಗೆ ಒಳಸಂಚು :

ಅಫಘಾನ್‌ನೊಂದಿಗೆ ತನ್ನ ವ್ಯಕ್ತಿಯನ್ನು ಕಳುಹಿಸುವ ಚಂಗೇಜ್‌ಖಾನ್‌ನ ಉದ್ದೇಶವು ಇದಾಗಿತ್ತು. ಈ ವ್ಯಕ್ತಿಯೂ ಸಹ ವ್ಯಾಪಾರಿಯ ವೇಷದಲ್ಲಿ ಕೋಟೆಯ ಒಳಗೆ ತಲುಪಬೇಕು. ಹಾಗೂ ಕೋಟೆಯ ಸಂರಕ್ಷಕರೊಂದಿಗೆ ಧನವನ್ನು ನೀಡಿ ಮುರ್ತುಜಾ ನಿಜಾಮನ ಕಡೆಗೆ ಒಲವು ಮೂಡಿಸುವುದು ಹಾಗೂ ಈ ಸಂರಕ್ಷಕರನ್ನು ಕೋಟೆಯ ರಕ್ಷಣೆಯಿಂದ ದೂರಗೊಳಿಸಲು ಒಪ್ಪಿಸುವುದು. ಹಾಗೂ ಅವರಿಗೆ ನಿಜಾಮಷಾಹೀಯ ಸೇವೆಯನ್ನು ಸ್ವೀಕರಿಸಲು ಹೇಳುವುದು. ಹಾಗಾದರೆ ಅವರಿಗೆ ಬಹುಮಾನಗಳಿಂದ ಪುರಸ್ಕರಿಸಲಾಗುವುದು ಎಂದು ಆಸೆ ತೋರಿಸುವದು.

ಕೋಟೆಯೊಳಗೆ ನಿಜಾಮಶಾಹೀಗಳ ಪ್ರವೇಶ :

ಚಂಗೇಜ್‌ಖಾನ್‌ನ ಗುಪ್ತಚರನು ಕೋಟೆಯ ಒಳಗೆ ಪ್ರವೇಶಿಸಿದನು. ಅವನು ರಾತ್ರೋ ರಾತ್ರಿಯೇ ಕೋಟೆಯ ಎಲ್ಲ ಸಂರಕ್ಷಕರೊಂದಿಗೆ ಒಳಸಂಚು ನಡೆಸಿ ಚಂಗೇಜ್‌ಖಾನ್‌ನ ಹತ್ತಿರ ಕಳುಹಿಸಿದನು. ಹಾಗೂ ಕೋಟೆಯ ಒಳಗೆ ಯಾವ ಸಂರಕ್ಷಕನೂ ಉಳಿಯಲಿಲ್ಲ. ಅದರ ನಂತರ ಅಸದ್‌ಖಾನ್ ಹಾಗೂ ರೂಮಿಖಾನ್‌ನು ಒಂದು ದೊಡ್ಡ ತೋಪನ್ನು ಹಾರಿಸಿ ಕೋಟೆಯ ಗೋಡೆಯಲ್ಲಿ ಕಿಂಡಿಯನ್ನು ಮಾಡಿದರು. ಏಕೆಂದರೆ ಕೋಟೆಯ ಒಳಗೆ ಯಾವುದೇ ಇಂತಹ ವ್ಯಕ್ತಿ ಇರಲಿಲ್ಲ. ಯಾವನು ಈ ಕಿಂಡಿಯನ್ನು ಮುಚ್ಚುತ್ತಿದ್ದನು. ಅದಕ್ಕಾಗಿ ಚಂಗೇಜ್‌ಖಾನ್‌ನು ತನ್ನ ವಿಶೇಷ ಸೈನಿಕರ ಒಂದು ತಂಡವನ್ನು ತನ್ನ ಜೊತೆಗೆ ಕರೆದುಕೊಂಡು ಕೋಟೆಯ ಒಳಗೆ ಪ್ರವೇಶಿಸಿದನು.

ತುಘಾಲ್‌ಖಾನ್‌ನ ಓಡಿಹೋಗುವಿಕೆ :

ತುಘಾಲ್‌ಖಾನ್‌ನು ಯಾವಾಗ ಈ ಪರಿಸ್ಥಿತಿಯನ್ನು ಮನಗಂಡನೋ ಆಗ ಅವನು ತನ್ನ ದರ್ಬಾರಿಗಳ ಒಂದು ತಂಡದೊಂದಿಗೆ ಕೋಟೆಯಿಂದ ಓಡಿ ಹೊರಟನು.

ಈ ಘಟನೆಯು ಹಿಜ್ರಿ ಶಕೆ ೯೮೨ ರಲ್ಲಿ ನಡೆದಿದೆ. ಚಂಗೇಜ್‌ಖಾನ್‌ನು ತಕ್ಷಣವೇ ವಿದೇಶಿಯರ ಒಂದು ಗುಂಪನ್ನು ಸೈಯದ್ ಹಸನ್ ಅಸ್ತರಾಬಾದಿಯ ಮುಖಂಡತ್ವದಲ್ಲಿ ತುಫಾಲ್‌ಖಾನ್‌ನನ್ನು ಹಿಂಬಾಲಿಸಲು ಕಳುಹಿಸಿದನು.

ಚಂಗೇಜ್‌ಖಾನ್‌ನಿಗೆ ಗೌರವ :

ಚಂಗೇಜ್‌ಖಾನ್‌ನು ಕೋಟೆಯನ್ನು ವಶಪಡಿಸಿಕೊಂಡನು. ಹಾಗೂ ಅದರ ನಂತರ ಅವನು ಮುರ್ತುಜಾ ನಿಜಾಮ್‌ಷಾಹ್‌ನ ಸೇವೆಯಲ್ಲಿ ಹಾಜರಾದನು. ಬಾದಷಾಹ್‌ನು ಚಂಗೇಜ್‌ಖಾನ್‌ನನ್ನು ಬಹಳೇ ಪ್ರಶಂಶಿಸಿದನು. ಹಾಗೂ ಗೌರವ ಸಲ್ಲಿಸಿದನು. ಅವನಿಗೆ ನಗದು ಧನರಾಶಿ ಹಾಗೂ ಬಹಳಷ್ಟು ಅಮೂಲ್ಯ ವಸ್ತುಗಳ ಹೊರತಾಗಿ "ಫಾತ್ ಮುಲ್ಕ ಬರಾರ್" (ಬರಾರ್ ಪ್ರಾಂತ್ಯದ ವಿಜೇತ) ಎಂಬ ಬಿರುದಿನಿಂದಲೂ ಪುರಸ್ಕರಿಸಿದನು.

ಬಂಧನಗಳು :

ಮುರ್ತುಜಾ ನಿಜಾಮಷಾಹ್‌ನು ಬುರ್ಹಾನ್ ಅಮಾದುಲ್‌ಮುಲ್ಕನನ್ನು ಯಾರು ಈ ಕೋಟೆಯಲ್ಲಿ ತುಫಾಲ್‌ಖಾನ್‌ನ ಕೈದಿಯಾಗಿದ್ದನು. ಅವನಿಗೆ ಬಂಧಿಸಿದನು. ಹಾಗೂ ಅವನನ್ನು ಹೊರತು ಪಡಿಸಿ ತುಫಾಲ್‌ಖಾನ್‌ನ ಪುತ್ರರನ್ನು ಸಹ ಬಂಧಿಸಿ ಒಂದು ಕೋಟೆಯಲ್ಲಿ ಗೃಹಬಂಧನದಲ್ಲಿಟ್ಟನು. ಈ ಎಲ್ಲ ಜನರು ಇದೇ ಗೃಹಬಂಧನದ ಅವಸ್ಥೆಯಲ್ಲಿ ತಮ್ಮ ಸಹಜ ಮೃತ್ಯುವಿನ ಪಾಲಾದರು. ಹಾಗೂ ಜಗತ್ತಿನಲ್ಲಿ ಯಾರ ಹೆಸರೂ ಉಳಿಯಲಿಲ್ಲ.

ಬೀದರ್ ಕೋಟೆಯನ್ನು ಗೆಲ್ಲುವ ಯೋಚನೆ :

ಮುರ್ತುಜಾ ನಿಜಾಮನು ಬರಾರ್‌ವನ್ನು ತಮ್ಮ ಅಮೀರರಲ್ಲಿ ಹಂಚಿ ಅಹ್ಮದ್‌ನಗರಕ್ಕೆ ಮರಳಲು ಬಯಸಿದನು. ಚಂಗೇಜ್‌ಖಾನ್‌ನಿಗೆ ಯಾವಾಗ ಈ ಸುದ್ದಿ ತಲುಪಿತೋ ಆಗ ಅವನು ಬಾದಷಾಹ್‌ನೊಂದಿಗೆ ಹೀಗೆಂದನು. "ಅಲಿ ಆದಿಲ್‌ಷಾಹ್‌ನೊಂದಿಗೆ ಈ ಮಾತಾಗಿತ್ತು. ಏನೆಂದರೆ ತಾವು ಬರಾರ್ ಹಾಗೂ ಬೀದರ್ ಎರಡೂ ಪ್ರಾಂತ್ಯಗಳನ್ನು ಜಯಿಸಬೇಕು. ಈ ದಿನಗಳಲ್ಲಿ ಅಲಿ ಆದಿಲ್‌ಷಾಹ್‌ನು ಟಪಕಾಪುರ ಕೋಟೆಯನ್ನು ಗೆಲ್ಲಲು ನಿರತನಾಗಿದ್ದಾನೆ. ಅದಕ್ಕಾಗಿ ನನ್ನ ನಮ್ರ ಅಭಿಪ್ರಾಯದಲ್ಲಿ ಇದೇ ಉಚಿತವಾಗಿದೆ. ನಾವು ಈ ಸಮಯದಲ್ಲಿ ಬೀದರ್‌ನ್ನು ಗೆಲ್ಲಬೇಕು". ಮುರ್ತುಜಾ ನಿಜಾಮ್‌ಷಾಹ್‌ನು ಈ ಅಭಿಪ್ರಾಯವನ್ನು ಮನ್ನಿಸಿದನು. ಹಾಗೂ ಬೀದರ್ ಕಡೆಗೆ ಹೊರಟನು.

ಬರಾರ್ ದತ್ತ ಮೊಹಮ್ಮದ್‌ಷಾ ಫಾರೂಕಿಯ ಪಯಣ :

ಮೊಹಮ್ಮದ್ ಷಾ ಫಾರೂಕಿಯು ಯಾವಾಗ ಇದನ್ನು ಅರಿತನೋ ಈಗ ಏನಾದರೂ ಮಾಡಲು ಸಾಧ್ಯವಿದೆ. ಆಗ ಅವನು ಬುರ್ಹಾನ್ ಅಮಾದುಲ್

ಮುಲ್ಕನ ದಾಯಿಯ ಪುತ್ರನಿಗೆ ದಿವಂಗತ ಬಾದಷಾಹ (ಬುರ್ಹಾನ್)ನ ಪುತ್ರನೆಂದು ಪ್ರಸಿದ್ಧಗೊಳಿಸಿ ಆರು ಸಾವಿರ ಸೈನಿಕರನ್ನು ಜೊತೆಗೆ ತೆಗೆದುಕೊಂಡು ಬರಾರ್‌ದತ್ತ ಹೊರಟನು. ಯಾವಾಗ ಅವನು ಬರಾರ್‌ಕ್ಕೆ ತಲುಪಿದನೋ ಏಳು ಎಂಟು ಸಾವಿರ ಬರಾರಿನ ಹಳೆಯ ಸೇವಕರೂ ಸಹ ಅವನ ಜೊತೆ ಸೇರಿದರು. ಈ ರೀತಿಯಲ್ಲಿ ಅವನ ಬಲವು ಇಮ್ಮಡಿಸಿತು.

ಮುರ್ತುಜಾ ನಿಜಾಮಷಾಹ್‌ನ ಹೆಸರಿನಲ್ಲಿ ಪತ್ರಗಳು :

ಖುದಾವಂದ್‌ಖಾನ್ ಹಾಗೂ ಹಬಶಿಖಾನ್‌ರು ಮೊಹ್ಮದ್‌ಷಾ ಫಾರೂಕಿಯನ್ನು ಎದುರಿಸಲಾರದಾದರು. ಅದಕ್ಕಾಗಿ ಅವರು ಮುರ್ತುಜಾ ನಿಜಾಮನ ಹೆಸರಿನಲ್ಲಿ ಒಂದು ವಿನಂತಿ ಪತ್ರ ಕಳುಹಿಸಿದರು. ಹೀಗೆ ಬರೆಯಲಾಗಿತ್ತು. ಏನೆಂದರೆ ಒಂದು ವೇಳೆ ಬಾದಷಾಹರು ಸ್ವತಃ ಈ ಕಡೆಗೆ ಗಮನ ನೀಡಿದರೆ ಈ ಹೆಜ್ಜೆಯು ಮೊಹಮ್ಮದ್ ಷಾ ಫಾರೂಕಿಯನ್ನು ಸೆದೆಬಡೆಯಲು ಸಾಧ್ಯವಾಗುವುದು. ಬರಾರ್‌ದ ಅಮೀರ್‌ರೂ ಸಹ ಬಾದಷಾಹ್‌ನ ಹೆಸರಿನಲ್ಲಿ ಇದೇ ವಿಷಯದಲ್ಲಿ ಪತ್ರ ಬರೆದರು.

ಬಾದಷಾಹ್‌ನು ಬರಾರ್‌ಕ್ಕೆ ಹೊರಡುವಿಕೆ :

ಮುರ್ತುಜಾ ನಿಜಾಮನು ಸೈಯ್ಯದ್ ಮುರ್ತುಜಾ ಸಬ್ಜವಾರಿಯನ್ನು ಯಾರು ಸ್ವಲ್ಪ ಅವಧಿಯ ಮುಂಚೆ ಬಿಜಾಪುರದಿಂದ ಬಂದಿದ್ದನು ಎಂಟು ಸಾವಿರ ಸೈನ್ಯದೊಂದಿಗೆ ಎದುರಾಳಿಗಳನ್ನು ಎದುರಿಸಲು ಕಳುಹಿಸಿದನು. ಅದರ ನಂತರ ಸ್ವತಃ ಅವನೂ ತನ್ನ ವಿಶೇಷ ಜೊತೆಗಾರರೊಂದಿಗೆ ಬರಾರ್‌ದತ್ತ ಹೊರಟನು. ಬಾದಷಾಹ್‌ನು ಚಂಗೇಜ್‌ಖಾನ್‌ನನ್ನು ಬೇಗನೆ ಬರಾರಕ್ಕೆ ತಲುಪಲು ಆದೇಶಿಸಿದನು.

ಬರಾರ್‌ಕ್ಕೆ ಆಗಮನ :

ಚಂಗೇಜ್‌ಖಾನ್‌ನು ಶೀಘ್ರವಾಗಿ ಗುರಿಯತ್ತ ಮುಂದುವರಿಯುತ್ತಾ ಬಾದಷಾಹ್‌ನ ಸೇವೆಯಲ್ಲಿ ತಲುಪಿದನು. ಯಾವಾಗ ಮುರ್ತುಜಾ ನಿಜಾಮನು ಬರಾರಕ್ಕೆ ತಲುಪಿದನೊ ಆ ವೇಳೆ ಸೈಯ್ಯದ್ ಮುರ್ತುಜಾ ಸಲ್ಲವಾರಿಯು ನಕಲು ಅಮಾದುಲ್‌ಮುಲ್ಕನನ್ನು ಸೋಲಿಸಿ ರಣಭೂಮಿಯಿಂದ ಓಡಿಸಿದ್ದನು. ಬಾದಷಾಹ್‌ನು ರೋಹನ್‌ಗೀರದ ಘಾಟವನ್ನು ದಾಟಿದನು. ಮೊಹ್ಮದ್‌ಷಾಹ್ ತನ್ನ ಪ್ರಾಂತ್ಯದಲ್ಲಿದ್ದನು. ಈ ಪರಿಸ್ಥಿತಿಯನ್ನು ಗಮನಿಸಿ ಅಸೀರ ಕೋಟೆಯಲ್ಲಿ ಆಶ್ರಯ ಪಡೆದನು.

ಅಸೀರ್ ಕೋಟೆಯತ್ತ ಚಂಗೇಜ್‌ಖಾನ್‌ನ ಪಯಣ :

ಮುರ್ತುಜಾ ನಿಜಾಮಷಾಹನು ಬುರ್ಹಾನ್‌ಪುರದವರೆಗಿನ ಎಲ್ಲ ಪ್ರಾಂತ್ಯಗಳನ್ನು ವಿನಾಶ ಗೊಳಿಸಿದನು. ಚಂಗೇಜ್‌ಖಾನ್‌ನು ಅಸೀರ್ ಕೋಟೆಯ ಕುರಿತು ಬಹಳೇ ಪ್ರಶಂಸೆ ಕೇಳಿದ್ದನು. ಅವನ ಮನಸ್ಸಿನಲ್ಲಿ ಕೋಟೆಯನ್ನು ನೋಡುವ ಬಯಕೆ

ಮೂಡಿತು. ಹಾಗೂ ಬಾದಷಾಹ್‌ನಿಂದ ಅನುಮತಿ ಪಡೆದು ಎರಡು ಸಾವಿರ ವಿದೇಶಿ ಸವಾರರ ಒಂದು ತಂಡದೊಂದಿಗೆ ಹೊರಟನು. ಮೊಹ್ಮದ್‌ಷಾಹ್‌ನಿಗೆ ಯಾವಾಗ ಇದರ ಸುದ್ಧಿಯು ತಲುಪಿತೋ ಆಗ ಅವನು ಏಳು ಎಂಟು ಸಾವಿರ ಸೈನಿಕರ ಒಂದು ತಂಡಕ್ಕೆ ಚಂಗೇಜ್‌ಖಾನ್‌ನಿಗೆ ಸುತ್ತುವರೆದು ಕೊಲ್ಲಬೇಕೆಂದು ಆದೇಶ ನೀಡಿದನು.

ವೈರಿಯೊಂದಿಗೆ ಯುದ್ಧ ಹಾಗೂ ಗೆಲುವು :

ಖಾಂದೇಶದ ಸೈನ್ಯವು ಅವಕಾಶವನ್ನು ಸದುಪಯೋಗಪಡಿಸಿಕೊಂಡು ಚಂಗೇಜ್‌ಖಾನ್‌ನ ಮೇಲೆ ದಾಳಿ ಮಾಡಿತು. ವೈರಿಯ ಸಂಖ್ಯಾ ಬಲದಿಂದಾಗಿ ಚಂಗೇಜ್‌ಖಾನ್‌ನು ಸ್ವಲ್ಪವೂ ಹೆದರಲಿಲ್ಲ. ಹಾಗೂ ಬಹಳೇ ಶೌರ್ಯದಿಂದ ವೈರಿಯನ್ನು ಎದುರಿಸತೊಡಗಿದನು. ಪರಸ್ಪರರಲ್ಲಿ ಭೀಕರ ಕಾಳಗ ಜರುಗಿತು. ಇದರ ಪರಿಣಾಮವಾಗಿ ಬುರ್ಹಾನ್‌ಪುರಿ ಸೈನ್ಯಕ್ಕೆ ಸೋಲಿನ ಮುಖ ನೋಡಬೇಕಾಯಿತು. ವೈರಿಯ ಅನೇಕ ಅತಿರಥ ಮಹಾರಥರಾದ ಅಮೀರರನ್ನು ಚಂಗೇಜ್‌ಖಾನ್‌ನು ಬಂಧನಗೊಳಿಸಿದನು.

ಬುರ್ಹಾನ್‌ಪುರದ ವಿನಾಶ :

ಮುರ್ತುಜಾ ನಿಜಾಮಷಾಹ್‌ನು ಬುರ್ಹಾನ್‌ಪುರದಿಂದ ಚಂಗೇಜ್‌ಖಾನ್‌ನ ಬಳಿಗೆ ಬಂದನು. ನಿಜಾಮಷಾಹೀ ಸೈನ್ಯವು ಮರುಭೂಮಿಯಲ್ಲಿಯೇ ತಮ್ಮ ತಮ್ಮ ಬಿಡಾರಗಳನ್ನು ಹೂಡಿತು. ಬಾದಷಾಹ್‌ನು ಅಮೀರರಲ್ಲಿ ಯುದ್ಧ ಸಂಕೇತವಾಗಿ ನವಿಲುಗರಿಗಳ ಬೀಸಣಿಗೆಗಳನ್ನು ಹಂಚಿದನು. ನಿಜಾಮುಷಾಹಿಗಳು ಬುರ್ಹಾನ್‌ಪುರವನ್ನು ಸಂಪೂರ್ಣವಾಗಿ ವಿನಾಶಗೊಳಿಸಿದರು. ಈ ದುಃಸ್ಥಿತಿಯನ್ನು ಕಂಡು ಮೊಹ್ಮದ್‌ಷಾಹ್ ಫಾರೂಕಿಯು ಬಹಳೇ ವಿಹ್ವಲಿತಗೊಂಡನು. ಅವನು ಅತೀವ ಪ್ರಯತ್ನಪಟ್ಟು ಸಂಧಾನ ಮಾಡಿದನು. ಮುರ್ತುಜಾ ನಿಜಾಮಷಾಹ್ ಹಾಗೂ ಚಂಗೇಜ್‌ಖಾನ್‌ನಿಗೆ ಆತನು ಅನುಕ್ರಮವಾಗಿ ಆರು ಲಕ್ಷ ಹಾಗೂ ನಾಲ್ಕು ಲಕ್ಷ 'ಮುಜಫ್ಫರಿ' (ಒಂದು ನಾಣ್ಯ) ಗಳನ್ನು ನೀಡಿ ಅವರಿಂದ 'ಮುಕ್ತಿ' ಪಡೆದನು.

ಮುರ್ಜಾ ಅಸಫಹಾನಿಯ ಆಗಮನ :

ಅದರ ನಂತರ ನಿಜಾಶಾಹಿ ಸೈನ್ಯವು ಬರಾರದತ್ತ ಹೊರಟಿತು. ಅದೇ ಸಮಯದಲ್ಲಿ ಕುತುಬಶಾಹನು ದ್ವಾರಪಾಲಕನಾದ. ಷಾಮಿರ್ಜಾ ಅಸ್ಫಹಾನಿಯು ಶುಭಾಶಯ ತಿಳಿಸಲು ಮುರ್ತುಜಾ ನಿಜಾಮುಷಾಹನ ಸೇವೆಯಲ್ಲಿ ಹಾಜರಾದರು. ಈ ದ್ವಾರಪಾಲಕನಿಗೆ ಯಾವುದೋ ಒಂದು ರೀತಿಯಿಂದ ಇದು ತಿಳಿಯಿತು. ಏನೆಂದರೆ ಮುರ್ತುಜಾ ನಿಜಾಮನು ಬೀದರ್‌ವನ್ನು ಗೆಲ್ಲುವ ಬಯಕೆ ಹೊಂದಿದ್ದಾನೆ. ಮಿರ್ಜಾ ಅಸ್ಫಹಾನಿಯು ಚಂಗೇಜಖಾನನನ್ನು ಲಾಲಸೆಗೊಳಪಡಿಸಲು ನಿರ್ಧರಿಸಿದನು. ಹಾಗೂ ಅವನಿಗೆ ಹೀಗೆಂದನು. "ಕುತುಬಶಾಹನಿಗೆ ನಿಮ್ಮ ಮೇಲೆ ಪೂರ್ಣ ಪ್ರಮಾಣದ

ಭರವಸೆ ಇದೆ. ನೀವು ಮುರ್ತುಜಾ ನಿಜಾಮಶಾಹನಿಗೆ ಬೀದರವನ್ನು ಗೆಲ್ಲುವುದನ್ನು ತಡೆಹಿಡಿಯಿ ನಾನು ಎರಡು ಲಕ್ಷ ಹಣವನ್ನು ನಿಮಗೊಪ್ಪಿಸುವೆನು ಏಕೆಂದರೆ ತಾವು ಈ ಹಣವನ್ನು ನಿಮ್ಮ ಸೈನ್ಯದ ಮೇಲೆ ಬಳಸಬಹುದು."

ಚಂಗೇಜಖಾನನ ಬಯಕೆ :

ಅದಕ್ಕುತ್ತರವಾಗಿ ಚಂಗೇಜಖಾನನು ಹೀಗೆಂದನು. "ಸಂಪೂರ್ಣ ನಿಜಾಮಶಾಹೀ ಭಂಡಾರವು ಹಾಗೂ ಸಂಪತ್ತು ನನ್ನ ಕೈಯಲ್ಲಿದೆ. ಆದ ಕಾರಣ ನನಗೆ ಯಾವುದೇ ಬಗೆಯ ಅವಶ್ಯಕತೆ ಇಲ್ಲ. ಈಗ ನನ್ನದೆಂದು ಕೇವಲ ಒಂದು ಆಸೆಯಿದೆ. ಏನೆಂದರೆ ಅಮೀರಬರೀದನು ಯಾರು ನನ್ನ ಹಾದಿಯ ಮುಳ್ಳಾಗಿದ್ದಾನೆ. ಆತನನ್ನು ಕೊನೆಗೊಳಿಸುವೆನು. ಅದರಿಂದ ನಮ್ಮ ಹಾಗೂ ನಿಮ್ಮ ಪ್ರಾಂತ್ಯದಲ್ಲಿ ಯಾವುದೇ ಅಡೆತಡೆ ಉಳಿಯದಿರಲಿ. ಹಾಗೂ ಎಲ್ಲ ಸಮಧರ್ಮಿಯರಾದ ದಖ್ಖನ್ನಿನ ಆಡಳಿತಗಾರರು ಪರಸ್ಪರ ಸಹೋದರರಂತೆ ನಡೆದುಕೊಳ್ಳಲಿ ಅದರಿಂದ ದೆಹಲಿಯ ಬಾದಶಾಹನಿಂದ ಯಾವುದೇ ಅಪಾಯ ಎದುರಾಗದಿರಲಿ.

ಸಾಹೇಬಖಾನನೊಂದಿಗೆ ಸಂಚು :

ಚಂಗೇಜಖಾನನ ಈ ಉತ್ತರದಿಂದ ಮಿರ್ಜಾ ಅಸ್ಫಹಾನಿಗೆ ಬಹಳೇ ನಿರಾಶೆಯುಂಟಾಯಿತು. ಅದರ ನಂತರ ಆತನು ಮುರ್ತುಜಾ ನಿಜಾಮನ ನಂಬಿಗಸ್ತನಾದ ಸಾಹೇಬಖಾನನೊಂದಿಗೆ ಮಾತುಕತೆ ಆರಂಭಿಸಿದನು. ಹಾಗೂ ಆತನಿಗೆ ನಗದು ಹಣ ಹಾಗೂ ವಜ್ರವೈಡೂರ್ಯಗಳನ್ನು ಕೊಟ್ಟು ತನ್ನ ಸ್ನೇಹಿತನನ್ನಾಗಿಸಿಕೊಂಡನು. ಒಂದು ದಿನ ಮಧ್ಯಪಾನದ ಸಭೆಯಲ್ಲಿ ಮಿರ್ಜಾ ಅಸ್ಫಹಾನಿಯು ಸಾಹೇಬಖಾನನಿಂದ ಹೀಗೆಂದನು. ಚಂಗೇಜಖಾನನು ಬರಾರವನ್ನು ವಶಪಡಿಸಿಕೊಳ್ಳಲು ಇಚ್ಛಿಸುತ್ತಿದ್ದಾನೆ. ಹಾಗೂ ಈ ಪ್ರಾಂತ್ಯದಲ್ಲಿ ತನ್ನ ಹೆಸರಿನ ಖುತ್ಬಾ ಹಾಗೂ ಮುದ್ರೆಯನ್ನು ಹಾರಿಗೊಳಿಸಬೇಕು. ಏಕೆಂದರೆ ನಿಜಾಮಶಾಹೀ ಸೈನ್ಯದ ಅರ್ಧಭಾಗವು ಆತನ ಋಣದಲ್ಲಿದೆ. ಅದಕ್ಕಾಗಿ ಆತನು ತನ್ನ ಬಯಕೆಯನ್ನು ಬಹಳ ಸುಲಭವಾಗಿ ಪೂರ್ತಿಗೊಳಿಸಿಕೊಳ್ಳಬಹುದು. ಅರ್ಧಭಾಗವು ಆತನ ಋಣದಲ್ಲಿದೆ. ಅದಕ್ಕಾಗಿ ಆತನು ತನ್ನ ಬಯಕೆಯನ್ನು ಬಹಳ ಸುಲಭವಾಗಿ ಪೂರ್ತಿಗೊಳಿಸಿಕೊಳ್ಳಬಹುದು. ಈ ಕಾರಣದಿಂದ ಚಂಗೇಜಖಾನನು ಮುರ್ತುಜಾ ನಿಜಾಮಶಾಹನಿಗೆ ಯಾವುದೇ ಒಂದು ಸ್ಥಳದಲ್ಲಿ ಕೂತುಕೊಳ್ಳಲು ಬಿಡುವುದಿಲ್ಲ. ಹಾಗೂ ನಿರಂತರವಾಗಿ ಅತ್ತಿತ್ತ ತಿರುಗಿಸುತ್ತಿರುತ್ತಾನೆ. ಏಕೆಂದರೆ ಅವಕಾಶ ಪಡೆದು ತನ್ನ ಇಚ್ಛೆ ಪೂರ್ತಿಗೊಳಿಸಿಕೊಳ್ಳಬೇಕು.

ಚಂಗೇಜಖಾನನೊಂದಿಗೆ ಸಾಹೇಬಖಾನನ ವಿರೋಧ :

ಸಾಹೇಬಖಾನನು ಮಿರ್ಜಾ ಅಸ್ಫಹಾನಿಯ ಮಾತುಕತೆಯನ್ನು ನಿಜವೆಂದು

ಭಾವಿಸಿದನು. ಹಾಗೂ ಚಂಗೇಜಖಾನನ ವಿರೋಧಿಯಾದನು. ಅದೇ ಕಾಲದಲ್ಲಿ ಸಾಹೇಬಖಾನನಿಂದ ಒಂದು ಅನಾಗರಿಕ ಕೃತ್ಯ ಜರುಗಿತು. ಆತನು ಮಧ್ಯ ಸೇವಿಸಿ ಹಲವಾರು ಅಮೀರರೊಂದಿಗೆ ದುರ್ವರ್ತನೆಯಿಂದ ನಡೆದುಕೊಂಡನು. ಇದರ ಮೇಲೆ ಚಂಗೇಜಖಾನನು ಬಾದಶಹನ ಆದೇಶವನ್ನು ಪಾಲಿಸಿ ಆತನಿಗೆ ಕಠೋರ ರೂಪದಲ್ಲಿ ಶಿಕ್ಷೆಗೊಳಪಡಿಸಿದನು. ಈ ಕಾರಣದಿಂದ ಸಾಹೇಬಖಾನನು ಚಂಗೇಜಖಾನನನ್ನು ಇನ್ನಷ್ಟು ದ್ವೇಷಿಸತೊಡಗಿದನು. ಆತನು ತನ್ನ ವೈರತ್ವದ ಕಾರ್ಯವನ್ನು ಇನ್ನಷ್ಟು ತೀವ್ರಗೊಳಿಸಿದನು.

ಬಾದಶಾಹನೊಂದಿಗೆ ಚಂಗೇಜಖಾನನ ಕುರಿತು ದೂರು :

ಸಾಹೇಬಖಾನನು ಚಂಗೇಜಖಾನನಿಂದ ಸೇಡು ತೀರಿಸಿಕೊಳ್ಳಲು ಈ ತೆರನಾದ ಹಾದಿಯನ್ನು ಹುಡುಕಿದನು. ಯಾವನು ಆತನಿಗೆ ಅವಕಾಶ ಸಿಗುತ್ತಿತ್ತೋ ಆಗಲೆಲ್ಲ ಆತನು ಬಾದಶಾಹನೊಂದಿಗೆ ಚಂಗೇಜಖಾನನ ಕುರಿತು ಇಲ್ಲ ಸಲ್ಲದ ಆರೋಪ ಹೊರಿಸುತ್ತಿದ್ದನು. ಹಾಗೂ ಮುರ್ತುಜಾ ನಿಜಾಮನನ್ನು ಆತನ ವಿರೋಧವಾಗಿ ಉತ್ತೇಜಿಸತ್ತಿದ್ದನು. ಮುರ್ತುಜಾ ನಿಜಾಮನು ಸಾಹೇಬಖಾನನ ಮಾತುಗಳನ್ನು ಗಂಭೀರವಾಗಿ ಪರಿಗಣಿಸುತ್ತಿರಲಿಲ್ಲ. ಹಾಗೂ ಆತನೊಂದಿಗೆ ಯಾವಾಗಲೂ ಹೀಗೆ ಹೇಳುತ್ತಿದ್ದನು. "ಏಕೆಂದರೆ ನಾನು ನಿನಗೆ ಚಂಗೇಜಖಾನನ ಕೈಯಿಂದ ಶಿಕ್ಷೆಗೊಳಪಡಿಸಿದ್ದೆನು. ಆ ಕಾರಣಕ್ಕೆ ನೀನು ಆತನೊಂದಿಗೆ ಸೇಡು ತೀರಿಸಿಕೊಳ್ಳುವುದಕ್ಕಾಗಿ ನನ್ನನ್ನು ಉತ್ತೇಜಿಸುತ್ತಿರುವಿ ಹಾಗೂ ನನ್ನೊಂದಿಗೆ ಆತನ ವಿರುದ್ಧ ದೂರು ಸಲ್ಲಿಸುತ್ತಿರುವಿರಿ."

ಸಾಹೇಬಖಾನನ ಹೊಸ ಸಂಚು :

ಒಂದು ದಿನ ಮುರ್ತುಜಾ ನಿಜಾಮಶಾಹನು ಮದ್ಯ ಸೇವಿಸಿದ ಸ್ಥಿತಿಯಲ್ಲಿದ್ದನು. ಹಾಗೂ ಪ್ರಜ್ಞೆ ಕಳೆದುಕೊಂಡಿದ್ದನು. ಏಕಾಂತದಲ್ಲಿ ಸಾಹೇಬಖಾನನು ಬಂದಿದ್ದನಂತೆ ಚಂಗೇಜಖಾನನ ವಿರುದ್ಧ ಮಾತನಾಡಲು ಪ್ರಾರಂಭಿಸಿದನು. ಬಾದಶಹನು ಅದಕ್ಕುತ್ತರವಾಗಿ ಮೊದಲಿನಂತೆಯೇ ಹೇಳಿದನು. ಇದರ ಮೇಲೆ ಸಾಹೇಬಖಾನನು ಅಳತೊಡಗಿದನು. ಹಾಗೂ ಹೀಗೆಂದರು. "ನಾನು ಒಂದು ವೇಳೆ ಚಂಗೇಜಖಾನನ ವೈರಿಯಾಗಿದ್ದೇನೆ ಹಾಗೂ ಇದೇ ವೈರತ್ವದಿಂದ ಮಾತನಾಡುತ್ತಿದ್ದೇನೆಂದಾದರೆ ಸತ್ಯಾಂಶವನ್ನು ತಾವು ಶಾ ಮಿರ್ಜಾ ಅಸ್ಫಹಾನಿಯಿಂದ ತಿಳಿದುಕೊಳ್ಳಬಹುದು ಯಾರು ನಿಮ್ಮ ದೇಶದವನಾಗಿದ್ದಾನೆ."

ಚಂಗೇಜಖಾನನೊಂದಿಗೆ ಬಾದಶಾಹನ ಮುನಿಸು :

ಮುರ್ತುಜಾ ನಿಜಾಮುಶಾಹನು ರಾತ್ರಿ ವೇಳೆಯಲ್ಲಿ ಶಾಹ ಮಿರ್ಜಾ ಅಸ್ಫಹಾನಿಯನ್ನು ತನ್ನ ಬಳಿ ಕರೆಯಿಸಿಕೊಂಡನು. ಏಕೆಂದರೆ ಈ ಭೇಟಿಯ ಕುರಿತು

ನಿಮಗೆ ತಿಳಿದಿರಲಿ ಎಂದು ಬಾದಶಾಹನು ಮಿರ್ಜಾ ಅಸ್ಫಹಾನಿಯೊಂದಿಗೆ ವಾಸ್ತವಾಂಶದ ಕುರಿತು ವಿಚಾರಿಸಿದನು. ಮಿರ್ಜಾನು ಬಹಳೇ ಉತ್ಸಾಹಪೂರ್ವಕವಾಗಿ ಸಾಹೇಬಖಾನನ ಎಲ್ಲ ಮಾತುಗಳನ್ನು ಪುರಸ್ಕರಿಸಿದನು. ಇದೆಲ್ಲವನ್ನು ತಿಳಿದುಕೊಂಡು ಮುರ್ತುಜಾ ಶಾಹನು ಚಂಗೇಜಖಾನನಿಂದ ದೂರವಾದನು. ಆದರೆ ಇಷ್ಟೂ ದೂರವು ಆಗಲಿಲ್ಲ. ಬಾದಶಹನು ತಕ್ಷಣ ಯಾವುದೇ ಕ್ರಮ ಕೈಗೊಳ್ಳಲಿಲ್ಲ. ಬಾದಶಹನ ಮನದಲ್ಲಿ ಈ ಯೋಚನೆಯು ಬಂದಿತು. ಸಾಹಭೇಖಾನ ಹಾಗೂ ಮಿರ್ಜಾ ಅಸ್ಫಹಾನಿಯು ಸೇರಿಕೊಂಡು ಯಾವುದೇ ಸಂಚನ್ನು ರೂಪಿಸಿರಬಹುದೆಂದು ಕೊಂಡನು. ಕೆಲ ದಿನಗಳ ವರೆಗೆ ಬಾದಶಾಹನು ಈ ವಿಚಾರವಾಗಿ ಯೋಚಿಸುತ್ತಿದ್ದನು. ಕೊನೆಗೆ ಆತನು ಚಂಗೇಜಖಾನನ ಪರೀಕ್ಷೆ ತೆಗೆದುಕೊಳ್ಳಲು ನಿಶ್ಚಯಿಸಿದನು.

ಚಂಗೇಜಖಾನನ ಪರೀಕ್ಷೆ :

ಒಂದು ದಿನ ಮುರ್ತುಜಾ ನಿಜಾಮಶಾಹನು ಚಂಗೇಜಖಾನನೊಂದಿಗೆ ಹೀಗೆಂದನು. "ನಾನು ಪ್ರವಾಸವನ್ನು ಮಾಡುತ್ತಾ ಮಾಡುತ್ತಾ ಪ್ರವಾಸದ ಪ್ರಯಾಸದಿಂದ ತುಂಬಾ ನಿತ್ರಾಣನಾಗಿರುವೆನು. ಈ ಕಾರಣಕ್ಕೆ ಬಹುಬೇಗನೆಯೇ ಅಹ್ಮದನಗರಕ್ಕೆ ಮರಳಿ ಹೋಗಬಯಸುವೆನು" ಚಂಗೇಜಖಾನನು ವೈರಿಗಳ ಸಂಚಿನಿಂದ ಸಂಪೂರ್ಣವಾಗಿ ತಿಳಿದಿಲ್ಲದವನಾಗಿದ್ದನು. ಆತನಿಗುತ್ತರವಾಗಿ ಹೀಗೆ ಹೇಳಿದನು. "ಖಾವಂದರು ಈ ಪ್ರಾಂತ್ಯವನ್ನು ಇತ್ತೀಚೆಗೆ ಗೆದ್ದುಕೊಂಡಿರುವಿರಿ ಅದಕ್ಕಾಗಿ ಐದು ಆರು ತಿಂಗಳಿನವರೆಗಾದರೂ ತಾವು ಇಲ್ಲಿ ವಾಸವಾಗಿರುವುದು ಉಚಿತವಾಗಿದೆ. ಏಕೆಂದರೆ ಇಲ್ಲಿಯ ಪ್ರಜೆಗಳಿಗೆ ತಮ್ಮ ಮೇಲೆ ಸಂಪೂರ್ಣ ನಂಬಿಕೆ ಉಂಟಾಗಲಿ.

ಚಂಗೇಜಖಾನನು ಬಾದಶಾಹನೊಂದಿಗೆ ಮಾತು ಮುಂದುವರಿಸಿ ಹೀಗೆ ಹೇಳಿದನು. ಐದಾರು ತಿಂಗಳು ವಾಸಿಸಿದ ನಂತರ ಖಾವಂದರು ಅಹ್ಮದನಗರಕ್ಕೆ ಮರಳುವರು. ಆದರೆ ನನಗೆ ಇಲ್ಲಿಯೇ ಇರಲು ಅನುಮತಿ ನೀಡಬೇಕು. ಏಕೆಂದರೆ ನಾನು ಈ ಪ್ರಾಂತ್ಯದ ಆಡಳಿತವನ್ನು ರೂಪಿಸಿ ಆಮೇಲೆ ತಮ್ಮ ಸೇವೆಯಲ್ಲಿ ಹಾಜರಾಗುವೆನು" ಮುರ್ತುಜಾ ನಿಜಾಮಶಾಹನು ಯಾವಾಗ ಚಂಗೇಜಖಾನನ ಬಾಯಿಯಿಂದ ಈ ಮಾತುಗಳನ್ನು ಆಲಿಸಿದನು. ಆಗ ಆತನಿಗೆ ಚಾಡಿಕೋರರ ಮಾತುಗಳ ಮೇಲೆ ಭರವಸೆ ಮೂಡಿತು. ಹಾಗೂ ಆತನು ಚಂಗೇಜಖಾನನೊಂದಿಗೆ ನಿಜವಾಗಿಯೂ ಅಪನಂಬಿಕೆ ಮೂಡಿಸಿಕೊಂಡನು.

ಚಂಗೇಜಖಾನನ ವಿರುದ್ಧ ಸಂಚು :

ಚಂಗೇಜಖಾನನು ಬಾದಶಾಹನ ಅಪನಂಬಿಕೆಯನ್ನು ಗ್ರಹಿಸಿದನು. ಅದಕ್ಕಾಗಿ ಅವನು ಕಾಯಿದೆಯ ನೆಪ ಹೂಡಿ ದರ್ಬಾರಿಗೆ ಗೈರು ಹಾಜರಿರಲು ಅನುಮತಿ ಪಡೆದನು. ಹಾಗೂ ಕೆಲವು ದಿನಗಳವರೆಗೆ ದರ್ಬಾರಕ್ಕೆ ಬರಲಿಲ್ಲ. ಬಾದಶಾಹನು

ಹಕೀಂ ಮೊಹಮ್ಮದ್ ಮಿಸ್ರಿಯಿಂದ ವೈದ್ಯರನ್ನು ಚಿಕಿತ್ಸೆಯನ್ನು ನೀಡಲು ಚಂಗೇಜಖಾನನ ಬಳಿಗೆ ಕಳುಹಿಸಿದನು. ಹಾಗೂ ಹಕೀಮನಿಗೆ ಹೀಗೆ ಹೇಳಿದನು. ವಿಷಯುಕ್ತ ಪಾನೀಯವನ್ನು ನೀಡಿ ಚಂಗೇಜಖಾನನ ಕಥೆ ಮುಗಿಸಬೇಕು.

ಅಂತಿಮ ಗಳಿಗೆಗಳಲ್ಲಿ ಬಾದಷಾಹ್‌ನ ಹೆಸರಿನಲ್ಲಿ ಪತ್ರ :

ಚಂಗೇಜ್‌ಖಾನ್‌ನು ಮೊದಮೊದಲು ಪಾನೀಯುವನ್ನು ಕುಡಿಯುಲು ನಿರಾಕರಿಸಿದನು. ಆದರೆ ನಂತರ ಬಾದಷಾಹನಿಗೆ ತನ್ನ ವಿಧೇಯತೆಯನ್ನು ಸಾಬೀತುಗೊಳಿಸಲು ಈ ವಿಷಯುಕ್ತ ಪಾನೀಯವನ್ನು ಕುಡಿದನು. ಹಾಗೂ ಇವನಿಗೆ ಯಾವಾಗ ಸಾವಿನ ಸಮಯ ಸಮೀಪಿಸಿ ತೊಂದರೆಯಾಗತೊಡಗಿತೋ ಆಗ ಅವನು ಬಾದಷಾಹ್‌ನ ಹೆಸರಿನಲ್ಲಿ ಈ ಸಾರಾಂಶವುಳ್ಳ ಒಂದು ಪತ್ರವನ್ನು ಬರೆದನು. "ಈ ವಿಧೇಯ ಗುಲಾಮನು ತನ್ನ ಎಪ್ಪತ್ತನೆಯ ವರ್ಷಕ್ಕೆ ತಲುಪಿದ್ದಾನೆ. ತಮ್ಮ ಅರಮನೆಯ ಬಾಗಿಲಿಗೆ ಬಾಗಿ ಹೊಸ್ತಿಲಿಗೆ ಚುಂಬಿಸಿ ವಿನಂತಿಸುವುದೇನೆಂದರೆ ಹುಜೂರ್ ತಾವು ನನಗಾಗಿ ನೀಡಿದ ಪಾನೀಯವು ಈ ವೃದ್ಧಸೇವಕನು ಶತ ಪ್ರತಿಶತ ಉತ್ಸುಕತೆಯಿಂದ ತನ್ನ ಗಂಟಲಲ್ಲಿ ಇಳಿಸಿದ್ದಾನೆ. ಈಗ ಖಾವಂದರ ವಿಧೇಯತೆ ಹಾಗೂ ನಿಷ್ಠೆ ತನ್ನ ಎದೆಯಲ್ಲಿ ಧರಿಸಿ ಮಣ್ಣಲ್ಲಿ ಮಣ್ಣಾಗಲು ಹೊರಟಿರುವನು. ದೇವನು ತಮಗೆ ಸುಭೀಕ್ಷದ ಆಯುರಾರೋಗ್ಯ ನೀಡಲಿ, ಈಗ ಕೊನೆಯ ಗಳಿಗೆಯಲ್ಲಿ ಈ ಸೇವಕನ ವಿನಂತಿಯಿದೆ ಅದೇನೆಂದರೆ ನನ್ನ ಶವವನ್ನು ಕರ್ಬಲಾ ಮೂಅಲ್ಲಾಕ್ಕೆ ಕಳುಹಿಸಬೇಕು. ಹಾಗೂ ಯಾರು ನನ್ನ ಸೇವೆಯಲ್ಲಿದ್ದಾರೆ ಅವರಿಗೆ ತಾವು ಷಾಹೀ ಸಶಸ್ತ್ರ ಸೈನ್ಯದಲ್ಲಿ ಸ್ಥಾನ ನೀಡಬೇಕು.

ಚಂಗೇಜ್‌ಖಾನ್‌ನ ಮೃತ್ಯು :

ಚಂಗೇಜ್‌ಖಾನ್‌ನು ಈ ವಿನಂತಿ ಪತ್ರವನ್ನು ಬಾದಷಾಹನ ಸೇವೆಯಲ್ಲಿ ಕಳುಹಿಸಿದನು. ಮತ್ತೆ ತನ್ನ ಮಂಚದ ಮೇಲೆ ಮಲಗಿದನು. ಮರುದಿನ ಬೆಳಿಗ್ಗೆ ಈ ವಿಧೇಯ ಅಮೀರನು ಮೃತ್ಯುವನ್ನಪ್ಪಿದನು. ಈ ಘಟನೆಯು ಹಿಜ್ರಿಶಕೆ ೯೭೩ ರಲ್ಲಿ ನಡೆಯಿತು. ಚಂಗೇಜ್‌ಖಾನ್‌ನ ಮೃತ್ಯುವಿನಿಂದ ಜನರ ಹೃದಯದಲ್ಲಿ ಅಮಾದುದ್ದೀನ್ ಮೆಹಮ್ಮೂದ್ ಹಾಗೂ ಖ್ವಾಜಾ ಕಾಂವಾ ನೆನಪು ಮರುಕಳಿಸಿತು. ಚಂಗೇಜ್‌ಖಾನ್‌ನು ತನ್ನ ಹಿಂದೆ ಯಾವ ವಸ್ತುಗಳನ್ನು ಬಿಟ್ಟಿರುವನೋ ಅವುಗಳನ್ನು ಷಾ ಮಿರ್ಜಾ ಅಸ್ಫಹಾನಿಯ ಮೂರು ನಾಲ್ಕು ಪತ್ರಗಳು ಲಭಿಸಿದವು. ಅವುಗಳಿಂದ ಚಂಗೇಜ್‌ಖಾನ್‌ನ ವಿಧೇಯತೆಯ ಪರಿಚಯವಾಯಿತು.

ಲಜ್ಜಿತಗೊಂಡ ಬಾದಷಾಹ :

ಮುರ್ತುಜಾ ನಿಜಾಮುಷಾಹ್‌ನಿಗೆ ಯಾವಾಗ ಸತ್ಯದ ಅರಿವಾಯಿತೋ ಆಗ ಅವನು ಬಹಳೇ ಲಜ್ಜಿತಗೊಂಡನು. ಚಂಗೇಜ್‌ಖಾನ್‌ನಂತಹ ವಿಧೇಯ ಹಾಗೂ

ನಿಷ್ಠಾವಂತನಾದ ಮಂತ್ರಿಯ ಚಿರ ಅಗಲುವಿಕೆಯು ಬಾದಷಾಹನ ಆತ್ಮದ ಮೇಲೆ ಮಣಭಾರವಾಯಿತು. ಆದರೆ ಅವನು ಇಗ ಏನು ಮಾಡಬಹುದಾಗಿತ್ತು? ಬಾಣವು ಬಿಲ್ಲಿನಿಂದ ಹೊರಟಾಗಿತ್ತು. ಬಾದಷಾಹ್‌ನು ತಕ್ಷಣ ಷಾ ಮಿರ್ಜಾ ಅಸ್ಫಹಾನಿಯನ್ನು ಷಾಹೀ ಸೈನ್ಯದಿಂದ ಹೊರಟು ಹೋಗಲು ಆದೇಶಿಸಿದನು. ಮತ್ತು ಸ್ವತಃ ಮರಳಿ ಅಹ್ಮದ್‌ನಗರದತ್ತ ಹೊರಟನು.

ಹೊಸ ನೇಮಕಾತಿ :

ಮುರ್ತುಜಾ ನಿಜಾಮಷಾಹ್‌ನು ಮೊದಲು ಹಕಿಂ ಮೊಹಮ್ಮದ್ ಮಿಸ್ರಿಗೆ ಮುಖಂಡನ ಹುದ್ದೆಯನ್ನು ನೀಡಿದನು. ಆದರೆ ಆರು ತಿಂಗಳ ಅವಧಿಯ ನಂತರ ಅವನನ್ನು ಪದಚ್ಯುತಗೊಳಿಸಿ ಈ ಹುದ್ದೆಗೆ ಖಾಜಿ ಬೇಗ್ ಪರ್ಜಿಯನ್ನು ಹಿಜ್ರಿ ಶಕೆ ೯೮೩ ರ ಆರಂಭದಲ್ಲಿ ನೇಮಿಸಿದನು. ಮಿರ್ಜಾ ಮೊಹಮ್ಮದ್ ನಜೀರಿ ಹಾಗೂ ಐನುಲ್ ಮುಲ್ಕನಿಗೆ ಮಂತ್ರಿಯನ್ನಾಗಿಸಿದನು. ಸೈಯ್ಯದ್ ಮುರ್ತುಜಾ ಶಿರಾಜಿಯನ್ನು ಬರಾರ್‌ದ ಸೇನಾಧಿಪತಿಯನ್ನಾಗಿ ನೇಮಿಸಲಾಯಿತು. ಹಾಗೂ ಖುದಾವಂದ್‌ಖಾನ್‌ರಂತಹ ಗೌರವಾನ್ವಿತ ಸರದಾರರೊಂದಿಗೆ ಅವನನ್ನು ಬರಾರ್‌ಕ್ಕೆ ಕಳುಹಿಸಲಾಯಿತು.

ಬಾದ್‌ಷಾಹ್‌ನ ಒಂದು ಮಹತ್ವದ ಭಾಷಣ :

ಮುರ್ತುಜಾ ನಿಜಾಮಷಾಹ್‌ನು ಖಾಜಿ ಬೇಗ್ ಹಾಗೂ ಅಹ್ಮದ್‌ನಗರದ ಇನ್ನಿತರ ಪ್ರಸಿದ್ಧ ಅಮೀರರು ಮತ್ತು ಆಡಳಿತದ ಪ್ರಮುಖರನ್ನು ಸೇರಿಸಿ ಹೀಗೆಂದನು. ತಮಗೆ ಈ ವಿಷಯ ತಿಳಿದಿರಲಿ, ಏನೆಂದರೆ ನನ್ನಲ್ಲಿ ಆಡಳಿತ ಹಾಗೂ ಲೋಕ ವ್ಯವಹಾರದ ಅರ್ಹತೆ ಇಲ್ಲ. ನಾನು ನ್ಯಾಯ ಹಾಗೂ ಶಿಕ್ಷೆಯನ್ನು ಪರಿಗಣಿಸುವಲ್ಲಿ ಅನರ್ಹನಾಗಿದ್ದೇನೆ. ಎಷ್ಟೋ ಸಲ ಹೀಗಾಗಿದೆ. ನಾನು ನ್ಯಾಯದ ಆಪೇಕ್ಷೆಯಿಂದ ಶಿಕ್ಷೆಗೆ ಗುರಿಪಡಿಸಿ ತೊಂದರೆ ಅನುಭವಿಸಿದ್ದೇನೆ. ನಾನೀಗ ನಿಮಗೆ ಸಾಕ್ಷಿಗಳನ್ನಾಗಿಸುತ್ತೇನೆ. ಹಾಗೂ ಅಂತಿಮ ನಿರ್ಣಾಯಕ ದಿನದಂದು ನಿಮ್ಮ ಸಾಕ್ಷಿಯನ್ನು ಬಯಸುವೆನು. ನಾನು ಖಾಜಿ ಬೇಗ್‌ರನ್ನು ಯಾರು ಮೂಲ ಕುಲೀನ ಸೈಯ್ಯದ್ ಆಗಿದ್ದಾರೆ ಅವರಿಗೆ ನಮ್ಮ ರಾಜಪ್ರತಿನಿಧಿಯನ್ನಾಗಿಸಿದ್ದೇನೆ. ಈ ಸೈಯ್ಯದ್‌ರು ಷರಿಯತ್ತು ಹಾಗೂ ನ್ಯಾಯದ ನಿಯಮಗಳನ್ನು ಅನುಸರಿಸಿ ಪ್ರಜೆಗಳೊಂದಿಗೆ ಸದ್ವರ್ತನೆಯೊಂದಿಗೆ ನಡೆಯಲಿ.

ಸಂಪೂರ್ಣ ಬೇರ್ಪಡಿಸಿಕೊಳ್ಳುವಿಕೆ :

ಒಂದು ವೇಳೆ ಒಬ್ಬ ಶೋಷಿಸುವ ವ್ಯಕ್ತಿಯು ಯಾವುದೇ ಒಬ್ಬ ಅಸಹಾಯಕ ವ್ಯಕ್ತಿಯೊಂದಿಗೆ ಒಂದು ಸೂಜಿಯನ್ನು ಬಲ ಪ್ರಯೋಗಿಸಿ ಪಡೆದುಕೊಂಡದ್ದೇ ಆದರೆ

ಹಾಗೂ ಅಂತಿಮ ನಿರ್ಣಾಯಕ ದಿನದಂದು ನನ್ನೊಂದಿಗೆ ಈ ವಿಷಯದ ಕುರಿತು ಪ್ರಶ್ನಿಸಲಾದರೆ ನಾನು ಘನವಂತನಾದ ದೇವನಿಗೆ ಉತ್ತರಿಸುವೆನು ಏನೆಂದರೆ "ನನಗೆ ಈ ವಿಷಯದಲ್ಲಿ ಏನೊಂದು ಜ್ಞಾನವಿಲ್ಲ. ನನಗೆ ಈ ಉತ್ತರದಾಯಿತ್ವದಿಂದ ಹೊರಗಿಡಬೇಕು. ಹಾಗೂ ಇದರ ಎಲ್ಲ ವಿಷಯವು ಖಾಜಿಬೇಗನಿಗೆ ಕೇಳಬೇಕು. ಯಾವನು ನನ್ನ ವಕೀಲನಾಗಿರುವನು ಒಂದು ವೇಳೆ ಖಾಜಿಬೇಗನು ವೈಯಕ್ತಿಕವಾಗಿ ನ್ಯಾಯ ಒದಗಿಸದಿದ್ದರೆ ಅವನು ಅಮೀನುಲ್ ಮುಲ್ಕ, ಮಿರ್ಜಾ ಮೊಹಮ್ಮದ್ ತಖಿ, ಹಾಗೂ ಖಾಸಿಂ ಬೇಗ್‌ನಿಗೆ ತನ್ನ ಸಂಗಡಿಗರನ್ನಾಗಿಸಬಹುದು."

ಅಲ್ಲಾಹುವಿನ ಕಠೋರ ಶಿಕ್ಷೆಯ ಭಯ :

ನಾನು ಇಂಥ ಪ್ರಕೃತಿಯ ಮನುಷ್ಯನಾಗಿದ್ದೇನೆ. ಪ್ರತಿಕ್ಷಣ ದೇವನ ಶಿಕ್ಷೆಯ ಕಾರಣ ಭಯಭೀತನಾಗಿರುತ್ತೇನೆ. ನಾನು ಚಂಗೇಜ್‌ಖಾನ್‌ನೊಂದಿಗೆ ಯಾವ ವರ್ತನೆಯನ್ನು ಮಾಡಿದ್ದೇನೆಯೋ ಆ ಕಾರಣಕ್ಕೆ ಬಹಳೆ ಲಜ್ಜಿತನಾಗಿದ್ದೇನೆ. ಆ ಕಾರಣಕ್ಕೆ ನಾನು "ಈ ಪ್ರಮಾಣ ಮಾಡಿದ್ದೇನೆ. ಉಳಿದ ಆಯುಸ್ಸನ್ನು ಏಕಾಂತದಲ್ಲಿ ಕಳೆಯುವೆನು ಹಾಗೂ ಜಗತ್ತಿನಿಂದ ದೂರವಾಗಿ ದೇವನ ಆರಾಧನೆ ಮಾಡುತ್ತಲಿರುವೆನು".

ಏಕಾಂತವಾಸ :

ಈ ಭಾಷಣದ ನಂತರ ಮುರ್ತುಜಾ ನಿಜಾಮಷಾಹ್‌ನು ಏಕಾಂತವಾಸಿಯಾದನು. ಹಾಗೂ ಅಹ್ಮದ್‌ನಗರದ ಕೋಟೆಯಲ್ಲಿರುವ ಆ ಇಮಾರತ್ತಿನಲ್ಲಿ ಯಾವುದು "ಬಗ್ದಾದ್" ಹೆಸರಿನಲ್ಲಿ ಪ್ರಸಿದ್ಧವಿದೆ ಅದರಲ್ಲಿ ಏಕಾಂತವಾಸಿಯಾದನು. ಸಾಹೇಬ್‌ಖಾನ್‌ನನ್ನು ಹೊರತು ಪಡಿಸಿ ಬೇರೆ ಯಾವುದೇ ವ್ಯಕ್ತಿಗೆ ಬಾದಷಾಹ್‌ನ ಬಳಿ ಹೋಗುವ ಅನುಮತಿ ಇರಲಿಲ್ಲ. ೨-೩ ತಿಂಗಳುಗಳ ನಂತರ ಮುರ್ತುಜಾ ನಿಜಾಮಷಾಹ್‌ನು ಇನ್ನಷ್ಟು ಏಕಾಂತಪ್ರಿಯನಾದನು. ಹಾಗೂ ಅವನು ಎಲ್ಲ ಸ್ತ್ರೀಯರನ್ನು ಕೋಟೆಯಿಂದ ಹೊರಕಳುಹಿಸಿ ಒಂದು ಬೇರೆಯ ಇಮಾರತ್ತಿನಲ್ಲಿಟ್ಟನು.

ಷಾ ಖುಲಿಯ ನೇಮಕ :

ಮುರ್ತುಜಾ ನಿಜಾಮನು ಕೋಟೆಯ ರಕ್ಷಣೆಯ ಹೊಣೆಯನ್ನು ಷಾ ಖುಲಿಗೆ ನೀಡಿದನು. ಯಾರನ್ನು ಷಾಹ್ ತೆಹ್‌ಮಾಸಿಬ್‌ನು ಬುರ್ಹಾನ್ ನಿಜಾಮನಿಗಾಗಿ ಕಳುಹಿಸಿದ್ದನು. ಷಾಖುಲಿಗೆ 'ಸಲಾಬತ್‌ಖಾನ್' ದ ಬಿರುದು ನೀಡಿ ಅಮೀರರ ತಂಡದಲ್ಲಿ ಸೇರಿಸಲಾಯಿತು. ಹಾಗೂ ಅವನಿಗೆ ಈ ಆಜ್ಞೆಯನ್ನು ನೀಡಲಾಯಿತು. ಬಾದಷಾಹ್‌ನ ಅರಮನೆಯಲ್ಲಿ ಸಾಹೇಬ್‌ಖಾನ್‌ನ ಹೊರತಾಗಿ ಯಾರನ್ನೂ ಒಳಹೋಗಲು ಬಿಡಬಾರದು.

ಮಾಲ್ವಾ ಸರಹದ್ದಿನಲ್ಲಿ ಅಕಬರ್ ಬಾದಷಾಹ್ :

ಹಿಜ್ರಿ ಶಕೆ ೯೮೪ ರಲ್ಲಿ ಯಾವಾಗ ಖಾಜಿಬೇಗನ ರಾಜಪ್ರತಿನಿಧಿತ್ವದ ಕಾಲವಿತ್ತು. ಮೊಘಲ್ ಬಾದಷಾಹ್ ಅಕಬರ್‌ನು ಪ್ರವಾಸ ಮಾಡುತ್ತಾ ಮಾಲ್ವಾದ ಸರಹದ್ದಿಗೆ ತಲುಪಿದನು. ಬೇಹುಗಾರರು ಹಾಗೂ ಗುಪ್ತಚರರು ತಕ್ಷಣ ಇದರ ಮಾಹಿತಿಯನ್ನು ಖಾಜಿಬೇಗ್‌ನಿಗೆ ತಲುಪಿಸಿದರು. ಖಾಜಿ ಬೇಗ್‌ನು ಈ ವಿಷಯದ ಕುರಿತು ಮುರ್ತುಜಾ ನಿಜಾಮನಿಗೆ ಒಂದು ಪತ್ರವನ್ನು ಬರೆದನು. ಬಾದಷಾಹನು ಈ ಪತ್ರ ಓದಿದ ಕೂಡಲೇ ಪಲ್ಲಕ್ಕಿಯಲ್ಲಿ ನಡೆದನು ಹಾಗೂ ಸುಮಾರು ಒಂದುನೂರು ಸವಾರರೊಂದಿಗೆ ಅವರಲ್ಲಿ ಸಾಹೇಬ್‌ಖಾನ್ ಹಾಗೂ ಸಲಾಬತ್‌ಖಾನ್‌ರೂ ಇದ್ದರು. ದೌಲತಾಬಾದ್‌ದೆಡೆಗೆ ಹೊರಟನು. ಯಾವಾಗ ಬಾದಷಾಹ್‌ನು ಗಂಗ ಸರೋವರದ ಬಳಿ ತಲುಪಿದನೋ ಆಗ ಅವನ ಕೆಲವು ಹಿತೈಷಿಗಳ ತಂಡವು ಅವನ ಸನಿಹ ಬಂದಿತು ಹಾಗೂ ಹೀಗೆಂದರು. "ಬಾದಷಾಹನ ವೈರಿಗಳು ಬಹಳ ಇರುತ್ತಾರೆ. ಆ ಕಾರಣಕ್ಕೆ ಏಕಾಂಗಿಯಾಗಿ ಪ್ರವಾಸ ಮಾಡಬಾರದು. ತಾವು ಈ ವೇಳೆ ಓರ್ವ ಬಹಳೇ ಬಲಾಢ್ಯವಾದ ವೈರಿಯನ್ನು ಎದುರಿಸಲು ಹೊರಟಿದ್ದೀರಿ. ಈ ನಿಶ್ಯಸ್ತ್ರ ಸ್ಥಿತಿಯಲ್ಲಿ ತಮ್ಮ ಪ್ರವಾಸವು ಉಚಿತವಲ್ಲ. ಅದಕ್ಕಾಗಿ ತಾವು ಇದೇ ಸ್ಥಾನದಲ್ಲಿ ತಂಗಿರಿ ಹಾಗೂ ಬರಾರ್ ಮತ್ತು ಅಹ್ಮದ್‌ನಗರದ ಸೈನ್ಯ ಬರುವವರೆಗೆ ಕಾಯಿರಿ".

ಅಕ್‌ಬರ್ ಬಾದಷಾಹ್‌ನೊಂದಿಗೆ ಯುದ್ಧಮಾಡುವ ಮುರ್ತುಜಾ ನಿಜಾಮಷಾಹನ ಆಪೇಕ್ಷೆ :

ಮುರ್ತುಜಾ ನಿಜಾಮನು ಕೆಲವು ದಿನ ಈ ಸ್ಥಳದಲ್ಲಿ ತಂಗಿದನು. ಈ ಕಾಲದಲ್ಲಿ ಶಸ್ತ್ರ ಸಜ್ಜಿತ ಸೈನ್ಯವು ಐದಾರು ಸಾವಿರ ಸೈನಿಕರೊಂದಿಗೆ ಅವನ ಬಳಿ ತಲುಪಿತು. ಅದರ ನಂತರ ಬಾದಷಾಹನು ಬರಾರ್‌ದ ಸೈನ್ಯಕ್ಕೆ ಹಾಜರಾಗಲು ಆಜ್ಞೆ ನೀಡಿದನು. ಹಾಗೂ ಸ್ವತಃ ಅಕ್ಬರ್‌ನೊಂದಿಗೆ ಯುದ್ಧ ಮಾಡಲು ಹೊರಟನು. ಖಾಸಿಂ ಬೇಗ್ ಮಿರ್ಜಾ ಮೊಹಮ್ಮದ್ ನಜೀರಿ ಹಾಗೂ ಇತರ ಆಡಳಿತಗಾರ ಅಮೀರರು ಈ ಸ್ಥಿತಿಯನ್ನು ಕಂಡು ಬಹಳೇ ವಿಚಲಿತರಾದರು. ಅವರು ಬಹಳೇ ವಿನಮ್ರರಾಗಿ ಮುರ್ತುಜಾ ನಿಜಾಮಷಾಹನೊಂದಿಗೆ ವಿನಂತಿಸಿದರು.

ಅಮೀರರ ವಿನಂತಿ :

ಅಕಬರ್‌ನಂತಹ ಬಲಾಢ್ಯನಾದ ದೆಹಲಿಯ ಬಾದಷಾಹನೊಂದಿಗೆ ಯುದ್ಧ ಮಾಡುವುದು ಸಾಮಾನ್ಯವಾದ ಮಾತಲ್ಲ. ಹಾಗೂ ತಾವಂತೂ ಒಂದು ಮುಷ್ಟಿಯಷ್ಟು ಸೈನ್ಯದೊಂದಿಗೆ ಹೊರಟಿದ್ದೀರಿ. ನಮ್ಮ ನಮ್ರ ಅಭಿಪ್ರಾಯವು ಇದಾಗಿದೆ ಏನೆಂದರೆ ಖಾವಂದರು ಈಗ ಯುದ್ಧದ ವಿಚಾರವನ್ನು ಅಲ್ಪ ವೇಳೆಗಾಗಿ ತಡೆ ಹಿಡಿಯಬೇಕು. ಯಾವಾಗ ಬರಾರ್‌ದ ಸೈನ್ಯ ಹಾಗೂ ತೋಪುಗಳು ಬಂದ ಮೇಲೆ ಆನಂತರ ದೃಢನಿಶ್ಚಯ ತೆಗೆದುಕೊಳ್ಳಬೇಕು.

ಮುರ್ತುಜಾ ನಿಜಾಮಶಾಹನ ಉತ್ತರ :

ಮುರ್ತುಜಾ ನಿಜಾಮಶಾಹನು ಅಮೀರರಿಗೆ ಹೀಗೆ ಉತ್ತರಿಸಿದನು. "ನನಗೆ ಸಹನೆಯಿಂದ ಕೆಲಸ ತೆಗೆದುಕೊಳ್ಳುವುದು ಕಠಿಣತರವಾಗಿದೆ. ನಾನು ಸಶಸ್ತ್ರ ಸಜ್ಜಿತ ಸೈನ್ಯದ ಜೊತೆಗೆ ಹೊರಟು ಅಕಬರ್ ಬಾದಶಾಹನೊಂದಿಗೆ ಬಲುಬೇಗನೆ ಆಕ್ರಮಣ ಮಾಡಬಯಸುತ್ತೇನೆ. ಸೋಲುಗೆಲುವಿನ ನಿರ್ಧಾರವು ದೇವನ ಕೈಯಲ್ಲಿದೆ." ಬಾದಶಾಹನ ಈ ಅನುಚಿತ ಉತ್ತರವನ್ನು ಕೇಳಿ ಅಮೀರರು ಆಶ್ಚರ್ಯಚಕಿತರಾದರು.

ಅಹ್ಮದನಗರಕ್ಕೆ ಮರಳುವಿಕೆ :

ಇದೇ ಸಮಯದಲ್ಲಿ ಬಾದಶಾಹನಿಗೆ ಅವನ ಬೇಹುಗಾರರು ಈ ಮಾಹಿತಿಯನ್ನು ನೀಡಿದರು. ಏನೆಂದರೆ ಅಕ್ಬರ್ ಬಾದಶಾಹರು ಪ್ರವಾಸ ಹಾಗೂ ಬೇಟೆಯನ್ನು ಮುಗಿಸಿ ತನ್ನ ಸಾಮ್ರಾಜ್ಯಕ್ಕೆ ಮರಳಿರುವನು. ಮುರ್ತುಜಾ ನಿಜಾಮಶಾಹನು ಈ ಸುದ್ಧಿಯನ್ನು ಕೇಳಿ ಸಂತಸಗೊಂಡನು ಹಾಗೂ ದೌಲತಾಬಾದ್‌ಕ್ಕೆ ಮರಳಿ ಬಂದನು. ಅಲ್ಲಿ ತಲುಪಿ ಅವನು ಖತ್‌ಲೂ ಹೌದಿನ ಬಳಿ ತಂಗಿದನು. ಹಾಗೂ ಸೈಯ್ಯದ ಮುರ್ತುಜಾ ಹಾಗೂ ಇನ್ನಿತರ ಬರಾರ್‌ದ ಅಮೀರರಿಗೆ ಕಾಣಿಕೆ ವಸ್ತ್ರ ವೈಢೂರ್ಯಗಳಿಂದ ಪುರಸ್ಕರಿಸಿ ಮರಳಿ ಹೋಗಲು ಅನುಮತಿ ನೀಡಿದನು. ಹಾಗೂ ಸ್ವತಃ ಅಹ್ಮದ ನಗರಕ್ಕೆ ಬಂದನು. ಅವನು ಮೊದಲಿನ ಹಾಗೆ ಆಡಳಿತದ ಎಲ್ಲ ಕೆಲಸಕಾರ್ಯಗಳನ್ನು ಅಮೀರರಿಗೆ ಒಪ್ಪಿಸಿದನು. ಹಾಗೂ ಸ್ವತಃ ಏಕಾಂತವಾಸದಲ್ಲಿ ಇರತೊಡಗಿದನು.

ಸಾಹೇಬಖಾನನ ಅಧಿಕಾರ :

ಆ ಕಾಲದಲ್ಲಿ ಸಾಹೇಬಖಾನನು ಬಾದಶಾಹನಿಂದ ಪ್ರಭಾವಿ ಅಧಿಕಾರವನ್ನು ಪಡೆದುಕೊಂಡನು. ಅವನ ಎಲ್ಲ ಹಿತೈಷಿ ಹಾಗೂ ಬಂಧುಗಳು ಅಮೀರರ ತಂಡದಲ್ಲಿ ಷಾಮೀಲಾಗಿ ಜಮೀನುದಾರರಾದರು. ಶಾಹನ ಮೇಲೆ ಬಹಳೇ ಪ್ರಭಾವ ಬೀರಿದನು. ಮಳೆಗಾಲದಲ್ಲಿ ಅವನು ಸುಮಾರು ನಾಲ್ಕು ತಿಂಗಳವರೆಗೆ ಬಾದಶಾಹನೊಂದಿಗೆ ಬಾಲಾಘಾಟದಲ್ಲಿ ತಂಗಿದ್ದನು. ಅಲ್ಲಿ ಮುರ್ತುಜಾ ನಿಜಾಮನು ಸಮಾಧಿಗಳ ಜಿಯಾರತ್ ಮಾಡಿದನು. ಹಾಗೂ ದಿವಂಗತ ಪೂರ್ವಜರ ಆತ್ಮಕ್ಕೆ ಶಾಂತಿ ಲಭಿಸಲಿಕ್ಕಾಗಿ ಬಡವರು ಹಾಗೂ ಅಸಹಾಯಕರಿಗೆ ಬಹಳಷ್ಟು ದಾನಧರ್ಮ ಮಾಡಿದನು.

ಇಮಾಮ್ ರಜಾ ಅಲೈಹಿಸ್ಸಲಾಮರ ದರ್ಗಾಕ್ಕೆ ಭೇಟಿಯ ಬಯಕೆ :

ಅದರ ನಂತರ ಬಾದಶಾಹನು ಹಜ್ರತ ಇಮಾಮ ರಜಾ ಅಲೈಹಿಸ್ಸಲಾಮರ ಪವಿತ್ರ ದರ್ಗಾಕ್ಕೆ ಭೇಟಿ ನೀಡುವ ಬಯಕೆ ತೋರಿದನು. ಯಾರ ಗಮನಕ್ಕೂ ತರದೇ ಎಲ್ಲಿಯವರೆಗೆಂದರೆ ಸಾಹೇಬಖಾನ ನಿಗೂ ಸಹ ತಿಳಿಸದೇ ಫಕೀರನ ವೇಷದಲ್ಲಿ

ಹಿಂಬಾಗಿಲಿನಿಂದ ಹೊರಟು ಹೋದನು. ಓರ್ವ ಸೈನಿಕನು ಯಾರು ಸೈನ್ಯದಿಂದ ಮೂರು ಕೋಸದಷ್ಟು ದೂರದಲ್ಲಿ ನಿಂತಿದ್ದನು ಬಾದಶಾಹನು ಆ ಕಡೆ ಹೋಗುವುದನ್ನು ನೋಡಿದನು. ಹಾಗೂ ತಕ್ಷಣವೇ ಅಮೀರರಿಗೆ ಸುದ್ದಿ ಮುಟ್ಟಿಸಿದನು.

ಫಕೀರನ ವೇಷದಲ್ಲಿ :

ಆಡಳಿತದ ಅಮೀರರು ಮೊದಮೊದಲು ಅವನ ಅರಮನೆಯಲ್ಲಿ ನೋಡಿದರು. ಯಾವಾಗ ಬಾದಶಾಹನು ಅಲ್ಲಿ ಕಾಣಿಸಲಿಲ್ಲವೋ ಆಗ ಅವನನ್ನು ಹಿಂಬಾಲಿಸಿದರು. ಹಾಗೂ ಬಹಳೇ ನಮ್ರವಾಗಿ ವಿನಂತಿಸಿ ಅವನನ್ನು ಕರೆತಂದರು. ಬಾದಷಾಹ್‌ನ ಬಯಕೆ ಇದಾಗಿತ್ತು. ಅದೇನೆಂದರೆ ಒಂದು ತಿಂಗಳಿನವರೆಗೆ ಫಕೀರನ ವೇಷದಲ್ಲಿರಬೇಕು ಹಾಗೂ ಕಿರೀಟ, ಸಿಂಹಾಸನಗಳಿಂದ ದೂರವಿರಬೇಕು. ಆದರೆ ಅವನು ಈ ತರಹ ಮಾಡಲಾರದಾದನು.

ನಶ್ವರ ಜಗತ್ತಿನಿಂದ ವಿರಕ್ತಿ :

ಖಾಜಿ ಬೇಗ ಹಾಗೂ ಮಿರ್ಜಾ ಮೊಹಮ್ಮದ ನಜೇರಿ ಮುರ್ತುಜಾ ನಿಜಾಮನಿಂದ ಕೇಳಿದರು. ಕೊನೆಗೆ ಯಾವ ಕಾರಣದಿಂದ ಈ ಕಿರೀಟ ಹಾಗೂ ಸಿಂಹಾಸನದಿಂದ ವಿರಕ್ತಿಯುಂಟಾಗಿದೆ. ಬಾದಶಾಹನು ಉತ್ತರಿಸಿದನು. ಏನೆಂದರೆ ಈ ನಶ್ವರವಾದ ಜಗತ್ತಿನಿಂದ ವಿರಕ್ತಿಯುಂಟಾಗುವ ಕಾರಣ ಗಳು ಸ್ಪಷ್ಟಗೋಚರವಾಗುತ್ತಿವೆ. ಅದಕ್ಕಾಗಿ ಅವುಗಳನ್ನು ತಿಳಿಸುವ ಅವಶ್ಯಕತೆಯಿಲ್ಲ. ಆದರೆ ಒಂದು ವೇಳೆ ಜಗತ್ತಿನೆಡೆಗೆ ಒಲವನ್ನು ಹೊಂದಿದ್ದರೆ ಅದರ ಕಾರಣಗಳನ್ನು ಹೇಳಬೇಕಾದ ಅವಶ್ಯಕತೆ ಇರುತ್ತದೆ.

ಅಹ್ಮದನಗರಕ್ಕೆ ಮರಳುವಿಕೆ :

ಹೀಗೆ ಹೇಳಿ ಮುರ್ತುಜಾ ನಿಜಾಮಶಾಹನು ಮೌನವಹಿಸಿದನು. ಅವನಿಗೆ ನಿಸ್ಸಂದೇಹವಾಗಿ ಇದರ ಅರಿವಾಯಿತು. ಅದೇನೆಂದರೆ ಈ ಅಮೀರರು ಹಾಗೂ ಆಡಳಿತವರ್ಗದವರು ತನಗೆ ಯಾವ ಕಾರಣಕ್ಕೂ ಈ ಜಗತ್ತಿನಿಂದ ವಿರಕ್ತಿ ಹೊಂದಲು ಬಿಡಲಾರರು. ಆ ಕಾರಣಕ್ಕೆ ಅವನು ಅಹ್ಮದನಗರಕ್ಕೆ ಮರಳಿ ಬಂದನು. ಅವನು 'ಬಾಗೇಬೆಹಿಷ್ತ' ದಲ್ಲಿ ಯಾವುದು ನಗರದ ಉತ್ತರಭಾಗದಲ್ಲಿದೆ ಅಲ್ಲಿ ತಂಗಿದನು. ಖಾಜಿಬೇಗ ಹಾಗೂ ಇನ್ನಿತರ ಆಡಳಿತಗಾರರು ಉದ್ಯಾನದ ನಾಲ್ಕು ಕಡೆಗೆ ತಮ್ಮ ಬಿಡಾರಗಳನ್ನು ಹೂಡಿದರು. ಹಾಗೂ ಬಾದಷಾಹನ ರಕ್ಷಣೆಯಲ್ಲಿ ತೊಡಗಿದರು.

ಸಾಹೇಬಖಾನನ ದುರಾಡಳಿತ :

ಆ ಕಾಲದಲ್ಲಿ ಸಾಹೇಬಖಾನನ ಆಡಳಿತದ ಅಸಮತೋಲನವು ಉತ್ತುಂಗದಲ್ಲಿತ್ತು. ಅವನು ಮಧ್ಯವನ್ನು ಸೇವಿಸಿ ಮದೋನ್ಮತ್ತನಾಗಿ ಆನೆಯ ಮೇಲೆ ಸವಾರಿ ಮಾಡುತ್ತಿದ್ದನು. ೨-೩ ಸಾವಿರ ಮೋಸಗಾರರು ಹಾಗೂ ಲಫಂಗರ ತಂಡವನ್ನು

ತೆಗೆದುಕೊಂಡು ಇಡೀ ನಗರದಲ್ಲಿ ಸುತ್ತುತ್ತಿದ್ದನು. ಹಾಗೂ ಪ್ರಜೆಗಳನ್ನು ಅವಮರ್ಯಾದೆಗೊಳಿಸುತ್ತಿದ್ದನು. ಇವನ ಸಹೋದರರು ಜಲಾಲ್‌ಖಾನ್ ಹಾಗೂ ಹಬೀಬಖಾನರು ಬಹಳ ರೀತಿಯಲ್ಲಿ ತಿಳಿಸಿ ಹೇಳುತ್ತಿದ್ದರು. ಆದರೆ ಅವನು ತನ್ನ ದುರ್ವರ್ತನೆಯಿಂದ ದೂರವಾಗುತ್ತಿರಲಿಲ್ಲ.

ಮೀರಮೆಹಂದಿಯ ಮನೆಯ ಮೇಲೆ ದಾಳಿ :

ಒಂದು ದಿನ ಸಾಹೇಬಖಾನನು ತನ್ನ ಜೊತೆಗಾರರಿಗೆ ಮೀರ್ ಮೆಹದಿ ಯಾರು ಹವಾಲ್ದಾರನಾಗಿದ್ದನು ಅವರ ಮನೆಗೆ ಕಳುಹಿಸಿದನು. ಏಕೆಂದರೆ ಅವನ ಮಗಳನ್ನು ಬಲಪೂರ್ವಕವಾಗಿ ಎತ್ತಿಕೊಂಡು ಬರಲು ಕಳುಹಿಸಿದನು. ಮೀರ್ ಮೆಹದಿಯು ಯಾವಾಗ ಅವರು ಈ ಕಡೆಗೆ ಬರುತ್ತಿರುವುದನ್ನು ನೋಡಿದನೋ ಆಗ ಅವನು ತನ್ನ ಮನೆಯ ಬಾಗಿಲನ್ನು ಮುಚ್ಚಿದನು. ಹಾಗೂ ಮಾಳಿಗೆಯ ಮೇಲೆ ಏರಿ ಬಾಣ ಹಾಗೂ ತುಪಾಕಿಗಳನ್ನು ಪ್ರಯೋಗಿಸಿ ಆ ಜನರನ್ನು ಓಡಿಸಿದನು. ಅದರ ನಂತರ ಮೀರ್ ಮೆಹದಿಯು ಖಾಜಿ ಬೇಗ ಹಾಗೂ ಇನ್ನಿತರ ಅಮೀರರ ಸಹಾಯವನ್ನು ಯಾಚಿಸಿದನು. ಎಲ್ಲ ಅಮೀರರು ಸಾಹೇಬಖಾನನ ದುರ್ನಡತೆಯ ಬಗ್ಗೆ ತಿಳಿದಿದ್ದರು. ಹಾಗೂ ಅವನನ್ನು ಸನ್ಮಾರ್ಗಕ್ಕೆ ತರುವ ಇಚ್ಛೆಯುಳ್ಳವರಾಗಿದ್ದರು.

ಮೀರಮೆಹ್‌ದಿಯ ಕಗ್ಗೊಲೆ :

ಇದೇ ಸಮಯದಲ್ಲಿ ಸಾಹೇಬಖಾನನು ಮತ್ತೊಮ್ಮೆ ತನ್ನ ಕುದುರೆ ಸವಾರರು ಹಾಗೂ ಪದಾತಿ ದಳವು ಸಂಖ್ಯೆಯಲ್ಲಿ ಸುಮಾರು ೨-೩ ಸಾವಿರ ಇದ್ದರು. ಮೀರ್ ಮೆಹದಿಯ ಮನೆಗೆ ಕಳುಹಿಸಿದನು. ಮೀರ್ ಸಾಹೇಬರು ಶಕ್ತಿಮೀರಿ ಸ್ವರಕ್ಷಣೆಗೆ ನಿಂತರು. ಹಾಗೂ ವೈರಿಯ ೩-೪ ಜನರನ್ನು ಸದೆಬಡೆದರು. ಆದರೆ ಲಫಂಗರ ಬೃಹತ್ ಸಂಖ್ಯೆಯ ವಿರೋಧವಾಗಿ ಹೋರಾಡಲಾಗದಾದರು. ಹಿಂಸೆಯ ಮೇಲೆ ಮತ್ತಷ್ಟು ಹಿಂಸೆ ನೀಡುವ ಕಾರ್ಯವಿದಾಯಿತು. ಏಕೆಂದರೆ ಅವರ ಇಬ್ಬರು ಕೆಟ್ಟ ಮನಸ್ಸಿನ ಪುತ್ರರು ವೈರಿಯೊಂದಿಗೆ ಸೇರಿಕೊಂಡರು. ಅವರು ಮನೆಯೊಳಗೆ ಪ್ರವೇಶಿಸುವಂತೆ ದಾರಿ ಮಾಡಿಕೊಟ್ಟರು. ಲಫಂಗರು ಮೀರಮೆಹದಿಯ ಕಗ್ಗೊಲೆಗೈದರು. ಹಾಗೂ ಅವರ ಮಗಳಿಗೆ ಬಲಪೂರ್ವಕವಾಗಿ ಎತ್ತಿಕೊಂಡು ಒಯ್ದು ಸಾಹೇಬ್‌ಖಾನ್‌ನ ಬಳಿಗೆ ತಲುಪಿಸಿದರು.

ಸೈಯದ ಮುರ್ತುಜಾ ಸಬ್ಜವಾರಿಯ ಆಗಮನ :

ಹಿಜ್ರಿಶಕೆ ೯೮೩ ರ ಕೊನೆಯಲ್ಲಿ ಬಾದಷಾಹ್‌ನ ಆಜ್ಞೆಯಂತೆ ಸೈಯ್ಯದ್ ಮುರ್ತುಜಾ ಸಬ್ಜವಾರಿ, ಬರಾರ್‌ದ ಎಲ್ಲ ಅಮೀರರೊಂದಿಗೆ ಅಹ್ಮದ್‌ನಗರಕ್ಕೆ ಬಂದರು. ಏಕೆಂದರೆ ಸೈನ್ಯದ ಲೆಕ್ಕಪತ್ರವನ್ನು ಷಾಹೀ ದರ್ಬಾರದಲ್ಲಿ ಒಪ್ಪಿಸಬೇಕು. ಅವರು 'ಬಹಿಸ್ತೇಬಾಗ್'ದ ಬಳಿ ತಂಗಿದರು.

ಸಾಹೇಬಖಾನನ ಹಠಮಾರಿತನ :

ಸಾಹೇಬ್‌ಖಾನ್‌ನ ಮೂಲ ಹೆಸರು ಹುಸೈನ ಎಂದಿತ್ತು. ಅದಕ್ಕಾಗಿ ಮುರ್ತುಜಾ ನಿಜಾಮ್‌ಷಾಹ್‌ನು ಹಾಗೂ ಆಡಳಿತಗಾರರು ಅವನನ್ನು ಅದೇ ಹೆಸರಿನಿಂದ ಕರೆಯುತ್ತಿದ್ದರು. ಬರಾರ್‌ದಿಂದ ಸೈಯ್ಯದ್ ಮುರ್ತುಜಾ ಸಬ್ಜವಾರಿಯೊಂದಿಗೆ ಯಾವ ಜನರು ಬಂದಿದ್ದರು ಅವರಲ್ಲಿ ಓರ್ವ ವ್ಯಕ್ತಿಯ ಹೆಸರೂ ಹುಸೈನ್‌ಖಾನ್ ಸಖ್ತಕಮಾನ್ ಎಂದಿತ್ತು. ಸಾಹೇಬಖಾನನು ಆ ವ್ಯಕ್ತಿಗೆ ಸಂದೇಶ ನೀಡಿದನು. ತಕ್ಷಣ ನೀನು ನಿನ್ನ ಹೆಸರನ್ನು ಬದಲಿಸಿಕೊಳ್ಳಬೇಕು. ಇಲ್ಲದಿದ್ದರೆ ಕಠಿಣ ಶಿಕ್ಷೆ ನೀಡಲಾಗುವುದು.

ಸಾಹೇಬಖಾನ ಹಾಗೂ ಹುಸೈನಖಾನರ ಯುದ್ಧ :

ಹುಸೈನಖಾನನು ಸಾಹೇಬಖಾನನ ಮಾತಿಗೆ ಎಳ್ಳಷ್ಟು ಬೆಲೆ ನೀಡಲಿಲ್ಲ. ಆ ಕಾರಣದಿಂದಾಗಿ ಸಮಸ್ಯೆಯು ಬಹಳೇ ಗಂಭೀರವಾಯಿತು. ಸಾಹೇಬಖಾನನು ಐದು ಸಾವಿರ ಸೈನಿಕರ ಸೈನ್ಯವನ್ನು ತೆಗೆದುಕೊಂಡು ಹುಸೈನಖಾನನ ತಂಗುದಾಣದ ಮೇಲೆ ಆಕ್ರಮಣ ಮಾಡಿದನು. ಹುಸೈನ ಖಾನನು ಕೆಲ ಸವಾರರನ್ನು ಜೊತೆಗೆ ತೆಗೆದುಕೊಂಡು ಸಾಹೇಬ್‌ಖಾನನ್ನು ಎದುರಿಸಿದನು. ಆದರೆ ಮೊದಲ ಪ್ರಹಾರದಲ್ಲಿಯೇ ಹುಸೈನಖಾನನ ಕೆಲ ಜನರ ಸೈನ್ಯವು ತತ್ತರ ಬಿತ್ತರಗೊಂಡಿತು. ಹುಸೈನಖಾನನು ಸ್ವಾಭಿಮಾನಿ ಹಾಗೂ ಉತ್ಸಾಹಿ ಯುವಕನಾಗಿದ್ದನು. ಅವನು ಓರ್ವನೇ ಸಾಹೇಬಖಾನನ ಸೈನ್ಯದ ಮೇಲೆ ದಾಳಿ ಮಾಡಿದನು.

ವಿದೇಶಿಗಳನ್ನು ಕೊಲ್ಲಲು ಆಜ್ಞೆ:

ಹುಸೈನಖಾನನು ಗುರಿಯಿಟ್ಟು ಒಂದು ಬಾಣವನ್ನು ಸಾಹೇಬಖಾನನತ್ತ ಬಿಟ್ಟನು. ಈ ಬಾಣವು ಸಾಹೇಬಖಾನನ ಆನೆಯ ಹಣೆಯ ಮೇಲೆ ನಾಟಿತು. ಆನೆಯು ಘೀಳಿಡುತ್ತ ಓಡಿ ಹೊರಟಿತು. ಹಾಗೂ ಗಿಡಮರಗಳ ನಡುವೆ ಈ ಕಡೆ ಆಕಡೆ ಕುಣಿದಾಡತೊಡಗಿತು. ಸಾಹೇಬಖಾನನು ಉದ್ಯಾನದ ಒಳಗೆ ಹೋದನು. ಹಾಗೂ ಸ್ವಲ್ಪ ಸಮಯದ ನಂತರ ಮರಳಿ ಬಂದು ಹೀಗೆಂದನು "ಬಾದಷಾಹ್‌ನು ಈ ಆಜ್ಞೆಯನ್ನು ನೀಡಿದ್ದಾನೆ ಏನೆಂದರೆ ಎಲ್ಲ ವಿದೇಶಿಗರನ್ನು (ಬರಾರ್‌ದಿಂದ ಬಂದವರನ್ನು) ಕೊಲ್ಲಬೇಕು. ಹಾಗೂ ಅವರ ಪತ್ನಿ, ಪುತ್ರರನ್ನು, ವಸ್ತು, ಧನಕನಕವನ್ನು ವಶಪಡಿಸಿಕೊಳ್ಳಬೇಕು.

ಯುದ್ಧ :

ದಖ್ಖನಿಗಳ ಹಾಗೂ ಹಬಶಿಗಳ ಬಯಕೆ ಇದಾಗಿತ್ತು ಏನೆಂದರೆ ವಿದೇಶಿಗರನ್ನು ಮನಬಂದಂತೆ ಲೂಟಿ ಮಾಡುವುದು ಹಾಗೂ ಕೊಲ್ಲುವುದು. ಮೇಲೆ ಹೇಳಿದಂತೆ ಬಾದಷಾಹನ ಆಜ್ಞೆಯನ್ನು ಕೇಳಿದ ಕೂಡಲೇ ಅಹ್ಮದನಗರದ ಪ್ರತಿಯೊಬ್ಬ ಸಣ್ಣದೊಡ್ಡ

ವ್ಯಕ್ತಿಯೂ ವಿದೇಶಿಗರನ್ನು ಕೊಲ್ಲಲು ಸಿದ್ಧನಾದನು. ಹಾಗೂ ದಖ್ಖನಿಗಳ ತಂಡೋಪತಂಡವೇ 'ಬಾಗೆ ಬಹಿಷ್ತ್'ದತ್ತ ಹೊರಟಿತು. ಖಾಜಿಬೇಗ್, ಸೈಯ್ಯದ್‌ಮುರ್ತುಜಾ, ಮಿರ್ಜಾಮೊಹಮ್ಮದ್‌ತಖಿನಜ್ರಿ ಹಾಗೂ ಐನುಲ್‌ಮುಲ್ಕ ನಿಶಾಪುರಿಯು ದೇವನ ಇಚ್ಛೆಯಂತೆ ನಡೆಯಲಿ ಎಂದು ಸಹನೆ ವಹಿಸಿದರು. ಈ ವ್ಯಕ್ತಿಗಳನ್ನು ಹೊರತುಪಡಿಸಿ ಉಳಿದ ಎಲ್ಲ ಪ್ರವಾಸಿಗರು ಸಾಹೇಬಖಾನನೊಂದಿಗೆ ಯುದ್ಧ ಮಾಡಲು ಸಿದ್ಧತೆ ಮಾಡಿಕೊಳ್ಳತೊಡಗಿದರು. ಪರಸ್ಪರರು ಎದುರುಬದುರು ಬಂದರು. ಹಾಗೂ ಸಾಹೇಬಖಾನನು ಅವರನ್ನು ಹಿಂದಕ್ಕೆ ತಳ್ಳಿದನು.

ಬಾದಶಾಹನಿಗೆ ಮಾಹಿತಿ :

ಆ ಸಮಯದಲ್ಲಿ ಮುರ್ತುಜಾಖಾನನು ಷಾಹ್‌ಬಾಗ್‌ದಲ್ಲಿ ಸ್ನಾನಗೃಹದಲ್ಲಿದ್ದನು. ಅವನು ಗದ್ದಲ ಗಲಾಟೆಯ ಶಬ್ದವನ್ನು ಕೇಳಿದನೋ ಆಗ ಉದ್ಯಾನದ ಬಾಗಿಲಿಗೆ ಬಂದನು. ಸಾಹೇಬಖಾನನು ಬಾದಷಾಹ್‌ನು ಬರುವುದನ್ನು ನೋಡಿದ ಕೂಡಲೇ ತಕ್ಷಣ ಅವನಲ್ಲಿಗೆ ಬಂದನು. ಹಾಗೂ ಹೀಗೆಂದನು. "ವಿದೇಶಿಗರು – ಕ್ಷೋಭೆಯನ್ನುಂಟು ಮಾಡಿದ್ದಾರೆ ಹಾಗೂ ತಮ್ಮ ಜೀವವನ್ನು ತೆಗೆದುಕೊಳ್ಳಲು ಅಣಿಯಾಗಿದ್ದಾರೆ. ಅವರ ಬಯಕೆಯಿದಾಗಿದೆ. ಏನೆಂದರೆ ಯುವರಾಜನಾದ ಮೀರಾ ಹುಸೈನ್‌ನಿಗೆ ಪಟ್ಟಾಭಿಷೇಕ ಮಾಡುವುದು"

ವಿದೇಶಿಗರ ಮೇಲೆ ಯುದ್ಧ ಸಾರಲು ಆಜ್ಞೆ:

ಮುರ್ತುಜಾ ನಿಜಾಮಷಾಹನು ಸಾಹೇಬ್‌ಖಾನ್‌ನನ ಮಾತನ್ನು ಕೇಳಿದನು. ಹಾಗೂ ಅವನು ಹೇಳುವುದು ಸತ್ಯವಿದೆಯೋ ಎಂದು ತಿಳಿಯಲು ಹೊರಗೆ ಬಂದನು. ಅವನು ನಿಜವಾಗಿ ನಡೆದ ಘಟನೆಯಿಂದ ಪೂರ್ಣಪ್ರಮಾಣದಲ್ಲಿ ಏನು ಸತ್ಯವೆಂದು ತಿಳಿಯದವನಾಗಿದ್ದನು. ಅದಕ್ಕಾಗಿ ಆವಾಗ ಅವನು ವಿದೇಶಿಗರು ಸಶಸ್ತ್ರ ಸಜ್ಜಿತರಾಗಿದ್ದನ್ನು ನೋಡಿದನು ಆಗ ಅವನಿಗೆ ಸಾಹೇಬದದಖಾನ್‌ನ ಮಾತಿನ ಮೇಲೆ ನಂಬಿಕೆ ಮೂಡಿತು. ಮುರ್ತುಜಾ ನಿಜಾಮನು ಅದೇ ವೇಳೆ ಆನೆಯ ಮೇಲೆ ಸವಾರನಾಗಿ ದಖ್ಖನಿ ಹಾಗೂ ಹಬ್ಷಿ ಅಮೀರರನ್ನು ಯಾರು ಸಾಹೇಬ್‌ಖಾನ್‌ನ ಆಜ್ಞೆಯಂತೆ ಒಟ್ಟುಗೂಡಿದ್ದರು ಅವರಿಗೆ ಆದೇಶ ನೀಡಿದನು. ವಿದೇಶಿಗರೊಂದಿಗೆ ಯುದ್ಧ ಮಾಡಬೇಕು.

ವಿದೇಶಿ ಅಮೀರರ ಹೊರಡುವಿಕೆ :

ಈ ಪರಿಸ್ಥಿತಿಯನ್ನು ಗಮನಿಸಿದ ಮುರ್ತುಜಾ ಖಾನ ಹಾಗೂ ಖಾಜಿಬೇಗ ಇತರರು ವಿದೇಶಿಗರಿಗೆ ಈ ಸಂದೇಶ ನೀಡಿದರು. "ಈ ಸಮಯದಲ್ಲಿ ಬಾದಷಹನು ಸ್ವತಃ ರಣಭೂಮಿಯಲ್ಲಿ ಆಗಮಿಸುತ್ತಿರುವನು. ಆ ಕಾರಣಕ್ಕೆ ಯುದ್ಧ ಮಾಡುವುದು ಉಚಿತವಲ್ಲ. ಒಂದು ವೇಳೆ ಹೀಗಾದರೆ ಅದು ನಮ್ಮ ಬಾದಷಾಹನ ಮೇಲಿನ

ವಿಧೇಯತೆಯನ್ನು ಅವಮರ್ಯಾದೆ ಮಾಡಿದಂತಾಗುತ್ತದೆ. ವಿದೇಶಿ ಅಮೀರರು ಚುಖ್ತಾಯಿಖಾನ್, ಔಜಬಕ್‌ಖಾನ್, ಹುಸೈನ್‌ಖಾನ್ ವಗೈರಾ ತಕ್ಷಣವೇ ಕುದುರೆಯಿಂದ ಇಳಿದರು. ಅವರು ದೂರದಿಂದಲೇ ಬಾದಷಾಹ್‌ನನ್ನು ಬಹಳೇ ಗೌರವಪೂರ್ವಕವಾಗಿ ಸಲಾಂ ಅರ್ಪಿಸಿದರು. ಹಾಗೂ ಮತ್ತೊಮ್ಮೆ ಕುದುರೆ ಮೇಲೆ ಸವಾರರಾಗಿ ಆದಿಲಶಾಹೀ, ಕುತುಬಶಾಹೀ ಪ್ರಾಂತ್ಯದ ಕಡೆಗೆ ಹೊರಟುಹೋದರು.

ವಿದೇಶಿಗರ ಕಗ್ಗೊಲೆ :

ಸಾಹೇಬಖಾನ ತನ್ನ ಸಹೋದರರು ಹಾಗೂ ಇತರ ಜೊತೆಗಾರರನ್ನು ಕರೆದುಕೊಂಡು ಪಟ್ಟಣದಲ್ಲಿ ಪ್ರವೇಶಿಸಿದನು. ಹಾಗೂ ಮನೆ, ಮತ್ತು ಇತರ ಸ್ಥಳಗಳಲ್ಲಿ ಅಡಗಿದ ವಿದೇಶಿಗರನ್ನು ಹುಡುಕಿ ಹುಡುಕಿ ಕೊಲೆ ಮಾಡತೊಡಗಿದನು. ಈ ಅಸಹಾಯಕರ ಸ್ತ್ರೀಯರನ್ನು, ಮಕ್ಕಳನ್ನು ಹಾಗೂ ಅವಶ್ಯಕ ವಸ್ತುಗಳನ್ನು ವಶಪಡಿಸಿಕೊಳ್ಳಲಾಯಿತು. ಈ ಸ್ಥಿತಿಯನ್ನು ನೋಡಿ ಖಾಜಿಬೇಗ ಹಾಗೂ ಸೈಯ್ಯದ್ ಮುರ್ತುಜಾರು ಸಲಾಬತ್‌ಖಾನ್‌ನೊಂದಿಗೆ ಹೀಗೆಂದರು. "ಈಗ ನೀರು ಮೂಗಿನ ಮೇಲೆ ಏರಿದೆ, ಹೇಗಾದರೂ ಮಾಡಿ ನಮ್ಮ ಅರಿಕೆ ಬಾದಷಾಹನಿಗೆ ಮುಟ್ಟಿಸಿರಿ".

ಆಡಳಿತಗಾರರ ಅರಿಕೆ :

ಸಲಾಬತ್‌ಖಾನ್‌ನು ಈ ಜನರಿಂದ ಅರಿಕೆ ಪತ್ರಗಳನ್ನು ತೆಗೆದುಕೊಂಡನು ಹಾಗೂ ಷಾಹೀ ದರ್ಬಾರದತ್ತ ಹೊರಟನು. ಸಾಹೇಬ್‌ಖಾನ್ ಆ ಸಮಯದಲ್ಲಿ ಉಪಸ್ಥಿತನಿರಲಿಲ್ಲ. ಅದಕ್ಕಾಗಿ ಸಲಾಬತ್‌ಖಾನ್‌ನಿಗೆ ಒಳ್ಳೆಯ ಅವಕಾಶ ಲಭಿಸಿತು. ಹಾಗೂ ಅವನು ಬಾದಷಾಹ್‌ನ ಸೈನ್ಯಕ್ಕೆ ಆಹಾರವನ್ನು ತಲುಪಿಸುವ ನೆಪದಿಂದ ಉದ್ಯಾನದೊಳಗೆ ಪ್ರವೇಶಿಸಿದನು. ಬಾದಶಾಹನ ವಾಸಸ್ಥಾನದ ಬಳಿ ತಲುಪಿ ಅವನು ಸ್ವಲ್ಪ ದೊಡ್ಡ ದನಿಯಲ್ಲಿ ಬಾದಷಾಹನಿಗಾಗಿ 'ದುವಾ' ಮಾಡಿದನು. ಬಾದಷಾಹ್‌ನು ಅವನ ಧ್ವನಿಯನ್ನು ಗುರುತಿಸಿದನು.

ಬಾದಶಾಹನಿಗೆ ನಿಜವಾದ ಸ್ಥಿತಿಯ ಕುರಿತು ತಿಳಿಸುವಿಕೆ :

ಸಲಾಬತ್‌ಖಾನ್‌ನು ಈ ಅವೇಳೆಯಲ್ಲಿ ಬಾದಶಾಹನ ಬಳಿ ಬಂದಿದ್ದನು. ಅದಕ್ಕಾಗಿ ಮುರ್ತುಜಾ ನಿಜಾಮಶಾಹನು ಏನೋ ನಡೆಯಬಾರದ ಘಟನೆ ನಡೆದಿದೆ ಎಂದು ತಿಳಿದನು. ಹಾಗೂ ಸ್ನಾನಗೃಹದ ಬಾಗಿಲಿನ ಹಿಂದೆ ನಿಂತು ಸಲಾಬತ್‌ಖಾನನಿಗೆ ಕರೆದನು. ಸಲಾಬತ್‌ಖಾನನು ಅದಕ್ಕೆ ಉತ್ತರವಾಗಿ – ಆಡಳಿತಗಾರ ಮತ್ತು ಅಧಿಕಾರಿಗಳ ಅರಿಕೆ ಪತ್ರವನ್ನು ಬಾದಷಾಹ್‌ನಿಗೆ ತಲುಪಿಸಿದನು. ಹಾಗೂ ಅದರ ನಂತರ ನಡೆದ ಎಲ್ಲ ಸ್ಥಿತಿಯ ನಿಜವನ್ನು ಬಾದಷಾಹ್‌ನಿಗೆ ತಿಳಿಸಿದನು. ಈ ಎಲ್ಲ ವಿಷಯವನ್ನು ಕೇಳಿ ಮುರ್ತುಜಾ ನಿಜಾಮ್‌ಷಾಹ್‌ನು ಬಹಳೇ ವಿಚಲಿತನಾದನು. ಹಾಗೂ ಅವನು ಸಲಾಬತ್‌ಖಾನ್‌ನಿಗೆ ಆದೇಶ ನೀಡಿದನು ತಕ್ಷಣವೇ ಸಾಹೇಬಖಾನನನ್ನು ಪಟ್ಟಣದಿಂದ

ಕರೆತರಬೇಕು ಹಾಗೂ ವಿದೇಶಿಗರ ಮೇಲೆ ಯಾವುದೇ ಶೋಷಣೆ ನಡೆಯದಂತೆ ನೋಡಿಕೊಳ್ಳಬೇಕು.

ಸಲಾಬತಖಾನನ ಪಲಾಯನ :

ಸಲಾಬತ್‌ಖಾನ್‌ನು ತಕ್ಷಣವೇ ಬಾದಶಾಹನ ಆಜ್ಞೆಯನ್ನು ಪಾಲಿಸಿದನು. ಹಾಗೂ ಸಾಹೇಬ್‌ಖಾನ್‌ನನ್ನು ಷಾಹೀ ದರ್ಬಾರದಲ್ಲಿ ಕರೆತಂದನು. ಈ ಕಾರಣದಿಂದ ಸಾಹೇಬ್‌ಖಾನ್‌ನು ಸಲಾಬತಖಾನನ ವೈರಿಯಾದನು. ಸಾಹೇಬ್‌ಖಾನ್‌ನು ಶಕ್ತಿ ಹಾಗೂ ಬಲದಲ್ಲಿ ಸಲಾಬತಖಾನನಿಗಿಂತ ಬಹಳೇ ಬಲಿಷ್ಠನಾಗಿದ್ದನು. ಅದಕ್ಕಾಗಿ ಸಲಾಬತಖಾನನಿಗೆ ಜೀವಭಯವುಂಟಾಯಿತು. ಆ ಕಾರಣಕ್ಕಾಗಿ ಅವನು ಅರಣ್ಯದಲ್ಲಿ ತಲೆತಪ್ಪಿಸಿಕೊಂಡನು.

ಸಲಾಬತಖಾನನಿಗೆ ಸನ್ಮಾನ :

ಮುರ್ತುಜಾ ನಿಜಾಮಶಾಹನಿಗೆ ಯಾವಾಗ ಈ ಘಟನೆಯ ವಿವರ ತಿಳಿಯಿತೋ ಆಗ ಅವನು ಸಲಾಬತ್‌ಖಾನ್‌ನನ್ನು ಅರಣ್ಯದಿಂದ ಮರಳಿ ಕರೆಯಿಸಿ ಬಹಳೇ ಉತ್ತಮ ರೀತಿಯಲ್ಲಿ ಸನ್ಮಾನಿಸಿದನು. ಹಾಗೂ ಅವನನ್ನು ವಿಶೇಷ ಅಮೀರರಲ್ಲಿ ಷಾಮೀಲುಗೊಳಿಸಿದನು. 'ಸರೇನೌಬತ್'ದ (ಸೇನಾಧಿಪತಿ) ಹುದ್ದೆಯನ್ನು ನೀಡಿ ಸಶಸ್ತ್ರ ಸೈನ್ಯವನ್ನು ಅವನ ಅಡಿಯಲ್ಲಿ ನೀಡಿದನು.

ಖಾಜಿಬೇಗನ ಬಂಧನ :

ಇದೇ ಸಮಯದಲ್ಲಿ ಕೆಲ ಆಡಳಿತಗಾರರು ಇದನ್ನು ಪ್ರಸಿದ್ಧಿಗೊಳಿಸಿದರು. ಖಾಜಿ ಬೇಗ್‌ನು ಅಪ್ರಾಮಾಣಿಕ ರೀತಿಯಲ್ಲಿ ಹಣದ ದುರುಪಯೋಗ ಮಾಡಿಕೊಂಡಿರುವನು. ಈ ಕಾರಣಕ್ಕೆ ಬಾದಷಾಹ್‌ನು ಅವನನ್ನು ಬಂಧಿಸಿ ಒಂದು ಕೋಟೆಯಲ್ಲಿಟ್ಟನು. ಖಾಜಿಬೇಗ್‌ನ ವೈರಿಗಳು ಬಾದಷಾಹ್‌ನನ್ನು ಹೀಗೆ ಹೇಳಿದರು. ಖಾಜಿ ಬೇಗ್‌ನು ಷಾಹೀ ಖಜಾನೆಯಿಂದ ೨ ಲಕ್ಷ ಹವನ್ ನಗದು ಹಾಗೂ ಒಂದು ಲಕ್ಷ ಬೆಲೆಯ ಆಭರಣಗಳನ್ನು ಕಳವು ಮಾಡಿರುವನು. ಅದರ ಹೊರತಾಗಿ ಅವನು ಬೇರೆ ಮೂಲದಿಂದ ಏನೆಲ್ಲ ಹೊಂದಿರುವನೋ ಅದೂ ಸಹ ಕಡಿಮೆಯೇನಿಲ್ಲ. ಒಂದು ವೇಳೆ ತಾವು ಆದೇಶ ನೀಡಿದರೆ ಖಾಜಿಯಿಂದ ಈ ಧನವನ್ನು ತಕ್ಷಣ ಮರಳಿ ಪಡೆಯಬಹುದು.

ಖಾಜಿಬೇಗನ ಕುರಿತು ಬಾದಶಾಹನ ಅಭಿಪ್ರಾಯ :

ಬಾದಷಾಹ್‌ನು ಅದಕ್ಕೆ ಉತ್ತರವಾಗಿ ಹೀಗೆಂದನು. ಖಾಜಿ ಬೇಗನು ಅಪ್ರಾಮಾಣಿಕತೆಯ ಹೊಂಡದಲ್ಲಿ ಬಿದ್ದಿರುವನು. ಹಾಗೂ ಅವನು ಜಗತ್ತಿನ ಲೌಕಿಕ ಹಾಗೂ ಮೌಲ್ಯರಹಿತ ವಸ್ತುಗಳ ಹಿಂದೆ ಬಿದ್ದಿರುವನು. ಆ ಕಾರಣಕ್ಕೆ ಷಾಹೀಖಜಾನೆಯಿಂದ ಮೋಸದಿಂದ ತೆಗೆದುಕೊಂಡು ತಪ್ಪಿಸಿಗಿದ್ದಾನೆ. ಆದರೆ ಆವನಿಂದ

ಈ ಎಲ್ಲ ನಗದು ಹಾಗೂ ಆಭರಣಗಳನ್ನು ಮರಳಿ ಪಡೆಯುವುದು ಅನುಚಿತವಾಗಿದೆ. ಏಕೆಂದರೆ ಅವನು ಸೈಯ್ಯದ ವಂಶದವನಾಗಿದ್ದಾನೆ. ಹಾಗೂ ಯಾವುದೇ ಸೈಯ್ಯದ್ ವಂಶದವನಿಂದ ಬಲಪೂರ್ವಕವಾಗಿ ಏನನ್ನೂ ಮರಳಿ ಪಡೆಯುವುದು ಉಚಿತವಲ್ಲ. ಅವನು ಏನೆಲ್ಲ ಮೋಸದಿಂದ ತೆಗೆದುಕೊಂಡಿದ್ದಾನೆಯೋ ಅದನ್ನು ನಾನು ಸಸಂತೋಷದಿಂದ ಅವನಿಗೇ ನೀಡುವೆನು. ಈಗ ಒಳಿತು ಇದರಲ್ಲಿಯೇ ಇದೆ. ಖಾಜಿ ಬೇಗನಿಗೆ ಬಂಧನಮುಕ್ತ ಮಾಡಿ ಕುಟುಂಬದೊಂದಿಗೆ ಹಾಗೂ ಧನಕನಕ ವಸ್ತುಗಳೊಂದಿಗೆ ಅವನಿಗೆ ಅವನ ತಾಯಿನಾಡಿಗೆ ಮರಳಿ ಕಳುಹಿಸಬೇಕು.

ಸಲಾಬತಖಾನನ ಅಧಿಕಾರ :

ತಕ್ಷಣವೇ ಬಾದಶಾಹನ ಆಜ್ಞೆಯನ್ನು ಪಾಲಿಸಲಾಯಿತು. ಆಡಳಿತಗಾರನ ಮುಖಂಡನ ಹುದ್ದೆಯಲ್ಲಿ ಅಸದ್‌ಖಾನ್ ತುರ್ಕನನ್ನು ನೇಮಿಸಲಾಯಿತು. ಆದರೆ ಈ ಹುದ್ದೆಯು ಈಗ ಕೇವಲ ಹೆಸರಿಗೆ ಮಾತ್ರ ಉಳಿದಿತ್ತು. ನಿಜವಾಗಿ ಎಲ್ಲ ಬಲ ಹಾಗೂ ಅಧಿಕಾರದ ಒಡೆಯ ಸಲಾಬತ್‌ಖಾನ್‌ನಾಗಿದ್ದನು. ಸಾಹೇಬ್‌ಖಾನ್‌ನ ಅವಮಾನವು ಉತ್ತುಂಗಕ್ಕೇರಿತ್ತು. ಆದರೆ ಅವನು ಈಗಲೂ ಇದನ್ನೇ ತಿಳಿಯುತ್ತಿದ್ದನು. ಬಾದಷಾಹನು ಅವನ ಮೇಲೆ ಮೊದಲಿಗಿಂತಲೂ ಹೆಚ್ಚು ಕೃಪಾದೃಷ್ಟಿ ಉಳ್ಳವನಾಗಿರುವನು. ಸಲಾಬತ್‌ಖಾನ್‌ನು ಕಠಿಣ ವ್ಯಕ್ತಿತ್ವದವನಾಗಿದ್ದನು. ಅವನ ಈ ದಕ್ಷ ಆಡಳಿತವನ್ನು ಗಮನಿಸಿ ಸಾಹೇಬ್‌ಖಾನ್‌ನು ತನ್ನ ಎರಡು ಮೂರು ಸಾವಿರ ಸಂಗಾತಿಗಳು ಹಾಗೂ ಅಸಂಖ್ಯ ಆನೆಗಳ ಜೊತೆಗೆ ಅಹ್ಮದ್‌ನಗರದಿಂದ ಹೊರಗೆ ಹೊರಟು ಹೋದನು.

ಬೀದರನಲ್ಲಿ ಸಾಹೇಬಖಾನ :

ಮುರ್ತುಜಾ ನಿಜಾಮಶಾಹನಿಗೆ ಸಾಹೇಬ್‌ಖಾನ್‌ನ ಹೊರ ಹೊರಡುವಿಕೆಯ ಚಿಂತೆಯಾಯಿತು. ಅವನು ಬಹಳ ಯೋಚಿಸಿ ಸಾಹೇಬ್‌ಖಾನ್‌ನನ್ನು ಕರೆತರಲು ಸೈನ್ಯವನ್ನು ಕಳುಹಿಸಿದನು. ಹಾಗೂ ಸಾಹೇಬ್‌ಖಾನ್‌ನು ಬಂಡಾಯ ಹಾಗೂ ಅವಿಧೇಯತೆಯಿಂದ ನಡೆದುಕೊಂಡರೆ ಸಮಸ್ಯೆಯುಂಟಾಗುವುದು. ಅವನು ಸ್ವತಃ ಪಲ್ಲಕ್ಕಿಯಲ್ಲಿ ಸವಾರನಾಗಿ ಸಾಹೇಬಖಾನನ ಹಿಂದೆ ಹೋದನು. ಸಾಹೇಬ್‌ಖಾನ್‌ನು ಪ್ರವಾಸ ಮಾಡುತ್ತ ಅಹ್ಮದಾಬಾದ್‌ನಿಂದ ಬೀದರ್‌ವರೆಗೆ ಬಂದು ತಲುಪಿದನು. ಯಾವಾಗ ಅವನು ಕೋಟೆಯ ಬಳಿಗೆ ತಲುಪಿದನೋ ಆಗ ಕೋಟೆಯೊಳಗಿನವರು ಕೋಟೆಯ ಬಾಗಿಲನ್ನು ಹಾಕಿಕೊಂಡು ಹಾಗೂ ಹೊಸದಾಗಿ ಬಂದವರ ಮೇಲೆ ತೋಪನ್ನು ಹಾರಿಸಿದರು. ಆ ಕಾರಣದಿಂದ ಸಾಹೇಬ್‌ಖಾನ್‌ನ ಸೈನ್ಯದ ಒಂದು ಭಾಗವು ನಷ್ಟಗೊಂಡಿತು.

ಮುರ್ತುಜಾ ನಿಜಾಮಶಾಹ ಹಾಗೂ ಸಾಹೇಬಖಾನನ ಭೇಟಿ :

ಇದೇ ಸಮಯದಲ್ಲಿ ಮುರ್ತುಜಾ ನಿಜಾಮನು ಸಾಹೇಬಖಾನನ ಬಳಿ

ತಲುಪಿದನು. ಸಾಹೇಬಖಾನನು ಬಾದಶಹ್‌ನೊಂದಿಗೆ ಹೀಗೆಂದನು. "ನಾನು ಎರಡು ಷರತ್ತುಗಳ ಮೇಲೆ ಅಹ್ಮದನಗರಕ್ಕೆ ಮರಳಿ ಬರಲು ಸಿದ್ಧನಿದ್ದೇನೆ. ಮೊತ್ತಮೊದಲನೆಯದಾಗಿ ಸಲಾಬತ್‌ಖಾನ್‌ನನ್ನು ಷಾಹೀ ದರ್ಬಾರ್‌ದಿಂದ ಬೇರ್ಪಡಿಸಬೇಕು. ಎರಡನೆಯ ಷರತ್ತು ಏನೆಂದರೆ ಬೀದರ್‌ನ್ನು ಅಲೀ ಬರೀದ್‌ನ ವಶದಿಂದ ಹೊರತೆಗೆದು ನನಗೆ ಒಪ್ಪಿಸಬೇಕು.

ಬೀದರನ ದಿಗ್ಬಂಧನ :

ಮುರ್ತುಜಾ ನಿಜಾಮಶಾಹನು ಸಾಹೇಬಖಾನನ ಮನಸ್ಸಿಗೆ ನೋವಾಗದಿರಲಿ ಎಂದು ಬಯಸುತ್ತಿದ್ದನು. ಅದಕ್ಕಾಗಿ ಅವನು ಈ ಷರತ್ತುಗಳನ್ನು ಒಪ್ಪಿಕೊಂಡನು. ಬಾದಷಾಹ್‌ನು ಮೊದಲು ಸಲಾಬತ್‌ಖಾನ್‌ನನ್ನು ಆಡಳಿತದ ಹುದ್ದೆಯಿಂದ ಕೆಳಗಿಳಿಸಿ ಅವನ ಜಾಗೀರವಿದ್ದ (ಬೀಡ ಗ್ರಾಮ) ಲ್ಲಿಗೆ ಅವನನ್ನು ಕಳುಹಿಸಿದನು. ಅದರ ನಂತರ ಬೀದರ್‌ದ ದಿಗ್ಬಂಧನ ಮಾಡಿದನು. ಅಲಿಬರೀದ್‌ನು ಆದಿಲ್‌ಷಾಹ್‌ನಿಂದ ಸಹಾಯ ಯಾಚಿಸಿದನು. ಆದಿಲಶಾಹನು ಈ ಮನವಿಯನ್ನು ಸ್ವೀಕರಿಸಿದನು. ಹಾಗೂ ಒಂದು ಸಾವಿರ ಸವಾರರಿಗೆ ಅವನ ಸಹಾಯಕ್ಕಾಗಿ ಕಳುಹಿಸಿದನು.

ನಿಜಾಮಶಾಹನ ಅಹ್ಮದ್‌ನಗರಕ್ಕೆ ಮರಳುವಿಕೆ :

ಅದೇ ಸಮಯದಲ್ಲಿ ಈ ಮಾಹಿತಿ ಸಿಕ್ಕಿತು. ಯುವರಾಜ ಬುರ್ಹಾನ್‌ನು ಯಾವನು ಕೋಟೆಯಲ್ಲಿ ಬಂಧಿತನಾಗಿದ್ದನು. ಅವನು ಅಲ್ಲಿಂದ ಓಡಿ ಅಹ್ಮದನಗರದತ್ತ ಹೊರಟಿರುವನು. ಮುರ್ತುಜಾ ನಿಜಾಮ್‌ಷಾಹ್‌ನು ಕುತುಬ್‌ಷಾಹ್‌ನ ಸೇನಾಧಿಪತಿಯಾದ ಮಿರ್ಜಾಯಾದಗಾರ್ ಕಂಜುಯನ್ನು ಏಳು ಎಂಟು ಸಾವಿರ ಸವಾರರೊಂದಿಗೆ ಬೀದರ್‌ನಲ್ಲಿಯೇ ಬಿಟ್ಟು, ಸ್ವತಃ ಸಾಹೇಬ್‌ಖಾನ್‌ನೊಂದಿಗೆ ಅಹ್ಮದ್‌ನಗರಕ್ಕೆ ಮರಳಿದನು.

ಕೆಲವೇ ದಿನಗಳಲ್ಲಿ ಆದಿಲಶಾಹೀ ಸೈನ್ಯವು ಬೀದರ್‌ಕ್ಕೆ ತಲುಪಿತು. ಕುತುಬ್‌ಷಾಹೀ ಸೈನಿಕರು ಹೀಗೆ ಆ ಕಡೆ ಈ ಕಡೆಯ ನೆಪ ಹೂಡಿ ಗೊಲ್ಕೊಂಡಾದತ್ತ ಹೊರಟು ಹೋದರು. ಹಾಗೂ ಮಿರ್ಜಾಯಾರ್ ಗಾರ್‌ನು ಮುತ್ತಿಗೆ ಹಾಕುವಲ್ಲಿ ನಿರತನಾದನು.

ಅಹ್ಮದನಗರದಲ್ಲಿ ಯುವರಾಜ ಬುರ್ಹಾನ :

ಯಾವಾಗ ಯುವರಾಜ ಬುರ್ಹಾನನು ಅಹ್ಮದ್‌ನಗರವನ್ನು ತಲುಪಿದನೋ ಆಗ ಅವನು ಹತ್ತು ಹನ್ನೆರಡು ಸಾವಿರ ಜನರು ಯಾರು ಸಾಹೇಬ್‌ಖಾನ್‌ನಿಂದ ಜಿಗುಪ್ಸೆ ಹಾಗೂ ಬೇಸರ ಹೊಂದಿದ್ದರು. ಅವರೆಲ್ಲರೂ ಯುವರಾಜನ ಬಳಿ ಬಂದರು. ಈ ಪರಿಸ್ಥಿತಿಯನ್ನು ಕಂಡು ಮುರ್ತುಜಾ ನಿಜಾಮನು ಬಹಳ ವಿಚಲಿತನಾದನು. ಅವನು ಸಲಾಬತ್‌ಖಾನ್ ಹಾಗೂ ವಿಶೇಷ ಸೈನ್ಯದ ಇತರ ಅಮೀರರನ್ನು –

ಯಾರು ಸಾಹೇಬ್‌ಖಾನ್‌ನ ದುರ್ವರ್ತನೆಯಿಂದ ಅತಿಯಾಗಿ ಮುನಿಸಿಕೊಂಡಿದ್ದರು ಅವರಿಗೆ ಶಾಂತಿ, ನೆಮ್ಮದಿಯಿಂದಿರಲು ಸಂದೇಶ ನೀಡಿದನು. ಹಾಗೂ ತನ್ನ ದರ್ಬಾರಕ್ಕೆ ಕರೆಸಿಕೊಂಡನು.

ಪಟ್ಟಣಕ್ಕೆ ಸಾಹೇಬಖಾನನ ಹೊರಡುವಿಕೆ :

ಈ ಎಲ್ಲ ಅಮೀರರು ಬಾದಶಾಹನ ದರ್ಬಾರದಲ್ಲಿ ಸೇರಿದರು. ಸಾಹೇಬ್‌ಖಾನ್‌ನಿಗೆ ಯಾವಾಗ ಸಲಾಬತ್‌ಖಾನನ ಆಗಮನದ ಸುದ್ದಿ ತಲುಪಿತೋ ಆಗ ಅವನು ನಿರುತ್ಸಾಹಗೊಂಡನು. ಹಾಗೂ ಸಲಾಬತಖಾನನು ನಗರದಲ್ಲಿ ಪ್ರವೇಶ ಮಾಡುವ ಮೊದಲೇ ಸಾಹೇಬ್‌ಖಾನ್‌ನು ತನ್ನ ಸೈನಿಕರು, ಸಂಬಂಧಿಕರು ಹಾಗೂ ಇತರರೊಂದಿಗೆ 'ಪಟ್ಟಣ'ದ ಕಡೆಗೆ ಹೊರಟುಹೋದನು. ಮುರ್ತುಜಾ ನಿಜಾಮಷಾಹ್‌ನು ಈ ಸಲ ಸಾಹೇಬಖಾನನ ಕಡೆಗೆ ಯಾವುದೇ ತೆರನಾದ ಗಮನ ನೀಡಲಿಲ್ಲ ಹಾಗೂ ಅಹ್ಮದ್‌ನಗರಕ್ಕೆ ತಲುಪಿ ಇಡೀ ನಗರದಲ್ಲಿ ಸುತ್ತು ಹಾಕಿದನು.

ಯುವರಾಜ ಬುರ್ಹಾನ್‌ನ ಸೋಲು ಹಾಗೂ ಪರಾರಿಯಾಗುವಿಕೆ :

ಮರುದಿನ ಯುವರಾಜ ಬುರ್ಹಾನ್‌ನು 'ಬಾಗ್ ಏ ಬಹಿಷ್ತ್'ದ ಬಳಿಗೆ ತಲುಪಿದನು. ಮುರ್ತುಜಾ ನಿಜಾಮಷಾಹ್‌ನು ಒಂದು ಆನೆಯ ಮೇಲೆ ಸವಾರನಾಗಿ 'ಕಾಲಾಚಬೂತರಾ'ದ ಬಳಿ ನಿಂತುಕೊಂಡನು. ಬಾದಷಾಹ್‌ನು ಅಸದ್‌ಖಾನ್ ಹಾಗೂ ಇತರ ಅಮೀರರನ್ನು ತೋಪುಗಳೊಂದಿಗೆ ಯುವರಾಜನನ್ನು ಎದುರಿಸಲು ಕಳುಹಿಸಿದನು. ಪರಸ್ಪರರಲ್ಲಿ ಯುದ್ಧವಾಯಿತು. ಯುವರಾಜ ಬುರ್ಹಾನ್‌ನು ನಿರ್ಬಲನಾಗಿ ಸೋಲು ಕಂಡು ಬುರ್ಹಾನಪುರದತ್ತ ಹೊರಟುಹೋದನು.

ಸಾಹೇಬ್‌ಖಾನ್‌ನನ್ನು ಕರೆಸಿಕೊಳ್ಳುವಿಕೆ :

ಮುರ್ತುಜಾ ನಿಜಾಮಷಾಹ್‌ನು ಯಶಸ್ವಿಗೊಂಡು ನಗರದಲ್ಲಿ ಪ್ರವೇಶಿಸಿದನು. ಮತ್ತೆ ಏಕಾಂತವಾಸವನ್ನಪ್ಪಿಕೊಂಡನು. ಅವನು ಬರಾರ್‌ದ ಸೇನಾಧಿಪತಿಗೆ ಸೈಯ್ಯದ್ ಮುರ್ತುಜಾ ಹೆಸರಿನಲ್ಲಿ ಸಂದೇಶ ರವಾನಿಸಿದನು. ಏನೆಂದರೆ "ಸಾಹೇಬ್‌ಖಾನ್‌ನನ್ನು ಎಲ್ಲ ರೀತಿಯಿಂದ ತಿಳಿಸಿ ನನ್ನ ದರ್ಬಾರಿನಲ್ಲಿ ಹಾಜರುಪಡಿಸಬೇಕು. ಒಂದುವೇಳೆ ಅವನು ಇಲ್ಲಿಗೆ ಬರಲು ನಿರಾಕರಿಸಿದರೆ ಅವನನ್ನು ಕೊಂದುಬಿಡಬೇಕು. ಹಾಗೂ ಅವನ ಸಕಲ ಕುದುರೆ ಆನೆಗಳೆಲ್ಲವನ್ನು ನನ್ನ ಹತ್ತಿರ ಕಳುಹಿಸಿಕೊಡಬೇಕು."

ರಂಜಿಕೋಟೆಯ ಮೇಲೆ ಸಾಹೇಬ್‌ಖಾನ್‌ನ ದಾಳಿ :

ಸಾಹೇಬ್‌ಖಾನ್‌ನು ಈ ಕಡೆ ಆಕಡೆ ತಿರುಗುತ್ತಾ ಅಂಬರ್ ಹೆಸರಿನ ಗ್ರಾಮವನ್ನು ತಲುಪಿದನು. ಅವನು ಬೆಹ್ರಿಖಾನ್ ಖಿಜಿಲ್‌ಬಾಷ್ ಯಾರು ಬರಾರ್‌ದ ಅಮೀರರಲ್ಲಿ

ಓರ್ವನಾಗಿದ್ದನು ರಂಜಿಕೋಟೆಯಲ್ಲಿ ಇರುತ್ತಿದ್ದನು. ಅವನಿಗೆ ಸಂದೇಶವನ್ನು ನೀಡಿದನು. ಏನೆಂದರೆ ಅವನು ತನ್ನ ಪುತ್ರಿಯನ್ನು ಸಾಹೇಬ್‌ಖಾನ್ ನೊಂದಿಗೆ ವಿವಾಹ ಮಾಡಿಕೊಡಬೇಕು. ಬಹ್ರಿಖಾನ್‌ನು ಆಗ ಉತ್ತರಿಸಿದನು. "ಕೋಳಿ ಮಾರುವವನ ಮಗನ ಈ ಧೈರ್ಯವೇ ಅವನಿಗೆ ಅಮೀರ್‌ರೊಂದಿಗೆ ಸಾಮಿಪ್ಯ ಸಾಧಿಸುವ ಬಯಕೆಯೇಕೆ", ಈ ಉತ್ತರವನ್ನು ಕೇಳಿ ಸಾಹೇಬ್‌ಖಾನ್‌ನು ಕೋಪೋದ್ರಿಕ್ತನಾಗಿ ರಂಜಿಕೋಟೆಯ ಮೇಲೆ ದಾಳಿ ಮಾಡಿದನು.

ಬಹ್ರಿಖಾನ್‌ನ ಪರಾರಿಯಾಗುವಿಕೆ :

ಬಹ್ರಿಖಾನ್‌ನ ಬಳಿ ಸೈನ್ಯವು ಹೆಚ್ಚಾಗಿರಲಿಲ್ಲ. ಆ ಕಾರಣದಿಂದ ಅವನು ಸಾಹೇಬ್‌ಖಾನ್‌ನನ್ನು ಎದುರಿಸಲಾಗಲಿಲ್ಲ. ಹಾಗೂ ಯುದ್ಧದಿಂದ ಹಿಮ್ಮೆಟ್ಟಿ ಜಾಲ್ನಾದತ್ತ ಓಡಿ ಹೋದನು.

ಸಾಹೇಬ್‌ಖಾನ್‌ನ ವಿರುದ್ಧ ಕ್ರಮ :

ಮೇಲೆ ಹೇಳಿದಂತಹ ಬಾದಷಾಹನ ಸಂದೇಶವು ಸೈಯ್ಯದ್ ಮುರ್ತುಜಾನಿಗೆ ತಲುಪಿತ್ತು. ಅವನು ಖುದಾವಂದ್‌ಖಾನ್ ಹಾಗೂ ಇತರ ಕೆಲವು ಅಮೀರರನ್ನು ಈ ಕೆಲಸದ ಮೇಲೆ ನೇಮಿಸಿದನು. ಅವರು ಸಾಹೇಬ್‌ಖಾನ್‌ನನ್ನು ತಿಳಿಹೇಳಿ ಅಹ್ಮದ್‌ನಗರಕ್ಕೆ ಕರೆತರಬೇಕು. ಸೈಯ್ಯದ್ ಮುರ್ತುಜಾನು ಖುದಾವಂದ್‌ಖಾನ್‌ನೊಂದಿಗೆ ಕಿವಿಯಲ್ಲಿ ಹೀಗೆ ಉಸುರಿದನು.

"ಸಾಹೇಬ್‌ಖಾನ್‌ನ ಕ್ಷೋಭೆಯು ಕಾರಣದಿಂದ ಪ್ರತಿಯೊಬ್ಬ ವ್ಯಕ್ತಿಯು ತೊಂದರೆಗೊಳಗಾಗಿದ್ದಾನೆ. ಉಚಿತ ಇದೆ ಆಗಿದೆ ನೀನು ಏನಾದರೂ ಉಪಾಯ ಮಾಡಿ ಅವನ ಕಥೆ ಮುಗಿಸಬೇಕು. ಅದರಿಂದ ಪ್ರಜೆಗಳು ನಿರಾಳ ಹಾಗೂ ನೆಮ್ಮದಿಯಿಂದಿರಲಿ. ಖುದಾವಂದ್‌ಖಾನ್‌ನು ಸಹ ಅವನೊಂದಿಗೆ ದನಿಗೂಡಿಸಿದನು. ಈ ಎಲ್ಲ ಜನರು ಸಾಹೇಬ್‌ಖಾನ್‌ನತ್ತ ಹೊರಟರು.

ಸಾಹೇಬ್‌ಖಾನ್‌ನೊಂದಿಗೆ ಅಮೀರರ ಭೇಟಿ :

ಸಾಹೇಬ್‌ಖಾನ್‌ನ ಕೆಟ್ಟ ಕಾಲ ಪ್ರಾರಂಭವಾಗಿತ್ತು. ಆ ಕಾರಣಕ್ಕೆ ಅವನು ಮೇಲೆ ಹೇಳಿದ ಅಮೀರರ ಆಗಮನಕ್ಕೆ ಯಾವುದೇ ಮಹತ್ವ ನೀಡಲಿಲ್ಲ. ಹಾಗೂ ಯಾವ ಸ್ಥಳದಲ್ಲಿ ತಂಗಿದ್ದನೋ ಅಲ್ಲಿಯೇ ಉಳಿದನು. ಈ ಜನರು ಈತನ ವಾಸಸ್ಥಾನದ ಬಳಿ ತಲುಪಿದರು. ಹಾಗೂ ನಿಂತು ಹಾಸ್ಯದ ಧಾಟಿಯಲ್ಲಿ ಹೀಗೆ ಹೇಳಿದರು. "ನಾವು ಬಾದಷಾಹ್‌ನ ಆಜ್ಞೆಯನ್ನು ಅನುಸರಿಸಿ ಇಲ್ಲಿಗೆ ಬಂದಿರುವೆವು. ಒಂದು ವೇಳೆ ಅನುಮತಿ ಇದ್ದರೆ 'ಸಲಾಂ'ಗಾಗಿ ಹಾಜರಾಗುವೆವು." ಸಾಹೇಬ್‌ಖಾನ್‌ನು ಈ ವೇಳೆಯಲ್ಲಿ ಮದ್ಯ ಸೇವಿಸುತ್ತಿದ್ದನು. ಅವನು ಅಮೀರರನ್ನು ತನ್ನ ಬಳಿಗೆ ಕರೆಯಿಸಿಕೊಂಡನು.

ಸಾಹೇಬ್‌ಖಾನ್‌ನ ಕೊಲೆ :

ಈ ಎಲ್ಲ ಅಮೀರರು ಸಶಸ್ತ್ರ ಸಜ್ಜಿತರಾಗಿದ್ದರು. ಆ ಕಾರಣಕ್ಕೆ ಅವರನ್ನು ನೋಡಿ ಸಾಹೇಬ್‌ಖಾನ್‌ನು ಬಹಳೇ ವಿಚಲಿತಗೊಂಡನು. ಈ ಗಾಬರಿಯನ್ನು ತೋರಿಸದಿರಲು ತಕ್ಷಣ ಎದ್ದು ನಿಂತನು ಹಾಗೂ ಬಹಳೇ ಹಾರ್ದಿಕವಾಗಿ ಈ ಅಮೀರರೊಂದಿಗೆ ಭೇಟಿ ಮಾಡತೊಡಗಿದನು. ಒಬ್ಬರ ನಂತರ ಒಬ್ಬರನ್ನು ಅಪ್ಪಿಕೊಂಡನು. ಯಾವಾಗ ಖುದಾವಂದ್‌ನ ಸರದಿ ಬಂದಿತೋ ಆಗ ಅವನು ಸಾಹೇಬ್‌ಖಾನ್‌ನನ್ನು ಎಷ್ಟು ಬಲವಾಗಿ ಅಪ್ಪಿಕೊಂಡನೆಂದರೆ ಅವನ ಪಕ್ಕೆಲುಬುಗಳು ಮುರಿದವು. ಆ ನಂತರ ಖುದಾವಂದ್‌ಖಾನ್‌ನು ಒಂದು ಉಪಾಯ ಹೂಡಿದನು. ಹಾಗೂ ಹೀಗೆಂದನು. ಸಾಹೇಬ್‌ಖಾನ್‌ನು ನನ್ನ ಕುತ್ತಿಗೆ ಹಿಸುಕುತ್ತಿರುವನು. ಈ ಮಾತು ಸರಿಯಿರಲಿಲ್ಲ. ಆದರೆ ಖುದಾವಂದ್‌ಖಾನ್‌ನಿಗೆ ತನ್ನ ಉದ್ದೇಶ ಪೂರ್ತಿ ಮಾಡುವುದಾಗಿತ್ತು. ಅದಕ್ಕಾಗಿ ಅವನಿಗೆ ಈ ಮಾತು ಹೇಳಬೇಕಾಯಿತು. ಅವನು ಸಾಹೇಬ್‌ಖಾನ್‌ನನ್ನು ನೆಲದ ಮೇಲೆ ಕೆಡವಿದನು. ಹಾಗೂ ತನ್ನ ಕತ್ತಿಯನ್ನು ಹೊರತೆಗೆದು ಅವನ ಕಥೆ ಮುಗಿಸಿದನು. ಸಾಹೇಬ್‌ಖಾನ್‌ನ ಸಹೋದರರು, ಸಂಬಂಧಿಕರು ಹಾಗೂ ಇತರರು ಯಾವಾಗ ಈ ದೃಶ್ಯವನ್ನು ನೋಡಿದರೋ ಅವರು ತಕ್ಷಣ ಅಲ್ಲಿಂದ ಕಾಲುಕಿತ್ತರು.

ಬಾದ್‌ಷಾಹ್‌ನ ಹೆಸರಿನಲ್ಲಿ ಸೈಯ್ಯದ್ ಮುರ್ತುಜಾನ ಅರಿಕೆ :

ಖುದಾವಂದ್‌ಖಾನ್‌ನು ಈ ದುಷ್ಟನ ಕತೆ ಮುಗಿಸಿದ. ನಂತರ ಸೈಯ್ಯದ್ ಮುರ್ತುಜಾನ ಬಳಿ ಬಂದನು ಹಾಗೂ ಅವನಿಗೆ ಸಂಪೂರ್ಣ ಘಟನೆಯ ವಿವರಗಳನ್ನು ನೀಡಿದನು. ಸೈಯ್ಯದ್ ಮುರ್ತುಜಾನು ಬಾದಷಾಹ್‌ನ ಹೆಸರಿನಲ್ಲಿ ಒಂದು ಅರಿಕೆಯನ್ನು ಕಳುಹಿಸಿದನು. ಹಾಗೂ ಇದರಲ್ಲಿ ಹೀಗೆ ಬರೆದನು. ನಾನು ಖಾವಂದ್‌ರ ಆಜ್ಞೆಯಂತೆ ಕೆಲವು ಅಮೀರರನ್ನು ಸಾಹೇಬ್‌ಖಾನ್‌ನ ಬಳಿ ಕಳುಹಿಸಿದ್ದೆನು. ಅವರು ಅವನನ್ನು ಅಹ್ಮದ್‌ನಗರಕ್ಕೆ ಕಳುಹಿಸಬೇಕು. ಆದರೆ ಸಾಹೇಬ್‌ಖಾನ್‌ನು ಸಂಕುಚಿತ ಮನೋಭಾವದಿಂದ, ಬುದ್ಧಿಗೇಡಿತನದಿಂದ ಕೆಲಸ ತೆಗೆದುಕೊಂಡನು. ಹಾಗೂ ಈ ಅಮೀರರೊಂದಿಗೆ ಸಂಘರ್ಷಕ್ಕಿಳಿದನು. ಕೊನೆಯಲ್ಲಿ ಈ ಗೊಂದಲದಲ್ಲಿ ಕೊಲ್ಲಲ್ಪಟ್ಟನು. ಅಹ್ಮದ್‌ನಗರದ ಸಮಸ್ತ ಪ್ರಜೆಗಳು ಸಾಹೇಬ್‌ಖಾನ್‌ನಿಂದ ಶೋಷಿಸಲ್ಪಟ್ಟಿದ್ದರು. ಆ ಕಾರಣಕ್ಕೆ ಈ ಸುದ್ಧಿ ಕೇಳಿ ಎಲ್ಲರಲ್ಲಿ ಸಂತಸದ ಲಹರಿ ಹರಿಯಿತು. ಬಾದ್‌ಷಾಹ್‌ನು ಸಹ ಜನರ ಮನಸ್ಸನ್ನು ಅರಿತನು. ಆದುದರಿಂದ ಅವನು ಸಾಹೇಬ್‌ಖಾನ್‌ನ ಕೊಲೆಯ ವಿಷಯದಲ್ಲಿ ವಿಚಾರಣೆ ನಡೆಸಲಿಲ್ಲ.

ಈ ಘಟನೆಯ ನಂತರ ಸಲಾಬತ್‌ಖಾನ್‌ನು ಯಾವುದೇ ಅಡೆತಡೆಗಳಿಲ್ಲದೇ ಆಡಳಿತ ಹಾಗೂ ಆರ್ಥಿಕ ವ್ಯವಹಾರಗಳನ್ನು ದಕ್ಷ ರೀತಿಯಲ್ಲಿ ನಿಭಾಯಿಸತೊಡಗಿದನು. ಹಲವಾರು ವರ್ಷಗಳವರೆಗೆ ಅವನು ಬಹಳೇ ಶ್ರೇಷ್ಠ ಹಾಗೂ ಉತ್ಸಾಹಪೂರ್ವಕವಾದ

ಜೀವನ ನಡೆಸಿದನು. ಈ ನಡುವೆ ಅಕ್ಬರ್ ಬಾದಷಾಹ್‌ನ ದೂತನು ಎರಡು ಮೂರು ಸಲ ಅಹ್ಮದ್‌ನಗರಕ್ಕೆ ಬಂದನು. ಹಾಗೂ ಸಸಂತೋಷದಿಂದ ಮರಳಿದನು.

ಸಲಾಬತ್‌ಖಾನ್‌ನ ಸುವ್ಯವಸ್ಥಿತ ಆಡಳಿತ :

ಸಲಾಬತ್‌ಖಾನ್‌ನು ಪ್ರಾಂತ್ಯದ ವ್ಯವಸ್ಥೆಯನ್ನು ಎಷ್ಟು ಸುವ್ಯವಸ್ಥಿತಗೊಳಿಸಿದ್ದನೆಂದರೆ ವ್ಯಾಪಾರಿಗಳು ಯಾವುದೇ ಭಯವಿಲ್ಲದೇ ಪ್ರವಾಸ ಮಾಡುತ್ತಿದ್ದರು. ಮರಾಠಾವಾಡಿಯಲ್ಲಿ ಸುಲ್ತಾನ್ ಮಹಮ್ಮದ್ ಅಲಾವುದ್ದೀನ್‌ನ ನಂತರ ಸಲಾಬತ್‌ಖಾನ್‌ನಿಗಿಂತ ಹೆಚ್ಚು ಯಾವ ವ್ಯಕ್ತಿಯೂ ಪ್ರಜೆಗಳ ಹಿತದೃಷ್ಟಿ ಹಾಗೂ ಪ್ರಾಂತ್ಯದ ಉನ್ನತಿಗಾಗಿ, ಸಮೃದ್ಧಿಗಾಗಿ ಶ್ರಮಿಸಲಿಲ್ಲ. ಅವನು ಖ್ವಾಜಾ ನ್ಯಾಮತುಲ್ಲಾ ತೆಹ್ರಾನಿ ಹಾಗೂ ಖ್ವಾಜಾ ಇನಾಯತುಲ್ಲಾರಂತಹ ಗೌರವಾನ್ವಿತರನ್ನು ಆದೇಶಿಸಿದನು. ಅವರ ಅಧೀನ ಪ್ರಾಂತ್ಯಗಳಲ್ಲಿ ಗಸ್ತು ತಿರುಗಬೇಕು. ಹಾಗೂ ಕಳ್ಳರ, ಲೂಟಿಕೋರರ ಹಾಗೂ ಇತರರನ್ನು ದಮನಿಸಲು ಎಲ್ಲ ರೀತಿಯ ಪ್ರಯತ್ನ ಮಾಡಬೇಕು. ಈ ವಿಷಯದಲ್ಲಿ ಈ ಅನುಮತಿ ನೀಡಲಾಯಿತು. ಒಂದುವೇಳೆ ಯಾವುದೇ ವ್ಯಕ್ತಿಯು ಸಣ್ಣ ಸಣ್ಣದಾದ (ಮೌಲ್ಯರಹಿತ) ವಸ್ತುವನ್ನು ಕದಿಯುವ ಪ್ರಯತ್ನ ಮಾಡಿದರೂ ಅವನನ್ನು ಕೊಲೆಗೈಯ್ಯಬೇಕು.

ಇಮಾರತ್ತುಗಳನ್ನು ನಿರ್ಮಿಸುವ ಬಯಕೆ :

ಸಲಾಬತ್‌ಖಾನ್‌ನು ನಗರದಲ್ಲಿ ಉದ್ಯಾನಗಳನ್ನು ಹಾಗೂ ಇಮಾರತ್ತುಗಳನ್ನು ನಿರ್ಮಿಸುವತ್ತ ಗಮನವಿತ್ತನು. ಅವನ ಅವಧಿಯಲ್ಲಿ ನಿರ್ಮಿಸಲ್ಪಟ್ಟ ಇಮಾರತ್ತುಗಳಲ್ಲಿ "ಫರ್ಹಬಕ್ಷ್" ಬಹಳೇ ಪ್ರಸಿದ್ಧವಾಗಿದೆ. ಈ ಇಮಾರತ್ತಿನ ನಿರ್ಮಾಣವು ಚಂಗೇಜ್‌ಖಾನ್‌ನ ಅವಧಿಯಲ್ಲಿ ಪ್ರಾರಂಭಗೊಂಡಿತ್ತು ಹಾಗೂ ನ್ಯಾಮತ್‌ಖಾನ್ ಸಮ್‌ನಾನಿಯ ಮೇಲ್ವಿಚಾರಣೆಯಲ್ಲಿ ಹಿಜ್ರಿಶಕೆ ೯೦೨ ರಲ್ಲಿ ಪೂರ್ಣಗೊಂಡಿತು. ಒಂದು ಸಲ ಬಾದ್‌ಷಾಹ್‌ನು ಈ ಉದ್ಯಾನಗಳನ್ನು ಹಾಗೂ ಇಮಾರತ್ತುಗಳನ್ನು ವೀಕ್ಷಿಸಲೆಂದು ಪ್ರವಾಸಕ್ಕೆ ಬಂದನು. ಅವನಿಗೆ ಈ ಉದ್ಯಾನ ಹಾಗೂ ಇಮಾರತು ಹಿಡಿಸಲಿಲ್ಲ. ಅವನು ನ್ಯಾಮತ್‌ಖಾನ್ ಸಮ್‌ನಾನಿಗೆ ಉದ್ಯಾನದ ಮೇಲ್ವಿಚಾರಣೆಯಿಂದ ಬೇರ್ಪಡಿಸಿ ಸಲಾಬತ್‌ಖಾನ್‌ನಿಗೆ ಈ ಇಮಾರತ್ತನ್ನು ಪುನಃ ನಿರ್ಮಿಸಲು ಆದೇಶಿಸಿದನು.

'ಫರ್ಹಬಕ್ಷ'ದ ನವನಿರ್ಮಾಣ :

ಈ ಇಮಾರತ್ತಿನ ಮೇಲೆ ಬಹಳಷ್ಟು ಹಣ ಖರ್ಚಾಗಿತ್ತು. ಆದರೆ ನಿಜಾಮ್‌ಷಾಹ್‌ನ ಆದೇಶದ ಅನುಸಾರವಾಗಿ ಅದನ್ನು ಕೆಡವಿ ಪುನಃ ನವನಿರ್ಮಾಣ ಮಾಡಲಾಯಿತು. ಸಲಾಬತ್‌ಖಾನ್‌ನು ಅತಿಯಾದ ಗಮನವನ್ನು ನೀಡಿ ಸದಾಸಿದ್ಧನಾಗಿದ್ದು ತನ್ನ ಮೇಲ್ವಿಚಾರಣೆಯಲ್ಲಿ ಈ ಇಮಾರತ್ತನ್ನು ನಿರ್ಮಿಸಿದನು. ಅಹ್ಮದ್ ಮುರ್ತುಜಾಖಾನ್ ಅಂಜುವು ಈ ಇಮಾರತ್ತಿನ ವರ್ಣನೆಯಲ್ಲಿ ಕೆಲವು ಅತ್ಯುತ್ತಮವಾದ ದ್ವಿಪದಿ (ಅಶ್‌ಆರ್) ಗಳನ್ನು ಬರೆದನು. ಹಿಜ್ರಿ ಶಕೆ ೯೯೧ ರಲ್ಲಿ ಈ ಇಮಾರತ್ತಿಗೆ ಅಂಟಿಕೊಂಡೇ

ಒಂದು ಉದ್ಯಾನವು ಪೂರ್ತಿಗೊಂಡಿತು. ಪೂರ್ತಿಗೊಂಡ ಸಂದರ್ಭದಲ್ಲಿ ಒಂದು ಬೃಹತ್‌ರೂಪದ ಸಮಾರಂಭವನ್ನು ಹಮ್ಮಿಕೊಳ್ಳಲಾಯಿತು. ಪ್ರಾಂತ್ಯದ ಎಲ್ಲ ಗೌರವಾನ್ವಿತರನ್ನು ಈ ಸಮಾರಂಭದಲ್ಲಿ ಆಮಂತ್ರಿಸಲಾಯಿತು. ಹಾಗೂ ಇವರನ್ನು ಸನ್ಮಾನ ಪುರಸ್ಕಾರಗಳಿಂದ ಗೌರವಿಸಲಾಯಿತು. ಮುಲ್ಲಾ ಮಲೀಕ್ ಖುಮಿಯು ಈ ಸಂದರ್ಭದಲ್ಲಿ ಬಾದಷಾಹ್‌ನ ಗೌರವಾರ್ಥವಾಗಿ ಸ್ತುತಿಗೀತೆ ಓದಿದನು. ಆ ಕವಿತೆಯು ಎಷ್ಟು ಜನಪ್ರಿಯವಾಯಿತೆಂದರೆ ಪಂಡಿತ, ಪಾಮರರ ನಾಲಿಗೆಯ ಮೇಲೆ ನಲಿದಾಡತೊಡಗಿತು.

ಆದಿಲ್‌ಷಾಹಿಗಳ ಪ್ರಾಂತ್ಯಗಳನ್ನು ವಶಪಡಿಸಿಕೊಳ್ಳುವ ಯೋಚನೆ :

ಹಿಜ್ರಿ ಶಕೆ ೯೮೯ ರಲ್ಲಿ ಅಲಿ ಆದಿಲ್‌ಷಾಹ್‌ನ ಕೊಲೆಯ ಘಟನೆಯು ನಡೆಯಿತು. ಹಾಗೂ ಅವನ ಸಹೋದರರ ಪುತ್ರನಾದ ಇಬ್ರಾಹಿಂ ಆದಿಲ್ ಒಂಬತ್ತು ವರ್ಷದ ವಯಸ್ಸಿನಲ್ಲಿ ಸಿಂಹಾಸನವನ್ನು ಅಲಂಕರಿಸಿದನು. ಸಲಾಬತ್‌ಖಾನ್‌ನು ಈ ರೀತಿ ಯೋಚಿಸಿದನು. ಈಗ ಆದಿಲ್‌ಷಾಹಿಗಳ ಪ್ರಾಂತ್ಯಗಳನ್ನು ಸುಲಭವಾಗಿ ವಶಪಡಿಸಿಕೊಳ್ಳಬಹುದು. ಅದಕ್ಕಾಗಿ ಅವನು ನಿಜಾಮಷಾಹ್‌ನಿಂದ ಆದಿಲ್‌ಷಾಹ್‌ನ ಕೆಲವು ಪ್ರಾಂತ್ಯಗಳನ್ನು ವಶಪಡಿಸಿಕೊಳ್ಳಲು ಅನುಮತಿ ಕೇಳಿದನು. ಬಾದಷಾಹನು ಅನುಮತಿ ನೀಡಿದನು. ಅವನು ತನ್ನ ಸೇವಕನಾದ ಬಹಜಾದುಲ್ ಮುಲ್ಕನನ್ನು ಸೇನಾಧಿಪತಿಯನ್ನಾಗಿಸಿದನು. ಪ್ರಧಾನಮಂತ್ರಿಯನ್ನಾಗಿಸಿ ಸೈಯ್ಯದ್ ಮುರ್ತುಜಾರನ್ನು ಒಂದು ಬೃಹತ್ ಸೈನ್ಯದೊಂದಿಗೆ ಬಹಜಾದುಲ್ ಮುಲ್ಕನೊಂದಿಗೆ ಕಳುಹಿಸಿದನು. ಬಹಜಾದ್‌ನು ಹಿರಿಮೆ ಗರಿಮೆಯೊಂದಿಗೆ ಸಂಕಲ್ಪವನ್ನು ಪೂರ್ತಿಗೊಳಿಸಲು ಪ್ರವಾಸ ಕೈಗೊಂಡನು.

ಪರಸ್ಪರರ ಮುಖಾಮುಖಿ :

ನಿಜಾಮ್‌ಷಾಹಿ ಸೈನ್ಯವು ಯಾವಾಗ ಷಾಹ್‌ದುರ್ಗದ ಬಳಿಗೆ ತಲುಪಿತೋ ಆದಿಲ್‌ಷಾಹೀ ಅಮೀರರು ಅವರನ್ನು ಎದುರಿಸುವ ಯೋಚನೆಯಿಂದ ಐದು ಆರು ಕೋಸ್ ದೂರದಲ್ಲಿ ತಂಗಿದರು. ಎರಡೂ ಸೈನ್ಯಗಳು ಪೂರ್ತಿ ಒಂದು ತಿಂಗಳವರೆಗೆ ಎದುರು ಬದುರಾಗಿ ದೃಢವಾಗಿ ನಿಂತವು. ಕೊನೆಗೆ ಆದಿಲ್‌ಷಾಹಿಗಳಿಗೆ ಈ ಸುದ್ದಿ ತಲುಪಿತು. ಏನೆಂದರೆ ಮುರ್ತುಜಾ ಖಾನ್‌ನು ಬೆಹ್‌ಜಾದುಲ್ ಮುಲ್ಕನ ಸೇನಾಧಿಪತ್ಯದಿಂದ ಸಂತುಷ್ಟನಿಲ್ಲ. ಅದಕ್ಕಾಗಿ ಅವನು ಯುದ್ಧದಲ್ಲಿ ಬೆಹಜಾದ್‌ನ ಸಹಾಯವನ್ನು ಮಾಡಲು ಹಿಂಜರಿಯುವನು.

ಆದಿಲ್‌ಷಾಹಿಗಳಿಂದ ದಾಳಿ :

ಆದಿಲ್‌ಷಾಹಿ ಅಮೀರರು ತಮ್ಮ ಸೈನ್ಯವನ್ನು ಸಿದ್ಧಗೊಳಿಸಿದರು. ಹಾಗೂ ಮಧ್ಯ ರಾತ್ರಿ ಮೀರಿದ ನಂತರ ತಮ್ಮ ತಂಗುದಾಣದಿಂದ ಹೊರಬಂದರು. ಆ ವೇಳೆಯಲ್ಲಿ

ಸಣ್ಣದಾಗಿ ಮಳೆ ಹನಿಸುತ್ತಿತ್ತು. ಹಾಗೂ ನಿಜಾಮ್‌ಷಾಹ್‌ನ ಸೈನ್ಯವು ನಿರ್ಲಕ್ಷ ಧೋರಣೆಯಲ್ಲಿ ಮುಳುಗಿ ನಿದ್ರಾ ಅವಸ್ಥೆಯಲ್ಲಿತ್ತು. ಆದಿಲ್‌ಷಾಹಿಗಳು ಯುದ್ಧಾರಂಭದ ನಗಾರಿ ಬಾರಿಸಿದರು. ಋತುವಿನ ಒಳ್ಳೆಯ ವಾತಾವರಣವನ್ನು ಅನುಲಕ್ಷಿಸಿ ಬೆಹ್‌ಜಾದುಲ್‌ಮುಲ್ಕನು ಮದ್ಯಪಾನದ ಸಭೆಯನ್ನು ಏರ್ಪಡಿಸಿದ್ದನು. ಅವನು ಯಾವಾಗ ಯುದ್ಧಾರಂಭದ ನಗಾರಿಯ ಶಬ್ದವನ್ನು ಕೇಳಿದನೋ ಆಗ ಅವನು ಗಾಬರಿಗೊಂಡು ಹೊರಬಂದನು. ಅದಕ್ಕಿಂತ ಮೊದಲೇ ಸೈನ್ಯವು ಹಾಗೂ ಸೇನಾಧಿಪತಿಗಳು ಅವನ ಸುತ್ತಮುತ್ತಲು ನೆರೆದರು. ವೈರಿಗಳು ಅವನ ಮೇಲೆ ದಾಳಿ ಮಾಡಿದರು. ವೈರಿಗಳು ಬೆಹಜಾದುಲ್ ಮುಲ್ಕನ ಒಂದು ನೂರಾ ಐವತ್ತು ಆನೆಗಳನ್ನು ಬಂಧಿಸಿದರು. ಹಾಗೂ ನಿಜಾಮಷಾಹೀ ಸೈನಿಕರನ್ನು ಮಣ್ಣುಗೂಡಿಸಿದರು.

ಸಲಾಬತ್‌ಖಾನ್‌ನ ಹೆಸರಿನಲ್ಲಿ ಸೈಯದ್ ಮುರ್ತುಜಾನ ಪತ್ರ :

ಸೈಯ್ಯದ್ ಮುರ್ತುಜಾ ಬೆಹಜಾದುಲ್ ಮುಲ್ಕನಿಂದ ಕೆಲವೇ ದೂರದ ಅಂತರದಲ್ಲಿ ನಿಂತಿದ್ದನು. ಅವನು ಈ ಅಂತರದ ನೆಪ ಮಾಡಿ ಬೆಹ್‌ಜಾದ್‌ನ ಸಹಾಯವನ್ನು ಮಾಡಲಿಲ್ಲ. ಹಾಗೂ ಸಲಾಬತ್‌ಖಾನ್‌ನಿಗೆ ಈ ಸಾರಾಂಶವುಳ್ಳ ಒಂದು ಪತ್ರವನ್ನು ಬರೆದನು. "ಬಹ್‌ಜಾದುಲ್ ಮುಲ್ಕನು ಯುದ್ಧ ಆರಂಭಿಸುವಲ್ಲಿ ಯೋಜನಾ ಬದ್ಧನಾಗಿ ಪ್ರಾರಂಭಿಸಲಿಲ್ಲ. ಅವನು ತನ್ನ ಹಿತೈಷಿಗಳ ಬರುವಿಕೆಯನ್ನು ಸ್ವಲ್ಪವೂ ಕಾಯಲಿಲ್ಲ. ಆ ಕಾರಣಕ್ಕೆ ಅವನಿಗೆ ಸೋಲಿನ ಮುಖ ನೋಡಬೇಕಾಯಿತು. ಅದೇನೇ ಇರಲಿ ನಾನು ಕೆಲದಿನಗಳಲ್ಲೇ ಆ ಸೋಲಿನ ಸೇಡನ್ನು ತೀರಿಸಿಕೊಳ್ಳುವೆನು.

ಸೈಯ್ಯದ್ ಮುರ್ತುಜಾನ ಸೇನಾಧಿಪತ್ಯ :

ಸಲಾಬತ್‌ಖಾನ್‌ನು ಸೈಯ್ಯದ್ ಮುರ್ತುಜಾನನ್ನು ಸೇನಾಧಿಪತಿಯನ್ನಾಗಿ ನೇಮಿಸಿದನು. ಸೈಯ್ಯದ್ ಮುರ್ತುಜಾನು ಈ ಗೌರವ ಲಭಿಸಿರುವುದರಿಂದ ಬಹಳೇ ಸಂತೋಷ ಹೊಂದಿದನು. ಹಾಗೂ ಸೈನ್ಯವನ್ನು ಒಟ್ಟುಗೂಡಿಸಲು ಪ್ರಾರಂಭಿಸಿದನು. ಇದೇ ವೇಳೆಯಲ್ಲಿ ಇಬ್ರಾಹಿಂ ಕುತುಬ್‌ಷಾಹ್‌ನು ಮೃತ್ಯು ಹೊಂದಿದನು. ಹಾಗೂ ಅವನ ಮಗನಾದ ಮುಹಮ್ಮದ್ ಕುಲಿಕುತುಬ್‌ಷಾಹ್ ಸಿಂಹಾಸನಾರೂಢನಾದನು.

ಷಾಹ್‌ದುರ್ಗ ಕೋಟೆಯ ಮುತ್ತಿಗೆ :

ಈ ಘಟನೆಯಿಂದ ಕುತುಬ್‌ಷಾಹೀ ಸೈನ್ಯವು ಯಾವುದು ನಿಜಾಮ್‌ಷಾಹಿಗಳ ಸಹಾಯಕ್ಕೆ ಆಗಮಿಸಿರುವುದು ಅದು ನೊಂದುಕೊಂಡು ಬೇರ್ಪಟ್ಟಿತು. ಸೈಯ್ಯದ್ ಮುರ್ತುಜಾನು ಷಾ ಮಿರ್ಜಾ ಅಸ್ಫಹಾನಿಯನ್ನು ಯಾರು ಕುತುಬ್‌ಷಾಹ್‌ನ ಸಾಮ್ರಾಜ್ಯದ ರಾಜಪ್ರತಿನಿಧಿಯಾಗಿದ್ದನು ಮಾತುಕತೆ ನಡೆಸಿ ಮುಹಮ್ಮದ್ ಕುಲಿಕುತುಬ್‌ಷಾಹ್‌ನನ್ನು ಕರೆಯಿಸಿಕೊಂಡನು. ಹಾಗೂ ಈ ತೆರನಾಗಿ ಕುತುಬ್‌ಷಾಹಿಗಳ ಸಹಾಯದಿಂದ ಷಾಹ್‌ದುರ್ಗದ ಕೋಟೆಯ ದಿಗ್ಬಂಧನ ಮಾಡಿದನು. ಸೈಯ್ಯದ್

ಮುರ್ತುಜಾ ಈ ಕೋಟೆಗಾಗಿ ಐದು ಆರು ತಿಂಗಳವರೆಗೆ ವೈರಿಗಳೊಂದಿಗೆ ಯುದ್ಧ ನಿರತನಾಗಿದ್ದನು.

ಮುಹಮ್ಮದ್ ಆಕಾ ತುರ್ಕಮಾನ್‌ನ ಧೃಢಹೆಜ್ಜೆ :

ಖುದಾವಂದ್‌ಖಾನ್ ಹಾಗೂ ಬೆಹ್ರಿ ಖಾನ್ ಈ ಕಾಲದಲ್ಲಿ ತಮ್ಮ ಕಾರ್ಯದ ಅಪ್ರತಿಮ ಸಾಹಸವನ್ನು ತೋರಿದರು. ಅವರ ಶೌರ್ಯದ ಪ್ರಸಿದ್ಧಿಯು ನಾಲ್ಕು ಕಡೆಗೆ ಹಬ್ಬಿತು. ಷಾಹ್‌ದುರ್ಗ ಕೋಟೆಯ ಥಾನೆದಾರನಾದ ಮೊಹಮ್ಮದ್ ಆಕಾ ತುರ್ಕ್‌ಮಾನ್‌ನು ವೈರಿಯಿಂದ ಸ್ವರಕ್ಷಿಸಿಕೊಳ್ಳುವಲ್ಲಿ ಸಂಪೂರ್ಣವಾಗಿ ರೀತಿಯಲ್ಲಿ ಪ್ರಯತ್ನ ಮಾಡಿದನು ಹಾಗೂ ಕೋಟೆಯ ರಕ್ಷಣೆಗಾಗಿ ಜೀವವನ್ನೇ ಒತ್ತೆಯಿಟ್ಟು ಹೋರಾಡಿದನು. ನಿಜಾಮಷಾಹ್ ಹಾಗೂ ಕುತುಬ್‌ಷಾಹ್‌ರು ಮೊಹಮ್ಮದ್ ಆಕಾ ತುರ್ಕಮಾನ್‌ನಿಗೆ ಬಹುಮಾನ ಪುರಸ್ಕಾರದ ಲಾಲಸೆ ಹುಟ್ಟಿಸಿ ತನ್ನೆಡೆಗೆ ತರಲು ಪ್ರಯತ್ನಿಸಿದರು. ಆದರೆ ಅವರು ಯಶಸ್ವಿಯಾಗಲಿಲ್ಲ. ಹಾಗೂ ಆಕಾ ತುರ್ಕಮಾನ್‌ನು ಮಾಮೂಲಿಯಂತೆ ತನ್ನ ಕ್ಷೇತ್ರದಲ್ಲಿ ದಿಟ್ಟತನದಿಂದ ನಿಂತು ಎದುರಿಸಿದನು.

ಬಿಜಾಪುರವನ್ನು ಗೆಲ್ಲುವ ಯೋಚನೆ :

ದಿನನಿತ್ಯ ಕುತುಬ್‌ಷಾಹ್ ಹಾಗೂ ನಿಜಾಮ್‌ಷಾಹ್‌ನ ಅಸಂಖ್ಯ ಸೈನಿಕರು ಯುದ್ಧದಲ್ಲಿ ಸಾವನ್ನಪ್ಪುತ್ತಿದ್ದರು. ಈ ಪರಿಸ್ಥಿತಿಯನ್ನು ಮನಗಂಡು ಈ ಈರ್ವರೂ ಆಡಳಿತಗಾರರು ದಿಗ್ಬಂಧನದ ದೀರ್ಘ ಅವಧಿಯಿಂದಾಗಿ ತೊಂದರೆಗೊಳಗಾದರು. ಅವರು ಪರಸ್ಪರ ಹೀಗೆ ನಿರ್ಧರಿಸಿದರು. ಏನೆಂದರೆ ಷಹಾದುರ್ಗದ ಬದಲಾಗಿ ಬಿಜಾಪುರದ ದಿಗ್ಬಂಧನ ಮಾಡಬೇಕು. ಯಾವಾಗ ರಾಜಧಾನಿಯುನ್ನು ವಶಪಡಿಸಿಕೊಳ್ಳಲಾಗುವುದೋ ಮತ್ತೆ ಉಳಿದ ಪ್ರಾಂತ್ಯಗಳ ಮೇಲೆ ಹಿಡಿತ ಸಾಧಿಸುವುದು ಸುಲಭವಾಗುವುದು.

ಬಿಜಾಪುರದ ಮುತ್ತಿಗೆ ಹಾಗೂ ವಿಫಲತೆ :

ನಿಜಾಮಷಾಹ್ ಹಾಗೂ ಕುತುಬ್‌ಷಾಹ್ ಬಿಜಾಪುರದ ಕಡೆಗೆ ಹೊರಟರು. ಬಿಜಾಪುರವು ಈ ಸಮಯದಲ್ಲಿ ಆದಿಲ್‌ಷಾಹಿ ಅಮೀರರ ಪರಸ್ಪರ ವೈರತ್ವದಿಂದಾಗಿ ಅನೈಕ್ಯತೆಯ ಕೇಂದ್ರವಾಗಿತ್ತು. ಈ ಕಾರಣದಿಂದ ಯಾರೂ ಕೂಡ ವೈರಿಯನ್ನು ನಿರ್ಬಂಧಿಸುವ ಪ್ರಯತ್ನ ಮಾಡಲಿಲ್ಲ. ವಿರೋಧಿಗಳು ಬಹಳೇ ಶಾಂತರೀತಿಯಲ್ಲಿ ಬಿಜಾಪುರದ ದಿಗ್ಬಂಧನ ಮಾಡಿದರು. ಈಗಾಗಲೇ ಮೇಲೆ ಹೇಳಿರುವಂತೆ ಈ ದಿಗ್ಬಂಧನವು ಸುದೀರ್ಘ ಅವಧಿಯವರೆಗೆ ಇತ್ತು. ಆದರೆ ವಿರೋಧಿಗಳಿಗೆ ಯಶಸ್ಸು ಸಿಗಲಿಲ್ಲ. ಕೊನೆಗೆ ನಿಜಾಮಷಾಹಿಗಳು ಹಾಗೂ ಕುತುಬ್‌ಷಾಹಿಗಳು ತಮ್ಮ ತಮ್ಮ ಪ್ರಾಂತ್ಯದ ಕಡೆಗೆ ಹೊರಟು ಹೋದರು.

ಯುವರಾಜ ಹುಸೈನನನ ವಿವಾಹದ ಕುರಿತು ಮಾತುಕತೆ :

ಹಿಜ್ರಿ ಶಕೆ ೯೨೨ ರಲ್ಲಿ ಸಲಾಬತ್‌ಖಾನ್‌ನು ಮುರ್ತುಜಾಷಾಹ್‌ನ ಆದೇಶದ ಅನುಸಾರವಾಗಿ ಖಾಸಿಂ ಬೇಗ್ ಹಾಗೂ ಮಿರ್ಜಾ ಮೊಹಮ್ಮದ್ ತಖಿ ನಜೀರಿ ಹಾಗೂ ಇತರ ಅಮೀರರನ್ನು ಬಿಜಾಪುರಕ್ಕೆ ಕಳುಹಿಸಿದನು. ಏಕೆಂದರೆ ಈ ಜನರು ಇಬ್ರಾಹಿಂ ಆದಿಲ್‌ಷಾಹ್‌ನನ್ನು ಭೇಟಿಯಾಗಿ ಅವನ ಸಹೋದರಿಯನ್ನು ಯುವರಾಜ ಹುಸ್ಸೈನ್‌ನ ವಿವಾಹಕ್ಕಾಗಿ ಪ್ರಯತ್ನ ಮಾಡಬೇಕು.

ಜಮ್‌ಷಿದ್‌ಖಾನ್‌ನಿಗೆ ಬಿಜಾಪುರಕ್ಕೆ ಹೋಗಲು ಆದೇಶ :

ಇದೇ ಸಮಯದಲ್ಲಿ ಜಮಷಿದ್‌ಖಾನ್‌ನೊಂದಿಗೆ ಹೀಗೆ ಹೇಳಲಾಯಿತು. ಏನೆಂದರೆ ಅವನು ತನ್ನ ಸೈನ್ಯದೊಂದಿಗೆ ಖಾಸಿಂ ಬೇಗ್‌ನ ಜೊತೆಗೆ ಬಿಜಾಪುರಕ್ಕೆ ಹೋಗಬೇಕು. ಜಮಷೀದ್‌ಖಾನ್‌ನು ಇದರ ಉತ್ತರವಾಗಿ ಹೀಗೆ ಹೇಳಿದನು. "ನಾನು ಸೈಯ್ಯದ್ ಮುರ್ತುಜಾರ ಆದೇಶ ಪಾಲಿಸುವವನಾಗಿದ್ದೇನೆ. ಕಾರಣ ನಾನು ಅವರ ಜೊತೆಗೆ ಚರ್ಚಿಸಿಯೇ ಒಂದು ನಿರ್ಧಾರಕ್ಕೆ ಬರುವೆನು". ಜಮಾಷಿದ್‌ಖಾನ್‌ನು ಸೈಯ್ಯದ್ ಮುರ್ತುಜಾರೊಂದಿಗೆ ವಿಚಾರ ವಿನಿಮಯ ಮಾಡಿದನು. ಸೈಯ್ಯದ್ ಹೀಗೆಂದರು. "ನಿಜಾಮ ಮುರ್ತುಜಾರು ನನ್ನೊಂದಿಗೆ ಹೀಗೆ ಹೇಳಿದ್ದಾರೆ. ಯಾವುದೇ ಆದೇಶವು ಅವರ ಕೈಬರಹದ್ದಿರದಿದ್ದರೆ ಅದು ಪಾಲಿಸುವ ಅಗತ್ಯವಿಲ್ಲ. ಆದೇಶವು ಬಾದಷಾಹನು ಬರೆದದ್ದಲ್ಲ. ಅದಕ್ಕಾಗಿ ನಾನು ಇದನ್ನು ಪಾಲಿಸಲಾರೆ. ಹಾಗೂ ನಿನಗೆ ಬಿಜಾಪುರಕ್ಕೆ ಹೋಗಲು ಅನುಮತಿ ನೀಡುವುದಿಲ್ಲ."

ಸೈಯ್ಯದ್ ಮುರ್ತುಜಾ ಹಾಗೂ ಸಲಾಬತ್‌ಖಾನ್‌ರ ನಡುವೆ ಭಿನ್ನಾಭಿಪ್ರಾಯ :

ಜಮ್‌ಷೀದ್‌ಖಾನ್‌ನು ಸಲಾಬತ್‌ಖಾನ್‌ನಿಗೆ ತಿಳಿಸಿದನು. ಅವನು ಅವನ ಆದೇಶವನ್ನು ಪಾಲಿಸಲಾರದವನಾಗಿದ್ದಾನೆ. ಸಲಾಬತ್‌ಖಾನ್ ಹಾಗೂ ಸೈಯ್ಯದ್ ಮುರ್ತುಜಾನಲ್ಲಿ ಭಿನ್ನಾಭಿಪ್ರಾಯಗಳು ಹೆಚ್ಚುತ್ತಾ ಹೋದವು. ಹಾಗೂ ಕೊನೆಗೆ ಪರಿಸ್ಥಿತಿ ಎಲ್ಲಿಯವರೆಗೆ ಬಂತೆಂದರೆ ಅದೇ ವರ್ಷ ಸೈಯ್ಯದ್ ಮುರ್ತುಜಾರವರು ಬೃಹತ್‌ರೂಪದ ಮೆರವಣಿಗೆಯೊಂದಿಗೆ ಸಲಾಬತ್‌ಖಾನ್‌ನ ಗರ್ವವನ್ನು ಅಡಗಿಸಲು ಅಹ್ಮದಾಬಾದಿನತ್ತ ಹೊರಟರು. ಸಲಾಬತ್‌ಖಾನ್‌ನಿಗೆ ಯಾವಾಗ ಈ ವಿಷಯದ ಸುದ್ದಿ ತಲುಪಿತೋ ಆಗ ಅವನು ಸ್ವರಕ್ಷಣೆಗಾಗಿ ಸಿದ್ಧನಾದನು. ಹಾಗೂ ಮುರ್ತುಜಾ ನಿಜಾಮಷಾಹ್‌ನಿಗೆ 'ಬಾಗ್ ಏ ಬಹಿಷ್ತ್' ದಿಂದ ಹೊರತೆಗೆದು 'ಬಾಗ್ ಏ ಫರ್ಹಬಕ್ಷ್' ರಲ್ಲಿ ಕರೆತಂದನು.

ಹೊಸ ಸ್ನೇಹ :

ಬಾದಷಾಹ್‌ನಿಗೆ "ಬಗ್ದಾದ್" ಹೆಸರಿನ ಇಮಾರತ್ತಿನಲ್ಲಿ ಇಳಿಸಲಾಯಿತು. ಹಾಗೂ ಓರ್ವ ಸುಂದರ ವ್ಯಕ್ತಿಯು ಫತಹೀಷಾಹ್‌ನನ್ನು ಯಾರು ಪಗಡೆಯಾಟ ಹಾಗೂ

ಚದುರಂಗದಲ್ಲಿ ಬಹಳೇ ನಿಷ್ಣಾತನಾಗಿದ್ದನು ಬಾದಷಾಹ್‌ನ ಜೊತೆಗಾರನನ್ನಾಗಿ ನೇಮಿಸಲಾಯಿತು. ಬಾದಷಾಹ್‌ನು ಅವನಿಂದ ಬಹಳೇ ಪ್ರಭಾವಿತನಾದನು. ಅವನೊಂದಿಗೆ ಅನ್ಯೋನ್ಯ ಸ್ನೇಹಿತನಾದನು.

ಸಲಾಬತ್‌ಖಾನ್ ಹಾಗೂ ಸೈಯ್ಯದ್ ಮುರ್ತುಜಾರ ನಡುವೆ ಯುದ್ಧ :

ಇದೇ ಸಮಯದಲ್ಲಿ ಸೈಯ್ಯದ್ ಮುರ್ತುಜಾಷಾಹ್‌ನ ಒಂದು ಬಲಾಢ್ಯ ಸೈನ್ಯವನ್ನು ತೆಗೆದುಕೊಂಡು ಅಹ್ಮದ್‌ನಗರದ ಬಳಿ ತಲುಪಿದನು. ಹಾಗೂ ಚಿತ್ತೋಡದ ಬಳಿ ವಾಸ್ತವ್ಯ ಹೂಡಿದನು. ಸಲಾಬತ್‌ಖಾನ್‌ನು ಮುರ್ತುಜಾ ನಿಜಾಮುಷಾಹ್‌ನ ಮನವೊಲಿಸಿ ವೈರಿಯೊಂದಿಗೆ ಹೋರಾಡಲು ಅನುಮತಿ ಪಡೆದುಕೊಂಡನು. ಸಲಾಬತ್‌ಖಾನ್‌ನು ಯುವರಾಜ ಮೀರಾಹುಸೈನ್‌ನನ್ನು ಜೊತೆಗೆ ತೆಗೆದುಕೊಂಡು ಯುದ್ಧ ಮಾಡಿದನು. ಸೈಯ್ಯದ್ ಮುರ್ತುಜಾನಿಗೆ ಸೋಲಿನ ಮುಖ ನೋಡಬೇಕಾಯಿತು. ಅವನು ತನ್ನ ಆನೆಗಳನ್ನು ಕುದುರೆ ಹಾಗೂ ಎಲ್ಲ ವಸ್ತುಗಳನ್ನು ರಣಭೂಮಿಯಲ್ಲಿಯೇ ಬಿಟ್ಟು ಬರಾರ್‌ದೆಡೆಗೆ ಓಡಿ ಹೋದನು. ಆದರೆ ಅವನಿಗೆ ಬರಾರ್‌ದಲ್ಲಿಯೂ ತಂಗುವುದು ದುಸ್ತರವಾಯಿತು. ಏಕೆಂದರೆ ಸಲಾಬತ್‌ಖಾನ್‌ನು ಅವನನ್ನು ಹಿಂಬಾಲಿಸಲು ಬಹಳೇ ಉತ್ಸಾಹಿಯಾಗಿದ್ದನು. ಕೊನೆಗೆ ಸೈಯ್ಯದ್ ಮುರ್ತುಜಾ ಬುರ್ಹಾನ್‌ದ ದಾರಿ ಹಿಡಿದು ದಖ್ಖನ್ನಿನಿಂದ ಹೊರಗೆ ಹೋದನು. ಹಾಗೂ ಮೊಘಲ್ ಬಾದಷಾಹ್ ಅಕ್ಬರನ ಸೇವೆಯಲ್ಲಿ ಹೊರಟು ಹೋದನು.

ಮುರ್ತುಜಾ ನಿಜಾಮ್‌ಷಾಹ್‌ನ ಪದಚ್ಯುತಿ ಹಾಗೂ ಸಲಾಬತ್‌ಖಾನ್‌ನ ಕೊಲೆಯ ಪ್ರಯತ್ನ :

ಅದೇ ವರ್ಷ ಕೆಲವು ಕ್ಷೋಭೆ ಹರಡುವವರು ಯುವರಾಜ ಬುರ್ಹಾನ್‌ನಿಗೆ ಫಕೀರನ ವೇಷದಲ್ಲಿ ಅಹ್ಮದ್‌ನಗರಕ್ಕೆ ತರುವ ಯೋಚನೆ ಮಾಡಿದರು. ಏಕೆಂದರೆ ಮುರ್ತುಜಾ ನಿಜಾಮನನ್ನು ಪದಚ್ಯುತಿಗೊಳಿಸಿ ಇಳಿಸಿ ಯುವರಾಜನನ್ನು ಪಟ್ಟಾಭಿಷೇಕ ಮಾಡುವುದು ಈ ಕ್ಷೋಭೆ ಹರಡುವವರು ಎಲ್ಲಕ್ಕಿಂತ ಮೊದಲು ಸಲಾಬತ್‌ಖಾನ್‌ನನ್ನು ಕೊಲೆಗೈಯ್ಯಬಯಸಿದ್ದರು. ಏಕೆಂದರೆ ಉಳಿದ ಕೆಲಸಗಳು ಸುಲಭವಾಗಬೇಕು. ಯಾವ ದಿನ ವೈರಿಗಳು ಸಲಾಬತ್‌ಖಾನ್‌ನನ್ನು ಕೊಲೆಗೈಯ್ಯುವ ಸಂಚು ಹೂಡಿದರೋ ಅದೇ ದಿನ ಸಲಾಬತ್‌ಖಾನ್‌ನಿಗೆ ಅದರ ಸುದ್ಧಿ ತಲುಪಿತು. ಹಾಗೂ ಬುರ್ಹಾನ್‌ಷಾಹ್‌ನು ಫಕೀರನ ವೇಷದಲ್ಲಿ ಬಂದಿದ್ದನು. ಅದೇ ವೇಷದಲ್ಲಿ ಮರಳಿದನು. ಹಾಗೂ ಕೋಕನ್ (ಕೊಂಕಣದ) ಕಡೆಗೆ ಪಲಾಯನ ಮಾಡಿದನು. ಕೊಂಕಣದಲ್ಲಿ ತಂಗುವುದು, ಇವನಿಗೆ ಅಪಾಯಕಾರಿಯಾಗಿತ್ತು. ಅದಕ್ಕಾಗಿ ಅವನೂ ಸಹ ಸೈಯ್ಯದ್ ಮುರ್ತುಜಾನ ಹಾಗೆ ಅಕ್ಬರ್ ಬಾದಷಾಹ್‌ನ ಸೇವೆಯಲ್ಲಿ ತಲುಪಿದನು.

ಮೀರಾಹುಸೈನ್‌ನ ವಿವಾಹ :

ಸೈಯ್ಯದ್ ಖಾಸಿಂ ಹಾಗೂ ಮಿರ್ಜಾ ಮೊಹಮ್ಮದ್ ತಖಿ ಯಾವ ಕಾರ್ಯಕ್ಕಾಗಿ ಬಿಜಾಪುರಕ್ಕೆ ಬಂದಿದ್ದರೋ ಅದು ಪೂರ್ತಿಗೊಂಡಿತು. ಹಾಗೂ ಆದಿಲ್‌ಷಾಹ್‌ನ ಸಹೋದರಿಯ ವಿವಾಹವನ್ನು ಯುವರಾಜ ಮೀರಾ ಹುಸೈನ್‌ನೊಂದಿಗೆ ಜರುಗಿಸಿ ಅಹ್ಮದ್‌ನಗರಕ್ಕೆ ಕರೆತಂದರು.

ಅಕ್ಬರ್ ಬಾದಷಾಹ್‌ನ ದಖ್ಖನ್ ಗೆಲ್ಲುವ ಯೋಚನೆ :

ಅದೇ ವರ್ಷ ಅಕ್ಬರ್ ಬಾದಷಾಹ್‌ನು ದಖ್ಖನ್ನನ್ನು ಗೆಲ್ಲಲು ನಿಶ್ಚಯಿಸಿದನು. ಅವನು ಮಾಲ್ವಾದ ಆಡಳಿತಗಾರನಾದ ಖಾನ್ ಏ ಅಜಂನನ್ನು ಯಾರು ಅವನ (ತಾಯಿಯು ಸಾಕಿದುದರಿಂದ) ಸಹೋದರನಾಗಿದ್ದನು ಸೇನಾಪತಿಯನ್ನಾಗಿ ನೇಮಿಸಿದನು. ಹಾಗೂ ಸೈಯ್ಯದ್ ಮುರ್ತುಜಾ, ಬುರ್ಹಾನ್‌ಷಾಹ್ ಹಾಗೂ ಇತರರೊಂದಿಗೆ ದಖ್ಖನ್ನಿನ ಕಡೆ ಕಳುಹಿಸಿದನು. ಈ ಸೈನ್ಯವು ನಿಜಾಮಷಾಹಿ ಪ್ರಾಂತ್ಯದ ಕಡೆಗೆ ಪ್ರಯಾಣ ಬೆಳೆಸಿತು.

ಅಹ್ಮದ್‌ನಗರಕ್ಕೆ ಚಾಂದ್‌ಬೀಬಿಯ ಆಗಮನ :

ಇದೇ ಸಮಯದಲ್ಲಿ ಅಲಿ ಆದಿಲ್‌ಷಾಹ್‌ನ ಪತ್ನಿಯಾದ ಚಾಂದ್‌ಬೀಬಿ ಸುಲ್ತಾನ್ ತನ್ನ ಸಹೋದರನಾದ ಮುರ್ತುಜಾ ನಿಜಾಮ್‌ಷಾಹ್‌ನ ಜೊತೆ ಭೇಟಿಯಾಗಲು ಅಹ್ಮದ್‌ನಗರಕ್ಕೆ ಬಂದಳು ಸಲಾಬತ್‌ಖಾನ್‌ನು ಆದಿಲ್‌ಷಾಹ್‌ನ ಸಾಮ್ರಾಜ್ಯದ ರಾಜಪ್ರತಿನಿಧಿಯಾದ ದಿಲಾವರ್‌ಖಾನ್‌ನಿಗೆ ಈ ಸಂದೇಶ ನೀಡಿದನು. ಏನೆಂದರೆ ಹುಸೈನ್ ನಿಜಾಮಷಾಹ್‌ನು ಸೋಲಾಪುರದ ಕೋಟೆಯನ್ನು ಚಾಂದ್‌ಬೀಬಿಯ ವರದಕ್ಷಿಣೆಯ ರೂಪದಲ್ಲಿ ಅಲಿ ಆದಿಲ್‌ಷಾಹ್‌ನಿಗೆ ನೀಡಿದ್ದನು. ಈಗ ಅಲಿ ಆದಿಲ್‌ಷಾಹನು ಮೃತ್ಯು ಹೊಂದಿರುವನು. ಹಾಗೂ ಚಾಂದ್‌ಬೀಬಿಯು ವಿಧವೆಯಾಗಿರುವಳು. ಅದಕ್ಕಾಗಿ ನೀವು ಮೇಲೆ ಹೇಳಿದ ಕೋಟೆಯನ್ನು ನಮಗೆ ಮರಳಿಸುವುದು ಉಚಿತವಾಗಿದೆ.

ಸೋಲಾಪುರದ ಕೋಟೆಯನ್ನು ಮರಳಿಸಲು ಬೇಡಿಕೆ :

ದಿಲಾವರ್‌ಖಾನ್‌ನು ಸಲಾಬತ್‌ಖಾನ್‌ನ ಮಾತನ್ನು ಒಪ್ಪಲಿಲ್ಲ. ಆ ಕಾರಣಕ್ಕೆ ಸಲಾಬತ್‌ಖಾನ್‌ನು ಬಹಳೇ ನೊಂದುಕೊಂಡನು. ಅವನು ಆದಿಲ್‌ಷಾಹ್‌ನ ಸಹೋದರಿ ಹಾಗೂ ಯುವರಾಜನಾದ ಮೀರಾ ಹುಸೈನ್‌ನನ್ನು ದೌಲತಾಬಾದಕ್ಕೆ ಕಳುಹಿಸಿದನು. ಹಾಗೂ ಈ ಆದೇಶವನ್ನು ಬಿತ್ತರಿಸಿದನು. ಸೋಲಾಪುರದ ಕೋಟೆಯನ್ನು ಮರಳಿ ನೀಡಿದ ನಂತರವೇ ವಿವಾಹ ಸಮಾರಂಭದ ಸಂಭ್ರಮಾಚರಣೆಯನ್ನು ಆಚರಿಸಬೇಕು.

ಒಂದು ವೇಳೆ ಕೋಟೆಯು ಮರಳಿ ದೊರೆಯದಿದ್ದರೆ ಈ ಸಮಾರಂಭವನ್ನು ತಡೆಹಿಡಿಯಬೇಕು.

ಮಿರ್ಜಾ ನಜೀರಿ ಸೇನಾಧಿಪತಿಯ ಹುದ್ದೆಯಲ್ಲಿ :

ಅಕ್ಬರಿ ಸೈನ್ಯದ ಆಗಮನದ ಸುದ್ದಿ ಯಾವಾಗ ಅಹ್ಮದ್‌ನಗರಕ್ಕೆ ತಲುಪಿತೋ ಆಗ ಸಲಾಬತ್‌ಖಾನ್‌ನು ಶೌರ್ಯ ಹಾಗೂ ಧೈರ್ಯದೊಂದಿಗೆ ಮಿರ್ಜಾ ಮೊಹಮ್ಮದ್ ತಖಿ ನಜರೀಯಾನನ್ನು ಸೇನಾಧಿಪತಿಯನ್ನಾಗಿ ನೇಮಿಸಿದನು. ಮಿರ್ಜಾ ನಜಿರೀ ಬುರ್ಹಾನ್‌ಪುರಕ್ಕೆ ಹೋದನು. ಹಾಗೂ ರಾಜಾ ಅಲೀಖಾನ್‌ನೊಂದಿಗೆ ಸ್ನೇಹ ಸಂಪಾದಿಸಿ ಅವನಿಗೆ ನಿಜಾಮಷಾಹಿ ಹಿತೈಷಿಗಳಲ್ಲಿ ಸೇರ್ಪಡೆಗೊಳಿಸಿದನು.

ಯುದ್ಧದ ಸಿದ್ಧತೆ :

ಅಜೀಜ್ ಕೋಕಾನಿಗೆ ಯಾವಾಗ ಈ ಸುದ್ದಿ ತಲುಪಿತು ಆಗ ಅವನು ಫತಃ ಉಲ್ಲಾಹ್ ಶಿರಾಜಿಯನ್ನು ರಾಜಾ ಅಲಿಖಾನ್‌ನ ಬಳಿಗೆ ಕಳುಹಿಸಿದನು. ಹಾಗೂ ಅವನನ್ನು ನಿಜಾಮಷಾಹಿಗಳ ಸಹಾಯ ಮಾಡುವದರಿಂದ ತಡೆದನು. ಹಾಗೂ ತಮಗೆ ಸಹಾಯ ಮಾಡಬೇಕೆಂದು ಇಚ್ಛೆಯನ್ನು ವ್ಯಕ್ತಪಡಿಸಿದನು. ಈ ಪ್ರಯತ್ನವು ಯಾವುದೇ ಫಲ ನೀಡಲಿಲ್ಲ. ಹಾಗೂ ಫತಃ ಉಲ್ಲಾಹ್ ಶಿರಾಜಿಯು, ನಿರಾಶೆ ಹಾಗೂ ವಿಫಲತೆಯೊಂದಿಗೆ ಮರಳಿದನು. ಅವನ ಹಾಗೂ ಷಾಹಬುದ್ಧೀನ್ ಅಹ್ಮದ್‌ರ ನಡುವೆ ಬಹಳೇ ವಿರಸ ಹಾಗೂ ವೈರತ್ವವಿತ್ತು. ಮಿರ್ಜಾ ಮೊಹಮ್ಮದ್ ತಖಿ ಹಾಗೂ ರಾಜಾ ಅಲೀಖಾನ್, ಖಾನ್ ಏ ಅಜಂನನ್ನು ಎದುರಿಸಲು ಬಂದರು. ಅಕ್ಬರಿ ಪ್ರಾಂತ್ಯದೊಳಗೆ ಪ್ರವೇಶಿಸಿ ಮಾಲ್ವಾ ಹಾಗೂ ದಖ್ಖನ್ನಿನ ಒಂದು ಸೀಮೆಯ ಸ್ಥಳವಾದ "ಭಂಡಿಯಾ"ದಲ್ಲಿ ತಂಗಿದರು.

ಅಜೀಜ್ ಕೋಕಾನ ಮರಳುವಿಕೆ :

ಕೆಲ ದಿನಗಳವರೆಗೆ ಎರಡೂ ಸೈನ್ಯಗಳು ಪರಸ್ಪರ ಎದುರುಬದುರಾಗಿ ಧೃಢವಾಗಿ ನಿಂತವು. ಆದರೆ ಯಾರೂ ಸಹ ಯುದ್ಧದ ಆರಂಭ ಮಾಡಲಿಲ್ಲ. ಕೊನೆಗೆ ಅಜೀಜ್ ಕೋಕಾನು ಯುದ್ಧದ ಯೋಚನೆಯನ್ನು ಬಿಟ್ಟನು. ಹಾಗೂ ರಾತ್ರೋರಾತ್ರಿ ಇಲ್ಲಿಂದ ಪ್ರಯಾಣಿಸಿ ಅಪರಿಚಿತ ಹಾದಿಯ ಮುಖಾಂತರ ಎಲ್‌ಚ್‌ಪುರ ಹಾಗೂ ಬಾಲಾಪುರದಲ್ಲಿ ಪ್ರವೇಶಿಸಿದನು. ಹಾಗೂ ಪಟ್ಟಣಗಳನ್ನು ಹಾಳುಗೆಡುವದರಲ್ಲಿ ನಿರತನಾದನು.

ಸಮಸ್ಯೆಯ ಬಗೆಹರಿಯುವಿಕೆ :

ಮಿರ್ಜಾ ಮೊಹಮ್ಮದ್ ತಖಿ ಹಾಗೂ ರಾಜಾ ಅಲಿಖಾನ್‌ನಿಗೆ ಯಾವಾಗ ಅಜೀಜ್ ಕೋಕಾನ ಮರಳುವಿಕೆಯ ಸುದ್ದಿ ತಲುಪಿತೋ ಆಗ ಅವರು ಅವನನ್ನು ಹಿಂಬಾಲಿಸಿದರು. ಈ ಪರಿಸ್ಥಿತಿಯ ಅನುಸಾರವಾಗಿ ಖಾನ್ ಏ ಆಜಂನು ಈ

ಪ್ರಾಂತ್ಯದಲ್ಲಿ ತಂಗಲಾರದಾದನು. ಹಾಗೂ ನಂದರ್‌ಬಾರ್‌ದ ಕಡೆಯಿಂದ ಮರಳಿ ಮಾಲ್ವಾಕ್ಕೆ ಹೋದನು. ರಾಜಾ ಅಲಿಖಾನ್‌ನು ಬುರ್ಹಾನ್‌ಪುರ ಹಾಗೂ ಮಿರ್ಜಾ ಮೊಹಮ್ಮದ್ ತಖಿಯು ಅಹ್ಮದ್‌ನಗರದತ್ತ ಹೋದರು. ಅಕ್ಬರ್ ಬಾದಷಾಹ್‌ನ ಎದುರು ಬೇರೆ ಬೇರೆ ಯುದ್ಧಗಳ ಸಂಕಲ್ಪಗಳಿದ್ದವು. ದಖ್ಖನ್ನಿನ ಆಡಳಿತಗಾರರೂ ಸಹ ಅಧಿಕಾರ ಹಾಗೂ ಶಕ್ತಿಯಲ್ಲಿ ಕಡಿಮೆಯೇನಿರಲಿಲ್ಲ. ಅದಕ್ಕಾಗಿ ಅಕ್ಬರನು ದಖ್ಖನ್ನಿನ ವಿಷಯದಲ್ಲಿ ತಲೆ ಹಾಕಲಿಲ್ಲ.

ಫತ್‌ಹಿಷಾಹ್‌ನ ಅಧಿಕಾರ :

ಈ ದಿನಗಳಲ್ಲಿ ಫತ್‌ಹಿಷಾಹ್‌ನು ಮುರ್ತುಜಾ ನಿಜಾಮನಲ್ಲಿ ವೈಯಕ್ತಿಕ ಪ್ರಭಾವ ಬೀರಿದನು. ಹಾಗೂ ಅವನು ಬಾದಷಾಹ್‌ನಿಂದ ಕೆಲವು ಪ್ರಾಂತ್ಯಗಳನ್ನು ಜಾಗೀರು ರೂಪದಲ್ಲಿ ಪಡೆದುಕೊಂಡನು. ಫತ್‌ಹಿಷಾಹ್‌ನು ಯಾವಾಗ ಯಾವಾಗ ಆಭರಣ ಅಥವಾ ನಗದು ಹಣವನ್ನು ಇಚ್ಛಿಸುತ್ತಿದ್ದನೋ ಬಾದಷಾಹ್‌ನ ಆದೇಶದಿಂದ ತಕ್ಷಣ ಷಾಹೀಭಂಡಾರದಿಂದ ಇದನ್ನು ತಲುಪಿಸಲಾಗುತ್ತಿತ್ತು. ಅದಕ್ಕಾಗಿ ದಿನದಿಂದ ದಿನಕ್ಕೆ ಫತ್‌ಹೀಷಾಹ್‌ನ ಅಧಿಕಾರವು ವೃದ್ಧಿಗೊಳ್ಳುತ್ತಲೇ ಹೋಯಿತು.

ಮಾಲೆಗಳ ಕಥೆ :

ಒಂದು ಸಲ ಫತ್‌ಹಿಷಾಹ್‌ನು ಎರಡು ರತ್ನಖಚಿತ ಜಪಮಾಲೆ (ತಸ್ಬಿ)ಯನ್ನು ಯಾವುದರಲ್ಲಿ ಮುತ್ತು ಹಾಗೂ ಮಾಣಿಕ್ಯಗಳನ್ನು ಪೋಣಿಸಲಾಗಿತ್ತು ಹಾಗೂ ಅದನ್ನು ರಾಮರಾಜನಿಂದ ಪಡೆಯಲಾಗಿತ್ತು. ಮುರ್ತುಜಾ ನಿಜಾಮನಿಂದ ಬೇಡಿದನು. ಬಾದಷಾಹ್‌ನ ಬಳಿ ಲೌಕಿಕ ಸಂಪತ್ತಿಗೆ ಯಾವುದೇ ಮಹತ್ವ ಇರಲಿಲ್ಲ. ಅದಕ್ಕಾಗಿ ಅವನು ತಕ್ಷಣ ಸಲಾಬತ್‌ಖಾನ್‌ನಿಗೆ ಆಜ್ಞೆ ನೀಡಿದನು. ಏನೆಂದರೆ ಈ ಮಾಲೆಗಳನ್ನು ಫತ್‌ಹಿಷಾಹ್‌ನಿಗೆ ಒಪ್ಪಿಸಬೇಕು. ಸಲಾಬತ್‌ಖಾನ್‌ನು ಬಾದಷಾಹ್‌ನಿಂದ ಕ್ಷಮೆ ಯಾಚಿಸಿದನು. ಹಾಗೂ ಮಾಲೆಗಳನ್ನು ಕೊಡುವದರಿಂದ ನಿರಾಕರಿಸಿದನು.

ನಕಲಿ ಮಾಲೆಗಳು :

ಬಾದಷಾಹ್‌ನು ಎರಡನೆಯ ಸಲ ಆಜ್ಞೆಯನ್ನು ಮಾಡಿದನು. ಈ ಸಲ ಸಲಾಬತ್‌ಖಾನ್‌ನು ಅಮೀರರು ಹಾಗೂ ಆಡಳಿತಗಾರರ ಸಲಹೆಯಂತೆ ಹೀಗೆ ಹೇಳಿದನು. ಮೇಲೆ ಹೇಳಲ್ಪಟ್ಟ ಮಾಲೆಗಳನ್ನು ಬಂಢಾರದಲ್ಲಿಯೇ ಇರಲು ಬಿಡಬೇಕು. ಆದರೆ ಅವುಗಳನ್ನು ಹೋಲುವ ಎರಡು ಮಾಲೆಗಳನ್ನು ಫತ್‌ಹಿಷಾಹ್‌ನಿಗೆ ಕೊಡಬೇಕು. ಕೆಲದಿನಗಳ ನಂತರ ಫತ್‌ಹೀಷಾಹನಿಗೆ ಸತ್ಯವು ತಿಳಿಯಿತು. ಹಾಗೂ ಅವನು ಸಂಪೂರ್ಣ ಘಟನೆಯನ್ನು ಬಾದಷಾಹನಿಗೆ ವಿವರಿಸಿದನು. ಇದನ್ನು ಕೇಳಿ ಬದಷಾಹನು ಕೋಪೋದ್ರಿಕ್ತನಾದನು ಹಾಗೂ ಅವನು ಸಲಾಬತ್‌ಖಾನ್‌ನಿಗೆ ಆದೇಶ ನೀಡಿದನು.

ಏನೆಂದರೆ ಷಾಹೀ ಭಂಡಾರದ ಸಮಸ್ತ ಆಭರಣಗಳನ್ನು ಪೆಟ್ಟಿಗೆಗಳಿಂದ ಹೊರತೆಗೆದು ಆಯಾ ಮಹಲ್‌ನಲ್ಲಿ ಪ್ರದರ್ಶಿಸಬೇಕು. ಏಕೆಂದರೆ ಅವುಗಳನ್ನು ವೀಕ್ಷಿಸಬಹುದು.

ಆಭರಣಗಳ ವೀಕ್ಷಣೆ :

ಸಲಾಬತ್‌ಖಾನ್‌ನು ಇದನ್ನು ಅರಿತನು. ಈ ಆಜ್ಞೆಯ ಹಿಂದೆ ಉದ್ದೇಶವೇನಿದೆ. ಅವನು ಉಪರೋಕ್ತ ಮಾಲೆಗಳನ್ನು ಹಾಗೂ ಅನೇಕ ಬಹುಮೂಲ್ಯದ ಅಪೂರ್ವವಾದ ಆಭರಣಗಳನ್ನು ಮುಚ್ಚಿಟ್ಟನು. ಹಾಗೂ ಇನ್ನಿತರ ಎಲ್ಲ ಆಭರಣಗಳನ್ನು ಬಾದಷಾಹ್‌ನ ಇಚ್ಛೆಯಂತೆ ಒಂದು ಮಹಲಿನಲ್ಲಿ ಪ್ರದರ್ಶನಕ್ಕಿಟ್ಟನು. ಬಾದಷಾಹ್‌ನು ವೀಕ್ಷಿಸಲೆಂದು ಬಂದನು. ಅವನು ಎಲ್ಲ ಜನರನ್ನು ಹೊರಗೆ ಕಳುಹಿಸಿದನು. ಹಾಗೂ ಫತ್‌ಹಿಷಾಹ್‌ನನ್ನು ಜೊತೆಗೆ ಕರೆದುಕೊಂಡು ಮಹಲಿನಲ್ಲಿ ಪ್ರವೇಶಿಸಿದನು.

ಅಗ್ನಿಗಾಹುತಿಯಾದ ಆಭರಣಗಳು :

ಮುರ್ತುಜಾ ನಿಜಾಮಷಾಹ್‌ನು ಯಾವಾಗ ವಿವಾದಾತ್ಮಕ ಮಾಲೆಗಳು ಹಾಗೂ ಬಹಳಷ್ಟು ಇತರೆ ಆಭರಣಗಳು ಇಲ್ಲವೆಂದು ನೋಡಿದನು ಆಗ ಅವನು ಸಮಸ್ತ ಈಗಿರುವ ಆಭರಣಗಳನ್ನು ಉನ್ನತ ದರ್ಜೆಯ ಬಟ್ಟೆಗಳಲ್ಲಿ ಸುತ್ತಿ ನೆಲದ ಮೇಲಿರಿಸಿ, ಅವುಗಳಿಗೆ ಅಗ್ನಿಗೆ ಅರ್ಪಿಸಿದನು. ಹಾಗೂ ಸ್ವತಃ ಮಹಲಿನಿಂದ ಹೊರಬಂದನು. ಯಾವ ಅಮೀರರು ಈ ಆಭರಣಗಳ ರಕ್ಷಣೆಗೆ ನೇಮಿಸಲಟ್ಟಿದ್ದರು ಬಾದಷಾಹ್‌ನ ಮರಳುವಿಕೆಯ ನಂತರ ಅವರು ಮಹಲಿನ ಒಳಗೆ ಹೋದರು. ಅವರಿಗೆ ಬೆಂಕಿಯನ್ನು ಹೊರತುಪಡಿಸಿ ಏನೂ ಕಾಣಲಿಲ್ಲ. ಅವರು ಕೂಡಲೇ ಬೆಂಕಿಯನ್ನು ಆರಿಸಿದರು. ಹಾಗೂ ಆಭರಣಗಳನ್ನು ಹಾಗೂ ಅಲಂಕೃತ ವಸ್ತುಗಳನ್ನು ಬೆಂಕಿಯಿಂದ ಹೊರತೆಗೆದರು. ಹೆಚ್ಚು ಹಾನಿಯುಂಟಾಗಿರಲಿಲ್ಲ. ಮುತ್ತುಗಳ ಆಭರಣಗಳನ್ನು ಹೊರತುಪಡಿಸಿ ಉಳಿದ ಎಲ್ಲ ಆಭರಣಗಳು ಅಗ್ನಿಯಿಂದ ರಕ್ಷಿಸಲ್ಪಟ್ಟವು.

ಬಾದಷಾಹನ ಬಿರುದು 'ಹುಚ್ಚ' :

ಬಾದಷಾಹನ ಈ ವಿಚಿತ್ರವಾದ ಕಾರ್ಯದಿಂದಾಗಿ ಜನರಿಗೆ ಬಹಳೇ ಆಶ್ಚರ್ಯವಾಯಿತು. ಹಾಗೂ ಅವರು ಈ ಘಟನೆಗೆ ಬಾದಷಾಹನ ಹುಚ್ಚಿನೊಂದಿಗೆ ಜೋಡಿಸಿದರು. ಈ ಘಟನೆಯ ನಂತರ ಜನಸಾಮಾನ್ಯರಲ್ಲಿ ಬಾದಷಾಹನು 'ಹುಚ್ಚ'ನೆಂಬ ಬಿರುದಿನಿಂದ ಪ್ರಸಿದ್ಧನಾದನು.

ಯುವರಾಜ ಮೀರಾ ಹುಸೈನ್‌ನ ಕೊಲೆಯ ಇಚ್ಛೆ :

ಕೆಲವು ಕ್ಷೋಭೆ ಹರಡುವವರು ಹಾಗೂ ಅಪನಂಬಿಗಸ್ತ ಜನರು ಬಾದಷಾಹನಿಗೆ ಒಂದು ಸಲ ಹೀಗೆಂದರು. ಆಡಳಿತಗಾರರು ಇದನ್ನು ನಿಶ್ಚಯಿಸಿರುವರು. ಏನೆಂದರೆ "ತಮ್ಮನ್ನು ದೊರೆಯ ಸ್ಥಾನದಿಂದ ಪದಚ್ಯುತಗೊಳಿಸಿ ಯುವರಾಜ ಮೀರಾಹುಸೈನ್‌ನನ್ನು

ಸಿಂಹಾಸನಾಧೀಶನನ್ನಾಗಿ ಮಾಡುವುದು". ಈ ಮಾತನ್ನು ಕೇಳಿ ಮುರ್ತುಜಾ ನಿಜಾಮ್‌ನು ಕೋಪದಿಂದ ಕೆಂಡವಾದನು. ಹಾಗೂ ಅವನು ತನ್ನ ಪುತ್ರನನ್ನು ಕೊಲೆಗೈಯ್ಯಲು ಒಪ್ಪಿದನು. ಬಾದಷಾಹ್‌ನು ಯುವರಾಜ ಮೀರಾ ಹುಸೈನ್‌ನನ್ನು ಬಂಧಿಸಲು ಬಹಳ ಪ್ರಯತ್ನಿಸಿದನು. ಆದರೆ ಸಲಾಬತ್‌ಖಾನ್‌ನು ವ್ಯವಸ್ಥಿತವಾಗಿ ಎಂಥಹ ಏರ್ಪಾಟು ಮಾಡಿದ್ದನೆಂದರೆ ಯುವರಾಜ ಮೀರಾಹುಸೈನ್‌ನು ತನ್ನ ತಂದೆಯ ಕೈಗೆ ಸಿಗಲಿಲ್ಲ.

ನಿಜಾಮ್‌ಷಾಹ್‌ನ ಸರಹದ್ದಿನಲ್ಲಿ ಇಬ್ರಾಹಿಂ ಆದಿಲ್‌ಷಾಹ್ :

ಅದೇ ಕಾಲದಲ್ಲಿ ಇಬ್ರಾಹಿಂ ಆದಿಲ್‌ಷಾಹ್‌ನು ದಿಲಾವರ್‌ಖಾನ್‌ನ ಸಲಹೆಯಂತೆ ಒಂದು ಬೃಹತ್ ಸೈನ್ಯವನ್ನು ತೆಗೆದುಕೊಂಡು ನಿಜಾಮಷಾಹೀ ಸರಹದ್ದಿನಲ್ಲಿ ಬಂದನು. ಹಾಗೂ ಈ ಸಂದೇಶ ನೀಡಿದನು.

"ನಾವು ಸೋಲಾಪುರವನ್ನು ಮರಳಿಸುವುದಿಲ್ಲ."

ಅದರ ನಂತರ ಇಬ್ರಾಹಿಂ ಆದಿಲ್‌ಷಾಹ್‌ನು ಸಲಾಬತ್‌ಖಾನ್‌ನ ಕ್ಷೋಭೆಯಿಂದಾಗಿ ಕೋಪೋದ್ರಿಕ್ತ ಅವಸ್ಥೆಯಲ್ಲಿ ಓಸಾ ಕೋಟೆಯನ್ನು ದಿಗ್ಬಂಧನ ಮಾಡಿದನು.

ಸಲಾಬತ್‌ಖಾನ್‌ನೊಂದಿಗೆ ಮುನಿಸು :

ಮುರ್ತುಜಾ ನಿಜಾಮನು ಈ ಎಲ್ಲ ಘಟನೆಗಳಿಗೆ ಮೂಲ ಕಾರಣ ಸಲಾಬತ್‌ಖಾನ್‌ನ ಸಂಕುಚಿತ ದೃಷ್ಟಿ ಹಾಗೂ ಮೂರ್ಖತನವೇ ಎಂದು ಬಗೆದು ಬಾದಷಾಹನು ಸಲಾಬತ್‌ಖಾನ್‌ನಿಂದ ಬಹಳೇ ಮುನಿಸು ಹೊಂದಿದನು. ಹಾಗೂ ಅವನನ್ನು ಕರೆಯಿಸಿ ಕೇಳಿದನು. "ನೀನು ನಂಬಿಗಸ್ಥನೇ, ಅಪನಂಬಿಗಸ್ಥನೇ?" ಅವನು ಹೀಗೆ ಉತ್ತರಿಸಿದನು "ನಾನು ಖಾವಂದ್‌ರ ಓರ್ವ ಹಿತೈಷಿ ಗುಲಾಮನಾಗಿದ್ದೇನೆ". ನಿಜಾಮಷಾಹ್‌ನು ಹೀಗೆಂದನು "ನಿನ್ನ ಸಣ್ಣ ತಪ್ಪು ನಿರ್ಧಾರಗಳು ಹಾಗೂ ಆಜ್ಞಾಧಾರಕನಾಗದೇ ಇರುವುದರಿಂದ ನಾನು ಬಹಳ ಬೇಸರ ಹೊಂದಿರುವೆನು. ಆದರೂ ಸಹ ನಾನು ನಿನ್ನನ್ನು ಬಂಧಿಸಲಾರೆ".

ಬಂಧನಕ್ಕಾಗಿ ಒಂದು ಕೋಟೆಯನ್ನು ನಿರ್ಧರಿಸಿದ್ದು :

ಇದರ ಕುರಿತು ಸಲಾಬತ್‌ಖಾನ್‌ನು ಬಾದಷಾಹ್‌ನಿಂದ ವಿನಂತಿಸಿದನು. ಖಾವಂದ್‌ರು ಇಷ್ಟು ಮಾಡಿದರೆ ಸಾಕು. ಒಂದು ಕೋಟೆಯನ್ನು ತಾವು ನಿರ್ಧರಿಸಿ. ನಾನು ಸ್ವತಃ ನನಗೆ ನಾನೇ ನನ್ನ ಕೈಕಾಲುಗಳಲ್ಲಿ ಸರಪಳಿಯನ್ನು ಬಿಗಿದುಕೊಂಡು ಆ ಕೋಟೆಯಲ್ಲಿಯೇ ಬಂಧಿತನಾಗಿರುವೆನು. ಅದರ ಉತ್ತರವಾಗಿ ಮುರ್ತುಜಾ ಖಾನ್‌ನು ಸಲಾಬತ್‌ಖಾನ್‌ನ ಬಂಧನಕ್ಕಾಗಿ 'ದಂಧರಾಜಪುರ' ಕೋಟೆಯನ್ನು ಆಯ್ಕೆ ಮಾಡಿದನು.

ಸಲಾಬತ್‌ಖಾನ್‌ನ ಬಂಧನ :

ಸಲಾಬತ್‌ಖಾನ್ ತನ್ನ ಮನೆಗೆ ತಲುಪಿದನು. ಹಾಗೂ ಕೂಡಲೇ ಬಾದಷಾಹ್‌ನ ಇಚ್ಛೆಯನ್ನು ಪೂರ್ತಿಕರಿಸುವಲ್ಲಿ ತೊಡಗಿಕೊಂಡನು ಹಾಗೂ ಅವನು ತನ್ನ ಕಾಲುಗಳಲ್ಲಿ ಬೇಡಿಗಳನ್ನು ಹಾಕಿಕೊಂಡು ಪಲ್ಲಕ್ಕಿಯಲ್ಲಿ ಸವಾರಿಯಾದನು. ಹಾಗೂ ತನ್ನ ಬಂಧು ಬಳಗಕ್ಕೆ ಹೀಗೆಂದನು. "ನನಗೆ ದಂಧರಾಜ ಕೋಟೆಯಲ್ಲಿ ಬಂಧಿಸಿಡಿರಿ". ಅವನ ಬಂಧುಗಳು, ಹಿತೈಷಿಗಳು ಅವರಲ್ಲಿ ಇತಿಹಾಸಕಾರನಾದ ಫರಿಷ್ತಾ ಕೂಡ ಓರ್ವನಾಗಿದ್ದನು. ಅವನನ್ನು ಬಹಳ ರೀತಿಯಲ್ಲಿ ತಡೆದನು. ಆದರೆ ಅವನು ಯಾರ ಮಾತನ್ನೂ ಕೇಳಲಿಲ್ಲ.

ಖಾಸಿಂ ಬೇಗ್ ಹಾಗೂ ಮುಹಮ್ಮದ್ ತಖಿಯ ನೇಮಕ :

ಸಲಾಬತ್‌ಖಾನ್‌ನ ಬಂಧನದ ನಂತರ ಮುರ್ತುಜಾ ನಿಜಾಮಷಾಹ್‌ನು ರಾಜಪ್ರತಿನಿಧಿತ್ವ ಹಾಗೂ ಮಂತ್ರಿಯ ಹುದ್ದೆಯಲ್ಲಿ ಅನುಕ್ರಮವಾಗಿ ಖಾಸಿಂ ಬೇಗ್ ಹಕಿಂ ಹಾಗೂ ಮಿರ್ಜಾ ಮೊಹಮ್ಮದ್ ತಖಿಯರನ್ನು ನೇಮಿಸಿದನು. ಹಾಗೂ ಈ ಅಮೀರರನ್ನು ಆದೇಶಿಸಿದನು. ಹೇಗಾದರೂ ಮಾಡಿ ಆದಿಲ್‌ಷಾಹ್‌ನೊಂದಿಗೆ ಸಂಧಾನ ಮಾಡಿಕೊಳ್ಳಬೇಕು. ಆ ಅಮೀರರು ಷಾಹೀ ಆಜ್ಞೆಯನ್ನು ಪಾಲಿಸಿದರು. ಹಾಗೂ ಆದಿಲ್‌ಷಾಹ್‌ನು ನಿಜಾಮಷಾಹ್‌ನ ಸರಹದ್ದಿನಿಂದ ಹೊರಟುಹೋದನು.

ಸಂತಸದ ಸಂಭ್ರಮಾಚರಣೆ :

ಆದಿಲ್‌ಷಾಹ್‌ನ ಸಹೋದರಿಯನ್ನು ಇಲ್ಲಿಯವರೆಗೆ ಅವಳ ಪತಿಯಾದ ಯುವರಾಜ ಮೀರಾ ಹುಸೈನ್‌ನಿಗೆ ಒಪ್ಪಿಸಿರಲಿಲ್ಲ. ಈ ಘಟನೆಯ ನಂತರ ಒಂದು ಬೃಹತ್ ಪ್ರಮಾಣದ ಸಂಭ್ರಮಾಚರಣೆಯನ್ನು ಹಮ್ಮಿಕೊಳ್ಳಲಾಯಿತು ಹಾಗೂ ವಧುವನ್ನು ವರನಿಗೆ ಹಸ್ತಾಂತರಿಸಲಾಯಿತು.

ಮಗನ ಕೊಲೆಗಾಗಿ ಮತ್ತೊಮ್ಮೆ ನಿಶ್ಚಯ :

ಮುರ್ತುಜಾ ನಿಜಾಮಷಾಹ್‌ನು ಮತ್ತೊಮ್ಮೆ ಯುವರಾಜನಾದ ಮೀರಾ ಹುಸೈನ್‌ನನ್ನು ಕೊಲೆ ಮಾಡಲು ನಿಶ್ಚಯಿಸಿದನು. ಹಾಗೂ ಖಾಸಿಂ ಬೇಗ್, ಮುಹಮ್ಮದ್ ತಖಿಯರನ್ನು ಹೇಳಿದನು "ನಾನು ನನ್ನ ಪುತ್ರನನ್ನು ನೋಡಲು ಆತುರ ಹೊಂದಿದ್ದೇನೆ. ಅದಕ್ಕಾಗಿ ಬೇಗಬೇಗನೆ ನನ್ನೆದುರು ಯುವರಾಜನನ್ನು ಹಾಜರುಪಡಿಸಿರಿ". ಈ ಈರ್ವರೂ ಅಮೀರರು ಬಾದಷಾಹ್‌ನಿಂದ ಈ ಮಾತುಗಳನ್ನು ಕೇಳಿ ಆನಂದತುಂದಿಲರಾದರು. ಅವರು ಯುವರಾಜನನ್ನು ಕೋಟೆಯಿಂದ ಹೊರತೆಗೆದರು. ಹಾಗೂ ಪಲ್ಲಕ್ಕಿಯಲ್ಲಿ ಕೂಡ್ರಿಸಿ ಬಾದಷಾಹನತ್ತ ಕಳುಹಿಸಿದರು.

ಅಗ್ನಿಸ್ಪರ್ಶ :

ಮುರ್ತುಜಾ ನಿಜಾಮಷಾಹ್‌ನು ಮೊದಮೊದಲು ತನ್ನ ಪುತ್ರನನ್ನು ಬಹಳೇ ಪ್ರೀತಿ ಹಾಗೂ ದಯೆಯೊಂದಿಗೆ ಬರಮಾಡಿಕೊಂಡನು. ಹಾಗೂ ಅವನನ್ನು 'ಬಗ್ದಾದ್' ಎಂಬ ಹೆಸರಿನ ಇಮಾರತ್ತಿನ ಹತ್ತಿರ ಒಂದು ಕೋಣೆಯಲ್ಲಿ ತಂಗಿಸಿದನು. ಆದರೆ ಮರುದಿನ ಅವನು ಯುವರಾಜನನ್ನು ಹಾಸಿಗೆ ಹಾಗೂ ಹೊದಿಕೆಯಲ್ಲಿ ಸುತ್ತಿ ಅವನ ಕೋಣೆಯನ್ನು ಅಗ್ನಿಗರ್ಪಿಸಿದನು ಹಾಗೂ ಬಾಗಿಲನ್ನು ಹೊರಗಿನಿಂದ ಮುಚ್ಚಿಸಿದನು.

ಯುವರಾಜನ ಪಾರಾಗುವಿಕೆ :

ಯುವರಾಜನು ಬಹಳೇ ಕಷ್ಟಪಟ್ಟು ಹಾಸಿಗೆ ಹಾಗೂ ಹೊದಿಕೆಯಿಂದ ಹೊರಬಂದನು. ಅವನು ಕೋಣೆಯಲ್ಲಿ ನಾಲ್ಕು ಕಡೆಗೆ ಹೊಗೆಯೋ ಹೊಗೆಯನ್ನು ನೋಡಿ ಆತಂಕಿತನಾಗಿ ಚೀರತೊಡಗಿದನು. ಫತಹಿಷಾಹ್‌ನು ಈ ಧ್ವನಿಯನ್ನು ಕೇಳಿದನು. ಅವನಿಗೆ ಯುವರಾಜನ ಮೇಲೆ ಅನುಕಂಪ ಮೂಡಿತು. ಹಾಗೂ ಕೋಣೆಯ ಬಾಗಿಲನ್ನು ತೆರೆದು ಯುವರಾಜನನ್ನು ಹೊರತೆಗೆದನು. ಹಾಗೂ ಖಾಸಿಂಬೇಗ್ ಹಕೀಂ, ಮೊಹಮ್ಮದ್‌ತಖಿಯ ವಶಕ್ಕೊಪ್ಪಿಸಿದನು.

ಫತಹಿಖಾನ್‌ನೊಂದಿಗೆ ವಿಚಾರಣೆ :

ಆ ಅಮೀರರು ಯುವರಾಜನನ್ನು ಮುಚ್ಚುಮರೆಮಾಡಿ ದೌಲತಾಬಾದಕ್ಕೆ ಕಳುಹಿಸಿದರು. ಎರಡು ಮೂರು ದಿನಗಳ ನಂತರ ಮುರ್ತುಜಾ ನಿಜಾಮಷಾಹನು ಕೋಣೆಗೆ ಬಂದನು. ಅವನು ಇದನ್ನು ಬಯಸಿದ್ದನು. ಕೋಣೆಯಲ್ಲಿ ಯುವರಾಜನ ಎಲುವುಗಳು ಕಾಣಸಿಗುವುವು. ಆದರೆ ಅವನಿಗೆ ಈ ತೆರನಾದ ಯಾವ ವಸ್ತುವೂ ಅಲ್ಲಿ ಕಾಣಲಿಲ್ಲ. ಆಗ ಅವನು ಫತಹಿಖಾನ್‌ನನ್ನು ಕರೆಯಿಸಿದನು. ಹಾಗೂ ಅವನೊಂದಿಗೆ ವಿಚಾರಣೆ ನಡೆಸಿದನು. ಫತಹಿಷಾಹ್‌ನು ಉತ್ತರಿಸಿದನು. "ಹೀಗನ್ನಿಸುತ್ತದೆ ಏನೆಂದರೆ ಯುವರಾಜನ ಅಸ್ಥಿಗಳೂ ಸುಟ್ಟು ಬೂದಿಯಾದವು" ಬಾದಷಾಹನಿಗೆ ನಂಬಿಕೆ ಬರಲಿಲ್ಲ. ಅವನು ಸ್ವಲ್ಪ ತೀಕ್ಷ್ಣವಾಗಿ ಫತಹಿಖಾನ್‌ನೊಂದಿಗೆ ಘಟನೆಯ ಸತ್ಯಾಸತ್ಯತೆಯನ್ನು ವಿವರಿಸಲು ಹೇಳಿದನು. ಆಗ ಫತಹಿಖಾನ್‌ನು ಭಯಭೀತನಾಗಿ ನಾನು ಯುವರಾಜನನ್ನು ಖಾಸಿಂಬೇಗ್ ಹಾಗೂ ಮುಹಮ್ಮದ್ ತಖಿಯವರಿಗೆ ಒಪ್ಪಿಸಿರುವೆನು ಎಂದು ಹೇಳಿದನು.

ಖಾಸಿಂ ಬೇಗ್ ಹಾಗೂ ಮುಹಮ್ಮದ್ ತಖಿಯ ಬಂಧನ :

ಬಾದಷಾಹ್‌ನು ಈರ್ವರೂ ಅಮೀರರನ್ನು ಕರೆಯಿಸಿದನು. ಹಾಗೂ ಕೋಟೆಯ ಬಾಗಿಲಿನ ಬಳಿ ಅವರನ್ನು ವಿಚಾರಣೆಗೊಳಪಡಿಸಿದನು. ಏನೆಂದರೆ ಯುವರಾಜ

ಮೀರಾ ಹುಸೈನ್ ಎಲ್ಲಿರುವನು ? ಆ ಅಮೀರರು ಪ್ರಾಂತ್ಯದ ಹಿತದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು ಈ ವಿಚಾರವಾಗಿ ತಮಗೆ ಏನೂ ತಿಳಿದಿಲ್ಲವೆಂದು ಹೇಳಿದರು. ನಿಜಾಮಷಾಹ್‌ನಿಗೆ ಬಹಳೇ ಕೋಪ ಬಂದಿತು. ಹಾಗೂ ಅವನು ಈ ಈರ್ವ ಅಮೀರರನ್ನು ಬಂಧಿಸಿದನು. ಹಾಗೂ ಮಿರ್ಜಾ ಮೊಹಮ್ಮದ್ ಸಾದಿಕ್‌ನನ್ನು ಆಡಳಿತದ ಎಲ್ಲ ಕಾರ್ಯಭಾರವನ್ನು ನಿಭಾಯಿಸಲು ನೀಡಿದನು.

ಸುಲ್ತಾನ ಹುಸೈನ ಶಿರಾಜಿಯ ನೇಮಕ :

ಯುವರಾಜನ ಕೊಲೆಯ ವಿಚಾರವಾಗಿ ಮಿರ್ಜಾ ಮೊಹಮ್ಮದ್ ಸಾದಿಕ್‌ನು ಕೂಡ ಜೊತೆ ನೀಡಲಿಲ್ಲ. ಆ ಕಾರಣದಿಂದಾಗಿ 'ನವರೋಜ್'ದ (ಫಾರ್ಸಿವರ್ಷದ ಸಮಾರಂಭದ ದಿನ) ನಂತರ ಮುರ್ತುಜಾ ನಿಜಾಮಷಾಹ್‌ನು ಅವನನ್ನು ಸಹ ಬಂಧಿಸಿದನು. ಹಾಗೂ ಸುಲ್ತಾನ್ ಹುಸೈನ್ ಶಿರಾಜಿಯನ್ನು (ಯಾರು ಅಹ್ಮದ್‌ನಗರದಲ್ಲಿ ಜನ್ಮ ತಾಳಿದ್ದನು) ಮುಖ್ಯ ಆಡಳಿತಗಾರನ ಹುದ್ದೆಯಲ್ಲಿ ನೇಮಿಸಿದನು. ಹಾಗೂ "ಮಿರ್ಜಾಖಾನ್' ಎಂಬ ಬಿರುದಿನಿಂದ ಪುರಸ್ಕರಿಸಿದನು.

ಸುಲ್ತಾನ ಹುಸೈನನ ಸಂದೇಶ ದಿಲಾವರ್‌ಖಾನ್‌ನ ಹೆಸರಿನಲ್ಲಿ :

ಸುಲ್ತಾನ್ ಹುಸೈನ್‌ನು ಬಾದಷಾಹ್‌ನ ಮನದಿಂಗಿತವನ್ನು ಚೆನ್ನಾಗಿಯೇ ಅರಿತಿದ್ದನು. ಅವನು ನಗದು ಹಾಗೂ ರತ್ನಾಭರಣಗಳನ್ನು ನೀಡಿ ಫತಹಿಷಾಹ್ ಹಾಗೂ ಇತರ ನಂಬಿಗಸ್ಥರನ್ನು ತನ್ನ ಆಪ್ತರನ್ನಾಗಿಸಿಕೊಂಡನು. ಹಾಗೂ ಓರ್ವ ವ್ಯಕ್ತಿಯನ್ನು ಬಿಜಾಪುರಕ್ಕೆ ಕಳುಹಿಸಿದನು. ಏಕೆಂದರೆ ಅವನು ದಿಲಾವರ್‌ಖಾನ್‌ನನ್ನು ಭೇಟಿಯಾಗಬೇಕು. ಹಾಗೂ ಈ ಸಂದೇಶವನ್ನು ನೀಡಬೇಕು. ಏನೆಂದರೆ "ಮುರ್ತುಜಾ ನಿಜಾಮಷಾಹ್‌ನು ಸಂಪೂರ್ಣವಾಗಿ ಹುಚ್ಚನಾಗಿದ್ದಾನೆ" ಹಾಗೂ ತನ್ನ ಪುತ್ರನ ಜೀವವನ್ನು ತೆಗೆದುಕೊಳ್ಳಲು ಉತ್ಸುಕನಾಗಿದ್ದಾನೆ. ಒಂದು ವೇಳೆ ನೀವು ನನಗೆ ಸಹಾಯ ಮಾಡಲು ಸರಹದ್ದಿನ ಬಳಿ ಬಂದರೆ ಆಗ ನಾನು ಮುರ್ತುಜಾ ನಿಜಾಮನನ್ನು ಕೊನೆಗಾಣಿಸಿ ಮೀರಾ ಹುಸೈನ್‌ನನ್ನು ಪೀಠ ಸಿಂಹಾಸನಾಧೀಶನನ್ನಾಗಿಸುವೆನು".

ಮಿರ್ಜಾಖಾನನ ನೇಮಕ :

ದಿಲಾವರ್‌ಖಾನ್‌ನು ಸುಲ್ತಾನ್ ಹುಸೈನ್ ಶಿರಾಜಿಯ ಮನವಿಯನ್ನು ಸ್ವೀಕರಿಸಿದನು. ಆದಿಲ್‌ಷಾಹ್‌ನನ್ನು ಜೊತೆಗೆ ಕರೆದುಕೊಂಡು ಸರಹದ್ದಿನತ್ತ ಸಾಗಿದನು. ಮಿರ್ಜಾಖಾನ್‌ನು ಫತಹಿಶಾಹ್‌ನ ಮುಖಾಂತರವಾಗಿ ಹೇಳಿಸಿದನು. ಆದಿಲ್‌ಬಾದಷಾಹ್‌ನು ಒಂದು ಬಲಾಢ್ಯ ಸೈನ್ಯವನ್ನು ತೆಗೆದುಕೊಂಡು ಅಹ್ಮದ್‌ನಗರವನ್ನು ಗೆಲ್ಲಲು ಬರುತ್ತಿದ್ದಾನೆ. ಬಾದಷಾಹ್‌ನು ಆದಿಲ್‌ಷಾಹ್‌ನನ್ನು ಪ್ರತಿಬಂಧಿಸಲು ಮಿರ್ಜಾಖಾನ್‌ನನ್ನು ನೇಮಿಸಿದನು.

ದಾನೂರಾದಲ್ಲಿ ಮಿರ್ಜಾಖಾನ್‌ನ ವಾಸ್ತವ್ಯ :

ಮಿರ್ಜಾಖಾನ್‌ನು ಪ್ರಾಂತ್ಯದ ಎಲ್ಲ ಅಮೀರರನ್ನು ಗೃಹಬಂಧನದಲ್ಲಿಟ್ಟನು. ಏಕೆಂದರೆ ಅವನ ವಿಚಾರದಲ್ಲಿ ಆದಿಲ್‌ಷಾಹ್‌ನ ಬರುವಿಕೆಯು ಅವರದೇ ಸಂಚಿನ ಭಾಗವಾಗಿತ್ತು. ಈ ಅಮೀರರ ಸ್ಥಾನದಲ್ಲಿ ಮಿರ್ಜಾಖಾನ್‌ನು ತನ್ನ ಹಿತೈಷಿಗಳನ್ನು ನೇಮಿಸಿದನು. ಹಾಗೂ ಒಂದು ಬೃಹತ್ ಸೈನ್ಯವನ್ನು ತೆಗೆದುಕೊಂಡು ವೈರಿಯನ್ನು ಎದುರಿಸಲು ಹೊರಟನು. ಅಹ್ಮದ್‌ನಗರದಿಂದ ಹೊರಟು ಅವನು 'ದಾನುರಾ'ದಲ್ಲಿ ತಂಗಿದನು.

ನಿಜಾಮಶಾಹಿಗಳ ಸೈನ್ಯದಲ್ಲಿ ಇತಿಹಾಸಕಾರ ಫರಿಶ್ತಾ :

ಮಿರ್ಜಾಖಾನ್‌ನ ತಂಗುವಿಕೆಯ ಕಾರಣದಿಂದ ಮುರ್ತುಜಾ ನಿಜಾಮಷಾಹನು ವಿಫ್ವಲಗೊಂಡನು. ಹಾಗೂ ಅವನು ಇತಿಹಾಸಕಾರನಾದ ಫರಿಷ್ತಾನನ್ನು ನೈಜ ಘಟನೆಯನ್ನರಿಯಲು ಕಳುಹಿಸಿದನು. ಫರಿಶ್ತಾ ಹೀಗೆ ಹೇಳಿದನು. ಮಿರ್ಜಾಖಾನ್‌ನು ಇದನ್ನು ಚೆನ್ನಾಗಿಯೇ ಅರಿತಿದ್ದನು. ಏನೆಂದರೆ ನಾನು ಬಾದಷಾಹ್‌ನ ಓರ್ವ ನಂಬಿಗಸ್ಥ ಸೇವಕನಾಗಿದ್ದೇನೆ. ಹಾಗೂ ಎಲ್ಲ ಪರಿಸ್ಥಿತಿಗಳನ್ನವಲೋಕಿಸಿ ಬಾದಷಾಹನಿಗೆ ಎಲ್ಲವನ್ನು ಹೇಗಿದೆಯೋ ಹಾಗೆಯೇ ವಿವರಿಸುವೆನು. ಅದಕ್ಕಾಗಿ ನನ್ನ ಬರುವಿಕೆಯಿಂದ ಮಿರ್ಜಾಖಾನ್‌ನು ಬಹಳ ಚಂಚಲಚಿತ್ತನಾದನು.

ಬಾದಷಾಹ್‌ನ ಹೊಸ ಆದೇಶ :

ಅವನು ಫತಹಿಷಾಹ್‌ನನ್ನು ತನ್ನೆಡೆಗೆ ಸೆಳೆಯಲು ಪ್ರಯತ್ನಿಸಿದನು. ಹಾಗೂ ಅವನೊಂದಿಗೆ ಹೀಗೆಂದನು. ಒಂದು ವೇಳೆ ನೀನು ಬುರ್ಹಾನ್ ನಿಜಾಮಷಾಹನಿಂದ ಈ ಆದೇಶವನ್ನು ಪಡೆದುಕೊಂಡರೆ ನಾನು ಸ್ವತಃ ಸೈನ್ಯದಲ್ಲಿ ಹೋಗಿ ಅಮೀರರಿಗೆ ವೈರಿಯನ್ನು ಎದುರಿಸಲು ಉತ್ತೇಜಿತಗೊಳಿಸುವೆನು. ಹಾಗಾದಾಗ ನಾನು ಅದರ ಬದಲಾಗಿ ಹನ್ನೆರಡು ಸಾವಿರ ಹವನ್ ನಿಡುವೆನು. ಫತಹಿಷಾಹ್‌ನು ಲೋಭಿಯಾಗಿ ಬಾದಷಾಹ್‌ನಿಂದ ಈ ಸಾರಾಂಶವುಳ್ಳ ಆದೇಶವನ್ನು ಬರೆಯಿಸಿದನು. ಮಿರ್ಜಾಖಾನ್‌ನು ಬಹಳ ಸಂತೋಷಗೊಂಡು ಹಾಗೂ ಅವನು ವಾಗ್ದಾನ ಮಾಡಿದಂತೆ ಫತಹಿಷಾಹ್‌ನಿಗೆ ಉಪರೋಕ್ತ ನಗದನ್ನು ಕಳುಹಿಸಿಕೊಟ್ಟನು.

ಇತಿಹಾಸಕಾರ ಫರಿಶ್ತಾನ ಪರಾರಿ ಹಾಗೂ ಅವನನ್ನು ಹಿಂಬಾಲಿಸುವಿಕೆ :

ಇತಿಹಾಸಕಾರನಾದ ಫರಿಷ್ತಾನಾದ ನಾನು ಇನ್ನೂ ಸೈನ್ಯದಲ್ಲಿಯೇ ಇದ್ದೇನು. ಆಗಲೇ ಮಿರ್ಜಾಖಾನ್‌ನೂ ಅಲ್ಲಿಗೆ ಬಂದನು. ಅವನು ನನ್ನನ್ನು ಬಂಧಿಸಲು ನಿಶ್ಚಯಿಸಿದನು. ಏಕೆಂದರೆ ಸೈನ್ಯದ ಯಾವುದೇ ಸುದ್ಧಿಯು ಬಾದಷಾಹ್‌ನವರೆಗೆ

ತಲುಪದಿರಲಿ. ನನ್ನ ಓರ್ವ ಸ್ನೇಹಿತನಿಗೆ ಯಾವಾಗ ಮಿರ್ಜಾಖಾನ್‌ನ ಇಚ್ಛೆಯ ಅರಿವಾಯಿತೊ ಆಗ ಅವನು ನನಗೆ ತಿಳಿಸಿದನು. ನಾನು ಅದೇ ಸಂಜೆ ಸೈನ್ಯದಿಂದ ಓಡಿ ಹೋದೆನು. ಮಿರ್ಜಾಖಾನ್‌ನು ತನ್ನ ಸೈನಿಕರ ಒಂದು ಗುಂಪನ್ನು ನನ್ನನ್ನು ಹಿಂಬಾಲಿಸಲು ಕಳುಹಿಸಿಕೊಟ್ಟನು. ನಾನು ನನ್ನ ದೀವಟಿಗೆಯನ್ನು ಆರಿಸಿದೆನು. ರಾತ್ರಿಯ ಕತ್ತಲಲ್ಲಿ ನನಗೆ ವೈರಿಗಳು ಯಾವುದೇ ಹಾನಿಯನ್ನು ಮಾಡಲಿಲ್ಲ. ಯಾವಾಗ ಮುಂಜಾವು ಮೂಡಿತೋ ಆಗ ನಾನು ನನ್ನ ಗುರಿಯನ್ನು ತಲುಪಿದೆನು. ಹಾಗೂ ಷಾಹೀ ದರ್ಬಾರದಲ್ಲಿ ಹಾಜರಿ ನೀಡಿದೆನು.

ಇತಿಹಾಸಕಾರನಾದ ಫರಿಶ್ತಾನು ಷಾಹಿದರ್ಬಾರದಲ್ಲಿ :

ನಾನು ಷಾಹಿ ದರ್ಬಾರದಲ್ಲಿ ನಿಂತು ಬಾದಷಾಹ್‌ನಿಗೆ ಮಿರ್ಜಾಖಾನ್ ಹಾಗೂ ಸೈನ್ಯದ ಎಲ್ಲರ ವಿವರವನ್ನು ನೀಡಿದೆನು. ಫತಹಿಷಾಹ್‌ನು ಈ ವೇಳೆಯಲ್ಲಿ ಉಪಸ್ಥಿತನಿದ್ದನು. ಅವನು ನನ್ನನ್ನು ಸುಳ್ಳುಗಾರನೆಂದು ಹೇಳಿದನು. ಹಾಗೂ ನನ್ನ ವಿವರಗಳನ್ನು ನಿರಾಕರಿಸಿದನು. ಹಾಗೂ ಹೀಗೆಂದನು. "ನೀನು ಏನೆಲ್ಲ ಹೇಳಿದೆಯೋ ಅದೆಲ್ಲವೂ ಸುಳ್ಳಾಗಿದೆ. ಮಿರ್ಜಾಖಾನ್‌ನು ಬಾದಷಾಹ್‌ನೊಂದಿಗೆ ಎಂದಿಗೂ ದ್ರೋಹ ಬಗೆಯುವುದಿಲ್ಲ" ನಾನು ಅದಕ್ಕುತ್ತರವಾಗಿ ಹೀಗೆ ಹೇಳಿದೆನು. "ಮಿರ್ಜಾಖಾನ್‌ನೊಂದಿಗೆ ನನಗೆ ಯಾವುದೇ ವೈರತ್ವವಿಲ್ಲ. ನಾನೇಕೆ ಅವನ ಮೇಲೆ ಸುಳ್ಳು ಆರೋಪ ಮಾಡಲಿ ? ನನಗೆ ಏನು ವಿಷಯ ತಿಳಿಯಿತೋ ನಾನು ಅದನ್ನು ಹೇಗಿದೆಯೋ ಹಾಗೆಯೇ ತಿಳಿಸಿರುವೆನು. ನನಗೆ ವಿಶ್ವಾಸವಿದೆ ಬಹುಬೇಗನೆ ನನ್ನ ಸತ್ಯ ಎಲ್ಲರ ಮೇಲೆ ಪ್ರಕಟವಾಗುವುದು.

ಇತಿಹಾಸಕಾರನಾದ ಫರಿಶ್ತಾನ ಹೇಳಿಕೆಯ ಸತ್ಯವಾಗುವಿಕೆ :

ನಾವು ಇನ್ನೂ ಈ ವಿಷಯದ ಕುರಿತು ಚರ್ಚಿಸುತ್ತಿದ್ದೇವು. ಆಗ ಸರಕಾರಿ ಗುಪ್ತಚರರು ಸುದ್ದಿ ತಲುಪಿಸಿದರು. ಏನೆಂದರೆ ಮಿರ್ಜಾಖಾನ್‌ನು ಎಲ್ಲ ಅಮೀರರೊಂದಿಗೆ ದೌಲತಾಬಾದ್‌ದೆಡೆಗೆ ಹೋಗಿರುವನು. ಹಾಗೂ ಅವನ ಇಚ್ಛೆ ಇದಾಗಿದೆ. ಯುವರಾಜ ಮೀರಾಂ ಹುಸೈನ್‌ನನ್ನು ಬಿಡುಗಡೆಗೊಳಿಸಿ ಸಿಂಹಾಸನಾರೂಢನನ್ನಾಗಿಸಬೇಕು ಹಾಗೂ ಅದರ ನಂತರ ಅಹ್ಮದ್‌ನಗರದೆಡೆಗೆ ಬರುವುದು. ಈ ಸುದ್ದಿ ಕೇಳಿ ಮುರ್ತುಜಾನಿಜಮಷಾಹನು ಬಹಳ ವಿಹ್ವಲಿತನಾದನು. ಹಾಗೂ ಅವನು ಇತಿಹಾಸಕಾರನಾದ ಫರಿಷ್ತಾನೊಂದಿಗೆ ಸಮಾಲೋಚನೆ ನಡೆಸಿದನು.

ಇತಿಹಾಸಕಾರನಾದ ಫರಿಶ್ತಾನ ಅಭಿಪ್ರಾಯ :

ನಾನು ಬಾದಷಾಹ್‌ನೊಂದಿಗೆ ಹೀಗೆ ಹೇಳಿದೆನು. ಈ ಸಮಯದಲ್ಲಿ ಯಾವ ಸಮಸ್ಯೆಯು ನಮ್ಮೆದುರಿಗಿದೆ. ಅದನ್ನು ಎರಡು ರೀತಿಯಿಂದ ಬಗೆಹರಿಸಬಹುದಾಗಿದೆ.

ಮೊದಲನೆಯದಾಗಿ – ನಿಮ್ಮ ಏಕಾಂತವಾಸವನ್ನು ದೂರ ಮಾಡಬೇಕು. ಹಾಗೂ ಸವಾರರು ವಿಶೇಷ ಸೈನ್ಯ ಹಾಗೂ ಎರಡು ನೂರು ಸಾವಿರ ಹವಾಲ್ದಾರರು, ಯಾರು ಈಗ ಇರುವವರು ಅವರನ್ನು ಜೊತೆಗೆ ತೆಗೆದುಕೊಂಡು ಪಟ್ಟಣದ ಕಡೆಗೆ ಹೋಗಲು ನಿಶ್ಚಯಿಸಬೇಕು. ಮಿರ್ಜಾಬೇಗರನ್ನು ಹಾದಿಯಲ್ಲಿಯೇ ಬಂಧಿಸಬೇಕು. ಅದರ ನಂತರ ಎಲ್ಲ ಅಮೀರರು, ಸೇನಾಧಿಪತಿಗಳು ತಮ್ಮಿಂದ ತಾವೇ ಖಾವಂದರ ಸುತ್ತಲು ನೆರೆಯುವರು.

ಬಾದಷಾಹ್‌ನ ಆರೋಗ್ಯ ಸ್ಥಿತಿ ಹದಗೆಡುವಿಕೆ :

ಇದನ್ನು ಕೇಳಿ ಮುರ್ತುಜಾ ನಿಜಾಮ್‌ಷಾಹ್‌ನು ಹೀಗೆಂದನು ಕೆಲದಿನಗಳ ಮಾತು ಇರುವುದು ಆಯಾ ನಪುಂಸಕನು ನನಗಾಗಿ ಭೋಜನವನ್ನು ತಂದಿದ್ದನು. ನಾನು ಅದನ್ನು ಸೇವಿಸಿದೆನು. ತಕ್ಷಣವೇ ನನ್ನ ಹೊಟ್ಟೆಯಲ್ಲಿ ನೋವು ಕಾಣಿಸಿಕೊಂಡಿತು. ಹಾಗೂ ವಾಂತಿ ಬರುವ ಲಕ್ಷಣಗಳು ಕಂಡವು. ರಕ್ತದೊಡಗೂಡಿದ ಮಲವಿಸರ್ಜನೆಯು ಆಯಿತು. ಇನ್ನೂವರೆಗೂ ಸಹ ನನ್ನ ಹೊಟ್ಟೆಯಲ್ಲಿ ನೋವು ಇದೆ. ನಾನು ಸವಾರಿ ಮಾಡುವ ಸ್ಥಿತಿಯಲ್ಲಿಲ್ಲ. ನನ್ನ ವಿಚಾರ ಹೀಗಿದೆ. ಮಿರ್ಜಾಖಾನ್‌ನು ಉಪರೋಕ್ತ ವ್ಯಕ್ತಿಯೊಂದಿಗೆ ಸಂಚು ಮಾಡಿ ನನಗೆ ವಿಷವನ್ನು ತಿನ್ನಿಸಿರುವನು.

ಎರಡನೆಯ ವಿಧಿ :

ಬಾದಷಾಹನ ಈ ವಿವರಣೆಯ ನಂತರ ನಾನು ಹೀಗೆ ಹೇಳಿದೆನು. "ಈ ಸಮಸ್ಯೆಯನ್ನು ಬಗೆಹರಿಸುವ ಎರಡನೆಯ ವಿಧಾನವು ಹೀಗಾಗಿದೆ. ಸಲಾಬತ್‌ಖಾನ್‌ನನ್ನು ಬಿಡುಗಡೆ ಮಾಡುವುದು. ಅವನ ಜೊತೆಗಿನ ಎಲ್ಲ ಕೈದಿಗಳನ್ನು ದಂದ್‌ರಾಜಪುರದಿಂದ ಷಾಹೀ ದರ್ಬಾರದಲ್ಲಿ ಕರೆಯಿಸಬೇಕು. ಹಾಗೂ ಅದರ ನಂತರ ತಾವು ಬೇಟೆಯ ನೆಪದಿಂದ ಪಲ್ಲಕ್ಕಿಯಲ್ಲಿ ಜೆನೀರ್‌ದ ಕಡೆಗೆ ಹೊರಡಬೇಕು. ಹಾಗೂ ನಡುವೆ ಹಾದಿಯಲ್ಲಿ ಸಲಾಬತ್‌ಖಾನ್‌ನೊಂದಿಗೆ ಭೇಟಿ ಮಾಡಬೇಕು. ನನಗೆ ನಿರೀಕ್ಷೆಯಿದೆ. ಏನೆಂದರೆ ಸಲಾಬತ್‌ಖಾನ್‌ನು ಖಾವಂದರೊಂದಿಗೆ ಭೇಟಿಯ ಸುದ್ದಿ ಕೇಳಿ ಎಲ್ಲ ಅಮೀಗರೂ ಹಾಗೂ ಸೈನ್ಯಾಧಿಪತಿಗಳು ಯುವರಾಜ ಮೀರಾ ಹುಸೈನ್ ಹಾಗೂ ಮಿರ್ಜಾಖಾನ್‌ನಿಂದ ಬೇರ್ಪಟ್ಟು ತಮ್ಮ ಬಳಿ ಸೇರುವರು.

ಅಮೀರರನ್ನು ಕರೆಯಿಸುವ ಆದೇಶ :

ಬಾದಷಾಹ್‌ನು ನನ್ನ ಈ ಸಲಹೆಯನ್ನು ಮೆಚ್ಚಿದನು. ಹಾಗೂ ಅದೇ ವೇಳೆಯಲ್ಲಿ ಸಲಾಬತ್‌ಖಾನ್, ಖಾಸಿಂ ಬೇಗ್, ಮುಹಮ್ಮದ್ ತಖಿ ನಜ್ರಿ ಹಾಗೂ ಹಕಿಂ ಮುಹಮ್ಮದ್ ಮಿಸ್ರಿಯವರನ್ನು ಕರೆಯಿಸಿ ಆದೇಶವನ್ನು ಹೊರಡಿಸಲಾಯಿತು. ಹಾಗೂ ತಾನೂ ಸಹ ಪ್ರವಾಸಕ್ಕೆ ಹೊರಡುವ ನಿರ್ಧಾರ ಮಾಡಿದನು. ಯಾವಾಗ ಬಾದಷಾಹ್‌ನು

ಹೊರಡತೊಡಗಿದನೋ ಆಗ ಅವಿಧೇಯನಾದ ದ್ವಂದ್ವ ಪ್ರಕೃತಿಯ, ಅವಿಶ್ವಾಸಿಯಾದ, ದ್ರೋಹಿ ಫತಹಿಷಾಹ್‌ನು ಬಾದಷಾಹ್‌ನ ಕಾಲಿಗೆರಗಿದನು. ಹಾಗೂ ಪ್ರಲಾಪಿಸತೊಡಗಿದನು. ಖಾವಂದರು ಯಾವಾಗ ಅಹ್ಮದ್‌ನಗರದಿಂದ ಹೊರಹೊರಡುವರೋ ಆಗ ವಿಶೇಷ ಸೈನ್ಯದ ಸೈನಿಕರು ತಮ್ಮನ್ನು ಬಂಧಿಸಿ ಯುವರಾಜ ಮೀರಾಂ ಹುಸೈನ್‌ನ ಕೈಗೆ ಒಪ್ಪಿಸುವರು".

ಇತಿಹಾಸಕಾರ ಫರಿಷ್ತಾನೊಂದಿಗೆ ಬಾದಷಾಹ್‌ನ ಭೇಟಿ :

ಮುರ್ತುಜಾ ನಿಜಾಮಷಾಹ್‌ನಿಗೆ ಫತಹಿಷಾಹ್‌ನ ಮಾತಿನ ಮೇಲೆ ನಂಬಿಕೆ ಹುಟ್ಟಿತು. ಅದರ ನಂತರ ಬಾದಷಾಹನು ಇತಿಹಾಸಕಾರನನ್ನು (ಯಾರು ಈ ದಿನಗಳಲ್ಲಿ ದರ್ಬಾರಿನ ರಕ್ಷಕನಾಗಿದ್ದನು) ತನ್ನ ಕಡೆಗೆ ಕರೆಯಿಸಿಕೊಂಡನು. ಹಾಗೂ ಮಾತುಕತೆ ನಡೆಸಿದನು. ನಾನು ಅವನ ಮೇಲೆ ಒಂದು ದೃಷ್ಟಿ ಬೀರಿದೆನು. ಅವನ ವರ್ಣವು ಗೋದಿ ಬಣ್ಣದ್ದಾಗಿತ್ತು. ದೊಡ್ಡ ದೊಡ್ಡ ಕಣ್ಣುಗಳಿದ್ದವು. ಹಾಗೂ ದೇಹ ಎತ್ತರವಾಗಿತ್ತು. ಅವನ ವ್ಯಕ್ತಿತ್ವವು ನೋಡುವವರ ಮೇಲೆ ಗಾಢವಾದ ಪ್ರಭಾವ ಬೀರುವಂತಿತ್ತು. ಹಾಗೂ ಆಕರ್ಷಣೀಯವಾಗಿತ್ತು. ನಿಜಾಮಷಾಹ್‌ನಿಗೆ ಫಾರ್ಸಿ ಶಾಯರಿಯೊಂದಿಗೆ ಬಹಳೇ ಆಸಕ್ತಿಯಿತ್ತು. ಹಾಗೂ ಅವನು ಸಹ ಒಳ್ಳೊಳ್ಳೆಯ ಶಾಯರಿಗಳನ್ನು ಹೇಳುತ್ತಿದ್ದನು.

ಕೋಟೆಯಲ್ಲಿ ತಂಗುವ ನಿರ್ಧಾರ :

ಬಾದಷಾಹ್‌ನು ನನ್ನೊಂದಿಗೆ ಹೀಗೆಂದನು "ಫತಹಿಷಾಹ್‌ನು ನನಗೆ ಈ ಮಾತುಗಳನ್ನು ಹೇಳಿರುವನು. ಇದೇ ಉಚಿತವಾಗಿದೆ. ನಾವು ಇದೇ ಕೋಟೆಯಲ್ಲಿ ಇದ್ದು ಸಲಾಬತ್‌ಖಾನ್‌ನ ಬರುವಿಕೆಯನ್ನು ನಿರೀಕ್ಷಿಸೋಣ." ನನಗೆ ಅನಿವಾರ್ಯವಾಗಿ ಮನಸ್ಸಿಲ್ಲದ ಮನಸ್ಸಿನಿಂದ ಬಾದಷಾಹ್‌ನ ಅಭಿಪ್ರಾಯವನ್ನು ಒಪ್ಪಿಕೊಳ್ಳಬೇಕಾಯಿತು. ಯಾವಾಗ ಎಲ್ಲ ಜನರಿಗೆ ಬಾದಷಾಹನ ಸುದ್ದಿ ತಲುಪಿತೋ ಆಗ ಅವರು ಬಹಳ ಅನ್ಯ ಮನಸ್ಕರಾದರು. ಆ ಎಲ್ಲ ಜನರು ಯಾರು ಬಾದಷಾಹ್‌ನ ಸುತ್ತಲೂ ಸೇರಿದ್ದರೋ ಅವರು ಒಬ್ಬೊಬ್ಬರಾಗಿ ದೌಲತಾಬಾದ್‌ನತ್ತ ಹೋಗತೊಡಗಿದರು.

ಅಹ್ಮದ್‌ನಗರಕ್ಕೆ ಮಿರ್ಜಾಖಾನ್‌ನ ಆಗಮನ :

ಮಿರ್ಜಾಖಾನ್‌ನಿಗೆ ಸಲಾಬತ್‌ಖಾನ್‌ನ ಬರುವಿಕೆಯ ಸುದ್ಧಿ ತಲುಪಿತ್ತು. ಅದಕ್ಕಾಗಿ ಅವನು ಬೇಗ ಬೇಗನೇ ಪ್ರವಾಸವನ್ನು ಮುಂದುವರಿಸಿದನು. ಹಾಗೂ ಅಹ್ಮದ್‌ನಗರಕ್ಕೆ ತಲುಪಿದನು. ಮಿರ್ಜಾಖಾನ್‌ನು ಸಲಾಬತ್‌ಖಾನ್‌ನು ಬರುವವರೆಗೆ ಕೋಟೆಯ ಬಾಗಿಲನ್ನು ಮುಚ್ಚಿ ಕೋಟೆಯನ್ನು ರಕ್ಷಿಸಲು ನಿರ್ಧರಿಸಿದನು. ಕೋಟೆಯಲ್ಲಿ ವಾಸಿಸುವ ಎಲ್ಲ ಜನರು ಹೊರಬಂದು ಮಿರ್ಜಾಖಾನ್‌ನನ್ನು ಸೇರಿಕೊಂಡರು. ಕೋಟೆಯಲ್ಲಿ ಫತಹಿಷಾಹ್‌ನನ್ನು ಹೊರತುಪಡಿಸಿ ಅವನ ದಾಸಿ 'ಸಬ್ಬಾ' ಹಾಗೂ ಕೆಲವು

ಘೋಷಾದಲ್ಲಿರುವವರನ್ನು ಬಿಟ್ಟು ಯಾರು ಇರಲಿಲ್ಲ. ನಾನೂ ಸಹ ಸಮಯದ ಬೇಡಿಕೆಯನ್ನು ಪರಿಗಣಿಸಿ ಕೋಟೆಯ ರಕ್ಷಣೆಯಿಂದ ಬೇರ್ಪಟ್ಟೆನು.

ಕೊಲೆ ಹಾಗೂ ವಿನಾಶ :

ಇದೇ ಸಮಯದಲ್ಲಿ ಯುವರಾಜ ಮೀರಾಂ ಹುಸೈನ್ ಹಾಗೂ ಮಿರ್ಜಾ ಖಾನ್‌ರು ನನ್ನ ಖಡ್ಗಗಳನ್ನು ತೆಗೆದುಕೊಂಡು ಮೂವತ್ತು, ನಾಲ್ವತ್ತು, ದುಷ್ಟರನ್ನು ಜೊತೆಗೆ ತೆಗೆದುಕೊಂಡು ಕೋಟೆಯಲ್ಲಿ ಪ್ರವೇಶಿಸಿದರು. ಅದರ ನಂತರ ಈ ಜನರು 'ಬಾಗ್ದಾದ್' ಕಟ್ಟಡ ಎಲ್ಲಿ ಬಾದ್‌ಷಾಹ್‌ನು ವಾಸಿಸುತ್ತಿದ್ದನು ಅಲ್ಲಿಗೆ ಹೋದರು. ಕೊಲೆ, ರಕ್ತಪಾತ ಹಾಗೂ ವಿನಾಶವನ್ನು ಮಾಡಲು ಪ್ರಾರಂಭಿಸಿದರು. ಯುವರಾಜ ಮೀರಾಂ ಹುಸೈನ್‌ನು ಇತಿಹಾಸಕಾರ, ಚರಿತ್ರಕಾರ ಫರಿಶ್ತಾನನ್ನು ಗುರುತಿಸಿದನು. ಆದರೆ ಸಹಪಾಟಿಯೆಂದು ಬಗೆದು ಅವನನ್ನು ಕೊಲೆ ಮಾಡಲಿಲ್ಲ. ಹಾಗೂ ತನ್ನೊಂದಿಗೆ ಅವನನ್ನು ಸಹ ಇಮಾರತ್ತಿನ ಮೇಲೆ ಕರೆದೊಯ್ದನು.

ತಂದೆಯೊಂದಿಗೆ ಯುವರಾಜನ ದುರ್ವರ್ತನೆ :

ಯುವರಾಜನು ತನ್ನ ತಂದೆಯಾದ ಮುರ್ತುಜಾ ನಿಜಾಮನೊಂದಿಗೆ ಬಹಳೇ ದುರ್ವರ್ತನೆ ಹಾಗೂ ಕಟು ರೀತಿಯಲ್ಲಿ ನಡೆದುಕೊಂಡನು. ಬಾದಷಾಹ್‌ನು ಆಶ್ಚರ್ಯ ಭರಿತನಾಗಿ ತನ್ನ ಮಗನೆಡೆಗೆ ನೋಡತೊಡಗಿದನು. ಯುವರಾಜನು ತನ್ನ ಖಡ್ಗವನ್ನು ಬಾದಷಾಹ್‌ನ ಹೊಟ್ಟೆಯ ಮೇಲೆ ಇಟ್ಟನು ಹಾಗೂ

ಹೀಗೆಂದನು. "ನನ್ನ ಮನಸ್ಸಂತೂ ಹೀಗೆ ಹೇಳುತ್ತಿದೆ ಏನೆಂದರೆ – ಖಡ್ಗವನ್ನು ನಿನ್ನ ಹೊಟ್ಟೆಯಲ್ಲಿ ಜೋರಾಗಿ, ಆಳವಾಗಿ ಹುದುಗಿಸಬೇಕು. ಏಕೆಂದರೆ ಅದು ಬೆನ್ನಿನಿಂದ ಹೊರಬರಬೇಕು. ನಿಜಾಮಷಾಹ್‌ನು ತಣ್ಣಗಾಗಿ ಹೀಗೆಂದನು. "ತ್ಯಜಿಸಲ್ಪಟ್ಟ, ಬಹಿಷ್ಕೃತ ಮಗನೇ ನಿನ್ನ ತಂದೆಯು ಈಗ ಕೆಲ ದಿನಗಳ ಅತಿಥಿಯಾಗಿದ್ದಾನೆ. ಒಂದು ವೇಳೆ ನೀನು ನನ್ನ ಮೇಲೆ ದಯೆ ತೋರಿದರೆ ಒಳಿತು, ಇಲ್ಲದಿದ್ದರೆ ನಿನ್ನ ಮನಸ್ಸಿಗೆ ಬಂದಂತೆ ಮಾಡು".

ಮೀರಾಂ ನಿಜಾಮ್‌ಷಾಹ್‌ನ ನಿರ್ದಯಿ ಆದೇಶ :

ಯುವರಾಜನು "ಬಾಗ್ದಾದ್' ಇಮಾರತ್ತಿನಿಂದ ಕೆಳಗಿಳಿದನು. ಮುರ್ತುಜಾ ನಿಜಾಮಷಾಹ್‌ನು ಈ ದಿನಗಳಲ್ಲಿ ಗಂಭೀರ ಕಾಯಿಲೆಯಿಂದ ಬಳಲುತ್ತಿದ್ದನು. ಹಾಗೂ ಕೊನೆಯ ದಿನಗಳನ್ನೆಣಿಸುತ್ತಿದ್ದನು. ಮೀರಾಂ ಹುಸೈನ್‌ನಿಗೆ ಈ ಸ್ಥಿತಿಯಲ್ಲಿಯೂ ಅವನ ಮೇಲೆ ದಯೆ ಬರಲಿಲ್ಲ. ಅವನು ಆದೇಶ ನೀಡಿದನು ಬಾದಷಾಹ್‌ನನ್ನು ಸ್ನಾನಗೃಹದಲ್ಲಿ ತೆಗೆದುಕೊಂಡು ಹೋಗಬೇಕು. ಸ್ನಾನಗೃಹದ ಬಾಗಿಲನ್ನು ಮುಚ್ಚಿ ನೀರನ್ನು ಕಾಯಿಸುವ ಮಣ್ಣಿನ ಪಾತ್ರೆಯ ಕೆಳಗಿನ ಅಗ್ನಿಯನ್ನು ಹೆಚ್ಚು ಪ್ರದೀಪ್ತಗೊಳಿಸಿರಿ.

ಸ್ನಾನಗೃಹದ ಎಲ್ಲ ಕಡೆಯ ಕಿಡಕಿ, ಬಾಗಿಲು, ರಂಧ್ರಗಳನ್ನು ಮುಚ್ಚಬೇಕು. ಹಾಗೂ ಅವನಿಗೆ ನೀರಿನ ಒಂದು ಹನಿಯೂ ತಲುಪದಂತಿರಲಿ.

ಮುರ್ತುಜಾ ನಿಜಾಮಷಾಹ್‌ನ ನಿಧನ :

ಯುವರಾಜನ ಆದೇಶ ಪಾಲಿಸಲಾಯಿತು. ಹಾಗೂ ಮುರ್ತುಜಾ ನಿಜಾಮಷಾಹನು ಹಿಜ್ರಿಶಕೆ ೯೯೬ ರ ರಜ್ಜಬ ತಿಂಗಳ ೧೮ನೆಯ ದಿನಾಂಕದಂದು ಬೆಳಿಗ್ಗೆ ನಿಧನನಾದನು. ಷಿಯಾ ಪಂಥದ ವಿದ್ವಾಂಸರು ತಮ್ಮ ಸಂಪ್ರದಾಯದಂತೆ ಬಾದಷಾಹನ ಅಂತ್ಯಕ್ರಿಯೆಯನ್ನು ಮಾಡಿದರು. ಹಾಗೂ ಅವನನ್ನು ತಾತ್ಕಾಲಿಕವಾಗಿ 'ರೋಜಿಯೇಬಾಗ್'ದಲ್ಲಿ ದಫನ್ ಮಾಡಲಾಯಿತು. ಬುರ್ಹಾನ್ ನಿಜಾಮ್‌ಷಾಹ್ ದ್ವಿತೀಯನು, ಅನಂತರ ಈ ಶವವನ್ನು 'ಕರ್ಬಲಾ ಏ ಮುವಲ್ಲಾ'ಕ್ಕೆ ಅವರ ಪೂರ್ವಜರ ಘುಗ್ಗುಲಲ್ಲಿ ದಫನ್ ಮಾಡಬೇಕೆಂದು ಕಳುಹಿಸಿದರು. ಮುರ್ತುಜಾ ನಿಜಾಮಷಾಹ್‌ನು ಇಪ್ಪತ್ತನಾಲ್ಕು ವರ್ಷ ಹಾಗೂ ಐದು ತಿಂಗಳವರೆಗೆ ಆಡಳಿತವನ್ನು ನಡೆಯಿಸಿದನು.

■

*

೫. ಮುರ್ತುಜಾ ನಿಜಾಮ್‌ಷಾಹ್‌ನ ಪುತ್ರ ಮೀರಾಂ ಹುಸೈನ್

ಮಿರ್ಜಾಖಾನ್‌ನ ಅಧಿಕಾರ :

ಮಿರ್ಜಾಖಾನ್‌ನ ಸಲಹೆಯನ್ನು ಪಾಲಿಸಿ ಮೀರಾಂ ಹುಸೈನ್‌ನು ತನ್ನ ತಂದೆಯಾದ ಮುರ್ತುಜಾ ನಿಜಾಮನನ್ನು ಸ್ನಾನಗೃಹದಲ್ಲಿ ಮುಚ್ಚಿ ಹತಮಾಡಿದನು. ಹಾಗೂ ಸ್ವತಃ ಸಿಂಹಾಸನಾಧೀಶನಾದನು. ಅವನು ಮಿರ್ಜಾಖಾನ್‌ನಿಗೆ ಸಂಪೂರ್ಣ ಅಧಿಕಾರ ನೀಡಿದನು. ಮಿರ್ಜಾಖಾನ್‌ನು ಹೀಗೆ ನಿಶ್ಚಯಿಸಿದನು. ದಿಲಾವರ್‌ಖಾನ್‌ನನ್ನು ಅನುಸರಿಸಿ ಹದಿನಾರು ವರ್ಷ ವಯಸ್ಸಿನ ಮೀರಾಂ ಹುಸೈನ್‌ರನ್ನು ಏಕಾಂತದಲ್ಲಿರಿಸಿ, ಆಡಳಿತದ ಸೂತ್ರವನ್ನು ತನ್ನ ಕೈಗೆ ತೆಗೆದುಕೊಳ್ಳುವುದು.

ಮೀರಾಂ ಹುಸೈನ್‌ನ ದುಶ್ಚಟಗಳು :

ಮೀರಾಂ ಹುಸೈನ್ ಕುತ್ಸಿತ ಬುದ್ಧಿಯ, ಸಂಶಯಗ್ರಸ್ತ ವ್ಯಕ್ತಿತ್ವದ, ಕಪಟ ವ್ಯಕ್ತಿಯಾಗಿದ್ದನು. ಈ ಕಾರಣದಿಂದ ಮಿರ್ಜಾಖಾನನಿಗೆ ತನ್ನ ಬಯಕೆ ಪೂರ್ತಿಗೊಳಿಸಿಕೊಳ್ಳುವ ಅವಕಾಶ ಸಿಗಲಿಲ್ಲ. ಬಾದಷಾಹ್‌ನು ತನ್ನ ಧಾತ್ರಿಯ ಪುತ್ರರು ಹಾಗೂ ಇನ್ನಿತರ ಸ್ನೇಹಿತರನ್ನು ಅಮೀರರಲ್ಲಿ ಶಾಮೀಲುಗೊಳಿಸಿದನು. ಹಗಲಿರುಳು ವಿಲಾಸೀ ಜೀವನವನ್ನು ವ್ಯಯಿಸತೊಡಗಿದನು. ಅವನ ಹವ್ಯಾಸವಿದಾಗಿತ್ತು. ಅವನು ರಾತ್ರಿಯ ವೇಳೆ ಮದೋನ್ಮತ್ತನಾಗಿ ದುರ್ನಡತೆಯ ಕೀಳು ಜನರೊಂದಿಗೆ ಪಟ್ಟಣದ ತುಂಬ ತಿರುಗುತ್ತಿದ್ದನು. ಯಾವ ವ್ಯಕ್ತಿ ಎದುರಾದರೂ ಅವನನ್ನು ಬಾಣ ಅಥವಾ ತುಪಾಕಿಯಿಂದ ಹತ್ಯೆಗೈಯ್ಯುತ್ತಿದ್ದನು.

ಮಿರ್ಜಾಖಾನ್‌ನ ಬಂಧನ :

ದುರ್ಜನರ ಗುಂಪು ಒಂದು ಸಲ ಬಾದಷಾಹ್‌ನೊಂದಿಗೆ ಹೀಗೆ ಹೇಳಿದರು.

"ಮಿರ್ಜಾಖಾನ್‌ನು ಮುರ್ತುಜಾ ನಿಜಾಮಷಾಹ್‌ನ ಸಹೋದರ ಯುವರಾಜನಾದ ಖಾಸಿಂನಿಗೆ ಜನೀರ್ ಕೋಟೆಯಿಂದ ಸ್ವತಂತ್ರಗೊಳಿಸಿರುವನು. ಹಾಗೂ ಗೌಪ್ಯವಾಗಿ ತನ್ನ ಮನೆಯಲ್ಲಿ ಇರಿಸಿರುವನು. ಏಕೆಂದರೆ ಅವಕಾಶ ಸಾಧಿಸಿ ತಮಗೆ ಪದಚ್ಯುತಿಗೊಳಿಸಿ ಖಾಸಿಂನನ್ನು ಸಿಂಹಾಸನಾಧೀಶನನ್ನಾಗಿಸುವುದು" ಇದನ್ನು ಕೇಳಿ ಬಾದಷಾಹನು ವಿಪ್ಪಲಿತಗೊಂಡನು. ಆ ಕಾರಣಕ್ಕೆ ಅವನು ತಕ್ಷಣವೇ ಮಿರ್ಜಾಖಾನ್‌ನನ್ನು ಬಂಧಿಸಿದನು.

ಬಂಧನ ಮುಕ್ತಿ ಹಾಗೂ ಸನ್ಮಾನ :

ಮರುದಿನ ಬಾದಷಾಹನ ಅರಿವಿಗೆ ಬಂದಿತು. ಏನೆಂದರೆ ಮಿರ್ಜಾಖಾನ್‌ನ ಕುರಿತು ಏನೆಲ್ಲ ಹೇಳಲಾಗಿತ್ತೋ ಅದೆಲ್ಲವೂ ಸುಳ್ಳಾಗಿದೆ. ಬಾದಷಾಹನು ಮಿರ್ಜಾಖಾನ್‌ನನ್ನು ಬಂಧನ ಮುಕ್ತಗೊಳಿಸಿ ಅವನನ್ನು ಅವನ ಹುದ್ದೆಗೆ ಪುನಃ ನೇಮಿಸಿದನು. ಹಾಗೂ ಅವನನ್ನು ಮೊದಲಿಗಿಂತಲೂ ಹೆಚ್ಚಾಗಿ ಗೌರವ ನೀಡಿದನು. ಮಿರ್ಜಾಖಾನ್‌ನು ತನ್ನ ಕುರಿತಾಗಿ ಬಾದಷಾಹ್‌ನಲ್ಲಿ ನೆಲೆಯೂರಿದ್ದ ತಪ್ಪು ಕಲ್ಪನೆಗಳನ್ನು ದೂರಗೊಳಿಸಲು ಬಾದಷಾಹ್‌ನಿಗೆ ಹೇಳಿದನು. "ಇದು ಒಂದು ಒಪ್ಪಿಕೊಂಡ ಮಾತಾಗಿದೆ. ಏಕೆಂದರೆ ಸಾಮ್ರಾಜ್ಯದ ವಾರಸುದಾರರ ಅಸ್ತಿತ್ವವು ಸದಾಕಾಲವು ಕಷ್ಟ, ತೊಂದರೆಗಳಿಗೆ ಕಾರಣೀಭೂತವಾಗಿರುತ್ತದೆ. ಅದಕ್ಕಾಗಿ ನನ್ನ ನಮ್ರ ಸಲಹೆ ಇದಾಗಿದೆ. ಏನೆಂದರೆ ಖಾಸಿಂನನ್ನು ಸಕುಟುಂಬ ಸಪರಿವಾರದ ಜೊತೆಗೆ ಹತ್ಯೆಗೈಯ್ಯಬೇಕು.

ಷಾಹ್ ಖಾಸಿಂ ಹಾಗೂ ಅವನ ಅವಲಂಬಿತರ ಹತ್ಯೆ :

ಬಾದಷಾಹ್‌ನು ಮಿರ್ಜಾಖಾನ್‌ನ ಸಲಹೆಯನ್ನು ಒಪ್ಪಿ ಅದೇ ವೇಳೆ ಷಾಹ್‌ಖಾಸಿಂ ಹಾಗೂ ಅವನ ಅವಲಂಬಿತರ ಹತ್ಯೆಯ ಆಜ್ಞೆಯನ್ನು ಜಾರಿಗೊಳಿಸಿದನು. ರಾಜಾಜ್ಞೆಯನ್ನು ಪಾಲಿಸಲಾಯಿತು. ಹಾಗೂ ಅದೇ ದಿನ ರಾಜವಂಶದ ಹದಿನೈದು ಜನರಿಗೆ ಖಡ್ಗದ ರುಚಿ ತೋರಿಸಲಾಯಿತು.

ಮಿರ್ಜಾಖಾನ್‌ನನ್ನು ಕುರಿತು ದೂರು :

ಈಗ ಮಿರ್ಜಾಖಾನ್‌ನ ಅಧಿಕಾರವು ಮೊದಲಿಗಿಂತಲೂ ಪ್ರಭಲವಾಯಿತು. ಬಾದಷಾಹ್‌ನ ಧಾತ್ರಿಪುತ್ರರಾದ ಆಂಕಸ್‌ಖಾನ್ ಹಾಗೂ ತಾಹೀರ್‌ಖಾನ್‌ರಿಗೆ ಈ ಮಾತು (ಮಿರ್ಜಾಖಾನ್‌ನಿಗೆ ಹೆಚ್ಚಿನ ಅಧಿಕಾರ ಲಭಿಸಿದ್ದು) ರುಚಿಸಲಿಲ್ಲ. ಅವರು ಪ್ರತಿಸಲವೂ ಬಾದಷಾಹನೊಂದಿಗೆ ಮಿರ್ಜಾಖಾನ್‌ನ ಕುರಿತು ದೂರು ಸಲ್ಲಿಸತೊಡಗಿದರು. ಮಿರ್ಜಾ ಹುಸೈನ್‌ನು ಸಹ ತನ್ನ ಸಹೋದರರ ಮಾತುಗಳ ಪ್ರಭಾವಕ್ಕೆ ಒಳಗಾದನು. ಒಮ್ಮೊಮ್ಮೆ ಅವನು ಹೀಗೆನ್ನುತ್ತಿದ್ದನು. "ನಾನು ಮಿರ್ಜಾಖಾನ್‌ನನ್ನು ಆನೆಯ ಕಾಲಿನ ಕೆಳಗೆ ತುಳಿಸುವೆನು", ಮತ್ತೊಮ್ಮೆ ಹೀಗೆ

ಹೇಳುತ್ತಿದ್ದನು. "ನಾನು ಅವನನ್ನು ಬಂಧಿಸಿ ಖಡ್ಗದಿಂದ ಅವನ ರುಂಡವನ್ನು ಮುಂಡದಿಂದ ಬೇರ್ಪಡಿಸುವೆನು".

ಮಿರ್ಜಾಖಾನ್‌ನ ಹತ್ಯೆ ಸಂಚು :

ಮಿರ್ಜಾಖಾನ್‌ನವರೆಗೆ ಈ ಎಲ್ಲ ಮಾತುಗಳು ತಲುಪಿದವು. ಹಾಗೂ ಅವನಿಗೆ ತಿಳಿಯಿತು. ಏನೆಂದರೆ ಬಾದಷಾಹ್‌ನು ಅವನ ಕುರಿತು ಏನೇನು ವಿಚಾರ ವ್ಯಕ್ತಪಡಿಸಿರುವನು ಅದಕ್ಕಾಗಿ ಅವನು ತನ್ನ ಅಧಿಕಾರವನ್ನು ಉಳಿಸಿಕೊಳ್ಳಲು ಮಿರ್ಜಾಹುಸ್ಸೈನ್‌ನ್ನು ಪದಚ್ಯುತಿಗೊಳಿಸಲು ನಿಶ್ಚಯಿಸಿದನು. ಬಾದ್‌ಷಾಹ್‌ನು ಮಿರ್ಜಾಖಾನ್‌ನ ಇಚ್ಛೆಯನ್ನು ಅರಿತನು. ಹಿಜ್ರಿ ಶಕೆ ೯೯೭ ರಲ್ಲಿ ಜಮಾದಿಲ್ ಅವಲ್‌ದ ಹನ್ನೆರಡನೆಯ ದಿನದಂದು ಆಂಕಸಖಾನ್‌ನ ಮನೆಯಲ್ಲಿ ಒಂದು ಔತಣಕೂಟ ಏರ್ಪಡಿಸಲಾಯಿತು. ಅದರಲ್ಲಿ ಬಾದಷಾಹ್‌ನು ಭಾಗವಹಿಸಿದನು. ಹಾಗೂ ಮಿರ್ಜಾಖಾನ್‌ನನ್ನು ಆಮಂತ್ರಿಸಲಾಯಿತು. ಏಕೆಂದರೆ ಅವನ ಕತೆ ಮುಗಿಸುವುದು ಮಿರ್ಜಾಖಾನ್‌ನು ಕಾಯಿಲೆಯ ನೆಪ ಹೂಡಿದನು. ಹಾಗೂ ಔತಣಕೂಟದಲ್ಲಿ ಭಾಗವಹಿಸಲಿಲ್ಲ. ಅವನು ತನ್ನ ಪರವಾಗಿ ಆಖಾಮೀರ್‌ಷೇರ್‌ವಾನಿಯನ್ನು (ಯಾರು ಅವನ ಸಹವರ್ತಿಯಾಗಿದ್ದನು ಹಾಗೂ ಯಾರನ್ನು ಬಾದಷಾಹನು ಸಹ ತನ್ನ ವಿಧೇಯನೆಂದು ಬಗೆದಿದ್ದನು) ಆಂಕಸ್‌ಖಾನ್‌ನ ಮನೆಗೆ ಕಳುಹಿಸಿದನು.

ಆಖಾಮೀರ್ ಷೇರ್‌ವಾನಿ :

ಆಖಾಮೀರ್ ಷೇರ್‌ವಾನಿ ಯಾವಾಗ ಆಂಕಸ್‌ಖಾನ್‌ನ ಮನೆಗೆ ತಲುಪಿದನೊ ಆಗ ಬಾದಷಾಹ್‌ನು ತನ್ನ ಭೋಜನವನ್ನು ಮುಗಿಸಿದ್ದನು. ಆಂಕಸ್‌ಖಾನ್‌ನಿಂದ ಹೊಸದಾಗಿ ಆಗಮಿಸಿದ ಅತಿಥಿಗೆ ಬೇರೆಯದೇ ಆದ ಊಟದ ವಸ್ತುವನ್ನು ಹಾಕಲಾಯಿತು. ಮೀರ್‌ನು ಸ್ವಲ್ಪ ಪ್ರಮಾಣದ ಭೋಜನವನ್ನು ಮಾಡಿದನು. ಹಾಗೂ ಮಿರ್ಜಾಖಾನ್‌ನ ನಿರ್ದೇಶನದಂತೆ ವಾಂತಿಯನ್ನು ಮಾಡುತ್ತಾ ಎದ್ದು ನಿಂತನು. ಹಾಗೂ ಮನೆಯಿಂದ ಹೊರಗೆ ಬಂದನು. ಮಿರ್ಜಾ ಖಾನ್‌ನು ಬಾದಷಾಹ್‌ನೊಂದಿಗೆ ವಿನಂತಿಸಿದನು. "ಆಖಾಮೀರ್ ಷೇರವಾನಿ ಉನ್ನತ ದರ್ಜೆಯ ಷಾಹೀ ಅಮೀರನಾಗಿರುವನು. ಇದು ಒಳಿತಾಗುವುದು. ಏನೆಂದರೆ ಒಂದು ವೇಳೆ ಅವನನ್ನು ಅಹ್ಮದ್‌ನಗರ ಕೋಟೆಯ ಹೊರಗೆ ಒಂದು ಒಳ್ಳೆಯ ಮನೆಯಲ್ಲಿ ಇರಲು ಅವಕಾಶ ನೀಡಬೇಕು. ಬಾದಷಾಹ್‌ನ ಗಮನದಿಂದಾಗಿ ಈ ಅಮೀರನು ಆರೋಗ್ಯವಂತನಾಗುವನು. ಒಂದು ವೇಳೆ ಹೀಗಾಗದಿದ್ದರೆ ಷಾಹೀ ಹಕೀಂರನ್ನು ಆದೇಶಿಸಬೇಕು. ಏನೆಂದರೆ ಆಖಾಮೀರ್‌ನ ಚಿಕಿತ್ಸೆಯನ್ನು ಮಾಡಬೇಕು".

ಖಾಯಿಲೆಯ ನೆಪ :

ಆಂಕಸ್‌ಖಾನ್‌ನ ಮನೆಯಿಂದ ಬಂದು ಕೋಟೆಯ ಹೊರಗೆ ಬಾದಷಾಹ್‌ನು ಒಂದು ಉದ್ಯಾನದಲ್ಲಿ ಕುಳಿತಿದ್ದನು. ಮಿರ್ಜಾಖಾನ್ ಬಾದಷಾಹ್‌ನ ಬಳಿ ಬಂದನು. ಹೀಗೆ ನಿವೇದಿಸಿದನು. "ಖಾವಂದ್" ಈ ವೇಳೆ ಮೀರ್‌ನ ಆರೋಗ್ಯವು ಬಹಳೇ ಹದಗೆಟ್ಟಿರುವುದು, ಒಂದು ವೇಳೆ ಖಾವಂದ್‌ರು ಆತನ ಪೂರ್ವದ ಸೇವೆಯನ್ನು ಗಮನಿಸಿ ಆತನ ಕ್ಷೇಮ ವಿಚಾರಿಸಲು ಆತನ ಮನೆಗೆ ಬರುವಿರಾದರೆ ತಮ್ಮ ಘನತೆಯ ಕಳೆ ಹೆಚ್ಚುವುದು. ಬಾದಷಾಹ್‌ನು ಈ ವೇಳೆ ಮದ್ಯದ ಅಮಲಿನಲ್ಲಿ ಇದ್ದನು. ಆತನು ಮಿರ್ಜಾಖಾನ್‌ನ ಮನವಿ ಸ್ವೀಕರಿಸಿದನು. ಹಾಗೂ ಎರಡು ಮೂರು ಸೇವಕರ ಜೊತೆಗೆ ಮಿರ್ಜಾನೊಂದಿಗೆ ಕೋಟೆಯನ್ನು ಪ್ರವೇಶಿಸಿದನು.

ಮೀರಾ ಹುಸೇನ ಬಂಧನ :

ಕೋಟೆಯಲ್ಲಿ ಆ ವೇಳೆಯಲ್ಲಿ ಯಾವ ಜನರಿದ್ದರೋ ಅವರೆಲ್ಲರೂ ಮಿರ್ಜಾಖಾನ್‌ನ ಸ್ನೇಹಿತರು ಹಾಗೂ ಹಿತೈಷಿಗಳಾಗಿದ್ದರು. ಮಿರ್ಜಾನು ಕೋಟೆಯ ಬಾಗಿಲನ್ನು ಹಾಕಿ ಬಾದಷಾಹ್‌ನನ್ನು ಬಂಧಿಸಿದನು. ಹಾಗೂ ಮೀರ್ ತಾಹೀರ್ ನಿಶಾಪುರಿಯನ್ನು ಲಹಾಕರ್ ಕೋಟೆಯತ್ತ ಕಳುಹಿಸಿದನು. ಏಕೆಂದರೆ ಅವನು ಹುಸೈನ್ ನಿಜಾಮಷಾಹ್‌ನ ಮಗನಾದ ಬುರ್ಹಾನ್‌ಷಾಹ್‌ನನ್ನು ತನ್ನೊಂದಿಗೆ ಕರೆದುಕೊಂಡು ಬರುವದೆಂದು ಮಿರ್ಜಾಖಾನ್‌ನು ಇದನ್ನು ಬಯಸುತ್ತಿದ್ದನು. ಏನೆಂದರೆ ಬುರ್ಹಾನ್‌ನ ಪುತ್ರರಲ್ಲಿ ಯಾರಾದರೊಬ್ಬರಿಗೆ ಯಾರು ಎಲ್ಲರಿಗಿಂತ ಹೆಚ್ಚು ದಕ್ಷ ಹಾಗೂ ಚಾಣಾಕ್ಷ ಇರುವರೋ ಆತನನ್ನು ಸಿಂಹಾಸನಾರೋಹಣ ಮಾಡಿಸಬೇಕು.

ಯುವರಾಜ ಇಸ್ಮಾಯಿಲ್‌ನ ಪಟ್ಟಾಭಿಷೇಕ :

ಮೀರ್ ತಾಹೀರ್‌ಷಾಹ್‌ನು ಮರುದಿನ ಬುರ್ಹಾನ್‌ನ ಈರ್ವರು ಪುತ್ರರು ಇಬ್ರಾಹಿಂ ಹಾಗೂ ಇಸ್ಮಾಯಿಲ್‌ರನ್ನು ಜೊತೆಗೆ ಕರೆದುಕೊಂಡು ಅಹ್ಮದನಗರಕ್ಕೆ ಮರಳಿ ಬಂದನು. ಮಿರ್ಜಾನು ಖಾಸಿಂ ಬೇಗ್ ಹಾಗೂ ಮುಹಮ್ಮದ್ ತಖಿ ಹಾಗೂ ಬೇರೆ ಎಲ್ಲ ವಿದೇಶಿ ಅಮೀರರು ತಮ್ಮ ತಮ್ಮ ನಿವಾಸಗಳಲ್ಲಿದ್ದರು. ಗದ್ದಲ ಹಾಗೂ ಈ ಪರಿಸ್ಥಿತಿಯ ಕುರಿತು ಏನೊಂದನ್ನೂ ತಿಳಿಯದವರಾಗಿದ್ದರು. ಅವರನ್ನು ಒತ್ತಾಯಪೂರ್ವಕವಾಗಿ ಪಟ್ಟಣಗಳಿಂದ ಕೋಟೆಯಲ್ಲಿ ಕರೆಯಿಸಲಾಯಿತು. ಒಂದು ಸಭೆ ಏರ್ಪಡಿಸಲಾಯಿತು. ಹಾಗೂ ಯುವರಾಜನಾದ ಇಸ್ಮಾಯಿಲ್‌ನನ್ನು ಯಾರು ಇಬ್ರಾಹಿಮ್‌ನಿಗಿಂತ ಚಿಕ್ಕವನಾಗಿದ್ದನು. ಹಾಗೂ ಅವನ ವಯಸ್ಸು ಕೇವಲ ಒಂಬತ್ತು ವರ್ಷವಿತ್ತು. ಅವನನ್ನು ಸಿಂಹಾಸನಾಧೀಶ– ನನ್ನಾಗಿಸಲಾಯಿತು.

ಜಮಾಲ್‌ಖಾನ್ ಮೆಹದ್ವಿಯ ಗಲಾಟೆ :

ಇದೇ ಸಮಯದಲ್ಲಿ ಕೋಟೆಯ ಹೊರಗೆ ಗದ್ದಲ ಹಾಗೂ ಕೂಗಾಟ ಕೇಳಿ ಬರತೊಡಗಿತು. ಮಿರ್ಜಾಖಾನ್‌ನು ಕೆಲವು ಜನರನ್ನು ಈ ಗಲಭೆಯ ಕಾರಣವನ್ನು ತಿಳಿಯುವದಕ್ಕೋಸ್ಕರ ಕಳುಹಿಸಿದನು. ಆ ಜನರು ಮರಳಿ ಬಂದು ಹೀಗೆ ಹೇಳಿದರು. ಒಂದು ನೂರು ಜನರ ಮೇಲಧಿಕಾರಿಯಾದ ಜಮಾಲ್‌ಖಾನ್ ಮೆಹದ್ವಿಯು ಹಾಗೂ ಬೇರೆ ಅಧಿಕಾರಿಗಳ ಜೊತೆಗೆ ಕೋಟೆಯ ಹೊರಗೆ ಬಾಗಿಲಿನ ಬಳಿ ನಿಂತಿರುವನು. ಅವನ ಹೇಳಿಕೆಯಂತೆ ಎಷ್ಟೋ ದಿನಗಳಿಂದ ನಾವು ನಮ್ಮ ಬಾದಷಾಹ್‌ನಾದ ಮೀರಾಂ ಹುಸೈನ್‌ನನ್ನು ನೋಡಿರುವುದಿಲ್ಲ. ಒಂದು ವೇಳೆ ನಮಗೆ ಬಾದಷಾಹನನ್ನು ತೋರಿಸಬೇಕು. ಇಲ್ಲವಾದರೆ ಅವರ ಎದುರು ಹಾಜರಾಗಲು ಅನುಮತಿ ನೀಡಬೇಕು.

ಜಮಾಲ್‌ಖಾನ್‌ನ ಘೋಷಣೆ :

ಮಿರ್ಜಾಖಾನ್‌ನ ಬಹಳೇ ಗರ್ವದೊಂದಿಗೆ ಹೇಳಿದನು. "ಮೀರಾ ಹುಸೈನ್‌ನು ಬಾದ್‌ಷಾಹ್‌ನಾಗಲು ಅರ್ಹನಾಗಿಲ್ಲ. ಈಗ ನಮ್ಮೆಲ್ಲರ ಬಾದಷಾಹ್‌ನು ಯುವರಾಜ ಇಸ್ಮಾಯಿಲ್ ಇರುವನು. ಅವನು ಈಗಲೇ ಹೊರಗೆ ಬಂದು ತಮ್ಮೆಲ್ಲರ 'ಸಲಾಂ' ಸ್ವೀಕರಿಸುವನು" ಇದನ್ನು ಕೇಳಿ ಜಮಾಲ್‌ಖಾನ್‌ನು ಕೋಪೋದ್ರಿಕ್ತನಾದನು. ಅವನು ಪಟ್ಟಣದ ತುಂಬ ಹೀಗೆ ಘೋಷಿಸಿದನು. ಏನೆಂದರೆ ಮಿರ್ಜಾಖಾನ್ ಹಾಗೂ ಬೇರೆ ಅಮೀರರು ಕೋಟೆಯ ಒಳಗೆಯೇ ಇದ್ದಾರೆ. ಆ ಜನರು ಮೀರಾ ಹುಸೈನ್‌ನನ್ನು ಬಂಧಿಸಿದ್ದಾರೆ. ಹಾಗೂ ಬೇರೆಯೇ ವ್ಯಕ್ತಿಯನ್ನು ಬಾದಷಾಹ್‌ನನ್ನಾಗಿಸಿದ್ದಾರೆ. ನಮಗೆಲ್ಲರಿಗೂ ನಮ್ಮ ಸ್ವಾತಂತ್ರ್ಯದ ರಕ್ಷಣೆ ಮಾಡಬೇಕಾಗಿದೆ. ಹಾಗೂ ಎಲ್ಲರ ಅಧಿಕಾರ ಮತ್ತು ಹಕ್ಕನ್ನು ಉಳಿಸಬೇಕು. ಇಲ್ಲವಾದರೆ ನೆನಪಿಡಿ. ದಖ್ಖನ್ನಿನ ಸ್ತ್ರೀಯರು ಹಾಗೂ ಮಕ್ಕಳು ಸೇವಕ ಸೇವಕಿಯರು ಎಲ್ಲರೂ ಗುಲಾಮರಾಗುವರು.

ದಖ್ಖನ್ನಿನವರ ಕೋಪೋದ್ರಿಕ್ತತೆ :

ದಖ್ಖನ್ನಿನ ಜನರು ಯಾವಾಗ ಈ ಘೋಷಣೆಯನ್ನು ಕೇಳಿದರೋ ಆಗ ಅವರು ತಕ್ಷಣವೇ ಶಸ್ತ್ರಸಜ್ಜಿತರಾದರು. ದಖ್ಖನಿ ಪ್ರಜೆಗಳು ಗುಂಪು ಗುಂಪಾಗಿ ಕೋಟೆಯತ್ತ ಹೊರಟರು. ಕೆಲವೇ ಸಮಯದಲ್ಲಿ ಐದಾರು ಸಾವಿರ ಜನರ ಗುಂಪು ಸೇರಿತು. ದುಷ್ಟರ ಒಂದು ಗುಂಪು ಸಹ ಜಮಾಲ್‌ಖಾನ್‌ನೊಂದಿಗೆ ಸೇರಿಕೊಂಡಿತು. ಎಲ್ಲ ಹಬ್ಷಿ ಜನರು ಕೋಟೆಯ ಮೇಲೆ ಆಕ್ರಮಣ ಮಾಡಿದರು.

ಕೋಟೆಯ ಮೇಲೆ ಜಮಾಲ್‌ಖಾನ್‌ನ ಆಕ್ರಮಣ :

ಮಿರ್ಜಾಖಾನ್‌ನ ದುರ್ವಿಧಿಯು ಸಮಯು ಬಂದಿತ್ತು. ಆ ಕಾರಣಕ್ಕೆ ಜಮಾಲ್‌ಖಾನ್‌ನು ಇಪ್ಪತ್ತೈದು ಸಾವಿರ ಜನರನ್ನು ಸೇರಿಸಿಕೊಂಡು ಕೋಟೆಯ

ಬಳಿ ಬಂದನು. ಮಿರ್ಜಾಖಾನ್‌ನ ದೂರಾಲೋಚನೆ ಇಲ್ಲದೆಯೇ ಸೈನಿಕರ ಗುಂಪೊಂದನ್ನು ಜಮಾಲ್‌ಖಾನ್‌ನನ್ನು ಎದುರಿಸಲು ಕಳುಹಿಸಿದನು. ಮಿರ್ಜಾಖಾನ್‌ನು ತನ್ನ ಮಾವನಾದ ಮುಹಮ್ಮದ್ ಸಯೀದ್ ಹಾಗೂ ಕಿಶ್ವರ್‌ಖಾನ್ ಜೊತೆ ಒಂದು ನೂರಾ ಐವತ್ತು ವಿದೇಶಿಗರು, ಇಪ್ಪತ್ತು ಜನ ದಖನಿಗಳನ್ನು ಹಾಗೂ 'ಗುಲಾಮ ಅಲಿ' ಎಂಬ ಹೆಸರಿನ ಆನೆಯೊಂದಿಗೆ ಜಮಾಲ್‌ಖಾನ್‌ನನ್ನು ಬಗ್ಗು ಬಡಿಯಲೆಂದು ಕಳುಹಿಸಿದನು.

ಯುದ್ಧ :

ಕಿಶ್ವರ್‌ಖಾನ್‌ನು ಚೆನ್ನಾಗಿ ತಿಳಿದವನಾಗಿದ್ದನು. ಏನೆಂದರೆ ಈ ಪುಟ್ಟ ಸೈನ್ಯವು ಜಮಾಲ್‌ಖಾನ್‌ನ ಬೃಹತ್ ರೂಪದ ಸೈನ್ಯದೆದುರು ಯಾವುದೇ ರೀತಿಯಲ್ಲಿ ಸಮನಾಗಲಾರದು. ಆದರೂ ಆತನು ಅನಿವಾರ್ಯವಾಗಿ ಕೋಟೆಯಿಂದ ಹೊರ ಹೊರಟನು. ಹಾಗೂ ವೈರಿಯ ಮೇಲೆ ಬಲಪ್ರಯೋಗಿಸಿ ಆಕ್ರಮಣ ನಡೆಸಿದನು. ಬಹಳಷ್ಟು ವಿದೇಶಿಗರು ಕೊಲ್ಲಲ್ಪಟ್ಟರು. ಹದಿನೈದು ಜನರು ಸೈನಿಕರು ಗಾಯಾಳುಗಳಾಗಿ ಕೋಟೆಯ ಒಳಗೆ ಬಂದರು. ಮಿರ್ಜಾಖಾನ್‌ನು ವಿದೇಶಿಗರನ್ನು (ಯಾರ ಮೇಲೆ ನಂಬುಗೆಯಿಟ್ಟು ಇಷ್ಟೆಲ್ಲ ಜನರನ್ನು ಕಳುಹಿಸಿದ್ದನು ಈ ತೆರನಾಗಿ ಸಂಕಷ್ಟದಲ್ಲಿರುವುದನ್ನು ನೋಡಿ ಹೀಗೆಂದನು) ದಖ್ಖನ್ನಿನವರ ಈ ಎಲ್ಲ ಗದ್ದಲವು ಕೇವಲ ಮೀರಾ ಹುಸೈನ್‌ನ ಕಾರಣದಿಂದಾಗಿದೆ. ಅದಕ್ಕಾಗಿ ಅವನನ್ನು ತಕ್ಷಣವೇ ಹತ್ಯೆಗೈಯ್ಯಬೇಕು. ಅದರಿಂದ ಈ ಗದ್ದಲವು ನಿಲ್ಲುವುದು.

ಮೀರಾ ಹುಸೈನ್‌ನ ಹತ್ಯೆ :

ಮಿರ್ಜಾಖಾನ್‌ನು ಇಸ್ಮಾಯಿಲ್‌ಖಾನ್ ಹೆಸರಿನ ವಿದೇಶಿಗೆ ಸಂಜ್ಞೆ ಮಾಡಿದನು. ಅವನು ತತ್‌ಕ್ಷಣ ಮೀರಾ ಹುಸೈನ್‌ನ ರುಂಡವನ್ನು ಮುಂಡದಿಂದ ಬೇರ್ಪಡಿಸಿದನು. ಈ ಕತ್ತರಿಸಲ್ಪಟ್ಟ ಶಿರವನ್ನು ಕೋಟೆಯ ಬಾಗಿಲಿನ ಮೇಲ್ಗಡೆಯ ಗೋಪುರದ ಮೇಲೆ ತೂಗುಬಿಡಲಾಯಿತು.ಇಸ್ಮಾಯಿಲ್‌ಖಾನ್‌ನು ದೊಡ್ಡದಾದ ದನಿಯಲ್ಲಿ ದಖ್ಖನ್ನಿಯರನ್ನು ಉದ್ದೇಶಿಸಿ ಹೇಳಿದನು. "ನಿಮ್ಮ ಗದ್ದಲ, ಗಲಾಟೆಯು ಮೀರಾ ಹುಸೈನ್‌ನಿಗಾಗಿತ್ತು. ಅವನ ತಲೆ ಇಲ್ಲಿ ಇದೆ. ಈಗ ನಿಮಗೆ ಉಳಿದಿರುವ ಹಾದಿಯೆಂದರೆ ಇಸ್ಮಾಯಿಲ್ ಬಿನ್ ಬುರ್ಹಾನ್ ಷಾಹ್‌ನನ್ನು ತಮ್ಮ ಬಾದಷಾಹನೆಂದು ಒಪ್ಪಿಕೊಳ್ಳಿರಿ ಹಾಗೂ ಅವನೊಂದಿಗೆ ವಿಧೇಯತೆಯ ಪ್ರಮಾಣವನ್ನು ಮಾಡಿ ತಮ್ಮ ತಮ್ಮ ಮನೆಗೆ ಮರಳಿರಿ".

ಜಮಾಲ್‌ಖಾನ್‌ನ ಭಾಷಣ :

ದಖ್ಖನ್ನಿನ ಅಮೀರರು ಮರಳಿ ಹೋಗುವ ನಿಶ್ಚಯ ಮಾಡಿದರು. ಆದರೆ ಜಮಾಲ್‌ಖಾನ್‌ನು ಈ ಇಚ್ಛೆಯಿಂದ ಅವರನ್ನು ತಡೆದನು. ಹಾಗೂ ಹೀಗೆಂದನು.

ನಾವು ಮೀರಾ ಹುಸೈನ್‌ನ ಕೊಲೆಯ ಪ್ರತಿಕಾರವನ್ನು ತೆಗೆದುಕೊಳ್ಳಬೇಕು. ಹಾಗೂ ಆ ವಿದೇಶಿಗಳನ್ನು ಈ ತಪ್ಪು ಮಾಡಿದ್ದಕ್ಕೆ ಶಿಕ್ಷೆಯ ರೂಪದಲ್ಲಿ ಖಡ್ಗದಿಂದ ಕೊನೆಗಾಣಿಸಬೇಕು. ಇಸ್ಮಾಯಿಲ್ ಬಿನ್ ಬುರ್ಹಾನ್‌ನ ಆಡಳಿತಾವಧಿಯಲ್ಲಿ ನಾವು ಪ್ರಭಾವೀ ಅಧಿಕಾರಸ್ಥರಾಗಿ ಇರಬೇಕು. ವಿದೇಶಿಗರ ಮುಂದೆ ಹಸ್ತ ಚಾಚಿಕೊಂಡು ಬೇಡುವುದು ನಮ್ಮ ಘನತೆಗೆ ತಕ್ಕುದಲ್ಲ".

ಕೋಟೆಯೊಳಗಿನವರಿಗೆ ಸಂದೇಶ :

ದಖ್ಖನಿಗರು ಜಮಾಲ್‌ಖಾನ್‌ನ ಅಭಿಪ್ರಾಯವನ್ನು ಮನ್ನಿಸಿದರು. ಹಾಗೂ ಅವನನ್ನು ತಮ್ಮ ಸರದಾರನನ್ನಾಗಿಸಿ ಕೋಟೆಯ ದಿಗ್ಬಂಧನ ಮಾಡುವಲ್ಲಿ ನಿರತರಾದರು. ಜಮಾಲ್‌ಖಾನ್‌ನು ಜನ ಸಾಮಾನ್ಯರ ತೃಪ್ತಿಗಾಗಿ ತನ್ನ ಕೆಲವು ಜನರನ್ನು ಕೋಟೆಯ ಬಾಗಿಲಿನ ಹತ್ತಿರ ಕಳುಹಿಸಿದನು. ಹಾಗೂ ಕೋಟೆಯೊಳಗಿನವರಿಗೆ ಈ ಸಂದೇಶವನ್ನು ನೀಡಿದನು. "ಪ್ರಜೆಗಳ ಅಭಿಪ್ರಾಯವು ಇದಾಗಿದೆ, ಈ ತಲೆಯು ಮೀರಾ ಹುಸೈನ್‌ನದು ಇರುವುದಿಲ್ಲ. ಒಂದು ವೇಳೆ ನೀವು ಈ ರುಂಡವನ್ನು ನೆಲದ ಮೇಲೆ ಎಸೆಯಿರಿ. ಆಗ ದಖನಿ ಹಾಗೂ ಹಬ್ಷಿಗಳು ಅದನ್ನು ಸಮೀಪದಿಂದ ನೋಡಿ ನಿಮ್ಮ ಮಾತಿನ ಮೇಲೆ ನಂಬಿಕೆ ಮೂಡಿಸಿಕೊಳ್ಳುವರು. ಹಾಗೂ ಯುದ್ಧದ ವಿಚಾರವನ್ನು ಮನದಿಂದ ತ್ಯಜಿಸಿ ತಮ್ಮ ತಮ್ಮ ಮನೆಗೆ ಮರಳುವರು."

ಗೊತ್ತಿದ್ದು ಇಲ್ಲದಂತೆ ನಟನೆ :

ಮಿರ್ಜಾಖಾನ್‌ನು ಗೊಂದಲ ಉಂಟುಮಾಡುವ ಮಾತನ್ನು ನಂಬಿದನು. ಮೀರಾಹುಸೈನ್‌ನ ತಲೆಯನ್ನು ಕೆಳಗೆ ಎಸೆದನು. ಜಮಾಲ್‌ಖಾನ್ ಹಾಗೂ ಯಾಖೂತ್‌ಖಾನ್ ಹಬ್ಷಿ ಚೆನ್ನಾಗಿ ಈ ಮಾತನ್ನು ತಿಳಿದಿದ್ದರು. ಈ ತಲೆಯು ಮೀರಾ ಹುಸೈನ್‌ನದೇ ಇದೆ. ಆದರೆ ಅವರು ಉದ್ದಟತನದ ಪರಮಾವಧಿಯನ್ನು ಪ್ರದರ್ಶಿಸಿ ಹೇಳಿದರು. "ಈ ತಲೆಯು ಮೀರಾಹುಸೈನ್‌ನದು ಇರುವುದಿಲ್ಲ" ಇದರ ನಂತರ ಅವರು ಈ ತಲೆಯನ್ನು ಒಂದು ಬಟ್ಟೆಯಲ್ಲಿ ಸುತ್ತಿ ದಫನ್ ಮಾಡಿದರು.

ಅಗ್ನಿಸ್ಪರ್ಷ :

ಇದೇ ಸಮಯದಲ್ಲಿ ಕೋಟೆಯ ಸಮೀಪದಿಂದ ಒಂದು ನೂರು ಎತ್ತುಗಳು ಹುಲ್ಲು ಹಾಗೂ ಮೇವನ್ನು ಹೊತ್ತುಕೊಂಡು ಅಲ್ಲಿಂದ ಸಾಗಿದ್ದವು. ಜಮಾಲ್‌ಖಾನ್‌ನ ಆಜ್ಞೆಯಂತೆ ಈ ಎತ್ತುಗಳನ್ನು ವಶಪಡಿಸಿಕೊಳ್ಳಲಾಯಿತು. ಹಾಗೂ ಕೋಟೆಯ ಬಾಗಿಲಿನ ಹತ್ತಿರ ನಿಲ್ಲಿಸಿ ಅವುಗಳಿಗೆ ಬೆಂಕಿ ಹಚ್ಚಲಾಯಿತು. ನಾಲ್ಕು ಕಡೆಗೆ ಬೆಂಕಿ ಹಬ್ಬಿತು. ಹಾಗೂ ಕೋಟೆಯ ಬಾಗಿಲುಗಳು ಸುಟ್ಟು ಬೂದಿಯಾದವು. ನಾಲ್ಕೂ ಕಡೆಗೆ ಬೆಂಕಿಯೇ ಬೆಂಕಿ ಇತ್ತು. ಯಾರೊಬ್ಬರೂ ಕೋಟೆಯೊಳಗೆ ಹೋಗುವಂತಿರಲಿಲ್ಲ ಹಾಗೂ ಹೊರಗೆ ಬರುವಂತಿರಲಿಲ್ಲ.

ಮಿರ್ಜಾಖಾನ್‌ನು ಪರಾರಿಯಾದದ್ದು :

ಯಾವಾಗ ರಾತ್ರಿಯ ಎರಡು ಪ್ರಹರು ಕಳೆದವು ಆಗ ಅಗ್ನಿಯ ಉರಿಯುವಿಕೆಯ ಪ್ರಮಾಣ ತಗ್ಗಿತು. ಮಿರ್ಜಾಖಾನ್, ಬಾಲಿಖಾನ್, ಅಮೀನುಲ್ ಮುಲ್ಕ ನಿಶಾಪುರಿ ಹಾಗೂ ಇನ್ನಿತರ ಅಮೀರರು ತಮ್ಮ ತಮ್ಮ ಸೈನಿಕರ ತಂಡದೊಂದಿಗೆ ಕುದುರೆಯ ಮೇಲೆ ಸವಾರರಾಗಿ ಕೋಟೆಯ ಬಾಗಿಲಿನಿಂದ ಹೊರಬಂದರು. ಈ ಎಲ್ಲ ಜನರ ಕೈಯಲ್ಲಿ ನಗ್ನ ಖಡ್ಗಗಳಿದ್ದವು. ಇವರಲ್ಲಿ ಕೆಲವರು ಪಟ್ಟಣದಲ್ಲಿಯೇ ಮತ್ತೆ ಕೆಲವರು ನಗರದ ಸುತ್ತಲೂ ದಖ್ಖನಿಗರ ಕೈಯಲ್ಲಿ ಹತರಾದರು. ಮಿರ್ಜಾಖಾನ್‌ನು ಜನೀರ್‌ದ ಕಡೆಗೆ ಹೊರಟುಹೋದನು. ಹಾಗೂ ಕೆಲ ದಿನಗಳವರೆಗೆ ಆತನು ಎಲ್ಲಿರುವನೆಂದು ಯಾರಿಗೂ ತಿಳಿಯಲಿಲ್ಲ.

ವಿದೇಶಿಗರ ಕೊಲೆ :

ದಖ್ಖನಿ ಹಾಗೂ ಹಬ್ಷಿಗಳು ಕೋಟೆಯ ಒಳಗೆ ಪ್ರವೇಶಿಸಿದರು. ಅಲ್ಲಿ ದೌರ್ಜನ್ಯ, ದಬ್ಬಾಳಿಕೆ, ಹಲ್ಲೆ ಹಿಂಸೆ ಹಾಗೂ ಕೊಲೆಯ ಕಾರ್ಯವನ್ನು ಮುಂದುವರೆಸಿದರು. ಈ ಜನರು ಖಾಸಿಂ ಬೇಗ್, ಸೈಯ್ಯದ್ ಷರೀಫ್ ಗೀಲಾನಿ, ಏಹ್ತೆಮಾದ್‌ಖಾನ್, ಷೋಷ್ತರಿ ಹಾಗೂ ಖ್ವಾಜಾ ಅಬ್ದುಸ್‌ಲಾಮ್‌ರ ಜೊತೆಗೆ ಉಳಿದ ಎಲ್ಲ ವಿದೇಶಿಗಳನ್ನು ಖಡ್ಗದ ರುಚಿ ತೋರಿಸಿದನು. ಸುಮಾರು ಮೂರು ನೂರು ಜನರು ಹತ್ಯೆ ಮಾಡಲ್ಪಟ್ಟರು. ಇವರಲ್ಲಿ ಮಿರ್ಜಾಮೊಹಮ್ಮದ್ ತಖಿ ನಜೀರಿ, ಮಿರ್ಜಾ ಮೊಹಮ್ಮದ್ ಸಾದಿಕ್, ಮೀರ್ ಅಜೀಜುದ್ದೀನ್ ಅಸ್ತರಾಬಾದಿ ಹಾಗೂ ಮುಲ್ಲಾ ನಜಮುದ್ದೀನ್ ಘೋಷ್ತರಿಯಂಥಹ ಅತಿರಥ ಮಹಾರಥರಿದ್ದರು. ಮಿರ್ಜಾ ಸಾದಿಕ್‌ನು ಮಹಾ ವಿದ್ವಾಂಸನಾಗಿದ್ದನು. ಆತನು ಉನ್ನತ ದರ್ಜೆಯ ಕರಣಿಕ ಹಾಗೂ ಕವಿಯಾಗಿದ್ದನು.

ಶವಗಳ ಅಗೌರವ :

ಬೆಳಕು ಮೂಡಿದಾಗ ನಾಲ್ಕೂ ಕಡೆಗೆ ವಿದೇಶಿಗರ ಶವಗಳೇ ಶವಗಳು ಕಂಡುಬರುತ್ತಿದ್ದವು. ಜಮಾಲ್‌ಖಾನ್‌ನು ಆಜ್ಞೆ ಹೊರಡಿಸಿದನು. ಏನೆಂದರೆ ಈ ಶವಗಳನ್ನು ಅರಣ್ಯ ಪ್ರದೇಶದಲ್ಲಿ ಎಸೆಯಬೇಕು ಹಾಗೂ ಒಂದು ವೇಳೆ ಅವರ ವಾರಸುದಾರರು ಈ ಶವಗಳನ್ನು ದಫನ್ ಮಾಡಲು ಬಯಸಿದರೆ ಅದರಿಂದ ಅವರನ್ನು ತಡೆಯಬೇಕು. ಜಮಾಲ್‌ಖಾನ್‌ನು ಮೀರಾ ಹುಸೈನ್‌ನ ಶವವನ್ನು 'ಬಾಗ್‌ಏರೋಜಾ'ದಲ್ಲಿ ದಫನ್ ಮಾಡಿ ಇಸ್ಮಾಯಿಲ್ ಷಾಹ್‌ನನ್ನು ಸಿಂಹಾಸನಾಧೀಶನನ್ನಾಗಿಸಿದನು. ಮತ್ತೊಂದು ಸಲ ವಿದೇಶಿಗರನ್ನು ಕೊಲೆ ಮಾಡುವ ಹಾಗೂ ಅವರ ಮನೆಗಳನ್ನು ಲೂಟಿ ಮಾಡಲು ಹಾಗೂ ಸುಡಲು ಆದೇಶಿಸಿದನು.

ವಿದೇಶಿಗರ ಮೇಲೆ ಮತ್ತಷ್ಟು ಶೋಷಣೆ :

ದಖ್ಖನಿ ಹಾಗೂ ಹಬಶಿಗಳು ಮನಬಿಚ್ಚಿ ವಿದೇಶಿಗರ ಮೇಲೆ ಶೋಷಣೆ ನಡೆಸಿದರು.

ಅವರನ್ನು ಬಹಳೇ ನಿರ್ದಯಿಯಾಗಿ, ಅತ್ಯಂತ ಅಪಮಾನಕರ ರೀತಿಯಲ್ಲಿ ಕೊಲೆಗೈದರು. ಹಾಗೂ ಅವರ ಕುಟುಂಬದವರ ಮೇಲೆ ಅತ್ಯಾಚಾರಗೈದರು. ಅವರ ಮನೆಗಳನ್ನು ಅಗ್ನಿಗಾಹುತಿಗೊಳಿಸಿದರು. ಗೌರವಸ್ಥ ಜನರನ್ನು ಅಪರಾಧಿಗಳಂತೆ ಶಿಕ್ಷಿಸಲಾಯಿತು. ಈ ತೆರನಾಗಿ ಹಿಂಸೆಯ ತಾಂಡವವನ್ನು ಎಷ್ಟು ರೂಪದಲ್ಲಿ ಮಾಡಲು ಸಂಭವವಿತ್ತೋ ಅಷ್ಟು ರೂಪದಲ್ಲಿ ಮುಗ್ಧರ ಮೇಲೆ ಎಲ್ಲ ತೆರನಾದ ಶೋಷಣೆ ನಡೆಸಲಾಯಿತು.

ಮಿರ್ಜಾಖಾನ್‌ನ ಬಂಧನ ಹಾಗೂ ಕೊಲೆ :

ಈ ಘಟನೆಯ ನಂತರದ ನಾಲ್ಕನೆಯ ದಿನ ಮಿರ್ಜಾಖಾನ್‌ನನ್ನು ಜನೀರದ ಸಮೀಪ ಬಂಧಿಸಲಾಯಿತು. ಜಮಾಲ್‌ಖಾನ್‌ನ ಆಜ್ಞೆಯಂತೆ ಮೊದಲಂತೂ ಆತನನ್ನು ಕತ್ತೆಯ ಮೇಲೆ ಸವಾರಿ ಮಾಡಿಸಿ ನಾಲ್ಕು ಕಡೆಗೆ ಸುತ್ತು ಹೊಡೆಸಲಾಯಿತು. ಹಾಗೂ ನಂತರ ಅವನ ದೇಹವನ್ನು ಚಿಕ್ಕಚಿಕ್ಕ ಭಾಗಗಳಾಗಿ ತುಂಡರಿಸಲಾಯಿತು.

ಜಮ್ಷೇದ್‌ಖಾನ್ ಶಿರಾಜಿ ಹಾಗೂ ಇನ್ನಿತರರ ಕೊಲೆ :

ಜಮ್ಷೇದ್‌ಖಾನ್ ಶಿರಾಜಿ ಹಾಗೂ ಅವನ ಸಹೋದರರಾದ ಸೈಯ್ಯದ್ ಹುಸೈನ್ ಹಾಗೂ ಸೈಯ್ಯದ್ ಮುಹಮ್ಮದ್ ಹಾಗೂ ಅವನ ಪುತ್ರರಾದ ಸೈಯ್ಯದ್ ಮುರ್ತುಜಾನನ್ನು ಸಹ ಅಪರಾಧಿಯೆಂದು ಪರಿಗಣಿಸಲಾಯಿತು. ಅವರ ಮೇಲೆ ಈ ಅಪರಾಧವನ್ನು ಹೇರಲಾಯಿತು. ಏನೆಂದರೆ ಅವರು ಮಿರ್ಜಾಖಾನ್‌ನ ಹಿತೈಷಿಗಳಾಗಿದ್ದರು. ಈ ಅಪರಾಧಕ್ಕೆ ಶಿಕ್ಷೆಯಾಗಿ ಇವರನ್ನು ಮರಣದಂಡನೆ ನೀಡಲಾಯಿತು. ಹಾಗೂ ಅವರ ಶವಗಳನ್ನು ತೋಪುಗಳ ಬಾಯಲ್ಲಿಟ್ಟು ಹಾರಿಸಲಾಯಿತು.

ದುರ್ವಿಧಿಯ ಅಂತ್ಯ :

ನಿರಂತರವಾಗಿ ಒಂದು ವಾರದವರೆಗೆ ಪಟ್ಟಣ ಹಾಗೂ ಹಳ್ಳಿಗಳಲ್ಲಿ ವಿದೇಶಿಗರ ಕೊಲೆ ಮಾಡಲಾಯಿತು. ಒಂದು ಸಾವಿರದವರೆಗೆ ವ್ಯಕ್ತಿಗಳು ಕೊಲ್ಲಲ್ಪಟ್ಟರು. ಹಾಗೂ ಅವರ ಎಲ್ಲ ಸಂಪತ್ತು, ವಸ್ತುಗಳನ್ನು ಲೂಟಿ ಮಾಡಲಾಯಿತು. ಅದೇ ಸಮಯದಲ್ಲಿ ಫರ್ಹಾದ್‌ಖಾನ್ ಹಬ್ಷಿ ತನ್ನ ಜಾಗೀರಿನಿಂದ ಮರಳಿ ಅಹ್ಮದ್‌ನಗರಕ್ಕೆ ಬಂದನು. ಆತನು ಲಫಂಗರನ್ನು, ದುಷ್ಟರನ್ನು ದಂಡಿಸಿ ಆ ಕ್ಷೋಭೆಯ ಬಾಗಿಲನ್ನು ಮುಚ್ಚಿದನು. ಈ ತೆರನಾಗಿ ಈ ವಿದೇಶಿಗರು ತಮ್ಮ ದಖ್ಖನಿ ಹಾಗೂ ಹಬ್ಷಿ ಸ್ನೇಹಿತರ ಮನೆಯಲ್ಲಿ ಆಶ್ರಯ ಪಡೆದಿದ್ದರೋ ಅವರು ಈ ತೊಂದರೆಯಿಂದ ಮುಕ್ತರಾದರು.

ಮೀರಾ ಹುಸೈನ್‌ನ ಆಡಳಿತಾವಧಿ :

ಮೀರಾಹುಸೈನ್‌ನ ಆಡಳಿತಾವಧಿಯು ಎರಡು ತಿಂಗಳು ಹಾಗೂ ಮೂರುದಿನ ಇರುವುದು ಎಂದು ಇತಿಹಾಸ ಗ್ರಂಥದಲ್ಲಿ ಬರೆಯಲಾಗಿದೆ. ಶೇರೂ ಉಯ್ಯಾವು

ತನ್ನ ತಂದೆಯಾದ ಪರ್ವೇಜ್‌ನನ್ನು ಹತ್ಯೆಗೈದನು. ಆಧರೆ ಅವನೂ ಸಹ ಒಂದು ವರ್ಷದ ಅವಧಿಯಲ್ಲಿಯೇ ಕೊಲ್ಲಲ್ಪಟ್ಟನು. ಇದೇ ತೆರನಾಗಿ ಅಬ್ಬಾಸಿ ಖಲೀಫಾ ಮುಸ್ಸತನ್ಸರ್‌ಬಿಲ್ಲಾನೂ ಸಹ ತನ್ನ ತಂದೆಯಾದ ಮುತ್ವಕ್ಕಲ್ ಬಿಲ್ಲಾನನ್ನು ಕೊಲೆಗೈಯ್ಯಲು ತುರ್ಕಿಗಳ ಜೊತೆ ನೀಡಿದನು. ಹಾಗೂ ಅವನು ಸ್ವತಃ ಒಂದು ವರ್ಷದವರೆಗೆ ಸಿಂಹಾಸನದ ಮೇಲೆ ಕೂಡ್ರಲಿಲ್ಲ.

ದುಷ್ಪರಿಣಾಮ :

ಮಿರ್ಜಾ ಅಬ್ದುಲ್ ಲತೀಫ್ ಬಿನ್ ಮಿರ್ಜಾ ಅಲಗ ಬೇಗ್ ಬಿನ್ ಮಿರ್ಜಾ ಷಾಹ್‌ದುಖ್ ಬಿನ್ ಅಮೀರ್ ತೈಮೂರ್‌ನೂ ಸಹ ತನ್ನ ತಂದೆಗೆ ಮೋಸಗೊಳಿಸಿದನು. ಹಾಗೂ ಅಲಗ ಬೇಗ್‌ನಂಥಹ ಚತುರ, ಅವನಿಗೆ ಅವನೇ ಸಾಟಿಯಾದ. ವಿದ್ವಾಂಸನನ್ನು ಸಹ ಕೊಲೆಗೈಯ್ಯಲಾಯಿತು. ಆದರೆ ಅದರ ಪರಿಣಾಮವೂ ಒಳ್ಳೆಯದಾಗಲಿಲ್ಲ. ಹಾಗೂ ಅವನೂ ಸಹ ಆರು ತಿಂಗಳ ಅಲ್ಪಾವಧಿಯೂ ಆಡಳಿತ ನಡೆಸಲಾಗಲಿಲ್ಲ. ಹೀಗೆಯೇ ಇಂಥಹ ಘಟನೆಯು ಮೀರಾ ಹುಸೈನ್‌ನೊಂದಿಗೆ ಜರುಗಿತು. ಉಪರೋಕ್ತ ಘಟನೆಗಳಿಂದ ಸ್ಪಷ್ಟಗೋಚರವಾಗುತ್ತದೆ ಏನೆಂದರೆ ಯಾರು ತನ್ನ ತಂದೆಯ ಜೀವವನ್ನು ಬಲಿ ತಗೆದುಕೊಂಡು ಅಧಿಕಾರ ಗ್ರಹಿಸಿದನೋ ಅದು ಅವನ ಜೀವಕ್ಕೂ ಕಂಟಕವಾಯಿತು. ಮೀರಾ ಹುಸೈನ್‌ನು ತನ್ನ ತಂದೆ ಮುರ್ತುಜಾ ನಿಜಾಮಷಾಹನನ್ನು ಹತ್ಯೆಗೈದನು ಹಾಗೂ ಸ್ವತಃ ತಾನೂ ಸಹ ಒಂದು ವರ್ಷದವರೆಗೂ ಆಡಳಿತವನ್ನು ನಡೆಸದಾದನು ಹಾಗೂ ಕೊಲ್ಲಲ್ಪಟ್ಟನು.

■

*

೬. ಬುರ್ಹಾನ್ ನಿಜಾಮುಷಾಹ್‌ನ ಪುತ್ರ ಇಸ್ಮಾಯಿಲ್ ನಿಜಾಮ್‌ಷಾಹ್

ಬುರ್ಹಾನ್ ನಿಜಾಮ್ ಷಾಹ್ ಹಾಗೂ ಆತನ ಪುತ್ರರು :

ಮುರ್ತುಜಾ ನಿಜಾಮ್‌ಷಾಹ್‌ನ ಚರಿತ್ರೆಯಲ್ಲಿ ಉಲ್ಲೇಖಿಸಲಾಗಿದೆ ಏನೆಂದರೆ ಬುರ್ಹಾನ್‌ಷಾಹ್ ಬಿನ್ ಹುಸೈನ್ ನಿಜಾಮುಷಾಹ್‌ನು "ಖಾಕರ್" ನ ಕೋಟೆಯಲ್ಲಿ ಬಂಧಿತನಾಗಿದ್ದನು. ಆತನು ಹೀಗೆ ವಿಚಾರ ಮಾಡಿ ಮುರ್ತುಜಾ ನಿಜಾಮುಷಾಹ್‌ನ ದೇಹಾಂತವಾಗಿದೆ ಅಥವಾ ಅವನು ಹುಚ್ಚನಾಗಿರುವನು ಎಂದು ಬಗೆದು ಅಹ್ಮದ್‌ನಗರದ ಮೇಲೆ ಆಕ್ರಮಣ ಮಾಡಿದನು. ಆದರೆ ಸೋಲುಂಡು ಷಹೀನ್‌ಷಾಹ್ ಅಕಬರ್‌ನ ಬಳಿ ಹೊರಟು ಹೋದನು. ಬುರ್ಹಾನ್‌ನ ಈರ್ವರು ಪುತ್ರರಿದ್ದರು. ಇಬ್ರಾಹಿಂ ಹಾಗೂ ಇಸ್ಮಾಯಿಲ್ ಇಬ್ರಾಹಿಂನು ಓರ್ವ ಹಬಶಿ ಸ್ತ್ರೀಯಿಂದ ಜನಿಸಿದವನಾಗಿದ್ದನು. ಆ ಕಾರಣಕ್ಕೆಯೇ ಅವನ ಬಣ್ಣವು ಕಪ್ಪು ಹಾಗೂ ಮುಖಚರ್ಯೆಯು ಕುರೂಪವಾಗಿತ್ತು. ಇಸ್ಮಾಯಿಲ್‌ನ ತಾಯಿ ಕೊಂಕಣದ ಓರ್ವ ಅಮೀರನ ಪುತ್ರಿಯಾಗಿದ್ದಳು ಹಾಗೂ ಅವನು ಮುಖಚರ್ಯೆಯಿಂದ ತನ್ನ ಮಲ ಸಹೋದರಿಗಿಂತ ವಿಪರೀತನಾಗಿದ್ದನು. ಅವನ ಮುಖಚರ್ಯೆಯು ಬಹು ಸುಂದರವಾಗಿತ್ತು. ಹಾಗೂ ಆಕರ್ಷಣೀಯವಾಗಿತ್ತು. ಸಲಾಬತ್‌ಖಾನ್‌ನು ಈ ಈರ್ವರು ಅಣ್ಣ ತಮ್ಮಂದಿರನ್ನು "ಖಾಕರ್" ಕೋಟೆಯಲ್ಲಿ ಬಂಧಿಸಿಟ್ಟಿದ್ದನು.

ಇಸ್ಮಾಯಿಲ್‌ನ ಪಟ್ಟಾಭಿಷೇಕ :

ಯಾವಾಗ ಮಿರ್ಜಾಖಾನ್‌ನು ಮೀರಾ ಹುಸೈನ್‌ನನ್ನು ಪದಚ್ಯುತಿಗೊಳಿಸಿದನು. ಆಗ ನಿಜಾಮುಷಾಹೀ ವಂಶದಲ್ಲಿ ಇಬ್ರಾಹಿಂ ಹಾಗೂ ಇಸ್ಮಾಯಿಲ್‌ನ ಹೊರತಾಗಿ ಕಿರೀಟ ಹಾಗೂ ಸಿಂಹಾಸನದ ವಾರೀಸುದಾರರಿರಲಿಲ್ಲ. ಮಿರ್ಜಾಖಾನ್‌ನು "ಖಾಕರ್" ಕೋಟೆಯಿಂದ ಈ ಈರ್ವರು ಅಣ್ಣ ತಮ್ಮಂದಿರನ್ನು ಕರೆಸಿಕೊಂಡನು. ಹಾಗೆ ನೋಡಿದರೆ

ಒಂದು ವೇಳೆ ಇಬ್ರಾಹಿಂನು ಹಿರಿಯನಾಗಿದ್ದನು. ಆದರೆ ಮಿರ್ಜಾಖಾನ್‌ನು ಬಾದಷಾಹ್‌ನ ಪಟ್ಟಕ್ಕೆ ಇಸ್ಮಾಯಿಲ್‌ನನ್ನು ಯೋಗ್ಯನೆಂದು ಬಗೆದನು ಹಾಗೂ ಅವನದೇ ಹೆಸರಿನ "ಖುತ್ಬಾ" ಹಾಗೂ ಮುದ್ರೆ ಜಾರಿಗೊಳಿಸಿದನು.

ಮೆಹದ್ವಿ ಮತ ಹಾಗೂ ಇಸ್ಮಾಯಿಲ್ :

ಜಮಾಲ್‌ಖಾನ್‌ನು ಯಾವಾಗ ಪೂರ್ಣ ಪ್ರಮಾಣದಲ್ಲಿ ಅಧಿಕಾರವನ್ನು ಹೊಂದಿದನೋ ಆಗ ಅವನೂ ಸಹ ಇಸ್ಮಾಯಿಲ್‌ಷಾಹ್‌ನ ಬಾದಷಾಹ್ ಪಟ್ಟವನ್ನು ಒಪ್ಪಿಕೊಂಡನು. ಜಮಾಲ್‌ಖಾನ್‌ನ ಸಂಬಂಧವು 'ಮೆಹದ್ವಿ' ಮತದೊಂದಿಗಿತ್ತು. ಆತನು ಬಾದಷಾಹ್‌ನ ಅಪರ ವಯಸ್ಕತೆಯ ಅವಕಾಶವನ್ನು ಉಪಯೋಗ ಪಡಿಸಿಕೊಂಡು ತನ್ನಂತೆ ಆತನನ್ನು ಸಹ 'ಮೆಹದ್ವಿ' ಮತಾವಲಂಬಿಯನ್ನಾಗಿಸಿದನು. ಹಾಗೂ ಬಾರಾ ಇಮಾಮ್‌ರ ಹೆಸರಿನ ಖುತ್ಬಾಗಳನ್ನು ತೆಗೆಯಿಸಿದನು. ಓದುಗರು ಇದನ್ನು ಚೆನ್ನಾಗಿ ತಿಳಿದಿರುವರು. ಏನೆಂದರೆ ಮೆಹದ್ವಿಯ ಪಂಥವು ಸೈಯದ್ ಮೊಹಮ್ಮದ ಜೋನ್‌ಪುರಿಯಿಂದ ಸಂಬಂಧ ಹೊಂದಿದೆ. ಆತನು ಹಿಜ್ರಿ ಶಕೆ ೯೬೦ ರಲ್ಲಿ ತಾನು ಮೆಹದಿಯಾಗಿರುವನೆಂದು ಘೋಷಿಸಿದ್ದನು. ಸೈಯ್ಯದ್ ಸಾಹೇಬ್‌ನಲ್ಲಿ ಹಜ್ರತ್ ಇಮಾಮ್ ಮೆಹದಿ ಆಖಿರುಜ್ಜಮರ ಕೆಲವು ಲಕ್ಷಣಗಳು ಕಂಡು ಬರುತ್ತಿದ್ದವು. ಆ ಕಾರಣಕ್ಕೆ ಕೆಲಜನರು ಆತನ ಘೋಷಣೆಯನ್ನು ನಂಬಿದರು. ಸೈಯ್ಯದ್ ಸಾಹೇಬ್‌ರ ಜೀವನ ಚರಿತ್ರೆಯು ಪ್ರಸಿದ್ಧವಾಗಿರುವುದು. ಆದುದರಿಂದ ಇತಿಹಾಸಕಾರನು ಅದೆಲ್ಲವನ್ನು ಬಿಟ್ಟು ಮುಖ್ಯ ವಿಷಯಕ್ಕೆ ಬರುವನು.

ಮೆಹದ್ವಿ ಪಂಥದವರ ಸಮರ್ಪಣಾ ಭಾವ :

ಇಸ್ಮಾಯಿಲ್‌ಷಾಹ್‌ನ ಆಡಳಿತಾವಧಿಯಲ್ಲಿ ಇಡೀ ಭಾರತದಿಂದ ಮೆಹದ್ವಿ ಪಂಥದ ಅನುಯಾಯಿಗಳು ಅಹ್ಮದ್‌ನಗರಕ್ಕೆ ಬಂದು ಬಾದಷಾಹ್‌ನ ಸುತ್ತ ಸೇರಿಕೊಂಡರು. ಈ ಜನರು ಇಸ್ಮಾಯಿಲ್‌ನ ವಿಧೇಯ ಹಾಗೂ ನಂಬಿಗಸ್ತ ಹಾಗೂ ಅವನಿಗಾಗಿ ಪ್ರಾಣವನ್ನು ನೀಡಲೂ ಹಿಂಜರಿಯದ ಜನರಾಗಿದ್ದರು. ಆತನಿಗೆ ತನ್ನ ಪಂಥದ ಖಲೀಫಾ ಎಂದು ತಿಳಿಯುತ್ತಿದ್ದರು. ಇಸ್ಮಾಯಿಲ್‌ನ ಆಡಳಿತದ ಪ್ರಾರಂಭದ ದಿನಗಳಲ್ಲಿ ಸಲಾಬತ್‌ಖಾನ್‌ನು ಯಾವನು 'ಬರಾರ್' ಸರಹದ್ದಿನಲ್ಲಿ ಕೈದಿಯಾಗಿದ್ದನು. ಮೀರಾಹುಸೈನ್‌ನ ಕೊಲೆಯ ಸುದ್ದಿಯನ್ನು ಕೇಳಿ ಹಾಗೂ ಬಂಧನಮುಕ್ತನಾಗಿ ಅಲ್ಲಿಂದ ಹೊರಬಿದ್ದನು.

ಸಲಾಬತ್‌ಖಾನ್ ಹಾಗೂ ದಿಲಾವರ್‌ಖಾನ್‌ರ ಅಹ್ಮದ ನಗರದ ವಿಜಯಕ್ಕೆ ಅಚಲ ನಿರ್ಧಾರ :

ಬರಾರ್‌ದ ಅಮೀರರು ಮೆಹದ್ವಿ ಪಂಥದ ಅಧಿಕಾರದ ಕಾರಣದಿಂದಾಗಿ ಬಹಳೇ ನೊಂದುಕೊಂಡಿದ್ದರು. ಈ ಅಮೀರರು ಸಲಾಬತ್‌ಖಾನ್‌ನ ಜೊತೆ ನೀಡಿದರು.

ಹಾಗೂ ಆತನ ಸಹವರ್ತಿಗಳಾಗಿ ಅಹ್ಮದ್‌ನಗರಕ್ಕೆ ಹೊರಟರು. ಮತ್ತೊಂದೆಡೆಗೆ ದಿಲಾವರ್‌ಖಾನ್‌ನು ಸಹ ಇಬ್ರಾಹಿಂ ಆದಿಲ್‌ಷಾಹ್‌ನಿಂದ ಅನುಮತಿ ಪಡೆದು ಅಹ್ಮದ್‌ನಗರವನ್ನು ಜಯಗೊಳಿಸುವ ಇಚ್ಛೆ ಮಾಡಿದನು. ಹಾಗೂ ಬಿಜಾಪುರದಿಂದ ಹೊರಟನು. ಜಮಾಲ್‌ಖಾನ್‌ನು ತನ್ನ ಪಂಥದ ಜನರ ಶಕ್ತಿಯನ್ನು ನಂಬಿ ಸಲಾಬತ್‌ಖಾನ್ ಹಾಗೂ ದಿಲಾವರ್‌ಖಾನ್‌ರೀರ್ವರನ್ನು ಎದುರಿಸಲು ನಿಶ್ಚಯಿಸಿದನು.

ಸಿಲಾಬತ್‌ಖಾನ್ ಹಾಗೂ ಜಮಾಲ್‌ಖಾನ್‌ರ ನಡುವೆ ಯುದ್ಧ

ಜಮಾಲ್‌ಖಾನ್‌ನು ಮೊದಮೊದಲು ಬಾದಷಾಹ್‌ನನ್ನು ಜೊತೆಗೆ ತೆಗೆದುಕೊಂಡು ಸಲಾಬತ್‌ಖಾನ್ ನನ್ನು ಎದುರಿಸಲು ಹೊರಟನು. ಪಟ್ಟಣದ ಸಮೀಪ ಪರಸ್ಪರರ ಮುಖಾಮುಖಿಯಾಯಿತು. ಬಹಳೇ ಭಯಂಕರ ರೂಪದ ಯುದ್ಧ ನಡೆಯಿತು. ಇದರ ಪರಿಣಾಮದಲ್ಲಿ ಜಮಾಲ್‌ಖಾನ್‌ನಿಗೆ ಗೆಲುವು ಲಭಿಸಿತು. ಸಲಾಬತ್‌ಖಾನ್‌ನು ಸೋಲುಂಡು ಬುರ್ಹಾನ್‌ಪುರದ ಅಸೀರದತ್ತ ಓಡಿ ಹೋದನು.

ಆದಿಲ್‌ಷಾಹಿಗಳೊಂದಿಗೆ ಸಂಧಾನ :

ಅದರ ನಂತರ ಜಮಾಲ್‌ಖಾನ್‌ನು ಆದಿಲ್‌ಷಾಹಿ ಸೈನ್ಯವನ್ನು ಎದುರಿಸುವ ನಿರ್ಧಾರ ಮಾಡಿದನು. ಆಷ್ಟೀ ಪಟ್ಟಣದ ಬಳಿ ಪರಸ್ಪರರು ಎದುರು ಬದುರಾದರು. ಹದಿನೈದು ದಿನಗಳವರೆಗೆ ಎರಡೂ ಸೈನ್ಯಗಳು ಮುಖಾಮುಖಿಯಾಗಿ ನಿಂತವು ಆದರೆ ಯುದ್ಧದ ಆರಂಭವು ಯಾರ ಕಡೆಯಿಂದಲೂ ಆಗಲಿಲ್ಲ. ಕೊನೆಗೆ ಕೆಲಜನರು ಮಧ್ಯವಹಿಸಿದರು. ಹಾಗೂ ಸಂಧಾನ ಪ್ರಕ್ರಿಯೆ ನಡೆದು ಇದನ್ನು ನಿರ್ಧರಿಸಲಾಯಿತು. ಏನೆಂದರೆ ಜಮಾಲ್‌ಖಾನ್ ಮೀರಾಹುಸೈನ್‌ನ ಪಲ್ಲಕ್ಕಿ ಹಾಗೂ ೭೦ ಸಾವಿರ ಹವನ್ ಆದಿಲ್‌ಷಾಹಿಗಳಿಗೆ ನೀಡಬೇಕು. ಜಮಾಲ್‌ಖಾನ್‌ನು ಈ ಷರತ್ತನ್ನು ಪೂರ್ತಿಗೊಳಿಸಿದನು. ಹಾಗೂ ಅಹ್ಮದ್‌ನಗರಕ್ಕೆ ಮರಳಿದನು.

ವಿದೇಶಿಗರನ್ನು ಹೊರದೂಡುವಿಕೆ :

ಜಮಾಲ್‌ಖಾನ್‌ನು ಈದುಲ್ ಫಿತ್ರ (ರಂಜಾನ್ ಹಬ್ಬ) ದಂದು ಮುನ್ನೂರು ವಿದೇಶಿಗರನ್ನು (ಯಾರು ಫರ್ಹಾದ್‌ಖಾನ್‌ನ ಪ್ರಯತ್ನದಿಂದ ಉಳಿದುಕೊಂಡಿದ್ದರು) ಅಹ್ಮದ್‌ನಗರದಿಂದ ಹೊರದಬ್ಬಿದನು. ಹಾಗೂ ಈ ಅಸಹಾಯಕರು ಬಿಜಾಪುರದತ್ತ ಹೊರಟರು. ಈ ನಿರ್ಗತಿಕರ ಸ್ಥಿತಿಯನ್ನು ದಿಲಾವರ್‌ಖಾನ್‌ನು ಇಬ್ರಾಹಿಂ ಆದಿಲ್‌ಷಾಹ್‌ನೊಂದಿಗೆ ವಿವರಿಸಿದನು. ಹಾಗೂ ಅವರನ್ನು ಈತನು ಷಾಹೀ ಸೇವಕರ ತಂಡದಲ್ಲಿ ಸೇರಿಸಿಕೊಂಡನು. ಈಗಲೂ ಸಹ ಈ ಎಲ್ಲ ಅಸಹಾಯಕರು ಬಿಜಾಪುರದಲ್ಲಿಯೇ ಇರುವರು.

ಬಿಜಾಪುರದಲ್ಲಿ ಇತಿಹಾಸಕಾರ ಫರಿಶ್ತಾ :

ಇತಿಹಾಸಕಾರ ಫೆರಿಶ್ತಾನು ವಿದೇಶಿಗರ ಗುಂಪಿನೊಂದಿಗೆ ೧೯ ಸಫರ ಹಿಜ್ರಿ ಶಕೆ ೯೯೮ ರಲ್ಲಿ ಅಹ್ಮದ್‌ನಗರದಿಂದ ಬಿಜಾಪುರಕ್ಕೆ ಆಗಮಿಸಿದನು. ದಿಲಾವರ್‌ಖಾನ್‌ನ ಮಧ್ಯಸ್ತಿಕೆಯಿಂದಾಗಿ ಬಾದಷಾಹ್‌ನ ಸಾಮೀಪ್ಯದ ಸಂದರ್ಭ ಲಭಿಸಿತು. ಹಾಗೂ ನನಗೆ ಷಾಹೀ ಸೇವಕರಲ್ಲಿ ಸೇರ್ಪಡೆಗೊಳಿಸಲಾಯಿತು. ಇಂದಿನವರೆಗೂ ಘನತೆವೆತ್ತ ಬಾದಷಾಹನ ದರ್ಬಾರಿನೊಂದಿಗೆ ಸಂಬಂಧದಲ್ಲಿರುವೆನು.

ಸಲಾಬತ್‌ಖಾನ್‌ನ ನಿಧನ :

ಈ ಸಮಯದಲ್ಲಿ ಸಲಾಬತ್‌ಖಾನ್‌ನ ವಯಸ್ಸು ಎಪ್ಪತ್ತು ವರ್ಷದ್ದಾಗಿತ್ತು. ಆತನು ಬದುಕಿನ ಕೊನೆಯ ಘಟ್ಟದಲ್ಲಿದ್ದನು. ಈ ಸ್ಥಿತಿಯನ್ನು ಗಮನಿಸಿ ಇಸ್ಮಾಯಿಲ್ ನಿಜಾಮಷಾಹನಿಂದ ಆತನು ಜಮಾಲ್‌ಖಾನ್‌ನ ಸಲುವಾಗಿ ಒಂದು ಪತ್ರವನ್ನು ಪಡೆದುಕೊಂಡನು. ಹಾಗೂ ಬುರ್ಹಾನ್‌ಪುರ ಆಸೀರನಿಂದ ಅಹ್ಮದ್‌ನಗರಕ್ಕೆ ಬಂದನು. ಸಲಾಬತ್‌ಖಾನ್‌ನು ಯಾವ ಹುದ್ದೆಯನ್ನೂ ಸ್ವೀಕರಿಸಲಿಲ್ಲ. ಹಾಗೂ ತಾನು ಪೋಷಿಸಿದ ಟಪಕಾಪುರ ಗ್ರಾಮದಲ್ಲಿ ವಾಸಿಸತೊಡಗಿದನು. ಹಾಗೂ ಕೊನೆಯವರೆಗೂ ಅಲ್ಲಿಯೇ ಇದ್ದನು. ಅದೇ ವರ್ಷ ೯೯೮ ಹಿಜ್ರಿಯಲ್ಲಿ ಆತನು ಕೊನೆಯುಸಿರೆಳೆದನು. ಹಾಗೂ ತಾನೇ ಸ್ವತಃ ಕಟ್ಟಿಸಿದ ಗೋರಿಯಲ್ಲಿ ದಫನಗೊಂಡನು. ಸಲಾಬತ್‌ಖಾನ್‌ನ ವಂಶಸ್ಥನಾಗಿ ಆತನ ಪುತ್ರನಾದ ಮುರ್ತುಜಾ ಖುಲಿಯು ಇರುವನು. ಯಾರು ಇಂದು ಮುರ್ತುಜಾಷಾಹ್ ಬಿನ್ ಷಾಹ್ ಅಲಿಯ ದರ್ಬಾರಿನಲ್ಲಿ ಸೇವಕನಾಗಿರುವನು.

ಬುರ್ಹಾನ್‌ಷಾಹ್‌ನಿಗೆ ಅಕಬರ್‌ನ ಸಲಹೆ :

ಯಾವಾಗ ಅಕಬರ್ ಬಾದಷಾಹ್‌ನು ಇಸ್ಮಾಯಿಲ್ ನಿಜಾಮಷಾಹ್‌ನ ಪಟ್ಟಾಭಿಷೇಕದ ಸುದ್ದಿಯನ್ನು ಕೇಳಿದನೋ ಆತನು ಬುರ್ಹಾನ್ ಷಾಹ್‌ನಿಗೆ ತನ್ನ ಜಾಗೀರು ಪ್ರದೇಶವಾದ ಬನಕಷ್ (ಯಾವುದು ಕಾಬೂಲ್ ಹಾಗೂ ಸಿಂದ್‌ದ ನಡುವೆ ಇರುವುದು) ದಿಂದ ತನ್ನ ಬಳಿ ಕರೆಯಿಸಿಕೊಂಡನು ಹಾಗೂ ಹೀಗೆಂದನು. "ಅಹ್ಮದ್‌ನಗರದ ನಿಜವಾದ ವಾರೀಸುದಾರ ನೀನೇ ಆಗಿದ್ದೀಯಾ. ಅದಕ್ಕಾಗಿ ನಾನು ಈ ಪ್ರದೇಶವನ್ನು ನಿನಗೆ ನೀಡುವೆನು. ಈ ಪ್ರದೇಶವನ್ನು ಗೆಲ್ಲಲು ಎಷ್ಟು ಸೈನ್ಯದ ಸಹಾಯ ಬೇಕಾದರೂ ನಿನ್ನೊಂದಿಗೆ ತೆಗೆದುಕೊಂಡು ಹೊರಡು ಹಾಗೂ ನಿನ್ನ ಪುತ್ರನನ್ನು ಪದಚ್ಯುತಿಗೊಳಿಸಿ ಆಡಳಿತಾಧಿಕಾರವನ್ನು ನಿನ್ನ ಕೈಯಲ್ಲಿ ತೆಗೆದುಕೊ".

ಬುರ್ಹಾನ್‌ಷಾಹ್‌ನ ಉತ್ತರ :

ಬುರ್ಹಾನ್‌ನು ಬಾದಷಾಹನೊಂದಿಗೆ ಹೀಗೆ ಹೇಳಿದನು. "ದಖ್ಖನ್ನಿನವರು ಯಾವಾಗ ಷಾಹೀ ಸೈನ್ಯವನ್ನು ನನ್ನೊಂದಿಗೆ ನೋಡುವರು ಆಗ ವಿಧವಿಧವಾದ ತಪ್ಪು ನಂಬಿಕೆಗಳಲ್ಲಿ ತೊಡಗುವರು. ಹಾಗೂ ನನ್ನ ಜೊತೆಗೆ ಕೆಟ್ಟದಾಗಿ ನಡೆದುಕೊಳ್ಳುವರು.

ಒಂದು ವೇಳೆ ಖಾವಂದರ ಆಜ್ಞೆಯಾದರೆ ನಾನು ಓರ್ವನೇ ದಖ್ಖನ್ನಿನ ಕಡೆಗೆ ಹೋಗುವೆನು ಹಾಗೂ ನಮ್ರನಾಗಿದ್ದು ದಖ್ಖನ್ನಿನವರಿಗೆ ಹಿತೈಷಿಗಳನ್ನಾಗಿಸಿಕೊಂಡು ನನ್ನ ಪೂರ್ವಜರ ಪ್ರದೇಶವನ್ನು ವಶಪಡಿಸಿಕೊಳ್ಳುವೆನು. ಬಾದಶಾಹನು ಬುರ್ಹಾನ್‌ನ ಈ ಅಭಿಪ್ರಾಯವನ್ನು ಮೆಚ್ಚಿದನು.

ದಖ್ಖನ್ನಿಗೆ ಹೊರಡುವಿಕೆ :

ಅಕಬರ್ ಬಾದಶಾಹ್‌ನು ಬುರ್ಹಾನ್‌ಷಾಹ್‌ನಿಗೆ ಪರಗಣ, ಹಂಡಿಯಾ, ಜಾಗೀರು ರೂಪದಲ್ಲಿ ನೀಡಿದನು. ಹಕೀಂ ಅಸೀರ್‌ದ ರಾಜಾ ಅಲಿಯ ಹೆಸರಿನಲ್ಲಿ ಈ ಸಾರಾಂಶವುಳ್ಳ ಒಂದು ಫರಮಾನು ಕಳುಹಿಸಿದನು. ಏನೆಂದರೆ ಬುರ್ಹಾನ್‌ಷಾಹ್‌ನ ಸಹಾಯ ಮಾಡುವಲ್ಲಿ ಯಾವುದೇ ರೀತಿಯ ಕೊರತೆ ಮಾಡಬಾರದು. ಬುರ್ಹಾನ್‌ಷಾಹ್‌ನು ಪ್ರಯಾಣ ಮುಂದುವರೆಸುತ್ತಾ ದಖ್ಖನ್ನಿನ ಸರಹದ್ದಿನ ಮೇಲೆ ತಲುಪಿದನು ಹಾಗೂ ಹಂಡಿಯಾ ಗ್ರಾಮದಲ್ಲಿ ಉಳಿದನು. ಆತನು ನಿಜಾಮಷಾಹೀ ಪ್ರಾಂತ್ಯದ ಜಮೀನ್ದಾರರ ಹಾಗೂ ಸರದಾರರ ಹೆಸರಿನಲ್ಲಿ ಸಂಧಾನಪತ್ರಗಳನ್ನು ಕಳುಹಿಸಿದನು. ಅವರು ತನಗೆ ವಿಧೇಯರಾಗಿರಲು ಉತ್ತೇಜಿಸಿದನು. ಈ ಜಮೀನ್ದಾರರು ಬುರ್ಹಾನ್‌ಷಾಹನ ಆಗಮನಕ್ಕೆ ಸಂತಸ ವ್ಯಕ್ತಪಡಿಸಿದರು. ಹಾಗೂ ಆತನಿಗೆ ಜೊತೆ ನೀಡುವ ವಾಗ್ದಾನ ಮಾಡಿದರು.

ಬುರ್ಹಾನ್‌ಷಾಹ್ ಹಾಗೂ ಜಹಾಂಗೀರ್‌ಖಾನ್ ಹಬ್ಷಿಗಳ ನಡುವೆ ಜಟಾಪಟಿ :

ಬುರ್ಹಾನ್‌ಷಾಹ್‌ನು ಕೆಲ ಸವಾರರನ್ನು ಜೊತೆಗೆ ಕರೆದುಕೊಂಡು ಕುಂದವಾನಾದ ಮಾರ್ಗದ ಮೂಲಕ ಬರಾರ್ ಪ್ರವೇಶಿಸಿದನು. ಜಹಾಂಗೀರ್‌ಖಾನ್ ಹಬಶಿ (ಯಾರು ಸರಹದ್ದಿನ ಅಮೀರನಾಗಿದ್ದನು) ಯು ವಚನಭ್ರಷ್ಟನಾದನು. ಹಾಗೂ ಯುದ್ಧಕ್ಕೆ ಸಿದ್ಧನಾದನು. ಪರಸ್ಪರರ ಯುದ್ಧಕ್ಕಿಳಿದರು. ಬುರ್ಹಾನ್‌ಷಾಹ್‌ನಿಗೆ ಸೋಲುಂಟಾಯಿತು. ಚುಗ್ತಾಯಿಖಾನ್ ಹೆಸರಿನ ಓರ್ವ ಅಮೀರನು ಕೊಲ್ಲಲ್ಪಟ್ಟನು. ಬುರ್ಹಾನ್ ನಿಜಾಮಷಾಹನು ದುರ್ಗತಿಯನ್ನನುಭವಿಸುತ್ತಾ ಹಂಡಿಯಾಕ್ಕೆ ಮರಳಿದನು.

ಸೈನ್ಯದ ಜಮಾವಣೆ :

ಬುರ್ಹಾನ್‌ಷಾಹ್‌ನು ಹಗಲಿರುಳೂ ಅಹ್ಮದ್‌ನಗರವನ್ನು ವಶಪಡಿಸಿಕೊಳ್ಳುವ ಕುರಿತು ಯೋಚಿಸುತ್ತಿದ್ದನು. ಕೊನೆಗೆ ಒಂದು ಸಮಯ ಬಂದಿತು. ರಾಜಾ ಅಲಿಖಾನ್ ಹಾಗೂ ಇಬ್ರಾಹಿಂ ಆದಿಲ್‌ಷಾಹಿಯು ಆತನ ಸಹಾಯಕ್ಕೆ ಸಿದ್ಧರಾದರು. ಬುರ್ಹಾನ್ ಹಂಡಿಯಾದಿಂದ ಬರಾರ್‌ಕ್ಕೆ ಹೊರಟು ಹೋದನು. ಹಾಗೂ ಸೈನ್ಯವನ್ನು ಸಿದ್ಧಗೊಳಿಸತೊಡಗಿದನು. ಜಮಾಲ್‌ಖಾನ್‌ನಿಗೆ ಯಾವಾಗ ಇದರ ಸುದ್ದಿಯು ತಲುಪಿತೋ ಆಗ ಅವನು ಹತ್ತುಸಾವಿರ ಮೆಹದ್ವಿಗಳನ್ನು ಸೇರಿಸಿ ಅವರಿಂದ ಸಲಹೆ ಪಡೆದನು.

ಮೆಹದ್ವಿಗಳ ತೀರ್ಮಾನ :

ಮೆಹದ್ವಿಗಳು ಈ ತೀರ್ಮಾನಕ್ಕೆ ಬಂದರು ಏನೆಂದರೆ ಸೈಯ್ಯದ್ ಅಮ್ಜದುಲ್‌ಮುಲ್ಕ್ ಮೆಹದ್ವಿ, ಬರಾರಿ ಅಮೀರರನ್ನು ಜೊತೆಗೆ ತೆಗೆದುಕೊಂಡು ಬುರ್ಹಾನ್‌ಷಾಹ್ ಹಾಗೂ ರಾಜಾ ಅಲಿಖಾನ್‌ನನ್ನು ಎದುರಿಸುವುದು ಹಾಗೂ ಜಮಾಲ್‌ಖಾನ್ ಆದಿಲ್‌ಷಾಹಿಗಳ ಎದುರು ಬರಬೇಕು. ಈ ತೀರ್ಮಾನದಂತೆ ಜಮಾಲ್‌ಖಾನ್‌ನು ಇಸ್ಮಾಯಿಲ್‌ಷಾಹ್‌ನನ್ನು ಜೊತೆಗೆ ಕರೆದುಕೊಂಡನು ಹಾಗೂ ಆದಿಲ್‌ಷಾಹ್‌ನನ್ನು ಎದುರಿಸಲು ಹೊರಟನು.

ಆದಿಲ್‌ಷಾಹಿ ಸೈನ್ಯದ ಸೋಲು :

ದಾರೆಸಂಗ್ ಹೆಸರಿನ ಗ್ರಾಮದಲ್ಲಿ ಪರಸ್ಪರರ ಮುಖಾಮುಖಿಯಾಯಿತು. ಮೆಹದ್ವಿಗಳು ಶೌರ್ಯ ಹಾಗೂ ಧೈರ್ಯದ ಅನುಪಮ ಪ್ರದರ್ಶನ ನೀಡಿದರು. ಆದಿಲ್‌ಷಾಹಿ ಸೈನ್ಯಕ್ಕೆ ಸೋಲುಂಟಾಯಿತು. ಹಾಗೂ ಜಮಾಲ್‌ಖಾನ್‌ನು ಮೂರುನೂರು ಆದಿಲ್‌ಷಾಹಿ ಆನೆಗಳನ್ನು ತನ್ನ ವಶದಲ್ಲಿ ತೆಗೆದುಕೊಂಡನು.

ಜಮಾಲ್‌ಖಾನ್‌ನ ಬರಾರ್‌ಕ್ಕೆ ಹೊರಡುವಿಕೆ :

ಈ ಘಟನೆ ನಡೆದ ನಾಲ್ಕನೆಯ ದಿನಕ್ಕೆ ಈ ಸುದ್ಧಿಯು ತಲುಪಿತು. ಆದಿಲ್‌ಷಾಹ್ ಹಾಗೂ ರಾಜಾ ಅಲಿಖಾನ್‌ನ ಪ್ರಯತ್ನದಿಂದ ಬರಾರಿ ಅಮೀರರು ಬುರ್ಹಾನ್‌ಷಾಹ್‌ನಿಗೆ ವಿಧೇಯರಾಗಿದ್ದಾರೆ ಹಾಗೂ ಸರಹದ್ದಿನಲ್ಲಿ ಅವನನ್ನು ಭೇಟಿ ಮಾಡಿದ್ದಾರೆ. ಈ ಸುದ್ದಿಯನ್ನು ಕೇಳಿದ ಕೂಡಲೇ ಜಮಾಲ್‌ಖಾನ್‌ನು ಅತ್ಯಂತ ಗೌರವ ಘನತೆಯೊಂದಿಗೆ ಬರಾರ್‌ದತ್ತ ಹೊರಟನು.

ಆದಿಲ್‌ಷಾಹ್‌ನ ಕಾರ್ಯಾಚರಣೆ :

ರಾಜಾ ಅಲಿಖಾನ್‌ನ ಸಲಹೆಯಂತೆ ಆದಿಲ್‌ಷಾಹ್‌ನು ಜಲಾಲ್‌ಖಾನ್‌ನನ್ನು ಹಿಂಬಾಲಿಸಿದನು. ಹಾಗೂ ಬರ್ಕಿ ಅಮೀರರಿಗೆ ಈ ಆಜ್ಞೆ ನೀಡಿದನು. ಏನೆಂದರೆ ನಿಜಾಮಷಾಹೀ ಸೈನ್ಯವನ್ನು ನಾಲ್ಕೂ ಕಡೆಯಿಂದ ಆಕ್ರಮಿಸಬೇಕು. ಹಾಗೂ ಆಹಾರ ಧಾನ್ಯ ಜೀವನಾವಶ್ಯಕ ವಸ್ತುಗಳನ್ನು ಅವನ ಹತ್ತಿರ ತಲುಪದಂತೆ ನೋಡಿಕೊಳ್ಳಬೇಕು. ಆತನ ಈ ಆಜ್ಞೆಯನ್ನು ಪಾಲಿಸಲಾಯಿತು. ಅದರಿಂದ ಜಮಾಲ್‌ಖಾನ್‌ನ ಬಹಳಷ್ಟು ಜೊತೆಗಾರರು ಆತನಿಂದ ಬೇರೆಯಾಗಿ ಬುರ್ಹಾನ್‌ನೊಂದಿಗೆ ಸೇರಿಕೊಂಡರು.

ಮೆಹದ್ವಿ ಸೈನ್ಯದ ಸಂಕಟ :

ಜಮಾಲ್‌ಖಾನ್‌ನು ತನ್ನ ಮೆಹದ್ವಿ ನಂಬಿಗಸ್ತ ಹಾಗೂ ಜೀವವನ್ನೇ ಒತ್ತೆ ಇಟ್ಟು ಹೋರಾಡುವ ಹಾಗೂ ಅವರ ಸ್ನೇಹಭಾವವನ್ನು ನಂಬಿ ಬಹಳೆ ಘನತೆ ಗೌರವದೊಂದಿಗೆ ಪ್ರಯಾಣ ಬೆಳೆಸುತ್ತಾ ರೋಹಿಂಗೀರ್‌ಘಾಟಕ್ಕೆ ತಲುಪಿದನು. ಬುರ್ಹಾನ್‌ಷಾಹ್‌ನ

ಜನರು ಘಾಟದ ದಾರಿಯನ್ನು ಮುಚ್ಚಿ ಹಾಕಿದ್ದರು. ಜಮಾಲ್‌ಖಾನ್‌ನು ಮತ್ತೊಂದು ಬೇರೆಯದೇ ಆದ ಹಾದಿಯಿಂದ ಯಾವುದು ಬಹಳೇ ಕಠಿಣ ಹಾಗೂ ತಿರ್ಯಕ್‌ಗಾಮಿಯಾಗಿತ್ತು ಆ ಮೂಲಕ ಬುರ್ಹಾನ್‌ಷಾಹ್‌ನತ್ತ ಮುಂದುವರೆದನು. ಈ ಹಾದಿಯಲ್ಲಿ ನೀರಿನ ಬಹಳ ಕೊರತೆಯಿತ್ತು. ಹಾಗೂ ಬಿಸಿಯಾದ ಗಾಳಿ ಬೀಸುತ್ತಿತ್ತು. ಈ ಕಾರಣದಿಂದ ಜಮಾಲ್‌ಖಾನ್‌ನ ಸೈನಿಕರಿಗೆ ಬಹಳೇ ತೊಂದರೆ ಅನುಭವಿಸಬೇಕಾಯಿತು. ಹಾಗೂ ಗುರಿಯನ್ನು ನಿರ್ಧರಿಸಲು ಬಹಳೇ ಕಷ್ಟಪಡಬೇಕಾಯಿತು.

ನೀರಿನ ಕೊರತೆ :

ಇದೇ ಸಮಯದಲ್ಲಿ ಹೀಗೆ ತಿಳಿದು ಬಂದಿತು. ಮೂರು ಕೋಸ್ ದೂರದಲ್ಲಿ ಒಂದು ಸ್ಥಳವಿರುವುದು. ಅಲ್ಲಿ ಭಾರೀ ಪ್ರಮಾಣದಲ್ಲಿ ನೀರು ಇರುವುದು. ಜಮಾಲ್‌ಖಾನ್‌ನು ತಕ್ಷಣವೇ ಆ ಸ್ಥಳದ ಕಡೆಗೆ ಹೊರಟನು. ಆದರೆ ಅವನು ತಲುಪುವ ಮೊದಲೇ ಬುರ್ಹಾನ್‌ಷಾಹ್ ಹಾಗೂ ಅಲೀಖಾನ್‌ನು ಈ ಸ್ಥಳವನ್ನು ತಮ್ಮ ವಶದಲ್ಲಿ ತೆಗೆದುಕೊಂಡರು. ಜಮಾಲ್‌ಖಾನ್‌ನ ಸೈನಿಕರ ಪರಿಸ್ಥಿತಿಯು ಹದಗೆಟ್ಟಿತು. ಅವರು ದಾರಿಯಲ್ಲಿ ಬರುವ ಅರಣ್ಯದಲ್ಲಿ ನೆಲೆನಿಂತರು.

ನೀರಿನ ಸಂಗ್ರಹ :

ಈ ಸೈನಿಕರು ನೀರನ್ನು ಹುಡುಕುತ್ತಾ ಅತ್ತಿತ್ತ ಓಡಾಡತೊಡಗಿದರು. ಅವರಿಗೆ ಈ ಸುದ್ಧಿ ತಲುಪಿತು. ಸಮೀಪವೇ ಒಂದು ಖರ್ಜೂರಿನ ತೋಟವಿರುವುದು. ಅಲ್ಲಿ ಸಾಕಷ್ಟು ನೀರು ಇರುವುದು. ಈ ಜನರು ಓಡುತ್ತೋಡುತ್ತಾ ಅಲ್ಲಿಗೆ ಹೋದರು. ಹಾಗೂ ಸ್ವಲ್ಪವೇ ನೀರು ಕೈಸೇರಿತು. ಯಾವುದು ಪ್ರಾಣಿಗಳ ಹಾಗೂ ಮನುಷ್ಯರ ನೀರಡಿಕೆ ತೀರಿಸಲು ಕೆಲಸಕ್ಕೆ ಬಂದಿತು.

ಪರಸ್ಪರ ಮುಖಾಮುಖಿ :

ಜಮಾಲ್‌ಖಾನ್‌ನು ಅದೇ ದಿನ ಯುದ್ಧವನ್ನು ನಡೆಸಿ ಈ ಸಮಸ್ಯೆಗೆ ಅಂತ್ಯ ಹಾಡಲು ನಿರ್ಧರಿಸಿದನು. ಆತನು ತನ್ನ ಸೈನ್ಯವನ್ನು ಸಿದ್ಧಗೊಳಿಸಿದನು. ಹಾಗೂ ಬುರ್ಹಾನ್‌ಷಾಹ್ ಮತ್ತು ರಾಜಾ ಅಲಿಖಾನ್‌ರನ್ನು ಎದುರಿಸಲು ೧೩ ರಜ್ಜಬ ೯೯೯ ಹಿಜ್ರಿ ಶಕೆಯಂದು ಹೊರಟನು. ಆದರೆ ಪರಸ್ಪರರ ಸೈನ್ಯದ ನಡುವೆ ಬಹಳ ಅಂತರವಿತ್ತು. ಹಾಗೂ ಅದು ಕಷ್ಟದಾಯಕವಾಗಿತ್ತು. ಆದರೂ ಸಹ ಮೆಹದ್ವಿಗಳು ಹೇಗಾದರೂ ಮಾಡಿ ಈ ಅಂತರವನ್ನು ಕ್ರಮಿಸಿದರು. ಜಮಾಲ್‌ಖಾನ್‌ನು ತನ್ನ ಸಹಧರ್ಮಿ ಸಹೋದರರ ಶಕ್ತಿಯ ಮೇಲೆ ಗರ್ವಿಷ್ಟನಾಗಿ ವೈರಿಯನ್ನೆದುರಿಸಲು ಬಂದನು.

ಇಸ್ಮಾಯಿಲ್ ನಿಜಾಮನ ಓಡಿಹೋಗುವಿಕೆ :

ಎರಡೂ ಕಡೆಯ ಸೈನ್ಯದ ನಡುವೆ ಭೀಕರ ರೂಪದ ಯುದ್ಧ ನಡೆಯಿತು. ಮೆಹದ್ವಿಗಳ ಸೈನ್ಯವು ಅತ್ಯಂತ ಶೌರ್ಯ, ಧೈರ್ಯ, ಸ್ಥೈರ್ಯಗಳ ಪ್ರದರ್ಶನ ನೀಡಿ ವೈರಿಯನ್ನು ಹಿಮ್ಮೆಟ್ಟಿಸಿತು. ಇನ್ನೇನು ಸ್ವಲ್ಪದರಲ್ಲಿಯೇ ಮೆಹದ್ವಿಗಳಿಗೆ ಜಯಲಭಿಸುತ್ತಿತ್ತು. ಆದರೆ ಆಕಸ್ಮಿಕವಾಗಿ ಒಂದು ಗುಂಡು ಜಮಾಲ್‌ಖಾನ್‌ನ ಹಣೆ ಮೇಲೆ ತೂರಿ ಹೋಯಿತು. ಹಾಗೂ ಆತನು ಕುದುರೆಯಿಂದ ಕೆಳಗೆ ಬಿದ್ದನು. ಈ ಪರಿಸ್ಥಿತಿಯನ್ನು ಮನಗಂಡು ಯಾಕೂಬ್‌ಖಾನ್, ಖುದಾವಂದ್‌ಖಾನ್ ಹಬ್ಷಿ, ಹಾಗೂ ಶಿಖಂಡಿ ಸೊಹೇಲ್‌ರು ರಣರಂಗದಲ್ಲಿ ನಿಲ್ಲುವುದು ಉಚಿತವೆಂದು ಭಾವಿಸಲಿಲ್ಲ ಹಾಗೂ ಇಸ್ಮಾಯಿಲ್ ನಿಜಾಮನನ್ನು ಜೊತೆಗೆ ತೆಗೆದುಕೊಂಡು ಓಡಿ ಹೋದರು.

ಬುರ್ಹಾನ್ ನಿಜಾಮ್‌ಷಾಹ್‌ನ ಗೆಲುವು :

ಬುರ್ಹಾನ್ ನಿಜಾಮ್‌ಷಾಹ್‌ನು ಓಡಿ ಹೋಗುವವರನ್ನು ಹಿಂಬಾಲಿಸಿದನು. ಯಾಕೂಬ್‌ಖಾನ್ ಹಾಗೂ ಖುದಾವಂದ್‌ಖಾನ್ ಹಬ್ಷಿಯನ್ನು ಆತನು ಬಂಧಿಸಿದನು. ಹಾಗೂ ಅವರಿಬ್ಬರ ರುಂಡಗಳನ್ನು ಮುಂಡದಿಂದ ಬೇರ್ಪಡಿಸಿದನು. ಸೊಹೇಲ್ ಶಿಖಂಡಿಯು ಇಸ್ಮಾಯಿಲ್ ನಿಜಾಮನಿಗೆ ಒಂದು ಗ್ರಾಮದಲ್ಲಿ ಬಿಟ್ಟನು. ಹಾಗೂ ಸ್ವತಃ ಬಿಜಾಪುರದತ್ತ ಓಡಿ ಹೋದನು. ಬುರ್ಹಾನ್‌ಷಾಹ್‌ನ ಅಮೀರರು ಸೋಹೇಲ್‌ನನ್ನು ಹಿಂಬಾಲಿಸುವುದನ್ನು ಬಿಟ್ಟರು ಹಾಗೂ ಇಸ್ಮಾಯಿಲ್ ನಿಜಾಮನನ್ನು ಆತನ ತಂದೆಯ ಹತ್ತಿರ ಕರೆತಂದರು. ಬುರ್ಹಾನ್‌ಷಾಹ್ ಬಹಳೇ ಸಂತಸಪಟ್ಟನು. ಅವನು ರಾಜಾ ಅಲಿಖಾನ್‌ನನ್ನು ಯಾರು ಆತನನ್ನು ಬಹಳೇ ಸಹಾಯ ಮಾಡಿದ್ದನು. ಆತನಿಗೆ ಕೆಲವು ಆನೆಗಳನ್ನು ಕೊಡುಗೆಯಾಗಿ ನೀಡಿದನು. ಅದರ ನಂತರ ಬುರ್ಹಾನ್ ಅಹ್ಮದ್‌ನಗರಕ್ಕೆ ಹೊರಟನು.

ಇಸ್ಮಾಯಹಿಲ್‌ಷಾಹ್‌ನು ಎರಡು ವರ್ಷದವರೆಗೆ ಆಡಳಿತ ನಡೆಸಿದನು.

■

*

೭. ಹುಸೈನ್ ನಿಜಾಮ್‌ಷಾಹ್ ಪುತ್ರ ಬುರ್ಹಾನ್ ನಿಜಾಮಷಾಹ್

ಬಂಧನದ ದಿನಗಳಲ್ಲಿ :

ಬುರ್ಹಾನ್ ನಿಜಾವ್‌ಷಾಹ್‌ನು ತನ್ನ ಸಹೋದರನಾದ ಮುರ್ತುಜಾ ನಿಜಾಮಷಾಹ್‌ನ ಆಡಳಿತಾವಧಿಯಲ್ಲಿ "ಲಹಾಕರ್" ದಲ್ಲಿ ಬಂದಿಯಾಗಿದ್ದನು. ಆತನ ಜಾಗೀರು ಬಹಳವಿತ್ತು. ಆ ಕಾರಣದಿಂದ ಆತನ ಬದುಕು ತುಂಬಾ ಸುಂದರ ರೀತಿಯಲ್ಲಿ ನಡೆಯುತ್ತಿತ್ತು. ಮುರ್ತುಜಾ ನಿಜಾಮನ ಕಾಲದಲ್ಲಿ ಸಾಹೇಬ್‌ಖಾನ್‌ನ ದುರ್ನಡತೆಯ ಕಾರಣದಿಂದಾಗಿ ಎಲ್ಲಾ ಅಮೀರರು, ಹಾಗೂ ಸೈನ್ಯದ ಸರದಾರರು ಬಾದಷಾಹ್‌ನಿಂದ ಅಸಂತುಷ್ಟರಾಗಿದ್ದರು. ಯಾವಾಗ ಮುರ್ತುಜಾನು ಸಾಹೇಬ್‌ಖಾನ್‌ನ ಜೊತೆ ಹಿಂದೆ ಹಿಂದೆ ಬೀದರ್‌ಕ್ಕೆ ಹೋದನು. ಅಮೀರರು ಅವಕಾಶವನ್ನು ಸದುಪಯೋಗಿಪಡಿಸಿಕೊಂಡು ಬುರ್ಹಾನ್‌ಷಾಹ್‌ನಿಗೆ ಬರೆದರು. "ತಮ್ಮ ಸಹೋದರನು ಪೂರ್ಣ ಪ್ರಮಾಣದಲ್ಲಿ ಹುಚ್ಚನಿದ್ದಾನೆ. ಹಾಗೂ ಬಾದಷಾಹ್‌ನಾಗಿರಲು ಅನರ್ಹನಾಗಿದ್ದಾನೆ. ಒಂದು ವೇಳೆ ತಾವು ಕೋಟೆಯಿಂದ ಹೊರಬಂದರೆ ನಾವೆಲ್ಲರೂ ಎಲ್ಲರೀತಿಯಿಂದಲೂ ತಮಗೆ ಸಹಾಯ ಮಾಡುವೆವು. ಹಾಗೂ ತಮಗೆ ವಿಧೇಯತೆ ತೋರುವೆವು."

ಅಹ್ಮದ್‌ನಗರದಲ್ಲಿ ಬುರ್ಹಾನ್ ನಿಜಾಮಷಾಹ್ :

ಬುರ್ಹಾನ್‌ಷಾಹ್‌ನು ಕೋಟೆಯ ರಕ್ಷಣಾಧಿಕಾರಿಯೊಂದಿಗೆ ಸಂಚು ನಡೆಸಿದನು. ಹಾಗೂ ಹೊರಬಂದನು. ಯಾವಾಗ ಆತನು ಜನೀರ್‌ದ ಬಳಿ ಬಂದನೋ ಆಗ ಆತನ ಸುತ್ತಲೂ ಸುಮಾರು ಐದಾರು ಸಾವಿರ ಸೈನಿಕರು ಸೇರಿಕೊಂಡರು. ಆತನ ತಲೆಯ ಮೇಲೆ ಛತ್ರ ಚಾಮರದ ನೆರಳು ಮಾಡಿದರು. ಮುರ್ತುಜಾ ನಿಜಾಮನಿಗೆ ಈ ಘಟನೆಯ ಕುರಿತು ಯಾವಾಗ ಸುದ್ದಿ ತಲುಪಿತೋ ಆಗ ಆತನು ಬೀದರ್‌ನಲ್ಲಿದ್ದನು.

ತಕ್ಷಣವೇ ಅಹ್ಮದ್‌ನಗರಕ್ಕೆ ಹೊರಟನು. ಮುರ್ತುಜಾ ನಿಜಾಮನ ಆಗಮನಕ್ಕಿಂತ ಒಂದು ದಿನ ಮೊದಲೇ ಬುರ್ಹಾನ್‌ಷಾಹ್‌ನು ಅಹ್ಮದ್‌ನಗರಕ್ಕೆ ಬಂದನು. ಅದೇ ದಿನ ಸಾಯಂಕಾಲದ ಸಮಯದಲ್ಲಿ ಆತನು ಆನೆಯ ಮೇಲೆ ಸವಾರಿ ಮಾಡಿ ಪಟ್ಟಣದ ತುಂಬ ಒಂದು ಸುತ್ತು ಹೊಡೆದನು. ಏಕೆಂದರೆ ಮುರ್ತುಜಾ ನಿಜಾಮನು ಜೀವಂತವಾಗಿಲ್ಲ ಎಂದು ಜನರು ಅರಿಯಲಿ ಎಂಬುದೇ ಆತನ ಉದ್ದೇಶವಾಗಿತ್ತು.

ಮುರ್ತುಜಾ ನಿಜಾಮನ ಆಗಮನ :

ಮುರ್ತುಜಾ ನಿಜಾಮನೂ ಪ್ರಯಾಣವನ್ನು ಮುಂದುವರೆಸುತ್ತಾ ಅಹ್ಮದ್‌ನಗರಕ್ಕೆ ಬಂದನು. 'ನ್ಯಾಮತ್‌ಖಾನ್' ಮಿಠಾಯಿಗಳ ಮಾರುಕಟ್ಟೆಯಲ್ಲಿ ತಲುಪಿ ಜೈನ್‌ಖಾನ್ ಸಮ್‌ನಾನಿ ಔಷಧಿ ಅಂಗಡಿ ಎದುರು ತನ್ನ ಆನೆಯನ್ನು ನಿಲ್ಲಿಸಿದನು. ಹಾಗೂ ಅಂಗಡಿಯವನೊಂದಿಗೆ ಕೇಳಿದನು. "ನಿನ್ನ ಅಂಗಡಿಯಲ್ಲಿ ಏನೇನು ಔಷಧಿಗಳು ಇರುವವು?" ಬಾದಷಾಹ್‌ನು ವಿಚಾರಿಸಿದನು. ಏನು ನಿನ್ನ ಬಳಿ ಹುಚ್ಚು ಹಾಗೂ ಉನ್ಮಾದವನ್ನು ಹೋಗಲಾಡಿಸುವ ಯಾವುದಾದರೂ ಔಷಧವಿದೆಯೇ ? ಅದರ ಉತ್ತರವಾಗಿ ಔಷಧಿ ಅಂಗಡಿಯವನು ಹೀಗೆ ಹೇಳಿದನು. "ನನ್ನ ಹತ್ತಿರ ಎಲ್ಲತೆರನಾದ ಅತಿಸಾರವನ್ನುಂಟು ಮಾಡುವ ಔಷಧಿಗಳಿವೆ".

ಔಷಧಿಯವನೊಂದಿಗೆ ಮಾತುಕತೆ :

ಅದಕ್ಕುತ್ತರವಾಗಿ ಬಾದಷಾಹನು ಹೀಗೆಂದನು "ದೇವನೇ ತಿಳಿದಿದ್ದಾನೆ. ಏನೆಂದರೆ ನಾನು ಹುಚ್ಚನೋ, ಉನ್ಮಾದರೋಗದಿಂದ ಬಳಲುವವನೋ ಅಥವಾ ಫಕೀರರಂತೆ ಏಕಾಂತದಲ್ಲಿ ಇದ್ದು ಆಡಳಿತ ನಡೆಸುವ ಇಚ್ಚೆಯುಳ್ಳವನೋ ಅಥವಾ ನನ್ನ ಸಹೋದರನ ತಲೆ ಕೆಟ್ಟಿದೆಯೋ? ಯಾರು ತನಗೆ ತಾನು ಈ ದುರ್ವಿಧಿಯಲ್ಲಿ ಬಂದಿಯಾಗಿದ್ದಾನೆ." ಜೈನ್‌ಖಾನ್‌ನು ಹೀಗೆಂದನು "ಖಾವಂದ್‌ರು ಬಹಳೇ ನೆಮ್ಮದಿಯಿಂದ ಸಿಂಹಾಸನದ ಮೇಲೆ ಆಸೀನರಾಗಿರುವಿರಿ. ಬುರ್ಹಾನ್‌ಷಾಹ್‌ನು ಹುಚ್ಚನಿರುವನು. ಯಾರು ಅಪನಂಬಿಗೆ ತೋರಿ, ಉಪ್ಪು ತಿಂದ ಮನೆಗೆ ಎರಡು ಬಗೆದು ತಮ್ಮಂತಹ ಉದಾರಿ ಸಹೋದರನ ವಿರುದ್ಧ ಈ ತಪ್ಪು ಕೆಲಸವೆಸಗಿದ್ದಾರೆ. ಮುರ್ತುಜಾ ನಿಜಾಮನು ಔಷಧಿಯವನ ಜೊತೆ ನಡೆದ ಮಾತುಕತೆಯಿಂದ ಬಹಳೇ ಸಂತುಷ್ಟನಾದನು. ಹಾಗೂ ಆತನಿಗೆ ಒಂದು ಸಾವಿರ ಹವನ್‌ಗಳನ್ನು ಬಹುಮಾನ ರೂಪದಲ್ಲಿ ನೀಡಿ ಅಲ್ಲಿಂದ ಹೊರಟನು.

ಬುರ್ಹಾನ್ ನಿಜಾಮ್‌ಷಾಹ್‌ನಿಂದ ಆತನ ಜೊತೆಗಾರರ ಬೇರ್ಪಡುವಿಕೆ :

ಮುರ್ತುಜಾ ನಿಜಾಮಷಾಹ್‌ನು ಪೂರ್ತಿ ಎಂಟು ವರ್ಷದ ನಂತರ ಪ್ರಜೆಗಳೆದುರು ಬಂದನು. ಆತನು ತನ್ನ ಬಹಳಷ್ಟು ಸೇವಕರನ್ನು ಗುರುತಿಸಿ ಮಾತನಾಡಿಸಿದನು. ಆತನು ಪಟ್ಟಣದ ಬೇರೆ ಬೇರೆ ಬೀದಿ ಹಾಗೂ ಮಾರುಕಟ್ಟೆಗಳಲ್ಲಿ ಸುತ್ತು ಹೊಡೆಯುತ್ತಾ

ಕೋಟೆಯಲ್ಲಿ ಆಗಮಿಸಿದನು. ಮರುದಿನ ಬುರ್ಹಾನ್‌ಷಾಹ್‌ನು 'ಬಾಗ್ ಏ ಬಹಿಷ್ತ್' ದಲ್ಲಿ ತಂಗಿದನು. ಮುರ್ತುಜಾ ನಿಜಾಮನ ಆಗಮನದ ಸುದ್ಧಿಯು ಪಟ್ಟಣದ ತುಂಬ ಕಾಡಿನ ಬೆಂಕಿಯಂತೆ ಹಬ್ಬಿತು. ಆ ಕಾರಣಕ್ಕೆ ಬುರ್ಹಾನ್‌ಷಾಹ್‌ನ ಹಲವಾರು ಸಂಗಾತಿಗಳು ಆತನಿಂದ ದೂರವಾದರು.

ಯುದ್ಧದಲ್ಲಿ ಬುರ್ಹಾನ್ ನಿಜಾಮಷಾಹ್‌ನ ಸೋಲು ಹಾಗೂ ಓಡಿಹೋಗುವಿಕೆ :

ಮರುದಿನವೂ ಸಹ ಮುರ್ತುಜಾ ನಿಜಾಮಷಾಹ್‌ನು ಆನೆಯ ಮೇಲೆ ಸವಾರಿ ಮಾಡಿ ಕೋಟೆಯ ಹೊರಗೆ ಮೈದಾನದಲ್ಲಿ ಬಂದನು. ಸುಮಾರು ಹತ್ತು ಸಾವಿರ ಸೈನಿಕರು ಆತನ ಛತ್ರದ ಕೆಳಗೆ ಬಂದು ಸೇರಿದರು. ಬಾದಷಾಹ್‌ನು ಸ್ವತಃ "ಕಾಲಾ ಚಬೂತರಾ" ದ ಸಮೀಪ ನಿಂತನು. ಹಾಗೂ ಸಲಾಬತ್‌ಖಾನ್‌ನನ್ನು ಸೈನ್ಯಾಧಿಕಾರಿಯಾಗಿ ನೇಮಿಸಿ ತೋಪುಗಳ ಹಾಗೂ ಆನೆಗಳ ಜೊತೆಗೆ ಬುರ್ಹಾನ್‌ಷಾಹ್‌ನನ್ನು ಎದುರಿಸಲು ಕಳುಹಿಸಿದನು. 'ಬಾಗ್ ಏ ಬೆಹಿಷ್ತ್' ದ ಬಳಿ ಭೀಕರ ಯುದ್ಧ ನಡೆಯಿತು. ಹಾಗೂ ಬುರ್ಹಾನ್ ಷಾಹ್‌ನು ಸೋಲಿನ ಮುಖ ಕಂಡು ಬಿಜಾಪುರದತ್ತ ಓಡಿ ಹೋದನು.

ಅಹ್ಮದ್‌ನಗರಕ್ಕೆ ಬುರ್ಹಾನ್ ನಿಜಾಮಷಾಹ್‌ನ ಮರಳಿ ಬರುವಿಕೆ :

ಎರಡು ವರ್ಷದ ನಂತರ ಬುರ್ಹಾನ್ ನಿಜಾಮಷಾಹ್‌ನು ಕೆಲವು ಅಮೀರರ ವಿನಂತಿಯ ಮೇರೆಗೆ ದರ್ವೇಷಿಯ ವೇಷದಲ್ಲಿ ಅಹ್ಮದ್‌ನಗರದಲ್ಲಿ ಬಂದನು. ಆತನು ತನ್ನ ಜೊತೆಗಾರರೊಂದಿಗೆ ಸೇರಿ ಹೀಗೆ ನಿರ್ಧರಿಸಿದನು. ಯಾವ ದಿನ ಯಾವಾಗ ಸಲಾಬತ್‌ಖಾನ್‌ನು ದಿವಾನ್‌ಖಾನೆಯಲ್ಲಿ ಕೂತು ಪ್ರಾಂತ್ಯದ ಸಮಸ್ಯೆಗಳನ್ನು ಬಗೆಹರಿಸುತ್ತಿರುವಾಗ ಐದುನೂರು ಸವಾರರು ಒಮ್ಮೆಲೇ ಅವನ ಮೇಲೆ ಆಕ್ರಮಣ ಮಾಡಿ ಆತನ ಕತೆಯನ್ನು ಮುಗಿಸಬೇಕು ಹಾಗೂ ಮುರ್ತುಜಾ ನಿಜಾಮಷಾಹ್‌ನನ್ನು ಯಾರು ಹುಚ್ಚ ನಾಗಿದ್ದಾನೆ ಆತನನ್ನು ಕೊಲೆಗೈದು ಬುರ್ಹಾನ್‌ಷಾಹ್‌ನ ಆಡಳಿತವನ್ನು ಘೋಷಣೆ ಮಾಡಬೇಕು".

ಮರಳುವಿಕೆ :

ಸಲಾಬತ್‌ಖಾನ್‌ನೆದುರು ಈ ಸಂಚಿನ ಕುರಿತ ಸುದ್ಧಿಯು ಸ್ಫೋಟಗೊಂಡಿತು. ಆತನು ಈ ಎಲ್ಲ ಸಂಚುಗಾರನ್ನು ಬಂಧಿಸಿ ಖಡ್ಗದ ರುಚಿ ತೋರಿಸಿದನು. ಅದರ ನಂತರ ಸಲಾಬತ್‌ಖಾನ್‌ನು ಬುರ್ಹಾನ್‌ಷಾಹ್‌ನನ್ನು ಹುಡುಕಲು ಪ್ರಾರಂಭಿಸಿದನು. ಆತನು ಆತನ ಕೈಗೆ ಸಿಗಲಿಲ್ಲ. ಏಕೆಂದರೆ ಬುರ್ಹಾನ್‌ನು ದರ್ವೇಷಿಯ ವೇಷದಲ್ಲಿ ಅತ್ತಿತ್ತ ತಿರುಗುತ್ತಿದ್ದನು. ಈ ಮಾರುವೇಷದಲ್ಲಿ ಆತನನ್ನು ಗುರುತಿಸುವುದು ಅತ್ಯಂತ ಕಠಿಣದ ಕೆಲಸವಾಗಿತ್ತು. ಅಹ್ಮದ್‌ನಗರದಿಂದ ಆತ ಗುಜರಾತಕ್ಕೆ ಹೊರಟು ಹೋದನು.

ಹಾಗೂ ಕುತ್ಬುದ್ದೀನ್ ಮೊಹಮ್ಮದ್‌ಖಾನ್ ಗಜ್ನವಿಯ ಬಳಿ ವಾಸಿಸಿದನು. ಅದರ ನಂತರ ಕೆಲ ದಿನಗಳ ಬಳಿಕ ಅಕಬರ್‌ಬಾದಷಾಹ್‌ನ ಬಳಿ ತಲುಪಿದನು.

ಅಕಬರ್ ಬಾದಷಾಹ್‌ನ ಸೇವೆಯಲ್ಲಿ ಬುರ್ಹಾನ್ ನಿಜಾಮ್ :

ಬುರ್ಹಾನ್‌ನು ಪ್ರಾರಂಭದಲ್ಲಿ ಮೂರು ನೂರು ಜನರ ಮೇಲೆ ಅಮೀರನಾಗಿದ್ದನು. ಆದರೆ ನಂತರ ಯಾವಾಗ ಅವನಿಗೆ 'ಖಾನೆ ಅಜಂ ಕೋಕಾ' ನ ಜೊತೆಗೆ ದಖ್ಖನ್ನಿಗೆ ಕಳುಹಿಸಲಾಗಿತ್ತೋ ಆಗ ಅವನಿಗೆ ಒಂದು ಸಾವಿರ ಸೈನಿಕರ ಮೇಲೆ ಆಡಳಿತಗಾರನನ್ನಾಗಿಸಲಾಯಿತು. ಖಾನ್ ಆಜಂನು ಬಾಲಾಪುರ ತಲುಪಿ ವಿನಾಶಗೈಯ್ಯಲು ಪ್ರಾರಂಭಿಸಿದನು. ಆದರೂ ಸಹ ಉದ್ದೇಶಪೂರ್ತಿಯಾಗಲಿಲ್ಲ ಹಾಗೂ ಆತನು ನಿರಾಶನಾಗಿ ಮರಳಿದನು. ನಂತರ ಅಕಬರ್ ಬಾದಷಾಹ್‌ನು ಬುರ್ಹಾನ್‌ಷಾಹ್‌ನನ್ನು ಸಾದಿಕ್ ಮೊಹಮ್ಮದ್‌ಖಾನ್‌ನೊಂದಿಗೆ ಸಿಂದ್ ನದಿ ಹಾಗೂ ಕಾಬೂಲಿನ ನಡುವೆ ಬರುವ ಪ್ರಾಂತ್ಯಗಳ ಅಫಘಾನಿಗಳನ್ನು ಸದೆಬಡೆಯಲು ಕಳುಹಿಸಿದನು. ಹಾಗೂ 'ಬನ್‌ಕಷ್'ಗ್ರಾಮದ ಜಹಾಗೀರದಾರನನ್ನಾಗಿ ನೇಮಿಸಿದನು.

ದಖ್ಖನ್ನಿಗೆ ಮರಳುವಿಕೆ ಹಾಗೂ ಆಡಳಿತಾಧಿಕಾರ :

ಬುರ್ಹಾನ್‌ಷಾಹ್‌ನ ಪುತ್ರನು ಯಾವಾಗ ಅಹ್ಮದ್‌ನಗರದ ಆಡಳಿತದ ಸಿಂಹಾಸನಾಧೀಶನಾದನೋ ಆಗ ಅಕಬರ್ ಬಾದಷಾಹ್‌ನು ಬುರ್ಹಾನ್‌ನನ್ನು 'ಬಂಕಷ್'ನಿಂದ ಕರೆಯಿಸಿ ದಖ್ಖನ್ನಿನತ್ತ ಕಳುಹಿಸಿದನು. ಹೇಗೆಂದರೆ ಉಪರೋಕ್ತ ನುಡಿಗಳಲ್ಲಿ ವಿವರವಾಗಿ ಹೇಳಿರುವಂತೆ ಆತನು ಆಯುಷ್ಯದ ಕೊನೆಯ ಹಂತದಲ್ಲಿ ಅಹ್ಮದ್‌ನಗರದ ಸಿಂಹಾಸನ ಹಾಗೂ ಕಿರೀಟಿನ ಒಡೆಯನಾದನು.

ಮೆಹದ್ವಿ ಮತದ ಬೇರು ಸಮೇತ ಕಿತ್ತುಹಾಕುವಿಕೆ :

ಬುರ್ಹಾನ್‌ಷಾಹ್‌ನ ಪುತ್ರನ ಆಡಳಿತದಲ್ಲಿ ಮೆಹದ್ವಿ ಮತವು ಅಭಿವೃದ್ಧಿಯಾಗಿ ಎಲ್ಲ ಕಡೆಗೆ ಹಬ್ಬಿತ್ತು. ಪ್ರಾಂತ್ಯದಲ್ಲಿ ಈ ಮತವನ್ನು ಪಾಲಿಸುವವರಿದ್ದರು. ಆದರೆ ಬುರ್ಹಾನ್‌ನು ಈ ನಂಬಿಕೆಯನ್ನು ಸಮೂಲ ಕಿತ್ತಿ ಹಾಕಿದನು. ಮೆಹದ್ವಿ ಮತಾವಲಂಬಿಗಳು ಎಲ್ಲಿ ದೃಷ್ಟಿಗೆ ಬಿದ್ದರೂ ಅವರನ್ನು ಖಡ್ಗದಿಂದ ಶಿಕ್ಷಿಸಬೇಕು. ಈ ನಿರ್ಧಾರದ ಫಲಿತಾಂಶ ರೂಪದಲ್ಲಿ ಅಲ್ಪ ಅವಧಿಯಲ್ಲಿಯೇ ಈ ಮತವು ಅಹ್ಮದ್‌ನಗರದಲ್ಲಿ ನಾಮಾವಶೇಷಗೊಂಡಿತು.

ಷಿಯಾ ಮತದ ಪಾಲಿಸುವಿಕೆ :

ಬುರ್ಹಾನ್‌ಷಾಹ್‌ನು ಮೊದಲಿನಂತೆ ಷಿಯಾ ಮತದ ಸಂಪ್ರದಾಯವನ್ನು ರೂಢಿಗೆ ತಂದನು. ಹಾಗೂ ಇಮಾಮರ ಹೆಸರುಗಳನ್ನು ಖುತ್ಬಾದಲ್ಲಿ ದಾಖಲಿಸಲಾಯಿತು. ಆ ಅಮೀರರು ಯಾರು ಮಿರ್ಜಾಖಾನ್‌ನ ದೆಸೆಯಿಂದ

ಪ್ರಾಂತ್ಯದಿಂದ ಓಡಿ ಹೋಗಿದ್ದರು. ಅವರು ಮರಳಿ ಅಹ್ಮದ್‌ನಗರಕ್ಕೆ ಬಂದರು. ಹಾಗೂ ಈ ಪಟ್ಟಣವು ಮತ್ತೊಮ್ಮೆ ಸಜ್ಜನರ ಕ್ಷೇತ್ರವಾಗಿ ಹೊರಹೊಮ್ಮಿತು.

ಆದಿಲ್‌ಷಾಹ್‌ನ ಸಂದೇಶ :

ದಿಲಾವರ್‌ಖಾನ್ ಹಬಶಿಯು ಯಾರು ಆದಿಲ್‌ಷಾಹ್‌ನಿಂದ ಭಯಭೀತನಾಗಿ ಅಹ್ಮದಾಬಾದ್ ಬೀದರಕ್ಕೆ ಹೋಗಿದ್ದನು. ಆತನು ಸಹ ಬುರ್ಹಾನ್‌ಷಾಹ್‌ನ ಸೇವೆಯಲ್ಲಿ ಹಾಜರಾದನು. ಹಾಗೂ ಆತನನ್ನು ಹುದ್ದೆ ಹಾಗೂ ಜಾಗೀರುಗಳಿಂದ ಪುರಸ್ಕರಿಸಲಾಯಿತು. ಆದಿಲ್‌ಷಾಹ್‌ನಿಗೆ ಯಾವಾಗ ಇದರ ಸುದ್ದಿ ತಲುಪಿತೋ ಆಗ ಆತನು ಬಹಳೇ ಕೋಪೋದ್ರಿಕ್ತನಾದನು. ಆತನು ಬುರ್ಹಾನ್ ನಿಜಾಮನಿಗೆ ಈ ಸಂದೇಶ ಕಳುಹಿಸಿದನು. "ಸ್ನೇಹ ಸಂಬಂಧದ ಬೇಡಿಕೆ ಇದಾಗಿದೆ ಏನೆಂದರೆ ತಾವು ಮಿತ್ರ ಹಾಗೂ ಶತ್ರುವಿನ ನಡುವೆ ವ್ಯತ್ಯಾಸ ಅರಿಯಬೇಕು. ಹಾಗೂ ನನ್ನ ಸ್ನೇಹಿತರನ್ನು ತಮ್ಮ ಸ್ನೇಹಿತರನ್ನಾಗಿ ಹಾಗೂ ನನ್ನ ವೈರಿಗಳನ್ನು ತಮ್ಮ ವೈರಿಗಳೆಂದು ಬಗೆಯಬೇಕು. ಹಾಗೂ ತಾವು ಎಲ್ಲ ಕಾರ್ಯಗಳಲ್ಲಿ ನನ್ನ ಜೊತೆ ನೀಡಬೇಕು. ಅದರಿಂದ ಪರಸ್ಪರರಲ್ಲಿ ಸೌಹಾರ್ದವು ಇನ್ನಷ್ಟು ಬಲಯುತವಾಗುವುದು. ನನಗೆ ಸಖೇದಾಶ್ಚರ್ಯವಾಗುತ್ತಿದೆ ಏನೆಂದರೆ ಸನ್ಮಾನ್ಯರು ನನ್ನ ಓರ್ವ ದ್ರೋಹಿ ಸೇವಕನನ್ನು ತಾವು ಕೇವಲ ಸಾಮಾನ್ಯ ಹುದ್ದೆ ಹಾಗೂ ಜಾಗೀರು ಮಾತ್ರ ನೀಡಲಿಲ್ಲ. ಆದರೆ ಆತನಿಗೆ ಒಂದು ಉನ್ನತ ಹುದ್ದೆಯನ್ನು ದಯಪಾಲಿಸಿದ್ದೀರಿ. ನನಗೆ ನಿರೀಕ್ಷೆಯಿದೆ ತಾವು ಈ ಸ್ನೇಹಸಂಬಂಧವನ್ನು ಗಮನಿಸುವಿರಿ ಯಾವುದು ನನ್ನ ಹಾಗೂ ನಿಮ್ಮ ನಡುವೆ ನಡೆದು ಬಂದಿರುತ್ತದೆ. ಮುಂದೆ ಬೇರೆ ಯಾವುದೇ ಇಂಥ ನಿರ್ಧಾರವನ್ನು ತೆಗೆದುಕೊಳ್ಳಲಾರಿರಿ ಯಾವುದು ನನ್ನ ಮನಸ್ಸಿಗೆ ನೋವುಂಟು ಮಾಡುವ ಕಾರಣವಾಗುವುದು".

ಸಂದೇಶಕ್ಕೆ ಅಸಂತುಷ್ಟ ಉತ್ತರ :

ಈ ಸಂದೇಶವನ್ನು ಕೇಳಿ ಬುರ್ಹಾನ್‌ಷಾಹ್‌ನು ಬಹಳೇ ಸಿಟ್ಟಿಗೆದ್ದನು. ಹಾಗೂ ಆ ಕೋಪಾವಸ್ಥೆಯಲ್ಲಿ ಆತನಿಗೆ ನಿಜವಾಗಿಯೂ ಮಿತ್ರ ಹಾಗೂ ಶತ್ರುವಿನ ಅಂತರ ಉಳಿಯಲಿಲ್ಲ. ಹಾಗೂ ಈ ಸಂದೇಶದ ಉತ್ತರವಾಗಿ ಘನತೆಗೆ ತಕ್ಕದ, ಬಿರುಸಾದ ಮಾತುಗಳನ್ನಾಡಿದನು. ಈ ಉತ್ತರವನ್ನು ಪಡೆದು ಆದಿಲ್‌ಷಾಹ್‌ನು ಸಹ ಜಾಗೃತಗೊಂಡನು. ಹಾಗೂ ಬುರ್ಹಾನ್‌ಷಾಹ್‌ನೊಂದಿಗೆ ವೈರತ್ವ ಸಾಧಿಸಲು ನಿರ್ಧರಿಸಿದನು.

ಆನೆಗಳನ್ನು ಹಿಂದಿರುಗಿಸಲು ಬೇಡಿಕೆ :

ಆದಿಲ್‌ಷಾಹ್‌ನು ಮುಲ್ಲಾ ಇನಾಯತುಲ್ಲಾ ಜಹ್ರಿಯನ್ನು ಅಹ್ಮದ್‌ನಗರಕ್ಕೆ ಕಳುಹಿಸಿದನು. ಹಾಗೂ ಬುರ್ಹಾನ್‌ಷಾಹ್‌ನಿಗೆ ಈ ಸಂದೇಶ ನೀಡಿದನು. ಆ

ಮೂರು ನೂರು ಆನೆಗಳನ್ನು ಯಾವುವು ದಿಲಾವರ್‌ಖಾನ್‌ನ ಅನನುಭವಿ ಹಾಗೂ ಮೂರ್ಖತನದ ಕಾರಣದಿಂದ ನಿಮ್ಮ ವಶದಲ್ಲಿ ಇರಿಸಿಕೊಂಡಿದ್ದೀರಿ ಅವುಗಳನ್ನು ಮರಳಿಸಿರಿ. ಒಂದು ವೇಳೆ ಈ ವಿಷಯದಲ್ಲಿ ತಡಮಾಡಿದರೆ ತಾವು ಭಯಂಕರ ರೂಪದಲ್ಲಿ ಹಾನಿಯನ್ನನುಭವಿಸಬೇಕಾಗುವುದು."

ಆದಿಲ್‌ಷಾಹೀ ಪಾಂತ್ಯದ ಮೇಲೆ ದಾಳಿ :

ಬುರ್ಹಾನ್‌ಷಾಹ್‌ನಿಗೆ ಯಾವಾಗ ಈ ಸಂದೇಶ ತಲುಪಿತೋ ಆಗ ಆತನು ಇನ್ನಷ್ಟು ಕೋಪೋದ್ರಿಕ್ತನಾದನು. ಕೂಡಲೇ ಸೈನ್ಯವನ್ನು ಸೇರಿಸಲು ಆಜ್ಞೆ ನೀಡಿದನು. ಹಾಗೂ ತನ್ನ ಅಮೀರರನ್ನು ಜೊತೆಗೆ ತೆಗೆದುಕೊಂಡು ಆದಿಲ್‌ಷಾಹೀ ಪ್ರಾಂತ್ಯಗಳಲ್ಲಿ ಪ್ರವೇಶಿಸಿದನು. ಆದಿಲ್‌ಷಾಹ್‌ನು ಬುರ್ಹಾನ್‌ನನ್ನು ತಿಲಮಾತ್ರವೂ ಮಹತ್ವ ನೀಡುತ್ತಿರಲಿಲ್ಲ. ಅದಕ್ಕಾಗಿ ಆತನು ಆತನಿಗೆ ಯಾವುದೇ ಮಹತ್ವ ನೀಡಲಿಲ್ಲ. ಹಾಗೂ ಬಿಜಾಪುರದಲ್ಲಿಯೇ ಉಳಿದನು. ಬುರ್ಹಾನ್‌ನು ಬೇವೂರ್ ನದಿಯ ತಟದಲ್ಲಿ 'ಮಂಗಲ್‌ಸರಾ' ಎಂಬ ಹೆಸರಿನ ಸ್ಥಳದಲ್ಲಿ ತಂಗಿದನು. ದಿಲಾವರ್‌ಖಾನ್ ಹಾಗೂ ಇತರ ಅಮೀರರ ಸಲಹೆಯಂತೆ ಆತನು ಆ ಸಮಯದಲ್ಲಿ ಮುಂದಕ್ಕೆ ಹೋಗುವುದು ಸರಿಯೆಂದು ಬಗೆಯಲಿಲ್ಲ.

ಉನ್ನತ ನಿರ್ಧಾರಗಳು :

ಬುರ್ಹಾನ್ ಷಾಹ್‌ನು ಹೀಗೆ ನಿಶ್ಚಯಿಸಿದನು. ಬೇವೂರ ನದಿಯ ಆ ಕಡೆ ಒಂದು ಕೋಟೆಯನ್ನು ಕಟ್ಟಿಸಬೇಕು. ಹಾಗೂ ಈ ಸ್ಥಳದವರೆಗಿನ ಎಲ್ಲ ಆದಿಲ್‌ಷಾಹಿ ಪ್ರಾಂತ್ಯಗಳನ್ನು ತನ್ನ ವಶದಲ್ಲಿ ತೆಗೆದುಕೊಂಡು ಹೊಸದಾಗಿ ಕಟ್ಟಲ್ಪಟ್ಟ ಕೋಟೆಯನ್ನು ಸೀಮೆಯನ್ನಾಗಿಸಿ ಘೋಷಣೆ ಮಾಡಬೇಕು. ಅದರ ನಂತರ ಕ್ರಮೇಣವಾಗಿ ಸೋಲಾಪುರ ಹಾಗೂ ಷಾಹ್‌ದುರ್ಗದ ಮೇಲೆಯೂ ಹಿಡಿತ ಸಾಧಿಸಬೇಕು.

ಹೊಸ ಕೋಟೆಯ ನಿರ್ಮಾಣ ಕಾರ್ಯ :

ಆಗ ಬೇಸಿಗೆಯ ಕಾಲವಿತ್ತು. ಬುರ್ಹಾನ್ ಷಾಹ್ ಅನುಭವಿ ಕಟ್ಟಡ ನಿರ್ಮಾಪಕರನ್ನು ಹಾಗೂ ಕುಶಲ ಕರ್ಮಿಗಳನ್ನು ಬೇವೂರ್ ನದಿಯ (ಯಾವುದು ಈ ದಿನಗಳಲ್ಲಿ ತುಂಬಿ ಹರಿಯುತ್ತಿತ್ತು) ಆ ಕಡೆ ಇಳಿಸಿದನು. ಹಾಗೂ ಒಂದು ಇಂತಹ ಸ್ಥಳದಲ್ಲಿ ಕೋಟೆಯ ಕಟ್ಟಡವನ್ನು ಪ್ರಾರಂಭಿಸಿದನು. ಅಲ್ಲಿ ಹಳೆಯ ಕಾಲದ ಕೋಟೆ ಆಗಲೇ ಇತ್ತು. ಆದರೆ ಈಗ ಕಾಲದ ಹೊಡೆತಕ್ಕೆ ಸಿಕ್ಕು ನಾಶಗೊಂಡಿತ್ತು. ಅದರ ಪಳೆಯುಳಿಕೆ ಇನ್ನೂ ಉಳಿದಿದ್ದವು. ನಿಜಾಮಷಾಹೀ ಕಟ್ಟಡ ಕಟ್ಟುವವರು ಬಹಳೇ ಚಾಕಚಕ್ಯತೆಯಿಂದ ಕೆಲಸ ಪ್ರಾರಂಭಿಸಿದರು. ಹಾಗೂ ಕೋಟೆಯನ್ನು ಬೇಗ ಬೇಗನೇ ಸಿದ್ಧಗೊಳಿಸಲು ಪ್ರಯತ್ನಿಸತೊಡಗಿದರು.

ವರ್ಷಾಕಾಲ :

ಆದಿಲ್‌ಷಾಹ್‌ನು ಯುಕ್ತಿಪೂರ್ವಕವಾಗಿ ಬಿಜಾಪುರದಿಂದ ಯಾವುದೇ ಸೈನ್ಯವನ್ನು ನಿಜಾಮಷಾಹೀ ಸೈನಿಕರ ಮೇಲೆ ದಾಳಿ ಮಾಡಲು ಕಳುಹಿಸಲಿಲ್ಲ. ಅದಕ್ಕಾಗಿ ಈ ಜನರು ಬಹಳೇ ನೆಮ್ಮದಿಪೂರ್ವಕವಾಗಿ ಕೋಟೆಯನ್ನು ಕಟ್ಟುವಲ್ಲಿ ತೊಡಗಿದರು. ಕೆಲವು ದಿನಗಳ ನಂತರ ವರ್ಷಾಕಾಲ ಆಗಮಿಸಿತು. ಹಾಗೂ ಈ ಭಯ ಹುಟ್ಟಿತು. ಏನೆಂದರೆ ನದಿಯ ನೀರು ಏರಿ ಕೋಟೆಯ ಹಾಗೂ ಸೈನ್ಯದ ನಡುವೆ ಅಡೆತಡೆಯುಂಟಾಗದಿರಲಿ ಹಾಗೂ ಈ ಅವಕಾಶದ ಲಾಭ ಪಡೆದು ಆದಿಲ್‌ಷಾಹೀ ಸೈನ್ಯವು ಕೋಟೆಯನ್ನು ವಶಪಡಿಸಿಕೊಳ್ಳದಿರಲಿ, ಬುರ್ಹಾನ್‌ಷಾಹ್‌ನು ಅಪೂರ್ಣ ಕೋಟೆಗೆ ಬಾಗಿಲುಗಳನ್ನು ಹಚ್ಚಿಸಿದನು. ಹಾಗೂ ರಕ್ಷಣೆಗಾಗಿ ತೋಪುಗಳಿಂದ ಗಟ್ಟಿಗೊಳಿಸಿದನು. ಹಾಗೂ ಮಳೆಗಾಲದ ನಡುವೆ ಕೋಟೆಯನ್ನು ಪೂರ್ತಿಗೊಳಿಸಲು ನಿರ್ಧರಿಸಿದನು.

ದಿಲಾವರ್‌ಖಾನ್‌ನ ಅಪಕ್ವ ವಿಚಾರಗಳು :

ಇದೇ ಸಮಯದಲ್ಲಿ ದಿಲಾವರ್‌ಖಾನ್‌ನು ಯೋಚಿಸಿದನು. ಯಾವಾಗಿನವರೆಗೆ ನನ್ನಂತಹ ಬುದ್ಧಿವಂತ ಅಮೀರನು ಬಿಜಾಪುರದಲ್ಲಿ ಪ್ರವೇಶಿಸಲಾರನೋ ಆದಿಲ್‌ಷಾಹ್‌ನಿಗೆ ನಿಜಾಮ್‌ಷಾಹ್‌ರ ಗೊಂದಲಗಳಿಂದ ಮುಕ್ತಿ ಸಿಗಲಾರದು. ಈ ಯೋಚನೆಯನ್ನು ಮುಂದಿಟ್ಟುಕೊಂಡು ದಿಲಾವರ್‌ಖಾನ್‌ನು ಆದಿಲ್‌ಷಾಹ್‌ನಿಂದ ಪ್ರಮಾಣಪತ್ರದ ವಿನಂತಿ ಮಾಡಿದನು. ಅದರಿಂದ ತಾನು ನಿರ್ಭಯನಾಗಿ ಬಿಜಾಪುರಕ್ಕೆ ಹೋಗಬೇಕು. ಮೊದಲಿನ ತರಹ ಪ್ರಭಾವಿ ಅಧಿಕಾರಿಯಾಗಬೇಕು.

ದಿಲಾವರ್‌ನ ಬಿಜಾಪುರಕ್ಕೆ ಹೋಗುವಿಕೆ :

ಆದಿಲ್‌ಷಾಹ್‌ನು ಇದನ್ನೇ ಬಯುಸುತ್ತಿದ್ದನು. ಯಾವುದೇ ತೆರನಾಗಿ ದಿಲಾವರ್‌ಖಾನ್‌ನು ತನ್ನ ಕೈಗೆ ಸಿಗಲಿ. ಅದಕ್ಕಾಗಿ ಆತನು ತಕ್ಷಣವೇ ಪ್ರಮಾಣ ಪತ್ರ ಕಳುಹಿಸಿದನು. ಬುರ್ಹಾನ್ ಷಾಹ್‌ನು ದಿಲಾವರ್‌ಖಾನ್‌ನನ್ನು ಬಹಳೇ ರೀತಿಯಲ್ಲಿ ತಡೆದನು. ಉದಾಹರಣೆಗಳೊಂದಿಗೆ ತಿಳಿಸಿ ಹೇಳಿದನು. ಆದರೆ ಅವನು ಒಪ್ಪಲಿಲ್ಲ. ಹಾಗೂ ಆತನು ಬಿಜಾಪುರಕ್ಕೆ ಹೋದನು.

ಆದಿಲ್‌ಷಾಹಿ ಸೈನ್ಯದ ಹೊರಡುವಿಕೆ :

ಬಿಜಾಪುರಕ್ಕೆ ದಿಲಾವರ್‌ಖಾನ್‌ನು ಯಾವಾಗ ತಲುಪಿದನೋ ಆಗ ಆತನನ್ನು ತಕ್ಷಣವೇ ಬಂಧಿಸಿ ಒಂದು ಕೋಟೆಯಲ್ಲಿಡಲಾಯಿತು. ಅದರ ನಂತರ ಇಬ್ರಾಹಿಂ ಆದಿಲ್‌ಷಾಹ್‌ನು ವೈರಿಯ ಕಡೆಗೆ ಗಮನ ಹರಿಸಿದನು. ಹಾಗೂ ರೂಮಿಖಾನ್, ಇಲಿಯಾಸ್‌ಖಾನ್‌ರಂಥ ಖ್ಯಾತಿವೆತ್ತ ಅಮೀರರಿಗೆ ನಿಜಾಮಷಾಹಿಗಳನ್ನು ಎದುರಿಸಲು

ಕಳುಹಿಸಿದನು. ಈ ಅಮೀರರು ಕೋಟೆಯ ಕಡೆಗೆ ಯಾವುದೇ ರೀತಿಯ ಗಮನ ಕೊಡಲಿಲ್ಲ. ಹಾಗೂ ಬರ್ಕಿ ಅಮೀರರನ್ನು ಐದಾರು ಸಾವಿರ ಸೈನಿಕರೊಂದಿಗೆ ನದಿಯ ಆಕಡೆ ಇಳಿಸಿದರು. ಹಾಗೂ ಹೀಗೆ ಆದೇಶ ನೀಡಿದರು. ವಿನಾಶ ಕಾರ್ಯವನ್ನು ಎಷ್ಟು ವೇಗದೊಂದಿಗೆ ಮಾಡಬೇಕೆಂದರೆ ನಿಜಾಮಷಾಹಿಗಳು ನೆಮ್ಮದಿಯಿಂದ ಉಸಿರನ್ನು ತೆಗೆದುಕೊಳ್ಳಲು ತೊಂದರೆಯಾಗಬೇಕು.

ಬುರ್ಹಾನ್ ನಿಜಾಮ್‌ಷಾಹಿಯ ಕಾರ್ಯಾಚರಣೆ :

ಆದಿಲ್‌ಷಾಹಿಗಳು ವೈರಿಗಳನ್ನು ಬಹಳೇ ತೊಂದರೆಗೀಡು ಮಾಡಿದರು. ಬುರ್ಹಾನ್‌ಷಾಹ್‌ನು ಈ ಸ್ಥಿತಿಯನ್ನು ಕಂಡು ಕೋಪೋದ್ರಿಕ್ತನಾದನು. ಆತನಿಗೆ ತನ್ನ ಅಮೀರರ ಮೇಲೆ ಸ್ವಲ್ಪವೂ ಭರವಸೆ ಇರಲಿಲ್ಲ. ರಾತ್ರಿಯ ವೇಳೆ ಆತನು ವೈರಿಯ ತಂಗುದಾಣಗಳತ್ತ ಹೊರಟನು. ಹಾಗೂ ಮುಂಜಾವು ಮೂಡೂತ್ತಲೇ ಅಲ್ಲಿ ತಲುಪಿದನು. ಆದಿಲ್‌ಷಾಹಿಗಳು ಯಾವಾಗ ವೈರಿಯ ಸೈನ್ಯವನ್ನು ನೋಡಿದರೋ ಆಗ ಅವರು ಆ ಸ್ಥಳ ಬಿಟ್ಟು ಹೋದರು. ಹಾಗೂ ನದಿಯನ್ನು ದಾಟಿ ಇಲಿಯಾಸ್‌ಖಾನ್ ಹಾಗೂ ರೂಮಿಖಾನ್‌ರೊಂದಿಗೆ ಜೊತೆಯಾದರು. ಹಾಗೂ ತಮ್ಮ ಸೈನ್ಯವನ್ನು ಯುದ್ಧಕ್ಕೆ ಸಿದ್ಧಗೊಳಿಸತೊಡಗಿದರು.

ಮಹಾಪೂರ :

ಆಕಸ್ಮಿಕವಾಗಿ ಅದೇ ವೇಳೆ ನದಿಯಲ್ಲಿ ಮಹಾಪೂರ ಬಂದಿತು. ಹಾಗೂ ಆ ಕಾರಣದಿಂದ ಬುರ್ಹಾನ್‌ಷಾಹ್‌ನು ನದಿಯನ್ನು ದಾಟಲಾಗಲಿಲ್ಲ. ಆತನು ನದಿಯ ಈ ಕಡೆಯಿಂದ ಆಕಡೆಗೆ ನಿಂತಿರುವ ವೈರಿಗಳ ಮೇಲೆ ಗುಂಡಿನ ಸುರಿಮಳೆಗೈದನು. ಆದರೆ ಅದರಿಂದ ಯಾವ ಪ್ರಯೋಜನವೂ ಆಗಲಿಲ್ಲ. ಹಾಗೂ ಆತನು ಮರಳಿ ತನ್ನ ಸ್ಥಳಕ್ಕೆ ಬಂದನು.

ಬರ್ಕಿ ಅಮೀರರ ದಾಳಿ :

ಬರ್ಕಿ ಅಮೀರರು ಮತ್ತೊಮ್ಮೆ ನದಿಯನ್ನು ದಾಟಿ ನಿಜಾಮಷಾಹನಿಗೆ ಕಷ್ಟ ಕೊಡಲು ಪ್ರಾರಂಭಿಸಿದರು. ಕೊನೆಗೆ ಪರಿಣಾಮ ಸ್ವರೂಪ ಎಲ್ಲಿಯವರೆಗೆ ಬಂದಿತೆಂದರೆ ಧವಸ ಧಾನ್ಯ ಹಾಗೂ ಮೇವಿನ ಕೊರತೆಯಿಂದಾಗಿ ಬುರ್ಹಾನ್‌ನ ಸೈನ್ಯದಲ್ಲಿ ಕ್ಷಾಮದ ಲಕ್ಷಣಗಳು ಕಂಡು ಬಂದವು. ಬುರ್ಹಾನ್‌ನು ನವನಿರ್ಮಾಣಗೊಂಡ ಕೋಟೆಯನ್ನು ಅಸದ್‌ಖಾನ್ ತುರ್ಕ್‌ನ ವಶಕ್ಕೆ ನೀಡಿದನು. ಹಾಗೂ ಶೂರರ ಒಂದು ತಂಡವನ್ನು ಕೋಟೆಯಲ್ಲಿ ಬಿಟ್ಟನು. ಹಾಗೂ ಸ್ವತಃ ಇಲ್ಲಿಂದ ಹೊರಟು ನಿಜಾಮಷಾಹೀ ಸರಹದ್ದಿನಲ್ಲಿ ಬಂದನು. ಏಕೆಂದರೆ ಆಹಾರಧಾನ್ಯ ಹಾಗೂ ಅವಶ್ಯಕ ವಸ್ತುಗಳನ್ನು ಸುಲಭವಾಗಿ ಸಿಗುವವು.

ಆದಿಲ್‌ಷಾಹಿಗಳ ಧೈರ್ಯ :

ಈಗ ರೂಮಿಖಾನ್ ಹಾಗೂ ಇಲಿಯಾಸ್‌ಖಾನ್‌ರಿಗೆ ಓಡಿ ಹೋಗಲು ಒಂದು ಒಳ್ಳೆಯ ಸದವಕಾಶ ಲಭಿಸಿತು. ಅವರು ನದಿಯನ್ನು ದಾಟಿ ವೈರಿಯನ್ನು ಕಷ್ಟಕ್ಕೀಡು ಮಾಡತೊಡಗಿದರು. ಬುರ್ಹಾನ್‌ಷಾಹ್‌ನು ಬಹಳೇ ವಿಹ್ವಲಿತಗೊಂಡನು. ಆತನು ಬರಾರ್‌ದ ಪ್ರಧಾನ ಮಂತ್ರಿಯಾದ ನೂರ್‌ಖಾನ್‌ನನ್ನು ಯಾರು ಶೌರ್ಯದಲ್ಲಿ ತನಗೆ ತಾನೇ ಸಾಟಿಯಾಗಿದ್ದನು ಬಹಳಷ್ಟು ಬೇರೆ ಅಮೀರರ ಜೊತೆಗೆ ಆದಿಲ್‌ಷಾಹಿ ಸೈನ್ಯವನ್ನು ಎದುರಿಸುವುದಕ್ಕಾಗಿ ನೇಮಿಸಿದನು.

ನಿಜಾಮಷಾಹಿಗಳ ಸೋಲು :

ಸೈನ್ಯದಿಂದ ಎರಡು ಮೂರು ಕೋಸ್ ಅಂತರದಲ್ಲಿ ನೂರ್‌ಖಾನ್ ಹಾಗೂ ಆದಿಲ್‌ಷಾಹಿಗಳ ನಡುವೆ ಯುದ್ಧ ಜರುಗಿತು. ಐತ್‌ಮಾದ್‌ಖಾನ್ ಷೋಷ್ತರಿಯು ಭರ್ಚಿಯಿಂದ ಹೊಡೆದು ನೂರ್‌ಖಾನ್‌ನನ್ನು ಕೊನೆಗಾಣಿಸಿದನು. ಈ ತೆರನಾಗಿ ನಿಜಾಮಷಾಹಿಗಳಿಗೆ ಬೃಹತ್ ಪ್ರಮಾಣದ ಸೋಲುಂಟಾಯಿತು. ಆದಿಲ್‌ಷಾಹಿಗಳು ವೈರಿಯ ಒಂದುನೂರಾ ಐವತ್ತು ಆನೆಗಳನ್ನು ವಶಪಡಿಸಿಕೊಂಡರು.

ಅಮೀರರ ನಿರ್ಧಾರ :

ಈ ಘಟನೆಯಿಂದ ಬುರ್ಹಾನ್‌ಷಾಹ್‌ನಿಗೆ ದೊಡ್ಡ ಪ್ರಮಾಣದ ಅಪಮಾನ ಉಂಟಾಯಿತು. ಹಾಗೂ ಸ್ವತಃ ಅವನ ಅಮೀರರು ಆತನ ವಿರುದ್ಧವಾದರು. ದಖ್ಖಿನ್ನಿನ ಪ್ರಸಿದ್ಧ ಅಮೀರನಾದ ಕಾಮಿಲ್‌ಖಾನ್ ಹಾಗೂ ಆತನ ಸಹೋದರರು ಬುರ್ಹಾನ್‌ನನ್ನು ಪದಚ್ಯುತಿಗೊಳಿಸಿ ಆತನ ಪುತ್ರನಾದ ಇಸ್ಮಾಯಿಲ್‌ನನ್ನು ಸಿಂಹಾಸನಾಧೀಶನನ್ನಾಗಿಸುವ ನಿರ್ಧಾರ ಮಾಡಿದರು. ಬುರ್ಹಾನ್‌ಷಾಹ್‌ನಿಗೆ ಅಮೀರರ ಈ ಇಚ್ಛೆಯ ಸುದ್ಧಿ ಮುಟ್ಟಿತು. ಆತನು ಕಾಮಿಲ್‌ಖಾನ್ ಹಾಗೂ ಇನ್ನಿತರರಿಗೆ ಕಠಿಣ ಶಿಕ್ಷೆ ನೀಡಿದನು.

ಯುಸೂಫ್ ಶಿಖಂಡಿಯ ಭಯಂಕರ ಬಯಕೆ :

ಈ ಘಟನೆಯ ನಂತರ ದಖ್ಖಿನ್ನಿನವರು ಬಾದಷಾಹ್‌ನ ವಿರುದ್ಧವಾದರು. ಬಾದಷಾಹ್‌ನ ಓರ್ವ ನಂಬಿಗಸ್ತನಾದ ಶಿಖಂಡಿ ಯೂಸೂಫ್‌ನು ಸೌಂದರ್ಯದಲ್ಲಿ ತನಗೆ ತಾನೇ ಸಾಟಿಯಾಗಿದ್ದನು. ರಾತ್ರಿಯ ವೇಳೆ ಬಾದಷಾಹ್‌ನನ್ನು ಕೊಲೆಗೈದು ಆತನ ಪುತ್ರನಾದ ಇಸ್ಮಾಯಿಲ್‌ನನ್ನು ಪಟ್ಟಾಬಿಷೇಕ ಮಾಡಿಸುವ ಬಯಕೆ ಹೊಂದಿದ್ದನು. ಬುರ್ಹಾನ್‌ಷಾಹ್‌ನಿಗೆ ಇದರ ಮಾಹಿತಿಯು ಲಭಿಸಿತು. ಆದರೆ ಆತನಿಗೆ ನಂಬಿಕೆ ಬರಲಿಲ್ಲ. ಏನೆಂದರೆ ಯೂಸುಫ್‌ನು ತನಗಾಗಿ ಹೀಗೆಯೂ ಯೋಚಿಸುವನೇ ?

ಬಾದಶಾಹ್‌ನ ನಿರ್ಲಕ್ಷ್ಯ :

ಒಂದು ರಾತ್ರಿ ಬಾದಶಾಹ್‌ನು ನಿದ್ರೆಯ ನೆಪದಿಂದ ಶಯ್ಯಾಗೃಹಕ್ಕೆ ಹೋದನು. ಯುಸೂಫ್ ಶಿಖಂಡಿಯೂ ಸಹ ಕತ್ತಿಯನ್ನು ಕೈಯಲ್ಲಿ ಹಿಡಿದು ಒಳ ಪ್ರವೇಶಿಸಿದನು. ಬುರ್ಹಾನ್‌ಶಾಹ್‌ನು ಆತನನ್ನು ನೋಡಿದನು. ಹಾಗೂ ಒಂದೇ ಜಿಗಿತಕ್ಕೆ ಆತನ ಕೈ ಹಿಡಿದುಕೊಂಡನು. ಯುಸೂಫ್‌ನೊಂದಿಗೆ ಬಾದಶಾಹ್‌ನಿಗೆ ಬಹಳ ಪ್ರೇಮವಿತ್ತು. ಹೀಗಾಗಿ ಅವನು ಆತನಿಗೆ ಏನನ್ನು ಹೇಳಲಿಲ್ಲ. ಈ ಘಟನೆಯ ಕುರಿತು ಎಷ್ಟು ನಿರ್ಲಕ್ಷ್ಯವಹಿಸಿದನೆಂದರೆ ಏನೂ ಜರುಗಲೇ ಇಲ್ಲ ಎಂಬಂತೆ ಇದ್ದು ಬಿಟ್ಟನು.

ಸಂಧಾನದ ಪ್ರಯತ್ನ :

ಮುಹಮ್ಮದ್ ಖುಲಿ ಕುತುಬ್‌ಶಾಹ್ ಹಾಗೂ ರಾಜಾ ಅಲಿಖಾನ್‌ರು ಯಾವಾಗ ಪರಿಸ್ಥಿತಿ ಹದಗೆಡುವದನ್ನು ನೋಡಿದರೋ ಆಗ ಅವರು ನಂಬಿಗಸ್ತ ಅಮೀರರಾದ ಮುಸ್ತಫಾಖಾನ್ ಆಸ್ತರಾಬಾದಿ ಹಾಗೂ ಅಬ್ದುಸ್ಸಲಾಮ್ ತೌಫಿಯವರನ್ನು ಬಿಜಾಪುರಕ್ಕೆ ಕಳುಹಿಸಿದರು. ಹಾಗೂ ಇಬ್ರಾಹಿಂ ಆದಿಲ್‌ಶಾಹ್ ನೊಂದಿಗೆ ಸಂಧಾನದ ಮಾತುಕತೆ ನಡೆಸಿದರು. ಆದರೆ ಆದಿಲ್‌ಶಾಹ್‌ನು ಸಂಧಾನಕ್ಕೆ ಒಪ್ಪಲಿಲ್ಲ. ಹಾಗೂ ಮೂರು ತಿಂಗಳವರೆಗೆ ಈ ಸಮಸ್ಯೆಯು ಹೀಗೆಯೇ ಉಳಿಯಿತು. ಕೊನೆಗೆ ಯಾವಾಗ ಕುತುಬ್‌ಶಾಹ್ ಹಾಗೂ ಅಲಿಖಾನ್‌ರ ಒತ್ತಡವು ಬಹಳೇ ಹೆಚ್ಚಾಗಲು ಆಗ ಈ ಷರತ್ತಿನ ಮೇಲೆ ಸಂಧಾನವನ್ನು ಒಪ್ಪಿದನು. ಏನೆಂದರೆ ಬುರ್ಹಾನ್‌ಶಾಹ್‌ನು ತನ್ನ ನವನಿರ್ಮಿತ ಕೋಟೆಯನ್ನು ತನ್ನ ಕೈಯಿಂದಲೇ ವಿನಾಶಗೈದು ಮರಳಿ ಹೋಗಬೇಕು.

ಸಂಧಾನದ ಷರತ್ತಿನ ಪೂರ್ತಿಗೈಯ್ಯಲು ಒಪ್ಪಿಗೆ :

ಖ್ವಾಜಾ ಅಬ್ದುಸ್ಸಲಾಮ್ ತೌಫಿಯು ಈ ಷರತ್ತನ್ನು ಪೂರ್ತಿಗೊಳಿಸುವ ಪ್ರಮಾಣ ಮಾಡಿದನು. ಹಾಗೂ ಆದಿಲ್‌ಶಾಹ್‌ನೊಂದಿಗೆ ಹೀಗೆ ಹೇಳಿದನು. "ಇದು ಉಚಿತವಾಗುವುದು ಏನೆಂದರೆ ಖಾವಂದ್‌ರು ತಮ್ಮ ಯಾವನೇ ನಂಬಿಗಸ್ತ ಅಮೀರನನ್ನು ನಮ್ಮ ಜೊತೆ ಮಾಡಬೇಕು. ಏಕೆಂದರೆ ಅವನ ಎದುರಲ್ಲಿ ಈ ಷರತ್ತನ್ನು ಪೂರ್ತಿಗೊಳಿಸಲು ಆಗುವುದು. ಆದಿಲ್‌ಶಾಹ್‌ನು ಷಾಹ್ ನವಾಜ್ ಖಾನ್ ಶಿರಾಜಿ (ಯಾರ ವಿವರವು ಆದಿಲ್‌ಶಾಹಿ ಚರಿತ್ರೆಯಲ್ಲಿ ಬಂದಿರುವುದು) ಆತನನ್ನು ಬುರ್ಹಾನ್‌ಶಾಹ್‌ನ ಬಳಿ ಕಳುಹಿಸಿದನು.

ಅಹ್ಮದ್‌ನಗರಕ್ಕೆ ಬುರ್ಹಾನ್ ನಿಜಾಮಶಾಹನ ಮರಳುವಿಕೆ :

ಷಾಹ್ ನವಾಜ್‌ಖಾನ್‌ನು ನಿಜಾಮಶಾಹಿ ಸೈನ್ಯದ ಬಳಿ ಬಂದನು. ಹಾಗೂ ಬುರ್ಹಾನ್‌ಶಾಹ್‌ನ ಅಮೀರರು ಆತನನ್ನು ಸ್ವಾಗತಿಸಿದರು. ಹಾಗೂ ಆತನನ್ನು ಬಾದಶಾಹ್‌ನ ಬಳಿ ಕರೆದೊಯ್ದರು. ಬುರ್ಹಾನ್‌ನು ಷಾಹನವಾಜ್‌ನ ಎದುರಲ್ಲಿ ನವ ನಿರ್ಮಿತ ಕೋಟೆಯನ್ನು ನೆಲ ಸಮಗೊಳಿಸಿದನು. ಹಾಗೂ ಆತನನ್ನು ಬಹಳೇ

ಘನತೆ ಗೌರವಗಳೊಂದಿಗೆ ಮರಳಿ ಕಳುಹಿಸಿದನು. ಅದರ ನಂತರ ಬುರ್ಹಾನ್‌ಷಾಹ್‌ನು ಪ್ರಯಾಣ ಮುಂದುವರೆಸುತ್ತ ಬೇಗ ಬೇಗನೇ ಅಹ್ಮದ್‌ನಗರವನ್ನು ತಲುಪಿದನು.

ರೇಕ್‌ನಂದಾದ ಮೇಲೆ ದಾಳಿ :

ಹಿಜ್ರಿ ಶಕೆ ೧೦೦೧ ರಲ್ಲಿ ಬುರ್ಹಾನ್ ಷಾಹ್‌ನು ಈಸಾಯಿಗಳನ್ನು ಪಾಠ ಕಲಿಸಲು ಇಚ್ಛಿಸಿದನು. ಹಾಗೂ ಈ ಉದ್ದೇಶದಿಂದ ಅಮೀರರ ಒಂದು ತಂಡವನ್ನು 'ಬಂದರ್‌ಚೇವಲ್' ಕ್ಕೆ ಕಳುಹಿಸಿದನು. ಬುರ್ಹಾನ್ ಷಾಹ್‌ನು ಆಜ್ಞೆ ಮಾಡಿದನು. ಸಮುದ್ರದ ತಟದಲ್ಲಿ ಯಾವ ಪರ್ವತವಿದೆಯೋ ಅದರ ಮೇಲೆ ಒಂದು ಕೋಟೆಯನ್ನು ನಿರ್ಮಿಸಬೇಕು. ಕೋಟೆಯ ಮುಖವು ಆ ಕಡೆಗೆ ಇರಬೇಕು. ಯಾವ ಕಡೆಯಿಂದ ಈಸಾಯಿಗಳ ಹಡಗುಗಳು ರೇಕನಂದಾ ಕೋಟೆಯತ್ತ ಹೋಗುವವು, ಕೋಟೆಯನ್ನು ತೋಪುಗಳಿಂದ ಭದ್ರಗೊಳಿಸಬೇಕು. ಏಕೆಂದರೆ ಈಸಾಯಿಗಳ ಅವಶ್ಯಕ ವಸ್ತುಗಳು ಅವರಿಗೆ ತಲುಪದಿರಲಿ.

ಖವಾಲಾ ಕೋಟೆಯ ನಿರ್ಮಾಣ :

ಬಾದಶಾಹನ ಈ ಆಜ್ಞೆಯನ್ನು ಪಾಲಿಸಲಾಯಿತು. ಹಾಗೂ ಕೋಟೆಯು ಸಿದ್ಧಗೊಂಡಿತು. ಈ ಕೋಟೆಯ ಹೆಸರು 'ಖವಾಲಾ' ಎಂದಿಡಲಾಯಿತು. ಈಸಾಯಿಗಳು ಹಗಲಿನ ವೇಳೆ ತಮ್ಮ ಬಂದು ಹೋಗುವಿಕೆಯನ್ನು ಸ್ಥಗಿತಗೊಳಿಸಿದರು. ಹಾಗೂ ರಾತ್ರಿಯ ವೇಳೆ ಕೋಟೆಯ ಎದುರಿನಿಂದ ಹಾಯತೊಡಗಿದರು. ಅವರು ಬೇರೆಯ ಬಂದರು ಪ್ರದೇಶಗಳಿಂದ ಯಾವವು ಈಸಾಯಿಗಳ ವಶದಲ್ಲಿದ್ದವು ಅಲ್ಲಿಂದ ಸಹಾಯವನ್ನು ಯಾಚಿಸಿದರು. ಈಸಾಯಿಗಳು ರೇಕನಂದಾದ ತಮ್ಮ ಮತಾವಲಂಬಿಗಳಿಗೆ ಜೊತೆ ನೀಡಿದರು. ಮತ್ತು ಮತ್ತೊಮ್ಮೆ ಮುಸ್ಲಿಮರ ಮೇಲೆ ರಾತ್ರಿ ವೇಳೆಯಲ್ಲಿ ಆಕಸ್ಮಿಕ ದಾಳಿ ಮಾಡಿದರು. ಪ್ರತಿ ಸಲ ಎರಡು ಮೂರು ಸಾವಿರದಷ್ಟು ದಖ್ಖನಿ ಮುಸ್ಲಿಮರು ಕೊಲ್ಲಲ್ಪಟ್ಟರು.

ಖವಾಲಾ ಕೋಟೆಗೆ ಮತ್ತಷ್ಟು ಸೈನ್ಯ :

ಬುರ್ಹಾನ್‌ಷಾಹ್‌ನು ಮನಸ್ಸಿನಲ್ಲಿ ದಖ್ಖನ್ನಿನ ಮುಸ್ಲಿಮರ ಕೊಲೆಯಿಂದ ಬಹಳ ಸಂತಸಗೊಂಡಿದ್ದನು. ಆದರೆ ಹೊರಗಡೆ ಆತನು ಈ ಘಟನೆಯ ಕುರಿತು ಸಂತಾಪ ವ್ಯಕ್ತಪಡಿಸಿದನು. ಬಾದಷಾಹ್‌ನು ಫರ್ಹಾದ್‌ಖಾನ್, ಶುಜಾತ್‌ಖಾನ್ ಹಬ್ಷಿಯನ್ನು ಬೇರೆಯ ದಖ್ಖನ್ನಿನ ಅಮೀರರೊಂದಿಗೆ (ಯಾರಿಂದ ಆತನು ಕೋಪಗೊಂಡಿದ್ದನು) ಹತ್ತು ಸಾವಿರ ಸೈನಿಕರೊಂದಿಗೆ ಖವಾಲಾ ಕೋಟೆಯತ್ತ ಕಳುಹಿಸಿದನು.

ರೂಬಸಾಯಿ ಹಾಗೂ ದಮನ್ ಮೇಲೆ ಸೈನಿಕರ ದಾಳಿ :

ರೂಬಸಾಯಿ ಹಾಗೂ ದಮನ್‌ದ ಬಂದರುಗಳು ಗುಜರಾತ ಹಾಗೂ ದಖ್ಖನ್ನಿನ

ನಡುವೆ ಉಪಸ್ಥಿತವಿರುವವು. ಈ ಬಂದರುಗಳಿಂದ ರೇಕನಂದಾದವರಿಗೆ ಬಹಳ ಸಹಾಯ ಲಭಿಸಿತ್ತು. ಅದಕ್ಕಾಗಿ ಬುರ್ಹಾನ್ ನಿಜಾಮಷಾಹನು ಬಹಾದ್ದೂರ್‌ಗಿಲಾನಿಯನ್ನು ಇತರ ಹಲವಾರು ವಿದೇಶಿ ಅಮೀರರೊಂದಿಗೆ ಈ ಬಂದರುಗಳತ್ತ ಹೊರಡಿಸಿದನು. ಬಹಾದ್ದೂರ್‌ಗಿಲಾನಿ ೧೭ ಶವ್ವಾಲ್ ೧೦೦೧ ಹಿಜ್ರಿಯಂದು ಗುರಿ ತಲುಪಿದನು. ಈಸಾಯಿಗಳು ಹಾಗೂ ಫಿರಂಗಿಗಳು ಒಂದು ಬೃಹತ್ ಸೈನ್ಯದೊಂದಿಗೆ ಬಹಾದ್ದೂರ್ ಗಿಲಾನಿಯನ್ನು ಎದುರಿಸಿದರು.

ಫಿರಂಗಿ ಹಾಗೂ ಈಸಾಯಿಗಳ ಕೊಲೆ :

ದಖನಿ ಹಾಗೂ ಹಬಶಿ ಅಮೀರರು ಖವಾಲಾದ ಯುದ್ಧಕ್ಕಾಗಿ ನೇಮಿಸಲ್ಪಟ್ಟಿದ್ದರು. ಬಹಳ ಶೌರ್ಯ ಹಾಗೂ ಧೈರ್ಯದ ಪ್ರದರ್ಶನ ನೀಡಿದರು. ಹಾಗೂ ಫಿರಂಗಿಗಳಿಗೆ ಸೋಲಿನ ಮುಖ ನೋಡಬೇಕಾಯಿತು. ಸುಮಾರು ಒಂದುನೂರು ಫಿರಂಗಿ ಹಾಗೂ ಎರಡುನೂರು ಈಸಾಯಿಗಳು ಕೊಲ್ಲಲ್ಪಟ್ಟರು.

ಅತೀವ ಸಂಭ್ರಮದ ಸಮಾರಂಭ :

ಬುರ್ಹಾನ್‌ಷಾಹ್‌ನಿಗೆ ಯಾವಾಗ ಈ ಘಟನೆಯ ಸುದ್ಧಿ ತಲುಪಿತೋ ಆಗ ಆತನು ಬಹಳ ಸಂತೋಷಪಟ್ಟನು. ಆತನು 'ದರ್ಪಣಗೃಹ'ದಲ್ಲಿ ಯಾವುದು ಬಗ್ದಾದ್ ಕಟ್ಟಡದ ಜೊತೆಗೆಯೇ ಕಟ್ಟಲ್ಪಟ್ಟಿತ್ತು. ಅಲ್ಲಿ ಒಂದು ಅತೀವ ಸಂಭ್ರಮದ ಸಮಾರಂಭ ಏರ್ಪಡಿಸಲಾಯಿತು. ಈ ಸಂದರ್ಭದಲ್ಲಿ ಪ್ರತಿಯೊಬ್ಬ ವ್ಯಕ್ತಿಗೆ ಈ ಅನುಮತಿಯಿತ್ತು. ಏನೆಂದರೆ ಆತನಿಗೆ ಯಾವ ವಸ್ತುವಿನ ಇಚ್ಛೆಯಿರುವುದೋ ನಿಸ್ಸಂಕೋಚವಾಗಿ ಪಡೆದುಕೊಳ್ಳಬೇಕು. ಮದ್ಯ, ಹಾಗೂ ವಿಧವಿಧವಾದ ಸ್ವಾದಿಷ್ಟ್ಯ ಮಿಠಾಯಿಗಳು ಹಾಗೂ ಮಾದಕದ್ರವ್ಯ, ಹಷೀಷ್‌ವನ್ನು ಸಮಾರಂಭದಲ್ಲಿ ತರಲಾಯಿತು. ಮದ್ಯಪಾನಿಗಳು ಮದ್ಯವನ್ನು ಸುರಿದುಕೊಳ್ಳಲು ಪ್ರಾರಂಭಿಸಿದರು. ಹಾಗೂ ಯಾರು ಮದ್ಯಪ್ರಿಯರಾಗಿರಲಿಲ್ಲವೋ ಅವರು ಬೇರೆ ಪಾನೀಯಗಳಿಂದ ಸಂತೃಪ್ತಗೊಳ್ಳತೊಡಗಿದರು. ಅದರ ನಂತರ ವಾದ್ಯ ನುಡಿಸುವಿಕೆ ಹಾಗೂ ಹಾಡುಗಾರಿಕೆಯ ಕಾರ್ಯಕ್ರಮವನ್ನೂ ಸಹ ಏರ್ಪಡಿಸಲಾಗಿತ್ತು.

ಮಾಲ್ವಾದ ಮೇಲೆ ಖಾನ್‌ಖಾನಾದ ದಾಳಿ :

೧೦೦೧ ಹಿಜ್ರಿಶಕೆಯಲ್ಲಿ ಬುರ್ಹಾನ್‌ಷಾಹ್‌ನಿಗೆ ಈ ಸುದ್ಧಿ ತಲುಪಿತು ಏನೆಂದರೆ ಬಾದಷಾಹ್ ಅಕಬರ್‌ನು ಭೈರಮ್‌ಖಾನ್‌ನ ಪುತ್ರ ಖಾನೆಖಾನಾನ್‌ನನ್ನು ಒಂದು ಬೃಹತ್ ಸೈನ್ಯದೊಂದಿಗೆ ಮಾಲ್ವಾದ ಯುದ್ಧಕ್ಕೆ ಹಾಗೂ ಮಿರ್ಜಾಶಾರೂಖ್ ಬಾದಷಾಹ್ ಬದ್‌ಖಷಾಂ ಹಾಗೂ ಷೆಹ್‌ಬಾಜ್‌ಖಾನ್‌ನನ್ನು ಸುಲ್ತಾನಪುರದ ನಂದರ್‌ಬಾರ್‌ದತ್ತ ಕಳುಹಿಸಿದನು. ಬುರ್ಹಾನ್‌ಷಾಹ್‌ನು ಹೀಗೆ ಯೋಚಿಸುತ್ತಾ ಏನೆಂದರೆ ಖಾನೆಖಾನಾನ್‌ನು ಬರಾರ್‌ದ ಮೇಲೆ ದಾಳಿ ಮಾಡಬಾರದು ಎಂದು

ಅಮಾದ್‌ಖಾನ್‌ನಿಗೆ ರಾಜಾ ಅಲಿಖಾನ್‌ನ ಬಳಿ ಕಳುಹಿಸಿದನು ಹಾಗೂ ಇದರ ಕುರಿತು ವಿಚಾರಿಸಿದನು.

ಒಂದು ಭೀಕರ ಘಟನೆ :

ಇದೇ ಸಮಯದಲ್ಲಿ ಚೇವಲ್ ಬಂದರುವಿನಲ್ಲಿ ಒಂದು ಭೀಕರ ರೂಪದ ಆಕಸ್ಮಿಕ ಘಟನೆ ಘಟಿಸಿತು. ಯಾವುದರ ವಿವರಣೆಯು ಹೀಗಿದೆ. ಏನೆಂದರೆ ಖವಾಲಾ ಕೋಟೆಯ ನಿರ್ಮಾಣದ ನಂತರ ಫರ್ಹಾದ್‌ಖಾನ್, ಅಸದ್‌ಖಾನ್, ತಾಜಖಾನ್ ಹಾಗೂ ನಸೀರುಲ್‌ಮುಲ್ಕರಂತಹ ಅತಿರಥಮಹಾರಥ ಅಮೀರರು ಕೋಟೆಯ ರಕ್ಷಣೆ, ಹಾಗೂ ವೈರಿಯನ್ನು ವಿನಾಶಗೊಳಿಸುವ ಪೂರ್ಣ ಪ್ರಮಾಣದ ಪ್ರಯತ್ನವನ್ನು ಮಾಡತೊಡಗಿದರು. ಅವರು ಈಸಾಯಿಗಳ ಎಲ್ಲ ಬಂದು ಹೋಗುವ ದಾರಿಗಳನ್ನು ಮುಚ್ಚಿ ಹಾಕಿದ್ದರು. ಈಸಾಯಿಗಳು ಇನ್ನೇನು ಕಷ್ಟಕ್ಕೀಡಾಗಿ ಈ ಪ್ರದೇಶದಿಂದ ಹೊರಹೋಗಲಿದ್ದರು. ಆದರೆ ಬುರ್ಹಾನ್‌ಷಾಹ್‌ನು ಇಂದ್ರಿಯ ಲೋಲುಪನಾದನು ಹಾಗೂ ಆತನು ಆಜ್ಞೆ ನೀಡಿದನು. ಪ್ರತಿಯೋರ್ವ ಸುಂದರ ಸ್ತ್ರೀ ಅವಳು ಕನ್ಯೆಯಾಗಿರಲಿ ಅಥವಾ ವಿವಾಹಿತಳಾಗಿರಲಿ ಅವನ ಅರಮನೆಯಲ್ಲಿ ಪ್ರವೇಶ ನೀಡಬೇಕು.

ಬುರ್ಹಾನ್ ನಿಜಾಮಷಾಹ್‌ನ ಇಂದ್ರಿಯ ಲೋಲುಪತನ :

ಬಾದಷಾಹ್‌ನ ಈ ಆಜ್ಞೆಯನ್ನು ಕೇಳಿ ಎಲ್ಲ ಸಮಸ್ತ ಪ್ರಜೆಗಳು ದಿಗ್ಮೂಢರಾದರು. ಬುರ್ಹಾನ್ ಷಾಹ್‌ನಿಗೆ ಯಾರೋ ಹೇಳಿದರು. ಏನೆಂದರೆ ಶುಜಾತಖಾನ್‌ನ ಪತ್ನಿಯು ಬಹಳ ರೂಪವತಿ ಯಾಗಿರುವಳು. ತಕ್ಷಣವೇ ಅವಳನ್ನು ದರ್ಬಾರಿನಲ್ಲಿ ಕರೆಸಲಾಯಿತು. ಶೂಜಾತ್‌ಖಾನ್‌ನು ತನ್ನ ಪತ್ನಿಯನ್ನು ಬಾದಷಾಹ್‌ನ ಬಳಿಗೆ ಕಳುಹಿಸಲು ನಿರಾಕರಿಸಿದನು. ಬುರ್ಹಾನ್‌ನು ತಕ್ಷಣವೇ ಶುಜಾತ್‌ಖಾನ್‌ನನ್ನು ಬಂಧಿಸಿ ಒಂದು ಕೋಟೆಯಲ್ಲಿಟ್ಟನು ಹಾಗೂ ಆತನ ಪತ್ನಿಯನ್ನು ತನ್ನ ಮಹಲಿನಲ್ಲಿ ಕರೆಯಿಸಿಕೊಂಡನು.

ಶುಜಾತ್‌ಖಾನ್‌ನ ಆತ್ಮಹತ್ಯೆ :

ಬುರ್ಹಾನ್‌ಷಾಹ್‌ನಿಗೆ ಈ ಸ್ತ್ರೀಯು ಮೆಚ್ಚುಗೆಯಾಗಲಿಲ್ಲ. ಹಾಗೂ ಅವಳನ್ನು ಸ್ಪರ್ಶಿಸದೇ ಮರಳಿ ಕಳುಹಿಸಿದನು. ಈ ಕಡೆ ಶುಜಾತ್‌ಖಾನ್ ಯಾವನು ಕೋಟೆಯಲ್ಲಿ ಬಂದಿಯಾಗಿದ್ದನು ಪತ್ನಿಯ ವಿರಹವನ್ನು ತಡೆಯದಾದನು. ಅವನು ಹೊಟ್ಟೆಯಲ್ಲಿ ತನ್ನದೇ ಕತ್ತಿಯನ್ನು ತೂರಿಸಿಕೊಂಡು ಆತ್ಮಹತ್ಯೆ ಮಾಡಿಕೊಂಡನು. ಈ ಘಟನೆಯಿಂದ ದಖ್ಖನ್ನಿನವರು ಬಹಳ ಪ್ರಭಾವಿತರಾದರು.

ಖವಾಲಾದ ಅಮೀರರ ನಿರ್ಧಾರ :

ಯಾವ ಅಮೀರರು ಖವಾಲಾ ಕೋಟೆಯ ರಕ್ಷಣೆಗಾಗಿ ನೇಮಿಸಲ್ಪಟ್ಟಿದ್ದರು. ಅವರು ಸಹ ಬಹಳೇ ಮುನಿಸಿಕೊಂಡಿದ್ದರು. ಈ ಅಮೀರರು ಅಹ್ಮದ್‌ನಗರಕ್ಕೆ

ಹೋಗುವುದಕ್ಕಾಗಿ ಹಾಗೂ ಬುರ್ಹಾನ್‌ಷಾಹ್‌ನನ್ನು ಸಿಂಹಾಸನದಿಂದ ಕೆಳಗಿಳಿಸಲು ಪ್ರಯತ್ನಿಸೋಣ ಎಂದು ನಿರ್ಧರಿಸಿದರು.

ಫಿರಂಗಿಗಳ ದಾಳಿ :

ಫಿರಂಗಿಗಳಿಗೆ ನಿಜಾಮಷಾಹೀ ಅಮೀರರ ಬಯಕೆಯ ಸುದ್ಧಿಯು ತಿಳಿಯಿತು. ಅವರು ಸೈನಿಕರನ್ನು ತುಂಬಿಸಿಕೊಂಡ ಅರವತ್ತು ಹಡಗುಗಳನ್ನು ಬೇರೆ ಬೇರೆ ಬಂದರುಗಳಿಂದ ತರಿಸಿಕೊಂಡರು ಹಾಗೂ ಇರುಳಿನ ಅಂಧಕಾರದಲ್ಲಿ ಖವಾಲಾ ಕೋಟೆಯನ್ನು ದಾಟಿ ರೇಕ್‌ನಂದಾ ತಲುಪಿದರು. ಜಿಲ್‌ಹಜ್ಜಾದ ೧೬ ರಂದು ಬೆಳಿಗ್ಗೆ ನಾಲ್ಕು ಸಾವಿರ ಫಿರಂಗಿಗಳು ಖವಾಲಾ ಕೋಟೆಯ ಮೇಲೆ ದಾಳಿ ಮಾಡಿದರು. ಕೋಟೆಯ ಹೊರಗಡೆಗೆ ತಾಜ್‌ಖಾನ್ ಹಾಗೂ ಅನಿರಾಯ ಕೆಲವು ಜನರ ಒಂದು ತಂಡದ ಜೊತೆಗೆ ನಿಂತಿದ್ದರು. ಅವರು ವೈರಿಗಳು ಬರುವುದನ್ನು ನೋಡಿದರು. ಆಗ ಗಾಬರಿಯಾಗಿ ಕೋಟೆಯೊಳಗೆ ಪ್ರವೇಶಿಸಿದರು.

ಮುಸ್ಲಿಮರ ಕೊಲೆ :

ಫಿರಂಗಿಗಳು ಕೊಲೆ ಹಾಗೂ ವಿನಾಶವನ್ನುಗೈಯ್ಯತೊಡಗಿದರು. ಏಕೆಂದರೆ ಫರ್ಹಾದ್‌ಖಾನ್‌ನು ಬಾದಷಾಹನೊಂದಿಗಿನ ಮುನಿಸಿನಿಂದಾಗಿ ಇಲ್ಲಿ ಮೊದಲಿನಂತೆ ಕೋಟೆಯ ರಕ್ಷಣೆಯನ್ನು ಮಾಡುತ್ತಿರಲಿಲ್ಲ. ಅದಕ್ಕಾಗಿ ರಕ್ಷಿಸುವವರೂ ಕತ್ತಲೆಯ ದೆಸೆಯಿಂದ ಕೋಟೆಯ ಬಾಗಿಲುಗಳನ್ನು ತೆರೆದೇ ಇಟ್ಟಿದ್ದರು. ಈಸಾಯಿಗಳು ಯಾರು ಮುಸ್ಲಿಮರನ್ನು ಹಿಂಬಾಲಿಸಿ ಬರುತ್ತಿದ್ದರು ಅವರು ರಕ್ಷಕರನ್ನು ಬಾಗಿಲನ್ನು ಹಾಕಿಕೊಳ್ಳಲು ಅವಕಾಶವನ್ನೇ ಕೊಡಲಿಲ್ಲ. ಹಾಗೂ ತಾಜ್‌ಖಾನ್‌ನ ಹಾಗೂ ಇತರರ ಹಿಂದೆ ಹಿಂದೆಯೇ ಕೋಟೆಯೊಳಗೆ ನುಸುಳಿದರು. ಹಾಗೂ ಮುಸ್ಲಿಮರ ಕಗ್ಗೊಲೆಯಲ್ಲಿ ನಿರತರಾದರು.

ಫರ್ಹಾದ್‌ಖಾನ್ ಹಾಗೂ ಅಸದಖಾನ್‌ರು ಕೋಟೆಯೊಳಗಿನವರ ಚೀತ್ಕಾರ ಕೇಳಿದರು ಹಾಗೂ ನಿದ್ರೆಯಿಂದ ಎಚ್ಚೆತ್ತರು. ಅದೇ ವೇಳೆಯಲ್ಲಿ ಕೋಟೆಯೊಳಗೆ ಮುಸ್ಲಿಮರ ಸಂಖ್ಯೆಯು ಈಸಾಯಿಗಳಿಗಿಂತ ಎರಡು ಪಟ್ಟು ಹೆಚ್ಚಾಗಿತ್ತು. ಆದರೂ ಅವರು ಎಷ್ಟು ಭಯಭೀತರಾದರೆಂದರೆ ದಿಕ್ಕುಗೆಟ್ಟು ನಿಂತುಬಿಟ್ಟರು. ಹಾಗೂ ವೈರಿಗಳ ಕೈಯಲ್ಲಿ ಕುರಿಗಳ ಹಾಗೆ ಕತ್ತರಿಸಲ್ಪಟ್ಟರು. ನೋಡನೋಡುತ್ತಲೇ ಹತ್ತರಿಂದ ಹನ್ನೆರಡು ಸಾವಿರ ಮುಸ್ಲಿಮರ ಶವಗಳು ಕೋಟೆಯಲ್ಲಿ ಕಾಣಿಸತೊಡಗಿದವು.

ಸೋಲು ಅಥವಾ ನಿಜವಾದ ಗೆಲುವು :

ಫಿರಂಗಿಗಳು ಕೋಟೆಯನ್ನು ಕೆಡವಿ ಸಮಸ್ತ ವಸ್ತುಗಳನ್ನು ವಶಪಡಿಸಿಕೊಂಡರು. ಫರ್ಹಾದ್‌ಖಾನ್ ಯಾರು ಗಾಯಗೊಂಡಿದ್ದನು ಆತನನ್ನು ಹಾಗೂ ಎಲ್ಲ ಜೀವಂತ

ಮುಸ್ಲಿಮರನ್ನು ಬಂಧಿಸಿದರು. ಈ ಕೈದಿಗಳಲ್ಲಿಯ ಎಲ್ಲ ಅಮೀರರನ್ನು ಒಬ್ಬೊಬ್ಬರನ್ನಾಗಿ ಆರಿಸಿ ಕೊಲೆಗೈದರು. ಬುರ್ಹಾನ್‌ಷಾಹ್‌ನಿಗೆ ಈ ಎಲ್ಲ ಘಟನೆಗಳ ವಿವರವು ತಿಳಿಯಿತು. ಹಾಗೂ ಆತನು ಈ ಸೋಲನ್ನು ನಿಜವಾದ ಗೆಲುವೆಂದು ಬಗೆದನು.

ವಿದೇಶಿಗರತ್ತ ಗಮನ :

ಈ ಘಟನೆಯ ನಂತರ ಬುರ್ಹಾನ್‌ಷಾಹ್‌ನು ವಿದೇಶಿಗರತ್ತ ಗಮನ ನೀಡಿದನು. ಮುರ್ತುಜಾಖಾನ್ ಅಂಜುವು, ಅಬ್ದುಸ್ಸಲಾವ್ ಅರಬ್, ಅಹ್ಮದ್ ಬೇಗ್ ಖಿಜಲ್‌ಬಾಷ್‌ಖಾನ್, ಖಲೀಫಾ ಏ ಅರಬ್, ಉಜಬ್ಬಕ್ ಬಹಾದ್ದೂರ್ ಹಾಗೂ ಇತರರಿಗೆ ಅಮೀರರ ಗುಂಪಿನಲ್ಲಿ ಸೇರಿಸಲಾಯಿತು. ಬಾದಷಾಹ್‌ನು ಈ ಅಮೀರರನ್ನು ಚೇವಲ್‌ಕ್ಕೆ ಕಳುಹಿಸಿ ಈಸಾಯಿಗಳ ಕ್ಷೋಭೆಯನ್ನು ದಮನಗೊಳಿಸಲು ಇಚ್ಛಿಸಿದನು. ಆದರೆ ಅದರ ಅವಶ್ಯಕತೆ ಬೀಳಲಿಲ್ಲ.

ಆದಿಲ್‌ಷಾಹ್‌ನ ಸಹೋದರನಿಗೆ ಸಹಾಯ :

ಏನಾಯಿತೆಂದರೆ ಆಕಸ್ಮಿಕವಾಗಿ ಆದಿಲ್‌ಷಾಹ್‌ನ ಸಹೋದರ ಯಾರು ಬಲ್‌ಗವಾನ್ ಕೋಟೆಯಲ್ಲಿ ಬಂದಿಯಾಗಿದ್ದನು ಹೇಗಾದರೂ ಮಾಡಿ ಸ್ವತಂತ್ರನಾಗಿ ಬುರ್ಹಾನ್‌ಷಾಹ್‌ನಿಂದ ಸಹಾಯವನ್ನು ಯಾಚಿಸಿದನು. ಆತನು ವಾಗ್ದಾನ ಮಾಡಿದನು. ಬಿಜಾಪುರವನ್ನು ವಶಪಡಿಸಿಕೊಂಡ ನಂತರ ಒಂಬತ್ತು ಲಕ್ಷ ಹವನ್ ಎರಡು ನೂರು ಆನೆ ಹಾಗೂ ಸೋಲಾಪುರ ಕೋಟೆಯನ್ನು ಬುರ್ಹಾನ್‌ಷಾಹ್‌ನಿಗೆ ನೀಡುವೆನು. ಬುರ್ಹಾನ್‌ಷಾಹ್‌ನು ಲೋಭಕ್ಕೊಳಗಾಗಿ ಚೇವಲ್ ಬಂದರದ ದಾಳಿಯನ್ನು ಮುಂದೂಡಿದನು ಹಾಗೂ ಆದಿಲ್‌ಷಾಹ್‌ನ ಸಹೋದರನ ಸಹಾಯಕ್ಕಾಗಿ ಸಿದ್ಧತೆ ಮಾಡತೊಡಗಿದನು.

ರೋಗ :

ಹಿಜ್ರಿ ಶಕೆ ೧೦೦೩ ರಲ್ಲಿ ಬುರ್ಹಾನ್‌ಷಾಹ್‌ನು ಅಹ್ಮದ್ ನಗರದಿಂದ ಬಲ್‌ಗವಾನ್ ದತ್ತ ಹೊರಟನು. ಯಾವಾಗ ಆತನು ಪರಿಂದಾದ ಬಳಿ ತಲುಪಿದನು ಆಗ ಆತನಿಗೆ ತಿಳಿಯಿತು ಏನೆಂದರೆ ಆದಿಲ್‌ಷಾಹ್‌ನ ಸಹೋದರನು ಒಂದು ಯುದ್ಧದಲ್ಲಿ ಕೊಲ್ಲಲ್ಪಟ್ಟಿದ್ದಾನೆ. ಬುರ್ಹಾನ್‌ಷಾಹ್‌ನು ಚಿಂತಿತನಾಗಿ ಸಂಕಷ್ಟಗಳೊಂದಿಗೆ ಮರಳಿ ಬಂದನು. ಈ ಘಟನೆಯ ಕುರಿತು ಬಾದಷಾಹನಿಗೆ ಬಹಳ ವಿಷಾದವುಂಟಾಯಿತು. ಎಲ್ಲಿಯವರೆಗೆಂದರೆ ಆತನ ಪ್ರಕೃತಿ ಹದಗೆಟ್ಟಿತು ಹಾಗೂ ಆತನು ಹಾಸಿಗೆ ಹಿಡಿದನು.

ಆದಿಲ್‌ಷಾಹ್‌ನ ದಾಳಿ :

ಆದಿಲ್‌ಷಾಹ್‌ನಿಗೆ ಈ ಸುದ್ದಿ ತಿಳಿಯಿತು. ಏನೆಂದರೆ ಬುರ್ಹಾನ್‌ಷಾಹ್‌ನು ತನ್ನ ಸಹೋದರ ಯುವರಾಜನಾದ ಇಸ್ಮಾಯಿಲ್‌ನಿಗೆ ಸಹಾಯ ಮಾಡಲು ವಾಗ್ದಾನ

ನೀಡಿದ್ದನು. ಆ ಕಾರಣದಿಂದ ಆತನು ಗಡಿಯಲ್ಲಿನ ಅಮೀರರಿಗೆ ಆಜ್ಞೆ ನೀಡಿದನು. ಅವರು ನಿಜಾಮಷಾಹಿ ಪ್ರಾಂತ್ಯದಲ್ಲಿ ಪ್ರವೇಶಿಸಿ ವಿನಾಶವನ್ನು ಮಾಡಲು ತೊಡಗಬೇಕು. ಬುರ್ಹಾನ್‌ಷಾಹ್‌ನು ಕರ್ನಾಟಕದ ದೊರೆಯಾದ ತನಕ್‌ನಾದರಿಯೊಂದಿಗೆ ಸ್ನೇಹ ಬೆಳೆಸಿದನು. ಹಾಗೂ ಆತನೊಂದಿಗೆ ಈ ಸಂಧಾನ ಮಾಡಿದನು. ಏನೆಂದರೆ ಒಂದು ಕಡೆಯಿಂದ ತನಕ್‌ನಾದರಿ ಆದಿಲ್‌ಷಾಹ್‌ನ ಪ್ರಾಂತ್ಯದ ಮೇಲೆ ದಾಳಿ ಮಾಡಬೇಕು. ಹಾಗೂ ಬಂಕಾಪುರ ಕೋಟೆಯನ್ನು ವಶಪಡಿಸಿಕೊಳ್ಳಬೇಕು. ಹಾಗೂ ಮತ್ತೊಂದು ಕಡೆಯಿಂದ ಬುರ್ಹಾನ್‌ಷಾಹ್‌ನು ದಾಳಿ ಮಾಡಿ ಸೋಲಾಪುರದ ಕೋಟೆಯನ್ನು ತನ್ನ ವಶಕ್ಕೆ ತೆಗೆದುಕೊಳ್ಳುವುದು.

ನಿಜಾಮಷಾಹಿ ಸೈನ್ಯದ ಹೊರಡುವಿಕೆ :

ಬುರ್ಹಾನ್‌ಷಾಹ್‌ನು ಮುರ್ತುಜಾ ಅಂಜುವಿಗೆ ಸೈನ್ಯಾಧಿಕಾರಿಯನ್ನಾಗಿ ನೇಮಿಸಿದನು. ಹಾಗೂ ಆತನಿಗೆ ಇಖ್ಲಾಸ್‌ಖಾನ್ ಹಾಗೂ ಇತರ ಎಲ್ಲ ವಿದೇಶಿ ಅಮೀರರೊಂದಿಗೆ ಹಿಜ್ರಿಶಕೆ ೧೦೦೧ ರ ಜಮಾದಿಲ್ ಅವ್ವಲದ ೧ನೇ ತಾರೀಖಿನಂದು ಕಳುಹಿಸಿದನು. ಮುರ್ತುಜಾ ಅಂಜುವು ಹತ್ತು ಹನ್ನೆರಡು ಸಾವಿರ ಸೈನಿಕರನ್ನು ಜೊತೆಗೆ ತೆಗೆದುಕೊಂಡು ಬರ್ಕಿ ಅಮೀರರನ್ನು ಎದುರಿಸಲು ಹಾಗೂ ಆದಿಲ್‌ಷಾಹ್‌ನ ಪ್ರಾಂತ್ಯವನ್ನು ವಿನಾಶಗೊಳಿಸಲು ಹೊರಟನು. ಬಾದಷಾಹ್‌ನು ಮುರ್ತುಜಾ ಅಂಜುವಿನೊಂದಿಗೆ ಹೀಗೆಂದನು. ನಾನೂ ಸಹ ರೋಗಮುಕ್ತನಾದ ನಂತರ ಬರಾರಿ ಅಮೀರರೊಂದಿಗೆ ಆ ಕಡೆಗೆ ಹೋಗುವೆನು.

ಉಜಬಕ್ ಬಹಾದ್ದೂರ್‌ನ ಕೊಲೆ :

ಮುರ್ತುಜಾಅಂಜುವು ತನ್ನ ಸೈನ್ಯವನ್ನು ತೆಗೆದುಕೊಂಡು ಕೋಟೆಯ ಹತ್ತಿರ ತಲುಪಿದನು. ಆತನು ಉಜ್ಬಕ್ ಬಹಾದ್ದೂರ್‌ನಿಗೆ ಕೆಲಜನರ ಸೈನ್ಯದ ತಂಡದೊಂದಿಗೆ ಬರ್ಕಿ ಅಮೀರರನ್ನು ಎದುರಿಸುವುದಕ್ಕಾಗಿ ಕಳುಹಿಸಿಕೊಟ್ಟನು. ಪರಸ್ಪರರಲ್ಲಿ ಯುದ್ಧವು ಜರುಗಿತು. ಇದರ ಪರಿಣಾಮಸ್ವರೂಪವಾಗಿ ಉಜ್ಬಕ್ ಬಹಾದ್ದೂರ್‌ನು ಕೊಲ್ಲಲ್ಪಟ್ಟನು.ಹಾಗೂ ನಿಜಾಮಷಾಹಿ ಸೈನ್ಯಕ್ಕೆ ಸೋಲಿನ ಮುಖ ನೋಡಬೇಕಾಯಿತು.

ಬಾದ್‌ಷಾಹ್‌ನ ಗುಣಕಾಣದ ಕಾಯಿಲೆ :

ಬಾದ್‌ಷಾಹ್‌ನಿಗೆ ಯಾವಾಗ ಸೋಲಿನ ಕುರಿತು ಸುದ್ದಿ ಮುಟ್ಟಿತೋ ಆಗ ಆತನು ಬಹಳೇ ಮುನಿಸಿಕೊಂಡನು. ಮೊದಲೇ ಆತನು ಕಾಯಿಲೆಯಿಂದ ಬಳಲುತ್ತಿದ್ದನು. ಈಗ ಈ ಕೆಟ್ಟ ಸುದ್ದಿಯು ಆತನನ್ನು ಎಷ್ಟು ದುರ್ಬಲಗೊಳಿಸಿತೆಂದರೆ ಎಲ್ಲ ಹಕೀಮರು ಕೈ ಎತ್ತಿದರು. ರಕ್ತಾತಿಸಾರ, ಹಾಗೂ ಆಂತ್ರಿಕ ಜ್ವರವು ಬಾದಷಾಹನನ್ನು ಸಂಪೂರ್ಣವಾಗಿ ನಿತ್ರಾಣಗೊಳಿಸಿತು. ಇದರಿಂದಾಗಿ ಆತ ಹಾಸಿಗೆ ಹಿಡಿದನು.

ಯುವರಾಜ ಇಬ್ರಾಹಿಂನಿಗೆ ಉತ್ತರಾಧಿಕಾರಿಯ ಪಟ್ಟ :

ಬುರ್ಹಾನ್‌ಷಾಹ್‌ನು ತನ್ನ ಹಿರಿಯ ಮಗನಾದ ಯುವರಾಜ ಇಬ್ರಾಹಿಮನಿಗೆ ತನ್ನ ಉತ್ತರಾಧಿಕಾರಿಯನ್ನಾಗಿ ಮಾಡಿದನು. ಬುರ್ಹಾನ್‌ನು ತನ್ನ ಕಿರಿಯ ಪುತ್ರ ಇಸ್ಮಾಯಿಲನಿಂದ ಈ ಕಾರಣಕ್ಕೆ ಮುನಿಸಿಕೊಂಡಿದ್ದನು. ಏಕೆಂದರೆ ಆತನು ಮೆಹದ್ವಿ ಮತವನ್ನು ತೀವ್ರವಾಗಿ ವಿರೋಧಿಸುತ್ತಿದ್ದನು. ಇಖ್ಲಾಸ್‌ಖಾನ್‌ನ ಈ ಬಯಕೆಯಿತ್ತು. ಏನೆಂದರೆ ಯುವರಾಜನಾದ ಇಸ್ಮಾಯಿಲನು ಉತ್ತರಾಧಿಕಾರಿಯಾಗಿ ನೇಮಿಸಲ್ಪಡಬೇಕು. ಅದಕ್ಕಾಗಿ ಯಾವಾಗ ಆತನಿಗೆ ಇಬ್ರಾಹಿಂನ ಉತ್ತರಾಧಿಕಾರಿಯ ಪಟ್ಟದ ಸುದ್ಧಿ ತಲುಪಿತೋ ಆಗ ಆತನಿಗೆ ಬಹಳ ನಿರಾಶೆಯುಂಟಾಯಿತು.

ಇಖ್ಲಾಸ್‌ಖಾನ್‌ನ ಕೋಲಾಹಲ :

ಇಖ್ಲಾಸ್‌ಖಾನನು ಮುರ್ತುಜಾ ಅಂಜುವಿನ್ ಸೈನ್ಯದಲ್ಲಿ ಈ ಸುಳ್ಳು ಸುದ್ಧಿಯನ್ನು ಹಬ್ಬಿಸಿದನು. ಏನೆಂದರೆ ಬುರ್ಹಾನ್‌ಷಾಹನ ಮೃತ್ಯುವಾಯಿತು. ಅದರ ನಂತರ ಆತನು ಜಮಾಲ್‌ಖಾನ್‌ನ ಅಡಿಯಲ್ಲಿ ಈ ಆಜ್ಞೆಯನ್ನು ಮಾಡಿದನು. ವಿದೇಶಿಗಳ ಸಂಪೂರ್ಣ ವಸ್ತು, ಆಸ್ತಿಗಳನ್ನು ಲೂಟಿ ಮಾಡಬೇಕು. ಮುರ್ತುಜಾ ಖಾನ್‌ನಿಗೆ ಯಾವಾಗ ಇದರ ಅರಿವು ಉಂಟಾಯಿತೋ ಆತನೂ ಸಹ ಕೊಲೆ, ಲೂಟಿ ಹಾಗೂ ವಿನಾಶವನ್ನು ಗೈಯ್ಯಲು ನಿರ್ಧರಿಸಿದನು. ಹಲವಾರು ವಿದೇಶಿ ಅಮೀರರು ಅಹ್ಮದ್‌ನಗರದತ್ತ ಪ್ರಯಾಣ ಬೆಳೆಸಿದರು ಹಾಗೂ ಬೇಗಬೇಗನೇ ಬುರ್ಹಾನ್‌ಷಾಹ್‌ನ ಬಳಿಗೆ ತಲುಪಿದರು.

ಅಬ್ದುಲ್‌ಸ್ಸಲಾಮ್ ಅರಬ್‌ನ ಕೊಲೆ :

ಬಹಾದ್ದೂರ್‌ಷಾಹ್ ಗೀಲಾನಿಯು ಸುಳ್ಳು ಸುದ್ಧಿಗಳನ್ನೆ ಸತ್ಯವೆಂದು ನಂಬಿದನು. ಹಾಗೂ ಆತನಿಗೆ ಬುರ್ಹಾನ್‌ಷಾಹ್‌ನ ಸಾವಿನ ಕುರಿತು ನಂಬಿಕೆ ಹುಟ್ಟಿತು. ಹಾಗೂ ಕೆಲವು ವಿದೇಶಿಗಳ ಜೊತೆಯಾಗಿ ಬಿಜಾಪುರಕ್ಕೆ ಹೊರಟನು. ಶೇಖ ಅಬುಸ್ಸಲಾಮ್ ಅರಬ್‌ನಿಗೆ ದಖ್ಖನಿಗಳ ಸ್ನೇಹದ ಮೇಲೆ ಬಹಳೇ ನಂಬಿಕೆ ಇತ್ತು. ಅದಕ್ಕಾಗಿ ಆತನ ಸೈನ್ಯದಲ್ಲಿಯೇ ಉಳಿದನು. ದಖ್ಖನಿಗಳು ಈ ಗೆಳೆತನವನ್ನು ದೂರವಿಟ್ಟು ಆತನ ಜೀವಕ್ಕೆ ಕಂಟಕವಾಗುವ ವೈರಿಗಳಾದರು. ಈ ದಖ್ಖನಿಗಳು ಅಬ್ದುಸ್ಸಲಾಮ್ ಅರಬ್‌ಹಾಗೂ ಆತನ ಆಪ್ತ ಸಂಬಂಧಿಕರನ್ನು ಮೃತ್ಯುವಿನ ವಶಪಡಿಸಿದರು.

ಅಹ್ಮದ್‌ನಗರಕ್ಕೆ ಇಖ್ಲಾಸ್‌ನ ಹೊರಡುವಿಕೆ :

ಇಖ್ಲಾಸ್‌ನು ವಿದೇಶಿಗಳನ್ನು ವಿನಾಶಗೊಳಿಸಿದನು. ನಂತರ ಎಲ್ಲ ಹಬ್ಷಿ ಹಾಗೂ ದಖ್ಖನಿ ಅಮೀರರನ್ನು ಜೊತೆಗೆ ಕರೆದುಕೊಂಡು ಅಹ್ಮದ್‌ನಗರದತ್ತ ಹೊರಟನು. ಏಕೆಂದರೆ ಬುರ್ಹಾನ್‌ಷಾಹ್‌ನ ಕಥೆ ಮುಗಿಸುವುದು ಅವನ ಉದ್ದೇಶವಾಗಿತ್ತು.

ಬುರ್ಹಾನ್‌ಷಾಹ್‌ನು ತನ್ನ ಜನರ ಒಂದು ತಂಡವನ್ನು ಇಖ್‌ಲಾಸ್‌ಖಾನ್‌ನ ಬಳಿ ಕಳುಹಿಸಿದರು. ಹಾಗೂ ಎಲ್ಲ ತೆರನಾಗಿ ಆತನನ್ನು ತಿಳಿಸಲು ಪ್ರಯತ್ನಿಸಿದನು. ಆದರೆ ಆತನ ಹೃನ್ಮನಗಳ ಮೇಲೆ ಎಂಥಹ ಪರದೆಗಳು ಬಿದ್ದಿದ್ದವೆಂದರೆ ಆತನಿಗೆ ಏನೂ ಹೊಳೆಯಲಿಲ್ಲ.

ಕೋಟೆಯಿಂದ ಬಾದಷಾಹ್‌ನ ಹೊರಗೆ ಬರುವಿಕೆ :

ಬಾದಷಾಹ್‌ನು ಅಸಹಾಯಕನಾದನು. ಕಾಯಿಲೆ ಹಾಗೂ ನಿತ್ರಾಣದ ಹೊರತಾಗಿಯೂ ಪಲ್ಲಕ್ಕಿಯನ್ನು ಏರಿದನು. ಕೋಟೆಯಿಂದ ಹೊರಬಂದು ಆತನು ಛತ್ರ ಚಾಮರ ಹಾಗೂ ಇತರ ಆಡಳಿತಾತ್ಮಕ ಅವಶ್ಯಕ ವಸ್ತುಗಳನ್ನು ಇಬ್ರಾಹಿಂನಿಗೆ ಒಪ್ಪಿಸಿದನು. ಆ ದಿನ ಬುರ್ಹಾನ್ ನಿಜಾಮಷಾಹ್‌ನು ತನ್ನ ತಾಯಿಯು ಕಟ್ಟಿಸಿದ ಅರಮನೆ 'ಹಿಮಾಯೂಪುರ'ದಲ್ಲಿ ತಂಗಿದನು.

ಇಖ್ಲಾಸ್‌ಖಾನ್‌ನ ಸೋಲು :

ಮರುದಿನ ಇಖ್ಲಾಸ್‌ಖಾನ್‌ನು ದ್ರೋಹ ಮತ್ತು ಅಪನಂಬಿಕೆಯನ್ನು ತೀವ್ರವಾಗಿ ಪ್ರದರ್ಶಿಸಿದನು. ಹಾಗೂ ಸೈನ್ಯವನ್ನು ತೆಗೆದುಕೊಂಡು ತನ್ನ ಒಡೆಯನ ಎದುರಿಗೆ ಬಂದನು. ಪರಸ್ಪರರಲ್ಲಿ ಭೀಕರ ಯುದ್ಧವಾಯಿತು. ಇಖ್ಲಾಸ್‌ಖಾನ್‌ನ ಮೇಲೆ ದ್ರೋಹದ ದುರ್ವಿಧಿಯ ಸಿಡಿಲೆರಗಿತು. ಹಾಗೂ ಆತನು ಸೋಲುಂಡು ಪರಿಂದಾದತ್ತ ಓಡಿ ಹೋದನು.

ಬುರ್ಹಾನ್‌ಷಾಹ್‌ನ ನಿಧನ :

ಈ ಯುದ್ಧದಲ್ಲಿ ಬುರ್ಹಾನ್‌ಷಾಹ್‌ನಿಗೆ ಬಹಳ ತೊಂದರೆಗಳನ್ನು ಅನುಭವಿಸಬೇಕಾಯಿತು. ಆ ಕಾರಣದಿಂದ ಆತನ ಆರೋಗ್ಯ ಮತ್ತಷ್ಟು ಹದಗೆಟ್ಟಿತ್ತು. ಮರುದಿನವೇ ೧೮ರ ಷವ್ವಾಲ್ ೧೦೦೩ ಹಿಜ್ರಿಶಕೆಯಂದು ಬುರ್ಹಾನ್ ನಿಜಾಮಷಾಹ್‌ನು ನಿಧನನಾದನು.

ಬುರ್ಹಾನ್‌ಷಾಹ್‌ನ ಆಡಳಿತಾವಧಿಯು ನಾಲ್ಕುವರ್ಷ ಹಾಗೂ ಹದಿನಾರು ದಿನದ್ದಾಗಿದೆ. ಪ್ರಸಿದ್ಧ ಕವಿ ಮೌಲಾನಾ ಜಹೂರಿಯು ತನ್ನ ಅಮರ ಕೃತಿಯಾದ 'ಸಾಖಿನಾಮಾ' ವನ್ನು ಇದೇ ಬಾದಷಾಹ್‌ನ ಹೆಸರಿನಲ್ಲಿ ಅರ್ಪಿಸಿರುವನು. ಈ ಕೃತಿಯು ಕಾವ್ಯ ಕಲೆಯಲ್ಲಿ ತನ್ನದೇ ಆದ ಸ್ಥಾನವನ್ನು ಪಡೆದಿದೆ. ಹಾಗೂ ಇದರಲ್ಲಿ ೪೦೦೦ ದ್ವಿಪದಿಗಳಿವೆ.

■

*

೮. ಬುರ್ಹಾನ್ ನಿಜಾಮಷಾಹ್‌ನ ಪುತ್ರ ಇಬ್ರಾಹಿಂ ನಿಜಾಮಷಾಹ್

ಮಿಯಾಮಂಜುವಿನ ನೇಮಕಾತಿ :

ಬುರ್ಹಾನ್‌ಷಾಹ್‌ನ ಮೃತ್ಯುವಿನ ನಂತರ ಇಬ್ರಾಹಿಂ ನಿಜಾಮನು ಪಟ್ಟವನ್ನಲಂಕರಿಸಿದನು. ನಿಜಾಮಷಾಹನ ಉಯಿಲಿನ ಪ್ರಕಾರ ಮಿಯಾ ಮಂಜುವಿ ದಖನಿಗೆ ಯಾರು ಬುರ್ಹಾನ್ ನಿಜಾಮಷಾಹ್‌ನ ಉನ್ನತ ದರ್ಜೆಯ ಅಧಿಕಾರಿಯಾಗಿದ್ದನು. ಆತನಿಗೆ ಪ್ರಾಂತ್ಯದ ಮೇಲ್ವಿಚಾರಕನನ್ನಾಗಿ ನೇಮಿಸಲಾಯಿತು. ಇಖ್ಲಾಸ್‌ಖಾನ್‌ನು ಬುರ್ಹಾನ್ ಷಾಹ್‌ನೊಂದಿಗೆ ಯುದ್ಧಕ್ಕಿಳಿದು ದ್ರೋಹಿಯಾದ ಸಾಬೀತು ನೀಡಿದ್ದನು. ಆದರೆ ಯಾವಾಗ ಇಬ್ರಾಹಿಂ ಪಟ್ಟಾಧೀಶನಾದನೋ ಆಗ ಆತನು ತನ್ನ ಜನರನ್ನು ಕಳುಹಿಸಿ ತನ್ನ ತಪ್ಪಿನ ಕ್ಷಮೆಯನ್ನು ಕೇಳಿದನು. ಹಾಗೂ 'ಅಭಯಪತ್ರ' ವನ್ನು ಬಯಸಿದನು.

ಮಿಯಾ ಮಂಜುವಿ ಹಾಗೂ ಇಬ್ರಾಹಿಂ ನಿಜಾಮ ಈರ್ವರೂ ಇಖ್ಲಾಸ್‌ಖಾನ್‌ನಿಂದ ಬಹಳ ಭಯಭೀತರಾಗಿದ್ದರು. ಈರ್ವರೂ ತಕ್ಷಣ ಇಖ್ಲಾಸ್‌ಖಾನ್‌ನ ತಪ್ಪನ್ನು ಕ್ಷಮಿಸಿದರು. ಹಾಗೂ 'ಅಭಯಪತ್ರ'ವನ್ನು ಕಳುಹಿಸಿದರು. ಇಖ್ಲಾಸ್‌ಖಾನ್‌ನು ಅಹ್ಮದ್‌ನಗರಕ್ಕೆ ಬಂದನು. ಹಾಗೂ ಇಲ್ಲಿಂದ ಹಬ್ಷಿಗಳ ಒಂದು ತಂಡವನ್ನು ತನ್ನ ಹಿತೈಷಿಗಳೊಂದಿಗೆ ಸೇರಿಸಿಕೊಂಡನು.

ಅರಾಜಕತೆ :

ಈ ದಿನಗಳಲ್ಲಿ ಅಹ್ಮದ್‌ನಗರದಲ್ಲಿ ಎರಡು ಗುಂಪುಗಳು ಸ್ಪಷ್ಟವಾಗಿ ದೃಷ್ಟಿಗೋಚರವಾಗುತ್ತಿದ್ದವು. ಒಂದು ಮಂಜುವಿಖಾನ್‌ನ ಹಿತೈಷಿಗಳ ಗುಂಪು ಹಾಗೂ ಎರಡನೆಯದು ಇಖ್ಲಾಸ್‌ಖಾನ್‌ನ ವಿಧೇಯತೆ ತಮ್ಮ ಜೀವನದ ಉದ್ದೇಶವೆಂದು ಬಗೆದ ಗುಂಪಾಗಿತ್ತು. ಈ ಎರಡೂ ಗುಂಪುಗಳು ಪರಸ್ಪರ ಯಾವುದೇ

ಸಂಬಂಧವಿಲ್ಲದವರಂತೆ ದೂರ ಕಾಯ್ದುಕೊಂಡಿದ್ದರು. ಇದರ ಪರಿಣಾಮವಾಗಿ ಮೌಲ್ಯ ರಹಿತ ರಾಜಕಾರಣ ಹಾಗೂ ಗೊಂದಲವುಂಟಾಗಿ ಪ್ರಾಂತ್ಯದ ಘನತೆಯು ಕುಗ್ಗತೊಡಗಿತು. ಪ್ರತಿಯೋರ್ವನೂ ತನ್ನತನ್ನಲ್ಲಿ ಮದೋನ್ಮತ್ತರಾಗಿ ಇರತೊಡಗಿದರು. ಯಾರಿಗೂ ಯಾರದೇ ಪರಿವೇ ಇರಲಿಲ್ಲ.

ಆದಿಲ್‌ಷಾಹೀ ದೂತನಿಗೆ ಅವಮಾನ :

ಅಹ್ಮದ್‌ನಗರದ ಭಿನ್ನಭಿನ್ನ ವಿಚಾರದ ಗುಂಪುಗಳು ಕೆಲವು ಸಲ ಅಕಬರ್ ಬಾದಷಾಹ್‌ನೊಂದಿಗೆ ಯುದ್ಧಮಾಡುವ ಇಚ್ಚೆಯುಳ್ಳವರಾಗಿದ್ದರು. ಮತ್ತೆ ಕೆಲವು ಸಲ ಇಬ್ರಾಹಿಂ ನಿಜಾಮಷಾಹನೊಂದಿಗೆಯೇ ಕದನಕ್ಕಿಳಿಯಲು ಬಯಸುತ್ತಿದ್ದರು. ನಿಜಾಮಷಾಹಿಗಳು ಆದಿಲ್‌ಷಾಹನ ದೂತರಾದ ಮೀರ್ ಸಫ್‌ವಿಯೊಂದಿಗೆ ಯಾರು ಉನ್ನತ ಕುಲೀನ ಸೈಯ್ಯದ್‌ರಾಗಿದ್ದರು ಅವರೊಂದಿಗೆ ಅನಾದರ ತೋರಿದರು ಹಾಗೂ ಅನಾಗರಿಕ ರೀತಿಯಲ್ಲಿ ನಡೆದುಕೊಂಡರು. ಆದಿಲ್‌ಷಾಹ್‌ನಿಗೆ ಯಾವಾಗ ಇದರ ಕುರಿತು ಮಾಹಿತಿ ಲಭಿಸಿತೋ ಆಗ ಆತನು ನಿಜಾಮಷಾಹೀ ವಂಶದ ಒಳಿತಿಗಾಗಿ ಈ ಅನಾಗರಿಕ ದಖ್ಖನಿಗಳಿಗೆ ಸನ್ಮಾರ್ಗಕ್ಕೆ ತರುವುದು ಅವಶ್ಯವೆಂದು ಬಗೆದನು. ಹಾಗೂ ಬಿಜಾಪುರದಿಂದ ಷಾಹ್‌ದುರ್ಗದತ್ತ ಹೊರಟನು.

ಆದಿಲ್‌ಷಾಹನ ಆಗಮನ ಹಾಗೂ ಅಮೀರರ ಅಭಿಪ್ರಾಯ :

ಇಖ್ಲಾಸ್‌ಖಾನ್ ಹಾಗೂ ಅವನ ಜೊತೆಗಾರರ ಅಭಿಪ್ರಾಯವು ಇದಾಗಿತ್ತು. ಏನೆಂದರೆ ಸೈನ್ಯವನ್ನು ಸೇರಿಸಿ ಗಡಿಪ್ರದೇಶದಲ್ಲಿ ಆದಿಲ್‌ಷಾಹ್‌ನನ್ನು ಎದುರಿಸಬೇಕು. ಮಿಯಾಮಂಜೂವಿಗೆ ಈ ಸಲಹೆಯು ಹಿಡಿಸಲಿಲ್ಲ. ಹಾಗೂ ಹೀಗೆಂದನು. ನಮ್ಮ ಸೈನ್ಯವು ತರಬೇತಿ ಹಾಗೂ ಸಂಘಟನಾತ್ಮಕವಾಗಿ ಬಲಯುತವಾಗಿಲ್ಲ, ನಮ್ಮ ಕಡೆಗೆ ಸಾಕಷ್ಟು ಯುದ್ಧ ಸಾಮಗ್ರಿಯೂ ಇಲ್ಲ. ಅಮೀರರ ಈ ಅವಸ್ಥೆಯಾಗಿದೆ ಏನೆಂದರೆ ಅವರು ಪೂರ್ಣಪ್ರಮಾಣದಲ್ಲಿ ಬಾದಷಾಹ್‌ನಿಗೆ ವಿಧೇಯರಾಗಿಲ್ಲ. ಅದಕ್ಕಾಗಿ ಈ ವೇಳೆ ನಾವು ಕೆಲ ಜನರನ್ನು ಕೊಡುಗೆ ಕಾಣಿಕೆಗಳೊಂದಿಗೆ ಆದಿಲ್‌ಷಾಹ್‌ನ ಸೇವೆಯಲ್ಲಿ ಕಳುಹಿಸಬೇಕು. ಹಾಗೂ ಆತನೊಂದಿಗೆ ಸಂಧಾನ ಮಾಡಿಕೊಳ್ಳಬೇಕು. ಅದರ ನಂತರ ನಾವು ಆಡಳಿತ ಹಾಗೂ ಆರ್ಥಿಕವಾಗಿ ಬಲಗೊಳ್ಳಲು ಗಮನ ಕೊಡಬೇಕು. ಏಕೆಂದರೆ ಅಕ್ಬರ್ ಬಾದ್‌ಷಾಹ್‌ನೊಂದಿಗೆ ಯುದ್ಧ ಮಾಡಬಹುದಾಗಿದೆ.

ನಿಜಾಮಷಾಹ್‌ನ ಷಾಹ್‌ದುರ್ಗಕ್ಕೆ ಹೊರಡುವಿಕೆ :

ಇಖ್ಲಾಸ್‌ಖಾನ್‌ನು ಬಹಳ ಮೂರ್ಖನೂ ಸಂಕುಚಿತ ದೃಷ್ಟಿಯುಳ್ಳವನೂ ಆಗಿದ್ದನು. ತನ್ನ ಅಭಿಪ್ರಾಯದ ಮೇಲೆಯೇ ಅಚಲನಾದನು. ಹಾಗೂ ಮಂಜುವಿಖಾನ್‌ನ ಅಭಿಪ್ರಾಯವನ್ನು ಒಪ್ಪಲಿಲ್ಲ. ಇಬ್ರಾಹಿಂ ನಿಜಾಮ್‌ಷಾಹ್‌ನೂ ಆತನ ಕಡೆಗೆಯೇ

ವಾಲಿದ್ದನು. ಆ ಕಾರಣಕ್ಕೆ ಮಂಜುವಿಖಾನ್‌ನು ಮೌನವಹಿಸುವುದೇ ಒಳಿತೆಂದು ಭಾವಿಸಿದನು. ಇಬ್ರಾಹಿಂ ನಿಜಾಮ ಹಾಗೂ ಇಖ್ಲಾಸ್‌ಖಾನ್‌ರು ಸೈನ್ಯವನ್ನು ಸಿದ್ಧಗೊಳಿಸಿದರು ಹಾಗೂ ಷಾಹ್‌ದುರ್ಗದತ್ತ ಹೊರಟರು.

ಮಿಯಾ ಮಂಜವಿಯ ಸಲಹೆ :

ಯಾವಾಗ ನಿಜಾಮಷಾಹಿ ಸೈನ್ಯವು ಗಡಿಪ್ರದೇಶವನ್ನು ತಲುಪಿತೋ ಆಗ ಮಿಯಾ ಮಂಜುವಿಯು ಒಂದು ಸಲ ಮತ್ತೊಮ್ಮೆ ತಿಳಿಸುವ ಉದ್ದೇಶದಿಂದ ಸಲಹಾ ಸಮಿತಿಯನ್ನು ರಚಿಸಿದನು. ಹಾಗೂ ಹೀಗೆಂದನು "ಆದಿಲ್‌ಷಾಹ್‌ನು ತನ್ನ ಪ್ರಾಂತ್ಯದಲ್ಲಿರುವನು ಆತನ ಸೈನ್ಯವು ಅಥವಾ ಆತನು ನಮಗೆ ಯಾವುದೇ ತೆರನಾಗಿ ಹಾನಿಯನ್ನುಂಟು ಮಾಡಿಲ್ಲ. ಅದಕ್ಕಾಗಿ ನಮಗೆ ಇದು ಶೋಭೆ ತರುವುದಿಲ್ಲ. ಏನೆಂದರೆ ಯುದ್ಧದ ಆರಂಭವು ನಮ್ಮ ಕಡೆಯಿಂದ ಆಗುವುದು, ಸಂಧಾನದ ಮಾರ್ಗಗಳು ಇನ್ನೂ ತೆರೆದೇ ಇವೆ. ಅದಕ್ಕಾಗಿ ಒಳಿತು ಇದರಲ್ಲಿಯೇ ಇದೆ. ವಿನಯ ಹಾಗೂ ಸ್ನೇಹಪೂರ್ವಕವಾದ ವರ್ತನೆಯು ನಮ್ಮದಾಗಬೇಕು. ಹಾಗೂ ಯುದ್ಧದಿಂದ ಹಿಂದೆ ಸರಿಯುವುದು ಸರಿಯಾಗುವುದು.

ಆದಿಲ್‌ಷಾಹ್‌ನ ಗಡಿಪ್ರದೇಶದಲ್ಲಿ ಇಬ್ರಾಹಿಂ ನಿಜಾಮಷಾಹ್ :

ಇಬ್ರಾಹಿಂನು ಮದ್ಯಸೇವಿಸಿ ಉನ್ಮತ್ತ ರೀತಿಯಲ್ಲಿದ್ದನು. ಆತನಿಗೆ ಸರಿ ಹಾಗೂ ತಪ್ಪಿನ ನಡುವೆ ಯಾವುದೇ ಭೇದವಿರಲಿಲ್ಲ. ಆತನು ಯಾವಾಗ ಇಖ್ಲಾಸ್‌ಖಾನ್ ಹಾಗೂ ಆತನ ಜೊತೆಗಾರರನ್ನು ಯುದ್ಧ ಮಾಡುವ ಕಡೆಗೆ ಗಮನವಿರುವುದನ್ನು ಕಂಡನೋ ಆಗ ಮಂಜುವಿಖಾನ್‌ನ ಸಲಹೆಯನ್ನು ರದ್ದುಗೊಳಿಸಿದನು. ಯಾವಾಗ ಇಬ್ರಾಹಿಂ ನಿಜಾಮಷಾಹ್‌ನು ಆದಿಲ್‌ಷಾಹ್‌ನ ಗಡಿಪ್ರದೇಶದಲ್ಲಿ ಪ್ರವೇಶಿಸಿದನೋ ಆಗ ಹಮೀದ್‌ಖಾನ್ ಹಬ್ಷಿಯು ಯಾರು ಆದಿಲ್‌ಷಾಹ್‌ನ ಕಡೆಯಿಂದ ಸರಹದ್ದನ್ನು ಕಾಯುವ ರಕ್ಷಣಾ ಪಡೆಯ ನಾಯಕನಾಗಿದ್ದನು ಆತನು ಸ್ವರಕ್ಷಣೆಗಾಗಿ ಸಿದ್ಧತೆ ಮಾಡಿಕೊಂಡನು.

ಹಮೀದ್‌ಖಾನ್‌ನ ಹೆಸರಿನಲ್ಲಿ ಮಿಯಾ ಮಂಜುವಿಯ ಸಂದೇಶ :

ಮಿಯಾ ಮಂಜುವಿಯು ಲೋಕಾನುಭವಿ ಅಮೀರನಾಗಿದ್ದನು. ಆತನು ಯಾವಾಗ ಈ ಪರಿಸ್ಥಿತಿಯನ್ನು ಮನಗಂಡನೋ ಆಗ ಹಮೀದ್‌ಖಾನ್‌ನಿಗೆ ಸಂದೇಶ ಕಳುಹಿಸಿದನು. "ನಮ್ಮ ದೊರೆಯು ಯೌವ್ವನದ ನಶೆಯಲ್ಲಿ ಮುಳುಗಿದ್ದಾನೆ ಹಾಗೂ ಇನ್ನೂ ಅನನುಭವಿಯಾಗಿದ್ದಾನೆ. ಆತನ ಸುತ್ತಮುತ್ತಲು ದ್ವಂದ್ವ ಪ್ರಕೃತಿಯವರು ಹಾಗೂ ಅಪಾಯ ಪ್ರವೃತ್ತಿಯವರು ಇರುವರು. ಇದರ ಮೇಲೆ ಇನ್ನಷ್ಟು ಆಘಾತಕರವಾದುದೆಂದರೆ ಬಾದಷಾಹ್‌ನು ಯಾವಾಗಲೂ ಮದ್ಯಪಾನದಿಂದ ಮದೋನ್ಮತ್ತನಾಗಿರುವನು. ಹಾಗೂ

ಸರಿ ತಪ್ಪುಗಳ ತಿಳುವಳಿಕೆ ಇಲ್ಲ. ಅದಕ್ಕಾಗಿ ತಮ್ಮಲ್ಲಿ ನಮ್ಮ ವಿನಂತಿ ಇದೆ. ಏನೆಂದರೆ ತಾವು ಇಂದು ಯುದ್ಧದಿಂದ ತಡೆಯಿರಿ. ಇದಾಗಬಹುದು ಏನೆಂದರೆ ಈ ನಡುವೆ ನಾವು ಅವಕಾಶ ಪಡೆದು ಬಾದಷಾಹ್‌ನನ್ನು ಪರಿಸ್ಥಿತಿಯ ಏರಿಳಿಕೆಯನ್ನು ತಿಳಿಸುವಲ್ಲಿ ಯಶಸ್ವಿಯಾಗಿ ಆತನನ್ನೂ ಮರಳಿ ಒಯ್ಯುವೆವು".

ಹಮೀದ್‌ಖಾನ್‌ನ ಯುದ್ಧದಿಂದ ಹಿಂದೆ ಸರಿಯುವಿಕೆ :

ಮಿಯಾ ಮಂಜುವಿಯು ಹಮೀದ್‌ಖಾನ್‌ನೊಂದಿಗೆ ಈ ವಿನಂತಿಯನ್ನು ಮಾಡುತ್ತಾ ಆತನಿಗೆ ಆದಿಲ್‌ಷಾಹ್‌ನ 'ಆಣೆಪ್ರಮಾಣ'ವನ್ನು ನೀಡಿದನು. ಏಕೆಂದರೆ ಆತನು ತಕ್ಷಣವೇ ಇದನ್ನು ಸ್ವೀಕರಿಸಲಿ, ಹಮೀದ್‌ಖಾನ್‌ನು ಈ ವಿನಂತಿಯನ್ನು ಸ್ವೀಕರಿಸಿದನು. ಇಬ್ರಾಹಿಂ ನಿಜಾಮಷಾಹ್‌ನ ಎದುರಿನಿಂದ ಸರಿದನು. ಹಾಗೂ ಆತನ ಬಲಕಡೆಗೆ ಒಂದು ಕೋಸ್ ದೂರದಲ್ಲಿ ಸ್ಥಿರವಾದನು.

ಇಬ್ರಾಹಿಂ ನಿಜಾಮಷಾಹನ ತಪ್ಪು ತಿಳುವಳಿಕೆ :

ಇಬ್ರಾಹಿಂ ನಿಜಾಮನಿಗೆ ನಿಜವಾಗಿ ನಡೆದ ಘಟನೆಯ ಕುರಿತು ತಿಳಿದಿರಲಿಲ್ಲ. ಆತನು ಯಾವಾಗ ಹಮೀದ್‌ಖಾನ್‌ನನ್ನು ಎದುರಾಗಿ ನೋಡಲಿಲ್ಲವೋ ಆಗ ಆತನು ಇದನ್ನು ತಿಳಿದನು. ಏನೆಂದರೆ ವೈರಿಯು ತನಗೆ ಅಂಜಿ ಓಡಿ ಹೋಗಿದ್ದಾನೆ. ಆ ಕಾರಣಕ್ಕೆ ಆತನು ದಿನಪೂರ್ತಿ ಯುದ್ಧಭೂಮಿಯಲ್ಲಿ ನಿಂತುಕೊಂಡನು. ರಾತ್ರಿಯಾದಾಗ ಮಿಯಾಮಂಜುವು ಹಾಗೂ ಆತನ ಜೊತೆಗಾರರು ಮತ್ತೊಂದು ಸಲ ಬಾದಷಾಹನನ್ನು ತಿಳಿಸಲು ಪ್ರಯತ್ನಿಸಿದರು. ಆದರೆ ಬಾದಷಾಹ್‌ನು ಏನೊಂದನ್ನೂ ಒಪ್ಪಲಿಲ್ಲ. ಮರುದಿನ ಯುದ್ಧಕ್ಕಾಗಿ ಸೈನ್ಯವನ್ನು ಸಿದ್ಧ ಗೊಳಿಸತೊಡಗಿದನು.

ಯುದ್ಧ :

ಹಮೀದ್‌ಖಾನ್ ಹಬ್ಷಿಗೆ ಯಾವಾಗ ಈ ಪರಿಸ್ಥಿತಿಯ ಕುರಿತು ಸ್ಪಷ್ಟ ಚಿತ್ರ ಕಂಡುಬಂದಿತೋ ಆಗ ಆತನು ಬೇಗ ಬೇಗನೇ ತನ್ನ ಸೈನ್ಯವನ್ನು ಸಿದ್ಧಗೊಳಿಸಿದನು. ಹಾಗೂ ಯುದ್ಧ ಭೂಮಿಗೆ ಬಂದನು. ಪರಸ್ಪರರ ಸೈನಿಕರ ಒಟ್ಟು ಸಂಖ್ಯೆಯು ಐವತ್ತು ಸಾವಿರ ಇತ್ತು. ಇವರ ನಡುವೆ ಯುದ್ಧ ನಡೆಯಿತು. ಆಕಸ್ಮಿಕವಾಗಿ ಆದಿಲ್‌ಷಾಹಿಯ ಎಡಭಾಗದ ಸೈನ್ಯಕ್ಕೆ ನಿಜಾಮಷಾಹಿಯ ಬಲಭಾಗದ ಸೈನ್ಯವು ಸೋಲಿಸಿತು. ಹಾಗೂ ಮೂರು ಕೋಸ್‌ವರೆಗೆ ಅದನ್ನು ಹಿಂಬಾಲಿಸಿದರು.

ತಪ್ಪು ಕಲ್ಪನೆ :

ಎರಡೂ ಕಡೆಯ ಸೈನಿಕರು ತಮ್ಮ ತಮ್ಮಲ್ಲಿ ಸಂತೃಪ್ತರಾಗಿದ್ದರು. ಹಾಗೂ ತಮಗೆ ತಾವು ವಿಜಯಿಗಳೆಂದು ಭಾವಿಸುತ್ತಿದ್ದರು. ಹಾಗೂ ಒಬ್ಬರು ಮತ್ತೊಬ್ಬರನ್ನು

ವಿನಾಶಗೊಳಿಸುವಲ್ಲಿ ನಿರತರಾದರು. ಇಬ್ರಾಹಿಂ ನಿಜಾಮನು ತನ್ನ ಕೆಲವು ಸಂಗಾತಿಗಳೊಂದಿಗೆ ಯಾರು ಸಂಖ್ಯೆಯಲ್ಲಿ ನೂರಕ್ಕಿಂತಲೂ ಹೆಚ್ಚಾಗಿದ್ದರು ಯುದ್ಧ ಭೂಮಿಯಲ್ಲಿಯೇ ಉಳಿದರು. ಆತನ ಬಳಿ ಕೆಲವು ಆನೆಗಳೂ ಇದ್ದವು. ಶಿಖಂಡಿ ಸೊಹೇಲ್‌ಖಾನ್, ಮಕ್ಸೂದ್‌ಖಾನ್ ತುರ್ಕ ಯಾರು ರಾಜಧಾನಿಯ ರಕ್ಷಣಾಧಿಕಾರಿಯಾಗಿದ್ದನು ಒಂದು ಸಾವಿರ ಸವಾರರು ಹಾಗೂ ಎಪ್ಪತ್ತು ಆನೆಗಳನ್ನು ತೆಗೆದುಕೊಂಡು ಇಬ್ರಾಹಿಂ ನಿಜಾಮನ ಬಳಿ ಬಂದರು.

ಹಿತೈಷಿಗಳ ಸಲಹೆ :

ಇಬ್ರಾಹಿಂ ನಿಜಾಮಷಾಹ್‌ನಿಗೆ ಆತನ ಆಪ್ತ ಸಂಗಾತಿಗಳು ಬಹಳೇ ರೀತಿಯಲ್ಲಿ ತಿಳಿಸಿ ಹೇಳಿದರು. ಏನೆಂದರೆ ವೈರಿಯ ಸೈನ್ಯದ ಸೈನಿಕರ ಸಂಖ್ಯೆಯು ಮಿತಿಮೀರಿದೆ ಅದಕ್ಕಾಗಿ ಯುದ್ಧದಿಂದ ದೂರ ಉಳಿಯುವುದೇ ಸರಿಯಾಗಿದೆ. ಆದರೆ ಇಬ್ರಾಹಿಂನು ಯಾರು ಮಾಮೂಲಿನಂತೆ ಸೆರೆಯ ನಶೆಯಲ್ಲಿ ಮುಳುಗಿಯೇ ಇದ್ದನು. ಈ ಕಡೆಗೆ ಗಮನ ನೀಡಲಿಲ್ಲ. ಹಾಗೂ ಆನೆಗಳನ್ನು ಮುನ್ನುಗ್ಗಿಸಿ ನಗ್ನ ಖಡ್ಗ ತೆಗೆದುಕೊಂಡು ವೈರಿಯ ಕಡೆಗೆ ಮುನ್ನುಗ್ಗಿದನು.

ಇಬ್ರಾಹಿಂ ನಿಜಾಮಷಾಹ್‌ನ ಕೊಲೆ :

ಮೊದಲನೆಯ ದಾಳಿಯಲ್ಲಿಯೇ ಓರ್ವ ಆದಿಲ್‌ಷಾಹೀ ಸವಾರನು ಇಬ್ರಾಹಿಂನ ಮೇಲೆ ಭರ್ಚಿ ಎಸೆದನು. ಆತನು ಗಾಯಗೊಂಡು ಕುದುರೆಯಿಂದ ಬಿದ್ದನು. ನೆಲದ ಮೇಲೆ ಬೀಳುತ್ತಲೇ ಆತನ ಆತ್ಮವು ದೇಹದಿಂದ ಬೇರ್ಪಟ್ಟಿತು. ಸುಹೇಲ್‌ಖಾನ್‌ನು ಆತನ ಶವವನ್ನು ಪಲ್ಲಕ್ಕಿಯಲ್ಲಿರಿಸಿ ಅಹ್ಮದ್‌ನಗರಕ್ಕೆ ಕಳುಹಿಸಿದನು. ಹಾಗೂ ಆತನ ಆನೆಗಳನ್ನು ವಶಪಡಿಸಿಕೊಂಡನು.

ನಿಜಾಮಷಾಹೀ ಅಮೀರರ ಓಡಿಹೋಗುವಿಕೆ :

ಯಾರು ನಿಜಾಮಷಾಹೀ ಅಮೀರರು ಆದಿಲ್‌ಷಾಹೀಗಳನ್ನು ಹಿಂಬಾಲಿಸಿ ಹೋಗಿದ್ದರು ಅವರು ಆಕಸ್ಮಿಕ ನಿಧಿಯನ್ನು ಲೂಟಿ ಹೊಡೆದುಕೊಂಡು ಬಂದರು. ಅವರಿಗೆ ಯಾವಾಗ ಇಬ್ರಾಹಿಂ ನಿಜಾಮನ ಕೊಲೆಯ ಸುದ್ಧಿ ತಲುಪಿತೋ ಆಗ ತಕ್ಷಣವೇ ಆಕಡೆ ಈಕಡೆ ಓಡಿಹೋದರು. ಮರುದಿನ ಸುಹೇಲ್‌ಖಾನ್‌ನು ನಿಜಾಮಷಾಹಿ ತೋಪಖಾನೆಯನ್ನು ತನ್ನ ವಶಪಡಿಸಿಕೊಂಡು ಆದಿಲ್‌ಷಾಹನ ಬಳಿಗೆ ಕಳುಹಿಸಿಕೊಟ್ಟನು.

ಅಹ್ಮದ್‌ಷಾಹ್‌ನ ಪಟ್ಟಾಭಿಷೇಕ :

ಮಿಯಾ ಮಂಜುವಿ ಎಲ್ಲರಿಗಿಂತ ಮೊದಲು ಅಹ್ಮದ್‌ನಗರಕ್ಕೆ ತಲುಪಿದನು. ಆತನು 'ಅಹ್ಮದ್' ಹೆಸರಿನ ಓರ್ವ ಹನ್ನೆರಡು ವರ್ಷದ ಯುವಕನನ್ನು ಯಾರು

ನಿಜಾಮಷಾಹೀ ವಂಶಸ್ಥನಾಗಿದ್ದನು ದೌಲತಾಬಾದ್‌ದಿಂದ ಕರೆಯಿಸಿ ಪಟ್ಟಾಭಿಷೇಕ ಮಾಡಿದನು. ಹಾಗೂ ಇಬ್ರಾಹಿಂ ನಿಜಾಮನ ಶಿಶುವನ್ನು ಜನೀರ್‌ದ ಕೋಟೆ ಜೋನದ್‌ದಲ್ಲಿ ಬಂಧಿಸಿಟ್ಟನು.

ಇಬ್ರಾಹಿಂ ನಿಜಾಮಷಾಹ್‌ನು ನಾಲ್ಕು ತಿಂಗಳಿಗೆ ಎರಡು ದಿನ ಕಡಿಮೆ ಆಡಳಿತ ನಡೆಸಿದನು.

■

*

೯. ತಾಹೀರ್‌ಷಾಹ್‌ನ ಪುತ್ರನಾದ ಅಹ್ಮದ್‌ಷಾಹ್

ಪಟ್ಟಾಭಿಷೇಕಕ್ಕಾಗಿ ಸಮಾಲೋಚನೆ :

ಇಖ್ಲಾಸ್‌ಖಾನ್ ಹಾಗೂ ಇತರ ಆಡಳಿತಾಧಿಕಾರಿಗಳ ಮಧ್ಯದ ಆಂತರಿಕ ವೈರತ್ವದಿಂದಾಗಿ ಇಬ್ರಾಹಿಂ ನಿಜಾಮನ ಶಿಶುವನ್ನು ಗೃಹಬಂಧನದಲ್ಲಿಡಲಾಯಿತು. ಮಿಯಾ ಮಂಜುವಿಯು ಬೇಗಬೇಗನೆ ಅಹ್ಮದ್‌ನಗರಕ್ಕೆ ತಲುಪಿ ಕೋಟೆ ಹಾಗೂ ಭಂಡಾರವನ್ನು ವಶಪಡಿಸಿಕೊಂಡನು. ಇಖ್ಲಾಸ್‌ಖಾನ್ ಹಾಗೂ ಇನ್ನಿತರ ಅಮೀರರು ಒಂದು ಸಲಹಾ ಸಮಿತಿಯನ್ನು ರಚಿಸಿ, ಹೊಸ ಬಾದಷಾಹನ ಆಯ್ಕೆಯ ಕುರಿತು ಸಮಾಲೋಚನೆ ನಡೆಸಿದರು.

ಮಿಯಾ ಮಂಜುವಿನ ಸಲಹೆ :

ಸೈನ್ಯದ ಸರದಾರರು ಚಾಂದ್‌ಸುಲ್ತಾನ್‌ಳಿಗೆ ಇಬ್ರಾಹಿಂನಿಜಾಮಷಾಹ್‌ನ ಪುತ್ರನಾದ ಬಹಾದೂರ್‌ಷಾಹ್‌ನತ್ತ ಗಮನವಿದ್ದುದನ್ನು ಕಂಡರು. ಹಾಗೂ ಇನ್ನಿತರ ದಖನಿ ಸರದಾರರ ಅಭಿಪ್ರಾಯವಿದಾಗಿತ್ತು. ಏನೆಂದರೆ ಬಹಾದ್ದೂರ್ ಬಹಳೇ ಅಪ್ರಾಪ್ತ ವಯಸ್ಕನಾಗಿರುವನು. ಆತನ ವಯಸ್ಸು ಕೇವಲ ಒಂದು ವರ್ಷ ಏಳು ತಿಂಗಳು. ಇರುವುದು. ಆ ಕಾರಣಕ್ಕೆ ಆತನು ಬಾದಷಾಹ್‌ನಾಗಲು ಯೋಗ್ಯನಲ್ಲ, ಸೈನ್ಯದ ಸರದಾರರಿಗೆ ಮಿಯಾ ಮಂಜುವಿನ ಈ ಮಾತು ಮನಸ್ಸಿಗೆ ಹಿಡಿಸಿತು. ಅದಕ್ಕಾಗಿ ಅವರು ಆತನನ್ನು ಬೆಂಬಲಿಸಿದರು. ಹಾಗೂ ಚಾಂದ್ ಸುಲ್ತಾನ್‌ಳನ್ನು ವಿರೋಧಿಸತೊಡಗಿದರು.

ಅಹ್ಮದ್‌ಷಾಹ್‌ನ ಪಟ್ಟಾಭಿಷೇಕ :

ಈ ಸೈನ್ಯಾಧಿಕಾರಿಗಳು ಪರಸ್ಪರ ಮಾತುಕತೆ ನಡೆಸಿ ಖ್ವಾಜಾ ನಿಜಾಮ ಆಸ್ತರಾಬಾದಿಯನ್ನು ಯಾರನ್ನು ನಿಜಾಮಷಾಹೀ ದರ್ಬಾರಿನಿಂದ 'ಮೀರ್ ಏ ಸಾಮಾನ'ದ ಪ್ರಶಸ್ತಿಯಿಂದ ಪುರಸ್ಕರಿಸಲಾಗಿತ್ತು ಜನೀರ್ ಕೋಟೆಗೆ ಕಳುಹಿಸಿ ಕೊಟ್ಟನು.

ಖ್ವಾಜಾ ನಿಜಾಮನು ಅಲ್ಲಿಂದ ತಾಹೀರ್‌ಷಾಹ್‌ನ ಪುತ್ರ ಅಹ್ಮದ್‌ಷಾಹ್‌ನನ್ನು ಜೊತೆಗೆ ಕರೆದುಕೊಂಡು ಅಹ್ಮದ್‌ನಗರಕ್ಕೆ ಬಂದನು. ಈದುಜ್ಜುಹಾದ ದಿನ ಹಿಜ್ರಿ ಶಕೆ ೧೦೦೩ ರಲ್ಲಿ ಅಹ್ಮದ್‌ಷಾಹ್‌ನನ್ನು ಸಿಂಹಾಸನಾರೂಢನನ್ನಾಗಿಸಲಾಯಿತು. ಹಾಗೂ ಪ್ರಾಂತ್ಯದಲ್ಲಿ ಬಾರಾ ಇಮಾಮ್‌ರ ಹೆಸರಿನ ಖುತ್ಬಾ ಜಾರಿಗೊಳಿಸಲಾಯಿತು.

ಯುವರಾಜ ಬಹಾದ್ದೂರ್‌ನ ಗೃಹಬಂಧನ :

ಅಮೀರರು ಪರಸ್ಪರರಲ್ಲಿ ಹುದ್ದೆ ಹಾಗೂ ಅಧಿಕಾರಗಳನ್ನು ಹಂಚಿಕೊಂಡರು. ಹಾಗೂ ಬಹಾದ್ದೂರ್‌ಷಾಹ್‌ನನ್ನು ಯಾರು ಚಾಂದ್‌ಸುಲ್ತಾನಾಳ ಉಡಿಯಲ್ಲಿ ಹಾಗೂ ಮಡಿಲಲ್ಲಿ ಪ್ರೇಮಪೂರ್ವಕವಾಗಿ ಲಾಲನೆ ಪಾಲನೆಯಿಂದ ಬೆಳೆಯುತ್ತಿದ್ದನು. ಆತನನ್ನು ಒತ್ತಾಯಪೂರ್ವಕವಾಗಿ ಜೋಂದ್ ಕೋಟೆಯಲ್ಲಿ ಗೃಹಬಂಧನದಲ್ಲಿಡಲಾಯಿತು. ಕೆಲ ದಿನಗಳ ನಂತರ ಅಹ್ಮದ್‌ಷಾಹ್‌ನು ನಿಜಾಮಷಾಹೀ ವಂಶಸ್ಥನಾಗಿಲ್ಲವೆಂದು ತಿಳಿದು ಬಂದಿತು. ಇಖ್ಲಾಸ್‌ಖಾನ್ ಹಾಗೂ ಇತರ ಅಮೀರರು ತಮ್ಮ ಕಾರ್ಯಕ್ಕೆ ಲಜ್ಜಿತರಾದರು. ಹಾಗೂ ಅಹ್ಮದ್‌ಷಾಹನನ್ನು ಪದಚ್ಯುತಿಗೊಳಿಸಲಿಕ್ಕಾಗಿ ಪ್ರಯತ್ನಿಸತೊಡಗಿದರು.

ಹುಸೈನ್ ನಿಜಾಮಷಾಹನ ಸಹೋದರರು :

ಬುರ್ಹಾನ್ ನಿಜಾಮಷಾಹ್‌ನ ಮೃತ್ಯುವಿನ ನಂತರ ಹುಸೈನ್ ನಿಜಾಮಷಾಹ್‌ನು ಸಿಂಹಾಸನಾಧೀಶ ಆಗಿದ್ದನು. ಹುಸೈನ್ ನಿಜಾಮಷಾಹ್‌ನ ಸ್ವ ಸಹೋದರರಾದ ಸುಲ್ತಾನ್ ಮೊಹಮ್ಮದ್ ಖುದಾಬಂದಾ, ಷಾ ಅಲಿ, ಮೊಹಮ್ಮದ ಬಾಖರ್, ಅಬ್ದುಲ್ ಖಾದರ್ ಹಾಗೂ ಷಾಹೈದರ್ ತಮ್ಮ ಪೂರ್ವಜರ ಪ್ರಾಂತ್ಯದಲ್ಲಿರುವುದು ತಮಗೆ ಹಾನಿಕಾರಕವೆಂದು ಬಗೆದರು. ಹಾಗಾಗಿ ಈ ನಾಲ್ವರೂ ಹಿಂದೂಸ್ಥಾನದ ಯಾವ ಯಾವುದೋ ಭಾಗದಲ್ಲಿ ಹೊರಟುಹೋದರು.

ಷಾ ತಾಹೀರ್ :

ಒಂದು ದೀರ್ಘಾವಧಿಯ ನಂತರ ಮುರ್ತುಜಾ ನಿಜಾಮನ ಆಡಳಿತಾವಧಿಯಲ್ಲಿ ಷಾಹ್ ತಾಹೀರ್ ಹೆಸರಿನ ಓರ್ವ ವ್ಯಕ್ತಿಯು ಹೈದರಾಬಾದಕ್ಕೆ ಆಗಮಿಸಿದನು. ಆತನು ಹೀಗೆ ಘೋಷಿಸಿದನು. ಏನೆಂದರೆ "ಸುಲ್ತಾನ್ ಮೊಹಮ್ಮದ ಖುದಾಬಂದಾನು ಆಯಾ ದಿನದಂದು ತೆಲಂಗಾಣ ಪ್ರಾಂತ್ಯದಲ್ಲಿ ಕೊನೆಯುಸಿರೆಳೆದನು. ನಾನು ಆತನ ಸಂತಾನವಾಗಿರುವೆನು.ಕಾಲದ ಹೊಡೆತದಿಂದಾಗಿ ಹಾಗೂ ವಿಧವಿಧವಾದ ತೊಂದರೆಗಳನ್ನು ಅನುಭವಿಸಿ ನನ್ನ ಪೂರ್ವಜರ ಪ್ರಾಂತ್ಯದಲ್ಲಿ ಅನಿವಾರ್ಯವಾಗಿ ಆಶ್ರಯ ಪಡೆಯಲೆಂದು ಬಂದಿರುವೆನು.

ಸತ್ಯದ ಶೋಧನೆ :

ಮುರ್ತುಜಾ ನಿಜಾಮಷಾಹನ ಅಮೀರರು ವಿಶೇಷವಾಗಿ ಸಲಾಬತ್‌ಖಾನ್‌ನು ಈ ವಿಷಯದಲ್ಲಿ ವಿಚಾರಣೆ ನಡೆಸಿದನು. ಏಕೆಂದರೆ ಒಂದು ದೀರ್ಘಕಾಲ ಕಳೆದುಹೋಗಿತ್ತು. ಆ ಕಾರಣಕ್ಕೆ ಷಾ ತಾಹೀರ್‌ನ ಹೇಳಿಕೆಯ ಸತ್ಯಾಸತ್ಯತೆಯು ಸಾಬೀತಾಗಲಿಲ್ಲ. ಅಮೀರರು ದೂರಾಲೋಚನೆ ಹಾಗೂ ಯುಕ್ತಿಪೂರ್ವಕವಾಗಿ ಷಾಹ್ ತಾಹೀರ್‌ನನ್ನು ಒಂದು ಕೋಟೆಯಲ್ಲಿ ಗೃಹಬಂಧನದಲ್ಲಿಟ್ಟರು. ಹಾಗೂ ಕೆಲವು ವ್ಯಕ್ತಿಗಳನ್ನು ಯಾರು ಸುಲ್ತಾನ್‌ಮೊಹಮ್ಮದ್ ಖುದಾಬಂದಾನನ್ನು ಸಮೀಪದಿಂದ ಅರಿತಿದ್ದರು ಅವರನ್ನು ಬುರ್ಹಾನ್‌ಷಾಹ್ ದ್ವಿತಿಯ ಹತ್ತಿರ ಕಳುಹಿಸಿದನು. ಯಾರು ಈ ದಿನಗಳಲ್ಲಿ ಅಕ್ಬರ್‌ಬಾದಷಾಹನ ಬಳಿ ಆಗ್ರಾದಲ್ಲಿ ವಾಸವಾಗಿದ್ದನು.

ಬುರ್ಹಾನ್‌ಷಾಹ್ ದ್ವಿತಿಯನ ಹೆಸರಿನಲ್ಲಿ ಸಂದೇಶ :

ನಿಜಾಮಷಾಹೀ ಅಮೀರರು ಬುರ್ಹಾನ್‌ಷಾಹನಿಗೆ ಈ ಸಂದೇಶ ನೀಡಿದರು. "ಓರ್ವ ವ್ಯಕ್ತಿಯು ತನ್ನ ಹೆಸರು ಷಾಹ್ ತಾಹೀರ್ ಎಂದು ಹೇಳುತ್ತಿರುವನು. ಅಹ್ಮದ್‌ನಗರದಲ್ಲಿ ನಮ್ಮ ಬಳಿ ಇರುವನು. ಆತನ ಹೇಳಿಕೆ ಹೀಗಿದೆ. ಆತನು ಸುಲ್ತಾನ್ ಮೊಹಮ್ಮದ ಖುದಾಬಂದಾನ ಪುತ್ರ ಇರುವನು. ಏಕೆಂದರೆ ಯುವರಾಜ ಸುಲ್ತಾನ್ ಮೊಹಮ್ಮದರ ಜೀವನದ ಬಹುಕಾಲವು ಆತನ ಪ್ರಾಂತ್ಯದಲ್ಲಿಯೇ ಕಳೆದಿದೆ. ಅದಕ್ಕಾಗಿ ನಮಗೆ ನಂಬಿಕೆ ಇದೆ. ತಮಗೆ ಯುವರಾಜನ ಕುರಿತು ಮಾಹಿತಿ ಇರಬಹುದು. ಒಂದು ವೇಳೆ ತಾವು ಈ ವಿಷಯದಲ್ಲಿ ಏನೊಂದನ್ನು ಹೇಳುವಿರಾದರೆ ನಾವೆಲ್ಲರೂ ತಮಗೆ ಕೃತಜ್ಞರಾಗಿರುವೆವು.

ಬುರ್ಹಾನ್‌ಷಾಹ್ ದ್ವಿತಿಯನ ಉತ್ತರ :

ಬುರ್ಹಾನ್‌ಷಾಹ್ ದ್ವಿತಿಯನು ಈ ಸಂದೇಶಕ್ಕೆ ಹೀಗೆ ಉತ್ತರಿಸಿದನು. "ಯುವರಾಜ ಸುಲ್ತಾನ್ ಮೊಹಮ್ಮದ್ ಖುದಾಬಂದಾನ ಮೃತ್ಯುವು ನನ್ನದೇ ಮನೆಯಲ್ಲಿ ಆಗಿತ್ತು. ಆತನ ಎಲ್ಲ ಸಂಬಂಧಿಕರು, ಸ್ತ್ರೀಯರು ಹಾಗೂ ಪುರುಷರು ನನ್ನ ಮನೆಯಲ್ಲಿಯೇ ವಾಸವಾಗಿರುವರು. ಒಂದು ವೇಳೆ ಯಾವುದೇ ವ್ಯಕ್ತಿಯು ತಮಗೆ ಸುಲ್ತಾನ್ ಮೊಹಮ್ಮದ್‌ನ ಪುತ್ರನೆಂದು ಹೇಳುವುನಾದರೆ ಆತ ಪೂರ್ಣ ಪ್ರಮಾಣದಲ್ಲಿ ಸುಳ್ಳುಗಾರನಾಗಿದ್ದಾನೆ."

ಷಾ ತಾಹೀರ್‌ನ ಗೃಹಬಂಧನ ಹಾಗೂ ಮೃತ್ಯು :

ಸಲಾಬತ್‌ಖಾನ್ ಹಾಗೂ ಇತರರು ಸತ್ಯವನ್ನರಿತರು. ಆದರೆ ಅವರು ಜನಸಾಮಾನ್ಯರಿಗೆ ಈ ಸತ್ಯವನ್ನು ಮನಗಾಣಿಸದಾದರು. ಏನೆಂದರೆ ಷಾತಾಹೀರ್ ಸುಳ್ಳುಗಾರನಾಗಿರುವನು. ಅದಕ್ಕಾಗಿ ಅವರು ಈ ವ್ಯಕ್ತಿಯನ್ನು ಕೋಟೆಯಲ್ಲಿಯೇ

ಬಂಧನದಲ್ಲಿರಲು ಬಿಟ್ಟರು. ಏಕೆಂದರೆ ಆತನು ಈ ಬಂಧನಾವಸ್ಥೆಯಲ್ಲಿಯೇ ಸಾವಿಗೀಡಾಗಬೇಕು. ಮತ್ತು ಹಾಗೆಯೇ ಆಯಿತು. ಷಾತಾಹೀರ್‌ನು ಬಂಧನದಲ್ಲಿದ್ದಾಗಲೇ ಮೃತ್ಯು ಹೊಂದಿದನು. ಹಾಗೂ 'ಅಹ್ಮದ್' ಹೆಸರಿನ ಓರ್ವ ಪುತ್ರನನ್ನು ತನ್ನ ಸಂತಾನ ರೂಪದಲ್ಲಿ ಬಿಟ್ಟು ಹೋದನು. ಇದೇ ಆ ಹುಡುಗನಾಗಿರುವನು. ಯಾರನ್ನು ಮಿಯಾ ಮಂಜೂವಿಯು ಷಾಹೀ ವಂಶಸ್ಥನೆಂದು ಬಗೆದು ಸಿಂಹಾಸನದ ಮೇಲೆ ಕೂಡ್ರಿಸಿದನು.

ಅಮೀರ್‌ರ ಆಂತರಿಕ ವೈರತ್ವ :

ಸಾರಾಂಶ ರೂಪದಲ್ಲಿ ಈ ಘಟನೆಯಲ್ಲಿ ಇಖ್ಲಾಸ್‌ಖಾನ್ ಹಾಗೂ ಇತರ ಹಬ್ಷಿ ಅಮೀರರು ಮಿಯಾ ಮಂಜುವಿಯ ಜೊತೆ ಅನ್ಯ ಮನಸ್ಕರಾದರು. ಜಿಲಹಜ್ಜಾ ಮಾಸದ ಕೊನೆಯಲ್ಲಿ 'ಕಾಲಾಚಬೂತರಾ'ದ ಬಳಿ ಪರಸ್ಪರರಲ್ಲಿ ಯುದ್ಧ ನಡೆಯಿತು. ಮಿಯಾ ಮಂಜುವಿಯು ಅಹ್ಮದ್‌ಷಾನನ್ನು ಗೋಪುರದ ಮೇಲೆ ಕೂಡ್ರಿಸಿದನು. ಹಾಗೂ ಛತ್ರ ಚಾಮರದ ನೆರಳನ್ನು ಆತನ ತಲೆಯ ಮೇಲೆ ಮಾಡಿದನು.

ಯುದ್ಧ :

ಮಿಯಾ ಮಂಜುವಿಯು ಮಿಯಾ ಹಸನ್‌ನನ್ನು ಏಳುನೂರು ಸವಾರರೊಂದಿಗೆ ಹಬ್ಷಿಗಳನ್ನು ಎದುರಿಸಲು ಕಳುಹಿಸಿದನು. ಎರಡೂ ಕಡೆಯಿಂದ ಭೀಕರ ರೂಪದ ಕಾಳಗವಾಯಿತು. ಇದೇ ಸಮಯದಲ್ಲಿ ತೋಪದಿಂದ ಹೊರಟ ಒಂದು ಗುಂಡು ಅಹ್ಮದ್‌ಷಾಹನ ಛತ್ರಕ್ಕೆ ತಗುಲಿತು ಹಾಗೂ ಇಡೀ ಸೈನ್ಯದ ತುಂಬ ಗೊಂದಲ ಉಂಟಾಯಿತು.

ಕೋಟೆಯ ಮುತ್ತಿಗೆ :

ಮೀಯಾ ಹಸನ್‌ನು ಯಾವಾಗ ಈ ಪರಿಸ್ಥಿತಿಯನ್ನು ಮನಗಂಡನೋ ಏನೆಂದರೆ ಹಬಶಿಗಳ ಕೈಮೇಲಾಗುತ್ತಿದೆ ಆಗ ಆತನು ರಣಭೂಮಿಯಿಂದ ಓಡಿಹೋದನು. ಹಾಗೂ ಕೋಟೆಯಲ್ಲಿ ಮರಳಿ ಬಂದನು. ಕ್ರಮೇಣ ಹಬಶಿಗಳ ಶಕ್ತಿಯು ವೃದ್ಧಿಗೊಳ್ಳತೊಡಗಿತು. ಪರಿಣಾಮ ಏನಾಯಿತೆಂದರೆ ಅವರು ಕೋಟೆಯನ್ನು ದಿಗ್ಬಂಧನಗೊಳಿಸಿದರು. ಹಾಗೂ ಪರಸ್ಪರರಲ್ಲಿ ಯುದ್ಧದ ಸಂಕೇತವನ್ನು ಹಂಚಿಕೊಂಡು ಕೋಟೆಯವರ ಬರುವ ಹೋಗುವ ಹಾದಿಗಳನ್ನು ತಡೆಗಟ್ಟಿದರು.

ಹಬಶಿ ಅಮೀರರ ಕ್ರಮ :

ಇಖ್ಲಾಸ್‌ಖಾನ್ ಹಾಗೂ ಇತರ ಅಮೀರರು ಓರ್ವ ನಂಬಿಗಸ್ಥ ವ್ಯಕ್ತಿಯನ್ನು ದೌಲತಾಬಾದ್‌ದ ಆಡಳಿತಗಾರನ ಬಳಿ ಕಳುಹಿಸಿದರು. ಏಕೆಂದರೆ ಆಹಂಗ್‌ಖಾನ್ ಹಾಗೂ ಹಬಶಿಖಾನ್‌ನನ್ನು ಯಾರು ಬುರ್ಹಾನ್‌ಷಾಹ್‌ನ ಆಡಳಿತಾವಧಿಯಲ್ಲಿಂದ

ಕೈದಿಗಳಾಗಿರುವವರು ಅವರನ್ನು ಅಹ್ಮದ್‌ನಗರಕ್ಕೆ ತರಬೇಕು. ದೌಲತಾಬಾದ್‌ದ ಆಡಳಿತಗಾರರು ಈ ಅಮೀರರನ್ನು ಕಳುಹಿಸಿಕೊಟ್ಟನು. ಜೋಂದ್‌ಕೋಟೆಯ ಥಾನೇದಾರನಾದ ನಸೀರ್‌ನು ಮಿಯಾ ಮಂಜುವಿನ ಅನುಮತಿಯಿಲ್ಲದೇ ಬಹಾದ್ದೂರ್‌ಷಾಹ್‌ನನ್ನು ಇಖ್ಲಾಸ್‌ಖಾನ್ ಹಾಗೂ ಇತರರಿಗೆ ಒಪ್ಪಿಸಲು ನಿರಾಕರಿಸಿದನು. ಅದಕ್ಕಾಗಿ ಹಬ್ಷಿ ಅಮೀರರು ಒಂದು ಸಂಚು ಹೂಡಿದರು ಹಾಗೂ ಓರ್ವ ಯಾವನ ಕುಲದ, ವಂಶದ ಪರಿಚಯವಿಲ್ಲವೋ ಆತನನ್ನು ನಿಜಾಮಷಾಹೀ ವಂಶದ ವ್ಯಕ್ತಿಯೆಂದು ಘೋಷಿಸಿ ತಮ್ಮ ದೊರೆಯೆಂದು ಒಪ್ಪಿಕೊಂಡರು ಹಾಗೂ ಪ್ರಾಂತ್ಯದಲ್ಲಿ ಆತನ ಹೆಸರಿನ ಖುತ್ಬಾ ಹಾಗೂ ಮುದ್ರೆಯನ್ನು ಜಾರಿಗೊಳಿಸಿದರು. ಈ ತೆರನಾಗಿ ಹಬ್ಷಿ ಅಮಿರರು ಹತ್ತು ಹನ್ನೆರಡು ಸಾವಿರ ಸವಾರರನ್ನು ತಮ್ಮ ಸುತ್ತ ಮುತ್ತ ಸೇರಿಸಿಕೊಂಡರು.

ಯುವರಾಜ ಮುರಾದ್‌ನನ್ನು ಅಹ್ಮದನಗರಕ್ಕೆ ಆಗಮಿಸಲು ಆಹ್ವಾನ :

ಮಿಯಾ ಮಂಜುವಿಯು ಈ ಪರಿಸ್ಥಿತಿಯನ್ನು ಕಂಡು ಗಾಬರಿಗೊಂಡನು ಹಾಗೂ ಆತನು ಅಕಬರ್ ಬಾದಷಾಹ್‌ನ ಪುತ್ರನಾದ ಮುರಾದನ ಹೆಸರಿನಲ್ಲಿ ಒಂದು ಓಲೆಯನ್ನು ಬರೆದನು (ಯಾರು ಈ ದಿನಗಳಲ್ಲಿ ಗುಜರಾತ್‌ನಲ್ಲಿದ್ದನು) ಹಾಗೂ ಆತನನ್ನು ಅಹ್ಮದ್‌ನಗರಕ್ಕೆ ಬರಲು ಆಹ್ವಾನ ನೀಡಿದನು. ಯುವರಾಜ ಮುರಾದ್ ಮೊದಲೇ ತನ್ನ ತಂದೆಯಿಂದ ದಖ್ಖನ್ನನ್ನು ಗೆಲ್ಲಲು ಅನುಮತಿಯನ್ನು ಪಡೆದುಕೊಂಡಿದ್ದನು. ಅದಕ್ಕಾಗಿ ಆತನು ಈ ಅವಕಾಶವನ್ನು ಸುವರ್ಣಾವಕಾಶವೆಂದು ಬಗೆದನು. ಹಾಗೂ ಸೈನ್ಯದ ಜೊತೆ ಅಹ್ಮದ್‌ನಗರಕ್ಕೆ ಹೊರಟನು.

ಹಬಶಿಯರಲ್ಲಿ ಒಡಕು :

ಮಿಯಾ ಮಂಜುವಿಯ ಪತ್ರವು ಗುಜರಾತ್‌ಕ್ಕೆ ತಲುಪುವ ಮೊದಲೇ ಹಬ್ಷಿ ಅಮೀರರಲ್ಲಿ ಒಡಕು ಉಂಟಾಯಿತು. ಹಾಗೂ ಅವರು ಹುದ್ದೆ, ಅಧಿಕಾರಕ್ಕಾಗಿ ಪರಸ್ಪರ ಜಗಳವಾಡತೊಡಗಿದರು. ದಖ್ಖನಿ ಅಮೀರರು ಯಾವಾಗ ಈ ದುರ್ವರ್ತನೆಯ ಬಿರುಗಾಳಿಯನ್ನು ಕಂಡರೋ ಆಗ ಅವರು ಹಬ್ಷಿಗಳಿಂದ ಬೇರ್ಪಟ್ಟರು. ಹಾಗೂ ತಮ್ಮ ಸೈನಿಕರೊಂದಿಗೆ ಜೊತೆಗೂಡಿ ಕೋಟೆಯ ಒಳಗೆ ಹೋಗಿ ಮಿಯಾ ಮಂಜುವಿನೊಂದಿಗೆ ಸೇರಿಕೊಂಡರು.

ಹಬಶಿಗಳ ಸೋಲು :

ಈ ತೆರನಾಗಿ ಬಯಸದೇ ಬಂದ ಭಾಗ್ಯದಿಂದ ಮಿಯಾ ಮಂಜುವಿಯು ಬಹಳೇ ಸಂತುಷ್ಟನಾದನು. ೨೫ರ ಮೊಹರಮ್ಮಿನ ಹಿಜ್ರಿಶಕೆ ೧೦೦೪ ರಂದು ಆತನು ಕೋಟೆಯಿಂದ ಹೊರಬಂದನು. ಹಾಗೂ ಮಸೀದೆಯ ಬಳಿ ಹಬ್ಷಿಗಳೊಂದಿಗೆ ಯುದ್ಧ ಜರುಗಿತು. ಹಬ್ಷಿಗಳಿಗೆ ಸೋಲುಂಟಾಯಿತು. ಮಿಯಾ ಮಂಜುವಿಯು ವೈರಿಯ 'ಬಾದಷಾಹ್' ನನ್ನು ಜೊತೆಗೆ ಆತನ ಆಪ್ತ ಅಧಿಕಾರಿಗಳನ್ನು ಬಂಧಿಸಿದನು.

ಯುವರಾಜ ಮುರಾದ್‌ನ ಆಗಮನ :

ಈಗ ಹೊಸದಾಗಿ ಉಂಟಾದ ಬೆಳವಣಿಗೆಯಿಂದಾಗಿ ಮಿಯಾ ಮಂಜುವಿಯು ಬಹಳೇ ಮುಜುಗರಕ್ಕೀಡಾದನು. ಏಕೆಂದರೆ ಒಂದು ಕಡೆ ಆತನು ವೈರಿಯ ಮೇಲೆ ಗೆಲುವು ಸಾಧಿಸಿ ತನ್ನ ಉದ್ದೇಶವನ್ನು ಪೂರೈಸಿಕೊಂಡಿದ್ದನು. ಎರಡನೆಯ ಕಡೆ ಯುವರಾಜ ಮುರಾದ್‌ನಿಗೆ ಅಹ್ಮದನಗರಕ್ಕೆ ಬರಲು ಆಹ್ವಾನಿಸಿದ್ದನು. ಆದರೆ ಈಗ ಯುವರಾಜನ ಬರುವಿಕೆಯ ಅವಶ್ಯಕತೆಯು ಇರಲಿಲ್ಲ. ಮಿಯಾ ಮಂಜುವಿ ಇನ್ನೂ ಹೀಗೆ ವಿಚಾರಿಸುತ್ತಿದ್ದನು. ಮಿರ್ಜಾ ಅಬ್ದುಲ್ ರಹಿಂ ಖಾನೆಖಾನಾನ್ ಹಾಗೂ ಖಾಂದೇಶ್‌ದ ರಾಜಾ ಅಲಿಖಾನ್‌ನೂ ಸಹ ಯುವರಾಜ ಮುರಾದ್‌ನನ್ನು ಸೇರಿಕೊಂಡು ಈ ಎಲ್ಲ ಜನರು ಮೂವತ್ತು ಸಾವಿರ ಮೊಘಲರು, ಅಫಘಾನ್‌ರು, ಹಾಗೂ ರಜಪೂತರ ಸೈನ್ಯವನ್ನು ತೆಗೆದುಕೊಂಡು ಅಹ್ಮದ್‌ನಗರಕ್ಕೆ ಬಂದು ತಲುಪಿದರು.

ಮಿಯಾ ಮಂಜುವಿನ ಸಂಕಟ :

ಮೀಯಾ ಮಂಜುವಿಯು ಈ ಜನರ ಬರುವಿಕೆಯಿಂದ ಬಹಳೇ ಭಯಭೀತನಾಗಿದ್ದನು. ಆತನು ಕೋಟೆಯ ರಕ್ಷಣೆಯ ಏರ್ಪಾಡು ಮಾಡಿ ತನ್ನ ಓರ್ವ ಹಿತೈಷಿಯಾದ ಅನ್ಸಾರ್‌ಖಾನ್‌ನನ್ನು ಮೇಲ್ವಿಚಾರಕನನ್ನಾಗಿ ನೇಮಿಸಿದನು. ಚಾಂದ್‌ಬೀಬಿಸುಲ್ತಾನ್‌ಳು ಮಂಜುವಿಯ ಜೊತೆ ನೀಡಲಿಲ್ಲ. ಆ ಕಾರಣಕ್ಕಾಗಿ ಮೀಯಾ ಮಂಜುವಿಯು ಅವಳನ್ನು ಕೋಟೆಯಲ್ಲಿಯೇ ಬಿಟ್ಟನು. ಹಾಗೂ ಸ್ವತಃ ಸೈನ್ಯವನ್ನು ಒಟ್ಟುಗೂಡಿಸಲು ಮತ್ತು ಆದಿಲ್‌ಷಾಹ್ ಹಾಗೂ ಕುತುಬ್‌ಷಾಹ್‌ರಿಂದ ಸಹಾಯವನ್ನು ಪಡೆಯಲು ಪ್ರಯತ್ನಿಸತೊಡಗಿದನು.

ಚಾಂದ್‌ಬೀಬಿಯ ನಿರ್ಧಾರ :

ಮೀಯಾ ಮಂಜುವಿಯು ಅಹ್ಮದ್ ಷಾಹ್‌ನನ್ನು ಜೊತೆಗೆ ಕರೆದುಕೊಂಡು ಓಸಾ ಕೋಟೆಯತ್ತ ಹೊರಟನು. ಚಾಂದ್‌ಬೀಬಿ ಹೀಗೆ ಯೋಚಿಸಿದಳು. ಕೋಟೆಯ ರಕ್ಷಕನಾದ ಅನ್ಸಾರ್‌ಖಾನ್‌ನು ಮೀಯಾ ಮಂಜುವಿಯ ನಂಬಿಗಸ್ತ ವ್ಯಕ್ತಿಯಾಗಿದ್ದಾನೆ. ಅದಕ್ಕಾಗಿ ಆತನು ತನಗೆ ದ್ರೋಹ ಬಗೆಯದಿರಲಿ ಹಾಗೂ ಕೋಟೆಯನ್ನು ವೈರಿಯ ವಶಕ್ಕೆ ಒಪ್ಪಿಸದಿರಲಿ ಅದಕ್ಕಾಗಿ ಅವಳು ವೈರಿಯನ್ನು ಸ್ವತಃ ಎದುರಿಸುವುದೆಂದು ನಿರ್ಧರಿಸಿದಳು.

ಇಬ್ರಾಹಿಂಷಾಹ್‌ನ ಪುತ್ರನಾದ ಬಹಾದ್ದೂರ್‌ಷಾಹ್‌ನ ಹೆಸರಿನ ಖುತ್ಬಾ :

ಚಾಂದ್‌ಬೀಬಿಯು ಮುರ್ತುಜಾ ನಿಜಾಮಷಾಹ್‌ನ ದಾಯಿಯ ಮಗನಾದ ಮಿಯಾ ಮೊಹಿಬುಲ್ಲಾನ ಪುತ್ರನಾದ ಮೊಹಮ್ಮದ್‌ಖಾನ್‌ನನ್ನು ಅನ್ಸಾರ್‌ಖಾನ್‌ನ ಕೊಲೆಯನ್ನು ಮಾಡಲು ನೇಮಿಸಿದಳು. ಮೊಹಮ್ಮದ್‌ಖಾನ್‌ನು ಬಹಳೇ ಶೌರ್ಯ

ಪ್ರದರ್ಶನವನ್ನು ಮಾಡಿ ಅದೇ ದಿನ ಅನ್ಸಾರ್‌ಖಾನ್‌ನನ್ನು ಹತ್ಯೆಗೈದನು. ಇಬ್ರಾಹಿಂಷಾಹ್‌ನ ಪುತ್ರನಾದ ಬಹಾದ್ದೂರ್‌ಷಾಹ್‌ನ ಹೆಸರಿನ ಅಪರೋಕ್ಷವಾಗಿ ಖುತ್ಬಾ ಓದಿಸಲಾಯಿತು. ಮೀಯಾ ಮಂಜುವಿಯು ತನ್ನ ಜೊತೆಗೆ ಷಂಷೀರ್‌ಖಾನ್ (ಯಾರ ಪುತ್ರರು ಶೌರ್ಯದಲ್ಲಿ ತಮಗೆ ತಾವೇ ಸಾಟಿಯಾಗಿದ್ದರು) ಹಾಗೂ ಅಫಜಲ್‌ಖಾನ್‌ನನ್ನು ಕರೆದುಕೊಂಡು ಕೋಟೆಯ ಒಳಗೆ ಮರಳಿ ಬಂದನು.

ಯುದ್ಧ :

೨೩ ಜಮಾದಿಲ್ ಆಖಿರ್ ೧೦೦೪ ಹಿಜ್ರಿಯಂದು ಯುವರಾಜನಾದ ಮುರಾದ್ ಒಂದು ಬೃಹತ್ ಸೈನ್ಯದೊಂದಿಗೆ ಅಹ್ಮದ್‌ನಗರವನ್ನು ಪ್ರವೇಶಿಸಿದನು. ಹಾಗೂ ಮಸೀದೆಯ ಬಳಿ ತಂಗಿದನು. ಮುರಾದ್‌ನ ಸೈನಿಕರ ಒಂದು ತಂಡವು ವೈರಿಯ ಮೇಲೆ ಮೇಲುಗೈ ಸಾಧಿಸಲು ಮುನ್ನುಗ್ಗಿದರು. ಹಾಗೂ ಕಾಲೇಚಬೂತರಾದತ್ತ ಹೊರಟರು. ಈ ಕಡೆ ಕೋಟೆಯವರೂ ಸಹ ಚಾಂದ್‌ಬೀಬಿಯ ಆಜ್ಞೆಯ ಮೇರೆಗೆ ಯುದ್ಧಕ್ಕೆ ಸಿದ್ಧರಾದರು. ಹಾಗೂ ವೈರಿಯನ್ನು ಎದುರಿಸಲೆಂದು ಮುಂದೆ ಬಂದರು. ಕೋಟೆಯವರು ಕೆಲವು ತೋಪುಗಳನ್ನು ಹಾರಿಸಿ ವೈರಿಯನ್ನು ಛಿದ್ರವಿಚ್ಛಿದ್ರಗೊಳಿಸಿದರು. ಇಷ್ಟರಲ್ಲಿಯೇ ಸಂಜೆಯಾಯಿತು. ಯುವರಾಜ ಮುರಾದ್‌ನು ಹಷ್ತೆಬಹೀಷ್ತ ಉದ್ಯಾನದಲ್ಲಿ ತಂಗಿದನು. ಹಾಗೂ ಆತನ ಸೈನ್ಯವು ರಾತ್ರಿಯಿಡೀ ಜಾಗರಣೆ ಮಾಡಿ ಸ್ವರಕ್ಷಣೆ ಮಾಡಿಕೊಂಡಿತು.

ಪ್ರಜೆಗಳ ಮನವೊಲಿಕೆ :

ಯುವರಾಜನಾದ ಮುರಾದ್‌ನು ತನ್ನ ಸೈನ್ಯದ ಒಂದು ತಂಡವನ್ನು ಬುರ್ಹಾನಾಬಾದ್ (ಯಾವುದು ಬುರ್ಹಾನ್ ನಿಜಾಮನಿಂದ ನಿರ್ಮಿಸಲ್ಪಟ್ಟಿತ್ತು) ದತ್ತ ಕಳುಹಿಸಿದನು. ಪಟ್ಟಣದ ನಿವಾಸಿಗಳ ಮನವೊಲಿಸಲಾಯಿತು. ಹಾಗೂ ಅವರು ವಿತ್ತ, ಪ್ರಾಣಗಳ ಅಭಯ ನೀಡಲಾಯಿತು. ಅದರಿಂದ ಪ್ರಜೆಗಳು ಮೊಘಲರ ಮೇಲೆ ಸಂಪೂರ್ಣವಾಗಿ ನಂಬಿಕೆ ವ್ಯಕ್ತಪಡಿಸಿದರು.

ಕೋಟೆಯ ಮುತ್ತಿಗೆ :

ಮರುದಿನ ಯುವರಾಜನಾದ ಮುರಾದ್‌ನು ಮಿರ್ಜಾ ಷಾಹ್‌ರುಖ್, ಮುಹಮ್ಮದ್ ಸಾದಿಕ್, ಷಾಹಬಾಜ್‌ಖಾನ್, ಸಯ್ಯದ್ ಮುರ್ತುಜಾ, ಸಬ್ಜವಾರಿ, ರಾಜಾ ಅಲಿಖಾನ್ ಮತ್ತು ಇತರರು ಕೋಟೆಯ ಸುತ್ತಲೂ ಸೇರಿದರು. ಹಾಗೂ ಆ ಜನರು ಕೋಟೆಯ ದಿಗ್ಬಂಧನ ಮಾಡಿದರು.

ಲೂಟಿ :

೨೭ ಜಮಾದಿಲ್ ಆಖಿರದಂದು ಷಹಬಾಜ್‌ಖಾನ್ ಯಾವನು ಹಿಂಸೆಗೈಯ್ಯುವಲ್ಲಿ

ಎಳ್ಳಷ್ಟೂ ಹಿಂಜರಿಯದವನಾಗಿದ್ದನು ಬೇಟೆಯ ನೆಪದಿಂದ ಕುದುರೆ ಏರಿದನು ಆತನು ಶ್ರೀಮಂತರು ಬಡವರೆನ್ನದೇ ಎಲ್ಲರನ್ನೂ ಲೂಟಿಗೈಯ್ಯಲು ಆಜ್ಞೆ ಮಾಡಿದನು. ಅಲ್ಪ ಸಮಯದಲ್ಲಿಯೇ ಅಹ್ಮದ್‌ನಗರದ ಎಲ್ಲ ಮನೆಗಳನ್ನು ಲೂಟಿ ಮಾಡಲಾಯಿತು. ಷೇಹಬಾಜ್‌ಖಾನ್‌ನು ಸುನ್ನಿ ಪಂಥದವನಾಗಿದ್ದನು. ಅದಕ್ಕಾಗಿ ಆತನು ಷಿಯಾ ಜನರ ಧಾರ್ಮಿಕ ಕೇಂದ್ರಗಳಿಗೆ ಧಕ್ಕೆಯನ್ನುಂಟು ಮಾಡಿದನು. ಬಾರಾಇಮಾಮ್ ದಾಸೋಹ ಕೇಂದ್ರವೆಂಬ ಪ್ರಸಿದ್ಧ ಇಮಾರತ್ತನ್ನು ಸಹ ಲೂಟಿ ಮಾಡಲಾಯಿತು. ಅದರಲ್ಲಿ ವಾಸಿಸುವ ಜನರನ್ನು ಕೊಲೆಗೈಯ್ಯಲಾಯಿತು.

ಪ್ರಜೆಗಳ ಹೊರಹೋಗುವಿಕೆ :

ಯುವರಾಜನಾದ ಮುರಾದ್‌ನು ಹಾಗೂ ಖಾನೇಖಾನಾನ್‌ನಿಗೆ ಯಾವಾಗ ಈ ಘಟನೆಯ ಕುರಿತು ಮಾಹಿತಿ ಲಭಿಸಿತೋ ಆಗ ಅವರು ಷೆಹಬಾಜ್‌ಖಾನ್‌ನನ್ನು ಬಹಳೇ ರೀತಿಯಲ್ಲಿ ನಿಂದಿಸಿದರು. ಹಾಗೂ ಪಟ್ಟಣದವರಿಗೆ ಸಾಂತ್ವನ ನಿಡುವುದಕ್ಕಾಗಿ ಲೂಟಿ ಮಾಡಿದ ಒಂದು ತಂಡಕ್ಕೆ ಖಡ್ಗದ ರುಚಿ ತೋರಿಸಲಾಯಿತು. ಆದರೆ ಅಹ್ಮದ್‌ನಗರದ ಜನರಿಗೆ ಈಗ ಯಾವ ತೆರನಾದ ನೆಮ್ಮದಿ ಸಿಗಬಹುದಿತ್ತು ? ಅವರು ಬಹಳೇ ಸಂಕಷ್ಟದಲ್ಲಿದ್ದರು. ಅವಳು ಅಹ್ಮದ್‌ನಗರದಲ್ಲಿ ಇರುವುದು ಉಚಿತವೆಂದು ತಿಳಿಯಲಿಲ್ಲ. ಯಾರಿಗೆ ಯಾವ ಕಡೆಗೆ ಮನಸ್ಸು ಬಂದಿತೋ ಆ ಕಡೆಗೆ ಹೊರಟು ಹೋದರು.

ನಿಜಾಮಷಾಹೀ ಅಮೀರರ ಪ್ರತ್ಯೇಕ ಗುಂಪು :

ಈ ಸಮಯದಲ್ಲಿ ನಿಜಾಮಷಾಹೀ ಅಮೀರರು ಮೂರು ಗುಂಪುಗಳಲ್ಲಿ ವಿಭಜನೆಗೊಂಡಿದ್ದರು. ಹಾಗೂ ಪ್ರತಿಯೊಂದು ಗುಂಪು ಒಂದು ಮತ್ತೊಂದರಿಂದ ದೂರವಿತ್ತು. ಒಂದು ಗುಂಪು ಮಿಯಾ ಮಂಜುವಿನದಾಗಿತ್ತು. ಯಾವುದು ಅಹ್ಮದ್‌ಷಾಹ್‌ನನ್ನು ತನ್ನ ದೊರೆಯೆನ್ನುತ್ತಿದ್ದರು ಹಾಗೂ ಆದಿಲ್‌ಷಾಹಿ ಗಡಿಪ್ರದೇಶದ ಬಳಿ ವಾಸವಾಗಿದ್ದರು ಎರಡನೆಯ ಗುಂಪು – ಇಖ್ಲಾಸ್‌ಖಾನ್‌ನ ಹಿತೈಷಿಗಳದಾಗಿತ್ತು. ಯಾರು 'ಮೋತಿ' ಹೆಸರಿನ ಕುಲಗೋತ್ರ ಪರಿಚಯವಿಲ್ಲದ ಯುವಕರನ್ನು ಬಾದಷಹನನ್ನಾಗಿಸಿದ್ದರು. ಮೂರನೆಯ ಗುಂಪು ಆಹಂಗ್‌ಖಾನ್ ಹಬಶಿಯದಾಗಿತ್ತು. ಈ ಗುಂಪು ಸಹ ಆದಿಲ್‌ಷಾಹೀ ಸರಹದ್ದಿನ ಬಳಿಯೇ ವಾಸ ಮಾಡುತ್ತ ಹಾಗೂ ಎಪ್ಪತ್ತು ವರ್ಷದ ಯುವರಾಜನಾದ ಮೊದಲನೆಯ ಬುರ್ಹಾನ್ ಷಾಹ್‌ನ ಪುತ್ರನಾದ ಷಾ ಅಲಿಯನ್ನು ಬಾದ್‌ಷಾಹ್‌ನೆಂದು ಬಗೆಯುತ್ತಿದ್ದರು.

ಇಖ್ಲಾಸ್‌ಖಾನ್‌ನ ಆಗಮನ :

ಇಖ್ಲಾಸ್‌ಖಾನ್‌ನು ಬಹಳೇ ಶೌರ್ಯ ಹಾಗೂ ಸಾಹಸದ ಪ್ರದರ್ಶನ ನೀಡಿದನು. ಹಾಗೂ ದೌಲತಾಬಾದ್‌ನಿಂದ ಹತ್ತು ಸಾವಿರ ಸೈನಿಕರ ಬೃಹತ್ ಸೈನ್ಯವನ್ನು

ತೆಗೆದುಕೊಂಡು ಅಹ್ಮದ್‌ನಗರಕ್ಕೆ ಹೊರಟನು. ಖಾನೆಖಾನಾನ್‌ನು ದೌಲತ್‌ಖಾನ್‌ಲೋದಿಯನ್ನು ಐದಾರು ಸಾವಿರ ಅನುಭವಿ ಸೈನಿಕರೊಂದಿಗೆ ಅವರ ಶಕ್ತಿಯ ಮೇಲೆ ಆತನಿಗೆ ಸಂಪೂರ್ಣ ಭರವಸೆಯಿತ್ತು. ಇಖ್ಲಾಸ್‌ಖಾನ್‌ನನ್ನು ಎದುರಿಸಲು ಕಳುಹಿಸಿಕೊಟ್ಟನು.

ದಖ್ಖನಿಗಳ ಸೋಲು :

ದೌಲತ್‌ಖಾನ್ ಲೋದಿ ಹಾಗೂ ಇಖ್ಲಾಸ್‌ಖಾನ್‌ರ ನಡುವೆ ಗಂಗಾನದಿಯ ತಟದಲ್ಲಿ ಯುದ್ಧ ನಡೆಯಿತು. ದಖ್ಖನಿಗಳಿಗೆ ಸೋಲಿನ ಮುಖ ನೋಡಬೇಕಾಯಿತು. ಹಾಗೂ ಮೊಘಲರು ಯಶಸ್ವಿಗಳಾದರು. ದಖ್ಖನಿಗಳನ್ನು ಹಿಂಬಾಲಿಸಲಾಯಿತು. ಹಾಗೂ ಅವರನ್ನು ಬಹಳಷ್ಟು ನಷ್ಟ ಉಂಟು ಮಾಡಿ ಸದೆಬಡಿಯಲಾಯಿತು.

ಪಟ್ಟಣದ ವಿನಾಶ :

ಅದರ ನಂತರ ಮೊಘಲರ ಸೈನ್ಯವು ಪಟ್ಟಣಕ್ಕೆ ತಲುಪಿತು. ಈ ಸ್ಥಳದಲ್ಲಿ ವಿನಾಶವನ್ನುಂಟು ಮಾಡಲಾಯಿತು. ಎಷ್ಟರ ಮಟ್ಟಿಗೆ ಅಂದರೆ ಇಲ್ಲಿಯ ಜನರಿಗೆ ತೊಡಲು ಬಟ್ಟೆ ಸಹಿತ ಉಳಿಯಲಿಲ್ಲ.

ಆಹಂಗಖಾನ್‌ನ ಹೆಸರಿನಲ್ಲಿ ಚಾಂದ್‌ಬೀಬಿಯ ಸಂದೇಶ :

ಚಾಂದ್‌ಬೀಬಿಯು ಬಹಾದ್ದೂರ್‌ಷಾಹ್‌ನ ಬಂಧನ ಹಾಗೂ ಅಹ್ಮದ್‌ಷಾಹ್‌ನ ಪಟ್ಟಾಭಿಷೇಕದ ಕಾರಣದಿಂದ ಮೀಯಾ ಮಂಜುವಿನೆಡೆ ಬಹಳೇ ಮುನಿಸಿಕೊಂಡಿದ್ದಳು. ಅವಳು ಆಹಂಗ್‌ಖಾನ್‌ನಿಗೆ ಈ ಸಂದೇಶ ಕಳುಹಿಸಿದಳು. ಏನೆಂದರೆ "ನೀನು ಬಹುಬೇಗನೇ ವೀರ ಸವಾರರ ಒಂದು ಸೈನ್ಯವನ್ನು ತೆಗೆದುಕೊಂಡು ಅಹ್ಮದ್‌ನಗರದ ಕೋಟೆಯ ರಕ್ಷಣೆಗಾಗಿ ಬಂದು ಬಿಡು" ಈ ಸಂದೇಶ ತಲುಪುತ್ತಿದ್ದಂತೆಯೇ ಆಹಂಗ್‌ಖಾನ್‌ನು ಏಳು ಎಂಟು ಸಾವಿರ ಸೈನಿಕರೊಂದಿಗೆ ಬೇಗ ಬೇಗನೇ ಅಹ್ಮದ್‌ನಗರದತ್ತ ಪ್ರಯಾಣ ಬೆಳೆಸಿದನು. ಯಾವಾಗ ಆತನು ಅಹ್ಮದ್‌ನಗರದಿಂದ ಆರು ಕೋಸ್ ಅಂತರದಲ್ಲಿದ್ದನೋ ಆಗ ಆತನು ಓರ್ವ ಗುಪ್ತಚರನನ್ನು ಪಟ್ಟಣದಲ್ಲಿ ಕಳುಹಿಸಿದನು. ಏಕೆಂದರೆ ತಾನು ಕೋಟೆಯಲ್ಲಿ ಪ್ರವೇಶಿಸಲು ಮಾರ್ಗವನ್ನು ತಿಳಿದುಕೊಂಡು ಬರಬೇಕು. ಗುಪ್ತಚರನು ಹೋದನು. ಹಾಗೂ ಪರಿಸ್ಥಿತಿಯ ಅವಲೋಕನ ಮಾಡಿಕೊಂಡು ಮರಳಿ ಬಂದನು.

ಅಹ್ಮದ್‌ನಗರದಲ್ಲಿ ಆಹಂಗ್‌ಖಾನ್ :

ಆತನು ಹೇಳಿದನು "ಕೋಟೆಯ ಪೂರ್ವ ಭಾಗದಲ್ಲಿ ಸೈನಿಕರ ಬಿಡಾರಗಳಿಲ್ಲ ಹಾಗೂ ವೈರಿಯು ಕೋಟೆಯ ಕುರಿತು ಎಳ್ಳಷ್ಟೂ ಪರಿವೆ ಇಲ್ಲದವನಾಗಿದ್ದಾನೆ". ಇದನ್ನು ಕೇಳಿ ಆಹಂಗ್‌ಖಾನ್‌ನು ರಾತ್ರಿಯ ವೇಳೆಯೇ ಕೋಟೆಯ ಕಡೆಗೆ ಹೊರಟನು.

ಆಕಸ್ಮಿಕವಾಗಿ ಯುವರಾಜನು ಅದೇ ದಿನ ಕೋಟೆಯ ಅವಲೋಕನಕ್ಕಾಗಿ ಪೂರ್ವದ ಭಾಗದತ್ತ ಬಂದಿದ್ದನು. ಹಾಗೂ ಖಾನೆಖಾನಾನ್‌ನನ್ನು ಈ ಭಾಗದ ರಕ್ಷಣೆಯ ಸಲುವಾಗಿ ಆದೇಶ ನೀಡಿದ್ದನು. ಈ ಆಜ್ಞೆಯನ್ನು ಅನುಸರಿಸಿ ಖಾನೇಖಾನಾನ್‌ನು ಹಷ್ತೇಬಹಿಷ್ತ ಉದ್ಯಾನದಿಂದ ಹೊರಟು ಇದೇ ಸ್ಥಳಕ್ಕೆ ಬಂದಿದ್ದನು.

ಮೊಘಲರ ಮೇಲೆ ದಾಳಿ :

ಈ ಹೊಸದಾಗಿ ಉದ್ಭವಿಸಿದ ಪರಿಸ್ಥಿತಿ ಕುರಿತು ಆಹಂಗ್‌ಖಾನನಿಗೆ ಸ್ವಲ್ಪವೂ ಮಾಹಿತಿ ಇರಲಿಲ್ಲ. ಆತನು ಮೂರು ಸಾವಿರ ಸೈನಿಕರೊಂದಿಗೆ ಹಾಗೂ ಒಂದು ಸಾವಿರ ತೋಪುಗಾರರೊಂದಿಗೆ ರಾತ್ರಿ ವೇಳೆ ಈ ಸ್ಥಳಕ್ಕೆ ತಲುಪಿದನು. ಹಾಗೂ ವೈರಿಗೆ ಯಾವುದೇ ಪರಿವೆ ಇಲ್ಲದ್ದು ಕಂಡು ಅವರ ಮೇಲೆ ದಾಳಿ ಮಾಡಿದನು. ಖಾನೇಖಾನಾನ್‌ನು ಎರಡು ನೂರು ಸವಾರರನ್ನು ಜೊತೆಗೆ ಕರೆದುಕೊಂಡು ಧಾರ್ಮಿಕ ಕೇಂದ್ರದ ಮಾಳಿಗೆಯ ಮೇಲೆ ಏರಿದನು. ಹಾಗೂ ಬಾಣಗಳನ್ನು ಬಿಡತೊಡಗಿದನು. ದೌಲತ್‌ಖಾನ್‌ಲೋದಿಗೆ ಯಾವಾಗ ಈ ಘಟನೆಯ ಕುರಿತು ತಿಳಿಯಿತೋ ಆತನು ನಾಲ್ಕುನೂರು ಸೈನಿಕರ ಜೊತೆಗೆ ಖಾನೇಖಾನಾನ್‌ನ ಸಹಾಯಕ್ಕಾಗಿ ತಲುಪಿದನು.

ಯುದ್ಧ :

ಎರಡೂ ಕಡೆಯ ಸೈನಿಕರು ಧೈರ್ಯಪೂರ್ವಕವಾಗಿ ಅತ್ಯಂತ ಶೌರ್ಯತನದಿಂದ ತಮ್ಮ ತಮ್ಮ ಸಾಹಸ ಮೆರೆದರು. ಇಷ್ಟರಲ್ಲಿಯೇ ದೌಲತ್‌ಖಾನ್‌ನ ಪುತ್ರನಾದ ಪೀರ್‌ಖಾನ್‌ನೂ ತನ್ನ ೬೦೦ ಸವಾರರ ಜೊತೆಗೆ ಸ್ಥಳಕ್ಕೆ ತಲುಪಿ ಯುದ್ಧದಲ್ಲಿ ಭಾಗಿಯಾದನು. ಈಗ ಆಹಂಗ್‌ಖಾನ್‌ನಿಗೆ ಯುದ್ಧಭೂಮಿಯಲ್ಲಿ ನಿಲ್ಲುವುದು ಕಠಿಣವಾಯಿತು. ಅದಕ್ಕಾಗಿ ಆತನು ಷಾ ಅಲಿಯ ಪುತ್ರ ಹಾಗೂ ಇತರ ದಖನಿ ಬಹಾದ್ದೂರರ ಜೊತೆಗೆ (ಯಾರು ಸಂಖ್ಯೆಯಲ್ಲಿ ೪೦೦ ರಷ್ಟು ಇದ್ದರು) ಖಾನೇಖಾನಾನ್‌ನು ಬಿಡಾರದಿಂದ ಕೋಟೆಯತ್ತ ಹೊರಟನು.

ಷಾ ಅಲಿಯ ಮರಳುವಿಕೆ :

ಷಾ ಅಲಿಯು ಬಹಳೇ ನಿಶಕ್ತ ಹಾಗೂ ದುರ್ಬಲನಾಗಿದ್ದನು. ಆತನು ಕೋಟೆಯಲ್ಲಿ ಹೋಗಲು ನಿರಾಕರಿಸಿದನು. ಹಾಗೂ ಉಳಿದ ಸೈನ್ಯದೊಂದಿಗೆ ಯಾವ ಕಡೆಯಿಂದ ಬಂದಿದ್ದನೋ ಆ ಕಡೆಗೆ ಹೊರಟು ಹೋದನು. ದೌಲತ್‌ಖಾನ್ ಲೋದಿಯು ಷಾ ಅಲಿಯನ್ನು ಹಿಂಬಾಲಿಸಿದನು. ಹಾಗೂ ಕನಿಷ್ಟ ೯೦೦ ಜನರನ್ನು ಹತ್ಯೆಗೈಯ್ಯಲಾಯಿತು.

ಆದಿಲ್‌ಷಾಹಿಯ ಸಹಾಯ :

ಅಹ್ಮದ್‌ನಗರದ ವಿನಾಶ ಹಾಗೂ ಮೊಘಲರ ವಿಜಯದ ಸುದ್ಧಿಯು ಬಿಜಾಪುರಕ್ಕೆ ತಲುಪಿತು. ಹಾಗೂ ಚಾಂದ್‌ಬೀಬಿಯ ಪತ್ರಗಳು ಸಹಾಯದ ಕೋರಿಕೆಯೊಂದಿಗೆ

ಆದಿಲ್‌ಷಾಹನ ಬಳಿ ತಲುಪಿದವು. ಬಾದಷಾಹನು ನಿಜಾಮಷಾಹಿಗಳಿಗೆ ಸಹಾಯವನ್ನು ನೀಡುವ ನಿಶ್ಚಯ ಮಾಡಿದನು. ಹಾಗೂ ಸೋಹೆಲ್‌ಖಾನ್ ಶಿಖಂಡಿಗೆ ಯಾರು ಶೌರ್ಯ ಪ್ರದರ್ಶನದಲ್ಲಿ ತನಗೆ ತಾನೇ ಸಾಟಿಯಾಗಿದ್ದನು ಐವತ್ತು ಸಾವಿರ ಸವಾರರೊಂದಿಗೆ ಷಾಹ್‌ದುರ್ಗದತ್ತ ಕಳುಹಿಸಿಕೊಟ್ಟನು.

ದಖ್ಖನಿ ಸೈನಿಕರ ಒಟ್ಟುಗೂಡುವಿಕೆ :

ಮೀಯಾಮಂಜುವಿ ಅಹ್ಮದ್‌ಷಾಹ್ ಹಾಗೂ ಇನ್ನಿತರ ಅಮೀರರನ್ನು ಜೊತೆಗೆ ತೆಗೆದುಕೊಂಡು ಸೋಹೆಲ್ ಖಾನ್ ಶಿಖಂಡಿಯ ಜೊತೆ ಸೇರಿಕೊಂಡನು. ಮೊಹಮ್ಮದ್ ಕುಲಿ ಕುತುಬ್‌ಷಾಹ್‌ನ ಕಡೆಯಿಂದ ಮೆಹದಿ ಕುಲಿ ಸುಲ್ತಾನ್ ತುರ್ಕಮಾನ್‌ನೂ ತೆಲಂಗಾಣದ ಐದಾರು ಸಾವಿರ ಸೈನಿಕರನ್ನು ಕರೆದುಕೊಂಡು ಬಂದನು. ಹಾಗೂ ಸೋಹೆಲ್‌ಖಾನ್‌ನ ಸೈನ್ಯದ ಬಳಿ ಬಿಡಾರ ಹೂಡಿದನು.

ಮೊಘಲರ ಸಮಾಲೋಚನೆ :

ಮೊಘಲರಿಗೆ ದಖ್ಖನಿಗಳ ಸೈನಿಕರ ಒಟ್ಟುಗೂಡುವಿಕೆಯ ಸುದ್ಧಿಯು ತಲುಪಿತು. ಯುವರಾಜ ಮುರಾದ್ ಹಾಗೂ ಖಾನೇಖಾನಾನ್‌ರಲ್ಲಿ ಪರಸ್ಪರ ವೈಷಮ್ಯವಿತ್ತು. ಯುವರಾಜನು ಮೀಯಾ ಮೊಹಮ್ಮದ್ ಸಾದಿಕ್ ಹಾಗೂ ಇತರ ಅಮೀರರೊಂದಿಗೆ ಚರ್ಚೆ ನಡೆಸಿದನು. ಅಮೀರರು ಬಹಳೇ ವಾದ ವಿವಾದದ ನಂತರ ಪರಸ್ಪರ ಒಂದು ನಿರ್ಧಾರಕ್ಕೆ ಬಂದು ಹೀಗೆಂದರು. "ದಖನಿ ಸೈನ್ಯವು ಇಲ್ಲಿ ತಲುಪುವದಕ್ಕಿಂತ ಮೊದಲು ನಾವು ಇಲ್ಲಿಯೇ ತಂಗಬೇಕು. ಹಾಗೂ ಕೋಟೆಗೋಡೆಯಲ್ಲಿ ಛಿದ್ರ ಮಾಡಲು ಹಾಗೂ ಕೋಟೆಗೋಡೆಯನ್ನು ಕೆಡವುವ ಪ್ರಯತ್ನದಲ್ಲಿ ತೊಡಗಬೇಕು. ಕೋಟೆಯನ್ನು ಗೆಲ್ಲುವುದು ಬಹಳೇ ಅವಶ್ಯಕವಾಗಿದೆ.

ಛಿದ್ರ ಮಾಡಲು ಸಿದ್ಧತೆ :

ಯುವರಾಜನಿಗೆ ಈ ಸಲಹೆ ಮೆಚ್ಚುಗೆಯಾಯಿತು. ಆತನು ಈ ಕೆಲಸವನ್ನು ಪೂರ್ತಿಗೊಳಿಸಲು ಆದೇಶಿಸಿದನು. ಮೊಘಲರು ಬಹಳೇ ಎಚ್ಚರಿಕೆ ಹಾಗೂ ಕೌಶಲ್ಯ ಪ್ರದರ್ಶನ ಮಾಡಿ ಛಿದ್ರವನ್ನುಂಟು ಮಾಡಿದರು. ಹಾಗೂ ಕೋಟೆಯವರ ಬರುವ ಹೋಗುವ ಹಾದಿಗಳನ್ನು ತಡೆ ಹಿಡಿದರು. ಅನುಭವಿ ಹಾಗೂ ಕುಶಲಕರ್ಮಿಗಳು ಯುವರಾಜನ ಯುದ್ಧಸಂಕೇತವಿದ್ದ ಸ್ಥಳದಿಂದ ಕೋಟೆಯವರೆಗೆ ಐದು ಛಿದ್ರಗಳನ್ನು ಸಿದ್ಧಪಡಿಸಿದರು. ಹಾಗೂ ಈ ಛಿದ್ರಗಳನ್ನು ಕೋಟೆಯವರೆಗೂ ಉಂಟುಮಾಡಿ ಕೋಟೆಯನ್ನು ಅಭದ್ರಗೊಳಿಸಿದರು. ರಜ್ಜಬದ ಮೊದಲನೆಯ ದಿನಾಂಕದಂದು ಈ ಛಿದ್ರಗಳಲ್ಲಿ ಮದ್ದು ತುಂಬಲಾಯಿತು.

ಕೋಟೆಯೊಳಗಿನವರಿಗೆ ಎಚ್ಚರಿಕೆ :

ಮೊಘಲರು ಶುಕ್ರವಾರದ ನಮಾಜಿನ ನಂತರ ಛಿದ್ರಗಳಲ್ಲಿ ಯಾವುದರಲ್ಲಿ ಮದ್ದನ್ನು ತುಂಬಿದ್ದರೋ ಅವುಗಳಲ್ಲಿ ಅಗ್ನಿ ಸ್ಪರ್ಶಗೈಯ್ಯಲು ಹಾಗೂ ವೈರಿಗಳನ್ನು ಬೆಂಕಿಯಲ್ಲಿ ಸುಡಲು ನಿಶ್ಚಯಿಸಿದರು. ಖ್ವಾಜಾ ಮೊಹಮ್ಮದ್‌ಖಾನ್ ಶಿರಾಜಿ ಯಾವಾತನು ಮೊಘಲರ ಸೈನ್ಯದಲ್ಲಿದ್ದನು ಆತನಿಗೆ ಕೋಟೆಯವರ ಪರಿಸ್ಥಿತಿಯ ಮೇಲೆ ಬಹಳ ಅನುಕಂಪ ಮೂಡಿತು. ಆತನು ಕಾಳರಾತ್ರಿಯಲ್ಲಿ ಕೋಟೆಯವರ ಹತ್ತಿರ ಹೋದನು ಹಾಗೂ ಅವರನ್ನು ನಡೆಯಬಹುದಾದ ಅನಾಹುತದ ಕುರಿತು ವಿವರಿಸಿ ಎಚ್ಚರಿಸಿದನು.

ರಕ್ಷಣೆಗಾಗಿ ಕ್ರಮ :

ಖ್ವಾಜಾ ಮೊಹಮ್ಮದ ಶಿರಾಜಿಯು ಜೊತೆಯವರಿಗೆ ಇದನ್ನು ಸಹ ತಿಳಿಸಿದನು. ಏನೆಂದರೆ ಮೊಘಲರು ಯಾವ ಯಾವ ಸ್ಥಳಗಳಲ್ಲಿ ಛಿದ್ರವನ್ನುಂಟು ಮಾಡಿರುವರು. ನಿಜಾಮಶಾಹಿಗಳು ಖ್ವಾಜಾ ಶಿರಾಜಿಗೆ ಧನ್ಯತೆಯನ್ನರ್ಪಿಸಿದರು ಹಾಗೂ ಚಾಂದ್‌ಬೀಬಿಯ ಆದೇಶದಂತೆ ನೆಲವನ್ನು ಅಗೆಯುವುದಗಲ್ಲಿ ಹಾಗೂ ಶಿರಾಜಿಯು ತಿಳಿಸಿದಂತಹ ಕೋಟೆಯ ಭಾಗಗಳಲ್ಲಿಯ ಛಿದ್ರಗಳನ್ನು ಹುಡುಕುವಲ್ಲಿ ನಿರತರಾದರು. ಹಾಗೂ ಕೋಟೆಯವರು ಶುಕ್ರವಾರದ ಪ್ರಾರ್ಥನೆಯ ಸಮಯದವರೆಗೆ ಎರಡು ಛಿದ್ರಗಳನ್ನು ಹುಡುಕಿ ತೆಗೆದರು. ಹಾಗೂ ಅದರಲ್ಲಿಯ ಸಂಪೂರ್ಣ ಮದ್ದನ್ನು ಹೊರತೆಗೆದರು. ಹಾಗೂ ಉಳಿದ ಛಿದ್ರಗಳನ್ನು ಹುಡುಕುವಲ್ಲಿ ತೊಡಗಿದರು.

ಮೊಘಲರ ಇಚ್ಛೆ :

ಯುವರಾಜನಾದ ಮುರಾದ್ ಹಾಗೂ ಮೊಹಮ್ಮದ್ ಸಾದಿಕ್‌ಖಾನ್‌ನ ಈ ಇಚ್ಛೆಯಿತ್ತು. ಈ ಕೋಟೆಯ ವಿಜಯದ ಶ್ರೇಯಸ್ಸು ಖಾನೇಖಾನಾನ್‌ನ ಪಾಲಾಗದಿರಲಿ. ಅದಕ್ಕಾಗಿ ಅವರು ಖಾನೇಖಾನಾನ್‌ನಿಗೆ ತಿಳಿಸದೇ ಈ ಕೋಟೆಯ ಸುತ್ತಲೂ ಸಶಸ್ತ್ರ ಸೈನ್ಯವನ್ನು ನಿಲ್ಲಿಸಿದರು. ಮೊಘಲರ ಇಚ್ಛೆ ಇದಾಗಿತ್ತು ಏನೆಂದರೆ ಕೋಟೆಯ ಗೋಡೆಯಲ್ಲಿ ಬಿರುಕು ಮೂಡಿದ ತಕ್ಷಣ ಅವರು ಕೋಟೆಯೊಳಗೆ ನುಸುಳಬೇಕು. ಹಾಗೂ ಯುವರಾಜನ ಆದೇಶದಂತೆ ಎಲ್ಲ ಸೈನ್ಯಾಧಿಕಾರಿಗಳು ಯುದ್ಧಕ್ಕಾಗಿ ಸಿದ್ಧರಾಗಿ ಕೋಟೆಯ ಹತ್ತಿರ ಬಂದರು. ಖಾನೇಖಾನಾನ್‌ನಿಗೆ ಈ ಸ್ಥಿತಿಗತಿಗಳಿಂದ ದೂರ ಇಡಲಾಯಿತು. ಹಾಗೂ ಆತನಿಗೆ ಯುವರಾಜನು ಕರೆಸಲೂ ಇಲ್ಲ.

ಕೋಟೆಯ ಗೋಡೆಯು ಬೀಳುವುದು :

ಯುವರಾಜ ಮುರಾದ್‌ನು ಛಿದ್ರಗಳಿಗೆ ಅಗ್ನಿಸ್ಪರ್ಶಗೈಯ್ಯಲು ಆದೇಶ ನೀಡಿದನು. ಕೋಟೆಯೊಳಗಿನವರು ಎಲ್ಲಕ್ಕಿಂತ ದೊಡ್ಡದಾದ ಛಿದ್ರವನ್ನು ಅಗೆದು ಅದರ ಮದ್ದನ್ನು

ಹೊರತೆಗೆಯುತ್ತಿದ್ದರು. ಇದೇ ಸಮಯದಲ್ಲಿ ಮೊಘಲರು ಆ ಛಿದ್ರಕ್ಕೆ ಬೆಂಕಿ ಇಟ್ಟರು. ಕೋಟೆಯ ಗೋಡೆಯು ಛಿದ್ರ ವಿಚ್ಛಿದ್ರವಾಗಿ ಬೀಳತೊಡಗಿತು. ಸುಮಾರು ಐವತ್ತು ಅಡಿಯಷ್ಟು ಗೋಡೆಯು ಬಿದ್ದಿತು. ಹಾಗೂ ಆ ಎಲ್ಲ ಜನರು ಯಾರು ಆ ಛಿದ್ರದ ಬಳಿ ಕೆಲಸದಲ್ಲಿ ತೊಡಗಿದ್ದರು, ಕಲ್ಲು ಮಣ್ಣಿನಡಿಯಲ್ಲಿ ನುಜ್ಜುಗುಜ್ಜಾದರು. ನಾಲ್ಕೂ ಕಡೆಗೆ ಹಾಹಾಕಾರ ಉಂಟಾಯಿತು. ಮುರ್ತುಜಾಖಾನ್ ಬಿನ್ ಷಾಅಲಿ, ಅಹಂಗ್‌ಖಾನ್, ಷಂಷೀರ್‌ಖಾನ್ ಹಾಗೂ ಮೊಹಮ್ಮದ್‌ಖಾನ್ ಇತರರು ದೂರದಿಂದಲೇ ಇದನ್ನು ಗಮನಿಸಿದರು. ಅವರು ಬಹಳೇ ವಿಹ್ವಲಿತರಾದರು. ಹಾಗೂ ದಿಕ್ಕೆಟ್ಟು ಆ ಕಡೆ ಈ ಕಡೆ ಹೋಗಿ ಅಡಗಿಕೊಂಡರು. ಹಾಗೆ ನೋಡಿದರೆ ಇದು ಪ್ರಳಯ ಸದೃಶ ದೃಶ್ಯವಾಗಿತ್ತು. ಹಾಗೂ ಕೋಟೆಯ ರಕ್ಷಣೆಗೈಯ್ಯಲು ಯಾರೂ ಉಳಿಯಲಿಲ್ಲ.

ಚಾಂದ್‌ಬೀಬಿಯ ಹೊರಬರುವಿಕೆ :

ಧೈರ್ಯವಂತೆ, ದಕ್ಷಳಾದ ರಾಣಿ ಚಾಂದ್‌ಬೀಬಿಗೆ ಈ ಘಟನೆಯ ಮಾಹಿತಿ ಲಭಿಸಿತು. ಆ ಸ್ಥೈರ್ಯವುಳ್ಳ ಸ್ತ್ರೀಯು ಸಶಸ್ತ್ರಸಜ್ಜಿತಳಾಗಿ ಅರಮನೆಯಿಂದ ಹೊರ ಬಂದಳು. ಹಾಗೂ ಕುದುರೆಯ ಮೇಲೆ ಸವಾರಳಾಗಿ ಆ ಸ್ಥಳಕ್ಕೆ ಬಂದು ತಲುಪಿದಳು. ಎಲ್ಲಿ ಗೋಡೆಯೊಳಗೆ ಛಿದ್ರ ಉಂಟಾಗಿತ್ತು. ಆ ವೇಳೆಯಲ್ಲಿ ಮುರ್ತುಜಾಖಾನ್, ಅಹಂಗ್‌ಖಾನ್, ಷೇರ್‌ಖಾನ್, ಹಾಗೂ ಇತರರು ಸಹ ಹೊರಬಂದು ರಾಣಿಯ ಬಳಿ ತಲುಪಿದರು.

ಯುದ್ಧ :

ಯುವರಾಜನಾದ ಮುರಾದ್ ಹಾಗೂ ಮೊಹಮ್ಮದ್ ಸಾದಿಕ್ ಹಾಗೂ ಇವರ ಮೊಘಲ್ ಸರದಾರರು ಈ ಅವಕಾಶಕ್ಕಾಗಿ ಕಾಯ್ದಿದ್ದರು. ಏನೆಂದರೆ ಬೇರೆಯ ಛಿದ್ರಗಳಲ್ಲಿ ಅಗ್ನಿಸ್ಪರ್ಶವಾಗಲಿ ಅವರು ತಮ್ಮ ಕೆಲಸವನ್ನು ಮಾಡುವುದು ಹಾಗೂ ಇದೇ ನಿರೀಕ್ಷೆಯಲ್ಲಿ ಇದ್ದರು. ಹಾಗೂ ಕೋಟೆಯವರು ಈ ಅವಕಾಶವನ್ನು ಸದುಪಯೋಗಪಡಿಸಿಕೊಂಡು ತೋಪುಗಳನ್ನು, ಬಂದೂಕುಗಳನ್ನು, ಬೇರೆಯ ಶಸ್ತ್ರಗಳನ್ನು ಬೆಂಕಿ ಹಚ್ಚುವ ಬೇರೆಯ ವಸ್ತುಗಳನ್ನು, ತಂದು ಈ ಛಿದ್ರಗಳನ್ನು ಭದ್ರಗೊಳಿಸಿದರು. ಯಾವಾಗ ಮೊಘಲ ಅಮೀರರು ಬೇರೆಯ ಛಿದ್ರಗಳಲ್ಲಿ ಅಗ್ನಿಯು ಉಂಟಾಗದಿರಲು ನಿರಾಶರಾದರು. ಆದುದರಿಂದ ಅವರು ಈ ಛಿದ್ರಗಳ ಮೇಲೆ ದಾಳಿ ಮಾಡಿದರು. ಯಾವುದು ಮೊದಲು ಛಿದ್ರಗೊಂಡು ಬಿರುಕು ಉಂಟಾಗಿತ್ತು. ಈ ಸಮಯದಲ್ಲಿ ಕೋಟೆಯವರು ಹಾಗೂ ಮೊಘಲರ ನಡುವೆ ಭೀಕರ ರೂಪದ ಯುದ್ಧ ನಡೆಯಿತು.

ಅಗ್ನಿಯುದ್ಧ :

ದಿಟ್ಟಳಾದ ರಾಣಿ ಚಾಂದ್‌ಬೀಬಿಯು ಕೋಟೆಯವರಿಗೆ ಪ್ರೋತ್ಸಾಹವನ್ನು ನೀಡುತ್ತಾ

ಹುರಿದುಂಬಿಸುತ್ತಿದ್ದಳು. ಅವರು ಮೊಘಲರ ಮೇಲೆ ಅಗ್ನಿಯ ಮಳೆ ಸುರಿಸುತ್ತಿದ್ದರು. ಕೋಟೆಯುವರು ಪ್ರತಿಸಲ ಎರಡು ಮೂರು ಸಾವಿರ ಅಗ್ನಿಶಸ್ತ್ರಗಳಿಂದ ಬೆಂಕಿಯುಗುಳುತ್ತಿದ್ದರು. ಮೊಘಲರ ಸೈನ್ಯದ ಬಹಳಷ್ಟು ಸರದಾರರು ಈ ಯುದ್ಧದಲ್ಲಿ ಹತರಾದರು. ಹಾಗೂ ಅವರ ಶವಗಳಿಂದ ಕಂದಕಗಳು ತುಂಬಿದವು.

ಚಾಂದ್‌ಬೀಬಿಯ ಶೌರ್ಯ :

ಮೊಘಲರು ದಿನದ ಎರಡು ಘಂಟೆಯ ಸಮಯದಿಂದ ಸಂಜೆಯವರೆಗೂ ಯುದ್ಧ ನಿರತರಾದರು. ಆದರೆ ಯಶಸ್ಸಿನ ಸುಳಿವು ಸನಿಹಕ್ಕೆ ಸುಳಿಯಲಿಲ್ಲ. ಯುವರಾಜ ಮುರಾದ್, ಮೊಹಮ್ಮದ್‌ಸಾದಿಕ್ ಹಾಗೂ ಇತರ ಅಮೀರರು ತಮ್ಮ ತಮ್ಮ ಬಿಡಾರಗಳಿಗೆ ಮರಳಿ ಹೋದರು. ಮೊಘಲರ ಸೈನ್ಯದ ಪ್ರತಿಯೊಬ್ಬ ಸೈನಿಕನೂ, ಸಿಪಾಯಿಯಿಂದ ಸೈನ್ಯಾಧಿಕಾರಿಯವರೆಗೂ ಎಲ್ಲರೂ ಚಾಂದ್‌ಬೀಬಿಯನ್ನು ಹೊಗಳ ತೊಡಗಿದರು. ಅವಳ ಧೈರ್ಯ, ಸ್ಥೈರ್ಯದ ಅಭಿಮಾನಿಗಳಾದರು. ಪ್ರತಿಯೊಬ್ಬ ವ್ಯಕ್ತಿಯು ಅವಳ ಅನುಪಮ ಧೈರ್ಯವನ್ನು ಮೆಚ್ಚಿದನು. ಹಾಗೂ ಅದೇ ದಿನದಿಂದ ಚಾಂದ್‌ಬೀಬಿಯು 'ಚಾಂದ್ ಸುಲ್ತಾನಾ' ಪದವಿಯಿಂದ ಗುರುತಿಸಲ್ಪಡತೊಡಗಿದಳು.

ಕೋಟೆಯಲ್ಲಿನ ಬಿರುಕುಗಳ ಪುನರ್‌ನಿರ್ಮಾಣ :

ರಾತ್ರಿಯಾದ ಮೇಲೆ ಚಾಂದ್‌ಬೀಬಿಯು ಮೊದಲಿನಂತೆ ಕುದುರೆಯ ಮೇಲೆ ಸವಾರಳಾಗಿ ಅನುಭವಿ, ಚತುರ, ಕುಶಲಕರ್ಮಿ, ಕಟ್ಟಡ ನಿರ್ಮಾಣಕಾರರಿಗೆ ಆದೇಶ ನೀಡಿದಳು. ಅವರು ಕೋಟೆಯ ಗೋಡೆಯನ್ನು ಎಲ್ಲಿ ಛಿದ್ರಗೊಂಡಿದೆಯೋ ಎರಡು ಮೂರು ಗಜ ತುಂಬಿಕೊಳ್ಳಬೇಕು. ಈ ಕೆಲಸದಿಂದ ಬಿಡುವು ಮಾಡಿಕೊಂಡು ರಾಣಿಯು ದಖ್ಖನ್ನಿನ ಈ ಸರದಾರುಗಳ ಹೆಸರಿನಲ್ಲಿ ಪತ್ರಗಳನ್ನು ಬರೆದಳು. ಯಾರು ಸೋಹೇಲ್‌ಖಾನ್ ಹಾಗೂ ಇತರರೊಂದಿಗೆ ಭೀಡ್‌ದ ಬಳಿಗೆ ತಲುಪಿದ್ದರು.

ದಖ್ಖನ್ನಿನ ಅಮೀರರ ಹೆಸರಿನಲ್ಲಿ ಪತ್ರಗಳು :

ಚಾಂದ್‌ಬೀಬಿಯು ಸೊಹೇಲ್‌ಖಾನ್ ಹಾಗೂ ಬೇರೆಯ ಸರದಾರರಿಗೆ ವೈರಿಯು ತಮ್ಮ ಮೇಲೆ ಮೇಲುಗೈ ಸಾಧಿಸಿರುವುದನ್ನು ಹಾಗೂ ಕೋಟೆಯವರ ದುರ್ಬಲತೆಯನ್ನು ಹಾಗೂ ಆಹಾರ ಧಾನ್ಯಗಳ ಕೊರತೆಯ ಕುರಿತು ಮಾಹಿತಿ ನೀಡಿದಳು. ಯಾವ ವ್ಯಕ್ತಿಯ ಮುಖಾಂತರ ಈ ಪತ್ರಗಳನ್ನು ರವಾನಿಸಲಾಗಿತ್ತೋ ಆಕಸ್ಮಿಕವಾಗಿ ಅವನನ್ನು ಮೊಘಲರು ಬಂಧಿಸಿದರು. ಖಾನೆಖಾನಾನ್ ಹಾಗೂ ಮೊಹಮ್ಮದ್ ಸಾದಿಕ್‌ರ ಎದುರು ಹಾಜರುಪಡಿಸಿದರು. ಈ ಜನರು ಸೋಹೇಲ್‌ಖಾನ್‌ನ ಹೆಸರಿನಲ್ಲಿ ಈ ಸಾರಾಂಶವುಳ್ಳ ಒಂದು ಪತ್ರವನ್ನು ಬರೆದರು.

"ನಾವು ಒಂದು ಅವಧಿಯಿಂದ ನಿಮ್ಮ ಹಾದಿ ಕಾಯುತ್ತಿದ್ದೇವೆ. ಏಕೆಂದರೆ ಈ

ಗೊಂದಲ ಸಮಾಪ್ತಿಯಾಗಲಿ, ಎಷ್ಟು ಬೇಗನೇ ಸಾಧ್ಯವೋ ಅಷ್ಟು ಬೇಗನೇ ಇಲ್ಲಿ ತಲುಪಲು ಪ್ರಯತ್ನಿಸಬೇಕು" ಮೊಘಲರು ಈ ಪತ್ರವನ್ನು ಸಹ ಆತನಿಗೆ ನೀಡಿದರು. ಹಾಗೂ ಆತನು ಚಾಂದ್‌ಬೀಬಿಯ ಪತ್ರಗಳೊಂದಿಗೆ ಈ ಪತ್ರವನ್ನು ಸಹ ತೆಗೆದುಕೊಂಡು ಹೋದನು.

ಸೋಹೆಲ್‌ಖಾನ್‌ನ ಅಹ್ಮದ್‌ನಗರಕ್ಕೆ ಹೋಗುವ ಇಚ್ಛೆ :

ಸೋಹೇಲ್ ಖಾನ್‌ನಿಗೆ ಯಾವಾಗ ಈ ಪತ್ರಗಳು ಲಭ್ಯವಾದವೋ ಆತನು ತಕ್ಷಣ ತನ್ನ ತಂಗುದಾಣದಿಂದ ಹೊರಟನು. ಹಾಗೂ ಅತಿವೇಗದೊಂದಿಗೆ ಪ್ರಯಾಣ ಮುಂದುವರೆಸುತ್ತಾ ಅಹ್ಮದ್‌ನಗರಕ್ಕೆ ಹೊರಟನು. ಮೊಘಲರ ಸೈನ್ಯದಲ್ಲಿ ಕ್ಷಾಮವು ಇಣುಕಿತ್ತು. ಮೇವು ಇರದಿದ್ದರಿಂದ ಅವರ ಕುದುರೆಗಳು ಬಹಳೇ ದುರ್ಬಲಗೊಳ್ಳುತ್ತ ಹೊರಟಿದ್ದವು. ಅವರಿಗೆ ಯಾವಾಗ ಸೋಹೆಲ್‌ಖಾನ್‌ನ ಆಗಮನದ ಮಾಹಿತಿ ಲಭಿಸಿತೋ ಅವರು ಈ ನಿರ್ಧಾರ ತೆಗೆದುಕೊಂಡರು. ಈ ವೇಳೆ ಇದರಲ್ಲಿಯೇ ಒಳಿತಿದೆ. ಚಾಂದ್‌ಬೀಬಿಯೊಂದಿಗೆ ಈ ಷರತ್ತಿನ ಮೇಲೆ ಸಂಧಾನ ಮಾಡಿಕೊಳ್ಳುವುದು, ಏನೆಂದರೆ ಬರಾರ್‌ದ ಪ್ರಾಂತ್ಯವನ್ನು ಮೊಘಲರಿಗೆ ನೀಡಬೇಕು. ಹಾಗೂ ಉಳಿದ ಪೂರ್ಣ ಪ್ರಾಂತ್ಯವು ಮೇಲೆ ಮೊದಲಿನಂತೆ ನಿಜಾಮಷಾಹಿಗಳ ವಶದಲ್ಲಿಯೇ ಇರಬೇಕು.

ಸಂಧಾನ :

ಯುವರಾಜನಾದ ಮುರಾದ್‌ನ ಕಡೆಯಿಂದ ಸೈಯ್ಯದ್ ಮುರ್ತುಜಾನನ್ನು ಯಾರು ನಿಜಾಮಷಾಹೀ ದರ್ಬಾರಿನ ಬಹಳ ಹಳೆಯ ನಂಬಿಗಸ್ಥ ಸೇವಕನಾಗಿದ್ದನೋ ಆತನಿಗೆ ಸಂಧಾನಕಾರನಾಗಿ ಕಳುಹಿಸಲು ನಿರ್ಧರಿಸಲಾಯಿತು. ಚಾಂದ್‌ಬೀಬಿಯು ಯಾವಾಗ ವೈರಿಯ ಕಠಿಣ ಪರಿಸ್ಥಿತಿಯನ್ನು ಹಾಗೂ ದುರ್ಬಲತೆಯನ್ನು ಮನಗಂಡಳು ಆಗ ಅವಳು ಮೊದಲು ಸಂಧಾನವನ್ನು ನಿರಾಕರಿಸಿದಳು. ಆದರೆ ಕೊನೆಗೆ ಅವಳಿಗೆ ಈ ಮಾತು ಅರ್ಥವಾಯಿತು. ಏನೆಂದರೆ ಈ ಪರಿಸ್ಥಿತಿಯಲ್ಲಿ ಯುದ್ಧವನ್ನು ಮಾಡುವುದು ಯಾವ ವಿಧದಲ್ಲಿಯೂ ಉಚಿತವಲ್ಲ. ರಾಣಿ ಹಾಗೂ ಕೋಟೆಯವರು ದಿಗ್ಬಂಧನ ಕಾರಣ ಕಠಿಣ ಸ್ಥಿತಿಯನ್ನು ಎದುರಿಸುತ್ತಿದ್ದರು. ಅದಕ್ಕಾಗಿ ಚಾಂದ್‌ಬೀಬಿಯು ಬೇಷರತ್ ಸಂಧಾನಕ್ಕೆ ಒಪ್ಪಿದಳು.

ಮೊಘಲರ ಮರಳುವಿಕೆ :

ಷಾಬಾನ್ ತಿಂಗಳ ಪ್ರಾರಂಭದಲ್ಲಿ ಯುವರಾಜ ಮುರಾದ್ ಹಾಗೂ ಖಾನೇಖಾನಾನ್ ದೌಲತಾಬಾದ್ ಹಾಗೂ ಕೋತಲ್ ಚಿತ್ತೂಡದ ಹಾದಿಯಿಂದ ಬರಾರ್‌ದತ್ತ ಹೊರಟನು. ಎರಡು ಮೂರು ದಿನಗಳ ನಂತರ ಸೋಹೆಲ್‌ಖಾನ್‌ನು ಯಾರು ಆದಿಲ್‌ಷಾಹಿ ಸೈನ್ಯದ ಸೇನಾಧಿಪತಿಯಾಗಿದ್ದನು ಹಾಗೂ ಮೊಹಮ್ಮದ್

ಕುಲಿ ಸುಲ್ತಾನ್, ಮಿಯಾ ಮಂಜುವಿಯ ಜೊತೆಗೆ ಅಹ್ಮದ್‌ನಗರಕ್ಕೆ ಆಗಮಿಸಿದನು. ಮಿಯಾ ಮಂಜುವಿಯು ಮೊದಲಿನಂತೆ ಅಹ್ಮದ್‌ಷಾಹ್‌ನಿಗೆ ಅಹ್ಮದ್‌ನಗರದ ಸಿಂಹಾಸನದ ಮೇಲೆ ಕೂಡ್ರಿಸಲು ಇಚ್ಛಿಸಿದನು.

ಬಹಾದ್ದೂರ್‌ಷಾಹ್‌ನ ಪಟ್ಟಾಭಿಷೇಕ :

ಆಹಂಗ್‌ಖಾನ್‌ನು ಅಹ್ಮದ್‌ಷಾಹ್‌ನನ್ನು ಕೋಟೆಯಿಂದ ಹೊರಹಾಕಿದನು. ಹಾಗೂ ಮಿಯಾ ಮಂಜುವಿಗೆ ಕೋಟೆಯಲ್ಲಿ ಪ್ರವೇಶವನ್ನು ನಿಷೇಧಿಸಿದನು. ಅದರ ನಂತರ ಆಹಂಗ್‌ಖಾನ್‌ನು ಜೋಂದ್‌ಕೋಟೆಯ ರಕ್ಷಕನ ಬಳಿ ತನ್ನ ಕೆಲವು ಜನರನ್ನು ಕಳುಹಿಸಿದನು. ಹಾಗೂ ಇಬ್ರಾಹಿಂಷಾಹ್‌ನ ಪುತ್ರನಾದ ಬಹಾದ್ದೂರ್‌ಷಾಹ್‌ನನ್ನು ಅಹ್ಮದ್‌ನಗರಕ್ಕೆ ಕರೆಯಿಸಿಕೊಂಡನು. ಕೋಟೆಯಲ್ಲಿ ಬಹಾದ್ದೂರ್‌ಷಾಹ್‌ನ ಹೆಸರಿನ ಖುತ್ಬಾ ಹಾಗೂ ಮುದ್ರೆಯನ್ನು ಜಾರಿಗೊಳಿಸಲಾಯಿತು.

ಮಿಯಾ ಮಂಜುವಿಯ ಹೆಸರಿನಲ್ಲಿ ಆದಿಲ್‌ಷಾಹ್‌ನ ಸಂದೇಶ :

ಮಿಂಯಾ ಮಂಜುವಿಯು ಬಹಾದ್ದೂರ್‌ಷಾಹ್‌ನ ಪಟ್ಟಾಭಿಷೇಕವನ್ನು ವಿರೋಧಿಸಿದನು. ಈ ಸಂದರ್ಭದಲ್ಲಿ ಪ್ರಾಂತ್ಯದಲ್ಲಿ ಗೊಂದಲ, ಗಲಭೆ, ಕ್ಷೋಭೆಯ ಬೆಂಕಿಯು ಮತ್ತೆ ಭುಗಿಲೇಳುವ ಸಂಭವವಿತ್ತು. ಆದರೆ ಆಕಸ್ಮಿಕವಾಗಿ ಇಬ್ರಾಹಿಂ ಆದಿಲ್‌ಷಾಹ್‌ನು ತನ್ನ ಪ್ರಸಿದ್ಧ ಅಮೀರನಾದ ಮುರ್ತುಜಾ ಖಾನ್ ದಖನಿಯ ಮೇಲ್ವಿಚಾರಣೆಯಲ್ಲಿ ನಾಲ್ಕು ಸಾವಿರ ಸವಾರರನ್ನು ಅಹ್ಮದ್‌ನಗರಕ್ಕೆ ಕಳುಹಿಸಿದನು. ಹಾಗೂ ಮೀಯಾ ಮಂಜುವಿಗೆ ಸಂದೇಶ ನೀಡಿದನು. "ಈ ಗೊಂದಲಮಯ ಸ್ಥಿತಿಯಲ್ಲಿ ಯುದ್ಧದ ನಿರ್ಧಾರ ಮಾಡುವುದು ಪ್ರಾಂತ್ಯದ ವಿನಾಶದ ಹಾದಿಯನ್ನು ತೆರೆದಂತಾಗುವುದು. ನೀವೆಲ್ಲರೂ ಸಮಸ್ಯೆಗಳನ್ನು ಸಧ್ಯಕ್ಕೆ ಬದಿಗಿಡಿರಿ ಹಾಗೂ ಬೇಗಬೇಗನೆ ಸೋಹೇಲ್‌ಖಾನ್‌ನ ಜೊತೆಗೆ ಬಿಜಾಪುರ ತಲುಪಿರಿ ಏಕೆಂದರೆ ಪರಸ್ಪರ ಚರ್ಚೆ, ಹಾಗೂ ನಿಜ ಪರಿಸ್ಥಿತಿಯನ್ನು ಅರಿತುಕೊಂಡು ನಂತರ ಏನಾದರೂ ನಿರ್ಧಾರವನ್ನು ತೆಗೆದುಕೊಳ್ಳುವುದು"

ಬಿಜಾಪುರದಲ್ಲಿ ಅಹ್ಮದ್‌ಷಾಹ್ :

ಮಿಯಾ ಮಂಜುವಿಯು ಚತುರ ಅಮೀರನಾಗಿದ್ದನು. ಆತನು ಆದಿಲ್‌ಷಾಹೀ ಆದೇಶವನ್ನು ಪಾಲಿಸಿದನು. ಹಾಗೂ ಮುಸ್ತಫಾ ಖಾನ್‌ನೊಂದಿಗೆ ಬೇಗಬೇಗನೆ ಬಿಜಾಪುರಕ್ಕೆ ತಲುಪಿದನು. ಇಬ್ರಾಹಿಂ ಆದಿಲ್‌ನಿಗೆ ಈ ವಿಷಯ ಸ್ಪಷ್ಟವಾಯಿತು. ಏನೆಂದರೆ ಅಹ್ಮದ್‌ಷಾಹ್‌ನು ನಿಜಾಮ್‌ಷಾಹಿ ವಂಶಸ್ಥನಾಗಿರುವುದಿಲ್ಲ. ಅದಕ್ಕಾಗಿ ಆತನು ಅಹ್ಮದ್‌ಷಾಹ್‌ನನ್ನು ತನ್ನ ಅಮೀರರ ಸಮೂಹದಲ್ಲಿ ಸೇರಿಸಿಕೊಂಡು ಪ್ರಾಂತ್ಯದ ಒಂದು ಉನ್ನತ ಪ್ರದೇಶದ ಜಾಗೀರದಾರನನ್ನಾಗಿ ನೇಮಿಸಿದನು. ಇದೇ ತೆರನಾಗಿ

ಮಿಯಾ ಮಂಜುವಿ ಹಾಗೂ ಆತನ ಪುತ್ರ ಮಿಯಾ ಹುಸೈನ್‌ನಿಗೂ ಸಹ ಅಮೀರರ ಗುಂಪಿನಲ್ಲಿ ಸೇರಿಸಲಾಯಿತು. ಹಾಗೂ ಜಾಗೀರುಗಳಿಂದ ಪುರಸ್ಕರಿಸಲಾಯಿತು.

ಅಹ್ಮದ್‌ಷಾಹ್‌ನ ಆಡಳಿತಾವಧಿಯು ಕೇವಲ ಎಂಟು ತಿಂಗಳು ಇರುವುದು.

■

*

೧೦. ಇಬ್ರಾಹಿಂ ನಿಜಾಮಷಾಹ್ ದ್ವಿತಿಯನ ಪುತ್ರ ಬಹಾದ್ದೂರ್ ಷಾ

ಮುಹಮ್ಮದ್‌ಖಾನ್‌ನ ಅಧಿಕಾರ :

ಓದುಗರಿಗೆ ಈ ಸ್ಪಷ್ಟ ಚಿತ್ರಿಕರಣ ಸಿಗುವುದು ಏನೆಂದರೆ ಚಾಂದ್‌ಬೀಬಿಯ ಪ್ರತಾಪದ ಪ್ರಯತ್ನಗಳಿಂದಲೇ ಬಹಾದ್ದೂರ್‌ಷಾಹ್‌ನು ಅಹ್ಮದ್‌ನಗರದ ಸಿಂಹಾಸನದ ಮೇಲೆ ಆಸೀನನಾದನು. ಆತನ ದಾಯಿಯ ಪುತ್ರನಾದ ಮೊಹಮ್ಮದ್‌ಖಾನ್‌ನು ಪೇಷ್ವಾನ ಹುದ್ದೆಯನ್ನು ಅಲಂಕರಿಸಿದನು. ಮುಹಮ್ಮದ್‌ಖಾನನು ಅಲ್ಪ ಅವಧಿಯಲ್ಲಿಯೇ ಲೋಕಾರೂಢಿಯಂತೆ ತನ್ನ ಸಂಬಂಧಿಕರಿಗೆ ಹಿತೈಷಿಗಳಿಗೆ ಉನ್ನತ ಹುದ್ದೆಗಳನ್ನು ನೀಡಿ ಅವರನ್ನು ಬಲಿಷ್ಠಗೊಳಿಸಿದನು. ಹಾಗೂ ಅವರ ಸಹಾಯದಿಂದ ತನ್ನ ಅಧಿಕಾರದ ಬಲವನ್ನು ವೃದ್ಧಿಗೊಳಿಸಿಕೊಂಡು ಸ್ವತಂತ್ರ ರೂಪದಲ್ಲಿ ಸರ್ವಾಧಿಕಾರಿಯಂತೆ ಅಧಿಕಾರ ನಡೆಸತೊಡಗಿದನು.

ಪ್ರಸಿದ್ಧ ಅಮೀರರ ಬಂಧನ :

ಮೊಹಮ್ಮದ್‌ಖಾನ್‌ನು ಯೋಜನಾಬದ್ಧವಾಗಿ ಆಹಂಗ್‌ಖಾನ್ ಹಾಗೂ ಷಂಷೀರ್‌ಖಾನ್‌ನಂತಹ ಪ್ರಸಿದ್ಧ ಅಮೀರರನ್ನು ಬಂಧನದಲ್ಲಿಟ್ಟನು. ಬೇರೆಯ ಅಮೀರರು ಯಾವಾಗ ಈ ಪರಿಸ್ಥಿತಿಯನ್ನು ಗಮನಿಸಿದರೋ ಅವರು ಆಗ ತಮ್ಮ ಸ್ವರಕ್ಷಣೆಗೆಂದು ಅತ್ತಿತ್ತ ಓಡಿ ಹೋದರು.

ಆದಿಲ್‌ಷಾಹ್‌ನ ಹೆಸರಿನಲ್ಲಿ ಚಾಂದ್‌ಬೀಬಿಯ ಸಂದೇಶ :

ಚಾಂದ್‌ಬೀಬಿಯು ಪರಿಸ್ಥಿತಿಯನ್ನು ಅವಲೋಕಿಸಿ ಬಹಳೇ ವಿಹ್ವಲಿತಳಾದಳು. ಅವಳು ಆದಿಲ್‌ಷಾಹ್‌ನಿಂದ ಸಹಾಯ ಬೇಡಿದಳು. ಹಾಗೂ ಆತನಿಗೆ ಈ ಸಂದೇಶ ನೀಡಿದಳು. "ಈ ಕೋಲಾಹಲದ ಪರಿಸ್ಥಿತಿಯಲ್ಲಿ ಯಾವಾಗ ಓರ್ವ ಬಲಿಷ್ಠನಾದ ವೈರಿಯು ನಮ್ಮ ವಿನಾಶಕ್ಕಾಗಿ ಸಿದ್ಧನಾಗಿ ನಿಂತಿರುವಾಗ ನಮ್ಮ ಪ್ರಾಂತ್ಯದ ಅಮೀರರು

ಅವಿವೇಕಿಗಳಂತೆ ವರ್ತಿಸುತ್ತಿದ್ದಾರೆ. ಹಾಗೂ ಪ್ರತಿಯೊಂದು ಕ್ಷಣವು ಒಂದೊಂದು ಹೊಸದಾದ ಗೊಂದಲವನ್ನುಂಟು ಮಾಡುತ್ತಿರುವುದು. ಒಂದು ವೇಳೆ ತಾವು ಇತ್ತ ಕಡೆಗೆ ಗಮನ ನೀಡಿ ಈ ಕಲುಷಿತ ಮನಸ್ಸಿನ ಅಮೀರರಿಗೆ ಪಾಠ ಕಲಿಸದಿದ್ದರೆ ಪ್ರಾಂತ್ಯದ ಉಳಿದ ಭಾಗವೂ ಮೊಘಲರ ವಶವಾಗುವುದು".

ಸೋಹೆಲ್ ಖಾನ್‌ನ ಆಗಮನ :

ಆದಿಲ್‌ಷಾಹ್‌ನು ಮತ್ತೊಮ್ಮೆ ಚಾಂದ್‌ಬೀಬಿಯ ಸಹಾಯಕ್ಕೆ ಮುಂದಾದನು. ಹಾಗೂ ತನ್ನ ಸೈನ್ಯಾಧಿಕಾರಿಯಾದ ಸೋಹೇಲ್‌ಖಾನ್‌ನಿಗೆ ಆದೇಶ ನೀಡಿದನು. ಏನೆಂದರೆ ಅಹ್ಮದ್‌ನಗರಕ್ಕೆ ಹೋಗಿ ಚಾಂದ್‌ಬೀಬಿಯ ಬಯಕೆಯಂತೆ ಕಾರ್ಯವೆಸಗಬೇಕು. ಹಿಜ್ರಿ ಶಕೆ ೧೦೦೫ ರಲ್ಲಿ ಸೋಹೇಲ್‌ಖಾನ್‌ನು ಅಹ್ಮದ್‌ನಗರಕ್ಕೆ ತಲುಪಿದನು. ಮೊಹಮ್ಮದ್‌ಖಾನ್‌ನು ಕೋಟೆಯಲ್ಲಿ ಆಶ್ರಯ ಪಡೆದನು. ಸೋಹೇಲ್‌ಖಾನ್‌ನು ಚಾಂದ್‌ಬೀಬಿಯ ಜೊತೆ ಚರ್ಚೆ ನಡೆಸಿ ಕೋಟೆಯ ದಿಗ್ಬಂಧನ ಮಾಡಿದನು. ಆತನು ಪೂರ್ತಿ ನಾಲ್ಕು ತಿಂಗಳವರೆಗೆ ದಿಗ್ಬಂಧನವನ್ನು ಮುಂದುವರೆಸಿದನು.

ಮೊಹಮ್ಮದ್‌ಖಾನ್‌ನ ಬಂಧನ ಹಾಗೂ ಆಹಂಗ್‌ಖಾನ್‌ನ ನೇಮಕಾತಿ :

ಮೊಹಮ್ಮದ್‌ಖಾನ್‌ನು ಖಾನೇಖಾನಾನ್‌ನ ಹೆಸರಿನಲ್ಲಿ ಒಂದು ಮನವಿ ಪತ್ರ ಕಳಿಸಿ ಆತನಿಂದ ಸಹಾಯ ಯಾಚಿಸಿದನು. ಕೋಟೆಯವರಿಗೆ ಯಾವಾಗ ಆತನ ಈ ಯತ್ನದ ಕುರಿತು ತಿಳಿಯಿತೋ ಆಗ ಅವರು ಮೊಹಮ್ಮದ್‌ಖಾನ್‌ನನ್ನು ಬಂಧಿಸಿ ಚಾಂದ್‌ಬೀಬಿಯ ಎದುರಲ್ಲಿ ಪ್ರಸ್ತುತ ಪಡಿಸಿದರು. ಚಾಂದ್‌ಬೀಬಿಯು ಆಹಂಗ್‌ಖಾನ್‌ನನ್ನು ಪೇಷ್ವೆಯ ಹುದ್ದೆಗೆ ನೇಮಿಸಿದಳು. ಹಾಗೂ ಸೋಹೆಲ್ ಖಾನ್‌ನನ್ನು ಆತನು ಗೈದ ಸಾಹಸ ಕಾರ್ಯಗಳನ್ನು ಮೆಚ್ಚಿ ಹೆಮ್ಮೆಯಿಂದ ಪುರಸ್ಕರಿಸಿ ಮರಳಿ ಹೋಗಲು ಅನುಮತಿ ನೀಡಿದಳು.

ಮೊಘಲರ ವಶಕ್ಕೆ ಪಾತ್ರಿ ಪಟ್ಟಣ :

ಸೋಹೇಲ್‌ಖಾನ್ ಅಹ್ಮದ್‌ನಗರದಿಂದ ಮರಳಿದನು. ಹಾಗೂ ಗಂಗಾನದಿಯ ತಟದಲ್ಲಿ ರಾಜಾಪುರದ ಸಮೀಪ ತಲುಪಿದನು. ಇಲ್ಲಿ ತಲುಪಿದಾಗ ಆತನಿಗೆ ತಿಳಿಯಿತು. ಏನೆಂದರೆ ಮೊಘಲರು ವಚನದ್ರೋಹವೆಸಗಿ ಪಾತ್ರಿ ಪಟ್ಟಣವನ್ನು ಯಾವುದು ಬರಾರ್‌ದ ಪ್ರಾಂತ್ಯದಲ್ಲಿ ಬರುವುದಿಲ್ಲ ತನ್ನ ವಶಕ್ಕೆ ತೆಗೆದುಕೊಂಡಿರುವರು. ಸೋಹೇಲ್ ಖಾನ್ ಅದೇ ಸ್ಥಳದಲ್ಲಿ ತಂಗಿದನು. ಹಾಗೂ ಆತನು ಆದಿಲ್‌ಷಾಹ್‌ನ ಹೆಸರಿನಲ್ಲಿ ಪತ್ರವೊಂದನ್ನು ಬರೆದನು. ಅದರಲ್ಲಿ ಈ ಎಲ್ಲ ಪರಿಸ್ಥಿತಿಯ ಕುರಿತು ತಿಳಿಸಿದನು.

ಚಾಂದ್‌ಬೀಬಿಯ ಒತ್ತಾಯ :

ಚಾಂದ್‌ಬೀಬಿ ಹಾಗೂ ಆಹಂಗ್‌ಖಾನ್‌ರಿಗೆ ಮೊಘಲರ ಈ ಯತ್ನದ ಕುರಿತು

ತಿಳಿಯಿತು. ಅವರು ತಮ್ಮ ದೂತನನ್ನು ಬಿಜಾಪುರಕ್ಕೆ ಕಳುಹಿಸಿದರು. ಹಾಗೂ ಆದಿಲ್‌ಷಾಹನಿಗೆ ಒತ್ತಾಯಿಸಿದರು. ಏನೆಂದರೆ ಆತನು ಪಾತ್ರಿ ಪಟ್ಟಣವನ್ನು ಮೊಘಲರ ವಶದಿಂದ ಮುಕ್ತಿಗೊಳಿಸಬೇಕು. ಆದಿಲ್‌ಷಾಹ್‌ನು ಮೊದಲಿನಂತೆ ಈ ಸಲವೂ ಸೋಹೆಲ್‌ಖಾನ್‌ನನ್ನೇ ಮೊಘಲರೊಂದಿಗೆ ಯುದ್ಧ ಮಾಡಲು ಆದೇಶಿಸಿದನು.

ದಖ್ಖನ್ನಿನ ವಿವಿಧ ಸೈನ್ಯದ ಒಟ್ಟುಗೂಡುವಿಕೆ :

ಕುತುಬ್‌ಷಾಹ್‌ನು ಸಹ ಆದಿಲ್‌ಷಾಹ್‌ನನ್ನು ಅನುಸರಿಸಿದನು. ಹಾಗೂ ತೆಲಂಗಾಣದ ಸೈನ್ಯವನ್ನು ಮೆಹದಿ ಕುಲಿ ಸುಲ್ತಾನರ ಮೇಲ್ವಿಚಾರಣೆಯಲ್ಲಿ ಸೋಹೆಲ್‌ಖಾನ್‌ನ ಬಳಿ ಕಳುಹಿಸಿದನು. ಅಹ್ಮದ್‌ನಗರದಿಂದಲೂ ೬೦ ಸಾವಿರ ಸವಾರರ ಒಂದು ಬೃಹತ್ ರೂಪದ ಸೈನ್ಯವು ಬರಾರ್‌ದತ್ತ ಸಾಗಿತು. ಸೋಹೆಲ್‌ಖಾನ್‌ರು ಸೋನಪತ್‌ದ ಬಳಿ ತಲುಪಿ ಬಿಡಾರ ಹೂಡಿದನು ಹಾಗೂ ಸೈನ್ಯವನ್ನು ವ್ಯವಸ್ಥಿತಗೊಳಿಸತೊಡಗಿದನು.

ಖಾನೇಖಾನಾನ್‌ನ ಸಿದ್ಧತೆ :

ಮೊಘಲರ ಸೈನ್ಯಾಧಿಕಾರಿಯಾದ ಖಾನೇಖಾನಾನ್‌ನು ಈ ಸಮಯದಲ್ಲಿ ಜಾಲ್ನಾದಲ್ಲಿದ್ದನು. ಆತನಿಗೆ ಯಾವಾಗ ದಖ್ಖನಿಗಳ ಬೃಹತ್ ರೂಪದ ಸೈನ್ಯದ ಅಗಾಧತೆಯ ಮಾಹಿತಿ ಲಭಿಸಿತೋ ಆಗ ಆತನೂ ಸಹ ತನ್ನ ಸೈನ್ಯಕ್ಕೆ ಒಟ್ಟುಗೂಡಲು ಆದೇಶಿಸಿದನು. ಹಾಗೂ ಸ್ವತಃ ಯುವರಾಜ ಮುರಾದ್‌ನ ಬಳಿ ಷಾಹ್‌ಪುರಕ್ಕೆ ಹೋದನು. ಹಾಗೂ ಯುವರಾಜನಿಗೆ ಪ್ರಸ್ತುತ ಪರಿಸ್ಥಿತಿಯ ಕುರಿತು ಮಾಹಿತಿ ನೀಡಿದನು.

ದಖ್ಖನಿ ಸೈನ್ಯವನ್ನು ಎದುರಿಸಲು ಹೊರಡುವಿಕೆ :

ಖಾನೇಖಾನಾನ್‌ನು ಇದನ್ನು ಏಕ ಮನಸ್ಸಿನಿಂದ ಬಯಸುತ್ತಿದ್ದನು. ಏನೆಂದರೆ ಯುದ್ಧದಲ್ಲಿ ವಿಜಯದ ಶ್ರೇಯವು ಕೇವಲ ತನಗೆ ಮಾತ್ರ ಸಿಗಬೇಕು. ಅದಕ್ಕಾಗಿ ಆತನು ಯುವರಾಜ ಮುರಾದ್ ಹಾಗೂ ಮೊಹಮ್ಮದ್ ಸಾದಿಕ್‌ರಿಗೆ ಅಲ್ಲಿಯೇ ಷಹಾಪುರದಲ್ಲಿ ಬಿಟ್ಟನು. ಹಾಗೂ ಸ್ವತಃ ಎಲ್ಲ ಅಕ್ಬರಿ ಅಮೀರರು ಹಾಗೂ ರಾಜಾ ಅಲಿಖಾನ್ ಬುರ್ಹಾನಪುರಿಯನ್ನು ಜೊತೆಗೆ ತೆಗೆದುಕೊಂಡು ೨೦ ಸಾವಿರ ಸೈನಿಕರೊಂದಿಗೆ ದಖ್ಖನಿಗಳನ್ನು ಎದುರಿಸಲು ಹೊರಟನು.

ಪರಸ್ಪರರ ಮುಖಾಮುಖಿ :

ಖಾನೇಖಾನಾನ್‌ನು ಗಂಗಾನದಿಯ ತಟದಲ್ಲಿ ದಖ್ಖನಿಗಳ ಸೈನ್ಯದ ಎದುರಲ್ಲಿ ಬಿಡಾರ ಹೂಡಿದನು. ತನ್ನ ಸೈನ್ಯದ ಸುತ್ತಲೂ ಕಂದಕಗಳನ್ನು ಅಗೆಯಿಸಿದನು. ಸುಮಾರು ಹದಿನೈದು ದಿನಗಳ ವರೆಗೆ ಖಾನೇಖಾನಾನ್‌ನು ತನ್ನ ಸ್ಥಳದಿಂದ ಅಲುಗಾಡಲಿಲ್ಲ.

ಆದರೆ ಯಾವಾಗ ಆತನಿಗೆ ದಖ್ಖನಿಗಳ ಸೈನ್ಯದ ಕುರಿತು ತಿಳಿಯಿತೋ ಹಾಗೂ ಅವರ ಯುದ್ಧದ ಎಲ್ಲ ಯೋಜನೆಗಳ ಮಾಹಿತಿ ಲಭಿಸಿತೋ ಆಗ ಆತನು ೧೮ರ ಜವಾದುಸ್ಸಾನಿ ೧೦೦೫ ಹಿಜ್ರಿಶಕೆಯಂದು ಬೆಳಿಗ್ಗೆ ತನ್ನ ಸೈನ್ಯವನ್ನು ವ್ಯವಸ್ಥಿತಗೊಳಿಸಿದನು. ಹಾಗೂ ಅದೇ ದಿನ ಸಾಯಂಕಾಲದ ಸಮಯದಲ್ಲಿ ಪರಸ್ಪರರು ಯುದ್ಧಕ್ಕಾಗಿ ಮುಖಾಮುಖಿಯಾದರು.

ಕದನ :

ಸೋಹೇಲ್‌ಖಾನ್‌ನ ವಿರುದ್ಧವಾಗಿ ರಾಜಾ ಅಲಿಖಾನ್ ಹಾಗೂ ರಾಜಾ ಜಗನ್ನಾಥ ರಾಜಪೂತ ನಾಲ್ಕು ಸಾವಿರ ಸವಾರರೊಂದಿಗೆ ಬಂದರು. ಸೋಹೇಲ್‌ಖಾನ್‌ನು ಅವರೆಲ್ಲರನ್ನೂ ಅಗ್ನಿಶಸ್ತ್ರ ಪ್ರಯೋಗಿಸಿ ಹತ್ಯೆಗೈದನು. ಕುತುಬ್‌ಷಾಹಿ, ನಿಜಾಮಷಾಹಿ ಸೈನ್ಯವು ಖಾನೇಖಾನಾನ್‌ನನ್ನು ಎದುರಿಸಲಾರದಾದರು. ಹಾಗೂ ರಣಭೂಮಿಯಿಂದ ಕಾಲುಕಿತ್ತರು. ಸೋಹೇಲ್‌ಖಾನ್‌ನು ಯಾವಾಗ ಈ ಪರಿಸ್ಥಿತಿಯನ್ನು ನೋಡಿದನೋ ಆಗ ಆತನು ವೈರಿಯ ಸೈನ್ಯದ ಬೇರೆ ಭಾಗದಿಂದ ಯುದ್ಧಕ್ಕೆ ಮುಂದಾದನು. ಹಾಗೂ ಸಾಯಂಕಾಲದ ಸಮಯದಲ್ಲಿ ವೈರಿಯ ಎಡಬಲ ಭಾಗದ ಸೈನಿಕರ ಮೇಲೆ ದಾಳಿ ಎಸಗಿದನು.

ಮೊಘಲರ ಪರಾರಿ :

ಸೋಹೆಲ್ ಖಾನ್‌ನು ಅಪ್ರತಿಮ ಪ್ರತಾಪವನ್ನು ಪ್ರದರ್ಶಿಸಿ ಚಿರಸ್ಮರಣಿಯ ಶೌರ್ಯವನ್ನು ಮೆರೆದನು. ಹಾಗೂ ವೈರಿಗಳ ವಿನಾಶಕ್ಕೆ ಪೂರ್ಣರೂಪದಲ್ಲಿ ಪ್ರಯತ್ನಿಸಿದನು. ಮೊಘಲರು ಪರಿಸ್ಥಿತಿಯನ್ನು ಮನಗಂಡು ಬಹಳೇ ವಿಚಲಿತರಾದರು. ಹಾಗೂ ರಣಭೂಮಿಯಿಂದ ಓಡಿ ಹೋಗಿ ಯುವರಾಜನಾದ ಮುರಾದ್‌ನ ಬಳಿ ಷಾಹ್‌ಪುರದಲ್ಲಿ ಆಶ್ರಯ ಪಡೆದರು.

ಯುವರಾಜ್ ಮುರಾದ್‌ನನ್ನು ಹೊರಗೆ ಕಳಿಸಿದ್ದು :

ಸಾದಿಕ್ ಮೊಹಮ್ಮದ್‌ಖಾನ್‌ನು ರಕ್ಷಣೆಯ ವಿಚಾರದಿಂದ ಯುವರಾಜ ಮುರಾದ್‌ನನ್ನು ದಖ್ಖನ್ನಿನ ಸರಹದ್ದಿನಿಂದ ಹೊರಗೆ ಕರೆದುಕೊಂಡು ಹೋದನು. ಆದರೆ ಖಾನೇಖಾನಾನ್‌ನು ತನ್ನ ಸೈನ್ಯದ ಗೊಂದಲ ಹಾಗೂ ಛಿದ್ರವಿಚ್ಛಿದ್ರವಾಗಿ ಓಡಿ ಹೋಗುವಿಕೆಯ ಹೊರತಾಗಿಯೂ ಇದೇ ಸ್ಥಳದಲ್ಲಿ ಒಂದು ಸಣ್ಣ ಗುಂಪಿನೊಂದಿಗೆ ಉಳಿದನು.

ದಖ್ಖನ್ನಿಗರಿಂದ ಲೂಟಿ :

ದಖ್ಖನಿಗಳು ಈ ಕದನವನ್ನು ತಮ್ಮ ವಿಜಯವೆಂದು ಭಾವಿಸಿದರು. ಹಾಗೂ ಲೂಟಿಗೈಯ್ಯುವಲ್ಲಿ ನಿರತರಾದರು. ಅವರು ಬಹಳಷ್ಟು ನಗ, ವಸ್ತುಗಳನ್ನು

ವಶಪಡಿಸಿಕೊಂಡರು. ಇದನ್ನು ಸುರಕ್ಷಿತವಾಗಿ ಇಡಲೆಂದು ಆಕಡೆ ಈ ಕಡೆ ಹೊರಟು ಹೋದರು ರಣಭೂಮಿಯಲ್ಲಿ ಸೋಹೇಲ್‌ಖಾನ್ ಹಾಗೂ ಸಶಸ್ತ್ರ ಸೈನ್ಯದ ಒಂದು ತಂಡದ ಹೊರತಾಗಿ ಅಲ್ಲಿ ಬೇರೆ ಯಾರೂ ಇರಲಿಲ್ಲ.

ಒಂದು ಆಕಸ್ಮಿಕ ಘಟನೆ :

ಇದೊಂದು ಅಸಾಮಾನ್ಯವಾದ ಆಕಸ್ಮಿಕವಾಗಿತ್ತು. ಏನೆಂದರೆ ಖಾನೇಖಾನಾನ್ ಹಾಗೂ ಸೊಹೇಲ್‌ಖಾನ್‌ರು ಪರಸ್ಪರರು ಬಹಳೇ ಕಡಿಮೆ ಅಂತರದಲ್ಲಿದ್ದರು. ಆದರೆ ಈರ್ವರಿಗೂ ಒಬ್ಬರನ್ನೊಬ್ಬರು ಇಷ್ಟು ಸಮೀಪವಿರುವುದು ಗೊತ್ತಿರಲಿಲ್ಲ. ಹಾಗೂ ರಾತ್ರಿಯ ಒಂದು ಪ್ರಹರು ಹೀಗೆಯೇ ಅಡ್ಡಿ ಇಲ್ಲದೇ ಕಳೆಯಿತು. ಆ ವೇಳೆಯಲ್ಲಿ ಈರ್ವರೂ ಸರದಾರರು ಇಷ್ಟು ಸಮೀಪವಿರುವ ಸ್ಥಿತಿಯನ್ನು ಮನಗಂಡರು. ಹಾಗೂ ತಮ್ಮ ತಮ್ಮ ಸ್ವರಕ್ಷಣೆಯ ಕುರಿತು ಪ್ರಯತ್ನಿಸತೊಡಗಿದರು.

ಯುದ್ಧ ಹಾಗೂ ಖಾನೇಖಾನಾನ್‌ನ ಗೆಲುವು :

ಮುಂಜಾವು ಮೂಡಿದಾಗ ಪರಸ್ಪರರು ಎದುರು ಬದುರಾದರು. ಖಾನೇಖಾನಾನ್‌ನು ಇದನ್ನು ಬಯಸುತ್ತಿದ್ದನು. ಈ ಸಮಯದಲ್ಲಿ ಸೋಹೆಲ್‌ಖಾನ್‌ನೊಂದಿಗೆ ಸಂಧಾನ ಮಾಡಿಕೊಳ್ಳಬೇಕು. ಹಾಗೂ ಮುಂದೆ ಯುದ್ಧ ನಡೆಸುವುದೆಂದು ಹೇಳಿ ಹೊರಡುವುದು. ಆದರೆ ಸೊಹೇಲ್‌ಖಾನ್‌ನು ತನ್ನ ಸಂಗಡಿಗರ ಸಲಹೆಯಂತೆ ಯುದ್ಧವನ್ನು ಮಾಡಲು ನಿರ್ಧರಿಸಿದನು. ಕೊನೆಗೆ ಖಾನೇಖಾನಾನ್‌ನು ಅನಿವಾರ್ಯವಾಗಿ ಯುದ್ಧ ಪ್ರಾರಂಭಿಸಿದನು. ಪರಸ್ಪರರು ಬಹಳೇ ಶೌರ್ಯದೊಂದಿಗೆ ಹೋರಾಡಿದರು. ಖಾನೇಖಾನಾನ್‌ನಿಗೆ ಗೆಲುವಾಯಿತು. ಹಾಗೂ ಸೋಹೇಲ್‌ಖಾನ್ ಷಾಹದುರ್ಗದತ್ತ ಪರಾರಿಯಾದನು.

ಕಾವೆಲ್ ಹಾಗೂ ಪರನಾಲಾದ ಮುತ್ತಿಗೆ :

ಕುತುಬ್‌ಷಾಹ್ ಹಾಗೂ ನಿಜಾಮಷಾಹ್ ಅಮೀರರು ಹದಗೆಟ್ಟ ಅಹ್ಮದ್‌ನಗರ ಹಾಗೂ ಹೈದರಾಬಾದನತ್ತ ಹೊರಟರು. ಈ ಘನತೆ ಗೌರವವುಳ್ಳ ವಿಜಯದ ನಂತರ ಖಾನೇಖಾನಾನ್‌ನು ಜಾಲ್ನ ಪಟ್ಟಣದಲ್ಲಿ ತಂಗಿದನು. ಹಾಗೂ ಬರಾರ್‌ದ ಸುಭದ್ರ ಕೋಟೆಗಳಾದ ಕಾವೆಲ್ ಹಾಗೂ ಪರನಾಲಾದ ದಿಗ್ಬಂಧನ ಮಾಡುವುದಕ್ಕಾಗಿ ತನ್ನ ಸೈನ್ಯದ ಒಂದು ತಂಡವನ್ನು ನೇಮಿಸಿದನು.

ಖಾನೇಖಾನಾನ್‌ನ ಹೆಸರಿನಲ್ಲಿ ಮುರಾದ್‌ನ ಸಂದೇಶ :

ಮೊಹಮ್ಮದ್ ಸಾದಿಕ್ (ಯಾವಾತನು ಐದು ಸಾವಿರ ಜನರ ಮೇಲೆ ಅಮೀರನಾಗಿದ್ದನು)ನ ಹೇಳಿಕೆಯ ಮೇರೆಗೆ ಯುವರಾಜನಾದ ಮುರಾದ್‌ನು ಖಾನೇಖಾನಾನ್‌ನಿಗೆ ಈ ಸಂದೇಶ ನೀಡಿದನು. "ಈಗ ಸದವಕಾಶವಿದೆ. ಹಾಗೂ

ಸಮಯವೂ ಕೂಡಿ ಬಂದಿದೆ. ನಾವು ಒಂದು ವೇಳೆ ಈಗ ಅಹ್ಮದ್‌ನಗರದ ಮೇಲೆ ದಾಳಿಮಾಡಿದೆವಾದರೆ ಸುಲಭವಾಗಿ ವೈರಿಯನ್ನು ಸದೆಬಡೆಯಬಹುದು. ಹಾಗೂ ಈ ವಿಧವಾಗಿ ಸಂಪೂರ್ಣ ನಿಜಾಮಶಾಹೀ ಪ್ರಾಂತ್ಯಗಳ ಮೇಲೆ ನಮ್ಮ ಆಡಳಿತ ಸ್ಥಾಪಿತವಾಗುವುದು"

ಉತ್ತರ :

ಖಾನೇಖಾನಾನ್‌ನು ಯುವರಾಜ ಮುರಾದ್‌ನಿಗೆ ಹೀಗೆ ಉತ್ತರಿಸಿದನು. ಏನೆಂದರೆ "ನಾನು ಹೀಗೆ ತಿಳಿಯುತ್ತೇನೆ. ಪ್ರಸ್ತುತ ಪರಿಸ್ಥಿತಿಯಲ್ಲಿ ನಾವು ಬರಾರ್‌ದಲ್ಲಿಯೇ ಉಳಿಯುವುದು ಉಚಿತವಾಗಿದೆ. ಈ ವರ್ಷ ನಾವು ಇಲ್ಲಿಯೇ ಇದ್ದು ಈ ಪ್ರಾಂತ್ಯಗಳನ್ನು ಗೆಲ್ಲಬೇಕು. ಯಾವಾಗ ಈ ಪ್ರಾಂತ್ಯವೂ ಪೂರ್ಣ ಪ್ರಮಾಣದಲ್ಲಿ ನಮ್ಮ ವಶಕ್ಕೆ ಬಂದರೆ ಅದರ ನಂತರ ಬೇರೆ ಪ್ರಾಂತ್ಯಗಳತ್ತ ಗಮನ ನೀಡಬೇಕು."

ದಖ್ಖನ್ನಿನಿಂದ ಖಾನೇಖಾನಾನ್‌ನ ಹೊರಡುವಿಕೆ :

ಯುವರಾಜನಾದ ಮುರಾದ್‌ನು ಖಾನೇಖಾನಾನ್‌ನ ಈ ಅಭಿಪ್ರಾಯವನ್ನು ಒಪ್ಪಲಿಲ್ಲ. ಮುರಾದ್ ಹಾಗೂ ಮೊಹಮ್ಮದ್ ಸಾದಿಕ್ ಈರ್ವರೂ ಅಕಬರ್ ಬಾದ್‌ಷಾಹ್‌ನೊಂದಿಗೆ ಖಾನೇಖಾನಾನ್‌ನ ಕುರಿತು ದೂರು ನೀಡಿದರು. ಹಾಗೂ ಈತನ ವಿರುದ್ಧ ಹಲವಾರು ಪತ್ರಗಳನ್ನು ಬಾದಷಾಹ್‌ನ ಸಮ್ಮುಖಕ್ಕೆ ಕಳುಹಿಸಿದರು. (ಇದರ ಕುರಿತು ವಿವರವಾದ ವಿವರಣೆಯು ಅಕ್ಬರ್ ಬಾದಷಾಹ್‌ನ ಕುರಿತ ವಿವರದಲ್ಲಿ ಬಂದಿರುವುದು). ಈ ಬಾದಷಾಹನ ಮೇಲೆ ಈ ಪತ್ರಗಳ ಪ್ರಭಾವವು ಬಹಳ ರೀತಿಯಿಂದ ಆಯಿತು. ಆತನು ಖಾನೇಖಾನಾನ್‌ನನ್ನು ತನ್ನ ಬಳಿ ಕರೆಯಿಸಿಕೊಂಡನು ಹಾಗೂ ಆತನ ಸ್ಥಾನದಲ್ಲಿ ಶೇಖ ಅಬುಲ್ ಫಜಲ್‌ನನ್ನು ದಖ್ಖನ್ನಿನ ಸೈನ್ಯಾಧಿಕಾರಿಯನ್ನಾಗಿ ನೇಮಿಸಿದನು. ೧೦೦೬ ಹಿಜ್ರಿಶಕೆಯಲ್ಲಿ ಖಾನೇಖಾನಾನ್‌ನು ದಖ್ಖನ್ನಿನಿಂದ ಹೊರಹೋದನು.

ಆಹಂಗ್‌ಖಾನ್‌ನ ಭಯಂಕರ ನಿರ್ಧಾರ :

ಈ ಸಮಯದಲ್ಲಿಯೇ ಆಹಂಗ್‌ಖಾನ್‌ನು ಚಾಂದ್‌ಬೀಬಿಯೊಂದಿಗೆ ಇನ್ನಷ್ಟು ಹೆಚ್ಚಿನ ವೈರತ್ವ ಪ್ರತಿಪಾದಿಸಿದನು. ಹಾಗೂ ಹೀಗೆ ನಿರ್ಧರಿಸಿದನು. ಬಹಾದ್ದೂರ್‌ಷಾಹನನ್ನು ತನ್ನ ವಶದಲ್ಲಿ ತೆಗೆದುಕೊಂಡು ಚಾಂದ್‌ಬೀಬಿಯನ್ನು ಯಾವುದಾದರೊಂದು ಕೋಟೆಯಲ್ಲಿ ಬಂಧಿಸಿ ಇಡುವನು. ಹಾಗೂ ಸಂಪೂರ್ಣ ಪ್ರಮಾಣದ ಅಧಿಕಾರವನ್ನು ಹೊಂದುವುದು. ಚಾಂದ್‌ಬೀಬಿಗೆ ಆಹಂಗ್‌ಖಾನ್‌ನ ಈ ನಿರ್ಧಾರದ ವಿವರವು ಲಭಿಸಿತು. ಅದಕ್ಕಾಗಿ ಅವಳು ಬಹಾದ್ದೂರ್‌ಷಾಹ್‌ನ ರಕ್ಷಣೆಗೆ ಮತ್ತಷ್ಟು ಗಮನ ನೀಡಿದಳು.

ಅಹ್ಮದ್‌ನಗರದ ಕೋಟೆಯ ಮುತ್ತಿಗೆ :

ಚಾಂದ್‌ಬೀಬಿಯು ಆಹಂಗಖಾನನನ್ನು ಕೋಟೆಯಲ್ಲಿ ಪ್ರವೇಶಿಸಲು ಬಂಧಿಸಿದಳು. ಹಾಗೂ ಆತನು ಕೋಟೆಯ ಹೊರಗೆಯೇ ದರಬಾರನ್ನು ನಡೆಸಬೇಕು. ಕೆಲದಿನಗಳವರೆಗೆ ಆಹಂಗ್‌ಖಾನ್‌ನು ಚಾಂದ್‌ಬೀಬಿಯ ಆದೇಶವನ್ನು ಪಾಲಿಸಿದನು. ಆದರೆ ನಂತರ ಆತನು ಬಂಡಾಯಕ್ಕಿಳಿದನು. ಹಾಗೂ ಕೋಟೆಯ ದಿಗ್ಬಂಧನವನ್ನು ಮಾಡಿದನು. ಪರಸ್ಪರರಲ್ಲಿ ಕೆಲವು ದಿನ ಕದನವೂ ನಡೆಯುತ್ತಿತ್ತು.

ಬೀಡ್‌ದ ಮೇಲೆ ಆಹಂಗ್‌ಖಾನ್‌ನ ದಾಳಿಯ ವಿಚಾರ :

ಆದಿಲ್‌ಷಾಹ್‌ನು ತನ್ನ ಅಮೀರರಿಗೆ ಅಹ್ಮದ್‌ನಗರಕ್ಕೆ ಕಳುಹಿಸಿ ಈ ಪರಸ್ಪರರ ನಡುವಿನ ಕದನವನ್ನು ಮುಕ್ತಾಯಗೊಳಿಸಲು ಪ್ರಯತ್ನಿಸಿದನು. ಆದರೆ ಯಾವುದೇ ಪರಿಣಾಮ ಹೊರಡಲಿಲ್ಲ. ದಿನನಿತ್ಯ ಆಹಂಗ್‌ಖಾನ್‌ನ ಶಕ್ತಿ ಹಾಗೂ ಬಲಗಳು ವೃದ್ಧಿಸತೊಡಗಿದವು. ಆತನು ಈ ಅವಕಾಶದ ಸದುಪಯೋಗ ಪಡಿಸಿಕೊಳ್ಳಬಯಸಿದನು. ಆತನು ಗಮನಿಸಿದನು. ಏನೆಂದರೆ ಖಾನೇಖಾನಾನ್‌ನು ದಖ್ಖನಿನಿಂದ ಹೊರಟು ಹೋಗಿರುವನು. ಹಾಗೂ ಗಂಗಾನದಿಯು ತುಂಬಿ ಹರಿಯುತ್ತಿದೆ. ಅದಕ್ಕಾಗಿ ಒಂದು ವೇಳೆ ಬೀಡ್ ಪಟ್ಟಣದ ಮೇಲೆ ದಾಳಿ ಮಾಡಿದ್ದಾದರೆ ಯುವರಾಜನು ಈ ಪಟ್ಟಣದ ರಕ್ಷಣೆಗಾಗಿ ಬರಲಾರನು.

ಬೀಡ್‌ದ ಆಡಳಿತಗಾರನೊಂದಿಗೆ ಯುದ್ಧ :

ಹೀಗೆ ಯೋಚಿಸಿ ಆಹಂಗ್‌ಖಾನ್‌ನು ಬೀಡದತ್ತ ಪ್ರಯಾಣ ಬೆಳೆಸಿದನು. ಏಕೆಂದರೆ ಈ ಪಟ್ಟಣವನ್ನು ಅಕ್ಬರೀ ಅಮೀರರ ವಶದಿಂದ ಹೊರತೆಗೆಯಬೇಕು. ಬೀಡ್‌ದಾಡಳಿತಗಾರನಾದ ಷೇರಖ್ವಾಜಾನು ಪಟ್ಟಣದಿಂದ ೬ಕೋಸ್ ದೂರದಲ್ಲಿ ಆಹಂಗ್‌ಖಾನ್‌ನನ್ನು ಎದುರಿಸಿದನು. ಆಹಂಗ್‌ಖಾನ್‌ನ ಮೇಲುಗೈಯಾಯಿತು. ಹಾಗೂ ಷೇರ್‌ಖ್ವಾಜಾನು ಗಾಯಗೊಂಡು ರಣಭೂಮಿಯಿಂದ ಓಡಿ ಹೋದನು. ಹಾಗೂ ಕಷ್ಟನಷ್ಟಗಳನ್ನು ಅನುಭವಿಸುತ್ತಾ ಬೀಡ್ ಕೋಟೆಯಲ್ಲಿ ತಲುಪಿ ಕೋಟೆಯ ಬಾಗಿಲು ಹಾಕಿಕೊಂಡನು.

ಅಕ್ಬರ್‌ಬಾದಷಾಹನ ಹೆಸರಿನಲ್ಲಿ ಷೇರ್‌ಖ್ವಾಜಾನ ಪತ್ರ :

ಷೇರ್‌ಖ್ವಾಜಾನು ಅಕಬರ್ ಬಾದಷಾಹ್‌ನ ಹೆಸರಿನಲ್ಲಿ ಒಂದು ಪತ್ರವನ್ನು ಕಳುಹಿಸಿದನು. ಅದರಲ್ಲಿ ದಖ್ಖನಿಗಳ ಮೇಲುಗೈ ಹಾಗೂ ಶೇಖ ಅಬುಫಜಲ್‌ನ ನಿಷ್ಕಾಳಜಿಯ ದೂರು ನೀಡಿದನು. ಈ ಪತ್ರವನ್ನು ಓದಿದಾಗ ಅಕ್ಬರ್ ಬಾದಷಹನಿಗೆ ಸ್ಪಷ್ಟವಾಯಿತು. ಏನೆಂದರೆ ದಖ್ಖನ್ನಿನ ಸೈನ್ಯಾಧಿಕಾರಿಯ ಹುದ್ದೆಗೆ ಖಾನೇಖಾನಾನ್‌ನ ಹೊರತಾಗಿ ಯಾರೂ ದಕ್ಷನಾದ ವ್ಯಕ್ತಿಯಿರುವುದಿಲ್ಲ. ಅಕ್ಬರನು ಖಾನೇಖಾನಾನ್‌ನ

ತಪ್ಪನ್ನು ಕ್ಷಮಿಸುವ ಹಾಗೂ ಮತ್ತೊಮ್ಮೆ ಪುನರ್ನೇಮಕಗೊಳಿಸುವ ನಿರ್ಧಾರ ಮಾಡಿದನು.

ಯುವರಾಜ ಮುರಾದ್‌ನ ನಿಧನ :

ಅದೇ ಕಾಲದಲ್ಲಿ ಮದ್ಯವ್ಯಸನ ಹಾಗೂ ತಾರುಣ್ಯದ ಇನ್ನಿತರ ದುರ್ವರ್ತನೆಗಳಿಂದಾಗಿ ಯುವರಾಜನಾದ ಮುರಾದ್‌ನು ತಾನು ನಿರ್ಮಿಸಿದ ಪಟ್ಟಣವಾದ ಷಾಹ್‌ಪುರದಲ್ಲಿ ನಿಧನನಾದನು. ಅಕ್ಬರನು ತನ್ನ ಕಿರಿಯ ಪುತ್ರನಾದ ದಾನಿಯಾಲ್‌ನನ್ನು ಖಾನೇಖಾನಾನ್‌ನೊಂದಿಗೆ ಕಳುಹಿಸಿದನು.

ದಖ್ಖನ್ನಿಗೆ ಅಕಬರ್ ಬಾದಷಾಹ್‌ನ ಆಗಮನ :

ಯುವರಾಜನಾದ ದಾನಿಯಾಲ್ ಇನ್ನೂ ದಖ್ಖನ್ನಿನ ಸೀಮೆಯನ್ನು ತಲುಪಿರಲಿಲ್ಲ. ಷೇಖ ಅಬುಲ್ ಫಜಲ್ ಹಾಗೂ ಸೈಯ್ಯದ್ ಯೂಸುಫಖಾನ್‌ರ ಮನವಿಯ ಮೇರೆಗೆ ಸ್ವತಃ ಅಕ್ಬರ್‌ನು ಹಿಜ್ರಿ ಶಕೆ ೧೦೦೮ ರಲ್ಲಿ ಆಗ್ರಾದಿಂದ ದಖ್ಖನ್ನಿನ ಕಡೆಗೆ ಹೊರಟನು. ಅಕ್ಬರ್‌ನಿಗೆ ಯಾವಾಗ ಚಾಂದ್‌ಬೀಬಿ ಹಾಗೂ ಆಹಂಗ್‌ಖಾನ್‌ರ ನಡುವೆ ವೈಷಮ್ಯವಿದೆ ಎಂತಲೂ ಹಾಗೂ ಈರ್ವರೂ ಒಬ್ಬರಿಗೊಬ್ಬರು ವಿರೋಧಿಗಳಾಗಿ ಕತ್ತಿ ಮಸೆಯುತ್ತಿರುವರೆಂದೂ ತಿಳಿದನೋ ಆಗ ಆತನು ಸ್ವತಃ ಅಸೀರಕೋಟೆಯ ದಿಗ್ಬಂಧನ ಮಾಡಿದನು. ಹಾಗೂ ಯುವರಾಜನಾದ ದಾನಿಯಾಲ್ ಹಾಗೂ ಖಾನೇಖಾನಾನ್‌ನನ್ನು ಅಹ್ಮದ್‌ನಗರದತ್ತ ಕಳುಹಿಸಿದನು.

ಜನೀರ್‌ಕ್ಕೆ ಆಹಂಗ್‌ಖಾನ್‌ನ ಹೊರಡುವಿಕೆ :

ಆಹಂಗ್‌ಖಾನ್‌ನ ಹದಿನೈದು ಸಾವಿರ ಸವಾರರ ಸೈನ್ಯದೊಂದಿಗೆ ಕೋಟೆಯ ಹೊರಗೆ ನಿಂತಿದ್ದನು. ಆತನು ದೆಹನಾಘಾತ್ ಮೇಲೆ ವಿಜಯ ಸಾಧಿಸಿ ಮೊಘಲ್‌ರೊಂದಿಗೆ ಯುದ್ಧವನ್ನು ಮಾಡಲು ನಿರ್ಧರಿಸಿದನು. ಯುವರಾಜನಾದ ದಾನಿಯಾಲ್‌ನು ಹಾಗೂ ಇತರ ಮೊಘಲ್ ಅಮೀರರು ಆತನ ನಿರ್ಧಾರವನ್ನು ತಿಳಿದು ಒಂದು ಅರಣ್ಯದತ್ತ ಹೊರಟು ಹೋದರು. ಮೊಘಲರ ಈ ಕ್ರಮದಿಂದಾಗಿ ಆಹಂಗಖಾನ್‌ನು ಬಹಳೇ ಭಯಭೀತನಾದನು. ಹಾಗೂ ಆತನು ಯುದ್ಧ ಮಾಡುವ ಅಥವಾ ಅಹ್ಮದ್‌ನಗರಕ್ಕೆ ತಲುಪಿ ಚಾಂದ್‌ಬೀಬಿ ಹಾಗೂ ಬಹಾದ್ದೂರ್‌ಷಾಹ್‌ರೊಂದಿಗೆ ಸಹಾಯ ಯಾಚಿಸುವ ಬದಲಾಗಿ ತನ್ನ ಎಲ್ಲ ಯುದ್ಧ ಸಾಮಗ್ರಿಗಳಿಗೆ ಬೆಂಕಿ ಹಚ್ಚಿದನು ಹಾಗೂ ಸ್ವತಃ ಜನೀರ್‌ದತ್ತ ಹೊರಟು ಹೋದನು.

ಅಹಮದ್‌ನಗರದ ಕೋಟೆಯ ಮುತ್ತಿಗೆ :

ಯುವರಾಜನಾದ ದಾನಿಯಾಲ್ ಹಾಗು ಇತರ ಮೊಘಲ್ ಅಮೀರರು ಯಾವ ಅಡೆತಡೆಗಳಿಲ್ಲದೇ ಹೆಚ್ಚು ಪ್ರಯತ್ನವಿಲ್ಲದೇ ಅಹ್ಮದ್‌ನಗರದ ಕೋಟೆಯ ದಿಗ್ಬಂಧನ

ಮಾಡಿದರು. ಅಮೀರರು ಪರಸ್ಪರರಲ್ಲಿ ಮೋರ್ಚಲ್ ವಿತರಿಸಿದರು. ದಾನಿಯಾಲ್, ಖಾನೇಖಾನಾನ್, ಹಾಗೂ ಸೈಯ್ಯದ್ ಯೂಸೂಫ್, ಇತರರಿಗೆ ಮೋರ್ಚಲ್ ವಿತರಿಸಿದ ಸ್ಥಳದಿಂದ ಛಿದ್ರ ಉಂಟು ಮಾಡುವ ಕೆಲಸ ಪ್ರಾರಂಭವಾಯಿತು. ಯಾವಾಗ ಕೋಟೆಯು ವಶವಾಗುವ ಸಮಯ ಬಂದಿತೋ ಆಗ ಚಾಂದ್‌ಬೀಬಿಯು ಜಿತಾಖಾನ್ ಶಿಖಂಡಿಯೊಂದಿಗೆ ಹೀಗೆಂದಳು. ಅಹಂಗ್‌ಖಾನ್ ಹಾಗೂ ಇತರ ಅಮೀರರ ಬಂಡಾಯ ಹಾಗೂ ಗೊಂದಲವುಂಟು ಮಾಡಿದ ಪರಿಣಾಮವಿದಾಗಿದೆ. ಏನೆಂದರೆ ಅಕಬರ್ ಬಾದಷಾಹನು ಸ್ವತಃ ದಖ್ಖನ್ನಿನ ಕಡೆ ಬಂದಿರುವನು. ಹಾಗೂ ಹೀಗೆನುಸುತ್ತದೆ. ಕೆಲವೇ ದಿನಗಳಲ್ಲಿ ಈ ಕೋಟೆಯು ಅವರ ವಶವಾಗುವುದು.

ಚಾಂದ್‌ಬೀಬಿ ಹಾಗೂ ಜಿತಾಖಾನ್‌ರ ನಡುವೆ ಮಾತುಕತೆ :

ಜಿತಾಖಾನ್‌ನು ಈ ಪ್ರಶ್ನೆಗೆ ಉತ್ತರವಾಗಿ ಹೀಗೆಂದನು. "ಇಲ್ಲಿಯವರೆಗೆ ಏನೇನಾಯಿತೋ ಅದರ ಕುರಿತು ವಿಷಾದಿಸುವುದು ವ್ಯರ್ಥವಾಗಿದೆ. ಈಗ ಏನು ಮಾಡಬೇಕು ? ತಾವು ಏನು ಹೇಳುವಿರೋ ಅದನ್ನು ಪಾಲಿಸಲಾಗುವುದು". ಚಾಂದ್‌ಬೀಬಿಯು ಹೀಗೆಂದಳು ನನ್ನ ಅಭಿಪ್ರಾಯವು ಇದಾಗಿದೆ. ನಾವು ಈ ಕೋಟೆಯನ್ನು ಯುವರಾಜನಾದ ದಾನಿಯಾಲ್‌ನ ವಶಕ್ಕೆ ನೀಡಿ ನಮ್ಮ ಗೌರವ ಹಾಗೂ ಪ್ರಾಣಗಳನ್ನು ರಕ್ಷಿಸಿಕೊಳ್ಳಬೇಕು. ಅದರ ನಂತರ ಜನೀರದತ್ತ ಪ್ರಯಾಣ ಬೆಳೆಸಬೇಕು. ಹಾಗೂ ಅಲ್ಲಿ ತಲುಪಿ ಅಲ್ಲಾಹುವಿನ ಸಹಾಯದ ನಿರೀಕ್ಷೆ ಮಾಡಬೇಕು.

ಚಾಂದ್‌ಬೀಬಿಯ ಕೊಲೆ :

ಚಾಂದ್‌ಬೀಬಿಯಿಂದ ಈ ಮಾತುಗಳನ್ನು ಕೇಳಿ ಜಿತಾಖಾನ್‌ನು ಕೋಟೆಯವರನ್ನು ಒಟ್ಟು ಸೇರಿಸಿದನು. ಹಾಗೂ ಅವರೊಂದಿಗೆ ಉಚ್ಚಸ್ವರದಲ್ಲಿ ಹೀಗೆಂದನು. "ಚಾಂದ್‌ಬೀಬಿಯು ಅಕಬರೀ ಅಮೀರರೊಂದಿಗೆ ಒಳಸಂಚುನಡೆಸಿ ಈ ಕೋಟೆಯನ್ನು ಯುವರಾಜನಾದ ದಾನಿಯಾಲ್‌ನ ವಶಕ್ಕೆ ಒಪ್ಪಿಸುವ ನಿರ್ಧಾರ ಮಾಡಿರುವಳು.ದಖ್ಖನಿನವರು ಇದನ್ನು ಕೇಳಿದ ತಕ್ಷಣ ಕೋಪೋದ್ರಿಕ್ತರಾದರು. ಹಾಗೂ ಹಿಂದೆ ಮುಂದೆ ಯೋಚಿಸದೇ ಅರಮನೆಯಲ್ಲಿ ಪ್ರವೇಶಿಸಿದರು. ಹಾಗೂ ಅವರು ಚಾಂದ್‌ಬೀಬಿಯನ್ನು ಬಹಳೇ ನಿರ್ದಯವಾಗಿ ಕೊಂದರು.

ಕೋಟೆಯೊಳಗೆ ಮೊಘಲರ ಪ್ರವೇಶ :

ಮೊಘಲರ ಸೈನಿಕರು ಛಿದ್ರಗಳನ್ನು ಉಂಟು ಮಾಡಿದರು. ಹಾಗೂ ಅವುಗಳಲ್ಲಿ ಮದ್ದನ್ನು ತುಂಬಿ ಕೋಟೆಯ ಗೋಡೆಯನ್ನು ಬೀಳಿಸಿದರು. ಹಾಗೂ ಕೋಟೆಯೊಳಗೆ ಪ್ರವೇಶಿಸಿ ಎಲ್ಲ ದಖ್ಖನ್ನಿಗರಿಗೆ ಅವರಲ್ಲಿ ಮಕ್ಕಳೂ, ವೃದ್ಧರೂ, ಯುವಕರೂ ಸಹ ಇದ್ದರು. ಬಹದ್ದೂರ್‌ಷಾಹ್‌ನನ್ನು ಹೊರತುಪಡಿಸಿ ಉಳಿದೆಲ್ಲರನ್ನು ಬಂಧಿಸಲಾಯಿತು. ಜಿತಾಖಾನ್‌ನೂ ಹತ್ಯೆಗೈಯ್ಯಲ್ಪಟ್ಟನು.

ಮೊಘಲರ ವಶವಾದ ಅಹ್ಮದ್‌ನಗರ ಕೋಟೆ :

ಯುವರಾಜನಾದ ದಾನಿಯಲ್‌ನು ಇಡೀ ಭಂಡಾರ ಹಾಗೂ ವಜ್ರ ವೈಢೂರ್ಯಗಳನ್ನು ತನ್ನ ವಶಕ್ಕೆ ತೆಗೆದುಕೊಂಡನು. ಕೋಟೆನ್ನು ತನ್ನ ನಂಬಿಗಸ್ಥ ಅಮೀರರ ವಶಕ್ಕೆ ಒಪ್ಪಿಸಿದನು. ಹಾಗೂ ಬಹಾದ್ದೂರ್‌ಷಾಹ್‌ನನ್ನು ಅಕ್ಬರ್ ಬಾದಷಾಹ್‌ನ ಬಳಿಗೆ ಕಳುಹಿಸಿದನು.

ಅಸೀರ್ ಕೋಟೆಯ ಮೇಲೆ ವಿಜಯ :

ಇದೇ ಸಮಯದಲ್ಲಿ ಮೊಘಲರು ಅಸೀರ್ ಕೋಟೆಯನ್ನು ಗೆದ್ದರು. ಅಕ್ಬರ್‌ನು ಖಾಂದೇಷ್ ಹಾಗೂ ದಖ್ಖನ್ನಿನ ಪ್ರಾಂತ್ಯಗಳನ್ನು ಯುವರಾಜನಾದ ದಾನಿಯಾಲ್‌ನ ವಶಕ್ಕೆ ಒಪ್ಪಿಸಿದನು. (ಈ ಎಲ್ಲ ವಿವರಗಳನ್ನು ಇಬ್ರಾಹಿಂಷಾಹ್‌ನ ಚರಿತ್ರೆಯಲ್ಲಿ ವಿವರಿಸಲಾಗಿದೆ) ಹಾಗೂ ಸ್ವತಃ ಆಗ್ರಾದ ಕಡೆಗೆ ಹೊರಟು ಹೋದನು.

ಬಹಾದ್ದೂರ್ ಷಾಹ್‌ನ ಬಂಧನ :

ನಿಜಾಮಷಾಹೀ ಅಮೀರರು ಈ ಘಟನೆಯ ನಂತರ ಷಾ ಅಲಿಯ ಪುತ್ರನಾದ ಮುರ್ತುಜಾಷಾಹನಿಗೆ ತಮ್ಮ ದೊರೆಯೆಂದು ಒಪ್ಪಿದರು. ಹಾಗೂ ಕೆಲ ದಿನಗಳವರೆಗೆ 'ಪರಿಂದಾ'ವನ್ನು ತಮ್ಮ ರಾಜಧಾನಿಯನ್ನಾಗಿಸಿಕೊಂಡರು. ಬಹದ್ದೂರ್ ನಿಜಾವ್‌ಷಾಹ್‌ನು ಯಾವನು ಇವತ್ತಿನವರೆಗೆ ಗ್ವಾಲಿಯರ್ ಕೋಟೆಯಲ್ಲಿ ಬಂಧಿತನಿರುವನು ಮೂರು ವರ್ಷ ಹಾಗೂ ಕೆಲವು ತಿಂಗಳುಗಳವರೆಗೆ ಆಡಳಿತ ನಡೆಸಿದನು.

■

*

೧೧. ಷಾ ಅಲಿ ಬುರ್ಹಾನ್‌ಷಾಹ್ ಪ್ರಥಮನ ಪುತ್ರನಾದ ಮುರ್ತುಜಾ ನಿಜಾಮ್‌ಷಾಹ್

ಪ್ರಬಲ ಅಮೀರರು :

ಅಕಬರ್ ಬಾದಷಾಹ್‌ನು ಯಾವಾಗ ಬುರ್ಹಾನ್‌ಪುರದಿಂದ ಆಗ್ರಾಕ್ಕೆ ಹೊರಟನೋ ಆಗ ನಿಜಾಮಷಾಹೀ ಸೇವಕರಲ್ಲಿಯ ಈರ್ವರೂ ಬಹಳೇ ಹೆಸರು ಗಳಿಸಿದ್ದರು. ಈ ಈರ್ವರೂ ತಮ್ಮ ಸ್ವಂತ ಬಲದಿಂದ ಹಾಗೂ ಪ್ರತಿಭೆಗಳಿಂದಾಗಿ ಅಮೀರರಲ್ಲಿ ಪರಿಗಣಿಸಲ್ಪಡತೊಡಗಿದ್ದರು. ಈ ಈರ್ವರ ಮೌಲ್ಯಯುತ ರಾಜನೀತಿಗಳಿಂದಾಗಿ ನಿಜಾಮಷಾಹೀ ಸಾಮ್ರಾಜ್ಯವು ಮೊಘಲರ ದಾಳಿ ಹಾಗೂ ವಿಜಯಗಳ ಸರಣಿಯಿಂದ ರಕ್ಷಿಸಲ್ಪಟ್ಟಿತು.

ಅಂಬರ್ ಹಬಷಿ :

ಈ ಈರ್ವರಲ್ಲಿ ಓರ್ವನು ಅಂಬರ್ ಹಬಷಿಯಾಗಿದ್ದನು. ಆತನು ತೆಲಂಗಾಣದ ಸೀಮೆಯಿಂದ ಹಿಡಿದು ಬೀಡ್‌ದವರೆಗೆ ಒಂದು ಕೋಸ್ ದೂರದವರೆಗಿನ ಪ್ರಾಂತ್ಯವನ್ನು ಹಾಗೂ ಅಹ್ಮದ್‌ನಗರದ ದಕ್ಷಿಣಕ್ಕೆ ಪಟ್ಟಣದ ನಾಲ್ಕು ಕೋಸ್‌ದ ಅಂತರದಿಂದ ಹಿಡಿದು ದೌಲತಾಬಾದ್‌ದಿಂದ ಇಪ್ಪತ್ತು ಕೋಸ್‌ದವರೆಗಿನ ಪ್ರಾಂತ್ಯದ ಜೊತೆಗೆ ಬಂದರ್‌ಟೇವಲ್ ವನ್ನು ತನ್ನ ವಶದಲ್ಲಿರಿಸಿಕೊಂಡಿದ್ದನು.

ರಾಜು ದಖನಿ :

ಎರಡನೆಯ ಪ್ರಬಲನಾದ ಅಮೀರನ ಹೆಸರು ರಾಜು ದಖನಿಯೆಂದಿತ್ತು. ಆತನು ದೌಲತಾಬಾದ್ ಹಾಗೂ ಅದರ ಉತ್ತರದಲ್ಲಿಯ ಗುಜರಾತಿನ ಸರಹದ್ದಿನ ವರೆಗಿನ ಪ್ರಾಂತ್ಯ ಹಾಗೂ ದೌಲತಾಬಾದ್‌ದಿಂದ ದಕ್ಷಿಣಭಾಗದಲ್ಲಿ ಅಹ್ಮದ್‌ನಗರದ ಆರು ಕೋಸ್‌ದ ಅಂತರದವರೆಗಿನ ಪ್ರಾಂತ್ಯವನ್ನು ತನ್ನ ವಶದಲ್ಲಿ ಮಾಡಿಕೊಂಡಿದ್ದನು.

ರಾಜು ಹಾಗೂ ಅಂಬರ್‌ರ ವೈರತ್ವ :

ಈ ಈರ್ವರು ಅಮೀರರು ಸದವಕಾಶವನ್ನು ಗ್ರಹಿಸುತ್ತಾ ಯಾವುದೋ ಒಳಿತೋ ಅದನ್ನು ಹಾಗೂ ಕಾಲದ ಬೇಡಿಕೆಯನ್ನು ಪರಿಗಣಿಸಿ ಯಥಾವಶ್ಯಕವಾಗಿ ಮುರ್ತುಜಾ ನಿಜಾಮಷಾಹನಿಗೆ ವಿಧೇಯತೆಯನ್ನು ತೋರಿಸುತ್ತಿದ್ದರು. ಈ ಈರ್ವರು ಓಸಾ ಕೋಟೆಯ ಜೊತೆಗೆ ಕೆಲವು ಪಟ್ಟಣಗಳನ್ನು ಬಾದಷಾಹ್‌ನ ವೆಚ್ಚಗಳಿಗಾಗಿ ಮೀಸಲಿಟ್ಟಿದ್ದರು. ಅಂಬರ್ ಹಬಷಿ ಹಾಗೂ ರಾಜು ದಖನಿ ಈರ್ವರೂ ಪರಸ್ಪರ ಬದ್ಧ ವೈರಿಗಳಾಗಿದ್ದರು. ಏಕೆಂದರೆ ಈ ಈರ್ವರ ಇಚ್ಛೆಯು ಇದಾಗಿತ್ತು. ಏನೆಂದರೆ ವಿರೋಧಿಯ ಮೇಲೆ ಮೇಲುಗೈ ಸಾಧಿಸಿ ಆತನ ಪ್ರಾಂತ್ಯಗಳ ಮೇಲೆ ವಿಜಯ ಸಾಧಿಸುವುದು.

ತೆಲಂಗಾಣಕ್ಕೆ ಮಲಿಕ್ ಅಂಬರನ ಹೊರಡುವಿಕೆ :

ಖಾನೇಖಾನಾನ್‌ನಿಗೆ ಈ ಈರ್ವರು ಅಮೀರರ ಪರಸ್ಪರ ವೈರತ್ವದ ಗುಟ್ಟು ತಿಳಿಯಿತು. ಹಾಗೂ ಆತನು ತನ್ನ ಸೈನ್ಯಕ್ಕೆ ಆದೇಶ ನೀಡಿದನು. ಏನೆಂದರೆ ಅಂಬರ್‌ಹಬ್ಷಿಯ ಈ ಕೆಲವು ವಶದಲ್ಲಿರುವ ಪಟ್ಟಣಗಳ ಮೇಲೆ ವಿಜಯ ಸಾಧಿಸಬೇಕು. ಯಾವುದು ತೆಲಂಗಾಣದಲ್ಲಿರುವ ಅಂಬರನಿಗೆ ಖಾನೇಖಾನಾನ್‌ನ ಈ ಆದೇಶದ ಸುದ್ಧಿ ತಲುಪಿತು. ಹಾಗೂ ಆತನು ಮೇಲೆ ವಿನಂತಿಸಿದ ಪಟ್ಟಣಗಳ ರಕ್ಷಣೆಗಾಗಿ ಹಿಜ್ರಿ ಶಕೆ ೧೦೧೦ ರಲ್ಲಿ ಏಳು ಎಂಟು ಸಾವಿರ ಸವಾರರ ಸೈನ್ಯವನ್ನು ತೆಗೆದುಕೊಂಡು ತೆಲಂಗಾಣದತ್ತ ಹೊರಟನು.

ಅಂಬರ ಹಬಷೀ ಹಾಗೂ ಏರಜ್ ಮಿರ್ಜಾರ ನಡುವೆ ಯುದ್ಧ :

ಅಂಬರನು ಮೊಘಲರ ಸೈನಿಕರ ಶಿಬಿರವನ್ನು ವಿನಾಶಗೊಳಿಸಿ ಪ್ರಾಂತ್ಯಗಳ ಮೇಲೆ ಮತ್ತೊಮ್ಮೆ ವಶವನ್ನು ಸ್ಥಾಪಿಸಿದನು. ಖಾನೇಖಾನಾನ್‌ನು ತನ್ನ ಪ್ರಸಿದ್ಧ ಹಾಗೂ ಪ್ರತಾಪಶಾಲಿಯಾದ ಪುತ್ರ ಮಿರ್ಜಾ ಏರಜನನ್ನು ಐದುಸಾವಿರ ಸೈನಿಕರ ತಂಡದೊಂದಿಗೆ ಅಂಬರನನ್ನು ಎದುರಿಸಲು ಕಳುಹಿಸಿದನು. ನಾಂದೇಡದ ಸಮೀಪ ಎರಡೂ ಸೈನ್ಯಗಳು ಎದುರುಬದುರಾದವು. ಮಿರ್ಜಾ ಏರಜ್‌ನು ತನ್ನ ಘನತೆ ಗೌರವಗಳಿಗಾಗಿ ಹಾಗೂ ಅಂಬರ ಹಬಷಿಯುತನ್ನ ರಕ್ಷಣೆಗಾಗಿ ಸೈನ್ಯವನ್ನು ಸಿದ್ಧಗೊಳಿಸಿದರು. ಪರಸ್ಪರರರು ಒಬ್ಬರು ಇನ್ನೊಬ್ಬರ ಮೇಲೆ ಪೂರ್ಣಪ್ರಮಾಣದ ಬಲವನ್ನು ಪ್ರಯೋಗಿಸಿ ದಾಳಿ ಮಾಡಿದರು ಹಾಗೂ ಭೀಕರ ಯುದ್ಧ ಪ್ರಾರಂಭವಾಯಿತು.

ಅಂಬರ್ ಹಬಷಿಯ ಗಾಯಗೊಳ್ಳುವಿಕೆ :

ಎರಡೂ ಕಡೆಗೂ ಅಸಂಖ್ಯ ಸೈನಿಕರು ಕೊಲ್ಲಲ್ಪಟ್ಟರು. ಆದರೆ ಕೊನೆಗೆ ಅಕ್ಬರೀ ಇಕ್ಬಾಲನು ತನ್ನ ಕರ್ತವ್ಯ ನಿಭಾಯಿಸಿದನು. ಹಾಗೂ ಅಂಬರ್ ದಖನಿಗೆ ಗಂಭೀರ ರೂಪದ ಗಾಯ ಮಾಡಿದನು. ಆತನು ರಣಭೂಮಿಯಲ್ಲಿಯೇ ಕುದುರೆಯಿಂದ ಕೆಳಗೆ ಬಿದ್ದನು. ಹಬಷಿ ಹಾಗೂ ದಖ್ಖನಿಗಳ ಒಂದು ತಂಡವು ಯಾವುದು ಎಲ್ಲ

ತೆರನಾಗಿ ಅಂಬರ್‌ನಿಗೆ ವಿಧೇಯರಾಗಿದ್ದರು. ಅವರು ಗಾಯಗೊಂಡ ಅಮೀರನನ್ನು ಎತ್ತಿಕೊಂಡು ರಣಭೂಮಿಯಿಂದ ಹೊರಗೆ ಓಡಿಹೋದರು.

ಮತ್ತೊಮ್ಮೆ ಯುದ್ಧದ ತಯಾರಿ :

ಯಾವಾಗ ಅಂಬರ್ ಹಬಷಿಯ ಗಾಯವು ತುಂಬಿಕೊಂಡಿತೋ ಹಾಗೂ ಯುದ್ಧ ಮಾಡಲು ಯೋಗ್ಯನಾದನು. ಆತನು ಮತ್ತೊಮ್ಮೆ ಸೈನ್ಯವನ್ನು ಒಟ್ಟುಗೂಡಿಸಲು ತೊಡಗಿದನು. ಖಾನೇಖಾನಾನ್‌ನು ಅಂಬರನ ಶೌರ್ಯ ಹಾಗೂ ಧೈರ್ಯವನ್ನು ಚೆನ್ನಾಗಿಯೇ ಪರೀಕ್ಷಿಸಿದ್ದನು. ಯಾವಾಗ ಆತನಿಗೆ ಇದು ತಿಳಿಯಿತೋ ಅಂಬರನು ಚೇತರಿಸಿಕೊಂಡು ಮತ್ತೊಮ್ಮೆ ಯುದ್ಧಗೈಯ್ಯಲು ಸಿದ್ಧವಾಗುವನು. ಆಗ ಖಾನೇಖಾನಾನ್‌ನು ಸಂಧಾನ ಮಾಡುವದರಲ್ಲಿಯೇ ತನ್ನ ಒಳಿತು ಇದೆಯೆಂದು ಬಗೆದನು.

ಸಂಧಾನ :

ಖಾನೇಖಾನಾನ್‌ನು ಅಂಬರ್‌ನಿಗೆ ಸಂಧಾನದ ಸಂದೇಶ ನೀಡಿದನು. ಸಮಯದ ಬೇಡಿಕೆಯನ್ನು ಪರಿಗಣಿಸಿ ಅಂಬರನು ಖಾನೇಖಾನಾನ್‌ನ ಸಂದೇಶವನ್ನು ಸ್ವೀಕರಿಸಿದನು. ಏಕೆಂದರೆ ಆತನಿಗೆ ತಿಳಿದಿತ್ತು. ಒಂದು ವೇಳೆ ಯುದ್ಧ ನಡೆದರೆ ರಾಜು ದಖನಿಯು ಈ ಅವಕಾಶವನ್ನು ಉಪಯೋಗಿಸಿಕೊಳ್ಳಲು ಪ್ರಯತ್ನಿಸುವನು ಖಾನೇಖಾನಾನ್ ಹಾಗೂ ಅಂಬರ್‌ನು ಪರಸ್ಪರ ಭೇಟಿಯಾದರು ಹಾಗೂ ತಮ್ಮ ತಮ್ಮ ಪ್ರಾಂತ್ಯಗಳನ್ನು ಗುರುತಿಸಿದರು. ಅದರ ನಂತರ ಈರ್ವರೂ ಅಮೀರರು ತಮ್ಮ ತಮ್ಮ ತಂಗುದಾಣಕ್ಕೆ ಮರಳಿದರು. ಆ ದಿನದ ನಂತರ ಈ ಈರ್ವರೂ ಅಮೀರರಲ್ಲಿ ಎಂದಿಗೂ ಕದನವೇರ್ಪಡಲಿಲ್ಲ. ಯಾರೂ ಸಹ ವಚನ ಭೃಷ್ಟರಾಗಲಿಲ್ಲ. ಹಾಗೂ ಅಂಬರ್‌ಖಾನ್‌ನು ಖಾನೇಖಾನಾನ್‌ನಿಗೆ ಬಹಳೇ ಗೌರವ ನೀಡುತ್ತಿದ್ದನು.

ಅಂಬರ್ ಹಾಗೂ ಮುರ್ತುಜಾ ನಿಜಾಮಷಾಹ್‌ರ ನಡುವೆ ವೈರತ್ವ :

ಅದೇ ಸಮಯದಲ್ಲಿ ಹಲವಾರು ದಖ್ಖನಿ ಅಮೀರರು ಪತಂಗರಾಯಕೋಲೆ, ಫರ್ಹಾನ್‌ಖಾನ್, ಮೊಅಲ್ಲದ್, ಹಾಗೂ ಮಲೀಕ್ ಸಂದಲ್ ಶಿಖಂಡಿ ಹಾಗೂ ಇತರರು ಅಂಬರ್ ಹಬಷಿಯ ಜೊತೆಯನ್ನು ಬಿಟ್ಟು ನಿಜಾಮಷಾಹ್‌ನೊಂದಿಗೆ ಸೇರಿಕೊಂಡರು. ಹಾಗೂ ಆತನಿಗೆ ಮಲೀಕ್ ಅಂಬರ್‌ನ ವಿರುದ್ಧ ಪ್ರಚೋದಿಸಿದರು. ಈ ಅಮೀರರು ಅಂಬರ್ ಹಬ್ಷಿಯ ಜೊತೆಗೆ ಹೋರಾಡಲು ಓಸಾ ಕೋಟೆಯ ಸಮೀಪವೇ ಒಂದು ಮೈದಾನವನ್ನು ಆರಿಸಿದರು.

ಬಾದಷಾಹ್‌ನ ಸೋಲು :

ಅಂಬರ್ ತನ್ನ ಸೈನ್ಯವನ್ನು ತೆಗೆದುಕೊಂಡು ಓಸಾದ ಕಡೆಗೆ ಹೊರಟನು. ಈ

ಕಡೆಯಿಂದ ಬಾದಷಾಹನು ತನ್ನ ಸೈನ್ಯದೊಂದಿಗೆ ಎದುರಿಸಲು ಬಂದನು. ಪರಸ್ಪರರಲ್ಲಿ ಘೋರ ರೂಪದ ಯುದ್ಧ ಜರುಗಿತು. ಅಂಬರನು ಎಂದಿನಂತೆ ಶೌರ್ಯದ ಪ್ರದರ್ಶನಗೈದು ಮುರ್ತುಜಾ ನಿಜಾಮನನ್ನು ಸೋಲಿಸಿದನು. ಪತಂಗರಾಯ ಕೋಲೆನನ್ನು ಅಂಬರನು ಬಂಧಿಸಿ ಕೋಟೆಯಲ್ಲಿ ಇಟ್ಟನು. ನಿಜಾಮಷಾಹ ಹಾಗೂ ಆತನ ಕಡೆಯ ಅಮೀರರು ಫರ್ಹಾದ್‌ಖಾನ್ ಹಾಗೂ ಮಲಿಕ್ ಸಂದಲ್ ಇತರರು ದುರಾದೃಷ್ಟದ ಸ್ಥಿತಿಯನ್ನು ಮನಗಂಡು ಅಂಬರ್‌ನೊಂದಿಗೆ ಸಂಧಾನ ಮಾಡಿಕೊಂಡರು.

ಪರಿಂಡಾ ಕೋಟೆಯನ್ನು ಗೆಲ್ಲುವ ಇಚ್ಛೆ :

ಅಂಬರ್ ಪರಿಂದಾ ಕೋಟೆಯನ್ನು ವಶಪಡಿಸಿಕೊಳ್ಳುವ ಅದಮ್ಯ ಬಯಕೆ ಹೊಂದಿದ್ದನು. ಈ ಉದ್ದೇಶದಿಂದ ಬಾದಷಾಹನನ್ನು ಜೊತೆಗೆ ಕರೆದುಕೊಂಡು ಹಿಜ್ರಿಶಕೆ ೧೦೧೨ ರಲ್ಲಿ ಪರಿಂದಾದತ್ತ ಹೊರಟನು. ಕೋಟೆಯ ಮೇಲ್ವಿಚಾರಕನಾದ ಮಝುನ್‌ಖಾನ್‌ನು ಯಾವಾತನು ೨೦ ವರ್ಷಗಳಿಂದ ಪರಿಂದಾದ ಮೇಲೆ ಆಡಳಿತ ನಡೆಸಿದ್ದನು ನಿಜಾಮಷಾಹನಿಗೆ ಸಂದೇಶ ನೀಡಿದನು. “ತಾವು ನನ್ನ ಒಡೆಯರಾಗಿದ್ದೀರಿ. ಆ ಕಾರಣಕ್ಕೆ ನಾನು ತಮ್ಮನ್ನು ಗೌರವ ಘನತೆಯೊಂದಿಗೆ ಸ್ವಾಗತಿಸುವೆನು. ಹಾಗೂ ಕೋಟೆಯಲ್ಲಿ ಇಳಿಸುವೆನು. ಆದರೆ ನನಗೆ ಅಂಬರ್‌ನ ಮೇಲೆ ಎಳ್ಳಷ್ಟೂ ವಿಶ್ವಾಸವಿಲ್ಲ. ಏಕೆಂದರೆ ಆತನು ಖಾನೇಖಾನಾನ್‌ನನ್ನು ಭೇಟಿ ಮಾಡಿ ಆತನ ‘ಗುಲಾಮಿ’ ಒಪ್ಪಿಕೊಂಡಿರುವನು. ಆ ಕಾರಣಕ್ಕೆ ಆತನನ್ನು ನಾನು ಕೋಟೆಯಲ್ಲಿ ಕಾಲಿಡಲು ಬಿಡುವುದಿಲ್ಲ.”

ಅಂಬರ್‌ಖಾನ್‌ನ ವಿವರಣೆ :

ಆತನಿಗೆ ಉತ್ತರವಾಗಿ ಅಂಬರ್‌ನು ಮಂಜನ್‌ಖಾನ್‌ನಿಗೆ ತಿಳಿಸಿದನು. ಏನೆಂದರೆ “ಪತಂಗರಾಯ’, ‘ಫರ್ಹಾನ್‌ಖಾನ್ ಹಾಗೂ ಮಲಿಕ್ ಸಂದಲ್‌ರ ಮೇಲೆ ಸ್ವಲ್ಪವೂ ನಂಬಿಕೆ ಇಲ್ಲ. ಅದಕ್ಕಾಗಿ ನಾನು ಅನಿವಾರ್ಯವಾಗಿ ಖಾನೇಖಾನಾನ್‌ನೊಂದಿಗೆ ಭೇಟಿ ಮಾಡಿದೆನು. ಹಾಗೆ ನೋಡಿದರೆ ನಾನು ಅಕಬರ್ ಬಾದಷಾಹ್‌ನ ಹಿತೈಷಿಯಾಗಿರುವೆನು. ನಿಜವಾಗಿಯೂ ನನ್ನೆಲ್ಲ ಒಳಿತುಗಳು ನಿಜಾಮಷಾಹ ನೊಂದಿಗಿವೆ ಹಾಗೂ ನಾನು ಈತನಿಗೆ ವಿಧೇಯನಾಗಿರುವೆನು. ನನ್ನ ಈ ಆಕಾಂಕ್ಷೆಯಿದೆ. ಏನೆಂದರೆ ಬಾದಷಾಹನು ಎಲ್ಲ ವೈರಿಗಳನ್ನು ಪ್ರಾಂತ್ಯದಿಂದ ಇಲ್ಲವಾಗಿಸುವೆನು.

ನಿಜಾಮಷಾಹ್‌ನ ಬಂಧನ :

ಮಂಝುನ್‌ಖಾನ್‌ನಿಗೆ ಮಲಿಕ್ ಅಂಬರ್‌ನ ಮಾತಿನ ಮೇಲೆ ವಿಶ್ವಾಸ ಮೂಡಲಿಲ್ಲ ಹಾಗೂ ಆ ಕಾರಣಕ್ಕೆ ಮಾತುಕತೆಯನ್ನು ಮುಂದುವರೆಸಲಿಲ್ಲ. ಅಂಬರನಿಗೆ ಈ ಭಯವು ಹುಟ್ಟಿತು. ಎಲ್ಲಿಯಾದರೂ ನಿಜಾಮಷಾಹ್‌ನು ಕೋಟೆಯಲ್ಲಿ ಪ್ರವೇಶ ಮಾಡಿ ಆಶ್ರಯ ಪಡೆಯದಿರಲಿ ಹಾಗೂ ಈ ತೆರನಾಗಿ ಮಂಝುನ್‌ಖಾನ್‌ನ ಶಕ್ತಿ

ವೃದ್ಧಿಸದಿರಲಿ. ಈ ಸಂಶಯವನ್ನು ಮೂಡಿಸಿಕೊಂಡು ಅಂಬರನು ನಿಜಾಮಷಾಹನನ್ನೇ ಬಂಧಿಸಿ ರಕ್ಷಣಾ ಪಡೆಯವರ ವಶಕ್ಕೆ ನೀಡಿದನು.

ಮಂಝುನ್‌ಖಾನ್‌ನ ಸ್ವರಕ್ಷಣೆ :

ಬಾದಷಾಹ್‌ನ ಬಂಧನದ ಕಾರಣದಿಂದ ಫರ್ಹಾದ್ ಖಾನ್ ಹಾಗೂ ಮಲೀಕ್ ಸಂದಲ್ ಬಹಳೇ ಮುನಿಸಿಕೊಂಡರು. ಹಾಗೂ ಕೋಟೆಯ ಬಳಿ ತಲುಪಿದರು. ಮಂಝುನ್‌ಖಾನ್‌ನು ಇಡೀ ತಿಂಗಳವರೆಗೆ ವೈರಿಯನ್ನು ಎದುರಿಸಿದನು. ಮಂಝುನ್‌ಖಾನ್‌ನ ಪುತ್ರನಾದ ಸೋನಾಖಾನ್‌ನು ಉತ್ತಮ ಚಾರಿತ್ರ್ಯವುಳ್ಳವನಾಗಿರಲಿಲ್ಲ. ಈ ಸೂಕ್ಷ್ಮ ಸಮಯದಲ್ಲಿಯೂ ಸಹ ಗಾಂಭಿರ್ಯತೆ ಮೆರೆಸಲಿಲ್ಲ. ಹಾಗೂ ಸೈನ್ಯದವರ ಸ್ತ್ರೀಯರ ಹಾಗೂ ಮಕ್ಕಳ ಮೇಲೂ ಅತ್ಯಾಚಾರ ದಲ್ಲಿ ತೊಡಗಿದ್ದನು. ಸೈನಿಕರು ಅದರಿಂದ ಬಹಳೇ ಕ್ರುದ್ರರಾಗಿದ್ದರು ಹಾಗೂ ಅವರು ಸೋನಾಖಾನ್‌ನನ್ನು ಕೊಂದುಬಿಟ್ಟರು.

ಮಂಝುನ್ ಖಾನ್‌ನ ಪರಾರಿಯಾಗುವಿಕೆ :

ಈ ಘಟನೆಯ ನಂತರ ಮಂಝುನ್ ಖಾನ್‌ನು ಕೋಟೆಯಲ್ಲಿರುವದು ಉಚಿತವಲ್ಲವೆಂದು ಬಗೆದು ಹಾಗೂ ಓರ್ವನೇ ಪರಾರಿಯಾದನು. ಫರ್ಹಾದ್‌ಖಾನ್ ಹಾಗೂ ಮಲಿಕ್‌ಸಂದಲ್ ಜೊತೆಗೆ ಅವನು ಆದಿಲ್‌ಷಾಹಿ ದರಬಾರದಲ್ಲಿ ಆಶ್ರಯ ಪಡೆದನು. ತನ್ನ ಕೊಲೆಗಾರರೊಂದಿಗೆ ಆದಿಲ್‌ಷಾಹನ ಸೇವಕರಲ್ಲಿ ಸೇರಿಕೊಂಡನು.

ಪರಿಂಡಾ ಕೋಟೆಯ ಮೇಲೆ ವಿಜಯ :

ಕೋಟೆಯವರು ಮಂಝುನ್‌ಖಾನ್‌ನನ್ನು ಅನುಸರಿಸಿ ಕೆಲವು ತಿಂಗಳವರೆಗೆ ವೈರಿಯನ್ನು ಎದುರಿಸಿದರು. ಆದರೆ ಕೊನೆಗೆ ಅಂಬರ್ ಹಬಷಿಯು ಅವರನ್ನು ಯುಕ್ತಿಪೂರ್ವಕವಾಗಿ ತನ್ನ ಜಾಲದಲ್ಲಿ ಸಿಲುಕಿಸಿದನು. ಅಂಬರ್‌ನು ಕೋಟೆಯ ಮೇಲೆ ವಿಜಯ ಸಾಧಿಸಿ ನಿಜಾಮಷಾಹನನ್ನು ಮುಕ್ತಗೊಳಿಸಿದನು. ಹಾಗೂ ಆತನಿಗೆ ಅಲ್ಲಿಯೇ ಬಿಟ್ಟು ಸ್ವತಃ ಮುಂದಕ್ಕೆ ಹೋದನು.

ರಾಜುದಖನಿಯ ಹೆಸರಿನಲ್ಲಿ ದಾನಿಯಾಲ್‌ನ ಸಂದೇಶ :

ಮೊಹರ್ರಮ್‌ದ ಹಿಜ್ರಿ ಶಕೆ ೧೦೧೩ ರಲ್ಲಿ ಯುವರಾಜನಾದ ದಾನಿಯಾಲ್‌ನು ಆದಿಲ್‌ಷಾಹ್‌ನ ಪುತ್ರಿಯ ಪಾಲ್ಕಿಯನ್ನು ಸ್ವಾಗತಿಸಲು ಬುರ್ಹಾನ್‌ಪುರದಿಂದ ಹೊರಟನು ಹಾಗೂ ಕರ್ನಾಟಕ ಹಾಗೂ ದೌಲತಾಬಾದ್‌ದ ಮಾರ್ಗದಿಂದ ಅಹ್ಮದ್‌ನಗರದತ್ತ ಹೊರಟನು. ದಾನಿಯಾಲ್‌ನು ತನ್ನ ಕೆಲ ಜನರನ್ನು ರಾಜು ದಖನಿಯ ಬಳಿಗೆ ಕಳುಹಿಸಿದನು ಹಾಗೂ ಆತನಿಗೆ ಈ ಸಂದೇಶವನ್ನು ನೀಡಿದನು. "ಅಂಬರ್ ಹಬಷಿಯ ಹಾಗೆ ನೀನೂ ಸಹ ಬಾದಷಾಹ್ ಅಕಬರ್‌ನಿಗೆ ವಿಧೇಯತೆಯನ್ನು

ತೋರಲು ಇಚ್ಛಿಸಿ ನನ್ನ ಸೇವೆಯಲ್ಲಿ ತೊಡಗು, ಏಕೆಂದರೆ ನಿನ್ನ ಪ್ರಾಂತ್ಯವು ಬಾದಷಾಹನ ಕಡೆಯಿಂದ ನಿನಗೆ ಕೊಡುಗೆಯಾಗಿ ನೀಡಲ್ಪಡುವುದು."

ರಾಜು ಹಾಗೂ ದಾನಿಯಾಲ್‌ರ ಮಧ್ಯ ಯುದ್ಧ :

ರಾಜುವಿಗೆ ಯುವರಾಜನ ಮಾತಿನ ಮೇಲೆ ಭರವಸೆ ಮೂಡಲಿಲ್ಲ. ಈ ಕಾರಣದಿಂದ ದಾನಿಯಾಲ್‌ನು ಕೋಪೋದ್ರಿಕ್ತನಾದನು. ಹಾಗೂ ಆತನು ರಾಜುವನ್ನು ವಿನಾಶಗೊಳಿಸಲು ನಿಶ್ಚಯಿಸಿದನು. ರಾಜುವೂ ಶೂರತನದೊಂದಿಗೆ ಧೈರ್ಯವನ್ನು ತೋರಿದನು. ಹಾಗೂ ೮೦೦೦ ಸೈನಿಕರನ್ನು ತೆಗೆದುಕೊಂಡು ದಾನಿಯಾಲ್‌ನನ್ನು ಎದುರಿಸಲು ಹೊರಟನು. ರಾಜು ಹಾಗೂ ದಾನಿಯಾಲ್‌ರ ಮಧ್ಯ ಪರಸ್ಪರ ಯುದ್ಧ ನಡೆಯಲಿಲ್ಲ. ಆದರೆ ರಾಜುವು ಬೇರೆ ಬೇರೆ ಯುಕ್ತಿಗಳಿಂದ ಮೊಘಲ ಸೈನ್ಯವನ್ನು ಬಹಳೇ ತೊಂದರೆಗೀಡು ಮಾಡಿದನು. ಹಾಗೂ ಎಷ್ಟು ಹಾನಿಯುಂಟು ಮಾಡಿದನೆಂದರೆ. ದಾನಿಯಾಲ್‌ನು ಗಾಬರಿಗೊಂಡು ಖಾನೇಖಾನಾನ್‌ನಿಂದ ಯಾರು ಜಾಲ್ನಾದಲ್ಲಿದ್ದನು ಸಹಾಯವನ್ನು ಯಾಚಿಸಿದನು.

ರಾಜುವಿನ ಓಡಿಹೋಗುವಿಕೆ :

ಖಾನೇಖಾನಾನ್‌ನು ೫೦೦೦ ಸವಾರರ ಸೈನ್ಯದೊಂದಿಗೆ ಬೇಗಬೇಗನೇ ದಾನಿಯಾಲ್‌ನ ಬಳಿ ತಲುಪಿದನು. ರಾಜುವಿಗೆ ಯಾವಾಗ ಇದರ ಕುರಿತು ಮಾಹಿತಿ ಲಭಿಸಿತೋ ಆಗ ಆತನು ಮೊಘಲರ ವಿರುದ್ಧ ತನ್ನ ಕಾರ್ಯವಾಹಿಯನ್ನು ನಿಲ್ಲಿಸಿದನು. ಹಾಗೂ ತನ್ನ ಪ್ರಾಂತ್ಯದ ಒಂದು ದೂರದ ಮೂಲೆಯಲ್ಲಿ ಅಡಗಿಕೊಂಡನು. ಯುವರಾಜನಾದ ದಾನಿಯಾಲ್ ಹಾಗೂ ಖಾನೇಖಾನಾನ್‌ರು ಆದಿಲ್‌ಷಾಹನ ಪುತ್ರಿಯ ಪಾಲ್ಕಿಯನ್ನು ಅಹ್ಮದ್‌ನಗರಕ್ಕೆ ಕರೆತಂದರು. ಗಂಗಾ ನದಿಯ ತಟದಲ್ಲಿ ಪಟ್ಟಣದ ಬಳಿ ಒಂದು ಅಪೂರ್ವವಾದ ವಿವಾಹ ಸಮಾರಂಭವನ್ನು ಏರ್ಪಡಿಸಲಾಯಿತು. ಅದರ ನಂತರ ಖಾನೇಖಾನಾನ್‌ನು ಇದೇ ಸ್ಥಳದಲ್ಲಿ ತಂಗಿದನು. ಹಾಗೂ ಯುವರಾಜನು ಬುರ್ಹಾನ್‌ಪುರದತ್ತ ಹೊರಟನು.

ಅಂಬರ್ ಹಾಗೂ ರಾಜುವಿನ ನಡುವೆ ಕದನ :

ಇದೇ ಸಮಯದಲ್ಲಿ ನಿಜಾಮಷಾಹನು ರಾಜುವಿಗೆ ಅಂಬರ್‌ನ ಕುರಿತು ದೂರು ಹೇಳಿದನು. ಆತನು ಸರಿ ಹಾಗೂ ತಪ್ಪು ಯಾವುದೇ ಮಾರ್ಗಗಳಿಂದ ಬಾದಷಾಹ್‌ನ ಮೇಲೆ ಒತ್ತಡ ಹೇರುತ್ತಿದ್ದಾನೆ. ರಾಜುವು ಪರಿಂದಾ ಕೋಟೆಗೆ ತಲುಪಿ ಬಾದಷಾಹನನ್ನು ಭೇಟಿಯಾದನು. ಹಾಗೂ ಅಂಬರನನ್ನು ದಮನಗೊಳಿಸುವ ವಚನ ನೀಡಿದನು. ಅಂಬರ್ ಹಾಗೂ ರಾಜುವಿನ ನಡುವೆ ಬಹಳ ಸಲ ಕದನಗಳು ನಡೆದವು. ಹಾಗೂ ಪ್ರತಿಸಲವೂ ರಾಜುವೇ ಯಶಸ್ವಿಯಾದನು. ಈ ಪರಿಸ್ಥಿತಿಯಿಂದ ಅಂಬರನು ಬಹಳೇ ತೊಂದರೆಗೀಡಾದನು. ಆತನು ಖಾನೇಖಾನಾನ್‌ನಿಂದ ಸಹಾಯ ಯಾಚಿಸಿದನು.

ಖಾನೇಖಾನಾನ್‌ನು ಅಂಬರ್‌ನ ವಿನಂತಿಯನ್ನು ಸ್ವೀಕರಿಸಿದನು. ಹಾಗೂ ಆತನ ಸಹಾಯಕ್ಕಾಗಿ ಬೀಡ್‌ದ ಮೇಲ್ವಿಚಾರಕನಾದ ಮಿರ್ಜಾ ಹುಸೈನ್ ಬೇಗ್‌ನನ್ನು ೨-೩ ಸಾವಿರ ಸವಾರರೊಂದಿಗೆ ಕಳುಹಿಸಿದನು. ಅಂಬರ್‌ನು ಈ ಸೈನ್ಯದ ಸಹಾಯದಿಂದ ರಾಜುವನ್ನು ಸೋಲಿಸಿ ದೌಲತಾಬಾದ್‌ದತ್ತ ಓಡಿ ಹೋದನು.

ದಾನಿಯಾಲ್‌ನ ನಿಧನ :

ಯುವರಾಜ ಮುರಾದ್‌ನಂತೆ ತೆರವಾಗಿ ದಖ್ಖನ್ನಿನ ಆಡಳಿತವು ಯುವರಾಜನಾದ ದಾನಿಯಾಲ್‌ನಿಗೂ ಒಗ್ಗಲಿಲ್ಲ. ಹಾಗೂ ಆತನು ಬುರ್ಹಾನ್‌ಪುರದಲ್ಲಿ ನಿಧನನಾದನು. ಈ ಸುದ್ದಿಯನ್ನು ತಿಳಿದು ಖಾನೇಖಾನಾನ್‌ನು ಬುರ್ಹಾನ್‌ಪುರಕ್ಕೆ ಹೋದನು. ಅಂಬರ್‌ನು ಈ ಅವಕಾಶವನ್ನು ಸದುಪಯೋಗಡಿಸಿಕೊಂಡನು ಸೈನ್ಯವನ್ನು ಸೇರಿಸಿ ದೌಲತಾಬಾದ್‌ನತ್ತ ಹೊರಟನು. ಹಾಗೂ ರಾಜುವಿನ ಮೇಲೆ ದಾಳಿ ಮಾಡಿದನು.

ದೌಲತಾಬಾದ್‌ನಲ್ಲಿ ಖಾನೇಖಾನಾನ್ :

ರಾಜುವು ಅಂಬರ್‌ನನ್ನು ಎದುರಿಸದಾದನು. ಆತನು ಖಾನೇಖಾನಾನ್‌ನ ನೆರವು ಬೇಡಿದನು. ಖಾನೇಖಾನಾನ್‌ನು ಕೆಲವು ಕಾರಣಗಳಿಂದ ಬುರ್ಹಾನ್‌ಪುರದಲ್ಲಿ ಉಳಿಯುವುದು ಉಚಿತವಲ್ಲವೆಂದು ತಿಳಿದಿದ್ದನು. ಆತನು ರಾಜುವಿನ ವಿನಂತಿಯನ್ನು ಒಂದು ನೆಪ ಮಾಡಿಕೊಂಡನು. ಹಾಗೂ ದೌಲತಾಬಾದ್‌ದತ್ತ ಹೊರಟನು. ಖಾನೇಖಾನಾನ್‌ನು ರಾಜು ಹಾಗೂ ಅಂಬರ್‌ನ ಮಧ್ಯೆ ಪ್ರವೇಶಿಸಿದನು. ಆತನು ಆರು ತಿಂಗಳವರೆಗೆ ಒಬ್ಬರನ್ನು ಇನ್ನೊಬ್ಬರ ಮೇಲೆ ದಾಳಿ ಮಾಡಲು ಬಿಡಲಿಲ್ಲ.

ಅಂಬರ್ ಹಾಗೂ ರಾಜುವಿನ ನಡುವೆ ಸಂಧಾನ :

ಅಂಬರ್ ಈ ಪರಿಸ್ಥಿತಿಯಿಂದ ಧೃತಿಗೆಟ್ಟನು. ಆತನು ಅನಿವಾರ್ಯವಾಗಿ ರಾಜುವಿನತ್ತ ಸಂಧಾನದ ಹಸ್ತ ಚಾಚಿದನು. ಈರ್ವರ ನಡುವೆ ಸಂಧಾನವುಂಟಾಯಿತು. ಹಾಗೂ ಅಂಬರ್‌ನು ಪರಿಂದಾ ಕೋಟೆಯತ್ತ ಹೊರಟನು. ಹಾಗೂ ಖಾನೇಖಾನಾನ್‌ನು ಜಾಲ್ನಾದತ್ತ ಸಾಗಿದನು.

ಅಂಬರ್‌ನ ನಿರ್ಧಾರ :

ಮಲೀಕ್ ಅಂಬರ್‌ನ ವಿಚಾರದಲ್ಲಿ ರಾಜುವಿನ ದಾಳಿಯ ಕಾರಣವು ಮುರ್ತುಜಾ ನಿಜಾಮುಷಾಹ್‌ನಿರುವನು. ಆತನ ಸಂಜ್ಞೆಯಿಂದಲೇ ರಾಜುವು ಈ ಇಡೀ ಗೊಂದಲವನ್ನುಂಟು ಮಾಡಿರುವನು. ಈ ಕಾರಣದಿಂದ ಅಂಬರ್‌ನು ನಿಜಾಮಷಾಹನನ್ನು ಪದಚ್ಯುತಿಗೊಳಿಸಿ ಬೇರೆ ಯಾವುದೇ ನಿಜಾಮಷಾಹೀ ವ್ಯಕ್ತಿಯನ್ನು ಬಾದಷಾಹನನ್ನಾಗಿಸಲು ನಿರ್ಧರಿಸಿದನು. ಆದರೆ ಇಬ್ರಾಹಿಂ ಆದಿಲ್‌ಷಾಹನು

ಅಂಬರ್‌ನ ಈ ಯೋಜನೆಯನ್ನು ಒಪ್ಪಲಿಲ್ಲ. ಅದಕ್ಕಾಗಿ ಈ ಯೋಜನೆಯು ಕಾರ್ಯಗತವಾಗಲಿಲ್ಲ.

ಬಾದಷಾಹ್ ಹಾಗೂ ಅಂಬರ್‌ರ ಮಧ್ಯ ಸಂಧಾನ :

ಹಿಜ್ರಿಶಕೆ ೧೦೧೬ ರಲ್ಲಿ ಆದಿಲ್‌ಷಾಹ್‌ನ ಹೇಳಿಕೆಯ ಮೇರೆಗೆ ಅಂಬರ್‌ನು ನಿಜಾಮಷಾಹ್‌ನ ವಿಧೇಯತೆಯನ್ನು ಸ್ವೀಕರಿಸಿದನು. ಹಾಗೂ ಈ ತೆರನಾಗಿ ಬಾದಷಾಹ್ ಹಾಗೂ ಅಂಬರ್‌ರ ನಡುವೆ ಒಳ್ಳೆಯ ಸಂಬಂಧಗಳು ಬೆಳೆದು ಬಂದವು. ಇದರ ನಂತರ ನಿಜಾಮಷಾಹ್ ಹಾಗೂ ಇತರ ಅಮೀರರು ಹತ್ತು ಹನ್ನೆರಡು ಸಾವಿರ ಸವಾರರ ಸೈನ್ಯದೊಂದಿಗೆ ಜನೀರ್‌ನತ್ತ ಪ್ರಯಾಣ ಬೆಳೆಸಿದರು. ಬಾದಷಾಹನು ಕೆಲಸಮಯದ ವರೆಗೆ ಇದೇ ಸ್ಥಳದಲ್ಲಿ ತಂಗಿದನು.

ರಾಜುವಿನ ಬಂಧನ :

ರಾಜುವು ಅಂಬರ್‌ನ ಭಯದಿಂದಾಗಿ ಜನೀರಕ್ಕೆ ಬಂದಿರಲಿಲ್ಲ. ಅದಕ್ಕಾಗಿ ಬಾದಷಾಹ್‌ನು ಕೆಲವು ಹಿಂದೂ ಹಾಗೂ ಮುಸ್ಲಿಂ ಅಮೀರರನ್ನು ಈತನನ್ನು ಶಿಕ್ಷಿಸುವುದಕ್ಕಾಗಿ ಕಳುಹಿಸಿದನು. ರಾಜುವನ್ನು ಬಹಳ ಕಷ್ಟಪಟ್ಟು ಬಂಧಿಸಲಾಯಿತು. ಹಾಗೂ ಆತನ ವಶಕ್ಕಿದ್ದ ಪ್ರಾಂತ್ಯಗಳು ನಿಜಾಮಷಾಹನ ವಶಕ್ಕೆ ಬಂದವು. ಅದರ ನಂತರ ಅಂಬರ್‌ನು ಪೂರ್ಣ ಪ್ರಮಾಣದ ಅಧಿಕಾರವನ್ನು ಅನುಭವಿಸತೊಡಗಿದನು.

ನಿಜಾಮಷಾಹೀ ಆಡಳಿತದ ಪ್ರಸ್ತುತ ಪರಿಸ್ಥಿತಿ :

ಈ ಸಮಯದಲ್ಲಿ ಯಾವಾಗ ಈ ಗ್ರಂಥವು ಬರೆಯಲ್ಪಡುತ್ತಿರುವುದೋ ಆಗ ನಿಜಾಮಷಾಹೀ ಸಿಂಹಾಸನ ಹಾಗೂ ಕಿರೀಟದ ಒಡೆಯನು ಮುರ್ತುಜಾ ನಿಜಾಮಷಾಹ್‌ನಾಗಿರುವನು ಹಾಗೂ ಅಂಬರ್ ಹಬಷಿಯ ಕೈಯಲ್ಲಿ ಸಮಗ್ರ ಆಡಳಿತದ ಸೂತ್ರವಿರುವುದು. ಆತನು ಏನನ್ನು ಬಯಸುತ್ತಾನೋ ಅದನ್ನು ಮಾಡುತ್ತಾನೆ. ನಿಜಾಮಷಾಹೀ ವಂಶವು ಕ್ರಮೇಣವಾಗಿ ಕ್ಷೀಣಿಸುತ್ತ ಹೋಗುತ್ತಿದೆ. ಹಾಗೂ ದೆಹಲಿಯ ದೊರೆಯು ಉಳಿದೆಲ್ಲ ಪ್ರಾಂತ್ಯಗಳ ಮೇಲೆಯೂ ವಶಪಡಿಸಿಕೊಳ್ಳಲು ಯತ್ನಿಸುತ್ತಿರುವನು ಮುಂದೇನಾಗುವುದು ? ಅದರ ಕುರಿತು ಏನನ್ನೂ ಹೇಳಲಾಗುವುದಿಲ್ಲ. ಆದರೆ ಈ ತೆರನಾಗಿ ಏನನ್ನು ದೇವನು ಬಯಸುವನೋ ಅದೇ ಆಗುವುದು.

■

III. ತೆಲಂಗಾಣದ ಸುಲ್ತಾನರು

*

ಪೀಠಿಕೆ

ಓದುಗರು ಈ ವಾಸ್ತವಾಂಶಗಳ ಕುರಿತು ಚೆನ್ನಾಗಿ ಅರಿತವರಾಗಿದ್ದಾರೆ. ಏನೆಂದರೆ ಇಬ್ರಾಹಿಂ ಕುತುಬ್‌ಷಾಹ್‌ನ ಅವಧಿಯಲ್ಲಿ ಷಾಹ್ ಅಖವರ್ ಹೆಸರಿನ ಓರ್ವ ವ್ಯಕ್ತಿಯು ಯಾರು ಇರಾಕ್‌ನಿಂದ ಆಗಮಿಸಿದ್ದನು. ಇತಿಹಾಸದ ಮೇಲೆ ಒಂದು ಉತ್ಕೃಷ್ಟವಾದ ಗ್ರಂಥವನ್ನು ರಚಿಸಿರುವನು. ಅದರಲ್ಲಿ ಕುತುಬ್‌ಷಾಹೀ, ಸಾಮ್ರಾಜ್ಯದ ಎಲ್ಲ ಘಟನೆಗಳನ್ನು ವಿವರವಾಗಿ ವಿವರಿಸಿರುವನು. ಈ ಗ್ರಂಥಕರ್ತನು "ಮೌರಿಖ್ ಏ ಫೆರಿಷ್ತಾ" ಈ ಇತಿಹಾಸವನ್ನು ಬರೆಯುವಾಗ ಮೇಲೆ ಹೇಳಿದ ಗ್ರಂಥವನ್ನು ಪಡೆಯಲಾರದಾದನು. ಅದಕ್ಕಾಗಿ ಕುತುಬ್‌ಷಾಹೀ ವಂಶದ ವಿವರಗಳನ್ನು ವಿವರಿಸಲಾಗಲಿಲ್ಲ. ಕೇವಲ ಆಡಳಿತಗಾರರ ಹೆಸರುಗಳನ್ನೂ ಹಾಗೂ ಕೆಲವು ಘಟನೆಗಳ ಸಂಕ್ಷಿಪ್ತ ವಿವರದಲ್ಲಿಯೇ ತೃಪ್ತಿ ಪಟ್ಟುಕೊಂಡಿರುವೆನು.

■

*

೧. 'ಸುಲ್ತಾನ್ ಕುಲಿ'

ಆರಂಭದ ಪರಿಸ್ಥಿತಿ :

ಸುಲ್ತಾನ್ ಕುಲಿ ಮೀರ್ ಅಲಿಯು ತುರ್ಕಿಗಳ ಪ್ರಸಿದ್ಧ ಬುಡಕಟ್ಟು ಭಾರ್ಲುವಿನಿಂದ ಇದ್ದನು. ಈ ಕುಲದ ಕೆಲ ಜನರ ಅಭಿಪ್ರಾಯದಲ್ಲಿ ಸುಲ್ತಾನ್ ಕುಲಿಯು ಮಿರ್ಜಾ ಜಹಾಂನ್ ಷಹಾ ಮಖ್ತುಲ್‌ನ ವಂಶಸ್ಥನಿರುವನು. ಅದೇನೇ ಇರಲಿ. ಇದು ಸತ್ಯವಾಗಿದೆ. ಏನೆಂದರೆ ಸುಲ್ತಾನ್ ಕುಲಿಯು ಹಮ್ದಾನ್‌ದಲ್ಲಿ ಜನಿಸಿದನು. ಸುಲ್ತಾನ್ ಮೊಹಮ್ಮದ್ ಷಾ ಲಷ್ಕರಿಯ ಆಡಳಿತದ ಕೊನೆಯ ದಿನಗಳಲ್ಲಿ ಸುಲ್ತಾನ್ ಕುಲಿಯು ದಖ್ಖನಕ್ಕೆ ಬಂದನು. ಹಾಗೂ ಮೊಹಮ್ಮದ್‌ಷಾಹ್‌ನ ತುರ್ಕಿ ಗುಲಾಮರಲ್ಲಿ ಸೇರಿಕೊಂಡನು. ಮೊಹಮ್ಮದ್‌ಷಾಹ್‌ನು ತುರ್ಕಿ ಗುಲಾಮರಲ್ಲಿ ಬಹಳ ಆಸಕ್ತಿ ಹೊಂದಿದ್ದನು. ಹಾಗೂ ಅವರೊಂದಿಗೆ ಬಹಳೇ ಸ್ನೇಹದಿಂದಿದ್ದನು.

ಗಣಿತದಲ್ಲಿ ಪ್ರಭುತ್ವ :

ಸುಲ್ತಾನ್ ಕುಲಿಯು ಗಣಿತದ ಜ್ಞಾನದಲ್ಲಿ ಪ್ರಭುತ್ವ ಹೊಂದಿದ್ದನು. ಹಾಗೂ ಸುಂದರ ಕೈಬರಹದ ಒಡೆಯನಾಗಿದ್ದನು. ಈ ಕಾರಣದಿಂದ ಆತನಿಗೆ ದರ್ಬಾರಿನಲ್ಲಿ ಕರಣಿಕನನ್ನಾಗಿ ನೇಮಿಸಲಾಯಿತು. ಷಾಹೀ ಸ್ತ್ರೀಯರು ಆತನ ಸದ್ವರ್ತನೆ ಹಾಗೂ ವಿಶ್ವಾಸಾರ್ಹತೆಯನ್ನು ಕಂಡು ಬಹಳ ಸಂತಸಭರಿತರಾದರು. ಈ ದಿನಗಳಲ್ಲಿ ತೆಲಂಗಾಣದ ಪ್ರಾಂತ್ಯವು ಷಾಹೀ ಸ್ತ್ರೀಯರ ಜಾಗೀರಾಗಿತ್ತು. ಇಲ್ಲಿಯ ಮೇಲ್ವಿಚಾರಕರು ಷಾಹೀ ದರ್ಬಾರಕ್ಕೆ ಈ ಸಾರಾಂಶವುಳ್ಳ ಪತ್ರಗಳನ್ನು ರವಾನಿಸಿದನು. ಏನೆಂದರೆ.

ತೆಲಂಗಾಣದ ಪರಿಸ್ಥಿತಿ :

ಇಡೀ ಪ್ರಾಂತ್ಯವನ್ನು ಕಳ್ಳರು, ಲೂಟಿಕೋರರು, ದರೋಡೆಕೋರರು ತಮ್ಮ ಆಟದ ಮೈದಾನವನ್ನಾಗಿಸಿಕೊಂಡಿದ್ದಾರೆ. ಪ್ರಜೆಗಳ ಬಂಡಾಯ ಹಾಗೂ

ಅವಿಧೇಯತೆಯು ದಿನನಿತ್ಯ ಹೆಚ್ಚುತ್ತಲೇ ಹೊರಟಿದೆ. ತೆರಿಗೆಯನ್ನು ತುಂಬುವತ್ತ ಯಾರ ಗಮನವೂ ಇಲ್ಲ. ಪ್ರತಿಯೊಬ್ಬ ವ್ಯಕ್ತಿಯು ಇದನ್ನೇ ಬಯಸುತ್ತಿದ್ದಾನೆ. ಏನೆಂದರೆ ಸರಕಾರದ ದುಡ್ಡನ್ನು ತನ್ನ ಬಳಿ ಇಟ್ಟುಕೊಳ್ಳಬೇಕು ಒಂದು ವೇಳೆ ಷಾಹೀ ದರ್ಬಾರವು ಒಂದು ಉನ್ನತ ದರ್ಜೆಯ ಸೈನ್ಯವನ್ನು ಬಂಡಾಯಗಾರರಿಗೆ ಶಿಕ್ಷೆ ನೀಡಲು ಕಳುಹಿಸಿದರೆ ತುಂಬಾ ಒಳ್ಳೆಯದಾಗುತ್ತದೆ ಹಾಗೂ ತೆರಿಗೆಗಳನ್ನು ವಸೂಲಿ ಮಾಡಲು ಅನುಕೂಲವಾಗುತ್ತದೆ.

ಸುಲ್ತಾನ್‌ಕುಲಿ ಬಯಕೆ :

ಸುಲ್ತಾನ್ ಮೊಹಮ್ಮದ್‌ಷಾಹ್‌ನು ತನ್ನ ಓರ್ವ ಪ್ರಸಿದ್ಧ ಅಮೀರನಿಗೆ ತೆಲಂಗಾಣದೊಂದಿಗೆ ಕದನಕ್ಕೆ ಕಳುಹಿಸಲು ಇಚ್ಛಿಸಿದನು. ಸುಲ್ತಾನ್ ಕುಲಿಯು ಓರ್ವ ಬೇಗಮ್‌ಳ ಪ್ರಭಾವದ ಮುಖಾಂತರ ಬಾದಷಾಹ್‌ನಿಗೆ ಸುದ್ದಿ ತಲುಪಿಸಿದನು. ಏನೆಂದರೆ "ತೆಲಂಗಾಣದ ವ್ಯವಹಾರವನ್ನು ನನ್ನ ವಶಕ್ಕೆ ಒಪ್ಪಿಸಬೇಕು. ನಾನು ಪ್ರಮಾಣ ಮಾಡುತ್ತೇನೆ. ಯಾವುದೇ ರೀತಿಯ ಸೈನ್ಯದ ಸಹಾಯವಿಲ್ಲದೆಯೇ ಈ ಪ್ರಾಂತ್ಯವನ್ನು ಸುಧಾರಿಸುವೆನು. ಹಾಗೂ ಬಂಡಾಯಗಾರರನ್ನು ಈ ವಿಧವಾಗಿ ಅವರ ಹೆಸರು ಉಳಿಯದಂತೆ ನಿರ್ನಾಮ ಮಾಡುವೆನು.

ತೆಲಂಗಾಣದ ಸಾಹಸ ಕಾರ್ಯಕ್ಕೆ ನೇಮಕ :

ಸುಲ್ತಾನ್ ಮೊಹಮ್ಮದ್‌ಷಾಹನು ಸುಲ್ತಾನ್ ಕುಲಿಯ ಮೇಲೆ ಬಹಳ ಕೃಪೆದೋರಿದನು. ಹಾಗೂ ಆತನನ್ನು ಉಪರೋಕ್ತ ಸಾಹಸಕಾರ್ಯಕ್ಕೆ ನೇಮಿಸಿದನು. ಸುಲ್ತಾನ್ ಕುಲಿಯು ತನ್ನ ಸಂಗಡಿಗರೊಂದಿಗೆ ಸೇರಿಕೊಂಡು ತೆಲಂಗಾಣದತ್ತ ಹೋದನು. ಹಾಗೂ ಆತನು ಒಂದು ಸಂಚನ್ನು ಹೀಗೆ ರೂಪಿಸಿದನು. ಬಂಡಾಯಗಾರರ ಒಂದು ತಂಡವನ್ನು ತನ್ನ ಹಿತೈಷಿಗಳನ್ನಾಗಿಸಿಕೊಂಡನು. ಹಾಗೂ ಈ ತಂಡದ ಸಹಾಯದಿಂದ ಕಳ್ಳರು ಹಾಗೂ ಲೂಟಿಕೋರರನ್ನು ನಿರ್ನಾಮ ಮಾಡಿದನು. ಸುಲ್ತಾನ್ ಕುಲಿಯು ಬೇರೆ ಅಮೀರರ ಪರಗಣಗಳಿಂದಲೂ ಯಾವವು ಸುತ್ತಮುತ್ತಲಿದ್ದವು. ಅಲ್ಲಿಂದಲೂ ಲೂಟಿಕೋರರನ್ನು ಗೂಂಡಾಗಳನ್ನು ಬೇರು ಸಹಿತ ಕಿತ್ತು ಹಾಕಿದನು. ಹಾಗೂ ಈ ತೆರನಾಗಿ ಆತನ ಶೌರ್ಯ, ಧೈರ್ಯ ಹಾಗೂ ಸಾಹಸದ ಕಾರ್ಯವು ಪ್ರಾಂತ್ಯದ ನಾಲ್ಕೂ ಕಡೆ ಪ್ರಸಿದ್ಧಿಗೊಂಡಿತು.

ರಾಜ್ಯಪಾಲ ಹಾಗೂ ಸೈನ್ಯಾಧಿಕಾರಿಯಾಗಿ ನೇಮಕ :

ಸುಲ್ತಾನ್ ಮೊಹಮ್ಮದ್‌ನು ಸುಲ್ತಾನ್ ಕುಲಿಯನ್ನು ರಾಜ್ಯಪಾಲನನ್ನಾಗಿಸಿ ಆತನನ್ನು ಗೊಲ್ಕೊಂಡಾ ಹಾಗೂ ಅದರ ಅಡಿಯಲ್ಲಿ ಬರುವ ಪಟ್ಟಣಗಳ ಜಹಾಗೀರದಾರನನ್ನಾಗಿಸಿದನು. ಕೆಲವು ಸಮಯದ ಬಳಿಕ ಆತನನ್ನು ಈ ಪ್ರಾಂತ್ಯದ ಸೈನ್ಯಾಧಿಕಾರಿಯನ್ನಾಗಿಸಿದನು. ಹಾಗೂ ಷಾಹೀ ಸನ್ನಿದಿಯಲ್ಲಿ ಅವನ ಹೆಸರಿನೊಂದಿಗೆ

‘ಸಾಹೇಬುಲ್ ಸೈಫವಲ್ಲ ಖಲಂ’ದ ಬಿರುದನ್ನು (ಲೇಖನಿಯ ಧಣಿ) ಬರೆಯಲಾಗತೊಡಗಿತು.

ದೊರೆತನ :

ಯೂಸುಫ್ ಆದಿಲ್‌ಷಾಹ್, ಅಹ್ಮದ್‌ನಿಜಾಮಷಾಹ್ ಹಾಗೂ ಅಮಾದುಲ್ ಮುಲ್ಕನು ತನ್ನ ತನ್ನ ದಖ್ಖನಿ ಪ್ರಾಂತ್ಯಗಳಲ್ಲಿ ಸ್ವತಂತ್ರರಾಗಿ ದೊರೆತನವನ್ನು ಸ್ವಯಂಘೋಷಿಸಿಕೊಂಡರು. ಸ್ವತಂತ್ರರಾಗಿ ಹಾಗೂ ಬೇರೆ ಬೇರೆಯಾಗಿ ಸಾಮ್ರಾಜ್ಯಗಳನ್ನು ಸ್ಥಾಪಿಸಿದರು. ಯೂಸೂಫ್ ಆದಿಲ್‌ಷಾಹ್‌ನಿಗೆ ಸಫ್‌ವಿಯಾ ವಂಶಸ್ಥರಲ್ಲಿ ಶ್ರದ್ಧೆಯಿತ್ತು. ಅದಕ್ಕಾಗಿ ಆತನು ಬಾರಾ ಇಮಾಮ್‌ರ ಹೆಸರುಗಳನ್ನು ಖುತ್ಬಾದಲ್ಲಿ ಸೇರಿಸಿದನು. ಸುಲ್ತಾನ್ ಕುಲಿಯೂ ಸಹ ತನ್ನ ರಾಜ್ಯಪಾಲ ಹಾಗೂ ಸೈನ್ಯಾಧಿಕಾರಿಯ ಅವಧಿಯಲ್ಲಿ ಇದನ್ನೇ ಅನುಸರಿಸಿದನು. ಯಾವಾಗ ಸುಲ್ತಾನ್ ಮಹಮೂದ್ ಬಹಮನಿಯ ಸಾಮ್ರಾಜ್ಯವು ತನಗೊಳ್ಳತೊಡಗಿತು. ಆಗ ಹಿಜ್ರಿ ಶಕೆ ೯೧೮ ರಲ್ಲಿ ಸುಲ್ತಾನ್ ಕುಲಿಯು ಸ್ವತಂತ್ರನಾಗಿ ದೊರೆತನವನ್ನು ಘೋಷಿಸಿಕೊಂಡನು. ಹಾಗೂ ತನಗೆ ತಾನು ‘ಕುತುಬ್‌ಷಾಹ್’ ಎಂಬ ಬಿರುದಿನಿಂದ ಕರೆದುಕೊಂಡು ಸ್ವತಂತ್ರ ಆಡಳಿತವನ್ನು ಸ್ಥಾಪಿಸಿಕೊಂಡನು.

ಸಾಮ್ರಾಜ್ಯದ ಕಳೆ :

ಕುತುಬ್‌ಷಾಹ್‌ನ ಸಾಮ್ರಾಜ್ಯವು ಹಾಗೆ ನೋಡಿದರೆ ಬಹಳ ಅಲ್ಪ ಸಮಯದ್ದಿತ್ತು. ಆದರೆ ಆತನು ಘನತೆ ಗೌರವ ಹಾಗೂ ಶೋಭೆಯನ್ನು ತರುವ ಸಲುವಾಗಿ ಹಲವಾರು ವಿಧದಲ್ಲಿ ಪ್ರಯತ್ನಿಸಿದನು. ಅದರಲ್ಲಿ ಒಂದು ಇದೂ ಸಹ ಇತ್ತು. ಏನೆಂದರೆ ಆದಿಲ್‌ಷಾಹ, ಅಮಾದ್‌ಷಾಹ ಹಾಗೂ ಬರೀದ್‌ಷಾಹ ಇತರರ ವಿರುದ್ಧ ತನ್ನ ಬಾಗಿಲಿನೆದುರು ದಿನದಲ್ಲಿ ಐದು ಸಲ ನಗಾರಿ ಬಾರಿಸಲು ಆದೇಶಿಸಿದನು. ಕುತುಬ್‌ಷಾಹನು ತನ್ನ ಕೋಮಿನ ವ್ಯಕ್ತಿಗಳಿಗೆ ಜಾಗೀರುಗಳ ಹಾಗೂ ಹುದ್ದೆಗಳಿಂದ ಪುರಸ್ಕರಿಸಿದನು ಹಾಗೂ ಇದೇ ತೆರನಾಗಿ ತನ್ನ ಶಕ್ತಿಯನ್ನು ವೃದ್ಧಿಸಿಕೊಂಡನು.

ಸುಲ್ತಾನ್ ಮೆಹಮೂದ್‌ಷಾಹನತ್ತ ಗಮನ :

ಕುತುಬ್‌ಷಾಹನು ಸುಲ್ತಾನ್ ಮೆಹಮೂದ್‌ಷಾಹನನ್ನು ಬಹಳೇ ಗೌರವಿಸುತ್ತಿದ್ದನು. ಹಾಗೂ ಆತನ ಹಕ್ಕುಗಳ ಕುರಿತು ಸಂಪೂರ್ಣ ರೀತಿಯಲ್ಲಿ ಗಮನವಿಡುತ್ತಿದ್ದನು. ಪ್ರತಿ ತಿಂಗಳು ಕೊಡುಗೆ, ಕಾಣಿಕೆಗಳನ್ನು ಆತನ ಸೇವೆಯಲ್ಲಿ ಬೀದರಕ್ಕೆ ಕಳುಹಿಸುತ್ತಿದ್ದನು. ಅದೇ ಕಾಲದಲ್ಲಿ ಈ ಸುದ್ದಿಯು ತಲುಪಿತು. ಇರಾನ್‌ನಲ್ಲಿ ಷಾ ಇಸ್ಮಾಯಿಲ್ ಸಂಘವಿಯ ಸಿಂಹಾಸನಾರೂಢನಾಗಿರುವನು. ಏಕೆಂದರೆ ಕುತುಬ್‌ಷಾಹ್‌ನು ಇಸ್ಮಾಯಿಲ್ ಸಂಘವಿಯನ್ನು ತನ್ನ ಧಾರ್ಮಿಕ ಗುರುವೆಂದು ಬಗೆಯುತ್ತಿದ್ದನು.

ಅದಕ್ಕಾಗಿ ಈ ದೊರೆಯ ಹೆಸರನ್ನು ತನ್ನ ಹೆಸರಿನ ಪೂರ್ವದಲ್ಲಿ ತನ್ನ ಖುತ್ಬಾದಲ್ಲಿ ಸೇರಿಸಿದನು.

ಷಿಯಾ ಪಂಥದ ಸಂಪ್ರದಾಯ :

ಕುತುಬ್‌ಷಾಹ್‌ನು ಷಿಯಾ ಪಂಥದ ಪ್ರಭಾವಕ್ಕೊಳಗಾಗಿ ಹಂತ ಹಂತವಾಗಿ ಮೂವರು ಖಲೀಫರ ಹೆಸರುಗಳನ್ನು ತನ್ನ ಖುತ್ಬಾದಿಂದ ತೆಗೆದು ಹಾಕಿದನು. ಷಾಹ್ ತಾಹೀರ್‌ರ ಉಪದೇಶವನ್ನು ಅನುಸರಿಸಿ ಅಹ್ಮದ್‌ನಗರದಲ್ಲಿ ಬುರ್ಹಾನ್‌ಷಾಹ್‌ನು ಷಿಯಾ ಪಂಥದ ಖುತ್ಬಾ ಜಾರಿಗೊಳಿಸಿದನು. ಕುತುಬ್‌ಷಾಹ್‌ನು ಅದನ್ನು ಅನುಸರಿಸಿದನು. ಹಾಗೂ ತನ್ನ ಪ್ರಾಂತ್ಯದಲ್ಲಿ ಷಿಯಾ ಪಂಥವನ್ನು ರೂಢಿಯಲ್ಲಿ ತಂದನು.

ದೂಷಣೆ :

ಕೆಲ ಅವಿವೇಕಿಗಳು ದೂಷಿಸುವುದನ್ನು ತಮ್ಮ ಹವ್ಯಾಸವಾಗಿಸಿಕೊಂಡರು. ಸಂಕ್ಷಿಪ್ತ ರೂಪದಲ್ಲಿ ಏನೆಂದರೆ ಇವತ್ತಿನವರೆಗೂ ಸುಲ್ತಾನ್ ಮೊಹಮ್ಮದ್ ಕುಲಿ ಕುತುಬ್‌ಷಾಹ್‌ನ ಆಡಳಿತವಿರುವುದು ಷಿಯಾ ಪಂಥವು ತೆಲಂಗಾಣದತ್ತ ರೂಢಿಯಲ್ಲಿರುವುದು ಹಾಗೂ ಬಾರಾ ಇಮಾಮರ ಹೆಸರಿನ ಖುತ್ಬಾ ಓದಲಾಗುತ್ತದೆ. ಮಿಂಬರ್‌ಗಳ ಮೇಲಿನಿಂದ ಮೊದಲು ಇರಾನಿನ ಬಾದಷಾಹ್ ಷಾ ಅಬ್ಬಾಸ್ ಸಫವಿಯ ಹಿತ ಹಾಗೂ ಸುಖಪ್ರದದ ಪ್ರಾರ್ಥನೆ ಮಾಡಲಾಗುತ್ತದೆ. ದೇವನ ಕೃಪೆಯಿಂದ ಈ ಬಾದಷಾಹ್‌ರ ಸಫವಿಯ ಧಾರ್ಮಿಕ ಗುರುಗಳೊಂದಿಗೆ ಯಾವ ಶ್ರದ್ಧೆ ಇದೆಯೋ ಅದರಲ್ಲಿ ಯಾವುದೇ ಬಗೆಯ ಕೊರತೆಯುಟಾಗಿಲ್ಲ.

ದಖ್ಖನ್ನಿನ ಸುಲ್ತಾನರೊಂದಿಗೆ ಸ್ನೇಹ :

ಸುಲ್ತಾನ್ ಕುಲಿ ಕುತುಬ್‌ಷಾಹ್‌ನು ತನ್ನ ಆಡಳಿತಾವಧಿಯಲ್ಲಿ ದಖ್ಖನ್ನಿನ ಸುಲ್ತಾನರೊಂದಿಗೆ ಒಳ್ಳೆಯ ಸ್ನೇಹ ಸಂಬಂಧಗಳನ್ನು ಹೊಂದಿದ್ದನು. ಆದರೆ ಆ ಕಾಲದಲ್ಲಿ ಸುಲ್ತಾನ್ ಬಹಾದ್ದೂರ್ ಗುಜರಾತಿಯು ಅಮಾದುಲ್ ಮುಲ್ಕನ ಬಯಕೆಯಂತೆ ನಿಜಾಮಷಾಹ್‌ನ ಮೇಲೆ ದಾಳಿ ಮಾಡಿದನು. ಆಗ ಸುಲ್ತಾನ್ ಕುಲಿಯು ತನ್ನ ಸೌಜನ್ಯವನ್ನು ಬದಿಗಿರಿಸಿ ಸುಲ್ತಾನ್ ಬಹಾದ್ದೂರನ ಜೊತೆ ನೀಡಿದನು. ಸುಲ್ತಾನ್ ಬಹಾದ್ದೂರನ ಗೊಂದಲವು ಮುಗಿದ ಮೇಲೆ ಇಸ್ಮಾಯಿಲ್ ಆದಿಲ್‌ಷಾಹನು ಬುರ್ಹಾನ್‌ಷಾಹನ ಹೇಳಿಕೆಯ ಮೇರೆಗೆ ಕುತುಬ್‌ಷಾಹೀ ಪ್ರಾಂತ್ಯವನ್ನು ವಶಪಡಿಸಿಕೊಳ್ಳಬಯಸಿದನು. ಕುತುಬ್‌ಷಾಹನು ಬುರ್ಹಾನ್ ಷಾಹನ ಕೋಪವನ್ನು ಶಮನಗೊಳಿಸಲು ಬಹಳ ಪ್ರಯತ್ನಿಸಿದನು. ಆದರೆ ಅವನಿಗೆ ಸಫಲತೆ ಸಿಗಲಿಲ್ಲ.

ಇಸ್ಮಾಯಿಲ್ ಆದಿಲ್‌ಷಾಹನಿಂದ ಆಕ್ರಮಣ :

ಹಿಜ್ರಿ ಶಕೆ ೯೪೦ರಲ್ಲಿ ಇಸ್ಮಾಯಿಲ್ ಆದಿಲ್‌ಷಾಹ್‌ನು ಕುತುಬ್‌ಷಾಹ್‌ನ ಒಂದು ಗಡಿ ಪ್ರದೇಶದ ಕೋಟೆಯ ಮೇಲೆ ದಾಳಿ ಮಾಡಿದನು. ಇಸ್ಮಾಯಿಲ್ ಆದಿಲ್‌ಷಾಹ್‌ನನ್ನು ಎದುರಿಸುವಷ್ಟು ಧೈರ್ಯವು ಕುತುಬ್‌ಷಾಹ್‌ನಲ್ಲಿ ಇರಲಿಲ್ಲ. ಅದಕ್ಕಾಗಿ ಆತನು ಎಲ್ಲಿ ತಂಗಿದ್ದನೋ ಅಲ್ಲಿಯೇ ಉಳಿದನು. ಹಾಗೂ ತನ್ನ ಸವಾರರು ಹಾಗೂ ಪಾದಚಾರಿಗಳ ಒಂದು ಸೈನ್ಯವನ್ನು ಇಸ್ಮಾಯಿಲ್ ಆದಿಲ್‌ಷಾಹ್‌ನನ್ನು ನಷ್ಟಗೊಳಿಸಲೆಂದು ಕಳುಹಿಸಿದನು. ಆಕಸ್ಮಿಕ ಘಟನೆ ಹೀಗೆ ಜರುಗಿತು. ಅದೇ ಸಮಯದಲ್ಲಿ ಇಸ್ಮಾಯಿಲ್ ಆದಿಲ್‌ಷಾಹನು ಮೃತ್ಯು ಹೊಂದಿದನು. ಹಾಗೂ ಕುತುಬ್‌ಷಾಹನ ಎಲ್ಲ ಸಂಕಷ್ಟಗಳು ಸ್ವಯಂ ದೂರವಾದವು.

ನಿಜಾಮ್‌ಷಾಹನೊಂದಿಗೆ ತೃಪ್ತಿಕರ ಸಂಬಂಧ :

ಈ ಘಟನೆಯ ನಂತರ ಕುತುಬ್‌ಷಾಹ್‌ನು ತನ್ನ ಅಮೀರರ ಒಂದು ತಂಡವನ್ನು ಬುರ್ಹಾನ್‌ಷಾಹನ ಬಳಿ ಕಳುಹಿಸಿದನು. ಏಕೆಂದರೆ ಸಂಧಾನ ಹಾಗೂ ಸ್ನೇಹ ಸಂಬಂಧ ಬೆಳೆಸಲು ಮಾತುಕತೆ ನಡೆಸುವ ಉದ್ದೇಶವಾಗಿತ್ತು. ಕುತುಬ್‌ಷಾಹೀ ಅಮೀರರು ಷಾಹ್‌ತಾಹೀರ್‌ರ ಮುಖಾಂತರ ಮಾತುಕತೆಗೆ ಆರಂಭ ನೀಡಿದರು. ಹಾಗೂ ಅದರಲ್ಲಿ ಅವರು ಯಶಸ್ವಿಯೂ ಆದರು. ಇದರ ನಂತರ ಕುತುಬ್‌ಷಾಹ್ ಹಾಗೂ ನಿಜಾಮಷಾಹ್‌ರಲ್ಲಿ ತೃಪ್ತಿಕರ ರೀತಿಯಲ್ಲಿ ಸ್ನೇಹ ಸಂಬಂಧಗಳು ಏರ್ಪಟ್ಟವು

ದೀರ್ಘಾಯುಷಿ ಕುತುಬ್‌ಷಾಹ್ :

ಕುತುಬ್‌ಷಾಹ್‌ನು ಬಹು ದೀರ್ಘ ವಯದ ಆಯುಷ್ಯವನ್ನು ಹೊಂದಿದ್ದನು. ಹಾಗೂ ಒಂದು ದೀರ್ಘಾವಧಿಯವರೆಗೆ ಆಡಳಿತ ನಡೆಸಿದನು. ಆತನ ಹಿರಿಯ ಪುತ್ರನು ಈ ಆಸೆಯಿಂದ ಕುಳಿತಿದ್ದನು. ಯಾವಾಗ ತನ್ನ ತಂದೆ ಸಾಯುವನು ಹಾಗೂ ತನಗೆ ಪಟ್ಟವು ಸಿಗುವುದು, ಇದೇ ಆಸೆಯಲ್ಲಿಯೇ ಆತನ ಕೂದಲು ಬಿಳಿಯಾದವು. ಕೊನೆಗೆ ಜಮಷೇದ್‌ನ ಸಹನೆಯು ಮಿತಿಮೀರಿತು. ಹಾಗೂ ಆತನು ಓರ್ವ ತುರ್ಕಿ ಗುಲಾಮನೊಂದಿಗೆ ಸಂಚು ನಡೆಸಿ ತನ್ನ ತಂದೆಯ ಕತೆಯನ್ನು ಮುಗಿಸುವ ನಿರ್ಧಾರ ಕೈಗೊಂಡನು.

ಕುತುಬ್‌ಷಾಹ್‌ನ ಕೊಲೆ :

ಹಿಜ್ರಿಶಕೆ ೯೫೦ರಲ್ಲಿ ಯಾವುದೋ ಒಂದು ತಿಂಗಳಲ್ಲಿ ಒಂದು ದಿನ ಬಾದಷಾಹ್‌ನು ವಜ್ರ, ವೈಢೂರ್ಯ, ರತ್ನ, ಮುತ್ತು, ಹವಳಗಳ ಪೆಟ್ಟಿಗೆಯನ್ನು ಮುಂದಿಟ್ಟುಕೊಂಡು ನದಿಯ ತಟದಲ್ಲಿ ಕುಳಿತಿದ್ದನು. ಹಾಗೂ ವಜ್ರ ವೈಢೂರ್ಯಗಳ ಆಭರಣಗಳನ್ನು ನೋಡುತ್ತಿದ್ದನು. ಮೇಲೆ ಹೇಳಲಾದ ತುರ್ಕಿ ಸೇವಕನು ಬಾದಷಾಹ್‌ನ ಹಿಂದಿನಿಂದ

ಬಂದು ಖಡ್ಗದಿಂದ ಎಷ್ಟು ಜೋರಾಗಿ ಹೊಡೆತ ನೀಡಿದನೆಂದರೆ ಆತನು ಅಲ್ಲಿಯೇ ಕೊನೆಯುಸಿರೆಳೆದನು. ಜಮಶೇದ್‌ನು ಇದೇ ಸಭೆಯಲ್ಲಿ ತನ್ನ ತಂದೆಯ ಬಳಿ ಕುಳಿತಿದ್ದನು. ಆತನು ತನ್ನ ಗೌಪ್ಯವು ಬಯಲಾಗದಿರಲೆಂದು ಕೊಲೆಗಾರನನ್ನು ಅದೇ ವೇಳೆ ಮೃತ್ಯುವಿನ ಕೈಗೆ ಒಪ್ಪಿಸಿದನು. ಜಮ್‌ಷೇದ್‌ನು ಕುತುಬ್‌ಷಾಹನ ಜೇಷ್ಠಪುತ್ರನಾಗಿರುವುದರಿಂದ ತಂದೆಯ ನಂತರ ಆತನೇ ಸಿಂಹಾಸನಾಧೀಶನಾದನು.

ಸುಲ್ತಾನ್ ಕುಲಿಯು ಮೂವತ್ತಮೂರು ವರ್ಷಗಳವರೆಗಿನ ದೀರ್ಘಾವಧಿಯ ಆಡಳಿತ ನಡೆಸಿದನು. ಆತನ ಮೂವರು ಪುತ್ರರು ಜಮ್‌ಷೆದ್, ಹೈದರ್ ಹಾಗೂ ಇಬ್ರಾಹಿಂರು ತಂದೆಯ ಮೃತ್ಯುವಿನ ವೇಳೆ ಜೀವಂತವಾಗಿದ್ದರು.

■

*

೨. ಸುಲ್ತಾನ್ ಕುಲಿಯ ಪುತ್ರ ಜಮ್‌ಷೇದ್ ಕುತುಬ್‌ಷಾಹ್

ಷಾಹ್ ತಾಹೀರ್‌ರ ಆಗಮನ :

ಜೆಮ್‌ಷೇದ್ ಕುತುಬ್‌ಷಾಹ್‌ನು ಆಡಳಿತ ಸೂತ್ರವನ್ನು ತನ್ನ ಕೈಗೆ ತೆಗೆದುಕೊಂಡು ತನ್ನ ತಂದೆಯನ್ನು ಅನುಸರಿಸಿದನು. ಹಾಗೂ ಶಿಯಾ ಪಂಥದ ಏಳ್ಗೆಗೆ ಪ್ರಯತ್ನಿಸತೊಡಗಿದನು. ಬುರ್ಹಾನ್ ನಿಜಾಮುಷಾಹ್‌ನು ಜೆಮುಷೇದ್‌ನಿಗೆ ಶುಭಾಶಯಗಳನ್ನು ತಿಳಿಸಲು ಷಾ ತಾಹೀರ್‌ರಿಗೆ ಗೋಲ್ಕೊಂಡಾಕ್ಕೆ ಕಳುಹಿಸಿದನು. ಷಾ ತಾಹೀರ್ ಯಾವಾಗ ಗೊಲ್ಕೊಂಡಾದ ಬಳಿ ತಲುಪಿದರೋ ಆಗ ಬಾದಷಾಹ್‌ನು ಸ್ವತಃ ಆರು ಕೋಸ್‌ದವರೆಗೆ ಬಂದು ಅವರನ್ನು ಸ್ವಾಗತಿಸಿದನು. ಹಾಗೂ ಬಹಳೇ ಗೌರವಪೂರ್ವಕವಾಗಿ ಷಾ ತಾಹೀರ್‌ರನ್ನು ಪಟ್ಟಣಕ್ಕೆ ಕರೆತಂದನು. ತಾಹೀರ್‌ಷಾಹ್‌ರು ಜಮ್‌ಷೇದ್‌ನಿಂದ ಈ ಮಾತಿನ ವಾಗ್ದಾನವನ್ನು ತೆಗೆದುಕೊಂಡರು. ಏನೆಂದರೆ ನಿಜಾಮುಷಾಹ್‌ನೊಂದಿಗೆ ನಿರಂತರವಾಗಿ ಸ್ನೇಹ ಸಂಬಂಧವನ್ನು ಇರಿಸಿಕೊಳ್ಳುವುದು. ಅದರ ನಂತರ ಷಾ ಸಾಹೇಬರು ಅಹ್ಮದ್‌ನಗರಕ್ಕೆ ಮರಳಿದರು.

ಆದಿಲ್‌ಷಾಹಿ ಪ್ರಾಂತ್ಯದಲ್ಲಿ ಪ್ರವೇಶ :

ಇದೇ ಕಾಲದಲ್ಲಿ ಕೆಲವು ಕಾರಣಗಳಿಂದ ನಿಜಾಮುಷಾಹ್ ಹಾಗೂ ಆದಿಲ್‌ಷಾಹ್‌ರ ಸಂಬಂಧದಲ್ಲಿ ಬಿರುಕು ಮೂಡಿತು. ನಿಜಾಮುಷಾಹ್‌ನ ಉತ್ತೇಜನ ದಿಂದ ಜಮ್‌ಷೇದ್ ಕುತುಬ್‌ಷಾಹ್‌ನು ಬೃಹತ್ ರೂಪದಲ್ಲಿ ಧನರಾಶಿಯನ್ನು ವ್ಯಯಿಸಿ ಸೈನ್ಯವನ್ನು ವೃದ್ಧಿಗೊಳಿಸಿದನು. ಹಾಗೂ ಆದಿಲ್‌ಷಾಹನ ಪ್ರಾಂತ್ಯದಲ್ಲಿ ಪ್ರವೇಶ ಮಾಡಿದನು. ಜಮುಷೇದ್ ಕುತುಬ್‌ಷಾಹ್ ಕಾಕನಿಯಲ್ಲಿ ಒಂದು ಸುಭದ್ರಕೋಟೆಯನ್ನು ನಿರ್ಮಿಸಿದನು. ಇಬ್ರಾಹಿಂ ಆದಿಲ್ ಆ ಕಾಲದಲ್ಲಿ ರಾಮರಾಜ ಹಾಗೂ ನಿಜಾಮುಷಾಹನ ಗೊಂದಲಗಳಲ್ಲಿ ಸಿಲುಕಿ ತೊಂದರೆಗೀಡಾಗಿದ್ದನು. ಅದಕ್ಕಾಗಿ ಆತನು ಕುತುಬ್‌ಷಾಹ್‌ನತ್ತ

ಗಮನ ನೀಡಲಿಲ್ಲ. ಕುತುಬ್‌ಷಾಹ್‌ನು ಈ ಅವಕಾಶವನ್ನು ಸದುಪಯೋಗ ಪಡಿಸಿಕೊಂಡನು. ತನ್ನ ನವನಿರ್ಮಿತ ಕೋಟೆಯನ್ನು ನಂಬಿಗಸ್ಥ ವಿಶ್ವಾಸಾರ್ಹರಾದ ಅಮೀರರಿಗೆ ಒಪ್ಪಿಸಿ ಆದಿಲ್‌ಷಾಹನ ಇತರ ಪರಗಣಗಳನ್ನು ಹಾಗೂ ಕೋಟೆಗಳನ್ನು ವಶಪಡಿಸಿಕೊಳ್ಳಲು ನಿರ್ಧರಿಸಿದನು.

ಆಹತ್ಕರ್ ಕೋಟೆಯ ಮುತ್ತಿಗೆ :

ಜೆಮ್‌ಷೇದ್ ಕುತುಬ್‌ಷಾಹ್‌ನು ಎಲ್ಲಕ್ಕಿಂತ ಮೊದಲು ಆಹತ್ಕರ್ ಕೋಟೆಯ (ಯಾವುದು ಸಾಗರದ ಬಳಿ ಇರುವುದು) ಅ ಕಡೆಗೆ ಹೊರಟನು. ಅಲ್ಲಿ ತಲುಪಿ ಆತನು ಕೋಟೆಯನ್ನು ದಿಗ್ಬಂಧನಗೊಳಿಸಿದನು. ಆದಿಲ್‌ಷಾಹ್‌ನು ರಾಮರಾಜ ಹಾಗೂ ನಿಜಾಮಷಾಹ್‌ನೊಂದಿಗೆ ಸಂಧಾನ ಮಾಡಿಕೊಂಡನು. ಹಾಗೂ ಅಸದ್‌ಖಾನ್ ಲಾರಿಯನ್ನು ಸಶಸ್ತ್ರ ಸೈನ್ಯದೊಂದಿಗೆ ಕುತುಬ್‌ಷಾಹ್‌ನನ್ನು ಎದುರಿಸಲೆಂದು ಕಳುಹಿಸಿದನು. ಈ ಪರಿಸ್ಥಿತಿಯು ನಿರ್ವಾಣದಿಂದ ಕುತುಬ್‌ಷಾಹ್‌ನು ಸಂಕಷ್ಟಕ್ಕೀಡಾದನು. ಆತನು ತನ್ನ ದೂತರನ್ನು ನಿಜಾಮಷಾಹ್‌ನ ಸೇವೆಯಲ್ಲಿ ಕಳುಹಿಸಿ ಈ ಸಂದೇಶವನ್ನು ನೀಡಿದನು.

ನಿಜಾಮಷಾಹ್‌ನಹೆಸರಿನಲ್ಲಿ ಸಂದೇಶ ಹಾಗೂ ಅದಕ್ಕೆ ಉತ್ತರ :

"ನಾನು ನಿಮ್ಮ ಮಾತನ್ನು ನಂಬಿ ಈ ಪ್ರಾಂತ್ಯದತ್ತ ಪ್ರಯಾಣ ಬೆಳೆಸಿದೆನು. ನಿಮ್ಮ ಸದ್ವರ್ತನೆ ಹಾಗೂ ದಯಾಪ್ರವೃತ್ತಿಯನ್ನು ಕಂಡ ನನಗೆ ನಿಮ್ಮ ನಡೆಯು ಆಶ್ಚರ್ಯ ಮೂಡಿಸಿದೆ. ಏಕೆಂದರೆ ತಾವು ನನ್ನ ಜೊತೆ ಚರ್ಚಿಸದೆಯೇ ಮರಳಿ ಅಹ್ಮದ್‌ನಗರಕ್ಕೆ ಹೋಗುತ್ತಿದ್ದೀರಿ", ನಿಜಾಮಷಾಹನು ಇದಕ್ಕುತ್ತರವಾಗಿ ಹೀಗೆಂದನು. "ಸಮಯದ ಬೇಡಿಕೆ ಹಾಗೂ ರಾಜನೀತಿಯ ಭಾಗವಾಗಿ ನಾನು ಆದಿಲ್‌ಷಾಹ್‌ನೊಂದಿಗೆ ಸಂಧಾನ ಮಾಡಿಕೊಂಡಿರುವೆನು. ಅದಕ್ಕಾಗಿ ನಾನು ಮರಳಿ ಹೋಗುತ್ತಿದ್ದೇನೆ. ನಿಮಗೋಸ್ಕರ ನನ್ನ ಈ ನಮ್ರ ಅಭಿಪ್ರಾಯವಿದಾಗಿದೆ ಏನೆಂದರೆ ತಾವು ತಮ್ಮ ಸಂಪೂರ್ಣ ಗಮನವನ್ನು ಕಾಕನಿ ಕೋಟೆಯನ್ನು ರಕ್ಷಿಸುವಲ್ಲಿ ನೀಡಬೇಕು. ಮಳೆಗಾಲದ ನಂತರ ಬರುವೆನು. ಭೊರೊಕಿ ನದಿಯ ಕಡೆಯ ಅಂದರೆ ಗುಲ್‌ಬರ್ಗಾ ಕೋಟೆ, ಆಹತ್ಕರ್ ಹಾಗೂ ಸಾಗರಗಳ ಮೇಲೆ ನಿಮ್ಮ ಆಡಳಿತ ಸ್ಥಾಪಿತವಾಗುವುದು ಹಾಗೂ ಎರಡನೆಯ ಕಡೆಯ ಕೋಟೆಗಳು ಸೋಲಾಪುರ ಹಾಗೂ ನಲದುರ್ಗ ನನ್ನ ವಶಕ್ಕೆ ಬರುವವು".

ಕಾಕನಿ ಕೋಟೆ ಅಸದ್‌ಖಾನ್‌ನ ವಶಕ್ಕೆ :

ಕುತುಬ್‌ಷಾಹ್‌ನು ನಿಜಾಮಷಾಹ್‌ನ ಚತುರ ರಾಜಕೀಯ ನಡೆ ಹಾಗೂ ನೆಪ ಹೂಡುವಿಕೆಯ ಕುರಿತು ಚೆನ್ನಾಗಿ ತಿಳಿದವನಾಗಿದ್ದನು. ಆದರೂ ಸಹ ಆತನು

ನಿಜಾಮುಷಾಹನ ಬಲೆಯಲ್ಲಿ ಸಿಲುಕಿದನು. ಕಾಕನಿ ಕೋಟೆಯ ರಕ್ಷಣೆ ಮಾಡತೊಡಗಿದನು. ಅಸದ್‌ಖಾನ್‌ನು ಕಾಕನಿ ಕೋಟೆಯ ದಿಗ್ಬಂಧನ ಮಾಡಿದನು. ಹಾಗೂ ೩ ತಿಂಗಳ ಅವಧಿಯಲ್ಲಿ ಹೇಗಾದರೂ ಮಾಡಿ ಕೋಟೆಯ ಮೇಲೆ ವಿಜಯ ಸಾಧಿಸಿದನು. ಕೋಟೆಯೊಳಗಿನವರನ್ನು ಕೊಂದ ನಂತರ ಅಸದ್‌ಖಾನ್‌ನು ಆಹತ್ಕರ್‌ದತ್ತ ಪ್ರಯಾಣ ಬೆಳೆಸಿದನು.

ಕುತುಬ್‌ಷಾಹನ ಪರಾರಿ ಹಾಗೂ ಅಸದ್‌ಖಾನ್‌ನೊಂದಿಗೆ ಮುಖಾಮುಖಿ :

ಜೆಮುಷೆದ್ ಕುತುಬ್‌ಷಾಹ್‌ನು ಅಸದ್‌ಖಾನ್‌ನನ್ನು ಎದುರಿಸುವುದು ಉಚಿತವೆಂದು ತಿಳಿಯಲಿಲ್ಲ. ಹಾಗೂ ತನ್ನ ಪ್ರಾಂತ್ಯದತ್ತ ಹೊರಟು ಹೋದನು. ಅಸದ್‌ಖಾನ್‌ನು ಆತನನ್ನು ಹಿಂಬಾಲಿಸಿದನು. ಕೆಲವು ಸಲ ಎರಡೂ ಸೈನ್ಯಗಳ ನಡುವೆ ಯುದ್ಧ ನಡೆಯಿತು. ಪ್ರತಿಸಲವು ಅಸದ್‌ಖಾನ್‌ನು ಎದುರಾಳಿಯ ಮೇಲೆ ಮೇಲುಗೈ ಸಾಧಿಸಿದನು. ಕೊನೆಗೆ ಕುತುಬ್‌ಷಾಹ ಹಾಗೂ ಅಸದ್‌ಖಾನ್ ಈರ್ವರೂ ಎದುರುಬದುರಾದರು. ಇಬ್ಬರು ತಮ್ಮ ತಮ್ಮ ಶೌರ್ಯದ ಪ್ರದರ್ಶನಗೈದರು. ಹಾಗೂ ಒಬ್ಬರು ಇನ್ನೊಬ್ಬರ ಮೇಲೆ ಖಡ್ಗದಿಂದ ಹನ್ನೊಂದು ಹನ್ನೊಂದು ಸಲ ದಾಳಿ ಮಾಡಿದರು. ಕುತುಬ್‌ಷಾಹನ ಮುಖದ ಮೇಲೆ ಒಂದು ಗಾಯವಾಯಿತು. ಆತನ ಮೂಗು ಹಾಗೂ ತುಟಿಗಳು ಗಾಯಗೊಂಡವು. ಈ ಗಾಯಗಳು ಜಮ್‌ಷೇದ್‌ನಿಗೆ ಜೀವನಪೂರ್ತಿ ತೊಂದರೆ ನೀಡಿದವು. ಊಟದ ಸಮಯದಲ್ಲಿ ಅವನಿಗೆ ಬಹಳೇ ಕಷ್ಟ ಅನುಭವಿಸಬೇಕಾಗುತ್ತಿತ್ತು. ಆ ಕಾರಣದಿಂದ ಕುತುಬ್‌ಷಾಹ್‌ನು ಯಾರ ಎದುರಲ್ಲಿಯೂ ಭೋಜನ ಸ್ವೀಕರಿಸುತ್ತಿರಲಿಲ್ಲ.

ಮುಲ್ಲಾ ಮೆಹಮೂದ್‌ನ ಭವಿಷ್ಯ ನುಡಿ :

ಹೇಳಲಾಗುತ್ತಿದೆ ಈ ಪ್ರಯಾಣದಲ್ಲಿ ಕುತುಬ್‌ಷಾಹ್‌ನು ಮೆಹಮೂದ್ ಗಿಲಾನಿಯೊಂದಿಗೆ ಕೇಳಿದನು. "ಏನೆಂದರೆ ಈ ಪ್ರಯಾಣದ ಫಲಿತಾಂಶ ಏನಾಗಬಹುದು" ಮುಲ್ಲಾ ಮೆಹಮೂದನು ಅದೃಷ್ಟ ಚೀಟಿ ಎತ್ತಿದನು. ಹಾಗೂ ಬಾದಷಾಹನ ಸೇವೆಯಲ್ಲಿ ಪ್ರಸ್ತುತ ಪಡಿಸಿದನು. "ಈ ಪ್ರಯಾಣವು ಶುಭಪ್ರದವಾಗುವುದಿಲ್ಲ". ಬಾದಷಾಹ್‌ನು ಈ ಭವಿಷ್ಯ ನುಡಿಯ ಸಾರಾಂಶದ ವಿವರ ಕೇಳಿದನು. ಆಗ ಮೆಹಮೂದ್‌ನು ಹೇಳಿದನು. "ಈ ಪ್ರಯಾಣದ ಪ್ರಾರಂಭದಲ್ಲಿ ತಮಗೆ ಯಶ ಲಭಿಸುವುದು ಆದರೆ ಕೊನೆಯಲ್ಲಿ ವೈರಿಯು ಮೇಲುಗೈ ಸಾಧಿಸುವನು. ಧನಧಾನ್ಯವಸ್ತುಗಳ ನಷ್ಟವಾಗುವಿಕೆಯ ಹೊರತಾಗಿ ತಮ್ಮ ಮೂಗಿನ ಮೇಲೆ ಗಾಯವುಂಟಾಗುವುದು" ಇದನ್ನು ಕೇಳಿ ಜೆಮ್‌ಷೆದ್ ಕುತುಬ್‌ಷಾಹ್‌ನು ಕೋಪೋದ್ರಿಕ್ತನಾದನು. ಹಾಗೂ ಆತನು ಮುಲ್ಲಾ ಮೊಹಮೂದ್‌ನ ಮೂಗನ್ನು ಕೊಯ್ದು ಆತನನ್ನು ಪಟ್ಟಣದಿಂದ ಹೊರಗಟ್ಟಿದನು.

ಪಶ್ಚಾತ್ತಾಪ :

ಯಾವಾಗ ಮುಲ್ಲಾ ಮೆಹಮೂದ್‌ನ ಭವಿಷ್ಯನುಡಿಯು ಶತ ಪ್ರತಿಶತ ನಿಜವಾಯಿತೋ ಆಗ ಕುತುಬ್‌ಷಾಹ್‌ನು ತನ್ನ ವರ್ತನೆಯಿಂದ ಬಹಳ ಪಶ್ಚಾತ್ತಾಪ ಪಟ್ಟನು. ಆತನು ತನ್ನ ಓರ್ವ ಅಮೀರನನ್ನು ಜನೀರಕ್ಕೆ ಕಳುಹಿಸಿದನು. ಏಕೆಂದರೆ ಆತನು ಮುಲ್ಲಾ ಮೆಹಮೂದ್‌ನನ್ನು ಕುತುಬ್‌ಷಾಹೀ ದರ್ಬಾರಕ್ಕೆ ಕರೆ ತರಬೇಕು. ಮುಲ್ಲಾ ಮೆಹಮೂದನು ಉತ್ತರಿಸಿದನು. "ನನಗೆ ಇನ್ನೂವರೆಗೂ ಮತ್ತೊಂದು ಮೂಗು ಸಿಕ್ಕಿಲ್ಲ. ಯಾವಾಗ ಅದು ಲಭಿಸುತ್ತದೋ ಆಗ ನಾನು ಬಾದಷಾಹ್‌ನ ಸೇವೆಯಲ್ಲಿ ಹಾಜರಾಗುವ ಗೌರವವನ್ನು ಪಡೆಯುವೆನು".

ಕಾಯಿಲೆ :

ಅದರ ನಂತರ ಕುತುಬ್‌ಷಾಹ್‌ನು ಆದಿಲ್‌ಷಾಹ್‌ನೊಂದಿಗೆ ಸಂಧಾನ ಮಾಡಿಕೊಂಡನು. ಹಾಗೂ ತೆಲಂಗಾಣದ ಕೆಲವು ಪ್ರಾಂತ್ಯಗಳನ್ನು ವಶಪಡಿಸಿಕೊಂಡನು. ನಂತರ ಕುತುಬ್‌ಷಾಹ್‌ನು ರೋಗಕ್ಕೆ ತುತ್ತಾದನು ಹಾಗೂ ಸುಮಾರು ೨ ವರ್ಷಗಳವರೆಗೆ ಕಾಯಿಲೆಯಿಂದ ಬಳಲುತ್ತಿದ್ದನು. ಈ ಕಾಯಿಲೆಯ ಸಮಯದಲ್ಲಿ ಆತನ ಆರೋಗ್ಯವು ಹದಗೆಟ್ಟಿತ್ತು. ಹಾಗೂ ಪ್ರತಿಯೊಬ್ಬರ ಜೊತೆಯೂ ದುರ್ವರ್ತನೆಯೊಂದಿಗೆ ನಡೆದುಕೊಳ್ಳುತ್ತಿದ್ದನು. ಸಣ್ಣದಾದ ತಪ್ಪಿಗಾಗಿಯೂ ಕೆಲವರನ್ನು ಬಂಧಿಸುತ್ತಿದನು ಮತ್ತು ಕೆಲವರನ್ನು ಕೊಲೆಗೈಯ್ಯುತ್ತಿದ್ದನು.

ದುರ್ವರ್ತನೆ :

ಬಾದಷಾಹ್‌ನ ಈ ದುರ್ವರ್ತನೆಯನ್ನು ಕಂಡು ಕೆಲವು ಅಮೀರರು ಕುತುಬ್‌ಷಾಹ್‌ನನ್ನು ಪದಚ್ಯುತಿಗೊಳಿಸಿ ಆತನ ಸಹೋದರನಾದ ಹೈದರ್‌ಖಾನ್‌ನನ್ನು ಬಾದಷಾಹನನ್ನಾಗಿಸಲು ನಿರ್ಧರಿಸಿದರು. ಜೆಮಷೆದ್‌ನಿಗೆ ಈ ಸುದ್ಧಿ ತಲುಪಿತು. ಆತನ ಈರ್ವರು ಸಹೋದರರು ಇಬ್ರಾಹಿಂ ಹಾಗೂ ಹೈದರ್ ಗೊಲ್ಕೊಂಡಾದಿಂದ ಪರಾರಿಯಾಗಿ ಬೀದರ್‌ಕ್ಕೆ ಹೋಗಿ ತಲುಪಿದರು. ಇಬ್ರಾಹಿಂನು ಇದೇ ಸಮಯದಲ್ಲಿ ಮೃತ್ಯುವನ್ನಪಿದನು. ಹಾಗೂ ಹೈದರ್‌ಖಾನ್ ಬೇಜಾನಗರಕ್ಕೆ ಹೋದನು.

ಅಂತ್ಯ :

ಜಮಷೆದ್ ಕುತುಬ್‌ಷಾಹನ ಕಾಯಿಲೆಯು ದಿನದಿಂದ ದಿನಕ್ಕೆ ಉಲ್ಬಣಗೊಳ್ಳತೊಡಗಿತು. ಹಾಗೂ ಕೊನೆಯಲ್ಲಿ ಆಂತ್ರಿಕ ಜ್ವರಕ್ಕೆ ತುತ್ತಾಗಿ ಹಿಜ್ರಿಶಕೆ ೯೫೭ ರಲ್ಲಿ ಕೊನೆಯುಸಿರೆಳೆದನು. ಈತನ ಆಡಳಿತಾವದಿಯು ಏಳು ವರ್ಷ ಹಾಗೂ ಕೆಲವು ತಿಂಗಳಿನಷ್ಟಿರುವುದು.

■

*

೩. ಇಬ್ರಾಹಿಂ ಕುತುಬ್‌ಷಾಹ್

ಚಾರಿತ್ರ್ಯ :

ಈ ಆಡಳಿತಗಾರನು ಶಿಯಾ ಪಂಥದ ಪ್ರಚಾರ ಹಾಗೂ ಪ್ರಸಾರದಲ್ಲಿ ಬಹಳ ಕ್ರಿಯಾಶೀಲನಾಗಿ ಮಹತ್ವದ ಪಾತ್ರವಹಿಸಿದನು. ಜ್ಞಾನ ಹಾಗೂ ದಕ್ಷ ಆಡಳಿತದಲ್ಲಿ ಅವನಿಗೆ ಅವನೇ ಸಾಟಿಯಾಗಿದ್ದನು. ಆದರೆ ಸಿಡಿಮಿಡಿಗೊಳ್ಳುವ ಸ್ವಭಾವದವನಾಗಿದ್ದನು. ಸಣ್ಣಪುಟ್ಟ ತಪ್ಪುಗಳಿಗೂ ದೊಡ್ಡದಾದ ಶಿಕ್ಷೆಗಳನ್ನು ವಿಧಿಸುತ್ತಿದ್ದನು. ಆತನು ಈ ಆಜ್ಞೆಯನ್ನು ನೀಡಿದ್ದನು. ಏನೆಂದರೆ ಅಪರಾಧಿಗಳ ಕಾಲಿನ ಉಗುರುಗಳನ್ನು ಅವರ ಬೆರಳುಗಳಿಂದ ಕಿತ್ತಿ ತೆಗೆದು ಒಂದು ತಟ್ಟೆಯಲ್ಲಿಟ್ಟು ರಾಜನ ಎದುರಿಗೆ ಪ್ರದರ್ಶಿಸಬೇಕು. ಏಕೆಂದರೆ ಆತನಿಗೆ ಅಪರಾಧಿಗಳನ್ನು ಶಿಕ್ಷಿಸಲಾಗಿದೆ ಎಂದು ನಂಬಿಕೆ ಬರಬೇಕು.

ಕಳ್ಳರ ನಿರ್ನಾಮ :

ಆತನು ಸಕ್ಕರೆಯನ್ನು ಬಹಳೇ ಪ್ರೀತಿಯಿಂದ ಸೇವಿಸುತ್ತಿದ್ದನು. ಹಾಗೂ ಕೆಲವೇಳೆಯಲ್ಲಿ ಸೇವಕರನ್ನು ತನ್ನ ಜೊತೆ ಜೊತೆಗೂಡಿಸಿಕೊಳ್ಳುತ್ತಿದ್ದನು. ತೆಲಂಗಾಣದಲ್ಲಿ ಕಳ್ಳರು ಹಾಗೂ ದರೋಡೆಕೋರರು ಬಹಳ ಸಂಖ್ಯೆಯಲ್ಲಿದ್ದರು. ಇಬ್ರಾಹಿಂ ಕುತುಬ್‌ಷಾಹ್‌ನು ಈ ದುಷ್ಟರನ್ನು ಹೀಗೆ ಶಿಕ್ಷಿಸಿದನು. ಇದರಿಂದಾಗಿ ವ್ಯಾಪಾರಿಗಳ ತಂಡಗಳು ನಿರ್ಭಯವಾಗಿ ರಾತ್ರಿಯಲ್ಲಿಯೂ ಪ್ರವಾಸ ಮಾಡತೊಡಗಿದರು. ಹಾಗೂ ಯಾರಿಗೂ ಸಹ ದರೋಡೆಕೋರರ ಭಯವಿರಲಿಲ್ಲ.

ಕುತುಬ್‌ಷಾಹಿ ವಂಶದ ಒಳ್ಳೆಯ ಹೆಸರು :

ಇಬ್ರಾಹಿಂನ ಆಡಳಿತಾವಧಿಯಲ್ಲಿ ಬಹಳಷ್ಟು ದಕ್ಷ ಹಾಗೂ ರಾಜನೀತಿಜ್ಞ ಅಮೀರರು ಷಾಹೀ ದರ್ಬಾರದಲ್ಲಿ ಸೇರ್ಪಡೆಗೊಂಡರು. ಅವರ ಕಾರಣದಿಂದ ಕುತುಬ್‌ಷಾಹಿ ವಂಶದ ಪ್ರಸಿದ್ಧಿ ಹಾಗೂ ಒಳ್ಳೆಯ ಹೆಸರು ವೃದ್ಧಿಗೊಂಡಿತು. ಯಾವಾಗ ಇಬ್ರಾಹಿಂ ಕುತುಬ್‌ಷಾಹ್‌ನು ಯುವರಾಜನಾಗಿದ್ದನು. ಆ ದಿನಗಳಲ್ಲಿ ತನ್ನ ಸಹೋದರನ

ಭಯದಿಂದ ಬೇಜಾನಗರದಲ್ಲಿ ಆಶ್ರಯ ಪಡೆದಿದ್ದನು. ಬೇಜಾನಗರದ ರಾಜನಾದ ರಾಮರಾಜನು ಹೃತ್ಪೂರ್ವಕವಾಗಿ ಸ್ವಾಗತಿಸಿದನು. ಹಾಗೂ ಓರ್ವ ಹಬಷಿ ಅಮೀರನಾದ ಅಂಬರ್‌ಖಾನ್‌ನ ಜಾಗೀರನ್ನು ಆತನಿಗೆ ನೀಡಿದನು.

ಅಂಬರ್‌ಖಾನ್‌ನ ತಕರಾರು :

ಈ ವಿಷಯು ಸಾಮಾನ್ಯವಾಗಿರಲಿಲ್ಲ. ಏಕೆಂದರೆ ಅಂಬರ್‌ಖಾನ್‌ನು ಮೌನದಿಂದಿರಲು ಸಾಧ್ಯವಿರಲಿಲ್ಲ. ದಖ್ಖನಿನವರ ಸಂಪ್ರದಾಯದಂತೆ ಆತನು ಇಬ್ರಾಹಿಂನ ವಿರುದ್ಧ ಹೋರಾಡಲು ನಿರ್ಧರಿಸಿದನು. ಒಂದು ದಿನ ಇಬ್ರಾಹಿಂನು ರಾಜ ದರ್ಬಾರಕ್ಕೆ ಹೋಗುತ್ತಿದ್ದನು. ಆಗ ಅಂಬರನು ಆತನನ್ನು ರಸ್ತೆಯಲ್ಲಿಯೇ ತಡೆದನು. ಹಾಗೂ ಹೀಗೆಂದನು. “ಬನ್ನಿ, ನಾನು ಹಾಗೂ ನೀವು ಪರಸ್ಪರ ಯುದ್ಧ ಮಾಡೋಣ, ಏಕೆಂದರೆ ಯಾರು ಜೀವಂತ ಉಳಿಯುವನೋ ಆತನೇ ಜಾಗೀರನ ಮಾಲೀಕನಾಗುವನು” ಇಬ್ರಾಹಿಂ ಹೀಗೆಂದನು “ಆಡಳಿತಗಾರರಿಗೆ ಇದರ ಕುರಿತು ಸಂಪೂರ್ಣ ಸ್ವಾತಂತ್ರವಿರುತ್ತದೆ ಏನೆಂದರೆ ಅವರು ತಮ್ಮ ಪ್ರಾಂತ್ಯದ ಭಾಗವನ್ನು ಯಾರಿಗೆ ಬೇಕಾದರೂ ನೀಡಬಹುದು, ಅದಕ್ಕಾಗಿ ಈ ವಿಷಯದಲ್ಲಿ ಜಗಳ, ತಂಟೆಯ ಪ್ರಶ್ನೆ ಎತ್ತುವುದು ಅವಿವೇಕದ ಮಾತಾಗುವುದು”

ಅಂಬರ್‌ನ ಕೊಲೆ :

ಅಂಬರ್‌ಖಾನ್‌ನು ಜ್ಞಾನದ ವಿಷಯದಲ್ಲಿ ಶೂನ್ಯವಾಗಿದ್ದನು. ಆತನು ಇಬ್ರಾಹಿಂ ಕುತುಬ್‌ಷಾಹ್‌ನ ಉಪದೇಶವನ್ನು ಕುರಿತು ಯಾವುದೇ ರೀತಿಯ ಪರಿವೆ ಮಾಡಲಿಲ್ಲ. ಹಾಗೂ ಆತನು ಕೆಟ್ಟದಾಗಿ ವರ್ತಿಸಲು ಪ್ರಾರಂಭಿಸಿದನು. ಇಬ್ರಾಹಿಂನು ಈ ದುರ್ವರ್ತನೆಯನ್ನು ಸಹಿಸದಾದನು ಹಾಗೂ ತನ್ನ ಕುದುರೆಯಿಂದ ಇಳಿದನು ಅಂಬರ್‌ಖಾನ್‌ನ ಜೊತೆಗೆ ಖಡ್ಗದಿಂದ ಹೋರಾಡತೊಡಗಿದನು. ಈ ಸಮಯದಲ್ಲಿ ಇಬ್ರಾಹಿಂನು ವೈರಿಯ ಹೊಟ್ಟೆಯ ಮೇಲೆ ಹೀಗೆ ದಾಳಿ ಮಾಡಿದನು. ಅಂಬರ್ ಅಲ್ಲಿಯೇ ಹತನಾದನು.

ಅಂಬರ್‌ನ ಸಹೋದರನ ಕೊಲೆ :

ಅಂಬರ್‌ನ ಸಹೋದರನು ಯಾವಾಗ ಈ ಪರಿಸ್ಥಿತಿಯನ್ನು ನೋಡಿದನೋ ಪ್ರತಿಕಾರ ತೆಗೆದುಕೊಳ್ಳುವುದಕ್ಕಾಗಿ ಇಬ್ರಾಹಿಂ ಕುತುಬ್‌ಷಾಹ್‌ನೊಂದಿಗೆ ಕತ್ತಿವರಸೆಗೆ ಬಂದನು. ಕುತುಬ್‌ಷಾಹ್‌ನ ಓರ್ವ ಸೇವಕನು ಯಾರು ಯುದ್ಧ ಕಲೆಯಲ್ಲಿ ನಿಷ್ಣಾತನಾಗಿದ್ದನು. ಆತನು ಅಂಬರನ ಸಹೋದರನನ್ನು ಹತ್ಯೆಗೈದನು. ಇಬ್ರಾಹಿಂನು ಅಂಬರ್‌ನ ಸೈನ್ಯದ ಪತಾಕೆಯನ್ನು ಯಾವುದಕ್ಕೆ ದಖ್ಖನ್ನಿನಲ್ಲಿ 'ಬೈರಖ್ ನಿಶಾನ್' ಎನ್ನಲಾಗುತ್ತದೆ ಅದನ್ನು ವಶಪಡಿಸಿಕೊಂಡನು. ಹಾಗೂ ತನ್ನ ವಾಸಸ್ಥಾನಕ್ಕೆ ಮರಳಿ ಬಂದನು.

ಇಬ್ರಾಹಿಂನನ್ನು ಬಾದಶಾಹನನ್ನಾಗಿಸುವ ಯೋಚನೆ :

ಇಬ್ರಾಹಿಂನು ತನ್ನ ಸಹೋದರನು ಜೀವಂತವಿರುವವರೆಗೂ ಬೇಜಾನಗರದಲ್ಲಿಯೇ ಉಳಿದನು. ಜಮಷೆದ್ ಕುತುಬ್‌ಷಾಹ್‌ನು ನಿಧನವಾದ ಮೇಲೆ ಮುಸ್ತಫಾಖಾನ್ ಅರ್ಧಸ್ತಾನಿ, ಸಿಲಾಬತ್‌ಖಾನ್, ತುರ್ಕ ಹಾಗೂ ಇನ್ನಿತರ ಆಡಳಿತಗಾರರು ಜಮ್‌ಷೆದ್‌ನ ಅಪ್ರಾಪ್ತ ವಯಸ್ಕ ಪುತ್ರ ಯಾರ ವಯಸ್ಸು ೨ ವರ್ಷವಿರುವುದೋ ಆತನನ್ನು ಪಟ್ಟದ ಮೇಲೆ ಕೂಡ್ರಿಸಿದರು. ದಖ್ಖನ್ನಿನವರಿಗೆ ಈ ಆಯ್ಕೆಯು ಒಪ್ಪಿಗೆಯಾಗಲಿಲ್ಲ ಹಾಗೂ ಅವರು ನಿರ್ಧರಿಸಿದರು. ಏನೆಂದರೆ ಇಬ್ರಾಹಿಂ ಕುತುಬ್‌ಷಾಹ್‌ನನ್ನು ಬೇಜಾನಗರದಿಂದ ಕರೆಯಿಸಿ ಬಾದಷಾಹ್‌ನನ್ನಾಗಿಸುವುದು. ದಖ್ಖನ್ನಿನವರಿಗೆ ಯಾವಾಗ ಈ ಸುದ್ದಿ ತಿಳಿಯಿತೋ ಆಗ ಅವರು ತಮ್ಮ ದೃಢತೆ ಸಾಬೀತುಪಡಿಸಲು ಸಿದ್ಧರಾಗತೊಡಗಿದರು.

ಗೊಲ್ಕೊಂಡಾಕ್ಕೆ ಇಬ್ರಾಹಿಂನ ಆಗಮನ :

ಮುಸ್ತಫಾಖಾನ್ ಹಾಗೂ ಸಲಾಬತ್‌ಖಾನ್‌ರು ತಮ್ಮ ನಿರ್ಧಾರವನ್ನು ಪೂರ್ಣಗೊಳಿಸಲು ದೃಢಚಿತ್ತರಾದರು. ಅವರು ಇಬ್ರಾಹಿಂನನ್ನು ಕರೆಯಲಿಕ್ಕಾಗಿ ರಾಮರಾಜನಿಗೆ ಒಂದು ಪತ್ರವನ್ನು ಬರೆದರು. ರಾಮರಾಜನು ಇಬ್ರಾಹಿಂನಿಗೆ ಗೊಲ್ಕೊಂಡಾಕ್ಕೆ ಕಳುಹಿಸಿದನು. ಯಾವಾಗ ಇಬ್ರಾಹಿಂನು ಗೊಲ್ಕೊಂಡಾದ ಸರಹದ್ದಿನಲ್ಲಿ ಪ್ರವೇಶಿಸಿದನೋ ಆಗ ಆತನನ್ನು ಎಲ್ಲಕ್ಕಿಂತ ಮೊದಲು ಮುಸ್ತಫಾಖಾನ್, ಅರದಸ್ಥಾನಿಯರು ಅವನ ಸೇವೆಯಲ್ಲಿ ಹಾಜರಾದರು. ಇಬ್ರಾಹಿಂನು ಆತನಿಗೆ 'ಸೇನಾಧಿಪತಿ'ಯ ಹುದ್ದೆಯನ್ನು ನೀಡಿದನು. ಮುಸ್ತಫಾಖಾನ್‌ನು ಓರ್ವ ಹಿಂದೂ ವ್ಯಾಪಾರಿಯಿಂದ ೨ ಲಕ್ಷ ಹವನ್ ಸಾಲವಾಗಿ ತೆಗೆದುಕೊಂಡನು. ಸಾಮ್ರಾಜ್ಯ ಹಾಗೂ ಆಡಳಿತವನ್ನು ವ್ಯವಸ್ಥಿತಗೊಳಿಸತೊಡಗಿದನು.

ಗೊಲ್ಕೊಂಡಾದವರ ಸಂಭ್ರಮ :

ಮುಸ್ತಫಾಖಾನ್‌ನು 'ಮೀರ್ ಜುಮಲಾ' ಆಗಿರುವ ಸುದ್ದಿಯು ಗೋಲ್ಕೊಂಡಾಕ್ಕೆ ತಲುಪಿತೋ ಆಗ ಅಲ್ಲಿರುವವರೆಲ್ಲ ಬಹಳ ಸಂಭ್ರಮ ಪಟ್ಟರು. ಇಬ್ರಾಹಿಂ ಕುತುಬ್‌ಷಾಹ್‌ನ ದೊರೆತನಕ್ಕೆ ಮೌನ ಸಮ್ಮತಿ ನೀಡಿದರು. ಸಿಲಾಬತ್‌ಖಾನ್‌ನು ಸಹ ತನ್ನ ಎರಡು ಮೂರು ಸಾವಿರ ಕತ್ತಿವರಸೆಗಾರರನ್ನು ಜೊತೆಗೆ ತೆಗೆದುಕೊಂಡು ಗೊಲ್ಕೊಂಡಾದಿಂದ ಸರಹದ್ದಿನತ್ತ ಹೊರಟನು. ಇನ್ನಿತರ ಅಮೀರರು ಸಹ ಅಪ್ರಾಪ್ತ ವಯಸ್ಸಿನ ದೊರೆಯಿಂದ ದೂರವಾದರು. ಹಾಗೂ ಇಬ್ರಾಹಿಂಷಾಹನ ಸುತ್ತ ಸೇರಿಕೊಳ್ಳತೊಡಗಿದರು. ಅಲ್ಪ ಸಮಯದಲ್ಲಿಯೇ ಇಬಾಹಿಂನ ಸುತ್ತ ಸುಮಾರು ಆರು ಏಳು ಸಾವಿರ ಸವಾರರು ಸೇರಿದರು. ಹಾಗೂ ಆತನು ಗೊಲ್ಕೊಂಡದತ್ತ ಹೊರಟನು. ಯಾವಾಗ ಆತನು ರಾಜಧಾನಿಯ ಒಳಗೆ ತಲುಪಿದನೋ ಆಗ

ಉಳಿದ ಜನರೂ ಸಹ ಅವನ ಹತ್ತಿರ ಬಂದರು. ಹಾಗೂ ಜೀವರಕ್ಷೆ ಬೇಡಿದರು. ಸಾರಾಂಶದಲ್ಲಿ ಗೊಲ್ಕೊಂಡಾದವರು ಹೃನ್ಮನಗಳಿಂದ ಇಬ್ರಾಹಿಂನ ಜೊತೆಯಾದರು.

ಪಟ್ಟಾಭಿಷೇಕ :

ಇಬ್ರಾಹಿಂ ಕುತುಬ್‌ಷಾಹ್‌ನು ಶುಭ ಸಮಯದಲ್ಲಿ ಸಿಂಹಾಸನಾಧೀಶನಾದನು. ಆತನ ಹಿತೈಷಿಗಳು ಹಾಗೂ ಅಭಿಮಾನಿಗಳು ಆತನ ಮೇಲಿನಿಂದ ದುಡ್ಡು ತೂರಿ ದೃಷ್ಟಿ ತೆಗೆದರು. ಇಬ್ರಾಹಿಂನು ಆ ದಿನ ಹನ್ನೆರಡು ಸಾವಿರ ಚಿನ್ನದ ನಾಣ್ಯಗಳನ್ನು ಬಡವರಲ್ಲಿ, ನಿರಾಶ್ರಿತರಲ್ಲಿ ಹಂಚಿ ಪ್ರಜೆಗಳನ್ನು ಸಂತೋಷಪಡಿಸಿದನು.

ನಿಜಾಮಷಾಹ್‌ನೊಂದಿಗೆ ಒಪ್ಪಂದ :

ಇಬ್ರಾಹಿಂನು ಅಂಬರ್‌ಖಾನ್‌ನ ಸೈನ್ಯದ ಚಿನ್ಹೆ ಹೊತ್ತ ಧ್ವಜವು ತನಗಾಗಿ ಶುಭವೆಂದು ಬಗೆದನು. ಹಾಗೂ ಈ ಕಾರಣದಿಂದ ಆತನು ತನ್ನ ದೊರೆತನದ ಚಿನ್ಹೆಯಾಗಿ ಅದನ್ನು ಸ್ಥಾಪಿಸಿದನು. ಬಾದಷಾಹ್‌ನು ತನ್ನ ಸಹೋದರಿಯನ್ನು ಮುಸ್ತಫಾಖಾನ್‌ನ ಜೊತೆ ವಿವಾಹ ಮಾಡಿದನು.

ಈ ತೆರನಾಗಿ ಮುಸ್ತಫಾ ಕೂಡ ಪ್ರಭಾವಶಾಲಿ ಅಧಿಕಾರಿಯಾದನು. ಇಬ್ರಾಹಿಂ ಕುತುಬ್‌ಷಾಹನು ಹುಸೇನ್ ನಿಜಾಮಷಾಹ್‌ನಿಂದ ಈ ಒಪ್ಪಂದ ಮಾಡಿಕೊಂಡನು. ಏನೆಂದರೆ ಈರ್ವರೂ ಬಾದಷಹರು ತಮ್ಮ ಒಟ್ಟುಗೂಡಿದ ಪ್ರಯತ್ನಗಳಿಂದ ಗುಲ್‌ಬರ್ಗಾದ ಹಾಗೂ ಆಹತ್ಕರ್ ಕೋಟೆಗಳ ಮೇಲೆ ವಿಜಯಧ್ವಜ ಹಾರಿಸುವುದು ಹಾಗೂ ಗುಲ್ಬರ್ಗಾ ಕೋಟೆಯನ್ನು ಕುತುಬ್‌ಷಾಹ್‌ನ ವಶಕ್ಕೊಪಿಸುವುದು ಹಾಗೂ ಆಹತ್ಕರ್ ಕೋಟೆಯನ್ನು ನಿಜಾಮಷಾಹ್‌ನು ತನ್ನ ವಶಕ್ಕೆ ಪಡೆದುಕೊಂಡನು.

ಗುಲ್ಬರ್ಗಾದ ಮುತ್ತಿಗೆ :

ಹಿಜ್ರಿಶಕೆ ೯೬೫ ರಲ್ಲಿ ಈ ಈರ್ವರೂ ಆಡಳಿತಗಾರರು ಅಲಿ ಆದಿಲ್‌ಷಾಹ್‌ನ ಪ್ರಾಂತ್ಯದಲ್ಲಿ ಪ್ರವೇಶಿಸಿದರು. ಹಾಗೂ ಗುಲ್ಬರ್ಗಾ ಕೋಟೆಯನ್ನು ದಿಗ್ಬಂಧನಗೊಳಿಸಿದರು. ಯಾವಾಗ ಕೋಟೆಯನ್ನು ವಶಪಡಿಸಿಕೊಳ್ಳುವ ಸಮಯ ಬಂದಿತೋ ಆಗ ಕುತುಬ್‌ಷಾಹ್‌ನ ಮನಸ್ಸಿನಲ್ಲಿ ಈ ವಿಚಾರ ಬಂದಿತು. ಎಲ್ಲಿ ನಿಜಾಮಷಾಹನು ಬಲಶಾಲಿಯಾಗಿ ತನಗೆ ಸಂಕಟಕ್ಕೆ ಮೂಲವಾಗದಿರಲಿ. ಕುತುಬ್‌ಷಾಹ್‌ನು ತನ್ನ ಎಲ್ಲ ಶಸ್ತ್ರಾಸ್ತ್ರವಸ್ತುಗಳೆಲ್ಲವನ್ನೂ ರಣಭೂಮಿಯಲ್ಲಿ ಬಿಟ್ಟು ಅರ್ಧರಾತ್ರಿಯಲ್ಲಿ ಗೊಲ್ಕೊಂಡಾದತ್ತ ಪ್ರಯಾಣ ಬೆಳೆಸಿದನು. ನಿಜಾಮಷಾಹ್‌ನು ಓರ್ವನೇ ಗುಲ್ಬರ್ಗಾವನ್ನು ಗೆಲ್ಲಲಾರದವನಾಗಿದ್ದನು. ಹೀಗಾಗಿ ಆತನೂ ಸಹ ಅಹ್ಮದ್‌ನಗರದತ್ತ ಹೊರಟು ಹೋದನು. ಈ ಎಲ್ಲ ಘಟನೆಯ ವಿವರಗಳು ನಿಜಾಮಷಾಹೀ ಚರಿತ್ರೆಯಲ್ಲಿ ವಿವರಿಸಲ್ಪಟ್ಟಿವೆ.

ಅಹ್ಮದ್‌ನಗರದ ಮೇಲೆ ಆಕ್ರಮಣ :

ಕೆಲದಿನಗಳ ನಂತರ ಬರೀದ್‌ಷಾಹ್, ರಾಮರಾಜ ಹಾಗೂ ಆದಿಲ್‌ಷಾಹ್‌ನು ಒಗ್ಗಟ್ಟಾಗಿ ನಿಜಾಮುಷಾಹ್‌ನ ಮೇಲೆ ಆಕ್ರಮಣ ಮಾಡಿದರು. ಕುತುಬ್‌ಷಾಹ್‌ನು ಆಕ್ರಮಣಕಾರರ ಬಲ ಹಾಗೂ ಶೌರ್ಯವನ್ನು ನೋಡಿ ಇವರದೇ ಜೊತೆ ನೀಡಿದನು. ಅವರ ಜೊತೆಯಲ್ಲಿ ಅಹ್ಮದ್‌ನಗರಕ್ಕೆ ಹೊರಟನು. ಅಹ್ಮದ್‌ನಗರ ದಿಗ್ಬಂಧನಗೈಯ್ಯಲಾಯಿತು. ಇನ್ನಿತರ ಆಡಳಿತಗಾರರೊಂದಿಗೆ ಕುತುಬ್‌ಷಾಹ್‌ನು ಸಹ ದಿಗ್ಬಂಧನದಲ್ಲಿ ಜೊತೆಯಾದನು. ಯಾವಾಗ ಆ ಕೋಟೆಯನ್ನು ವಶಪಡಿಸಿಕೊಳ್ಳುವ ಸಮಯ ಬಂದಾಗ ಮೊದಲಿನಂತೆಯೇ ಅವಿವೇಕತನ ತೋರಿದನು. ಹಾಗೂ ತನ್ನ ಎಲ್ಲ ಶಸ್ತ್ರಾಸ್ತ್ರಗಳನ್ನು ರಣಭೂಮಿಯಲ್ಲಿಯೇ ಬಿಟ್ಟು ಅಹ್ಮದ್‌ನಗರದಿಂದ ಓಡಿದನು. ಹಾಗೂ ಪ್ರಯಾಣವನ್ನು ಮುಂದುವರೆಸುತ್ತ ಮರಳಿ ಬಂದನು.

ನಿಜಾಮುಷಾಹ್‌ನೊಂದಿಗೆ ಸ್ನೇಹ ಸಂಬಂಧಗಳ ಪುನರ್ ನವೀಕರಣ :

ಕುತುಬ್‌ಷಾಹ್‌ನ ಈ ಕಾರ್ಯವು ರಾಮರಾಜ ಹಾಗೂ ಆದಿಲ್‌ಷಾಹನ ಮುನಿಸಿಗೆ ಕಾರಣವಾಯಿತು. ಹಾಗೂ ಅವರು ಸಂಕಟಪಟ್ಟು ಅಹ್ಮದ್‌ನಗರದಿಂದ ಮರಳಿ ಬಂದರು. ಅದರ ನಂತರ ಕುತುಬ್‌ಷಾಹನು ನಿಜಾಮುಷಾಹನೊಂದಿಗೆ ಪುನಃ ಸ್ನೇಹ ಸಂಬಂಧಗಳನ್ನು ಕುದುರಿಸಿದನು. ಕುತುಬ್‌ಷಾಹನ ಪುತ್ರಿಯಾದ ಬೀಬಿಜಮಾಲ್‌ಳೊಂದಿಗೆ ವಿವಾಹವನ್ನು ಮಾಡಿಕೊಳ್ಳಲು ನಿಜಾಮುಷಾಹನು ಇಚ್ಛೆ ವ್ಯಕ್ತಪಡಿಸಿದನು. ಹಾಗೂ ನಿಜಾಮುಷಾಹನು ಈ ಷರತ್ತಿನ ಮೇಲೆ ಒಪ್ಪಿಕೊಂಡನು. ಏನೆಂದರೆ ಕುತುಬ್‌ಷಾಹನು ಆತನೊಂದಿಗೆ ಸೇರಿ ಆದಿಲ್‌ಷಾಹಿಯ ವಿರುದ್ಧ ಯುದ್ಧ ಮಾಡಬೇಕು. ಹಾಗೂ ಕಲ್ಯಾಣದ ಕೋಟೆಯನ್ನು ಆದಿಲ್‌ಷಾಹಿಯ ವಶದಿಂದ ಕಿತ್ತುಕೊಳ್ಳಬೇಕು. ಹಾಗೂ ಕುತುಬ್‌ಷಾಹ್‌ನು ಈ ಷರತ್ತನ್ನು ಒಪ್ಪಿಕೊಂಡನು.

ಕಲ್ಯಾಣ ಕೋಟೆಯ ಮುತ್ತಿಗೆ :

ಹಿಜ್ರಿಶಕೆ ೯೭೧ ರಲ್ಲಿ ಕುತುಬ್‌ಷಾಹ್‌ನು ಗೋಲ್ಕೊಂಡದಿಂದ ಹಾಗೂ ಹಸನ್ ನಿಜಾಮುಷಾಹನು ಅಹ್ಮದ್‌ನಗರದಿಂದ ಹೊರಟರು. ಕಲ್ಯಾಣದ ಬಳಿ ಈರ್ವರು ಆಡಳಿತಗಾರರು ಪರಸ್ಪರ ಭೇಟಿಯಾದರು. ಹಾಗೂ ವಿವಾಹದ ಸಮಾರಂಭವು ಜರುಗಿತು ವಿವಾಹದ ಎಲ್ಲ ಸಂಪ್ರದಾಯಗಳನ್ನು ಆಚರಿಸಲಾಯಿತು. ಅದರ ನಂತರ ಈರ್ವರೂ ಆಡಳಿತಗಾರರು ಕಲ್ಯಾಣ ಕೋಟೆಯ ದಿಗ್ಬಂಧನ ಮಾಡಿದರು. ರಾಮರಾಜ, ಆದಿಲ್‌ಷಾಹ್, ತುಫಾಲ್‌ಖಾನ್ ಹಾಗೂ ಅಮೀರ್‌ಬರೀದ್‌ನು ಒಗ್ಗಟ್ಟಾಗಿ ಇವರನ್ನು ಎದುರಿಸಿದರು. ಹೇಗೆಂದರೆ ಹುಸೈನ್ ನಿಜಾಮುಷಾಹನ ಚರಿತ್ರೆಯಲ್ಲಿ ಹೇಳಲಾಗಿದೆ. ಕುತುಬ್‌ಷಾಹ್ ಗೋಲ್ಕೊಂಡಾಕ್ಕೆ ಹೊರಟು ಹೋದನು ಹಾಗೂ ಅದರ ನಂತರ ಹುಸೈನ್ ನಿಜಾಮನು ಸಹ ಕೋಟೆಯನ್ನು ಗೆಲ್ಲಲಾಗದೇ ಅಹ್ಮದ್‌ನಗರಕ್ಕೆ ಮರಳಿದನು.

ಆದಿಲ್‌ಷಾಹ್ ಹಾಗೂ ರಾಮರಾಜರು ಅಹ್ಮದ್‌ನಗರದವರೆಗೆ ಹುಸೈನ್ ನಿಜಾಮಷಾಹನನ್ನು ಹಿಂಬಾಲಿಸಿದರು. ಮನಬಂದಂತೆ ವಿನಾಶಗೈದರು. ಆದಿಲ್‌ಷಾಹಿ ಸೈನ್ಯವು ತೆಲಂಗಾಣದ ಓಕಿ ಪಟ್ಟಣದಲ್ಲಿ ಆರು ತಿಂಗಳು ತಂಗಿದ್ದು ಇಲ್ಲಿಯ ಪ್ರಜೆಗಳಿಗೆ ಬಹಳ ಕಷ್ಟ ನಷ್ಟಗಳನ್ನುಂಟು ಮಾಡಿದರು. ಕೊನೆಗೆ ಕುತುಬ್‌ಷಾಹ್‌ನ ಯುಕ್ತಿಯಿಂದಾಗಿ ಸಂಧಾನ ಏರ್ಪಟ್ಟಿತು. ಹಾಗೂ ಎಲ್ಲ ಆಡಳಿತಗಾರರು ತಮ್ಮ ತಮ್ಮ ಪ್ರಾಂತ್ಯಗಳಿಗೆ ಹೊರಟುಹೋದರು.

ಆದಿಲ್‌ಷಾಹ್ ಹಾಗೂ ಇತರರೊಂದಿಗೆ ಯುದ್ಧ :

ಹಿಜ್ರಿ ಶಕೆ ೯೭೨ ರಲ್ಲಿ ಇಬ್ರಾಹಿಂ ಕುತುಬ್‌ಷಾಹ್‌ನು ಆದಿಲ್‌ಷಾಹ್ ಹಾಗೂ ನಿಜಾಮಷಾಹ್‌ರೊಂದಿಗೆ ಯುದ್ಧಗೈದನು. ಈರ್ವರೂ ಆಡಳಿತಗಾರರ ಜೊತೆಗೆ ರಾಮರಾಜನೂ ಇದ್ದನು. ಕುತುಬ್‌ಷಾಹನು ಇನ್ನು ಗೊಲ್ಕೊಂಡಾಕ್ಕೆ ತಲುಪಿರಲೂ ಇಲ್ಲ. ಮುಸ್ತಫಾಖಾನ್ ಅರದಸ್ಥಾನಿಯು ಯಾವಾಗಲೂ ಬಾದಷಾಹ್‌ನಿಂದ ಭಯಪಡುತ್ತಿದ್ದನು. ಹಜ್‌ಗೆ ಹೋಗುವ ನೆಪದಿಂದ ಕುತುಬ್‌ಷಾಹ್‌ನಿಂದ ಬೇರ್ಪಟ್ಟನು. ಹಾಗೂ ಭಿನ್ನ ಹಾದಿ ಹಿಡಿದು ಹೋಗಿ ಆದಿಲ್‌ಷಾಹ್‌ನಿಗೆ ಭೇಟಿಯಾಗಿ ಆತನ ಸೇವಕರಲ್ಲಿ ಸೇರಿದನು.

ನಿಜಾಮಷಾಹೀ ಸಾಮ್ರಾಜ್ಯದಲ್ಲಿ ಗೊಂದಲ :

ಮುರ್ತುಜಾ ನಿಜಾಮಷಾಹ್‌ನ ಆಡಳಿತಾವಧಿಯಲ್ಲಿ ಆತನ ತಾಯಿಯ ಪ್ರಭಾವ ಹಾಗೂ ಅಧಿಕಾರದ ಕಾರಣದಿಂದಾಗಿ ನಿಜಾಮಷಾಹೀ ಸಾಮ್ರಾಜ್ಯವು ಗೊಂದಲದ ಗೂಡಾಯಿತು. ಆದಿಲ್‌ಷಾಹೀ ಸೈನ್ಯಾಧಿಕಾರಿಯಾದ ಕಿಶ್ವರಖಾನ್‌ನು ಈ ಅವಕಾಶವನ್ನು ಸದುಪಯೋಗಪಡಿಸಿಕೊಂಡನು. ಹಾಗೂ ನಿಜಾಮಷಾಹೀ ಸರಹದ್ದನ್ನು ತಲುಪಿ ಧಾರವರ ಕೋಟೆಯನ್ನು ಹಾಗೂ ಹಲವಾರು ನಿಜಾಮಷಾಹಿ ಪರಗಣಗಳನ್ನು ತನ್ನ ವಶಕ್ಕೆ ತೆಗೆದುಕೊಂಡನು. ಮುರ್ತುಜಾ ನಿಜಾಮನು ತನ್ನ ತಾಯಿಯನ್ನು ಬಂಧಿಸಿ ಒಂದು ಕೋಟೆಯಲ್ಲಿಟ್ಟನು ಹಾಗೂ ಮುಲ್ಲಾ ಹಸನ್ ತಬರೇಜಿಯನ್ನು 'ಖಾನೇಖಾನಾನ್'ದ ಬಿರುದು ನೀಡಿ 'ಪೇಶ್ವಾ' ನನ್ನಾಗಿಸಿದನು. ಹಾಗೂ ಆತನಿಗೆ ದಾರ್ವರ್ ಕೋಟೆಯತ್ತ ಕಳುಹಿಸಿದನು.

ದಾರ್ವರ್‌ಕ್ಕೆ ಕುತುಬ್‌ಷಾಹ್‌ನ ಹೊರಡುವಿಕೆ :

ಈ ಘಟನೆಯ ನಂತರ ಮುರ್ತುಜಾ ನಿಜಾಮಷಾಹ್‌ನು ಓರ್ವ ದೂತನನ್ನು ಕಳುಹಿಸಿ ಕುತುಬ್‌ಷಾಹ್‌ನಿಂದಲೂ ಸಹಾಯುವನ್ನು ಬೇಡಿದನು. ಹಾಗೂ ಕುತುಬ್‌ಷಾಹ್‌ನು ಈ ವಿನಂತಿಯನ್ನು ಸ್ವೀಕರಿಸಿದನು. ಹಾಗೂ ತೆಲಂಗಾಣದ ಸೈನ್ಯವನ್ನು ತೆಗೆದುಕೊಂಡು ಬೇಗಬೇಗನೇ ದಾರ್ವರ್ ಕೋಟೆಯತ್ತ ಹೊರಟನು. ನಿಜಾಮಷಾಹ್‌ನು ಕುತುಬ್‌ಷಾಹನು ತಲುಪುವ ಮೊದಲೇ ದಾರವರ್ ಕೋಟೆಯನ್ನು

ವಶಪಡಿಸಿಕೊಂಡು ಕಿಶ್ವರ್‌ಖಾನ್‌ನನ್ನು ಕೊಲೆಗೈದಿದ್ದನು. ಹಾಗೂ ಆದಿಲ್‌ಷಾಹೀ ಪ್ರಾಂತ್ಯದಲ್ಲಿ ಪ್ರವೇಶಿಸಿದನು.

ಕುತುಬ್‌ಷಾಹ್ ಹಾಗೂ ನಿಜಾಮಷಾಹ್‌ರಲ್ಲಿ ಮುನಿಸು :

ನಿಜಾಮಷಾಹ್‌ನೊಂದಿಗೆ ಕುತುಬ್‌ಷಾಹ್‌ನು ಆದಿಲ್‌ಷಾಹೀ ಪ್ರಾಂತ್ಯದೊಳಗೆ ಪ್ರವೇಶಿಸಿದನು. ಈರ್ವರೂ ಆಡಳಿತಗಾರರು ಅಕ್ಕಪಕ್ಕದಲ್ಲಿ ಬಿಡಾರ ಹೂಡಿದರು. ಆಗಲೇ ವಿವರಿಸಲಾಗಿರುವಂತೆ ಅಲಿ ಆದಿಲ್‌ಷಾಹ್‌ನು ಷಾಹ್ ತಾಹೀರ್‌ರ ಪುತ್ರನಾದ ಅಬುಲ್ ಹಸನ್‌ನನ್ನು ನಿಜಾಮಷಾಹನ ಬಳಿಗೆ ಕಳುಹಿಸಿದನು. ಹಾಗೂ ಕುತುಬ್‌ಷಾಹ್‌ನ ಆ ಪತ್ರವು ಯಾವುದರಲ್ಲಿ ಆದಿಲ್‌ಷಾಹನೊಂದಿಗೆ ಸ್ನೇಹಸಂಬಂಧದ ವೃದ್ಧಿಯ ಕುರಿತು ವಿವರಿಸಲಾಗಿತ್ತು. ಅದನ್ನು ಆತನಿಗೆ ತೋರಿಸಿದನು. ಖಾನೇಖಾನಾನ್‌ನು ಈ ಪತ್ರದಲ್ಲಿ ಏನೇನು ಬರೆಯಲ್ಪಟ್ಟಿದೆಯೋ ಅದನ್ನು ಸತ್ಯವೇ ಎಂದು, ಸರಿಯೇ ಎಂದು ತಾಳೆ ನೋಡಿ ದೃಢಪಡಿಸಿದನು. ನಿಜಾಮಷಾಹ್‌ನಿಗೆ ಕುತುಬ್‌ಷಾಹ್‌ನ ಮೇಲೆ ಬಹಳೇ ಕೋಪ ಬಂದಿತು. ಆತನು ಆದೇಶ ನೀಡಿದನು. ಕುತುಬ್‌ಷಾಹೀ ತಂಗುದಾಣವನ್ನು ವಿನಾಶಗೈಯ್ಯಬೇಕು. ಕುತುಬ್‌ಷಾಹ್‌ನಿಗೆ ಯಾವಾಗ ಈ ಸ್ಥಿತಿಯ ಕುರಿತು ತಿಳಿಯಿತೋ ಆಗ ಆತನು ತಕ್ಷಣವೇ ಗೋಲ್ಕೋಂಡಾದತ್ತ ಪ್ರಯಾಣ ಬೆಳೆಸಿದನು.

ಕುತುಬ್‌ಷಾಹನ ಪರಾರಿ ಹಾಗೂ ನಿಜಾಮಷಾಹಿಗಳಿಂದ ಗೊಂದಲ :

ನಿಜಾಮಷಾಹಿ ಸೈನ್ಯವು ಕುತುಬ್‌ಷಾಹಿ ತಂಗುದಾಣವನ್ನು ವಿನಾಶಗೈಯ್ಯಿತು ಹಾಗೂ ತೆಲಂಗಾಣದ ಸರಹದ್ದಿನವರೆಗೆ ಕುತುಬ್‌ಷಾಹ್‌ನನ್ನು ಹಿಂಬಾಲಿಸಲಾಯಿತು. ಹಾಗೂ ಸುಮಾರು ಒಂದು ನೂರಾ ಐವತ್ತು ಕುತುಬ್‌ಷಾಹಿ ಆನೆಗಳನ್ನು ಬಂಧಿಸಲಾಯಿತು. ಹಾದಿಯಲ್ಲಿ ಇಬ್ರಾಹಿಂ ಕುತುಬ್‌ಷಾಹ್‌ನ ಹಿರಿಯ ಪುತ್ರನಾದ ಯುವರಾಜ ಅಬ್ದುಲ್ ಖಾದರ್‌ನು ಯಾರು ಬಹಳೇ ಉತ್ಸಾಹಿ ಹಾಗೂ ಧೈರ್ಯವಂತ ಯುವಕನಾಗಿದ್ದನು ಆತನು ತನ್ನ ತಂದೆಯೊಂದಿಗೆ ಹೀಗೆಂದನು "ನಿಜಾಮಷಾಹಿಗಳು ನಮ್ಮ ಸೈನ್ಯಕ್ಕೆ ಬಹಳ ನಷ್ಟವನ್ನುಂಟು ಮಾಡಿರುವರು. ಅದಕ್ಕಾಗಿ ಒಂದು ವೇಳೆ ಅನುಮತಿ ನೀಡಿದರೆ ನಾನು ಒಂದು ಜಾಗದಲ್ಲಿ ಅಡಗಿ ಕುಳಿತು ಸೈನ್ಯ ಬರುವುದನ್ನು ಕಾಯ್ದು ಹಿಂದಿನಿಂದ ಆಶ್ಚರ್ಯಚಕಿತವಾಗುವ ರೀತಿಯಲ್ಲಿ ದಾಳಿ ಮಾಡುವೆನು.".

ಯುವರಾಜನಾದ ಅಬ್ದುಲ್ ಖಾದರ್‌ನ ಕೊಲೆ :

ಕುತುಬ್‌ಷಾಹ್‌ನು ತನ್ನ ಪುತ್ರನ ಮಾತನ್ನು ಅಪಾರ್ಥವಾಗಿ ಗ್ರಹಿಸಿದನು. ಹಾಗೂ ಹೀಗೆ ತಿಳಿದನು. ಏನೆಂದರೆ ಅಬ್ದುಲ್ ಖಾದರ್‌ನು ಆಡಳಿತ ಸೂತ್ರವನ್ನು ತನ್ನ ಕೈಗೆ ತೆಗೆದುಕೊಳ್ಳಬಯಸುತ್ತಾನೆ. ಕುತುಬ್‌ಷಾಹ್‌ನು ಹೀಗೆ ವಿಚಾರ ಮಾಡಿದನು. ಹಲವಾರು ಅತಿರಥ ಮಹಾರಥರಾದ ಕುತುಬ್‌ಷಾಹೀ ಅಮೀರರು ಸಹ ಅಬ್ದುಲ್

ಖಾದರ್‌ನ ಜೊತೆ ಸಂಚಿನಲ್ಲಿ ಪಾಲುಗಾರರಾಗಿದ್ದಾರೆ. ಹಾದಿಯಲ್ಲಂತೂ ಕುತುಬ್‌ಷಾಹನು ಪುತ್ರನಿಗೆ ಏನೊಂದನ್ನು ಉತ್ತರಿಸಲಿಲ್ಲ. ಆದರೆ ಗೋಲ್ಕೊಂಡಾಕ್ಕೆ ತಲುಪಿ ಆತನನ್ನು ಬಂಧಿಸಿದನು. ಹಾಗೂ ಅನಂತರ ವಿಷಪ್ರಾಶನ ಮಾಡಿಸಿ ಹತ್ಯೆಗೈದನು.

ಬರಾರ್‌ದ ಮೇಲೆ ಚಂಗೇಜ್‌ಖಾನ್‌ನ ಕಣ್ಣು :

ಇದೇ ಸಮಯದಲ್ಲಿ ಚಂಗೇಜ್‌ಖಾನ್‌ನು ಯುಕ್ತಿವಂತನಾದ ಅಮೀರ್‌ನಾಗಿದ್ದನು. ನಿಜಾಮಷಾಹ್‌ನ ಪೇಶ್ವಾನಾಗಿ ನೇಮಿಸಲ್ಪಟ್ಟನು. ಹಾಗೂ ಆತನು ಬರಾರ್‌ವನ್ನುಗೆದ್ದು ಕೊಳ್ಳುವ ನಿರ್ಧಾರ ಮಾಡಿದನು. ಕುತುಬ್‌ಷಾಹ್‌ನು ಆದಿಲ್‌ಷಾಹನೊಂದಿಗೆ ಭೇಟಿ ಮಾಡಿ ಹೀಗೆ ನಿಶ್ಚಯಿಸಿದನು. ಆದಿಲ್‌ಷಾಹ್‌ನ ಮುಖಾಂತರ ತುಘಾಲ್‌ಖಾನ್‌ನಿಗೆ ಸಹಾಯ ಮಾಡುವುದು. ಚಂಗೇಜ್‌ಖಾನ್‌ನಿಗೆ ಈ ಸುದ್ಧಿ ತಲುಪಿತು. ಯಾವಾಗ ಕುತುಬ್‌ಷಾಹ್ ಹಾಗೂ ಆದಿಲ್‌ಷಾಹ್‌ರು ತಮ್ಮ ತಮ್ಮ ಪ್ರಾಂತ್ಯಗಳಿಂದ ಹೊರಟರು ಆಗ ಚಂಗೇಜ್‌ಖಾನ್‌ನು ನಿಜಾಮಷಾಹ್‌ನನ್ನು ಜೊತೆಗೆ ತೆಗೆದುಕೊಂಡು ಆದಿಲ್‌ಷಾಹೀ ಪ್ರಾಂತ್ಯಕ್ಕೆ ಬಂದು ತಲುಪಿದನು ಹಾಗೂ ಬಾದಷಾಹ್‌ನಿಗೆ ಈ ಸಂದೇಶ ನೀಡಿದನು.

ನಿಜಾಮಷಾಹ್ ಹಾಗೂ ಆದಿಲ್‌ಷಾಹ್‌ರ ನಡುವೆ ಒಪ್ಪಂದ :

ಕುತುಬ್‌ಷಾಹ್ ಹಾಗೂ ತುಘಾಲ್‌ಖಾನ್‌ನಿಗೆ ಸಹಾಯ ಹಸ್ತ ಚಾಚುವುದು ನಿಮಗೆ ಯಾವ ಕಾರಣಕ್ಕೂ ಶೋಭೆ ತರುವುದಿಲ್ಲ. ನಿಜಾಮಷಾಹ್‌ನ ಸ್ನೇಹವನ್ನು ಹೀಗೆ ಕಡಿಮೆ ಮಾಡಿಕೊಳ್ಳುವುದು ನಿಮಗೆ ಹಾನಿಕರವಾದುದು. ಆದಿಲ್‌ಷಾಹನು ಷಾ ಅಬುಲ್‌ಹಸನ್‌ನ ಅಭಿಪ್ರಾಯವನ್ನು ಅನುಸರಿಸಿ ಕುತುಬ್‌ಷಾಹನ ಬದಲಾಗಿ ನಿಜಾಮಷಾಹನೊಂದಿಗೆ ಭೇಟಿ ಮಾಡಿದನು. ಈ ಈರ್ವರೂ ಆಡಳಿತಗಾರರು ಪರಸ್ಪರ ಹೀಗೆ ನಿಶ್ಚಯಿಸಿದರು. ಏನೆಂದರೆ ನಿಜಾಮಷಾಹ್ ಬರಾರ್ ಹಾಗೂ ಬೀದರ್‌ನ್ನು ಗೆದ್ದುಕೊಳ್ಳಬೇಕು. ಹಾಗೂ ಆದಿಲ್‌ಷಾಹ್‌ನು ಕರ್ನಾಟಕದ ಇಷ್ಟು ಭಾಗ ತನ್ನ ವಶಕ್ಕೆ ತೆಗೆದುಕೊಳ್ಳಬೇಕು. ಯಾವುದರ ತೆರಿಗೆಯು ಬೀದರ್ ಹಾಗೂ ಬರಾರ್‌ದ ತೆರಿಗೆಗೆ ಸಮವಾಗಿರಬೇಕು. ಹಾಗೂ ಕುತುಬ್‌ಷಾಹ್‌ನನ್ನು ಹೊರಗಿಡಬೇಕು.

ಕುತುಬ್‌ಷಾಹನು ತನ್ನ ಸೈನ್ಯದ ಒಂದು ತಂಡವನ್ನು ತುಘಾಲ್‌ಖಾನ್‌ನ ಸಹಾಯಕ್ಕಾಗಿ ಕಳುಹಿಸಿದನು. ನಿಜಾಮಷಾಹ್‌ನು ಬರಾರ್‌ವನ್ನು ಗೆದ್ದುಕೊಂಡನು ಹಾಗೂ ಬೀದರ್‌ದ ಕೋಟೆಯ ದಿಗ್ಬಂಧನಕ್ಕೆಂದು ಹೋದನು. ಈ ಪರಿಸ್ಥಿತಿಯನ್ನು ಮನಗಂಡು ಕುತುಬ್‌ಷಾಹ್‌ನಿಗೆ ತನ್ನ ಅಧೋಗತಿಯ ಅಂದಾಜಾಯಿತು. ಆತನು ತನ್ನ ಮೀರೇ ಜುಮ್ಲಾ ಮಿರ್ಜಾ ಅಸ್ಫಹಾನಿಯನ್ನು ನಿಜಾಮಷಾಹ್‌ನ ಸೇವೆಯಲ್ಲಿ ಕಳುಹಿಸಿದನು. ಹಾಗೂ ಹೀಗೆ ಸಂಚನ್ನು ರೂಪಿಸಿದನು. ಚೆಂಗೇಜ್‌ಖಾನ್‌ನು ನಿಜಾಮಷಾಹೀ ಆಡಳಿತದಿಂದ ಬೇರ್ಪಟ್ಟನು.

ನಿಧನ :

ಹಿಜ್ರಿಶಕೆ ೯೮೮ ರಲ್ಲಿ ಅಲಿಆದಿಲ್‌ನ ಹತ್ಯೆಯ ಘಟನೆ ಜರುಗಿತು ಹಾಗೂ ಮುರ್ತುಜಾ ನಿಜಾಮಷಾಹನು ಆದಿಲ್‌ಷಾಹೀ ಪ್ರಾಂತ್ಯವನ್ನು ವಶಪಡಿಸಿಕೊಳ್ಳಲು ನಿರ್ಧರಿಸಿದನು. ಕುತುಬ್‌ಷಾಹ್‌ನು ಈ ವಿಷಯದಲ್ಲಿ ನಿಜಾಮಷಾಹನ ಸಹಾಯಕ್ಕಾಗಿ ಕೆಲವು ಅಮೀರರನ್ನು ಕಳುಹಿಸಿದನು. ಇನ್ನೂ ಈ ಸಾಹಸ ಕಾರ್ಯವು ತನ್ನ ಗುರಿಯನ್ನು ತಲುಪಿರಲಿಲ್ಲ. ಆಗಲೇ ಇಬ್ರಾಹಿಮ್ ಕುತುಬ್‌ಷಾಹ್‌ನು ಮರಣ ಹೊಂದಿದನು. ಈ ಘಟನೆಯು ಹಿಜ್ರಿಶಕೆ ೯೮೯ ರಲ್ಲಿ ಜರುಗಿತು.

ಇಬ್ರಾಹಿಂ ಕುತುಬ್‌ಷಾಹ್‌ನು ಮೂವತ್ತೆರಡು ವರ್ಷ ಹಾಗೂ ಕೆಲವು ತಿಂಗಳುಗಳವರೆಗೆ ಆಡಳಿತವನ್ನು ನಡೆಸಿದನು.

■

*

೪. ಮೊಹಮ್ಮದ್ ಕುಲಿ ಕುತುಬ್‌ಷಾಹ್

ಪಟ್ಟಾಭಿಷೇಕ :

ಯಾವಾಗ ಇಬ್ರಾಹಿಂ ಕುತುಬ್‌ಷಾಹ್‌ನ ನಿಧನವಾಯಿತೋ ಆಗ ಆತನ ಮೂವರು ಪುತ್ರರು ಜೀವಂತವಿದ್ದರು. ಅವರ ಹೆಸರುಗಳು ಹೀಗಿವೆ. – ಮೊಹಮ್ಮದ್ ಕುಲಿ, ಖುದಾಬಂದಾ ಹಾಗೂ ಸುಲೈಮಾನ್ ಅಲಿ – ಈ ಮೂವರಲ್ಲಿ ಮೊಹಮ್ಮದ್ ಕುಲಿಯು ಎಲ್ಲರಿಗಿಂತ ಹಿರಿಯವನಾಗಿದ್ದನು. ಆದ ಕಾರಣ ಆತನು ತಂದೆಯ ಸ್ಥಾನವನ್ನು ಅಲಂಕರಿಸಿದನು. ಮೊಹಮ್ಮದ್ ಕುಲಿಯು ಹನ್ನೆರಡು ವರ್ಷದ ವಯಸ್ಸಿನಲ್ಲಿ ಸಿಂಹಾಸನಾಧೀಶನಾದನು. ಷಾಮಿರ್ಜಾ ಅಸ್ಫಹಾನಿಯ ಪುತ್ರಿಯೊಂದಿಗೆ ವಿವಾಹ ಮಾಡಿಕೊಂಡನು.

ನಿಜಾಮಷಾಹನೊಂದಿಗೆ ಸ್ನೇಹ :

ಷಾ ಮಿರ್ಜಾ ಅಸ್ಪಹಾನಿಯು ಇಬ್ರಾಹಿಂ ಕುತುಬ್‌ಷಾಹಿಯ ಆಡಳಿತಾವಧಿಯಲ್ಲಿ 'ಮೀರ್ ಜಮಲಗಿ' ಯ ಹುದ್ದೆಯನ್ನಲಂಕರಿಸಿದ್ದನು. ಮೊಹಮ್ಮದ ಕುಲಿಯು ಷಾ ಮಿರ್ಜಾನ ಸಲಹೆ ಹಾಗೂ ಉಪದೇಶವನ್ನನುಸರಿಸುತ್ತಾ ನಿಜಾಮಷಾಹೀ ವಂಶದೊಂದಿಗೆ ಸ್ನೇಹ ಸಂಬಂಧವನ್ನು ಬೆಳೆಸಿದನು ಹಾಗೂ ಅಹ್ಮದ್‌ನಗರದ ಸೈನ್ಯಾಧಿಕಾರಿಯಾದ ಸೈಯ್ಯದ್ ಮುರ್ತುಜಾ ಸಬ್ಜವಾರಿಯ ಸಹಾಯಕ್ಕಾಗಿ ಆದಿಲ್‌ಷಾಹಿ ಪ್ರಾಂತ್ಯದ ಕಡೆಗೆ ಹೊರಟನು. ಸೋಲಾಪುರ, ಷಹಾದುರ್ಗದ ಕೋಟೆಗಳನ್ನು ಗೆದ್ದು ನಿಜಾಮಷಾಹೀ ಅಮೀರರ ವಶಕ್ಕೆ ಒಪ್ಪಿಸಿದನು.

ಷಹದುರ್ಗದ ಕೋಟೆಯ ಮುತ್ತಿಗೆ :

ಇದರ ನಂತರ ನಿಜಾಮಷಾಹಿಯ ಸಹಾಯದಿಂದ ಮೊಹಮ್ಮದ್ ಕುಲಿಯು ಮುಂದುವರಿದನು. ಗುಲ್ಬರ್ಗಾ ಹಾಗೂ ಆಹತ್ಕರ್ ಕೋಟೆಗಳನ್ನು ತನ್ನ ವಶಕ್ಕೆ ತೆಗೆದುಕೊಳ್ಳಲು ಮುನ್ನುಗ್ಗಿದನು ಕುತುಬ್‌ಷಾಹ್‌ನು ಪ್ರಯಾಣವನ್ನು ಮುಂದುವರೆಸುತ್ತ

ಸೈಯ್ಯದ್ ಮುರ್ತುಜಾನೊಂದಿಗೆ ಸೇರಿಕೊಂಡನು ಬಿಜಾಪುರವು ಈ ದಿನಗಳಲ್ಲಿ ಗೊಂದಲ ಹಾಗೂ ಅಂತರ್ಯುದ್ಧಕ್ಕೆ ತುತ್ತಾಗಿತ್ತು ಮೊಹಮ್ಮದ್ ಕುಲಿಯು ನಿಜಾಮಷಾಹೀ ಅಮೀರರ ಸಹಾಯದಿಂದ ಷಹದುರ್ಗದ ಕೋಟೆಯನ್ನು ದಿಗ್ಬಂಧನಗೊಳಿಸಿದನು.

ಮೊಹಮ್ಮದ್ ಆಖಾ ತುರ್ಕಮಾನ್‌ನ ಶೌರ್ಯ :

ಈ ಕೋಟೆಯ ಥಾನೇದಾರ ಮೊಹಮ್ಮದ್ ಆಖಾ ತುರ್ಕಮಾನ್‌ನಾಗಿದ್ದನು ಆತನು ವೈರಿಯನ್ನು ದಮನಗೊಳಿಸಲು ಪ್ರಯತ್ನಪಟ್ಟನು. ಶೌರ್ಯ ಹಾಗೂ ಧೈರ್ಯದ ಅನುಪಮ ಪ್ರದರ್ಶನ ನೀಡಿದನು ಕುತುಬ್‌ಷಾಹೀ ಹಾಗೂ ನಿಜಾಮಷಾಹಿ ಸೈನ್ಯದ ಬಹಳಷ್ಟು ಸೈನಿಕರನ್ನು ತೋಪು ಹಾಗೂ ತುಪಾಕಿಗಳಿಂದ ಹತ್ಯೆಗೈದನು ನಿಜಾಮಷಾಹಿ ಹಾಗೂ ಕುತುಬ್‌ಷಾಹೀಗಳು ಯಾವಾಗ ಈ ಪರಿಸ್ಥಿತಿಯನ್ನು ಗಮನಿಸಿದರೋ ಆಗ ಅವರು ಪರಸ್ಪರ ಚರ್ಚೆ ನಡೆಸಿ ಈ ನಿರ್ಧಾರಕ್ಕೆ ಬಂದರು. ಏನೆಂದರೆ ಷಹದುರ್ಗದ ದಿಗ್ಬಂಧನವನ್ನು ಬಿಟ್ಟು ಬಿಜಾಪುರದತ್ತ ಪ್ರಯಾಣ ಬೆಳೆಸಬೇಕು.

ಬಿಜಾಪುರದ ಮುತ್ತಿಗೆ :

ಅದರ ನಂತರ ಉಪರೋಕ್ತ ಎರಡೂ ಸೈನ್ಯಗಳು ಬಿಜಾಪುರಕ್ಕೆ ತಲುಪಿದವು ಅವರು ಪಟ್ಟಣದ ದಿಗ್ಬಂಧನ ಮಾಡಿದರು ಹಾಗೂ ಪಟ್ಟಣದ ಮೇಲೆ ವಿಜಯ ಸಾಧಿಸಲು ಬಹಳ ಪ್ರಯತ್ನ ಪಡಲಾಯಿತು. ಆದರೆ ಯಾವುದೇ ಫಲಿತಾಂಶವು ದೊರೆಯಲಿಲ್ಲ. ಹಾಗೂ ದಿಗ್ಬಂಧನವು ಸುದೀರ್ಘ ಅವಧಿಯನ್ನು ಹೊಂದಿತು. ಕುತುಬ್‌ಷಾಹ್‌ನು ದಿಗ್ಬಂಧನದ ದೀರ್ಘಾವಧಿಯಿಂದ ಸಂಕಷ್ಟಕ್ಕೀಡಾದನು. ಕುತುಬ್‌ಷಾಹಿ ಅಮೀರರು ಬಾದಷಾಹನ ಈ ತೊಂದರೆಯನ್ನು ನೋಡಿ ಅವರು ತಕ್ಷಣ ಬಾದಷಾಹನೊಂದಿಗೆ ಹೀಗೆಂದರು. ಹಳೆಯ ಕಾಲದಿಂದ ದಖ್ಖನ್ನಿನ ಸುಲ್ತಾನರಲ್ಲಿ ಈ ಸಂಪ್ರದಾಯವು ನಡೆದು ಬಂದಿದೆ ಯಾವಾಗ ಓರ್ವ ಬಾದಷಾಹನು ವೈರಿಯ ಮೇಲೆ ದಾಳಿ ಮಾಡುತ್ತಾನೋ ಆಗ ಅವನಿಗೆ ಬೇರೆಯ ಬಾದಷಾಹ್‌ನ ಸಹಾಯ ಬೇಕಾಗುತ್ತದೆ. ಆಗ ಆತನು ಯಾವ ಬಾದಷಾಹನಿಂದ ಸಹಾಯ ಯಾಚಿಸಲಾಗುತ್ತದೆಯೋ ಸ್ವತಃ ಪ್ರಯಾಣದ ಪ್ರಯಾಸವನ್ನು ಸಹಿಸಿ ಸಹಾಯಕ್ಕೆ ಆಗಮಿಸುವನು ನಿಜಾಮಷಾಹೀ ಕುತುಬ್‌ಷಾಹಿ, ಆದಿಲ್‌ಷಾಹಿ ವಂಶಸ್ಥರು ಯಾವಾಗಲೂ ಈ ಸಂಪ್ರದಾಯವನ್ನು ಅನುಸರಿಸಿದ್ದಾರೆ. ಇದು ಖಾವಂದ್‌ರ ಘನತೆಗೌರವಕ್ಕೆ ಶೋಭೆ ತರುವಂತದ್ದಿರಲಿಲ್ಲ. ಏನೆಂದರೆ ತಾವು ಷಾಮಿರ್ಜಾನ ಹೇಳಿಕೆಯ ಮೇರೆಗೆ ನಿಜಾಮಷಾಹೀ ಅಮೀರರ ಸಲುವಾಗಿ ಪ್ರಯಾಣದ ಪ್ರಯಾಸವನ್ನು ಸಹಿಸಿದ್ದೀರಿ.

ಗುಲ್ಬರ್ಗಾ ವಶಪಡಿಸಿಕೊಳ್ಳುವ ಇಚ್ಛೆ :

ಅಮೀರರ ಈ ಮಾತುಕತೆಯಿಂದ ಬಾದಶಾಹ್‌ನು ಬಹಳೇ ಪ್ರಭಾವಿತನಾದನು, ಹಾಗೂ ಆತನು ಗೊಲ್ಕೊಂಡಾಕ್ಕೆ ಮರಳಿ ಹೋಗುವ ದೃಢನಿರ್ಧಾರ ಮಾಡಿದನು. ಸೈಯ್ಯದ್ ಮುರ್ತುಜಾನಿಗೆ ಯಾವಾಗ ಕುತುಬ್‌ಶಾಹ್‌ನ ಈ ನಿರ್ಧಾರದ ಸುದ್ಧಿ ತಿಳಿಯಿತೋ ಆಗ ಆತನೇ ಮೊದಲು ಇದರ ಕುರಿತು ಮಾತನಾಡಿದನು ಹಾಗೂ ಬಾದಷಾಹನಿಂದ ಹೀಗೆಂದನು. "ಒಳಿತು ಇದರಲ್ಲಿಯೇ ಇದೆ ನಾವೆಲ್ಲರೂ ನಮ್ಮ ನಮ್ಮ ಪ್ರಾಂತ್ಯಗಳಿಗೆ ಮರಳಿ ಹೋಗೋಣ ನಾನು ಆದಿಲ್‌ಷಾಹ್‌ನ ಸರಹದ್ದಿನಲ್ಲಿರುವ ಪರಗಣಗಳನ್ನು ನನ್ನ ವಶಕ್ಕೆ ತೆಗೆದುಕೊಳ್ಳುವೆನು ಹಾಗೂ ತಾವು ಹಸನಾಬಾದ್ ಗುಲ್ಬರ್ಗಾವನ್ನು ವಶಪಡಿಸಿಕೊಳ್ಳಿರಿ" ಕುತುಬ್‌ಷಾಹ್‌ನು ಸಹ ಇದನ್ನೇ ಬಯಸುತ್ತಿದ್ದನು. ಅದಕ್ಕಾಗಿ ಆತನು ಮುರ್ತುಜಾನ ಜೊತೆ ಬಿಜಾಪುರದ ಸುತ್ತಲಿಂದ ಹೊರಟನು. ಹಾಗೂ ಗುಲ್ಬರ್ಗಾದ ಬಳಿ ತಲುಪಿ ಸೈಯ್ಯದ್ ಅಮೀರೇ ರಸಲ್ ಆಸ್ತರಾಬಾದಿ ಮುಸ್ತಫಾಖಾನ್ ಎಂಬ ಹೆಸರಿನಿಂದ ಪ್ರಸಿದ್ಧನಾಗಿರುವನು. ಆತನನ್ನು ಸೇನಾಧಿಪತಿಯನ್ನಾಗಿ ನೇಮಿಸಿದನು. ಹಾಗೂ ಆತನ ಜೊತೆ ಏಳು ಸಾವಿರ ಸವಾರರು ಹಾಗೂ ಅಸಂಖ್ಯ ಆನೆಗಳ ಜೊತೆ ಅದೇ ಸ್ಥಳದಲ್ಲಿ ಗುಲ್ಬರ್ಗಾವನ್ನು ವಶಪಡಿಸಿಕೊಳ್ಳಬೇಕೆಂದು ಬಿಟ್ಟನು ಹಾಗೂ ತನ್ನ ಸ್ನೇಹಿತರೊಂದಿಗೆ ಗೊಲ್ಕೊಂಡಾಕ್ಕೆ ತಲುಪಿದನು.

ಷಾಮಿರ್ಜಾನ ಬಂಧನ ಹಾಗೂ ನಿಧನ :

ಕುತುಬ್‌ಷಾಹ್‌ನು ಷಾಮಿರ್ಜಾನಿಂದ ಬಹಳೇ ಮುನಿಸಿಕೊಂಡಿದ್ದನು ಹಾಗೂ ಆತನನ್ನು ಬಂಧಿಸಿದನು. ಕೆಲವು ದಿನಗಳ ನಂತರ ಬಾದಷಾಹ್‌ನು ಆತನನ್ನು ಕ್ಷಮಿಸಿದನು. ಹಾಗೂ ಈ ಆಜ್ಞೆಯನ್ನು ನೀಡಿದನು ಷಾಮಿರ್ಜಾನನ್ನು ಹಡಗಿನ ಮುಖಾತರ ಆಸ್ಫಹಾನ್‌ಕ್ಕೆ ಕಳುಹಿಸಬೇಕು ತಕ್ಷಣವೇ ಷಾಹೀ ಆಜ್ಞೆಯನ್ನು ಪಾಲಿಸಲಾಯಿತು. ಆದರೆ ಷಾಮಿರ್ಜಾನ ವಿಧಿಯಲ್ಲಿ ಅಸ್ಫಹಾನಕ್ಕೆ ತಲುಪುವುದು ಇರಲಿಲ್ಲ ಆತನು ಮಾರ್ಗಮಧ್ಯದಲ್ಲಿಯೇ ಸಾವಿಗೀಡಾದನು.

ಮುಸ್ತಫಾಖಾನ್ ಹಾಗೂ ದಿಲಾವರ್‌ಖಾನ್ ಹಬಷಿಯ ನಡುವೆ ಯುದ್ಧ :

ಮುಸ್ತಫಾಖಾನ್‌ನು ಹಸನಾಬಾದ್ ಗುಲ್ಬರ್ಗಾದ ಸಮೀಪ ತಂಗಿದನು. ಹಾಗೂ ಇಲ್ಲಿಯ ಹಲವಾರು ಪರಗಣಗಳ ಮೇಲೆ ಮೇಲುಗೈ ಸಾಧಿಸಿದನು. ಯಾವಾಗ ಈ ಸುದ್ಧಿಯು ಬಿಜಾಪುರಕ್ಕೆ ತಲುಪಿತೋ ಆಗ ದಿಲಾವರ್‌ಖಾನ್ ಹಬಷಿಯು ಒಂದು ಬೃಹತ್ ಸೈನ್ಯವನ್ನು ತೆಗೆದುಕೊಂಡು ಮುಸ್ತಫಾಖಾನ್‌ನನ್ನು ಎದುರಿಸಲು ಬಂದನು. ಈರ್ವರಲ್ಲೂ ಭೀಕರ ರೂಪದ ಕಾಳಗ ನಡೆಯಿತು. ದಿಲಾವರ್‌ಖಾನ್‌ನು ಮೇಲುಗೈ ಸಾಧಿಸಿದನು. ಹಾಗೂ ಮುಸ್ತಫಾಖಾನ್‌ನು ಬಳಲಿ ಬೆಂಡಾಗಿ ಅಲ್ಲಿಂದ ಕಾಲುಕಿತ್ತನು

ಬಹಳೇ ತೊಂದರೆಯನ್ನು ಅನುಭವಿಸುತ್ತಾ ತೆಲಂಗಾಣಕ್ಕೆ ತಲುಪಿದನು. ಆದಿಲ್‌ಷಾಹಿಗಳು ಕುತುಬ್‌ಷಾಹಿಗಳ ಸುಮಾರು ಒಂದು ನೂರಾ ಮೂವತ್ತು ಆನೆಗಳು ಹಾಗೂ ಬಹಳಷ್ಟು ವಸ್ತುಗಳನ್ನು ತಮ್ಮ ವಶಕ್ಕೆ ಪಡೆದುಕೊಂಡರು ಈ ಯುದ್ಧದ ನಂತರ ಆದಿಲ್‌ಷಾಹಿ ಹಾಗೂ ಕುತುಬ್‌ಷಾಹಿ ವಂಶದವರಲ್ಲಿ ಸಂಧಾನ ಏರ್ಪಟ್ಟಿತು. ಹಾಗೂ ಇಂದಿಗೆ ಯುದ್ಧ ಜರುಗಿ ಇಪ್ಪತ್ತೆಂಟು ವರ್ಷಗಳು ಗತಿಸಿವೆ. ಆದರೂ ಇಂದಿಗೂ ಈ ಎರಡೂ ವಂಶದವರಲ್ಲಿ ಅದೇ ಸ್ನೇಹ ಸಂಬಂಧದ ಉತ್ಸಾಹವಿದೆ ಹೇಗೆ ಮೊದಲು ಇತ್ತು.

ಕುತುಬ್‌ಷಾಹ್‌ನ ಸಹೋದರಿಯ ಮದುವೆ :

ಖ್ವಾಜಾ ಅಲಿ ಶಿರಾಜಿಯನ್ನು ಯಾರನ್ನು ಮಲಿಕುತ್ತಜ್ಜಾರ್ ಎಂದು ಕರೆಯಲಾಗುತ್ತಿತ್ತೊ ಬಿಜಾಪುರದ ಅಮೀರರ ಒಂದು ತಂಡದೊಂದಿಗೆ ಗೋಲ್ಕೊಂಡಾಕ್ಕೆ ಬಂದನು ಹಾಗೂ ಆತನು ಕುತುಬ್‌ಷಾಹ್‌ನ ಸಹೋದರಿಯ ಜೊತೆ ಇಬ್ರಾಹಿಂ ಆದಿಲ್‌ಷಾಹ್ ದ್ವಿತಿಯನ ವಿವಾಹದ ಸಂದೇಶ ನೀಡಿದನು. ಕುತುಬ್‌ಷಾಹ್‌ನು ಈ ಸಂದೇಶವನ್ನು ಒಪ್ಪಿದನು ಹಾಗೂ ಸಮಾರಂಭ ಜರುಗಿಸಿ ತನ್ನ ಸಹೋದರಿಯನ್ನು ಬಿಜಾಪುರಕ್ಕೆ ಕಳುಹಿಸಿದನು.

ಭಾಗಮತಿಯೊಂದಿಗೆ ಪ್ರೇಮ :

ತನ್ನ ಆಡಳಿತದ ಪ್ರಾರಂಭದ ಅವಧಿಯಲ್ಲಿ ಮೊಹಮ್ಮದ್ ಕುಲಿ ಕುತುಬ್‌ಷಾಹಿಯು ಓರ್ವ ವೇಶ್ಯೆ ಯಾರ ಹೆಸರು ಭಾಗಮತಿ ಇತ್ತೊ ಅವಳನ್ನು ಪ್ರೇಮಿಸಿದನು ಹಾಗೂ ಒಂದು ಸಾವಿರ ಸವಾರರನ್ನು ಈ ಸ್ತ್ರೀಯ ಸೇವಕರನ್ನಾಗಿ ನೇಮಿಸಿದನು ಇದರಿಂದಾಗಿ ಅವಳು ಅಮೀರರ ಹಾಗೆ ದರ್ಬಾರಿನಲ್ಲಿ ಬಂದು ಹೋಗಬಹುದು. ಇದೇ ಕಾಲದಲ್ಲಿ ಗೋಲ್ಕೊಂಡಾದ ಜನರು ಜುಗುಪ್ಸೆ ಪಟ್ಟರು ಹಾಗೂ ಈ ಪಟ್ಟಣದಲ್ಲಿ ವಾಸಿಸುವುದು ಬಿಟ್ಟು ಹೋಗಲು ಯೋಚಿಸತೊಡಗಿದರು. ಮೊಹಮ್ಮದ್ ಕುಲಿಯು ಈ ಪಟ್ಟಣದಿಂದ ನಾಲ್ಕು ಕೋಸಿನ ಅಂತರದಲ್ಲಿ ಒಂದು ನವನಗರಿಯನ್ನು ನಿರ್ಮಿಸಿದನು. ಹಾಗೂ ಅದರ ಹೆಸರು 'ಭಾಗನಗರ' ಎಂದಿಟ್ಟನು.

ಭಾಗನಗರದ ನಿರ್ಮಾಣ :

ಈ ಪಟ್ಟಣವು ತನ್ನ ಹಲವಾರು ವಿಶೇಷತೆಗಳಿಂದಾಗಿ ತನಗೆ ತಾನೇ ಸಾಟಿಯಾಗಿತ್ತು. ಅದಕ್ಕಾಗಿ ಮೊಹಮ್ಮದ್ ಕುಲಿಯು ಅದಕ್ಕೆ ತನ್ನ ರಾಜಧಾನಿಯನ್ನಾಗಿ ಮಾಡಿದನು. ಪಟ್ಟಣದ ಹೆಸರು ಓರ್ವ ವೇಶ್ಯೆಯ ಹೆಸರಿನಿಂದ ಇಡಲಾಗಿತ್ತು. ಅದಕ್ಕಾಗಿ ಕೆಲದಿನಗಳ ನಂತರ ಮೊಹಮ್ಮದ್ ಕುಲಿಯು ತನ್ನ ಕೃತ್ಯದ ಮೇಲೆ ಲಜ್ಜಿತಗೊಂಡನು ಹಾಗೂ ಅದರ ಹೆಸರನ್ನು ಬದಲಾಯಿಸಿ 'ಹೈದರಾಬಾದ್' ಎಂದು ಇಟ್ಟನು ಆದರೆ ಈ ಬದಲಾವಣೆಯು ಜನರಲ್ಲಿ ಯಾವುದೇ ಪರಿಣಾಮ ಬೀರಲಿಲ್ಲ. ಜನರು ಈ ಪಟ್ಟಣವನ್ನು

ಭಾಗನಗರ ಎಂತಲೇ ಕರೆಯುತ್ತಿದ್ದರು. ಈ ಪಟ್ಟಣವು ಐದು ಕೋಸ್‌ಗಳವರೆಗೆ ಹಬ್ಬಿತ್ತು ಪರಿಸರದ ಮಡಿಲಲ್ಲಿಯ ಈ ಪಟ್ಟಣವು ನಿಜವಾಗಿಯೂ ಹವಾಮಾನವನ್ನು ಪರಿಗಣಿಸಿದರೆ ತನಗೆ ತಾನೇ ಸಾಟಿಯಾಗಿದೆ. ಹಾಗೂ ಪಂಡಿತ ಪಾಮರರೆಲ್ಲರ ಪ್ರೀತಿಗೆ ಪಾತ್ರವಾಗಿದೆ. ಇಲ್ಲಿಯ ಅನೇಕ ಬಾಝಾರ್‌ಗಳು ನದಿಯ ತಟದಲ್ಲಿ ಇರುವುವು. ಬಾಝಾರಿನ ಎರಡೂ ಕಡೆಗೆ ನದಿಗಳು ಹರಿಯುವವು. ಹಾಗೂ ಪ್ರತಿಯೊಂದು ನದಿಯು ಎರಡೂ ಕಡೆಗೆ ನೆರಳು ನೀಡುವ ಮರಗಳಿಂದ ಎಲ್ಲ ಬಾಝಾರ್‌ಗಳನ್ನು ಸುಣ್ಣ ಹಾಗೂ ಕಲ್ಲುಗಳಿಂದ ನಿರ್ಮಿಸಲಾಗಿದೆ. ಷಾಹೀ ಅರಮನೆಗಳು ತಮ್ಮ ಕಟ್ಟಡದ ವೈಶಿಷ್ಟ್ಯದ ಕಾರಣದಿಂದಾಗಿ ಅನುಪಮವಾಗಿವೆ.

ತಲಂಗ್, ದೋಂಗ್ ಹಾಗೂ ದಬಂಗ್‌ದ ಪ್ರಾಂತ್ಯಗಳು :

ಹಿಂದೂಸ್ಥಾನದ ಹಳೆಯ ಗ್ರಂಥಗಳಲ್ಲಿ ಬರೆಯಲಾಗಿದೆ. ಏನೆಂದರೆ ಮೂರು ಪ್ರಾಂತ್ಯಗಳು ಹವಾಮಾನದ ದೃಷ್ಟಿಯಿಂದ ಪರಸ್ಪರ ಒಂದೇ ರೀತಿಯಾಗಿರುವವು ಇವುಗಳ ಹೆಸರು ಹೀಗಿದೆ. ತಲಂಗ್, ದೋಂಗ್, ಹಾಗೂ ದಬಂಗ್. ತಲಂಗ್ ವೆಂದರೆ ತೆಲಂಗಾಣ ಇರುವುದು. ಯಾವುದು ಹಿಂದೂಸ್ಥಾನದ ದಕ್ಷಿಣ ಭಾಗದಲ್ಲಿರುವುದು. ಹಾಗೂ ಕುತುಬ್‌ಷಾಹಿಗಳ ಆಡಳಿತದಲ್ಲಿದೆ. ದೋಂಗ್ ಬಂಗಾಲಕ್ಕೆ ಎನ್ನುತ್ತಾರೆ. ಹಾಗೂ ದಬಂಗ್ ಎಂದರೆ ಅದು ಎರಡೂ ಪ್ರದೇಶದ ನಡುವೆ ಇರುವ ಸ್ಥಳವಾಗಿದೆ. ಈ ಪ್ರಾಂತ್ಯಕ್ಕೆ ಯಾವುದೇ ಮುಸ್ಲಿಂ ದೊರೆಯು ಇಂದಿನವರೆಗೂ ಆಳಲಾಗಿಲ್ಲ. ಮೊಹಮ್ಮದ್ ಕುಲಿ ಕುತುಬ್‌ಷಾಹ್‌ನ ಇಚ್ಛೆಯಾಗಿತ್ತು. ಏನೆಂದರೆ ತಾನು ಈ ಪ್ರಾಂತ್ಯವನ್ನು ಗೆಲ್ಲಬೇಕು. ಅದಕ್ಕಾಗಿ ಇಲ್ಲಿ ಆಡಳಿತಗಾರ ಯಾರ ಹೆಸರು 'ಪಾಯಾಬುಲಂದ್‌ರಾ' ಎಂದಿತ್ತು. ತನ್ನ ಸಾಮ್ರಾಜ್ಯದ ಒಂದು ದೂರದ ಪ್ರದೇಶದಲ್ಲಿ ಆಶ್ರಯ ಪಡೆದನು.

ಒಂದು ವಿಸ್ಮಯಕರ ಘಟನೆ :

ಹಿಜ್ರಿ ಶಕೆ ೧೦೧೭ ರಲ್ಲಿ ಒಂದು ವಿಸ್ಮಯಕರ ಘಟನೆ ಜರುಗಿತು. ಯಾವುದರ ಹೋಲಿಕೆಯು ಕುತುಬ್‌ಷಾಹೀ ವಂಶದಲ್ಲಿ ಸಿಗುವುದಿಲ್ಲ. ಈ ಘಟನೆಯ ವಿವರವು ಹೀಗಿದೆ. ಏನೆಂದರೆ ಪಟ್ಟಣದ ಹೊರಗೆ ಒಂದು ಎತ್ತರದ ಸ್ಥಳದಲ್ಲಿ ಯಾವುದಕ್ಕೆ ನಿಹಾತ್‌ಘಾಟ್ ಎನ್ನುತ್ತಿದ್ದರು ಒಂದು ಷಾಹೀ ಮಹಲ್ ಇತ್ತು. ಈ ಅರಮನೆಯು ಯಾವಾಗಲೂ ಮುಚ್ಚಲ್ಪಟ್ಟಿರುತ್ತಿತ್ತು. ಆದರೆ ಯಾವಾಗ ಬಾದಷಾಹ್‌ನು ಇಲ್ಲಿ ಆಗಮಿಸುವನು ಆಗ ಈ ಮಹಲಿನ ಬಾಗಿಲು ತೆರೆಯಲ್ಪಡುತ್ತಿದ್ದವು.

ವ್ಯಾಪಾರಿಗಳ ತಂಡ :

ಒಂದು ಸಮಯದಲ್ಲಿ ವ್ಯಾಪಾರಿಗಳ ಒಂದು ತಂಡವು ಬೆಳದಿಂಗಳ ರಾತ್ರಿಯಲ್ಲಿ ನಿಹಾತ್‌ಘಾಟ್‌ದ ಬಳಿಯ ಅರಮನೆಯ ಸಮೀಪದಿಂದ ಹೋಯಿತು. ವ್ಯಾಪಾರಿಗಳ

ಒಂದು ತಂಡವು ಯಾವುದರಲ್ಲಿ ಸ್ತ್ರೀಯರೂ ಸಹ ಇದ್ದರು ಅವರು ಅರಮನೆಯ ಬೀಗವನ್ನು ಮುರಿದರು ಹಾಗೂ ಒಳಗೆ ಪ್ರವೇಶಿಸಿದರು. ಹಾಗೂ ಆರಾಮಾಗಿ ಮಧ್ಯದ ಸಭೆಯನ್ನು ಏರ್ಪಡಿಸಿದರು. ಅರಮನೆಯ ಷಾಹೀ ಮೇಲ್ವಿಚಾರಕರಿಗೆ ಯಾವಾಗ ಇದರ ಮಾಹಿತಿ ಲಭಿಸಿತೋ ಆಗ ಅವರು ವ್ಯಾಪಾರಿ ತಂಡದವರನ್ನು ಬಹಳೇ ನಮ್ರವಾಗಿ ತಡೆದರು. ಆದರೆ ಆ ಜನರು ಈ ಮೇಲ್ವಿಚಾರಕರ ಮಾತಿಗೆ ಬೆಲೆ ಕೊಡಲಿಲ್ಲ ಹಾಗೂ ಅರಮನೆಯ ಬಾಗಿಲುಗಳನ್ನು ಒಳಗಿನಿಂದ ಭದ್ರಪಡಿಸಿಕೊಂಡರು.

ವಿದೇಶಿಗಳ ಮೇಲೆ ಶೋಷಣೆ :

ಬೆಳಗಾದ ಮೇಲೆ ಅರಮನೆಯ ಮೇಲ್ವಿಚಾರಕರು ಪಟ್ಟಣವನ್ನು ಪ್ರವೇಶಿಸಿದರು. ಹಾಗೂ ಬಾದಷಾಹ್‌ನಲ್ಲಿ ವ್ಯಾಪಾರಿಗಳ ಕುರಿತು ದೂರು ಸಲ್ಲಿಸಿದರು. ಮೊಹಮ್ಮದ್ ಕುಲಿ ಕುತುಬ್‌ಷಾಹ್‌ನಿಗೆ ವ್ಯಾಪಾರಿಗಳ ಮೇಲೆ ಬಹಳೇ ಕೋಪ ಉಕ್ಕಿಬಂದಿತು. ಹಾಗೂ ಆತನು ಆಜ್ಞೆ ನೀಡಿದನು. ಈ ಎಲ್ಲರನ್ನೂ ತಕ್ಷಣವೇ ಖಡ್ಗದಿಂದ ವಧಿಸಬೇಕು. ಏಕೆಂದರೆ ಈ ವ್ಯಾಪಾರಿಗಳು ವಿದೇಶಿಗಳಾಗಿದ್ದರು. ಅದಕ್ಕಾಗಿ ದಖ್ಖನ್ನಿನವರಿಗೆ ಅವಕಾಶ ಲಭಿಸಿತು ಹಾಗೂ ಅವರು ಅಹ್ಮದ್‌ನಗರದ ಹಾಗೆ ಇಲ್ಲಿಯು ಸಹ ಬಹಳ ಗೊಂದಲವನ್ನುಂಟು ಮಾಡಿದರು. ಪಾಪ ! ವಿದೇಶಿಗಳ ಕೊಲೆ ಮಾಡಿದರು ಹಾಗೂ ಅವರ ಸಮಸ್ತ ವಸ್ತು ವೈಢೂರ್ಯಗಳನ್ನು ಲೂಟಿ ಮಾಡಿದರು.

ದಖ್ಖನ್ನಿನವರಿಂದ ಗೊಂದಲ :

ಮೊಹಮ್ಮದ್ ಕುಲಿ ಕುತುಬ್‌ಷಾಹ್‌ನಿಗೆ ಯಾವಾಗ ಈ ಹತ್ಯೆ ಹಾಗೂ ವಿನಾಶದ ಸುದ್ಧಿ ತಲುಪಿತೋ ಆಗ ಆತನು ಪಟ್ಟಣದ ಮೇಲ್ವಿಚಾರಕನೊಂದಿಗೆ ಬಹಳೇ ತೀವ್ರವಾಗಿ ವಿಚಾರಿಸಿದನು. ಬಾದಷಾಹ್‌ನು ತನ್ನ ಸಮೀಪಸ್ಥರನ್ನು ಕಳುಹಿಸಿ ದಖ್ಖನ್ನಿನವರನ್ನು ಶಿಕ್ಷಿಸಿದನು. ಹೇಳಲಾಗುತ್ತದೆ ಕೇವಲ ಅರ್ಧ ತಾಸಿನಲ್ಲಿಯೇ ಸುಮಾರು ಒಂದು ನೂರು ವಿದೇಶಿಗಳನ್ನು ಕೊಲ್ಲಲಾಯಿತು ಹಾಗೂ ಅವರ ಮನೆಗಳನ್ನು ಲೂಟಿ ಮಾಡಲಾಯಿತು. ಭಾಗನಗರದಲ್ಲಿ ಪ್ರಳಯ ಸದೃಶ ಗೊಂದಲವಿತ್ತು. ಹಾಗೂ ನಿಸ್ಸಹಾಯಕ ವಿದೇಶಿಗಳಿಗೆ ಇದು ಅರಿವಿಗೆ ಬರುತ್ತಿರಲಿಲ್ಲ. ಏನೆಂದರೆ ಬಾದಷಾಹನು ಯಾವ ಕಾರಣಕ್ಕಾಗಿ ತಮ್ಮಿಂದ ಮುನಿಸಿಕೊಂಡಿದ್ದಾನೆ.

ಸಹೋದರರೊಂದಿಗೆ ಒಲುವು :

ಮೊಹಮ್ಮದ್ ಕುಲಿ ಕುತುಬ್‌ಷಾಹ್‌ನಲ್ಲಿ ಕೆಲವು ವೈಶಿಷ್ಟ್ಯತೆಗಳು ಹೀಗಿದ್ದವು. ಯಾವುವು ಬಹಳೇ ಕಡಿಮೆ ಬಾದಷಾಹ್‌ರಲ್ಲಿ ಸಿಗುತ್ತವೆ. ಮೊದಲನೆಯದಾಗಿ ಆತನಿಗೆ ತನ್ನ ಸಹೋದರರೊಂದಿಗೆ ಅಮಿತ ಪ್ರೇಮವಿತ್ತು. ಆತನು ಅವರನ್ನು ಯಾವಾಗಲೂ ತನ್ನ ಜೊತೆಯಲ್ಲಿಯೇ ಇರಿಸಿಕೊಳ್ಳುತ್ತಿದ್ದನು. ಹಾಗೂ ಯಾವುದೇ ಭಯಭೀತಿಯಿಲ್ಲದೇ

ಅವರೊಂದಿಗೆ ಸ್ನೇಹದಿಂದಿರುತ್ತಿದ್ದನು ಕುತುಬ್‌ಷಾಹ್‌ನ ಸಹೋದರರೂ ಸಹ ಆತನ ಸದ್ವರ್ತನೆ ಕಂಡು ಬಹಳೇ ಗೌರವ ಹಾಗೂ ಪ್ರೇಮದಿಂದ ಇರುತ್ತಿದ್ದರು. ಮೂವತ್ತು ವರುಷದ ಸಮಯದಲ್ಲಿ ಮೊಹಮ್ಮದ್ ಕುಲಿ ಕುತುಬ್‌ಷಾಹ್‌ನು ಒಂದು ಸಲವೂ ತನ್ನ ಸಹೋದರರಿಂದ ಮುನಿಸಿಕೊಳ್ಳಲಿಲ್ಲ. ಈ ವಿಶೇಷತೆಯು ಹೇಗಿದೆಯೆಂದರೆ ಇದು ಎಲ್ಲ ಬಾದಷಾಹರಲ್ಲಿ ಕಂಡು ಬರುವುದಿಲ್ಲ.

ಮೀರ್ ಮೊಹಮ್ಮದ್ ಮೋಮಿನ್ ಆಸ್ತರಾಬಾದಿ :

ಎರಡನೆಯ ವಿಶೇಷತೆಯು ಇದಾಗಿದೆ. ಏನೆಂದರೆ ಮೀರ್ ಮೊಹಮ್ಮದ್ ಮೋಮಿನ್ ಆಸ್ತರಾಬಾದಿಯು ೨೫ ವರ್ಷಗಳವರೆಗೆ ಮೊಹಮ್ಮದ್ ಕುಲಿ ಕುತುಬ್‌ಷಾಹ್‌ನ ಆಡಳಿತಾವಧಿಯಲ್ಲಿ 'ವಕೀಲೇ ಸಲ್ತನತ್' (ಮುಖ್ಯ ಆಡಳಿತಾಧಿಕಾರಿ) ಯಾಗಿ ಇದ್ದನು. ಮೀರ್ ಮೋಮಿನ್‌ನ ಪೂರ್ವಜರು ಇರಾನೀ ಬಾದಷಾಹರ ದರ್ಬಾರಿನಲ್ಲಿ ಗೌರವಾನ್ವಿತ ವ್ಯಕ್ತಿಗಳಾಗಿದ್ದರು. ಮೀರ್‌ಸಾಹೇಬನು ಲೌಕಿಕ ಹಾಗೂ ಧಾರ್ಮಿಕ ವಿಷಯಗಳಲ್ಲಿ ಮಹಾವಿದ್ವಾಂಸ ಹಾಗೂ ಹಿರಿಯನಾಗಿದ್ದನು. ಕಾವ್ಯದಲ್ಲಿ ಇವರಿಗೆ ಬಹಳೇ ಆಸಕ್ತಿ ಇತ್ತು. ಅವರ ದ್ವಿಪದಿಗಳು ಜನರ ನಾಲಿಗೆಯ ಮೇಲೆ ನಲಿದಾಡುತ್ತಿದ್ದವು. ಮೊಹಮ್ಮದ್ ಕುಲಿ ಕುತುಬ್‌ಷಾಹ್‌ನಿಗೆ ಮೀರ್ ಸಾಹೇಬರಲ್ಲಿ ಬಹಳೇ ಶ್ರದ್ಧೆಯಿತ್ತು. ಆತನು ತನ್ನ ಆಡಳಿತದ ಸಮಸ್ತ ವ್ಯವಹಾರಗಳನ್ನು ಮೀರ್ ಸಾಹೇಬರಿಗೆ ಒಪ್ಪಿಸಿದ್ದನು ಹಾಗೂ ಸ್ವತಃ ತಾನು ತನ್ನ ಸಹೋದರರೊಂದಿಗೆ ವಿಲಾಸಿ ಜೀವನ ವ್ಯಯಿಸುತ್ತಿದ್ದನು.

****ಅಹಲೇ ಬೈತ್‌ನವರೊಂದಿಗೆ ಆಸಕ್ತಿ :**

ಮೂರನೆಯ ವಿಶೇಷತೆಯು ಇದಾಗಿದೆ. ಏನೆಂದರೆ ಮೊಹಮ್ಮದ್ ಕುಲಿ ಕುತುಬ್‌ಷಾಹ್‌ನಿಗೆ ಅಹಲೇ ಬೈತ್‌ದವರೊಂದಿಗಿನ ಆಸಕ್ತಿಯ ಪ್ರತಿಯಾಗಿ ಸಂಪೂರ್ಣ ಸಂತೃಪ್ತಿ ಲಭಿಸಿತು. ಓದುಗರು ಇದನ್ನು ಚೆನ್ನಾಗಿ ತಿಳಿದಿರುವರು. ಯಾವಾಗಿನಿಂದ ಹಿಂದೂಸ್ಥಾನದಲ್ಲಿ ಇಸ್ಲಾಂ ಹರಡಿದೆ ಆ ಕಾಲದಿಂದ ಎಲ್ಲ ಆಡಳಿತಗಾರರಿಗೆ ಇರಾನೀ ಬಾದಷಾಹ್‌ರ ಸಮೀಪಸ್ಥ ಸಂಬಂಧ ಲಭಿಸಿದೆ ಆದರೆ ಈ ಗೌರವವು ಕೇವಲ ಮೊಹಮ್ಮದ್ ಕುಲಿ ಕುತುಬ್‌ಷಾಹ್‌ನ ದೈವದಲ್ಲಿತ್ತು ಏನೆಂದರೆ ಇರಾನಿನ ಬಾದಷಾಹನಿಂದ ಷಾ ಅಬ್ಬಾಸನು ತನ್ನ ಪುತ್ರನ ವಿವಾಹದ ಸಂದೇಶವನ್ನು ಕುತುಬ್‌ಷಾಹನ ಪುತ್ರಿಯೊಂದಿಗೆ ನೀಡುರುವನು. ಮೊಹಮ್ಮದ್ ಕುಲಿಯು ಈ ಸಂದೇಶವನ್ನು ಹೆಮ್ಮೆಯ ವಿಷಯವೆಂದು ಪರಿಗಣಿಸಿದನು. ಹಾಗೂ ಮದುವೆಯ ಏರ್ಪಾಡಿನಲ್ಲಿ ಪೂರ್ಣರೂಪದಲ್ಲಿ ತೊಡಗಿಕೊಂಡನು. ಏಕೆಂದರೆ ತನ್ನ ಪುತ್ರಿಯನ್ನು ಇರಾನಿಗೆ ಕಳುಹಿಸಿ ಶುಭ ಅದೃಷ್ಟವನ್ನು ಪಡೆಯಬೇಕು.

** ಅಹಲೇಬೈತ್ ಎಂದರೆ ಪ್ರವಾದಿ. ಹಜ್ರತ್ ಮುಹಮ್ಮದ್ ಸ್ವಲ್ಲಲ್ಲಾಹು ಅಲೈಹಿ ವ

ಸ್ವಲ್ಲಮ್ ಹಾಗೂ ಅವರ ಪುತ್ರಿಯಾದ ಸಯ್ಯದಾ ಬೀಬಿ ಫಾತಿಮಾತುಜ್ಜಹರಾ ಅವರ ಅಳಿಯ ಸೈಯ್ಯದ್‌ನಾ ಹಜರತ್ ಅಲಿ ಇಬ್ನೆ ಅಬು ತಾಲೀಬ್ ಅವರ ಮೊಮ್ಮಕ್ಕಳಾದ ಸಯ್ಯದ್‌ನಾ ಇಮಾಮ್ ಹಸನ್ ಹಾಗೂ ಸಯ್ಯದ್‌ನಾ ಇಮಾಮ್ ಹುಸೈನ್

■

IV. ಇಮಾದಶಾಹಿ ವಂಶ

*

೧. ಫತಾಃ ಅಲ್ಲಾಹ್ ಇಮಾದುಲ್ ಮುಲ್ಕ್

ದಖ್ಖನ್ನಿನ ಆಡಳಿತಗಾರರ ಪರಿಸ್ಥಿತಿಯನ್ನು ಅವಲೋಕಿಸಿದಾಗ ತಿಳಿದು ಬರುವುದೇನೆಂದರೆ ಫತಃ ಅಲ್ಲಾಹ್ ಅಮಾದುಲ್ ಮುಲ್ಕ್ ಬಿಜಾಪುರದ ಓರ್ವ ಮುಸ್ಲಿಮೇತರನ ಮಗನಾಗಿದ್ದನು. ಆತನು ಬಾಲ್ಯಕಾಲದಲ್ಲಿಯೇ ಮುಸ್ಲಿಮರ ಕೈಯಲ್ಲಿ ಬಂಧಿತನಾಗಿ, ಬರಾರ್‌ದ ಸೈನ್ಯಾಧಿಪತಿಯಾದ ಖಾನ್‌ಜಹಾಂನ ಸೇವಕರ ತಂಡದಲ್ಲಿ ಸೇರ್ಪಡೆಯಾದನು ಆತನು ತೀಕ್ಷ್ಣಮತಿ ಹಾಗೂ ಪ್ರಯತ್ನಶೀಲ ವ್ಯಕ್ತಿತ್ವದವನಾಗಿದ್ದನು ಈ ಕಾರಣದಿಂದ ಖಾನ್‌ಜಹಾಂನನ ಸಮೀಪಸ್ಥರಲ್ಲಿ ಓರ್ವನಾಗಿ ಪರಿಗಣಿಸಲ್ಪಡತೊಡಗಿದನು.

ಖಾನ್‌ಜಹಾಂನನ ಮೃತ್ಯುವಿನ ನಂತರ ಫತಾಃ ಅಲ್ಲಾಹ್ ಇಮಾದುಲ್ ಮುಲ್ಕನು ಬಹಮನಿ ಸುಲ್ತಾನರ ಗುಲಾಮರಲ್ಲಿ ಸೇರಿಕೊಂಡನು. ಸುಲ್ತಾನ್ ಮೊಹಮ್ಮದ್‌ಷಾ ಬಹಮನಿಯ ಆಡಳಿತಾವಧಿಯಲ್ಲಿ ಆತನು ಬಹಳಷ್ಟು ಉನ್ನತಿ ಹೊಂದಿದನು. ಹಾಗೂ 'ಖ್ವಾಜಾಕಾಂವಾ'ರ ಕೃಪೆಯಿಂದ 'ಇಮಾದುಲ್‌ಮುಲ್ಕ'ನ ಬಿರುದು ಪಡೆದನು. ಹಾಗೂ ಬರಾರ್ ಪ್ರಾಂತ್ಯದ ಸೇನಾಧಿಪತಿಯಾಗಿ ನೇಮಕಗೊಂಡನು. ಹಿಜ್ರಿಶಕೆ ೮೯೨ ರಲ್ಲಿ ಅಮಾದುಲ್ ಮುಲ್ಕನು ಸರ್ವ ಸ್ವತಂತ್ರನಾಗಿ ಸ್ವಯಂಘೋಷಿಸಿಕೊಂಡು ಬರಾರ್‌ದಲ್ಲಿ ತನ್ನ ಹೆಸರಿನ ಖುತ್ಬಾ ಹಾಗೂ ಮುದ್ರೆ ಜಾರಿಗೊಳಿಸಿದನು.

ಈತನ ನಿಧನದ ನಂತರ ಈತನ ಪುತ್ರನಾದ ಅಲ್ಲಾವುದ್ದೀನ್ ಆತನ ಉತ್ತರಾಧಿಕಾರಿಯಾದನು ಹಾಗೂ ಬರಾರ್‌ವನ್ನು ಆಳತೊಡಗಿದನು.

■

*

೨. ಇಲ್ಲಾವುದ್ದೀನ್ ಅಮಾದುಲ್ ಮುಲ್ಕ್

'ಷಾಹ'ನ ಬಿರುದು :

ಇಸ್ಮಾಯಿಲ್ ಆದಿಲ್ ಹಾಗೂ ಬುರ್ಹಾನ್ ನಿಜಾಮನ ಹಾಗೆ ಅಲ್ಲಾವುದ್ದೀನ್ ಇಮಾದುಲ್ ಮುಲ್ಕನೂ ಸಹ ಮೊದಲನೆಯ ದಖ್ಖನಿ ಆಡಳಿತಗಾರನಾಗಿರುವನು. ಯಾರು ತನ್ನ ಹೆಸರಿನೊಂದಿಗೆ 'ಷಾಹ್'ನ ಬಿರುದು ಧರಿಸಿದನು. ಆತನು ಕಾವೆಲ್‌ದ ಕೋಟೆಯನ್ನು ತನ್ನ ರಾಜಧಾನಿಯನ್ನಾಗಿಸಿಕೊಂಡನು.

ಮೊಹಮ್ಮದಾಬಾದ್ ಬೀದರ್‌ನ ಮೇಲೆ ದಾಳಿ :

ಸುಲ್ತಾನ್ ಮೆಹಮೂದ್ ಬೆಹಮನ್‌ನು ಅಮೀರ ಬರೀದ್‌ನ ಬಂಧನದಿಂದ ಬಿಡುಗಡೆಯಾಗಿ ಅಲ್ಲಾವುದ್ದೀನ್‌ನ ಬಳಿ ಆಶ್ರಯ ಪಡೆದನು. ಅಲ್ಲಾವುದ್ದೀನ್‌ನು ಸುಲ್ತಾನ್ ಮೆಹಮೂದ್‌ನನ್ನು ಜೊತೆಗೆ ಕರೆದುಕೊಂಡು ಮೊಹಮ್ಮದಾಬಾದ್ ಬೀದರ್‌ನ ಮೇಲೆ ದಾಳಿ ಮಾಡಿದನು. ಏಕೆಂದರೆ ಅಮೀರ್ ಬರೀದ್‌ನನ್ನು ಸೋಲಿಸಿ ನಿಜವಾದ ವಾರಿಸುದಾರನನ್ನು ಸಿಂಹಾಸನಾಧೀಶರನ್ನಾಗಿಸಬೇಕು. ಈ ಯುದ್ಧದಲ್ಲಿ ನಿಜಾಮಷಾಹ್‌ನು ಅಮೀರಬರೀದ್‌ನ ಜೊತೆ ನೀಡಿದನು. ಹಾಗೂ ಈ ಮೊದಲು ಹೇಳಿದಂತೆ ಸುಲ್ತಾನ್ ಮೆಹಮೂದ್‌ನು ಯುದ್ಧ ನಡೆದಿರುವಾಗಲೇ ಮಧ್ಯದಲ್ಲಿ ಅಮೀರ್‌ಬರೀದ್‌ನ ಜೊತೆಗೆ ಸೇರಿಕೊಂಡನು ಹಾಗೂ ಅಮಾದುಲ್ ಮುಲ್ಕನು ವಿಫಲತೆ ಹಾಗೂ ನಿರಾಶೆಯೊಂದಿಗೆ ಮರಳಿ ಕಾವೆಲ್‌ಕ್ಕೆ ಬಂದನು.

ಅಮೀರ್ ಬರೀದ್‌ನ ಕೋಲಾಹಲ :

ಅಮೀರ್‌ಬರೀದನು ಹಿಜ್ರಿ ಶಕೆ ೯೨೩ ರಲ್ಲಿ ಮಾಹವರ್ ಕೋಟೆಯ ಮೇಲೆ ದಾಳಿ ಮಾಡಿದನು. ಹಾಗೂ ಖುದಾವಂದಾಖಾನ್ ಹಬಷಿಯನ್ನು ಹತ್ಯೆಗೈದು ಕೋಟೆಯನ್ನು ವಶಪಡಿಸಿಕೊಂಡನು ಅಮಾದುಲ್ ಮುಲ್ಕನು ಖುದಾವಂದಾಖಾನ್ ಹಬಷಿಯ ಪುತ್ರರಿಗೆ ಸಹಾಯ ಮಾಡಲು ನಿರ್ಧರಿಸಿದನು. ಹಾಗೂ ಈ ಉದ್ದೇಶಕ್ಕಾಗಿ

ಸೈನ್ಯವನ್ನು ಒಟ್ಟುಗೂಡಿಸತೊಡಗಿದನು. ಅಮೀರ ಬರೀದ್‌ನು ಸಮಯದ ಬೇಡಿಕೆಯನ್ನು ಪರಿಗಣಿಸಿ ಎರಡೂ ಕೋಟೆಗಳನ್ನು ಖುದಾವಂದಾಖಾನ್‌ನ ಪುತ್ರರಿಗೆ ಮರಳಿಸಿದನು. ಹಾಗೂ ಇವರನ್ನು ಅಮಾದುಲ್ ಮುಲ್ಕನ ವಿಧೇಯನನ್ನಾಗಿಸಿದನು.

ಬುರ್ಹಾನ್ ನಿಜಾಮಷಾಹ್‌ನೊಂದಿಗೆ ಯುದ್ಧಗಳು :

ಅಮಾದುಲ್ ಮುಲ್ಕ್‌ನು ಹಂತ ಹಂತವಾಗಿ ಎರಡೂ ಕೋಟೆಗಳನ್ನು ವಶಪಡಿಸಿಕೊಂಡನು. ಹಾಗೂ ಈ ಕೋಟೆಗಳನ್ನು ತನ್ನ ದಕ್ಷ ಅಮೀರರ ವಶಕ್ಕೆ ನೀಡಿದನು. ಖುದಾವಂದಖಾನ್ ಹಬಷಿಯ ಪುತ್ರರು ದೂರು ತೆಗೆದುಕೊಂಡು ಬುರ್ಹಾನ್‌ಷಾಹ್‌ನ ಬಳಿ ಹೋದರು. ಹಾಗೂ ತಮ್ಮ ಕೋಟೆಯನ್ನು ಮರಳಿ ಪಡೆಯಲು ಆತನಿಂದ ಸಹಾಯ ಯಾಚಿಸಿದರು. ಬುರ್ಹಾನ್ ನಿಜಾಮಷಾಹ್‌ನು ಅಮಾದುಲ್ ಮುಲ್ಕನ ವಿರೋಧಿಯಾದನು. ಹಾಗೂ ಈರ್ವರೂ ಆಡಳಿತಗಾರರ ನಡುವೆ ಹಲವಾರು ಸಲ ಯುದ್ಧಗಳು ಜರುಗಿದವು. ಈ ಯುದ್ಧಗಳಲ್ಲಿ ಪ್ರತಿಸಲ ಅಮಾದುಲ್ ಮುಲ್ಕನಿಗೆ ಸೋಲುಂಟಾಯಿತು. ಹಾಗೂ ಆತನು ರಣಭೂಮಿಯಿಂದ ಓಡಿ ಹೋಗಿ ಕಾವೆಲ್‌ದಲ್ಲಿ ಆಶ್ರಯ ಪಡೆದನು.

ಮಹಾವರ್ ಹಾಗೂ ರಾಮಕರ್ ಕೋಟೆಗಳು ವಶಕ್ಕೆ :

ಇದೇ ಕಾಲದಲ್ಲಿ ಅಮಾದುಲ್ ಮುಲ್ಕನು ಇಸ್ಮಾಯಿಲ್ ಆದಿಲ್‌ನ ಸಹೋದರಿಯೊಂದಿಗೆ ವಿವಾಹ ಮಾಡಿಕೊಂಡನು. ಆದಿಲ್ ಷಾಹ್‌ನು ಈ ದಿನಗಳಲ್ಲಿ ಬೇಜಾನಗರದ ರಾಜನೊಂದಿಗೆ ಯುದ್ಧದಲ್ಲಿ ನಿರತನಾಗಿದ್ದನು. ಅದಕ್ಕಾಗಿ ಅಮಾದುಲ್ ಮುಲ್ಕನು ಮುಹಾವರ್ ಹಾಗೂ ರಾಮಕರ್‌ದ ಕೋಟೆಗಳನ್ನು ವಶಪಡಿಸಿಕೊಂಡನು.

ನಿಜಾಮ್‌ಷಾಹ್‌ನೊಂದಿಗೆ ಯುದ್ಧ :

ಅಮಾದುಲ್ ಮುಲ್ಕನು ಹಿಜ್ರಿಶಕೆ ೯೩೦ ರಲ್ಲಿ ಬುರ್ಹಾನ್‌ಪುರದ ಆಡಳಿತಗಾರನಾದ ಮೀರಾ ಮೊಹಮ್ಮದ್ ಷಾಹ್‌ನ ಸಹಾಯದೊಂದಿಗೆ ಬುರ್ಹಾನ್ ನಿಜಾಮ್‌ಷಾಹ್‌ನೊಂದಿಗೆ ಪ್ರತಿಕಾರ ತೆಗೆದುಕೊಳ್ಳುವ ನಿರ್ಧಾರ ಮಾಡಿದನು. ಪರಸ್ಪರರಲ್ಲಿ ಘೋರ ಯುದ್ಧ ಜರುಗಿತು. ಅದರಲ್ಲಿ ಬುರ್ಹಾನ್ ನಿಜಾಮಷಾಹನು ಮೇಲುಗೈ ಸಾಧಿಸಿದನು. ಆತನು ಅಮಾದುಲ್ ಮುಲ್ಕ ಹಾಗೂ ಮೀರಾ ಮೊಹಮ್ಮದ್ ಷಾಹ್‌ನ ಆನೆಗಳು ಹಾಗೂ ತೋಪುಗಳನ್ನು ವಶಪಡಿಸಿಕೊಂಡನು. ಈ ಈರ್ವರೂ ಬಾದಷಾಹ್‌ರು ರಣಭೂಮಿಯಿಂದ ಓಡಿಹೋದರು.

ಬರಾರ್‌ದಲ್ಲಿ ಸುಲ್ತಾನ್ ಬಹಾದ್ದೂರನ ಹೆಸರಿನ ಖುತ್ಬಾ :

ಆದಿಲ್ ಷಾಹ್‌ನು ಈ ದಿನಗಳಲ್ಲಿ ಬೇಜಾನಗರದ ರಾಜನು ಮಾಡುವ ಗಲಭೆಗಳಿಂದ ಬಹಳೇ ತೊಂದರೆಗೇಡಾಗಿದ್ದನು. ಅದಕ್ಕಾಗಿ ಅಮಾದುಲ್ ಮುಲ್ಕ

ಹಾಗೂ ಮೀರಾಮೊಹಮ್ಮದ್ ಷಾಹ್‌ರು ಸುಲ್ತಾನ್ ಬಹಾದ್ದೂರ್ ಗುಜರಾತಿಯ ಆಶ್ರಯ ಪಡೆದರು. ಸುಲ್ತಾನ್ ಬಹದ್ದೂರ್‌ನು ದಖ್ಖನ್ನನ್ನು ಗೆಲ್ಲುವ ವಿಚಾರ ಹೊಂದಿದ್ದನು. ಈತನು ಈ ಅವಕಾಶವನ್ನು ಸುವರ್ಣಾವಕಾಶವೆಂದು ಬಗೆದನು. ಹಾಗೂ ಒಂದು ಬೃಹತ್ ಸೈನ್ಯವನ್ನು ತೆಗೆದುಕೊಂಡು ಬುರ್ಹಾನ್‌ಪುರದ ಮಾರ್ಗದಿಂದ ಬರಾರ್‌ಕ್ಕೆ ಬಂದನು. ಅಮಾದುಲ್ ಮುಲ್ಕನು ಯಾವಾಗ ಸುಲ್ತಾನ್ ಬಹಾದ್ದೂರ್‌ನ ಈ ವರ್ತನೆಯನ್ನು ನೋಡಿದನೋ ಆಗ ಆತನಿಗೆ ತನ್ನ ಇಚ್ಛೆಯ ಮೇಲೆ ನಾಚಿಕೆಯುಂಟಾಯಿತು. ಅಮಾದುಲ್ ಮುಲ್ಕನಿಗೆ ಅನಿವಾರ್ಯವಾಗಿ ಸುಲ್ತಾನ್ ಬಹಾದ್ದೂರ್‌ನಿಗೆ ವಿಧೇಯತೆ ತೋರಬೇಕಾಯಿತು. ಈ ತೆರನಾಗಿ ಬರಾರ್‌ದಲ್ಲಿ ಸುಲ್ತಾನ್ ಬಹಾದ್ದೂರನ ಹೆಸರಿನ ಖುತ್ಬಾ ಹಾಗೂ ಮುದ್ರೆ ಜಾರಿಗೊಂಡಿತು.

ಅಮಾದುಲ್ ಮುಲ್ಕನು ಬುರ್ಹಾನ್‌ಪುರದ ಆಡಳಿತಗಾರನಾದ ಮೀರಾ ಮೊಹಮ್ಮದ್‌ಷಾಹ್‌ನ ಸಹಾಯದಿಂದ ಏನೆಲ್ಲಾ ಮಾಡಿದನು. ಅದರ ವಿವರವು ಆಗಲೇ ಬಂದಿರುವುದು. ಅಮಾದುಲ್ ಮುಲ್ಕನು ದೌಲತಾಬಾದ್‌ನಿಂದ ಬರಾರ್‌ಕ್ಕೆ ಹೊರಟುಹೋದನು ಹಾಗೂ ಮೀರಾ ಮೊಹಮ್ಮದ್ ಷಾಹ್‌ನು ತನ್ನ ಪ್ರಾಂತ್ಯಕ್ಕೆ ಮರಳಿ ಬಂದನು.

ಅಲ್ಲಾವುದ್ದೀನ್‌ನ ನಿಧನದ ನಂತರ ಆತನ ಹಿರಿಯ ಪುತ್ರನಾದ ದರಿಯಾ ಅಮಾದುಲ್ ಮುಲ್ಕನು ತಂದೆಯ ಉತ್ತರಾಧಿಕಾರಿಯಾದನು.

■

*

೩. ದರಿಯಾ ಇಮಾದ್ ಷಾಹ್

ದರಿಯಾ ಅಮಾದ್ ಷಾಹ್‌ನು ಸಿಂಹಾಸನಾಧೀಶನಾಗುತ್ತಿದ್ದಂತೆಯೇ ನಿಜಾಮಷಾಹೀ ವಂಶದೊಂದಿಗೆ ಒಳ್ಳೆಯ ಸಂಬಂಧಗಳನ್ನು ಹೊಂದಿದನು. ಆತನು ತನ್ನ ಪುತ್ರಿಯಾದ ದೌಲತ್‌ಷಾಹ್‌ಳ ವಿವಾಹವನ್ನು ಹುಸೈನ್ ನಿಜಾಮಷಾಹ್‌ನೊಂದಿಗೆ ಜರುಗಿಸಿ ನಿಜಾಮಷಾಹಿಗಳೊಂದಿಗೆ ಸ್ನೇಹ ಸಂಬಂಧಗಳನ್ನು ಮತ್ತಷ್ಟು ಸುಭದ್ರಗೊಳಿಸಿದನು. ದರಿಯಾ ಇಮಾದ್‌ಷಾಹ್‌ನು ತನ್ನ ಆಡಳಿತಾವಾದಿಯಲ್ಲಿ ನೆಮ್ಮದಿಪೂರ್ವಕವಾಗಿ ಹಾಗೂ ನಿಶ್ಚಿಂತೆಯಿಂದ ಸಮಯ ವ್ಯಯಿಸಿದನು. ಹಾಗೂ ಇದೇ ತೆರನಾಗಿ ಮೃತ್ಯುವನ್ನಪ್ಪಿದನು.

ದರಿಯಾ ಇಮಾದ್‌ಷಾಹ್‌ನ ನಿಧನದ ನಂತರ ಆತನ ಅಪ್ರಾಪ್ತ ವಯಸ್ಕನಾದ ಪುತ್ರ ಬುರ್ಹಾನ್ ಇಮಾದ್‌ಷಾಹ್‌ನು ಸಿಂಹಾಸನಾಧೀಶನಾದನು.

■

*

೪. ಬುರ್ಹಾನ್ ಇಮಾದ್ ಷಾಹ್

ತಫಾಲ್‌ಖಾನ್‌ನ ಅಧಿಕಾರ :

ಬುರ್ಹಾನ್ ಇಮಾದ್‌ಷಾಹ್‌ನು ಸಿಂಹಾಸನಾರೋಹಣದ ವೇಳೆಯಲ್ಲಿ ಅಪ್ರಾಪ್ತ ವಯಸ್ಕನಾಗಿದ್ದನು. ಈ ಕಾರಣಕ್ಕೆ ತಫಾಲ್ ಖಾನ್ ದಖನಿಯು ಯಾರು ಬಹಮನಿ ವಂಶದ ಗುಲಾಮನಾಗಿದ್ದನು ಬಹಳ ಅಧಿಕಾರ ಹೊಂದಿದನು ಹಾಗೂ ಬಾದಷಾಹ್‌ನ ಮೇಲೆ ಪ್ರಭಾವ ಬೀರಿದನು. ತಫಾಲ್‌ಖಾನ್‌ನು ಇಬ್ರಾಹಿಂ ಕುತುಬ್‌ಷಾಹ್ ಹಾಗೂ ಬುರ್ಹಾನ್‌ಪುರದ ಫಾರೂಕಿ ಆಡಳಿತಗಾರರ ಸಹಾಯದಿಂದ ಬಹಳೇ ಶಕ್ತಿಶಾಲಿ ಹಾಗೂ ಘನತೆಯನ್ನು ಹೊಂದಿದನು ಹಾಗೂ ಬುರ್ಹಾನ್ ಅಮಾದ್‌ಷಾಹ್‌ನಿಗೆ ಪರನಾಲಾ ಕೋಟೆಯಲ್ಲಿ ಬಂಧನದಲ್ಲಿಟ್ಟನು. ತಫಾಲ್ ಖಾನ್‌ನು ಪ್ರಾಂತ್ಯದಲ್ಲಿ ತನ್ನ ಹೆಸರಿನ ಖುತ್ಬಾ ಹಾಗೂ ಮುದ್ರೆಯನ್ನು ಜಾರಿಗೊಳಿಸಿದನು. ಆತನು ಬಹಳೇ ಶೂರ ಹಾಗೂ ಉದಾರ ಮನಸ್ಸಿನವನಾಗಿದ್ದನು.

ಬರಾರ್ ಕೋಟೆಯ ಮೇಲೆ ಹಿಡಿತ ಸಾಧಿಸಲು ಮುರ್ತುಜಾ ನಿಜಾಮನ ನಿರ್ಧಾರ:

ತುಫಾಲ್ ಖಾನ್‌ನು ಬುರ್ಹಾನ್ ಅಮಾದ್‌ಷಾಹ್‌ನಿಗೆ ಆಡಳಿತದಿಂದ ಬೇರ್ಪಡಿಸಿದ ನಂತರ ಅಮಾದ್‌ಷಾಹೀ ವಂಶವನ್ನು ಎಲ್ಲಿಯವರೆಗೆ ವಿರೋಧಿಸಿದನೆಂದರೆ ಮುರ್ತುಜಾ ನಿಜಾಮನು ಬರಾರ್‌ವನ್ನು ಗೆಲ್ಲುವ ಇಚ್ಛೆಯೊಂದಿಗೆ ಈ ಪ್ರಾಂತ್ಯವನ್ನು ಪ್ರವೇಶಿಸಿದನು. ತುಫಾಲ್ ಖಾನ್‌ನು ಅನಿವಾರ್ಯವಾಗಿ ಅಲಿ ಆದಿಲ್‌ಷಾಹ್‌ನಿಂದ ಸಹಾಯ ಬೇಡಿದನು. ಈತನ ಅದೃಷ್ಟದಿಂದಾಗಿ ಈ ವಿನಂತಿ ಸ್ವೀಕರಿಸಲ್ಪಟ್ಟಿತು. ನಿಜಾಮಷಾಹ್‌ರಿಗೆ ಯಾವಾಗ ಈ ಸುದ್ದಿ ತಲುಪಿತೋ ಆಗ ಆತನು ತನ್ನ ತಾಯಿ ಖೂನ್‌ಜಾ ಹಿಮಾಯೂವಿನ ಸಲಹೆಯಂತೆ ಮರಳಿ ಬಂದನು.

ಬರಾರ್‌ದ ಮೇಲೆ ನಿಜಾಮ್‌ಷಾಹಿಗಳ ದಾಳಿ ಹಾಗೂ ತಫಾಲ್‌ಖಾನ್‌ನ ಸೋಲು:

ಹಿಜ್ರಿ ಶಕೆ ೯೮೦ ರ ಕೊನೆಯಲ್ಲಿ ನಿಜಾಮಷಾಹ್‌ನು ಬರಾರ್‌ವನ್ನು ಗೆಲ್ಲಲು

ನಿರ್ಧರಿಸಿದನು. ಹಾಗೂ ಬುರ್ಹಾನ್ ಅಮಾದ್‌ನನ್ನು ಸ್ವತಂತ್ರಗೊಳಿಸುವ ನೆಪದಿಂದ ಬರಾರ್‌ದ ಮೇಲೆ ದಾಳಿ ಮಾಡಿದನು. ತಫಾಲ್‌ಖಾನ್‌ನು ಬಹಳೇ ಸಂಕಷ್ಟಕ್ಕೀಡಾದನು ಹಾಗು ಆತನು ಇಬ್ರಾಹಿಂ ಕುತುಬ್‌ಷಾಹ್‌ನಿಂದ ಸಹಾಯ ಬೇಡಿದನು. ಕುತುಬ್‌ಷಾಹ್‌ನು ತೆಲಂಗಾಣದ ಸೈನ್ಯವನ್ನು ಆತನ ಸಹಾಯಕ್ಕಾಗಿ ಕಳುಹಿಸಿದನು. ತಫಾಲ್‌ಖಾನ್ ನಿಜಾಮಷಾಹಿಯ ಸೈನ್ಯಾಧಿಕಾರಿಯಾದ ಚಂಗೇಜ್‌ಖಾನ್‌ನನ್ನು ಎದುರಿಸಲು ಬಂದನು. ಪರಸ್ಪರರಲ್ಲಿ ಭೀಕರ ಕದನ ನಡೆಯಿತು. ಇದರ ಪರಿಣಾಮವಾಗಿ ತಫಾಲ್‌ಖಾನ್‌ನಿಗೆ ಸೋಲಿನ ಮುಖ ನೋಡಬೇಕಾಯಿತು.

ಪರನಾಲಾ ಕೋಟೆಯ ಮುತ್ತಿಗೆ :

ಸೋಲಿನ ನಂತರ ತುಫಾಲ್‌ಖಾನ್‌ನು ಒಂದು ಅವಧಿಯವರೆಗೆ ಅರಣ್ಯಗಳಲ್ಲಿ ಅಲೆಮಾರಿಯಾಗಿ ಸುತ್ತಾಡತೊಡಗಿದನು. ಕೊನೆಗೆ ಆತನು ಪರನಾಲಾ ಕೋಟೆಯಲ್ಲಿ ಆಶ್ರಯ ಪಡೆದನು ಆತನ ಪುತ್ರನಾದ ಷಂಷಿರುಲ್ ಮುಲ್ಕನು ಕಾವೆಲ್ ಕೋಟೆಯಲ್ಲಿ ಆಶ್ರಯ ಪಡೆದನು. ನಿಜಾಮ್‌ಷಾಹ್‌ನು ಪರನಾಲಾ ಕೋಟೆ (ಯಾವುದು ಪರ್ವತದ ಮೇಲೆ ಇದೆ ಹಾಗೂ ಅದನ್ನು ಗೆಲ್ಲುವುದು ಕಠಿಣತರ ಕೆಲಸವಾಗಿದೆ)ಯ ದಿಗ್ಬಂಧನ ಮಾಡಿದನು. ಚಂಗೇಜ್‌ಖಾನ್‌ನು ಬಾದಷಾಹ್‌ನನ್ನು ಈ ಇಚ್ಛೆಯಿಂದ ತಡೆದನು ಹಾಗೂ ಕೋಟೆಯ ರಕ್ಷಕರನ್ನು ಹಣಕೊಟ್ಟು ತನ್ನವರನ್ನಾಗಿಸಿಕೊಂಡನು.

ಕೋಟೆಯವರ ಕ್ರಮ :

ಕೋಟೆಯವರು ದೀರ್ಘಾವಧಿಯ ದಿಗ್ಬಂಧನದಿಂದಾಗಿ ಬಹಳೇ ಸಂಕಷ್ಟಕ್ಕೀಡಾದರು. ಅವರು ಕೋಟೆಯ ಬುರುಜಗಳಿಂದ ಹಗ್ಗದ ಏಣಿಗಳನ್ನು ಪ್ರಯೋಗಿಸಿ ಕೆಳಗಿಳಿದು ಚಂಗೇಜ್‌ಖಾನ್‌ನ ಸುತ್ತಲೂ ಸೇರಿಕೊಳ್ಳಲು ತೊಡಗಿದರು. ಆ ಜನರನ್ನು ನಿಜಾಮಷಾಹಿಗಳು ಹುದ್ದೆ ಹಾಗೂ ಜಾಗೀರುಗಳಿಂದ ಪುರಸ್ಕರಿಸಿದರು. ಕೋಟೆಯವರು ತಮ್ಮ ಜೊತೆಗಾರರ ಈ ಪರಿಸ್ಥಿತಿಯನ್ನು ಯಾವಾಗ ಆಗ ಅವರೂ ಸಹ ಹೇಗಾದರೂ ಮಾಡಿ ಕೋಟೆಯಿಂದ ಹೊರಬಂದರು. ಹಾಗೂ ಚಂಗೇಜ್‌ಖಾನ್‌ನ ಮಧ್ಯಸ್ಥಿಕೆಯಿಂದ ನಿಜಾಮಷಾಹಿ ಸರ್ಕಾರದಿಂದ ಹುದ್ದೆ ಹಾಗೂ ಜಾಗೀರನ್ನು ಪಡೆದುಕೊಳ್ಳತೊಡಗಿದರು.

ತಫಾಲ್‌ಖಾನ್‌ನ ಪರಾರಿ :

ಈ ಘಟನೆಯ ಪರಿಣಾಮವು ಇದಾಯಿತು. ಕೋಟೆಯವರ ತೋಪು ಹಾರಿಸುವವರು, ಹಾಗೂ ಅಗ್ನಿ ಶಸ್ತ್ರಗಳನ್ನು ಎಸೆಯುವವರ ಸಂಖ್ಯೆಯು ಕೇವಲ ಹನ್ನೆರಡರಷ್ಟಕ್ಕಿಳಿಯಿತು. ನಿಜಾಮಷಾಹಿಗಳು ಈ ಅವಕಾಶವನ್ನು ಸದುಪಯೋಗಪಡಿಸಿಕೊಂಡರು ಹಾಗೂ ಮೋರ್ಚಲನ್ನು ಕೋಟೆಯ ಸಮೀಪ ಗೋಡೆಯ ಹತ್ತಿರ ತಂದು ತನ್ನ ತೋಪುಗಳಿಂದ ಗೋಡೆಗಳಲ್ಲಿ ಛಿದ್ರವನ್ನುಂಟು

ಮಾಡಿದರು. ಕೋಟೆಯಲ್ಲಿ ಯಾವುದೇ ಸೈನಿಕ ಇರಲಿಲ್ಲ. ಆದುದರಿಂದ ಚಂಗೇಜ್‌ಖಾನ್‌ನ ಸಶಸ್ತ್ರ ಸೈನ್ಯದ ಇಪ್ಪತ್ತೆಂಟು ಸೈನಿಕರು ಹಾಗೂ ಓರ್ವ ತೋಪು ಹಾರಿಸುವವನು ಕೋಟೆಯ ಕೆಳಗಡೆಗೆ ಹೋಗಿ ಏಣಿಯನ್ನು ಹಚ್ಚಿದರು ಹಾಗೂ ಮೇಲಕ್ಕೆ ಏರಿದರು. ಸೈನ್ಯದ ಓರ್ವನು ಕಹಳೆ ಊದಿದನು. ಹಾಗೂ ಕಹಳೆಯ ಧ್ವನಿಯನ್ನು ಕೇಳಿ ತುಫಾಲಖಾನ್‌ನು ಹೀಗೆ ತಿಳಿದನು. ಚಂಗೇಜ್‌ಖಾನ್‌ನು ಕೋಟೆಯಲ್ಲಿ ಪ್ರವೇಶಿಸಿದ್ದಾನೆ. ಆತನು ಬಹಳೇ ಭಯಭೀತನಾದನು ಹಾಗೂ ಆತನು ಕೋಟೆಯ ಹಿಂಬಾಗಿಲನ್ನು ತೆರೆದು ಅರಣ್ಯದ ಕಡೆಗೆ ಓಡಿಹೋದನು. ಈ ಘಟನೆಯು ೯೮೨ ಹಿಜ್ರಿ ಶಕೆಯದ್ದಿರುವುದು.

ಬಂಧನ :

ಮುರ್ತುಜಾ ನಿಜಾಮಷಾಹನು ಕೋಟೆಯಲ್ಲಿ ಪ್ರವೇಶಿಸಿದನು ಹಾಗೂ ಎಲ್ಲ ಮೌಲ್ಯವುಳ್ಳ ವಸ್ತುಗಳನ್ನು ಹಾಗೂ ಭಂಢಾರವನ್ನು ವಶಪಡಿಸಿಕೊಂಡನು. ಇತರ ವಸ್ತುಗಳನ್ನು ಸೈನಿಕರು ಬಾದಷಹನ ಆಜ್ಞೆಯಂತೆ ಲೂಟಿ ಮಾಡಿದರು. ಸೈಯ್ಯದ್ ಹಸನ ಆಸ್ತರಾಬಾದಿಯು ತುಫಾಲ್‌ಖಾನ್‌ನನ್ನು ಹಿಂಬಾಲಿಸಿದನು. ಮೂರು ದಿನಗಳ ಕಠಿಣ ಪ್ರಯತ್ನದ ನಂತರ ಆತನು ತುಫಾಲ್‌ಖಾನ್‌ನನ್ನು ಬಂಧಿಸಿದನು. ಹಾಗೂ ನಿಜಾಮಷಾಹನ ಎದುರು ಹಾಜರುಪಡಿಸಿದನು.

ತಫಾಲಖಾನ್ ಹಾಗೂ ಆತನ ಸಂಗಡಿಗರ ಮೃತ್ಯು :

ಇದೇ ಸಮಯದಲ್ಲಿ ಕಾವೆಲ್ ಕೋಟೆಯೂ ಗೆಲ್ಲಲ್ಪಟ್ಟಿತು. ಹಾಗೂ ತಫಾಲ್‌ಖಾನ್‌ನ ಪುತ್ರನಾದ ಷಂಷೀರುಲ್‌ಮುಲ್ಕನೂ ಸಹ ಬಂಧಿತನಾದನು. ನಿಜಾಮಷಾಹನು ತಫಾಲ್‌ಖಾನ್, ಷಂಷೀರುಲ್‌ಮುಲ್ಕ ಹಾಗೂ ಬುರ್ಹಾನ್ ಅಮಾದ್‌ಷಾಹ್ ಹಾಗೂ ಅವರ ಎಲ್ಲ ಸಂಬಂಧಿಗಳನ್ನು ತನ್ನ ಪ್ರಾಂತ್ಯದ ಒಂದು ಕೋಟೆಯಲ್ಲಿ ಕಳುಹಿಸಿಕೊಟ್ಟನು. ಅಲ್ಲಿ ಅವರೆಲ್ಲರೂ ಒಂದೇ ರಾತ್ರಿಯಲ್ಲಿ ಸಾವನ್ನಪ್ಪಿದರು.

ಕೆಲವರು ಹೀಗೆನ್ನುತ್ತಾರೆ. ಏನೆಂದರೆ ಕೋಟೆಯ ರಕ್ಷಕಪಡೆಯವರು ನಿಜಾಮಷಾಹನ ಆಜ್ಞೆಯಂತೆ ಮೇಲೆ ಹೇಳಿದ ಕೈದಿಗಳನ್ನು ಕುತ್ತಿಗೆ ಹಿಸುಕಿ ಕೊಂದರು. ಮತ್ತೆ ಕೆಲವರು ಹೀಗೆನ್ನುತ್ತಾರೆ. ಕೋಟೆಯ ರಕ್ಷಣಾ ಪಡೆಯವರು ಈ ಕೈದಿಗಳನ್ನು ಗಾಢಕತ್ತಲೆಯಿರುವ ಚಿಕ್ಕಕೋಣೆಗಳಲ್ಲಿ ನೂಕಿ ಬಾಗಿಲುಗಳನ್ನು ಭದ್ರಗೊಳಿಸುತ್ತಿದ್ದರು. ಈ ರಕ್ಷಣಾಪಡೆಯವರು ಕೈದಿಗಳಿಂದ ದುಡ್ಡನ್ನು ಪಡೆಯುವ ಉದ್ದೇಶಕ್ಕಾಗಿ ಹೀಗೆ ಮಾಡುತ್ತಿದ್ದರು. ಆದರೆ ಈ ಜನರ ಬಳಿ ಒಂದು ಬಿಡಿಗಾಸು ಇರಲಿಲ್ಲ. ಪರಿಣಾಮ ಇದಾಯಿತು. ರಕ್ಷಣಾ ಪಡೆಯವರು ದಿನದಿಂದ ದಿನಕ್ಕೆ ಹಿಂಸೆಯನ್ನು ಹೆಚ್ಚಿಸುತ್ತಾ ಹೋದರು.

ಒಂದು ರಾತ್ರಿ ಯಾವಾಗ ಬಹಳ ಬಿಸಿಗಾಳಿ ಬೀಸುತ್ತಿತ್ತು. ಎಲ್ಲ ಕೈದಿಗಳನ್ನು ಯಾರು ಸಂಖ್ಯೆಯಲ್ಲಿ ನಲವತ್ತು ಜನ ಇದ್ದರು ಒಂದು ಕೊಠಡಿಯಲ್ಲಿ ಬಂಧಿಸಲಾಯಿತು. ಬೇಗೆ ಹಾಗೂ ಗಾಳಿಯ ಕೊರತೆಯ ಕಾರಣದಿಂದ ಈ ಎಲ್ಲ ಕೈದಿಗಳು ಉಸಿರುಗಟ್ಟಿ ಕೊನೆಯುಸಿರೆಳೆದರು. ರಕ್ಷಣಾ ಪಡೆಯವರು ಯಾವಾಗ ಮುಂಜಾನೆ ಕೊಠಡಿಯ ಬಾಗಿಲನ್ನು ತೆರದರೋ ಆಗ ಅವರಿಗೆ ಓರ್ವನೂ ಜೀವಂತವಿರುವುದು ಕಂಡು ಬರಲಿಲ್ಲ. ಸಾರಾಂಶವೇನೆಂದರೆ ಅಮಾದ್‌ಷಾಹಿ ಹಾಗೂ ತಫಾಲ್‌ಖಾನ್‌ರ ಆಡಳಿತವು ಈ ತೆರನಾಗಿ ಮುಕ್ತಾಯಗೊಂಡಿತು. ಹಾಗೂ ಇವರ ವಂಶದ ಓರ್ವ ವ್ಯಕ್ತಿಯೂ ಉಳಿಯಲಿಲ್ಲ.

■

V. ಬರೀದಶಾಹಿ ವಂಶ

*

೧. ಖಾಸಿಂ ಬರೀದ

ಈ ಇತಿಹಾಸವನ್ನು ಬರೆಯುತ್ತಿರುವಾಗ ಬರೀದ್‌ಷಾಹೀ ವಂಶದ ಏಳು ಜನ ಬಾದಷಾಹ್‌ರು ಒಬ್ಬರ ನಂತರ ಒಬ್ಬರು ಆಡಳಿತ ನಡೆಸಿದ್ದರು. ಈ ವಂಶದ ಸ್ಥಾಪಕನು ಖಾಸಿಂ ಬರೀದ್ ಇದ್ದನು ಯಾವನು ತುರ್ಕ ಕರ್ಜಿ ಗುಲಾಮರ ತಂಡದವನಾಗಿದ್ದನು.

ಗುಲಾಮಗಿರಿಯಿಂದ ಚಕ್ರವರ್ತಿಯಾಗುವವರೆಗೆ :

ಖಾಸಿಂ ಬರೀದ್‌ನು ವಿಲಾಯತ್‌ನಿಂದ ಖ್ವಾಜಾ ಷಹಾಬುದ್ದೀನ್ ಅಲಿ ಯಜದಿಯ ಜೊತೆಗೆ ದಖ್ಖನ್ನಿಗೆ ಬಂದಿದ್ದನು. ಖ್ವಾಜಾ ಷಹಾಬುದೀನ್‌ನು ಆತನನ್ನು ಸುಲ್ತಾನ್ ಮೊಹಮ್ಮದ್ ಫಾರೂಖಿಯ ಹತ್ತಿರ ಕಳುಹಿಸಿದನು. ಖಾಸಿಂನು ಬಹಳೇ ವೀರ ಹಾಗೂ ಶೂರ ವ್ಯಕ್ತಿಯಾಗಿದ್ದನು. ಆತನಿಗೆ 'ಲಿಪಿಶಾಸ್ತ್ರ ಹಾಗೂ ಸಂಗೀತದೊಂದಿಗೆ ಬಹಳೇ ಆಸಕ್ತಿ ಇತ್ತು. ಆತನು ಅದೆಷ್ಟೋ ಸಂಗೀತ ವಾದ್ಯಗಳನ್ನು ನುಡಿಸುವಲ್ಲಿ ಪ್ರಭುತ್ವ ಸಾಧಿಸಿದ್ದನು. ಮೊಹಮ್ಮದ್ ಷಾಹ್ ಫಾರೂಖಿಯ ಅವಧಿಯಲ್ಲಿ ಖಾಸಿಂನು ಅಮೀರರಲ್ಲಿ ಸೇರಿಕೊಂಡನು. ಆತನು ವಿಲಾಯತ ಪಾಯಿನ್ ಹಾಗೂ ಜಾಲ್ನಾದ ನಡುವಿನ ಪ್ರಾಂತ್ಯದ ಜನರ ಗೊಂದಲವನ್ನು ಶಮನಗೊಳಿಸಲು ನೇಮಿಸಲ್ಪಟ್ಟನು.

ಮರಾಠರ ಜೊತೆ ಯುದ್ಧ :

ಈ ಬಂಡಾಯಗಾರರು ಮರಾಠಾ ಕೋಮಿನೊಂದಿಗೆ ಸಂಬಂಧವಿರಿಸಿ ಕೊಂಡಿದ್ದರು. ಇವರ ಗೊಂದಲದ ಕಾಲವು ಬಹಳೇ ಪ್ರಸಿದ್ಧವಾಗಿತ್ತು. ಖಾಸಿಂನು ಬಂಡಾಯಗಾರರ ಶಕ್ತಿಯನ್ನು ದಮನಗೊಳಿಸಿದನು. ಈ ಯಶಸ್ಸಿನಿಂದಾಗಿ ಆತನು ಬಹಳೇ ಪ್ರಸಿದ್ಧಿ ಹೊಂದಿದನು. ಈ ಯುದ್ಧದಲ್ಲಿ ಮರಾಠಾ ಸರ್ದಾರನಾದ ಸಾಬಾಜಿಯು ಕೊಲ್ಲಲ್ಪಟ್ಟನು. ಹಾಗೂ ಆತನ ಪುತ್ರಿಯೊಂದಿಗೆ ಖಾಸಿಂ ಬರೀದ್‌ನು ತನ್ನ ಪುತ್ರನಾದ ಅಮೀರ್ ಅಲಿ ಬರೀದ್‌ನ ವಿವಾಹವೇರ್ಪಡಿಸಿದನು.

ಬಲ ಹಾಗೂ ಅಧಿಕಾರ :

ಬಾದಷಾಹ್‌ನು ಖಾಸಿಂಬರೀದ್‌ನನ್ನು ಸಂಬಾಜಿಯ ಎಲ್ಲ ಪರಗಣಗಳನ್ನು ನೀಡಿದನು. ಹಾಗೂ ಈತನ ಪುತ್ರಿಯ ಎಲ್ಲ ಸಂಬಂಧಿಗಳು ಯಾರು ಸಂಖ್ಯೆಯಲ್ಲಿ ಸುಮಾರು ನಾಲ್ಕುನೂರರಷ್ಟು ಇದ್ದರು ಖಾಸಿಂನ ಆಡಳಿತದ ವಿವಿಧ ಸೇವೆಯಲ್ಲಿ ನೇಮಿಸಲ್ಪಟ್ಟರು. ಈ ಸೇವಕರಲ್ಲಿ ಹಲವಾರು ಮರಾಠರು ಕ್ರಮೇಣವಾಗಿ ಇಸ್ಲಾಂ ಧರ್ಮವನ್ನು ಸ್ವೀಕರಿಸಿದರು. ಈ ಜನರ ಸಹಾಯದಿಂದ ಖಾಸಿಂ ಬರೀದ್‌ನು ಪ್ರಭಾವೀ ಅಧಿಕಾರವನ್ನು ಹೊಂದಿದನು. ಹಾಗೂ ಸುಲ್ತಾನ್ ಮೆಹಮೂದ್ ಬಹಮನಿಯ ಅವಧಿಯಲ್ಲಿ ಈತನಿಗೂ ಸರ್ವಸ್ವತಂತ್ರನಾಗುವ ಬಯಕೆ ಉಂಟಾಯಿತು.

ಸಾರ್ವಭೌಮತೆ :

ಆದಿಲ್‌ಷಾಹ್, ನಿಜಾಮಷಾಹ್ ಹಾಗೂ ಅಮಾದ್‌ಷಾಹ್‌ರ ಸಲಹೆಯಂತೆ ಖಾಸಿಂ ಬರೀದ್‌ನು ಓಸಾ, ಖಂದಾರ್ ಹಾಗೂ ಉದಗೀರ್ ಕೋಟೆಗಳಲ್ಲಿ ತನ್ನ ಹೆಸರಿನ ಖುತ್ಬಾ ಹಾಗೂ ಮುದ್ರೆಯನ್ನು ಜಾರಿಗೊಳಿಸಿದನು. ರಾಜಧಾನಿಯನ್ನು ಖಾಸಿಂನು ಮೊಹಮೂದ್‌ಷಾಹ್ ಬಹಮನಿಗೆ ಬಿಟ್ಟುಕೊಟ್ಟನು.

ಖಾಸಿಂ ಬರೀದ್‌ನು ಹನ್ನೆರಡು ವರ್ಷದವರೆಗೆ ಆಡಳಿತ ನಡೆಸಿದನು. ಹಾಗೂ ಹಿಜ್ರಿಶಕೆ ೯೧೦ ರಲ್ಲಿ (ಯಾವಾಗ ಸುಲ್ತಾನ್ ಮೆಹಮೂದ್ ಜೀವಂತನಾಗಿದ್ದನು) ಮೃತ್ಯು ಹೊಂದಿದನು. ಹಾಗೂ ಆತನ ಪುತ್ರನಾದ ಅಮೀರ ಯದ್ ಅಲಿ ಬರೀದ್ ತಂದೆಯ ಉತ್ತರಾಧಿಕಾರಿಯಾಗಿ ಘೋಷಿಸಲ್ಪಟ್ಟನು

■

*

೨. ಅಮೀರ ಅಲಿ ಬರೀದ

ಅಮೀರ್ ಅಲಿ ಬರೀದ್‌ನು ತನ್ನ ತಂದೆಯಾದ ಖಾಸಿಂ ಬರೀದ್‌ನ ಮೃತ್ಯುವಿನ ನಂತರ ಸಿಂಹಾಸನಾಧೀಶನಾದನು. ಆತನ ಆಡಳಿತಾವಧಿಯಲ್ಲಿ ಸುಲ್ತಾನ್ ಮೆಹಮೂದ್‌ನು ಸಾವಿಗೀಡಾದನು. ಬಹಮನಿ ವಂಶದ ಕೊನೆಯ ಬಾದಷಾಹನಾದ ಸುಲ್ತಾನ್ ಕಲೀಮುಲ್ಲಾಹ್‌ನು ಅಹಮದ್‌ನಗರದಲ್ಲಿ ಆಶ್ರಯ ಪಡೆದನು. ಅಮೀರ ಅಲಿ ಬರೀದ್‌ನ ಆಡಳಿತಾವಧಿಯಲ್ಲಿ ಇಸ್ಮಾಯಿಲ್ ಆದಿಲ್‌ನು ಬೀದರ್ ಮೇಲೆ ವಿಜಯ ಸ್ಥಾಪಿಸಿದನು. ಆದರೆ ಕೊನೆಗೆ ಅಮೀರ್ ಬರೀದ್‌ನು ಈ ಪಟ್ಟಣವನ್ನು ಮತ್ತೊಮ್ಮೆ ತನ್ನ ವಶಕ್ಕೆ ತೆಗೆದುಕೊಂಡನು. ಈ ದಿನಗಳಲ್ಲಿಯೇ ಬುರ್ಹಾನ್‌ಪುರದ ಆಡಳಿತಗಾರನಾದ ಮೊಹಮದ್ ಷಾಹ್ ಹಾಗೂ ಅಮಾದುಲ್ ಮುಲ್ಕನ ವಿನಂತಿಯ ಮೇರೆಗೆ ಸುಲ್ತಾನ್ ಬಹಾದ್ದೂರ್‌ನು ದಖ್ಖನ್ನಿನ ಪ್ರಾಂತ್ಯಗಳಲ್ಲಿ ಪ್ರವೇಶಿಸಿದನು. ಇದೇ ಸಮಯದಲ್ಲಿ ಇಸ್ಮಾಯಿಲ್ ಆದಿಲ್‌ನ ಆದೇಶದಿಂದಾಗಿ ಅಮಿರ್ ಬರೀದ್‌ನು ಬಿಜಾಪುರಕ್ಕೆ ತಲುಪಿದನು. ಆದಿಲ್‌ಷಾಹ್‌ನು ನಾಲ್ಕು ಸಾವಿರ ವಿದೇಶಿ ಸವಾರರ ಒಂದು ಸೈನ್ಯವನ್ನು ಅಮೀರ್ ಬರೀದ್‌ನ ಅಡಿಯಲ್ಲಿ ಕೊಟ್ಟನು ಹಾಗೂ ಆತನನ್ನು ನಿಜಾಮಷಾಹ್‌ನ ಸಹಾಯಕ್ಕಾಗಿ ಕಳುಹಿಸಿದನು.

ಶೌರ್ಯ ಹಾಗೂ ಧೈರ್ಯ :

ಅಮೀರ್ ಬರೀದ್‌ನು ಈ ಸಾಹಸಕಾರ್ಯದಲ್ಲಿ ಶೌರ್ಯ ಹಾಗೂ ಧೈರ್ಯದ ಎಂಥಹ ಪ್ರದರ್ಶನ ನೀಡಿದನೆಂದರೆ ಆತನ ಶೌರ್ಯವು ಅಸ್ಫರಿಹ್ ಹಾಗೂ ರುಸ್ತುಮನ್‌ರ ಸಾಹಸಕಾರ್ಯಗಳಲ್ಲೂ ಸಿಗಲಾರದು. ಈ ಯುದ್ಧದ ವಿವರವು ಸಂಧರ್ಭೋಚಿತ ಸ್ಥಳದಲ್ಲಿ ವಿವರಿಸಲಾಗಿದೆ. ಈ ಘಟನೆಯ ನಂತರ ಅಮೀರ್ ಬರೀದ್‌ನು ಒಂದು ದೀರ್ಘಕಾಲದವರೆಗೆ ಶಾಂತಿ ಹಾಗೂ ನೆಮ್ಮದಿಯೊಂದಿಗೆ ಆಡಳಿತ ನಡೆಸಿದನು.

ಮೃತ್ಯು :

ತನ್ನ ಆಡಳಿತದ ಕೊನೆಯ ದಿನಗಳಲ್ಲಿ ಅಮೀರ್ ಬರೀದ್‌ನು ಬುರ್ಹಾನ್ ನಿಜಾಮಷಾಹ್‌ನ ಸಹಾಯಕ್ಕಾಗಿ ಅಹ್ಮದ್‌ನಗರಕ್ಕೆ ಹೋದನು. ದೌಲತಾಬಾದ್‌ನ ಸಮೀಪದಲ್ಲಿ ಆತನು ಕೊನೆಯುಸಿರೆಳೆದನು. ಅಮೀರ್ ಬರೀದ್‌ನ ಸಹೋದರನು ಆತನ ಶವವನ್ನು ತೆಗೆದುಕೊಂಡು ಬೀದರ್‌ಕ್ಕೆ ಬಂದನು. ಆತನನ್ನು ಖಾಸಿಂ ಬರೀದ್‌ನ ಗೋರಿಯಲ್ಲಿ ದಫನ್ ಮಾಡಲಾಯಿತು.

ನರಿಗಳ ಕಾಳಜಿ :

ಅಮೀರ್ ಬರೀದ್‌ನ ಕುರಿತು ಈ ಕತೆಯು ಸಾಮಾನ್ಯವಾಗಿ ಪ್ರಚಲಿತವಿದೆ. ಚಳಿಗಾಲದಲ್ಲಿ ಒಂದು ರಾತ್ರಿಯಲ್ಲಿ ಆತನು ಉದ್ಯಾನದಲ್ಲಿ ಮದ್ಯಪಾನದ ಸಭೆಯನ್ನು ಏರ್ಪಡಿಸಿದ್ದನು. ಆಗ ವನದಲ್ಲಿ ನರಿಗಳ ಒಂದು ಗುಂಪು ಪ್ರವೇಶಿಸಿತು. ಹಾಗೂ ಅವು ಚೀರತೊಡಗಿದವು. ಅಮೀರ್ ಬರೀದ್‌ನು ತನ್ನ ಸಂಗಡಿಗರೊಂದಿಗೆ ಕೇಳಿದನು. ಈ ನರಿಗಳು ಏಕೆ ಚೀರುತ್ತಿವೆ? ಓರ್ವ ದರ್ಬಾರಿಯು ಹೀಗೆ ಉತ್ತರಿಸಿದನು. "ಏಕೆಂದರೆ ಚಳಿಯು ಬಹಳವಿದೆ. ಅದಕ್ಕಾಗಿ ಅವುಗಳು ಬಾದಷಾಹನ ದರ್ಬಾರಿನಲ್ಲಿ ದೂರನ್ನು ತಂದಿವೆ" ಬೆಳಗಾದ ಮೇಲೆ ಅಮೀರ್ ಬರೀದ್‌ನು ಆಜ್ಞೆ ನೀಡಿದನು. ನಾಲ್ಕು ಸಾವಿರಹೊದಿಕೆಗಳನ್ನು ತಯಾರಿಸಿ ವನದ ತುಂಬ ಹಾಸಬೇಕು. ಇದರಿಂದ ರಾತ್ರಿಯ ವೇಳೆಯಲ್ಲಿ ನರಿಗಳು ಚಳಿಯಿಂದ ಸುರಕ್ಷಿತವಿರುವುವು.

■

*

೩. ಅಲಿ ಬರೀದ ಷಾಹ್

"ಬಾದಷಾಹ್"ನ ಬಿರುದು :

ಅಲಿ ಬರೀದ್‌ನು ಬರೀದ್ ವಂಶದ ಮೊದಲನೆಯ ವ್ಯಕ್ತಿಯಾಗಿರುವನು. ಯಾರು ತನಗಾಗಿ 'ಬಾದಷಾಹ್' ನ ಬಿರುದನ್ನು ಹೊಂದಿದನು. ಷಾಹ್ ತಾಹೀರ್‌ನು ಅಹ್ಮದ್‌ನಗರದಿಂದ ಅಲೀ ಬರೀದ್‌ನ ಪಟ್ಟಾಭಿಷೇಕದ ಸಮಾರಂಭದಲ್ಲಿ ಪಾಲ್ಗೊಳ್ಳಲು ಅಹ್ಮದಾಬಾದಕ್ಕೆ ಬಂದನು. ಆದರೆ ಅಲೀ ಬರೀದ್‌ನ ದುರ್ವರ್ತನೆಯಿಂದಾಗಿ ಆತನು ಅಪಮಾನಿತಗೊಂಡು ಮರಳಿ ಬಂದನು.

ನಿಜಾಮಷಾಹಿಯ ದಾಳಿ :

ಈ ಘಟನೆಯ ಕಾರಣದಿಂದ ಬುರ್ಹಾನ್ ಷಾಹ್‌ನು ಬರೀದ್‌ಷಾಹ್‌ನಿಂದ ಮುನಿಸಿಕೊಂಡನು ಹಾಗೂ ಆತನ ಮೇಲೆ ದಾಳಿಗೈದನು ಬರೀದ್‌ಷಾಹ್‌ನು ಸಂಕಷ್ಟದ ಸ್ಥಿತಿಗೆ ಒಳಗಾಗಿ ಕಲ್ಯಾಣದ ಕೋಟೆಯನ್ನು ಇಬ್ರಾಹಿಂ ಆದಿಲ್‌ಷಾಹ್‌ನಿಗೆ ಒಪ್ಪಿಸಿದನು. ಹಾಗೂ ಆತನಿಂದ ಸಹಾಯವನ್ನು ಯಾಚಿಸಿದನು. ಈ ಕ್ರಮದಿಂದಲೂ ಬರೀದ್‌ಷಾಹ್‌ನಿಗೆ ಯಶಸ್ಸು ಸಿಗಲಿಲ್ಲ. ಹಾಗೂ ನಿಜಾಮಷಾಹ್‌ನು ಓಸಾ, ಉದ್ಗೀರ್ ಹಾಗೂ ಖಂದಾರ್‌ವನ್ನು ವಶಪಡಿಸಿಕೊಂಡನು. ಬರೀದ್‌ಷಾಹ್‌ನ ಬಳಿಯಲ್ಲಿ ಕೇವಲ ಇಷ್ಟು ಮಾತ್ರದ ಸಾಮ್ರಾಜ್ಯವು ಉಳಿಯಿತು. ಎಷ್ಟೆಂದರೆ ಅದರ ವಾರ್ಷಿಕ ತೆರಿಗೆಯು ಕೇವಲ ನಾಲ್ಕು ಲಕ್ಷ ಚಿನ್ನದ ನಾಣ್ಯಗಳಾಗಿದ್ದವು. ಉಳಿದ ಎಲ್ಲ ಪ್ರಾಂತ್ಯಗಳು ನಿಜಾಮಷಾಹಿ ಬಾದಷಾಹನ ವಶಕ್ಕೆ ಹೋದವು.

ಮುರ್ತುಜಾ ನಿಜಾಮನ ದಾಳಿ :

ನಿಜಾಮಷಾಹಿ ಆಡಳಿತಗಾರನಾದ ಮುರ್ತುಜಾ ನಿಜಾಮಷಾಹನೂ ಸಹ ಬರೀದ್‌ಷಾಹೀಯ ವಶದಲ್ಲಿರುವ ಪ್ರಾಂತ್ಯಗಳತ್ತ ದೃಷ್ಟಿ ಹರಿಸಿದನು. ಹಾಗೂ ಸಾಹೇಬ್‌ಖಾನ್‌ನ ಹೇಳಿಕೆಯ ಮೇರೆಗೆ ಹಿಜ್ರಿ ಶಕೆ ೯೮೭ ರಲ್ಲಿ ಬೀದರ್‌ದ ಮೇಲೆ

ದಾಳಿ ಮಾಡಿದನು. ಹಾಗೂ ಆತನು ಪಟ್ಟಣವನ್ನು ದಿಗ್ಬಂಧನಗೈದನು. ಹಾಗೂ ಪಟ್ಟಣದವರ ಮೇಲೆ ಶೋಷಣೆಗೈಯ್ಯಲು ಪ್ರಾರಂಭಿಸಿದನು. ಬರೀದ್‌ಷಾಹ್‌ನು ಅನಿವಾರ್ಯವಾಗಿ ಅಲಿ ಅದಿಲ್‌ಷಾಹ್‌ನಿಂದ ಸಹಾಯ ಬೇಡಿದನು. ಅಲಿ ಆದಿಲ್‌ಷಾಹ್‌ನು ಹೀಗೆ ಉತ್ತರಿಸಿದನು. ಆಯಾ ಹೆಸರಿನ ಈರ್ವರು ಶಿಖಂಡಿಗಳು ಯಾರು ನಿಮ್ಮ ಸೇವೆಯಲ್ಲಿರುವರು ಅವರನ್ನು ನನ್ನ ಬಳಿಗೆ ಕಳುಹಿಸಿದರೆ ನಾನು ನಿಮಗೆ ಸಹಾಯ ಮಾಡುವೆನು. ಬರೀದ್‌ಷಾಹ್‌ನು ಅನಿವಾರ್ಯವಾಗಿ ಅಲಿ ಆದಿಲ್‌ಷಾಹ್‌ನ ಷರತ್ತನ್ನು ಒಪ್ಪಿಕೊಂಡನು.

ನಿಜಾಮಷಾಹ್‌ನ ಮರಳುವಿಕೆ :

ಇದರ ನಂತರ ಆದಿಲ್‌ಷಾಹ್‌ನು ಒಂದು ಸಾವಿರ ಸವಾರರನ್ನು ಬರೀದ್‌ಷಾಹ್‌ನ ಸಹಾಯಕ್ಕಾಗಿ ಕಳುಹಿಸಿದನು. ನಿಜಾಮಷಾಹ್‌ನಿಗೆ ಇದರ ಮಾಹಿತಿ ಲಭಿಸಿತು. ಈ ದಿನಗಳಲ್ಲಿ ಅಹ್ಮದ್‌ನಗರದಲ್ಲಿ ಕ್ಷೋಭೆ, ಗದ್ದಲ, ದೊಂಬಿ ಹಾಗೂ ಗೊಂದಲದ ವಾತಾವರಣವಿತ್ತು. ಅದಕ್ಕಾಗಿ ನಿಜಾಮಷಾಹ್‌ನು ಮಿರ್ಜಾಯಾದ್ಗಾರ್‌ನನ್ನು ಬೀದರ್‌ದ ದಿಗ್ಬಂಧನಕ್ಕಾಗಿ ಬಿಟ್ಟು ಸ್ವತಃ ಅಹ್ಮದ್‌ನಗರಕ್ಕೆ ಬಂದನು.

ಅಲಿ ಆದಿಲ್‌ನ ಕೊಲೆ :

ಹಿಜ್ರಿ ಶಕೆ ೯೮೮ ರಲ್ಲಿ ಅಲೀ ಬರೀದ್‌ಷಾಹ್‌ನು ತನ್ನ ವಾಗ್ದಾನವನ್ನು ಪೂರ್ತಿಗೊಳಿಸಿದನು. ಹಾಗೂ ತನ್ನ ಈರ್ವರು ಶಿಖಂಡಿಗಳನ್ನು ಅಲಿ ಆದಿಲ್‌ನ ಸೇವೆಗೆಂದು ಕಳುಹಿಸಿಕೊಟ್ಟನು. ಈ ಈರ್ವರು ಶಿಖಂಡಿಗಳು ಬಹಳೇ ಸಂಕೋಚಸ್ವಭಾವದವರಾಗಿದ್ದರು. ಅವರು ತಮ್ಮ ಮಾನದ ರಕ್ಷಣೆಗೋಸ್ಕರ ಅಲಿ ಆದಿಲ್‌ನನ್ನು ಹತ್ಯೆಗೈದರು.

ಅಲಿಬರೀದ್‌ನ ಸಾವು :

ಇದೇ ಕಾಲದಲ್ಲಿ ಅಲೀ ಬರೀದ್‌ನೂ ಸಹ ಸಾವನ್ನಪ್ಪಿದನು. ಆತನು ಒಟ್ಟು ನಲವತ್ತೈದು ವರ್ಷ ಆಡಳಿತ ನಡೆಸಿದನು. ಆತನ ಸಾವಿನ ನಂತರ ಆತನ ಜೇಷ್ಠ ಪುತ್ರನಾದ ಇಬ್ರಾಹಿಂ ಆದಿಲ್‌ನು ತನ್ನ ತಂದೆಯ ಉತ್ತರಾಧಿಕಾರಿಯಾದನು.

ಅಲಿ ಬರೀದ್‌ನ ಉತ್ತರಾಧಿಕಾರಿಗಳು :

ಇಬ್ರಾಹಿಂ ಬರೀದ್‌ನು ಏಳು ವರ್ಷದವರೆಗೆ ಆಡಳಿತ ನಡೆಸಿದನು. ಆತನ ಸಾವಿನ ನಂತರ ಆಡಳಿತ ಸೂತ್ರವು ಖಾಸಿಂ ಬರೀದ್‌ನ ಕೈಗೆ ಬಂದಿತು. ಖಾಸಿಂನು ಮೂರು ವರ್ಷಗಳವರೆಗೆ ಆಡಳಿತ ನಡೆಸಿದನು. ಆತನ ಮೃತ್ಯುವಿನ ನಂತರ ಆತನ ಪುತ್ರ ಸಿಂಹಾಸನಾಧೀಶನಾದನು. ಯಾರು ಪಟ್ಟಾಭಿಷೇಕದ ವೇಳೆಯಲ್ಲಿ ನಾಲ್ಕು ವರ್ಷ ವಯಸ್ಸಿನವನಾಗಿದ್ದನು.

ಹಿಜ್ರಿ ಶಕೆ ೧೦೧೦ ರಲ್ಲಿ ಬರೀದ್‌ಷಾಹಿ ವಂಶದ ಓರ್ವ ವ್ಯಕ್ತಿಯು ಬಾದಷಾಹ್‌ನನ್ನು ಪದಚ್ಯುತಗೊಳಿಸಿ ಪಟ್ಟಣದಿಂದ ಹೊರಹಾಕಿದನು ಬಾದಷಾಹ್‌ನು ಪರಾರಿಯಾಗಿ ಮೊಹಮ್ಮದ್ ಕುಲಿ ಕುತುಬ್‌ಷಾಹ್‌ನ ಬಳಿ ಭಾಗನಗರಕ್ಕೆ ತಲುಪಿದನು. ಹಾಗೂ ಅಮೀರ್ ಬರೀದ್‌ನು ತನ್ನ ಆಡಳಿತವನ್ನು ಸ್ವತಂತ್ರಗೊಳಿಸಿಕೊಂಡನು. ಈ ಗ್ರಂಥವನ್ನು ಬರೆಯುವ ಕಾಲವು ಹಿಜ್ರಿ ಶಕೆ ೧೦೧೮ ಇದೆ. ಬೀದರ್‌ನಲ್ಲಿ ಇದೇ ಆಡಳಿತಗಾರನಿದ್ದನು.

ಗ್ರಂಥಕಾರನ ಕ್ಷಮೆಯಾಚನೆ :

ಓದುಗರಿಗೆ ತಿಳಿಯಬೇಕಾದುದೇನೆಂದರೆ ಅಮಾದ್‌ಷಾಹಿ ಹಾಗೂ ಬರೀದ್‌ಷಾಹಿ ಆಡಳಿತಗಾರರ ವಿವರವು ಯಾವುದೇ ಅಧಿಕೃತ ಗ್ರಂಥಗಳಲ್ಲಿಲ್ಲ. ನಾನು ಈ ವಿಷಯದಲ್ಲಿ ಏನೇನನ್ನು ಬರೆದಿರುವೆನೋ ಅವೆಲ್ಲವೂ ಮೌಖಿಕ ಪರಂಪರೆಯಿಂದ ಹರಿದುಬಂದ ವಿಷಯವನ್ನಾಧರಿಸಿ ವಯೋವೃದ್ಧರಿಂದ (ಯಾರು ಈ ಬಾದಷಾಹಗಳ ಕಾಲದಿಂದ ಅಥವಾ ಸಮೀಪಸ್ಥ ಕಾಲದಿಂದ ಸಂಬಂಧವಿರಿಸಿಕೊಂಡಿರುವರು) ಏನೇನನ್ನು ಕೇಳಿರುವರೋ ಅದನ್ನು ಈ ಗ್ರಂಥದಲ್ಲಿ ಉಲ್ಲೇಖಿಸಲಾಗಿದೆ. ಒಂದು ವೇಳೆ ಓದುಗರಿಗೆ ಯಾರಿಗೆ ಆಗಲಿ ಈ ಬಾದಷಾಹರುಗಳ ದಿನನಿತ್ಯದ ದಿನಚರಿ, ವಾರ್ಷಿಕ ದಿನಚರಿ, ಜನ್ಮದಿನ, ಮರಣದ ದಿನ, ಅಥವಾ ಘಟನೆಗಳ ಕಾಲ, ವರ್ಷ, ತಿಳಿದಿದ್ದರೆ ತಕ್ಷಣ ನನಗೆ ತಿಳಿಸಬೇಕು. ಏಕೆಂದರೆ ವರ್ಷ ಹಾಗೂ ಘಟನೆಗಳ ವಿವರವನ್ನು ಖಚಿತವಾಗಿ ನಮೂದಿಸಬಹುದು ಅವರಿಗೆ ಗ್ರಂಥಕರ್ತನು ತನ್ನ ಜೀವನ ಕಾಲ ಹಾಗೂ ಮೃತ್ಯುವಿನ ನಂತರವೂ ಆಭಾರಿಯಾಗುವನು.

■

*

ಬಾರಾ ಇಮಾಮ್

೧) ಹಜ್ರತ್ ಅಲಿ

೨) ಹ॥ ಇಮಾಮ್ ಹಸನ್

೩) ಹ॥ ಇಮಾಮ್ ಹುಸ್ಸೈನ್

೪) ಹ॥ ಜೈನುಲ್ ಅಬ್ದೀನ್

೫) ಹ॥ ಇಮಾಮ್ ಬಾಖರ್

೬) ಹ॥ ಇಮಾಮ್ ಜಾಫರ್ ಸಾದಿಕ್

೭) ಹ॥ ಇಮಾಮ್ ಮೂಸಾ ಕಾಜಿಮ್

೮) ಹ॥ ಇಮಾಮ್ ರಿಜಾ

೯) ಹ॥ ಇಮಾಮ್ ನಖಿ

೧೦) ಹ॥ ಇಮಾಮ್ ತಖಿ

೧೧) ಹ॥ ಇಮಾಮ್ ಅಸ್ಕರ್

೧೨) ಹ॥ ಇಮಾಮ್ ಮೆಹದಿ

ಆದಿಲಶಾಹಿ ಅರಸು ಮನೆತನ ವಿಜಾಪುರದವರಾದ ನಮಗೆಲ್ಲ ಒಂದು ಹೆಮ್ಮೆ. ರಾಜಕೀಯ ಇತ್ಯಾದಿಗಳನ್ನು ಬಿಟ್ಟರೂ ಶಿಲ್ಪ-ಸಾಹಿತ್ಯಕ್ಷೇತ್ರಗಳಿಗೆ ಅದು ನೀಡಿದ ಕೊಡುಗೆ ಲೋಕಮಾನ್ಯವಾದುದು. ಈ ಕೊಡುಗೆಗಳಲ್ಲಿ ಶಿಲ್ಪದ ಬಗ್ಗೆ ಆಗಾಗ ಆಸಕ್ತಿ ವಹಿಸಿದ ನಾವು, ಸಾಹಿತ್ಯವನ್ನು ಅಲಕ್ಷಿಸುತ್ತ ಬಂದಿದ್ದೇವೆ. ಇದಕ್ಕೆ ಕಾರಣ, ಈ ಸಾಹಿತ್ಯ ದಖಣಿ ಉರ್ದು, ಪರ್ಶಿಯನ್‌ಗಳೆಂಬ ಅಪರಿಚಿತ ಭಾಷೆಗಳಲ್ಲಿರುವುದು ಮತ್ತು ಬಹಳಷ್ಟು ಕೃತಿಗಳು ಅಪ್ರಕಟಿತವಾಗಿರುವುದು. ಹೀಗಿದ್ದೂ ನಮ್ಮ ಸಾಂಸ್ಕೃತಿಕ ಆಸ್ತಿಯಾಗಿರುವ ಈ ಸಾಹಿತ್ಯದ ರಕ್ಷಣೆ, ಅನುವಾದ, ಪ್ರಸಾರ ನಮ್ಮ ಕರ್ತವ್ಯವಾಗಿದೆ.

ಇಂತಹ ಕಾರ್ಯಗಳನ್ನು ಪೂರೈಸುತ್ತ ಬಂದ ನಮ್ಮ 'ವಚನಪಿತಾಮಹ ಡಾ॥ ಫ.ಗು. ಹಳಕಟ್ಟಿ ಸಂಶೋಧನ ಸಂಸ್ಥೆ'ಯ ಮೂಲಕ ಈ ಕರ್ತವ್ಯವನ್ನು ಈಡೇರಿಸಲು ಯೋಚಿಸಿದ ಫಲ 'ಆದಿಲಶಾಹಿ ಸಾಹಿತ್ಯ ಪ್ರಕಟನ ಯೋಜನೆ'. ಈ ಕಾರ್ಯ ಭಾವಿಸಿದಷ್ಟು ಸುಲಭವಲ್ಲ. ಅಲ್ಲಲ್ಲಿ ಚದರಿ ಹೋಗಿರುವ ಪ್ರಕಟಿತ-ಅಪ್ರಕಟಿತ ಕೃತಿಗಳನ್ನು ಶೋಧಿಸುವ, ಸಂಗ್ರಹಿಸುವ, ಅನುವಾದಿಸುವ, ಪರಿಷ್ಕರಿಸಿ ಪ್ರಕಟಿಸುವ ಹಂತಗಳಲ್ಲಿ ವಿದ್ವಾಂಸರು ಶ್ರಮಿಸಬೇಕಾಗುತ್ತದೆ. ನಮ್ಮ ಸುದೈವಕ್ಕೆ ಸಮರ್ಥ ಯೋಜಕರಾದ ಡಾ.ಎಂ.ಎಂ.ಕಲಬುರ್ಗಿಯವರು, ಆದಿಲಶಾಹಿ ಅಭ್ಯಾಸಿಗಳಾದ ಡಾ. ಕೃಷ್ಣ ಕೊಲ್ಹಾರಕುಲಕರ್ಣಿಯವರು ಈ ಯೋಜನೆಯ ಹೊಣೆಹೊತ್ತಿದ್ದಾರೆ. ಸಲಹಾಸಮಿತಿಯ ಸದಸ್ಯರು-ಅನುವಾದಕರು ಈ ಕಾರ್ಯದಲ್ಲಿ ಆಸ್ಥೆವಹಿಸಿದ್ದಾರೆ. ಇವರೆಲ್ಲರ ಸಹಯೋಗದಲ್ಲಿ ಕನ್ನಡಕ್ಕೆ ಹೊಸದೊಂದು ಆಕರ ಸಂಪತ್ತು ಹೊರಬರುತ್ತಲಿರುವುದು ಸಂತೋಷದ ಸಂಗತಿಯಾಗಿದೆ.

ಎಂ. ಬಿ. ಪಾಟೀಲ

ಅಧ್ಯಕ್ಷರು, ಬಿ.ಎಲ್.ಡಿ.ಇ ಸಂಸ್ಥೆ, ಬಿಜಾಪುರ

ಜಲಸಂಪನ್ಮೂಲ ಸಚಿವರು, ಕರ್ನಾಟಕ ಸರಕಾರ

ಮುದ್ರಣ : ಪ್ರಿಂಟ್ ಪಾಯಿಂಟ್, ಮೊ : 97390 67359